THE BOOK WAS DRENCHED

TEXT LITE WITHIN THE BOOK ONLY

UNIVERSAL LIBRARY
OU_200978
UNIVERSAL LIBRARY

OUP—67—11-1-68—5,000.

OSMANIA UNIVERSITY LIBRARY

Call No. K294 V17G Accession No. K198

Author [illegible]

Title [illegible]

This book should be returned on or before the date last marked below.

ಶ್ರಿಯೈ ನಮಃ.

ಶ್ರೀಪಾರ್ಥಸಾರಥಯೇ ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ.

ಭಾರತಯುದ್ಧಾರಂಭದಲ್ಲಿ ಅರ್ಜುನನಂ ವ್ಯಾಜೀಕರಿಸಿ
ಸರ್ವಲೋಕ ಹಿತಾರ್ಥವಾಗಿ
ಶ್ರೀಕೃಷ್ಣಪರಮಾತ್ಮನಿಂದುಪದಿಷ್ಟವಾದ
ಶ್ರೀಭಗವದ್ಗೀತಾ ಪ್ರಬಂಧಕ್ಕೆ ದ್ವೈತಾದ್ವೈತ
ವಿಶಿಷ್ಟಾದ್ವೈತ ಭಾಷ್ಯಾರ್ಥಗಳಂಸಂಗ್ರಹಿಸಿರುವ

# ಶ್ರೀಮದ್ಗೀತಾರ್ಥ ಸಾರದ

## ಪ್ರ ಥ ಮ ಪ ಟ್ಟ ವು.

ದ್ವೈತಾದ್ವೈತ ಭಾಷ್ಯಗಳಲ್ಲಿ ೨ನೇ ಅಧ್ಯಾಯದ ೧೮ನೇ
ಶ್ಲೋಕದಿಂದಲೂ,
ಶ್ರೀರಾಮಾನುಜ ಭಾಷ್ಯದಲ್ಲಿ ಆರಂಭದಿಂದಲೂ,
ಬೆಂಗಳೂರು ತುಲಸೀತೋಟದಲ್ಲಿರುವ

ತೂಪ್ಪುಲ್ ॥ ವೆಂಕಟಾಚಾರ್ಯರಿಂದ

ಬ ರೆ ಯ ಲ್ಪ ಟ್ಟು.

ಬ್ರಾ॥ ಶ್ರೀ॥ ವಾಜಪೇಯಂ॥ ಕೃಷ್ಣಯ್ಯನವರ
ಬೆಂಗಳೂರು ಬುಕ್‌ಡಿಪೋ ಮುದ್ರಾಕ್ಷರಶಾಲೆಯಲ್ಲಿ
ಮುದ್ರಿಸಲ್ಪಟ್ಟಿತು, ಬೆಂಗಳೂರು.

೧೮೯೮.

ಪ್ರಥಮ ಪಟ್ಟದ ಕ್ರಯ ೩ ರೂ.

*Right of Translation & Copy right reserved.*



ಅರ್ಜುನ. ಶ್ರೀಕೃಷ್ಣ.

CHECKED 1958
Checked 1962

ವಿಶೇಷ ಸೂಚನಾ.

ಈ ಪುಸ್ತಕವನ್ನು ಅಪೇಕ್ಷಿಸುವಂತವರು ಈ ಪೇಜಿನಲ್ಲಿ ನನ್ನ ಹಸ್ತಾಕ್ಷರವು ಮತ್ತು ನನ್ನ ಮೊಹರು ಇಲ್ಲದೆ ಇರುವ ಪುಸ್ತಕವಂ ಪಡದರೆ ಅದು ಕಳವು ಛಾರ್ಜ್ಜಿಗೆ ಸಂಬಂಧಿಸುವುದು.

ತುಪ್ಪಲ್ ವೆಂಕಟಾಚಾರ್ಯಃ.

ಶ್ರಿಯೈನಮಃ.

ಶ್ರೀಪಾರ್ಥ ಸಾರಥಯೇ ನಮಃ.

## ಇದರಲ್ಲಿ ಬರೆಯಲ್ಪಟ್ಟ ಟೀಕಾಗಳ ಸಂಜ್ಞಾಕ್ಷರಗಳ ವಿವರಣವು.

### ಶ್ರೀಮದದ್ವೈತ ಸಿದ್ಧಾನ್ತ ಗ್ರಂಥಗಳು.

| | |
|---|---|
| ಶಂ॥ ಭಾ॥ | ಶಂಕರಭಾಷ್ಯವು. |
| ಆ॥ ಗಿ॥ | ಆನಂದಗಿರೀಯಟೀಕಾ. |
| ಶಂ॥ ಆ॥ | ಶಂಕರಾನಂದೀಯಟೀಕಾ. |
| ಮ॥ ಸೂ॥ | ಮಧುಸೂದನ ಸರಸ್ವತೀಯಟೀಕಾ. |
| ಶ್ರೀ॥ | ಶ್ರೀಧರಾಚಾರ್ಯರ ಟೀಕಾ. |

### ಶ್ರೀವಿಶಿಷ್ಟಾದ್ವೈತಸಿದ್ಧಾನ್ತ ಗ್ರಂಥಗಳು.

| | |
|---|---|
| ರಾ॥ ಭಾ॥ | ಶ್ರೀರಾಮಾನುಜಭಾಷ್ಯವು. |
| ತಾ॥ ಚಂ॥ | ತಾತ್ಪರ್ಯಚಂದ್ರಿಕೆಯು. |

### ಶ್ರೀಮನ್ಮಧ್ವ ಸಿದ್ಧಾನ್ತ ಗ್ರಂಥಗಳು.

| | |
|---|---|
| ಮ॥ ಭಾ॥ | ಶ್ರೀಮಧ್ವಾಚಾರ್ಯರವರಭಾಷ್ಯವು. |
| ಗೀ॥ ವಿ॥ | ಶ್ರೀರಾಘವೇಂದ್ರಸ್ವಾಮಿಗಳವರ ಗೀತಾವಿವೃತಿ. |
| ತಾ॥ ನಿ॥ | ತಾತ್ಪರ್ಯ ನಿರ್ಣಯವು. |

ಈ ಗ್ರಂಥಗಳು ಮಾತ್ರವಲ್ಲದೆ ಶ್ರೀಸತ್ಯಸಂಕಲ್ಪ ಸ್ವಾಮಿಗಳವರ ವ್ಯಾಖ್ಯಾನವೂ, ಮತ್ತು ಶ್ರೀಮದ್ವೇದಾನ್ತಮಹಾದೇಶಿಕಸ್ವಾಮಿಗಳವರ ಶ್ರೀಮದ್ಗೀತಾರ್ಥಸಂಗ್ರಹ ದ್ರಾವಿಡಗಾಥಾ, ಸಂಗ್ರಹಶ್ಲೋಕಾದಿಗಳು ಈ ಗ್ರಂಥದಲ್ಲಿ ಸೇರಿಸಿ ಟೀಕಾ ಮಾಡಲ್ಪಟ್ಟಿರುವುದು.

ಶ್ರೀಯೈ ನಮಃ

ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ.

# ಶ್ರೀಗೀತಾರ್ಥಸಾರದ ಪ್ರಥಮ ಸಂಪುಟದಲ್ಲಿರುವ

## ವಿಷಯಗಳ ಸೂಚನೆಯು.


| ವಿಷಯಸಂಖ್ಯೆ. | ವಿಷಯಗಳು. | ಪುಟಸಂಖ್ಯೆ |
|---|---|---|
| ೧ | ಶ್ರೀ ಶಂಕರಭಾಷ್ಯೋಪೋದ್ಘಾತವು. | ೧ |
| ೨ | ಶ್ರೀರಾಮಾನುಜ ಭಾಷ್ಯಾರಂಭವು. | ೮ |
| ೩ | ಶ್ರೀಮನ್ಮಧ್ವಭಾಷ್ಯೋಪೋದ್ಘಾತವು. | ೧೩ |
| ೪ | (ಮ॥ ಭಾ॥)ಶ್ರೀಮಹಾಭಾರತ ಪ್ರಾಶಸ್ತ್ಯವರ್ಣನವು. | ೧೬ |
| ೫ | ಶ್ರೀಭಗವದ್ಗೀತಾರಂಭವು. | ೧೮ |
| ೬ | ೧—೧೯ ಶ್ಲೋಕಗಳವರೆಗೂ ಶ್ರೀಮದ್ರಾಮಾನುಜ ಭಾಷ್ಯ ತಾತ್ಪರ್ಯವು. | ೨೫ |
| ೭ | ಅರ್ಜುನನು ಬಂಧುಜನಗಳನ್ನು ನೋಡಿ ಯುದ್ಧಮಾಡ ಲಾರೆನೆಂದು ವಿಷಾದಿಸುವುದು. | ೨೯ |
| ೮ | ಶ್ರೀಯಾಮುನಾಚಾರ್ಯರ ಗೀತಾರ್ಥಸಂಗ್ರಹಾರಂಭವು. | ೩೯ |
| ೯ | ದ್ವಿತೀಯಾಧ್ಯಾಯ ಪ್ರಾರಂಭವು. | ೪೦ |
| ೧೦ | ಅರ್ಜುನನ ವಿಷಾದವಂ ಪರಿಹಾರಮಾಡುವುದಕ್ಕಾಗಿ ಶ್ರೀಕೃಷ್ಣನು ಹೇಳುವ ಸಮಾಧಾನವು. | ೪೨ |
| ೧೧ | ಆಚಾರ್ಯಾದಿಗಳನ್ನು ಸಂಹಾರ ಮಾಡಲಾರೆನೆಂಬದಾಗಿ ಅರ್ಜುನನು ಹೇಳುವುದು. | ೪೩ |
| ೧೧ | ಶ್ರೀಕೃಷ್ಣನುಮಾಡುವ ಅರ್ಜುನನ ಶೋಕಾಪನೋದನ ಪ್ರಕಾರಾರಂಭವು. | ೪೮ |
| ೧೨ | ದೇಹಾತ್ಮ ವಿವೇಕವನ್ನು ಬೋಧಿಸುವ ಸಂದರ್ಭವು. | ೪೯ |
| ೧೫ | ಶಂ॥ ಜ್ಞಾನಕರ್ಮ ಸಮುಚ್ಚಯವಾದ ನಿರಾಕರಣವು | ೫೩ |
| ೧೬ | ಆತ್ಮಸ್ವಭಾವೋಪದೇಶ ಪ್ರಕರಣವು | ೬೦ |

| ವಿಷಯಸಂಖ್ಯೆ. | ವಿಷಯಗಳು. | ಪುಟಸಂಖ್ಯೆ. |
|---|---|---|
| ೧೭ | ರಾ॥ ಜೀವೇಶ್ವರಭೇದವು ವಾಸ್ತವವೆಂಬುವುದು | ೬೦ |
| ೧೮ | ,, ಈಶ್ವರನಂತೆ ಜೀವರೂ ನಿತ್ಯರೆಂಬುವ ಪ್ರಕರಣವು | ,, |
| ೧೯ | ,, ಜೀವೇಶ್ವರಭೇದವುಜೀವಪರಸ್ಪರ ಭೇದವು ಉಪಾಧಿಪ್ರಯುಕ್ತವೆಂಬ ವಾದನಿರಾಕರಣವು | ,, |
| ೨೦ | ,, ಪರಮಾತ್ಮನಿಗೆ ಬಾಧಿತಾನುವೃತ್ತಿಜ್ಞಾನವಂ ನಿಷೇಧಿಸುವುದು. | ೬೧ |
| ೨೧ | ,, ಅದ್ವೈತಜ್ಞಾನಸಿದ್ಧಿಯುಳ್ಳವರು ಅನ್ಯರಿಗೆ ಉಪದೇಶಾದಿಗಳಂ ಮಾಡುವ ವಿಷಯದಲ್ಲಿ ಅನುಪಪತ್ತಿ ಪ್ರದರ್ಶನವು ... | ೬೩ |
| ೨೨ | ,, ಅದ್ವೈತಜ್ಞಾನಕ್ಕೆ ಬಾಧಕ ಪ್ರದರ್ಶನವು | ೬೪ |
| ೨೩ | ,, ಅದ್ವೈತ ಜ್ಞಾನವುಳ್ಳವರಿಗೆ ಗುರುಶಿಷ್ಯ ವ್ಯವಸ್ಥಾ ಭಂಗವು. | |
| ೨೪ | ಶಂ॥ ಆತ್ಮಭೇದವೆಲ್ಲವೂ ಶರೀರೋಪಾಧಿಯಿಂದುಂಟಾದದ್ದೆಂಬುವುದು. ... | ೬೬ |
| ೨೫ | ಮ॥ ದೇಹಾತ್ಮ ವಿವೇಕೋಪದೇಶ ಪ್ರಕರಣವು | ೬೮ |
| ೨೬ | ಶೀತೋಷ್ಣಾದಿಗಳಂ ಕ್ಷಮಿಸಬೇಕೆಂಬುವುದು | ,, |
| ೨೭ | ವಿಷಯ ಸುಖವು ಅನಿತ್ಯವೆಂಬುವುದು ... | ೬೯ |
| ೨೮ | ದೇಹಾತ್ಮಗಳ ಸ್ವರೂಪ ವಿವೇಚನವು ... | ೭೪ |
| ೨೯ | ಪ್ರತ್ಯಕ್ಷವೇಮೊದಲಾದ ಆರು ಪ್ರಮಾಣಗಳ ವಿವರಣವು | ೭೮ |
| ೩೦ | ದೇಹಗಳನಿತ್ಯಗಳೆಂಬುವ ಪ್ರಕಾರವು ... | ೭೯ |
| ೩೧ | ಆತ್ಮವು ಸಂಹರಿಸಲ್ಪಡತಕ್ಕದ್ದಲ್ಲವೆಂಬುವುದು | ೮೧ |
| ೩೨ | ಆತ್ಮಸ್ವರೂಪ ವಿವೇಚನವು ... | ೮೨ |
| ೩೩ | ದೇಹಧರ್ಮಗಳಿಗೆ ಆತ್ಮನಲ್ಲಿ ಸಂಬಂಧವಿಲ್ಲವೆಂಬುವುದು | ೮೫ |
| ೩೪ | ಜೀವನಿತ್ಯತ್ವದೃಢೀಕಾರವು ... | ,, |
| ೩೫ | ವೇದಾವಿನಾಶಿನಂ, ಎಂಬುವ ಶ್ಲೋಕದ ಶಂ॥ ಭಾ॥ ವು. | ೮೬ |
| ೩೬ | ಶಂ॥ ವಿದ್ವಾಂಸನಿಗೆ ಸರ್ವಕರ್ಮ ಪ್ರತಿಷೇಧವು | ೮೭ |

| ವಿಷಯಸಂಖ್ಯೆ. | ವಿಷಯಗಳು. | ಪುಟಸಂಖ್ಯೆ. |
|---|---|---|
| ೩೭ | ಶಂ॥ ಸರ್ವಕರ್ಮ ಪ್ರತಿಷೇಧಕ್ಕೆ ಅವಿಕ್ರಿಯತ್ವವನ್ನೇ ಕಾರಣವನ್ನಾಗಿ ಉಪನ್ಯಸಿಸುವುದು ... | ೯೮ |
| ೩೮ | ಆತ್ಮಸ್ವರೂಪವು ಛೇದನಾದಿಗಳಿಗೆ ಅನರ್ಹವೆಂಬುವುದು | ೧೦೧ |
| ೩೯ | ಸ್ವಧರ್ಮವನ್ನಾದರೂನೋಡಿ ಯುದ್ಧವಂ ಮಾಡೆಂಬದಾಗಿ ಅರ್ಜುನನಿಗೆ ಬೋಧಿಸುವುದು ... | ೧೧೦ |
| ೪೦ | ನಿಷ್ಕಾಮ ಕರ್ಮಯೋಗ ಪ್ರಭಾವವು ... | ೧೧೯ |
| ೪೧ | ಭೋಗೈಶ್ವರ್ಯ ಪ್ರಸಕ್ತರಿಗುಂಟಾಗುವ ಅನರ್ಥ ಪ್ರಾಪ್ತಿ ವರ್ಣನವು ... ... | ೧೨೮ |
| ೪೨ | ಕರ್ಮಫಲವನ್ನು ಅಪೇಕ್ಷಿಸಕೂಡದೆಂಬುವುದು | ೧೪೦ |
| ೪೩ | ನಿಷ್ಕಾಮ ಕರ್ಮಕ್ಕಿಂತಲೂ ಕಾಮ್ಯಕರ್ಮಕ್ಕೆ ನ್ಯೂನತಾವರ್ಣನವು ... ... | ೧೪೨ |
| ೪೪ | ಯೋಗಸಿದ್ಧಿ ಯುಂಟಾಗುವುದಕ್ಕೆ ತಕ್ಕ ಸಾಧನೋಪನ್ಯಾಸವು ... ... | ೧೫೦ |
| ೪೫ | ಸ್ಥಿತಪ್ರಜ್ಞನೇ ಮೊದಲಾದ ಜ್ಞಾನ ನಿಷ್ಠೆಯುಳ್ಳವರಸ್ವರೂಪಪ್ರದರ್ಶನವು ... ... | ೧೫೩ |
| ೪೬ | ಇಂದ್ರಿಯಜಯಪ್ರಕಾರಪ್ರದರ್ಶನವು ... | ೧೬೫ |
| ೪೭ | ವಿಷಯಚಿಂತೆಯುಳ್ಳವನಿಗುಂಟಾಗುವಅನರ್ಥಪರಂಪರೆಯು | ೧೬೮ |
| ೪೮ | ಮನಃಪ್ರಸಾದವುಳ್ಳವನಿಗುಂಟಾಗುವಲಾಭವು | ೧೬೯ |
| ೪೯ | “ಯಾನಿಶಾ” ಎಂಬಶ್ಲೋಕಕ್ಕೆ ಶಂ॥ಭಾ॥ಅರ್ಥವು | ೧೭೪ |
| ೫೦ | ವಿಷಯಭೋಗಗಳಂ ಬಿಟ್ಟವನಿಗುಂಟಾಗುವಕ್ಷೇಮವು | ೧೮೦ |
| ೫೧ | ಪ್ರಥಮದ್ವಿತೀಯಾಧ್ಯಾಯಾರ್ಥಸಂಗ್ರಹ ಶ್ಲೋಕವು (ಅದ್ವೈತ) ... ... | ೧೮೪-೫ |
| ೫೨ | ದ್ವಿತೀಯಾಧ್ಯಾಯ ಸಂಗ್ರಹ ಶ್ಲೋಕವು, (ವಿಶಿಷ್ಟಾದ್ವೈತ) ... ... | ೧೮೫ |
| ೫೩ | ದ್ವಿತೀಯಾಧ್ಯಾಯಾರ್ಥಸಂಗ್ರಹದ್ರಮಿಡಗಾಥೆಯು | ೧೮೬ |

| ವಿಷಯಸಂಖ್ಯೆ. | ವಿಷಯಗಳು. | ಪುಟಸಂಖ್ಯೆ. |
|---|---|---|
| ೫೪ | ಶಂ॥ ತೃತೀಯಾಧ್ಯಾಯೋಪೋದ್ಘಾತವು | ೧೮೯ |
| ೫೫ | ಕರ್ಮಯೋಗ ಜ್ಞಾನಯೋಗಗಳು ಬೇರೆಬೇರೆ ಪುರುಷರಿಂದ ಅನುಷ್ಠಿಸಬೇಕೆಂಬವಿಚಾರವು | ೧೯೧ |
| ೫೬ | ಕರ್ಮಯೋಗವನ್ನವಶ್ಯಕವಾಗಿ ಅನುಷ್ಠಿಸಬೇಕೆಂಬ ವಿಷಯವು ... ... ... | ೨೦೬ |
| ೫೭ | ಮಿಥ್ಯಾಚಾರವುಳ್ಳವನಲಕ್ಷಣವು ... ... | ೨೧೪ |
| ೫೮ | ಅರ್ಜುನನಿಗೆ ನಿಷ್ಕಾಮ ಕರ್ಮಾನುಷ್ಠಾನದಲ್ಲಿ ಪ್ರೋತ್ಸಾಹನವಂ ಮಾಡುವ ಸಂದರ್ಭವು. | ೨೩೧ |
| ೫೯ | ಜನಕಾದಿಗಳು ಕರ್ಮದಿಂದಲೇ ಸಂಸಿದ್ಧಿಯನ್ನು ಹೊಂದಿರುವ ವಿಚಾರವು. ... | ೨೩೪ |
| ೬೦ | ಲೋಕಾನುವರ್ತನಕ್ಕಾಗಿ ಶ್ರೀಪರಮಾತ್ಮನು ಕೂಡಾ ಕರ್ಮಗಳನ್ನಾಚರಿಸುವ ಸಂದರ್ಭವು ... | ೨೩೮ |
| ೬೧ | ಕರ್ಮಯೋಗಿಗಳ ಬುದ್ಧಿಗೆ ಚಾಂಚಲ್ಯವನ್ನುಂಟುಮಾಡ ಕೂಡದೆಂಬುವುದು ... | ೨೪೦ |
| ೬೨ | ಸರ್ವಾನರ್ಥಗಳಿಗೂ ಕಾರಣನಾದ ಕಾಮನಜಯ ಪ್ರಕಾರೋಪದೇಶವು ... | ೨೫೮ |
| ೬೩ | ಅ॥ ೩ನೇ ಅ॥ ಸಂಗ್ರಹ ಶ್ಲೋಕವು ... | ೨೬೮ |
| ೬೪ | ವಿ॥ ,,—ಸಂಗ್ರಹ ಶ್ಲೋಕವು ... | ೨೬೯ |
| ೬೫ | ೩ನೇ ಅಧ್ಯಾಯದ ಸಂಗ್ರಹ ಗಾಥೆಯು ... | ,, |
| ೬೬ | ಸಂಪ್ರದಾಯ ಪರಂಪರಾಪ್ರದರ್ಶನ ಪೂರ್ವಕವಾಗಿ ಕರ್ಮಯೋಗವನ್ನು ಸ್ತುತಿಸುವ ಪ್ರಕಾರವು | ೨೭೪ |
| ೬೭ | ಅವತಾರ ರಹಸ್ಯ ಜ್ಞಾನೋಪದೇಶವು ... | ೨೭೯ |
| ೬೮ | ಭಗವದವತಾರಕ್ಕುಚಿತವಾದ ಕಾಲವು ... | ೨೮೧ |
| ೬೯ | ಭಗವದವತಾರ ಪ್ರಯೋಜನ ನಿರೂಪಣವು ... | ,, |
| ೭೦ | ಅವತಾರ ರಹಸ್ಯಜ್ಞಾನದಿಂದುಂಟಾಗುವ ಪ್ರಯೋಜನವು | ೨೮೨ |
| ೭೧ | ಕರ್ಮಪ್ರಾಶಸ್ತ್ಯವರ್ಣನವು ... | ೨೮೮ |

| ವಿಷಯಸಂಖ್ಯೆ. | ವಿಷಯಗಳು. | ಪುಟಸಂಖ್ಯೆ. |
|---|---|---|
| ೭೨ | ಪರಮಾತ್ಮನಿಗೆ ಕರ್ಮಲೇಪವಿಲ್ಲವೆಂಬುವುದು | ೨೯೩ |
| ೭೩ | ಕರ್ಮಾಕರ್ಮಗಳ ಸ್ವರೂಪ ವಿವರಣವು ... | ೨೯೭ |
| ೭೪ | "ಕರ್ಮಣ್ಯಕರ್ಮಯಃಪಶ್ಯೇತ್" ಎಂಬ ಶ್ಲೋಕಕ್ಕೆ ಶಾಂಕರ ಭಾಷ್ಯಾರಂಭವು ... | ೩೦೦ |
| ೭೫ | (ರಾ) ಜ್ಞಾನಕರ್ಮಗಳೆರಡೂ ಒಂದರಲ್ಲೊಂದು ಅಡಗಿರುವುದೆಂಬುವುದು ... | ೩೧೪ |
| ೭೬ | ಫಲಾಪೇಕ್ಷಾರಹಿತವಾಗಿ ಕರ್ಮಗಳನ್ನಾಚರಿಸುವಂತವನಿಗುಂಟಾಗುವ ಲಾಭವು ... | ೩೧೫ |
| ೭೭ | ನಿಷ್ಕಾಮಕರ್ಮ ಪ್ರಶಂಸೆಯು ... | ೩೧೬ |
| ೭೮ | (ಶಂ॥) "ಶಾರೀರಂಕೇವಲಂಕರ್ಮ" ಎಂಬ ಶ್ಲೋಕದಲ್ಲಿ "ಶಾರೀರಂ" ಎಂಬ ಶಬ್ದಾರ್ಥ ನಿರೂಪಣವು | ೩೧೮ |
| ೭೯ | "ಬ್ರಹ್ಮಾರ್ಪಣಂ" ಎಂಬುವ ಶ್ಲೋಕಕ್ಕೆ ಶಂ॥ | ೩೨೫ |
| ೮೦ | ರಾ॥ ಸಮಸ್ತ ಕರ್ಮಗಳಲ್ಲಿಯೂ ಬ್ರಹ್ಮಾತ್ಮಕತ್ವಾನುಸಂಧಾನವು ... | ೩೨೯ |
| ೮೧ | ಜ್ಞಾನಯಜ್ಞವೇ ಮೊದಲಾದ ಅನೇಕ ಯಜ್ಞಗಳ ಸ್ವರೂಪ ವಿವರಣವು ... | ೩೩೧ |
| ೮೨ | ಯಜ್ಞವಂಮಾಡದವನಿಗೆ ಗತಿಯಿಲ್ಲವೆಂಬುವುದು | ೩೩೯ |
| ೮೩ | ಜ್ಞಾನಯಜ್ಞದ ಪ್ರಾಶಸ್ತ್ಯವರ್ಣನವು ... | ೩೪೩ |
| ೮೪ | ಚತುರ್ಥಾಧ್ಯಾಯದ ಸಂಗ್ರಹ ಶ್ಲೋಕಾದಿಗಳು | ೩೫೫ |
| ೮೫ | ೫ನೇ ಅಧ್ಯಾಯದ ಶಂ॥ ಭಾ॥ ಉಪೋದ್ಘಾತವು | ೩೫೯ |
| ೮೬ | ಆತ್ಮಸ್ವರೂಪವಂ ತಿಳಿಯದವನು ಮಾಡುವ ಕರ್ಮಸನ್ನ್ಯಾಸಕ್ಕಿಂತಲೂ ಕರ್ಮಯೋಗವು ಶ್ರೇಷ್ಠವೆಂಬುವುದು ... ... | ೩೬೧ |
| ೮೭ | ಕರ್ಮಸನ್ನ್ಯಾಸ ಕರ್ಮಯೋಗ ರೂಪಗಳಾದ ಸಾಂಖ್ಯಯೋಗಗಳಿಗೆ ಒಂದೇಫಲವೆಂಬ ವಿಚಾರವು | ೩೭೭ |
| ೮೮ | ನಿಷ್ಕಾಮಕರ್ಮಯೋಗ ಪ್ರಾಶಸ್ತ್ಯವರ್ಣನವು | ೩೮೫ |

| ವಿಷಯಸಂಖ್ಯೆ. | ವಿಷಯಗಳು. | ಪುಟಸಂಖ್ಯೆ. |
|---|---|---|
| ೮೯ | “ಸರ್ವಕರ್ಮಾಣಿಮನಸಾ” ಎಂಬ ಶ್ಲೋಕಕ್ಕೆ ಶಂ॥ ಭಾ॥ | ೩೯೦ |
| ೯೦ | ಜೀವನಿಗೆ ಕರ್ತೃತ್ವವು ದೋಷಸಂಬಂಧ ಪ್ರಯುಕ್ತವೆಂಬುವ ವಿಚಾರವು ... | ೩೯೨ |
| ೯೧ | ಜೀವಾತ್ಮರು ಅನೇಕರೆಂಬುವ ವಿಚಾರವು | ೩೯೭ |
| ೯೨ | ಸಮದರ್ಶಿಗಳನ್ನು ಪಂಡಿತರೆಂಬುವ ವಿಷಯು | ೩೯೯ |
| ೯೩ | ಸಮದರ್ಶಿಗಳ ಪ್ರಾಶಸ್ತ್ಯವರ್ಣನವು ... | ೪೦೦ |
| ೯೪ | ಆತ್ಮನು ಸರ್ವಭೂತಗಳಲ್ಲಿಯೂ ಏಕರೂಪನಾಗಿರುವ ವಿಷಯ ... ... | ೪೦೩ |
| ೯೫ | ಬ್ರಹ್ಮನಿಷ್ಠೆಯುಳ್ಳವನು ಸುಖದುಃಖಗಳಲ್ಲಿ ಹರ್ಷಶೋಕರಹಿತನಾಗಿರಬೇಕೆಂಬುವುದು ... | ,, |
| ೯೬ | ವಿಷಯ ಭೋಗಗಳು ಅನಿತ್ಯಗಳೆಂಬ ವಿಷಯ | ೪೦೫ |
| ೯೭ | ಬ್ರಹ್ಮಧ್ಯಾನ ಪರನಾಗಿರುವಂತವನಿಗುಂಟಾಗುವ ಫಲವು | ೪೧೯ |
| ೯೮ | ಯೋಗಸ್ವರೂಪವಂ ಸಂಗ್ರಹವಾಗಿ ಉಪದೇಶಿಸುವ ಘಟ್ಟವು ... ... | ೪೦೧ |
| ೯೯ | ಬ್ರಹ್ಮಸ್ವರೂಪ ಪರಿಜ್ಞಾನವೇ ಮೋಕ್ಷಕಾರಣವಾಗುವುದೆಂದು ನಿರ್ಧರಿಸುವ ವಿಷಯು ... | ೪೧೭ |
| ೧೦೦ | ಪಂಚಮಾಧ್ಯಾಯಸಂಗ್ರಹ ಶ್ಲೋಕ ಗಾಥಾದಿಗಳು | ೪೨೦-೪೨೧ |
| ೧೦೧ | ಕರ್ಮಯೋಗ ಪ್ರಶಂಸೆಯು ... | ೪೨೩ |
| ೧೦೨ | ಶಂ॥ ಕರ್ಮಯೋಗ ವಿಷಯವಾದ ವಿಶೇಷವಿಚಾರವು | ೪೨೪ |
| ೧೦೩ | ( ಗೀ ॥ ವಿ ) ಯತಿಗಳಿಗೂ ಅಗ್ನಿ ಕ್ರಿಯೆಗಳುಂಟೆಂಬ ವಿಷಯುವು ... ... | ೪೩೪ |
| ೧೦೪ | ಧ್ಯಾನಯೋಗಕ್ಕೆ ಕರ್ಮಯೋಗವು ಬಹಿರಂಗ ಸಾಧನವೆಂಬುವ ವಿಷಯು ... ... | ೪೩೭ |
| ೧೦೫ | ಯೋಗಿಯಾದವನು ವಿಷಯ ಪರಿತ್ಯಾಗವಂ ಮಾಡಿರಬೇಕೆಂಬ ವಿಷಯವು ... | ೪೪೧ |
| ೧೦೬ | ಸಮದೃಷ್ಟಿಯಾದವನು ಸರ್ವರಿಗಿಂತಲೂ ಶ್ರೇಷ್ಠನೆಂಬುವವಿಷಯುವು ... ... | ೪೪೫ |

| ವಿಷಯಸಂಖ್ಯೆ. | ವಿಷಯಗಳು. | ಪುಟಸಂಖ್ಯೆ. |
|---|---|---|
| ೧೦೭ | ಯೋಗಾಭ್ಯಾಸಪ್ರಕಾರ ಪ್ರದರ್ಶನಾರಂಭವು | ೪೫೭ |
| ೧೦೮ | ಯೋಗಾಭ್ಯಾಸಿ ಯಾದವನಿಗೆ ಆಹಾರ ವಿಹಾರಾದಿ ನಿಯಮಗಳು ... | ೪೫೧ |
| ೧೦೯ | ಮನೋನಿಗ್ರಹ ಶೀಲನಾದ ಆತ್ಮನಿಗೆ ವಾಯು ಸಂಚಾರ ವಿಲ್ಲದ ಪ್ರದೇಶದಲ್ಲಿರುವ ದೀಪವಂ ದೃಷ್ಟಾಂತ ಪಡಿಸುವ ವಿಷಯ ... ... | ೪೫೫ |
| ೧೧೦ | ಯೋಗ ಸಿದ್ಧಿಯಂ ಹೊಂದಿರುವವನ ಲಕ್ಷಣಗಳು | ೪೫೬ |
| ೧೧೧ | ಮನೋನಿಗ್ರಹ ಪ್ರಕಾರ ಪ್ರರ್ಶನವು ... | ೪೫೭ |
| ೧೧೨ | ಮನೋನಿಗ್ರಹವುಳ್ಳವನಿಗುಂಟಾಗುವ ಸುಖವು | ೪೬೨ |
| ೧೧೩ | ನಾಲ್ಕು ವಿಧರಾದ ಯೋಗಿಗಳ ಸ್ವರೂಪ ವಿವರಣಾರಂಭವು | ,, |
| ೧೧೪ | ಮನಸ್ಸು ಚಂಚಲವಾದುದರಿಂದ ಯೋಗವು ಸಿದ್ಧಿಸಲಾರದೆಂಬಅರ್ಜುನನ ಪ್ರಶ್ನವು ... | ೪೬೮ |
| ೧೧೫ | ಮನೋನಿಗ್ರಹವಾಯೋಪದೇಶವು ... | ೪೭೦ |
| ೧೧೬ | ಮನೋನಿಗ್ರಹವಿಲ್ಲದವನಿಗೆ ಯೋಗಸಿದ್ಧಿಯಾಗುವುದಿಲ್ಲ ವೆಂಬುವುದು ... ... | ೪೭೧ |
| ೧೧೭ | ಕರ್ಮ, ಯೋಗ, ಗಳೆಂಬೀ ಯೆರಡರಿಂದ ಭ್ರಷ್ಟನಾದವನಿಗುಂಟಾಗುವ ಗತಿ ವಿಷಯವಾದ ಪ್ರಶ್ನವು | ೪೭೨ |
| ೧೧೮ | ಉಭಯಭ್ರಷ್ಟನಿಗೆ ಯೋಗಸಿದ್ಧಿಯಾಗುವ ಪ್ರಕಾರವು | ೪೮೧ |
| ೧೧೯ | ತಪಸ್ವಿಗಳೇ ಮೊದಲಾದವರಿಗಿಂತಲೂ ಯೋಗಿಯಾದವನು ಶ್ರೇಷ್ಠನೆಂಬುವ ವಿಷಯ ... | ೪೮೨ |
| ೧೨೦ | (ಶಂ||)ರುದ್ರಾದಿತ್ಯಾದಿ ವಿಷಯವಾದ ಯೋಗಿಗಳಿಗಿಂತಲೂ ಶ್ರೀಭಗವದ್ವಾಸುದೇವ ವಿಷಯವಾದ ಯೋಗವಂ ಮಾಡುವನು ಶ್ರೇಷ್ಠನೆಂಬುವ ವಿಷಯ | ೪೮೩ |
| ೧೨೧ | (ರಾ) ಜೀವಾತ್ಮವಿಷಯವಾದ ಯೋಗಕ್ಕಿಂತಲೂ ಪರಮಾತ್ಮವಿಷಯವಾದ ಯೋಗಿಯು ಶ್ರೇಷ್ಠನೆಂಬುವ ವಿಷಯ ... ... | ೪೮೪ |
| ೧೨೨ | ಆರನೇಅಧ್ಯಾಯದ ಸಂಗ್ರಹಶ್ಲೋಕಗಾಥಾದಿಗಳು | ೪೮೬-೭-೮ |


ಈ ಪ್ರಥಮಷಟ್ಕದ ವಿಷಯಸೂಚಿಕಾ ಸಂಪೂರ್ಣವು.

ಶ್ರೀ.

ಶ್ರೀಯೈ ಶ್ರೀರುಕ್ಮಿಣ್ಯೈ ನಮಃ



ಶ್ರೀಪಾರ್ಥಸಾರಥಯೇ ಶ್ರೀಕೃಷ್ಣಾಯ ಪರಬ್ರಹ್ಮಣೇ ನಮಃ

---

ಯತಿಪರಿಬೃಢೋಯದ್ಗೀತಾನಾಮದರ್ಶಯದಂಜಸಾ।
ನಿಗಮಶಿರಸನ್ನೇದೀಯಾಂಸಂಸುಧಾಮಯಮಾಶಯಂ।
ಜನನಪದವೀಯಾತಾಯಾತಶ್ರಮಾಪಹರಾಂಘ್ರಿಯಂ ।
ಜನಯತುಸಮೇದೇವಶ್ಶ್ರೀಮಾನ್ಧನಂಜಯಸಾರಥಿಃ॥೧॥

ಅನುಚಿತಪದವೀಭಿಶ್ಚಿಂತಯಿತ್ವಾಪ್ರಯಾತಾ ।
ನಲಮಲಮತಿಮಾತ್ರೈರತ್ರಚಿತ್ತೇವಿಷಾದೈಃ ।
ಉಪನಿಷದಮುದಾರಾಮುದ್ವಹನ್ಪಾಂಡವಾರ್ಥಂ।
ಶರಣಮುಪಗತಾನ್ನಸ್ತ್ರಾಯತೇಶಾರ್ಙ್ಗಧನ್ವಾ ॥೨॥

ಪ್ರಭೂತವಿಬುಧದ್ವಿಷದ್ಭರಣಖಿನ್ನವಿಶ್ವಂಭರಾಭರಾ
ಪನಯನಚ್ಛಲಾತ್ತ್ವಮವತಾರ್ಯಲಕ್ಷ್ಮೀಧರಂ।ನಿರಾಕ್ರ
ತವತೀದಯೋನಿಗಮಸೌಧದೀಪಶ್ರಿಯಾ ।ವಿಪಶ್ಚಿದವಿ
ಗೀತಯಾಜಗತಿಗೀತಯಾऽನ್ಧಂತಮಃ ॥ ॥೩॥

## ಉ ಪೋ ದ್ಘಾ ತ ವು .

ಶ್ರೀಯಃಪತಿಯಾದ ಶ್ರೀಕೃಷ್ಣ ಪರಮಾತ್ಮನು ಪ್ರಕೃತಿಪಾರವಶ್ಯದಿಂದ ಸಂಸಾರಾಬ್ಧಿ ಸಮ್ಮಗ್ನರಾಗಿರುವ ನಮ್ಮಂಥಾ ಜೀವ ರಾಶಿಗಳ ಬಾಹ್ಯಾಂಭ್ಯಂತರಾಂಧಕಾರನಿರಾಸಾರ್ಥವಾಗಿ,ಉನ್ನತಮಾದಪ್ರವೇಶದಲ್ಲಾರೋಪಿಸಿರುವ ದೀಪಪ್ರಭೆಯು ಸುತ್ತುಮುತ್ತಲು ವ್ಯಾಪಿಸಿ ಅನೇಕ ಪ್ರದೇಶವರ್ತಿಗಳಾದ ತಮಸ್ಸನ್ನು ನಾಶಪಡಿಸುವಂತೆ ವೇದಾಂತ ವೆಂಬ ಸೌಧಾಗ್ರದಲ್ಲಾರೋಪಿಸಿರುವ ಮಹಾದೀಪದಂತಿರುವ ಈ ಭಗವದ್ಗೀತಾ ಶಾಸ್ತ್ರವು ಮುಮುಕ್ಷುಗಳಿಗೆ ಮೋಕ್ಷಾರ್ಥವಾಗಿ ಅತ್ಯಂತಾಪಶ್ಯಕತ್ವೇನ ದ್ವೈತಾದ್ವೈತ ವಿಶಿಷ್ಟಾದ್ವೈತಿಗಳೆಂಬ ಮತತ್ರಯನಿಷ್ಠರಾದ ವೈದಿಕರಿಂದ ಅಂಗೀಕೃತವಾಗಿರುವುದು.

ಈ ಗೀತಾಶಾಸ್ತ್ರವು; ಬ್ರಹ್ಮಸೂತ್ರವು, ಉಪನಿಷತ್ತುಗಳು, ಎಂಬಿವುಗಳೊಡನೇ ಸೇರಿ ಗ್ರಂಥತ್ರಯದಲ್ಲಿ ಒಂದಾಗಿರುವುದು. ಮತ್ತು ಐನೇ ವೇದ ವೆಂಬದಾಗಿ ಹೇಳಲ್ಪಟ್ಟು ವೇದಾರ್ಥಸಾರವಾದ ಶ್ರೀಮನ್ಮಹಾಭಾರತಕ್ಕೆ ಶಿರಸ್ಸಿನಂತೆ ಸಾರತಮವಾಗಿರುವ ಈ ಗೀತೆಯು ಸಾಕ್ಷಾಚ್ಛ್ರೀಕೃಷ್ಣ ಪರಮಾತ್ಮನಿಂದ ಅರ್ಜುನನಂ ವ್ಯಾಜೀಕರಿಸಿ ಸರ್ವಲೋಕ ಹಿತಾರ್ಥವಾಗಿ ಉಪದೇಶಿಸಲ್ಪಟ್ಟದಿವ್ಯಾದ್ಭುತ ಪ್ರಬಂಧವಾಗಿರುವುದು.

ಈ ದಿವ್ಯವಾದ ಗೀತಾಪ್ರಬಂಧವು ದ್ವೈತಾದ್ವೈತ ವಿಶಿಷ್ಟಾದ್ವೈತಿಗಳೆಂಬ ಮತತ್ರಯನಿಷ್ಠರಾದ ವೈದಿಕೋತ್ತಮರಿಂದ ತಮ್ಮ ತಮ್ಮಗಳ ಮತಕ್ಕೆ ಸ್ಥಾಪಕವಾಗಿರುವುದೆಂಬದಾಗಿ ಪರಿಗಣಿಸಲ್ಪಟ್ಟು ತತ್ತತ್ಸಿದ್ಧಾಂತಾನುಸಾರವಾಗಿ ಭಾಷ್ಯವೂ ಮಾಡಲ್ಪಟ್ಟಿರುವುದು.

## ಅದ್ವೈತ ಸಿದ್ಧಾನ್ತವು.

ಚೇತನಾಚೇತನ ರೂಪವಾದ ಈ ಪ್ರಪಂಚವು ಶುಕ್ತಿ ರಜತವು ರಜ್ಜುಸರ್ಪವು, ಮೃಗತೃಷ್ಣಾ ಜಲವು, ಎಂಬಿವುಗಳಂತೆ ( ಮಾಯಾ-ಅವಿದ್ಯಾ, ಎಂಬದಾಗಿ ಹೇಳಲ್ಪಡುವ ಅಜ್ಞಾನದಿಂದ ತೋರುವುದರಿಂದ ಕಲ್ಪಿತವಾಗಿರುವುದಲ್ಲದೆ ಪರಮಾರ್ಥವಲ್ಲವು. ಆದುದರಿಂದ ವಸ್ತುಗಳೆಲ್ಲವೂ ಪ್ರಾತಿಭಾಸಿಕವು ವ್ಯಾವಹಾರಿಕವು ಪರಮಾರ್ಥಿಕವೆಂಬದಾಗಿ ತ್ರಿವಿಧಗಳಾಗಿರುವವು. ಶುಕ್ತಿಯಲ್ಲಿ ರಜತವು, ರಜ್ಜುವಿನಲ್ಲಿ ಸರ್ಪವು, ಮೃಗತೃಷ್ಣೆಯಲ್ಲಿ ಜಲವೂ, ತೋರುವುದು ಮಾತ್ರವಲ್ಲದೆ ಅದರಿಂದ ಪರಮಾರ್ಥವಾದರಜತವು, ಸರ್ಪವು, ಜಲದಿಂದಾಗಬೇಕಾದಸ್ನಾನಪಾನಾದಿರೂಪವಾದಕಾರ್ಯಗಳೂ,ಆಗುವುದಿಲ್ಲವು.ಆದದರಿಂದಇದು ಪ್ರಾತಿಭಾಸಿಕವೆನ್ನಲ್ಪಡುವುದು. ಪ್ರಪಂಚವು ಅಜ್ಞಾನದಿಂದಕಾಣಲ್ಪಡುವುದಾದರೂ ಅನೇಕ ಕಾರ್ಯಗಳಿಗೆ ಉಪಯೋಗಿಸುವುದರಿಂದ ವ್ಯಾವಹಾರಿಕವೆನ್ನಲ್ಪಡುವುದು. ಈ ಯೆರಡೂ ತತ್ವಜ್ಞಾನದಿಂದ ನಿವರ್ತಿಸಬೇಕಾಗಿರುವುದು. ಅದು ಹೇಗಂದರೆ ಶುಕ್ತಿಯನ್ನು ನೋಡಿ ಇದು ರಜತವೆಂಬದಾಗಿ ಭ್ರಮಿಸುತಲಿರುವವನಿಗೆ ಇದುರಜತವಲ್ಲವು ಶುಕ್ತಿಯೇ, ಇದು ಸರ್ಪವಲ್ಲವು ರಜ್ಜುವೆ, ಇದು ನೀರಲ್ಲವು ಮೃಗತೃಷ್ಣೆಯೆ, ಎಂಬ ಪರಮಾರ್ಥಜ್ಞಾನ ಉಂಟಾದ ಮೇಲೆ ಭ್ರಮದಿಂದ ತೋರಿದ ರಜತ ಸರ್ಪ ಜಲಗಳು ಹೇಗಾದರೆ ನಿವೃತ್ತಿಸುವುದೊ ಅದರಂತೆ "ಈ ಸರ್ವವೂ ಬ್ರಹ್ಮವಲ್ಲವೆ-ನೀನು ಆ ಪರಬ್ರಹ್ಮನಾಗಿರುವಿ, ಎಂಬ ಅರ್ಥವಂ ಪ್ರತಿಪಾದಿಸುವ ವೇದಾಂತ ವಾಕ್ಯಗಳಿಂದ ಬ್ರಹ್ಮಕ್ಕಿಂತಲು ಅನ್ಯವಾದ ವಸ್ತುವಿಲ್ಲವೆಂದು ತಿಳಿಯಲ್ಪಡುವುದರಿಂದ ಈ ಪ್ರಪಂಚದ ನಿವೃತ್ತಿಯೇ ಮುಕ್ತಿಯೆನ್ನಲ್ಪಡುವುದು. ತತ್ವಜ್ಞಾನದಿಂದ ನಿವೃತ್ತಿಸತಕ್ಕವುಗಳೆಲ್ಲವೂ ಪರಮಾರ್ಥವಲ್ಲವಾದುದರಿಂದ ನಿರ್ಗುಣಬ್ರಹ್ಮವೊಂದೇ ಪಾರಮಾರ್ಥಿಕವು.

ಮತ್ತು ಅವಿದ್ಯೆಯೆಂಬುವುದು ಬ್ರಹ್ಮನಲ್ಲಿ ಅನಾದಿಯಾಗಿರುವುದೆಂತಲೂ, ಆ ಅವಿದ್ಯೆಯು ಈ ತತ್ವಜ್ಞಾನದಿಂದ ನಿವೃತ್ತವಾದರೆ ಬ್ರಹ್ಮಕ್ಕೆ ಆ ಅವಿದ್ಯಾ ನಿವೃತ್ತಿಯೆ ಮುಕ್ತಿಯೆಂ ( ಮೋಕ್ಷವೆಂ)ತು

ಲೂ, ಜೀವಾತ್ಮರೆಂಬುವುದು ಬ್ರಹ್ಮವೇ ಅವಿದ್ಯೆಯಿಂದ ಅನೇಕ ಶರೀರಗಳೊಡನೆ ಸೇರಿರುವುದಾಗಿ ತೋರಿದ ಕಾಲದಲ್ಲಿ ಅನೇಕ ಜೀವಾತ್ಮರೆಂಬದಾಗಿ ವ್ಯವಹರಿಸಲ್ಪಡುವರಲ್ಲದೆ ಬ್ರಹ್ಮಕ್ಕಿಂತಲೂ ಅನ್ಯವಾದ ಬೇರೇವಸ್ತುವಿಲ್ಲವು. ಘಟಾದ್ಯಾಕಾಶಗಳಿಗೆ ಘಟಾದಿರೂಪಗಳಾದ ಉಪಾಧಿನಾಶಾನಂತರದಲ್ಲಿ ಮಹಾಕಾಶವೆಂಬ ಒಂದೇ ಆಕಾರಪ್ರಾಪ್ತವಾಗುವಂತೆ ಇಲ್ಲಿಯೂ ತಿಳಿಯಬೇಕು.

ಆದುದರಿಂದ ಭೇದವೇ ಸಂಸಾರವು, ಅಭೇದವೇ ಮೋಕ್ಷವು, ಅವಿದ್ಯೆಯಿಂದುಂಟಾದ ಭೇದವೆಂಬ ಸಂಸಾರವನ್ನು ನಿವೃತ್ತಿಪಡಿಸಿ ಅದ್ವೈತರೂಪವಾಗಿರುವ ಮೋಕ್ಷವನ್ನು ಬ್ರಹ್ಮಕ್ಕೆ ಕೊಡುವುದಕ್ಕಾಗಿಯೇ ಸಮಸ್ತ ವೇದಶಾಸ್ತ್ರಗಳು ಪ್ರವರ್ತಿಸಿರುವವು. ಆದುದರಿಂದ ಶ್ರೀಭಗವದ್ಗೀತೆಯೂ ದ್ವೈತನಿವೃತ್ತಿಗಾಗಿಯೇ ಅರ್ಜುನನಿಗುಪದೇಶಿಸಲ್ಪಟ್ಟಿತೆಂದು ಶ್ರೀಮದದ್ವೈತಸಿದ್ಧಾನ್ತವು.

## * ದ್ವೈತಮತವು—ಶ್ರೀಮನ್ಮಧ್ವಸಿದ್ಧಾನ್ತವು. *

ಭೇದಗಳೆಲ್ಲವೂ ಯಥಾರ್ಥಗಳೇ, ಪ್ರಕೃತಿ ಜೀವೇಶ್ವರರು ಪರಸ್ಪರಭಿನ್ನರಾಗಿಯೇ ಇರುವರು. ''ಪ್ರಪಂಚವೆಲ್ಲವೂ ಬ್ರಹ್ಮವಲ್ಲವೆ, ನೀನು ಆ ಬ್ರಹ್ಮವಾಗಿರುವಿ,, ಎಂಬಿವೇ ಮೊದಲಾದ ವಾಕ್ಯಗಳಲ್ಲಿ ಈಶ್ವರನೇ ಸರ್ವಕರ್ತೃ ಪ್ರಧಾನಭೂತನೆಂಬ ಅರ್ಥವೇರ್ಪಡುವುದು. ''ನರಪತಿರೇವ ಸರ್ವಲೋಕಃ,, ಎಂಬುವಸ್ಥಾನದಲ್ಲಿ ಅರ್ಥವಿರುವಂತೆ ''ಅಬ್ರಹ್ಮವು ನೀನಾಗಿರುವಿ,, ಎಂಬಿವೇ ಮೊದಲಾದ ವಾಕ್ಯಗಳಿಗೂ ಅರ್ಥವಂ ತಿಳಿಯಬೇಕು. ಕರ್ಮವೇ ಜ್ಞಾನೋಪಾಯವು. ಇವುಗಳಿಂದ ಕೂಡಿದ ಭಕ್ತಿಯಿಂದಲೇ ಮೋಕ್ಷವು. ಮೋಕ್ಷದಶೆಯಲ್ಲಿಯೂ ಸ್ವರೂಪಗತವಾದ ಸ್ತ್ರೀತ್ವಪುಂಸ್ತ್ವಾದಿಗಳುಂಟು. ಇಹಲೋಕದಲ್ಲಿ ಕರ್ಮಾದಿಗಳಲ್ಲಿ ಎಷ್ಟು ವ್ಯವಸಾಯವೋ ಅದರ ತಾರತಮ್ಯಾನುಗುಣವಾಗಿ ಮೋಕ್ಷದಶೆಯಲ್ಲಿ ಆನಂದ ತಾರತಮ್ಯವುಂಟಾಗುವುದು. ಆದುದರಿಂದ ಚಿದಚಿದೀಶ್ವರತತ್ತ್ವತ್ರಯ ಪರಿಜ್ಞಾನಮುಖೇನ ಸಾಂಗಭಕ್ತಿಯನ್ನನುಷ್ಠಿಸಿದರೆ ಅದರಿಂದ ಮೋಕ್ಷಪ್ರಾಪ್ತಿಯುಂಟಾಗುವುದೆಂದು ಶ್ರೀಮನ್ಮಧ್ವಾಚಾರ್ಯರ ಸಿದ್ಧಾನ್ತವು.

## ಶ್ರೀವಿಶಿಷ್ಟಾದ್ವೈತ ಸಿದ್ಧಾಂತವು.

ಚಿದಚಿದೀಶ್ವರರೆಂಬ ತತ್ವತ್ರಯವು ಪರಸ್ಪರಭಿನ್ನವಾಗಿದ್ದರೂ ಚೇತನಾಚೇತನಗಳೆರಡೂ ಈಶ್ವರನಿಗೆ ಶರೀರಭೂತಗಳಾಗಿ ಈಶ್ವರನನ್ನೇ ಆಧಾರವಾಗಿ ಉಳ್ಳದ್ದಾಗಿಯೂ, ಪರತಂತ್ರಗಳಾಗಿಯೂ, ಇರುತ್ತಾ ಮುಖ್ಯನಾದಈಶ್ವರನಿಗೆ ಗುಣಗಳಂತೆ ವಿಶೇಷಣರೂಪಗಳಾಗಿರುವುದರಿಂದ ಚೇತನಾ ಚೇತನವಿಶಿಷ್ಟನಾದ ಬ್ರಹ್ಮವೆಂಬುವುದು ಒಂದೇತತ್ವವು. ಲೋಕದಲ್ಲಿ ಒಂದುಗೃಹವೆಂದು ಹೇಳಿದಕಾಲದಲ್ಲಿ ಆ ಗೃಹದಲ್ಲಿರುವ ಬಾಗಲು ಗೋಡೆ ಮೊದಲಾದ ಅವಯವಗಳೂ ಬಿಳುಪು ಕಪ್ಪು ಮೊದಲಾದಗುಣಗಳೂ ಅನೇಕಗಳಾಗಿದ್ದರೂ ವಿಶಿಷ್ಟನಾದ ಗೃಹವು (ಅವಯವಿ) ಏಕವಲ್ಲವೆ ಭಿನ್ನವಲ್ಲವೆಂಬುವುದು ಸರ್ವಲೋಕಸಮ್ಮತವಲ್ಲವೆ, ಅಪ್ರಕಾರವಾಗಿಸಮಸ್ತಚಿದಚಿದ್ವಿಶಿಷ್ಟಬ್ರಹ್ಮವು ಏಕವೆಂಬುವುದು ಯುಕ್ತವಾಗಿಯೇ ಇರುವುದು. ಈಗ ಮನುಷ್ಯ ಪಶುಪಕ್ಷ್ಯಾದಿ ಭೇದಗಳು ಆತ್ಮಗತವಲ್ಲವೇ ಶರೀರಗಳಲ್ಲಿಮಾತ್ರವಿರುವುದಾದರೂ, ಪಕ್ಷಿನೋಡುತ್ತದೆ, ಅವನು ಒಳ್ಳೇಶಾಸ್ತ್ರಜ್ಞನು, ಎಂಬಿವೇಮೊದಲಾದ ವ್ಯವಹಾರದಿಂದ ಕೇವಲಶರೀರಕ್ಕೆ ನೋಡುವಿಕೆ, ಜ್ಞಾನವು, ಮೊದಲಾದ ಚೇತನವ್ಯಾಪಾರಗಳು ಯುಕ್ತವಾಗಲಾರವೆಂಬದಾಗಿ ಆಯಾ ಶಬ್ದಗಳಿಗೆ ,,ಶರೀರವಾಚಕಾನಾಂ ಪದಾನಾಂ ಶರೀರಿಪರ್ಯಂತಂ ಪರ್ಯವಸಾನಂ ,, ಎಂಬ ನ್ಯಾಯದಿಂದ ಆಯಾ ಪಶುಮನುಷ್ಯಾದಿ ಶರೀರ ವಿಶಿಷ್ಟನಾದ ಆತ್ಮಪರ್ಯಂತ ವರ್ತ್ತನವೆಂಬುವುದು ಲೋಕಪ್ರಸಿದ್ಧವಾಗಿರುವುದರಿಂದ ,,ಈಪ್ರಪಂಚವೆಲ್ಲವು ಬ್ರಹ್ಮವಲ್ಲವೆ ನೀನೂಬ್ರಹ್ಮನು ,, ಎಂಬದಾಗಿ ಹೇಳಿದರೆಎಲ್ಲಾಶಬ್ದಗಳಿಗೂ ಸರ್ವಕ್ಕೂ ಆತ್ಮವಾದ ಬ್ರಹ್ಮಪರ್ಯಂತವು ಅರ್ಥವೇರ್ಪಡುವುದರಿಂದ ಆ ಬ್ರಹ್ಮವು ನಿನಗೂ ಆತ್ಮನೆಂಬ ಅರ್ಥವೇ ವ್ಯವಸ್ಥಿತವಾಗುವುದು.

ಈಗ ಜೀವಾತ್ಮನಿಗೆ ಆತ್ಮದರ್ಶನರೂಪವಾದ ಯೋಗದಿಂದಲೂ, ಈಶ್ವರಧ್ಯಾನರೂಪವಾದ ಭಕ್ತಿಯಿಂದಲೂ, ಪ್ರಕೃತಿಸಂಬಂಧವು ಕ್ರಮಕ್ರಮವಾಗಿ ಪರಿಹಾರವಾಗುವುದು. ಅದುಪರಿಹಾರವಾದಮೇಲೆ ತನಗುಂಟಾಗುವ ಸ್ವಸ್ವರೂಪಾವಿರ್ಭಾವವೇ ಮೋಕ್ಷವೆನ್ನಲ್ಪಡುವುದು.

( ಅವಿದ್ಯೆಯೆಂಬುವುದು ಆತ್ಮವ್ಯತಿರಿಕ್ತವಾದ ಶರೀರಾದಿಗಳಲ್ಲಿ ಆತ್ಮಾಭಿಮಾನವೆಂಬುವುದು; ಅಂಥಾ ಅವಿದ್ಯೆಯನ್ನು ಶಾಸ್ತ್ರಜ್ಞಾನದಿಂದ ನಿವೃತ್ತಿಪಡಿಸಿ ಭಕ್ತಿಪ್ರಧಾನವಾದ ಕರ್ಮಗಳಿಂದ ಪ್ರಕೃತಿಸಂಬಂಧವನ್ನು ಬಿಟ್ಟಮೇಲೆ ಸರ್ವಜ್ಞತ್ವಾದಿ ಸಹಜಗುಣಗಳಾವಿರ್ಭವಿಸುವುದೆಂಬ ಸಂದರ್ಭವು "ತದಾಸರ್ವಾವರಣಮಲಾಪೇತಸ್ಯ ಜ್ಞಾನಸ್ಯಾನಂತತ್ವಾಜ್ಞೇಯಮಲ್ಪಂ" ಎಂಬ ಯೋಗಸೂತ್ರದಲ್ಲಿಯೂ ವ್ಯಕ್ತವಾಗಿ ಪ್ರತಿಪಾದಿಸಲ್ಪಟ್ಟಿರುವುದೆಂದು ಕೆಲವರು ಹೇಳುವರು.)

ಮತ್ತು ಅನೇಕ ಶ್ರುತಿಸ್ಮೃತೀತಿಹಾಸಾದಿಗಳಲ್ಲಿ ಜೀವಾತ್ಮಪರಮಾತ್ಮಭೇದವು ವಾಸ್ತವವೆಂಬದಾಗಿ ವ್ಯವಸ್ಥಿತವಾಗಿರುವುದರಿಂದ ಜೀವನಿಗೆ ಯಥಾರ್ಥವಾದ ಪ್ರಕೃತಿಸಂಬಂಧವು, ಪರಿಶುದ್ಧಾತ್ಮಸ್ವರೂಪಜ್ಞಾನದಿಂದಲೂ; ತೈಲಧಾರೆಯಂತೆ ಅವಿಚ್ಛಿನ್ನವಾದ ಸ್ಮರಣ ಧಾರಾರೂಪವಾಗಿರುವ ಉಪಾಸನನಿದಿಧ್ಯಾಸನಾದಿಶಬ್ದಗಳಿಂದ ಹೇಳಲ್ಪಡುವ ಭಗವದ್ಭಕ್ತಿಯಿಂದಲೂ; ನಿವರ್ತಿಸಲ್ಪಡಬೇಕೆಂದು ಈ ಭಗವದ್ಗೀತಾ ಗ್ರಂಥದಲ್ಲಿ ಆಪರಮಾತ್ಮನಿಂದ ಅನುಗ್ರಹಿಸಲ್ಪಟ್ಟಿರುವುದು. ಮತ್ತು "ಈ ಭಗವದ್ಗೀತೆಯಲ್ಲಿ ಅಚೇತನಕ್ಕಿಂತಲೂ ವಿಲಕ್ಷಣನು ಚೇತನನೆಂತಲೂ, ಬದ್ಧಚೇತನನಿಗಿಂತಲೂ ವಿಲಕ್ಷಣನು ಮುಕ್ತಚೇತನನೆಂತಲೂ, ಇವರೆಲ್ಲರಿಗಿಂತಲೂ ವಿಲಕ್ಷಣನು ಪರಮಾತ್ಮನೆಂತಲೂ ಪ್ರತಿಪಾದಿಸಿ ಜೀವೇಶ್ವರಭೇದನಿಬಂಧನವಾದ ಉಪದೇಶಗಳಿಂದ, ಪ್ರಕೃತ್ಯಾತ್ಮ ಭ್ರಾಂತಿ, ಸ್ವತನ್ತ್ರಾತ್ಮ ಭ್ರಾಂತಿ, ಜೀವೇಶ್ವರೈಕ್ಯಭ್ರಾನ್ತಿ, ತ್ರಿಮೂರ್ತ್ಯೈಕ್ಯಭ್ರಾನ್ತಿ, ಎಂಬದೇ ಮೊದಲಾದ ಭ್ರಾಂತಿಗಳು ನಿವೃತ್ತಿಮಾಡಲ್ಪಟ್ಟಿರುವವು. ಆದುದರಿಂದ ರೂಪರಸಾದಿಗಳಾದಗುಣಗಳುನಾನಾವಿಧಗಳಾಗಿದ್ದರು ಗುಣಿಯಾದ ದ್ರವ್ಯವು ಒಂದಾಗಿರುವುವೆಂಬಂತೆ ಚೇತನಾ ಚೇತನಗಳೆಲ್ಲವು ಅಂತರಾತ್ಮನಾಗಿರುವ ಸರ್ವಾಧಾರಭೂತನಾದ ಈಶ್ವರನಿಗೆ ಗುಣಭೂತಗಳಾಗಿಯೂಶರೀರಭೂತಗಳಾಗಿಯೂಇದ್ದುಕೊಂಡುವಿಶೇಷಣಮಾತ್ರಗಳಾಗಿರುವುದರಿಂದ ವಿಶಿಷ್ಟವಾದವಸ್ತುವಿಗೆಏಕತ್ವವು ನಿರಾಬಾಧವೆಂಬದಾಗಿ ಶ್ರೀ ವಿಶಿಷ್ಟಾದ್ವೈತ ಸಿದ್ಧಾಂತವು.

ಈ ಪ್ರಕಾರವಾಗಿ ಮತತ್ರಯಗಳಿಗೂ ಶ್ರೀಭಗವದ್ಗೀತೆಯುಮೂ

ಲಘೊತೆನಾಗಿರುವುದರಿಂದ ಶ್ರೀಮಚ್ಛಂಕರಾಚಾರ್ಯಾದಿಗಳು ತಮ್ಮ ತಮ್ಮಗಳ ಸಿದ್ಧಾಂತಾನುಸಾರವಾಗಿ ಭಾಷ್ಯಗಳನ್ನು ರಚಿಸಿರುತ್ತಾರೆ. ಅವೆಲ್ಲವೂ ದುರ್ಜ್ಞೇಯವಾದ ಗ್ರಂಥಗಳಾಗಿದ್ದರೂ ತತ್ತತ್ಸಿದ್ಧಾಂತ ನಿರ್ಧಾರಣ ಸಾರ್ವಭೌಮರಾದಶ್ರೀಭಾಷ್ಯಕಾರರುಗಳ ಕೃಪಾಬಲದಿಂದಲೂ ಶ್ರೀಮಚ್ಛಠಕೋಪಯತೀಂದ್ರ ಮಹಾದೇಶಿಕಾದಿ ಅಸ್ಮದಾಚಾರ್ಯ ಪರಂಪರೆಯ ದಿವ್ಯಾನುಗ್ರಹ ಬಲದಿಂದಲೂ, ತಿಳಿದಮಟ್ಟಿಗೂ ಸರ್ವರಿಗೂ ಅವರವರ ಸಂಪ್ರದಾಯಪದ್ಧತಿಯು ಪ್ರದರ್ಶನಾರ್ಥವಾಗಿ ದಿಙ್ಮಾತ್ರದಿಂದ ಸಂಸ್ಕೃತ ಭಾಷಾ ಪರಿಚಯವಿಲ್ಲದ ಜನಗಳ ಉಪಯೋಗಕ್ಕೋಸ್ಕರ ಈಗ ಕರ್ಣಾಟಕ ಭಾಷೆಯಲ್ಲಿ ಬರೆದಿರುವ ಈ ಪ್ರಥಮಷಟ್ಕದಟೀಕೆಯಲ್ಲಿ ಸ್ಖಾಲಿತ್ಯಗಳು, ಯಾವವಿದ್ದರೂ ಗುಣೈಕಪಕ್ಷಪಾತಿಗಳಾದ ವಿದ್ವದ್ವರೇಣ್ಯರುಗಳು ಅವುಗಳಂ ಕ್ಷಮಿಸಿ ಲಾಲಿಸಬೇಕೆಂದು ಪ್ರಾರ್ಥಿಸುತ್ತೇನೆ.

ವ್ಯವಹಿತಪೃತನಾಮುಖಂನಿರೀಕ್ಷ್ಯ!
ಸ್ವಜನವಧಾದ್ವಿಮುಖಸ್ಯದೋಷಬುದ್ಧ್ಯಾ ।
ಕುಮತಿಮಹರದಾತ್ಮವಿದ್ಯಯಾಯು!
ಶ್ಚರಣರತಿಃಪರಮಸ್ಯತಸ್ಯಮೇಽಸ್ತು ॥

ಈಪ್ರಕಾರ ಭಾಗವತೋತ್ತಮರ ಚರಣರೇಣುವಾದ,

ತೂಪ್ಪಲ್-ವೆಂಕಟಾಚಾರ್ಯದಾಸಃ.

# ಶ್ರೀ ಭಗವದ್ಗೀತೆಯೊಳು ಪ್ರಥಮ ಷಟ್ಕದಲ್ಲಿರುವ ಶ್ಲೋಕಗಳಿಗೆ ಅಕಾರಾದಿ ವರ್ಣಾನುಕ್ರಮ ಸೂಚೀ||


| ಶ್ಲೋಕಗಳು. ಅ. | | | ಅ|| ಶ್ಲೋ|| |
|---|---|---|---|
| ಅಕೀರ್ತಿಂಚಾಪಿ ಭೂತಾನಿ | ... | ... | ೨ – ೩೪ |
| ಅಚ್ಛೇದ್ಯೋಯಮದಾಹ್ಯೋಯಂ | ... | ... | ೨ – ೨೪ |
| ಅಜೋಪಿಸನ್ನವ್ಯಯಾತ್ಮಾ | ... | ... | ೪ – ೬ |
| ಅಜ್ಞಶ್ಚಾಶ್ರದ್ದಧಾನಶ್ಚ | ... | ... | ೪ – ೪೦ |
| ಅತ್ರಶೂರಾಮಹೇಷ್ವಾಸಾಃ | ... | ... | ೧ – ೪ |
| ಅಥಕೇನಪ್ರಯುಕ್ತೋಯಂ | ... | ... | ೩ – ೩೬ |
| ಅಥಚೇತ್ತ್ವಮಿಮಂಧರ್ಮ್ಯಂ | ... | ... | ೨ – ೩೩ |
| ಅಥಚೈನಂನಿತ್ಯಜಾತಂ | ... | ... | ೨ – ೨೬ |
| ಅಥವಾಯೋಗಿನಾಮೇವ | ... | ... | ೬ – ೪೨ |
| ಅಥವ್ಯವಸ್ಥಿತಾನ್ದೃಷ್ಟ್ವಾ | ... | ... | ೧ – ೨೦ |
| ಅಧರ್ಮಾಭಿಭವಾತ್ಕೃಷ್ಣ | ... | ... | ೧ – ೪೧ |
| ಅನಂತವಿಜಯಂರಾಜಾ | ... | ... | ೧ – ೧೬ |
| ಅನಾಶ್ರಿತಃ ಕರ್ಮಫಲಂ | ... | ... | ೬ – ೧ |
| ಅನ್ತವಂತಇಮೇ ದೇಹಾಃ | ... | ... | ೨ – ೧೮ |
| ಅನ್ನಾದ್ಭವಂತಿಭೂತಾನಿ | ... | ... | ೩ – ೧೪ |
| ಅನ್ಯೇಚಬಹವಶ್ಶೂರಾಃ | ... | ... | ೧ – ೯ |
| ಅಪರಂಭವತೋಜನ್ಮ | ... | ... | ೪ – ೪ |
| ಅಪರೇನಿಯತಾಹಾರಾಃ | ... | ... | ೪ – ೩೦ |
| ಅಪರ್ಯಾಪ್ತಂತದಸ್ಮಾಕಂ | ... | ... | ೧ – ೧೦ |
| ಅಪಾನೇಜುಹ್ವತಿಪ್ರಾಣಂ | ... | ... | ೪ – ೨೯ |
| ಅಪಿಚೇದಸಿಪಾಪೇಭ್ಯಃ | ... | ... | ೪ – ೩೬ |
| ಅಯನೇಷುಚಸರ್ವೇಷು | ... | ... | ೧ – ೧೧ |

| | | |
|---|---|---|
| ಅಯತಿಶ್ಶ್ರದ್ಧಯೋಪೇತಃ ... ... | ೬- | ೩೭ |
| ಅವಾಚ್ಯವಾದಾಂಶ್ಚಬಹೂನ್ ... ... | ೨- | ೩೬ |
| ಅವಿನಾಶಿತುತದ್ವಿದ್ಧಿ ... ... | ೨- | ೧೭ |
| ಅವ್ಯಕ್ತಾದೀನಿಭೂತಾನಿ ... ... | ೨- | ೨೮ |
| ಅವ್ಯಕ್ತೋಽಯಮಚಿಂತ್ಯೋಽಯಂ ... | ೨- | ೨೫ |
| ಅಶೋಚ್ಯಾನನ್ವಶೋಚಸ್ತ್ವಂ ... | ೨- | ೧೧ |
| ಅಸಂಯತಾತ್ಮನಾಯೋಗಃ ... ... | ೬- | ೩೬ |
| ಅಸಂಶಯಂಮಹಾಬಾಹೋ ... ... | ೬- | ೩೫ |
| ಅಸ್ಮಾಕಂತುವಿಶಿಷ್ಟಾಯೆ ... ... | ೧- | ೭ |
| ಅಹೋಬತಮಹತ್ಪಾಪಂ ... ... | ೧- | ೪೫ |


## ಆ


| | | |
|---|---|---|
| ಆಚಾರ್ಯಾಃಪಿತರಃಪುತ್ರಾಃ ... ... | ೧- | ೩೪ |
| ಆತ್ಮೌಪಮ್ಯೇನಸರ್ವತ್ರ ... ... | ೬- | ೩೨ |
| ಆಪೂರ್ಯಮಾಣಮಚಲ ... ... | ೨- | ೭೦ |
| ಆರುರುಕ್ಷೋರ್ಮುನೇರ್ಯೋಗಂ ... ... | ೬- | ೩ |
| ಆವೃತಂಜ್ಞಾನಮೇತೇನ ... ... | ೩- | ೩೯ |
| ಆಶ್ಚರ್ಯವತ್ಪಶ್ಯತಿ ... ... | ೨- | ೨೯ |


## ಇ


| | | |
|---|---|---|
| ಇಂದ್ರಿಯಸ್ಯೇಂದ್ರಿಯಸ್ಯಾರ್ಥೇ ... ... | ೩- | ೩೪ |
| ಇಂದ್ರಿಯಾಣಾಂಹಿಚರತಾಂ ... ... | ೨- | ೬೭ |
| ಇಂದ್ರಿಯಾಣಿಪರಾಣ್ಯಾಹುಃ ... ... | ೩- | ೪೨ |
| ಇಂದ್ರಿಯಾಣಿಮನೋಬುದ್ಧಿಃ ... ... | ೩- | ೪೦ |
| ಇಮಂವಿವಸ್ವತೇಯೋಗಂ ... | ೪- | ೧ |
| ಇಷ್ಟಾನ್ಭೋಗಾನ್ಹಿ ... ... | ೩- | ೧೨ |
| ಇಹೈವತೈರ್ಜಿತಸ್ಸರ್ಗಃ ... ... | ೫- | ೧೯ |

## ಉ

ಉತ್ಸನ್ನಕುಲಧರ್ಮಾಣಾಂ ... ... ೧ - ೪೪
ಉತ್ಸೀದೇಯುರಿಮೇಲೋಕಾಃ ... ೩ - ೨೪
ಉದ್ಧರೇದಾತ್ಮನಾಽಽತ್ಮಾನಂ ... ೬ - ೫

## ಏ

ಏತನ್ಮೇಸಂಶಯಂಕೃಷ್ಣ ... ... ೬ - ೩೯
ಏತಾನ್ನಹಂತುಮಿಚ್ಛಾಮಿ ... ... ೧ - ೩೫
ಏವಮುಕ್ತೋಹೃಷೀಕೇಶಃ ... ... ೧ - ೨೪
ಏವಮುಕ್ತ್ವಾಽರ್ಜುನಸ್ಸಂಖ್ಯೇ ... ೧ - ೪೭
ಏವಮುಕ್ತ್ವಾಹೃಷೀಕೇಶಂ ... ... ೨ - ೯
ಏವಂಪರಮ್ಪರಾಪ್ರಾಪ್ತಂ ... ... ೪ - ೨
ಏವಂಪ್ರವರ್ತಿತಂಚಕ್ರಂ ... ... ೩ - ೧೬
ಏವಂಬಹುವಿಧಾಯಜ್ಞಾಃ ... ... ೪ - ೩೨
ಏವಂಬುದ್ಧೇಃಪರಂಬುದ್ಧ್ವಾ ... ... ೩ - ೪೩
ಏವಂಜ್ಞಾತ್ವಾಕೃತಂಕರ್ಮ ... ... ೪ - ೧೫
ಏಷಾತೇಽಭಿಹಿತಾಸಾಂಖ್ಯೇ ... ... ೨ - ೩೯
ಏಷಾಬ್ರಾಹ್ಮೀಸ್ಥಿತಿಃ ... ... ೨ - ೭೨

## ಕ

ಕಚ್ಚಿನ್ನೋಭಯವಿಭ್ರಷ್ಟಃ ... ... ೬ - ೩೮
ಕಥಂನಜ್ಞೇಯಮಸ್ಮಾಭಿಃ ... ... ೧ - ೩೯
ಕಥಂಭೀಷ್ಮಮಹಂಸಂಖ್ಯೇ ... ... ೨ - ೪
ಕರ್ಮಜಂಬುದ್ಧಿಯುಕ್ತಾಹಿ ... ... ೨ - ೫೧
ಕರ್ಮಣೈವಹಿಸಂಸಿದ್ಧಿಂ ... ... ೩ - ೧೦
ಕರ್ಮಣೋಹ್ಯಪಿಬೋದ್ಧವ್ಯಂ ... ... ೪ - ೧೭
ಕರ್ಮಣ್ಯಕರ್ಮಯಃಪಶ್ಯೇತ್ ... ... ೪ - ೧೮
ಕರ್ಮಣ್ಯೇವಾಧಿಕಾರಸ್ತೇ ... ... ೨ - ೪೭

ಕರ್ಮ ಬ್ರಹ್ಮೋದ್ಭವಂ ವಿದ್ಧಿ ... ... ೩ - ೧೫
ಕರ್ಮೇಂದ್ರಿಯಾಣಿ ಸಂಯಮ್ಯ ... ... ೩ - ೬
ಕಾಙ್ಕ್ಷಂತಃ ಕರ್ಮಣಾಂ ಸಿದ್ಧಿಂ ... ... ೪ - ೧೨
ಕಾಮ ಏಷ ಕ್ರೋಧ ಏಷಃ ... ... ೩ - ೩೭
ಕಾಮಕ್ರೋಧವಿಯುಕ್ತಾನಾಂ ... ೫ - ೨೬
ಕಾಮಾತ್ಮಾನಸ್ಸ್ವರ್ಗಪರಾಃ ... ... ೨ - ೪೩
ಕಾಯೇನ ಮನಸಾ ಬುದ್ಧ್ಯಾ ... ... ೫ - ೧೧
ಕಾರ್ಪಣ್ಯದೋಷೋಪಹತ ... ... ೨ - ೭
ಕಾಶ್ಯಶ್ಚ ಪರಮೇಷ್ವಾಸಃ ... ... ೧ - ೧೭
ಕಿಂ ಕರ್ಮ ಕಿಮಕರ್ಮೇತಿ ... ... ೪ - ೧೬
ಕುತಸ್ತ್ವಾ ಕಶ್ಮಲಮಿದಂ ... ... ೨ - ೨
ಕುಲಕ್ಷಯೇ ಪ್ರಣಶ್ಯಂತಿ ... ... ೧ - ೪೦
ಕೃಪಯಾ ಪರಯಾಽಽವಿಷ್ಟಃ ... ... ೧ - ೨೮
ಕ್ರೋಧಾದ್ಭವತಿ ಸಮ್ಮೋಹಃ ... ... ೨ - ೬೩
ಕ್ಲೈಬ್ಯಂ ಮಾಸ್ಮ ಗಮಃ ಪಾರ್ಥ ... ... ೨ - ೩


## ಗ


ಗತಸಙ್ಗಸ್ಯ ಮುಕ್ತಸ್ಯ ... ... ೪ - ೨೩
ಗಾಂಡೀವಂ ಸ್ರಂಸತೇ ಹಸ್ತಾತ್ ... ... ೧ - ೩೦
ಗುರೂನಹತ್ವಾ ಹಿ ... ... ೨ - ೫


## ಚ


ಚಞ್ಚಲಂ ಹಿ ಮನಃ ಕೃಷ್ಣ ... ... ೬ - ೩೪
ಚಾತುರ್ವರ್ಣ್ಯಂ ಮಯಾ ಸೃಷ್ಟಂ ... ... ೪ - ೧೩


## ಜ


ಜನ್ಮ ಕರ್ಮ ಚ ಮೇ ದಿವ್ಯಂ ... ... ೪ - ೯
ಜಾತಸ್ಯ ಹಿ ಧ್ರುವೋ ಮೃತ್ಯುಃ ... ... ೨ - ೨೭

ಜಿತಾತ್ಮನಃ ಪ್ರಶಾಂತಸ್ಯ ... ... ೬ - ೭
ಜ್ಞಾನವಿಜ್ಞಾನತೃಪ್ತಾತ್ಮಾ ... ... ೬ - ೮
ಜ್ಞಾನೇನ ತು ತದಜ್ಞಾನಂ ... ... ೫ - ೧೬
ಜ್ಞೇಯಸ್ಸ ನಿತ್ಯಸಂನ್ಯಾಸೀ ... ... ೫ - ೩
ಜ್ಯಾಯಸೀ ಚೇತ್ಕರ್ಮಣಸ್ತೇ ... ... ೩ - ೧

## ತ

ತತಶ್ಶಂಖಾಶ್ಚ ಭೇರ್ಯಶ್ಚ ... ... ೧ - ೧೩
ತತಶ್ಶ್ವೇತೈರ್ಹಯೈರ್ಯುಕ್ತೇ ... ... ೧ - ೧೪
ತತ್ತ್ವವಿತ್ತು ಮಹಾಬಾಹೋ ... ... ೩ - ೨೮
ತತ್ರ ತಂ ಬುದ್ಧಿಸಂಯೋಗಂ ... ... ೬ - ೪೩
ತತ್ರಾಪಶ್ಯತ್ಸ್ಥಿತಾನ್ಪಾರ್ಥಃ ... ... ೧ - ೨೬
ತತ್ರೈಕಾಗ್ರಂ ಮನಃ ಕೃತ್ವಾ ... ... ೬ - ೧೨
ತದ್ಬುದ್ಧಯಸ್ತದಾತ್ಮಾನಃ ... ... ೫ - ೧೭
ತದ್ವಿದ್ಧಿ ಪ್ರಣಿಪಾತೇನ ... ... ೪ - ೩೪
ತಪಸ್ವಿಭ್ಯೋಽಧಿಕೋ ಯೋಗೀ ... ೬ - ೪೬
ತಮುವಾಚ ಹೃಷೀಕೇಶಃ ... ... ೨ - ೧೦
ತಸ್ಮಾತ್ತ್ವಮಿಂದ್ರಿಯಾಣ್ಯಾದೌ ... - ೪೧
ತಸ್ಮಾದಸಕ್ತಸ್ಸತತಂ ... ... ೩ - ೧೯
ತಸ್ಮಾದಜ್ಞಾನಸಂಭೂತಂ ... ... ೪ - ೪೨
ತಸ್ಮಾದ್ಯಸ್ಯ ಮಹಾಬಾಹೋ ... ... ೨ - ೬೮
ತಸ್ಮಾನ್ನಾರ್ಹಾ ವಯಂ ಹಂತುಂ ... ... ೧ - ೩೭
ತಸ್ಯ ಸಂಜನಯನ್ಹರ್ಷಂ ... ... ೧ - ೧೨
ತಂ ವಿದ್ಯಾದ್ದುಃಖಸಂಯೋಗ ... ... ೬ - ೨೩
ತಂ ತಥಾ ಕೃಪಯಾಽಽವಿಷ್ಟಂ ... ೨ - ೧
ತಾನಿ ಸರ್ವಾಣಿ ಸಂಯಮ್ಯ ... ... ೨ - ೬೧
ತ್ಯಕ್ತ್ವಾ ಕರ್ಮಫಲಾಸಂಗಂ ... ... ೪ - ೨೦
ತ್ರೈಗುಣ್ಯವಿಷಯಾ ವೇದಾಃ ... ... ೨ - ೪೫

## ದ


ದುಃಖೇಷ್ವನುದ್ವಿಗ್ನಮನಾಃ ... ... ೨ – ೫೬
ದೂರೇಣಹ್ಯವರಂಕರ್ಮ ... ... ೨ .. ೪೯
ದೃಷ್ಟ್ವಾತುಪಾಂಡವಾನೀಕಂ ... ... ೧ – ೨
ದೇವಾನ್ಭಾವಯತಾನೇನ ... ... ೩ – ೧೧
ದೇಹೀನಿತ್ಯಮವಧ್ಯೋಽಯಂ ... ... ೨ – ೩೦
ದೇಹಿನೋಽಸ್ಮಿನ್ಯಥಾದೇಹೇ ... ... ೨ – ೧೩
ದೈವಮೇವಾಪರೇಯಜ್ಞಂ ... ... ೪ – ೨೫
ದೋಷೈರೇತೈಃಕುಲಘ್ನಾನಾಂ ... ... ೧ – ೪೩
ದ್ರವ್ಯಯಜ್ಞಾಸ್ತಪೋಯಜ್ಞಾಃ ... ... ೪ - ೨೮
ದ್ರುಪದೋದ್ರೌಪದೇಯಾಶ್ಚ ... ... ೧ – ೧೮


## ಧ


ಧರ್ಮಕ್ಷೇತ್ರೇಕುರುಕ್ಷೇತ್ರೇ ... ... ೧ – ೧
ಧೂಮೇನಾವ್ರಿಯತೇವಹ್ನಿಃ ... ... ೩ – ೩೮
ಧೃಷ್ಟಕೇತುಶ್ಚೇಕಿತಾನಃ ... ... ೧ – ೫
ಧ್ಯಾಯತೋವಿಷಯಾನ್ಪುಂಸಃ ... ... ೨ – ೬೨


## ನ


ನಕರ್ತೃತ್ವಂನಕರ್ಮಾಣಿ ... ... ೫ – ೧೪
ನಕರ್ಮಣಾಮನಾರಂಭಾತ್ ... ... ೩ – ೪
ನಕಾಂಕ್ಷೇವಿಜಯಂಕೃಷ್ಣ ... ... ೧ – ೩೨
ನಚೈತದ್ವಿದ್ಮಃಕತರನ್ನೋ ... ... ೨ – ೬
ನಜಾಯತೇಮ್ರಿಯತೇವಾ ... ... ೨ – ೨೦
ನತ್ವೇವಾಹಂಜಾತುನಾಸಂ ... ... ೨ – ೧೨
ನಪ್ರಹೃಷ್ಯೇತ್ಪ್ರಿಯಂಪ್ರಾಪ್ಯ ... ... ೫ – ೨೦
ನಬುದ್ಧಿಭೇದಂಜನಯೇತ್ ... ... ೩ – ೨೬
ನಮಾಂಕರ್ಮಾಣಿಲಿಂಪಂತಿ ... ... ೪ – ೧೪

| | | | |
|---|---|---|---|
| ನಮೇಪಾರ್ಥಾಸ್ತಿಕರ್ತವ್ಯಂ | ... | ... | ೩ – ೨೨ |
| ನಹಿಕಶ್ಚಿತ್ಕ್ಷಣಮಪಿ | ... | ... | ೩ – ೫ |
| ನಹಿಪ್ರಪಶ್ಯಾಮಿಮಮಾ | ... | ... | ೨ – ೮ |
| ನಹಿಜ್ಞಾನೇನಸದೃಶಂ | ... | ... | ೪ – ೩೮ |
| ನಾತ್ಯಶ್ನತಸ್ತುಯೋಗೋಸ್ತಿ | ... | ... | ೬ – ೧೬ |
| ನಾದತ್ತೇಕಸ್ಯಚಿತ್ಪಾಪಂ | ... | ... | ೫ – ೧೫ |
| ನಾಸತೋವಿದ್ಯತೇಭಾವೋ | ... | ... | ೨ – ೧೬ |
| ನಾಸ್ತಿಬುದ್ಧಿರಯುಕ್ತಸ್ಯ | ... | ... | ೨ – ೬೬ |
| ನಿಮಿತ್ತಾನಿ ಚಪಶ್ಯಾಮಿ | ... | ... | ೧ – ೩೧ |
| ನಿಯತಂಕುರುಕರ್ಮತ್ವಂ | ... | ... | ೩ – ೮ |
| ನಿರಾಶೀರ್ಯತಚಿತ್ತಾತ್ಮಾ | ... | ... | ೪ – ೨೧ |
| ನಿಹತ್ಯಧಾರ್ತರಾಷ್ಟ್ರಾನ್ನಃ | ... | ... | ೧ – ೩೬ |
| ನೇಹಾಭಿಕ್ರಮನಾಶೋಸ್ತಿ | ... | ... | ೨ – ೪೦ |
| ನೈನಂಛಿಂದಂತಿಶಸ್ತ್ರಾಣಿ | ... | ... | ೨ – ೨೩ |
| ನೈವಕಿಂಚಿತ್ಕರೋಮೀತಿ | ... | ... | ೫ – ೮ |
| ನೈವತಸ್ಯಕೃತೇನಾರ್ಥಃ | ... | ... | ೩ – ೧೮ |


## ಪ


| | | | |
|---|---|---|---|
| ಪರಿತ್ರಾಣಾಯಸಾಧೂನಾಂ | ... | ... | ೪ – ೮ |
| ಪಶ್ಯೈತಾಂಪಾಂಡುಪುತ್ರಾಣಾಂ | ... | ... | ೧ – ೩ |
| ಪಾಂಚಜನ್ಯಂಹೃಷೀಕೇಶಃ | ... | ... | ೧ – ೧೫ |
| ಪಾರ್ಥನೈವೇಹನಾಮುತ್ರ | ... | ... | ೬ – ೪೦ |
| ಪೂರ್ವಾಭ್ಯಾಸೇನತೇನೈವ | ... | ... | ೬ – ೪೪ |
| ಪ್ರಕೃತೇಃಕ್ರಿಯಮಾಣಾನಿ | ... | ... | ೩ – ೨೭ |
| ಪ್ರಕೃತೇರ್ಗುಣಸಮ್ಮೂಢಾಃ | ... | ... | ೩ – ೨೯ |
| ಪ್ರಜಹಾತಿಯದಾಕಾಮಾನ್ | ... | ... | ೨ – ೫೫ |
| ಪ್ರಯತ್ನಾದ್ಯತಮಾನಸ್ತು | ... | ... | ೬ – ೪೫ |
| ಪ್ರಲಪನ್ವಿಸೃಜನ್ಗೃಹ್ಣನ್ | ... | ... | ೫ – ೯ |

ಪ್ರಶಾನ್ತಮನಸಂಹ್ಯೇನಂ ... ... ೬ - ೨೭
ಪ್ರಶಾನ್ತಾತ್ಮಾ ವಿಗತಭೀಃ ... ... ೬ - ೧೪
ಪ್ರಸಾದೇಸರ್ವದುಃಖಾನಾಂ ... ... ೨ - ೬೫
ಪ್ರಾಪ್ಯಪುಣ್ಯಕೃತಾಂಲೋಕಾನ್ ... ... ೬ - ೪೧

## ಬ

ಬನ್ಧುರಾತ್ಮಾತ್ಮನಸ್ತಸ್ಯ ... ... ೬ - ೬
ಬಹೂನಿಮೇವ್ಯತೀತಾನಿ ... ... ೪ - ೫
ಬಾಹ್ಯಸ್ಪರ್ಶೇಷ್ವಸಕ್ತಾತ್ಮಾ ... ... ೫ - ೨೧
ಬುದ್ಧಿಯುಕ್ತೋಜಹಾತೀಹ ... ... ೨ - ೫೦
ಬ್ರಹ್ಮಣ್ಯಾಧಾಯಕರ್ಮಾಣಿ ... ... ೫ - ೧೦
ಬ್ರಹ್ಮಾರ್ಪಣಂಬ್ರಹ್ಮಹವಿಃ ... ... ೪ - ೨೪

## ಭ

ಭಯಾದ್ರಣಾದುಪರತಂ ... ... ೨ - ೩೫
ಭವಾನ್ಭೀಷ್ಮಶ್ಚಕರ್ಣಶ್ಚ ... ... ೧ - ೮
ಭೀಷ್ಮದ್ರೋಣಪ್ರಮುಖತಃ ... ... ೧ - ೨೫
ಭೋಕ್ತಾರಂಯಜ್ಞತಪಸಾಂ ... ... ೫ - ೨೯
ಭೋಗೈಶ್ವರ್ಯಪ್ರಸಕ್ತಾನಾಂ ... ... ೨ - ೪೪

## ಮ

ಮಯಿಸರ್ವಾಣಿಕರ್ಮಾಣಿ ... ... ೩ - ೩೦
ಮಾತ್ರಾಸ್ಪರ್ಶಾಸ್ತುಕೌಂತೇಯ ... ... ೨ - ೧೪

## ಯ

ಯಏನಂವೇತ್ತಿಹನ್ತಾರಂ ... ... ೨ - ೧೯
ಯಜ್ಞಶಿಷ್ಟಾಮೃತಭುಜಃ ... ... ೪ - ೩೧
ಯಜ್ಞಶಿಷ್ಟಾಶಿನಸ್ಸಂತೋ ... ... ೩ - ೧೩
ಯಜ್ಞಾರ್ಥಾತ್ಕರ್ಮಣೋನ್ಯತ್ರ ... ... ೩ - ೯
ಯಜ್ಜ್ಞಾತ್ವಾನಪುನರ್ಮೋಹಂ ... ... ೪ - ೩೫

| | | | |
|---|---|---|---|
| ಯತತೋಹ್ಯಪಿಕೌಂತೇಯ | ... | ... | ೨ - ೬೦ |
| ಯತೇಂದ್ರಿಯಮನೋಬುದ್ಧಿಃ | ... | ... | ೫ - ೨೮ |
| ಯತೋಯತೋನಿಶ್ಚರತಿ | ... | ... | ೬ - ೨೬ |
| ಯತ್ರೋಪರಮತೇಚಿತ್ತಂ | ... | ... | ೬ - ೨೦ |
| ಯತ್ಸಾಂಖ್ಯೈಃಪ್ರಾಪ್ಯತೇ | ... | ... | ೫ - ೫ |
| ಯಥಾದೀಪೋನಿವಾತಸ್ಥೋ | ... | ... | ೬ - ೧೯ |
| ಯಥೈಧಾಂಸಿಸಮಿದ್ಧೋಽಗ್ನಿಃ | ... | ... | ೪ - ೩೭ |
| ಯದಾತೇಮೋಹಕಲಿಲಂ | ... | ... | ೨ - ೫೨ |
| ಯದಾಯದಾಹಿಧರ್ಮಸ್ಯ | ... | ... | ೪ - ೭ |
| ಯದಾವಿನಿಯತಂಚಿತ್ತಂ | ... | ... | ೬ - ೧೮ |
| ಯದಾಸಂಹರತೇಚಾಯಂ | ... | ... | ೨ - ೫೮ |
| ಯದಾಹಿನೇಂದ್ರಿಯಾರ್ಥೇಷು | ... | ... | ೬ - ೪ |
| ಯದಿಮಾಮಪ್ರತೀಕಾರಂ | ... | ... | ೧ - ೪೬ |
| ಯದಿಹ್ಯಹಂನವರ್ತೇಯಂ | ... | ... | ೩ - ೨೩ |
| ಯದೃಚ್ಛಯಾಚೋಪಪನ್ನಂ | ... | ... | ೨ - ೩೨ |
| ಯದೃಚ್ಛಾಲಾಭಸಂತುಷ್ಟಃ | ... | ... | ೪ - ೨೨ |
| ಯದ್ಯದಾಚರತಿಶ್ರೇಷ್ಠಃ | ... | ... | ೩ - ೨೧ |
| ಯದ್ಯಪ್ಯೇತೇನಪಶ್ಯಂತಿ | ... | ... | ೧ - ೩೮ |
| ಯಸ್ತ್ವಿಂದ್ರಿಯಾಣಿಮನಸಾ | ... | ... | ೩ - ೭ |
| ಯಸ್ಯಸರ್ವೇಸಮಾರಂಭಾಃ | ... | ... | ೪ - ೧೯ |
| ಯಂಲಬ್ಧ್ವಾಚಾಪರಂಲಾಭಂ | ... | ... | ೬ - ೨೨ |
| ಯಂಸನ್ನ್ಯಾಸಮಿತಿಪ್ರಾಹುಃ | ... | ... | ೬ - ೨ |
| ಯಂಹಿನವ್ಯಥಯಂತ್ಯೇತೇ | ... | ... | ೨ - ೧೫ |
| ಯಸ್ಸರ್ವತ್ರಾನಭಿಸ್ನೇಹಃ | ... | ... | ೨ - ೫೭ |
| ಯಾನಿಶಾಸರ್ವಭೂತಾನಾಂ | ... | ... | ೨ - ೬೯ |
| ಯಾಮಿಮಾಂಪುಷ್ಪಿತಾಂವಾಚಂ | ... | ... | ೨ - ೪೨ |
| ಯಾವದೇತಾನ್ನಿರೀಕ್ಷೇಽಹಂ | ... | ... | ೧ - ೨೨ |

ಯಾವಾನರ್ಥ ಉದಪಾನೇ ... ... ೨—೪೬
ಯುಕ್ತಃ ಕರ್ಮಫಲಂ ತ್ಯಕ್ತ್ವಾ ... ೫—೧೨
ಯುಕ್ತಾಹಾರವಿಹಾರಸ್ಯ ... ೬—೧೭
ಯುಂಜನ್ನೇವಂ ಸದಾತ್ಮಾನಂ ... ೬—೧೫
,, ,, ... ೬—೨೮
ಯುಧಾಮನ್ಯುಶ್ಚ ವಿಕ್ರಾಂತಃ ... ೧—೬
ಯೇ ತ್ವೇತದಭ್ಯಸೂಯಂತಃ ... ೩—೩೨
ಯೇ ಮೇ ಮತಮಿದಂ ನಿತ್ಯಂ ... ೩—೩೧
ಯೇ ಯಥಾ ಮಾಂ ಪ್ರಪದ್ಯಂತೇ ... ೪—೧೧
ಯೇಷಾಮರ್ಥೇ ಕಾಂಕ್ಷಿತಂ ನೋ ... ೧—೩೩
ಯೇ ಹಿ ಸಂಸ್ಪರ್ಶಜಾ ಭೋಗಾಃ .. ೫—೨೨
ಯೋಗಯುಕ್ತೋ ವಿಶುದ್ಧಾತ್ಮಾ ... ೫—೭
ಯೋಗಸಂನ್ಯಸ್ತಕರ್ಮಾಣಂ ... ೪—೪೧
ಯೋಗಸ್ಥಃ ಕುರು ಕರ್ಮಾಣಿ .. ೨—೪೮
ಯೋಗಿನಾಮಪಿ ಸರ್ವೇಷಾಂ ... ೬—೪೭
ಯೋಗೀ ಯುಂಜೀತ ಸತತಂ ... ೬—೧೦
ಯೋತ್ಸ್ಯಮಾನಾನವೇಕ್ಷೇಽಹಂ ... ೧—೨೩
ಯೋಽಂತಃಸುಖೋಽಂತರಾರಾಮಃ ... ೫—೨೪
ಯೋ ಮಾಂ ಪಶ್ಯತಿ ಸರ್ವತ್ರ ... ೬—೩೦
ಯೋಽಯಂ ಯೋಗಸ್ತ್ವಯಾ ಪ್ರೋಕ್ತಃ ... ೬—೩೩

## ರ

ರಾಗದ್ವೇಷವಿಯುಕ್ತೈಸ್ತು ... ೨—೬೪

## ಲ

ಲಭಂತೇ ಬ್ರಹ್ಮನಿರ್ವಾಣಂ ... ೫—೨೫
ಲೋಕೇಽಸ್ಮಿನ್ ದ್ವಿವಿಧಾ ನಿಷ್ಠಾ ... ೩—೩

## ವ

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ... ೨—೨೨

ವಿದ್ಯಾವಿನಯಸಂಪನ್ನೇ ... ೫—೧೮
ವಿಷಯಾವಿನಿವರ್ತಂತೇ ... ೨—೫೯
ವಿಹಾಯಕಾಮಾನ್ಯಸ್ಸರ್ವಾನ್ ... ೨—೭೧
ವೀತರಾಗಭಯಕ್ರೋಧಾಃ ... ೪—೧೦
ವೇದಾವಿನಾಶಿನಂನಿತ್ಯಂ ... ೨—೨೧
ವ್ಯವಸಾಯಾತ್ಮಿಕಾಬುದ್ಧಿಃ ... ೨—೪೧
ವ್ಯಾಮಿಶ್ರೇಣೇವವಾಕ್ಯೇನ ... ೩—೨

ಶ

ಶಕ್ನೋತೀಹೈವಯಸ್ಸೋಢುಂ ... ೫—೨೩
ಶನೈಶ್ಶನೈರುಪರಮೇತ್ ... ೬—೨೫
ಶುಚೌದೇಶೇಪ್ರತಿಷ್ಠಾಪ್ಯ ... ೬—೧೧
ಶ್ರದ್ಧಾವಾನ್ ಲಭತೇಜ್ಞಾನಂ ... ೪—೩೯
ಶ್ರುತಿವಿಪ್ರತಿಪನ್ನಾತೇ ... ೨—೫೩
ಶ್ರೇಯಾನ್ದ್ರವ್ಯಮಯಾದ್ಯಜ್ಞಾತ್ ... ೪—೩೩
ಶ್ರೇಯಾನ್ಸ್ವಧರ್ಮೋವಿಗುಣಃ ... ೩—೩೫
ಶ್ರೋತ್ರಾದೀನೀಂದ್ರಿಯಾಣ್ಯನ್ಯೇ ... ೪—೨೬
ಶ್ವಶುರಾನ್ಸುಹೃದಶ್ಚೈವ ... ೧—೨೭

ಸ

ಸಏವಾಯಂಮಯಾತೇಽದ್ಯ ... ೪—೩
ಸಕ್ತಾಃಕರ್ಮಣ್ಯವಿದ್ವಾಂಸಃ ... ೩—೨೫
ಸಘೋಷೋಧಾರ್ತರಾಷ್ಟ್ರಾಣಾಂ ... ೧—೧೯
ಸದೃಶಂಚೇಷ್ಟತೇಸ್ವಸ್ಯಾಃ ... ೩—೩೩
ಸಮಂಕಾಯಶಿರೋಗ್ರೀವಂ ... ೬—೧೩
ಸರ್ವಕರ್ಮಾಣಿಮನಸಾ ... ೫—೧೩
ಸರ್ವಭೂತಸ್ಥಮಾತ್ಮಾನಂ — ೬—೨೯
ಸರ್ವಭೂತಸ್ಥಿತಂಯೋಮಾಂ ... ೬—೩೧
ಸರ್ವಾಣೀಂದ್ರಿಯಕರ್ಮಾಣಿ ... ೪—೨೭
ಸಹಯಜ್ಞಾಃಪ್ರಜಾಸ್ಸೃಷ್ಟ್ವಾ ... ೩—೧೦

ಸಂಕರೋನರಕಾಯೈವ ... ೧—೪೨
ಸಂಕಲ್ಪಪ್ರಭವಾನ್ಕಾಮಾನ್ ... ೬—೨೪
ಸನ್ನ್ಯಾಸಸ್ತುಮಹಾಬಾಹೋ ... ೫—೬
ಸನ್ನ್ಯಾಸಃಕರ್ಮಯೋಗಶ್ಚ .. ೫—೨
ಸಾಂಖ್ಯಯೋಗೌಪೃಥಗ್ಬಾಲಾಃ . ೫—೪
ಸೀದಂತಿಮಮಗಾತ್ರಾಣಿ ... ೧—೨೯
ಸುಖದುಃಖೇಸಮೇಕೃತ್ವಾ ... ೨—೩೮
ಸುಖಮಾತ್ಯಂತಿಕಂಯತ್ತತ್ ... ೬—೨೧
ಸುಹೃನ್ಮಿತ್ರಾರ್ಯುದಾಸೀನ ... ... ೬—೯
ಸ್ಥಿತಪ್ರಜ್ಞಸ್ಯಕಾಭಾಷಾ ... ೨—೫೪
ಸ್ಪರ್ಶಾನ್ಕೃತ್ವಾಬಹಿರ್ಬಾಹ್ಯಾನ್ ... ೫—೨೭
ಸ್ವಧರ್ಮಮಪಿಚಾವೇಕ್ಷ್ಯ ... ... ೨—೩೧

## ಹ

ಹತೋವಾಪ್ರಾಪ್ಸ್ಯಸಿಸ್ವರ್ಗಂ ... ೨—೩೭
ಹೃಷೀಕೇಶಂತದಾವಾಕ್ಯಂ ... ... ೧—೨೧

ಶ್ರಿಯೈನಮಃ.

ಶ್ರೀಹಯಗ್ರೀವಾಯನಮಃ.

## ಶ್ರೀಪಾರ್ಥಸೂತಾಯ ಪರಬ್ರಹ್ಮಣೇನಮಃ.

## ಶ್ರೀಭಗವದ್ಗೀತಾ ಪೂರ್ವಪೀಠಿಕಾ ಪ್ರಾರಭ್ಯಃ.

ಲಕ್ಷ್ಮೀನಾಥಸಮಾರಂಭಾಂ ನಾಥಯಾಮುನಮಧ್ಯಮಾಂ । ಅಸ್ಮದಾಚಾರ್ಯಪರ್ಯಂತಾಂ ವಂದೇಗುರುಪರಂಪರಾಂ ॥ ೧ ॥ ಅಸ್ಮದ್ಗುರು ಸಮಾರಂಭಾಂ ಯತಿಶೇಖರ ಮಧ್ಯಮಾಮ್ । ಲಕ್ಷ್ಮೀವಲ್ಲಭಪರ್ಯಂತಾಂ ವಂದೇಗುರುಪರಂಪರಾಮ್ ॥ ೨ ॥ ಇತ್ಯಾದಿ ತತ್ತತ್ಸಂಪ್ರದಾಯಾನುಗುಣಂ ಗುರುಪರಂಪರಾಽನುಸಂಧಾನಾನಂತರ ಮನುಸಂಧೇಯಶ್ಲೋಕಾಃ ॥*॥ ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ। ಪ್ರಸನ್ನವದನಂಧ್ಯಾಯೇತ್ಸರ್ವವಿಘ್ನೋಪ ಶಾಂತಯೇ ॥ ೩ ॥ ಯಸ್ಯದ್ವಿರದವಕ್ತ್ರಾದ್ಯಾಃ ಪಾರಿಷದ್ಯಾಃ ಪರಶ್ಶತಂ । ವಿಘ್ನಂನಿಘ್ನಂತಿ ಸತತಂವಿಷ್ವಕ್ಸೇನಂತಮಾಶ್ರಯೇ ॥ ೪ ॥ ಸವ್ಯಾಖ್ಯಾಯಕಲಾಪೇನಮಹತಾಭಾರತೇನಚ । ಉಪಬೃಂಹಿತವೇದಾಯ ನಮೋವ್ಯಾಸಾಯವಿಷ್ಣವೇ॥೫॥ ವ್ಯಾಸಂವಸಿಷ್ಠನಪ್ತಾರಂಶಕ್ತೇಃಪೌತ್ರಮಕಲ್ಮಷಂ । ಪರಾಶರಾತ್ಮಜಂವಂದೇ ಶುಕತಾತಂ ತಪೋನಿಧಿಂ ॥ ೬॥ ವ್ಯಾಸಾಯವಿಷ್ಣುರೂಪಾಯ ವ್ಯಾಸರೂಪಾಯವಿಷ್ಣವೇ । ನಮೋವೈಬ್ರಹ್ಮನಿಧಯೇ ವಾಸಿಷ್ಠಾಯನಮೋನಮಃ ॥ ೭ ॥ ಮುನಿಂಸ್ನಿಗ್ಧಾಂಬುದಾಭಾಸಂವೇದಾವಾಸಮಕಲ್ಮಷಂ । ವೇದವ್ಯಾಸಂಸರಸ್ವತ್ಯಾವಾಸಂ ವ್ಯಾಸಂನಮಾಮ್ಯಹಂ ॥೮॥ ಅಚತುರ್ವದನೋಬ್ರಹ್ಮಾದ್ವಿಬಾಹುರಪರೋಹರಿಃ। ಅಫಾಲಲೋಚನಶ್ಶಂಭುರ್ಭಗವಾನ್ಬಾದರಾಯಣಃ ॥೯॥ ಕೃಷ್ಣಂಕಮಲಪತ್ರಾಕ್ಷಂಪುಣ್ಯಶ್ರವಣಕೀರ್ತನಂ । ವಾಸುದೇವಂಜಗದ್ಯೋನಿಂನೌಮಿನಾರಾಯಣಂಹರಿಂ ॥೧೦॥ ಕೃಷ್ಣಾಯ ಯಾದವೇಂದ್ರಾಯಜ್ಞಾನಮುದ್ರಾಯಯೋಗಿನೇ । ನಾಥಾಯ ರುಕ್ಮಿಣೀಶಾಯ ನಮೋವೇದಾ

ನ್ತುಪೇದಿನೆ ॥೧೧॥ ಪ್ರಪನ್ನಪಾರಿಜಾತಾಯವೇತ್ರತೋತ್ರೈಕಪಾಣ
ಯೆ । ಜ್ಞಾನಮುದ್ರಾಯ ಕೃಷ್ಣಾಯ ಗೀತಾಮೃತದುಹೇನಮಃ ॥೧೨॥
ಸಾರಥ್ಯಮರ್ಜುನಸ್ಯಾದೌಕುರ್ವನ್‌ಗೀತಾಮೃತಂದದೌ । ಲೋಕತ್ರ
ಯೋಪಕಾರಾಯತಸ್ಮೈಕೃಷ್ಣಾತ್ಮನೇನಮಃ ॥೧೩॥ ಸರ್ವೋಪನಿಷ
ದೋಗಾವೋದೋಗ್ಧಾ ಗೋಪಾಲನಂದನಃ । ಪಾರ್ಥೋವತ್ಸಸ್ಸುಧೀ
ರ್ಭೋಕ್ತಾದುಗ್ಧಂಗೀತಾಮೃತಂಮಹತ್॥ ॥೧೪॥

ಕರಕಮಲನಿದರ್ಶಿತಾತ್ಮಮುದ್ರಃ ಪರಿಕಲಿತೋನ್ನತ ಬರ್ಹಿಬರ್ಹ
ಚೂಡಃ । ಅತರಕರಗೃಹೀತವೇತ್ರತೋತ್ರೋಮಮಹೃದಿಸನ್ನಿಧಿಮಾ
ತನೋತುಶೌರಿಃ ॥ ೧ ॥ ಅತಾಮ್ರಮಾಣಿಕಮಲ ಪ್ರಣಯಪ್ರತೋದ
ಮಾಲೋಲಹಾರಮಣಿಕುಣ್ಡಲ ಹೇಮಸೂತ್ರಂ । ಆವಿಶ್ಯ ಮಾಂಬು
ಕಣಮಂಬುದನೀಲಮವ್ಯಾದಾದ್ಯಂಧನಂಜಯ ರಥಾಭರಣಂ ಮಹೋ
ನಃ ॥ ೨ ॥ ಅಗ್ರೇಕೃತ್ವಾ ಕಮಪಿಚರಣಂಜಾನುನೈಕೇನತಿಷ್ಠನ್ಪಶ್ಚಾ
ತ್ಪಾರ್ಥಂ ಪ್ರಣಯಸಜುಷಾಚಕ್ಷುಷಾವೀಕ್ಷಮಾಣಃ । ಸವ್ಯೇತೋ
ತ್ರಂಕರಸರಸಿಜೇದಕ್ಷಿಣೇಜ್ಞಾನಮುದ್ರಾಮಾಬಿಭ್ರಾಣೋರಥಮಧಿವಸ
ನ್ಪಾತುನಸ್ಸೂತವೇಷಃ ॥ ೩ ॥ ವಂದೇಕೃಷ್ಣಾರ್ಜುನಾವೀರೌ ನರನಾ
ರಾಯಣಾವುಭೌ । ಧೃತರಾಷ್ಟ್ರಸುತೋನ್ಮತ್ತಗಜಾರೋಹಣವಲ್ಲಭೌ ॥

ಶ್ರೀ ಭಗವದ್ಗೀತಾ ಪೂರ್ವಪೀಠಿಕಾ ಪ್ರಾರಮ್ಭಃ.

ಯದ್ವಾ॥ಧ್ಯಾನಂ ॥ ಓಂ ಪಾರ್ಥಾಯ ಪ್ರತಿಬೋಧಿತಾಂ ಭಗವತಾ
ನಾರಾಯಣೇನ ಸ್ವಯಂವ್ಯಾಸೇನಗ್ರಥಿತಾಂ ಪುರಾಣಮುನಿನಾ ಮಧ್ಯೇ
ಮಹಾಭಾರತಮ್ । ಅದ್ವೈತಾಮೃತವರ್ಷಿಣೀಂ ಭಗವತೀಂ ಮಷ್ಟಾ
ದಶಾಧ್ಯಾಯಿನೀಮಂಬತ್ವಾಮನುಸಂದಧಾಮಿ ಭಗವದ್ಗೀತೇ ಭವದ್ವೇ
ಷಿಣೀಂ ॥ ೧ ॥ ನಮೋಸ್ತುತೇವ್ಯಾಸ ವಿಶಾಲಬುದ್ಧೇ ಫುಲ್ಲಾರವಿಂದಾ
ಯತಪತ್ರನೇತ್ರ । ಯೇನತ್ವಯಾಭಾರತತೈಲಪೂರ್ಣಃ ಪ್ರಜ್ವಾಲಿ
ತೋಜ್ಞಾನಮಯಃಪ್ರದೀಪಃ ॥೨॥ ಪ್ರಪನ್ನಪಾರಿಜಾತಾಯ ತೋತ್ರ
ವೇತ್ರೈಕಪಾಣಯೇ । ಜ್ಞಾನಮುದ್ರಾಯಕೃಷ್ಣಾಯ ಗೀತಾಮೃತದು
ಹೇನಮಃ ॥ ೩ ॥ ಸರ್ವೋಪನಿಷದೋಗಾವೋ ದೋಗ್ಧಾಗೋಪಾಲ
ನಂದನಃ । ಪಾರ್ಥೋವತ್ಸಸ್ಸುಧೀರ್ಭೋಕ್ತಾ ದುಗ್ಧಂಗೀತಾಮೃತಂ

ಮಹತ್ ॥ ೪ ॥ ವಸುದೇವಸುತಂದೇವಂ ಕಂಸಚಾಣೂರಮರ್ದನಂ । ದೇವಕೀಪರಮಾನಂದಂ ಕೃಷ್ಣಂವಂದೇ ಜಗದ್ಗುರುಂ ॥ ೫ ॥ ಭೀಷ್ಮದ್ರೋಣತಟಾಜಯದ್ರಥಜಲಾ ಗಾಂಧಾರನೀಲೋತ್ಪಲಾ ಶಲ್ಯಗ್ರಾಹವತೀಕೃಪೇಣವಹಿನೀ ಕರ್ಣೇನವೇಲಾಕುಲಾ । ಅಶ್ವತ್ಥಾಮವಿಕರ್ಣಘೋರಮಕರಾ ದುರ್ಯೋಧನಾವರ್ತಿನೀ ಸೋತ್ತೀರ್ಣಾಖಲುಪಾಂಡವೈರಣನದೀ ಕೈವರ್ತಕಃಕೇಶವಃ ॥ ೬ ॥ ಪಾರಾಶರ್ಯವಚಸ್ಸರೋಜಮಮಲಂ ಗೀತಾರ್ಥಗಂಧೋತ್ಕಟಂ ನಾನಾಖ್ಯಾನಕಕೇಸರಂಹರಿಕಥಾಸಂಬೋಧನಾಬೋಧಿತಂ । ಲೋಕೇಸಜ್ಜನಷಟ್ಪದೈರಹರಹಃ ಪೇಪೀಯಮಾನಂಮುದಾಭೂಯಾದ್ಭಾರತಪಂಕಜಂ ಕಲಿಮಲ ಪ್ರಧ್ವಂಸಿನಶ್ಶ್ರೇಯಸೇ ॥ ೭ ॥ ಮೂಕಂಕರೋತಿವಾಚಾಲಂ ಪಂಗುಂಲಂಘಯತೇಗಿರಿಂ । ಯತ್ಕೃಪಾತಮಹಂವಂದೇ ಪರಮಾನಂದಮಾಧವಂ ॥೮॥ ಯಂಬ್ರಹ್ಮಾವರುಣೇಂದ್ರರುದ್ರಮರುತಃ ಸ್ತುನ್ವಂತಿದಿವ್ಯೈಃ ಸ್ತವೈರ್ವೇದೈಸ್ಸಾಂಗಪದಕ್ರಮೋಪನಿಷದೈರ್ಗಾಯಂತಿಯಂಸಾಮಗಾಃ । ಧ್ಯಾನಾವಸ್ಥಿತತದ್ಗತೇನಮನಸಾ ಪಶ್ಯಂತಿಯಂಯೋಗಿನೋ ಯಸ್ಯಾನ್ತಂನವಿದುಸ್ಸುರಾಸುರಗಣಾ ದೇವಾಯತಸ್ಮೈನಮಃ ॥ ॥೯॥

## ಶ್ರೀಭಗವದ್ಗೀತಾ ಮಾಹಾತ್ಮ್ಯಂ.

ಗೀತಾಶಾಸ್ತ್ರಮಿದಂಪುಣ್ಯಂ ಯಃಪಠೇತ್ಪ್ರಯತಃಪುಮಾನ್ । ವಿಷ್ಣೋಃಪದಮವಾಪ್ನೋತಿಭಯಶೋಕಾದಿವರ್ಜಿತಃ ॥೧೫॥ ಭಾರತಾಮೃತಸರ್ವಸ್ವಂ ವಿಷ್ಣೋರ್ವಕ್ತ್ರಾದ್ವಿನಿಸ್ಸೃತಂ। ಗೀತಾಗಂಗೋದಕಂ ಪೀತ್ವಾಪುನರ್ಜನ್ಮನವಿದ್ಯತೆ ॥೧೬॥ ಗೀತಾಸುಗೀತಾಃಕರ್ತವ್ಯಾಃ ಕಿಮನ್ಯೈಶ್ಶಾಸ್ತ್ರಸಂಗ್ರಹೈಃ।ಯಾಸ್ವಯಂಪದ್ಮನಾಭಸ್ಯಮುಖಪದ್ಮಾದ್ವಿನಿಸ್ಸೃತಾಃ ॥ ೧೭॥ ಗೀತಾಧ್ಯಯನಶೀಲಸ್ಯ ಪ್ರಾಣಾಯಾಮಪರಸ್ಯಚ । ನೈವಸಂತಿಹಿಪಾಪಾನಿ ಪೂರ್ವಜನ್ಮಕೃತಾನ್ಯಪಿ ॥ ೧೮॥ ಅಕೃತ್ಯಮಪಿಕುರ್ವಾಣೋ ಭುಂಜಾನೋವಾಯತಸ್ತತಃ । ಘೋರಂವೈವಸ್ವತಸ್ಥಾನಂ ಗೀತಾಧ್ಯಾಯೀನಪಶ್ಯತಿ ॥ ೧೯ ॥ ಮಲನಿರ್ಮೋಚನಂಪುಂಸಾಂಜಲಸ್ನಾನಂದಿನೇದಿನೇ। ಸಕೃದ್ಗೀತಾಂಭಸಿಸ್ನಾನಂ ಸಂಸಾರಮಲಮೋಚನಂ ॥ ೨೦ ॥ ಶ್ಲೋಕಮೇಕಂತದರ್ಧಂವಾ ಪಾದಂಪಾದಾರ್ಧ

ಮೇವವಾ | ನಿತ್ಯಂಪಠತಿ ಭಕ್ತ್ಯಾಯಸ್ಸಮೋಕ್ಷಮಧಿಗಚ್ಛತಿ||೨೧|| ಸರ್ವಶಾಸ್ತ್ರಮಯೀಗೀತಾಸರ್ವವೇದಮಯೋಹರಿಃ | ಸರ್ವತೀರ್ಥಮಯೀಗಂಗಾಸರ್ವಧರ್ಮಮಯೋಮನುಃ ||೨೨|| ಏಕಂಶಾಸ್ತ್ರಂದೇವಕೀಪುತ್ರಗೀತಮೇಕೋದೇವೋದೇವಕೀಪುತ್ರಏವ | ಏಕೋಮಂತ್ರೋ ದೇವಕೀಪುತ್ರನಾಮ ಕರ್ಮಾಪ್ಯೇಕಂದೇವಕೀಪುತ್ರಸೇವಾ ||೨೩||

ಇತ್ಯಪರಂಮಹಾತ್ಮ್ಯಂಸಮಾಪ್ತಂ ನಾರಾಯಣಾಂಕಾರ್ಪ್ಯಮ್.

ಶ್ರೀಭಗವದ್ಗೀತಾ ಮಹಾತ್ಮ್ಯಾದಿಕಂ ಸಂಪೂರ್ಣಮ್.

ಶ್ರೀರಸ್ತು

ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ.

## ಶ್ರೀಮದ್ಭಾಗವತೇ ಭೀಷ್ಮಕೃತ ಶ್ರೀಕೃಷ್ಣಸ್ತುತಿಃ.

ತದೋಪಸಂಹೃತ್ಯಗಿರಸ್ಸಹಸ್ರಣೀರ್ವಿಮುಕ್ತಸಂಗಂಮನ ಆದಿಪೂರುಷೇ | ಕೃಷ್ಣೇಲಸತ್ಪೀತಪಟೇಚತುರ್ಭುಜೇ ಪುರಸ್ಥಿತೇಽಮೀಲಿತದೃಗ್ವ್ಯಧಾರಯತ್ ||೧|| ವಿಶುದ್ಧಯಾ ಧಾರಣಯಾ ಹತಾಶುಭಸ್ತದೀಕ್ಷಯೈವಾಶುಗತಾಯುಧವ್ಯಥಃ | ನಿವೃತ್ತಸರ್ವೇಂದ್ರಿಯವೃತ್ತಿವಿಭ್ರಮಸ್ತುಷ್ಟಾವಜನ್ಯಂ ವಿಸೃಜನ್ ಜನಾರ್ದನಮ್||೨|| ಇತಿ ಮತಿರುಪಕಲ್ಪಿತಾ ವಿತೃಷ್ಣಾ ಭಗವತಿಸಾತ್ವತಪುಂಗವೇವಿಭೂಮ್ನಿ | ಸ್ವಸುಖಮುಪಗತೇಕ್ವಚಿದ್ವಿಹರ್ತುಂಪ್ರಕೃತಿ ಮುಪೇಯುಷಿಯದ್ಭವಪ್ರವಾಹಃ ||೩ || ತ್ರಿಭುವನಕಮನಂ ತಮಾಲವರ್ಣಂ ರವಿಕರಗೌರವರಾಂಬರಂ ದಧಾನೇ | ವಪುರಲಕಕುಲಾವೃತಾನನಾಬ್ಜಂವಿಜಯಸಖೇರತಿರಸ್ತುಮೇಽನವದ್ಯಾ|| ೪ || ಯುಧಿತುರಗರಜೋ ವಿಧೂಮ್ರವಿಷ್ವಕ್ಕಚ ಲುಲಿತಶ್ರಮವಾರ್ಯಲಂಕೃತಾಸ್ಯೇ | ಮಮನಿಶಿತ ಶರೈರ್ವಿಭಿದ್ಯಮಾನ ತ್ವಚಿವಿಲಸತ್ಕವಚೇಽಸ್ತುಕೃಷ್ಣಆತ್ಮಾ || ೪ || ಸಪದಿ ಸಖಿವಚೋನಿಶಮ್ಯ ಮಧ್ಯೇನಿಜಪರಯೋರ್ಬಲಯೋರಥಂಪ್ರವೇಶ್ಯ| ಸ್ಥಿತವತಿಪರಸೈನಿಕಾಯುರಕ್ಷ್ಣಾಹೃತವತಿ ಪಾರ್ಥಸಖೇರತಿರ್ಮಮಾಸ್ತು || ೬ || ವ್ಯವಹಿತಪೃತನಾಮುಖಂ ನಿರೀಕ್ಷ್ಯಸ್ವಜನವಧಾದ್ವಿಮುಖಸ್ಯದೋಷಬುದ್ಧ್ಯಾ | ಕುಮತಿ ಮಹ

ರದಾತ್ಮವಿದ್ಯಯಾ ಯಶ್ಚರಣರತಿಃ ಪರಮಸ್ಯ ತಸ್ಯ ಮೇಽಸ್ತು ॥೬॥ ಸ್ವನಿಗಮಮಪಹಾಯ ಮತ್ಪ್ರತಿಜ್ಞಾಮೃತಮಧಿಕರ್ತುಮವಪ್ಲುತೋ ರಥಸ್ಥಃ । ಧೃತರಥಚರಣೋಽಭ್ಯಯಾಚ್ಚಲದ್ಗುರ್ಹರಿರಿವ ಹನ್ತುಮಿಭಂ ಗತೋತ್ತರೀಯಃ ॥ ೭ ॥ ಶಿತವಿಶಿಖಹತೋ ವಿಶೀರ್ಣದಂಶಃ ಕ್ಷತಜಪರಿಪ್ಲುತ ಆತತಾಯಿನೋ ಮೇ । ಪ್ರಸಭಮಭಿಸಸಾರ ಮದ್ವಧಾರ್ಥಂ ಸ ಭವತು ಮೇ ಭಗವಾನ್ ಗತಿರ್ಮುಕುಂದಃ ॥೮॥ ವಿಜಯರಥಕುಟುಂಬ ಆತ್ತತೋತ್ರೇ ಧೃತಹಯರಶ್ಮಿನಿ ತಚ್ಛ್ರಿಯೇಕ್ಷಣೀಯೇ । ಭಗವತಿ ರತಿರಸ್ತು ಮೇ ಮುಮೂರ್ಷೋರ್ಯಮಿಹ ನಿರೀಕ್ಷ್ಯ ಹತಾ ಗತಾಃ ಸ್ವರೂಪಂ ॥ ೯ ॥ ಲಲಿತ ಗತಿವಿಲಾಸವಲ್ಗುಹಾಸ ಪ್ರಣಯನಿರೀಕ್ಷಣ ಕಲ್ಪಿತೋರುಮಾನಾಃ । ಕೃತಮನುಕೃತವತ್ಯ ಉನ್ಮದಾಂಧಾಃ ಪ್ರಕೃತಿಮಗನ್ಕಿಲ ಯಸ್ಯ ಗೋಪವಧ್ವಃ ॥ ೧೦ ॥ ಮುನಿಗಣನೃಪವರ್ಯಸಂಕುಲೇಽಂತಸ್ಸದಸಿ ಯುಧಿಷ್ಠಿರರಾಜಸೂಯ ಏಷಾಂ । ಅರ್ಹಣಮುಪಪೇದ ಈಕ್ಷಣೀಯೋ ಮಮ ದೃಶಿಗೋಚರ ಏಷ ಆವಿರಾತ್ಮಾ ॥ ೧೧ ॥ [illegible] । [illegible] ॥೧೨॥ ತಮಿಮಮಹಮಜಂ ಶರೀರಭಾಜಾಂ ಹೃದಿ ಹೃದಿ ಧಿಷ್ಠಿತಮಾತ್ಮಕಲ್ಪಿತಾನಾಂ । ಪ್ರತಿದೃಶಮಿವ ನೈಕಧಾರ್ಕಮೇಕಂ ಸಮಧಿಗತೋಽಸ್ಮಿ ವಿಧೂತಭೇದಮೋಹಃ ॥ ೧೩ ॥ ಕೃಷ್ಣ ಏವಂ ಭಗವತಿ ಮನೋವಾಗ್ದೃಷ್ಟಿವೃತ್ತಿಭಿಃ । ಆತ್ಮನ್ಯಾತ್ಮಾನಮಾವೇಶ್ಯ ಸೋಂತಶ್ಶ್ವಾಸ ಉಪಾರಮತ್ ॥ ॥೧೪॥

ಇತಿ ಶ್ರೀಭೀಷ್ಮಕೃತ ಶ್ರೀಕೃಷ್ಣಸ್ತುತಿಸ್ಸಂಪೂರ್ಣಾ.



· B·M·SOMP[illegible] NAIDU [illegible] SWEETME
-ETSHOP [illegible] ORE·CITY

ಶ್ರೀಯೈನಮಃ.

ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ.

# ಶ್ರೀಮನ್ನಿಗಮಾಂತ ಮಹಾದೇಶಿಕರನುಗ್ರಹಿಸಿರುವ

# ಶ್ರೀಮದ್ಗೀತಾರ್ಥಸಂಗ್ರಹಗಾಥಾಪ್ರಾರಂಭವು.

"ತತ್ತ್ವಂಜಿಜ್ಞಾಸಮಾನಾನಾಂ ಹೇತುಭಿಸ್ಸರ್ವತೋಮುಖೈಃ । ತತ್ತ್ವಮೇಕೋಮಹಾಯೋಗೀ ಹರಿರ್ನಾರಾಯಣಃ ಪರಃ ॥ ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ । ಇದಮೇಕಂಸುನಿಷ್ಪನ್ನಂ ಧ್ಯೇಯೋನಾರಾಯಣಸ್ಸದಾ " ಇತ್ಯಾದಿ ಪ್ರಮಾಣಗಳಿಂದ ಸಂಗೃಹೀತವಾದ ತತ್ತ್ವಹಿತಪುರುಷಾರ್ಥ ಪ್ರಕಾಶಕವಾಗಿಯೂ, " ಅತ್ರೋಪನಿಷದಂ ಪುಣ್ಯಾಂ ಕೃಷ್ಣದ್ವೈಪಾಯನೋಽಬ್ರವೀತ್ " ಎಂಬಂತೆ ಉಪನಿಷತ್ಸಾರಭೂತವಾಗಿರುವುದರಿಂದ "ಭಾರತೇ ಭಗವದ್ಗೀತಾ ಧರ್ಮಶಾಸ್ತ್ರೇಷು ಮಾನವಂ । ವೇದೇಷು ಪೌರುಷಂ ಸೂಕ್ತಂ ಪುರಾಣೇಷು ಚ ವೈಷ್ಣವಂ" ಎಂಬುದಾಗಿ ಶ್ರೀಮಹಾಭಾರತ ಸಾರತ್ವೇನ ನಿರ್ಣೀತವಾಗಿಯೂ, "ಯಸ್ಮಿನ್ಪ್ರಸಾದಸುಮುಖೇ ಕವಯೋಽಪಿ ಪೂರ್ವೇ ಶಾಸ್ತ್ರಾಣ್ಯಶಾಸುರುಪಪನ್ನವಿವಿಧಕ್ರಮಾಣಿ । ಕೃಷ್ಣೇನತೇನಯದಿಹಸ್ವಯಮೇವಗೀತಂ ಶಾಸ್ತ್ರಸ್ಯತಸ್ಯಸದೃಶಂಕಿಮಿಹಾಸ್ತಿಶಾಸ್ತ್ರಂ" ಎಂಬುದಾಗಿ ಜ್ಞಾನಾಧಿಕರಿಂದ ಮಹರ್ಷಿಪ್ರಮುಖರಿಂದ ಪರಮೋತ್ಕೃಷ್ಟ ಶಾಲಿತ್ವೇನ ಪ್ರಶಂಸಿಸಲ್ಪಟ್ಟು, ಶ್ರೀಮದ್ಯಾಮುನಾಚಾರ್ಯರಿಂದ ಸಂಗ್ರಹೀತವಾದ ಶಾಸ್ತ್ರಷಟ್ಕ ಅಧ್ಯಾಯಸಾರಾರ್ಥಗಳುಳ್ಳದ್ದಾಗಿಯೂ, ಶ್ರೀಭಗವದ್ಭಾಷ್ಯಕಾರರಾದ ಶ್ರೀಮದ್ರಾಮಾನುಜಾಚಾರ್ಯರಿಂದ ಶ್ರೀಮದ್ಗೀತಾಭಾಷ್ಯದಲ್ಲಿ ವಿಶದವಾಗಿ ತೋರಿಸಲ್ಪಟ್ಟ ಪದವಾಕ್ಯಾರ್ಥಯೋಜನಾದಿಗಳುಳ್ಳದ್ದಾಗಿಯೂ, ತನ್ಮೂಲಗಳಿಂದ ಶ್ರೀಮದ್ಗೀತಾರ್ಥಸಂಗ್ರಹರಕ್ಷೆಯಲ್ಲಿ ರಕ್ಷಿಸಲ್ಪಟ್ಟ ಸಾರಾರ್ಥಪುಷ್ಟವಾದ್ದಾಗಿಯೂ, ಶ್ರೀಮದ್ಗೀತಾಭಾಷ್ಯ ತಾತ್ಪರ್ಯಚಂದ್ರಿಕೆಯಲ್ಲಿ ಪರಮತಯೋಜನಾಪ್ರತಿಕ್ಷೇಪಪೂರ್ವಕವಾಗಿ ನಿಷ್ಕಂಟಕೀಕೃತವಾದ ಅರ್ಥಗಳುಳ್ಳದ್ದಾಗಿಯೂ, ಇರುವ;

ಶ್ರೀಮದ್ಗೀತಾಶಾಸ್ತ್ರ ಸಾರಾರ್ಥವನ್ನು ದ್ರಮಿಡಸೂಕ್ತಿರಸಿಕರಾದಸಾತ್ವಿಕಜನಚಿತ್ತರಂಜನಾರ್ಥವಾಗಿ ದ್ರಮಿಡಗಾಥೆಗಳಿಂದ ಸಂಗ್ರಹಿಸಲುಪಕ್ರಮಿಸಿ “ ಸ್ವಧರ್ಮಜ್ಞಾನ ವೈರಾಗ್ಯ ಸಾಧ್ಯಭಕ್ತ್ಯೇಕ ಗೋಚರಃ। ನಾರಾಯಣಃಪರಂಬ್ರಹ್ಮ ಗೀತಾಶಾಸ್ತ್ರೇಸಮೀರಿತಃ” ಎಂಬುವಶ್ಲೋಕದಂತೆ ಕ್ರೋಢೀಕರಿಸಲ್ಪಟ್ಟ ಷಟ್ಕತ್ರಯಾರ್ಥವಾದ ಶಾಸ್ತ್ರಮಹಾವಾಕ್ಯಾರ್ಥವನ್ನು ನಿಷ್ಕರ್ಷಿಸಿ ಈ ಮೊದಲನೇ ಗಾಥೆಯಲ್ಲಿ ಹೇಳುತ್ತಾರೆ. ... ... ... *

## ⟶* ಶ್ರೀಮದ್ಗೀತಾರ್ಥ ಸಂಗ್ರಹ ಗಾಥೆಯು. *⟵

ಕರುಮಮುಂಞಾನಮುಂಕೊಣ್ಡೆೞುಕಾದಲುಕ್ಕೆಣಿಲಕ್ಕೆ
ನ್ರುಅರುಮರೈಯುಚ್ಚಿಯುಳ್ಳಾದರಿತ್ತೋದುಮರುಂಪರಮನ್,
ತಿರುಮಕಳೋಡುಮನ್ನಿತ್ತುಮಾಲೆನ್ರುತಾನುಯ್ತ್ತಾರ್,
ತರುಮಮುಕಂದ ತನಂಜಯನುಕ್ಕವಣ್ಸಾರತಿಯೇ॥೧॥

ಟೀ॥ ತರುಮಂ- ಧರ್ಮವನ್ನು, ಉಕಂದ- ಅನುಭವಿಸಿದವನಾದ, ತನಂಜಯನುಕ್ಕು- ಅರ್ಜುನನಿಗೆ, “ ವಿಷಾದಭೀತಾಯ ವಿಧಿಪ್ರಯಾಮ ” ಎಂಬಂತೇ ಧರ್ಮಶ್ರವಣತದನುಷ್ಠಾನದಲ್ಲಿ ಅತ್ಯಂತಾಸಕ್ತನಾದ ಅರ್ಜುನನಿಗೆಂದರ್ಥವು. ಇಲ್ಲಿನ ಧನಂಜಯ ಶಬ್ದದಿಂದ, ಧನಂಜಯತೀತಿಧನಂಜಯಃ ಎಂಬ ವ್ಯುತ್ಪತ್ತಿ ಲಬ್ಧವಾದ ಧನತೃಷ್ಣಾವಿಜಯವು ಹೇಳಲ್ಪಟ್ಟಿತೆಂದರಿಯಬೇಕು. ಈ ವಿಶೇಷಣವಿಶೇಷ್ಯ ಪದಗಳಿಂದ “ ಶ್ರುತಾದನ್ಯತ್ರಸಂತುಷ್ಟ ಸ್ತತ್ರೈವಚಾತೃಷಃ ” ಎಂಬಂತೆ ಶ್ರೋತವ್ಯ (ಕೇಳತಕ್ಕ) ಶಾಸ್ತ್ರದಲ್ಲಿಭಿರುಚಿಯೂ, ಅದಕ್ಕೆ ವ್ಯತಿರಿಕ್ತವಾದ ವಿಷಯವರ್ಗಗಳಲ್ಲಿ ಅಲಂ (ಸಾಕುಸಾಕು ಎಂಬ) ಬುದ್ಧಿಯೂ ಪ್ರತಿಪಾದಿಸಲ್ಪಟ್ಟಿರುವುದರಿಂದ ಇವನಿಗೆ ಶಾಸ್ತ್ರಸಾರಾರ್ಥ ಶ್ರವಣದಲ್ಲಿ ಪುಷ್ಕಲವಾದ ಅಧಿಕಾರ ಉಂಟಾಗಿರುವುದೆಂಬ ಅರ್ಥವು ಸೂಚಿತವಾಯಿತು. ಅವಣ್-ಆ ಅರ್ಜುನನ, ಶಾರತಿ-ಸಾರಥಿಯು, ಆಶ್ರಿತವಾತ್ಸಲ್ಯಪ್ರಯುಕ್ತ ಪಾರತಂತ್ರ್ಯಾತಿಶಯದಿಂದ ಅರ್ಜುನನ ಸಾರಥ್ಯದಲ್ಲಿ ಪ್ರವೃತ್ತನಿರುವ ಸರ್ವೇಶ್ವರನೆಂದರ್ಥವು. ಇದಕ್ಕೆ ಉಯ್ತ್ತಾರ್ ಎಂಬ ಕ್ರಿಯಾಪದದೊಡನೆ ಅನ್ವಯವು. ಕರುಮಮುಮ್-ಕರ್ಮ

ಯೋಗವನ್ನು ಞಾನಮುಮ್- ಜ್ಞಾನಯೋಗವನ್ನೂ, ಕೊಂಡು-ಆಶ್ರಯಿಸಿ, ಎೞುಮ್-ಉತ್ಪನ್ನವಾಗುವ, ಕಾದಲುಕ್ಕು- ಭಕ್ತಿಯೋಗಕ್ಕೆ, ಓರುಲಕ್ಕು- ಏಕಲಕ್ಷ್ಯವು, ಇಲ್ಲಿ ಫಲತ್ವೇನ ಉದ್ದೇಶ್ಯತ್ವವೇ ಲಕ್ಷ್ಯತ್ವವು. ಇದರಿಂದ ಪೂರ್ವೋದಾಹೃತವಾದ ಶಾಸ್ತ್ರಸಾರಾರ್ಥಸಂಗ್ರಹ ಶ್ಲೋಕದಲ್ಲಿ ಪೂರ್ವಾರ್ಧವು ( ಸ್ವಧರ್ಮಜ್ಞಾನ ವೈರಾಗ್ಯಸಾಧ್ಯಭಕ್ತ್ಯೇಕಗೋಚರಃ ಎಂಬುವುದು) ವಿವರಿಸಲ್ಪಟ್ಟಿತು. ಕರುಮಮುಮ್, ಞಾನಮುಮ್, ಎಂಬುವುದರಿಂದ " ಜ್ಞಾನಕರ್ಮಾತ್ಮಿಕೇ ನಿಷ್ಠೇ " ಎಂಬ ಎರಡನೇಸಂಗ್ರಹ ಶ್ಲೋಕದಿಂದ ಸಂಗ್ರಹೀತವಾದ ಪೂರ್ವಷಟ್ಕಾರ್ಥವೂ, ಕಾದಲ್ ಎಂಬುವುದರಿಂದ " ಮಧ್ಯಮೇಭಗವತ್ತತ್ತ್ವ ಯಾಥಾತ್ಮ್ಯಾವಾಪ್ತಿಸಿದ್ಧಯೇ " ಇತ್ಯಾದಿ ದ್ವಿತೀಯ ಷಟ್ಕಾರ್ಥ ಪ್ರಕಾಶಕವಾದ ಸಂಗ್ರಹ ಶ್ಲೋಕವೂ ವಿವೃತವಾಯಿತು. ಇದಕ್ಕೆ ' ಓದುಮ್ ' ಎಂಬ ಪದದೊಡನೆ ಅನ್ವಯವು, ಅರು-ಅರಿಯಲಶಕ್ಯಗಳಾದ, ಮಱೈಯುಚ್ಚಿ-ವೇದಾಂತಗಳಲ್ಲಿ, ಆದರಿತ್ತು-ಆದರಿಸಿ, ಓದುಮ್-ಅಧೀತನಾಗಿಯೂ, ಅರುಮ್- ಭಗವದ್ಭಕ್ತಿಶೂನ್ಯರಿಂದ ಅರಿಯಲಶಕ್ಯವಾಗಿಯೂ, ಪೊಂದಲಶಕ್ಯವಾಗಿಯೂ ಇರುವ, ಪರಮ್-ಬ್ರಹ್ಮವು, ತಿರುಮಕಳೋಡು-ಶ್ರೀಮಹಾಲಕ್ಷ್ಮಿಯೊಡನೆ, ವರುಮ್-ಬುದ್ಧಿಯಲ್ಲಿ ಬರುವಂತವನಾಗಿಯೂ ಇರುವ,(ಸರ್ವಾವಸ್ಥೆಗಳಲ್ಲಿಯೂ ಶ್ರೀವಿಶಿಷ್ಟನಾಗಿಯೇ ಇರುವನೆಂಬದಾಗಿ ಪ್ರಮಾಣಪ್ರಸಿದ್ಧನಾಗಿಯೂ ಎಂದರ್ಥವು.)ಇದರಿಂದ ಶ್ರೀಮಹಾಲಕ್ಷ್ಮೀದೇವಿಗೆ ಭಕ್ತಿಯೋಗ ವಿಷಯತ್ವವೂ ಪರಬ್ರಹ್ಮಕ್ಕೆ "ವೇದಾಂತಾಸ್ತತ್ತ್ವಚಿಂತಾಂ ಮುರಭಿದುರಸಿಯತ್ಪಾದಚಿಹ್ನೈಸ್ತರಂತಿ" ಎಂಬ ಶ್ರೀಪರಾಶರಭಟ್ಟರವರುಗಳ ವಾಕ್ಯದಂತೆ ದೇವತಾಂತರವ್ಯಾವೃತ್ತಿಯೂ ದರ್ಶಿತವಾಯಿತು. ತಿರುಮಾಲ್-ಉಭಯ ವಿಧಗಳಾದ ವಿಭೂತಿಗಳಿಗೆ ಸ್ವಾಮಿಯಾದವನು, ಇಲ್ಲಿ ತಿರುಮಾಲ್ ಎಂಬ ಪದಕ್ಕೆ ಉಭಯ ವಿಭೂತಿಗಳಿಗೂ ಸ್ವಾಮಿ ಎಂಬದಾಗ ಅರ್ಥವರ್ಣನವಂ ಮಾಡಿರುವುದರಿಂದ ತಿರುಮಕಳ್ ಎಂಬ ಪದದೊಡನೆ ಪುನರುಕ್ತಿ ಇಲ್ಲವೆಂದರಿಯಬೇಕು. (ಅಥವಾ) ತಿರುಮಕಳೋಡು ಎಂಬ ಪದದಿಂದ ಸರ್ವಾವಸ್ಥೆಯಲ್ಲಿಯೂ, ಲಕ್ಷ್ಮೀಸಂಬಂಧವೂ ತಿರುಮಾಲ್ ಎಂಬ ಪದದಿಂದ ಆಲಕ್ಷ್ಮೀದೇವಿಯಲ್ಲಿ ಈ ಪರಮಾತ್ಮನಿಗಿರುವ ವ್ಯಾ

ಮೋಹವೂ ದರ್ಶಿತವಾಗುವುದರಿಂದಲೂ, ಅರ್ಥಭೇದ ವಿರುವದರಿಂದ ಪುನರುಕ್ತಿದೋಷವಿಲ್ಲವು. ಜ್ಞಾನಕರ್ಮಗಳಿಂದ ಸಾಧಿಸಲ್ಪಡುವ ಭಕ್ತಿಯೋಗಕ್ಕೆ ಇವನೇ ಲಕ್ಷ್ಯನಾಗಿರುವನೆಂಬದಾಗಿ ವೇದಾಂತಗಳಲ್ಲಿ ಪ್ರತಿಪಾದಿಸಲ್ಪಟ್ಟ ಪರಬ್ರಹ್ಮವು ಶ್ರೀವಿಶಿಷ್ಟನಾದ ನಾರಾಯಣನೆಂದು ನಿಷ್ಕೃಷ್ಟಾರ್ಥವು. ತಾಣ-ತಾನೇ, ಉರೈತ್ತಾಣ-ಹೇಳಿದನು. ಶ್ರುತಿಸ್ಮೃತಿದ್ವಾರದಿಂದಲ್ಲದೇ ತಾನೇಸಾಕ್ಷಾತ್ತಾಗಿ ಶ್ರೀಮದ್ಗೀತಾವಾಕ್ಯ ಮುಖದಿಂದ ಹೇಳಿದನೆಂದರ್ಥವು. ಇಲ್ಲಿ ಸರ್ವೇಶ್ವರನಿಗೆ "ಅರುಂಪಿರವುಂ" ಎಂಬುವುದಾಗಿ ಚಿದ್ವೈಲಕ್ಷಣ್ಯವಂಹೇಳುವುದರಿಂದಲೇ ಅಚಿದ್ವೈಲಕ್ಷ್ಯವೂ ಕೈಮುತ್ಯನ್ಯಾಯಸಿದ್ಧವಾಗಿರುವುದರಿಂದ "ಪ್ರಧಾನಪುರುಷವ್ಯಕ್ತ ಸರ್ವೇಶ್ವರವಿವೇಚನಂ । ಕರ್ಮಧೀರ್ಭಕ್ತಿರಿತ್ಯಾದಿಃಪ್ರಾರ್ವಶೇಷೋಂತಿಮೋದಿತಃ" ಎಂಬುವ ತೃತೀಯಷಟ್ಕಾರ್ಥವೂ ವಿವೃತವಾಯಿತು. .. ... ... ... ॥೧॥

ಈ ಪ್ರಕಾರವಾಗಿ ಅಂತರ್ಗತ ಷಟ್ಕತ್ರಯಾರ್ಥವುಳ್ಳ ಶಾಸ್ತ್ರವು ಹಾವಾಕ್ಯಾರ್ಥವನ್ನು ಒಂದು ಗಾಥೆಯಿಂದ ಸಂಗ್ರಹಿಸಿ ಮುಂದೇ ಹದಿನೆಂಟು ಅಧ್ಯಾಯಾರ್ಥಗಳನ್ನು, ಹದಿನೆಂಟು ದ್ರಮಿಡ ಗಾಥೆಗಳಿಂದ ಸಂಗ್ರಸಲುದ್ದೇಶಿಸಿ ಈ ಎರಡನೇ ಗಾಥೆಯಿಂದ "ಅಸ್ಥಾನ ಸ್ನೇಹಕಾರುಣ್ಯ ಧರ್ಮಾಧರ್ಮಧಿಯಾಽಽಕುಲಂ । ಪಾರ್ಥಂಪ್ರಪನ್ನಮುದ್ದಿಶ್ಯ ಶಾಸ್ತ್ರಾವತರಣಂಕೃತಂ" ಎಂಬ ಸಂಗ್ರಹ ಶ್ಲೋಕದಂತೇ "ತಮುವಾಚಹೃಷೀಕೇಶಃ" (೨॥ ೧೦॥) ಎಂಬ ಶ್ಲೋಕಪರ್ಯಂತವಾಗಿ ದ್ವಿತೀಯಾಧ್ಯಾಯೈಕದೇಶಶಿರಸ್ಕವಾದ ಶಾಸ್ತ್ರಾವತಾರೋಪಯುಕ್ತವಾಗಿರುವ ಪ್ರಥಮಾಧ್ಯಾಯಾರ್ಥಗಳನ್ನೊಂದು ಶ್ಲೋಕದಿಂದ ಸಂಗ್ರಹಿಸುತ್ತಾರೆ.

ಉಕವೈಯುಡೈಯಂದವುರುವುಡೈಯಾರುರವತ್ತ(ற)ಪನ್ನಾಳ್,
ತಕವುಡೈಯನ್ನುಕರೈಪುರಳತ್ತುರುಮತ್ತುಳವಿಲ್,
ಮಿಕವುಳಮಞ್ಜಿವಿಡ್ಡನ್ದಿಶೇರ್ಂದಪಿಶೆಯನ್ಕೊನ್ಕೇರ್,
ನಕೈಯುಡತಮಣ್ಮೃಯುರ್ರಕ್ಕವನ್ಮೈನ್ದನರ್ನಾರಣರೇ॥೨॥

ಟೀ॥ ನಾರಣರ್-ನಾರಾಯಣನು, ಇಲ್ಲಿ ನಾರಣರ್ ಎಂಬದಾಗಿ ನಾರಾಯಣಪದದಿಂದ ಗೀತಾಚಾರ್ಯನನ್ನು ನಿರ್ದೇಶಿಸಿರುವುದು ತದುಪ

ಶೇಷಪ್ರಯುಕ್ತವಾದ ಕಾರುಣ್ಯವಾತ್ಸಲ್ಯಾದಿ ಗುಣಗಳಿಗೆ ಜ್ಞಾಪನಾರ್ಥವಾಗಿ. ಉಕಪ್ಪು-ಪ್ರೀತಿಯನ್ನು, ಅಡೈಂದ-ಪ್ರಾಪ್ತರಾದ, ಉರವುಡೈಯಾರ್-ಸಂಬಂಧವುಳ್ಳವರು. ಇಲ್ಲಿ ಸಂಬಂಧ ಶಬ್ದದಿಂದ ವಿದ್ಯಾಸಂಬಂಧ, ಯೋನಿಸಂಬಂಧವೆಂಬೀ ಎರಡೂ ವಿವಕ್ಷಿತವಾಗಿರುವುದು. “ಆಚಾರ್ಯಾಃ ಪಿತರಃ ಪುತ್ರಾ ಸ್ತಥೈವಚ ಪಿತಾಮಹಾಃ” (೧||೩೪||) ಎಂಬದಾಗಿ ಉಭಯ ಸಂಬಂಧ ನಿರ್ದೇಶವೇರ್ಪಟ್ಟಿರುವುದು. ಉರವು-ಸಂಬಂಧವನ್ನು, ಅತ್ತು-ಬಿಟ್ಟಿರುವ, ಅನ್ನಾಳ್-ಆದಿನದಲ್ಲಿ, ದ್ರೋಣಭೀಷ್ಮ ದುರ್ಯೋಧನಾದಿಗಳು ಪೂರ್ವಸಿದ್ಧವಾದ ಸಂಬಂಧವನ್ನು ಪರಿತ್ಯಜಿಸಿ ಪಾಂಡವನವಧಾರ್ಥವಾಗಿ ಯುದ್ಧಸನ್ನದ್ಧರಾದ ಕಾಲದಲ್ಲಿ, “ತಾನ್ ಸಮೀಕ್ಷ್ಯಸಕೌಂತೇಯ ಸ್ಸರ್ವಾನ್ಬಂಧೂನವಸ್ಥಿತಾನ್” (೧||೨೭) ಇತ್ಯಾದ್ಯರ್ಥಗಳೂ ಇದರಿಂದ ಸಂಗ್ರಹೀತವಾಯಿತು. ಇದರಿಂದ ಮುಂದೆ ಹೇಳಲ್ಪಡುವ ಕೃಪಾಸ್ನೇಹಗಳಿಗೆ ಅನೌಚಿತ್ಯವು ತೋರುವುದರಿಂದ ಸಂಗ್ರಹ ಶ್ಲೋಕದಲ್ಲಿರುವ ಆಸ್ಥಾನ ಪದವು ವ್ಯಾಖ್ಯಾತವಾಯಿತು. ತಕವುಡೈ-ಕೃಪಾಸಹಿತವಾದ, ಅನ್ಬು-ಸ್ನೇಹವು, ಕರೈವುರಳ-ಮೇಲಾತಿಲಂಘಿಯಾಗಲು, ತರುಮತ್ತು - ಧರ್ಮದ, ಅಳವಿಲ್- ಪರಿಚ್ಛೇದದಲ್ಲಿ, ಉಳಮ್-ಅಂತಃಕರಣವು, ಮಿಕ-ಅತ್ಯಂತವಾಗಿ, ಅಞ್ಜಿ-ಭಯಪಟ್ಟು, ಕ್ಷತ್ರಿಯರಿಗೆ ಪರಮಧರ್ಮವಾದ ಯುದ್ಧದಲ್ಲಿ ಅಧರ್ಮಬುದ್ಧಿಯಿಂದ ಭೀತಿಯನ್ನು ಹೊಂದಿರುವ ಮನಸ್ಸುಳ್ಳವನಾಗಿ ಎಂದರ್ಥವು. ವಿೞುಂದು-(ಕೆಳಗೆಬಿದ್ದು) ಪ್ರಣಾಮಮಂಮಾಡಿ, ಅಡಿ-ಚರಣಗಳನ್ನು, ಶೇರ್ನ್ದ-ಆಶ್ರಯಿಸಿದವನಾದ, ವಿಶಯನುಕ್ಕು-ಅರ್ಜುನನಿಗೆ, ಒರ್-ವಿಲಕ್ಷಣವಾದ, ಅರ್ಜುನಾಭಿಪ್ರಾಯಕ್ಕೆ ವಿರೋಧಿಯಾದ ಎಂದರ್ಥವು. ನಕ್ಕೆಯುದನ್-ಮುಗಳುನಗೆಯೊಡನೆ, “ಪ್ರಹಸನ್ನಿವಭಾರತ” (೨||೧೦) ಎಂಬ ಶ್ಲೋಕ ಸಂಗ್ರಹವು. ಉಣ್ಮೈ- ಯಾಥಾತ್ಮ್ಯವನ್ನು, ಆತ್ಮಪರಮಾತ್ಮ ಯಾಥಾತ್ಮ್ಯವೇನು, ಅವುಗಳಂ ಹೊಂದುವ ಉಪಾಯವೇನು, ಇವುಗಳನ್ನು, ಉರೈಕ್ಕ-ಉಪದೇಶಿಸುವುದಕ್ಕಾಗಿ, ಅಪ್ಪನ್ದಾನ್ ಪ್ರಾಪ್ತನಾದನು. ... ||೨||

ಗೀತಾರ್ಥಸಂಗ್ರಹ ಗಾಥೆಯು ಸಂಪೂರ್ಣವು.



B.M.SOMPONGNAIDU'SWEET...
-ETSHOP'216.BANGALORE.CITY



B.M.SOMPONGNAIDU'SWEETME
-ETSHOP'216.BANGALORE.CITY



ಶ್ರೀರಸ್ತು.

ಶ್ರೀ ಮೊವಾಗೀಭ್ಯೋನಮಃ.

ಕಂದ॥ ಸಾರಾರ್ಥವೆನಿಪಗೀತಾ।
ಸಾರಾರ್ಥಗಳನ್ನೆಸೆವೆ ಭಾಷ್ಯದ್ವಯಕಂ।
ನಾರಾಯಣನನ್ನೆನೆಯುತ।
ನಾರಾಯಣಶರ್ಮನೀಗ ಟೀಕೆಯುಗೈವೆಂ॥

ಶ್ರೀಮನ್ನಾರಾಯಣತಾಂ ।
ಪ್ರೇಮದೊಳಾನರನಿಗಿತ್ತಗೀತಾಮೃತಮಂ ॥
ಕೋಮಲಟೀಕಾಕರದಿಂ ।
ಧೀಮಂತರುಪಾನಗೈದುಸುಖಿಪುದುಮುದದಿಂ॥

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯರಾದ
ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರವರಿಂದವಿರಚಿತ
ವಾದ ಶ್ರೀ ಗೀತಾಭಾಷ್ಯ ಟೀಕೆಯು
ಪ್ರಾರಂಭ ಘಟ್ಟವು.

ನಾರಾಯಣಃಪರೋಽವ್ಯಕ್ತಾ ದಣ್ಡಮವ್ಯಕ್ತಸಂಭವಮ್।
ಅಂಡಸ್ಯಾಂತಸ್ತ್ವಿಮೇಲೋಕಾ ಸ್ಸಪ್ತದ್ವೀಪಾಚಮೇದಿನೀ ॥

ಪರಮಪುರುಷನಾದ ಶ್ರೀಮನ್ನಾರಾಯಣನು ಪ್ರಕೃತಿ ಯೆಂಬ ಪರ್ಯಾಯಪದದಿಂದ ಹೇಳಲ್ಪಡುವ ಅವ್ಯಕ್ತಕ್ಕಿಂತಲೂ ಪರನಾಗಿರುವನು. ಚರಾಚರಾತ್ಮಕವಾದ ಈ ಬ್ರಹ್ಮಾಂಡವು ಆ ಮೂಲಕಾರಣವಾದ ಅವ್ಯಕ್ತದಿಂದ ಉಂಟಾಗಿರು

ವುದು. ಏಳುಬಗೆಯಾದ ದ್ವೀಪಗಳಿಂದೊಡಗೂಡಿದ ಈ ಮೇದಿನಿಯು ಇತರ ಸಮಸ್ತಲೋಕಗಳೂ ಸಹ ಆ ಬ್ರಹ್ಮಾಂಡದೊಳಗಿರುವುದು. ಇಂತು ಸ್ವಾಧೀನವಾಯಕನಾಗಿ ಜಗಜ್ಜನ್ಮಾದಿ ಕಾರಣನಾದ ಪುರಾಣ ಪುರುಷನಾಗಿರುವ ಶ್ರೀಮನ್ನಾರಾಯಣನನ್ನು ಸ್ಮರಣವಾಡಿ ಶ್ರೀಮದಾಚಾರ್ಯರುಗ್ರಂಥವಿವರಣಕ್ಕೆ ಆರಂಭವನ್ನು ಮಾಡುತ್ತಾರೆ.

ಪರಮೇಶ್ವರನಾದ ಶ್ರೀ ವಾಸುದೇವಮೂರ್ತಿಯು ನಾನಾ ವಿಧವಾದ ಭೇದಗಳನ್ನು ಅಳವಟ್ಟಿರುವ ಚರಾಚರಾತ್ಮಕವಾದ ಪ್ರಪಂಚವನ್ನು ಉಂಟುಮಾಡಿ ಬಳಿಕ ಪರಿಪಾಲನ ಮಾಡಲೋಸುಗ, ಮರೀಚಿ, ಅತ್ರಿ, ಮೊದಲಾದವರುಗಳನ್ನು ಸೃಷ್ಟಿಸಿ ಅವರಿಗೆ ವೇದೋಕ್ತವಾದ ಪ್ರವೃತ್ತಿ ಲಕ್ಷಣವಾಗಿರುವ ಧರ್ಮವನ್ನುಪದೇಶಿಸಿದನು. ಬಳಿಕ ಸನಕಾದಿಗಳನ್ನು ಸೃಷ್ಟಿಸಿ ನಿವೃತ್ತಿಲಕ್ಷಣವಾಗಿರುವ ಜ್ಞಾನವೈರಾಗ್ಯಾದಿ ಸ್ವರೂಪವಾದ ಧರ್ಮವನ್ನು ಅರುಹಿದನು. ವೇದವಿಹಿತವಾಗಿರುವ ಧರ್ಮವೆಂಬುವುದು ಸಾಮಾನ್ಯವಾಗಿ ಪ್ರವೃತ್ತಿ ಧರ್ಮವೆಂತಲೂ, ನಿವೃತ್ತಿಧರ್ಮವೆಂತಲೂ, ಎರಡು ಬಗೆಯಾಗಿ ಜಗತ್ತಿನ ಸ್ಥಿತಿಗೆ ಮೂಲಕಾರಣವಾಗಿರುವುದು. ಸಮಸ್ತಪ್ರಾಣಿಗಳಿಗೂ ಅಭಿವೃದ್ಧಿಯೇ ಮುಂತಾದ ಶ್ರೇಯಸ್ಸಿಗೆ ಮುಖ್ಯಕಾರಣವೆನಿಸಿಕೊಂಡು ಬ್ರಾಹ್ಮಣಾದಿಗಳೊಳಗೆ ಬ್ರಹ್ಮಚರ್ಯಾದಿ ಆಶ್ರಮಿಗಳಿಂದಲೂ, ಇತರರಿಂದಲೂ, ಆಚರಿಸಲ್ಪಡುತ ವಿಧಿಗೆ ಅನುಸಾರವಾಗಿ ಆಚರಿಸುವವರಿಗೆ ಕಾಲಕ್ರಮದಿಂದ ಉಚ್ಛ್ರಾಯಕವಾದ ಫಲಗಳನ್ನು ಕೊಡುತ ಮಾರ್ಗಾಂತರದಿಂದ ಜ್ಞಾನಕ್ಕೂ ಕಾರಣವಾಗಿ ಸ್ವಾನುಗುಣವಾದ ಫಲಪ್ರದಾನದಿಂದ ಕ್ಷಯವನ್ನು ಹೊಂದತಕ್ಕದ್ದಾಗಿಯೂ ಇರುವುದೇ ಪ್ರವೃತ್ತಿಲಕ್ಷಣವಾದ ಧರ್ಮವು. ಇಂತ ಅಮೋಘವಾದ ಧ

ರ್ಮವು ಅಧರ್ಮದ ಪ್ರಾಬಲ್ಯದಿಂದ ದಿನೇದಿನೆ ಹ್ರಸ್ವವಾಗುತ ಅಧರ್ಮವೆಂಬುವುದುಮಾತ್ರ ಕ್ಷಣೇಕ್ಷಣೆ ಏಳಿಗೆಯನ್ನು ಪಡೆಯು ತಲೂ ಬರುವುದಂ ಕಂಡು ಸರ್ವವ್ಯಾಪಕನಾಗಿರುವ ಆದಿಕ ರ್ತನಾದ ನಾರಾಯಣನು ಜಗತ್ತಿನ ಸ್ಥಿತಿಯನ್ನು ಪರಿಪಾಲ ನವಂ ಮಾಡಲು ಸೃಷ್ಟಿಕರ್ತನ ನಿಯಮವನ್ನು ಬ್ರಾಹ್ಮಣ್ಯ ವನ್ನು ನಿರುಪಾಧಿಕವಾಗಿ ರಕ್ಷಿಸೋಣವೇ ಮುಖ್ಯವೆಂದು ನೆ ನಪಿ ದೇವಕೀ ದೇವಿಯಲ್ಲಿ ವಸುದೇವನಿಂದ ಅಂಶಭೂತನಾ ಗಿ ಆವಿರ್ಭಸುವಂತವನಾದನು. ಬಗೆಬಗೆಯಾದ ಭೇದಗಳಿಂ ದ ವಿರಾಜಿಸುವ ಸಮಸ್ತವಾದ ವರ್ಣಾಶ್ರಮ ಧರ್ಮಗಳೂ ಬ್ರಾಹ್ಮಣ್ಯಕ್ಕೇನೇ ಅಧೀನವಾಗಿರುವುದರಿಂದ ಅಂತಹ ಬ್ರಾ ಹ್ಮಣ್ಯವೊಂದನ್ನು ಕಾಪಾಡಿದರೆ ವೈದಿಕಧರ್ಮವುಉದ್ಧಾರವ ನ್ನುಪಡೆವಂತಾಗುವುದು ಎಂಬ ವಿಷಯದಲ್ಲಿ ಸಂಶಯವಿಲ್ಲವು.

ಆ ಭಗವಂತನು, ಜ್ಞಾನ,ಐಶ್ವರ್ಯ, ಶಕ್ತಿ, ಬಲ,ವೀರ್ಯ,ತೇಜ ಸ್ಸುಗಳಿಂದ ಸದಾಸಂಪನ್ನನಾಗಿದ್ದರೂ ತ್ರಿಗುಣಾತ್ಮಕವಾಗಿ ರುವ ವೈಷ್ಣವಿಯೆಂಬ ತನ್ನ ಮಾಯೆಯನ್ನು ಸ್ವಾಧೀನಪಡಿ ಸಿಕೊಂಡು ಉತ್ಪತ್ತಿಶೂನ್ಯನಾದರೂ, ನಾಶರಹಿತನಾಗಿದ್ದ ರೂ ಸಮಸ್ತಭೂತಗಳಿಗೂ ಈಶ್ವರನಾದರೂ, ನಿತ್ಯಶುದ್ಧ ಬು ದ್ಧ ಮುಕ್ತಸ್ವಭಾವವುಳ್ಳವನಾದರೂ, ತನ್ನಮಾಯೆಯಿಂದ ಲೇ ದೇಹವುಳ್ಳವನಂತೆಯೂ, ಹುಟ್ಟಿದವನಂತೆಯೂ, ಲೋ ಕಾನುಗ್ರಹವನ್ನು ಮಾಡುವವನಾಗಿ ತೋರಿಬರುತಲಿರುವನು.. ನಿತ್ಯತೃಪ್ತನಾಗಿರುವದರಿಂದ ತನಗೆ ಯಾವದೊಂದು ವಿಧ ವಾದ ಪ್ರಯೋಜನವಿಲ್ಲದೆ ಇದ್ದಾಗ್ಯೂ ವ್ಯವಹಾರಾನುಗು ಣವಾಗಿ ಲೋಕಾನುಗ್ರಹವನ್ನು ಮಾಡಬೇಕೆಂಬ ಅಭಿಲಾಷೆ ಯಿಂದ ಶೋಕ ಮೋಹವೆಂಬುವುಹಾ ಸಮುದ್ರದೊಳುಮುಳು ಗಿರುವ ಅರ್ಜುನನಿಗೋಸ್ಕರ ವೈದಿಕಧರ್ಮವನ್ನು ಉಪದೇಶಿ

ಸಿದನು. ಲೋಕದಲ್ಲಿ ಗುಣಾಧಿಕರಾಗಿರುವ ಮಹನೀಯರಿಂ ದ ಪರಿಗ್ರಹಿಸಲ್ಪಟ್ಟು ಆಚರಿಸಲ್ಪಟ್ಟದ್ದೇ ಆದರೆ ಅಂತಹ ಧರ್ಮವು ವಿಶೇಷವಾಗಿ ಅಭಿವೃದ್ಧಿಯನ್ನು ಪಡೆಯುತದೆ.


ಭಗವಂತನಾದ ಶ್ರೀಕೃಷ್ಣಮೂರ್ತಿಯು ಅರ್ಜುನನಿಗೆ ಉ ಪದೇಶಮಾಡಿದಂತೆ ಆ ಉಭಯವಿಧವಾದ ಧರ್ಮವನ್ನೂ ಸರ್ವ ಜ್ಞರಾದ ಶ್ರೀವೇದವ್ಯಾಸರು ಗೀತೆಯೆಂಬ ಕೆಸರುಳ್ಳ ಏಳುನೂ ರು ಶ್ಲೋಕಗಳಿಂದ ನಿಬಂಧನಂಗೈದರು. ಅಂತಹ ನಿಬಂಧನ ವೇ ಸಮಸ್ತ ವೇದಾರ್ಥರಾಶಿಯ ಸಾರವನ್ನು ಸಂಗ್ರಹಿಸಿರುವ ದಾಗಿಯೂ, ಸಾಮಾನ್ಯವಾದ ಮತಿಯುಳ್ಳವರಿಂದ ತಿಳಿಯು ವದಕ್ಕೆ ಗಹನವಾದ ಅರ್ಥವುಳ್ಳದ್ದಾಗಿಯೂ, ಇರುವ ಭಗವ ದ್ಗೀತಾಶಾಸ್ತ್ರವೆಂದು ಹೇಳಲ್ಪಡುತಲಿದೆ. ಅಂತ, ಅಗಾಧವಾದ ಅರ್ಥವನ್ನು ವ್ಯಕ್ತಪಡಿಸುವದಕ್ಕಾಗಿಯೇ ಅನೇಕರು ಪದ ಪದಾರ್ಥ ವಾಕ್ಯ ವಾಕ್ಯಾರ್ಥ ನ್ಯಾಯ ಪೂರ್ವಕವಾಗಿ ವಿ ವರಿಸಿದ್ದರೂ, ಅನೇಕ ಲೌಕಿಕರು ಪರಸ್ಪರ ವಿರುದ್ಧಾರ್ಥ ವುಂಟಾಗಿರುವುದೆಂಬದಾಗಿ ಭಾವಿಸಿರುವುದಂ ತಿಳಿದು ಯು ಕ್ತಾಯುಕ್ತ ವಿಚಾರ ಪೂರ್ವಕವಾಗಿ ತತ್ತ್ವಾರ್ಥದ ನಿರ್ಧಾರ ಣೆ ಗೋಸ್ಕರ ಸಂಕ್ಷೇಪವಾಗಿ ವಿವರಣೆಯನ್ನು ಮಾಡಲುಪ ಕ್ರಮಿಸಬೇಕಾಯಿತು.

ಇಂತ ಅಪೂರ್ವ ಗ್ರಂಥಗಳಿಗೆಲ್ಲ ಆದಿಭಾಗದೊಳು ಸಾಮಾ ನ್ಯವಾಗಿ ಗ್ರಂಥಕ್ಕೆ ವಿಷಯ, ಪ್ರಯೋಜನ, ಸಂಬಂಧ, ಅಧಿಕಾರಿಗಳೆಂಬ ನಾಲ್ಕು ವಿಧವಾದ ಅನುಬಂಧಗಳನ್ನು ಸೂ ಚಿಸಬೇಕಾದದ್ದು ಅವಶ್ಯಕವಾದುದರಿಂದ ಸಂಕ್ಷೇಪವಾಗಿ ವಿವರಿಸಲ್ಪಡುತದೆ. ಸಕಾರಣವಾಗಿರುವ ಜನನಮರಣ ಪ್ರ ವಾಹ ರೂಪವಾದ ಸಂಸಾರದ ಉಪರಮ ಲಕ್ಷಣವುಳ್ಳ ಪರ ಮುಕ್ತಿವಲ್ಲವೇ ಈ ಗ್ರಂಥಕ್ಕೆ ಮುಖ್ಯವಾದ ಪ್ರಯೋಜನ

ಮೊದು ಸೂಕ್ಷ್ಮಭಾವದಿಂದ ಅರಿಯಬೇಕು. ಅಂತಹ ಪರಮಶ್ರೇಯಸ್ಸು ಸರ್ವಕರ್ಮ ಸನ್ಯಾಸ ಪೂರ್ವಕವಾದ ಪರಾತ್ಮಜ್ಞಾನನಿಷ್ಠೆಯೆಂಬ ಧರ್ಮದ ದೆಸೆಯಿಂದಲೇ ಉಂಟಾಗತಕ್ಕದ್ದು. ಮತ್ತು ಆತ್ಮತತ್ತ್ವವನ್ನು ತಿಳಿಯತಕ್ಕದ್ದಕ್ಕೆ ಇಂತಹಧರ್ಮವೇ ಮೂಲಕಾರಣವು, ಎಂದು ಭಗವಂತನು ಸಾಕ್ಷಾತ್ತಾಗಿ ಅನುಗೀತೆಯೊಳು ಉದಹರಿಸಿರುವನು. "ಧರ್ಮವುಳ್ಳವನಾಗಲಿ, ಅಧರ್ಮ ತತ್ಪರನಾಗಲಿ, ನಿಶ್ಶ್ರೇಯಸ್ಸನ್ನು ಹೊಂದಲಾರನು, ಇತರಚಿತ್ತ ವೃತ್ತಿಗಳ ಉಪರಮವನ್ನು ಹೊಂದಿ ಏಕಾಸನದಲ್ಲಿ ಸ್ಥಿರವಾಗಿ ಕುಳಿತಿರುವವನೇ ಆತ್ಮಜ್ಞಾನ ಸ್ಫುರಣವನ್ನು ಹೊಂದಲು ಶಕ್ತನು" ಎಂಬದಾಗಿಯೂ ಅಲ್ಲಿಯೇ ಹೇಳಿರುವುದು. ಜ್ಞಾನವು ಸನ್ನ್ಯಾಸ ಲಕ್ಷಣವುಳ್ಳದ್ದೆಂದುನ್ನೂ ಹೇಳಲ್ಪಡುತ್ತಿದೆ.

"ಸಕಲ ಧರ್ಮಗಳನ್ನೂ ಪರಿತ್ಯಜಿಸಿ ನನ್ನೊಬ್ಬನನ್ನೇ ಮರೆಹೊಗುವಂಥವನಾಗೆಂದು" ಮುಂದೆಯೊಂದು ಸಂದರ್ಭದೊಳು ಅರ್ಜುನನಿಗೆ ಭಗವಂತನಿಂದಲೇ ಉಪದೇಶಿಸಲ್ಪಟ್ಟಿರುವುದು. ಇಂತು ಅಭ್ಯುದಯಾರ್ಥವಾಗಿಯೂ ಪ್ರವೃತ್ತಿ ಲಕ್ಷಣವುಳ್ಳ ಧರ್ಮವು ವರ್ಣಾಶ್ರಮಗಳನ್ನುದ್ದೇಶಿಸಿ ಹೇಳಲ್ಪಟ್ಟಿರುವುದು. ಅಲ್ಲದೆ ಅಂತಹ ಧರ್ಮವು ದೇವಲೋಕ ಲಾಭವೇ ಮುಂತಾದ್ದಕ್ಕೆ ಕಾರಣವಾಗಿದ್ದರೂ ಫಲಾಭಿಸಂಧಿಯಿಲ್ಲದೆಯೇ ಈಶ್ವರಾರ್ಪಣ ಬುದ್ಧಿಯಿಂದ ಆಚರಿಸಲ್ಪಡುವುದೇ ಆದರೆ ಸತ್ವಶುದ್ಧಿಯು ಮೊಳೆಯುವಂತೆಮಾಡುವುದು. ಇಂತು ತಲೆದೋರುವ ಶುದ್ಧ ಸತ್ವವು, ಜ್ಞಾನನಿಷ್ಠೆಯ ಯೋಗ್ಯತೆಯನ್ನು ಅನುಗೊಳಿಸುವುದರ ಮೂಲಕವಾಗಿ ಪರಮಶ್ರೇಯಸ್ಸಿಗೆ ಕಾರಣವೂ ಆಗುವುದು. ಯೋಗಿಗಳು ಆಸಕ್ತಿಯಂಬಿಟ್ಟು ಫಲಾಭಿಲಾಷೆಯಿಲ್ಲದೆ ಬ್ರಹ್ಮಾರ್ಪಣಬುದ್ಧಿಯಿಂದ ಆತ್ಮಶುದ್ಧಿ

ಗಾಗಿ ಕರ್ಮಾಚರಣೆಯಂಗೈವರು.,ಎಂಬದಾಗಿ ಈಗೀತೆಯಲ್ಲಿ ಯೆ ಮುಂದೇ ಹೇಳಲ್ಪಡುತ್ತಿದೆ. ಆದುದರಿಂದಲೇ ನಿಶ್ಶ್ರೇಯ ಸ ಪ್ರಯೋಜಕವೆಂತಲೂ, ಪರಮಾರ್ಥತತ್ವ ಪ್ರಯೋಜಕವೆಂತಲೂ, ಧರ್ಮವು ಎರಡುಬಗೆಯಾಗಿರುವುದು. ತ್ರಿಗುಣಾತ್ಮಕವಾದ ಮಾಯಾತೀತವಾಗಿ ವಾಸುದೇವ ಸಂಜ್ಞಿತವಾಗಿರುವ ಪರಬ್ರಹ್ಮವನ್ನು ವಿಶೇಷಾಕಾರವಾಗಿ ವ್ಯಕ್ತಪಡಿಸುವ ಭಗವದ್ಗೀತಾ ಶಾಸ್ತ್ರವು ವಿಷಯಪ್ರಯೋಜನ ಸಂಬಂಧಗಳನ್ನೊಳಗೊಂಡು ವಿರಾಜಿಸುತ್ತಿರುವದು. ಇಂತ ಅಸದೃಶವಾದ ಶ್ರೀಮದ್ಭಗವದ್ಗೀತಾ ಶಾಸ್ತ್ರಾರ್ಥವು ಜ್ಞಾತವಾಗಲು ಸಕಲಪುರುಷಾರ್ಥಸಿದ್ಧಿಯೂ, ಕರತಲಾಮಲಕವೆಂತಿರುವುದರಿಂದ ಅದರ ವಿವರಣಕ್ಕಾಗಿ ಪ್ರಯತ್ನವು ಮಾಡಲ್ಪಡುತ್ತಿದೆ.





ಶ್ರೀಯೈನಮಃ.

ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ.

ಶ್ರೀಮತೇ ರಾಮಾನುಜಾಯನಮಃ.

# ಶ್ರೀರಾಮಾನುಜಭಾಷ್ಯಾನುಸಾರವಾದ

# ಕರ್ನಾಟಕ ಶ್ರೀ ಗೀತಾರ್ಥಸಾರವು.

ಪೃಥಾದುಃಖರತಂ ಶುಚಾ ಮನಸಿಮಾತುಲಾ ದ್ವರ್ದ ನೇಪೃಥಾಸುತಮನುಗ್ರಹಾ ದಪದಿಶ್ಯ ದಿಶನ್ಮೋಗತಿಮ್ । ರಥಾಗ್ರಉಪವಿಶ್ಯಯಸ್ತ್ವದಬದೀಶ್ವರಾದೇಸ್ಸ್ವಯಂ ಯಥಾರ್ಥ ವಿಬೋಧಕಃ ಪೃಥುಮುದೇ ಶಿಕ್ಷಮಾತುಲಃ ॥೧॥ ಗುಂಭಾನಾತನ ವೈಗಿರಾಮನುಚತಾರಮ್ಯಾಸನಕಾವ್ಯರಭಿ ಸ್ವಮ್ಯಾಬ್ಯಾಪಿಬುಧಾನುಶಾಸನವಚೋದಂಭಾನ್ನಿದೇಶಾದ್ಧರೇಃ । ಕಿಂಭಾರೋಸ್ಯಹಿ ಶಾಸನಂ ಯಜ್ಞರಭೋ ಜಂಭಾರಿಶತ್ರೋರ್ಗ್ರಹೇಡಿಂಭಾತ್ಯಾಮಪಿನಿರ್ಗತಾಂಗೀರಸ್ವೃತಂ ಸ್ತ್ರಭಾದುದೇತ್ಯಾಕರೋತ್ ॥ ೨ ॥ ನಮೋರಾಮಾನುಜಾರ್ಯಾಯ ಪ್ರಪೋಧಾತ್ಮರವ್ಯೆ ಮುಹುಃ । ಅಪೋಘುಂದರ್ಶನಂಯಸ್ಯ ಭ್ರಮೋನ್ಮೂಲನಪಾಟವಾತ್ ॥೩॥ ವೇದಾಂತದೇಶಿಕಮಣೇಃ ಪಾದಾಬ್ಜಂತಸ್ಯಸಂಶ್ರಯೆ । ಆದಾವನೇಕದುರ್ವಾದಿ ಭೇದಾನ್ಯೋ ಽ ಶೇಶಮಬ್ಬ್ಯಪಿ ॥ ೪ ॥ ವಿಂಧ್ಯಾಗ್ರಾವಂಧ್ಯಸಂಧ್ಯಾ ನಟನಟನ ಜಟಾಜೂಟನಿಷ್ಪಾತಿ ಗಂಗಾತುಂಗತ್ವಂಗ ತ್ತರಂಗ ಪ್ರತಿಭಟ ಫಣಿತಿ ಧ್ವಸ್ತದುಸ್ತರ್ಕಜಾಲಃ । ಸೇವಾಕ್ಷೀವಾಕಿಭಾವಾಕುತದತ್ತಿನಿ ಪ್ರಣಬ್ರಹ್ಮ ನಿತ್ಸಿಂಹವಾಣೀಶ್ರೀ ಣೀತೋಪ್ಯೂಯಮಾನಸ್ಸಜ

ಯತ್ರಿಜಗತಿಶ್ರೀಶಠಾರಿರ್ಯ್ಯತೀನ್ದ್ರಃ ॥೫॥ ಶ್ರೀಮದ್ಗೀತಾಭಾಷ್ಯ
ತಾತ್ಪರ್ಯ್ಯಚನ್ದ್ರಾದಿ ಧೀಮತ್ಸೂಕ್ತ್ಯರ್ಥಬುದ್ಧ್ಯಾ ಪ್ರಧಾನಾ
ತ್ । ಸಾಮರ್ಸ್ಯ್ಯನಸ್ಪಷ್ಟಕರ್ಣಾಟವಾಣ್ಯಾ ಬ್ರೂಮಸ್ಸಂತಃ ಕ್ಷ
ನ್ತುಮರ್ಹನ್ತ್ಯಸಾಧು ॥೬॥ ಹಾಹಂತಾದ್ಯಪಭ್ರಂಶಕರ್ಣಾಟಭಾ
ಷಾಂಗಾಪಹಂಗಾಪಹಂಸಾಧುವಾಽಸಾಧುಜಲ್ಪಂ । ವೋಽತ್ರತಂ
ಸ್ವೀಯಂ ವ್ಯಂಜಯಂಸ್ತ್ವೈ ತ್ಪ್ರವೀಣ್ಯೈ ಸ್ಸೋಽಹಂ ತೂಪ್ಪಲ್
ವೆಂಕಟಾರ್ಯ್ಯೋಽಭಿಧಾನ್ಯಃ ॥೭॥

---

ಯೋನಿತ್ಯಮಚ್ಯುತ ಪದಾಂಬುಜಯುಗ್ಮ ರುಕ್ಮ
ವ್ಯಾಮೋಹತಸ್ತದಿತರಾಣಿತೃಣಾಯಮೇನೇ । ಅಸ್ಮ
ದ್ಗುರೋರ್ಭಗವತೋಽಸ್ಯದಯೈಕಸಿಂಧೋಃ ರಾಮಾನು
ಜಸ್ಯಚರಣೌಶರಣಂಪ್ರಪದ್ಯೇ ॥

—∘→ ಗ್ರಂಥಾರಂಭವು. ←∘—

ಯತ್ಪದಾಂಭೋರುಹಧ್ಯಾನ ವಿಧ್ವಸ್ತಾಶೇಷ ಕಲ್ಮ
ಷಃ । ವಸ್ತುತಾಮುಪಯಾತೋಽಹಂಯಾಮುನೇಯಂ
ನಮಾಮಿತಮ್ ॥

ಶ್ರೀಯಃಪತಿಯಾಗಿ, ( ನಿಖಿಲಹೇಯಪ್ರತ್ಯನೀಕ ಕಲ್ಯಾಣೈಕಾಸ್ಪದಮಾಗಿಯು, ದೇಶಕಾಲಾದಿಗಳಿಂದ ಅಳವಿಡಲಶಕ್ಯಮಾಗಿಯು ಜ್ಞಾನಮಾಗಿಯು, ಆನಂದಮಾಗಿಯು, ಇರುತಲಿರುವ) ದಿವ್ಯಾತ್ಮಸ್ವರೂಪವುಳ್ಳವನಾಗಿ, ( ಸ್ವಾಭಾವಿಕಮಾಗಿಯೂ, ಅಪಾರವಾದ ಅತಿಶಯಮುಂಟಾಗಿಯೂ ಇರುವ, ಜ್ಞಾನ, ಬಲ, ವೀರ್ಯ, ಶಕ್ತಿ, ತೇಜಃ ಪ್ರಭೃತಿಗಳಾದ) ಅಸಂಖ್ಯೇಯ ಕಲ್ಯಾಣಗುಣಗಣಗಳೆಂಬ ರತ್ನಗಳಿಗೆ ರತ್ನಾಕರನಾಗಿ, ( ತನಿಗೆ ಇಷ್ಟವಾಗಿಯೂ, ಅನುರೂಪ

ರಾ)ವಾಗಿಯೂ, ಏಕರೂಪವಾಗಿಯೂ, ಚಿಂತಿಸಲನರ್ಹ
ವಾಗಿಯೂ, ದಿವ್ಯವಾಗಿಯೂ, ಆಶ್ಚರ್ಯಕರವಾಗಿಯೂ,
ನಿತ್ಯವಾಗಿಯೂ, ನಿರ್ದೋಷವಾಗಿಯೂ, ನಿರತಿಶಯವಾ
ಗಿಯೂ, ಥಾಳಥಳ್ಯ ಸೌಂದರ್ಯ ಲಾವಣ್ಯ ಯೌವನ ಮುಂ
ತಾದ ಅನಂತ ಗುಣಗಳಿಗೆ ನಿಧಿಯಾದ )ದಿವ್ಯಮಂಗಳ ವಿ
ಗ್ರಹಯುಕ್ತನಾಗಿ, (ತನಿಗೆ ಉಚಿತವಾಗಿಯು, ನಾನಾ
ವಿಧವಾಗಿಯು, ವಿಚಿತ್ರಗಳಾಗಿಯು, ಅನಂತಾಶ್ಚರ್ಯಕರವಾ
ಗಿಯು, ನಿತ್ಯ ನಿರ್ದೋಷವಾಗಿಯೂ, ಇರುವ ) ಅಪರಿಮಿ
ತವಾದ ದಿವ್ಯಾಭರಣಗಳುಳ್ಳವನಾಗಿ (ತನಿಗೆಯೋಗ್ಯ
ಗಳಾಗಿಯೂ, ಲೆಕ್ಕವಿಲ್ಲದವುಗಳಾಗಿಯೂ, ಅಚಿಂತ್ಯ ಶಕ್ತಿ
ಯುಕ್ತಂಗಳಾಗಿಯೂ, ನಿತ್ಯ ನಿರ್ದೋಷಗಳಾಗಿಯೂ, ನಿ
ರತಿಶಯ ಶುಭಸ್ವರೂಪಗಳಾಗಿಯೂ, ಇರುವ ) ದಿವ್ಯಾ
ಯುಧಗಳುಳ್ಳವನಾಗಿ, (ತನಿಗೆ ಅಭಿಮತಗಳಾಗಿಯು, ಅನು
ರೂಪಗಳಾಗಿಯು, ನಿತ್ಯನಿರ್ದುಷ್ಟಗಳಾದ ಸ್ವರೂಪ, ರೂ
ಪ, ಗುಣ, ವಿಭವ, ಐಶ್ವರ್ಯ, ಶೀಲಾದಿಗಳಾದ, ಅಪಾರವಾ
ದ ಅತಿಶಯವುಳ್ಳ ಅಸಂಖ್ಯೇಯ ಕಲ್ಯಾಣ ಗುಣಗಳಿಂದೊಪ್ಪು
ವ ಜಗಜ್ಜನನಿಯಾದ ) ಶ್ರೀಲಕ್ಷ್ಮೀದೇವಿಗೆ ಅತ್ಯಂತ ಪ್ರಿ
ಯನಾಗಿ, (ತನ್ನ ಸಂಕಲ್ಪವನ್ನನುಸರಿಶಿ ಬರುವ, ಸ್ವರೂ
ಪ, ಸ್ಥಿತಿ, ಪ್ರವೃತ್ತಿ, ಭೇದಗಳುಳ್ಳವರಾಗಿಯು, ಸರ್ವಾವ
ಸ್ಥೆಗಳಲ್ಲಿಯು ಸರ್ವಕೈಂಕರ್ಯದೋಳು ಅತ್ಯಾಸಕ್ತಿಯನ್ನೀಶರೀ
ರಪರಿಗ್ರಹರೂಪವಾಗಿವುಳ್ಳವರಾಗಿಯೂ, ನಿತ್ಯಸ್ವಚ್ಛ,ನಿರತಿ
ಶಯ ಜ್ಞಾನ, ಕ್ರಿಯೆ, ಐಶ್ವರ್ಯ ಮುಂತಾದ ಅನಂತಗುಣ
ಗಣಗಳುಳ್ಳ ಅಪರಿಮಿತರಾದ ) ನಿತ್ಯಸೂರಿಗಳಿಂದ ನಿರಂತರ
ಸ್ತುತಿಸಲ್ಪಡುವ ಚರಣಯುಗಳನಾಗಿ, ಮನಸ್ಸಿನಿಂದ ಚಿಂ
ತಿಸಲು, ವಾಕ್ಕಿನಿಂದ ವರ್ಣಿಸಲು ಅಶಕ್ಯವಾದ ಸ್ವರೂ

ರಾ)ಪ ಸ್ವಭಾವಗಳುಳ್ಳವನಾಗಿ,(ತನಗೆ ಯೋಗ್ಯವಾಗಿಯು, ನಾನಾವಿಧವಾಗಿಯು, ವಿಚಿತ್ರಗಳಾಗಿಯು, ಅನಂತಗಳಾಗಿ ಯು ಇರುವ) ಭೋಗ್ಯ, ಭೋಗಸಾಮಗ್ರಿ, ಭೋಗಸ್ಥಾನ ವು, ಇವುಗಳಿಂದ ಪೂರ್ಣವಾಗಿ, ಅನಂತಾಶ್ಚರ್ಯವಾಗಿ, ಅನಂ ತ ಮಹಾವಿಭವವಾಗಿ, ಅನಂತಪರಿಮಾಣವಾಗಿ, ನಿತ್ಯ ವಾಗಿ, ನಿರ್ದೋಷವಾಗಿಯೂ ಇರುವ ) ಅಕ್ಷರಪರಮಾ ಕಾಶ ಶಬ್ದವಾಚ್ಯವಾದ ಶ್ರೀವೈಕುಂಠದೊಳು ವಾಸಮಾಡು ವನಾಗಿ, (ನಾನಾವಿಧವಾಗಿಯು, ವಿಚಿತ್ರಗಳಾಗಿಯೂ ಇರು ವ ಭೋಗ್ಯಪದಾರ್ಥಗಳಿಂದಲು, ಭೋಕ್ತೃ ವರ್ಗದಿಂದಲು ಪೂರ್ಣವಾದ ) ನಿಖಿಲ ಪ್ರಪಂಚದ ಸೃಷ್ಟಿಸ್ಥಿತಿಲಯ ಗಳೆಂಬ ಲೀಲೆಯುಳ್ಳವನಾಗಿರುವ ಪರಬ್ರಹ್ಮನಾದ ಪುರು ಷೋತ್ತಮ ಶ್ರೀಮನ್ನಾರಾಯಣನು ಬ್ರಹ್ಮಾದಿ ಸ್ಥಾವ ರಾಂತವಾದ ನಿಖಿಲ ಜಗತ್ಸೃಷ್ಟಿಯಂಗೈದು, ( ತನಗೆ ಅಸಾಧಾರಣವಾದ ರೂಪದಿಂದಿರುವನಾಗಿ, ಬ್ರಹ್ಮಾದಿ ದೇ ವತೆಗಳಿಂದಲೂ, ಮನುಷ್ಯರಿಂದಲೂ ಮಾಡಲ್ಪಡುವ ಧ್ಯಾ ನಾ ರಾಧನಾದಿಗಳಿಗೆ ಸಿಲುಕದವನಾಗಿದ್ದರೂ, ತನ್ನ ಅಪಾ ರವಾದ ಕಾರುಣ್ಯ, ಸೌಶೀಲ್ಯ, ವಾತ್ಸಲ್ಯ, ಔದಾರ್ಯ, ಗ ಳೆಂಬ ಮಹಾಗುಣಗಳಿಗೆ ಮಹಾಸಮುದ್ರನಾಗಿ, ತನ್ನ ದಿವ್ಯಮಂಗಳ ವಿಗ್ರಹವನ್ನೆ ಆಯಾಯಜಾತಿ, ಆಕಾರ, ಸ್ವಭಾವಗಳನ್ನ ಪಿಡಾದಂತೆ ತನ್ನ ಸ್ವಭಾವವನ್ನು ಬಿಡದೇ ನೆ ದೇವಾದಿಸಜಾತೀಯವಾಗಿ ಮಾಡಿ ಆಯಾಯ ಲೋ ಕಗಳಲ್ಲಿ ಬಾರಿಬಾರಿಗೂ ಅವತರಿಸಿ ಅವತರಿಸಿ, ಆಯಾಯ ಪ್ರಾಣಿವರ್ಗಗಳಿಂದ ಆರಾಧಿಸಲ್ಪಟ್ಟು, ಅವರವರ ಬಯಕೆ ಗಳಿಗೆ ಅನುಗುಣವಾದ ಧರ್ಮಾರ್ಥ ಕಾಮಮೋಕ್ಷಗಳೆಂಬ ಪು ರುಷಾರ್ಥಗಳಂನೀಯುತ, ಭೂಭಾರವಂನಿಳಿಸುವ ನೆಪದಿಂ

ರಾ) ದ, ಅಸ್ಮದಾದಿಗಳಿಗೂ ಆಶ್ರಯಣೀಯನಾಗಲು, ಭೂತ
ಲದೊಳು ಅವತರಿಸಿ, ಸಕಲ ಮನುಜರ ನೇತ್ರಾನಂದ
ಕೈಪಾತ್ರನಾಗಿ, ಜ್ಞಾನಿ ಅಜ್ಞಾನಿಯೆಂಬ ಭೇದವಿಲ್ಲದೇ
ಇರುವ ಸಕಲ ಸ್ತ್ರೀ ಪುರುಷರ ಮನೋನಯನಗಳ
ನ್ನು ಅಪಹರಿಸುವ ಸಲ್ಲಾಪ ಸಂಭಾಷಣ ಸಂದರ್ಶನಾದಿ
ಚೇಷ್ಟೆಗಳನ್ನು ಮಾಡುತ, ಪೂತನೆ, ಶಕಟ, ಯಮಳಾ
ರ್ಜುನ, ಅರಿಷ್ಟ, ಪ್ರಲಂಬ, ಧೇನುಕ, ಕಾಳಿಯ, ಕೇಶಿ,
ಕುವಲಯಾಪೀಡ, ಚಾಣೂರ, ಮುಷ್ಟಿಕ, ತೋಸಲ,
ಕಂಸ, ಮುಂತಾದವರನ್ನು ಸಂಹರಿಸಿ, ಅಪಾರವಾದ ದ
ಯೆ, ಸ್ನೇಹ, ಅನುರಾಗದಿಂದ ಪೂರ್ಣವಾದ ಆಲೋಕನ
ಆ ಭಾಷಣಗಳೆಂಬ ಅಮೃತಧಾರೆಗಳಿಂದ ಪ್ರಪಂಚವನ್ನಾ
ನಂದಗೊಳಿಸುತ, ತನ್ನ ನಿರತಿಶಯವಾದ ಸೌಂದರ್ಯ ಸೌ
ಶೀಲ್ಯಾದಿ ಗುಣಗಳನ್ನು ವ್ಯಕ್ತ ಪಡಿಸುವದರಿಂದ ಅಕ್ರೂ
ರ ಮಾಲಾಕಾರಾದಿಗಳನ್ನು ಭಗವದ್ಭಕ್ತಿ ರೂಪಮಾದ
ಪರಮ ಧರ್ಮದೊಳು ನಿಸ್ತರನ್ನಾಗಿಮಾಡಿ, ಪಾಂಡುಮ
ಹಾರಾಜ ಪುತ್ರನಾದ ಪಾರ್ಥನನ್ನು ಯುದ್ಧ ಮಾಡುವ
ದಕ್ಕೆ ಪ್ರೋತ್ಸಾಹ ಗೊಳಿಸುವ ನೆಪದಿಂದ ಪರಮ ಪು
ರುಷಾರ್ಥವೆಂದು ಪ್ರಸಿದ್ಧಿಗೊಂಡಿರುವ ಮೋಕ್ಷಕ್ಕೆ ಸಾಧ
ನಮಾಗಿ ವೇದಾಂತ ಪ್ರತಿಪಾದ್ಯ ಮಾಗಿರುವ ಜ್ಞಾನ
ಕರ್ಮಗಳನ್ನೆ ಅಂಗವಾಗಿ ವುಳ್ಳ ಸ್ವವಿಸಯಕಮಾದ ಭಕ್ತಿ
ಯೋಗವನ್ನು (ಲೋಕಾನುಗ್ರಹಾರ್ಥವಾಗಿ) ಪ್ರಕಟಪಡಿ
ಸಿದನು. (ಈ ಸಂದರ್ಭದಿಂದ ಸರ್ವೋಪನಿಷತ್ಸಾರಮೂ
ದ ಸಕಲ ಶಾಸ್ತ್ರ ಶಿರೋಮಣಿಯಾದ ಈ ಭಗವದ್ಗೀ
ತಾ ಶಾಸ್ತ್ರಕ್ಕೆ ಪರಬ್ರಹ್ಮವು ವಿಷಯವು. ಪುರುಷಾರ್ಥ
ಗಳೊಳು ಶ್ರೇಷ್ಠಮಾದ ಮೋಕ್ಷವು ಪ್ರಯೋಜನವು,

ರಾ) ಪ್ರತಿಪಾದ್ಯ ಪ್ರತಿಪಾದಕ ಭಾವವು ಸಂಬಂಧವು, ಮೋಕ್ಷಾಕಾಂಕ್ಷೆ ಭಕ್ತಿಗಳುಳ್ಳವನು ಈ ಶಾಸ್ತ್ರಾಧ್ಯಯನ ಶ್ರವಣಾದಿಗಳಿಗೆ ಅಧಿಕಾರಿ,, ಎಂಬದಾಗಿ ತಿಳಿಯಲಿಚ್ಛೆಯುಳ್ಳವರ ಪ್ರವೃತ್ತಿಗೋಸ್ಕರ ಶಾಸ್ತ್ರಾರಂಭದೊಳು ಅವಶ್ಯಕವಾಗಿ ಹೇಳತಕ್ಕ „ವಿಷಯ, ಪ್ರಯೋಜನ, ಸಂಬಂಧ, ಅಧಿಕಾರಿ,, ಗಳೆಂಬ ಅನುಬಂಧ ಚತುಷ್ಟಯವು ಆರ್ಥಿಕವಾಗಿ ಸೂಚಿಸಲ್ಪಟ್ಟಿತು.); ಭಕ್ತಿಯೋಗವನ್ನು ಪ್ರಕಟಪಡಿಸಲು ನೆಪವಾಗಿ ಪ್ರೋತ್ಸಾಹನಕ್ಕೆ ವಿಷಯವಾದ ಪಾಂಡವ ಕೌರವ ಯುದ್ಧವು ಪ್ರಾರಂಭಿಸಲ್ಪಡುತ್ತಿರಲು,. ಷಡ್ಗುಣೈಶ್ವರ್ಯ ಸಂಪನ್ನನಾಗಿರುವ, ಪುರುಷೋತ್ತಮನಾದ, ಸರ್ವೇಶ್ವರನು, ಸರ್ವ ಲೋಕೋಪಕಾರವಂ ಮಾಡಲು ಮರ್ತ್ಯಭಾವವನ್ನು ಪರಿಗ್ರಹಿಸಿ ಆಶ್ರಿತರೊಳಿರುವ ವಾತ್ಸಲ್ಯದಿಂದ ಪರವಶನಾಗಿ ತನ್ನ ಭಕ್ತರಾದವರ ದಾಸ್ಯವನ್ನು ಕೂಡಾ ಅಂಗೀಕರಿಸುವೆನೆಂದು ಭಕ್ತರೊಳು ತನಗಿರುವ ಪರಮವಾತ್ಸಲ್ಯವನ್ನು ಆ ಬಾಲ ವೃದ್ಧರಿಗೂ ವಿದಿತವಾಗುವಂತೆ ಪ್ರಸಿದ್ಧಿ ಪಡಿಸಲುಜ್ಜುಗಿಸಿ, ಜ್ಞಾನ ಶಕ್ತಿಗಳಿಂದ ತನಗಿಂತ ನಿಕೃಷ್ಟನಾದ ಅರ್ಜುನನನ್ನು ಮಹಾರಥಿಕಾಗ್ರೇಸರ ನೆಂಬ ಸರ್ವೋನ್ನತವಾದ ಪದವಿಯೊಳು ಪಟ್ಟಾಭಿಷಿಕ್ತನನ್ನಾಗಿ ಮಾಡಿ, ಜ್ಞಾನ ಶಕ್ತ್ಯೈಶ್ವರ್ಯಾದಿ ಗಳಿಂದ ಸರ್ವೋತ್ಕೃಷ್ಟನಾದ ತಾನು ಆ ಪಾರ್ಥನ ಸಮೀಪದೊಳು ನಿಕೃಷ್ಟವಾದ ಸಾರಥ್ಯವೆಂಬ ದಾಸ್ಯಭಾವದೊಳು ಸರ್ವಲೋಕ ಪ್ರತ್ಯಕ್ಷವಾಗಿ ನಿಂತನು.. ಈ ವಿಷಯಗಳನ್ನೆಲ್ಲವು ತಿಳಿದಿದ್ದರು ಅಂತರ ಚಕ್ಷುಸ್ಸು ಬಾಹ್ಯಚಕ್ಷುಸ್ಸುಗಳೆಂಬ ಉಭಯವು ಪ್ರಕಾಶವಾಗಿಯು ಕಣ್ಣಿಲ್ಲದವನಾದವರಿಂದ ಕುರುಡನಾದ ಧೃತರಾಷ್ಟ್ರನು ದುರ್ಯೋಧನನಿ

ವಾ) ಗೆ ಜಯವಾಗುವದೆಂಬದಂ. ಕೇಳ ಉಭಯಸೇನೆಯಿಂದ,
ಪುಣ್ಯಭೂಮಿಯಾದ ಕುರುಕ್ಷೇತ್ರದೊಳು ಯುದ್ಧಸನ್ನದ್ಧ
ರಾಗಿ ಸೇರಿರುವ ನನ್ನ ಪುತ್ರರು, ಮತ್ತು ಎನ್ನ ಒಡಹು
ಟ್ಟಿದವನಾದ ಪಾಂಡುವಿನ ಕುಮಾರರು ಏನುಮಾಡಿದ
ರೆಂದು. ಸಂಜಯನಂ ಬೆಸಗೊಳ್ಳಲು ಸಂಜಯನಿಂತೆಂದನು..

ಶ್ರೀ ಪಂಚಜನಪಂಚಾಸ್ಯಾಯನಮಃ.

ಶ್ರೀಮನ್ಮಧ್ವಸಿದ್ಧಾನ್ತಾನುಸಾರಿಣೀ ಶ್ರೀಗೀತಾಟೀಕಾ..

ಶ್ಲೋ॥ ದೇವಂನಾರಾಯಣಂನತ್ವಾಸರ್ವದೋಷವಿವ
ರ್ಜಿತಂ।ಪರಿಪೂರ್ಣಂಗುರೂಂಸ್ತಾನ್ಗೀತಾರ್ಥಂ
ವಕ್ಷ್ಯಾಮಿಲೇಶತಃ ॥೧॥ ಲಕ್ಷ್ಮೀನಾರಾಯಣಂನ
ತ್ವಾಪೂರ್ಣಬೋಧಾನ್ಗುರೂನಪಿ। ಕುರ್ಮಶ್ರೀ
ಕೃಷ್ಣಗೀತಾಯಾಭಾಷ್ಯಾದ್ಯುಕ್ತಾರ್ಥಸಂಗ್ರಹಂ॥೨॥

ಧರ್ಮಜ್ಞಾನವಿಹೀನರಾದ ಲೌಕಿಕರ ವಿಷಯದಲ್ಲಿ ಪರ
ಮಕೃಪಾಳುಗಳಾದ, ಬ್ರಹ್ಮ,ರುದ್ರ,ಇಂದ್ರಾದಿಗಳು ಪ್ರಾರ್ಥಿ
ಸಲು. ಜ್ಞಾನಪ್ರದರ್ಶನಕ್ಕಾಗಿಯೇ ಭಗವಂತನಾದ ಶ್ರೀ
ಮನ್ನಾರಾಯಣನು ಶ್ರೀಮದ್ವೇದವ್ಯಾಸರಾಗಿ ಅವತರಿಸಿದ
ನು. ಬಳಿಕಲಾ ಬಾದರಾಯಣಾಚಾರ್ಯರು ಇಷ್ಟಫಲಗಳನ್ನು
ಗಳಿಸಿಕೊಳ್ಳುವುದಕ್ಕೂ ಅನಿಷ್ಟಫಲಗಳ ನಿವಾರಣಕ್ಕಾ
ಗಿಯೂ ಮುಖ್ಯವಾದ ಸಾಧನಗಳನ್ನು ಅರಿಯದೆಯೂ
ವೇದಾರ್ಥಜ್ಞಾನವಿಲ್ಲದೆಯೂ, ಸಂಸಾರದೊಳು ಕ್ಲೇಶಪಡುತ್ತಿ
ರುವ ವೇದಾನಧಿಕಾರಿಗಳಾದ ಸ್ತ್ರೀ ಶೂದ್ರರೇ ಮೊದಲಾದ
ವರಿಗೆ. ಧರ್ಮಜ್ಞಾನದಮೂಲಕವಾಗಿ. ಮುಕ್ತಿಯು ಉಂಟಾ
ಗುವುದೆಂದು ದಯಾಶಾಲಿಗಳಾಗಿ. ಸಮಸ್ತವಾದ ವೇದಾದ್ಯ

ಮ)ರ್ಥಕ್ಕೆ ಒತ್ತಾಸೆಯಾಗಿಯೂ, ಅವುಗಳಲ್ಲಿ ಅನುಕ್ತವಾಗಿ ರುವ ಕೇವಲೇಶ್ವರ ಜ್ಞಾನದಿಂದೊಡಗೂಡಿರುವವರಿಂದ ವಿದಿತವಾದ ಅರ್ಥವುಳ್ಳದ್ದಾಗಿಯೂ, ಸರ್ವಪ್ರಾಣಿಗಳಿಗೂ ಕೆಲವುಭಾಗ ತಿಳಿಯಲ್ಪಡುವಂತೆಯೂ ಕೆಲವುಭಾಗ ತಿಳಿಯಲ್ಪಡದಿರುವಂತೆಯೂ ಇರುವ ಅರ್ಥರಾಶಿಯಿಂದ ಸಂವಳಿತವಾಗಿಯೂ ಕೇವಲ ಭಗತ್ಸ್ವರೂಪಪರವಾಗಿಯೂ, ಪರೋಕ್ಷವಾದ ಅರ್ಥವುಳ್ಳದ್ದಾಗಿಯೂ, ಇರುವ ಸಂಭವ, ಸಭಾ, ಅರಣ್ಯ, ವಿರಾಟ, ಉದ್ಯೋಗ, ಭೀಷ್ಮ, ದ್ರೋಣ, ಕರ್ಣ, ಶಲ್ಯ, ಗದಾ, ಸೌಪ್ತಿಕ, ಶಾಂತಿ, ಅನುಶಾಸನಿಕ, ಅಶ್ವಮೇಧಿಕ, ಮೌಸಲ, ಮಹಾಪ್ರಸ್ಥಾನ, ಸ್ವರ್ಗಾರೋಹಣ, ಭವಿಷ್ಯತಾ, ಎಂಬ ಹದಿನೆಂಟು ಪರ್ವಗಳ ಬಿಳಿಭೇದಗಳನ್ನೊಳಗೊಂಡಿರುವ ಮಹಾಭಾರತವೆಂಬ ಮಹಾಖ್ಯಾನವನ್ನು ವಿರಚಿಸಿದ್ದಲ್ಲವೆ ಅದರಲ್ಲಿಯೇ ಭೀಷ್ಮಪರ್ವದೊಳಗೆ ಮಹಾಬಾರತವೆಂಬ ಪಾರಿಜಾತ ವೃಕ್ಷಕ್ಕೆ ಮಧುರಸದಂತಿರುವ ಸರ್ವಭಾರತ ಸಾರಾರ್ಥ ಸಂಗ್ರಹ ಭೂತವಾಗಿಯೂ, ಶ್ರೀ ಕೃಷ್ಣಾರ್ಜುನ ಸಂವಾದ ರೂಪವಾಗಿಯೂ, ಇರುವ ಶ್ರೀಮದ್ಭಗವದ್ಗೀತೆಯನ್ನು ನಿಬಂಧನ ಗೈದರು. ಹದಿನೆಂಟು ಅಧ್ಯಾಯಗಳ ಆಕಾರವನ್ನುಳವಟ್ಟಿರುವ ಈ ಗೀತೆಯೊಳು ಮೊದಲನೆಯ ಆರು ಅಧ್ಯಾಯಗಳಲ್ಲಿ ಜ್ಞಾನೋಪಾಯೋಕ್ತಿಯೂ, ಎರಡನೆಯ ಆರಧ್ಯಾಯಗಳೊಳಗೆ ಸಾಧನೋಕ್ತಿಯೂ, ಮೂರನೆ ಆರು ಅಧ್ಯಾಯಗಳಲ್ಲಿ ಹಿಂದೆ ಹೇಳಲ್ಪಟ್ಟವುಗಳ ಪ್ರಪಂಚನವೂ ವಿವರಿಸಲ್ಪಡುತವೆಯೆಂದರಿಯಬೇಕು. ಈ ಪೂರ್ವೋಕ್ತಾರ್ಥದಲ್ಲಿ ,,ಲೋಕೇಶರಾದ ಬ್ರಹ್ಮ ರುದ್ರೇಂದ್ರಾದಿಗಳು ಸಂಸಾರದಲ್ಲಿ ಕ್ಲೇಶ ಪಡುತಲಿರುವ ವೇದಾ

ಮ) ರ್ಥ ಪರಿಜ್ಞಾನದೊಳು ಅಧಿಕಾರವಿಲ್ಲದ ಸ್ತ್ರೀ ಶೂದ್ರಾದಿ ಗಳನ್ನು ನೋಡಿ ಇವರುಗಳ ಅನುಗ್ರಹಾರ್ಥ ವಾಗಿಯೇ ಪುರುಷೋತ್ತಮನನ್ನು ಪ್ರಾರ್ಥಿಸುವಂಥವರಾದರು. ತರು ವಾಯ ಪ್ರಸನ್ನನಾದ ಭಗವಂತನು ಶ್ರೀಮದ್ವೇದವ್ಯಾಸ ರೂಪದಿಂದಲೂ ಇತರಾವತಾರಗಳಿಂದಲೂ, ವೇದಗಳಲ್ಲಿಹೇ ಳಲ್ಪಡದಿರುವ ಅರ್ಥ ಬೋಧಕವಾಗಿಯೂ, ವೇದಾರ್ಥ ಪರಿಜ್ಞಾನದಿಂದ ತಿಳಿಯಲ್ಪಟ್ಟ ವೇದಾರ್ಥ ಸಂಯು ತವಾಗಿಯೂ, ವೇದಕ್ಕಿಂತಲೂ ಇತರವಾದದ್ದಾಗಿಯೂ, ಇರುವ ಉತ್ತಮವಾದ ಭಾರತವೆಂಬ ಪಂಚಮವೇದವನ್ನು ಪಾಂಚರಾತ್ರಾಗಮವನ್ನು ಮೂಲ ರಾಮಾಯಣವನ್ನು ಶ್ರೀ ಮನ್ಮಹಾ ಭಾಗವತವೆಂಬ ಪುರಾಣ ಮುಂತಾದವುಗಳನ್ನೂ, ವಿರಚಿಸಿದರೆಂ,, ಬಹಾಗಿ ನಾರಾಯಣಾಷ್ಟಾಕ್ಷರ ಕಲ್ಪದಲ್ಲಿ ಸ್ಪಷ್ಟವಾಗಿರುವುದು.

ಶ್ಲೋ॥ ,,ಲೋಕೇಶಾಬ್ರಹ್ಮರುದ್ರಾದ್ಯಾಸಂಸಾರೇಕ್ಲೇಶಿನಂಜ
ನಂ । ವೇದಾರ್ಥಾಜ್ಞಾಮಧಿಕಾರವರ್ಜಿತೇಂಚಸ್ತ್ರ್ರ
ಯಾದಿಕಂ॥ ಅವೇಕ್ಷ್ಯಪ್ರಾರ್ಥಯಾಮಾಸುರ್ದೇವೇಶಂ
ಪುರುಷೋತ್ತಮಂ। ತತಃಪ್ರಸನ್ನೋಭಗವಾನ್ವ್ಯಾಸೊ
ಭೂತ್ವಾಚತೇನಚ ॥ ಅನ್ಯಾವತಾರರೂಪೈಶ್ಚವೇದಾ
ನುಕ್ತಾರ್ಥಭಾಷಿತಂ । ಕೇವಲೇನಾತ್ಮಬೋಧೇನದೃ
ಷ್ಟಂವೇದಾರ್ಥಸಂಯುತಂ ॥ ವೇದಾದಪಿಪರಂಚಕ್ರೇ
ಪಂಚಮಂವೇದಮುತ್ತಮಂ । ಭಾರತಂಪಂಚರಾತ್ರಂ
ಚಮೂಲರಾಮಾಯಣಂತಥಾ।ಪುರಾಣಂಭಾಗವತಂಚೇ
ತಿಸಂಭಿನ್ನಶ್ಶಾಸ್ತ್ರಪುಂಗವ॥ ,, ಇತಿ.

ಇದಲ್ಲದೆ ,,ಸಮಸ್ತ ಶಾಸ್ತ್ರಗಳಲ್ಲಿಯೂ, ಮಹಾ ಭಾರತವು ಸಾರಭೂತವಾಗಿರುವುದು. ಇದರಲ್ಲಿಯೂ ಶ್ರೀ

ಮು) ವಿಷ್ಣುಸಹಸ್ರನಾಮವೂ, ಶ್ರೀ ಭಗವದ್ಗೀತೆಯೂ, ಸಾರಭೂತಗಳಾಗಿರುವವು. ಇವುಗಳ ಸಾರಾರ್ಥಜ್ಞಾನದಿಂದಲೇ ದೇಹಿಗಳು ಮುಕ್ತರಾಗುತ್ತಾರೆ. ಭಾರತಕ್ಕೆ ಸದೃಶವಾದ ಶಾಸ್ತ್ರವೇ ಇಲ್ಲದಿರಲು ಗೀತಾಸಹಸ್ರ ನಾಮಗಳಿಗೆ ಸಮಾನವಾದ ಶಾಸ್ತ್ರವಿರುವುದುಂಟೆ? ಪೂರ್ವಕಾಲದಲ್ಲಿ ಬ್ರಹ್ಮಾದಿ ದೇವತೆಗಳು ಸಮಸ್ತರಾದ ಮಹರ್ಷಿಗಳೂ ಸಹ ಮಹಾಭಾರತವನ್ನು ವೇದಗಳನ್ನು ತೂಕಮಾಡಲು ಆ ಸಮಯದಲ್ಲಿ ಶ್ರೀ ವೇದವ್ಯಾಸರ ಅನುಜ್ಞೆಯಿಂದ ಭಾರತವು ಅತಿಶಯವನ್ನು ಹೊಂದಿದ್ದಾಯಿತು. ಪರಮ ಮಹತ್ವಕ್ಕೆ ಆಸ್ಪದವಾದುದರಿಂದಲೂ, ತೂಗುವ ಸಮಯದಲ್ಲಿ, ಇತರ ವೇದಶಾಸ್ತ್ರಗಳಿಗಿಂತ ಭಾರವಾಗಿ ಪರಿಣಮಿಸಿದುದರಿಂದಲೂ, ಈ ಸದ್ಗ್ರಂಥಕ್ಕೆ ಮಹಾಭಾರತವೆಂಬ ನಾಮವು ನೆಲೆಗೊಂಡಿತು. ಇಂತೀ ಮಹಾಭಾರತದ ಅವಯವಾರ್ಥವನ್ನು ತಿಳಿದವನು ಸರ್ವಪಾಪಗಳಿಂದಲೂ ಮುಕ್ತರಾಗುತ್ತಾರೆ. ಸಾಕ್ಷಾತ್ ಶ್ರೀಮನ್ನಾರಾಯಣನು ಬ್ರಹ್ಮರುದ್ರೇಂದ್ರಾದಿ ಮುಂತಾದ ದೇವತೆಗಳಿಂದ ಪ್ರಾರ್ಥಿಸಲ್ಪಟ್ಟವನಾಗಿ ಶ್ರೀಮದ್ಬಾದರಾಯಣಾಚಾರ್ಯ ಭಾವವಂಗೊಂಡು ಕೇವಲ ತತ್ವನಿರ್ಣಾಯಕವಾಗಿರುವ ಶ್ರೀಮನ್ಮಹಾ ಭಾರತ ಸಂಜ್ಞೆಯುಳ್ಳ ಐದನೆಯ ವೇದವನ್ನು ವಿರಚಿಸುವಂಥವನಾದನು.,, ಎಂಬದಾಗಿ ಬ್ರಹ್ಮಾಂಡಪುರಾಣದೊಳು ಹೇಳಲ್ಪಟ್ಟಿರುವುದು.

ಶ್ಲೋ॥ ‟ಶಾಸ್ತ್ರೇಷುಭಾರತಂಸಾರಂ ತತ್ರನಾಮಸಹಸ್ರಕಂ । ವೈಷ್ಣವಂಕೃಷ್ಣಗೀತಾಚತದ್ಜ್ಞಾನಾನ್ಮುಚ್ಯತೇಂಜಸಾ ॥ ನಭಾರತಸಮಂಶಾಸ್ತ್ರಂಕುತಏವಾನಯೋಸ್ಸಮಂ । ಭಾರತಂಸರ್ವವೇದಾಶ್ಚತುಲಾಮಾ

ಮಾರೋಪಿತಾಃಪುರಾ ॥ ದೇವೈರ್ಬ್ರಹ್ಮಾದಿಭಿಸ್ಸರ್ವೈರ್
ಋಷಿಭಿಶ್ಚಸಮನ್ವಿತೈಃ । ವ್ಯಾಸಸ್ಯೈವಾಜ್ಞಾ
ಯಾತತ್ರತ್ವತ್ಯರಿಚ್ಯತಭಾರತಮ್ ॥ ಮಹತ್ವಾದ್ಭಾ
ರವತ್ವಾಚ್ಚಮಹಾಭಾರತಮುಚ್ಯತೇ । ಸ್ವಯಂನಾರಾ
ಯಣೋದೇವೈರ್ಬ್ರಹ್ಮರುದ್ರೇಂದ್ರಪೂರ್ವಕೈಃ ॥ ಅ
ರ್ಥಿತೋವ್ಯಾಸತಾಂಪ್ರಾಪ್ಯಕೇವಲಂತತ್ವನಿರ್ಣಯಂ ।
ಚಕಾರಪಂಚಮಂವೇದಂಮಹಾಭಾರತಸಂಜ್ಞಿತಂ ॥

(ಇತಿ ಬ್ರಹ್ಮಾಂಡಪುರಾಣೇ.)

ಇದಲ್ಲವೆ ಈ ಮಹಾಭಾರತದಲ್ಲಿ ಯಾವಅರ್ಥವು ಇಲ್ಲವೋ ಅದು ಅನ್ಯತ್ರ ಇಲ್ಲವು. ಇದರಲ್ಲಿರುವ ಅರ್ಥರಾಶಿಯ ಅಂಶವೇ ಲೋಕದಲ್ಲಿ ಪ್ರಚಾರಗೊಂಡಿರುವುದು. ಆದುದರಿಂದಲೇ ಸರ್ವಶಾಸ್ತ್ರಗಳಲ್ಲಿಯೂ ಭಾರತ ಉತ್ತಮವಾದದ್ದು. ಆ ಭಾರತದಲ್ಲಿಯೂ ಶ್ರೀಗೀತೆಯು ಶ್ರೀವಿಷ್ಣುಸಹಸ್ರನಾಮವೂ ಉತ್ತಮೋತ್ತಮವಾದದ್ದು. ಈ ಎರಡೇ ಅನವರತವೂ ಪಾರಾಯಣ ಮಾಡತಕ್ಕವುಗಳಾಗಿಯೂ, ತಿಳಿಯತಕ್ಕವುಗಳಾಗಿಯೂ ಇರುವುವು.

ಮೂ॥ ಧೃತರಾಷ್ಟ್ರ ಉವಾಚ ॥ ಧರ್ಮಕ್ಷೇತ್ರೇ
ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ । ಮಾಮ
ಕಾಃಪಾಂಡವಾ ಶ್ಚೈವ ಕಿ ಮಕುರ್ವತ ಸಂಜಯ ॥೧॥

ಧೃತರಾಷ್ಟ್ರಃ- ಧೃತರಾಷ್ಟ್ರನೆಂಬ ಹಸ್ತಿನಾಪುರದ ರಾಜನು, ಉವಾಚ- ಪ್ರಶ್ನವಾಕ್ಯವಂ ಹೇಳಿದನು ॥

ಪದ॥ ಧರ್ಮಕ್ಷೇತ್ರೇ- ಕುರುಕ್ಷೇತ್ರೇ- ಸಮವೇತಾಃ- ಯುಯುತ್ಸವಃ । ಮಾಮಕಾಃ- ಪಾಂಡವಾಃ - ಚ- ಏವ ಕಿಂ- ಅಕುರ್ವತ- ಸಂಜಯ ॥

ಅನ್ವಯ ಕ್ರಮವಾದ ಪ್ರತಿಪದಾರ್ಥವು.

ಹೇ ಸಂಜಯ-ಎಲೈ ಸಂಜಯನೆ, ಧರ್ಮಕ್ಷೇತ್ರೇ- ಧರ್ಮವೃದ್ಧಿಮಾಡುವೆಡೆಯಾದ, ಕುರುಕ್ಷೇತ್ರೇ-ಕುರುಕ್ಷೇತ್ರದೊಳು, ಸಮವೇತಾಃ- ಸೇರಿದವರಾಗಿ, ಯುಯುತ್ಸವಃ- ಯುದ್ಧ ಮಾಡಲುಜ್ಜುಗಿಸಿದ, ಮಾಮಕಾಃ - ನನ್ನ ಪುತ್ರರಾದ ದುರ್ಯೋಧನಾದಿಗಳು, ಪಾಂಡವಾಶ್ಚೈವ-ಪಾಂಡು ಮಹಾರಾಜನ ಪುತ್ರರಾದ ಧರ್ಮಪುತ್ರಾದಿಗಳೂ ಸಹ, ಕಿಂ- ಯಾವಕಾರ್ಯವನ್ನು, ಅಕುರ್ವತ-ಮಾಡಿದರು. ॥ ... ॥೧॥

ಸಂಜಯ ಉವಾಚ॥ ದೃಷ್ಟ್ವಾ ತು ಪಾಂಡವಾ
ನೀಕಂ ವ್ಯೂಢಂ ದುರ್ಯೋಧನ ಸ್ತದಾ । ಆಚಾರ್ಯ
ಮುಪಸಂಗಮ್ಯ ರಾಜಾ ವಚನ ಮಬ್ರವೀತ್ ॥ ೨ ॥

ಪ॥ ದೃಷ್ಟ್ವಾ- ತು - ಪಾಂಡವಾನೀಕಂ - ವ್ಯೂಢಂ- ದುರ್ಯೋಧನಃ - ತದಾ । ಆಚಾರ್ಯಂ- ಉಪಸಂಗಮ್ಯ - ರಾಜಾ- ವಚನಂ- ಅಬ್ರವೀತ್ ॥

ಸಂಜಯಃ-ಸಂಜಯನು, ಉವಾಚ - ಉತ್ತರವಾಕ್ಯವಂ ಹೇಳಿದನು.

ಅ॥ ತದಾ- ಆ ಯುದ್ಧಪ್ರಾರಂಭಕಾಲದೊಳು, ದುರ್ಯೋಧನಃ- ದುರ್ಯೋಧನನೆಂಬ, ರಾಜಾ- ಅರಸನು, ವ್ಯೂಢಂ- ವ್ಯೂಹಾಕಾರವಾಗಿ ನಿಲ್ಲಿಸಲ್ಪಟ್ಟ, ಪಾಂಡವಾನೀಕಂ- ಪಾಂಡವರ ಸೈನ್ಯವನ್ನು, ದೃಷ್ಟ್ವಾ - ನೋಡಿ, ಆಚಾರ್ಯಂ - ದ್ರೋಣಾಚಾರ್ಯರನ್ನು, ಉಪಸಂಗಮ್ಯ - ಹೊಂದಿ, ವಚನಂ - ವಾಕ್ಯವನ್ನು, ಅಬ್ರವೀತ್ - ಹೇಳಿದನು ೨॥

ಪಶ್ಯೈ ತಾಂ ಪಾಂಡುಪುತ್ರಾಣಾ ಮಾಚಾರ್ಯ ಮ
ಹತೀಂ ಚಮೂಂ । ವ್ಯೂಢಾಂ ದ್ರುಪದಪುತ್ರೇಣ
ತವಶಿಷ್ಯೇಣ ಧೀಮತಾ ॥ ॥೩॥

ಪ॥ ಪಶ್ಯ - ಏತಾಂ - ಪಾಂಡುಪುತ್ರಾಣಾಂ - ಆಚಾರ್ಯ - ಮಹತೀಂ - ಚಮೂಂ । ವ್ಯೂಢಾಂ - ದ್ರುಪದಪುತ್ರೇಣ - ತವ - ಶಿಷ್ಯೇಣ, ಧೀಮತಾ ॥

ಅ॥ ಹೇ ಆಚಾರ್ಯ-ಎಲೈ ಗುರುವೆ, ತವ-ನಿನ್ನ, ಶಿಷ್ಯೇಣ-ಧನುರ್ವೇದಾಧ್ಯಯನದಿಂದ ಶಿಷ್ಯನಾದ, ಧೀಮತಾ-ಬಹುಬುದ್ಧಿಯುಳ್ಳ, ದ್ರುಪದ ಪುತ್ರೇಣ-ದ್ರುಪದರಾಜಪುತ್ರನಾದ ಧೃಷ್ಟದ್ಯುಮ್ನನಿಂದ, ವ್ಯೂಢಾಂ-ವ್ಯೂಹಾಕಾರವಾಗಿ ನಿಲಿಸಲ್ಪಟ್ಟ, ಪಾಂಡುಪುತ್ರಾಣಾಂ-ಪಾಂಡವರ, ಏತಾಂ – ಚಮೂಂ-ಈ ಸೈನ್ಯವನ್ನು, ಪಶ್ಯ- ನೋಡು॥೩॥

ಅತ್ರ ಶೂರಾ ಮಹೇಷ್ವಾಸಾ ಭೀಮಾರ್ಜುನಸ
ಮಾ ಯುಧಿ । ಯುಯುಧಾನೋ ವಿರಾಟಶ್ಚ ದ್ರು
ಪದಶ್ಚ ಮಹಾರಥಃ ॥ ॥೪॥

ಪ॥ ಅತ್ರ – ಶೂರಾಃ – ಮಹೇಷ್ವಾಸಾಃ – ಭೀಮಾರ್ಜುನಸಮಾಃ – ಯುಧಿ । ಯುಯುಧಾನಃ – ವಿರಾಟಃ – ಚ – ದ್ರುಪದಃ – ಚ – ಮಹಾರಥಃ।

ಅ॥ ಅತ್ರ – ಈ ಸೈನ್ಯದಲ್ಲಿ, ಮಹೇಷ್ವಾಸಾಃ- ದೊಡ್ಡಬಿಲ್ಲುಗಳುಳ್ಳ, ಯುಧಿ-ಯುದ್ಧದಲ್ಲಿ ಭೀಮಾರ್ಜುನಸಮಾಃ-ಭೀಮಾರ್ಜುನರಿಗೆ ಸಮಾನರಾದ, ಶೂರಾಃ-ವೀರರು, ಯುಯುಧಾನಃ – ಸಾತ್ಯಕಿಯು, ವಿರಾಟಶ್ಚ – ವಿರಾಟರಾಜನೂ, ಮಹಾರಥಃ – ಮಹಾರಥಿಕನಾದ, ದ್ರುಪದಶ್ಚ- ದ್ರುಪದಮಹಾರಾಜನೂ ॥ ... ॥೪॥

ಧೃಷ್ಟಕೇತು ಶ್ಚೇಕಿತಾನಃ ಕಾಶೀರಾಜ ಶ್ಚ ವೀ
ರ್ಯವಾನ್ । ಪುರುಜಿ ತ್ಕುಂತಿಭೋಜಶ್ಚ ಶೈಬ್ಯಶ್ಚ ನರ
ಪುಂಗವಃ ॥ ॥೫॥

ಪ॥ ಧೃಷ್ಟಕೇತುಃ- ಚೇಕಿತಾನಃ – ಕಾಶೀರಾಜಃ - ಚ- ವೀರ್ಯವಾನ್ । ಪುರುಜಿತ್ – ಕುಂತಿಭೋಜಃ – ಚ – ಶೈಬ್ಯಃ – ಚ – ನರಪುಂಗವಃ ॥

ಅ॥ ಧೃಷ್ಟಕೇತುಃ -ಧೃಷ್ಟಕೇತುವೆಂಬ ಹೆಸರಿನವನು, ಚೇಕಿತಾನಃ - ಚೇಕಿತಾನನು, ವೀರ್ಯವಾನ್ – ಪರಾಕ್ರಮಿಯಾದ, ಕಾಶೀರಾಜಶ್ಚ- ಕಾಶೀರಾಜನೂ, ಪುರುಜಿತ್ –ಪುರುಜಿತ್ತೆಂಬಾತನು, ಕುಂತಿಭೋಜಶ್ಚ – ಕುಂತಿಭೋಜನೂ ನರಪುಂಗವಃ-ಮನುಷ್ಯರೊಳು ಶ್ರೇಷ್ಠನಾದ, ಶೈಬ್ಯಶ್ಚ- ಶೈಬ್ಯನೂ ॥ ... ॥೫॥

ಯುಧಾಮನ್ಯು ಶ್ಚ ವಿಕ್ರಾಂತ ಉತ್ತಮೌಜಾಶ್ಚ
ವೀರ್ಯವಾನ್ । ಸೌಭದ್ರೋ ದ್ರೌಪದೇಯಾ ಶ್ಚ ಸರ್ವ
ಏವ ಮಹಾರಥಾಃ ॥ ॥ ೬ ॥

ಪ ॥ ಯುಧಾಮನ್ಯುಃ – ಚ – ವಿಕ್ರಾಂತಃ – ಉತ್ತಮೌಜಾಃ- ಚ – ವೀರ್ಯವಾನ್ । ಸೌಭದ್ರಃ- ದ್ರೌಪದೇಯಾಃ- ಚ- ಸರ್ವೇ- ಏವ- ಮಹಾರಥಾಃ ॥

ಅ॥ ವಿಕ್ರಾಂತಃ – ಪರಾಕ್ರಮಿಯಾದ, ಯುಧಾಮನ್ಯುಶ್ಚ – ಯುಧಾಮನ್ಯುವೆಂಬವನು, ವೀರ್ಯವಾನ್ – ಬಲವುಳ್ಳ, ಉತ್ತಮೌಜಾಶ್ಚ, ಉತ್ತಮೌಜಸ್ಸೂ, ಸೌಭದ್ರಃ – ಸುಭದ್ರೆಯ ಪುತ್ರನಾದ ಅಭಿಮನ್ಯುವೂ, ದ್ರೌಪದೇಯಾಶ್ಚ – ದ್ರೌಪದೀಪುತ್ರರು, (ಪ್ರತಿವಿಂಧ್ಯ, ಸುತಸೋಮ, ಶ್ರುತವರ್ಮ, ಶ್ರುತವೀರ್ಯ, ಶತಾನೀಕರೆಂಬ ಈ ೫ ಮಂದಿಗಳು ಕ್ರಮವಾಗಿ ಯುಧಿಷ್ಠಿರಾದಿಗಳಿಂದ ದ್ರೌಪದಿಯೊಳುದಿಸಿದವರು.) ಸರ್ವಏವ – ಇವರೆಲ್ಲರೂ, ಮಹಾರಥಾಃ – ಮಹಾರಥಿಕರು.

(ಶ್ಲೋ) ಧನುರ್ವೇದದೊಳು ಪಂಡಿತನಾಗಿ ಹನ್ನೊಂದುಸಾವಿರ ಧನುರ್ಧಾರಿಗಳೊಡನೆ ಯುದ್ಧಮಾಡಲು ಸಮರ್ಥನಾದವನು ಮಹಾರಥನು. ಅನೇಕಜನ ಧನುರ್ಧರರೊಡನೆ ಯುದ್ಧಕ್ಕೆದುರಾಗುವನು ಮಹಾರಥನು, ಸಮಾನನಾದ ಒಬ್ಬ ರಥಿಕನೊಡನೆ ಯುದ್ಧಮಾಡುವನು ಊನಾರ್ಧನಾರ್ಧನೆಂತಲೂ ಹೇಳಲ್ಪಡುವನು. ... |೬|

ಅಸ್ಮಾಕಂ ತು ವಿಶಿಷ್ಟಾ ಯೇ ತಾ ನ್ನಿಬೋಧ
ದ್ವಿಜೋತ್ತಮ । ನಾಯಕಾ ಮಮ ಸೈನ್ಯಸ್ಯ ಸಂ
ಜ್ಞಾರ್ಥಂ ತಾ ನ್ಬ್ರವೀಮಿ ತೇ ॥ ॥೭॥

ಪ॥ ಅಸ್ಮಾಕಂ – ತು – ವಿಶಿಷ್ಟಾಃ – ಯೇ – ತಾನ್ – ನಿಬೋಧ – ದ್ವಿಜೋತ್ತಮ । ನಾಯಕಾಃ – ಮಮ – ಸೈನ್ಯಸ್ಯ – ಸಂಜ್ಞಾರ್ಥಂ – ತಾನ್ – ಬ್ರವೀಮಿ – ತೇ ॥

ಅ॥ ಹೇದ್ವಿಜೋತ್ತಮ – ಎಲೈ ಬ್ರಾಹ್ಮಣಶ್ರೇಷ್ಠನೆ, ಅಸ್ಮಾಕಂ – ನಮ್ಮಗಳ, ಸೈನ್ಯಸ್ಯ – ಸೇನೆಗೆ, ನಾಯಕಾಃ – ಒಡೆಯರಾದ, ಯೇತು – ಯಾರಾವರೆ, ವಿಶಿಷ್ಟಾಃ – ಶಕ್ತರಾದವರೊ, ತಾನ್ – ಅವರುಗಳನ್ನು, ನಿಬೋಧ – ತಿಳಿಯುಕೊ, ತೇ – ನಿನಗೇ, ಸಂಜ್ಞಾರ್ಥಂ – ಗುರುತಿಗೋಸ್ಕರ, ತಾನ್ – ಅವರ್ಗಳಂ, ಬ್ರವೀಮಿ – ಹೇಳುವೆನು ॥ |೭|

ಭವಾನ್ ಭೀಷ್ಮ ಶ್ಚ ಕರ್ಣ ಶ್ಚ ಕೃಪ ಶ್ಚ ಸಮಿ
ತಿಂಜಯಃ । ಅಶ್ವತ್ಥಾಮಾ ವಿಕರ್ಣ ಶ್ಚ ಸೌಮದ
ತ್ತಿ *ಸ್ತಥೈವ ಚ ॥ ( *ಶಂ– ರ್ಜಯದ್ರಥಃ ॥ ) ॥೮॥

ಪ॥ ಭವಾನ್ – ಭೀಷ್ಮಃ – ಚ, ಕರ್ಣಃ – ಚ – ಕೃಪಃ – ಚ – ಸಮಿತಿಂಜಯಃ । ಅಶ್ವತ್ಥಾಮಾ – ವಿಕರ್ಣಃ – ಚ – ಸೌಮದತ್ತಿಃ – ತಥಾ – ಏವ – ಚ ॥

ಅ॥ ಭವಾನ್ – ಪೂಜ್ಯರಾದನೀವು, ಭೀಷ್ಮಶ್ಚ – ಭೀಷ್ಮಾಚಾರ್ಯರು, ಕರ್ಣಶ್ಚ – ಕರ್ಣನು, ಸಮಿತಿಂಜಯಃ – ಯುದ್ಧದೊಳು ಜಯಿಸುವರಾದ, ಕೃಪಶ್ಚ – ಕೃಪಾಚಾರ್ಯರೂ, ಅಶ್ವತ್ಥಾಮಾ – ಅಶ್ವತ್ಥಾಮಾಚಾರ್ಯರು, ವಿಕರ್ಣಶ್ಚ – ವಿಕರ್ಣನು, ತಥೈವಚ – ಹಾಗೆಯೆ, ಸೌಮದತ್ತಿಃ – ಸೋಮದತ್ತನ ಪುತ್ರನಾದ ಭೂರಿಶ್ರವಸ್ಸು |೮|

ಅನ್ಯೇ ಚ ಬಹವ ಶ್ಶೂರಾ ಮದರ್ಥೇ ತ್ಯಕ್ತಜೀವಿ
ತಾಃ । ನಾನಾಶಸ್ತ್ರಪ್ರಹರಣಾ ಸ್ಸರ್ವೇ ಯುದ್ಧ
ವಿಶಾರದಾಃ ॥ ॥೯॥

ಪ। ಅನ್ಯೇ-ಚ-ಬಹವಃ-ಶೂರಾಃ- ಮದರ್ಥೇ- ತ್ಯಕ್ತಜೀವಿತಾಃ । ನಾನಾಶಸ್ತ್ರಪ್ರಹರಣಾಃ-ಸರ್ವೇ-ಯುದ್ಧವಿಶಾರದಾಃ।

ಅ। ಅನ್ಯೇ - ಇತರರಾದ, ಬಹವಃ - ಬಹುಮಂದಿ, ಶೂರಾಶ್ಚ - ವೀರರೂ ಕೂಡ, ನಾನಾಶಸ್ತ್ರಪ್ರಹರಣಾಃ - ಅನೇಕಾಯುಧಗಳುಳ್ಳವರಾಗಿ, ಮದರ್ಥೇ - ನನಗೋಸ್ಕರ, ತ್ಯಕ್ತಜೀವಿತಾಃ - ಜೀವನಾಶೆಯು ತೊರೆದಿರುವ ಸರ್ವೇ- ಇವರೆಲ್ಲರೂ, ಯುದ್ಧವಿಶಾರದಾಃ - ಯುದ್ಧದೊಳು ನಿಪುಣರಾದವರು. ॥೯॥

ಅಪರ್ಯಾಪ್ತಂ ತ ದಸ್ಮಾಕಂ ಬಲಂ ಭೀಷ್ಮಾಭಿರ
ಕ್ಷಿತಂ । ಪರ್ಯಾಪ್ತಂ ತ್ವಿ ದ ಮೇತೇಷಾಂ ಬಲಂ ಭೀ
ಮಾಭಿರಕ್ಷಿತಂ ॥ ॥೧೦॥

ಪ। ಅಪರ್ಯಾಪ್ತಂ - ತತ್ - ಅಸ್ಮಾಕಂ - ಬಲಂ - ಭೀಷ್ಮಾಭಿರಕ್ಷಿತಂ । ಪರ್ಯಾಪ್ತಂ- ತು - ಇದಂ - ಏತೇಷಾಂ - ಬಲಂ - ಭೀಮಾಭಿರಕ್ಷಿತಂ ॥

ಅ। ಭೀಷ್ಮಾಭಿರಕ್ಷಿತಂ - ಭೀಷ್ಮಾಚಾರ್ಯರಿಂದ ರಕ್ಷಿಸಲ್ಪಡುವ, ಅಸ್ಮಾಕಂ - ನಮ್ಮಗಳ, ತತ್ - ಆ, ಬಲಂ - ಸೈನ್ಯವು, ಅಪರ್ಯಾಪ್ತಂ - ಶಕ್ತಿಯಿಲ್ಲದ ಕಡಮೆಯಾದದ್ದು, ಭೀಮಾಭಿರಕ್ಷಿತಂ-ಭೀಮಸೇನನಿಂದ ರಕ್ಷಿತವಾದ, ಏತೇಷಾಂ- ಇದಂ-ಬಲಂ ತು-ಇವರುಗಳ, ಈ, ಸೈನ್ಯವಾದರೋ, ಪರ್ಯಾಪ್ತಂ-ಬಲದಿಂದ ಪೂರ್ಣವಾದದ್ದು॥೧೦॥

ಅಯನೇಷು ಚ ಸರ್ವೇಷು ಯಥಾಭಾಗ ಮವ
ಸ್ಥಿತಾಃ । ಭೀಷ್ಮ ಮೇವಾ ಭಿರಕ್ಷಂತು ಭವಂತ ಸ್ಸ
ರ್ವ ಏವ ಹಿ ॥ ॥೧೧॥

ಪ। ಅಯನೇಷು - ಚ- ಸರ್ವೇಷು - ಯಥಾಭಾಗಂ- ಅವಸ್ಥಿತಾಃ । ಭೀಷ್ಮಂ- ಏವ - ಅಭಿರಕ್ಷಂತು - ಭವಂತಃ - ಸರ್ವೇ - ಏವ-- ಹಿ।

ಅ॥ ಸರ್ವೇಭವಂತೋಹಿ- ನೀವೆಲ್ಲರೂ, ಸರ್ವೇಷು- ಸಮಸ್ತಭಾಗಗಳಾದ, ಅಯನೇಷುಚ - ಸೇನಾಮಾರ್ಗಗಳಲ್ಲಿಯೂ, ಯಥಾಭಾಗಂ - ನಿಮ್ಮನಿಮ್ಮಭಾಗವಂ ತೊರೆಯದೆ, ಅವಸ್ಥಿತಾಃ - ಜಾಗರೂಕರಾಗಿರುವವರಾಗಿ, ಭೀಷ್ಮಮೇವ - ಭೀಷ್ಮಾಚಾರ್ಯರನ್ನ, ಅಭಿರಕ್ಷಂತು - ಎಲ್ಲಾಪಕ್ಕಗಳಲ್ಲಿಯು ಕಾಪಾಡಬೇಕು. ॥೧೧॥

ತಸ್ಯ ಸಂಜನಯನ್ ಹರ್ಷಂ ಕುರುವೃದ್ಧಃ ಪಿತಾಮಹಃ । ಸಿಂಹನಾದಂ ವಿನದ್ಯೋಚ್ಚೈಃ ಶಂಖಂ ದಧ್ಮೌ ಪ್ರತಾಪವಾನ್ ॥ ॥೧೨॥

ಪ॥ ತಸ್ಯ – ಸಂಜನಯನ್ – ಹರ್ಷಂ – ಕುರುವೃದ್ಧಃ – ಪಿತಾಮಹಃ । ಸಿಂಹನಾದಂ – ವಿನದ್ಯ – ಉಚ್ಚೈಃ – ಶಂಖಂ – ದಧ್ಮೌ – ಪ್ರತಾಪವಾನ್ ॥

ಅ॥ ಪ್ರತಾಪವಾನ್ – ಪರಾಕ್ರಮಶಾಲಿಯಾದ, ಕುರುವೃದ್ಧಃ – ಕುರುರಾಜರೊಳು ವಯೋಧಿಕನಾದ, ಪಿತಾಮಹಃ – ಪಾಂಡವ ಕೌರವರ ತಾತಂದಿರಾದ ಭೀಷ್ಮಾಚಾರ್ಯನು, ತಸ್ಯ – ಆ ದುರ್ಯೋಧನನಿಗೆ, ಹರ್ಷಂ – ಸಂತೋಷವನ್ನು, ಸಂಜನಯನ್ – ಹುಟ್ಟಿಸುವವನಾಗಿ, ಸಿಂಹನಾದಂ ವಿನದ್ಯ – ಸಿಂಹನಾದದಂತೆ ನಾದವಮಾಡಿ, ಶಂಖಂ – ಶಂಖವನ್ನು, ಉಚ್ಚೈಃ – ಬಹುಮಾರ ಶಬ್ದವಾಗುವಂತೆ, ದಧ್ಮೌ ಊದಿದರು. ॥೧೨॥

ತತಃ ಶಂಖಾಶ್ಚ ಭೇರ್ಯಶ್ಚ ಪಣವಾನಕಗೋಮುಖಾಃ । ಸಹಸೈವಾಭ್ಯಹನ್ಯಂತ ಸ ಶಬ್ದಸ್ತುಮುಲೋಽಭವತ್ ॥ ॥೧೩॥

ಪ॥ ತತಃ – ಶಂಖಾಃ – ಚ – ಭೇರ್ಯಃ – ಚ – ಪಣವಾನಕಗೋಮುಖಾಃ । ಸಹಸಾ – ಏವ – ಅಭ್ಯಹನ್ಯಂತ – ಸಃ – ಶಬ್ದಃ – ತುಮುಲಃ – ಅಭವತ್ ॥

ಅ॥ ತತಃ – ಬಳಿಕ, ಶಂಖಾಶ್ಚ – ಶಂಖಗಳು, ಭೇರ್ಯಶ್ಚ – ರಣಭೇರಿಗಳು, ಪಣವಾನಕಗೋಮುಖಾಃ – ಢೋಲುಕಿ, ಪಟಹ, ತುತೂರಿ, ಮುಂತಾದ ವಾದ್ಯಗಳು, ಸಹಸೈವ – ಶೀಘ್ರವಾಗಿಯೆ, ಅಭ್ಯಹನ್ಯಂತ – ಬಾರಿಸಲ್ಪಟ್ಟವು, ಸಶಬ್ದಃ – ಆ ಧ್ವನಿಯು, ತುಮುಲಃ – ಬಹುಗಂಭೀರವಾದದ್ದಾಗಿ, ಅಭವತ್ – ಆಯಿತು. ॥೧೩॥

ತತಃ ಶ್ವೇತೈರ್ಹಯೈರ್ಯುಕ್ತೇ ಮಹತಿ ಸ್ಯಂದನೇ ಸ್ಥಿತೌ । ಮಾಧವಃ ಪಾಂಡವಶ್ಚೈವ ದಿವ್ಯೌ ಶಂಖೌ ಪ್ರದಧ್ಮತುಃ ॥ ॥೧೪॥

ಪ॥ ತತಃ – ಶ್ವೇತೈಃ – ಹಯೈಃ – ಯುಕ್ತೇ – ಮಹತಿ – ಸ್ಯಂದನೇ – ಸ್ಥಿತೌ । ಮಾಧವಃ – ಪಾಂಡವಃ – ಚ – ಏವ – ದಿವ್ಯೌ – ಶಂಖೌ – ಪ್ರದಧ್ಮತುಃ ॥

ಅ॥ ತತಃ – ದುರ್ಯೋಧನನ ಸೈನ್ಯದೊಳು ಯುದ್ಧಸನ್ನಾಹವಾದಬಳಿಕ, ಶ್ವೇತೈಃ – ಬಿಳುಪಾದ, ಹಯೈಃ – ಕುದುರೆಗಳಿಂದ, ಯುಕ್ತೇ – ಕೂಡಿದ, ಸ್ಯಂದನೇ – ತೇ

ರಿನಲ್ಲಿ, ಸ್ಥಿತೌ - ಇರುವ, ಮಾಧವಃ - ಲಕ್ಷ್ಮೀಪತಿಯಾದ ಶ್ರೀಕೃಷ್ಣನು, ಪಾಂಡವ ಶ್ಚೈವ - ಪಾಂಡುನಂದನನಾದ ಅರ್ಜುನನೂ, ದಿವ್ಯೌ - ಶ್ರೇಷ್ಠಗಳಾದ, ಶಂಖೌ- ಶಂಖಗಳನ್ನು, ಪ್ರದಧ್ಮತುಃ - ಊದಿದರು. ॥೧೪॥

ಪಾಂಚಜನ್ಯಂ ಹೃಷೀಕೇಶೋ ದೇವದತ್ತಂ ಧ
ನಂಜಯಃ । ಪೌಂಡ್ರಂ ದಧ್ಮೌ ಮಹಾಶಂಖಂ ಭೀಮ
ಕರ್ಮಾ ವೃಕೋದರಃ ॥ ॥೧೫॥

ಪ। ಪಾಂಚಜನ್ಯಂ - ಹೃಷೀಕೇಶಃ- ದೇವದತ್ತಂ- ಧನಂಜಯಃ । ಪೌಂಡ್ರಂ- ದಧ್ಮೌ - ಮಹಾಶಂಖಂ - ಭೀಮಕರ್ಮಾ- ವೃಕೋದರಃ ॥

ಅ। (೧) ಹೃಷೀಕೇಶಃ - ಶ್ರೀಕೃಷ್ಣನು, (೨) ಪಾಂಚಜನ್ಯಂ - ಪಾಂಚಜನ್ಯವೆಂಬ ಶಂಖವನ್ನು, ದಧ್ಮೌ - ಊದಿದನು, (೩) ಧನಂಜಯಃ - ಅರ್ಜುನನು, ದೇವದತ್ತಂ - ದೇವದತ್ತವೆಂಬ ಶಂಖವನ್ನು, ( ದಧ್ಮೌ - ಊದಿದನು, ) ಭೀಮಕರ್ಮಾ- ಭಯವನ್ನುಂಟುಮಾಡುವ ಕೆಲಸವುಳ್ಳ, (೪) ವೃಕೋದರಃ - ಭೀಮನು, ಪೌಂಡ್ರಂ- ಪೌಂಡ್ರವೆಂಬ, ಮಹಾಶಂಖಂ - ದೊಡ್ಡಶಂಖವನ್ನು, (ದಧ್ಮೌ- ಊದಿದನು.) ॥೧೫॥

(೧) ಹೃಷೀಕ ಇಂದ್ರಿಯಗಳಿಗೆ, ಈಶ-ನಿಯಾಮಕನು, (೨) ಪಂಚಜನನೆಂಬ ರಾಕ್ಷಸನ ದೇಹದಿಂದ ಹುಟ್ಟಿದ್ದು, (೩) ಧರ್ಮರಾಜನ ರಾಜಸೂಯ ಯಾಗಕ್ಕೋಸ್ಕರ ದೇಶದಲ್ಲಿದ್ದ ಧನಗಳನ್ನು ಜಯಿಸಿಕೊಂಡು ಬಂದವನು, (೪) ವೃಕವೆಂಬ ಜಾಠರಾಗ್ನಿಯು ಹೊಟ್ಟೆಯಲ್ಲಿರುವವನು.

ಅನಂತವಿಜಯಂ ರಾಜಾ ಕುಂತೀಪುತ್ರೋ ಯು
ಧಿಷ್ಠಿರಃ । ನಕುಲ ಸ್ಸಹದೇವ ಶ್ಚ ಸುಘೋಷ ಮ
ಣಿಪುಷ್ಪಕೌ॥ ॥೧೬॥

ಪ। ಅನಂತವಿಜಯಂ - ರಾಜಾ - ಕುಂತೀಪುತ್ರಃ - ಯುಧಿಷ್ಠಿರಃ । ನಕುಲಃ- ಸಹದೇವಃ - ಚ - ಸುಘೋಷಮಣಿಪುಷ್ಪಕೌ॥

ಅ। ಕುಂತೀಪುತ್ರಃ-ಕುಂತೀದೇವಿಯಮಗನಾದ,(೧)ಯುಧಿಷ್ಠಿರಃ-ಯುಧಿಷ್ಠಿರನೆಂಬ, ರಾಜಾ- ಅರಸು, ಅನಂತವಿಜಯಂ- ಅನಂತವಿಜಯವೆಂಬ ಶಂಖವನ್ನು, (ದಧ್ಮೌ- ಊದಿದನು,) ನಕುಲಃ - ನಕುಲನು, ಸಹದೇವಶ್ಚ - ಸಹದೇವನೂಕೂಡ, ಸುಘೋಷಮಣಿಪುಷ್ಪಕೌ - ಸುಘೋಷಮಣಿಪುಷ್ಪಕಗಳೆಂಬ ಶಂಖಗಳನ್ನು, ಪ್ರದಧ್ಮತುಃ - ಊದಿದರು ॥೧೬॥ (೧) ಯುಧಿ - ಯುದ್ಧದಲ್ಲಿ, ಸ್ಥಿರಃ- ಕದಲದೆ ಇರುವವನು.

ಕಾಶ್ಯ ಶ್ಚ ಪರಮೇಷ್ವಾಸ ಶ್ಶಿಖಂಡೀ ಚ ಮಹಾ
ರಥಃ । ಧೃಷ್ಟದ್ಯುಮ್ನೋ ವಿರಾಟ ಶ್ಚ ಸಾತ್ಯಕಿ ಶ್ಚಾ
ಪರಾಜಿತಃ ॥ ೧೭ ॥ ದ್ರುಪದೋ ದ್ರೌಪದೇಯಾ
ಶ್ಚ ಸರ್ವಶಃ ಪೃಥಿವೀಪತೇ । ಸೌಭದ್ರ ಶ್ಚ ಮಹಾ
ಬಾಹು ಶ್ಶಂಖಾನ್ದಧ್ಮುಃ ಪೃಥಕ್ಪೃಥಕ್ ॥ ॥೧೮॥

ಪ॥ ಕಾಶ್ಯಃ- ಚ - ಪರಮೇಷ್ವಾಸಃ- ಶಿಖಂಡೀ - ಚ - ಮಹಾರಥಃ । ಧೃಷ್ಟದ್ಯುಮ್ನಃ- ವಿರಾಟಃ-ಚ-ಸಾತ್ಯಕಿಃ-ಚ-ಅಪರಾಜಿತಃ ॥ ದ್ರುಪದಃ- ದ್ರೌಪದೇಯಾಃ- ಚ -ಸರ್ವಶಃ - ಪೃಥಿವೀಪತೇ - ಸೌಭದ್ರಃ - ಚ - ಮಹಾಬಾಹುಃ - ಶಂಖಾನ್ - ದಧ್ಮುಃ -ಪೃಥಕ್ - ಪೃಥಕ್.

ಅ॥ ಪರಮೇಷ್ವಾಸಃ-ಶ್ರೇಷ್ಠವಾದ ಧನುಸ್ಸುಳ್ಳ, ಕಾಶ್ಯಶ್ಚ-ಕಾಶೀರಾಜನೂ, ಮಹಾರಥಃ-ಮಹಾರಥಿಕನಾದ, ಶಿಖಂಡೀಚ- ಶಿಖಂಡಿಯೂ, ಧೃಷ್ಟದ್ಯುಮ್ನಃ- ಧೃಷ್ಟದ್ಯುಮ್ನನೂ, ವಿರಾಟಶ್ಚ-ವಿರಾಟರಾಜನೂ, ಅಪರಾಜಿತಃ-ಯುದ್ಧದಲ್ಲಿ ಇತರರಿಂದ ಜಯಿಸಲ್ಪಡದ, ಸಾತ್ಯಕಿಶ್ಚ -ಸಾತ್ಯಕಿಯೂ ... ॥೧೭॥

ಹೇ ಪೃಥಿವೀಪತೇ - ಎಲೈ ದೊರೆಯಾದ ಧೃತರಾಷ್ಟ್ರನೇ, ದ್ರುಪದಃ-ದ್ರುಪದರಾಜನೂ, ದ್ರೌಪದೇಯಾಶ್ಚ - ದ್ರೌಪದೀಪುತ್ರರಾದ ಉಪಪಾಂಡವರೂ, ಮಹಾ ಬಾಹುಃ- ಹೆಚ್ಚಾದ ಭುಜಬಲವುಳ್ಳ, ಸೌಭದ್ರಃ - ಸುಭದ್ರೆಯಮಗನಾದ ಅಭಿಮನ್ಯುವೂ, ಸರ್ವಶಃ -ಇವರೆಲ್ಲರೂ, ಪೃಥಕ್ಪೃಥಕ್ - ಬೇರೆಬೇರೆಯಾಗಿ, ಶಂಖಾನ್- ಶಂಖಗಳನ್ನು, ದಧ್ಮುಃ- ಊದಿದರು ॥ ॥೧೮॥

ಸ ಘೋಷೋ ಧಾರ್ತರಾಷ್ಟ್ರಾಣಾಂ ಹೃದಯಾ
ನಿ ವ್ಯದಾರಯತ್ । ನಭ ಶ್ಚ ಪೃಥಿವೀಂ ಚೈವ ತು
ಮುಲೋ ವ್ಯನುನಾದಯನ್ ॥ ॥೧೯॥

ಪ। ಸಃ - ಘೋಷಃ - ಧಾರ್ತರಾಷ್ಟ್ರಾಣಾಂ - ಹೃದಯಾನಿ - ವ್ಯದಾರಯತ್ । ನಭಃ - ಚ - ಪೃಥಿವೀಂ - ಚ - ಏವ - ತುಮುಲಃ- ವ್ಯನುನಾದಯನ್॥

ಅ॥ ತುಮುಲಃ - ಎಲ್ಲಿಯೂವ್ಯಾಪ್ತವಾದ, ಸಃ- ಘೋಷಃ-ಆ ಶಂಖಧ್ವನಿಯು, ನಭಶ್ಚ - ಆಕಾಶವನ್ನೂ, ಪೃಥಿವೀಂಚೈವ - ಭೂಮಿಯನ್ನೂ, ವ್ಯನುನಾದಯನ್- ಪ್ರತಿಶಬ್ದದಿಂದ ವ್ಯಾಪಿಸುವಂತೆ ಮಾಡುವದಾಗಿ, ಧಾರ್ತರಾಷ್ಟ್ರಾಣಾಂ - ಧೃತರಾಷ್ಟ್ರನಾದನಿನ್ನಮಕ್ಕಳ, ಹೃದಯಾನಿ - ಎದೆಗಳನ್ನು, ವ್ಯದಾರಯತ್ - ಸೀಳಿತು. ॥೧೯॥

## ೨ನೇ ಶ್ಲೋಕದಿಂದ ೧೯ನೇ ಶ್ಲೋಕದವರಿಗು ತಾತ್ಪರ್ಯವು.

(ರಾ-ಭಾ) ಎಲೈ ಧೃತರಾಷ್ಟ್ರ ಮಹಾರಾಜನೆ! ನಿನ್ನ ಪುತ್ರನಾದ ದುರ್ಯೋಧನನು, ತಾನೇ, ಭೀಮಸೇನನ ಬಾಹುಬಲದಿಂದ ಪರಿಪಾಲಿತಮಪ್ಪ ಪಾಂಡವರ ಸೈನ್ಯವನ್ನೂ, ಉಭಯಕುಲ ಪಿತಾಮಹನಾಗಿಯೂ, ಜಗದೇಕ ಶೂರನಾಗಿಯೂ ಇರುವ ಭೀಷ್ಮಾಚಾರ್ಯರ ಭುಜವೀರ್ಯಗುಪ್ತವಾದ ತನ್ನ ಸೈನ್ಯವನ್ನೂ, ವೀಕ್ಷಣಂಗೈದು, ತಮ್ಮನ್ನು ಜಯಿಸುವ ವಿಷಯದೊಳು ಪಾಂಡವರಸೈನ್ಯವು ಸಾಕಾಗಿರುವದೆಂತಲೂ, ಪಾಂಡವರನ್ನು ಜಯಿಸುವ ಸಂದರ್ಭದೊಳು ತನಗೆ ಸೈನ್ಯವು ಸಾಲದೆಂತಲೂ, ಧನುರ್ವಿದ್ಯೆಯೊಳು ದಕ್ಷರಾದ ದ್ರೋಣಾಚಾರ್ಯರಿಗೆ ವಿಜ್ಞಾಪಿಸಿ ಅಂತರಂಗದೊಳು ವ್ಯಸನವಂ ತಡೆದನು. ದುರ್ಯೋಧನನ ಚಿತ್ತವೆಂಬ ಗಹನದೊಳು ಪ್ರಜ್ವಲಿಸುವ ವ್ಯಸನವೆಂಬ ಬೇಗೆಯನ್ನು ಜಯಸೂಚನೆಯೆಂಬ ಅಮೃತರಸದಿಂದ ಶಾಂತಿಗೊಳಿಸಿ ದುರ್ಯೋಧನನಿಗೆ ಸಂತೋಷವನ್ನುಂಟುಮಾಡಬೇಕೆಂದು ಬಯಸಿ, ಸೇನಾಧಿಪತ್ಯದೊಳು ಪಟ್ಟಾಭಿಷಿಕ್ತರಾದ ಭೀಷ್ಮಾಚಾರ್ಯರು ಸಿಂಹನಾದವಂಗೈದು ಶಂಖವನ್ನೂದಿ, ಮತ್ತು ಅನೇಕಗಳಾದ ಶಂಖಭೇರೀಶಬ್ದಗಳಿಂದ ಜಯಸೂಚಕವಾದ ಘೋಷವಂ ಮಾಡಿಸಿದರು, ಬಳಿಕ ಭೀಷ್ಮಾಚಾರ್ಯರಿಂದ ಕೃತವಾದ ಜಯಶಬ್ದವಂ ಕೇಳಿ ಸರ್ವಲೋಕಪಾಲಕರಾದ ಬ್ರಹ್ಮೇಂದ್ರಾದಿಗಳಿಗೂ ನಿಯಾಮಕನಾಗಿರುವ, ಪಾರ್ಥಸಾರಥಿಯಾದ ದೇವಕೀಪುತ್ರನೂ ಮಹಾರಥಿಕಾಗ್ರಣಿಯಾದ ಅರ್ಜುನನೂ, ನಿಮಿಷಮಾತ್ರದೊಳು ತ್ರಿಲೋಕ ವಿಜಯಂಗೈಯಲು ಶಕ್ಯಮಪ್ಪ ಸಾಮಗ್ರಿಯಿಂದೊಡಗೂಡಿದ ಮಹಾರಥದೊಳು ಕೂತವನಾಗಿ, ಮೂರು ಲೋಕಗಳನ್ನು ಗಡಗಡನೆ ನಡಗಿಸುವ ಕಾಂತಿಯಿಂದ ದೇದೀಪ್ಯಮಾನವಾದ ಪಾಂಚಜನ್ಯ ದೇವದತ್ತಗಳೆಂಬ ದಿವ್ಯಶಂಖಗಳನ್ನು ಪೂರಿದರು. ಬಳಿಕ ಯುಧಿಷ್ಠಿರ, ಭೀಮಸೇನ, ನಕುಲ, ಸಹದೇವ, ಪ್ರತಿವಿಂಧ್ಯ ಮುಂತಾದವರೆಲ್ಲರೂ ತಮ್ಮತಮ್ಮ ಶಂಖಗಳನ್ನು ಪೂರಿದರು. ಆ ಶಬ್ದವು ದುರ್ಯೋಧನನೇ ಮುಂತಾದ ನಿನ್ನ ಮಕ್ಕಳ ಎದೆಗಳನ್ನು ಭೇದಿಸಿತು. ಈಗಲೆ ಕೌರವರ ಸೈನ್ಯವು ನಾಶವನ್ನೈದಿತೆಂದು ಧೃ

ತರಾಷ್ಟ್ರ ಪುತ್ರರು ತಿಳಿದರೆಂದು ಆ ದುರ್ಯೋಧನಾದಿಗಳಿಗೆ ನಿಜ ಯುದ್ಧೋತ್ಸವವನ್ನು ತೋರುವ (ಅಂಧಕಾರ ಕ್ರಮಶಃ ತಿಳಿಯಾಗ) ಧೃತರಾಷ್ಟ್ರನಿಗೆ ಸಂಜಯನು ಹೇಳಿದನು. (೨—೧೯)

ಮೂ॥ ಅಥ ವ್ಯವಸ್ಥಿತಾನ್ ದೃಷ್ಟ್ವಾ ಧಾರ್ತ
ರಾಷ್ಟ್ರಾನ್ ಕಪಿಧ್ವಜಃ। ಪ್ರವೃತ್ತೇ ಶಸ್ತ್ರಸಂಪಾ
ತೇ ಧನು ರುದ್ಯಮ್ಯ ಪಾಂಡವಃ ॥ ॥೨೦॥

ಹೃಷೀಕೇಶಂ ತದಾವಾಕ್ಯ ಮಿದಮಾಹ ಮಹೀ
ಪತೇ ॥ ಅರ್ಜುನ ಉವಾಚ ॥ ಸೇನಯೋ ರುಭಯೋ
ರ್ಮಧ್ಯೇ ರಥಂ ಸ್ಥಾಪಯ ಮೇಽಚ್ಯುತ ॥ ॥೨೧॥

ಪ॥ ಅಥ-ವ್ಯವಸ್ಥಿತಾನ್-ದೃಷ್ಟ್ವಾ-ಧಾರ್ತರಾಷ್ಟ್ರಾನ್-ಕಪಿಧ್ವಜಃ। ಪ್ರವೃತ್ತೇ-ಶಸ್ತ್ರಸಂಪಾತೇ-ಧನುಃ-ಉದ್ಯಮ್ಯ-ಪಾಂಡವಃ। ಹೃಷೀಕೇಶಂ-ತದಾ-ವಾಕ್ಯಂ-ಇದಂ-ಆಹ-ಮಹೀಪತೇ। (ಅರ್ಜುನಃ-ಉವಾಚ-) ಸೇನಯೋಃ-ಉಭಯೋಃ-ಮಧ್ಯೇ-ರಥಂ-ಸ್ಥಾಪಯ-ಮೇ-ಅಚ್ಯುತ। ॥೨೦॥

ಅ॥ ಅಥ-ಅನಂತರದಲ್ಲಿ, ಮಹೀಪತೇ-ಎಲೈ ಭೂಮಿಪತಿಯಾದ ಧೃತರಾಷ್ಟ್ರನೇ! ಕಪಿಧ್ವಜಃ-ಆಂಜನೇಯಧ್ವಜವುಳ್ಳ, ಪಾಂಡವಃ-ಅರ್ಜುನನು, ವ್ಯವಸ್ಥಿತಾನ್-ಯುದ್ಧಸನ್ನದ್ಧರಾಗಿ ನಿಂತಿರುವ, ಧಾರ್ತರಾಷ್ಟ್ರಾನ್-ನಿನ್ನ ಪುತ್ರರಾದ ದುರ್ಯೋಧನಾದಿಗಳನ್ನು, ದೃಷ್ಟ್ವಾ-ನೋಡಿ, ಶಸ್ತ್ರಸಂಪಾತೇ-ಬಾಣವೃಷ್ಟಿಯು, ಪ್ರವೃತ್ತೇ-ಉಂಟಾಗುತ್ತಿರಲು, ಧನುಃ-ಬಿಲ್ಲನ್ನು, ಉದ್ಯಮ್ಯ-ಮೇಲಕ್ಕೆ ಎತ್ತಿ, ತದಾ-ಆಕಾಲದಲ್ಲಿ, ಹೃಷೀಕೇಶಂ-ಶ್ರೀಕೃಷ್ಣನ ಕುರಿತು, ಇದಂ-ಈ ಮುಂದೆ ಹೇಳುವ, ವಾಕ್ಯಂ-ಮಾತನ್ನು, ಆಹ-ಹೇಳಿದನು, (ಅರ್ಜುನಃ-ಅರ್ಜುನನು, ಉವಾಚ-ಹೇಳುತ್ತಾನೆ) ಹೇ ಅಚ್ಯುತ-ನಾಶರಹಿತನಾದ ಎಲೈ ಸ್ವಾಮಿಯೇ, ಉಭಯೋಃ-ಎರಡಾದ, ಸೇನಯೋಃ-ಸೈನ್ಯಗಳ, ಮಧ್ಯೇ-ಮಧ್ಯಭಾಗದಲ್ಲಿ, ಮೇ-ನನ್ನ, ರಥಂ-ತೇರನ್ನು, ಸ್ಥಾಪಯ-ನಿಲ್ಲಿಸು. ... ॥೨೦॥೨೧॥

ಯಾವ ದೇತಾನ್ನಿರೀಕ್ಷೇಽಹಂ ಯೋದ್ಧುಕಾಮಾ
ನವಸ್ಥಿತಾನ್ । ಕೈರ್ಮಯಾ ಸಹ ಯೋದ್ಧವ್ಯ ಮ
ಸ್ಮಿನ್ ರಣ ಸಮುದ್ಯಮೇ ॥ ॥೨೨॥

ಪ॥ ಯಾವತ್ - ಏತಾನ್ - ನಿರೀಕ್ಷೇ - ಅಹಂ - ಯೋದ್ಧುಕಾಮಾನ್ - ಅವಸ್ಥಿತಾನ್ । ಕೈಃ - ಮಯಾ - ಸಹ - ಯೋದ್ಧವ್ಯಂ - ಅಸ್ಮಿನ್ - ರಣಸಮುದ್ಯಮೇ ॥

ಅ॥ ಅಹಂ - ನಾನು, ಯೋದ್ಧುಕಾಮಾನ್ - ಯುದ್ಧಮಾಡಲಿಚ್ಛೆಯುಳ್ಳವರಾಗಿ, ಅವಸ್ಥಿತಾನ್ - ನಿಂತಿರುವ, ಏತಾನ್ - ಈ ದುರ್ಯೋಧನಾದಿಗಳನ್ನು, ನಿರೀಕ್ಷೇ - ನೋಡುವೆನೊ, ಅಸ್ಮಿನ್ - ಈ, ರಣಸಮುದ್ಯಮೇ - ಯುದ್ಧೋದ್ಯೋಗದಲ್ಲಿ, ಕೈಸ್ಸಹ - ಯಾರವರಗಳ, ಮಯಾ - ನನ್ನಿಂದ, ಯೋದ್ಧವ್ಯಂ - ಯುದ್ಧಮಾಡಲ್ಪಡತಕ್ಕದ್ದೊ ॥ ೨೨ ॥

ಯೋತ್ಸ್ಯಮಾನಾನವೇಕ್ಷೇಽಹಂ ಯ ಏತೇಽತ್ರ
ಸಮಾಗತಾಃ । ಧಾರ್ತರಾಷ್ಟ್ರಸ್ಯ ದುರ್ಬುದ್ಧೇರ್ಯು
ದ್ಧೇಪ್ರಿಯ ಚಿಕೀರ್ಷವಃ ॥ ॥೨೩॥

ಪ॥ ಯೋತ್ಸ್ಯಮಾನಾನ್ - ಅವೇಕ್ಷೇ - ಅಹಂ - ಯೇ - ಏತೇ - ಅತ್ರ - ಸಮಾಗತಾಃ । ಧಾರ್ತರಾಷ್ಟ್ರಸ್ಯ - ದುರ್ಬುದ್ಧೇಃ - ಯುದ್ಧೇ - ಪ್ರಿಯಚಿಕೀರ್ಷವಃ॥

ಅ॥ ದುರ್ಬುದ್ಧೇಃ - ಕೆಟ್ಟಬುದ್ಧಿಯುಳ್ಳ, ಧಾರ್ತರಾಷ್ಟ್ರಸ್ಯ - ನಿನ್ನ ಪುತ್ರನಾದ ದುರ್ಯೋಧನನಿಗೆ, ಯುದ್ಧೇ - ಕದನದಲ್ಲಿ, ಪ್ರಿಯಚಿಕೀರ್ಷವಃ - ಪ್ರಿಯವನ್ನು ಮಾಡಲಿಚ್ಛೆಯುಳ್ಳವರಾಗಿ, ಯೇ ಏತೇ - ಯಾವ ಈ ರಾಜರು, ಅತ್ರ - ಇಲ್ಲಿ, ಸಮಾಗತಾಃ - ಒಂದುಗೂಡಿರುವರೊ, ಯೋತ್ಸ್ಯಮಾನಾನ್ - ಯುದ್ಧಮಾಡುವವರಾದ, ತಾನ್ - ಅವರುಗಳನ್ನು, ಅಹಂ - ನಾನು, ಅವೇಕ್ಷೇ - ನೋಡುವೆನು ॥ ೨೩ ॥

ಸಂಜಯಉವಾಚ ॥ ಏವಮುಕ್ತೋ ಹೃಷೀಕೇಶೋ
ಗುಡಾಕೇಶೇನ ಭಾರತ । ಸೇನಯೋ ರುಭಯೋ ರ್ಮ
ಧ್ಯೇ ಸ್ಥಾಪಯಿತ್ವಾ ರಥೋತ್ತಮಂ ॥ ॥೨೪॥

ಭೀಷ್ಮ ದ್ರೋಣ ಪ್ರಮುಖತ ಸ್ಸರ್ವೇಷಾಂಚ
ಮಹೀಕ್ಷಿತಾಂ । ಉವಾಚ ಪಾರ್ಥ ಪಶ್ಯೈತಾನ್ ಸ
ಮವೇತಾನ್ ಕುರೂ ನಿತಿ ॥ ॥೨೫॥

ಪ॥ ಏವಂ - ಉಕ್ತಃ - ಹೃಷೀಕೇಶಃ - ಗುಡಾಕೇಶೇನ - ಭಾರತ । ಸೇನಯೋಃ - ಉಭಯೋಃ - ಮಧ್ಯೇ - ಸ್ಥಾಪಯಿತ್ವಾ - ರಥೋತ್ತಮಂ ॥ ಭೀಷ್ಮದ್ರೋಣಪ್ರಮುಖತಃ - ಸರ್ವೇಷಾಂ - ಚ - ಮಹೀಕ್ಷಿತಾಂ । ಉವಾಚ - ಪಾರ್ಥ - ಪಶ್ಯ - ಏತಾನ್ -

ಸಮವೇತಾನ್ - ಕುರೂನ್ - ಇತಿ ॥ ಸಂಜಯನು ಹೇಳುವನು.

ಅ॥ ಹೇ ಭಾರತ - ಎಲೈ ಭರತಕುಲದೊಳು ಪುಟ್ಟಿದ ಧೃತರಾಷ್ಟ್ರನೆ, ಏವಂ - ಈಮೇರಿಗೆ, (೧) ಗುಡಾಕೇಶೇನ - ಅರ್ಜುನನಿಂದ, ಉಕ್ತಃ - ಹೇಳಲ್ಪಟ್ಟ, ಹೃಷೀಕೇಶಃ - ಶ್ರೀಕೃಷ್ಣನು, ಸರ್ವೇಷಾಂ - ಸಮಸ್ತರಾದ, ಮಹೀಕ್ಷಿತಾಂಚ - ಅರಸುಗಳ, ಉಭಯೋಃ - ಎರಡಾದ, ಸೇನಯೋಃ, ಸೈನ್ಯಗಳ, ಮಧ್ಯೇ - ಮಧ್ಯಭಾಗದಲ್ಲಿ, ಭೀಷ್ಮದ್ರೋಣಪ್ರಮುಖತಃ - ಭೀಷ್ಮಾಚಾರ್ಯ ದ್ರೋಣಾಚಾರ್ಯರ ಮುಂಭಾಗದಲ್ಲಿ, ರಥೋತ್ತಮಂ - ಶ್ರೇಷ್ಠವಾದ ರಥವನ್ನು, ಸ್ಥಾಪಯಿತ್ವಾ - ನಿಲ್ಲಿಸಿ, ಹೇ ಪಾರ್ಥ - ಎಲೈ ಕುಂತೀಪುತ್ರನಾದ ಅರ್ಜುನನೇ, ಸಮವೇತಾನ್ - ಯುದ್ಧರಂಗದೊಳು ಸೇರಿರುವ, ಏತಾನ್ - ಈ, ಕುರೂನ್ - ಕುರುರಾಜರನ್ನು, ಪಶ್ಯ - ನೋಡು, ಇತಿ - ಹೀಗೆಂದು, ಉವಾಚ - ನುಡಿದನು. (೧) ನಿದ್ರೆಯನ್ನು ಜೈಸಿದವನು. ॥೨೪॥ ॥೨೫॥

(ರಾ-ಭಾ) ತರುವಾಯ ಯುದ್ಧಮಾಡುವದಾಗಿ ನಿಂತಿರುವ ದುರ್ಯೋಧನಾದಿಗಳಂ ನೋಡಿ, ಲಂಕಾದಹನಮಾಡಿದ ಆಂಜನೇಯಧ್ವಜನಾದ ಅರ್ಜುನನು ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸು, ಇವುಗಳಿಗೆ ನಿಧಿಯಾಗಿ, ಸಂಕಲ್ಪಮಾತ್ರದಿಂದ ಜಗತ್ತಿನ ಸೃಷ್ಟಿ ಸ್ಥಿತಿಲಯಗಳಂ ಮಾಡುವವನಾಗಿ, ಸರ್ವಪ್ರಾಣಿಗಳ ಅಂತಃಕರಣ ಬಹಿಃಕರಣಗಳಿಗೆ ಸರ್ವ ಪ್ರಕಾರದಿಂದ ನಿಯಾಮಕನಾಗಿ, ಆಶ್ರಿತರೊಳಿರುವ ಪ್ರೇಮವೆಂಬ ಬಲೆಯೊಳು ಸಿಲುಕಿರುವವನಾಗಿರುವದರಿಂದ ತನ್ನ ಸಾರಥಿಕಾರ್ಯದೊಳಿರುವ ಶ್ರೀಕೃಷ್ಣಮೂರ್ತಿಯನ್ನು ಕುರಿತು, ಎಲೈ ಆಪದ್ಬಂಧುವಾದ ಸ್ವಾಮಿಯೇ, ಯುದ್ಧಮಾಡುವಿಚ್ಛೆಯಿಂದ ನಿಂತಿರುವ ಈ ಬಂಧುಜನಗಳನ್ನು ಕ್ರಮವಾಗಿ ಏಕಕಾಲದೊಳು ನೋಡಲು ಯೋಗ್ಯವಾಗುವಂತಹ ಪ್ರದೇಶದೊಳು ರಥವಂ ನಿಲಿಸೆಂದು ಪ್ರೇರೇಪಿಸಿದನು. ಪಾರ್ಥನಿಂದ ಪ್ರೇರಿತನಾದ ಪರಮಪುರುಷನು, ಭೀಷ್ಮಾಚಾರ್ಯ ದ್ರೋಣಾಚಾರ್ಯರೇ ಮುಂತಾದ ಸರ್ವಭೂಪಾಲಕರೂ ನೋಡುತ್ತಿರಲಾಗಿ ತತ್ಕ್ಷಣದೊಳು ಆತನ ಇಷ್ಟಾನುಸಾರವಾಗಿ ಯೋಗ್ಯವಾದ ಸ್ಥಾನದೊಳು ರಥವಂ ನಿಲ್ಲಿಸಿ, ಎಲೈ ಧನಂಜಯನೆ! ನಿನ್ನ ಜ್ಞಾತಿಗಳ ವಿಜಯಾಭಿಲಾಷೆಯು ಈವರೆಗೆ ಸಮಸ್ತ ಬಂಧುಗಳನ್ನು ಯಮಸದನಾತಿಥಿಗಳನ್ನಾಗಿ ಮಾಡಲು ಬದ್ಧಾದರದಿಂದಿರುವದೆಂತಲೂ ಹೇಳಿದನು (೨೦—೨೫)

ತತ್ರಾಪಶ್ಯತ್ ಸ್ಥಿತಾನ್ ಪಾರ್ಥಃ ಪಿತೄನಥ ಪಿ
ತಾಮಹಾನ್। ಆಚಾರ್ಯಾನ್ ಮಾತುಲಾನ್ ಭ್ರಾತೄನ್
ಪುತ್ರಾನ್ ಪೌತ್ರಾನ್ ಸಖೀಂಸ್ತಥಾ ॥ ಶ್ವಶುರಾನ್
ಸುಹೃದಶ್ಚೈವ ಸೇನಯೋರುಭಯೋರಪಿ॥೨೬॥

ಪ। ತತ್ರ – ಅಪಶ್ಯತ್ – ಸ್ಥಿತಾನ್ – ಪಾರ್ಥಃ – ಪಿತೄನ್ – ಅಥ – ಪಿತಾಮಹಾನ್ – ಆಚಾರ್ಯಾನ್ – ಮಾತುಲಾನ್ – ಭ್ರಾತೄನ್ – ಪುತ್ರಾನ್ – ಪೌತ್ರಾನ್ – ಸಖೀನ್ – ತಥಾ – ಶ್ವಶುರಾನ್ – ಸುಹೃದಃ – ಚ – ಏವ – ಸೇನಯೋಃ – ಉಭಯೋಃ – ಅಪಿ ।

ಅ। ತತ್ರ – ಆ ಯುದ್ಧರಂಗದಲ್ಲಿ, ಉಭಯೋಃ – ಎರಡಾದ, ಸೇನಯೋರಪಿ – ಸೈನ್ಯಗಳಲ್ಲಿಯೂ, ಸ್ಥಿತಾನ್ – ಇರುವ, ಪಿತೄನ್ – ಚಿಕ್ಕಪ್ಪ ದೊಡ್ಡಪ್ಪಂದಿರನ್ನೂ, ಅಥ – ಅನಂತರದಲ್ಲಿ, ಪಿತಾಮಹಾನ್ – ತಾತಂದಿರನ್ನೂ, ಆಚಾರ್ಯಾನ್ – ವೇದಶಾಸ್ತ್ರಾರ್ಥಗಳಂ ತನಗೆ ಉಪದೇಶ ಮಾಡಿದವರನ್ನು, ಮಾತುಲಾನ್ – ಸೋದರಮಾವಂದಿರನ್ನು, ಭ್ರಾತೄನ್ – ಒಡಹುಟ್ಟಿದವನನ್ನು, ಮಾತುಲಾನ್ – ಸೋದರಮಾವಂದಿರನ್ನು, ಭ್ರಾತೄನ್ – ಒಡಹುಟ್ಟಿದವರನ್ನು, ಪುತ್ರಾನ್ – ಮಕ್ಕಳನ್ನು, ತಥಾ – ಹಾಗೆಯೆ, ಸಖೀನ್ – ಮಿತ್ರರನ್ನು. ಶ್ವಶುರಾನ್ – ಮಾವಂದಿರನ್ನು, ಸುಹೃದಶ್ಚೈವ – ತನಗೆ ಉಪಕಾರಮಾಡಿದ ಆಪ್ತರನ್ನೂ ಕೂಡ, ಪಾರ್ಥಃ – ಅರ್ಜುನನು, ಅಪಶ್ಯತ್ – ನೋಡಿದನು. ॥೨೬॥

ತಾನ್ ಸಮೀಕ್ಷ್ಯ ಸ ಕೌಂತೇಯಃ ಸರ್ವಾನ್ ಬಂ
ಧೂನವಸ್ಥಿತಾನ್। ಕೃಪಯಾ ಪರಯಾವಿಷ್ಟೋ
ವಿಷೀದನ್ನಿದಮಬ್ರವೀತ್॥ ॥೨೭॥

ಪ। ತಾನ್ – ಸಮೀಕ್ಷ್ಯ – ಸಃ – ಕೌಂತೇಯಃ – ಸರ್ವಾನ್ – ಬಂಧೂನ್ – ಅವಸ್ಥಿತಾನ್ । ಕೃಪಯಾ – ಪರಯಾ – ಆವಿಷ್ಟಃ – ವಿಷೀದನ್ – ಇದಂ – ಅಬ್ರವೀತ್ ।

ಅ। ಕೌಂತೇಯಃ – ಕುಂತೀಪುತ್ರನಾದ, ಸಃ – ಆ ಅರ್ಜುನನು, ಅವಸ್ಥಿತಾನ್ – ಯುದ್ಧಭೂಮಿಯೊಳು ನಿಂತಿರುವ, ತಾನ್ – ಆ, ಸರ್ವಾನ್ – ಸಮಸ್ತರಾದ, ಬಂಧೂನ್ – ನೆಂಟರನ್ನು, ಸಮೀಕ್ಷ್ಯ – ನೋಡಿ, ಪರಯಾ – ಹೆಚ್ಚಾದ, ಕೃಪಯಾ – ಕರುಣೆಯಿಂದ, ಆವಿಷ್ಟಃ – ವ್ಯಾಪ್ತನಾದುದರಿಂದಲೆ, ವಿಷೀದನ್ – ವ್ಯಸನಪಡುವನಾಗಿ, ಇದಂ – ಈ ಮುಂದೆ ಹೇಳುವ ವಚನವನ್ನು, ಅಬ್ರವೀತ್ – ನುಡಿದನು. ॥೨೭॥

ಅರ್ಜುನ ಉವಾಚ॥ ದೃಷ್ಟ್ವೇಮಂ ಸ್ವಜನಂ ಕೃಷ್ಣ
ಯುಯುತ್ಸುಂ ಸಮುಪಸ್ಥಿತಂ ॥ ಸೀದಂತಿ ಮಮ
ಗಾತ್ರಾಣಿ ಮುಖಂ ಚ ಪರಿಶುಷ್ಯತಿ॥ ॥೨೮॥

ಪ॥ ದೃಷ್ಟ್ವಾ - ಇಮಂ - ಸ್ವಜನಂ - ಕೃಷ್ಣ - ಯುಯುತ್ಸುಂ - ಸಮುಪಸ್ಥಿತಂ - ಸೀದಂತಿ - ಮಮ - ಗಾತ್ರಾಣಿ - ಮುಖಂ - ಚ - ಪರಿಶುಷ್ಯತಿ॥

**ಅರ್ಜುನನು ಹೇಳುವದು.**

ಅ॥ ಹೇ ಕೃಷ್ಣ - ಎಲೈ ಶ್ರೀಕೃಷ್ಣಮೂರುತಿಯೆ, ಯುಯುತ್ಸುಂ - ಯುದ್ಧಮಾಡಲಿಚ್ಛೈಸಿದ್ದಾಗಿ, ಸಮುಪಸ್ಥಿತಂ - ಬಂದುನಿಂತಿರುವ, ಇಮಂ - ಈ, ಸ್ವಜನಂ - ಬಂಧುಜನವನ್ನು, ದೃಷ್ಟ್ವಾ - ನೋಡಿ, ಮಮ - ನನ್ನ, ಗಾತ್ರಾಣಿ - ಅಂಗಗಳು, ಸೀದಂತಿ - ಕುಗ್ಗಿಹೋಗುತ್ತವೆ, ಮುಖಂಚ - ಬಾಯಿಯುಕೂಡ, ಪರಿಶುಷ್ಯತಿ - ಒಣಗುತ್ತದೆ ॥೨೮॥

ವೇಪಥುಶ್ಚ ಶರೀರೇ ಮೇ ರೋಮಹರ್ಷಶ್ಚ ಜಾ
ಯತೇ ॥ ಗಾಂಡೀವಂ ಸ್ರಂಸತೇ ಹಸ್ತಾತ್ ತ್ವಕ್ಚೈವ
ಪರಿದಹ್ಯತೇ ॥೨೯॥

ಪ॥ ವೇಪಥುಃ - ಚ - ಶರೀರೇ - ಮೇ - ರೋಮಹರ್ಷಃ - ಚ - ಜಾಯತೇ । ಗಾಂಡೀವಂ - ಸ್ರಂಸತೇ - ಹಸ್ತಾತ್ - ತ್ವಕ್ - ಚ - ಏವ - ಪರಿದಹ್ಯತೇ॥

ಅ॥ ಮೇ - ನನ್ನ, ಶರೀರೇ - ಅಂಗದಲ್ಲಿ, ವೇಪಥುಶ್ಚ - ನಡುಗುವಿಕೆಯು, ರೋಮಹರ್ಷಶ್ಚ - ರೋಮಾಂಚವೂಕೂಡ, ಜಾಯತೇ - ಹುಟ್ಟುತ್ತದೆ, ಹಸ್ತಾತ್ - ಕರದ್ದೆಸೆಯಿಂದ, ಗಾಂಡೀವಂ - ಗಾಂಡೀವವೆಂಬ ಬಿಲ್ಲು, ಸ್ರಂಸತೇ - ಜಾರುತ್ತದೆ, ತ್ವಕ್ಚೈವ - ಚರ್ಮವೂಕೂಡ, ಪರಿದಹ್ಯತೇ - ಸುಡಲ್ಪಡುತ್ತದೆ. ॥೨೯॥

ನ ಚ ಶಕ್ನೋಮ್ಯವಸ್ಥಾತುಂ ಭ್ರಮತೀವ ಚ
ಮೇ ಮನಃ ॥೩೦॥ ನಿಮಿತ್ತಾನಿ ಚ ಪಶ್ಯಾಮಿ ವಿಪರೀ
ತಾನಿ ಕೇಶವ। ನಚಶ್ರೇಯೋಽನುಪಶ್ಯಾಮಿ ಹತ್ವಾ
ಸ್ವಜನಮಾಹವೇ ॥ ॥೩೧॥

ಪ॥ ನಚ - ಶಕ್ನೋಮಿ - ಅವಸ್ಥಾತುಂ - ಭ್ರಮತಿ - ಇವ - ಚ - ಮೇ - ಮನಃ । ನಿಮಿತ್ತಾನಿ - ಚ - ಪಶ್ಯಾಮಿ - ವಿಪರೀತಾನಿ - ಕೇಶವ ॥ ನ-ಚ- ಶ್ರೇಯಃ- ಅನುಪಶ್ಯಾಮಿ- ಹತ್ವಾ - ಸ್ವಜನಂ - ಆಹವೇ ॥

ಅ॥ ಅವಸ್ಥಾತುಂ - ನಿಲ್ಲುವದಕ್ಕೆ, ನಚಶಕ್ನೋಮಿ - ಶಕ್ತನಾಗುವದಿಲ್ಲವು, ಮೇ - ನನ್ನ, ಮನಃ - ಮನವು, ಭ್ರಮತೀವಚ - ಸುತ್ತುಮತ್ತಿರ್ಪದು, ಹೆ ಕೇಶವ-ಎಲೈ ಶ್ರೀಕೃಷ್ಣನೇ, ವಿಪರೀತಾನಿ - ಕೇಡನ್ನು ಸೂಚಿಸುವ, ನಿಮಿತ್ತಾನಿ- ಗುರುತುಗಳನ್ನು, ಪಶ್ಯಾಮಿ -ನೋಡುವೆನು, ಆಹವೇ - ಕದನದಲ್ಲಿ, ಸ್ವಜನಂ- ಬಂಧುವರ್ಗವನ್ನು, ಹತ್ವಾ - ಕೊಂದು, ಶ್ರೇಯಶ್ಚ - ಏಳಿಗೆಯನ್ನು ಕೂಡ, ನಾನುಪಶ್ಯಾಮಿ- ಅರಿಯಲಾರೆನು. ॥೩೧॥

ನಕಾಂಕ್ಷೇ ವಿಜಯಂ ಕೃಷ್ಣ ನಚರಾಜ್ಯಂ ಸು

ಖಾನಿಚ । ಕಿಂನೋ ರಾಜ್ಯೇನ ಗೋವಿಂದ ಕಿಂ

ಭೋಗೈ ರ್ಜೀವಿತೇನವಾ ॥ ॥೩೨॥

ಯೇಷಾಮರ್ಥೇ ಕಾಂಕ್ಷಿತಂ ನೋರಾಜ್ಯಂ ಭೋ

ಗಾ ಸ್ಸುಖಾನಿಚ । ತಇಮೇಽವಸ್ಥಿತಾ ಯುದ್ಧೇ

ಪ್ರಾಣಾಂ ಸ್ತ್ಯಕ್ತ್ವಾ ಧನಾನಿ ಚ ॥ ॥೩೩॥

ಪ॥ ನ - ಕಾಂಕ್ಷೇ - ವಿಜಯಂ - ಕೃಷ್ಣ - ನ-ಚ - ರಾಜ್ಯಂ - ಸುಖಾನಿ-ಚ । ಕಿಂ - ನಃ - ರಾಜ್ಯೇನ - ಗೋವಿಂದ - ಕಿಂ - ಭೋಗೈಃ - ಜೀವಿತೇನ - ವಾ ॥ ಯೇಷಾಂ ಅರ್ಥೇ - ಕಾಂಕ್ಷಿತಂ - ನಃ - ರಾಜ್ಯಂ - ಭೋಗಾಃ - ಸುಖಾನಿ-ಚ । ತೇ - ಇಮೇ - ಅವಸ್ಥಿತಾಃ - ಯುದ್ಧೇ - ಪ್ರಾಣಾನ್ - ತ್ಯಕ್ತ್ವಾ - ಧನಾನಿ - ಚ ॥

ಅ॥ ಹೇ ಕೃಷ್ಣ - ಎಲೈ ಸ್ವಾಮಿಯೆ, ವಿಜಯಂ- ಜಯವನ್ನು, ನಕಾಂಕ್ಷೇ-ಕೋರುವುದಿಲ್ಲವು, ರಾಜ್ಯಂ - ಒಳ್ಳಿಕೆಯನ್ನು, ಸುಖಾನಿಚ- ಸೌಖ್ಯಗಳನ್ನು, ( ನಚಕಾಂಕ್ಷೇ - ಕೋರುವುದಿಲ್ಲವು,) ಹೇ ಗೋವಿಂದ-ಗೋವುಗಳನ್ನು ಸಂತೋಷಪಡಿಸಿದ ಎಲೈ ಸ್ವಾಮಿಯೆ, ನಃ - ನಮಗೆ, ರಾಜ್ಯೇನ-ಆಳ್ವಿಕೆಯಿಂದ, ಕಿಂ - ಏನುಫಲವು, ಭೋಗೈಃ - ಸುಖಗಳಿಂದ, ಕಿಂ - ಏನುಪ್ರಯೋಜನವು, ಜೀವಿತೇನವಾ- ಬದುಕುವಿಕೆಯಿಂದಲಾದರೆ, ಕಿಂ - ಏನುಪುರುಷಾರ್ಥವು, ಯೇಷಾಮರ್ಥೇ - ಯಾರಿಗೋಸ್ಕರ, ರಾಜ್ಯಂ-ಆಳ್ವಿಕೆಯು, ಭೋಗಾಃ - ಸೌಖ್ಯಸಾಮಗ್ರಿಗಳು, ಸುಖಾನಿಚ - ಸುಖಗಳೂ, ನಃ-ನಮ್ಮಿಂದ, ಕಾಂಕ್ಷಿತಂ - ಬಯಸಲ್ಪಟ್ಟಿತೊ, ತಇಮೇ - ಅವೆ ಇವರ್ಗಳು, ಪ್ರಾಣಾನ್- ಪ್ರಾಣಗಳಲ್ಲಿ ಆಸೆಯನ್ನು, ಧನಾನಿಚ-ಐಶ್ವರ್ಯಗಳನ್ನು, ತ್ಯಕ್ತ್ವಾ-ಬಿಟ್ಟು, ಯುದ್ಧೇ-ರಣಭೂಮಿಯಲ್ಲಿ, ಅವಸ್ಥಿತಾಃ-(ದೇಹತ್ಯಾಗವಮಾಡಲು ಸಿದ್ಧರಾಗಿ) ನಿಂತಿರುವರು. ॥೩೨।೩೩॥

ಆಚಾರ್ಯಾಃ ಪಿತರಃ ಪುತ್ರಾ ಸ್ತಥೈವ ಚ ಪಿತಾ
ಮಹಾಃ । ಮಾತುಲಾ ಶ್ಶ್ವಶುರಾಃ ಪೌತ್ರಾ ಶ್ಶ್ಯಾ
ಲಾ ಸ್ಸಂಬಂಧಿನ ಸ್ತಥಾ॥ ॥೩೪॥

ಪ॥ ಆಚಾರ್ಯಾಃ - ಪಿತರಃ - ಪುತ್ರಾಃ - ತಥಾ - ಏವ - ಚ - ಪಿತಾಮಹಾಃ ।
ಮಾತುಲಾಃ - ಶ್ವಶುರಾಃ - ಪೌತ್ರಾಃ - ಶ್ಯಾಲಾಃ - ಸಂಬಂಧಿನಃ - ತಥಾ ॥

ಅ॥ ಆಚಾರ್ಯಾಃ - ಆಚಾರ್ಯರು, ಪಿತರಃ - ಹಿರಿಯಪ್ಪ ಕಿರಿಯಪ್ಪಂದಿರು, ಪುತ್ರಾಃ - ಕುಮಾರರು, ತಥೈವಚ - ಹಾಗೆಯೆ, ಪಿತಾಮಹಾಃ - ತಾತಂದಿರು, ಮಾತುಲಾಃ - ಸೋದರಮಾವಂದಿರು, ಶ್ವಶುರಾಃ - ಮಾವಂದಿರು, ಪೌತ್ರಾಃ - ಮೊಮ್ಮಕ್ಕಳು, ಶ್ಯಾಲಾಃ - ಭಾವಮೈದುನದಿರು, ತಥಾ - ಹಾಗೆಯೆ, ಸಂಬಂಧಿನಃ - ಬಂಧುಗಳು, ॥ ೩೪ ॥

ಏತಾ ನ್ನ ಹಂತು ಮಿಚ್ಛಾಮಿ ಘ್ನತೋಽಪಿ ಮಧು
ಸೂದನ । ಅಪಿ ತ್ರೈಲೋಕ್ಯ ರಾಜ್ಯಸ್ಯ ಹೇತೋಃ
ಕಿಂ ನು ಮಹೀಕೃತೇ॥ ॥೩೫॥

ಪ॥ ಏತಾನ್ - ನ - ಹಂತುಂ - ಇಚ್ಛಾಮಿ - ಘ್ನತಃ - ಅಪಿ - ಮಧುಸೂದನ
ಅಪಿ - ತ್ರೈಲೋಕ್ಯರಾಜ್ಯಸ್ಯ - ಹೇತೋಃ - ಕಿಂ - ನು - ಮಹೀಕೃತೇ ॥

ಅ॥ ಹೇ ಮಧುಸೂದನ - ಮಧುವೆಂಬ ರಾಕ್ಷಸನನ್ನುಕೊಂದ ಎಲೈ ಸ್ವಾಮಿಯೆ, ಘ್ನತೋಽಪಿ - ನಮ್ಮನ್ನು ಕೊಲ್ಲುವವರಾದರೂ, ಏತಾನ್ - ಈ ದುರ್ಯೋಧನಾದಿಗಳನ್ನು, ತ್ರೈಲೋಕ್ಯರಾಜ್ಯಸ್ಯ - ತ್ರೈಲೋಕಾಧಿಪತ್ಯದ, ಹೇತೋರಪಿ - ಕಾರಣದ್ದೆಸೆಯಿಂದಲೂ ಕೂಡ, ಹಂತುಂ - ಕೊಲ್ಲುವುದಕ್ಕೆ, ನೇಚ್ಛಾಮಿ - ಅಪೇಕ್ಷಿಸುವುದಿಲ್ಲವು, ಮಹೀಕೃತೆ - ಈ ಸ್ವಲ್ಪಭೂಮಿಗೋಸ್ಕರ, ಕಿಂನು - ಕೊಲ್ಲುವುದಿಲ್ಲವೆಂದು ಹೇಳತಕ್ಕದ್ದೇನು. ॥೩೫॥

ನಿಹತ್ಯ ಧಾರ್ತರಾಷ್ಟ್ರಾ ನ್ನಃ ಕಾ ಪ್ರೀತಿ ಸ್ಸ್ಯಾ
ಜ್ಜನಾರ್ದನ । ಪಾಪ ಮೇವಾ ಶ್ರಯೇ ದಸ್ಮಾನ್
ಹತ್ವೈ ತಾ ನಾತತಾಯಿನಃ ॥ ॥೩೬॥

ಪ|| ನಿಹತ್ಯ – ಧಾರ್ತರಾಷ್ಟ್ರಾನ್ – ನಃ – ಕಾ – ಪ್ರೀತಿಃ – ಸ್ಯಾತ್–ಜನಾರ್ದನ | ಪಾಪಂ – ಏವ – ಆಶ್ರಯೇತ್–ಅಸ್ಮಾನ್ – ಹತ್ವಾ – ಏತಾನ್–ಆತತಾಯಿನಃ||

ಅ|| ಹೇ ಜನಾರ್ದನ – ಪ್ರಳಯಕಾಲದೊಳು ಜನಗಳ ಬಾಧಿಸುವಂಥ ಶ್ರೀ ಕೃಷ್ಣನೆ, ಧಾರ್ತರಾಷ್ಟ್ರಾನ್ – ಧೃತರಾಷ್ಟ್ರಪುತ್ರರನ್ನು, ನಿಹತ್ಯ– ಕೊಂದು, ನಃ– ನಮಗೆ, ಕಾ – ಯಾವ, ಪ್ರೀತಿಃ – ಸಂತೋಷವು, ಸ್ಯಾತ್ – ಆದೀತು, ಆತತಾಯಿನಃ – ಸಮಸ್ತಬಂಧುಗಳನ್ನು ಕೊಲ್ಲಲು ಪ್ರಯತ್ನಪಟ್ಟಿರುವ, ಏತಾನ್– ಈ ದುರ್ಯೋಧನಾದಿಗಳನ್ನು, ಹತ್ವಾ – ಕೊಂದರೆ, ಅಸ್ಮಾನ್ – ನಮ್ಮನ್ನು, ಪಾಪಮೇವ – ಪಾತಕವೆ, ಆಶ್ರಯೇತ್ – ಸೇರುವದು. ||೩೬||

ತಸ್ಮಾನ್ನಾರ್ಹಾ ವಯಂ ಹಂತುಂ ಧಾರ್ತರಾ
ಷ್ಟ್ರಾನ್ ಸಬಾಂಧವಾನ್ | ಸ್ವಜನಂ ಹಿ ಕಥಂ ಹತ್ವಾ
ಸುಖಿನಃ ಸ್ಯಾಮ ಮಾಧವ || ||೩೭||

ಪ| ತಸ್ಮಾತ್ – ನ – ಅರ್ಹಾಃ – ವಯಂ – ಹಂತುಂ –ಧಾರ್ತರಾಷ್ಟ್ರಾನ್– ಸಬಾಂಧವಾನ್ | ಸ್ವಜನಂ– ಹಿ– ಕಥಂ– ಹತ್ವಾ– ಸುಖಿನಃ– ಸ್ಯಾಮ–ಮಾಧವ ||

ಅ | ತಸ್ಮಾತ್– ಆಕಾರಣದ್ವೇಷಿಯಾದ್ದರಿಂದ, ಸಬಾಂಧವಾನ್ – ಬಂಧುಗಳಿಂದ ಕೂಡಿದ, ಧಾರ್ತರಾಷ್ಟ್ರಾನ್ – ದುರ್ಯೋಧನಾದಿಗಳನ್ನು, ಹಂತುಂ– ಕೊಲ್ಲುವುದಕ್ಕೆ, ವಯಂ – ನಾವು, ನಾರ್ಹಾಃ – ಯೋಗ್ಯರಲ್ಲವು, ಹೇ ಮಾಧವ – ಎಲೈ ಶ್ರೀ ಕೃಷ್ಣನೆ, ಸ್ವಜನಂ– ಬಂಧುಜನವನ್ನು, ಹತ್ವಾ–ಕೊಂದು, ಕಥಂ–ಹ್ಯಾಗೆ, ಸುಖಿನಃ–ಸೌಖ್ಯವುಳ್ಳವರು, ಸ್ಯಾಮ – ಆಗುವೆವು. ||೩೭||

ಯದ್ಯಪ್ಯೇತೇ ನಪಶ್ಯಂತಿ ಲೋಭೋಪಹತ ಚೇ
ತಸಃ | ಕುಲಕ್ಷಯ ಕೃತಂ ದೋಷಂ ಮಿತ್ರದ್ರೋ
ಹೇಚ ಪಾತಕಂ || ||೩೮||

ಪ|| ಯದಿ– ಅಪಿ– ಏತೇ– ನ – ಪಶ್ಯಂತಿ – ಲೋಭೋಪಹತಚೇತಸಃ | ಕುಲಕ್ಷಯಕೃತಂ – ದೋಷಂ– ಮಿತ್ರದ್ರೋಹೇ– ಚ– ಪಾತಕಂ ||

ಅ|| ಹೇ ಜನಾರ್ದನ– ಎಲೈ ಶ್ರೀಕೃಷ್ಣಸ್ವಾಮಿಯೆ, ಲೋಭೋಪಹತಚೇತಸಃ– ದುರಾಶೆಯಿಂದ ಆವರಿಸಲ್ಪಟ್ಟ ಮನಸ್ಸುಳ್ಳ, ಏತೇ – ಈ ದುರ್ಯೋಧನಾದಿಗಳು, ಕು

ಲಕ್ಷಯಕೃತಂ – ವಂಶನಾಶದಿಂದ ಮಾಡಲ್ಪಟ್ಟ, ದೋಷಂ-ಪಾಪವನ್ನು, ಮಿತ್ರದ್ರೋ ಹೇ- ಸ್ನೇಹಿತರಿಗೆ ಕೇಡಕುಮಾಡುವದರಲ್ಲಿ ಉಂಟಾಗುವ, ಪಾತಕಂಚ- ಪಾಪವನ್ನೂ, ಯದ್ಯಪಿ – ಹ್ಯಾಗೂ, ನಪಶ್ಯಂತಿ- ನೋಡುವದಿಲ್ಲವು. ||೩೮||

ಕಥಂ ನಜ್ಞೇಯಮಸ್ಮಾಭಿಃ ಪಾಪಾ ದಸ್ಮಾನ್ನಿ ವರ್ತಿತುಂ । ಕುಲಕ್ಷಯಕೃತಂ ದೋಷಂ ಪ್ರಪಶ್ಯ ದ್ಭಿ ರ್ಜನಾರ್ದನ ॥ ||೩೯||

ಪ॥ ಕಥಂ- ನ- ಜ್ಞೇಯಂ- ಅಸ್ಮಾಭಿಃ-ಪಾಪಾತ್- ಅಸ್ಮಾತ್-ನಿವರ್ತಿತುಂ । ಕುಲಕ್ಷಯಕೃತಂ, ದೋಷಂ-ಪ್ರಪಶ್ಯದ್ಭಿಃ – ಜನಾರ್ದನ ॥

ಅ॥ ಹೇ ಜನಾರ್ದನ- ಎಲೈ ಸ್ವಾಮಿಯೆ, ಕುಲಕ್ಷಯಕೃತಂ – ವಂಶನಾಶದಿಂದ ಮಾಡಲ್ಪಡುವ, ದೋಷಂ – ಪಾಪವನ್ನು, ಪ್ರಪಶ್ಯದ್ಭಿಃ – ತಿಳಿಯುತಲಿರುವ, ಅಸ್ಮಾಭಿಃ – ನಮ್ಮಿಂದ, ಅಸ್ಮಾತ್ – ಈ, ಪಾಪಾತ್ – ಪಾತಕವದರಿಂದ, ನಿವರ್ತಿತುಂ – ಹಿಂತಿರುಗುವುದಕ್ಕೆ, ಕಥಂ – ಹ್ಯಾಗೆ, ನಜ್ಞೇಯಂ – ತಿಳಿಯಲ್ಪಡದೆ ಇರ ತಕ್ಕದ್ದು. ||೩೯||

ಕುಲಕ್ಷಯೇ ಪ್ರಣಶ್ಯಂತಿ ಕುಲಧರ್ಮಾ ಸ್ಸನಾತ ನಾಃ । ಧರ್ಮೇ ನಷ್ಟೇ ಕುಲಂ ಕೃತ್ಸ್ನ ಮಧರ್ಮೋ ಽಭಿಭವತ್ಯುತ ॥ ||೪೦||

ಪ। ಕುಲಕ್ಷಯೆ- ಪ್ರಣಶ್ಯಂತಿ- ಕುಲಧರ್ಮಾಃ- ಸನಾತನಾಃ । ಧರ್ಮೆ ನಷ್ಟೆ- ಕುಲಂ- ಕೃತ್ಸ್ನಂ, ಅಧರ್ಮಃ- ಅಭಿಭವತಿ- ಉತ ॥

ಅ। ಕುಲಕ್ಷಯೆ (ಸತಿ)-ವಂಶನಾಶವಾಗುತಿರಲಾಗಿ, ಸನಾತನಾಃ- ಶಾಶ್ವತಗಳಾಗಿರುವ, ಕುಲಧರ್ಮಾಃ – ವಂಶಾನುಕ್ರಮವಾಗಿ ಬಂದ ಧರ್ಮಗಳು, ಪ್ರಣಶ್ಯಂತಿ- ನಾಶವಾಗುವವು, ಧರ್ಮೆ – ಆ ಕುಲಧರ್ಮವು, ನಷ್ಟೇ (ಸತಿ)–ನಾಶವಾಗುತ್ತಿರಲಾಗಿ; ಕೃತ್ಸ್ನಂ – ಸಮಗ್ರವಾದ, ಕುಲಂ- ವಂಶವನ್ನು, ಅಧರ್ಮಃ – ನಿಷಿದ್ಧವಾದ ಧರ್ಮವು, ಅಭಿಭವತ್ಯುತ- ತಿರಸ್ಕರಿಸುವುದಲ್ಲವೆ ||೪೦||

ಅಧರ್ಮಾಭಿಭವಾ ತ್ಕೃಷ್ಣ ಪ್ರದುಷ್ಯಂತಿ ಕುಲ ಸ್ತ್ರಿಯಃ । ಸ್ತ್ರೀಷುದುಷ್ಟಾಸು ವಾರ್ಷ್ಣೇಯ ಜಾ ಯತೇ ವರ್ಣಸಂಕರಃ ॥ ||೪೧||

ಪ॥ ಅಧರ್ಮಾಭಿಭವಾತ್, ಕೃಷ್ಣ, ಪ್ರದುಷ್ಯಂತಿ, ಕುಲಸ್ತ್ರಿಯಃ । ಸ್ತ್ರೀಷು, ದುಷ್ಟಾಸು, ವಾರ್ಷ್ಣೇಯ, ಜಾಯತೇ, ವರ್ಣಸಂಕರಃ॥

ಅ॥ ವಾರ್ಷ್ಣೇಯ – ವೃಷ್ಣಿಕುಲದೊಳುಪುಟ್ಟಿದ, ಹೇ ಕೃಷ್ಣ– ಎಲೈ ಶ್ರೀಕೃಷ್ಣಸ್ವಾಮಿಯೆ, ಅಧರ್ಮಾಭಿಭವಾತ್ – ಪಾಪರೂಪವಾದ ನಿಷಿದ್ಧಧರ್ಮವು ಕುಲವನ್ನು ಆಕ್ರಮಿಸಿಕೊಂಡಿರುವುದರಿಂದ, ಕುಲಸ್ತ್ರಿಯಃ – ಕುಲಾಂಗನೆಯರು, ಪ್ರದುಷ್ಯಂತಿ– ಕೆಡುವರು, ಸ್ತ್ರೀಷು– ನಾರಿಯರು, ದುಷ್ಟಾಸು (ಸತೀಷು)–ಕೆಡುವರಾಗುತ್ತಿರಲಾಗಿ, ವರ್ಣಸಂಕರಃ – ಜಾತಿಸಂಕರವು, ಜಾಯತೇ– ಆಗುವುದು– ।೪೧।

ಸಂಕರೋ ನರಕಾಯೈವ ಕುಲಘ್ನಾನಾಂ ಕುಲಸ್ಯ ಚ । ಪತಂತಿ ಪಿತರೋ ಹ್ಯೇಷಾಂ ಲುಪ್ತಪಿಂಡೋದಕಕ್ರಿಯಾಃ ॥ ॥೪೨॥

ಪ॥ ಸಂಕರಃ–ನರಕಾಯ– ಏವ– ಕುಲಘ್ನಾನಾಂ– ಕುಲಸ್ಯ– ಚ । ಪತಂತಿ–ಪಿತರಃ–ಹಿ– ಏಷಾಂ – ಲುಪ್ತಪಿಂಡೋದಕಕ್ರಿಯಾಃ॥

ಅ॥ ಹಿ– ಯಾವಕಾರಣದಿಂದ, ಏಷಾಂ – ಈ ವರ್ಣಸಂಕರವಾದವರ, ಪಿತರಃ – ಪಿತೃಗಳು, ಲುಪ್ತಪಿಂಡೋದಕಕ್ರಿಯಾಃ – ಲೋಪವಾದ ಪಿಂಡತರ್ಪಣ ಮುಂತಾದ ಕರ್ಮಗಳುಳ್ಳವರಾಗಿ, ಪತಂತಿ – ಬೀಳುತ್ತಾರೆಯೋ, (ತತ್ ಆಕಾರಣಾದ್ದರಿಂದ) ಸಂಕರಃ – ಜಾತಿಸಂಕರವು, ಕುಲಘ್ನಾನಾಂ – ವಂಶನಾಶಮಾಡಿದವರಿಗೂ, ಕುಲಸ್ಯಚ–ಅವರವಂಶಕ್ಕೂ ಕೂಡ, ನರಕಾಯೈವ–ನರಕವನ್ನು ಪೊಂದಿಸುವುದಕ್ಕೇನೆ (ಭವತಿ ಆಗುತ್ತದೆ) ॥೪೨॥

ದೋಷೈರೇತೈಃ ಕುಲಘ್ನಾನಾಂ ವರ್ಣಸಂಕರಕಾರಕೈಃ । ಉತ್ಸಾದ್ಯಂತೇ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ ॥ ॥೪೩॥

ಪ॥ ದೋಷೈಃ –ಏತೈಃ – ಕುಲಘ್ನಾನಾಂ– ವರ್ಣಸಂಕರಕಾರಕೈಃ । ಉತ್ಸಾದ್ಯಂತೇ – ಜಾತಿಧರ್ಮಾಃ – ಕುಲಧರ್ಮಾಃ – ಚ– ಶಾಶ್ವತಾಃ ॥

ಅ॥ ವರ್ಣಸಂಕರಕಾರಕೈಃ – ಜಾತಿಸಂಕರವನ್ನುಂಟುಮಾಡುವ, ಕುಲಘ್ನಾನಾಂ – ವಂಶನಾಶಮಾಡಿದವರ, ಏತೈಃ – ಈ, ದೋಷೈಃ– ಪಾಪಗಳಿಂದ, ಶಾಶ್ವತಾಃ–

ಮಿಶ್ರವಾಗುವಕಾರ್ಯವಾಗಿ ಬಂದ, ಜಾತಿಧರ್ಮಾಃ - ವರ್ಣಾಶ್ರಮ ಧರ್ಮಗಳು, ಕುಲಧರ್ಮಾಶ್ಚ - ಕುಲಾಚಾರಗಳು, ಉತ್ಸಾದ್ಯಂತೇ - ನಾಶಹೊಂದಲ್ಪಡುತ್ತವೆ. ॥೪೩॥

ಉತ್ಸನ್ನ ಕುಲಧರ್ಮಾಣಾಂ ಮನುಷ್ಯಾಣಾಂ ಜ
ನಾರ್ದನ । ನರಕೇ ನಿಯತಂ ವಾಸೋ ಭವತೀ ತ್ಯನು
ಶುಶ್ರುಮ ॥ ॥೪೪॥

ಪ॥ ಉತ್ಸನ್ನಕುಲಧರ್ಮಾಣಾಂ - ಮನುಷ್ಯಾಣಾಂ, ಜನಾರ್ದನ । ನರಕೇ - ನಿಯತಂ - ವಾಸಃ - ಭವತಿ - ಇತಿ - ಅನುಶುಶ್ರುಮ ॥

ಅ॥ ಹೇ ಜನಾರ್ದನ - ಎಲೈ ಶ್ರೀಕೃಷ್ಣನೇ, ಉತ್ಸನ್ನಕುಲಧರ್ಮಾಣಾಂ - ಕುಲಧರ್ಮಗಳನ್ನಗಲಿದ, ಮನುಷ್ಯಾಣಾಂ - ಮನುಜರಿಗೆ, ನರಕೇ - ಹೀನಸ್ಥಾನದೊಳು, ವಾಸಃ - ಇರುವಿಕೆಯು, ಭವತಿ - ಆಗುವುದು, ಇತಿ - ಹೀಗೆಂದು, ಅನುಶುಶ್ರುಮ - ಕೇಳುವೆವು. ॥೪೪॥

ಅಹೋಬತ ಮಹತ್ಪಾಪಂ ಕರ್ತುಂ ವ್ಯವಸಿತಾ
ವಯಂ । ಯದ್ರಾಜ್ಯ ಸುಖಲೋಭೇನ ಹಂತುಂ ಸ್ವ
ಜನ ಮುದ್ಯತಾಃ ॥ ॥೪೫॥

ಪ॥ ಅಹೋ - ಬತ - ಮಹತ್ಪಾಪಂ - ಕರ್ತುಂ - ವ್ಯವಸಿತಾಃ - ವಯಂ । ಯತ್ - ರಾಜ್ಯಸುಖಲೋಭೇನ - ಹಂತುಂ - ಸ್ವಜನಂ - ಉದ್ಯತಾಃ ॥

ಅ॥ ಯತ್ - ಯಾವಕಾರಣದ್ದೆಸೆಯಿಂದ, ರಾಜ್ಯಸುಖಲೋಭೇನ - ಐಶ್ವರ್ಯ, ಸೌಖ್ಯ, ಇವುಗಳೊಳು ಆಸೆಯಿಂದ, ಸ್ವಜನಂ - ಬಂಧುಜನವನ್ನು, ಹಂತುಂ - ಕೊಲ್ಲುವುದಕ್ಕೆ, ಉದ್ಯತಾಃ - ಉದ್ಯುಕ್ತರಾಗಿರುವೆವೋ, ತತ್ - ಆಕಾರಣದ್ದೆಸೆಯಿಂದ, ವಯಂ - ನಾವು, ಮಹತ್ಪಾಪಂ - ಮಹಾಪಾತಕವನ್ನು, ಕರ್ತುಂ - ಮಾಡುವುದಕ್ಕೆ, ವ್ಯವಸಿತಾಃ - ಪ್ರಯತ್ನಪಟ್ಟಿರುವೆವು, ಅಹೋಬತ - ಮಹಾಕಷ್ಟವು, ಅಕಟಕಟ ॥೪೫॥

ಯದಿ ಮಾ ಮಪ್ರತೀಕಾರ ಮಶಸ್ತ್ರಂ ಶಸ್ತ್ರ
ಪಾಣಯಃ । ಧಾರ್ತರಾಷ್ಟ್ರಾ ರಣೇ ಹನ್ಯು ಸ್ತನ್ಮೇ ಕ್ಷೇ
ಮತರಂ ಭವೇತ್ ॥ ॥೪೬॥

ಪ॥ ಯದಿ- ಮಾಂ-ಅಪ್ರತೀಕಾರಂ - ಅಶಸ್ತ್ರಂ- ಶಸ್ತ್ರಪಾಣಯಃ । ಧಾರ್ತ ರಾಷ್ಟ್ರಾಃ- ರಣೇ- ಹನ್ಯುಃ- ತತ್- ಮೇ- ಕ್ಷೇಮತರಂ-ಭವೇತ್ ॥

ಅ॥ ಅಪ್ರತೀಕಾರಂ - ದುರ್ಯೋಧನಾದಿಗಳು ಮಾಡಿದ ಅಪಕಾರಕ್ಕೆ ಪ್ರತ್ಯುಪಕಾರಮಾಡದಿರುವ, ಅಶಸ್ತ್ರಂ - ಆಯುಧವಂ ಪಿಡಿಯದಿರುವ, ಮಾಂ - ನನ್ನನ್ನು, ಶಸ್ತ್ರಪಾಣಯಃ - ಆಯುಧಗಳಂ ಪಿಡಿದಿರುವ, ಧಾರ್ತರಾಷ್ಟ್ರಾಃ - ದುರ್ಯೋಧನಾದಿಗಳು, ರಣೇ - ಯುದ್ಧದಲ್ಲಿ, ಹನ್ಯುರ್ಯದಿ - ಕೊಲ್ಲುವರಾದರೆ, ತತ್ - ಆ ಸಂಹಾರವು, ಮೇ - ನನಗೆ, ಕ್ಷೇಮತರಂ - ಅತ್ಯಂತಹಿತವಾದದ್ದು ಭವೇತ್- ಆದೀತು. ॥೪೬॥

ಸಂಜಯಉವಾಚ ॥ಏವ ಮುಕ್ತ್ವಾಽರ್ಜುನ ಸ್ಸಂ
ಖ್ಯೇ ರಥೋಪಸ್ಥ ಉಪಾವಿಶತ್ । ವಿಸೃಜ್ಯ ಸಶರಂ
ಚಾಪಂ ಶೋಕಸಂವಿಗ್ನಮಾನಸಃ ॥ ॥೪೭॥

ಇತಿ ಶ್ರೀ ಭಗವದ್ಗೀತಾ ಸೂಪನಿಷತ್ಸು ಬ್ರ
ಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀ
ಕೃಷ್ಣಾರ್ಜುನ ಸಂವಾದೇ ಅರ್ಜು
ನವಿಷಾದ ಯೋಗೋನಾಮ
ಪ್ರಥಮೋಽಧ್ಯಾಯಃ.

---

ಸಂಜಯಃ - ಸಂಜಯನು, ಉವಾಚ - ಹೇಳಿದನು.

ಪ॥ ಏವಂ- ಉಕ್ತ್ವಾ - ಅರ್ಜುನಃ- ಸಂಖ್ಯೇ - ರಥೋಪಸ್ಥೇ- ಉಪಾವಿಶತ್ । ವಿಸೃಜ್ಯ - ಸಶರಂ - ಚಾಪಂ - ಶೋಕಸಂವಿಗ್ನಮಾನಸಃ ॥

ಅ॥ ಅರ್ಜುನಃ- ಪಾರ್ಥನು, ಏವಂ-ಹೀಗೆಂದು, ಉಕ್ತ್ವಾ- ಹೇಳಿ, ಶೋಕಸಂವಿಗ್ನಮಾನಸಃ - ದುಃಖದಿಂದ ಭ್ರಮಿಸಲ್ಪಟ್ಟ ಮನಸ್ಸುಳ್ಳವನಾಗಿ, ಸಂಖ್ಯೇ - ಯುದ್ಧದಲ್ಲಿ, ಸಶರಂ - ಬಾಣದಿಂದ ಕೂಡಿರುವ, ಚಾಪಂ - ಬಿಲ್ಲನ್ನು, ವಿಸೃಜ್ಯ - ಬಿಟ್ಟು, ರಥೋಪಸ್ಥೇ- ರಥದಲ್ಲಿ, ಉಪಾವಿಶತ್-ಕುಳಿತಿರ್ದನು. ॥೪೭॥

(ರಾ-ಭಾ) ಸ್ನೇಹಮಾತ್ರದಿಂದ ಬಂಧುಗಳೆನಿಸಿರುವ ಶತ್ರುಗಳನ್ನು ಸಂಹರಿಸಲಿಚ್ಛೆಯಿಲ್ಲದಿರುವದರಿಂದ ಈ ಶತ್ರುವಿಜಯದಿಂ ತ್ರೈಲೋಕ್ಯಾಧಿಪತ್ಯವುಂಟಾಗುವದಾದರೂ ಅದನ್ನೂ ತೃಣಪ್ರಾಯವಾಗಿ ಎಣಿಸಿರುವನಾದದರಿಂದ ಉದಾರವಾದ ಮನಸ್ಸುಳ್ಳವನಾಗಿ, ಶತ್ರುಗಳಿಗೆ ಬಂದದುಃಖವನ್ನೂ ಸಹಿಸದಿರುವಕಾರಣ ಪರಮ ಕರುಣಾಶಾಲಿಯಾಗಿ, ಪಿತೃ ಪಿತಾಮಹ ಆಚಾರ್ಯಮಾತುಲ ಮುಂತಾದ ಅನೇಕಬಂಧುಯುಕ್ತನಾಗಿ, ಆತತಾಯಿಯಾದ ದುರ್ಯೋಧನನ ಪಕ್ಷದೊಳುಸೇಲುಕಿರುವರಾದರೂ ಆಚಾರ್ಯಾದಿಗಳನ್ನು ಹಿಂಸಿಸಕೂಡದೆಂತಲೂ, ಕುಲನಾಶದಿಂದುಂಟಾಗುವ ಅಧರ್ಮ ಪರಂಪರೆಯನ್ನೂ ಊಹಿಸಿ ಯುದ್ಧಕ್ಕೆ ಸಮ್ಮತಿಸದಿರುವ ವಾದದಿಂದಲೂ, ಪರಮಧಾರ್ಮಿಕನಾಗಿ, ಒಡಹುಟ್ಟಿದವರಿಂದ ಮುತ್ತಲ್ಪಟ್ಟವನಾಗಿರುವ ಅರ್ಜುನನಾದರೋ ಎಲೈ ಧೃತರಾಷ್ಟ್ರನೆ ನಿನ್ನಿಂದ ಮಹಾಭಯಂಕರಗಳಾದ ಮರಣವನ್ನುಂಟುಮಾಡುವ ಪ್ರಯತ್ನಗಳಿಂದಲೂ, ಲಾಕ್ಷಾಗೃಹ ದಾಹಾದಿಗಳಿಂದಲೂ, ಬಾರಬಾರಿಗೂ ವಂಚಿಸಲ್ಪಟ್ಟವನಾದರೂ, ಪರಮಪುರುಷನಾದ ಭಗವಂತನನ್ನು ಸಹಾಯವಾಗಿಪಡೆದಿರುವ ತನ್ನಿಂದ ಸಂಹರಿಸಲ್ಪಡುವ ನಿನ್ನ ಪುತ್ರಾದಿಗಳನ್ನು ನೋಡಿ ಬಂಧುಪ್ರೀತಿಯಿಂದಲೂ, ಅತ್ಯಂತವಾದ ಕೃಪೆಯಿಂದಲೂ, ಅಧರ್ಮಭೀತಿಯಿಂದಲೂ, ಬಹಳವಾಗಿ ಕುಗ್ಗಿರುವ ಸರ್ವಾಂಗಗಳುಳ್ಳವನಾಗಿ ಸ್ವಪ್ರಕಾರಗಳಿಂದಲೂ, ನಾನು ಯುದ್ಧಮಾಡುವದಿಲ್ಲವೆಂದು ಹೇಳಿ ಬಂಧುವಿಯೋಗವುಂಟಾಗುವದೆಂಬ ಯೋಚನೆಯಿಂದ ಹುಟ್ಟಿದ ದುಃಖದಿಂದ ಭಗ್ನವಾದ ಮನಸ್ಸುಳ್ಳವನಾಗಿ, ಯುದ್ಧವೆಂಬ ಯಜ್ಞದೊಳು ಮೃತ್ಯುವೆಂಬ ಹವ್ಯವಾಹನನನ್ನು ತೃಪ್ತಿಪಡಿಸಲು ಸ್ರುಕ್ಸ್ರುವದಂತೆ ಸಾಧಕವಾಗಿದ್ದ ಬಾಣಯುಕ್ತವಾದ ಬಿಲ್ಲನ್ನು ಬಿಸಾಟು, ರಥದೊಳು ರಥಿಕನು ಕುಳಿತು ಯುದ್ಧಮಾಡುವ ಸ್ಥಾನವನ್ನುಬಿಟ್ಟು ಮತ್ತೊಂದು ಪ್ರದೇಶದೊಳು ಕೂತಿದ್ದನೆಂದು ಸಂಜಯನು ಧೃತರಾಷ್ಟ್ರನಿಗೆ ಹೇಳಿದನು. (೨೭-೪೭||)

ಶ್ರೀಮತೆ ರಾಮಾನುಜಾಯನಮಃ.

ಶ್ರೀ ಭಗವದ್ಯಾಮುನಮುನಯೇನಮಃ.

ಶ್ರೀಮದ್ಯಾಮುನಮುನಿವಿರಚಿತಃ.

# ಶ್ರೀ ಮ ದ್ಗೀ ತಾ ರ್ಥ ಸಂ ಗ್ರ ಹಃ.

ವಿಗಾಹೇ ಯಾಮುನಂ ತೀರ್ಥಂ ಸಾಧು ಬೃಂದಾವನೇ ಸ್ಥಿತಮ್ । ನಿರಸ್ತಜಿಹ್ಮಗಸ್ಪರ್ಶೇ ಯತ್ರ ಕೃಷ್ಣಃ ಕೃತಾದರಃ ॥

ಸ್ವ ಧರ್ಮಜ್ಞಾನವೈರಾಗ್ಯ ಸಾಧ್ಯ ಭಕ್ತ್ಯೇಕ ಗೋಚರಃ। ನಾರಾಯಣಃ ಪರಂಬ್ರಹ್ಮ ಗೀತಾಶಾಸ್ತ್ರೇ ಸಮೀರಿತಃ ॥೧॥

ಭಗವಚ್ಛೇಷಭೂತನಾದ ಚೇತನನಿಗೆ ವಿಹಿತವಾದ ಕರ್ಮವು, ಆ ಕರ್ಮಾನುಷ್ಠಾನದಿಂದ ನಿರ್ಮಲವಾದ ಮನಸ್ಸಿನಲ್ಲುಂಟಾಗುವ, ಸ್ವಸ್ವರೂಪ ಪರಸ್ವರೂಪಾದಿ ಯಥಾರ್ಥಜ್ಞಾನವು, ಅದರಿಂದುಂಟಾಗುವ ವಿಷಯ ವೈರಾಗ್ಯವು, ಅದನ್ನನುಸರಿಸಿ ಭಗವತ್ಕರುಣೆಯಿಂದ ಪ್ರಾಪ್ತವಾಗುವ ಭಕ್ತಿಯೋಗವು, ಇವುಗಳೆಲ್ಲವಕ್ಕೂನು ಪರಬ್ರಹ್ಮನಾದ ಶ್ರೀಮನ್ನಾರಾಯಣನೇ ಉದ್ದೇಶ್ಯಭೂತನಾಗಿರುತ್ತಾನೆಂದು ಶ್ರೀಮದ್ಗೀತಾಶಾಸ್ತ್ರದಲ್ಲಿ ಹೇಳಲ್ಪಡುತ್ತದೆ. ॥೧॥

ಜ್ಞಾನಕರ್ಮಾತ್ಮಿಕೇ ನಿಷ್ಠೇ ಯೋಗಲಕ್ಷ್ಯೇ ಸುಸಂಸ್ಕೃತೇ। ಆತ್ಮಾನುಭೂತಿ ಸಿದ್ಧ್ಯರ್ಥೇ ಪೂರ್ವಷಟ್ಕೇನ ಚೋದಿತೇ ॥೨॥

ಅವುಗಳಲ್ಲಿ ಆತ್ಮಾನುಭವ ಸಿದ್ಧಿಯನ್ನೀಯುವ ಜ್ಞಾ

ನಯೋಗ ಕರ್ಮಯೋಗಗಳೆಂಬ ಎರಡು ನಿಷ್ಠೆಗಳು ಈ ಪ್ರಥಮಷಟ್ಕವಾದ ಮೊದಲು ಆರು ಅಧ್ಯಾಯಗಳಲ್ಲಿ ಸಮೀಚೀನವಾಗಿ ಶೋಧಿಸಲ್ಪಡುತ್ತವೆ. ॥೨॥

ಮಧ್ಯಮೇ ಭಗವತ್ತತ್ವಯಾಥಾತ್ಮ್ಯಾವಾಪ್ತಿಸಿದ್ಧಯೇ।
ಜ್ಞಾನಕರ್ಮಾಭಿನಿರ್ವರ್ತ್ಯೋ ಭಕ್ತಿಯೋಗಃ ಪ್ರಕೀರ್ತಿತಃ ॥೩॥

ದ್ವಿತೀಯ ಷಟ್ಕವಾದ ೭ನೇ ಅಧ್ಯಾಯದಿಂದ ೧೨ ಅಧ್ಯಾಯಪರ್ಯಂತವಾಗಿರುವ, ಆರು ಅಧ್ಯಾಯಗಳಿಂದ ಭಗವತ್ಸ್ವರೂಪವನ್ನು ಯಥಾವಸ್ಥಿತವಾಗಿಯೆ ತೋರ್ಪಡಿಸುವ, ಜ್ಞಾನ, ಕರ್ಮಗಳಿಂದ ಸಿದ್ಧಿಯಾಗುವ ಭಕ್ತಿಯೋಗವು ಹೇಳಲ್ಪಡುತ್ತದೆ. ॥೩॥

ಪ್ರಧಾನಪುರುಷವ್ಯಕ್ತಸರ್ವೇಶ್ವರವಿವೇಚನಂ। ಕರ್ಮ
ಧೀರ್ಭಕ್ತಿರಿತ್ಯಾದಿಃ ಪೂರ್ವಶೇಷೋಽನ್ತಿಮೋದಿತಃ ॥೪॥

ತೃತೀಯಷಟ್ಕವೆಂಬ ಕಡೇ ಆರು ಅಧ್ಯಾಯಗಳಲ್ಲಿ ಪ್ರಕೃತಿಪುರುಷರುಗಳ ಸಂಬಂಧರೂಪವಾದ ಪ್ರಪಂಚಸ್ವರೂಪವು, ಸರ್ವೇಶ್ವರನ ಸ್ವರೂಪವು, ಪೂರ್ವಾಧ್ಯಾಯಗಳಲ್ಲಿ ಹೇಳಲ್ಪಟ್ಟ ಕರ್ಮಜ್ಞಾನ ಭಕ್ತಿಗಳೂ ಹೇಳಲ್ಪಡುತ್ತವೆ. ॥೪॥

ಅಸ್ಥಾನಸ್ನೇಹಕಾರುಣ್ಯಧರ್ಮಾಧರ್ಮಧಿಯಾಕುಲಂ।
ಪಾರ್ಥಂ ಪ್ರಪನ್ನಮುದ್ದಿಶ್ಯ ಶಾಸ್ತ್ರಾವತರಣಂ ಕೃತಮ್ ॥೫॥

ಮೊದಲನೇ ಅಧ್ಯಾಯದಲ್ಲಿ ಉಚಿತವಲ್ಲದವಿಷಯದಲ್ಲಿ ಸ್ನೇಹವನ್ನು ಕರುಣೆಯನ್ನು ತೋರ್ಪಡಿಸಿ ಧರ್ಮಾಧರ್ಮಗಳು ತಿಳಿಯದೇ ಮೋಹವಂಹೊಂದಿ, ಧರ್ಮಸ್ವರೂಪವಂ ತಿಳಿಯಲಪೇಕ್ಷಿಸಿ ಪರಮಾತ್ಮನಂ ಶರಣಾಗತನಾದ ಅರ್ಜುನನನ್ನುದ್ದೇಶಿಸಿ ಈ ಗೀತಾಶಾಸ್ತ್ರವು ಪ್ರಾರಂಭಿಸಲ್ಪಟ್ಟಿತು ॥೫॥

ಶ್ರಿಯೈನಮಃ.

ಶ್ರೀ ಕೃಷ್ಣಾಯ ಪರಬ್ರಹ್ಮಣೇನಮಃ.

## ಶ್ರೀ ಭಗವದ್ಗೀತೆಯೊಳು ದ್ವಿತೀಯಾಧ್ಯಾಯವು.

ಮೂ॥ ಸಂಜಯ ಉವಾಚ ॥ ತಂ ತಥಾ ಕೃಪಯಾವಿಷ್ಟ ಮಶ್ರುಪೂರ್ಣಾಕುಲೇಕ್ಷಣಂ । ವಿಷೀದಂತ ಮಿದಂ ವಾಕ್ಯ ಮುವಾಚ ಮಧುಸೂದನಃ ॥೧॥

ಪ॥ ತಂ - ತಥಾ - ಕೃಪಯಾ - ಆವಿಷ್ಟಂ - ಅಶ್ರುಪೂರ್ಣಾಕುಲೇಕ್ಷಣಂ । ವಿಷೀದಂತಂ - ಇದಮ - ವಾಕ್ಯಂ - ಉವಾಚ - ಮಧುಸೂದನಃ ॥

ಅ॥ ಸಂಜಯನವಾಕ್ಯವು. ಮಧುಸೂದನಃ - (ಮಧುವೆಂಬ ರಾಕ್ಷಸನಂಸಂಹರಿಸಿರುವ) ಶ್ರೀಕೃಷ್ಣನು, (ಅಥವಾ- ಬಾಹ್ಯೇಂದ್ರಿಯಗಳಿಗೇ ನಿಯಾಮಕನಾದ) ಶ್ರೀ ಕೃಷ್ಣನು, ಕೃಪಯಾ - ಕರುಣೆಯಿಂದ, ಆವಿಷ್ಟಮ್ - ಕೂಡಿ ಇರುವವನಾಗಿ, ಅಶ್ರುಪೂರ್ಣಾಕುಲೇಕ್ಷಣಾಮ್ - ಅಶ್ರು - ಕಣ್ಣೀರಿನಿಂದ, ಪೂರ್ಣ-ಪರಿಪೂರ್ಣವಾಗಿರುವವರಿಂದ (ಲೀ,) ಆಕುಲ - ವ್ಯಾಕುಲವಾಗಿರುವ, ಈಕ್ಷಣಾಮ್ - ಕಣ್ಣುಗಳುಳ್ಳವನಾಗಿ, ತಥಾ - ಆಪ್ರಕಾರವಾಗಿ, ವಿಷೀದಂತಂ - ದುಃಖಿಸುತಲಿರುವ್ವತಂ - ಆ ಅರ್ಜುನನನ್ನು ಕುರಿತು, ಇದಮ - ವಾಕ್ಯಂ - ಈ ಮುಂದೇ ಹೇಳಲ್ಪಡುವ ವಾಕ್ಯವನ್ನು, ಉವಾಚ - ನುಡಿದನು. ॥ ೧ ॥

ಮೂ॥ ಶ್ರೀ ಭಗವಾನುವಾಚ ॥ ಕುತಸ್ತ್ವಾ ಕಶ್ಮಲ ಮಿದಂ ವಿಷಮೇ ಸಮುಪಸ್ಥಿತಮ್ । ಅನಾರ್ಯಜುಷ್ಟ ಮಸ್ವರ್ಗ್ಯ ಮಕೀರ್ತಿಕರ ಮರ್ಜುನ ॥ ॥೨॥

ಪ|| ಕುತಃ – ತ್ವಾ – ಕಶ್ಮಲಂ – ಇದಂ – ವಿಷಮೇ – ಸಮುಪಸ್ಥಿತಮ್ । ಅನಾರ್ಯ ಜುಷ್ಟಂ – ಅಸ್ವರ್ಗ್ಯಂ – ಅಕೀರ್ತಿಕರಂ – ಅರ್ಜುನ ||

ಅ|| ಶ್ರೀಭಗವಾನ್ – (ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸುಗಳೆಂಬ ಷಡ್ಗುಣಸಿಧಿಯಾಗಿಯೂ ಹೇಯಗುಣರಹಿತನಾಗಿಯೂ, ಇರುವ) ಶ್ರೀ ಕೃಷ್ಣನು, ಉವಾಚ – ನುಡಿದನು. ಹೇ ಅರ್ಜುನ – ಎಲೈ ಅರ್ಜುನನೇ ! ಅನಾರ್ಯಜುಷ್ಟಂ–ಅವಿವೇಕಿಗಳಿಂದ ಆಶ್ರಯಿಸಲ್ಪಡತಕ್ಕುದಾಗಿಯೂ, ಅಸ್ವರ್ಗ್ಯಂ – ಪಾರಲೌಕಿಕ ಪುರುಷಾರ್ಥಕ್ಕೆ ಹಾನಿಕರವಾಗಿಯೂ, ಅಕೀರ್ತಿಕರಂ – ಅಪಯಶಸ್ಸನ್ನೀಯುವದಾಗಿಯೂ, ಇರುವ, ಇದಂ (೧) ಕಶ್ಮಲಮ್ – ಈ ವ್ಯಾಕುಲವು, ಕುತಃ – ಯಾವಕಾರಣದಿಂದ, ವಿಷಮೇ–ಅಸ್ಥಾನ (ಅಕಾಲ) ದಲ್ಲಿ, ತ್ವಾ – ನಿನ್ನನ್ನು (ಕುರಿತು), ಸಮುಪಸ್ಥಿತಮ್–ಸಂಪ್ರಾಪ್ತವಾಯಿತು. ||೨||

(೧) ಗೀ || ೨ || ಇದಂಕಶ್ಮಲಮ್– ಈ ಮೋಹವು.

ಮೂ|| ಕ್ಲೈಬ್ಯಂ ಮಾ ಸ್ಮಗಮಃ ಪಾರ್ಥ ನೈತ
ತ್ತ್ವಯ್ಯುಪಪದ್ಯತೇ । ಕ್ಷುದ್ರಂ ಹೃದಯ ದೌರ್ಬ
ಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ || || ೩ ||

ಪ|| ಕ್ಲೈಬ್ಯಂ – ಮಾ – ಸ್ಮ – ಗಮಃ – ಪಾರ್ಥ – ನ – ಏತತ್ – ತ್ವಯಿ ಉಪಪದ್ಯತೆ । ಕ್ಷುದ್ರಂ – ಹೃದಯದೌರ್ಬಲ್ಯಂ – ತ್ಯಕ್ತ್ವಾ – ಉತ್ತಿಷ್ಠ – ಪರಂತಪ ||

ಅ|| ಹೇ ಪಾರ್ಥ – ಎಲೈ ಅರ್ಜುನನೇ ! ಕ್ಲೈಬ್ಯಂ – ನಪುಂಸಕತ್ವ (ಭಯ) ವನ್ನು, ಮಾಸ್ಮಗಮಃ – ಹೊಂದಬೇಡ, ತ್ವಯಿ – ನಿನ್ನಲ್ಲಿ, ಏತತ್ – ಈ ವ್ಯಾಕುಲವು, ನೋಪಪದ್ಯತೇ – ಇರತಕ್ಕದ್ದಲ್ಲವು, ಹೇ ಪರಂತಪ – ಎಲೈ ಶತ್ರುಗಳಂ ಸಂತಾಪಿಸುವ ಅರ್ಜುನನೇ ! ಕ್ಷುದ್ರಂ- ನೀಚವಾದ, ಹೃದಯದೌರ್ಬಲ್ಯಂ – ಮನೋವ್ಯಾಕುಲವನ್ನು, ತ್ಯಕ್ತ್ವಾ – ಬಿಟ್ಟು, ಉತ್ತಿಷ್ಠ – (ಯುದ್ಧಕ್ಕೆ) ಏಳು. ||೩||

ರಾ–ಭಾ|| ಈಪ್ರಕಾರವಾಗಿ ಅರ್ಜುನನು ಶೋಕವ್ಯಾಕುಲಿತನಾಗಲು ಅದಂನೋಡಿ ಶ್ರೀಕೃಷ್ಣಮೂರ್ತಿಯು, ಎಲೈ ಅರ್ಜುನನೇ ? ಇದೇನು ಅವಿವೇಕಿಗಳಿಂದ ಆಶ್ರಯಿಸತಕ್ಕದ್ದಾಗಿಯೂ, ಪರಲೋಕಕ್ಕೆ ಹಾನಿಕರವಾಗಿಯೂ, ಅಪಯಶಸ್ಸನ್ನೀಯುವದಾಗಿಯೂ, ಅತಿ ನೀಚವಾಗಿಯೂ,

ಇರುವ. ಈ ಶೋಕವು ನಿನಗೇಕ್ಯಾಗೇ ಸಂಪ್ರಾಪ್ತವಾಯಿತು? ಯಾರಿಗಾಗಿ ದುಃಖಿಸುತ್ತಿ? ಯೆಂದು ಬೆದರಿಸಿ, ಏಳು, ಧೈರ್ಯದೊಡನೇ ಯುದ್ಧವಂಮಾಡು, ಎಂದು ದೃಢನಾಗಿ ಹೇಳಿದರೂ, ಅರ್ಜುನನು, ಅಕಾಲದಲ್ಲಿ ಪ್ರಾಪ್ತವಾದ ಸ್ನೇಹಕಾರುಣ್ಯಾದಿಗಳಿಗೇ ವಶಪಟ್ಟವನಾದುದರಿಂದ ಯುದ್ಧವಂ ಮಾಡುವದು ತನಗೇ ಹಿತವೆಂದು ತಿಳಿಯದೇ ಶ್ರೀ ಕೃಷ್ಣನಂನೋಡಿ ಹೇಳುತ್ತಾನೇ ‖ ‖೧-೨-೩‖

ಮೂ‖ ಅರ್ಜುನ ಉವಾಚ ‖ಕಥಂ ಭೀಷ್ಮ ಮಹಂ ಸಂ
ಖ್ಯೇದ್ರೋಣಂ ಚ ಮಧು ಸೂದನ । ಇಷುಭಿಃ ಪ್ರ
ತಿಯೋತ್ಸ್ಯಾಮಿ ಪೂಜಾರ್ಹಾ ವರಿಸೂದನ ‖೪‖

ಪ‖ ಕಥಂ - ಭೀಷ್ಮಂ - ಅಹಂ - ಸಂಖ್ಯೇ - ದ್ರೋಣಂ - ಚ - ಮಧುಸೂದನ । ಇಷುಭಿಃ - ಪ್ರತಿ ಯೋತ್ಸ್ಯಾಮಿ - ಪೂಜಾರ್ಹೌ - ಅರಿಸೂದನ ‖

ಅ‖ ಅರ್ಜುನನವಾಕ್ಯವು. ಅರಿಸೂದನ - ಶತ್ರುಸಂಹಾರಕನಾದ, ಮಧುಸೂದನ - ಎಲೈ ಶ್ರೀಕೃಷ್ಣನೇ, ಪೂಜಾರ್ಹೌ-ಪೂಜಿಸಲರ್ಹರಾದ, ಭೀಷ್ಮಂ -ಭೀಷ್ಮಾಚಾರ್ಯರನ್ನು, ದ್ರೋಣಂಚ-ದ್ರೋಣಾಚಾರ್ಯರನ್ನೂ, ಸಂಖ್ಯೇ- ಯುದ್ಧದಲ್ಲಿ, ಕಥಂ-ಹ್ಯಾಗೇ, ಇಷುಭಿಃ-ಬಾಣಗಳಿಂದ, ಅಹಂ - ನಾನು, ಪ್ರತಿಯೋತ್ಸ್ಯಾಮಿ - ಎದುರಾಗಿ ನಿಂತು ಯುದ್ಧವಂ ಮಾಡುವೆನು. ‖ ೪ ‖

ಮೂ ‖ ಗುರೂ ನಹತ್ವಾ ಹಿ ಮಹಾನುಭಾವಾನ್
ಶ್ರೇಯೋ ಭೋಕ್ತುಂ ಭೈಕ್ಷ್ಯ ಮಪೀ ಹ ಲೋಕೇ। ಹ
ತ್ವಾ ಽ ರ್ಥಕಾಮಾಂಸ್ತು ಗುರೂ ನಿಹೈವ ಭುಂಜೀ
ಯ ಭೋಗಾನ್ ರುಧಿರಪ್ರದಿಗ್ಧಾನ್ ‖ ‖೫‖

ಪ ‖ ಗುರೂನ್ - ಅಹತ್ವಾ - ಹಿ - ಮಹಾನುಭಾವಾನ್ - ಶ್ರೇಯಃ - ಭೋಕ್ತುಂ - ಭೈಕ್ಷ್ಯಂ - ಅಪಿ - ಇಹ - ಲೋಕೇ । ಹತ್ವಾ - ಅರ್ಥಕಾಮಾನ್ - ತು - ಗುರೂನ್ - ಇಹ - ಏವ - ಭುಂಜೀಯ - ಭೋಗಾನ್ - ರುಧಿರಪ್ರದಿಗ್ಧಾನ್ ‖

ಅ‖ ಮಹಾನುಭಾವಾನ್ - ಮಹಾಪ್ರಭಾವಶಾಲಿಗಳಾದ, ಗುರೂನ್ - ಗುರುಗ

ಳನ್ನು, ಅಹತ್ವಾ-ಸಂಹರಿಸದೇ, ಇಹಲೋಕೇ- ಈ ಲೋಕದಲ್ಲಿ, ಭೈಕ್ಷಮಪಿ- ಭಿಕ್ಷಾನ್ನವನ್ನು ಕೂಡ, ಭೋಕ್ತುಂ-ಭುಂಜಿಸುವದು, ಶ್ರೇಯಃ-ಶ್ರೇಯಸ್ಕರವಾಗಿರುವುದು, ಹಿ-ಯಾವಕಾರಣದಿಂದ, ಅರ್ಥಕಾಮಾನ್-ಅರ್ಥಾಪೇಕ್ಷೆಯುಳ್ಳವರಾದ, ಗುರೂನ್-ಗುರುಗಳನ್ನು, ಹತ್ವಾತು-ಸಂಹಾರಮಾಡಿದರೇನೂ, ಇಹೈವ- ಈಲೋಕದಲ್ಲಿಯೇ, ರುಧಿರಪ್ರದಿಗ್ಧಾನ್-ರಕ್ತದಿಂದ ಮಿಶ್ರಿತಗಳಾದ, ಭೋಗಾನ್-ಸುಖಗಳನ್ನು, ಭುಂಜೀಯ-ಅನುಭವಿಸುವೆನು.॥೫॥

ಮೂ॥ ನಚೈತ ದ್ವಿದ್ಮಃ ಕತರ ನ್ನೋ ಗರೀಯೋ
ಯ ದ್ವಾ ಜಯೇಮ ಯದಿವಾನೋ ಜಯೇಯುಃ ।
ಯಾನೇವ ಹತ್ವಾ ನ ಜಿಜೀವಿಷಾಮ ಸ್ತೇಽವಸ್ಥಿತಾಃ
ಪ್ರಮುಖೇಧಾರ್ತರಾಷ್ಟ್ರಾಃ ॥ ॥೬॥

ಪ॥ ನ-ಚ-ಏತತ್ - ವಿದ್ಮಃ - ಕತರತ್ - ನಃ - ಗರೀಯಃ- ಯದ್ವಾ - ಜಯೇಮ - ಯದಿ - ವಾ - ನಃ - ಜಯೇಯುಃ । ಯಾನ್ - ಏವ - ಹತ್ವಾ - ನ - ಜಿಜೀವಿಷಾಮಃ - ತೇ - ಅವಸ್ಥಿತಾಃ - ಪ್ರಮುಖೇ - ಧಾರ್ತರಾಷ್ಟ್ರಾಃ ॥

ಅ॥ ಯದ್ವಾಜಯೇಮ- ಭೀಷ್ಮಾದಿಗಳನ್ನು ನಾವೇ ಜಯಿಸುವೆವೋ, ಯದಿವಾ- ಹಾಗಿಲ್ಲದಿದ್ದರೆ, ನಃ - ನಮ್ಮಗಳನ್ನು, ಜಯೇಯುಃ - ಅವರೇ ಜಯಿಸುವರೋ, ನಃ - ನಮಗೆ, ಕತರತ್- ಯಾವದು, ಗರೀಯಃ-ಅಧಿಕವೋ ? ಏತತ್-ಇದನ್ನು, ನವಿದ್ಮಃ - ಅರಿಯೆವು, ಯಾನೇವ- ಯಾರನ್ನೇ- ಹತ್ವಾ - ಸಂಹರಿಸಿ, ನಜಿಜೀವಿಷಾಮಃ - ಜೀವಿಸಲಿಚ್ಛೆಯಿಲ್ಲದೆ ಇರುವೆವೋ, ತೇಧಾರ್ತರಾಷ್ಟ್ರಾಃ- ಆ ಧೃತರಾಷ್ಟ್ರನ ಪುತ್ರರಾದ ದುರ್ಯೋಧನಾದಿಗಳು, ಪ್ರಮುಖೇ- ಎದುರಿನಲ್ಲಿ, ಅವಸ್ಥಿತಾಃ - ಇರುತ್ತಲಿದ್ದಾರೆ. ॥೬॥

ಮೂ॥ ಕಾರ್ಪಣ್ಯದೋಷೋಪಹತಸ್ವಭಾವಃ ಪೃ
ಚ್ಛಾಮಿ ತ್ವಾಂ ಧರ್ಮ ಸಮ್ಮೂಢ ಚೇತಾಃ। ಯಚ್ಛ್ರೇ
ಯ ಸ್ಸ್ಯಾ ನ್ನಿಶ್ಚಿತಂ ಬ್ರೂಹಿ ತನ್ಮೇ ಶಿಷ್ಯ ಸ್ತೇಽ
ಹಂ ಶಾಧಿ ಮಾಂ ತ್ವಾಂ ಪ್ರಪನ್ನಮ್ ॥ ॥೭॥

ಪ॥ ಕಾರ್ಪಣ್ಯದೋಷೋಪಹತಸ್ವಭಾವಃ - ಪೃಚ್ಛಾಮಿ - ತ್ವಾಂ- ಧರ್ಮಸಮ್ಮೂಢಚೇತಾಃ । ಯತ್ - ಶ್ರೇಯಃ - ಸ್ಯಾತ್ - ನಿಶ್ಚಿತಂ - ಬ್ರೂಹಿ - ತತ್ - ಮೇ - ಶಿಷ್ಯಃ - ತೇ - ಅಹಂ - ಶಾಧಿ - ಮಾಂ - ತ್ವಾಂ - ಪ್ರಪನ್ನಮ್ ॥

(೧||) ಕಾರ್ಪಣ್ಯದೋಷೋಪಹತಸ್ವಭಾವಃ – ಕಾರ್ಪಣ್ಯ – ಕಾರ್ಪಣ್ಯವೆಂಬ, ದೋಷ – ದೋಷದಿಂದ, ಉಪಹತ – ವಿನಾಶಹೊಂದಿರುವ, ಸ್ವಭಾವಃ – ಸ್ವಭಾವವುಳ್ಳ, ಅಹಂ – ನಾನು, ಧರ್ಮಸಮ್ಮೂಢಚೇತಾಃ – ಧರ್ಮದಲ್ಲಿ ಸಂದೇಹಯುಕ್ತವಾದ ಮನಸ್ಸುಳ್ಳವನಾಗಿ, ತ್ವಾಂ –ನಿನ್ನನ್ನು, ಪೃಚ್ಛಾಮಿ – ಪ್ರಶ್ನೆಮಾಡುತ್ತೇನೆ, ಯತ್ – ಯಾವದು, ಮೇ– ನನಗೆ, ಶ್ರೇಯಃ–ಶ್ರೇಯಸ್ಕರವಾಗಿ, ಸ್ಯಾತ್– ಆಗುವದೋ, ತತ್– ಅದು, ಬ್ರೂಹಿ – ಹೇಳು, ತೇ – ನಿನಗೆ, ಅಹಂ – ನಾನು, ಶಿಷ್ಯಃ– ಶಿಷ್ಯನು, ತ್ವಾಂ– ನಿನ್ನನ್ನು, ಪ್ರಪನ್ನಂ – ಶರಣಹೊಂದಿದ, ಮಾಂ- ನನ್ನನ್ನು, ಶಾಧಿ – ಶಿಕ್ಷಿಸು (ಜ್ಞಾನಯುಕ್ತನನ್ನಾಗಿ ಮಾಡು). ... ||೭||

(೧) ಗೀ|| ವಿ|| ಗುರುಗಳೇ ಮೊದಲಾದವರಂ ಸಂಹರಿಸಿ ನಾವು ಜೀವಿಸುವದು ಉಚಿತವಲ್ಲವೆಂಬದಾಗಿ ಅರ್ಜುನನು ಅನುಭವಿಸುವ ವ್ಯಸನವಂ ಕಾರ್ಪಣ್ಯವೆಂಬದಾಗಿಯೂ, ಅಂತವರನ್ನು ಸಂಹಾರಮಾಡುವದರಿಂದುಂಟಾದ ಪಾಪವನ್ನೇ ದೋಷವೆಂಬದಾಗಿಯೂ, ತನ್ನ ತಾತ್ಕಾಲಿಕ ಶೌರ್ಯಸ್ಥಿತಿಯನ್ನು ಸ್ವಭಾವವೆಂಬದಾಗಿಯೂ, ಹೇಳತೆಂದು ತಾತ್ಪರ್ಯವು

ಮೂ|| ನ ಹಿ ಪ್ರಪಶ್ಯಾಮಿ ಮಮಾಪನುದ್ಯಾ
ದ್ಯಚ್ಛೋಕ ಮುಚ್ಛೋಷಣ ಮಿಂದ್ರಿಯಾಣಾಂ |
ಅವಾಪ್ಯ ಭೂಮಾ ವಸಪತ್ನ ಮೃದ್ಧಂ ರಾಜ್ಯಂ
ಸುರಾಣಾ ಮಪಿ ಚಾ ಧಿಪತ್ಯಮ್ || ||೮||

ಪ|| ನ – ಹಿ – ಪ್ರಪಶ್ಯಾಮಿ – ಮಮ – ಅಪನುದ್ಯಾತ್ – ಯತ್ – ಶೋಕಂ– ಉಚ್ಛೋಷಣಂ – ಇಂದ್ರಿಯಾಣಾಂ | ಅವಾಪ್ಯ – ಭೂಮೌ – ಅಸಪತ್ನಂ– ಋದ್ಧಂ– ರಾಜ್ಯಂ – ಸುರಾಣಾಂ – ಅಪಿ – ಚ – ಆಧಿಪತ್ಯಮ್ ||

ಅ|| ಭೂಮೌ – ಭೂಮಿಯಲ್ಲಿ, ಅಸಪತ್ನಮ್–ಶತ್ರುಬಾಧಾರಹಿತವಾದ, ಋದ್ಧಂ– ಸಂಪತ್ತು ಮೊದಲಾದವುಗಳಿಂದ ಸಮೃದ್ಧವಾಗಿರುವ, ರಾಜ್ಯಂ–ರಾಜ್ಯವನ್ನು, ಸುರಾಣಾಂ–ದೇವತೆಗಳ, ಆಧಿಪತ್ಯಂಚ–ಪ್ರಭುತ್ವವನ್ನು ಕೂಡ, ಅವಾಪ್ಯಾಪಿ–ಹೊಂದಿದಾಗ್ಯೂ, ಇಂದ್ರಿಯಾಣಾಂ – ಚಕ್ಷುರಾದೀಂದ್ರಿಯಗಳಿಗೆ, ಉಚ್ಛೋಷಣಂ – ಸಂತಾಪಕವಾದ, ಮಮಶೋಕಂ – ನನ್ನ ವ್ಯಸನವನ್ನು, ಯತ್ – ಯಾವದು, ಅಪನುದ್ಯಾತ್– ಹೋಗಲಾಡಿಸುವದೋ, ತತ್ – ಅದನ್ನು, ನಪ್ರಪಶ್ಯಾಮಿಹಿ – ಕಾಣಲಾರೆನಷ್ಟೆ. ||೮||

ಮೂ॥ ಸಂಜಯ ಉವಾಚ॥ ಏವ ಮುಕ್ತ್ವಾಹೃ
ಷೀಕೇಶಂ ಗುಡಾಕೇಶಃ ಪರಂತಪ। ನಯೋತ್ಸ್ಯ ಇ
ತಿ ಗೋವಿಂದ ಮುಕ್ತ್ವಾ ತೂಷ್ಣೀಂ ಬಭೂವಹ॥೯॥

ಪ॥ ಏವಮ್ - ಉಕ್ತ್ವಾ - ಹೃಷೀಕೇಶಂ - ಗುಡಾಕೇಶಃ - ಪರಂತಪಃ। ನ-ಯೋತ್ಸ್ಯೇ - ಇತಿ - ಗೋವಿಂದಮ್ - ಉಕ್ತ್ವಾ ತೂಷ್ಣೀಮ್ - ಬಭೂವ-ಹ॥

ಅ॥ ಸಂಜಯನವಾಕ್ಯವು. ಪರಂತಪಃ-ಶತ್ರುಸಂಹಾರಕನಾದ, ಗುಡಾಕೇಶಃ - ಅರ್ಜುನನು, (ನಿದ್ರೆಯನ್ನು ಜಯಿಸಿದವನು) ಹೃಷೀಕೇಶಂ - ಶ್ರೀ ಕೃಷ್ಣನು ಕುರಿತು, ಏವಮ್ - ಈಪ್ರಕಾರವಾಗಿ, ಉಕ್ತ್ವಾ-ಹೇಳಿ, ನಯೋತ್ಸ್ಯೇ ಇತಿ - ಯುದ್ಧಮಾಡಲಾರನೆಂದು, ಗೋವಿಂದಮ್ (ಪ್ರತಿ), ಶ್ರೀಕೃಷ್ಣನನ್ನು, (ಕುರಿತು)-(ಉಕ್ತ್ವಾ-ಹೇಳಿ, (ತೂಷ್ಣೀಂಬಭೂವ (೧) ಹ - ಸುಮ್ಮನಾದನು.

(೧) ಗೀ॥ ವಿ॥ ಹ- ಎಂಬುವದು ಅಧಿಕವಾದ ಧೈರ್ಯ ವೀರ್ಯಾದಿಗಳುಳ್ಳ ಅರ್ಜುನನಿಗೂಕೂಡ ಅಧೈರ್ಯವುಂಟಾಗಿರುವದೆಂನೋಡಿ ಸಂಜಯನು ಆಶ್ಚರ್ಯಪಡುವದಂ ಸೂಚಿಸುತ್ತದೆ.

(ರಾ-ಭಾ॥) ಎಲೈ ಶ್ರೀಕೃಷ್ಣನೇ ? ನಾನು ಬಹುಮಾನಿಸಲರ್ಹರಾದ ಗುರುಗಳಾಗಿರುವ ಭೋಗಾಸಕ್ತರಾದ ಭೀಷ್ಮ ದ್ರೋಣಾದಿಗಳನ್ನು ಸಂಹಾರಮಾಡಿ ಅವರುಗಳನುಭವಿಸಿದ ಆ ಭೋಗವನ್ನು ಅವರರಕ್ತಗಳಿಂದ ಮಿಶ್ರಿತವಾಗಿ ಮಾಡಿ ಅವರುಗಳಿದ್ದ ಆ ಸನದಮೇಲೇ ಇರುತಲಿರುವನಾಗಿ ಹ್ಯಾಗೆ ಅನುಭವಿಸುವೆನು ? ,, ಆದರೇ ಯುದ್ಧಮಾಡಲುಜ್ಜುಗಿಸಿ ತರುವಾಯ ಅದರಿಂದ ನಿವೃತ್ತನಾದರೇ ಶತ್ರುಗಳು ಬಲಾತ್ಕಾರದಿಂದ ನಿನ್ನನ್ನು ಸಂಹಾರಮಾಡಲಾರರೋ ,, ಎಂಬವಾಗಿ ಹೇಳುವವಾದರೇ ಅದಕೂಡ ನನಗೇ ಸಮ್ಮತವೇ, ಅಧರ್ಮದಿಂದ ಅವರುಗಳಂ ಸಂಹರಿಸಿ ಜಯವಂ ಹೊಂದುವ

ದಕ್ಕಿಂತಲೂ, ಧರ್ಮಾ ಧರ್ಮಗಳನ್ನರಿಯದ ಅವರುಗಳಿಂದ ನಾವು ಪರಾಜಿತರಾಗುವದೇ ಉಚಿತವೆಂಬದಾಗಿ ತೋರುತ್ತದೆ, ಹಾಗಿಲ್ಲದಿದ್ದರೇ ತಮ್ಮ ಶಿಷ್ಯನಾದ ನನಗೇ ಯಾವದು ಶ್ರೇಯಸ್ಕರವೊ? ಯಾವದು ಧರ್ಮವೊ? ಅದಂನೀವೇ ಅನುಗ್ರಹಿಸಿ ಹೇಳಬೇಕೆಂದು ಬಹುದೀನನಾಗಿ ಶ್ರೀ ಕೃಷ್ಣಮೂರ್ತಿಯ ಪಾದಕಮಲವಂ ಪಿಡಿದುಕೊಂಡನು, ಈಪ್ರಕಾರವಾಗಿ ಅಕಾಲದಲ್ಲಿ ಪ್ರಾಪ್ತಮಾದ ಸ್ನೇಹ ಕಾರುಣ್ಯಗಳಿಗೆ ಪರವಶನಾಗಿ ಕ್ಷತ್ರಿಯರಿಗೇ ಪರಮಧರ್ಮವಾದ ಯುದ್ಧವನ್ನು ಅಧರ್ಮವೆಂದರಿತು ಭ್ರಮಿಸಿ ಧರ್ಮಸ್ವರೂಪವಂತಿಳಿಯಲಪೇಕ್ಷೆಯಿಂದ ಶರಣಾಗತನಾದ ಅರ್ಜುನನಂ ಕುರಿತು ಆತ್ಮಸ್ವರೂಪದ ಯಥಾರ್ಥಜ್ಞಾನವು, ಫಲವನ್ನಪೇಕ್ಷಿಸದೇ ಯುದ್ಧವಂಮಾಡುವದು, ಕ್ಷತ್ರಿಯರಿಗೆ ಮುಕ್ತಿಸಾಧನವೆಂಬುವದಂ ತಿಳಿಯುವವರಿಗೂ ಈ ಮೋಹ ನಿವೃತ್ತಿಯಾಗಲಾರದಾದದರಿಂದ ಅದಂ ತಿಳಿಸಲುಜ್ಜಗಿಸಿ ಶ್ರೀ ಕೃಷ್ಣ ಪರಮಾತ್ಮನು ಈ ಅಧ್ಯಾತ್ಮ (ಮೋಕ್ಷ) ಶಾಸ್ತ್ರವನ್ನುಪದೇಶಿಸಲುಪಕ್ರಮಿಸಿದನು. ಈ ಅರ್ಥವನ್ನು ,,ಅಸ್ಥಾನ ಸ್ನೇಹ ಕಾರುಣ್ಯ ಧರ್ಮಾ ಧರ್ಮಧಿಯಾಕುಲಂ । ಪಾರ್ಥಂಪ್ರಪನ್ನಮುದ್ದಿಶ್ಯ ಶಾಸ್ತ್ರಾವತರಣಂಕೃತಂ,, ಎಂಬದಾಗಿ ಶ್ರೀ ಗೀತಾರ್ಥಸಂಗ್ರಹದಲ್ಲಿ ಶ್ರೀ ಯಮುನಾಚಾರ್ಯರು ಹೇಳಿರುತ್ತಾರೆ. (ಎಂಬದಾಗಿ(೪-೫-೬-೭-೮-೯) ಶ್ಲೋಕಗಳ ತಾತ್ಪರ್ಯವು.)

ಮೂ॥ ಸಂಜಯಉವಾಚ॥ ತ ಮುವಾಚ ಹೃಷೀ
ಕೇಶಃ ಪ್ರಹಸ ನ್ನಿವ ಭಾರತ । ಸೇನಯೋ ರುಭ
ಯೋರ್ಮಧ್ಯೇ ವಿಷೀದಂ ತ ಮಿದಂ ವಚಃ॥ ॥೧೦॥

ಪ॥ ತಂ – ಉವಾಚ – ಹೃಷೀಕೇಶಃ – ಪ್ರಹಸನ್ – ಇವ – ಭಾರತ । ಸೇನಯೋಃ – ಉಭಯೋಃ – ಮಧ್ಯೇ ವಿಷೀದಂತಂ – ಇದಂ – ವಚಃ॥ ಸಂಜಯನವಾಕ್ಯವು.

ಅ॥ ಹೇಭಾರತ–ಎಲೈ ಧೃತರಾಷ್ಟ್ರರಾಜನೇ । ಉಭಯೋಸ್ಸೇನಯೋರ್ಮಧ್ಯೇ–ಯೆರಡು ಸೈನ್ಯಗಳ ಮಧ್ಯದಲ್ಲಿ, ವಿಷೀದಂತಂ– ದುಃಖಿಸುತ್ತಲಿರುವ, ತಂ– ಆ ಅರ್ಜುನನಂ (ಕುರಿತು) ಹೃಷೀಕೇಶಃ– ಶ್ರೀಕೃಷ್ಣಮೂರ್ತಿಯು, ಪ್ರಹಸನ್ನಿವ – ಮುಗುಳನಗೆಯಿಂದ ಕೂಡಿರುವನಂತೇ, ಇದಂ– ವಚಃ – ಈ ಮಾತನ್ನು, ಉವಾಚ– ಹೇಳಿದನು ॥೧೦॥

(ರಾ–ಭಾ) ಈ ಪ್ರಕಾರವಾಗಿ ದೇಹಾತ್ಮಗಳ ಯಥಾರ್ಥ ಸ್ಥಿತಿಯನ್ನರಿಯದೇ ವಿಷಾದಿಸುತ್ತಲಿರುವನಾಗಿಯೂ, ದೇಹಕ್ಕಿಂತಲೂ ಭಿನ್ನವಾದ ಆತ್ಮಸ್ವರೂಪವಂ ತಿಳಿಯಲಪೇಕ್ಷಿಸಿ ಧರ್ಮವಾಕ್ಯಗಳಂ ಹೇಳುವನಾಗಿಯೂ, ಯುದ್ಧಮಾಡಲುಪಕ್ರಮಿಸಿ ನಿಷ್ಕಾರಣವಾಗಿ ಯುದ್ಧಸನ್ನದ್ಧಗಳಾದ ಯೆರಡು ಸೈನ್ಯಗಳ ಮಧ್ಯದಲ್ಲಿ ಯುದ್ಧದಿಂದ ನಿವೃತ್ತನಾಗಿಯೂ ಇರುವ, ಪಾರ್ಥನಂನೋಡಿ ಶ್ರೀಕೃಷ್ಣಪರಮಾತ್ಮನು ಮಂದಹಾಸದಿಂದಕೂಡಿ ಪರಿಹಾಸ ಮಾತುಗಳಂನಾಡುವವನಂತೆ ಆತ್ಮ ಪರಮಾತ್ಮಗಳ ಯಥಾರ್ಥ ಜ್ಞಾನವನ್ನು, ಮತ್ತು ಆ ಪರಮಾತ್ಮನಂ ಸೇರಲು ಸಾಧನಗಳಾದ ಕರ್ಮ ಜ್ಞಾನ ಭಕ್ತಿಯೋಗಗಳಂ ತಿಳಿಸುವ ಈ ಅಧ್ಯಾಯದ ೧೨ ನೇ ಶ್ಲೋಕದ ಮೊದಲು ೧೮ ನೇ ಅಧ್ಯಾಯದ ೬೬ ನೇ ಶ್ಲೋಕವಾದ (ಸರ್ವಧರ್ಮಾನ್) ಎಂಬುವ ಶ್ಲೋಕಪರ್ಯಂತಮಾದ ವಾಕ್ಯಗಳನ್ನುಪದೇಶಿಸಿದನು. ॥೧೦॥

ಮೂ॥ ಶ್ರೀ ಭಗವಾನುವಾಚ ॥ ಅಶೋಚ್ಯಾ ನನ್ವಶೋಚಸ್ತ್ವಂ ಪ್ರಜ್ಞಾ ವಾದಾಂಶ್ಚ ಭಾಷಸೇ। ಗತಾಸೂನಗತಾಸೂಂಶ್ಚ ನಾನು ಶೋಚಂತಿ ಪಂಡಿತಾಃ॥೧೧

ಪ॥ ಅಶೋಚ್ಯಾನ್ - ಅನ್ವಶೋಚಃ - ತ್ವಂ - ಪ್ರಜ್ಞಾವಾದಾನ್ - ಚ - ಭಾಷಸೇ ।
ಗತಾಸೂನ್ - ಅಗತಾಸೂನ್ - ಚ - ನ - ಅನುಶೋಚಂತಿ - ಪಂಡಿತಾಃ ॥

ಶ್ರೀಕೃಷ್ಣನವಾಕ್ಯವು. ಹೇ ಅರ್ಜುನ - ಎಲೈ ಅರ್ಜುನನೇ ! ತ್ವಂ - ನೀನು, ಅಶೋಚ್ಯಾನ್ - ದುಃಖಿಸಲನರ್ಹರಂ ಕುರಿತು, ಅನ್ವಶೋಚಃ - ದುಃಖಪಡುತ್ತೀಯೆ, ಪ್ರಜ್ಞಾವಾದಾಂಶ್ಚ - ವಿವೇಕಿಗಳ ಮಾತುಗಳಂತೆ ಇರುವ ವಾಕ್ಯಗಳನ್ನು, ಭಾಷಸೇ - ಹೇಳುತ್ತೀಯೆ, ಪಂಡಿತಾಃ - ಜ್ಞಾನಿಗಳು, ಗತಾಸೂನ್ - ಮರಣಹೊಂದಿದವರಂ ಕುರಿತು, ಅಗತಾಸೂಂಶ್ಚ - ಬದುಕಿರುವವರಂ ಕುರಿತೂ, ನಾನುಶೋಚಂತಿ - ದುಃಖಿಸಲಾರರು.

(ರಾ॥ ಭಾ॥ ಎಲೈ ಅರ್ಜುನನೇ ನೀನು ದೇಹಾತ್ಮಸ್ವರೂಪಜ್ಞಾನವಿಲ್ಲದವರಂತೆ ದುಃಖಿಸಲನರ್ಹವಾದ ಶರೀರಗಳನ್ನು ಕುರಿತು ದುಃಖಿಸುತ್ತೀಯೆ, ಮತ್ತು ಇವರಂ ಸಂಹಾರವಮಾಡಿದರೆ ಪಿತೃ ದೇವತೆಗಳಿಗೆ ಪಿಂಡೋದಕ ಕ್ರಿಯಾದಿಗಳುಲುಪ್ತವಾಗುತದೆ ಯೆಂಬುವುದೇ ಮೊದಲಾದ ದೇಹಾತ್ಮವಿವೇಕವುಳ್ಳವರ ಮಾತುಗಳಂತೆ ಮಾತನಾಡುತ್ತೀಯೆ, ಇದು ಪರಸ್ಪರ ವಿರುದ್ಧವಾಗಿ ತೋರುತ್ತದೆ, ಜ್ಞಾನಿಗಳು ದುಃಖಿಸಲಾರರು, ಅದೆಂತೆಂದರೆ, ಆತ್ಮವಸ್ತುವು ನಿತ್ಯವಾದುದರಿಂದ ಅದಕ್ಕೆ ಜನನ ಮರಣಗಳೆರಡೂ ಇಲ್ಲವು, ಆದುದರಿಂದ ಆ ವಿಷಯದಲ್ಲಿ ಶೋಕಪಡಕೂಡದು, ಅಚೇತನವಾದ ಶರೀರಗಳು ಯಾವಾಗಲೂ ಪರಿಣಾಮಸ್ವಭಾವವುಳ್ಳವುಗಳಾದುದರಿಂದ ಅವುಗಳಿಗೇ ಮರಣವು ಪ್ರಾಪ್ತವಾಗುತದೆಂದು ದುಃಖಿಸಕೂಡದು, ಆದರೂ ನೀನು ದುಃಖಿಸುವದಂ ನೋಡಿದರೆ ದೇಹಾತ್ಮ ಸ್ವಭಾವವೂ ಅದಕ್ಕಿಂತಲೂ ವಿಲಕ್ಷಣವಾದ ಆತ್ಮಸ್ವರೂಪ ನಿಶ್ಚಯವೂ, ಅದಂ ಹೊಂದುವದಕ್ಕೆ ಸಾಧನವಾದ ಯುದ್ಧವೇ ಮೊದಲಾದ ಸ್ವಧರ್ಮ ಪರಿಜ್ಞಾನವೂಕೂಡ ಇಲ್ಲವೆಂದು ತಿಳಿಯಬರುತ್ತದೆ. ಈ ಯುದ್ಧವನ್ನು ಫಲಾಪೇಕ್ಷಾರಹಿತನಾಗಿ ಮಾಡಿದರೆ ಅದರಿಂದ ಆತ್ಮ

(ರಾ-ಭಾ) ಸ್ವರೂಪವಂ ತಿಳಿಯಬಹುದು, ಆತ್ಮನಿಗೇ ಜನನ ಮರಣಗಳೆರಡೂ ಇಲ್ಲದೇ ಇರುವದರಿಂದ ಹುಟ್ಟುವದರಿಂದ ಆತ್ಮನಿರುತ್ತಾನೆಂಬದಾಗಿಯೂ, ಮರಣದಿಂದ ಇಲ್ಲದೇ ಇರುತ್ತಾನೆಂಬದಾಗಿಯೂ ಕೂಡ ಹೇಳಕೂಡದು, ( ಆತ್ಮನು ಜನನಮರಣಗಳಿಲ್ಲದ ನಿತ್ಯವಸ್ತುವೆಂದರ್ಥವು. ) ಆದದರಿಂದ ಆತ್ಮನಂಕುರಿತು ಶೋಕಿಸಲಾಗದು, ಅಚೇತನವಾದ ಶರೀರವು ಪರಿಣಾಮಸ್ವಭಾವವುಳ್ಳದ್ದು, ಅದಕ್ಕೆ ಜನನಮರಣಗಳು ಸಹಜವಾಗಿಯೇ ಇರುವುದರಿಂದ ಅದಂಕುರಿತು ದುಃಖಿಸುವುದುಕೂಡ ಉಚಿತವಲ್ಲವೆಂದು ತಾತ್ಪರ್ಯವು ||೧೧||

(ಗೀ || ೨|| ) ಭಗವನ್ಮಾಹಾತ್ಮ್ಯವಂ ತಿಳಿದು ಪುನಃ ಕರ್ತೃಪೂರ್ವಕವಾಗಿ ಭಗವದಾರಾಧನರೂಪದಿಂದಲಾದರೂ ತನಗೆ ವಿಹಿತವಾದ ವೃತ್ತಿ ಎಂಬ ಆಕಾರದಿಂದಲಾದರೂ ನಾರಾಯಣದ್ವೇಷಿಗಳನ್ನು ಅನುಬಂಧಿಪರ್ಯಂತವಾಗಿ ನಿಗ್ರಹಿಸುವದೇ ಕ್ಷತ್ರಿಯರಿಗೆ ಪರಮಧರ್ಮವು, ಆ ಧರ್ಮವನ್ನು ಬಂಧುಸ್ನೇಹದಿಂದ ಅಧರ್ಮವೆಂದು ಚಿಂತಿಸುತಲಿರುವ ಅರ್ಜುನನಂ ಕುರಿತು ಭಗವದ್ದ್ವೇಷಿಗಳಂ ನಿಗ್ರಹಿಸುವದೇ ಕ್ಷತ್ರಿಯರಿಗೆ ಪರಮಧರ್ಮವು, ಇದಕ್ಕೆ ವಿರುದ್ಧವಾದವುಗಳೆಲ್ಲವೂ ಅಧರ್ಮವೆಂಬದಾಗಿ ಶ್ರೀಪರಮಾತ್ಮನು ಈ ಸಮಸ್ತವಾದ ಗೀತಾಶಾಸ್ತ್ರದಿಂದ ಉಪದೇಶಿಸುವವನಾಗಿ ಈಗ ನಿನಗೆ ದೇಹಾತ್ಮ ವಿವೇಕವಿಲ್ಲದೇ ಇರುವದರಿಂದ ಈ ಶೋಕವು ಪ್ರಾಪ್ತವಾಗಿರುತದೆಂಬದಾಗಿ ಹೇಳುತ್ತಾನೆ. (ಇಲ್ಲಿ ಅರ್ಥಭೇದವುಳ್ಳ ಪದಗಳಿಗೇಮಾತ್ರವೆ ಟೀಕೆಯು ಬರೆಯಲ್ಪಡುತ್ತದೆ ) ಪ್ರಜ್ಞಾವಾದಾಂಶ್ಚಭಾಷಸೆ – ನಿನ್ನಬುದ್ಧಿಮಾತ್ರಕ್ಕೆ ತೋರಿದ ಮಾತುಗಳನ್ನ ಹೇಳುತ್ತೀಯೆ,ನೀನು ಯಾವಮಾತುಗಳನ್ನು ಹೇಳುತ್ತೀಯೋ ಅವು ನಿನ್ನ ಬುದ್ಧಿಮಾತ್ರದಿಂದ ಕಲ್ಪಿತ

(ಗೀ-ವಿ)ಮಾದ ಮಾತುಗಳಲ್ಲದೆ ಜ್ಞಾನಿಗಳಿಗೆ ಸಮ್ಮತವಾಗಿರಲಾರದೆಂದರ್ಥವು. (ಅಥವಾ) ಪ್ರಕರ್ಷೇಣಜಾನಂತೀತಿ ಪ್ರಜ್ಞಾಃ, ತೇಷಾಮುವಾದಾಃ ಪ್ರಜ್ಞಾವಾದಾಃ – ಜ್ಞಾನಿಗಳುಹೇಳಲನರ್ಹವಾದ ಮಾತುಗಳು, „ದೃಷ್ಟ್ವೇಮಂ ಸ್ವಜನಂ ಕೃಷ್ಣ ,, ಇತ್ಯಾದಿ ಪ್ರಥಮಾಧ್ಯಾಯೋಕ್ತವಾದ ನಿನ್ನ ವಾಕ್ಯಗಳಲ್ಲಿ ಪ್ರಾಜ್ಞಸಮ್ಮತವಾದ ವಾದಗಳಿಲ್ಲವು. ಪ್ರಾಜ್ಞರು ಅನುಬಂಧಿಪರ್ಯಂತವಾದ ನರಕೀಯಣ ದ್ವೇಷಿಗಳ ಸಂಹಾರವನ್ನು ಅಧರ್ಮವೆಂದು ಹೇಳಲಾರರೆಂದರ್ಥವು.

(ತ್ರಮುವಾಚ) ಎಂಬುವ ೧೦ನೇ ಶ್ಲೋಕದ ಶಂಕರಭಾಷ್ಯವು.

ಈ ಸಂದರ್ಭದಲ್ಲಿ (ದೃಷ್ಟ್ವಾತು ಪಾಂಡವಾನೀಕಂ) ಎಂಬ ಶ್ಲೋಕಾದಿಯುವವನ್ನು ಮೊದಲು ಮಾಡಿಕೊಂಡು(ನ ಯೋತ್ಸ್ಯ ಇತಿಗೋವಿಂದ ಮುಕ್ತ್ವಾತೂಷ್ಣೀಂಬಭೂವಹ) ಎಂಬ ಪದ್ಯದ ಅಂಶದವರೆಗೂ, ಇರುವ ಗ್ರಂಥರಾಶಿಯು ಪ್ರಾಣಿಗಳಿಗೆ ಶೋಕ ಮೋಹರೂಪವಾಗಿರುವ ಸಂಸಾರಕ್ಕೆ ಬೀಜವಾದ ದೋಷಗಳನ್ನು ವಿಶದ ಪಡಿಸತಕ್ಕದ್ದಾಗಿರುವುದೆಂದುವ್ಯಾಖ್ಯಾನ ಮಾಡಲ್ಪಡಬೇಕಾಗಿರುವುದು. ಅದರವಿವರವೆಂತೆಂದೊಡೆ, ಮೊದಲು ರಾಜ್ಯ, ಗುರು, ಪುತ್ರ, ಮಿತ್ರ, ಸುಹೃತ್, ಸ್ವಜನ, ಸಂಬಂಧಿ, ಬಾಂಧವರಲ್ಲಿ ನಾನು ಇವರವನು ಇವರು ನನ್ನವರು ಎಂಬದಾಗಿರುವ ನಂಬಿಗೆಯನ್ನು ನಿಮಿತ್ತೀಕರಿಸಿಕೊಂಡಿಹ ಸ್ನೇಹವೇ ಕಾರಣವಾಗಿರುವ ಶೋಕ ಮೋಹಗಳು ಅರ್ಜುನನಿಗೆ ಉಂಟಾಗಿರುವುವು ಎಂಬದಾಗಿ ವಿವರಿಸಲ್ಪಟ್ಟಿರುವುದು. (ಕಥಂಭೀಷ್ಮಮಹಂಸಂಖ್ಯೇ) ಯುದ್ಧದಲ್ಲಿ ಭೀಷ್ಮನನ್ನು ನಾನೆಂತು ಕೊಲ್ಲಲಿ? ಎಂಬಿದೇ ಮೊದಲಾದ ಸಂದರ್ಭದಿಂದ ಶೋಕ ಮೋಹಗಳ ಮೂಲಕವಾಗಿ ಯು

(೩೦) ಕ್ಷಾತ್ರ ಯುಕ್ತವಿಚಾರಪೂರ್ವಕವಾಗಿರುವ ವಿವೇಕ ಭ್ರಷ್ಟನಾದ ಅರ್ಜುನನು ಆದಿಯೊಳು ತಾನಾಗಿಯೇ ಕ್ಷತ್ರ ಧರ್ಮವಾದ ಯುದ್ಧದಲ್ಲಿ ಪ್ರವರ್ತಿಸಿದವನಾದಾಗ್ಯೂ ಅಂತಹ ಯುದ್ಧವನ್ನೆಸಗದೆ ವಿರಮಿಸುವಂಥವನಾದನು. ಮತ್ತು ಪರರ ಧರ್ಮವಾದ ಭಿಕ್ಷಾ ವೃತ್ತಿಯಿಂದ ಜೀವಿಸುವುದಕ್ಕೆ ಪ್ರವರ್ತಿಸಲಿಚ್ಛೈಸಿದನು. ಶೋಕ ಮೋಹಗಳಗೊಳಗಾದ ಮನಸ್ಸುಳ್ಳವರಿಗೆ ಸ್ವಧರ್ಮ ಪರಿತ್ಯಾಗ ಬುದ್ಧಿಯು, ನಿಷಿದ್ಧ ಧರ್ಮಾಚರಣೆಯಲ್ಲಿ ಆಸಕ್ತಿಯೂ ಉಂಟಾಗುವುದು ಸಹಜವಾಗಿಯೇ ಇರುತದೆ. ಒಂದುವೇಳೆ ಸ್ವಧರ್ಮದಲ್ಲಿ ಪ್ರವೃತ್ತಿಯುಳ್ಳವರಾದರೂ ಅಂಥವರ ವಾಙ್ಮನಃ ಕಾಯಾದಿಗಳ ಪ್ರವೃತ್ತಿಯೆಂಬುವದು ಫಲಾಭಿಲಾಷೆ ಯನ್ನೊಳ ಗೊಂಡದ್ದಾಗಿಯೂ, ಅಹಂಕಾರ ಪೂರ್ವಕವಾದದ್ದಾಗಿಯೂ ಇರುವುದು. ಹೀಗಿರಲಿಕ್ಕಾಗಿಯೇ ಧರ್ಮಾ ಧರ್ಮಗಳ ಅಭಿವೃದ್ಧಿಯ ದೆಶೆಯಿಂದ ಇಷ್ಟಾ ನಿಷ್ಟಗಳಾದ ಜನ್ಮ ಸುಖ ದುಃಖ ಲಾಭ ಲಕ್ಷಣವುಳ್ಳ ಸಂಸಾರವು ಶಾಂತವಾಗದೆ ಸಂತತವಾಗಿರುವುದು. ಆದುದರಿಂದಲೇ ಶೋಕ ಮೋಹಗಳು ಸಂಸಾರಕ್ಕೆ ಬೀಜಭೂತ ಗಳಾಗಿರುತವೆ. ಇಂತಹ ಶೋಕ ಮೋಹಗಳ ಆತ್ಯಂತಿಕವಾದ ನಿವೃತ್ತಿಯೆಂಬುವುದು ಸರ್ವ ಕರ್ಮ ಸಂನ್ಯಾಸ ಪೂರ್ವಕವಾಗಿರುವ ಆತ್ಮಜ್ಞಾನದಿಂದಲೇ ಆಗಬೇಕಾಗಿರುವದಲ್ಲದೆ ಬೇರೊಂದು ದಾರಿಯಿಂದ ಎಂದಿಗೂ ಸಂಭವಿಸತಕ್ಕವ್ದಲ್ಲವು. ಸರ್ವಲೋಕಾನುಗ್ರಹಾರ್ಥವಾಗಿಯೇ ಭಗವಂತನಾದ ಶ್ರೀ ವಾಸುದೇವನು ಅಂತಹ ಸೂಕ್ಷ್ಮಧರ್ಮವನ್ನು ಅರ್ಜುನನಂ ಕುರಿತು ( ಅಶೋಚ್ಯಾನನ್ವಶೋಚಸ್ತ್ವಂ ) ಎಂದಿದೇ ಮೊದಲಾದ ಗ್ರಂಥರಾಶಿಯಿಂದ ಉಪದೇಶಿಸಲುಇಷ್ಟಪಟ್ಟವನಾದನು.

(೩೦) ಇಲ್ಲಿ ಕೆಲವರು "ಸರ್ವಕರ್ಮಸಂನ್ಯಾಸ ಪೂರ್ವಕವಾದ ಕೇವಲಾತ್ಮಜ್ಞಾನ ನಿಷ್ಠೆಯಿಂದಲೇ ಕೈವಲ್ಯವೆಂಬುವುದು ಸಮನಿಸಲಾರದು. ಅಗ್ನಿಹೋತ್ರವೇ ಮೊದಲಾಗಿರುವ ಶ್ರೌತಸ್ಮಾರ್ತ ಮುಂತಾದ ಕರ್ಮಗಳಿಂದ ಸಹಿತವಾದ ಜ್ಞಾನದಿಂದಲೇ ಕೈವಲ್ಯ ಪ್ರಾಪ್ತಿಯಾಗುವುದು. ಇದೇ ಅರ್ಥವೇ ಗೀತೆಯಲ್ಲೆಲ್ಲಾ ನಿಶ್ಚಿತವಾಗಿದೆ.

ಈ ಸಂದರ್ಭಕ್ಕೆ ಜ್ಞಾಪಕವೇನೆಂದರೆ ?" ( ಗೀ-೨-೩೩ ) ಅಥಚೇತ್ತ್ವಂ ಧರ್ಮ್ಯಮಿಮಂ ಸಂಗ್ರಾಮಂ ನಕರಿಷ್ಯಸಿ। ತತಸ್ಸ್ವಧರ್ಮಂಕೀರ್ತಿಂಚ ಹಿತ್ವಾ ಪಾಪ ಮವಾಪ್ಸ್ಯಸಿ॥ ಕರ್ಮಣ್ಯೇ ವಾಧಿಕಾರಸ್ತೇ, ಕುರುಕರ್ಮೈವ ತಸ್ಮಾತ್ತ್ವಂ, (ಅ)ಧರ್ಮವಿರಹಿತ ವಾಗದಿರುವಯುದ್ಧವನ್ನು ಮಾಡದೆ ಹೋದರೆ ಬಳಿಕ ಧರ್ಮವನ್ನು ಕೀರ್ತಿಯನ್ನೂ ನೀಗಿಕೊಂಡು ಪಾಪವನ್ನೇ ಪಡೆಯುತ್ತೀಯೆ, ಕರ್ಮದಲ್ಲಿಯೇ ನಿನಗೆ ಅಧಿಕಾರವು, ಆದುದರಿಂದಲೇ ನೀನು ಕರ್ಮಗಳನ್ನಾಚರಿಸು, ಎಂಬಿದೇ ಮೊದಲಾಗಿ ಹೇಳಿರೋಣವೇ ಪ್ರಮಾಣವು. ವೈದಿಕವಾದ ಕರ್ಮವು ಹಿಂಸೆ ಮೊದಲಾದವುಗಳಿಂ ದೊಡಗೂಡಿರುವುದರಿಂದ ಅಧರ್ಮ ಹೇತುವಾಗುವದೆಂಬದಾಗಿ ಆ ಶಂಕೆಯನ್ನು ಮಾಡಲಾಗದು, ಏತಕಂದರೆ ? ಗುರು ಭ್ರಾತೃ ಪುತ್ರಾದಿಗಳಹಿಂಸೆಯೇ ಮುಂತಾಗಿರುವ ಯುದ್ಧ ಲಕ್ಷಣಮುಳ್ಳ ಕ್ಷಾತ್ರಕರ್ಮವು ಕ್ರೂರವಾದಾಗ್ಯೂ ಸ್ವಧರ್ಮವಾದುದರಿಂದ ಅಧರ್ಮರೂಪವಾಗಲಾರದು, ಅಂತಹ ಕರ್ಮವನ್ನು ಆಚರಿಸದೆಹೋದರೆ, " ( ಗೀ॥ ೨-೩೩ ) ತತಸ್ಸ್ವಧರ್ಮಂಕೀರ್ತಿಂಚ ಹಿತ್ವಾಪಾಪ ಮವಾಪ್ಸ್ಯಸಿ-(ಅ) ಸ್ವಧರ್ಮವಾದ ಯುದ್ಧವನ್ನು ಮಾಡದಿದ್ದರೇ ಧರ್ಮಕೀರ್ತಿಗಳನ್ನು ಕಳೆದುಕೊಂಡು ಪಾಪಿಯಾಗುವಿ, ಎಂಬುವದಾಗಿ ಹೇಳುವ ಪರಮಾತ್ಮನಿಂದ ಜೀವಿಸಿರುವ

(೩೦) ಪರ್ಯನ್ತವು ಅನುಷ್ಠೇಯವೆಂಬದಾಗಿ ಶ್ರುತಿಚೋದಿತ ವಾದ ಪಶುಹಿಂಸಾಲಕ್ಷಣವುಳ್ಳ ಕರ್ಮಗಳಿಗೇ ಅಧರ್ಮಸಂಬಂಧವಿಲ್ಲವೆಂಬ ಅಂಶವು ನಿಶ್ಚಯವಾಗಿ ಹೇಳಲ್ಪಟ್ಟಿರುತ್ತೆಂದು ,, ಹೇಳುತ್ತಾರೆ, ಬುದ್ಧಿದ್ವಯವನ್ನಾಶ್ರಯಿಸಿರುವ ಜ್ಞಾನಕರ್ಮ ನಿಷ್ಠೆಗಳಿಗೆ ವಿಭಾಗ ವಚನ ವಿರುವುದರ ದೆಶೆಯಿಂದ, ಅದುಅಸಂಗತವು. ,, ಅಶೋಚ್ಯಾನನ್ವಶೋಚಸ್ತ್ವಂ ,, ಎಂಬ ಶ್ಲೋಕಾವಯವವನ್ನು ಮೊದಲು ಮಾಡಿಕೊಂಡು 'ಸ್ವಧರ್ಮಮಪಿಚಾವೇಕ್ಷ್ಯ, ಎಂಬ ಶ್ಲೋಕಾಂಶದವರೆಗೂ ಇರುವ ಗ್ರಂಥದಿಂದ ಭಗವಂತನು ಯಾವ ಪರಮಾರ್ಥಾತ್ಮ ತತ್ವವನ್ನು ನಿರೂಪಣ ಮಾಡಿದನೋ ಅದುಸಾಂಖ್ಯವೆನ್ನಲ್ಪಡುವುದು.

ಆತ್ಮನಿಗೆ ಜನ್ಮಾದಿ ವಿಕಾರ ರಾಹಿತ್ಯದ ದೆಶೆಯಿಂದ ಆತ್ಮನು ಕರ್ತೃವಲ್ಲವೆಂಬ ಪ್ರಕರಣದ ಅರ್ಥನಿರೂಪಣೆಯಿಂದ ಯಾವಬುದ್ಧಿ ಉಂಟಾಗುವದೋ ಅದೇ ಸಾಂಖ್ಯಬುದ್ಧಿಯು, ಅಂತಹ ಬುದ್ಧಿಯು ಯಾರಲ್ಲಿ ಯಾದರೆ ಅಭಿವೃದ್ಧಿಯನ್ನು ಪಡೆಯುವುದೋ ಅವರೇ ಸಾಂಖ್ಯರೆನ್ನಲ್ಪಡುತ್ತಾರೆ. ಈ ದೃಶವಾದ ಬುದ್ಧಿಯು ಆವಿರ್ಭಾವಕ್ಕಿಂತಲೂ ಪೂರ್ವದಲ್ಲಿ ಆತ್ಮನಿಗೆ ದೇಹಾದಿ ವ್ಯತಿರಿಕ್ತತ್ವ ಕರ್ತೃತ್ವ ಭೋಕ್ತೃತ್ವಾ ದ್ಯಪೇಕ್ಷೆಯುಳ್ಳ ಧರ್ಮಾಧರ್ಮ ವಿವೇಕಪೂರ್ವಕವಾಗಿರುವ ಮೋಕ್ಷಸಾಧನಾನುಷ್ಠಾನ ಲಕ್ಷಣವುಳ್ಳದ್ದು ಯೋಗವೆನಿಸುವುದು, ಅದನ್ನು ವಿಷಯೀಕರಿಸಿಕೊಂಡಿರುವ ಬುದ್ಧಿಯೇ ಯೋಗಬುದ್ಧಿಯು, ಇಂತಹ ಬುದ್ಧಿಯು ಯಾರಲ್ಲಿಯಾದರೆ ವೃದ್ಧಿಯನ್ನು ಪಡೆಯುವುದೋ ಅವರು ಯೋಗಿಗಳೆನ್ನಲ್ಪಡುವರು. ,, (ಗೀ-೨-೩೯) ಏಷಾತೇ ಽ ಭಿಹಿತಾ ಸಾಂಖ್ಯೇ ಬುದ್ಧಿರ್ಯೋಗೇ ತ್ವಿಮಾಂಶೃಣು ,, ಎಂಬುವದರಿಂದ ಹಿಂದೆ ವಿವರಿಸಿದ ಎರಡು ಬಗೆ

(೫೦) ಗಳಲ್ಲಿ ಜ್ಞಾನಯೋಗ ನಿಷ್ಠರಾದವರಿಗೆ ಸಾಂಖ್ಯ ಬುದ್ಧ್ಯಾಶ್ರಯ ವಾಗಿರುವುದು ಬೇರೆಯಾಗಿರುವುದೆಂಬ ದಾಗಿಯೂ, ಹಾಗೆಯೇ ಕರ್ಮಯೋಗನಿಷ್ಠರಾದ ಯೋಗಿಗಳಿಗೆ ಯೋಗಬುದ್ಧಿಯ ನ್ನಾಶ್ರಯಿಸಿಕೊಂಡಿರುವುದು ಬೇರೆಯೆಂಬ ದಾಗಿಯೂ, “(ಗೀ-೩-೩) ಕರ್ಮಯೋಗೇನಯೋಗಿನಾಂ” ಎಂಬುವದರಿಂದ ತಿಳಿಸುವನು. ಕರ್ತೃತ್ವಾ ಕರ್ತೃತ್ವ ಅನೇಕತ್ವೈಕತ್ವ ಬುದ್ಧ್ಯಾಶ್ರಯಗಳಾಗಿರುವ ಜ್ಞಾನಕರ್ಮಗಳು ಒಂದೇಸಮಯದಲ್ಲಿ ಒಬ್ಬ ಪುರುಷನನ್ನು ಆಶ್ರಯಿಸಿಕೊಂಡಿರುವಿಕೆಯು ಅಸಂಭವವೆಂದರಿತಿರುವ ಭಗವಂತನಿಂದ ಸಾಂಖ್ಯಯೋಗ ಬುದ್ಧಿಗಳನ್ನನುಸರಿಸಿ ಎರಡು ಬಗೆಯಾದ ನಿಷ್ಠೆಗಳು ವಿವರಿಸಲ್ಪಟ್ಟಿರುವವು. ಅದಕ್ಕನುಸಾರವಾಗಿಯೇ ಬ್ರಾಹ್ಮಣದಲ್ಲಿ ವಿಭಾಗ ವಚನವೂ ನಿರೂಪಿಸಲ್ಪಟ್ಟಿರುವುದು. ಸಂನ್ಯಾಸಾಪೇಕ್ಷೆಯುಳ್ಳ ಬ್ರಹ್ಮಜ್ಞಾನಿಗಳು ಸಂನ್ಯಾಸನಿಷ್ಠರ ಈ ಲೋಕವನ್ನಪೇಕ್ಷಿಸುವಂತವರಾಗಿ ಸನ್ಯಾಸವನ್ನುತೆಗೆದುಕೊಳ್ಳುವರು (ಬೃ-ಉ-೬-೪-೨೨),, ಎಂಬದರಿಂದ ಸರ್ವಕರ್ಮಸನ್ಯಾಸವನ್ನು ವಿಧಿಸಿ ಅದಕ್ಕೆ ಅಂಗವಾಗಿ “ಯಾವನಮಗೆ ಈ ಆತ್ಮನೇ ಸನ್ಯಾಸಿಪ್ರಾಪ್ಯವೆಂದಭಿಮತವಾದ ಲೋಕವಾಗಿರುವುದೋ ಅಂತಹ ನಮಗೆ ಸಂತಾನದಿಂದೇನು,, ಎಂದುನ್ನು ಹೇಳಿರುವದು. (ಅಲ್ಲಿಯೇಬೃ-ಉ-೩-೪-೧೨) ದಾರಪರಿಗ್ರಹ ಮಾಡುವದಕ್ಕಿಂತಲೂ ಪೂರ್ವದಲ್ಲಿ ಪ್ರಾಕೃತನಾದ ಆತ್ಮನು ಧರ್ಮಜಿಜ್ಞಾಸೋತ್ತರಕಾಲದಲ್ಲಿ ಮಾನುಷ ದೈವ ಪಿತೃಲೋಕತ್ರಯ ಸಾಧಕವಾಗಿರುವ ಪುತ್ರನನ್ನು ಮನುಷ್ಯಲೋಕಪ್ರಾಪ್ತಿ ಸಾಧಕವಾಗಿರುವ, ದೈವಮಾನುಷಗಳೆಂಬ ಎರಡು ಬಗೆಯಾದ ವಿತ್ತವನ್ನು ಸಹ ಅವಿದ್ಯಾಕಾಮುಕನಿಗೇನೆ ವಿವರಿಸಿರುವವು, ಆತ್ಮ ಲೋಕವನ್ನಪೇಕ್ಷಿಸು

(೩೦) ನ ಅಕಾಮುಕನಿಗೆ ಇವುಗಳ ದೆಸೆಯಿಂದ ವ್ಯುತ್ಥಾನ ವು ನಿರೂಪಿಸಲ್ಪಟ್ಟದೆ. ಶ್ರೌತಕರ್ಮ ಜ್ಞಾನಗಳಿಗೆ ಸಮು ಚ್ಚಯವೇ ಅಭಿಮತವಾಗಿದ್ದ ಪಕ್ಷದಲ್ಲಿ ವಿಭಾಗವಚನವೆಂ ಬುದು ಅನುಪ ಪನ್ನವಾಗಬೇಕಾಗುವುದು. ಜ್ಞಾನಕರ್ಮಗಳು ಏಕಪುರುಷಾನುಷ್ಠಾನಕ್ಕೆ ವಿರುದ್ಧಗಳೆಂಬರ್ಥವು ಭಗವಂತ ನಿಂದಮೊದಲು ನಿರೂಪಿಸಲ್ಪಟ್ಟಿತು. ಹಾಗಿಲ್ಲದಿದ್ದರೆ ಕರ್ಮ ಕ್ಕಿಂತಲೂ ಬುದ್ಧಿಯು ಶ್ರೇಷ್ಠವಾದದ್ದೆಂಬದಾಗಿ ಅರ್ಜುನನು ಭಗವಂತನಲ್ಲಿ ಅನೃತವಾಗಿ ಆರೋಪಿಸುತಿದ್ದನೆ? ಜ್ಯಾಯ ಸೀಚೇತ್ಕರ್ಮಣಸ್ತೆ ಮತಾಬುದ್ಧಿ ರ್ಜನಾರ್ದನ, ಎಂಬು ದರಿಂದ ಇದೇಅರ್ಥವು ವ್ಯಕ್ತವಾಗಿರುವುದು. ಯಚ್ಛ್ರೇ ಯಏತಯೋರೇಕಂ ತನ್ಮೇಬ್ರೂಹಿಸುನಿಶ್ಚಿತಂ, ಎಂಬವಾಗಿಎ ರಡರಲ್ಲಿ ಯೊಂದರ ವಿಷಯವಾಗಿಯೇ ಪ್ರಶ್ನೆಯನ್ನುಮಾಡ ಲು ನಿಮಿತ್ತವೇನು? ಪಿತ್ತಶಾಂತಿಯನ್ನು ಬಯಸುವವನಿಗೆ ವೈದ್ಯನು ಮಧುರ ಪದಾರ್ಥವನ್ನು ಶೀತಪದಾರ್ಥವನ್ನೂ ಭೋಜನವನ್ನು ಮಾಡೆಂದು ಹೇಳಿದರೆ ಅದರಮೇಲೆ ಈ ಎರ ಡರಲ್ಲಿ ಯಾವದಾದರೊಂದು ಪಿತ್ತಶಮನವಾಗಿರುವದನ್ನು ಹೇ ಳೆಂಬದಾಗಿ ಕೇಳುವ ಪ್ರಶ್ನೆಯು ಉಚಿತವಾದದ್ದೆಂದು ಹೇಳ ಲಿಕ್ಕಾಗುವುದಿಲ್ಲ. ಒಂದುವೇಳೆ ಭಗವಂತನು ಹೇಳಿದ ಅರ್ಥ ದಲ್ಲಿ ವಿವೇಚನೆಯನ್ನು ಮಾಡಿಕೊಳ್ಳುವುದಕ್ಕೆ ಶಕ್ತಿಯಿಲ್ಲದೆ ಯಿರುವುದರಿಂದ ಅರ್ಜುನನಾರೀತಿ ಪ್ರಶ್ನೆಮಾಡಬಹುದೆಂ ದು ಹೇಳಿದರೆ ಆಗಲೂ ಭಗವಂತನು ಪ್ರಶ್ನಾನುಸಾರವಾಗಿ ಯೇ ಉತ್ತರವನ್ನು ಕೊಡಬೇಕಾಗಿತ್ತು, ಹಾಗೆ ಭಗವಂತನು ಬುದ್ಧಿ ಕರ್ಮಗಳೆರಡೂ ಸಮುಚ್ಚಯವಾಗಿ ನನ್ನಿಂದ ಹೇಳ ಲ್ಪಟ್ಟಿತು, ನೀನು ಹೀಗೆ ಭ್ರಾಂತನಾಗಲು ಕಾರಣವೇನು? ಎಂಬಿದೇ ಮುಂತಾದ ಪ್ರತಿವಚನವನ್ನು ಹೇಳಿಯೂಇಲ್ಲ. ಮ

(೯೦) ತ್ತು ಎರಡು ನಿಷ್ಠೆಗಳೂ ಮೊದಲು ನನ್ನಿಂದ ಹೇಳ ಲ್ಪಟ್ಟವೆಂಬವಾಗಿಯೇ ಹೇಳುವುದೇ ಉಚಿತವಾಗಿತ್ತು, ಸ್ಮಾರ್ತ ಕರ್ಮದಿಂದಲೇ ಬುದ್ಧಿಗೇ ಸಮುಚ್ಚಯವೂ ಇಷ್ಟವಾಗಿದ್ದರೆ ವಿಭಾಗವಚನವೆಲ್ಲವೂ ಅಸಂಗತವಾಗುವುದು. ಮತ್ತು ಕ್ಷತ್ರಿಯನಿಗೆ ಯುದ್ಧವು ಸ್ಮಾರ್ತ ಸ್ವಧರ್ಮವೆಂದು ತಿಳಿದಿರುವವನಾದಾಗ್ಯೂ ‹‹ತತ್ಕಿಂ ಕರ್ಮಣಿಘೋರೇಮಾಂನಿಯೋಜಯಸಿಕೇಶವ ›› ಎಂಬವಾಗಿ ಅರ್ಜುನನ ತಿರಸ್ಕಾರವು ಅನುಪನ್ನ ವಾಗುವುದು. ಆದಕಾರಣದಿಂದಲೇ ಈ ಗೀತಾಶಾಸ್ತ್ರದಲ್ಲಿ ಶ್ರೌತಸ್ಮಾರ್ತ ಕರ್ಮದಿಂದ ಆತ್ಮಜ್ಞಾನಕ್ಕೆ ಈ ಪತ್ತಾದರೂ ಸಮುಚ್ಚಯವನ್ನು ತೋರಿಸಲಿಕ್ಕೆ ಯಾರಿಂದಲೂ ಆಗುವದಿಲ್ಲ, ಅಜ್ಞಾನದಿಂದ ಲಾದರೂ, ರಾಗಾದಿ ದೋಷದಿಂದಲಾದರೂ, ಕರ್ಮದಲ್ಲಿ ಪ್ರವೃತ್ತನಾದ ಯಾವನಿಗಾದರೆ ಯಜ್ಞದಾನ ತಪಸ್ಸು ಮೊದಲಾದವುಗಳಿಂದ ಶುದ್ಧ ಸತ್ವವು ತಲೆದೋರಿ ಪರಮಾರ್ಥ ತತ್ವವಿಷಯವಾದ ಜ್ಞಾನವುಂಟಾಗುವುದರಿಂದಕರ್ತೃತ್ವಾದಿ ಶೂನ್ಯವಾಗಿರುವುದಾತ್ಮ ಪದಾರ್ಥ ವೊಂದೇ ಎಂಬ ಸ್ಫೂರ್ತಿಯುಂಟಾಗಿ ಕರ್ಮವೂ ಆ ಕರ್ಮಪ್ರಯೋಜನವೂ ನಿವೃತ್ತವಾದಾಗ್ಯೂ ಲೋಕಸಂಗ್ರಹಕ್ಕಾಗಿಯೇ ಪೂರ್ವದಂತೆ ಪ್ರವರ್ತಿಸುತಲಿದ್ದಾಗ್ಯೂ ಆ ಪ್ರವೃತ್ತಿರೂಪವಾದಕರ್ಮವು ಕರ್ಮವೇಅಲ್ಲವು, ಅದರಿಂದ ಸಮುಚ್ಚಯವನ್ನು ಹೇಳುವುದುಹೇಗೆ ? ಭಗವಂತನಾದ ಶ್ರೀವಾಸುದೇವನ ಕ್ಷತ್ರಧರ್ಮ ವ್ಯಾಪಾರವು ಜ್ಞಾನದೊಡನೆ ಸಮುಚ್ಚಯವಂ ಹೊಂದಲಾರದು, ಈ ವಾಸುದೇವನ ಕ್ಷತ್ರಧರ್ಮಾನುಷ್ಠಾನವು ಪುರುಷಾರ್ಥ ಸಿದ್ಧಿಗೋಸ್ಕರ ವೆಂಬದಾಗಿಯೂ ಹೇಳಲಿಕ್ಕಾಗುವುದಿಲ್ಲವು, ಹಾಗೆಯೇ ಫಲಾಭಿಲಾಷೆಯು ಅಹಂಕಾರವೂ ಇಲ್ಲದೇ ಇರುವಿಕೆಯೆಂಬುವುದು ಸಮಾ

(ಶಂ) ನವಾಗಿರುವುದರಿಂದ ಇಲ್ಲಿಯೂ ಸಮುಚ್ಚಯವಂಕೇ ಳಕೂಡದು, ತತ್ವವಿತ್ತಾದವನು ನಾನು ಮಾಡುತ್ತೇನೆಂದು ಅಭಿಮಾನವನ್ನು ಹೊಂದುವುದಿಲ್ಲವು. ಮತ್ತು ಫಲಾಭಿಲಾ ಷಿಯಾಗುವುದೂ ಇಲ್ಲವು. ಕಾಮ್ಯವಾದ ಅಗ್ನಿಹೋತ್ರಾದಿ ಗಳಲ್ಲಿ ಪ್ರವರ್ತಿಸತಕ್ಕವನಿಗೇ ಮಧ್ಯಕಾಲದಲ್ಲಿ ಫಲೇಚ್ಛೆಯು ವಿನಷ್ಟವಾದರೇ ಆ ಅಗ್ನಿಹೋತ್ರಾದಿ ಕರ್ಮವು ಕಾಮ್ಯವಾಗ ಲಾರದು, ಆತನು ಲೋಕಸಂಗ್ರಹಾರ್ಥವಾಗಿ ಕರ್ಮಗಳನ್ನು ಮಾಡುತಿದ್ದರೂ ಕರ್ಮದಿಂದ ಬದ್ಧನಾಗುವದಿಲ್ಲವೆಂಬವಾಗಿ ಭ ಗವಂತನೇ ಹೇಳಿರುತ್ತಾನೆ, ಆದರೆ ‟ಪೂರ್ವಾಪೂರ್ವಪುರುಷರೆಲ್ಲ ರೂ ಕರ್ಮಾಚರಣೆಯನ್ನು ಮಾಡಿರುವರು'' ಅಲ್ಲದೆ ‟ಕರ್ಮದಿಂ ದಲೇ ಜನಕಾದಿಗಳು ಸಂಸಿದ್ಧಿಯನ್ನು ಪಡೆದರು'' ಎಂಬವಾ ಗಿ ಹೇಳಲ್ಪಟ್ಟಿರುವುದೆಂದರೆ? ಅದಂ ವಿಚಾರದಿಂದಅರಿಯಬೇ ಕು, ಅದೆಂತೆಂದರೆ, ಒಂದುವೇಳೆ ಪೂರ್ವಿಕರಾದ ಜನಕಾದಿಗಳು ತತ್ತ್ವಜ್ಞರಾದಾಗ್ಯೂ ಕರ್ಮದಲ್ಲಿ ಪ್ರವೃತ್ತರಾದರೆ ಲೋಕಸಂ ಗ್ರಹಕ್ಕೆಂದೇ ಭಾವಿಸಬೇಕು. ‟ ಕಾರಣಾತ್ಮಕಗಳಾದ ಗುಣ ಗಳೇ ವಿಷಯಾತ್ಮಕಗಳಾದಗುಣಗಳಲ್ಲಿ ಪ್ರವರ್ತಿಸುತ್ತವೆ,, ಎಂ ಬದಾಗಿ ತಿಳಿದುಸಂಸಿದ್ಧಿಯನ್ನುಪಡೆದರು, ಕರ್ಮಸಂನ್ಯಾಸವುಂ ಟಾದಾಗ್ಯೂ ಕರ್ಮದೊಡನೆಯೇ ಕರ್ಮಸಂನ್ಯಾಸರೂಪವಾದ ಸಿದ್ಧಿಯಂ ಹೊಂದಿರುವರು, ಕರ್ಮಸಂನ್ಯಾಸವನ್ನು ಮಾಡಲಿಲ್ಲ ವೆಂದರ್ಥವು. ಕರ್ಮಸಂನ್ಯಾಸವನ್ನು ಆಚರಿಸದಿದ್ದರೆ ಅವರು ಜ್ಞಾನಿಗಳಲ್ಲವು, ಈಶ್ವರನಲ್ಲಿ ಸಮರ್ಪಿಸಲ್ಪಟ್ಟ ಸಾಧನಭೂ ತವಾಗಿರುವ ಕರ್ಮದಿಂದ ಜ್ಞಾನೋತ್ಪತ್ತಿ ಲಕ್ಷಣಮುಳ್ಳ ಸಿ ದ್ಧಿಯನ್ನಾದರೂ ಸತ್ವಸಂಶುದ್ಧಿರೂಪವಾದ ಸಂಸಿದ್ಧಿಯ ನ್ನಾದರೂ ಜನಕಾದಿಗಳು ಪಡೆದರೆಂಬದಾಗಿ ಯಾರಾದರೂ ಹೇಳಲೇಬೇಕು. ‟ಸತ್ವಸಂಶುದ್ಧಿಗಾಗಿಯೇ ಕರ್ಮವನ್ನಾಚರಿಸು

(ಶಂ)ವರು, "ಸ್ವಕರ್ಮದಿಂದ ಅಭ್ಯರ್ಚಿಸಿ ಮಾನವರು ಸಿದ್ಧಿಯುನ್ನು ಪಡೆಯುವರು, ಎಂಬದಾಗಿ ಹೇಳಿ ಹಾಗೆ ಸತ್ವಶುದ್ಧಿಯುನ್ನು ಹೊಂದಿದಬಳಿಕ ಪುನಹಾ ಜ್ಞಾನನಿಷ್ಠೆಯನ್ನು ಭಗವಂತನು "ಸಿದ್ಧಿಂಪ್ರಾಪ್ತೋಯಥಾಬ್ರಹ್ಮ, ಎಂಬುದರಿಂದ ಹೇಳಿರುವನು. ಆದುದರಿಂದ ಈಗೀತಾಶಾಸ್ತ್ರದಲ್ಲಿ ಕೇವಲ ವಾದ ತತ್ವಜ್ಞಾನದಿಂದಲೇ ಮೋಕ್ಷ ಪ್ರಾಪ್ತಿಯುಂಟಾಗುವುದಲ್ಲದೆ ಕರ್ಮಸಮುಚ್ಚಿತವಾದ ಜ್ಞಾನದಿಂದ ಆ ವಿಭಾಗಿಸುವದಿಲ್ಲವೆಂಬದಾಗಿ ನಿಶ್ಚಿತವಾಗಿರುವುದು. ಇದೇ ಅರ್ಥವೇ ಪ್ರಮಾಣಿಕವೆಂಬ ವಿಷಯದಲ್ಲಿ ಆಯಾಯ ಪ್ರಕರಣಾನುಸಾರವಾದ ಸಂದರ್ಭದಲ್ಲಿ ವಿಭಾಗಮಾಡಿ ತೋರಿಸಲ್ಪಡುವುದು. (ಅಲ್ಲಿ ಈಪ್ರಕಾರ ಧರ್ಮದವಿಷಯದಲ್ಲಿ ಮೂಢವಾದ ಮನಸ್ಸುಳ್ಳವನಾಗಿ ಮಹತ್ತರವಾದ ಶೋಕಸಾಗರದಲ್ಲಿ ನಿಮಗ್ನನಾದ ಅರ್ಜುನನಿಗೆ ಆತ್ಮಜ್ಞಾನಕ್ಕಿಂತಲೂ ಮತ್ತೊಂದು ಉದ್ಧಾರ ಕಾರಣವಿಲ್ಲವೆಂದರಿತಿರುವ ಭಗವಂತನಾದ ಶ್ರೀ ವಾಸುದೇವನು ಅರ್ಜುನನನ್ನು ಉದ್ಧರಿಸಲಿಚ್ಛೆಯುಳ್ಳವನಾಗಿ ಆತ್ಮಜ್ಞಾನಕ್ಕೋಸ್ಕರ ಸಂಕ್ಷೇಪವನ್ನು ಪ್ರಕಾಶಪಡಿಸುತ್ತಾನೆ.)

ಮೂ|| ನತ್ವೇ ವಾಹಂ ಜಾತು ನಾ ಸಂ ನತ್ವಂ ನೇ
ಮೇಜನಾಧಿಪಾಃ । ನಚೈವ ನ ಭವಿಷ್ಯಾಮ ಸ್ಸರ್ವೇ
ವಯಮತಃ ಪರಮ್ || ||೧೨||

ಪ|| ನ - ತು - ಏವ - ಅಹಂ - ಜಾತು - ನ - ಆಸಂ - ನ - ತ್ವಂ - ನ - ಇಮೇ - ಜನಾಧಿಪಾಃ|ನ- ಚ- ಏವ- ನ- ಭವಿಷ್ಯಾಮಃ -ಸರ್ವೇ-ವಯಂ-ಅತಃ-ಪರಮ್||

ಅ|| ಅಹಂ - ನಾನು, ಜಾತು - ಯಾವಕಾಲದಲ್ಲಿಯು, ನಾಸಮಿತಿನ - ಇರಲಿಲ್ಲವೆಂಬುವದಿಲ್ಲ, ಇಮೇಜನಾಧಿಪಾಶ್ಚ - ಈ ರಾಜರುಗಳು ಕೂಡ, ನಾಸನ್ನಿತಿನ - ಇಲ್ಲವೆಂಬುವದಿಲ್ಲ, ಸರ್ವೇವಯಂ - ಸಕಲರಾದ ನಾವುಗಳು, ನಭವಿಷ್ಯಾಮಇತಿನ - ಇರುವದಿಲ್ಲವೆಂಬುವದಿಲ್ಲ, (ಯಾವಾಗಲೂ ಎಲ್ಲರು ಇರುತ್ತಾರೆಂದು ತಾತ್ಪರ್ಯವು.)

( ರಾ|| ಭಾ|| ) (ಅವತಾರಿಕಾ|| ಮೊದಲು ಆತ್ಮಸ್ವಭಾವವ
ನ್ನು ಕೇಳು.) ಅನಾದಿಯಾಗಿ ವರ್ತಿಸುತ್ತಲಿರುವ ಈ ಕಾ
ಲದಲ್ಲಿ ಇದುವರಿಗೂ ನಾನು ಯಿಲ್ಲದೇ ಇರಲಿಲ್ಲ, ನೀನುಕೂಡ
ಇಲ್ಲದೇ ಇರಲಿಲ್ಲ. ಈ ರಾಜರುಗಳುಕೂಡ ಇಲ್ಲದೇಯಿರಲಿ
ಲ್ಲ, ಇತಃಪರವು ಆ ಪ್ರಕಾರವಾಗಿ ಇಲ್ಲದೇ ಇರುವದಿಲ್ಲ, ಎ
ಲ್ಲರುಯಾವಾಗಲು ಇರತಕ್ಕವರಾಗಿಯೇ ಇರುತ್ತೇವೆ. ಸ
ರ್ವೇಶ್ವರನಾಗಿರುವ ಪರಮಾತ್ಮನಾದ ನಾನು ನಿತ್ಯ ( ನಿತ್ಯ-
ಯಾವಕಾಲದಲ್ಲಿಯೂ ಸ್ಥಿರವಾಗಿರುವನು ) ನೆಂಬುವದರ
ಲ್ಲಿ ಹ್ಯಾಗೇ ಸಂಶಯವಿಲ್ಲ ಹ್ರೀ ಅಪ್ರಕಾರವಾಗಿಯೇ ಜೀವಾತ್ಮ
ರುಗಳಾದನೀವುಗಳು ನಿತ್ಯರೆಂಬುವದಾಗಿ ತಿಳಿದುಕೊಳ್ಳತ
ಕ್ಕದ್ದು, ಇಲ್ಲಿ ಅಜ್ಞಾನ ಮೋಹಿತನಾದ ಪಾರ್ಥನನ್ನು ಕುರಿ
ತು ಆ ಅಜ್ಞಾನವು ನಿವೃತ್ತವಾಗಲು ಯಥಾರ್ಥವಾದ
ಆತ್ಮನಿತ್ಯತ್ವವನ್ನು ಉಪದೇಶಿಸುವ ಈಸಮಯದಲ್ಲಿ, ನಾ
ನು, ನೀನು, ಇವರು ನಾವೆಲ್ಲರು, ಎಂದು ಪ್ರತ್ಯೇಕ ಪ್ರತ್ಯೇಕ
ವಾಗಿ ಹೇಳಿರುವದು ನೋಡಿದರೇ ಜೀವೇಶ್ವರಭೇದವು ಜೀ
ವರಲ್ಲಿ ಪರಸ್ಪರಭೇದವು ಪ್ರಾಮಾಣಿಕವೆಂಬದಾಗಿ ಪರಮಾತ್ಮ
ನಿಂದಲೇ ಹೇಳಲ್ಪಟ್ಟಿತೆಂದು ತಿಳಿಯಬರುತ್ತದೆ.

" ಈ ಭೇದವು ಉಪಾಧಿಯಿಂದ ಪ್ರಾಪ್ತವಾಗಿರು
ವದಾದದರಿಂದ ತತ್ವ ವಾಗಲಾರದೆಂ" ಬದಾಗಿ ಆಕ್ಷೇಪಿ
ಸಬಹುದು, ಆದರೆ ಅದು ಸಂಗತವಾಗಲಾರದು. ಈ ಭೇ
ದೋಪದೇಶವು ತತ್ವವಾಗದ ಪಕ್ಷದಲ್ಲಿ ಅದು ತತ್ವೋ
ಪದೇಶ ಸಮಯದಲ್ಲಿ ಉಪದೇಶಿಸಬಹುದೋ ? ( ತತ್ವೋ
ಪದೇಶ ಕಾಲದಲ್ಲಿ ಇದನ್ನುಪದೇಶಿಸಿರುವದರಿಂದಲೇ ಜೀವೇಶ್ವ
ರ ಭೇದವು ಜೀವರುಗಳಲ್ಲಿ ಪರಸ್ಪರ ಭೇದವು ಪರಮಾರ್ಥವೆನ್ನ
ಲು ಸಂಶಯವಿಲ್ಲವು.) ಮತ್ತು ಈ ಭೇದವು ಯಾವಾಗಲು ಇ

(ರಾ-ಭಾ)ರ ವುದೆನ್ನುವದಂ " ನಿತ್ಯನಾಗಿಯು ಚೇತನನಾಗಿಯು ಅದ್ವಿತೀಯನಾಗಿಯೂ ಇರುವ ಯಾವ ಪರಮಾತ್ಮನು, ನಿತ್ಯರಾಗಿಯು ಅಸಂಖ್ಯೇಯರಾಗಿಯು ಇರುವ ಚೇತನರಾದ ಜೀವಾತ್ಮರುಗಳಿಗೆ ಇಷ್ಟಾರ್ಥಗಳಂ ಕೊಡುತ್ತಾನೊ ? " ಎಂಬಅರ್ಥವಂ ಪ್ರತಿಪಾದಿಸುವ ಶ್ರುತಿವಾಕ್ಯವು ಉದ್ಘೋಷಿಸುತದೆ. " ಅಜ್ಞಾನದಿಂದ ಕಾಣಲ್ಪಡುವ ಭೇದಜ್ಞಾನವಂ ಕಂಡು ಅದನ್ನೇ ಪರಮಾತ್ಮನು ಅರ್ಜುನನಿಗೆ ಉಪದೇಶ ಮಾಡಿದನೆಂದು" ಅದ್ವೈತ ಮತಾನುಸಾರವಾಗಿ ಆಕ್ಷೇಪಿಸಬಹುದು, ಅದುಕೂಡಾ ಅತ್ಯಂತಾ ಸಂಭಾವಿತವು. ಪರಮಾರ್ಥವಂ ಕಾಣಬಲ್ಲನಾದ ಪರಮಾತ್ಮನಿಗೆ * ನಿರ್ವಿಶೇಷ ಕೂಟಸ್ಥ ನಿತ್ಯಚೈತನ್ಯವಾದ ಆತ್ಮನ ಯಥಾರ್ಥವಾದ ಸಾಕ್ಷಾತ್ಕಾರ ಮುಂಟಾಗಿರುವ ಕಾರಣ ಅಜ್ಞಾನವು ಅದರ ಕಾರ್ಯವು ಇಲ್ಲವೇ ಇರುವದರಿಂದ ಅಜ್ಞಾನಕಾರ್ಯವಾದ ಭೇದದರ್ಶನವು ಅದರಿಂದುಂಟಾದ ಉಪದೇಶಾದಿ ವ್ಯವಹಾರಗಳು ಹ್ಯಾಗೆತಾನೇ ಸಂಗತವಾಗಬಹುದು ?

"ಅದು ಸಂಗತವಾಗದಿದ್ದರೂ ಪರಮಸ್ವರೂಪನು ಬಾಧಿತಾನುವೃತ್ತಿ ರೂಪವಾದ ( ಬಾಧಿತವಾದರೂ ಅನುಸರಿಸಿ ಬರುವ ಜ್ಞಾನವಂ ಬಾಧಿತಾನುವೃತ್ತಿ ಎನ್ನುವರು ) ಭೇದಜ್ಞಾನದಿಂದ ಉಪದೇಶಿಸುವನು. ಮೃಗತೃಷ್ಣೆಯನ್ನು ನೋಡಿ ಮೊದಲು ಇದು ಜಲವಲ್ಲ, ಮೃಗತೃಷ್ಣೆಯೇ, ಯೆಂದು ಜ್ಞಾನವುಂಟಾದ ನಂತರವೂಕೂಡ ಆಮೃಗತೃಷ್ಣೆಯಂ ನೀರಿನಂತೆ ತೋರ್ಪಡಿಸುವಜ್ಞಾನವಂ ಬಾಧಿತಾನುವೃ

---

* ನಿರ್ವಿಶೇಷ ಅಂದರೆ ಧರ್ಮಶೂನ್ಯವಾಗಿರುವುದು, ಕೂಟಸ್ಥ ಅಂದರೆ ವಿಕಾರಶೂನ್ಯನಾಗಿರುವುದು.

(ರಾ-ಭಾ) ತ್ತಿ ಎನ್ನುವರು. ಅದರಂತೆ ಪರಮಪುರುಷನಿಗೆ ಅ ದ್ವಿತೀಯಾತ್ಮಜ್ಞಾನವು ವುಂಟಾಗಿದ್ದರೂ ಬಾಧಿತಾನುವೃ ತ್ತಿ ... ಭೇದಜ್ಞಾನವು ಕೆಲವು ಕಾಲದಲ್ಲಿ ಪ್ರಾ ಪ್ತವಾಗಬಹುದು. ಆದರೆ ಬೆಂದವಸ್ತ್ರವು ವಸ್ತ್ರದಂತೆ ಕಾಣಿಸ್ಸಿದ್ದರೂ ಕಾರ್ಯಕರವಲ್ಲದೇ ಇರುವಂತೆ ಅದ್ವೈತಜ್ಞಾ ನದಿಂದ ಬಾಧಿತವಾದ ಭೇದಜ್ಞಾನವು ಪರಮಪುರುಷನಿಗೆ ಬಂಧ ಹೇತುವಾಗಲಾರದಾದುದರಿಂದ ಭೇದಜ್ಞಾನವನ್ನುಪ ದೇಶಿಸುವದು ಯುಕ್ತ,, ವೆನ್ನುವುದು ಕೂಡ ಸರಿಯಾದದ್ದ ಲ್ಲವು, ಒಬ್ಬನಿಗೆ ಇದು ಮೃಗತೃಷ್ಣೆಯೆಂದು ತಿಳಿದಮೇಲಪುನ ಶ್ಚ ಅದು ನೀರಿನಂತೆ ತೋರಿದರೂ ಇದು ಜಲವಲ್ಲ- *ಮೃಗ ತೃಷ್ಣೆಯೇ, ಎಂಬುವ ನಿಶ್ಚಯಜ್ಞಾನ ವುಂಟಾದಮೇಲೆ ಅದಂ ಜಲವೆಂದೆಣಿಸಿ ಅದರಲ್ಲಿ ಸ್ನಾನಪಾನಾದಿಗಳಿಗೆ ಪ್ರಯತ್ನ ವಂ ಮಾಡುವದು ಉಂಟೋ? ಇಲ್ಲ. ಅದರಂತೇ ಇಲ್ಲಿಯು ಅದ್ವೈತ ಜ್ಞಾನದಿಂದ ಬಾಧಿತವಾದ ಭೇದಜ್ಞಾನವು ಪ ರಮಾತ್ಮನನ್ನನುಸರಿಸಿ ಬರುವದೆಂದು ಹೇಳಿದರೂನೂ ಈ ಭೇದಜ್ಞಾನವು ವಾಸ್ತವವಲ್ಲ-ಮಿಥ್ಯಾ (ಅಂದರೆ ಸುಳ್ಳು) ಎಂ ಬವಾಗಿ ಪರಮಾತ್ಮನಿಗೆ ತಿಳಿದಿದ್ದರೂ ತತ್ವೋಪದೇಶಸಮ ಯದಲ್ಲಿ ಇದನ್ನುಪದೇಶಿಸಲು ಪ್ರವರ್ತಿಸುವನೋ? ಪ್ರವರ್ತಿಸ ಲಾರನು. ಮತ್ತು ಪರಮಪುರುಷನಿಗೆ ಬಾಧಿತಾನುವೃತ್ತಿಯಂ ಹೇಳುವದೇ ಅಶಕ್ಯವು, ಮೊದಲು ಅಜ್ಞಾನಿಯಾಗಿದ್ದು ಶಾಸ್ತ್ರಾಭ್ಯಾಸಾದಿಗಳಿಂದ ಅಜ್ಞಾನವು ತೀರಿದವನಿಗಲ್ಲವೇ ಬಾಧಿತಾನುವೃತ್ತಿಯಂ ಹೇಳಬಹುದು. (ಪರಪುರುಷನಿಗೆ ಬಾಧಿತಾನು ವೃತ್ತಿಯಂ ಹೇಳಿದರೇ ಈಶ್ವರನು ಕೆಲವುಕಾ

---

* ಮೃಗತೃಷ್ಣಾ-ಬಿಸಲ್ ಕುದರೆ.

(ರಾ-ಭಾ) ಲದ ವರಿಗೂ ಅಜ್ಞಾನಿಯಾಗಿದ್ದು ಪ್ರಕೃತಿವ
ಶ್ಯರಾದ ನಮ್ಮಗಳಂತೇ ಶಾಸ್ತ್ರಾಭ್ಯಾಸಾದಿಗಳಿಂದ ಆ ಅ
ಜ್ಞಾನವು ನಿವೃತ್ತವಾಗಿರುತದೆಂದು ಹೇಳಿದಂತೆ ಆಗುತದೆ.
ಈ ವಾದದಿಂದ ಸರ್ವಜ್ಞನಾಗಿಯು ಹೇಯಗುಣ ರಹಿತ
ನಾಗಿಯೂ ಇರುವ ಪರಮಾತ್ಮನಿಗೆ ಅಜ್ಞತಾರೂಪವಾದ
ಹೇಯಗುಣವನ್ನಾರೋಪಿಸಿದ್ದು ಮಾತ್ರವೇ ಫಲಿಸುತದೆ) ಈ
ಶ್ವರನು ಕೆಲವು ಕಾಲ ಪರ್ಯನ್ತವು ಅಜ್ಞನಾಗಿದ್ದನೆಂದು ಹೇಳು
ವದುವುಚಿತವೋ ? ಉಚಿತವಲ್ಲ.
„ಉಚಿತವಲ್ಲವಾದರೂ ಆರೋಪಿಸಬಹುದೆಂದು„ ಹೇಳುವುದಾ
ದರೇ ಪರಮಪುರುಷನನ್ನು „ಸರ್ವಜ್ಞನು-ಸರ್ವಾಂತರ್ಯಾಮಿ-
ಸರ್ವಶಕ್ತನು - ಸಮಸ್ತ ಕಲ್ಯಾಣಗುಣಾಕರನು - ಆಶ್ಚರ್ಯ
ಕರವಾದ ನಾನಾಶಕ್ತಿಯುಕ್ತನು „ ಎಂಬುವದಾಗಿ ಹೇ
ಳುವ ಶ್ರುತಿಗಳಿಗೆ ಯೇನುಗತಿ ? ( ಇದುವರೆಗೂ ಉಪದೇ
ಶವೇ ಅಸಂಭಾವಿತವೆಂದು ಹೇಳಲ್ಪಟ್ಟು ಇನ್ನು ಉಪದೇಶ್ಯ
ವಸ್ತುವಿನ ಅಸಂಭಾವಿತತ್ವವಂ ಸೂಚಿಸುತ್ತಾರೆ-ಕಿಂಚ ಎಂ
ಬುವದೇ ಮೊದಲು-ಯೊಂಬಡಾಗಿರುವ ತಾತ್ಪರ್ಯಚಂದ್ರಿಕೋ
ಕ್ತವಾದ ಅವತಾರಿಕೆಯನ್ನು ಇಲ್ಲಿ ಉಪಯೋಗಿಸಬೇಕು.)
ಮತ್ತು ಪರಮಪುರುಷನೇ ಆಗಲಿ ಈಗಿರುವ ಗುರುಗಳೇ ಆ
ಗಲೀ ಇವರುಗಳಿಗೆ ಅದ್ವೈತಾತ್ಮಸ್ವರೂಪನಿಶ್ಚಯವು (ಬ್ರ
ಹ್ಮನಾದನಾನೊಬ್ಬನೇ ಸತ್ಯವು ಉಳದವುಗಳೆಲ್ಲಾ ಮಿಥ್ಯಾ ಎಂ
ಬುವದೇ ಅದ್ವೈತಜ್ಞಾನವು) ವುಂಟಾಗಿರುತದೇ ಯಿಲ್ಲವೇ ? ಅ
ದುವುಂಟಾದಮೇಲೆ ಇವರುಗಳಿಗೆ ಭೇದಜ್ಞಾನವು ಅನುವರ್ತಿ
ಸಿ ಬಂದರೂ ಇದನ್ನು ಇವರು ಯಾರಿಗೆ ವುಪದೇಶಿಸುವ
ರೋ ಹೇಳಬೇಕು, ಪ್ರತಿಬಿಂಬಗಳಂತೇ ಕಾಣುವ ಅರ್ಜುನಾ
ದಿಗಳಿಗೆ ಯೆಂದುಹೇಳಿದರೆ, ಇದು ಯುಕ್ತವೋ ? ಚಿತ್ತ

(ಶಾ-ಭಾ) ವೈಕಲ್ಯ ಶೂನ್ಯನಾದ (ವಿವೇಕಿಯಾದ) ಪುರು ಷನು ಯಾವನೇ ಆಗಲೀ ಮಣಿ-ಕತ್ತಿ- ಕನ್ನಡಿ, ಮೊದಲಾದ ನಿರ್ಮಲವಸ್ತುಗಳಲ್ಲಿ ತನ್ನ ಪ್ರತಿಬಿಂಬವಂ ನೋಡಿ ಅವುಗಳು ತನಗಿಂತಲೂ ಭಿನ್ನವಲ್ಲವೆಂದು ತಿಳಿದು ಇರುವಲ್ಲಿ ಶಾಸ್ತ್ರೋಪದೇಶವಂ ಮಾಡುತ್ತಾನೆಯೋ? ತನ್ನ ಪ್ರತಿಬಿಂಬವಂ ನೋಡಿ ಉನ್ಮತ್ತನಲ್ಲನೇ ಮಾತನಾಡುವದು, ಇದುಕೂಡ ಇರಲಿ, ಇಲ್ಲಿ ಅವರುಗಳು ಬಾಧಿತಾನುವೃತ್ತಿಯಂಕೂಡ ಹೇಳಲಾಗದು, ಬಾಧಕವಾದ ಅದ್ವಿತೀಯಾತ್ಮ ಜ್ಞಾನದಿಂದ (ಅಂದರೆ,-ಆತ್ಮರಾದ ಜೀವೇಶ್ವರರಿಬ್ಬರೂ ಒಂದೇ ಎಂಬುವ ಐಕ್ಯಜ್ಞಾನದಿಂದ ) ಭೇದಜ್ಞಾನಕ್ಕೆ ಅನಾದಿಕಾರಣವಾಗಿರುವ ಭಾವರೂಪವಾದ ಅಜ್ಞಾನವು ನಾಶವಂ ಹೊಂದಿರುವುದರಿಂದ ,, ಕಾರಣಾಭಾವಾತ್ಕಾರ್ಯಾಭಾವಃ ,, ಎಂದು ಹೇಳುವಂತೆ ಕಾರಣಭೂತವಾದ ಭಾವರೂಪಾಜ್ಞಾನವಿಲ್ಲದೇ ಇರುವದರಿಂದ ಭೇದಜ್ಞಾನರೂಪವಾಗಿರುವ ಬಾಧಿತಾನುವೃತ್ತಿರೂಪವಾದ ಕಾರ್ಯವೂ ಇಲ್ಲ, ಆದದರಿಂದ ಇಲ್ಲಿ ಬಾಧಿತಾನುವೃತ್ತಿಯಂ ಹೇಳುವದು ಅಸಾಧ್ಯವು.

,, ಆದರೂ ಕೆಲವರಿಗೆ ಕೆಲವುಕಾಲದಲ್ಲಿ ತಿಮಿರಾದಿಗಳೆಂಬ ನೇತ್ರದೋಷವಿಶೇಷದಿಂದ ಚಂದ್ರನು ಒಬ್ಬನಾಗಿದ್ದರೂ ಯೆರಡು ಚಂದ್ರನಂತೆ ಕಾಣಲ್ಪಟ್ಟು, ತರುವಾಯ ಆಪ್ತನಾದ ಮತ್ತೊಬ್ಬನ ಮಾತುಗಳಿಂದ ಚಂದ್ರನು ಒಬ್ಬನೇ ಯೆಂಬುವ ನಿಶ್ಚಯವುಂಟಾದರೂಕೂಡ ದ್ವಿಚಂದ್ರ ಜ್ಞಾನದ ಅನುವೃತ್ತಿಯು ಹ್ಯಾಗೆ ಸಂಭಾವಿತವೊ ಅದರಂತೇ ಇಲ್ಲಿಯೂ ಪರಮಾತ್ಮನಿಗೆ ಅದ್ವೈತಜ್ಞಾನವು ವುಂಟಾಗಿದ್ದರೂ ಭೇದಜ್ಞಾನಾನುವೃತ್ತಿಯೂ ಆಗಬಹುದೆಂದು ,, ಹೇಳಬಹುದು, ಆದರೆ ಇದುಕೂಡ ಸರಿಯಾದದ್ದಲ್ಲವು, ಅಲ್ಲಿ ದ್ವಿಚಂದ್ರ

ಜ್ಞಾನಕ್ಕೆ ತಿಮಿರಾದಿಗಳೆಂಬ ದೋಷ ವಿಶೇಷರೂಪವಾದ ಕಾರಣಾನುವೃತ್ತಿ ಇರುವುದರಿಂದ ಅಲ್ಲಿ ಬಾಧಿತಾನುವೃತ್ತಿಯಂ ಹೇಳಬಹುದು, ಇಲ್ಲಿಯೋ ಅಂತಹಕಾರಣವೇ ಇಲ್ಲವು, ಭೇದಜ್ಞಾನವು ಅವರವಿಷಯವು ಅದರಕಾರಣವು ಮಿಥ್ಯಾರೂಪವಾಗಿರುವುದರಿಂದ ಅವುಗಳು ಸತ್ಯವಾದ ಅದ್ವೈತಜ್ಞಾನವುಂಟಾದಕಾಲದಲ್ಲಿಯೇ ವಿನಷ್ಟವಾಗಿರುವುದರಿಂದ ಬಾಧಿತಾನುವೃತ್ತಿಯೇ ಕೂಡದು.

ಆದದರಿಂದ ಸರ್ವೇಶ್ವರನಿಗೂ ಈಗಿನ ಗುರುಗಳಿಗೂ ತತ್ವಜ್ಞಾನವಿದ್ದರೆ ಭೇದದರ್ಶನವು ಅದರಿಂದುಂಟಾದ ಉಪದೇಶಾದಿ ವ್ಯವಹಾರಗಳು ಕೂಡುವದಿಲ್ಲವು, ಭೇದದರ್ಶನವುಂಟಾಗಿದ್ದರೇ ಅಜ್ಞಾನವು ಅವರಕಾರಣವೂ ಇರುತಲೇ ಇರುವುದರಿಂದ ಅಜ್ಞರಾದ ಇವರುಗಳು ಉಪದೇಶ ಮಾಡುವದುತಾನೇಕ್ಯಾಗೇ ? ಮತ್ತು, ಆತ್ಮನೊಬ್ಬನೆ ಪರಮಾರ್ಥವೆಂದು ಗುರುವಿಗೆ ವುಂಟಾದ ನಿಶ್ಚಯದಿಂದಲೇನೆ ಬ್ರಹ್ಮಕ್ಕೆ ವುಂಟಾದ ಅಜ್ಞಾನವು ಆ ಅಜ್ಞಾನದಿಂದ ಪ್ರಾಪ್ತವಾಗುವ ಪ್ರಪಂಚವುಕೂಡ ವಿನಷ್ಟವಾಗಿರುವುದರಿಂದ ಶಿಷ್ಯನಿಗೆ ಉಪದೇಶ ಮಾಡುವದರಲ್ಲಿ ಪ್ರಯೋಜನವಿಲ್ಲವು. ಅದ್ವೈತಜ್ಞಾನವುಹುಟ್ಟಿ ಅದರಿಂದುಂಟಾಗುವ ಪ್ರಪಂಚದ ನಿವೃತ್ತಿಯಲ್ಲವೇ ಈ ಉಪದೇಶಕ್ಕೆ ಪ್ರಯೋಜನವು. ಅದು ಗುರುವಿಗೆ ವುಂಟಾದ ನಿಶ್ಚಯದಿಂದಲೆ ನಿವೃತ್ತವಾಗಿರುವುದರಿಂದ ಇನ್ನು ಯಾವಫಲವನ್ನುದ್ದೇಶಿಸಿ ಉಪದೇಶಿಸಬೇಕು. ಇದರಮೇಲೆ "ಗುರುವು ಅವನ ಜ್ಞಾನವು ಕಲ್ಪಿತವಾಗಿರುವದರಿಂದ ಭೇದಜ್ಞಾನವಂ ನಿವರ್ತಿಸಲಾರದೆನ್ನುವ" ಪಕ್ಷದಲ್ಲಿ ಆ ನ್ಯಾಯದಿಂದಲೇ ಶಿಷ್ಯನು ಇವನ ಜ್ಞಾನವುಕೂಡ ಕಲ್ಪಿತವೆಂದು ತಿಳಿಯಬೇಕಾದುದರಿಂದ ಅದು

ಕೂಡ ಭೇದಜ್ಞಾನವಂ ಹೋಗಲಾಡಿಸಲಾರದು.

‟ ಇದು ಕಲ್ಪಿತವಾದರೂ ಮೊದಲಿನ ಭೇದಜ್ಞಾನಕ್ಕೆ ವಿರೋಧವಾಗಿರುವುದರಿಂದ ಭೇದಜ್ಞಾನವಂ ನಿವರ್ತಿಸಬಹುದು ,, ಎಂದು ಹೇಳುವವಾದರೇ ಅದುಕೂಡ ಗುರುವಿನ ಜ್ಞಾನಕ್ಕೇನೆ ವುಂಟಾಗಿರುವದರಿಂದ ಅದೇ ನಿವರ್ತಿಸಬಹುದು, ಆದದರಿಂದ ಯಾವವಿಧವಲ್ಲಿಯು ಉಪದೇಶವು ವ್ಯರ್ಥವೇಆಗುತದೆ. ಆದದರಿಂದ ಈ ವಾದಗಳ ನ್ನಿಷ್ಟು ನಿರಾಕರಿಸಿದ್ದು ಸಾಕು.

(೩೦)—ಈ ಶ್ಲೋಕದಲ್ಲಿಕಂಡ (ಇಮೇ-ಜನಾಧಿಪಾಃ-ನಭವಿಷ್ಯಾಮಃ-ಸರ್ವೇ) ಎಂಬುವ ಬಹುವಚನಪದಗಳು ಶರೀರಗಳನ್ನು ಕುರಿತು ಹೇಳಲ್ಪಟ್ಟಿರುತ್ತವೆಯಲ್ಲದೆ ಆತ್ಮನನ್ನು ಕುರಿತು ಹೇಳಿದ್ದಲ್ಲವು, ಅನೇಕದೇಹಗಳಲ್ಲಿರುವ ಆತ್ಮನೊಬ್ಬನೇ ಎಂದು ತಾತ್ಪರ್ಯವು.

(ಗೀ--ವಿ.) ಅರ್ಜುನನು ಬಂಧುಗಳನ್ನು ಹ್ಯಾಗೆ ಸಂಹರಿಸುವದೆಂಬದಾಗಿ ಮೋಹದಿಂದ ದುಃಖಿಸುತ್ತಾನಲ್ಲನೇ ? ಆ ದುಃಖವನ್ನು ಪರಿಹರಿಸಲಿಕ್ಕೋಸ್ಕರ ‟ ಅಶೋಚ್ಯಾನನ್ವಶೋಚಸ್ತ್ವಂ ,, ಎಂಬುವ ಶ್ಲೋಕದ ಮೊದಲು ತತ್ವೋಪದೇಶವು ಮಾಡಲ್ಪಡುವದು. ನೀನು ದುಃಖಿಸುವದು ದೇಹವನ್ನು ಕುರಿತಾ ? ಆತ್ಮನನ್ನು ಕುರಿತಾ ? ಅಥವಾ ದೇಹವೇ ಆತ್ಮನೆಂಬುವದನ್ನು ಕುರಿತಾ ? ದೇಹವು ಹೋಗುತ್ತದೆಂಬ ವ್ಯಸನವು ಉಂಟಾಗಿದ್ದರೆ ‟ ದೇಹಿನೊಸ್ಮಿನ್—ವಾಸಾಂಸಿಜೀರ್ಣಾನಿ—,, ಎಂಬುವ ಶ್ಲೋಕಗಳಲ್ಲಿ ಹೇಳಿರುವಪ್ರಕಾರ ಒಂದು ಶರೀರವು ಹೋಗುವದು ಮತ್ತೊಂದು ಶರೀರವು ಪ್ರಾಪ್ತವಾಗುವದು ಸಹಜವಾಗಿ ಇರುವುದರಿಂದ ಜಡವಾದ ದೇಹವು ನಾಶಹೊಂದುವದು ನಿಶ್ಚಯವು. ನೀನು ವಿಷಾದಪ

ಟ್ಟ ಮಾತ್ರದಲ್ಲಿಯೆ ನಾಶಹೊಂದತಕ್ಕ ದೇಹವು ಸ್ಥಿರವಾಗಿರುವುದೊ ? ಇರುವುದಿಲ್ಲವು. ಆದದರಿಂದ ಜಡವಾದ ದೇಹವಂಕುರಿತು ನೀನು ವ್ಯಸನಪಡಲು ಕಾರಣವಿಲ್ಲವು. ಆತ್ಮನು ಹೋಗುತ್ತಾನೆಂದು ವ್ಯಸನಪಡುವದಾದರೇ ಪರಮಾತ್ಮನು ಹ್ಯಾಗೇನಿತ್ಯನೋ ಹಾಗೆಯೆ ಜೀವಾತ್ಮರುಗಳು ನಿತ್ಯರೆಂದು ಇಲ್ಲಿಯೇ ಅನೇಕ ಪ್ರಕರಣಗಳಲ್ಲಿಯೂ ಈ ಶ್ಲೋಕದಲ್ಲಿಯೂ, ಶ್ರುತಿಗಳಲ್ಲಿಯೂ ಹೇಳಿರುವುದರಿಂದ ನಾಶರಹಿತವಾದ ಸ್ವಭಾವವುಳ್ಳ ನಿತ್ಯರಾದ ಆತ್ಮರನ್ನು ಕುರಿತು ದುಃಖಪಡಕೂಡದು. ದೇಹವೇ ಆತ್ಮನೆಂಬ ದೇಹಾತ್ಮಭ್ರಮದಿಂದ ದುಃಖಿಸುವುದಾದರೇ "ದೇಹಿನೋಽಸ್ಮಿನ್-ವಾಸಾಂಸಿಜೀರ್ಣಾನಿ ,, ಇತ್ಯಾದಿ ಶ್ಲೋಕಗಳಿಂದಲೂ ಶ್ರುತಿಪ್ರಮಾಣಗಳಿಂದಲೂ ದೇಹವಂ ಹೊಂದುವದು ಬಿಡುವದು ಜೀವಕಾರ್ಯವಾಗಿರುವದು. ದೇಹವೇ ಆತ್ಮನೆಂಬುವಪಕ್ಷದಲ್ಲಿ ದೇಹವುನಾಶವನ್ನೈದಿದರೆ ಆತ್ಮನುಕೂಡ ಹೋಗಬೇಕಲ್ಲವೇ ? ಪೂರ್ವ ದೇಹವಂ ಬಿಟ್ಟು ಅನ್ಯಶರೀರವಂ ಪರಿಗ್ರಹಿಸುವದು ಜೀವಕಾರ್ಯವೆಂದು ಹೇಳಿರುವುದರಿಂದ ದೇಹವೇ ಆತ್ಮನಲ್ಲವು. ಆದದರಿಂದ ನೀನು ದುಃಖಿಸಲು ಕಾರಣವಿಲ್ಲವು. ಇದರಿಂದ ಈಶ್ವರನು ಹ್ಯಾಗೆ ನಿತ್ಯನೊ ಆಪ್ರಕಾರವಾಗಿ ಜೀವಾತ್ಮರುಗಳು ನಿತ್ಯರೆಂದು ಹೇಳಲ್ಪಟ್ಟಿತೆಂದು ಶ್ರೀರಾಘವೇಂದ್ರಸ್ವಾಮಿಗಳ ಗೀತಾವಿವೃತಿಯಲ್ಲಿ ಕಂಡ ತಾತ್ಪರ್ಯಸಂಗ್ರಹವು॥೧೨॥

ಮೂ॥ ದೇಹಿನೋಽಸ್ಮಿನ್ಯಥಾ ದೇಹೆ ಕೌಮಾರಂ
ಯೌವನಂ ಜರಾ । ತಥಾ ದೇಹಾಂತರ ಪ್ರಾಪ್ತಿ
ರ್ಧೀರ ಸ್ತತ್ರ ನ ಮುಹ್ಯತಿ ॥        ॥೧೩॥

ಪ॥ ದೇಹಿನಃ - ಅಸ್ಮಿನ್ - ಯಥಾ - ದೇಹೇ - ಕೌಮಾರಂ - ಯೌವನಂ - ಜರಾ । ತಥಾ-ದೇಹಾಂತರಪ್ರಾಪ್ತಿಃ - ಧೀರಃ - ತತ್ರ - ನ - ಮುಹ್ಯತಿ ।

ಅ॥ ದೇಹಿನಃ – ದೇಹವಿಶಿಷ್ಟನಾದ ಜೀವನಿಗೆ, ಅಸ್ಮಿನ್ ದೇಹೇ – ಈ ಶರೀರದಲ್ಲಿ, ಕೌಮಾರಂ – ಬಾಲ್ಯವೂ, ಯೌವನಂ – ಯೌವನವೂ, ಜರಾ – ವಾರ್ಧಕವೂ (ಮುದಿತನವೂ,) ಯಥಾ – ಹ್ಯಾಗೆಯೋ, ತಥಾ – ಅ ಪ್ರಕಾರವಾಗಿಯೇ, ದೇಹಾಂತರಪ್ರಾಪ್ತಿಃ – ಮತ್ತೊಂದು ದೇಹವನ್ನು ಹೊಂದುವದು, ತತ್ರ – ಆ ವಿಷಯದಲ್ಲಿ, ಧೀರಃ – (ದೇಹಾತ್ಮವಿವೇಕಮುಳ್ಳ) ಜ್ಞಾನಿಯು, ನ ಮುಹ್ಯತಿ – ಮೋಹವನ್ನು ಹೊಂದಲಾರನು.

ರಾ॥ ಭಾ॥ ಒಬ್ಬನಿಗೆ ತನ್ನ ದೇಹದಲ್ಲಿ ಬಾಲ್ಯ ದಶೆಯು ಕಳೆದು ಯೌವನಾದಿ ಸ್ಥಿತಿಗಳು ಬಂದರೂ ತಾನು ನಿತ್ಯನೆಂಬಬುದ್ಧಿಯಿಂದ ನಾಶರಹಿತನೆಂದು ತಿಳಿದು ಹ್ಯಾಗೆ ದುಃಖಿಸಲಾರನೋ, ಅದರಂತೆ ವಿವೇಕಿಯಾದವನು ತನಗೆ ಬೇರೆ ದೇಹವು ಪ್ರಾಪ್ತವಾದರೂ ಆತ್ಮನು ನಿತ್ಯನೆಂಬ ಜ್ಞಾನವುಳ್ಳವನಾದದರಿಂದ ಆ ವಿಷಯದಲ್ಲಿ ಸ್ವಲ್ಪವೂ ವಿಷಾದಿಸಲಾರನು. ಆದದರಿಂದ ನಿತ್ಯರಾದ ಆತ್ಮರು ತಾವುಗಳು ಮಾಡಿರುವ ಪೂರ್ವಕರ್ಮಗಳಿಗೆ ವಶಪಟ್ಟಿರುವವರಾದದರಿಂದ ಆಯಾ ಕರ್ಮಾನುಗುಣವಾದ ಶರೀರ ಪರಿಗ್ರಹವು ಮಾಡಿ ಆ ಶರೀರಗಳಿಂದಲೇ ತಮ್ಮ ಜಾತಿ, ಆಶ್ರಮ ಇವುಗಳಿಗೆ ಉಚಿತವಾದ ಯುದ್ಧಾದಿ ಕರ್ಮಗಳಂ ಫಲಾಕಾಂಕ್ಷಾರಹಿತವಾಗಿ ಮಾಡಲೇಬೇಕು. ಈ ಪ್ರಕಾರ ಮಾಡುವದರಲ್ಲಿ ತಮ್ಮಗಳಿಂದ ಬಿಡಲಶಕ್ಯವಾದ ಶಬ್ದಾದಿ ವಿಷಯಗಳಿಂದ ಬರುವ ಶೀತೋಷ್ಣವೇ ಮೊದಲಾದ ಸುಖದುಃಖಗಳನ್ನು ತಾವುಗಳ ನುಷ್ಠಿಸುವ ಕರ್ಮವು ಪೂರ್ತಿ ಯಾಗುವವರಿಗೂ ಕ್ಷಮಿಸಿಯೇ ತೀರಬೇಕು. (ಈ ಶ್ಲೋಕಾರ್ಥವನ್ನೇ ಮುಂದಿನ ಶ್ಲೋಕದಲ್ಲಿಯೂ ಹೇಳುತ್ತಾನೆ.) ॥೧೩॥

ಮೂ॥ ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋ
ಷ್ಣ ಸುಖ ದುಃಖದಾಃ । ಆಗಮಾಪಾಯಿನೋಽನಿ
ತ್ಯಾಸ್ತಾಂಸ್ತಿತಿಕ್ಷಸ್ವ ಭಾರತ ॥ ॥೧೪॥

ಪ॥ ಮಾತ್ರಾಸ್ಪರ್ಶಾಃ - ತು - ಕೌಂತೇಯ - ಶೀತೋಷ್ಣಸುಖದುಃಖದಾಃ । ಆಗಮಾಪಾಯಿನಃ - ಅನಿತ್ಯಾಃ - ತಾನ್ - ತಿತಿಕ್ಷಸ್ವ - ಭಾರತ ॥

ಅ॥ ಹೇಕೌಂತೇಯ - ಎಲೈ ಕುಂತೀಪುತ್ರನಾದ ಅರ್ಜುನನೇ ! ಮಾತ್ರಾಸ್ಪರ್ಶಾಸ್ತು - ಇಂದ್ರಿಯಗಳಿಗೆ ಶಬ್ದಾದಿ ವಿಷಯಗಳೊಡನೆ ಸಂಬಂಧಗಳೋ, ಶೀತೋಷ್ಣಸುಖದುಃಖದಾಃ - ಶೀತ, ಉಷ್ಣ, ಸುಖ, ದುಃಖ, ಇವುಗಳನ್ನುಂಟುಮಾಡತಕ್ಕವಾದ್ದಾಗಿಯೂ, ಆಗಮಾಪಾಯಿನಃ - ಬರತಕ್ಕದ್ದಾಗಿಯೂ ಹೋಗತಕ್ಕದ್ದಾಗಿಯೂ ಇರುವವರಿಂದಲೆ, ಅನಿತ್ಯಾಃ - ಅಸ್ಥಿರಗಳಾಗಿಯೂ ಇರುತವೆ, ಅತಃ - ಆದುದರಿಂದ ತಾನ್ - ಆ ಶೀತೋಷ್ಣಗಳನ್ನು, ಹೇಭಾರತ - ಎಲೈ ಅರ್ಜುನನೇ ! ತಿತಿಕ್ಷಸ್ವ - ಸಹಿಸುವಂತವನಾಗು.

(ರಾ-ಭಾ) ಎಲೈ ಕುಂತೀಪುತ್ರನಾದ ಅರ್ಜುನನೇ! ಶಬ್ದ, ಸ್ಪರ್ಶ, ರೂಪ,ರಸ, ಗಂಧ,ಗಳೆಂಬ ಗುಣಗಳು, ಅವುಗಳಿಗೆ ಸ್ಥಾನವಾದ, ಆಕಾಶ, ವಾಯು, ಜೆಗೇ, ನೀರು, ಭೂಮಿ, ಎಂಬ ಪಂಚ ಭೂತಗಳೂ,ಕಿವಿ,ಬಾಯಿ, ಕಣ್ಣು, ಮೂಗು, ದೇಹಗಳೆಂಬ ಪಂಚೇಂದ್ರಿಯಗಳೊಡನೇ ಕೂಡಿದವುಗಳಾಗಿ ಶೀತ, ಉಷ್ಣ, ಮೃದು, ಕಠಿನ, ಇವುಗಳೇ ಮೊದಲಾದ ಸುಖದುಃಖಗಳನ್ನೀಯುವವು. ಅವು ಕರ್ಮಾಧೀನವಾಗಿ ಪ್ರಾಪ್ತವಾಗುವವಾದದರಿಂದ ಕರ್ಮವು ನಾಶವಂ ಹೊಂದಿದಮೇಲೆ ವಿನಾಶ ಹೊಂದತಕ್ಕವುಗಳು, ಆದದರಿಂದ ಶಾಸ್ತ್ರೋಕ್ತವಾದ ಕರ್ಮಯೋಗವಂ ಅನುಷ್ಠಿಸುವವರಿಗೂ,ಧೈರ್ಯದಿಂದ ಆಶೀತೋಷ್ಣ ಸುಖದುಃಖಾದಿಗಳಂ ಸಹಿಸುವಂತವನಾಗು.

ಗೀ॥ ವಿ॥ ಇಂದ್ರಿಯಗಳಿಗೇ ಶಬ್ದಾದಿ ವಿಷಯಗಳೊಡನೆ ಸಂಬಂಧವು ಸಹಜವಾಗಿ ಶೀತೋಷ್ಣ ಸುಖದುಃಖಾದಿಗಳಂ ಕೊಡಲಾರದು. ಆದರೇ ವಿಷಯಗಳಲ್ಲಿ ಅಭಿಮಾನ ಸಹಿತವಾದ ಸಂಬಂಧವೇ ಶೀತೋಷ್ಣ ಸುಖ ದುಃಖಾದಿಗಳಂ ನ್ನೀಯುವುದು,ಆದುದರಿಂದ ಅಂತಹ ಅಭಿಮಾನಗ್ರಸ್ತವಾದ ವಿಷಯೇಂದ್ರಿಯ ಸಂಬಂಧಗಳಂ ಬಿಟ್ಟುಬಿಡು. ॥೧೪॥

ಮೂ ॥ ಯಂಹಿನ ವ್ಯಥಯಂತ್ಯೇತೇ ಪುರುಷಂ ಪುರುಷ
ರ್ಷಭ । ಸಮದುಃಖ ಸುಖಂಧೀರಂ ಸೋಽಮೃತತ್ವಾ
ಯಕಲ್ಪತೇ ॥ ॥೧೫॥

ಪ। ಯಂ – ಹಿ – ನ – ವ್ಯಥಯಂತಿ – ಏತೇ – ಪುರುಷಂ – ಪುರುಷರ್ಷಭ । ಸ
ಮದುಃಖಸುಖಂ – ಧೀರಂ – ಸಃ – ಅಮೃತತ್ವಾಯ – ಕಲ್ಪತೇ ॥

ಅ। ಹೇ ಪುರುಷರ್ಷಭ – ಎಲೈ ಪುರುಷಶ್ರೇಷ್ಠನಾದ ಅರ್ಜುನನೇ ! ಏತೇ –
ಈ ಶೀತೋಷ್ಣಸುಖದುಃಖಾದಿಗಳು, ಧೀರಂ – ವಿವೇಕಿಯಾಗಿಯೂ, ( ಅಥವಾ ) ಧೈರ್ಯ
ಯುಕ್ತನಾಗಿಯೂ, ಸಮದುಃಖಸುಖಂ – ಸುಖದುಃಖಗಳೆರಡನ್ನು ಸಮವಾಗಿ ಎಣಿಸಿರುವ,
ಯಂ ಪುರುಷಂ – ಯಾವಪುರುಷನನ್ನು, ನವ್ಯಥಯಂತಿಹಿ – ಬಾಧಿಸಲಾರವೋ, ಸಃ – ಅ
ವನು, ಅಮೃತತ್ವಾಯ, ಮೋಕ್ಷಕ್ಕೋಸ್ಕರ, ಕಲ್ಪತೇ – ಯೋಗ್ಯನಾಗುತ್ತಾನೆ ॥ ೧೫ ॥

(ರಾ॥ ಭಾ॥)(ಯಾತಕ್ಕೋಸ್ಕರ ಕ್ಷಮಿಸಬೇಕೆಂದರೆ ಉತ್ತರ
ವಂ ಹೇಳುತ್ತಾನೆ.) ಲೋಕದಲ್ಲಿ ಯಾವ ಮನುಷ್ಯನು ತನ್ನಿಂ
ದ ಬಿಡಲಶಕ್ಯವಾದ ದುಃಖವನ್ನು ಧೈರ್ಯದಿಂದ ಸುಖದಂತೇಸ
ಹಿಸಿ ತನ್ನ ಜಾತಿಗೇ ಉಚಿತವಾಗಿರುವ ಮೋಕ್ಷಸಾಧನವಾದ
ಯುದ್ಧವೇ ಮೊದಲಾದ ಕರ್ಮಗಳನ್ನು ಮಾಡಿಕೊಂಡು ಬರು
ತ್ತಾನೆಯೋ,ಅವನೊಬ್ಬನೇ ಮೋಕ್ಷವಂ ಸಾಧಿಸುತ್ತಾನೆ, ಅ
ದೇದುಃಖವಂ ಸಹಿಸಲಾರದ ನಿನ್ನಂತವನಲ್ಲವು, ಆತ್ಮರು ನಿತ್ಯ
ರಾದವರಿಂದ ನೀನು ಇಷ್ಟುಮಾಡಬೇಕೆಂದು ತಾತ್ಪರ್ಯವು॥೧೫

ಮೂ ॥ ನಾಸತೋ ವಿದ್ಯತೇಭಾವೋ ನಾಭಾವೋ ವಿದ್ಯತೆ
ಸತಃ । ಉಭಯೋರಪಿ ದೃಷ್ಟೋಂತ ಸ್ತ್ವನಯೋ
ಸ್ತತ್ವದರ್ಶಿಭಿಃ ॥ ॥೧೬॥

ಪ॥ ನ – ಅಸತಃ – ವಿದ್ಯತೇ – ಭಾವಃ – ನ – ಅಭಾವಃ – ವಿದ್ಯತೇ – ಸತಃ ।
ಉಭಯೋಃ – ಅಪಿ – ದೃಷ್ಟಃ – ಅಂತಃ – ತು – ಅನಯೋಃ – ತತ್ವದರ್ಶಿಭಿಃ ॥

ಅ ॥ ಅಸತಃ – ಇಲ್ಲದೇಇರುವುದಕ್ಕೆ, ಭಾವಃ – ಇರುವಿಕೆಯು, ನ – ಇಲ್ಲವು, ಸ
ತಃ – ಇರುವುದಕ್ಕೆ, ಅಭಾವಃ – ಇಲ್ಲದೇ ಇರುವಿಕೆಯು, ನ – ಇಲ್ಲವು, ಅನಯೋರುಭ
ಯೋರಪಿ – ಈ ಎರಡು ( ವಿಷಯ ) ಗಳ, ಅಂತಃ – ನಿಶ್ಚಯವು, ತತ್ವದರ್ಶಿಭಿಃ – ತ
ತ್ವವೇದಿಗಳಿಂದ, ದೃಷ್ಟಃ – ಕಾಣಲ್ಪಟ್ಟಿರುವುದು. ॥೧೬॥

(ಶಂ-ಭಾ) ಯಾವದು ಉಂಟೆಂದು ತಿಳಿದಮೇಲೆ ಇಲ್ಲದೇಹೋಗುವದೋ ಅದು ಅಸತ್, ಯಾವದು ಉಂಟಾದದ್ದು ಇದ್ದಹಾಗೇನೇ ಇರುವುದೊ ಅದು ಸತ್, ಈಗ ಪರಿದೃಶ್ಯಮಾನವಾಗಿರುವ ಘಟಾದಿಗಳು ಮಣ್ಣಿಗಿಂತಲೂ ಭಿನ್ನವಾಗಿ ತೋರದಿರುವುದರಿಂದ ಹ್ಯಾಗೆ ಅಸತ್ತೋ ಹಾಗೆಯೇ ಯೆಲ್ಲಾವಿಕಾರಗಳು (ಕಟಕಕುಂಡಲಾದಿಗಳು) ತತ್ತತ್ಕಾರಣಗಳಿಗಿಂತಲು ಭಿನ್ನವಾಗಿ ತೋರದಿರುವುದರಿಂದ ಅಸತ್ತು. (ಅಂದರೇ ಮಿಥ್ಯಾ, ಇಲ್ಲದೇಇರುವುದು) ಅದು ಹೇಗಂದರೆ,-- ಘಟಾದಿಕಾರ್ಯಗಳೇನು, ಮಣ್ಣುಮೊದಲಾದ ಕಾರಣಗಳೇನು ಇವುಗಳು ಹುಟ್ಟುವದಕ್ಕಿಂತಲೂ ಪೂರ್ವದಲ್ಲಿಯೂ, ಮತ್ತು ಇವು ನಾಶವೊಂದಿದನಂತರದಲ್ಲಿಯೂ, ಅದರದರ ಕಾರಣಕ್ಕಿಂತಲೂ ಭಿನ್ನವಾಗಿ ತೋರುವುದಿಲ್ಲವು. ಅಂದರೆ ಘಟವು ಹುಟ್ಟುವದಕ್ಕಿಂತಲೂ ಪೂರ್ವದಲ್ಲಿಯೇ ಆಗಲಿ ಘಟನಾಶಾನಂತರದಲ್ಲಿಯೇ ಆಗಲಿ ಮಣ್ಣಿಗಿಂತಲೂ ಭಿನ್ನವಾಗಿ ತೋರುವದಿಲ್ಲವು. ಅಂತಹ ಘಟಕ್ಕೆ ಕಾರಣವಾದ ಮಣ್ಣು ಹುಟ್ಟುವದಕ್ಕಿಂತಲೂ ಮೊದಲೇ ಆಗಲಿ ಅದರ ನಾಶೋತ್ತರದಲ್ಲಾಗಲಿ ಅಣುಗಳಿಗಿಂತಲೂಭಿನ್ನವಾಗಿ ತೋರುವುದಿಲ್ಲವಾದದರಿಂದಾ ಅವೆಲ್ಲಾ ಅಸತ್ತು.

ಇವೆಲ್ಲಾ ಅಸತ್ತಾದಲ್ಲಿ ಯಾವದೂ ಇಲ್ಲದೆ ಹೋಗಬೇಕಾಯಿತಲ್ಲವೇ? ಎಂದಾಕ್ಷೇಪಿಸಕೂಡದು, ಯಾತಕಂದರೆ ನ ಯೆಲ್ಲಾಕಡೆಯಲ್ಲಿಯೂ ಸದ್ಬುದ್ಧಿಯೆಂತಲೂ ಅಸದ್ಬುದ್ಧಿಯೆಂತಲೂ ಬುದ್ಧಿ ಯೆರಡುವಿಧಗಳಾಗಿವೆ. ಯಾವದನ್ನ ವಿಷಯೀಕರಿಸಿದ ಬುದ್ಧಿಯು ಒಂದುಕಡೆಯಲ್ಲಿದ್ದು ಮತ್ತೊಂದುಕಡೆ ಇಲ್ಲದಿರುವದೊ ಅದು ಅಸದ್ಬುದ್ಧಿಯು, ಯಾವದನ್ನ ವಿಷಯೀಕರಿಸಿದ ಬುದ್ಧಿಯು ಯೆಲ್ಲಾಕಡೆಯಲ್ಲಿಯೂ ಒಂದೇರೀತಿಯಾಗಿರುವದೊ ಅದು ಸದ್ಬುದ್ಧಿಯು ಎಂಬೀರೀತಿಯಾಗಿ ಯೆರಡುಬುದ್ಧಿಗಳು ಒಂದೇಕಡೆ ಇರುವದಾಗಿ ಯೆಲ್ಲರಿಗೂ ತಿಳಿಯುಬರುತ್ತದೆ. ಅದೆಂತೆಂದರೆ,-ಘಟವಿದೆ, ಪಟವಿದೆ, ಗಜವಿದೆ,ಎಂಬೀ ಬುದ್ಧಿಗಳಲ್ಲಿ ಘಟಬುದ್ಧಿ, ಪಟಬುದ್ಧಿ,ಗಜಬುದ್ಧಿ ಇವುಗಳು ಒಂದೆಡೆ ಇದ್ದು ಮತ್ತೊಂದುಕಡೆ ಇಲ್ಲದಿರುವದುಂಟು,ಇದೆ ಎಂಬದು ಸರ್ವತ್ರ ಹಾಗಾಗಲಾರದು. ಆದುದರಿಂದಾ ಘಟಾದಿಬುದ್ಧಿಯು ಒಂದುಕಡೆ ಇದ್ದು ಮತ್ತೊಂದುಕಡೆ ಇಲ್ಲದಿರುವದರಿಂದ ಈ ಬುದ್ಧಿಯಲ್ಲಿ ವಿಷ

ಯಾವಾದದ್ದೆ ಆ ಸತ್ತು, ಯಲ್ಲಾಕಡೆಯಲ್ಲಿಯೂ ಇರತಕ್ಕೆಯಿರುತ್ತದೆ ಯಾದಕಾರಣ, ಇದೇಯೆಂಬ ಬುದ್ಧಿವಿಷಯವು ಮತ್ತು ಘಟನಾಶಾನಂತರ ಘಟಬುದ್ಧಿಯು ಸಂದುಕಡೆಯಿದ್ದು ಮತ್ತೊಂದುಕಡೆ ಇಲ್ಲದೇಹೋದಂತೆ ಇದೇಯೆಂಬ ಬುದ್ಧಿಯೂ ನಷ್ಟವಾದ ಘಟದಲ್ಲಿ ಇಲ್ಲವಾದಕಾರಣ ಅದು ಸಂದೆಡೆಯಿದ್ದು ಮತ್ತೊಂದುಕಡೆ ಇಲ್ಲವೆಂದು ತಿಳಿಯಕೂಡದು, ಯಾತಕ್ಕೆಂದರೆ ಘಟವು ನಶಿಸಿದರೂ ಪಟವಿದೆಯೆಂಬ ಬುದ್ಧಿಯಲ್ಲಿ ಇದೆ ಎಂಬದು ಶೇಷಿಯಾಗೀ ಇರುವದು, ಈ ಬುದ್ಧಿಯು ವಿಶೇಷಣವಾದ ಇರುವಿಕೆಯನ್ನೇ ವಿಷಯೀಕರಿಸಿರುವದು. ಘಟವಿಷಯವಾದ ಬುದ್ಧಿಯು ವ್ಯಭಿಚರಿಸುವಂತೇ ಸದ್ಬುದ್ಧಿಗೂ ವ್ಯಭಿಚಾರವುಂಟಾಗಲಾರದೇ? ಸಂದು ಘಟನಾಶವೊಂದಿದರೂ ಅಂದರೆ ಇದೇ ಎಂಬ ಬುದ್ಧಿಯು ಪಟಾದಿಗಳಲ್ಲಿಯೂ ಇದೇ, ಸದ್ಬುದ್ಧಿಯಂತೇ ಘಟಬುದ್ಧಿಯು ಅನ್ಯವಾದ ಘಟದಲ್ಲಿ ಕಾಣುವುದಿಲ್ಲವೇ ಅಂದರೇ ಘಟವೆಂಬ ಬುದ್ಧಿಯು ಪಟಾದಿಗಳಲ್ಲಿ ಇಲ್ಲದೇ ಇರುವುದರಿಂದ ಈ ಶಂಕೆಯನ್ನು ಮಾಡಕೂಡದು. ಘಟವು ನಶಿಸಿ ಹೋದನಂತರ ಇದೆಯೆಂಬ ಬುದ್ಧಿಯು ಕಾಣುವದಿಲ್ಲವು ಎಂದಾಕ್ಷೇಪಿಸೋಣವೆಂದರೆ ವಿಶೇಷ್ಯವೇ ಇಲ್ಲದಕಾಲದಲ್ಲಿವಿಶೇಷಣವಾದ ಇರುವಿಕೆಯನ್ನು ವಿಷಯೀಕರಿಸುವ „ಇದೆ„ ಎಂಬಬುದ್ಧಿಯು ಯಾವದನ್ನು ವಿಷಯವನ್ನಾಗಿಮಾಡೀತು? ಮೇಲೆಹೇಳಿದಂತೆ ಘಟಾದಿಬುದ್ಧಿಗಳೂಇದೆ ಎಂಬ ಬುದ್ಧಿಯೂ ಸಂದೇಕಡೆ ಇರುವದಷ್ಟೆ, ಹಾಗಾದಲ್ಲಿ ವಿಶೇಷ್ಯವಾದ ಘಟವು ನಷ್ಟವಾದ ಬಳಿಕ ಅದು ಹ್ಯಾಗಾಗುವದು ಎಂದರೆ, ಮೃಗತೃಷ್ಣೆಯನ್ನು ನೋಡಿ ಇದು ನೀರು ಎಂದುಬರುವ ಬುದ್ಧಿಯಲ್ಲಿ ತೋರುವ ಇದಂ ಪದಾರ್ಥವೂ ಉದಕವು ಈಯೆರಡುಇಲ್ಲದಿದ್ದರೂ ಈ ಯೆರಡು ಒಂದೇಕಡೆ ಇರುವಂತೆ ಲೋಕಾನುಭವವಿದೆ. ಆದದರಿಂದ ಕಾರಣದಿಂದ ಹುಟ್ಟಿನ ದೇಹಾದಿಗಳೇನು, ಶೀತೋಷ್ಣಾದಿದ್ವಂದ್ವ ದುಃಖಗಳೇನು ಇವುಗಳಿಗೆ ಭಾವವು (ಇರುವಿಕೆಯು) ಇಲ್ಲವು,ಹಾಗೆಯೇ ಸದ್ರೂಪನಾದ ಆತ್ಮನಿಗೆ ಅಭಾವವು (ಇಲ್ಲದಿರುವಿಕೆಯು ಇಲ್ಲವು. ಈಪ್ರಕಾರವಾಗಿ ಆತ್ಮಭಿನ್ನವಾದ ಶೀತೋಷ್ಣಾದ್ಯಸತ್ಪದಾರ್ಥಗಳೇನು, ಸದ್ರೂಪನಾದ ಆತ್ಮನೇನು,ಇವೆರಡರ ನಿರ್ಣಯವು ತತ್ವಾಪೇಕ್ಷಿಗಳಿಂದ ಕಾಣಲ್ಪಟ್ಟಿರುತ್ತೆ. ತತ್ವದರ್ಶಿಗಳೆಂದರೆ,ತಚ್ಛಬ್ದವು ಸರ್ವನಾಮಪದವಾಗಿರುವುದು, ಸರ್ವವೂ

ಬ್ರಹ್ಮವಾಗುದರಿಂದ ತಚ್ಛಬ್ದಕ್ಕೆ ಬ್ರಹ್ಮವೇ ಅರ್ಥವು. ಅಂತಹಬ್ರಹ್ಮನಸ್ಸ್ಥಿತಿಯು ತತ್ತ್ವವೆನಿಸಿಕೊಳ್ಳುವುದು, ಅದನ್ನರಿತಿರುವಂತಹ ಸ್ವಭಾವವುಳ್ಳವರು ತತ್ತ್ವದರ್ಶಿಗಳೆನಿಸಿಕೊಳ್ಳುವರು. ಎಲೈ ಅರ್ಜುನನೆ ನೀನೂ ನಿನ್ನನ್ನು ಅಂತಹ ತತ್ತ್ವಜ್ಞಾನಿಗಳಂತೆ ಶೋಕ ಮೋಹಗಳಿಂದಬಿಟ್ಟು ಅಸತ್ತಾಗ ಶೀತೋಷ್ಣಾದಿ ದ್ವಂದ್ವದುಃಖಗಳನ್ನು ಸಹನೆಯಿಂದ ಸಹಿಸುವನಾಗು. ॥೧೬॥

(ತಾ-ಭಾ) ಆತ್ಮನು ನಿತ್ಯನೆಂಬವಾಗಿಯೂ, ದೇಹವು ವಿನಾಶ ಸ್ವಭಾವವುಳ್ಳವಾಗಿರುವುದೆಂಬವಾಗಿಯೂ, "ಗತಾಸೂನಗತಾಸೂಂಶ್ಚ ನಾನುಶೋಚಂತಿ ಪಂಡಿತಾಃ" ಇತ್ಯಾದಿ ಪ್ರಕರಣಗಳಲ್ಲಿ ಹೇಳಲ್ಪಟ್ಟಿತು. ಅದನ್ನೇ ತರ್ಕ ಯುಕ್ತಿಗಳಿಂದ ಸಾಧಿಸಲು ಪ್ರಾರಂಭಿಸುತ್ತಾನೆ. ಅಸತ್ತಾದ ಶರೀರಕ್ಕೆ ಸದ್ಭಾವವು (ಸ್ಥಿರವಾಗಿರುವುವೆಂಬುವದು) ಇಲ್ಲವು, ಸತ್ತಾದ ಆತ್ಮನಿಗೇ ಅಸದ್ಭಾವವು (ಅಸ್ಥಿರವಾಗಿರುವುವೆಂಬುವದು) ಇಲ್ಲವು, ಈ ಯರಡಕ್ಕೂ ಇದೇ ಸ್ವರೂಪವೆಂದು ತತ್ತ್ವದರ್ಶಿಗಳಾದ ಋಷಿಯರು ನಿಷ್ಕರ್ಷಿಸಿದ್ದಾರೆ, (ಸತ್ ಅಂದರೆ ನಾಶವಿಲ್ಲದೆ ಇರುವುದು, ಅಸತ್ ಅಂದರೆ ನಾಶ ಹೊಂದುವ ಸ್ವಭಾವವುಳ್ಳದ್ದು) ಚೇತನವಾದ ಆತ್ಮ ಸ್ವರೂಪವು ಸತ್ ಆದದರಿಂದ ನಾಶವಿಲ್ಲದೇ ಇರುವುದು, ದೇಹವು ಅಸತ್ತಾದುದರಿಂದ ನಾಶವುಳ್ಳದಾಗಿರುವುದೆಂದು ನಿಶ್ಚಯಿಸಲ್ಪಟ್ಟಿರುವುದು. ಇದನ್ನೇ ಶ್ರೀಪರಾಶರ ಮಹಾಮುನಿಗಳೂ "ತಸ್ಮಾನ್ನವಿಜ್ಞಾನಮೃತೇಽಸ್ತಿ ಕಿಂಚಿತ್ಕ್ವಚಿತ್ಕದಾಚಿದ್ದ್ವಿಜವಸ್ತುಜಾತಮ್ - ಜ್ಞಾನಂ ಯಥಾ ಸತ್ಯಮಸತ್ಯಮನ್ಯತ್" ಎಂಬವಾಗಿಯೂ, "ಅನಾಶೀ ಪರಮಾರ್ಥಶ್ಚ ಪ್ರಾಜ್ಞೈರಭ್ಯುಪಗಮ್ಯತೇ । ತತ್ತು ನಾಶಿ ನ ಸಂದೇಹೋ ನಾಶಿದ್ರವ್ಯೋಪಪಾದಿತಮ್ ॥ ಯತ್ತು ಕಾಲಾಂತರೇಣಾಪಿ ನಾನ್ಯಸಂಜ್ಞಾಮುಪೈತಿ ವೈ । ಪರಿಣಾಮಾದಿಸಂಭೂತಾಂ ತದ್ವಸ್ತು ನೃಪ ತಚ್ಚ ಕಿಂ ॥" ಎಂಬದಾಗಿ ಶ್ರೀವಿಷ್ಣು

ಪುರಾಣದಲ್ಲಿ ಅನುಗ್ರಹಿಸಿರುತ್ತಾರೆ.......................

ಈ ಶ್ಲೋಕವು ಸತ್ಕಾರ್ಯವಾದ ಪರವೆಂದು ಕೆಲವರು ಭ್ರಮಿಸುವರು. ಅದು ಅಸಂಗತವು, (ಇರುತಲಿರುವುದಕ್ಕೆ ಉತ್ಪತ್ತಿ ಹೇಳುವದು ಸತ್ಕಾರ್ಯ ವಾದವು.)ಹೇಗೆಂದರೆ? ದೇಹಾತ್ಮ ವಿವೇಕವು ತಿಳಿಯದೇ ಮೋಹಿತನಾದ ಅರ್ಜುನನಿಗೆ ಆ ಮೋಹ ನಿವೃತ್ತ್ಯರ್ಥವಾಗಿ ದೇಹವು ವಿನಾಶ ಸ್ವಭಾವವುಳ್ಳದ್ದೆಂತಲೂ, ಆತ್ಮಸ್ವರೂಪವು ನಾಶರಹಿತವಾಗಿರುವುದೆಂತಲೂ, ಇಷ್ಟುಮಾತ್ರವೇ ಇಲ್ಲಿ ಉಪದೇಶಿಸುವದು ಪ್ರಕೃತವಾಗಿರುವುದರಿಂದ ಸತ್ಕಾರ್ಯವಾದಕ್ಕೆ ಇಲ್ಲಿ ಪ್ರಸ್ತಾಪವೇ ಇಲ್ಲವು. ಈ ಪ್ರಕರಣಗಳಲ್ಲಿ ‹‹ ಗತಾಸೂನಗತಾಸೂಂಶ್ಚ–ಅವಿನಾಶಿತುತದ್ವಿದ್ಧಿ–ಅಂತವಂತಇಮೇದೇಹಾಃ ,,ಎಂಬದಾಗಿ ದೇಹಾತ್ಮ ವಿವೇಕವೇ ಉಪಪಾದಿಸಲ್ಪಡುತದೆ ॥೧೬॥

(೧೬) ಅಸಚ್ಛಬ್ದವಾಚ್ಯವಾದ ಕಾರಣ ಭೂತವಾಗಿರುವ ಪ್ರಕೃತಿಗೂ ಸಚ್ಛಬ್ದವಾಚ್ಯವಾದ ಬ್ರಹ್ಮಕ್ಕೂ ಇಲ್ಲವೆ ಇರುವದಿಲ್ಲವು, ಅಂದರೆ ‹‹ ಪ್ರಕೃತಿಃಪುರುಷಶ್ಚೈವ ನಿತ್ಯೌಕಾಲಶ್ಚ ಸತ್ತಮ,, ಎಂಬುವವಚನದಿಂದ ಪರಮಾತ್ಮನು ಹ್ಯಾಗೆ ನಿತ್ಯನೋ? ಆಪ್ರಕಾರವೇ ಪ್ರಕೃತಿಯು ನಿತ್ಯವೆಂದು ತಾತ್ಪರ್ಯವು. ‹‹ಸದ ಸದ್ರೂಪಯಾಚಾಸೌ ಗುಣಮಯ್ಯಾಗುಣೋವಿಭುಃ,,ಎಂಬುವ ಶ್ರೀಮದ್ಭಾಗವತ ವಚನದಿಂದ ಪ್ರಕೃತಿ ತತ್ವಕ್ಕೆ ಕಾರಣತ್ವವೂ ಸ್ಪಷ್ಟವಾಗಿರುತ್ತೆಂದರಿಯಬೇಕು. ॥೧೬॥

(೧–೨.) ಬಂಧುಜನಗಳಂ ಸಂಹರಿಸುವದರಿಂದ ಪರಲೋಕವು ದುಃಖಪ್ರದವಾಗುವದೆನ್ನುವದಕ್ಕೇ ಸಮಾಧಾನರೂಪವಾಗಿ ಈ ಶ್ಲೋಕವಂಪೇಳುತ್ತಾನೆ. ಈ ಶ್ಲೋಕದಲ್ಲಿರುವ ಸತ್ ಅಸತ್ ಶಬ್ದಗಳು ಸತ್ಕರ್ಮ ದುಷ್ಕರ್ಮ ಪರವೆಂತಲೂ, ಭಾವ, ಅಭಾವ, ಶಬ್ದಗಳೂ ಸುಖ ದುಃಖಪರವೆಂತಲೂ, ‹‹ ಸದ್ಭಾವೇ ಸಾಧುಭಾವೇಚ ಸದಿತ್ಯೇತತ್ಪ್ರಯುಜ್ಯತೇ ! ಪ್ರಶಸ್ತೇ ಕರ್ಮಣಿತಥಾ ಸಚ್ಛಬ್ದಃ ಪಾ

ರ್ಥೇಯುಜ್ಯತೇ॥ಸದ್ಭಾವವಾಚಿನಸ್ಯಬ್ದ ಸ್ಸರ್ವೇತೇಸುಖವಾಚಿನಃ,,
ಎಂಬುವ ಪ್ರಮಾಣಬಲದಿಂದ ವ್ಯಾಖ್ಯಾನಮಾಡಲ್ಪಟ್ಟಿರುತದೇ.

ಅಸತಃ-ದುಷ್ಕರ್ಮದ ದೆಶೆಯಿಂದ, ಭಾವಃ - ಸುಖವು, ಯಥಾ-ಯೋಗ್ಯವಾಗೇ, ನ- ಇಲ್ಲವೋ, (ತಥಾ-ಆಪ್ರಕಾರವೇ) ಸತಃ-ಸತ್ಕರ್ಮದದಶೆಯಿಂದ, ಅಭಾವಃ- ದುಃಖವೂ, ನ-ಇಲ್ಲವು, ಭಗವದ್ದ್ವೇಷಿಗಳನ್ನು ಅನುಬಂಧಿಪರ್ಯಂತವಾಗಿ ನಾಶಪಡಿಸುವ ಈ ಯುದ್ಧವು ಸತ್ಕರ್ಮರೂಪವಾಗಿರುವುದರಿಂದ ಪರಲೋಕವು ದುಃಖಹೇತುವಾಗಲಾರದೆಂದರ್ಥವು. ಉಭಯೋರಸ್ಯನಯೋಃ - ಈ ಸತ್ಕರ್ಮದುಷ್ಕರ್ಮಗಳಿಂದ ದುಃಖ ಸುಖಗಳಿಲ್ಲವೆಂಬುವ ವಿಷಯದಲ್ಲಿ, ತತ್ವದರ್ಶಿಭಿಃ - ತತ್ವನಿರೂಪಕರಾದ ಮಹಾತ್ಮರಿಂದ, ಅಂತಃ-ಸಂಪ್ರದಾಯಪರಂಪರಾಪ್ರಾಪ್ತವಾದ ಸಿದ್ಧಾಂತವು, ದೃಷ್ಟಃ - ಪ್ರಮಾಣರೂಪವಾಗಿ ಕಾಣಲ್ಪಟ್ಟಿರುತದೆ. ದುಷ್ಕರ್ಮಾನುಷ್ಠಾನದಿಂದ ಯೋಗ್ಯಸುಖವಿಲ್ಲವೂ ಆಪ್ರಕಾರವಾಗಿಯೇ ಸ್ವಜಾತ್ಯುಚಿತವಾಗಿರುವ ಯುದ್ಧಾದಿ ಸತ್ಕರ್ಮಾನುಷ್ಠಾನದಿಂದ ಪರಲೋಕದಲ್ಲಿ ದುಃಖವು ಇಲ್ಲವೆಂಬುವದರಲ್ಲಿ ಸಿದ್ಧಾಂತರೂಪವಾಗ ಸಂಪ್ರದಾಯ ಪರಂಪರೆಯು ಮಹಾತ್ಮರುಗಳಿಂದ ಕಾಣಲ್ಪಟ್ಟಿರುತ್ತೆಂದು ತಾತ್ಪರ್ಯವು ॥ ೧೬ ॥

ಮೂ॥ ಅವಿನಾಶಿತು ತದ್ವಿದ್ಧಿ ಯೇನ ಸರ್ವಮಿದಂ
ತತಂ । ವಿನಾಶ ಮವ್ಯಯಸ್ಯಾಸ್ಯ ನಕಶ್ಚಿತ್ಕರ್ತು
ಮರ್ಹತಿ ॥ ॥೧೭॥

ಪ॥ ಅವಿನಾಶಿ - ತು - ತತ್ - ವಿದ್ಧಿ - ಯೇನ - ಸರ್ವಂ - ಇದಂ - ತತಂ। ವಿನಾಶಂ - ಅವ್ಯಯಸ್ಯ - ಅಸ್ಯ - ನ - ಕಶ್ಚಿತ್ - ಕರ್ತುಂ - ಅರ್ಹತಿ ॥

ಅ॥ (೧) ಯೇನ - ಯಾವವಸ್ತುವಿನಿಂದ, ಇದಂಸರ್ವಂ - ಈ ಪ್ರಪಂಚವೆಲ್ಲವು, ತತಂ ವ್ಯಾಪ್ತವಾಗಿರುವುದೋ ಸಿ ತತ್ - ಅದನ್ನು, ಅವಿನಾಶಿತು - ನಾಶರಹಿತವಾಗಿರುವದಾಗಿಯೇ, ವಿದ್ಧಿ - ತಿಳಿದುಕೋ, ಅವ್ಯಯಸ್ಯ-ನಾಶರಹಿತವಾದ, ಅಸ್ಯ-ಇದಕ್ಕೆ,ವಿನಾಶಂ - ನಾಶವನ್ನು, ಕರ್ತುಂ - ಮಾಡಲಿಕ್ಕೆ, ಕಶ್ಚಿತ್ - ಯಾವನು, ನಾರ್ಹತಿ -ಯೋಗ್ಯನಾಗಲಾರನು. (೧) ಗೀ-ವಿ-ಯಾವ ಈಶ್ವರನಿಂದ) ॥೧೭॥

(ರಾ-ಭಾ)ಪ್ರಪಂಚದಲ್ಲಿರುವ ಅಚೇತನಗಳೆಲ್ಲವು (ಜ್ಞಾನವಿಲ್ಲ

ದ ವಸ್ತುಗಳೆಲ್ಲವು) ಚೇತನವಾದ ಜೀವೇಶ್ವರರೂಪವಾಗಿರುವ ಯಾವವಸ್ತುವಿನಿಂದ ವ್ಯಾಪಿಸಲ್ಪಟ್ಟಿರುತ್ತದೋ, ಆ ಆತ್ಮವಸ್ತುವು, ನಾಶರಹಿತವೆಂದು ತಿಳಿಯುಕೋ, ನಾಶರಹಿತವಾದ ಈ ಆತ್ಮವನ್ನು ನಾಶಪಡಿಸಲು ಯಾರಿಗೂ ಶಕ್ತಿ ಇಲ್ಲವು. ಆತ್ಮನು ನಾಶರಹಿತನೆಂದು ಹ್ಯಾಗೇ ತಿಳಿಯಬೇಕಂದರೆ,-ಲೋಕದಲ್ಲಿ ಬೇಗೆ, ಘಾಳಿ, ಮೊದಲಾದ ಸೂಕ್ಷ್ಮವಸ್ತುಗಳು ಒಂದು ವಸ್ತುವನ್ನು ನಾಶಪಡಿಸಬೇಕಾದರೇ ಅದಂ ಪೂರ್ಣವಾಗಿ ಒಳಗೇ ವ್ಯಾಪಿಸಿ ನಾಶಪಡಿಸುವದಂ ಕಾಣುವೆವು, ಮುದ್ಗರವೇ ಮೊದಲಾದ ಆಯುಧಗಳೂ, ವೇಗದಿಂ ವಕೊಡಿದ ಪ್ರಹಾರಗಳಿಂದ ವಾಯುವನ್ನುಂಟುಮಾಡಿ ನಾಶಹೊಂದಲ್ಪಟ್ಟ ವಸ್ತುಗಳನ್ನು ವ್ಯಾಪಿಸಿಯೇ ನಾಶಮಾಡುತ್ತವೆ. ಅದದರಿಂದ ನಾಶಹೊಂದುವ ವಸ್ತುವು ವ್ಯಾಪಿಸಲ್ಪಟ್ಟೂನು ನಾಶಪಡಿಸುವ ವಸ್ತುವು ಅದಂ ವ್ಯಾಪಿಸಿಯೂ ಇರಬೇಕು, ಹೀಗಿರಲಾಗಿ ಆತ್ಮವು ಅತಿಸೂಕ್ಷ್ಮವಾಗಿ ಸಕಲವಸ್ತುಗಳನ್ನು ವ್ಯಾಪಿಸಿರುವದರಿಂದ ಅದಂ (ವ್ಯಾಪ್ಯವಾದ ಸ್ಥೂಲವಾಗಿರುವ) ಯಾವವಸ್ತುತಾನೇ ನಾಶಪಡಿಸಲರ್ಹವಾಗಬಹುದು. ಆದದರಿಂದ ಈ ಆತ್ಮನನ್ನು ನಿತ್ಯನೆಂದು ಹೇಳುವದರಲ್ಲಿ ಸಂಶಯವುಂಟೂ? ||೧೭||

ಮೂ|| ಅಂತವಂತ ಇಮೇದೇಹಾ ನಿತ್ಯಸ್ಯೋಕ್ತಾ ಶ್ಶರೀರಿಣಃ । ಅನಾಶಿನೋಽಪ್ರಮೇಯಸ್ಯ ತಸ್ಮಾದ್ಯುಧ್ಯಸ್ವಭಾರತ || ||೧೮||

ಪ|| ಅಂತವಂತಃ – ಇಮೇ – ದೇಹಾಃ – ನಿತ್ಯಸ್ಯ – ಉಕ್ತಾಃ – ಶರೀರಿಣಃ| ಅನಾಶಿನಃ–ಅಪ್ರಮೇಯಸ್ಯ–ತಸ್ಮಾತ್–ಯುಧ್ಯಸ್ವ– ಭಾರತ ||

ಅ| ನಿತ್ಯಸ್ಯ– ನಿತ್ಯನಾಗಿಯು, ಅನಾಶಿನಃ – ನಾಶವಿಲ್ಲದವನಾಗಿಯು, (೧) ಅಪ್ರಮೇಯಸ್ಯ – ತಿಳಿಯಲಶಕ್ಯನಾಗಿಯೂ ಇರುವ, ಶರೀರಿಣಃ– ದೇಹಿಯಾದ ಆತ್ಮನ, ಇಮೇದೇಹಾಃ – ಈ ದೇಹಗಳು, ಅಂತವಂತಃ – ನಾಶಯುಳ್ಳವುಗಳಾಗಿ, ಉಕ್ತಾಃ–

ಹೇಳಲ್ಪಟ್ಟಿರುವವು, ಹೇಭಾರತ - ಭರತಕುಲೋತ್ಪನ್ನನಾದ ಎಲೈ ಅರ್ಜುನನೇ! ತಸ್ಮಾತ್ - ಆದದರಿಂದ, (ದೇಹವು ಅನಿತ್ಯವಾದದರಿಂದ) ಈ ದೇಹನಾಶವನ್ನು ಕುರಿತು ದುಃಖಿಸದೇನೆ; ಯುಧ್ಯಸ್ವ - ಯುದ್ಧಮಾಡು. ॥೧೮॥

(೧) ಗೀ-ನಿ- ಸರ್ವವ್ಯಾಪಕನಾದ ಆತ್ಮನಿಗೇ ಸಮಾನವಾದ ರೂಪ ಮೊದಲಾದವುಗಳಿಲ್ಲವನು.

(ಶಂ-ಭಾ॥) ನಿತ್ಯನಾಗಿಯೂ, (ವಿಕಾರರಹಿತನಾಗಿಯೂ,) ದೇಹಾಗ್ನ್ಯುಪಾಧಿಗಳು ನಾಶಹೊಂದಿದರೂ ತಾನು ನಾಶಹೊಂದದವನಾಗಿಯೂ, ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ, ಅರ್ಥಾಪತ್ತಿ, ಅನುಪಲಬ್ಧಿಗಳೆಂಬ ಆರು ಪ್ರಮಾಣಗಳಿಂದಲೂ, ಅರಿಯಲ್ಪಡದವನಾಗಿಯೂ, ಇರುವ ಆತ್ಮನ ಅಧ್ಯಾಸ ಜನ್ಯವಾದ ಈ ದೃಶ್ಯಪ್ರಪಂಚವನ್ನೇ ಶರೀರವಾಗಿ ವುಳ್ಳ ಪರಮಾತ್ಮನನ್ನು, ಆಶ್ರಯವಾಗಿ ವುಳ್ಳ ಅಸತ್ತಾದ ಈ ದೇಹಾದಿ ಸರ್ವ ಪ್ರಪಂಚವೂ, ಮೃಗತೃಷ್ಣೆಯನ್ನು ನೋಡಿದ ತತ್ಕ್ಷಣವೇ ಅದು ನಿಜವಾಗಿ ಜಲವೆಂದು ತೋರಿದನಂತರ, ಅದು ಜಲವಲ್ಲವೆಂದು ತಿಳಿದ ಮತ್ತೊಬ್ಬನ ವಾಕ್ಯವನ್ನು, ನಂಬುವದರಿಂದಲಾಗಲೀ, ನಂಬಿ ಸಮೀಪಕ್ಕೆ ಹೋಗಿ ನೋಡುವದರಿಂದಲಾಗಲೀ, ಆ ಜಲವೆಂಬ ನಿಶ್ಚಯವು ಹೇಗೆ ನಶಿಸುವದೋ, ಆ ಪ್ರಕಾರವೂ, ಸ್ವಪ್ನದಲ್ಲಿ ಯಥಾರ್ಥವಾದವುಗಳಂತೆ ಕಾಣಲ್ಪಡುವ ವಿಚಿತ್ರಪದಾರ್ಥಗಳು ಜಾಗ್ರದ್ದಶೆಯಲ್ಲಿ ಹೇಗೆ ಕಾಣಲ್ಪಡಲಾರವೋ, ಆ ಪ್ರಕಾರವೂ, ಅವಿದ್ಯಾ ಸಂಬಂಧವಿರುವವರಿಗೂ ಸತ್ಯವಾಗಿ ತೋರಿರುವುದು. ಗುರೂಪದೇಶದಿಂದುಂಟಾದ "ತತ್ತ್ವಮಸ್ಯಾದಿ" ಮಹಾವಾಕ್ಯಜನ್ಯವಾಗಿರುವ "ಅಹಂ ಬ್ರಹ್ಮಾಸ್ಮಿ" ಎಂಬುವ ಅನುಭವದಿಂದ ಅಂತಹ ಪ್ರಪಂಚವೆಲ್ಲವೂ ಮಿಥ್ಯಾರೂಪವಾಗಿತೋರುವುದು. ಆದದರಿಂದ ಅಂತಹ ವಿವೇಕಯುಕ್ತನಾಗಿ ಅವಿದ್ಯಾಜನ್ಯವಾದ ಈ ದೇಹಾದಿಗಳಲ್ಲಿ ಅಭಿಮಾನವನ್ನು, ಈ ದೇಹಾದಿಗಳ ನಾಶಕ್ಕೆ ವ್ಯಸನವನ್ನು, ಹೊಂದದೇ ನಿನ್ನ ಮೊದಲಿನ ಉದ್ದೇಶಪ್ರಕಾರವಾಗಿ ಕೌರವರೊಡನೆ ಯುದ್ಧಮಾಡು. ನಿತ್ಯಸ್ಯ-ಅನಾಶಿನಃ- ಎಂಬುವ ಪದಗಳಿಗೆ ಭೇದವೇನೆಂದರೆ, ನಿತ್ಯನು- ಜನನಮರಣಗಳಿಲ್ಲದವನು, ಅನಾಶೀ- ವ್ಯಾಧಿ ಮೊದಲಾದವು ಉಂಟಾಗುವಿಕೆಯು, ಅವು ಪುನಃ ಹೋಗುವಿಕೆಯು, ಇಲ್ಲದವನು.

ಪ್ರತ್ಯಕ್ಷಾದಿಗಳೆಂಬ ಆರು ಪ್ರಮಾಣಗಳ ವಿವರಣ ಹೇಗಂದರೆ:

(೧) **ಪ್ರತ್ಯಕ್ಷ ಪ್ರಮಾಣವು**=ತಾನೇ ಆಗಲೀ ನೋಡಿ ಅನ್ಯನೇ ಆಗಲೀ ತೋರಿಸಿದ ಪದಾರ್ಥವನ್ನು ನೋಡಿ ಇದು ಇಂತಹ ಪದಾರ್ಥವೆಂದಾಗಿ ತಿಳಿಯುವಿಕೆಯು, (ದೃಷ್ಟಾಂತವು) ಕಾಶೀನಗರವಿರುವುದೆಂದು ಹೇಳಿದಕಾಲದಲ್ಲಿ ತಾನೇ ಪ್ರತ್ಯಕ್ಷವಾಗಿ ಅದುನೋಡಿ ಕಾಶೀನಗರ ವಿರುವುದೆಂದು ತಿಳಿಯುವಿಕೆಯೂ, ಅಮೂಲ್ಯವಾದ ರತ್ನವಿರುವುದೆಂದು ಹೇಳಿ ಅದನ್ನೊಬ್ಬನು ತೋರಿಸಲು, ನೋಡಿ ಇಂತಹ ರತ್ನವಿರುವುದೆಂದು ತಿಳಿಯುವಿಕೆಯು.

(೨) **ಅನುಮಾನ ಪ್ರಮಾಣವು.** ಒಂದು ವಸ್ತುವಿನೊಡನೇ ಸಂಬಂಧಿಸಿರುವ ಮತ್ತೊಂದು ವಸ್ತುವನ್ನು ನೋಡಿ ಅಂತಹ ವಸ್ತುವು ಕೂಡ ಇಲ್ಲಿರಬಹುದೆಂದಾಗಿ ಊಹೆಯಿಂದ ತಿಳಿಯುವದು, (ದೃಷ್ಟಾಂತವು) ಅಗ್ನಿಸಂಬಂಧವುಳ್ಳಧೂಮ (ಹೊಗೆ)ವನ್ನು ನೋಡಿ ಧೂಮದರ್ಶನದಿಂದಲೇ ಇಲ್ಲಿ ಅಗ್ನಿ ಇರುವುದೆಂದು ಊಹಿಸುವದು.

(೩) **ಉಪಮಾನ ಪ್ರಮಾಣವು.** ಒಂದು ವಸ್ತುವಿನಂತೇ ಮತ್ತೊಂದು ವಸ್ತುವನ್ನು ನೋಡಿ ಆ ವಸ್ತುವೂ ಹೀಗೇಯೆ ಇರುವುದೆಂದು ತಿಳಿದುಕೊಳ್ಳುವದು (ದೃಷ್ಟಾಂತವು) ಚಂದ್ರನಂತೇ ಮುಖವಿರುವುದೆಂದು ಕೇಳಿದು ಚಂದ್ರನನ್ನುನೋಡಿದನಂತರ ಈ ಮೇರಿಗೇನೇ ಮುಖವು ಆಹ್ಲಾದಕರವಾಗಿರುವುದೆಂದು ತಿಳಿಯುವದು.

(೪) **ಶಬ್ದ ಪ್ರಮಾಣವು.** ಮತ್ತೊಂದು ಪ್ರಮಾಣದಿಂದ ತಿಳಿಯಲಶಕ್ಯವಾದ ವಸ್ತು ಸ್ವರೂಪವನ್ನು ಬೋಧಿಸುವ ಪ್ರಾಜ್ಞನ ವಾಕ್ಯಬಲದಿಂದ ಒಂದು ವಸ್ತುಸ್ವರೂಪವನ್ನು ತಿಳಿದುಕೊಳ್ಳುವಿಕೆಯು. (ದೃಷ್ಟಾಂತವು) ಇತರಪ್ರಮಾಣಗಳಿಗೇ ಅಗೋಚರವಾದ ಬ್ರಹ್ಮಸ್ವರೂಪವನ್ನು ಬ್ರಹ್ಮಸಾಕ್ಷಾತ್ಕಾರವುಳ್ಳ ಋಷಿವಾಕ್ಯಾದಿಗಳಿಂದ ತಿಳಿಯುವಿಕೆಯು.

(೫) **ಅರ್ಥಾಪತ್ತಿ ಪ್ರಮಾಣವು.** ಮೇಲಿನ ಲಕ್ಷಣಗಳನ್ನುನೋಡಿ ಈ ಅಂಶವು ಹೀಗಿರುವುದೆಂದು ನಿರ್ಣಯಿಸಿಕೊಂಡು ತಿಳಿದುಕೊಳ್ಳುವಿಕೆಯು. (ದೃಷ್ಟಾಂತವು) ಒಂದು ಮನುಷ್ಯನು ಹಗಲು ಅನ್ನವನ್ನು ತಿನ್ನಲಾರನು ಆದರೂ ಪುಷ್ಟನಾಗಿರುವನು, ಎಂಬುದು ತಿಳಿದು ಇವನು ಆಹಾರವಂತೆಗೆದುಕೊಳ್ಳದಿದ್ದರೇ ಪುಷ್ಟನಾಗಲು ಕಾರಣವಿಲ್ಲವು, ಆದುದರಿಂದ ಇವನು ರಾತ್ರಿಕಾಲದಲ್ಲಿ ತಿನ್ನುವನೆಂದು ನಿರ್ಣಯಿಸಿಕೊಳ್ಳುವಿಕೆಯು.

(೬) **ಅನುಪಲಬ್ಧಿ ಪ್ರಮಾಣವು.** ಒಂದು ಪದಾರ್ಥವು ಒಂದುಸ್ಥಳದಲ್ಲಿ ಇಲ್ಲದಿರುವಿಕೆಯಂ ತಿಳಿದುಕೊಳ್ಳುವಿಕೆಯು. (ದೃಷ್ಟಾಂತವು) ಭೂತಲವು ಘಟಾ

ಭಲವವು, ಅಂದರೆ ಭೂಮಿಯಮೇಲೆ ಘಟ (ಮಡಿಕೆ) ಇಲ್ಲವೆಂಬ ತಿಳಿಯುವಿಕೆ.

(ಈ ಪ್ರತ್ಯಕ್ಷಾದಿ ಷಟ್ಪ್ರಮಾಣಗಳಿಂದ ಬ್ರಹ್ಮ ಸ್ವರೂಪ ವನ್ನರಿಯಕೂಡದಾಗಿರುವ ಪಕ್ಷದಲ್ಲಿ ಶಬ್ದರೂಪ ಪ್ರಮಾಣದಿಂದ ಲೂ ಬ್ರಹ್ಮಸ್ವರೂಪವನ್ನರಿಯಕೂಡದೆಂದು ಹೇಳಿದಂತೆ ಆಗುವು ದು, ಹಾಗಾದರೆ ಅದೇಗೀತೆಯಲ್ಲಿ “ವೇದೈಶ್ಚಸರ್ವೈರಹಮೇವವೇ ದ್ಯಃ,, ಎಂಬುವುದಾಗಿ ವೇದರೂಪವಾದಶಬ್ದ ವೇದ್ಯತ್ವವು ಪರಮಾ ತ್ಮನಿಗೆ ಹೇಳಿರುವುದು ಯುಕ್ತವಾಗುವುದೋ ? ಎಂದು ಹೇಳಿದರೆ ಅದಕ್ಕುತ್ತರವು, ಶಾಸ್ತ್ರವು ಬ್ರಹ್ಮವಿರುವುದೆಂದು ತಿಳಿಸುವದುಮಾತ್ರ ವೇ, ಅಲ್ಲದೇ ಅಘಟಿತಘಟನವಾಗಿರುವ ಬ್ರಹ್ಮಸ್ವರೂಪವನ್ನು ಈಪ್ರ ಕಾರವಾದದ್ದೆಂದು ಯಥಾರ್ಥವಾಗಿ ತಿಳಿಸಲು ಶಕ್ತವಾಗಲಾರ ದು. ಈ ಅರ್ಥವನ್ನು ಕೇನೋಪನಿಷತ್ ದ್ವಿತೀಯಖಂಡ ದ್ವಿತೀಯ ವಾಕ್ಯದಲ್ಲಿ “ನಾಹಂಮನ್ಯೇ ಸುವೇದೇತಿ ನೋನವೇ ದೇತಿ ವೇ ದಚ। ಯೋನಸ್ತದ್ವೇದ ತದ್ವೇದ ನೋನವೇದೇತಿವೇದಚ,, ಎಂಬದಾಗಿಯೂ, ತೈತ್ತಿರೀಯಾ ನಂದವಲ್ಲೀ ನವಮಾನು ವಾಕದಲ್ಲಿ “ಯತೋವಾಚೋ ನಿವರ್ತಂತೇ-ಅಪ್ರಾಪ್ಯಮನಸಾಸಹ ,, ಎಂಬದಾಗಿಯೂ ಹೇಳಿರುವುದು. ||೧೭||

(ರಾ-ಬಾ) ದೇಹಗಳಿಗೆ ವಿನಾಶಹೊಂದುವದೇ ಸ್ವಭಾವ ವೆಂದು ಹೇಳುತ್ತಾನೆ. ನಿತ್ಯನಾದ ಆತ್ಮನಿಗೆ ಕರ್ಮಫಲಭೋ ಗಾರ್ಥವಾಗಿ ಪಂಚಭೂತಗಳ ಸಮ್ಮೇಳನದಿಂದುಂಟಾಗಿ ರುವ ಈ ದೇಹಗಳು (ವೃದ್ಧಿಹೊಂದತಕ್ಕವುಗಳಾಗಿರುವುದ ರಿಂದ) ಶಾಸ್ತ್ರದಲ್ಲಿ ಹೇಳಿರುವಂತೆ ಕರ್ಮಾವಸಾನದಲ್ಲಿ ವಿ ನಾಶಹೊಂದತಕ್ಕವುಗಳಾಗಿರುತ್ತವೆ. ಲೋಕದಲ್ಲಿ ವೃದ್ಧಿ ಹೊಂದತಕ್ಕ ಸ್ವಭಾವಗಳುಳ್ಳ ನಾನಾರೂಪವಾಗಿರುವ ಮ ಡಿಕೆ ಮೊದಲಾದವುಗಳು ನಾಶಹೊಂದತಕ್ಕವುಗಳೆಂದು ಕಾ ಣಲ್ಪಟ್ಟಿರುತದೆ, ಆತ್ಮನಾದರೋ ಯಾವ ದೇಹದಲ್ಲಿಯೂ, ,, ನಾನಿದಂ ತಿಳಿಯಬಲ್ಲೆನು (ಇದಮಹಂಜಾನಾಮಿ) ಎಂಬ

ದಾಗಿ ಜ್ಞಾನವಸ್ತುವಾಗಿಯೇ ತೋರುವುದರಿಂದ ಯಾವಾಗ ಲೂ ಏಕರೂಪನಾಗಿಯೇ ಇರುತ್ತಾನೆಂದು ತಿಳಿಯಬರುತ ದೆ, ದೇಹದಂತೇ ಪ್ರದೇಶಾನುಗುಣವಾದ ಆಕಾರಭೇದ ವು ಆತ್ಮನಿಗೇ ಕಾಣುವದಿಲ್ಲವಾದದರಿಂದ ನಾನಾರೂಪನಾ ಗಿರತಕ್ಕವನಲ್ಲನು. ಆದದರಿಂದ ಇವನಿಗೇ ನಾಶವಿಲ್ಲವು.

ಈಪ್ರಕಾರ ಆತ್ಮನು ನಿತ್ಯನಾದುದರಿಂದಲೂ, ದೇಹವು ಅನಿತ್ಯವಾದುದರಿಂದಲೂ, ಈ ಯರಡು ವಿಷಯದಲ್ಲಿ ದುಃ ಖಿಸುವದು ಉಚಿತವಲ್ಲನೆಂದು ದೃಢವಾಗಿ ತಿಳಿದು ಖಡ್ಗ ಪ್ರಹಾರಾದಿರೂಪವಾದ ಕಠಿನ ಸ್ಪರ್ಶಗಳು ತನಗೆ ಪ್ರಾಪ್ತ ವಾದರೂ, ಅನ್ಯರಿಗೇ ಪ್ರಾಪ್ತವಾದರೂ, ಅವಂಕ್ಷುಭಿಸಿ ಘಟಾಪೇಕ್ಷೆಯಿಲ್ಲದೇ ಮೋಕ್ಷಾರ್ಥವಾಗಿ ಯುದ್ಧವೆಂಬುವ ಕರ್ಮವನ್ನುಮಾಡು. ॥ ೧೮ ॥

(ತಾ-ಚಂ-) ಇಮೇದೇಹಾಃ ಎಂಬವಾಗಿ ಕರ್ಮಾಯು ತ್ತವಾಗಿರುವ ಈ ದೇಹಗಳು ನಾಶವುಳ್ಳವುಗಳೆಂದು ಬೋ ಧಿಸುವುದರಿಂದೋದಿದರೇ ಈಶ್ವರಾದಿ ದೇಹಗಳಿಗೇ ಕರ್ಮವಶ್ಯ ತ್ವವಿಲ್ಲದೇ ಇರುವುದರಿಂದ ಇದಕ್ಕಿಂತಲೂ ಅತ್ಯಂತವೈಲಕ್ಷ ಣ್ಯವು ತೋರುವುದು. ॥ ೧೮ ॥

(ಗೀ-ವಿ-)ಇಮೇದೇಹಾಃ ಎಂಬವಾಗಿ ಪರಿದೃಶ್ಯಮಾನವಾ ಗಿರುವ ದೇಹಗಳನ್ನು ನಿರ್ದೇಶಿಸಿ ಈ ದೇಹಗಳು ನಾಶವುಳ್ಳ ವುಗಳೆಂದು ಹೇಳುವದರಿಂದ ಮುಕ್ತಿದಶೆಯಲ್ಲಿಯೂ ಅನುವ ರ್ತಿಸಿ ಬರುತಲಿರುವ ಸ್ವರೂಪಗತವಾದ ದೇಹವುನಾಶರಹಿ ತವಾಗಿರುವುದೆಂಬ ಅರ್ಥವು ಸೂಚಿತವಾಗುವುದು ॥ ೧೮ ॥

ಮೂ॥ ಯಏನಂ ವೇತ್ತಿ ಹಂತಾರಂ ಯಶ್ಚೈನಂ ಮ ನ್ಯತೇ ಹತಂ.। ಉಭೌತೌನವಿಜಾನೀತೋ ನಾಯಂ ಹಂತಿ ನ ಹನ್ಯತೆ ॥ ॥೧೯॥

ಪ॥ ಯಃ - ಏನಂ - ವೇತ್ತಿ - ಹಂತಾರಂ - ಯಃ - ಚ - ಏನಂ - ಮನ್ಯತೇ - ಹತಂ । ಉಭೌ - ತೌ - ನ - ವಿಜಾನೀತಃ - ನ - ಅಯಂ - ಹಂತಿ - ನ - ಹನ್ಯತೇ ॥

ಟ॥ ಯಃ - ಯಾವಮನುಷ್ಯನು, ಏನಂ - ಈ ದೇಹಿಯನ್ನು, ಹಂತಾರಂ - ಕೊಲ್ಲುವಂತವನಾಗಿ, ವೇತ್ತಿ - ತಿಳಿಯುತ್ತಾನೊ, ಯಃ - ಯಾವಮನುಷ್ಯನು, ಏನಂ - ಇವನನ್ನು, ಹತಂ - ಸಂಹರಿಸಲ್ಪಟ್ಟವನಾಗಿ, ಮನ್ಯತೇ - ತಿಳಿಯುತ್ತಾನೋ, ತಾವು ಉಭೌ - ಅವರಿಬ್ಬರೂ ನವಿಜಾನೀತಃ - ಯಥಾರ್ಥವಂ ತಿಳಿದವರಲ್ಲವು, ಅಯಂ - ಈ ಆತ್ಮನು, ನಹಂತಿ - ಸಂಹರಿಸುವದಿಲ್ಲವು, ನಹನ್ಯತೇಚ - ಸಂಹರಿಸಲ್ಪಡುವದೂ ಇಲ್ಲವು॥ ೧೯॥

(ಶಂ-ಭಾ) ದೇಹವು ಹತವಾದಕಾಲದಲ್ಲಿ ನಾನು ಸಂಹರಿಸಲ್ಪಟ್ಟೆನೆಂಬದಾಗಿಯೂ, ಈ ದೇಹವು ಇತರವಾದ ದೇಹವನ್ನು ಸಂಹರಿಸಿದಕಾಲದಲ್ಲಿನಾನು ಆ ಆತ್ಮನನ್ನು ಸಂಹರಿಸಿದನೆಂಬದಾಗಿಯೂ, ತಿಳಿಯತಕ್ಕವನು ವಿವೇಕಿಯಾದವನಲ್ಲವು, ಅದು ಹೇಗೆಂದರೇ? ದೇಹವೇಬೇರೆ, ದೇಹಿಯಾದ ಆತ್ಮನೇಬೇರೆ, ಎಂಬದಾಗಿ ತಿಳಿದವನು ತಾನು ಅನ್ಯರನ್ನು ಸಂಹರಿಸುವನೆಂಬದಾಗಿಯೂ, ಅನ್ಯರಿಂದ ತಾನು ಸಂಹರಿಸಲ್ಪಡುವನೆಂಬದಾಗಿಯೂ, ತಿಳಿಯಲಾರನು. ಆ ವಿಕಾರಗಳು ದೇಹಕ್ಕೆ ಸೇರಿರುವುವು, ಕರ್ತೃತ್ವಾದಿಗಳು ಅಂತಃಕರಣ ಧರ್ಮಗಳಲ್ಲವೇ ಕೇವಲಸಾಕ್ಷಿಯಾದ ಆತ್ಮನಿಗೆ ಸಂಬಂಧಿಸಲಾರದೆಂದು ತಿಳಿದುಕೊಳ್ಳುವನು. ನಿತ್ಯನಾಗಿಯೂ, ವಿಕಾರರಹಿತನಾಗಿಯೂ, ಸ್ವಯಂಪ್ರಕಾಶನಾಗಿಯೂ, ಇರುವ ಆತ್ಮನಿಗೇ ಬಾಧ್ಯಬಾಧಕ ಭಾವವು ಹೇಗೆ ಬರುವುದು? ಆದುದರಿಂದ ನಾನೀಗ ತಿಳಿಸಿರುವ ಸಂದರ್ಭಗಳಂ ತಿಳಿದುಕೊಳ್ಳದವರುಗಳಿಂದ ನಾನು ಸಂಹರಿಸಲ್ಪಡುವೆನು, ನನ್ನಿಂದವರು ಸಂಹರಿಸಲ್ಪಡುವರು, ಎಂಬುವುದಂಬಿಟ್ಟು ನಿರ್ಭಯನಾಗಿ ಯುದ್ಧಮಾಡು. ॥ ೧೯ ॥

(ರಾ-ಭಾ) ಲೋಕದಲ್ಲಿ ಆತ್ಮನನ್ನು ಸಂಹಾರಮಾಡುವ ವಸ್ತುವು ಯಾವದಾದರೊಂದುಂಟೆಂಬದಾಗಿ ತಿಳಿದವನೂ ಹುಚ್ಚನೋ, ಆತ್ಮನು ಕೊಲ್ಲಲ್ಪಡುವನೆಂದು ತಿಳಿದವನೂ ಹುಚ್ಚನೋ, ಈ ಇಬ್ಬರೂ ಜ್ಞಾನಿಗಳಲ್ಲವು, ಉಕ್ತವಾದ ಕಾರಣಗಳಿಂದಲೇ ಆತ್ಮನು ನಿತ್ಯನಾದುದರಿಂದ ಇವನಂ ಸಂಹಾರಮಾಡುವ ವಸ್ತುವು ಯಾವದೂ ಇರಲಾರದು, ಆದುದರಿಂದ ಆತ್ಮನು ಸಂಹರಿಸ

ಲ್ಪಡತಕ್ಕವನಲ್ಲವು. “ ಆದರೇ ಸಂಹಾರವೆಂಬುವದು ಯಾವದು? ಅಂದರೇ,, ಜೀವನಿಗೇ ದೇಹವಿಯೋಗವೇ ಸಂಹಾರವೆನ್ನಲ್ಪಡುವದು. ಆದರೂ “ಪ್ರಾಣಿಗಳನ್ನು ಸಂಹರಿಸಕೂಡದು,, “ಬ್ರಾಹ್ಮಣನು ಸಂಹರಿಸಲ್ಪಡತಕ್ಕವನಲ್ಲ,,ವೆಂಬದಾಗಿ ಕೆಲವು ಶ್ರುತಿಗಳು ಜೀವಾತ್ಮನಿಗೇ ಸಾಕ್ಷಾತ್ ಸಂಹಾರವಂ ಹೇಳುವಲ್ಲಿ ಆತ್ಮನನ್ನು ನಿತ್ಯನೆಂಬದಾಗಿ ಹೇಳಬಹುದೋ?,, ಅಂದರೇ ಈ ಪ್ರಕರಣಗಳಲ್ಲಿ ಹೇಳಿರುವ ಸಂಹಾರಶಬ್ದಾರ್ಥವು ದೇಹವಿಯೋಗರೂಪವಾದ ಸಂಹಾರವನ್ನೇಬೋಧಿಸುತದೆ, “ ಹಿಂಸೆಯಂಮಾಡಬಾರದು ,, ಎಂಬುವಶಾಸ್ತ್ರಕ್ಕೂ ನಿಷ್ಕಾರಣವಾಗಿ ಹಿಂಸೆಯಂಮಾಡಬಾರದೆಂಬುವದರಲ್ಲಿ ತಾತ್ಪರ್ಯವು. ॥ ೧೯ ॥

ಮೂ॥ ನಜಾಯತೇ ಮ್ರಿಯತೇವಾಕದಾಚಿ ನ್ನಾಯಂ
ಭೂತ್ವಾ ಭವಿತಾವಾ ನಭೂಯಃ । ಅಜೋನಿತ್ಯಶ್ಶಾ
ಶ್ವತೋಽಯಂ ಪುರಾಣೋ ನ ಹನ್ಯತೇ ಹನ್ಯಮಾನೆ
ಶರೀರೆ ॥ ॥೨೦॥

ಪ॥ ನ- ಜಾಯತೇ - ಮ್ರಿಯತೇ - ವಾ- ಕದಾಚಿತ್-ನ-ಅಯಂ- ಭೂತ್ವಾ - ಭವಿತಾ - ವಾ- ನ- ಭೂಯಃ । ಅಜಃ - ನಿತ್ಯಃ- ಶಾಶ್ವತಃ - ಅಯಂ - ಪುರಾಣಃ- ನ- ಹನ್ಯತೇ ಹನ್ಯಮಾನೇ- ಶರೀರೇ ॥

ಅ॥ ಅಯಂ- ಈ ಆತ್ಮನು, ಅಜಃ - ಉತ್ಪತ್ತಿಯಿಲ್ಲದವನು, ನಿತ್ಯಃ - ನಾಶರಹಿತನು, ಶಾಶ್ವತಃ - ಸ್ಥಿರವಾಗಿರುವನು, ಪುರಾಣಃ - ಅನಾದಿಸಿದ್ಧನು, ನಶ್ಯಾತ್ಮಾ-ಅದುಪಟುವ, ಅಯಂ- ಈ ಆತ್ಮನು, ಕದಾಚಿದಪಿ - ಯಾವಕಾಲದಲ್ಲಿಯು, ನಜಾಯತೇ- ಹುಟ್ಟುವದಿಲ್ಲವು, ( ಉತ್ಪತ್ತಿಶೂನ್ಯನಾದುದರಿಂದ ಈ ಆತ್ಮನು ಯಾವಕಾಲದಲ್ಲಿಯು ಹುಟ್ಟುವದಿಲ್ಲವೆಂದು ಭಾವವು). ನಮ್ರಿಯತೇವಾ - ಮರಣವಂಹೊಂದುವದೂ ಇಲ್ಲವು, (ನಿತ್ಯನಾದುದರಿಂದ ಮರಣವ ಹೊಂದುವದಿಲ್ಲವೆಂದು ತಾತ್ಪರ್ಯವು) ಅಯಂ- ಈ ಆತ್ಮನು, ಭೂತ್ವಾ - ಉಂಟಾಗಿ, ಭೂಯಃ - ಮರಳಿ, ನಭವಿತಾವಾ - ಉತ್ಪನ್ನನಾಗುವದೂ ಇಲ್ಲವು, ( ಅತಃ- ಆದುದರಿಂದ, ಶರೀರೇ - ದೇಹವು, ಹನ್ಯಮಾನೇ ಸತಿ- ನಾಶಹೊಂದಲ್ಪಟ್ಟದ್ದಾದರೂ, ನಹನ್ಯತೇ - ಕೊಲ್ಲಲ್ಪಡುವದಿಲ್ಲವು, ( ಶಾಶ್ವತನಾಗಿಯೂ ಅ

ನಾದಿಸಿದ್ಧನಾಗಿಯೂ ಇರುವವನಾದುದರಿಂದ ಈ ಆತ್ಮನು ಮೃತನಾಗುವದೂ ಇಲ್ಲವು, ಪುನಶ್ಚ ಉತ್ಪನ್ನನಾಗುವದೂ ಇಲ್ಲವೆಂದು ತಾತ್ಪರ್ಯವು. ಈ ಶ್ಲೋಕದಲ್ಲಿಯೂ ಜೀವನಿತ್ಯತ್ವವೇ ಹೇಳಲ್ಪಟ್ಟಿರುತ್ತದೆಂದರಿಯಬೇಕು.

(ಶಂ-ಭಾ) ಆತ್ಮನಿಗೇ ಅವಿಕ್ರಿಯತ್ವವು ಹೇಗಂದರೆ ೨ ಮಂತ್ರರೂಪವಾದ ಶ್ಲೋಕದಿಂದ ಉತ್ತರವಂ ಹೇಳುತ್ತಾನೇ. ಆತ್ಮನಿಗೆ ಯಾವ ಕಾಲದಲ್ಲಿಯೂ, ಉತ್ಪತ್ತಿ ವಿನಾಶಗಳಿಲ್ಲವು. ಕೆಲವು ಕಾಲವಿಲ್ಲದೆ ಅನಂತರ ಕೆಲವುಕಾಲದಲ್ಲಿರುವಿಕೆಯೂ, ಕೆಲವುಕಾಲವಿದ್ದು ಅನಂತರ ಕೆಲವುಕಾಲದಲ್ಲಿ ಇಲ್ಲದೇ ಇರುವಿಕೆಯೂ ಇಲ್ಲವು. ವೃದ್ಧಿಕ್ಷಯಗಳೆಂಬ ವಿಕಾರಗಳೂ ಇಲ್ಲವು. ,,ಜಾಯತೇ - ಅಸ್ತಿ - ವರ್ಧತೇ - ವಿಪರಿಣಮತೇ - ಅಪಕ್ಷೀಯತೇ - ನಶ್ಯತಿ ,, ಎಂಬ ಆರವಸ್ಥೆಗಳು ಷಡ್ಭಾವ ವಿಕಾರಗಳೆನ್ನಲ್ಪಡುವುದು. ಜಾಯತೆ - ಹುಟ್ಟುವದು, ಅಸ್ತಿ - (ಹುಟ್ಟಿ) ಇರುವಿಕೆಯು, ವರ್ಧತೇ - ವೃದ್ಧಿಹೊಂದುವುದು, ವಿಪರಿಣಮತೆ - ಪರಿಣಾಮಹೊಂದುವದು, ( ಅಂದರೇ ಬಾಲನಾಗಿರುವವನು ಯೌವನವುಳ್ಳವನಾಗಿಯು, ಯೌವನವುಳ್ಳವನು, ಮುದುಕನಾಗಿಯೂ ಆಗುವದು.) ಅಪಕ್ಷೀಯತೆ - ಕ್ಷಯವಂ ಹೊಂದುವುದು, ನಶ್ಯತಿ - ಮೃತಿಹೊಂದುವುದು. ಆದರೇ ಷಡ್ಭಾವ ವಿಕಾರಗಳಲ್ಲಿ ಜಾಯತೇ, ನಶ್ಯತಿ, ಎಂಬ ವಿಕಾರದ್ವಯ ನಿಷೇಧದಿಂದಲೇ ಅವಶಿಷ್ಟವಾಗಿರುವ ಸರ್ವ ವಿಕಾರಪ್ರತಿಷೇಧವು ತೋರುವಲ್ಲಿ ಮತ್ತವುಗಳುಕೂಡ ನಿಷೇಧಿಸುವದರಲ್ಲಿ ಪ್ರಯೋಜನವೇನಂದರೆ ಷಡ್ಭಾವವಿಕಾರಗಳಿಗಿಂತಲೂ ಅನ್ಯವಾಗಿರುವ ಯೌವನಾದಿ ಸಮಸ್ತ ವಿಕಾರಗಳೂ ಇಲ್ಲವೆಂಬದಾಗಿ ತಿಳಿಸಲು ಷಡ್ಭಾವವಿಕಾರಗಳಂ ನಿಷೇಧಿಸುವ ಶಬ್ದಗಳಂ ಪ್ರಯೋಗಿಸಿರುತವೆ. ಮತ್ತು ನಿತ್ಯಶಬ್ದಕ್ಕೂ ಶಾಶ್ವತಶಬ್ದಕ್ಕೂ ಅರ್ಥವು ಒಂದೇಯಾಗಿ ಕಾಣುವುದರಿಂದ ಏಕಾರ್ಥ ಪ್ರತಿಪಾದಕವಾಗಿರುವ ಶಬ್ದವನ್ನು ಯರಡುಕಡೆ ಪ್ರಯೋಗಿಸುವುದರಿಂದ ಪೌನರುಕ್ತ್ಯದೋಷವು ಪ್ರಾಪ್ತವಾಗಲಾರವೋ? ಅಂದರೇ ಶಾಶ್ವತನೆಂಬುದರಿಂದ ಆತ್ಮನು ನಿರವಯವಿಯಾಗಿಯೂ, ( ಅವಯವಗಳಿಲ್ಲದವನು ) ನಿರ್ಗುಣನಾಗಿಯೂ, ( ಗುಣಗಳಿಲ್ಲದವನು ) ಇರುವುದರಿಂದ ಆತ್ಮನು ತಾನಾಗಿಯೇ ಕೃಶನಾಗಿ ನಾಶಹೊಂದತಕ್ಕವನಲ್ಲವೆಂಬದಾಗಿಯೂ, ಗುಣಗಳು

ನಾಶಹೊಂದುವುದರಿಂದ ಕ್ರಿಶನಾಗಿ ನಾಶಹೊಂದತಕ್ಕವನೂ ಅಲ್ಲವೆಂಬದಾಗಿಯೂ, ತೋರುವುದರಿಂದ ಪೌನರುಕ್ತ್ಯವೆಂಬದೋಷವು ಬರಲಾರದು. ಮತ್ತು ಈಪ್ರಕಾರ ಹೇಳುವುದರಿಂದ ಆತ್ಮನಿಗೇ ಷಡ್ಭಾವವಿಕಾರಗಳಲ್ಲಿ ಕ್ರಿಶಹೊಂದುವದಾಗಿರುವ ವಿಕಾರವಿಲ್ಲವೆಂದು ಹೇಳಿತೆಂಬ ಅಧಿಕಾರ್ಥಸೂಚನವಾಗುವುದರಿಂದಲೂ ಪೌನರುಕ್ತ್ಯವಿಲ್ಲವು. ಲೋಕದಲ್ಲಿಯಾದರು, ಅವಯವುಗಳು ಬರುವದರಿಂದ ಅಧಿಕನಾಗುತ್ತಾನೋ ಅಂತವನು ವೃದ್ಧಿ ಹೊಂದುತ್ತಾನೆಂಬದಾಗಿಯು ಹೊಸಬನಾಗುವನೆಂಬದಾಗಿಯೂ ಹೇಳಲ್ಪಡುವನು, ಆ ರೀತಿಯಾಗಿ ಹೇಳುವುದಕ್ಕೇ ಆತ್ಮನು ನಿರವಯವಿಯಾದುದರಿಂದ ಪೂರ್ವದಲ್ಲಿಯು ಹೊಸಬನೇ ಎಂಬದಾಗಿಯೂ, ಆದುದರಿಂದಲೇ ಪೂರ್ವಕ್ತಂತಲೂ ವೃದ್ಧಿ ಹೊಂದತಕ್ಕವನಲ್ಲವೆಂಬದಾಗಿಯೂ ಹೇಳುವದಕ್ಕಾಗಿ ಪುರಾಣ ಶಬ್ದವು ಪ್ರಯೋಗಿಸಲ್ಪಟ್ಟಿತು. ಈಪ್ರಕಾರ ಹೇಳುವುದರಿಂದ ಆತ್ಮನಿಗೇ ಷಡ್ಭಾವವಿಕಾರಗಳಲ್ಲಿ ಒಂದಾದ ವೃದ್ಧಿ ಹೊಂದತಕ್ಕ ವಿಕಾರವಿಲ್ಲವೆಂಬುದು ಹೇಳಿತೆಂದರಿಯಬೇಕು.

ಮತ್ತು ‟ನಹನ್ಯತೇಹನ್ಯಮಾನೇ ಶರೀರೇ„ ಎಂಬುದರಿಂದ ದೇಹವು ಸಂಹರಿಸಲ್ಪಟ್ಟರೂ ಆತ್ಮನು ಸಂಹರಿಸಲ್ಪಡಲಾರನು ಎಂಬುವ ಅರ್ಥವಂ ಹೇಳಿದರೇ ಪ್ರಥಮಪಾದದಲ್ಲಿ ‟ನಮ್ರಿಯತೇ ನಾಶಹೊಂದುವದಿಲ್ಲವು„ ಎಂಬ ಅರ್ಥಕ್ಕಿಂತಲೂ ವಿಶೇಷ ತೋರುವುದಿಲ್ಲ ವಾದುದರಿಂದ ಪೌನರುಕ್ತ್ಯದೋಷವು ಬರುವುದೆಂದರೇ ಆ ದೋಷನಿವಾರಣಾರ್ಥವಾಗಿ ಶರೀರೇಹನ್ಯಮಾನೇ ಅಪಿ ನಾತ್ಮಾ ಹನ್ಯತೇ ಶರೀರವು ರೂಪಾಂತರವಂ ಹೊಂದಿದರೂ ಆತ್ಮನು ರೂಪಾಂತರವಂ ಹೊಂದುವದಿಲ್ಲವೆಂದು ಹೇಳಿತು. ಈ ಶ್ಲೋಕದಿಂದ ಲೋಕದಲ್ಲಿರುವ ಸಮಸ್ತ ವಸ್ತುಗಳಿಗೂ ಸಹಜವಾಗಿ ಪ್ರಾಪ್ತವಾಗುವ ಷಡ್ಭಾವ ವಿಕಾರಗಳು ಆತ್ಮನಿಗೇ ಇಲ್ಲವೆಂತಲೂ, ಮತ್ತು ಶರೀರಗತವಾದ ಯೌವನಾದಿ ವಿಕಾರಗಳು ದೇಹಕ್ಕಿಂತಲೂ ಅನ್ಯನಾದ ಆತ್ಮನಿಗಿಲ್ಲವೆಂತಲೂ ಹೇಳಿತೆಂದರಿಯಬೇಕು. ಈಪ್ರಕಾರವಾಗಿ ಆತ್ಮನಿಗೇ ಷಡ್ಭಾವವಿಕಾರ ಪ್ರತಿಷೇಧವಂ ಮಾಡುವುದರಿಂದ ಆತ್ಮನು ಸಂಹರಿಸುವಂತವನು, ಸ್ಥೂ

ಹರಿಸಲ್ಪಡತಕ್ಕವನು, ಎಂದು ತಿಳಿದುಕೊಳ್ಳುವವರು ಮೂಢರೆಂದಭಿಪ್ರಾಯವು ॥೨೦॥

(ರಾ-ಭಾ) ಅಚೇತನಗಳಾದ ದೇಹಗಳಲ್ಲಿ ಕಾಣಲ್ಪಡುವ ಜನನಮರಣಾದಿ ಧರ್ಮಗಳು ಆತ್ಮನಿಗೇ ಸಂಬಂಧಿಸಲಾರವು. ಆತ್ಮನು (ಬ್ರಹ್ಮಾದಿದೇಹಗಳಂತೇ) ಒಂದುಕಾಲದಲ್ಲಿ (ಸೃಷ್ಟಿಕಾಲದಲ್ಲಿ) ಹುಟ್ಟಿ ಒಂದುಕಾಲದಲ್ಲಿ (ಪ್ರಳಯಕಾಲದಲ್ಲಿ) ನಾಶಹೊಂದುವದಿಲ್ಲವು, ಆದುದರಿಂದ ಜನ್ಮರಹಿತನಾಗಿಯೂ, ನಾಶರಹಿತನಾಗಿಯೂ, ಯಾವಾಗಲೂ ಏಕರೂಪನಾಗಿರುವುದರಿಂದ ನಿರ್ವಿಕಾರನಾಗಿಯೂ, ಇರುವ ಈ ಆತ್ಮನು ಯಾವಾಗಲೂ ಹೊಸಬನಾಗಿಯೇ ಕಂಡುಬರುತ್ತಾ ಶರೀರವು ಸಂಹರಿಸಲ್ಪಟ್ಟರೂ ತಾನು ಸಂಹರಿಸಲ್ಪಡಲಾರನು. ॥೨೦॥

(ಗೀ ವಿ) ಈಶ್ವರನಂತೇ ಜೀವಾತ್ಮನು ಉತ್ಪತ್ತ್ಯಾದಿಶೂನ್ಯನು, ಪರಮಾತ್ಮನ ಸ್ವರೂಪಕ್ಕೇ ಸದೃಶವಾದ ಸ್ವರೂಪವುಳ್ಳವನೆಂದು ಹೇಳಲ್ಪಡುತ್ತಾನೇ, ಜೀವನು ಹುಟ್ಟಿದನು ಮೃತನಾದನು ಎಂಬುವದಾಗಿ ಹೇಳುವದು ಕೂಡ ದೇಹಸ್ವೀಕಾರದಲ್ಲಿಯೂ, ಅದರ ತ್ಯಾಗಮಾಡುವದರಲ್ಲಿಯೂ, ತಾತ್ಪರ್ಯವು. ಆದುದರಿಂದ ಅಜ್ಞಾನಿಗಳು ಹುಟ್ಟುತ್ತಾನೆ, ಮೃತನಾಗುತ್ತಾನೇ ಎಂಬವಾಗಿ ವ್ಯವಹರಿಸುವರು.

ಮೂ॥ ವೇದಾವಿನಾಶಿನಂ ನಿತ್ಯಂ ಯ ಏನ ಮಜ ಮವ್ಯಯಂ।
ಕಥಂ ಸ ಪುರುಷಃ ಪಾರ್ಥ ಕಂ ಘಾತಯತಿ ಹಂತಿ ಕಂ ॥ ॥೨೧॥

ಪ॥ ವೇದ - ಅವಿನಾಶಿನಂ - ನಿತ್ಯಂ - ಯಃ - ಏನಂ - ಅಜಂ - ಅವ್ಯಯಂ। ಕಥಂ - ಸಃ - ಪುರುಷಃ - ಪಾರ್ಥ - ಕಂ - ಘಾತಯತಿ - ಹಂತಿ - ಕಂ।

ಅ॥ ಹೇ ಪಾರ್ಥ - ಎಲೈ ಅರ್ಜುನನೇ ! ಯಃ - ಯಾವನು, ಏನಂ - ಈ ಆತ್ಮನನ್ನು, ಅಜಂ - ಉತ್ಪತ್ತಿಶೂನ್ಯನಾಗಿಯೂ, ಅವ್ಯಯಮ್ - ವ್ಯಯರಹಿತನಾಗಿಯೂ, ಅವಿನಾಶಿನಮ್ - ನಾಶವಿಲ್ಲದವನಾಗಿಯೂ, (ಮತ್ತು ನೈಸರ್ಗಿಕ ನಾಶವಿಲ್ಲದವನಾಗಿಯೂ,

ನಿತ್ಯಂ-ನಿತ್ಯನಾಗಿಯೂ, (ಶಂ=ವಿಕಾರರಹಿತನಾಗಿಯೂ,) (ಮ=) ಸ್ವಾಭಾವಿಕ ನಾಶವಿಲ್ಲದವನಾಗಿಯೂ,) ವೇದ-ತಿಳಿಯುತ್ತಾನೆಯೋ, ಸಃ ಪುರುಷಃ - ಆ ಪುರುಷನು, ಕಥಂ-ಹೇಗೆ, ಕಂ- ಯಾರನ್ನು, ಘಾತಯತಿ - ಸಂಹಾರಮಾಡಿಸುತ್ತಾನೆ, ಕಂ- ಯಾರನ್ನು, ಹಂತಿ-ಕೊಲ್ಲುತ್ತಾನೆ. [೨೧]

(ಶಂ-ಭಾ) (೨ನೇ ಅ। ೧೯ ನೇ ಶ್ಲೋ ॥) «ಉಭೌ ತೌ ನ ವಿಜಾನೀತಃ» ಎಂಬುವ ಮಂತ್ರರೂಪವಾಗಿರುವ ಶ್ಲೋಕದಿಂದ ಆತ್ಮನು ಸಂಹರಿಸುತ್ತವನಲ್ಲವೆಂತಲೂ, ಸಂಹರಿಸಲ್ಪಡುವವನಲ್ಲವೆಂತಲೂ, ಪ್ರತಿಜ್ಞೆಯಂ ಮಾಡಿ (೨ನೇ-೨೦ ಶ್ಲೋ) «ನ ಜಾಯತೇ» ಎಂಬುವುದರಿಂದ ಆತ್ಮನು ವಿಕಾರರಹಿತನೆಂಬುವುದಕ್ಕೆ ಜನನಮರಣಾದಿ ಶೂನ್ಯನೆಂಬ ಕಾರಣವನ್ನು ಹೇಳಿ ಪ್ರತಿಜ್ಞಾರ್ಥವನ್ನು ಸಮರ್ಥಿಸುವನು. ಪೂರ್ವೋಕ್ತಲಕ್ಷಣ ಲಕ್ಷಿತನಾದ ಆತ್ಮನನ್ನು ಯಾವಾತ ತಿಳಿಯುವನೊ ಅವನು ಯಾರಿಂದ ಕೊಲ್ಲಲ್ಪಡುವನು, ಯಾರನ್ನು ಕೊಲ್ಲುವನು, («ಕಂ ಘಾತಯತಿ ಹಂತಿ ಕಂ?») ಎಂಬ ಪ್ರಶ್ನರೂಪವಾಗಿರುವ ಪದಗಳಿಗೆ ಆಕ್ಷೇಪ (ಅಂದರೆ ಆತ್ಮನಿಗೆ ಬಾಧ್ಯಬಾಧಕತ್ವವನ್ನು ನಿಷೇಧಿಸುವನೆಂದು) ಎಂಬ ಅರ್ಥವಂ ಸ್ವೀಕರಿಸಬೇಕು. ಪ್ರಶ್ನಾರ್ಥಕವಾಗಿರುವ ಪದಗಳಿಗೆ ಆಕ್ಷೇಪಪರವಾಗಿ ಅರ್ಥವು ಹೇಳವೇ ಸಹಜವಾಗಿ ತೋರುವ ಅರ್ಥವನ್ನೇ ಹೇಳಕೂಡದೊ? ಅಂದರೆ ಅವಶ್ಯಕತ್ವವನ್ನು, ಪ್ರಶ್ನೆಯಂ ಮಾಡಿದರೆ ಅದಕ್ಕೆ ಪ್ರತ್ಯುತ್ತರವಿರಬೇಕಾಗಿರುವುದರಿಂದ ಆಕ್ಷೇಪವಾಗಿ ಹೇಳಕೂಡದು.

ಆತ್ಮತತ್ವವನ್ನು ತಿಳಿದವನು ಯಾರಿಂದ ಕೊಲ್ಲಲ್ಪಡುತ್ತಾನೆ, ಯಾರನ್ನು ಕೊಲ್ಲುವನು, ಎಂಬುವದು ಪ್ರಶ್ನಾರ್ಥಕವಾಗಿದ್ದರೇ ಇಂತವನಿಂದ ಕೊಲ್ಲಲ್ಪಡುವನು, ಇಂತವನನ್ನು ಕೊಲ್ಲುವನು, ಎಂಬದಾಗಿ ಪ್ರತ್ಯುತ್ತರವಿರಬೇಕಾಗಿರುವುದರಿಂದ ಈ ಉದಾಹರಣೆಯಲ್ಲಿಯೂ, ಆಕ್ಷೇಪಾರ್ಥವನ್ನೇ ಸ್ವೀಕಾರಮಾಡಬೇಕು. ಮತ್ತು ವಿವೇಕಿಯಾದವನಿಗೆ ಕರ್ತೃತ್ವ ಪ್ರಸಕ್ತಿಯಾದ ಅಸಂಭವರೂಪವಾದ ಕಾರಣದಿಂದ ಕರ್ಮಗಳನ್ನು ನಿಷೇಧಿಸುವನು? ಅಂದರೆ ಆತ್ಮನಿಗೆ ವಿಕಾರಗಳಿಲ್ಲವೆ ಇರುವುದರಲ್ಲಿ ಜನನಮರಣಾದಿ ವಿಕಾರಗಳಿಲ್ಲವೇ ಇರುವಿಕೆಯನ್ನು ಹೇತುವಾಗಿಯೂ, ಸರ್ವಕರ್ಮ ನಿಷೇಧದಲ್ಲಿ ಅವಿಕ್ರಿಯಾತ್ಮವನ್ನು ಕಾರಣವಾಗಿಯೂ, ಹೇಳುವನು.

ಪ್ರತ್ಯ ಆತ್ಮನಿಗೆ ಅವಿಕ್ರಿಯತ್ವದಲ್ಲಿ ಜನನಮರಣಾದಿ ವಿಕಾರಗಳಿಲ್ಲದೇ ಇರುವದನ್ನೇ ಹೇತುವಾಗಿಯೂ, ಸರ್ವಕರ್ಮನಿಷೇಧದಲ್ಲಿ ಅವಿಕ್ರಿಯತ್ವವನ್ನೇ ಕಾರಣವಾಗಿಯೂ, ಹೀಗೆ ಹೇಳುವದರಿಂದ, ಆ ಅವಿಕ್ರಿಯತ್ವವೆಂಬ ಕಾರಣವು ಸಮಸ್ತರೂಪವಾಗಿರುವ ಕಾರ್ಯದ ಪ್ರಯೋಜಕ ಕರ್ತೃತ್ವಾಭಾವದಲ್ಲಿಯೂ, ಪ್ರಯೋಜ್ಯ ಕರ್ತೃತ್ವಾಭಾವದಲ್ಲಿಯೂ, ಈ ಪ್ರಕಾರವೇ ಸರ್ವಕರ್ಮ ನಿಷೇಧದಲ್ಲಿಯೂ, ಸಮಾನವಾಗಿರುವದರಿಂದ ಪ್ರತ್ಯೇಕ ಪ್ರಕಾರವಾಗಿ "ಕಂ ಘಾತಯತಿ ಹಂತಿ ಕಂ" ಎಂಬುವದಕ್ಕೆ ಪ್ರತ್ಯೇಕಾರ್ಥವು ಸಂಗತವಾಗಲಾರದು. ಆದುದರಿಂದ ವಿದ್ವಾಂಸನಿಗೆ ಸರ್ವಕರ್ಮಪ್ರತಿಷೇಧವೇ ಪ್ರಕರಣಾರ್ಥ ವೆಂಬುದಾಗಿ ಭಗವಂತನಿಂದ ಅಭಿಪ್ರೇತವಾಗಿರುವುದು.

ಸರ್ವಕರ್ಮಪ್ರತಿಷೇಧವೇ ಪ್ರಕರಣಾರ್ಥವಾಗಿದ್ದರೆ "ಕಂ ಘಾತಯತಿ ಹಂತಿ ಕಂ" ಎಂಬುವ ಶ್ಲೋಕದಲ್ಲಿ ಯಾವ ಕರ್ಮವನ್ನು ಮಾಡಲಾರನು ಮಾಡಿಸಲಾರನು, ಎಂಬುದಾಗಿ ಹೇಳಬೇಕಾಗಿರುವಲ್ಲಿ "ಕಂ ಘಾತಯತಿ ಹಂತಿ ಕಂ" ಯಾರನ್ನು ಕೊಲ್ಲಿಸುವನು-ಯಾರನ್ನು ಕೊಲ್ಲುವನು, ಎಂಬುದಾಗಿ ಹೇಳಿರುವದೇಕೆ? ಅಂದರೆ ಇಲ್ಲಿ ಅರ್ಜುನನು ಈ ಭೀಷ್ಮಾದಿಗಳನ್ನು ಹೇಗೆ ಸಂಹರಿಸುವೆನೆಂಬುದಾಗಿ ಯೋಚಿಸುತ್ತಲಿರುವನು. ಆತ್ಮನು ಸಂಹಾರಕನಾದವನೂ ಅಲ್ಲ ಸಂಹರಿಸಲ್ಪಡತಕ್ಕವನೂ ಅಲ್ಲವೆಂಬ ಈ ಅರ್ಥವನ್ನು ಅರ್ಜುನನಿಗೆ ತಿಳಿಸಲು ಪರಮಾತ್ಮನು ಸರ್ವಕರ್ಮ ಪ್ರತಿಷೇಧಕ್ಕೆ ಉದಾಹರಣವಾಗಿ ಹನನಕ್ರಿಯಾ ನಿಷೇಧವನ್ನು ಮಾಡಿರುವುದರಿಂದ ಇದೇ ಪ್ರಕರಣಾರ್ಥವೆಂಬುದು ಸಂಶಯವಿಲ್ಲವು.

ಆದರೆ "ಆತ್ಮನಿಗೆ ಸಕಲಕರ್ಮಗಳು ಇಲ್ಲವೆಂಬುವದಕ್ಕೆ ಹೇತುವಿಶೇಷವಾಗಿರುವ ಅವಿಕ್ರಿಯತ್ವವು ಇದುವರೆಗೂ ಹೇಳಲ್ಪಟ್ಟಿರುತವೆಯಲ್ಲವೆ? ಹೇತುವಿಶೇಷವೆಂದರೆ ಅವಿಕ್ರಿಯತ್ವವೆ? ಅಥವಾ ಇದಕ್ಕಿಂತಲೂ ಅನ್ಯವಾದ ಕಾರಣವಿಶೇಷವೆ?" ಅಂದರೆ ಉತ್ತರವು, ಹೇತುವಿಶೇಷವೆಂದರೆ ಅವಿಕ್ರಿಯತ್ವಕ್ಕಿಂತಲೂ ಭಿನ್ನವಾಗಿರುವ ವಿದ್ವತ್ತಾ ( ಆತ್ಮಸ್ವರೂಪವ ತಿಳಿಯುವಿಕೆ ) ಎಂಬುವದು. ಆಕಾರಣವು ಯಾವಪ್ರಕರಣದಲ್ಲಿ ಹೇಳಿತು? ಅಂದರೆ "ಯ ಏನಂ ವೇತ್ತಿ" ಎಂಬುವ ಪ್ರಕರಣದಲ್ಲಿ ಯಾವನು ಆತ್ಮನನ್ನು ತಿಳಿದು

ಕೊಳ್ಳುತ್ತಾನೆಯೊ ಅವನು ಯಾವ ಕರ್ಮವನ್ನು ಮಾಡಲಾರನು ಎಂಬುದರಿಂದ ಕರ್ಮಪ್ರತಿಷೇಧಕ್ಕೆ ಆತ್ಮಪರಿಜ್ಞಾನವು ಹೇತುವಾಗಿ ಹೇಳಲ್ಪಟ್ಟಿತು. ಆದರೆ “ಪೂರ್ವದಲ್ಲಿ ಆತ್ಮನಿಗೆ ಸರ್ವಕರ್ಮಗಳೂ ಇಲ್ಲವೆಂಬುವದಕ್ಕೆ ಅವಿಕ್ರಿಯತ್ವವನ್ನು ಹೇತುವಾಗಿ ಹೇಳಿತು. ಈಗ ಆತ್ಮಸ್ವರೂಪವನ್ನು ತಿಳಿದವನಿಗೆ ಸರ್ವಕರ್ಮ ಪ್ರತಿಷೇಧದಲ್ಲಿ ಆತ್ಮಜ್ಞಾನವು ಹೇತುವಾಗಿ ಹೇಳಲ್ಪಟ್ಟಿರುತ್ತದೆಯಲ್ಲವೆ ? ವೇತ್ತಾ (ಆತ್ಮನನ್ನು ತಿಳಿದವನು) ಎಂಬದಾಗಿಯೂ, ವೇದ್ಯ (ತಿಳಿಯತಕ್ಕ ವಸ್ತುವು) ಎಂಬದಾಗಿಯೂ, ವಿದ್ವತ್ತಾ ಅಂದರೆ ಆತ್ಮನನ್ನು ತಿಳಿಯುವಿಕೆ ಎಂಬದಾಗಿಯೂ, ಹೇಳಬೇಕಾಯಿತು. ಹಾಗಾದರೆ ವೇತ್ತಾ ಸವಿಕಾರನಾಗಿಯೂ ವೇದ್ಯವಸ್ತುವು ನಿರ್ವಿಕಾರವಾಗಿಯೂ ಇರುವುದೆಂದು ಹೇಳಬೇಕಾಗಿರುವುದು. ಆ ಪ್ರಕಾರ ಹೇಳಿದರೆ ಸವಿಕಾರತ್ವ ನಿರ್ವಿಕಾರತ್ವಗಳು ಪರಸ್ಪರ ವಿರುದ್ಧ ಧರ್ಮಗಳಾದುದರಿಂದ ಸವಿಕಾರನಾದ ವೇತ್ತಾ (ಆತ್ಮನನ್ನು ತಿಳಿಯುತಕ್ಕವನು) ನಿರ್ವಿಕಾರವಾದ ವೇದ್ಯವಸ್ತುವಿಗಿಂತಲೂ ಭಿನ್ನನಾಗಿಯೆ ಇರುವನೆಂಬದಾಗಿ ಹೇಳಬೇಕಾಗಿರುವುದು. ಆರೀತಿಯಾಗಿ ಹೇಳಿದರೆ ಸಂಹರಿಸುವನು ಸಂಹರಿಸಲ್ಪಡತಕ್ಕವನು ಈ ಇಬ್ಬರೂ ಇರುತ್ತಾರೆಂಬದಾಗಿಯೇ ಹೇಳಬೇಕಾಗುವುದು, ಇದುಮಾತ್ರವಲ್ಲದೆ ಆತ್ಮಸ್ವರೂಪವನ್ನು ತಿಳಿದವನಿಗೆ ಅವಿಕ್ರಿಯತ್ವಸಿದ್ಧಪಕ್ಷದಲ್ಲಿಯೇ ಸರ್ವಕರ್ಮ ಪ್ರತಿಷೇಧ ವುಂಟಾಗುವುದಲ್ಲದೆ ವಿದ್ವತ್ತಾ ಎಂಬುವದಿದ್ದರೆ ಅದು ವಿಕಾರರೂಪವಾಗಿರುವುದರಿಂದ ವಿಕಾರರೂಪವಾಗಿರುವ ವಿದ್ವತ್ತಾವುಳ್ಳವನುಕೂಡ ವಿಕಾರಿಯಾಗಿಯೆ ಆಗಬೇಕು. ಹಾಗಾದರೆ ಆತ್ಮಜ್ಞನಿಗೆ ಅವಿಕ್ರಿಯತ್ವವೇ ಇಲ್ಲವಾದುದರಿಂದ ಸರ್ವಕರ್ಮ ಪ್ರತಿಷೇಧವೂ ಇಲ್ಲವೆಂತಲೇ ಹೇಳಬೇಕು,, ಅಂದರೆ ಅಂತಹ ವಿದ್ವತ್ತಾರೂಪವಾದ ಹೇತುವಿಶೇಷವು, ಆತ್ಮಜ್ಞಾನಿಯು, ಅವಿಕ್ರಿಯನಾದ ಆತ್ಮನಿಗಿಂತಲೂ ಭಿನ್ನನೆಂಬ ಅಭಿಪ್ರಾಯದಿಂದ ಹೇಳಲಿಲ್ಲವು, ಆತ್ಮನು ಅದಂ ತಿಳಿದವನು ಈ ಇಬ್ಬರೂ ಒಂದೇ ಎಂಬ ಅಭಿಪ್ರಾಯದಿಂದ ಹೇಳಲ್ಪಟ್ಟಿತು.( ಇದರಿಂದ ವೇತ್ತಾ ಎಂಬುವನಿಗೆ ವಿಕಾರತ್ವ ಶಂಕೆಯು ಪರಾಸ್ತವಾಯಿತು.) ಆದರೂ ಕೂಟಸ್ಥನಾಗಿರುವ ಆತ್ಮನನ್ನು ತಿಳಿದುಕೊಳ್ಳುವ ವಿದ್ವಾಂಸನುಕೂಡ ತಾನು ಅವಿಕ್ರಿಯನಾಗುವುದುಂಟೋ

ವಿಕಾರರಹಿತವಾದ ಕಲ್ಲನ್ನು ತಿಳಿಯುವವನು ಅವಿಕ್ರಿಯನಾಗುವುದಂ ಲೋಕದಲ್ಲಿ ಕಂಡಿರುವೆವೋ ? ಆದುದರಿಂದ ಅರೀತಿಯಾಗಿ ಹೇಳಕೂಡದೆಂದರೆ,, ಅದಕ್ಕುತ್ತರವು-ಆತ್ಮನನ್ನು ತಿಳಿದುಕೊಳ್ಳುವವನು ಅವಿಕ್ರಿಯನಾದ ಆತ್ಮನಿಗಿಂತಲೂ ಅಭಿನ್ನನಾಗಿರುವುದರಿಂದ ವಿದ್ವಾಂಸನುಕೂಡ ಅವಿಕ್ರಿಯನಾಗುವನು. ದೃಷ್ಟಾಂತದಲ್ಲಿ ಕಲ್ಲಿಗೂ ಅದಂ ತಿಳಿಯುತಕ್ಕವನಿಗೂ ಪರಸ್ಪರ ಭೇದವಿರುವುದು. ಜಡವಾದ ಕಲ್ಲಿಗೂ ಅದಂ ತಿಳಿಯತಕ್ಕ ಚೇತನವಸ್ತುವಿಗೂ ಅಭೇದ ಹೇಳುವುದಸಾಧ್ಯವು. ಆದುದರಿಂದ, ದೇಹಾದಿಗಳಿಗಿಂತಲೂ, ಆತ್ಮನು ಭಿನ್ನನಾಗಿರುವುದರಿಂದಲೂ, ಆ ಆತ್ಮಸ್ವರೂಪನೇ ವಿದ್ವಾಂಸನಾಗಿರುವುದರಿಂದಲೂ, ಆತ್ಮವು ಅವಿಕ್ರಿಯವಾದುದರಿಂದ ವಿದ್ವಾಂಸನು ಕೂಡ ಅವಿಕ್ರಿಯನಾಗುವನೆಂದು ತಿಳಿಯಬರುತದೆ. ಆದುದರಿಂದ ವಿದ್ವಾಂಸನಿಗೆ ಸರ್ವಕರ್ಮ ಪ್ರತಿಷೇಧವು ಸಂಗತವಾಗುವುದು.

„ ಆದರೆ ವಿದ್ವಾಂಸನುಕೂಡ ಬ್ರಂಹಸ್ವರೂಪನೇ ಅಲ್ಲವೆ ? ಬ್ರಂಹವು ಅವಿಕ್ರಿಯವಾಗಿರುವುದರಿಂದ ಅದಂ ತಿಳಿದುಕೊಳ್ಳುವವನನ್ನುಕೂಡ ಅವಿಕ್ರಿಯನೆಂದು ಹೇಳಬೇಕಲ್ಲವೆ ? ತಿಳಿಯುವಿಕೆ ಎಂಬವಿಕಾರವು ಬ್ರಂಹಕ್ಕೆ ಇಲ್ಲವಾದುದರಿಂದ ವಿದ್ವಾಂಸನಿಗೂಕೂಡ ವಿದ್ವತ್ತಾರೂಪವಾದ ವಿಕ್ರಿಯಾ ಇಲ್ಲವೆಂತಲೇ ಹೇಳಬೇಕಾಗಿರುವುದರಿಂದ ಅದು ಉಂಟೆಂದು ಹೇಳುವುದು ಉಚಿತವೋ,, ? ಅಂದರೆ ಲೋಕದಲ್ಲಿ ಚೇತನ್ಯವು ( ಜ್ಞಾನಸ್ವರೂಪವಾದ ಬ್ರಂಹವು ) ಎಲ್ಲಿಯೂ ಪೂರ್ಣವಾಗಿರುವುದು. ಆ ಚೈತನ್ಯವು ಮನುಷ್ಯಾದಿಗಳಲ್ಲಿಮಾತ್ರ ಇಂದ್ರಿಯಾದಿಗಳೆಂಬ ತಕ್ಕ ಸಾಧನಗಳಿರುವುದರಿಂದ ವಸ್ತುಜ್ಞಾನವನ್ನುಂಟುಮಾಡುವುದು. ಘಟಾದ್ಯಚೇತನವಸ್ತುಗಳಲ್ಲಿ ಆ ಚೈತನ್ಯವು ಪೂರ್ಣವಾಗಿದ್ದರೂ ಇಂದ್ರಿಯಾದಿಗಳೆಂಬ ವಿಷಯಾಭಿ ವ್ಯಂಜಕ ಸಾಮಗ್ರಿಗಳಿಲ್ಲದೇ ಇರುವುದರಿಂದ ವಸ್ತುಜ್ಞಾನವುಂಟಾಗಲಾರದು. ಮನುಷ್ಯನು ಮನೋವಿಶಿಷ್ಟವಾದ ಚಕ್ಷುರಾದೀಂದ್ರಿಯಸಹಾಯದಿಂದಲೆ ಘಟಾದಿ ವಿಷಯಗಳನ್ನರಿಯುವುದು ಸಹಜವಾಗಿರುತ್ತೆಂದು ಕಂಡಿರುವೆವು. ಘಟಾದ್ಯಚೇತನವಸ್ತುಗಳಲ್ಲಿ ಚೈತನ್ಯವಿದ್ದರೂ ಇಂದ್ರಿಯಾದಿಗಳೆಂಬ ಸಾಮಗ್ರಿಗಳಿಲ್ಲದೆ ಇರುವುದರಿಂದ ಅವುಗಳಿಗೆ ಘಟಾದಿವಿಷಯಜ್ಞಾನವಿಲ್ಲವು. ಇ

ಬ್ಬಮನುಷ್ಯನು ಘಟವನ್ನು ನೋಡಿ ಇದು ಘಟವೆಂದು ತಿಳಿದುಕೊಳ್ಳು
ತ್ತಾನಲ್ಲವೆ, ಅಂತಹ ವಿಷಯಜ್ಞಾನವು ಹೇಗೆ ಉಂಟಾಗುವದು ? ಅಂದರೇ. ಅಂತಃಕರಣವು ದೀಪಕಾಂತಿಯಂತೆ ವಿಷಯಗಳನ್ನು ಹೊಂದಿ ಬುದ್ಧಿವೃತ್ತಿ ಎಂಬದಾಗಿ ಹೇಳಲ್ಪಡುವುದು. ಆಪ್ರಕಾರ ವಿಷಯಗಳಂ ಹೊಂದಿರುವ ಅಂತಃಕರಣವು ಬುದ್ಧಿ ವೃತ್ತಿ ಎಂಬದಾಗಿ ಹೇಳುವುದು ಹೇಗೆಂದರೆ ,, ಅಭಿವ್ಯಂಜಕವಾಗಿರುವಬುದ್ಧಿ ವೃತ್ತಿಯಲ್ಲಿರುವ ಅಜ್ಞಾನದಿಂದ ಆ ಚೈತನ್ಯವು ವಿಷಯಜ್ಞಾನವೆಂಬದಾಗಿ ವ್ಯವಹರಿಸಲ್ಪಡುವುದು. ಅಂತಹ ವ್ಯವಹಾರದಿಂದ ಉಪಲಬ್ಧನಾಗಿರುವ ಆತ್ಮನು, ಕಲ್ಪಿಸಲ್ಪಡುವನು. ಈ ಕಲ್ಪನಕ್ಕೆ ಅವಿದ್ಯಾಪ್ರಯುಕ್ತವಾದ ಮಿಥ್ಯಾಸಂಬಂಧವೇ ಕಾರಣವಾಗಿರುವುದು. ಈಪ್ರಕಾರವೆ ಅಧ್ಯಾಸಿಕ ಸಂಬಂಧದಿಂದ ( ರಜ್ಜುವಿನಲ್ಲಿ ಸರ್ಪಾರೋಪದಂತೇ ಅದಲ್ಲದವಸ್ತುವಿನಲ್ಲಿ ಅದೆಂಬ ಆರೋಪಸಂಬಂಧದಿಂದ ) ‹‹ ತತ್ತ್ವಮಸಿ,, ಎಂಬವಾಕ್ಯದ ದಸೆಯಿಂದ ಜೀವೇಶ್ವರರು ಒಂದೇವಸ್ತುವೆಂಬ ಬುದ್ಧಿವೃತ್ತಿ ಯುಂಟಾಗುವುದು. ಅಂತಹ ಬುದ್ಧಿವೃತ್ತಿಮೂಲ ವಾಗಿ ವಿದ್ವಾಂಸನು ಆತ್ಮನಾಗಿ ವ್ಯವಹರಿಸಲ್ಪಡುವನು. ಅಜ್ಞಾನಪ್ರಯುಕ್ತವಾದ ಇಂತಹ ಕಲ್ಪಿತ ಸಂಬಂಧದಿಂದ ‹‹ ವಿದ್ವತ್ತ್ವ - ವಿದ್ವಾಂಸನು ವೇದ್ಯವು- ಎಂಬ ವ್ಯವಹಾರವು ಪ್ರಾಪ್ತವಾಗುವುದು. ಇದೆಲ್ಲವು ಅಜ್ಞಾನಕಲ್ಪಿತವಾಗಿರುವ ಸಂಬಂಧವಿಶೇಷದಿಂ ದುಂಟಾಗಿರುವುದಾದುದರಿಂದ ಪರಮಾರ್ಥವಾಗಿ ವಿಚಾರಿಸಿದರೆ ವಿದ್ವಾಂಸನು ಅವಿಕ್ರಿಯನಾದ ಆತ್ಮನಲ್ಲದೇ ತದಿತರನೆಂದು ಹೇಳಲಿಕ್ಕಾಗುವುದಿಲ್ಲವು. ಆದುದರಿಂದ ವಿದ್ವತ್ತ್ವ ಎಂಬುವದಂ ವಿಕಾರವೆಂದು ಹೇಳಕೂಡದು. ಅಂದರೇ ನಾನು ಬ್ರಹ್ಮವು ಎಂಬಬುದ್ಧಿವೃತ್ತಿಯು ಮೋಕ್ಷಾವಸ್ಥೆಯಲ್ಲಿಯೂ ಇರುವುದರಿಂದ ಆತ್ಮನಿಗೇ ವಿಕ್ರಿಯೆ ಉಂಟೆಂದು ಚಿಂತಿಸದೆ ಆ ಬುದ್ಧಿವೃತ್ತಿಯು ಅವಿದ್ಯಾರೂಪವಾದ ಉಪಾಧಿ ಇರುವವರಿಗೂ ಇರುವುದಲ್ಲದೇ ಅವಿದ್ಯೋಪಾಧಿ ನಾಶಾನಂತರ ಇರಲಾರದೆಂತಲೂ, ಅಸತ್ಯವಾದ ಅವಿದ್ಯೋಪಾಧಿಯಿಂ ದುಂಟಾಗಿರುವುದೂ ಅಸತ್ಯವೆ ಎಂತಲೂ, ಹೇಳಲ್ಪಡುವುದು. ಆದುದರಿಂದಲೆ ವಾಸ್ತವವಾಗಿಆತ್ಮಸ್ವರೂಪನಾದ ವಿದ್ವಾಂಸನುತಾನು ಕೂಡಅವಿಕ್ರಿಯನೇ ಎಂಬುದಾಗಿಹೇಳಲ್ಪಡು

ವುದು. ಮತ್ತು ವಿದ್ವಾಂಸನಿಗೆ ಕರ್ಮಾಸಂಭವವು ಉಕ್ತವಾಗಿರುವುದರಿಂದ ಯಾವಕರ್ಮಗಳುಶಾಸ್ತ್ರಗಳಲ್ಲಿ ವಿಧಿಸಲ್ಪಡುತದೋ? ಅವು ಅವಿದ್ವಾಂಸನಿಗೇ ವಿಹಿತಗಳಾಗಿರುವುವೆಂಬುವದು ಪರಮಾತ್ಮನ ನಿಶ್ಚಯವೆಂದು ತಿಳಿಯಬರುತದೆ.

" ಆದರೂ ಅವಿದ್ವಾಂಸನಿಗೇ ಕರ್ಮವೆಂತಲೂ, ವಿದ್ಯೆಯು ವಿದ್ವಾಂಸನಿಗೆಂತಲೂ ವಿಭಾಗಿಸುವದು ಉಚಿತವೋ? ವಿದ್ವಾಂಸನಿಗೆ ವಿದ್ಯೆಯು ಸ್ವಭಾವಸಿದ್ಧವಾಗಿರುವಲ್ಲಿ ಪುನಃ ವಿದ್ಯಾವಿಧಾನದಿಂದ ಪಿಷ್ಟಪೇಷಣದಂತೇ ಆನರ್ಥಕ್ಯವೇ ಪ್ರಾಪ್ತವಾಗುವುದು. ಅವಿದ್ವಾಂಸನಿಗಾದರೇ ವಿದ್ಯಾವಿಧಾನವೂ ಸಾರ್ಥಕವಾಗುವುದು. ಆದುದರಿಂದ ಕರ್ಮದಂತೇ ವಿದ್ಯೆಯೂ ಅವಿದ್ವಾಂಸನಿಗೇನೇ ವಿಧಿಸಬೇಕಂದರೇ ,, ಉತ್ತರವು. ಅವಿದ್ವಾಂಸನು ಮಾಡುವ ಕರ್ಮವು, ಭಾವರೂಪವಾಗಿ ಅಂದರೇ ಅವನ ಮನಸ್ಸಿಗೇ ಸತ್ಯರೂಪವಾಗಿರುವುದು. ವಿದ್ವಾಂಸನುಮಾಡುವ ಕರ್ಮವು ಅಭಾವರೂಪವಾಗಿ ಅಂದರೇ ಅವನ ಮನಸ್ಸಿಗೇ ಅಸತ್ಯರೂಪವಾಗಿ ತೋರುವುದು. ಅವಿದ್ವಾಂಸನು ದೇಹಾದಿಯುಕ್ತನಾದದ್ದೇ ಆತ್ಮವಸ್ತುವೆಂಬೀ ಜ್ಞಾನವುಳ್ಳವನಾದುದರಿಂದ ಪ್ರತಿದಿನವೂ ಅಗ್ನಿಹೋತ್ರಾದಿಗಳಂ ಮಾಡಬೇಕೆಂಬದಾಗಿ ವಿಧಿಸಿರುವ ವಾಕ್ಯಾರ್ಥದ ಜ್ಞಾನೋತ್ಪತ್ತಿಯಾದಬಳಕ ಆ ಕರ್ಮವನ್ನು ಅದಕ್ಕೆತಕ್ಕ ಸಾಧನಗಳಿಂದ "ಅಹಂಕರ್ತಾ-ನಾನು ಮಾಡತಕ್ಕವನು, ಮಮಕರ್ತವ್ಯಂ-ನನಗೇ ಕರ್ತವ್ಯತ್ವೇನ ವಿಹಿತವಾದದ್ದು, ಎಂಬುವ ಜ್ಞಾನವುಳ್ಳವನಾಗಿ ಅವಿದ್ವಾಂಸನು ಹೇಗೆ ಮಾಡುತ್ತಾನೆಯೊ ಆಪ್ರಕಾರವಾಗಿ " ನಜಾಯತೇ ,, ಎಂಬಿದೇ ಮೊದಲಾದ ಆತ್ಮಸ್ವರೂಪ ಪ್ರಕಾಶಕವಾಗಿರುವ, ವಿಧಿವಾಕ್ಯಾರ್ಥವಂ ತಿಳಿದಮೇಲೆ "ಅಹಂಕರ್ತಾ,, ಇತ್ಯಾದಿ ಜ್ಞಾನವು ವಿದ್ವಾಂಸನಿಗೇ ಇರಲಾರದು. ಮತ್ತೇನಂದರೆ ನಾಹಂಕರ್ತಾ ನಾಹಂಭೋಕ್ತಾ- ನಾನು ಮಾಡತಕ್ಕವನಲ್ಲನು, ನಾನು ಭೋಕ್ತಾ ಅಲ್ಲನು,,ಎಂಬಿವೇ ಮೊದಲಾದ ಆತ್ಮೈಕತ್ವಾನುಸಂಧಾನ ಕ್ಕೆಂತಲೂ,ಅಕರ್ತೃತ್ವಾದಿ ವಿಷಯಜ್ಞಾನಕ್ಕೆಂತಲೂ, ಅನ್ಯವಾದ ಜ್ಞಾನವುಂಟಾಗಲಾರದೆಂಬ ಈ ವಿಶೇಷವು ವಿದ್ವಾಂಸನಲ್ಲಿ ಕಾಣಲ್ಪಡುವುದು. ಯಾವನಾದರೇ " ಕರ್ತಾಅಹಂ,, ಎಂಬದಾಗಿ ತಿಳಿಯುವನೋ ಅಂತವನಿಗೇ

‘‘ ಮಮ ಇದಂ ಕರ್ತವ್ಯಂ ,, (ನನಗೆ ಇದು ಮಾಡತಕ್ಕದ್ದು) ಎಂಬ ಬುದ್ಧಿಯು ಅವಶ್ಯವುಂಟಾಗುವುದು. ‘‘ ಮಮೇದಂ ಕರ್ತವ್ಯಂ ,, ಎಂಬ ಬುದ್ಧಿ ಇರುವುದರಿಂದಲೇ ಅವಿದ್ವಾಂಸನನ್ನು ಕುರಿತು ಕರ್ಮವು ವಿಧಿಸಲ್ಪಡುವುದು. ‘‘ ಉಭೌ ತೌ ನ ವಿಜಾನೀತಃ ,, ಎಂಬದಾಗಿ ಪರಮಾತ್ಮನಿಂದ ಇಂತವನು ವಿದ್ವಾಂಸನಲ್ಲವೆಂತಲೂ, ಹೇಳಲ್ಪಟ್ಟಿರುವುದು. ಇವನಿಗಿಂತಲೂ ವಿಶೇಷಿತನಾಗಿರುವ ವಿದ್ವಾಂಸನಿಗೇ ‘‘ ಕಥಂ ಸ ಪುರುಷಃ ,, ಎಂಬುದರಿಂದ ಕರ್ಮಾಕ್ಷೇಪವೂ ಯುಕ್ತವಾಗಿಯೇ ಇರುವುದು. ಆದುದರಿಂದ ವಿದ್ವಾಂಸನಾದ ಮುಮುಕ್ಷುವಿಗೇ ಸರ್ವಕರ್ಮ ಸಂನ್ಯಾಸದಲ್ಲಿಯೇ ಅಧಿಕಾರವೆಂದು ತಿಳಿಯತಕ್ಕದ್ದು. ಆದುದರಿಂದಲೇ ಶ್ರೀಕೃಷ್ಣ ಪರಮಾತ್ಮನು ‘‘ ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಮ್ ,, ಎಂಬದರಿಂದ ಸಾಂಖ್ಯರೆಂತಲೂ, (ವಿದ್ವಾಂಸರೆಂತಲೂ) ಯೋಗಿಗಳೆಂತಲೂ, (ಅವಿದ್ವಾಂಸನೆಂತಲೂ) ವಿಭಾಗಿಸಿ ಈ ಇಬ್ಬರಿಗೂ ಯೆರಡು ನಿಷ್ಠೆಗಳಂ ತೋರಿಸಿದನು. ಮತ್ತು ‘‘ ದ್ವಾವಿಮಾವಥ ಪಂಥಾನೌ ,, ಎಂಬುವ ಶ್ಲೋಕದಿಂದ ಕರ್ಮಜ್ಞಾನನಿಷ್ಠೆಗಳೆರಡೂ ಅಧಿಕಾರಿಭೇದದಿಂದ ಯೋಗಿಗೂ ಜ್ಞಾನಿಗೂ ವಿಹಿತವಾಗಿರುವ ಯೆರಡು ಮಾರ್ಗಗಳೆಂಬದಾಗಿ ಶ್ರೀ ವೇದವ್ಯಾಸರು ತನ್ನ ಪುತ್ರನಿಗೇ ವಿಭಾಗಿಸಿ ತೋರಿಸಿರುವದು ಕೂಡ ಇದಕ್ಕೇ ಸಹಕಾರಿಯಾಗುವುದು.

‘‘ ಆದರೂ ,, ದ್ವಾವಿಮಾವಥಪಂಥಾನೌ,, ಎಂಬುವ ಶ್ಲೋಕದಿಂದ ಕರ್ಮಜ್ಞಾನಮಾರ್ಗಗಳನ್ನು ತುಲ್ಯವಾಗಿ ಹೇಳಿರುವುದರಿಂದಲೇ ಜ್ಞಾನದಂತೇ ಕರ್ಮಕ್ಕೂ ವಿದ್ವದನುಷ್ಠೇಯತ್ವವೂ ಪ್ರಾಪ್ತವಾಗುವುದರಿಂದ ಕರ್ಮಜ್ಞಾನಸಮುಚ್ಚಯವಂ ಹೇಳಕೂಡದೋ? ಅಂದರೆ ‘‘ ಕ್ರಿಯಾಪಥಶ್ಚೈವ ಪುರಸ್ತಾತ್ ಪಶ್ಚಾತ್ಸಂನ್ಯಾಸಶ್ಚ ,, ಎಂಬ ಮತ್ತೊಂದು ಪ್ರಮಾಣೋದಾಹರಣದಿಂದ ಮೊದಲು ಕರ್ಮಮಾರ್ಗವೆಂತಲೂ, ಅನಂತರ ಜ್ಞಾನಮಾರ್ಗವೆಂತಲೂ ಸ್ಪಷ್ಟವಾಗಿ ಹೇಳಿರುವುದರಿಂದಲೇ ಕರ್ಮಕ್ಕಿಂತಲೂ ಜ್ಞಾನವು ಶ್ರೇಷ್ಠವಾದದ್ದೆಂದು ತಿಳಿಯಬರುತದೆ. ಈ ವಿಭಾಗವನ್ನೇ ಪರಮಾತ್ಮನು ಪುನಃಪುನಃ ಈ ಗೀತಾಶಾಸ್ತ್ರದಲ್ಲಿ ‘‘ ಅಹಂಕಾರವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ ,, ಅಹಂಕಾರದಿಂದ ಮೂಢನಾದವನು, ನಾನು ಕರ್ತೃ, ಎಂಬದಾಗಿ ತಿ

ಳಿಯುತ್ತಾನೆ) "ತತ್ವವಿತ್ತು ನಾಹಂಕರ್ತೇತಿ,, (ತತ್ವವನ್ನರಿತವನು ನಾನು ಮಾಡತಕ್ಕವನಲ್ಲವು) ಎಂಬದಾಗಿ ತಿಳಿಯುವನು. ಇದಕ್ಕನುಸಾರವಾಗಿಯೇ ಸರ್ವ ಕರ್ಮ ಸಂನ್ಯಾಸವಂ ಕುರಿತು (೫-ಅ೧೩ನೇ ಶ್ಲೋ||) "ಸರ್ವಕರ್ಮಾಣಿಮನಸಾ ಸಂನ್ಯಸ್ಯಾಸ್ತೇ ಸುಖಂವಶೀ,, ಆತ್ಮವೇದಿಯಾದವನು ಜಿತೇಂದ್ರಿಯನಾಗಿ ಸರ್ವ ಕರ್ಮಗಳನ್ನು ಮನಸ್ಸಿನಿಂದಬಿಟ್ಟು ಸುಖವಾಗಿರುವುನು ಎಂಬದಾಗಿ ಪರಮಾತ್ಮನು ಮುಂದೆಯೂ ಹೇಳುವುನು.

ಆದರೆ "ಯಾವಜ್ಞಾನವಿದ್ದರೆ ಸರ್ವ ಕರ್ಮ ಸಂನ್ಯಾಸವೂ ಉಪದೇಶಿಸಲ್ಪಡುವುದೊ ಅಂತಹ ಜನ್ಮಾದಿಭಾವ ವಿಕ್ರಿಯಾ ರಹಿತನಾಗಿಯೂ, ನಾನುಮಾಡತಕ್ಕವನಲ್ಲವೆಂಬ ಜ್ಞಾನವುಳ್ಳವನಾಗಿಯೂ ಇರುವ ನಾನೊಬ್ಬನೇ ಆತ್ಮನು ಎಂಬ ಜ್ಞಾನವು ಯಾವನಿಗೂ ಉತ್ಪನ್ನವಾಗಲಾರದೆಂಬದಾಗಿ ಪಂಡಿತಂಮನ್ಯರಾದ ಕೆಲವುರು (ಮೀಮಾಂಸಕರು) ಹೇಳುವುರು, ಅದು ಯುಕ್ತವಲ್ಲವು. ವಿಷಯಾಭಾವದಿಂದ ಅವಿಕ್ರಿಯಾತ್ಮ ಜ್ಞಾನವಿಲ್ಲವೆಂದು ಹೇಳುತ್ತಾರೆಯೋ? ಅಥವಾ ಶಾಸ್ತ್ರಪ್ರಮಾಣಾಭಾವದಿಂದ ಹೇಳುತ್ತಾರೆಯೋ? ಇದಂ ಮೊದಲು ಅವರಂ ಕುರಿತು ಕೇಳಬೇಕಾಗಿರುವುದು. ವಿಷಯಾಭಾವದಿಂದ ಅಂದರೇ ಅವಿಕ್ರಿಯನಾದ ಆತ್ಮನಿಲ್ಲವಾದುದರಿಂದ ಅವಿಕ್ರಿಯಾತ್ಮಜ್ಞಾನವಿಲ್ಲವೆಂದು ಹೇಳಿದರೇ "ನಜಾಯತೇ,, ಇತ್ಯಾದಿ ಶಾಸ್ತ್ರೋಪದೇಶಕ್ಕೆ ಆನರ್ಥಕ್ಯವು (ಪ್ರಯೋಜನವಿಲ್ಲದಿರುವಿಕೆಯು) ಪ್ರಾಪ್ತವಾಗುವುದರಿಂದ ಅವಿಕ್ರಿಯಾತ್ಮಜ್ಞಾನ ವುಂಟಾಗುವದರಲ್ಲಿ ವಿರೋಧ ವಿರಲಾರದು. "ಶಬ್ದರೂಪ ಪ್ರಮಾಣಾಭಾವದಿಂದ ಅವಿಕ್ರಿಯಾತ್ಮಜ್ಞಾನ ವುಂಟಾಗಲಾರದೆಂದರೆ "ಜ್ಯೋತಿಷ್ಟೋಮೇನಸ್ವರ್ಗ ಕಾಮೋಯಜೇತ,, (ಸ್ವರ್ಗಲೋಕಾಪೇಕ್ಷೆಯುಳ್ಳವನು ಜ್ಯೋತಿಷ್ಟೋಮವೆಂಬ ಯಜ್ಞಕರ್ಮದಿಂದ ದೇವತಾರಾಧನವಂ ಮಾಡಬೇಕು ಎಂಬ ಶಬ್ದರೂಪ ಪ್ರಮಾಣದಿಂದ ಜ್ಯೋತಿಷ್ಟೋಮಾದಿಕರ್ಮಗಳಂಮಾಡಿದರೆ ಸ್ವರ್ಗಾದಿ ಸುಖವು ಪ್ರಾಪ್ತವಾಗುವುದು, ಅಂತಹ ಸುಖವನ್ನನುಭವಿಸಲು ಯೋಗ್ಯವಾದ ದಿವ್ಯಶರೀರವು ಪ್ರಾಪ್ತವಾಗುವುದು, ಎಂಬ ಜ್ಞಾನವುಂಟಾಗುವಂತೆ "ನಜಾಯತೇ,, ಇತ್ಯಾದಿಶಬ್ದರೂಪ ಪ್ರಮಾಣದಿಂದ ಅವಿಕ್ರಿಯಾತ್ಮಜ್ಞಾ

ನನ್ನು ವಿದ್ವಾಂಸನಿಗೂ ಹೇಗೆ ಉಂಟಾಗಲಾರದೂ? ಅವರನ್ನೇ ಕೇಳಬೇಕು. ಆತ್ಮನು, ಇಂದ್ರಿಯಾತೀತನಾದುದರಿಂದ ಆತ್ಮಜ್ಞಾನವು ಸಂಭವಿಸಲಾರದೆಂದರೆ ಉತ್ತರವು. ‟ಮನಸೈವಾನುದ್ರಷ್ಟವ್ಯಮ್,, (ಮನಸ್ಸಿನಿಂದಲೇ ಆತ್ಮವಸ್ತುವಂ ತಿಳಿದುಕೊಳ್ಳಬೇಕು.) ಎಂಬುವ ಶ್ರುತಿಬಲದಿಂದ ‟ತತ್ತ್ವಮಸಿ,, ಎಂಬುವ ಶಾಸ್ತ್ರವೇನು, ಆಚಾರ್ಯೋಪದೇಶವೇನು, ಇವುಗಳಿಂದುಂಟಾಗಿರುವ ಶಮದಮಾದಿ ಸಂಸ್ಕೃತವಾದ ಮನಸ್ಸೇ ಆತ್ಮದರ್ಶನದಲ್ಲಿ ಸಾಧನವಾಗುವುದೆಂದು ಹೇಳಿರುವುದರಿಂದ ಆತ್ಮಜ್ಞಾನವು ಸಂಭವಿಸಲಾರದೆಂದು ಹೇಳಕೂಡದು. ಆದುದರಿಂದ ಈ ಪ್ರಕಾರವಾಗಿ ಶಬ್ದರೂಪ ಪ್ರಮಾಣವೂ ಅನುಮಾನ ಪ್ರಮಾಣವೂ ( ವಿವಾದಕ್ಕೆ ವಿಷಯಭೂತವಾದ ವಿಕಾರವು ನೀನು ನಾನು ಎಂಬ ಇಬ್ಬರೂ ಅಂಗೀಕರಿಸಿರುವ ವಿಕಾರದಂತೇ ವಿಕಾರವಾಗಿರುವದರಿಂದ ಆತ್ಮಧರ್ಮವಲ್ಲವೆಂಬುವದೇ ಅನುಮಾನಪ್ರಮಾಣವು) ಇರುವುದರಿಂದ ಅವಿಕ್ರಿಯಾತ್ಮಜ್ಞಾನವುಂಟಾಗಲಾರದೆಂಬುದು ಸಾಹಸವೇ ಆಗುವುದು. ಪ್ರಭಾಪ್ರವರ್ತನದಿಂದ ಅಂಧಕಾರನಿರಾಸದಂತೆ ಆತ್ಮಜ್ಞಾನವು ಹುಟ್ಟಿದ ಕ್ಷಣದಲ್ಲಿಯೇ ಅದಕ್ಕೆ ವಿರುದ್ಧವಾದ ಅನಾತ್ಮಜ್ಞಾನವು ನಿವೃತ್ತವಾಗಬೇಕು. ಆಪ್ರಕಾರ ನಿವೃತ್ತವಾಗದಿದ್ದರೆ ಆತ್ಮಜ್ಞಾನಕ್ಕೆ ಫಲವೇನೂ ಇಲ್ಲವೆಂದು ಸಂಶಯಪಡದೇ ಹುಟ್ಟಿದ ತತ್ವಜ್ಞಾನವು ತದ್ವಿರುದ್ಧವಾದ ಅಜ್ಞಾನವನ್ನು ಅವಶ್ಯವಾಗಿ ನಿವೃತ್ತಿ ಮಾಡುವುದೆಂತಲೆ ತಿಳಿಯಬೇಕು. ತತ್ವಜ್ಞಾನದಿಂದ ನಿವೃತ್ತವಾಗಬೇಕಾಗಿರುವ ಅಂತಹ ಅಜ್ಞಾನಸ್ವರೂಪವು ‟ಯಏನಂವೇತ್ತಿಹಂತಾರಂ,, ಎಂಬುವ ಶ್ಲೋಕದಲ್ಲಿ ನಾನು ಆತ್ಮನಂ ಸಂಹರಿಸುವೆನು, ನಾನು ಕೊಲ್ಲಲ್ಪಡುವೆನು, ಎಂಬದಾಗಿ ಯಾರು ತಿಳಿದುಕೊಳ್ಳುತ್ತಾರೆಯೋ? ಅವರಿಬ್ಬರೂ ಅಜ್ಞಾನವುಳ್ಳವರೆಂದು ‟ಉಭೌತೌನವಿಜಾನೀತಃ,, ಎಂಬುದರಿಂದ ದರ್ಶಿತವಾಗಿರುವುದು. ಇಲ್ಲಿ ಆತ್ಮನಿಗೇ ಹನನರೂಪವಾದ ಕಾರ್ಯಕರ್ತೃತ್ವವೂ ಅದಕ್ಕೆ ವಿಷಯವಾಗುವಿಕೆ ಎಂಬ ಕರ್ಮತ್ವವೂ ಅಜ್ಞಾನಕೃತವೆಂಬದಾಗಿ ಸೂಚಿತವಾಗಿರುವುದು.

‟ನಹಿಂಸ್ಯಾತ್ಸರ್ವಾಭೂತಾನಿ,, (ಸರ್ವಪ್ರಾಣಿಗಳನ್ನು ಸಂಹರಿಸಕೂಡದು) ಎಂಬುವ ಶಾಸ್ತ್ರಪರ್ಯಾಲೋಚನೆಯಿಂದ ಹಿಂಸಾ

ರೂಪವಾಗಿರುವ ಕರ್ಮತ್ಯಾಗವು ವಿಹಿತವಾಗಿರಲಾಗಿ ಶ್ರುತಿಸ್ಮೃತ್ಯಾದಿಸಿದ್ಧವಾದ ಶ್ರೌತಸ್ಮಾರ್ತಕರ್ಮಕರ್ತೃತ್ವವು ಅಜ್ಞಾನಕೃತವೆಂದು ಹೇಳಲಾಗುವುದೋ ? ಅಂದರೆ,--ಹಿಂಸಾರೂಪವಾದ ಕರ್ಮಕರ್ತೃತ್ವಮಾತ್ರಕ್ಕೇನೆ ಅಜ್ಞಾನವು ಕಾರಣವೆಂದು ಹೇಳಕೂಡದು, ಮತ್ತು ಸಕಲಕರ್ಮಗಳಂ ಮಾಡುವುದಕ್ಕೂ ಅಜ್ಞಾನವೇ ಕಾರಣವೆಂದು ಹೇಳಬೇಕಾಗಿರುವುದು. ಕರ್ಮ ಕರ್ತೃತ್ವರೂಪವಾದ ವಿಕಾರವೂ ಅವಿಕ್ರಿಯನಾದ ಆತ್ಮನಿಗೆ ಇಲ್ಲವಾದುದರಿಂದಲೂ ಅಂತಹಕರ್ತೃತ್ವವೂ ಅವಿದ್ಯಾ ಕಲ್ಪಿತವಾಗಿರುವುದರಿಂದ ಅನಿತ್ಯವಾಗಿರುವುದರಿಂದಲೂ, ನಿತ್ಯವೆಂದು ಹೇಳಿದರೆ ಯಾವಾಗಲೂ ಕರ್ತೃತ್ವವನ್ನೇ ವಹಿಸಿಕೊಂಡಿರುವುದರಿಂದ ಮೋಕ್ಷವೇ ಇಲ್ಲವೆಂದು ಹೇಳಬೇಕಾಗಿರುವುದರಿಂದಲೂ, ಸರ್ವಕರ್ಮಗಳಂ ಮಾಡುವುದಕ್ಕೂ ಅಜ್ಞಾನವೆ ಕಾರಣವೆಂದು ಹೇಳಬೇಕಾಗಿರುವುದು.

“ ಆದರೆ ಆತ್ಮನಲ್ಲಿ ಕರ್ತೃತ್ವವೂ ಇಲ್ಲದಿದ್ದರೂ ಕಾರಯಿತೃತ್ವವೂ ( ನೀನು ಈ ಕರ್ಮವನ್ನು ಈ ರೀತಿಯಾಗಿ ಮಾಡು ಎಂಬದಾಗಿ ಅನ್ಯರಿಂದ ಕರ್ಮವಂ ಮಾಡಿಸುವದು ) ಸಿದ್ಧಿಸಲಾರದೋ ? ಆತ್ಮನು ನಿರ್ವಿಕಾರನಾಗಿರುವುದರಿಂದ ತಾನು ಯಾವಕರ್ಮಗಳಂ ಮಾಡದಿದ್ದರೂ ಅನ್ಯರಿಂದ ಯಾವಕರ್ಮಗಳನ್ನಾದರೂ ಮಾಡಿಸಿದರೆ ಬಾಧಕವೇನು ? ” ಅಂದರೆ ಉತ್ತರವು. ಯಾವನಾದರೇ ತಾನು ಕರ್ಮಗಳಂ ಮಾಡದೇ ಇದ್ದರೂ ಅನ್ಯರಿಗೆ ( ಏವಂಕುರು-ಹೀಗೆ ಕರ್ಮವಂ ಮಾಡೆಂದು ) ಪ್ರೇರಿಸುವದುಕೂಡ ವಿಕ್ರಿಯಾರೂಪವಾಗುವುದರಿಂದ ತಾನು ವಿಕ್ರಿಯಾವುಳ್ಳವನಾದರೇನೆ ಇದು ಕೂಡ ಸಿದ್ಧಿಸುವದರಿಂದ ಅವಿಕ್ರಿಯನಾದ ಆತ್ಮನಿಗೆ ಕರ್ಮಕಾರಯಿತೃತ್ವವೂ ವಿರುದ್ಧವಾಗುವುದು. ಈ ಪ್ರಕಾರವಾಗಿ ಸರ್ವಕರ್ಮಗಳನ್ನು, ‘ ಮಾಡುವುದು-ಮಾಡಿಸುವುದು , ಅವಿದ್ಯಾ ಕಲ್ಪಿತವಾಗಿರುವುದರಿಂದ ಆತ್ಮನಿಗೆ ಕರ್ತೃತ್ವಾದಿಗಳಿಲ್ಲವೆಂದು ಈ ಶ್ಲೋಕದಲ್ಲಿ “ ವೇದಾವಿನಾಶಿನಂ- ಕಥಂಸಪುರುಷಃ ” ಇತ್ಯಾದಿಗಳಿಂದ ವಿದ್ವಾಂಸನಿಗೇ ಸರ್ವಕ್ರಿಯೆಗಳಲ್ಲಿಯೂ ಸಾಮಾನ್ಯವಾಗಿ ಕರ್ತೃವೂ ಇಲ್ಲವೆಂದು ಭಗವಂತನಾದ ಶ್ರೀವಾಸುದೇವನು ಪ್ರತಿಷೇಧಮಂ ಮಾಡಿದನೆಂದರಿಯಬೇಕು.

ಅದರೆ "ವಿದ್ವಾಂಸನಿಗೆ ಕರ್ಮಾಧಿಕಾರವಿಲ್ಲದೇ ಹೋದರೇ ಜೀವಿತಕಾಲ ಪರ್ಯಂತವೂ ಆತನಿಗೆ ಯಾವದರಲ್ಲಿ ಅಧಿಕಾರವು? ಅಂದರೆ "ಜ್ಞಾನಯೋಗೇನ ಸಾಂಖ್ಯಾನಾಂ" ಎಂಬದಾಗಿ ಇದಕ್ಕೆ ಪೂರ್ವವೇ ಸರ್ವಕರ್ಮ ಸಂನ್ಯಾಸಪೂರ್ವಕವಾದ ಜ್ಞಾನನಿಷ್ಠೆಯಲ್ಲಿಯೇ ಅಧಿಕಾರವೆಂದು ಹೇಳಲ್ಪಟ್ಟಿರುವುದು. ಇದಕ್ಕನುಸಾರವಾಗಿಯೇ ಸರ್ವಕರ್ಮ ಸನ್ನ್ಯಾಸವಂ ಕುರಿತು (೫ ಅ|| ೧೩ ಶ್ಲೋ) "ಸರ್ವಕರ್ಮಾಣಿಮನಸಾ ಸನ್ನ್ಯಸ್ಯಾಸ್ತೇಸುಖಂವಶೀ" (ಆತ್ಮತತ್ವವನ್ನರಿತವನು ಜಿತೇಂದ್ರಿಯನಾಗಿ ಸರ್ವಕರ್ಮಗಳನ್ನು ಮನಸ್ಸಿನಿಂದ ಬಿಟ್ಟು ಸುಖವಾಗಿರುವನು) ಎಂಬದಾಗಿ ಪರಮಾತ್ಮನು ಮುಂದೆಯು ಹೇಳುವನು.

ಅದರೇ "ಸರ್ವಕರ್ಮಾಣಿಮನಸಾ" (೫|| ಅ|| ೧೩ನೇ ಶ್ಲೋ) ಎಂಬೀ ಪ್ರಕರಣದಲ್ಲಿ 'ಮನಸಾ' ಎಂಬುವ ಪದವಿರುವುದರಿಂದ ಮಾನಸಕರ್ಮಗಳಿಗೆ ನಿಷೇಧವಲ್ಲದೆ ವಾಚಿಕ ಕಾಯಿಕ ಕರ್ಮಗಳಿಗೆ ನಿಷೇಧವಿಲ್ಲವೆಂದು ಹೇಳುವದೂ ಉಚಿತವಲ್ಲವು. ಅಲ್ಲಿ "ಸರ್ವಕರ್ಮಾಣಿ" ಎಂಬುವ ಪದವಿರುವುದರಿಂದ ಮಾನಸಿಕ ವಾಚಿಕ ಕಾಯಿಕಗಳೆಂಬತ್ರಿವಿಧ ಕರ್ಮಗಳಿಗೂ ನಿಷೇಧವೇ ಹೇಳಲ್ಪಟ್ಟಿರುವುದು. "ಅಲ್ಲಿಸರ್ವಪದವಿರುವುದರಿಂದ ಮಾನಸಗಳಾದ ಸರ್ವಕರ್ಮಗಳಿಗೇನೇ ನಿಷೇಧವಂ ಹೇಳುವವು, ಅಲ್ಲದೇ ತದಿತರ ಕರ್ಮಗಳಿಗೇ ನಿಷೇಧವಿಲ್ಲವೆಂದು ಹೇಳುವದೂ" ಉಚಿತವಲ್ಲವು. "ಯನ್ಮನಸಾಧ್ಯಾಯತಿ ತದೇವವಾಚಾ" ಎಂಬುವ ನ್ಯಾಯದಿಂದ ಮನೋವ್ಯಾಪಾರವಂತ್ಯಾಗವಾಡಿದರೇ ತದಿತರಗಳಾದವಾಚಿಕ ಕಾಯಿಕ ವ್ಯಾಪಾರಗಳು ಹುಟ್ಟುವುದಿಲ್ಲವಾದುದರಿಂದಲೂ, ಮನೋವ್ಯಾಪಾರವೇ ವಾಚಿಕ ಕಾಯಿಕಗಳಿಗೇ ಕಾರಣವಾಗಿರುವುದುರಿಂದಲೂ ಅಲ್ಲಿ ತ್ರಿವಿಧ ಕರ್ಮಗಳೂ ನಿಷೇಧಿಸಲ್ಪಟ್ಟಿರುವುದೆಂದರಿಯಬೇಕು. ಆದರೇ ಶಾಸ್ತ್ರಗಳಿಂದ ವಿಧಿಸಲ್ಪಟ್ಟ ಯಾಗಾದಿಗಳೆಂಬ ವಾಕ್ಕಾಯಕರ್ಮಗಳಿಗೇ ಕಾರಣಗಳಾದ ಮಾನಸಿಕ ಕರ್ಮಗಳು ಕೆಲವು, ಮತ್ತು ಶಾಸ್ತ್ರಗಳಲ್ಲಿ ವಿಧಿಸಲ್ಪಡದ (ಮಾತನಾಡುವದು ನಡಿಯುವದೇ ಮೊದಲಾದ) ವಾಕ್ಕಾಯ ಕರ್ಮಗಳಿಗೇ ಕಾರಣಗಳಾದ ಮಾನಸ ವ್ಯಾಪಾರಗಳು ಕೆಲವು, ಇವುಗಳಲ್ಲಿ ಶಾಸ್ತ್ರೀಯ ವಾಕ್ಕಾಯ

ಕರ್ಮಗಳಿಗೆ ಕಾರಣಗಳಾದ ಮಾನಸ ಕರ್ಮಗಳಂಬಿಟ್ಟು ಅನಿಷ್ಟಗಳಾದ ವಾಚಿಕ ಕಾಯಿಕಗಳಿಗೆ ಕಾರಣಗಳಾದ ಸರ್ವಕರ್ಮಸನ್ನ್ಯಾಸದಿಂದ ಸುಖವಾಗಿರುವನು,, ಎಂಬುದಾಗಿ ಅಶಾಸ್ತ್ರೀಯಗಳಾದ ವಾಕ್ಕಾಯ ಕರ್ಮಗಳಿಗೆ ಕಾರಣಗಳಾಗಿರುವ ಮಾನಸಕರ್ಮಗಳಿಗೆ ನಿಷೇಧವಂ ಹೇಳಿದರೆ ಅದೇ ಶ್ಲೋಕದಲ್ಲಿಯೇ ‹‹ ನೈವಕುರ್ವನ್ನಕಾರಯನ್ ,, ಎಂಬುವ ಸ್ಥಾನದಲ್ಲಿ (ವಶೀ) ಎಂಬುವುದಕ್ಕೆ ವಿಶೇಷಣದ್ವಯವಿರುವುದರಿಂದ ಜಿತೇಂದ್ರಿಯನಾದ ಆತ್ಮನು ಯಾವಕಾರ್ಯವನ್ನು ಮಾಡದೇನೂ ಮಾಡಿಸದೇನೂ ಮನಸ್ಸಿನಿಂದ ಸರ್ವಕರ್ಮಗಳಂ ತ್ಯಜಿಸಿ ಸುಖವಾಗಿರುವನೆಂಬರ್ಥವಂ ಹೇಳಬೇಕಾಗಿರುವುದರಿಂದಲೂ, ಮಾಡುವದು ಮಾಡಿಸುವದು ಮಾನಸಕರ್ಮಗಳಲ್ಲವಾದುದರಿಂದಲೂ, ಪರಸ್ಪರ ವಿರೋಧವು ಪ್ರಾಪ್ತವಾಗುವುದಾದುದರಿಂದ ಆ ರೀತಿಯಾಗಿ ಅರ್ಥವರ್ಣನವಂ ಮಾಡಕೂಡದು. ‹‹ ನೈವಕುರ್ವನ್ನಕಾರಯನ್ ,, ಎಂಬ ವಿಶೇಷಣಗಳಿರುವುದರಿಂದ ಅಂತಹ ಅಶಾಸ್ತ್ರೀಯ ಮಾನಸಿಕಕರ್ಮಮಾತ್ರ ತ್ಯಾಗವಲ್ಲದೆ ಶಾಸ್ತ್ರೀಯ ಸರ್ವಕರ್ಮ ಸನ್ನ್ಯಾಸವೂ ಇಲ್ಲಿ ವಿಹಿತವೆಂದರಿಯಬೇಕು.

ಆದರೂ ‹‹ ಇಲ್ಲಿ ಹೇಳಿರುವ ಸರ್ವಕರ್ಮ ಸನ್ನ್ಯಾಸವು ಮರಣಾನಂತರವೇ ಪ್ರಾಪ್ತವಾಗುವುದರಿಂದ ಮರಣಾನಂತರದಲ್ಲಿ ಸರ್ವಕರ್ಮಗಳಂಬಿಟ್ಟು ಸುಖವಾಗಿರುವನೆಂಬದಾಗಿ ಅರ್ಥವಂ ಹೇಳಕೂಡದೋ? ಅಂದರೆ ‹‹ ನವದ್ವಾರೇಪುರೆ,, (ಒಂಭತ್ತುದ್ವಾರಗಳುಳ್ಳ ದೇಹವೆಂಬ ನಗರದಲ್ಲಿರುವನು) ಎಂಬ ಇದೇ ಶ್ಲೋಕದ ಮೂರನೇಪಾದಾರ್ಥವು ಮರಣವಂ ಹೊಂದಿದವನಿಗೆ ಸಂಭವಿಸುವದಿಲ್ಲವಾದುದರಿಂದಲೂ, ಮರಣಾನಂತರದಲ್ಲಿ ಜಿತೇಂದ್ರಿಯನಿಗೂ ಅಜಿತೇಂದ್ರಿಯನಿಗೂ ತಾರತಮ್ಯವಿಲ್ಲದೆ ಸರ್ವಕರ್ಮ ಸನ್ನ್ಯಾಸವೂ ಪ್ರಾಪ್ತವಾಗುವುದರಿಂದ ಈ ಶ್ಲೋಕದಲ್ಲಿ ಹೇಳಿರುವ ‹‹ ವಶೀ ,, ಎಂಬುವ ವಿಶೇಷಣ ಪದವು ಮೃತನಲ್ಲಿ ಅನ್ವಯಿಸಲಾರದಾದುದರಿಂದಲೂ, ಮರಣಾನಂತರ ಕಾಲೀನವಾದ ಸರ್ವಕರ್ಮ ಸನ್ನ್ಯಾಸವೇ ಭಗವದಭಿಪ್ರೇತವಾಗಿರುವುದೆಂದು ಹೇಳುವುದು ಯುಕ್ತವಲ್ಲವು. ಮೃತನಾದವನಿಗೆ ಸರ್ವಕರ್ಮ ಸನ್ನ್ಯಾಸದೊಡನೆ ಅದೇ ದೇಹದಲ್ಲಿ ಇರುವಿಕೆಯೂ ಸಂಭವಿಸುವದಿಲ್ಲವು.

ಆದರೂ "ಈ ಶ್ಲೋಕದಲ್ಲಿ 'ದೇಹೇಆಸ್ತೇ' ಎಂದನ್ವಯಿಸದೇ "ಮೃತಃ-ಅಕುರ್ವನ್ ಅಕಾರಯನ್ ಸರ್ವಕರ್ಮಾಣಿ ಮನಸಾದೇಹೇ ಸನ್ನ್ಯಸ್ಯಸುಖಮಾಸ್ತೇ" (ಮೃತನಾದವನು ತಾನು ಯಾವಕೆಲಸವನ್ನು ಮಾಡದೇ ಮಾಡಿಸದೇ ಸರ್ವಕರ್ಮಗಳನ್ನು ಮನಸ್ಸಿನಿಂದ ದೇಹದಲ್ಲಿರಿಸಿ ಸುಖವಾಗಿರುವನು) ಎಂಬದಾಗಿ ಅನ್ವಯಿಸಿದರೆ ಜೀವಿಸಿರುವವನ ದೇಹದಲ್ಲಿ ಸರ್ವಕರ್ಮತ್ಯಾಗವೂ ಸಂಭವಿಸುವದಿಲ್ಲವಾದುದರಿಂದ ಮೃತನಿಗೆ ದೇಹದಲ್ಲಿ ಸರ್ವಕರ್ಮಗಳನ್ನಿಟ್ಟು ಸುಖವಾಗಿರುವಿಕೆಯು ಸಂಭವಿಸಬಹುದೆಂದರೆ, ಈ ಗೀತಾಶಾಸ್ತ್ರವೇ ಮೊದಲಾದ ಸಮಸ್ತ ವೇದಾಂತ ಗ್ರಂಥಗಳಲ್ಲಿ ಆತ್ಮನು ಅವಿಕ್ರಿಯನೆಂದು ಹೇಳಿರುವುದರಿಂದಲೂ, ದೇಹಸಂಬಂಧವಿದ್ದರೇನೇ ಕರ್ತೃತ್ವಕಾರಯಿತೃತ್ವಗಳು (ಮಾಡುವಿಕೆ-ಮಾಡಿಸುವಿಕೆಯು) ಸಂಭವಿಸುವುದರಿಂದಲೂ, ಸರ್ವಕರ್ಮಗಳನ್ನು ಮಾಡಲು ತಕ್ಕಯೋಗ್ಯತೆಯುಳ್ಳ ಕಾಲದಲ್ಲಿ ಅದಂ ನಿಷೇಧಿಸುವದು ಯುಕ್ತವಾಗಿರುವುದರಿಂದ ಮೃತಶರೀರಕ್ಕೆ ಕರ್ಮನಿಷೇಧವೂ ಸ್ವತಃಪ್ರಾಪ್ತವಾಗಿರುವುದರಿಂದಅಪ್ರಸಕ್ತ ಪ್ರತಿಷೇಧ ರೂಪವಾದ ದೋಷವುಪ್ರಾಪ್ತವಾಗುವುದರಿಂದಲೂ, 'ಮೃತಸ್ಸರ್ವಕರ್ಮಾಣಿ ಮನಸಾ ದೇಹೇ'ಸನ್ನ್ಯಸ್ಯಆಸ್ತೇ', ಎಂಬದಾಗಿ ಅನ್ವಯಿಸಿ ಅರ್ಥವಂ ಹೇಳುವುದು ಯುಕ್ತವಲ್ಲವು. ಮತ್ತು 'ಸನ್ನ್ಯಸ್ಯ' ಎಂಬುವ ಪದದಲ್ಲಿ 'ಸಂ' ಎಂಬ ಉಪಸರ್ಗ ಪೂರ್ವಕವಾದನ್ಯಾಸ ಶಬ್ದಾರ್ಥವು ಇಲ್ಲಿ ತ್ಯಾಗಾರ್ಥಕವಾಗಿರುವುದಲ್ಲದೆ ನಿಕ್ಷೇಪಾರ್ಥಕ ವಾಗಲಾರದು. (ನಿಕ್ಷೇಪವೆಂದರೆ ಇಡುವುದು.)

ಆದುದರಿಂದ ಆತ್ಮಜ್ಞಾನವುಳ್ಳವನಿಗೆ ಸರ್ವಕರ್ಮ ಸನ್ನ್ಯಾಸವಲ್ಲಿಯೇ ಅಧಿಕಾರವು, ಕರ್ಮದಲ್ಲಿ ಅಧಿಕಾರವಿಲ್ಲವೆಂಬರ್ಥವನ್ನು ಗೀತಾಶಾಸ್ತ್ರದಲ್ಲಿ ಮುಂದೆಯೂ ಆಯಾ ಪ್ರಕರಣಗಳಲ್ಲಿ ತೋರಿಸುವೆವು ||೨೧||

(ರಾ-ಭಾ) ಈಪ್ರಕಾರ ಉತ್ಪತ್ತಿ ವಿನಾಶಗಳಿಲ್ಲದೇ ಯಾವಪದಾರ್ಥಗಳಿಂದಲೂ ನಾಶಪಡಿಸಲಶಕ್ಯವಾಗಿರುವುದರಿಂದ ಆತ್ಮನನ್ನು ನಿತ್ಯನೆಂದು ಯಾವ ಪುರುಷನು ತಿಳಿಯುವನೋ ಆ ಪುರುಷನು; ದೇವ, ಮನುಷ್ಯ, ತಿರ್ಯಕ್, ಸ್ಥಾವರ, ಎಂಬುವ ಚತುರ್ವಿಧ ಶರೀರಗಳಲ್ಲಿರುವ ಆತ್ಮಗಳಲ್ಲಿ ಯಾ

ರನ್ನು ಹ್ಯಾಗೇತಾನೆ ಕೊಲ್ಲುವನು ? ಯಾರಿಂದ ಯಾವಪ್ರಾಣಿಯನ್ನು ಕೊಲ್ಲಿಸುವನು. (ಅಂದರೇ ಹ್ಯಾಗೆತಾನೇ ಬಾಧ್ಯಬಾಧಕಗಳಿಗೆ ಪ್ರಯೋಜಕ ನಾಗುವನೆಂದರ್ಥವು.) ಇವರಂ ಸಂಹರಿಸುತ್ತೇನೆಂಬದಾಗಿಯೂ, ಸಂಹಾರ ಮಾಡಿಸುತ್ತೇನೆಂಬದಾಗಿಯೂ, ತಿಳಿದು ಶೋಕಪಡುವದಿಲ್ಲವು. ಈ ಆತ್ಮಗಳನ್ನು ಕೊಲ್ಲಿಸುವೆನು, ಕೊಲ್ಲುವೆನು,ಎಂಬೀ ಅನುಶೋಚನವು ಆತ್ಮನಯಥಾರ್ಥಸ್ಥಿತಿಯಂ ತಿಳಿಯದೇ ಇರುವುದರಿಂದ್ದುಂಟಾದದ್ದೆಂದು ತಾತ್ಪರ್ಯವು.

(ಗೀ-ವಿ) ಈ ಶ್ಲೋಕಕ್ಕೆ ಪರಮಾತ್ಮ ಪರವಾಗಿಯೂ ಒಂದರ್ಥವುಂಟು. ಅದೆಂತೆಂದರೇ:—ಎಲೈ ಅರ್ಜುನನೇ ! ಏನಂ- ಈ ಪರಮಾತ್ಮನನ್ನು, ಅಜಂ - ಉತ್ಪತ್ತಿಶೂನ್ಯನು,ಅವ್ಯಯಂ- ವಿಕಾರರಹಿತನು, ಅವಿನಾಶಿನಮ್- ದೇಹನಾಶವಿಲ್ಲದವನು, ನಿತ್ಯಂ -ಸ್ವರೂಪನಾಶವಿಲ್ಲದವನು, (ಇತಿ-ಹೀಗೆಂದು, ) ಯಃ - ಯಾವನು, ವೇದ-ತಿಳಿಯುತ್ತಾನೋ, (ಶಿಷ್ಟಂ ಪೂರ್ವವತ್ ) ಈಪ್ರಕಾರ ಪರಮಾತ್ಮನನ್ನು ಯಾವಮನುಷ್ಯನು ತಿಳಿಯುತ್ತಾನೋ, ಅವನು ತನಗೇ ಯಾವದರಲ್ಲಿಯೂ ಕರ್ತೃತ್ವವಿಲ್ಲವು, ಸರ್ವವಿಷಯದಲ್ಲಿಯೂ ಪರಮಾತ್ಮನಿಗೇನೇ ಕರ್ತೃತ್ವವುಂಟೆಂಬ ಜ್ಞಾನವುಳ್ಳವನಾಗಿರುವನು. ಆದ್ದರಿಂದ ಅವನು ಒಬ್ಬರನ್ನು ಸಂಹರಿಸುವದಾಗಲೀ ಸಂಹಾರಮಾಡಿಸುವ ದಾಗಲೀ, ಈ ಎರಡರಲ್ಲಿ ಯಾವದರಲ್ಲಿಯೂ ಸಂಬಂಧಿಸಲಾರನು. ॥೨೧॥

ಮೂ॥ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ
ಗೃಹ್ಣಾತಿನರೋಽಪರಾಣಿ । ತಥಾ ಶರೀರಾಣಿ ವಿಹಾಯ
ಜೀರ್ಣಾನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥೨೨॥

ಪ॥ವಾಸಾಂಸಿ- ಜೀರ್ಣಾನಿ- ಯಥಾ-ವಿಹಾಯ -ನವಾನಿ-ಗೃಹ್ಣಾತಿ-ನರಃ - ಅಪ

ರಾಣಿ। ತಥಾ-ಶರೀರಾಣಿ-ವಿಹಾಯ-ಜೀರ್ಣಾನಿ-ಅನ್ಯಾನಿ-ಸಂಯಾತಿ-ನವಾನಿ-ದೇಹೀ॥

ಅ॥ ನರಃ - ಮನುಷ್ಯನು, ಜೀರ್ಣಾನಿ - ಹಳೇದಾದ, (ಜೀರ್ಣವಾಗಿರುವ) ವಾಸಾಂಸಿ - ವಸ್ತ್ರಗಳನ್ನು, ವಿಹಾಯ - ಬಿಟ್ಟು, ನವಾನಿ- ಹೊಸದಾದ, ಅಪರಾಣಿ- ಬೇರೇ ವಸ್ತ್ರಗಳನ್ನು, ಯಥಾ-ಹ್ಯಾಗೆ, ಗೃಹ್ಣಾತಿ - ಗ್ರಹಿಸುತ್ತಾನೋ, ತಥಾ - ಆಪ್ರಕಾರವಾಗಿ, ದೇಹೀ - ದೇಹವುಳ್ಳ ಆತ್ಮನು, ಜೀರ್ಣಾನಿ - ನಿಷ್ಫಲವಾಗಿರುವ, ಶರೀರಾಣಿ - ದೇಹಗಳನ್ನು, ವಿಹಾಯ- ಬಿಟ್ಟು, ನವಾನಿ - ಹೊಸದಾದ, ಅನ್ಯಾನಿ- ಇತರ ದೇಹಗಳನ್ನು, ಸಂಯಾತಿ - ಹೊಂದುತ್ತಾನೆ. ॥೨೨॥

(ರಾ-ಭಾ) (ಅ॥ ಕಾ॥ ಮರಣವೆಂಬುವದು ಜೀವನು ಶರೀರವಂಬಿಟ್ಟು ಹೋಗುವದೆಂಬದಾಗಿಯೂ, ಅದರಿಂದ ಆತ್ಮನಿಗೆ ಯಾವವಿಧವಾದ ನಾಶವಿಲ್ಲವೆಂಬದಾಗಿಯೂ, ನಾವೃತಿಳಿದಿದ್ದರೂ ರಮಣೀಯವಾಗಿರುವ ಭೋಗಸಾಧನವಾದ ಈ ಶರೀರವು ನಾಶವಾಗುವ ಕಾಲದಲ್ಲಿ ಅಯ್ಯೋ ಈ ಶರೀರವು ಹೋಗುತದೆಯಲ್ಲವೇ ? ಎಂಬದಾಗಿ ದುಃಖವು ಪ್ರಾಪ್ತವಾಗದೇ ಹೋಗುವದೋ ? ಅಂದರೇ ಅದಕ್ಕೆ ಪ್ರತ್ಯುತ್ತರವಂ ಹೇಳುತ್ತಾನೆ.) ಧರ್ಮಯುದ್ಧದಲ್ಲಿ ಶರೀರತ್ಯಾಗವಂಮಾಡುವ ವರುಗಳಿಗೆ ತ್ಯಾಗವಾದಲ್ಪಟ್ಟ ಪೂರ್ವಶರೀರಕ್ಕಿಂತಲೂ ಅತಿ ವಿಲಕ್ಷಣವಾದ ಶರೀರವು ಪ್ರಾಪ್ತವಾಗುವುದೆಂದು ಶಾಸ್ತ್ರಗಳಿಂದ ತಿಳಿಯಬರುವುದರಿಂದ ಹಳೇವಸ್ತ್ರಗಳನ್ನು ತೊರದು ನೂತನವಸ್ತ್ರಗಳನ್ನುಧರಿಸುವುದರಲ್ಲಿ ಹ್ಯಾಗೆ ಸಂತೋಷವೋ ಆಪ್ರಕಾರವಾಗಿ ಹಳೇದಾದ ಶರೀರವಂಬಿಟ್ಟು ನೂತನಶರೀರವಂ ಪರಿಗ್ರಹಿಸುವುದರಲ್ಲಿ ಸಂತೋಷ ಉಂಟಾಗಬೇಕಲ್ಲದೆ ವ್ಯಸನವುಂಟಾಗುವದಕ್ಕೆ ಸ್ವಲ್ಪವೂ ಅವಕಾಶವಿಲ್ಲವು. ॥೨೨॥

ಮೂ॥ ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ
ಪಾವಕಃ । ನಚೈನಂಕ್ಲೇದಯಂತ್ಯಾಪೋ ನ ಶೋಷ
ಯತಿ ಮಾರುತಃ ॥ ॥೨೩॥

ಮೂ॥ ಅಚ್ಛೇದ್ಯೋ ಽಯ ಮದಾಹ್ಯೋಽಯ ಮಕ್ಲೇದ್ಯೋ ಽಶೋಷ್ಯ ಏವ ಚ । ನಿತ್ಯಸ್ಸರ್ವಗತ ಸ್ಸ್ಥಾಣು ರಚಲೋ ಽಯಂ ಸನಾತನಃ ॥ ॥ ೨೪ ॥

ಪ॥ ನ - ಏನಂ - ಛಿಂದಂತಿ - ಶಸ್ತ್ರಾಣಿ - ನ - ಏನಂ - ದಹತಿ - ಪಾವಕಃ ॥ ನ - ಚ - ಏನಂ - ಕ್ಲೇದಯಂತಿ - ಆಪಃ - ನ - ಶೋಷಯತಿ - ಮಾರುತಃ ॥ ೨೩ ॥

ಪ॥ ಅಚ್ಛೇದ್ಯಃ - ಅಯಂ - ಅದಾಹ್ಯಃ - ಅಯಂ - ಅಕ್ಲೇದ್ಯಃ - ಅಶೋಷ್ಯಃ - ಏವ - ಚ । ನಿತ್ಯಃ - ಸರ್ವಗತಃ - ಸ್ಥಾಣುಃ - ಅಚಲಃ - ಅಯಂ - ಸನಾತನಃ ॥ ೨೪ ॥

ಅ॥ ಶಸ್ತ್ರಾಣಿ - ಆಯುಧಗಳು, ಏನಂ - ಈ ಆತ್ಮನನ್ನು, ನಛಿಂದಂತಿ - ಛೇದಿಸುವದಿಲ್ಲವು, ಪಾವಕಃ - ಅಗ್ನಿಯು, ಏನಂ - ಈ ಆತ್ಮನನ್ನು, ನದಹತಿ - ದಹಿಸುವದಿಲ್ಲವು, ಏನಂ - ಈ ಆತ್ಮನನ್ನು, ಆಪಃ - ನೀರುಗಳು, ನಕ್ಲೇದಯಂತಿ - ನೆನೆಸುವದಿಲ್ಲವು, ಮಾರುತಃ - ವಾಯುವು, ಏನಂ - ಈ ಆತ್ಮನನ್ನು, ನಶೋಷಯತಿ - ಒಣಗಿಸುವದಿಲ್ಲವು. ॥ ೨೩ ॥

ಅ॥ ಅಯಂ - ಈ ಆತ್ಮನು, ಅಚ್ಛೇದ್ಯಃ - ಛೇದಿಸಲರ್ಹನಾಗುವದಿಲ್ಲವು, ಅಯಂ - ಈ ಆತ್ಮನು, ಅದಾಹ್ಯಃ - ಸುಡಲ್ಪಡತಕ್ಕವನಲ್ಲವು, ಅಕ್ಲೇದ್ಯಃ - ನೆನೆಸಲ್ಪಡತಕ್ಕವನಲ್ಲವು, ಅಶೋಷ್ಯ ಏವಚ - ಒಣಗಿಸಲ್ಪಡತಕ್ಕವನೂ ಅಲ್ಲವು, ನಿತ್ಯಃ - ನಿತ್ಯನು, ( ಭೂತಭವಿಷ್ಯದ್ವರ್ತಮಾನಗಳೆಂಬ ಕಾಲತ್ರಯಗಳಲ್ಲಿಯೂ ಏಕರೂಪನಾಗಿರತಕ್ಕವನು ) ಸರ್ವಗತಃ - ( ರಾ ॥ ಎಲ್ಲವನ್ನು ವ್ಯಾಪಿಸಿರುವವನು, ) ಎಲ್ಲಿಯೂ ಪೂರ್ಣನಾದವನು, ಸ್ಥಾಣುಃ - ಸ್ಥಿರಸ್ವಭಾವವುಳ್ಳವನು, ( ಮ॥ ಗೀ॥ ವಿ॥ ಸರ್ವಗತಸ್ಥಾಣುಃ - ಯಾವಾಗಲೂ ಎಲ್ಲಿಯೂ ವ್ಯಾಪಿಸಿರುವ ಬ್ರಹ್ಮನ ಆಧಾರದಿಂದ ಆಣುವಾಗಿರತಕ್ಕವನು. ) ಅಚಲಃ - ಚಲಿಸದವನು, ಅಯಂ - ಈ ಆತ್ಮನು, ಸನಾತನಃ - ಅನಾದಿಯಾದವನು. ॥ ೨೪ ॥

(ರಾ-ಭಾ) ಆತ್ಮನಿಗೆ ನಾಶವಿಲ್ಲವೆಂಬ ಪೂರ್ವೋಕ್ತವಾದ ಅರ್ಥವನ್ನೇ ಸುಲಭವಾಗಿ ತಿಳಿಯಲು ದೃಢಪಡಿಸುತ್ತಾನೆ. ಆಯುಧವು, ಬೆಂಕಿಯು, ನೀರು, ವಾಯುವು, ಇವುಗಳು ಛೇದಿಸುವದು ದಹಿಸುವದು ನೆನೆಸುವದು ಒಣಗಿಸುವದೇ ಮೊದಲಾದ ಯಾವವಿಧವಾದ ದುಃಖವನ್ನು ಈ ಆತ್ಮನಿಗೆ ಮಾಡತಕ್ಕವುಗಳಲ್ಲವು. ಈ ಆತ್ಮವಸ್ತುವು ಸರ್ವಗತ ವಾದುದರಿಂದ ಸಕಲತತ್ವಗಳಲ್ಲಿಯೂ ಅತಿಸೂಕ್ಷ್ಮ

ಮಾಗಿ ಇರುತೆ ಅವುಗಳನ್ನೆಲ್ಲವೂನೂ ವ್ಯಾಪಿಸಿಕೊಂಡಿರು ವುದು. ಛೇದಕವಾದವಸ್ತುವು ಛೇದ್ಯ ವಸ್ತುವನ್ನು ವ್ಯಾ ಪಿಸಿಯೇಕಾರ್ಯಕರವಾಗಬೇಕಾಗಿರುವುದರಿಂದ ಎಲ್ಲವನ್ನು ವ್ಯಾ ಪಿಸಿರುವಸರ್ವವ್ಯಾಪಕವಾದ ಈ ಆತ್ಮವಸ್ತುವನ್ನು ವ್ಯಾಪಿ ಸಿ ನಾಶಪಡಿಸುವ ವಸ್ತುವು ಲೋಕದಲ್ಲಿ ಯಾವದೂ ಇರ ಲಾರದು. ಆದುದರಿಂದ ಆತ್ಮನು ನಿತ್ಯನಾಗಿಯು, ಅಚಂ ಚಲನಾಗಿಯು,ಪುರಾತನನಾಗಿಯು, ಇರುತ್ತಾನೆ.

(ಈ ೨೩ ನೇ ಶ್ಲೋಕದಲ್ಲಿ ಆತ್ಮನಿಗೆ ಛೇದ್ಯತ್ವಾದಿಗಳಿಲ್ಲ ವೆಂಬದಾಗಿ ಹೇಳಿ ೨೪ ನೇ ಶ್ಲೋಕದಲ್ಲ ಅದಕ್ಕೆ ತಕ್ಕ ಹೇತೂಪನ್ಯಾಸವುಮಾಡಲ್ಪಟ್ಟಿತು.) ||೨೩||೨೪||

(ಶಂ||ಭಾ) ಆತ್ಮನಿಗೆ "ನಜಾಯತೆ,, ಎಂಬುವ ಶ್ಲೋಕದಲ್ಲ ಹೇಳಿರುವ ನಿತ್ಯತ್ವ, ಅವಿಕ್ರಿಯತ್ವ ಎಂಬ ಈ ಅರ್ಥವ ಅನಂತರ ಶ್ಲೋಕಗಳಲ್ಲಿಯೂ ಹೇಳಿರುವುದರಿಂದ ಕೆಲವುಕಡೆ ಶಬ್ದದಿಂದ ಲೂ ಕೆಲವುಕಡೆ ಅರ್ಥದಿಂದಲೂ, ಪೌನರುಕ್ತ್ಯ ದೋಷವಂ ಶಂ ಕಿಸಕೂಡದು. "ನಜಾಯತೆ ,, ಎಂಬುವ ಶ್ಲೋಕದಲ್ಲಿ ಹೇಳಲ್ಪ ಟ್ಟ ಅರ್ಥವನ್ನೇ ಆತ್ಮವಸ್ತುವು ದುರ್ಬೋಧವಾಗಿರುವುದರಿಂ ದಪುನಃ ಪುನಃ ಪ್ರಸಂಗವಾತಿ ಶಬ್ದಾಂತರಗಳಿಂದ ಭಗವಂತನಾದ ಶ್ರೀವಾ ಸುದೇವನು, ಹ್ಯಾಗೆತಾನೆ ದುರ್ಬೋಧವಾದ ಆತ್ಮವಸ್ತುವು ಸಂಸಾ ರಿಗಳಿಗೆ ಬುದ್ಧಿಗೋಚರವಾಗಿ ಸಂಸಾರನಿವೃತ್ತಿಗೋಸ್ಕರ ವಾಗು ವುದು ? ಎಂಬದಾಗಿ ಪುನಃಪುನಃ ಉಪದೇಶಿಸುವುನು ||೨೪||

ಮೂ||ಅವ್ಯಕ್ತೋ ೭ಯ ಮಚಿಂತ್ಯೋ ೭ ಯ ಮವಿಕಾ
ರ್ಯೋ ೭ಯ ಮುಚ್ಯತೆ । ತಸ್ಮಾ ದೇವಂ ವಿದಿತ್ವೈನಂ
ನಾನು ಶೋಚಿತು ಮರ್ಹಸಿ || ||೨೫||

ಪ|| ಅವ್ಯಕ್ತಃ – ಅಯಂ– ಅಚಿಂತ್ಯಃ – ಅಯಂ – ಅವಿಕಾರ್ಯಃ–ಅಯಂ–ಉ ಚ್ಯತೇ । ತಸ್ಮಾತ್ –ಏವಂ – ವಿದಿತ್ವಾ – – ಏನಂ – ನ – ಅನುಶೋಚಿತುಂ–ಅರ್ಹಸಿ ||

ಅ|| ಅಯಂ – ಈ ಆತ್ಮನು, ಅವ್ಯಕ್ತಃ – ವ್ಯಕ್ತವಾಗಿ ಕಾಣತಕ್ಕವನಲ್ಲವು, ಅ ಯಂ – ಇವನು, ಅಚಿಂತ್ಯಃ – ಚಿಂತಿಸಲಿಕ್ಕನಾಗ ವದಿಲ್ಲವು, ಅಯಂ –ಇವನು ಅವಿ

ಕಾರ್ಯಃ - ವಿಕಾರವ ಹೊಂದದವನು, (ಇತಿ- ಹೀಗೆಂದು, ) ಉಚ್ಯತೆ - ಹೇಳಲ್ಪಡು ವುನು. ತಸ್ಮಾತ್- ಆ ದುದರಿಂದ, ಏವಂ - ಈಪ್ರಕಾರವಾಗಿ, ಏನಂ-ಈ ಆತ್ಮನನ್ನು, ವಿದಿತ್ವಾ- ತಿಳಿದು, ಅನುಶೋಚಿತುಮ್ - ದುಃಖಿಸಲಿಕ್ಕೆ, ನಾರ್ಹಸಿ - ನೀನು ಯೋಗ್ಯನಾಗಲಾರೆ. ॥೨೫॥

(ರಾ-ಭಾ)ಆತ್ಮನು ಛೇದನಾದಿ ಕಾರ್ಯಗಳಿಗೆ ವಶಪಟ್ಟಿರಲಾರನೆಂಬುವ ವಿಷಯದಲ್ಲಿ ಒಂದು ಗುರುತನ್ನು ಹೇಳುತ್ತೇನೆಕೇಳು. ಛೇದನಾದಿಗಳಿಗೆ ವಶಪಟ್ಟಿರುವ ಘಟಪಟಾದಿ ಪದಾರ್ಥಗಳನ್ನು ಕಣ್ಣು ಮೊದಲಾದ ಯಾವಪ್ರಮಾಣಗಳಿಂದ ನಾವರಿಯುವೆವೊ; ಅವುಗಳಿಂದಆತ್ಮನು ಅರಿಯಲು ಆಗುವದಿಲ್ಲವು. ಆದುದರಿಂದ ಇಂದ್ರಿಯಗಳಿಗೆ ವ್ಯಕ್ತನಾಗದ ಈ ಆತ್ಮನು ಛೇದನಾದಿಗಳಿಗೆ ವಶಪಟ್ಟಿರುವ ಯಾವಪದಾರ್ಥಗಳಿಗೂ ಸೇರಿದವನಲ್ಲವು. ಈ ಮೇರೆಗೆ ವಿಜಾತೀಯನಾಗಿರುವುದರಿಂದ ಇವನು ಅವುಗಳ ಸ್ವಭಾವಗಳಿಂದ ಕೂಡಿದವನೆಂದು ತಿಳಿಯಕೂಡದು. ಆದುದರಿಂದಲೇ ವಿಕಾರರಹಿತನು. ಇಂತಹ ಆತ್ಮನವಿಷಯದಲ್ಲಿ ನೀನು ಶೋಕಿಸುವದು ಯುಕ್ತವಲ್ಲವು.

(ಗೀ-ವಿ) ಈ ಶ್ಲೋಕದಲ್ಲಿ ಹೇಳಲ್ಪಟ್ಟಿರುವ ಅವ್ಯಕ್ತತ್ವಾದಿ ವಿಶೇಷಗಳುಳ್ಳ ಪರಮಾತ್ಮನು ಸ್ವತಂತ್ರನು; ನಾನು ಅವನಿಗೆ ಸ್ವಾಧೀನನಾಗಿ ಯುದ್ಧವಂಮಾಡಿ ಫಲಸಮರ್ಪಣೆಯಂ ಮಾಡಬೇಕೆಂಬದಾಗಿ ತಿಳಿದರೇ ವ್ಯಸನಕ್ಕೆ ಕಾರಣವೇ ಇಲ್ಲವು. ॥೨೫॥

ಮೂ ॥ ಅಥ ಚೈನಂ ನಿತ್ಯಜಾತಂ ನಿತ್ಯಂ ವಾ ಮನ್ಯ
ಸೇ ಮೃತಂ । ತಥಾಪಿ ತ್ವಂ ಮಹಾಬಾಹೊ ನೈನಂ
ಶೋಚಿತು ಮರ್ಹಸಿ ॥ ॥೨೬॥

ಪ । ಅಥ - ಚ - ಏನು - ನಿತ್ಯಜಾತಂ - ನಿತ್ಯಂ - ವಾ - ಮನ್ಯಸೇ- ಮೃತಂ । ತಥಾ - ಅಪಿ - ತ್ವಂ - ಮಹಾಬಾಹೊ - ನ- ಏನು - ಶೋಚಿತುಂ-. ಅರ್ಹಸಿ॥

ಅ॥ ಅಥಚ - ಒಂದುಕಾಲದಲ್ಲಿ, ಏನಂ - ಈ ಆತ್ಮನನ್ನು, ನಿತ್ಯಜಾತಂ- ಯಾವಾಗಲೂ ಹುಟ್ಟತಕ್ಕವನಾಗಿಯೂ, ನಿತ್ಯಂ- ಯಾವಾಗಲೂ, ಮೃತಂವಾ - ಮರಣ ಹೊಂದತಕ್ಕವನಾಗಿಯೂ, ಮನ್ಯಸೇ ಎಣಿಸುತ್ತಿಯೋ? ತಥಾಪಿ - ಆಪ್ರಕಾರ ಮಾಡಿದಾಗ್ಯೂ, ಹೇಮಹಾಬಾಹೋ - ಎಲೈ ವಿಸ್ತಾರವಾದ ಭುಜವುಳ್ಳ ಅರ್ಜುನನೇ! ತ್ವಂ - ನೀನು, ಏನಂ - ಈ ಆತ್ಮನನ್ನು ಕುರಿತು, ಶೋಚಿತುಮ್ - ವ್ಯಸನಪಡಲು, ನಾರ್ಹಸಿ - ಯೋಗ್ಯನಾಗಲಾರೆ. ॥೨೬॥

(ರಾ-ಭಾ) ನಿತ್ಯವಾಗಿ ಹುಟ್ಟುವದಾಗಿಯೂ, ಮೃತಿ ಹೊಂದುವದಾಗಿಯೂ ಇರುವ ಈ ದೇಹವನ್ನೇ ನೀನು ಆತ್ಮನನ್ನಾಗಿ ಎಣಿಸುತ್ತಿಯೊ, ಅಲ್ಲವೆ ದೇಹಾತಿರಿಕ್ತವಾದ ಪೂರ್ವೋಕ್ತ ಲಕ್ಷಣಗಳುಳ್ಳ ವಸ್ತುವನ್ನು ಆತ್ಮನನ್ನಾಗಿ ಯೆಣಿಸಿದವನಂತೆ ತೋರಲಿಲ್ಲವು. ಆಪ್ರಕಾರ ಯೆಣಿಸಿದರೂ ಪರಿಣಾಮಸ್ವಭಾವವುಳ್ಳ ಶರೀರಕ್ಕೆ ಉತ್ಪತ್ತಿವಿನಾಶಗಳು ಅವರ್ಜನೀಯವಾಗಿರುವುದರಿಂದ ಎಷ್ಟುಮಾತ್ರವು ನೀನು ಶೋಕಿಸುವದು ಉಚಿತವಲ್ಲವು. ॥೨೬॥

ಮೂ॥ ಜಾತಸ್ಯ ಹಿ ಧ್ರುವೋ ಮೃತ್ಯು ರ್ಧ್ರುವಂ ಜ
ನ್ಮ ಮೃತಸ್ಯ ಚ । ತಸ್ಮಾ ದಪರಿಹಾರ್ಯೇಽ ರ್ಥೇ
ನ ತ್ವಂ ಶೋಚಿತು ಮರ್ಹಸಿ ॥ ॥೨೭॥

ಪ॥ ಜಾತಸ್ಯ - ಹಿ - ಧ್ರುವಃ - ಮೃತ್ಯುಃ - ಧ್ರುವಂ - ಜನ್ಮ - ಮೃತಸ್ಯ- ಚ। ತಸ್ಮಾತ್ - ಅಪರಿಹಾರ್ಯೇ - ಅರ್ಥೇ - ನ-ತ್ವಂ- ಶೋಚಿತುಂ - ಅರ್ಹಸಿ ॥

ಅ॥ ಜಾತಸ್ಯಹಿ - ಹುಟ್ಟಿದವನಿಗೋ, ಮೃತ್ಯುಃ - ಮರಣವು, ಧ್ರುವಃ - ನಿಶ್ಚಯವು, ಮೃತಸ್ಯಚ - ಮರಣಹೊಂದಿದವನಿಗೂ, ಜನ್ಮ - ಉತ್ಪತ್ತಿಯು, ಧ್ರುವಂ- ನಿಶ್ಚಯವು, ತಸ್ಮಾತ್-ಅದುದರಿಂದ, ಅಪರಿಹಾರ್ಯೇ -ಪರಿಹರಿಸಲನರ್ಹವಾದ, ಅರ್ಥೇ- ವಿಷಯದಲ್ಲಿ, ತ್ವಂ - ನೀನು - ಶೋಚಿತುಂ - ವ್ಯಸನಪಡಲಿಕ್ಕೆ, ನಾರ್ಹಸಿ - ಯೋಗ್ಯನಾಗಲಾರೆ. ॥೨೭॥

(ರಾ-ಭಾ)ಉತ್ಪನ್ನವಾದ ಪದಾರ್ಥಕ್ಕೆ ಹ್ಯಾಗೆ ಅವರ್ಜನೀಯವಾಗಿ ವಿನಾಶವೆಂಬುವುದು ಸಿದ್ಧವೋ ಆಪ್ರಕಾರ ನಾಶವಾಗುವಪದಾರ್ಥಕ್ಕೆ ಉತ್ಪತ್ತಿಯೂ, ಸಿದ್ಧವಾಗಿಯೇ ಇರುತದೆ.

ವಿನಷ್ಟವಾದ ಪದಾರ್ಥಕ್ಕೆ ಉತ್ಪತ್ತಿ ಹ್ಯಾಗೆಂದರೆ,-ಲೋಕ ದಲ್ಲಿ ಯಾವಪದಾರ್ಥವೂ ಇರುವುದು ಉಂಟಾಗುತದೆಯ್ಯು ಲ್ಲದೆ ಇಲ್ಲದಿರುವುದು ಉಂಟಾದುದಂ ಕಾಣಲಿಲ್ಲವು. ಉ ತ್ಪತ್ತಿ ವಿನಾಶಗಳೆಂಬುವುದು ಇರುವಪದಾರ್ಥಗಳ ಅವಸ್ಥಾ ವಿಶೇಷಗಳಲ್ಲದೆ ಬೇರೇಯಲ್ಲವು. ಲೋಕದಲ್ಲಿ ತಂತು (ಧಾರ) ವೇ ಮೊದಲಾದ ಇರುತಲಿರುವ ವಸ್ತುಗಳೇ ರಚನಾ ವಿಶೇಷ ದಿಂದ ವಸ್ತ್ರ ರೂಪ ಕಾರ್ಯ ಗಳಾಗುವುವು. ಆ ಕಾ ರ್ಯವು ತಂತು ಮೊದಲಾದವುಗಳಲ್ಲದೆ ಬೇರೇಯೊಂದಲ್ಲ ವು. ವಸ್ತ್ರರೂಪವಾದ ಕಾರ್ಯೋತ್ಪತ್ತಿಯಲ್ಲಿ ಇರುತ ಲಿರುವ ತಂತುವಿಗಿಂತಲೂ ಅತಿರಿಕ್ತವಾದ ದ್ರವ್ಯಾಂ ತರ ಕಲ್ಪನವನ್ನು ಅಸತ್ಕಾರ್ಯವಾದಿಯೂ (ಇಲ್ಲದಿರುವದೇ ಉಂಟಾಗುವದೆಂದು ಹೇಳುವಂತವನು ಅಸತ್ಕಾರ್ಯವಾದಿ ಯು.) ಕೂಡ ಮಾಡಲಾರನು. ಆದುದರಿಂದ ಇರುತಲಿರು ವ ವಸ್ತುವಿನ ವಿಕಾರಗಳನ್ನೇ ಉತ್ಪತ್ತಿವಿನಾಶಗಳೆಂಬದಾಗಿ ಹೇಳುವರು. ಮೃದ್ದ್ರವ್ಯಕ್ಕೆ (ಮೃತ್‌ಅಂದರೇ ಮಣ್ಣು) ಪಿಂಡತ್ವ ಘಟತ್ವ ಕಪಾಲತ್ವ ಚೂರ್ಣತ್ವಾದ್ಯವಸ್ಥೆಗಳಂತೆ ಪ ರಿಣಮಿಸುವ ಸ್ವಭಾವವುಳ್ಳ ಶರೀರಕ್ಕೂ ಜನನಮರಣಾದಿರೂ ಪವಾದ ಪರಿಣಾಮ ಪರಂಪರೆಯು, ಇಲ್ಲದೇ ಹೋಗಲಾರ ದು. ಘಟ (ಮಡಿಕೆ) ರೂಪವಾದ ಮೃದ್ದ್ರವ್ಯಕ್ಕೆ ಘಟರೂ ಪವಾಗಿರುವ ಪೂರ್ವಾವಸ್ಥಾ ನಾಶದಿಂದ ಕಪಾಲ (ವಡಕು) ರೂಪವಾದ ಉತ್ತರಾವಸ್ಥಾಪ್ರಾಪ್ತಿಯನ್ನೇ ನಾಶವೆನ್ನುವು ರು. ಪಿಂಡ (ಮಣ್ಣಿನವುಂಡೆ) ರೂಪವಾದ ಮೃದ್ದ್ರ ವ್ಯಕ್ಕೆ ಘಟರೂಪವಾದ ಅವಸ್ಥಾಪ್ರಾಪ್ತಿಯನ್ನೇ ಉತ್ಪತ್ತಿ (ಹುಟ್ಟುವದು) ಎಂತಲೂ ಹೇಳುವರು. ಪರಿಣಾಮಿದ್ರವ್ಯ

(ವಿಕಾರವನ್ನು ಹೊಂದುಪದಾರ್ಥ) ಕ್ಕೆ ಉತ್ಪತ್ತಿವಿನಾಶರೂಪಮಾದ ಪರಿಣಾಮ ಪರಂಪರೆಯು ಅವಶ್ಯವಾಗಿ ಬರುವುದರಿಂದ ಪರಿಣಾಮ ಸ್ವಭಾವಗಳುಳ್ಳ ಶರೀರಗಳಂ ಕುರಿತು ನೀನು ಶೋಕಿಸುವದು ಯುಕ್ತವಲ್ಲವು. ||೨೭||

ಮೂ || ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ । ಅವ್ಯಕ್ತನಿಧನಾನ್ಯೇವ ತತ್ರ ಕಾ ಪರಿದೇವನಾ || ||೨೮||

ಪ|| ಅವ್ಯಕ್ತಾದೀನಿ – ಭೂತಾನಿ – ವ್ಯಕ್ತಮಧ್ಯಾನಿ – ಭಾರತ । ಅವ್ಯಕ್ತನಿಧನಾನಿ – ಏವ – ತತ್ರ – ಕಾ – ಪರಿದೇವನಾ ||

ಅ|| ಹೇ ಭಾರತ – ಎಲೈ ಭರತವಂಶೋದ್ಭವನಾದ ಅರ್ಜುನನೇ ! ಭೂತಾನಿ- ದೇಹಾದಿಗಳು, ಅವ್ಯಕ್ತಾದೀನಿ – ಹುಟ್ಟುವದಕ್ಕೇ ಪೂರ್ವದಲ್ಲಿ ಕಾಣತಕ್ಕದ್ದಲ್ಲವಾಗಿ, ವ್ಯಕ್ತಮಧ್ಯಾನಿ – ಮಧ್ಯಕಾಲದಲ್ಲಿ ಕಾಣಲ್ಪಡುವುದಾಗಿ, ಅವ್ಯಕ್ತನಿಧನಾನ್ಯೇವ– ಮರಣಾನಂತರ ಕಾಣತಕ್ಕದ್ದೇ ಅಲ್ಲವು, ತತ್ರ – ಆ ವಿಷಯದಲ್ಲಿ, ಪರಿದೇವನಾ – ವ್ಯಸನವು, ಕಾ – ಯೇನು. ||೨೮||

(ರಾ–ಭಾ) ಮಣ್ಣುಮೊದಲಾದ ಇರುತಲಿರುವ ದ್ರವ್ಯಕ್ಕೆ ಘಟರೂಪಮಾದ ಪೂರ್ವಾವಸ್ಥಾ ವಿನಾಶದಿಂದಪ್ರಾಪ್ತಮಾಗುವಕಪಾಲತ್ವಚೂರ್ಣತ್ವ ರೂಪಮಾದ ಅವಸ್ಥಾಂತರ ಪ್ರಾಪ್ತಿಯಿಂದ ಅಲ್ಪಮಾದ ಯಾವಶೋಕವು ಉಂಟಾಗುವದೋ ? ಆಶೋಕವುಕೂಡ ಮನುಷ್ಯಾದಿ ಭೂತನಾಶಗಳಿಂದುಂಟಾಗುವದಿಲ್ಲವೆಂದು ಹೇಳುತ್ತಾನೆ. ಘಟರೂಪಮಾದ ಕಾರ್ಯಕ್ಕೆ ಪ್ರಥಮಾವಸ್ಥೆಯಾದ ಪಿಂಡರೂಪಮಾಗಿರುವ ಆಕಾರದಂತೆ ಮನುಷ್ಯ ಶರೀರಕ್ಕೆ ಪ್ರಥಮಾವಸ್ಥೆಯು ಕಾಣುವದಿಲ್ಲವು. ಮಧ್ಯಮಾವಸ್ಥೆಯಾದ ಮನುಷ್ಯ ಶರೀರಮಾತ್ರವೇ ಕಾಣಲ್ಪಡುವುದು. ಲೋಕದಲ್ಲಿ ಮೊದಲುಮಣ್ಣಾಗಿದ್ದು ಅನಂತರ ಘಟರೂಪಮಾಗಿ ಪರಿಣಮಿಸಿರುವ ವಸ್ತುವು ಪುನಃ ಮಣ್ಣಾಗಿಹೋಯಿತೆಂದು ಒಂದುಸ್ಥಿತಿಯಲ್ಲಿದ್ದು ಅದಕ್ಕೇ ವಿರೋಧಮಾದ

ಮತ್ತೊಂದುಸ್ಥಿತಿಯಂ ಹೊಂದುವುದಂ ಲೋಕದಲ್ಲಿ ನಾವು ಕಂಡಿರುವುದರಿಂದ ಅದಂಕುರಿತು ಸ್ವಲ್ಪವಾದರೂ ಶೋಕಿಸಬಹುದು. ಶರೀರವೋ; ಮೊದಲು ಈ ರೀತಿಯಲ್ಲಿತ್ತೆಂಬದಾಗಿಯೂ, ಹೋದಮೇಲೆ ಈ ರೀತಿಯಾಗುವದೆಂಬದಾಗಿಯೂ, ತಿಳಿಯುವದೇಇಲ್ಲವು. ಈ ಮೇರಿಗೆ ತಿಳಿಯದೇ ವುಂಟಾದದ್ದು ತಿಳಿಯದೇ ಹೋಯಿತೆಂದಿರಬೇಕಾಗಿರುವಲ್ಲಿ ಈ ಶರೀರನಾಶವಂಕುರಿತು ದುಃಖಿಸಲು ಕಾರಣವೇನು. ॥೨೮॥

ಮೂ॥ ಆಶ್ಚರ್ಯವ ತ್ಪಶ್ಯತಿ ಕಶ್ಚಿದೇನ ಮಾಶ್ಚರ್ಯ ವ
ದ್ವದತಿ ತಥೈವ ಚಾನ್ಯಃ।ಆಶ್ಚರ್ಯವ ಚ್ಚೈನ ಮನ್ಯಶ್ಶೃ
ಣೋತಿ ಶ್ರುತ್ವಾ ಪ್ಯೇನಂ ವೇದ ನ ಚೈವ ಕಶ್ಚಿತ್॥೨೯

ಪ॥ ಆಶ್ಚರ್ಯವತ್ – ಪಶ್ಯತಿ – ಕಶ್ಚಿತ್ – ಏನಂ – ಆಶ್ಚರ್ಯವತ್ – ವದತಿ – ತಥಾ – ಏವ – ಚ – ಅನ್ಯಃ। ಆಶ್ಚರ್ಯವತ್ – ಚ–ಏನಂ–ಅನ್ಯಃ – ಶೃಣೋತಿ – ಶ್ರುತ್ವಾ – ಅಪಿ– ಏನಂ–ವೇದ – ನ–ಚ– ಏವ– ಕಶ್ಚಿತ್ ।

ಅ॥ ಕಶ್ಚಿತ್ – ಒಬ್ಬನು, ಏನಂ – ಈ ಆತ್ಮನನ್ನು, ಆಶ್ಚರ್ಯವತ್ – ಆಶ್ಚರ್ಯವಸ್ತುವಿನಂತೆ, ಪಶ್ಯತಿ – ನೋಡುತ್ತಾನೇ, ತಥೈವ – ಅಪ್ರಕಾರವಾಗಿಯೇ, ಅನ್ಯಶ್ಚ – ಮತ್ತೊಬ್ಬನೂ, ಏನಂ – ಈ ಆತ್ಮನನ್ನು, ಆಶ್ಚರ್ಯವತ್ – ಆಶ್ಚರ್ಯವಸ್ತುವಿನಂತೆ, ವದತಿ – ಹೇಳುತ್ತಾನೆ, ಅನ್ಯಶ್ಚ – ಮತ್ತೊಬ್ಬನು, ಏನಂ – ಈ ಆತ್ಮನನ್ನು, ಆಶ್ಚರ್ಯವತ್ – ಆಶ್ಚರ್ಯವಸ್ತುವಿನಂತೆ, ಶೃಣೋತಿ – ಕೇಳುತ್ತಾನೇ, ಶ್ರುತ್ವಾಪಿಚ – ಕೇಳಿ ಹೇಳಿನೋಡಿದರೂಕೂಡ, ಕಶ್ಚಿತ್ – ಅವರಲ್ಲೊಬ್ಬನು, ನೈವವೇದ – ತಿಳಿಯಲೇಇಲ್ಲವು॥೨೯

(ಶಂ–ಭಾ)ಈ ಆತ್ಮಸ್ವರೂಪ ಪರಿಜ್ಞಾನವುಸುಲಭವಾಗಿ ಪ್ರಾಪ್ತವಾಗಲಾರದಾದುದರಿಂದ ಈ ವಿಷಯದಲ್ಲಿ ಭ್ರಾಂತಿನಿಮಿತ್ತವೂ ಸರ್ವಸಾಧಾರಣವಾಗಿರಲಾಗಿ ನಿನ್ನನ್ನು ಮಾತ್ರವೇ ನಿಂದಿಸುವದಿಲ್ಲವು. ಆತ್ಮಸ್ವರೂಪವು ದುರ್ವಿಜ್ಞೇಯ (ತಿಳಿಯಲಶಕ್ಯ) ವಾಗಿರುವದೆಂದು ಪರಮಾತ್ಮನು ಅರ್ಜುನನಿಗೇ ಬೋಧಿಸುತ್ತಾನೆ. ಈ ಆತ್ಮನು ಆಶ್ಚರ್ಯತುಲ್ಯನಾಗಿರುವನು. ಅಂದರೇ ಪೂರ್ವದಲ್ಲಿ ನೋಡಲ್ಪಡದೆಯೂ ಅದ್ಭುತವಾಗಿಯೂ ಅಕಸ್ಮಾತ್ತಾಗಿ ಕಾಣಲ್ಪಡುವದಾಗಿಯೂ ಇರುವದಂನೋಡಿದಂತೇ ಇರುವನು. ಆತ್ಮದರ್ಶನವೂ ದುರ್ಲಭ

ವೆಂಬುವುದಂ ತೋರಿಸುವ ,,ಕಶ್ಚಿತ್,, ಶಬ್ದದಿಂದ ಆತ್ಮನಂ ನೋಡತಕ್ಕವನು ಲೋಕದಲ್ಲಿ ದುರ್ಲಭನೆಂದು ಹೇಳಿತು. ಆದುದರಿಂದಲೇ ಆತ್ಮನಿಂತವನೆಂದು ಹೇಳುವನೂ ದುರ್ಲಭನೆಂಬದಾಗಿಯೂ, ಆತ್ಮನಿಂತವನೆಂದು ಹೇಳಿದರೂ ಅದಂ ಕೇಳತಕ್ಕವನೂ ದುರ್ಲಭನೆಂಬದಾಗಿಯೂ, ಆತ್ಮನಂ ನೋಡಿದರೂ ಹೇಳಿದರೂ ಕೇಳಿದರೂ ಆತ್ಮಸಾಕ್ಷಾತ್ಕಾರ ವುಂಟಾಗುವದು ದುರ್ಲಭವೆಂಬದಾಗಿಯೂ, ಹೇಳಿತೆಂದು ತಾತ್ಪರ್ಯವು. (ಅಥವಾ) ಯಾವನಾದರೇ ಆತ್ಮಸ್ವರೂಪವಂ ನೋಡುತ್ತಾನೆಯೋ ಅವನೂ ಯಾವನಾದರೆ ಹೇಳುತ್ತಾನೆಯೋ ಕೇಳುತ್ತಾನೆಯೋ ಅಂತವನು ಅನೇಕ ಸಾವಿರ ಪ್ರಾಣಿಗಳಲ್ಲಿ ಒಬ್ಬನೇ ಇರುವನು. ಆದುದರಿಂದ ಆತ್ಮಬೋಧವು ದುರ್ಲಭವೆಂದಭಿಪ್ರಾಯವು॥೨೯॥

(ರಾ-ಭಾ) ಇದುವರಿಗೂ ಶರೀರವನ್ನೇ ಆತ್ಮನೆಂದು ತಿಳಿದರೂ ಶೋಕಪಡಲು ಕಾರಣವಿಲ್ಲವೆಂದು ಹೇಳಿ ಈ ಶ್ಲೋಕದಲ್ಲಿ ಶರೀರಕ್ಕಿಂತಲೂ ಭಿನ್ನಮಾದ ಆತ್ಮಸ್ವರೂಪವಂ ತತ್ವಮಾಗಿ ತಿಳಿಯುವದುಕೂಡ ದುರ್ಲಭವೆನ್ನುತ್ತಾನೆ. ತನಗಿಂತ ಇತರವಾದ ಸಮಸ್ತ ವಸ್ತುಗಳಿಗಿಂತಲೂ, ವಿಲಕ್ಷಣನಾಗಿರುವುದರಿಂದ ಆಶ್ಚರ್ಯದಂತಿರುವ ಪೂರ್ವೋಕ್ತ ಲಕ್ಷಣಮುಳ್ಳ ಈ ಆತ್ಮನನ್ನು ಅನೇಕ ಪ್ರಾಣಿಗಳಲ್ಲಿ ಮಹಾತಪಸ್ಸಿನಿಂದ ನಾಶಹೊಂದಿರುವ ಪಾಪವುಳ್ಳವನಾಗಿಯೂ, ಮಹಾಪುಣ್ಯಶಾಲಿಯಾಗಿಯೂ, ಇರುವ ಒಬ್ಬನುಮಾತ್ರವೇನೋಡುತ್ತಾನೇ, ಅಂತವನೊಬ್ಬನು ಮತ್ತೊಬ್ಬನಿಗೇ ಹೇಳುತ್ತಾನೇ, ಈ ಪ್ರಕಾರ ಯಾರೊ ಒಬ್ಬನೇ ಕೇಳುತ್ತಾನೇ, ಈಮೇರಿಗೇ ಕೇಳಿದರೂ ಆತ್ಮಸ್ವರೂಪವಂ ತತ್ವಮಾಗಿ ಯಾರೂ ಅರಿಯಲಾರರು. ,,ಆಶ್ಚರ್ಯವಚ್ಚ,, ಎಂಬುವ ಚಕಾರದಿಂದ ಆತ್ಮಸ್ವರೂಪವಂ ನೋಡುವ, ಹೇಳುವ, ಕೇಳುವ,ವರಲ್ಲಿಯೂಕೂಡ, ತತ್ವಸ್ಥಿತಿಯಿಂದ ಆತ್ಮಸ್ವರೂಪವಂ ನೋಡುವಂತವರೂ, ಹೇಳುವಂತವರೂ, ಕೇಳುವಂತವರೂ, ದು

ರ್ಗಭರೆಂಬಅರ್ಥವು ಸೂಚಿತವಾಗುವದು. ********॥ ೨೯ ॥

(ಶ್ರೀ) ಶಾಸ್ತ್ರವೇನು, ಆಶಾಸ್ತ್ರಾರ್ಥಗಳಂ ಬೋಧಿಸುವ ಗುರುಗಳ ಉಪದೇಶವೇನು, ಇವುಗಳಿಂದ ಪ್ರಾಪ್ತವಾಗುವ ಯೋಗದಿಂದ ಆತ್ಮನಂ ನೋಡುವ ಒಬ್ಬನು ಸರ್ವವ್ಯಾಪಕನಾಗಿಯೂ, ಜ್ಞಾನಾನಂದಸ್ವರೂಪನಾಗಿಯೂ, ಲೋಕವಿಲಕ್ಷಣನಾಗಿಯೂ, ತನ್ನಿಂದ ಯಾವಾಗಲೂ ನೋಡಲ್ಪಡದೇ ಇರುವುವನಾಗಿಯೂ, ಇರುವುದರಿಂದ ಆಶ್ಚರ್ಯಪಡುತ್ತಾನೆ. ಮತ್ತೊಬ್ಬನು ಶಾಸ್ತ್ರಾದಿಗಳಿಂದ ಆತ್ಮನು ಪೂರ್ವೋಕ್ತವಾದ ಸ್ವರೂಪವುಳ್ಳವನೆಂತಲೇ ತಾನು ತಿಳಿದುಕೊಂಡದ್ದನ್ನು ಮತ್ತೊಬ್ಬನಿಗೇ ಹೇಳುತ್ತಾನೆ. ಆಪ್ರಕಾರ ಹೇಳುವಲ್ಲಿ ತಾನು ತಿಳಿದುಹೇಳುವ ಆತ್ಮಸ್ವರೂಪವನ್ನು ಮತ್ತೊಬ್ಬನು ಸ್ಮರಿಸಿ ಆಶ್ಚರ್ಯಪಡುತ್ತಾನೆ. ಈಪ್ರಕಾರ ಹೇಳುವುದಂಕೇಳಿದವನು ಇಂತಹ ವಸ್ತುವುಂಟೋ ? ಎಂಬವಾಗಿ ಕೇಳಿದವಡನೇ ಆಶ್ಚರ್ಯಪಡುವುನು. ಈವೋರಿಗೇ ನೋಡಿದವನಾಗಲೀ, ನೋಡಿ ಹೇಳಿದವನಾಗಲೀ, ಹೇಳಿದ್ದನ್ನು ಕೇಳಿದವನಾಗಲೀ ನಿತ್ಯಾನಂದಸ್ವರೂಪನಾದ ಆತ್ಮನನ್ನು ಯಥಾರ್ಥವಾಗಿ ತಿಳಿದವನಲ್ಲವು.

ಮೂ॥ದೇಹೀ ನಿತ್ಯಮವಧ್ಯೋಽಯಂ ದೇಹೇ ಸರ್ವಸ್ಯಭಾರತ । ತಸ್ಮಾತ್ಸರ್ವಾಣಿ ಭೂತಾನಿ ನತ್ವಂ ಶೋಚಿತುಮರ್ಹಸಿ ॥ ॥೩೦॥

ಪ॥ ದೇಹೀ – ನಿತ್ಯಂ – ಅವಧ್ಯಃ – ಅಯಂ – ದೇಹೇ– ಸರ್ವಸ್ಯ – ಭಾರತ। ತಸ್ಮಾತ್ – ಸರ್ವಾಣಿ– ಭೂತಾನಿ– ನ – ತ್ವಂ– ಶೋಚಿತುಂ – ಅರ್ಹಸಿ ॥

ಅ॥ ಹೇ ಭಾರತ – ಎಲೈ ಅರ್ಜುನನೇ, ಸರ್ವಸ್ಯ – ಎಲ್ಲರ, ದೇಹೆ–ದೇಹವು, (ವಧ್ಯಮಾನೇಽಪಿ– ಕೊಲ್ಲಲ್ಪಟ್ಟರೂ,) ಅಯಂದೇಹೀ–ಈ ದೇಹಮುಳ್ಳ ಆತ್ಮನು, ನಿತ್ಯಂ–ಯಾವಾಗಲೂ, ಅವಧ್ಯಃ–ಕೊಲ್ಲಲ್ಪಡತಕ್ಕವನಲ್ಲವು, ತಸ್ಮಾತ್–ಆದುದರಿಂದ,ತ್ವಂ– ನೀನು, ಸರ್ವಾಣಿಭೂತಾನಿ– ಸರ್ವಪ್ರಾಣಿಗಳನ್ನು ಕುರಿತು, ಶೋಚಿತುಮ್ – ದುಃಖಪಡುವದಕ್ಕೇ, ನಾರ್ಹಸಿ– ಯೋಗ್ಯನಾಗಲಾರೆ. ॥ ೩೦॥

ತಾ॥ ಎಲೈ ಅರ್ಜುನನೇ ? ಈ ಭೀಷ್ಮಾದಿಗಳಿಗಾಗಿಯೋ ನಿನ್ನನ್ನು ದುಃಖಿಸಬೇಡವೆಂದು ಹೇಳಲಿಲ್ಲವು, ಮತ್ತು ದೇವತೆಗಳೇ

ಮೊದಲಾದ ಯಾವಪ್ರಾಣಿಗಳ ವಿಷಯದಲ್ಲಿಯೂ, ನೀನು ಶೋಕಿಸಬೇಡ. ದೇವಾದಿ ಸ್ಥಾವರಾಂತವಾದ ಶರೀರಗಳು ನಾನಾರೂಪಗಳಾಗಿದ್ದರೂ, ವಿಕಾರಹೊಂದುವ ಸ್ವಭಾವವೆಂಬುವುದು ಸರ್ವಶರೀರಗಳಲ್ಲಿಯೂ, ಸಮವಾಗಿರುವುದರಿಂದ ಸಮಸ್ತ ಶರೀರಗಳು ನಾಶಹೊಂದತಕ್ಕವುಗಳೇ. ಆದರೇ ಅವುಗಳಲ್ಲಿರುವ ಆತ್ಮಗಳಿಗೇ ಮಾತ್ರ ನಾಶವೆಂಬುವುದಿಲ್ಲವು. ॥೩೦॥

ಮೂ॥ ಸ್ವಧರ್ಮ ಮಪಿ ಚಾವೇಕ್ಷ್ಯ ನ ವಿಕಂಪಿತುಮ
ರ್ಹಸಿ । ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋಽ ನ್ಯತ್
ಕ್ಷತ್ರಿಯಸ್ಯ ನವಿದ್ಯತೇ ॥ ॥೩೧॥

ಪ॥ ಸ್ವಧರ್ಮಂ - ಅಪಿ - ಚ - ಅವೇಕ್ಷ್ಯ - ನ - ವಿಕಂಪಿತುಂ - ಅರ್ಹಸಿ।ಧರ್ಮ್ಯಾತ್ - ಹಿ - ಯುದ್ಧಾತ್ - ಶ್ರೇಯಃ - ಅನ್ಯತ್ - ಕ್ಷತ್ರಿಯಸ್ಯ - ನ - ವಿದ್ಯತೇ ।

ಅ॥ ಅಪಿಚ - ಮತ್ತೂನ್ನು, ಸ್ವಧರ್ಮಂ - ನಿನ್ನ ವರ್ಣಕ್ಕೆ ಉಚಿತವಾಗಿ ವಿಧಿಸಲ್ಪಟ್ಟ ಧರ್ಮವನ್ನು, ಅವೇಕ್ಷ್ಯ - ನೋಡಿ, ವಿಕಂಪಿತುಂ - ಚಲಿಸುವುದಕ್ಕೆ, ನಾರ್ಹಸಿ - ಯೋಗ್ಯನಾಗಲಾರೆ, ಕ್ಷತ್ರಿಯಸ್ಯ - ಕ್ಷತ್ರಿಯನಿಗೆ, ಧರ್ಮ್ಯಾತ್ - ಧರ್ಮಯುಕ್ತವಾದ, ಯುದ್ಧಾತ್ - ಯುದ್ಧಕ್ಕಿಂತಲೂ, ಅನ್ಯತ್ - ಬೇರೆ, ಶ್ರೇಯಃ - ಉತ್ತಮವಾದದ್ದು, ನವಿದ್ಯತೇ - ಇರುವುದಿಲ್ಲವು. ॥೩೧॥

(ರಾ-ಭಾ) ಮತ್ತು ಕ್ಷತ್ರಿಯನಿಗೇ ಅನುಷ್ಠಿಸಬೇಕಾದ ಕರ್ಮಗಳಲ್ಲಿ ಯುದ್ಧವೆಂಬುವುದು ಪ್ರಾಣಿಹಿಂಸಾರೂಪವಾಗಿದ್ದರೂ ಧರ್ಮಯುಕ್ತವಾಗಿಯೂ, ನ್ಯಾಯದಿಂದ ಪ್ರವೃತ್ತವಾಗಿಯೂ, ಇರುವುದರಿಂದ ಅದಕ್ಕಿಂತಲೂ ಶ್ರೇಷ್ಠವಾದ ಕರ್ಮವು ಯಾವದೂ ಇಲ್ಲವಾದುದರಿಂದ ಅದಂ ಅಗ್ನಿಷ್ಟೋಮಿಯಾದಿ ಯಾಗದಂತೇ ಮನಸ್ಸು ಚಲಿಸದೆ ಮಾಡಬೇಕು. "ಶೌರ್ಯಂತೇಜೋ ಧೃತಿರ್ದಾಕ್ಷ್ಯಂ ಯುದ್ಧೇಚಾಪ್ಯಪಲಾಯನಮ್ । ದಾನಮೀಶ್ವರಭಾವಶ್ಚ ಕ್ಷಾತ್ರಂ ಕರ್ಮಸ್ವಭಾವಜಮ್" (೧೮-ಅ॥೪೩ನೇ ಶ್ಲೋ) ಎಂಬುವುದಾಗಿ ಮುಂದೇ ಕ್ಷತ್ರಿಯರ ಸ್ವಧರ್ಮವು ವಿವರಿಸಲ್ಪಡುವುದು. ಅಗ್ನೀಷೋಮೀಯಾದಿ ಯಾಗಗಳಲ್ಲಿ ಪಶುವನ್ನು ಹಿಂಸಿಸಿದರೂ (ರೋಗಗ್ರಸ್ತನಾದವನಿಗೇ ವೈದ್ಯನು ಮಾಡುವ ಚಿಕಿತ್ಸೆಯು ತತ್ಕಾಲದಲ್ಲಿ ಅಪ್ರಿಯವಾಗಿ ತೋರಿದರೂ ಮುಂದೆ ಶುಭೋದರ್ಕವಾಗುವಂತೆ) ಆ ಪಶು

ಹೀಗೇ ಪಶುರೂಪವಾದ ಹೇಯ ವಾಗಿರುವ ಮೇಕೆಮೊದಲಾದ ಶರೀರವು ಹೋಗಿ ದಿವ್ಯಶರೀರವು ಸ್ವರ್ಗಾದಿಭೋಗವೂ ಪ್ರಾಪ್ತವಾಗುವುವೆಂದು ಯಜ್ಞಗಳಲ್ಲಿ ಪಶುಸಂಜ್ಞಪನ ಮಂತ್ರವಾದ ಶ್ರುತಿಯಲ್ಲಿ ಹೇಳಿರುವುದರಿಂದ ಯಾಗೀಯ ಪಶುಹಿಂಸೆಯು ಹ್ಯಾಗೆ ಹಿಂಸಾರೂಪವಾಗುವುದಿಲ್ಲವೋ; ಅಪ್ರಕಾರವೇ ಯುದ್ಧದಲ್ಲಿ ಮೃತರಾಗುವಂತವರಿಗೂ ‟ವಾಸಾಂಸಿಜೀರ್ಣಾನಿ” ಇತ್ಯಾದಿ ಶ್ಲೋಕಗಳಲ್ಲಿ ವಿಲಕ್ಷಣ ಶರೀರವೂ ಸ್ವರ್ಗಭೋಗವೂ ಪ್ರಾಪ್ತವಾಗುವುದೆಂದು ಹೇಳಿರುವುದಂ ನೋಡಿದರೆ ಯುದ್ಧದಲ್ಲಿ ಪ್ರಾಣಿಗಳಿಂ ಹಿಂಸೆಮಾಡುವುದೂ ಕ್ಷತ್ರಿಯರಿಗೆ ಸ್ವಧರ್ಮವಾದುದರಿಂದ ಅವಶ್ಯವಾಗಿ ಯುದ್ಧವಂಮಾಡುವುದು ಉಚಿತವಾಗಿರುವುದು. ॥೩೧॥

ಮೂ ॥ ಯದೃಚ್ಛಯಾ ಚೋಪಪನ್ನಂ ಸ್ವರ್ಗದ್ವಾ
ರ ಮಪಾವೃತಂ । ಸುಖಿನಃ ಕ್ಷತ್ರಿಯಾಃ ಪಾರ್ಥ ಲ
ಭಂತೇ ಯುದ್ಧ ಮೀದೃಶಮ್ ॥ ॥೩೨॥

ಪ॥ ಯದೃಚ್ಛಯಾ – ಚ – ಉಪಪನ್ನಂ – ಸ್ವರ್ಗದ್ವಾರಂ – ಅಪಾವೃತಮ್ । ಸುಖಿನಃ – ಕ್ಷತ್ರಿಯಾಃ – ಪಾರ್ಥ – ಲಭಂತೇ – ಯುದ್ಧಂ – ಈದೃಶಮ್ ॥

ಅ॥ ಹೇಪಾರ್ಥ – ಎಲೈ ಅರ್ಜುನನೇ ! ಯದೃಚ್ಛಯಾ – ತಾನಾಗಿಯೇ, ಉಪಪನ್ನಮ್ – ಪ್ರಾಪ್ತವಾಗಿಯು, ಅಪಾವೃತಂ – ತೆರೆಯಲ್ಪಟ್ಟಿರುವ, ಸ್ವರ್ಗದ್ವಾರಂ ಚ – ಮೋಕ್ಷದ್ವಾರವಾಗಿಯೂ ಇರುವ, ಈದೃಶಂ – ಇಂತಹ, ಯುದ್ಧಂ – ಯುದ್ಧವನ್ನು, (ಯೇ – ಯಾವ) ಕ್ಷತ್ರಿಯಾಃ – ಕ್ಷತ್ರಿಯರು, ಲಭಂತೇ – ಹೊಂದುವರೊ, (ತೇ – ಅವರು) ಸುಖಿನಃ – ಸುಖವುಳ್ಳವರು ॥೩೨॥

ತಾ॥ ಎಲೈ ಪಾರ್ಥನೇ ಅನ್ಯಾದೃಶವಾದ ಸುಖಕ್ಕೆ ಸಾಧನವಾಗಿಯೂ, ಮೋಕ್ಷದ್ವಾರದಂತಿರುವದಾಗಿಯೂ, ಅಯತ್ನಲಭ್ಯವಾಗಿಯು ಇರುವ, ಈ ಯುದ್ಧವು, ಪುಣ್ಯಶಾಲಿಗಳಾದ ಕ್ಷತ್ರಿಯರುಗಳಿಗೇನೆ ಪ್ರಾಪ್ತವಾಗುವುದು. ॥೩೨॥

ಮೂ ॥ ಅಥಚೇತ್ತ್ವಮಿಮಂಧರ್ಮ್ಯಂ ಸಂಗ್ರಾಮಂ
ನಕರಿಷ್ಯಸಿ । ತತಸ್ಸ್ವಧರ್ಮಂ ಕೀರ್ತಿಂಚ ಹಿತ್ವಾ
ಪಾಪ ಮವಾಪ್ಸ್ಯಸಿ ॥ ॥೩೩॥

ಪ॥ ಅಥ- ಚೇತ್- ತ್ವಂ-ಇಮಂ- ಧರ್ಮ್ಯಂ-ಸಂಗ್ರಾಮಂ - ನ- ಕರಿಷ್ಯಸಿ । ತತಃ- ಸ್ವಧರ್ಮಂ- ಕೀರ್ತಿಂ-ಚ- ಹಿತ್ವಾ- ಪಾಪಂ-ಅವಾಪ್ಸ್ಯಸಿ ॥

ಅ॥ ಅಥ -ಮೋಕ್ಷಪ್ರಾಪ್ತಿರೂಪವಾದ ಪ್ರಯೋಜನವು ತ್ಯಾಗವಾಡಿದವಾತ್ರವಲ್ಲದೆ, ತ್ವಂ- ನೀನು, ಧರ್ಮ್ಯಂ-ಧರ್ಮಯುಕ್ತವಾದ, ಇಮಂಸಂಗ್ರಾಮಂ-ಈ ಯುದ್ಧವನ್ನು, ನಕರಿಷ್ಯಸಿಚೇತ್ - ಮಾಡದೇಹೋದೆಯೇ ಆದರೆ, ತತಃ- ಆದರಿಂದ, ಸ್ವಧರ್ಮಂ- ನಿನ್ನ ಸ್ವಧರ್ಮವನ್ನು, ಕೀರ್ತಿಂಚ - ಖ್ಯಾತಿಯನ್ನು, (ಶಂ- ಮಹಾದೇವರೇ ಮೊದಲಾದವರೊಡನೆ ಯುದ್ಧವಂಮಾಡಿ ಸಂಪಾದಿಸಿರುವ ಕೀರ್ತಿಯನ್ನು,) ಹಿತ್ವಾ - ಬಿಟ್ಟು, ಪಾಪಂ- ಸ್ವಧರ್ಮವನ್ನು ಬಿಟ್ಟಿರುವದರಿಂದುಂಟಾದ ಪಾಪವನ್ನು, ಅವಾಪ್ಸ್ಯಸಿ- ಹೊಂದುತ್ತೀಯೆ. ॥೩೩॥

ತಾ॥ ಕ್ಷತ್ರಿಯನಿಗೇ ಧರ್ಮವೆಂದು ಹೇಳಲ್ಪಟ್ಟ ಈ ಯುದ್ಧವನ್ನು ಅಜ್ಞಾನದಿಂದ ನೀನು ಮಾಡದೆ ತಪ್ಪಿಹೋದರೆ ಉಪಕ್ರಮಿಸಿದ ಕರ್ಮವಂಮಾಡದೇ ಇರುವುದರಿಂದ ಅತುಲ್ಯವಾದ ಸುಖಕೀರ್ತಿಗಳನ್ನು ಕಳದು ನಿರತಿಶಯವಾದ ಪಾಪವನ್ನು ಹೊಂದುತ್ತೀಯೆಂಬಭಿಪ್ರಾಯವು. ॥೩೩॥

ಮೂ॥ ಅಕೀರ್ತಿಂಚಾಪಿ ಭೂತಾನಿ ಕಥಯಿಷ್ಯಂತಿ ತೇ ಽ ವ್ಯಯಾಮ್ । ಸಂಭಾವಿತಸ್ಯ ಚಾಕೀರ್ತಿರ್ಮರಣಾ ದತಿರಿಚ್ಯತೇ ॥ ॥೩೪॥

ಪ॥ ಅಕೀರ್ತಿಂ -ಚ- ಅಪಿಭೂತಾನಿ-ಕಥಯಿಷ್ಯಂತಿ- ತೇ-ಅವ್ಯಯಾಂ । ಸಂಭಾವಿತಸ್ಯ - ಚ-ಅಕೀರ್ತಿಃ - ಮರಣಾತ್ - ಅತಿರಿಚ್ಯತೇ ॥

ಅ॥ ಅಪಿಚ - ಮತ್ತೂನು, ಭೂತಾನಿ- ಪ್ರಾಣಿಗಳು, ತೇ-ನಿನ್ನ, ಕೀರ್ತಿಂ - ಅಪಯಶಸ್ಸನ್ನು, ಅವ್ಯಯಾಂ - ನಾಶರಹಿತವಾದದ್ದನ್ನಾಗಿ, ಕಥಯಿಷ್ಯಂತಿ- ಹೇಳುವರು, ಸಂಭಾವಿತಸ್ಯ - ಬಹುಮತಿಸಲರ್ಹನಾದವನಿಗೇ, ಅಕೀರ್ತಿಃ- ಅಪಕೀರ್ತಿಯು, ಮರಣಾತ್- ಮರಣಕ್ಕಿಂತಲೂ, ಅತಿರಿಚ್ಯತೇ - ಅಧಿಕವಾಗುವುದು. ॥೩೪॥

ತಾ॥ ನಿರತಿಶಯವಾದ ಸುಖಕೀರ್ತಿಗಳಿಗೆ ಹಾನಿಮಾತ್ರವಲ್ಲದೆ ಅರ್ಜುನನು ಯುದ್ಧಮಾಡಲುಪಕ್ರಮಿಸಿ ಕೈಲಾಗದೇ ಓಡಿಹೋದನೆಂಬ ಈ ಅಕೀರ್ತಿಕರವಾದ ಮಾತನ್ನು ಸರ್ವಕಾಲದಲ್ಲಿಯೂ, ಸರ್ವದೇಶಗಳಲ್ಲಿಯೂ ಅಸಮರ್ಥರಾದ ಸರ್ವಪ್ರಾಣಿಗಳೂ ಸಮರ್ಥರಾದ ಸರ್ವಪ್ರಾಣಿಗಳೂ ಕೂಡ ಹೇಳುವರು. " ಆದರೇ ಅದರಿಂದ ನಮಗೇನು ? ಎನ್ನುವಿಯೊ,, ಅಂದರೇ ಶೌರ್ಯವೀರ್ಯಪರಾ

ಕ್ರಮಾದಿಗಳಿಂದ ಸರ್ವ ಶ್ಲಾಘನೀಯನಾದವನಿಗೆ ಅಪಕೀರ್ತಿ ಬರುವು ದಕ್ಕಿಂತಲೂ ಮರಣವೇ ಉತ್ತಮವಾಗುವುದು. ಇಂತಹ ಅಪಕೀರ್ತಿ ಯಂ ಪಡೆಯುವದಕ್ಕಿಂತಲೂ ಮರಣವಂ ಹೊಂದುವುದೇ ಉತ್ತಮ ವೆಂಬಭಿಪ್ರಾಯವು॥ ೩೪॥

ಮೂ॥ ಭಯಾ ದ್ರಣಾ ದುಪರತಂ ಮಂಸ್ಯಂತೇ ತ್ವಾಂ
ಮಹಾರಥಾಃ । ಯೇಷಾಂಚ ತ್ವಂ ಬಹುಮತೋ ಭೂ
ತ್ವಾಯಾಸ್ಯಸಿ ಲಾಘವಮ್ ॥ ॥೩೫॥

ಪ॥ ಭಯಾತ್ - ರಣಾತ್ - ಉಪರತಂ - ಮಂಸ್ಯಂತೇ - ತ್ವಾಂ - ಮಹಾರಥಾಃ। ಯೇಷಾಂ - ಚ - ತ್ವಂ - ಬಹುಮತಃ - ಭೂತ್ವಾ - ಯಾಸ್ಯಸಿ - ಲಾಘವಂ ॥

ಅ॥ ತ್ವಂ - ನೀನು, ಯೇಷಾಂ - ಯಾವಶೂರರಿಗೆ, ಬಹುಮತೋಭೂತ್ವಾ - ಗೌರವಿಸಲರ್ಹನಾಗಿದ್ದೆಯೋ, (ತೇ) ಮಹಾರಥಾಃ-(ಆ) ಮಹಾರಥಿಕರು, ತ್ವಾಂ- ನಿನ್ನನ್ನು, ಭಯಾತ್ - ಭಯದಿಂದ, ರಣಾತ್ - ಯುದ್ಧಪ್ರಸೆಯಿಂದ, ಉಪರತಂ- ವಿರಾಮಹೊಂದಿದವನನ್ನಾಗಿ, ಮಸ್ಯಂತೇ-ಯೆಣಿಸುತ್ತಾರೆ.। ॥೩೫॥

ತಾ॥ ಬಂಧುಸ್ನೇಹದಿಂದಲೂ, (ಇವರಂ ಕೊಲ್ಲುವದು ಹ್ಯಾಗೆ, ಎಂಬ) ಕಾರುಣ್ಯದಿಂದಲೂ ಯುದ್ಧದಿಂದ ನಿವೃತ್ತನಾದರೆ ನನಗೆ ಅಪಕೀರ್ತಿಯು ಹ್ಯಾಗೆಬರುವುದು ? ಅಂದರೆ ಉತ್ತರವಂ ಹೇಳುತ್ತಾನೆ. ಶೂರನಾಗಿರುವ ಶತ್ರುವು ಭಯದಿಂದಲ್ಲದೆ ಬಂಧು ಸ್ನೇಹಾದಿರೂಪ ವಾಗಿರುವ ಕಾರಣಗಳಿಂದ ಯುದ್ಧವಂಬಿಟ್ಟು ಓಡಿಹೋಗುವದಿಲ್ಲ ವೆಂಬೀ ಸಂದರ್ಭವು ಲೋಕಪ್ರಸಿದ್ಧವಾಗಿರುವುದು. ಆದುದರಿಂದ ನಿನ್ನನ್ನು ಶೂರನಾದ ಶತ್ರುವೆಂಬದಾಗಿ ಇದುವರಿಗೂ ತಿಳಿದಿರುವಂತವರಾದ ಕರ್ಣ ದುರ್ಯೋಧನಾದಿ ಮಹಾರಥರು ನಿನ್ನನ್ನೀಗಭ ಯದಿಂದ ಓಡಿಹೋಗಿರುವಂತವನನ್ನಾಗಿ ತಿಳಿದು ಲಾಘವವನ್ನು ಎಣಿಸುವುವರಲ್ಲದೆ ಬೇರೇವಿಧವಾಗಿ ಎಣಿಸಲಾರರು. ॥೩೫॥

ಮೂ॥ ಅವಾಚ್ಯವಾದಾಂಶ್ಚ ಬಹೂ ನ್ವದಿಷ್ಯಂತಿ ತ
ವಾಹಿತಾಃ । ನಿಂದಂತ ಸ್ತವಸಾಮರ್ಥ್ಯಂ ತತೋ
ದುಃಖತರಂ ನು ಕಿಮ್ ॥ ॥೩೬॥

ಪ। ಅವಾಚ್ಯವಾದಾನ್ - ಚ - ಬಹೂನ್ - ವದಿಷ್ಯಂತಿ - ತವ - ಅಹಿತಾಃ । ನಿಂದಂತಃ - ತವ - ಸಾಮರ್ಥ್ಯಂ - ತತಃ - ದುಃಖತರಂ - ನು-ಕಿಂ ॥

ಅ॥ ತವ- ನಿನ್ನ, ಅಹಿತಾಃ - ಶತ್ರುಗಳು, ತವಸಾಮರ್ಥ್ಯಂ - ನಿನ್ನ ಸಾಮರ್ಥ್ಯವನ್ನು,ನಿಂದಂತಃ-ನಿಂದಿಸುವಂತವರಾಗಿ, ಬಹೂನ್ - ಅನೇಕಗಳಾದ, ಅವಾಚ್ಯವಾದಾಂಶ್ಚ - ಹೇಳಲನರ್ಹವಾದ ಮಾತುಗಳನ್ನೂ, ವದಿಷ್ಯಂತಿ - ಹೇಳುವರು, ತತಃ- ಅದಕ್ಕಿಂತಲೂ, ದುಃಖತರಂ -ಅಧಿಕದುಃಖವು, ಕಿಂನು -ಏನಿರುವುದು ॥೩೬॥

ತಾ॥ ಮತ್ತು ಶೂರರಾದ ನಮ್ಮಗಳ ಮುಂದೇ ಈ ಪಾರ್ಥನು ಕ್ಷಣಕಾಲವೂ ಕೂಡನಿಲ್ಲಲು ಹ್ಯಾಗೆ ಶಕ್ತನಾಗುವನು ? ನಮ್ಮಗಳಸನ್ನಿಧಾನಕ್ಕಿಂತಲೂ ಬೇರೇಸ್ಥಾನಗಳಲ್ಲಿ ಇವನ ಸಾಮರ್ಥ್ಯವಲ್ಲದೆ ನಮ್ಮಗಳ ಮುಂದೆ ಇವನ ಸಾಮರ್ಥ್ಯವು ಕಾರ್ಯಕರವಾಗಲಾರದು, ಎಂಬಿದೇ ಮೊದಲಾದ ಮಾತುಗಳಿಂದ ನಿನ್ನ ಸಾಮರ್ಥ್ಯವನ್ನು ನಿಂದಿಸುವಂತವರಾಗಿ ಶೂರರಾದವರುಗಳ ವಿಷಯದಲ್ಲಿ ಹೇಳಲನರ್ಹವಾದ ಅನೇಕಮಾತುಗಳನ್ನು, ನಿನ್ನ ಶತ್ರುಗಳಾದ ಧೃತರಾಷ್ಟ್ರರಾಜನಮಕ್ಕಳು ಹೇಳುವರು. ಅದಕ್ಕಿಂತಲೂ ನಿನಗೆ ಅಧಿಕದುಃಖವು ಯಾವದು ? ಇಂತಹ ಅವಾಚ್ಯವಾಕ್ಯಗಳಂ ಕೇಳಿ ಬದುಕುವದಕ್ಕಿಂತಲೂ ಮರಣ ಹೊಂದುವುದೇ ಉಚಿತವೆಂದು ನನಿಗೇನೆ ತೋರುವುದು. ॥೩೬॥

ಮೂ॥ ಹತೋವಾ ಪ್ರಾಪ್ಸ್ಯಸೇ ಸ್ವರ್ಗಂ ಜಿತ್ವಾವಾ
ಭೋಕ್ಷ್ಯಸೇ ಮಹೀಂ । ತಸ್ಮಾದುತ್ತಿಷ್ಠಕೌಂತೇಯ
ಯುದ್ಧಾಯ ಕೃತನಿಶ್ಚಯಃ ॥ ॥೩೭॥

ಪ॥ ಹತಃ - ವಾ-ಪ್ರಾಪ್ಸ್ಯಸೆ -ಸ್ವರ್ಗಂ - ಜಿತ್ವಾ - ವಾ - ಭೋಕ್ಷ್ಯಸೇ- ಮಹೀಂ । ತಸ್ಮಾತ್ - ಉತ್ತಿಷ್ಠ - ಕೌನ್ತೇಯ- ಯುದ್ಧಾಯ - ಕೃತನಿಶ್ಚಯಃ ।

ಅ॥ ಹೇ ಕೌಂತೇಯ - ಎಲೈ ಅರ್ಜುನನೇ ! ಹತೋವಾ - ಸಂಹರಿಸಲ್ಪಟ್ಟರೋ, ಸ್ವರ್ಗಂ - ಸ್ವರ್ಗವನ್ನು, ಪ್ರಾಪ್ಸ್ಯಸೇ - ಹೊಂದುತ್ತಿಯೆ ; ( "ಪ್ರಾಪ್ಸ್ಯಸಿ" ಎಂಬದಾಗಿ ಶ್ರೀಧರೀಯಪಾಠವು ) ಜಿತ್ವಾವಾ-ಜಯಿಸಿದರೊ,ಮಹೀಂ- ರಾಜ್ಯವನ್ನು, ಭೋಕ್ಷ್ಯಸೇ - ಅನುಭವಿಸುತಿಯೆ, ತಸ್ಮಾತ್ - ಅದುಪರಿಂದ, ಯುದ್ಧಾಯ - ಯುದ್ಧಮಾಡುವುದಕ್ಕೋಸ್ಕರ,ಕೃತ ನಿಶ್ಚಯಃ-ನಿಶ್ಚಯವುಳ್ಳವನಾಗಿ,ಉತ್ತಿಷ್ಠ-ಏಳು॥

ತಾ॥ ಆದುದರಿಂದ ಶೂರನಾದವನು ಶತ್ರುಗಳಂ ಸಂಹರಿಸಿದರೂ,ಅವರಿಂದ ತಾನು ಕೊಲ್ಲಲ್ಪಟ್ಟರೂ, ಈ ಯೆರಡೂ, ಉತ್ತಮವೇ ಎನ್ನುತ್ತಾನೆ-ಧರ್ಮಯುದ್ಧದಲ್ಲಿ ಶತ್ರುಗಳಿಂದ ಕೊಲ್ಲಲ್ಪಟ್ಟರೇ ಪರಲೋಕದಲ್ಲಿ ಉತ್ತಮವಾದ ಸುಖ ವುಂಟಾಗುವುದು. ಅವ

ಶ್ರುಗಳಂ ಜಯಿಸಿದರೇ ಈ ಲೋಕದಲ್ಲಿ ನಿಷ್ಕಂಟಕವಾದ ರಾಜ್ಯಸುಖವೂ ಉಂಟಾಗುವುದು. ಆದುದರಿಂದ ಫಲಾಭಿಸಂಧಿರಹಿತವಾದ ಯುದ್ಧವೆಂಬ ಸ್ವಧರ್ಮವು ನಿಶ್ಶ್ರೇಯಸವೆಂಬ ಮೋಕ್ಷಕ್ಕೆ ಸಾಧನಭೂತವಾಗಿರುವುದರಿಂದ ಅದಂ ಮಾಡಿದರೆ ಮೋಕ್ಷವಂ ಹೊಂದುತ್ತೀಯೆ. ಆದುದರಿಂದಲೇ ಈ ಯುದ್ಧವು ಪರಮಪುರುಷಾರ್ಥವೆಂಬ ಮೋಕ್ಷಕ್ಕೆ ಸಾಧನಭೂತವಾಗಿರುವುದೆಂದು ತಿಳಿದು ಯುದ್ಧಸನ್ನಾಹವಂ ಮಾಡು. ಕುಂತೀಪುತ್ರನಾದ ನಿನಗೇ ಈ ರೀತಿಯಾಗಿ ಮಾಡುವುದೇ ಯುಕ್ತವಾಗಿರುವುದೆಂದಭಿಪ್ರಾಯವು. ॥೩೭॥

ಮೂ॥ ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ
ಜಯಾಜಯೌ। ತತೋ ಯುದ್ಧಾಯ ಯುಜ್ಯಸ್ವ ನೈ
ವಂ ಪಾಪ ಮವಾಪ್ಸ್ಯಸಿ ॥ ॥೩೮॥

ಪ॥ ಸುಖದುಃಖೇ – ಸಮೇ – ಕೃತ್ವಾ – ಲಾಭಾಲಾಭೌ – ಜಯಾಜಯೌ । ತತಃ – ಯುದ್ಧಾಯ – ಯುಜ್ಯಸ್ವ – ನ – ಏವಮ್ – ಪಾಪಂ – ಅವಾಪ್ಸ್ಯಸಿ ॥

ಅ॥ ಸುಖದುಃಖೇ – ಸುಖದುಃಖಗಳನ್ನು, ಸಮೇ – ಸಮವಾಗಿ, ಕೃತ್ವಾ – ಮಾಡಿ, ಲಾಭಾಲಾಭೌ – ಲಾಭನಷ್ಟಗಳನ್ನು, ಜಯಾಜಯೌ – ಜಯಾಪಜಯಗಳನ್ನು, ಸಮೌ – ಸಮವಾಗಿ, ಕೃತ್ವಾ – ಮಾಡಿ, ತತಃ – ಅನಂತರದಲ್ಲಿ, ಯುದ್ಧಾಯ – ಯುದ್ಧಕ್ಕೋಸ್ಕರ, ಯುಜ್ಯಸ್ವ – ಪ್ರಯತ್ನಪಡುವಂತವನಾಗು, ಏವಂಚೇತ್ – ಇಂತಹ ನಿಶ್ಚಯಮುಳ್ಳವನಾದರೆ, ಪಾಪಂ – ಪಾಪವನ್ನು, ನಾವಾಪ್ಸ್ಯಸಿ – ಹೊಂದಲಾರೆ.॥೩೮॥

ತಾ॥ ಮೋಕ್ಷಾಪೇಕ್ಷೆಯುಳ್ಳವನ ಯುದ್ಧಾನುಷ್ಠಾನ ಪ್ರಕಾರವಂ ಹೇಳುತ್ತಾನೇ – ಈರೀತಿಯಾಗಿ ಆತ್ಮನು ದೇಹಸ್ವಭಾವದೊಡನೆ ಸೇರದೆ ಪ್ರತ್ಯೇಕವಾಗಿ ನಿತ್ಯವಾಗಿರುವುದೆಂದು ತಿಳಿದು ಯುದ್ಧದಲ್ಲಿ ಅವಶ್ಯವಾಗಿ ಪ್ರಾಪ್ತವಾಗುವ ಶಸ್ತ್ರಪಾತಾದಿಗಳಿಂದುಂಟಾಗುವ, ಸುಖ ದುಃಖಗಳೇನು, ಲಾಭನಷ್ಟಗಳೇನು, ಜಯಾಪಜಯಗಳೇನು, ಇವುಗಳಲ್ಲಿ ಮನೋವ್ಯಾಕುಲವಂ ಹೊಂದದೇ ಸ್ವರ್ಗಾದಿ ಫಲಾಪೇಕ್ಷಾರಹಿತನಾಗಿ ಇದು ಅವಶ್ಯವಾಗಿ ಮಾಡತಕ್ಕದ್ದೆಂದು ಯುದ್ಧವನ್ನು ಮಾಡಲುಪಕ್ರಮಿಸುವಂತವನಾಗು. ಈ ಪ್ರಕಾರವಾಡಿದರೆ ಪಾಪವನ್ನು ಅಂದರೆ ದುಃಖರೂಪವಾದ ಸಂಸಾರವನ್ನು ಹೊಂದುವದಿಲ್ಲವು ಸಂಸಾರಬಂಧಕ್ಕೆ ವಶನಾಗದೇ ಪರಮಪುರುಷಾರ್ಥವಾದ ಮೋಕ್ಷವನ್ನು ಹೊಂದುತೀಯೆ. ॥೩೮॥

ಮೂ॥ಏಷಾತೇಽಭಿಹಿತಾಸಾಂಖ್ಯೇ ಬುದ್ಧಿ ರ್ಯೋಗೇತ್ವಿ
ಮಾಂಶೃಣು । ಬುಧ್ಯಾ ಯುಕ್ತೋ ಯಯಾ ಪಾರ್ಥ
ಕರ್ಮಬಂಧಂ ಪ್ರಹಾಸ್ಯಸಿ॥ ॥೩೯

ಪ॥ ಏಷಾ – ತೇ – ಅಭಿಹಿತಾ – ಸಾಂಖ್ಯೇ – ಬುದ್ಧಿಃ – ಯೋಗೇ – ತು – ಇಮಾಂ – ಶೃಣು । ಬುದ್ಧ್ಯಾ – ಯುಕ್ತಃ – ಯಯಾ – ಪಾರ್ಥ – ಕರ್ಮಬಂಧಂ–ಪ್ರಹಾಸ್ಯಸಿ ॥

ಅ॥ಹೇಪಾರ್ಥ–ಎಲೈ ಅರ್ಜುನನೇ! ಸಾಂಖ್ಯೇ – ಆತ್ಮತತ್ವ ಜ್ಞಾನವಿಚಾರದಲ್ಲಿ, ಏಷಾ–ಈ, ಬುದ್ಧಿಃ – ಬುದ್ಧಿಯು, ತೇ– ನಿನಗೆ, ಅಭಿಹಿತಾ –ಹೇಳಲ್ಪಟ್ಟಿತು,ಯಯಾ–ಯಾವ,ಬುದ್ಧ್ಯಾ – ಬುದ್ಧಿಯೊಡನೆ, ಯುಕ್ತಃ – ಕೂಡಿದವನಾದರೆ, ಕರ್ಮಬಂಧಂ – ಕರ್ಮದಿಂದುಂಟಾದ ಬಂಧವನ್ನು, ಪ್ರಹಾಸ್ಯಸಿ – ಬಿಟ್ಟುಬಿಡುವಿಯೊ ನಿ (ತಾಂ– ಅಂತಹ ) ಯೋಗೇತು ಆತ್ಮ ತತ್ವಜ್ಞಾನಕ್ಕೆ ಕಾರಣವಾದ ಕರ್ಮಯೋಗದಲ್ಲಿ, ಇಮಾಂ– ಮುಂದೇ ಹೇಳಲ್ಪಡುವ ಬುದ್ಧಿಯನ್ನು, ಶೃಣು – ಕೇಳು. ॥೩೯॥

(ಶಂ–ಭಾ) ಈ ದ್ವಿತೀಯಾಧ್ಯಾಯದ, ೧೧ ನೇ ಶ್ಲೋಕದಮೊದಲು, ೩೦ನೇ ಶ್ಲೋಕದವರಿಗೂ ಆತ್ಮತತ್ವವನ್ನು ತಿಳಿಯಪಡಿಸುವ ಯೋಗವು ಹೇಳಲ್ಪಟ್ಟಿತು. ‟ ಸ್ವಧರ್ಮಮಪಿಚಾವೇಕ್ಷ್ಯ ” ಎಂಬುವ, ೩೧ನೇ ಶ್ಲೋಕದ ಮೊದಲು, ೩೮ನೇ ಶ್ಲೋಕದವರಿಗೂ ಅರ್ಜುನನಿಗೆ ಶೋಕ ಮೋಹಾದಿಗಳನ್ನು ಹೋಗಲಾಡಿಸಲು ಲೌಕಿಕನ್ಯಾಯವು ಪ್ರದರ್ಶಿತವಾಯಿತು. ಇದು ಪ್ರಧಾನಾಂಶವಲ್ಲವಾದ ಪ್ರಯುಕ್ತ, ಪ್ರಕೃತವಾದ ಪರಮಾರ್ಥೋಪದೇಶವನ್ನು ಈ ಶ್ಲೋಕದಿಂದ ಉಪಸಂಹಾರಮಾಡಿ, ೪೦ನೇ ಶ್ಲೋಕದಿಂದ೫೧ನೇ ಶ್ಲೋಕದವರಿಗೂ ಕರ್ಮಬಂಧಗಳನ್ನು ನಿವೃತ್ತಿಮಾಡಿ ಸಾಕ್ಷಾನ್ಮೋಕ್ಷಸಾಧನವಾದ ಜ್ಞಾನವಂ ಹುಟ್ಟಿಸುವ ಕರ್ಮಯೋಗವಂ ಪರಮಾತ್ಮನು, ಹೇಳುತ್ತಾನೆ =‟ ಆದರೇ ಕರ್ಮಜ್ಞಾನನಿಷ್ಠೆಗಳೆರಡೂ ಮುಂದೇ ವಿವರಿಸಿ ಹೇಳಲ್ಪಡುವುದರಿಂದ ಇಲ್ಲಿಕೂಡ ಕರ್ಮಜ್ಞಾನನಿಷ್ಠೆಗಳೆರಡೂ ವಿಭಾಗಿಸಿ ಹೇಳಲ್ಪಡುವುದರಿಂದ ಪ್ರಯೋಜನವಿಲ್ಲ,, ವೆಂದು ಶಂಕಿಸದೇ ಪ್ರಥಮದಲ್ಲಿ ಕರ್ಮಜ್ಞಾನನಿಷ್ಠೆಗಳಂ ವಿಭಜಿಸಿ ಹೇಳುವುದರಿಂದ ‟ ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಮ್ ( ೩ಅ–೩ ಶ್ಲೋ॥ ಎಂಬದಾಗಿ ಮುಂದಿನ ಅಧ್ಯಾಯದಲ್ಲಿ ವಿವರಿಸಲ್ಪಡುವ ಕರ್ಮ ಜ್ಞಾನನಿಷ್ಠೆಗಳಂ ತಿಳಿಯಪಡಿಸುವ ಈ ಶಾ

ಸ್ತ್ರದಲ್ಲಿ ಸುಖವಾಗಿ ಜನಗಳಿಗೆ ಪ್ರವೃತ್ತಿಯುಂಟಾಗುವುದಲ್ಲದೆ ಶಾಸ್ತ್ರಶ್ರವಣವಂ ಮಾಡತಕ್ಕವರಿಗೂ ವಿಷಯವಂವಿಭಾಗಿಸಿ ಹೇಳುವುದರಿಂದ ಶಾಸ್ತ್ರಾರ್ಥವೂ ಸುಖಬೋಧವಾಗುವುದೆಂದರಿಯಬೇಕು.

ಸಂಸಾರಹೇತುಗಳಾದ ಶೋಕ ಮೋಹಾದಿ ದೋಷಗಳನ್ನು ಪರಿಹರಿಸುವದಾಗಿಯೂ, ಪರಮಾರ್ಥವಸ್ತು ವಿಷಯವಾಗಿಯೂ ಇರುವ ಜ್ಞಾನಯೋಗವನ್ನು ನಿನಗೆ ಇದುವರಿಗೂ ಹೇಳಿರುವೆನು. ಪ್ರಕೃತವಾದ ಮೋಕ್ಷೋಪಯುಕ್ತವಾಗಿರುವಜ್ಞಾನಕ್ಕೆ ಸಾಧಕವಾಗಿರುವ ( ಶೋಕ ಮೋಹಾದಿ ದ್ವಂದ್ವಗಳನ್ನು ಬಿಟ್ಟು ಈಶ್ವರಾರಾಧನರೂಪವಾದ ಕರ್ಮಾನುಷ್ಠಾನರೂಪವಾಗಿರುವ) ಕರ್ಮಯೋಗ ವಿಷಯದಲ್ಲಿಯೂ ಸಮಾಧಿಯೋಗವಿಷಯದಲ್ಲಿಯೂ ಮುಂದೆನ್ನಿಂದ ಹೇಳಲ್ಪಡುವ ಈ ಬುದ್ಧಿಯನ್ನು ಕೇಳು. ಈ ಕರ್ಮಾನುಷ್ಠಾನ ವಿಷಯವಾದ ಬುದ್ಧಿಯಿಂದ ಧರ್ಮಾಧರ್ಮಗಳೆಂಬ ಬಂಧವು ವಿನಷ್ಟವಾಗುವುದಕ್ಕೆ ಹೇತುವಾದ ಭಗವತ್ಪ್ರಸಾದವು ಸಿದ್ಧಿಸುವುದು. ಅದರಿಂದ ಆತ್ಮತತ್ವಜ್ಞಾನವುಂಟಾಗುವುದು. ಆ ಆತ್ಮತತ್ವಜ್ಞಾನದಿಂದ ಕರ್ಮಬಂಧವು ಸಮೂಲವಾಗಿ ನಾಶಹೊಂದುವುದು. ಈ ಪ್ರಕಾರವಾಗಿ ಹೇಳುವುದರಿಂದ ತತ್ವಜ್ಞಾನಕ್ಕಿಂತಲೂ ಬೇರೇ ಯಾವದೂ ಕರ್ಮಬಂಧವಿಮೋಚಕ ವಾದದ್ದಿಲ್ಲವೆಂತಲೂ ಆದುದರಿಂದಲೇ ತತ್ವಜ್ಞಾನೋತ್ಪತ್ತಿಗೆ ಕಾರಣವಾಗಿರುವ ಭಗವದರ್ಪಣಬುದ್ಧಿಯಿಂದ ಫಲಾಪೇಕ್ಷಾ ರಹಿತವಾಗಿಮಾಡುವ ಕರ್ಮಾನುಷ್ಠಾನವು ಅವಶ್ಯಕರ್ತವ್ಯವೆಂಬದಾಗಿಯೂ, ತಿಳಿಯಬೇಕು. ॥೩೯॥

(ರಾ_ಭಾ) ಈರೀತಿಯಾಗಿ ಆತ್ಮನ ಯಥಾರ್ಥಜ್ಞಾನವನ್ನುಪದೇಶಿಸಿ ಅದರಿಂದ ಕೂಡಿ ಮೋಕ್ಷಕ್ಕೆಸಾಧನವಾಗುವ ಕರ್ಮಯೋಗವನ್ನು ಪದೇಶಿಸಲು ಉಪಕ್ರಮಿಸುತ್ತಾನೆ= ಎಲೈ ಪಾರ್ಥನೆ! ‹‹ ನತ್ವೇವಾಹಂ,, ಎಂಬುವ ಶ್ಲೋಕದ ಮೊದಲು ‹‹ ತಸ್ಮಾತ್ಸರ್ವಾಣಿಭೂತಾನಿ,, ಎಂಬುವ ಶ್ಲೋಕದವರಿಗೂ ಅವಶ್ಯವಾಗಿ ತಿಳಿಯತಕ್ಕ ಆತ್ಮಸ್ವರೂಪವನ್ನು ಯಥಾರ್ಥವಾಗಿ ತಿಳಿಯುವ ವಿಷಯದಲ್ಲಿ ನಿನಗೆ ಅಪೇಕ್ಷಿತವಾದ ಬುದ್ಧಿಯು ಹೇಳಲ್ಪಟ್ಟಿತು. ಇನ್ನುಮೇಲೆ ಮೋಕ್ಷ ಸಾಧನಭೂತವಾದ ಕರ್ಮಾನುಷ್ಠಾನಕ್ಕೆ ಯಾವಬುದ್ಧಿಯೋಗವು (ಈಯೋಗಶಬ್ದವು ಆತ್ಮಸ್ವರೂಪದ ಯಥಾರ್ಥಜ್ಞಾನದಿಂದ ಕೂಡಿ

ಕ್ಕೊಂಡು ಮೋಕ್ಷಸಾಧನವಾಗುವ ಕರ್ಮಾನುಷ್ಠಾನದಲ್ಲಿ ಯಾವ ಬುದ್ಧಿಯೋಗವು ಹೇಳಬೇಕಾಗಿರುವುದೊ ಅಂತಹ ಬುದ್ಧಿಯೋಗವ ನ್ನೆ ಹೇಳುತದೆ. ಇದನ್ನೇ ‶ದೂರೇಣಹ್ಯವರಂಕರ್ಮ ಬುದ್ಧಿಯೋ ಗಾದ್ಧನಂಜಯ,, ಎಂಬದಾಗಿ ಮುಂದೆಯೂ ಹೇಳುತ್ತಾನೆ.) ಅಪೇ ಕ್ಷಿತವೊ ಆ ವಿಷಯದಲ್ಲಿ ಹೇಳಬೇಕಾದ ಬುದ್ಧಿಯಂಹೇಳುವೆನು. ಇದಂನೀನು ಕೇಳಿ ತಿಳಿದುಕೊಂಡರೆ ಕರ್ಮಬಂಧಅಂದರೆ ಸಂಸಾ ರಬಂಧವುನಿವೃತ್ತವಾಗುವುದು. ॥೩೯॥

(ಗೀ-ವಿ) ಈ ಅಧ್ಯಾಯದ ೪೦ನೇ ಶ್ಲೋಕದ ಮೊದಲು ೪೪ ನೇ ಶ್ಲೋಕದ ವರಿಗೂ ಕಾಮ್ಯಫಲಾಪೇಕ್ಷಿಗಳ ಕರ್ಮವು ನಿಂದಿಸ ಲ್ಪಡುವುದು ॥೩೯॥

ಶ್ರೀ ಸತ್ಯಸಂಕಲ್ಪಸ್ವಾಮಿಗಳವರ ಗೀತಾಸಾರಾರ್ಥ ಸಂಗ್ರಹವು. ಕೆಳಗೆ ಉಪದೇಶಿಸಲ್ಪಟ್ಟ ಜ್ಞಾನಯೋಗವನ್ನುಪ ಸಂಹಾರಮಾಡಿಅಂ ತಹಜ್ಞಾನೋತ್ಪತ್ತಿಗೆ ಉಪಾಯವೆಂಬ ಆಕಾರದಿಂದ ವಿಹಿತವಾದಸತ್ಕ ರ್ಮವೇನ.೪ಸಮಾಧಿಯೇನ.೩ ಈರೂಪವಾದ ಕರ್ಮಯೋಗವನ್ನು ಪದೇಶಿಸಲು ಶ್ರೀ ಕೃಷ್ಣನು ಪ್ರತಿಜ್ಞೆಯಂಮಾಡುತ್ತಾನೆ= ಸಾಂಖ್ಯ ವಂದರೆ ಜ್ಞಾನವು, ಅಂತಹಜ್ಞಾನಕ್ಕೆ ಸಾಧನವಾಗಿರುವ ಸತ್ಕರ್ಮಾದಿಯ ನ್ನುಯೋಗವೆನ್ನುವುದು. ಈ ಅರ್ಥವು ‶ಸಮ್ಯಕ್ತ್ವದೃಶಿಜ್ಞಾನಂ ಯೋಗಸ್ತತ್ಸಾಧನಂಸ್ಮೃತಂ ,, ಎಂಬುವ ಪ್ರಮಾಣ ಪ್ರಸಿದ್ಧವಾ ಗಿರುವುದು. (ಅಥವಾ) ಸಾಂಖ್ಯಯೋಗಶಬ್ದಗಳಿಂದ ವಿಷ್ಣುಪ್ರ ಣೀತವಾಗಿರುವ ಪಾಂಚರಾತ್ರಾದಿ ಶ್ರೇಷ್ಠವಾದ ಸಾಂಖ್ಯಯೋಗ ಶಾಸ್ತ್ರವು ಗೃಹೀತವಾಗುವುದು. ಅಲ್ಲದೆ ವೇದವಿರುದ್ಧವೆಂಬದಾ ಗಿ ‶ ಸಾಂಖ್ಯಂಯೋಗಃ ಪಾಶುಪತಂ ,, ಇತ್ಯಾದಿ ಶ್ರೀ ಮೋಕ್ಷ ಧರ್ಮಪ್ರಮಾಣಗಳಿಂದ ಬಹಿಷ್ಕೃತನಾಗಿ ನಿರೀಶ್ವರವಾದಕ್ಕೆ ಸಾಧನ ಮಾಗಿರುವ ಸಾಂಖ್ಯಯೋಗಶಾಸ್ತ್ರಗಳು ಹೇಳಲ್ಪಡಲಿಲ್ಲವು. ವೇ ದವಿರುದ್ಧವಾದ ಸಾಂಖ್ಯಾದಿ ಶಾಸ್ತ್ರಗಳಲ್ಲಿ ಈಶ್ವರನನ್ನು ಅಂಗೀಕ ರಿಸದೇ ಇರುವುದರಿಂದಲೂ, ಮತ್ತು ಸಾಂಖ್ಯಯೋಗಶಾಸ್ತ್ರಗಳ ಲ್ಲಿ ವಿಹಿತವಾಗಿರುವ ಹಿಂಸೆಯೂ ಅನರ್ಥಕ್ಕೆ ಕಾರಣವಾಗಿರುವುದ ರಿಂದಲೂ ಇವು ವೈದಿಕ ಸಮ್ಮತವಾಗಲಾರವು. ಈ ಭಗವತ್ಪ್ರೋ ಕ್ತವಾದ ಸಾಂಖ್ಯಯೋಗಗಳಲ್ಲಿ ಅಂತಹ ನಿರೀಶ್ವರವಾದವಿಲ್ಲದೆ

ಈಶ್ವರನನ್ನು ಅಂಗೀಕರಿಸುವುದರಿಂದಲೂ, "ಕರ್ಮಬಂಧಂ ಪ್ರಹಾಸ್ಯಸಿ,, ಎಂಬದಾಗಿ ಮೋಕ್ಷಾರ್ಥವಾಗಿಯೇ ಯುದ್ಧಾದಿ ಸತ್ಕರ್ಮವಿಧಾನವಿರುವುದರಿಂದ ಅನರ್ಥಕ್ಕೆ ಅವಕಾಶವಿಲ್ಲದೆ ಇರುವುದರಿಂದಲೂ ಈ ಪ್ರಕೃತವಾದ ಸಾಂಖ್ಯಯೋಗವು ಅತ್ಯಂತ ಶ್ರೇಷ್ಠವಾಗಿರುವುದು. ಎಲೈ ಅರ್ಜುನನೇ! ತಿಳಿದುಕೊಳ್ಳತಕ್ಕ ಆತ್ಮಸ್ವರೂಪಾದಿವಿಷಯದಲ್ಲಿ ನಿನಗೆ ಸ್ಥಿರಬೋಧವುಂಟಾಗುವಂತೆ ಸಾಂಖ್ಯವಿಷಯದಲ್ಲಿ ಈ ಬುದ್ಧಿಯು ನನ್ನಿಂದ ಹೇಳಲ್ಪಟ್ಟಿತು. ಜ್ಞಾನೋಪಾಯವಾದ ಕರ್ಮವಿಷಯದಲ್ಲಿ ಮುಂದೆ ನನ್ನಿಂದ ಹೇಳಲ್ಪಡುವ ( ಈ ಬುದ್ಧಿಯನ್ನು ) ವಾಕ್ಯಗಳನ್ನು ಕೇಳು. ಎಲೈ ಪಾರ್ಥನೇ! ನಿನ್ನಂತ ಮೋಕ್ಷಾಪೇಕ್ಷೆಯುಳ್ಳವನು ನನ್ನಿಂದ ಹೇಳಲ್ಪಡುವ ಯೂವಬುದ್ಧಿಯನ್ನು ಕೇಳಿದರೆ ಕರ್ಮಯೋಗವಿಷಯವಾದ ಜ್ಞಾನವುಳ್ಳವನಾಗಿ ಅದರಿಂದ ನಿಷ್ಕಾಮನಾಗಿ ಶ್ರೀಹರಿಪ್ರೀತಿಯನ್ನುದ್ದೇಶಿಸಿ ಕರ್ಮವನ್ನು ಮಾಡಿ ಶುದ್ಧಾಂತಃಕರಣನಾಗುತ್ತಾನೆಯೋ; ಅದಂ ಕೇಳೆಂದರ್ಥವು. ಅನಂತರದಲ್ಲಿ ವೈರಾಗ್ಯ ಶ್ರವಣಾದಿಗಳಿಂದ ಆತ್ಮ ಸಾಕ್ಷಾತ್ಕಾರ ಮುಂಟಾಗಿ ಅದರಿಂದ ಕರ್ಮಬಂಧರೂಪವಾದ ಸಂಸಾರವು ನಿವೃತ್ತವಾಗುವುದು. ಕೆಳಗೆ ಉಪದೇಶಿಸಲ್ಪಟ್ಟ ಆತ್ಮಜ್ಞಾನವು ಅಂತಃಕರಣ ಶುದ್ಧಿಯಿಲ್ಲದವನಿಗೆ ನಿಲ್ಲಲಾರದೆಂದು ಚಿಂತಿಸಿ ಪರಮಾತ್ಮನು ಅಂತಹ ಅಂತಃಕರಣಶುದ್ಧಿಯುಂಟಾಗುವುದಕ್ಕಾಗಿ ಕರ್ಮವನ್ನು ಮಾಡಿದರೆ ನಂತರ ಧ್ಯಾನಾದಿಗಳಿಂದ ಮೋಕ್ಷಪ್ರಾಪ್ತಿಯಾಗುವುದೆಂದು ಇಲ್ಲಿ ಕರ್ಮಯೋಗವನ್ನುಪದೇಶಿಸುತ್ತಾನೆ. ॥ ೩೯ ॥

ಮೂ ॥ ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾ
ಯೋ ನವಿದ್ಯತೇ । ಸ್ವಲ್ಪಮಪ್ಯಸ್ಯಧರ್ಮಸ್ಯ ತ್ರಾಯ
ತೇ ಮಹತೋಭಯಾತ್ ॥ ॥ ೪೦ ॥

ಪ॥ ನ – ಇಹ – ಅಭಿಕ್ರಮನಾಶಃ – ಅಸ್ತಿ – ಪ್ರತ್ಯವಾಯಃ – ನ – ವಿದ್ಯತೇ । ಸ್ವಲ್ಪಂ – ಅಪಿ – ಅಸ್ಯ – ಧರ್ಮಸ್ಯ – ತ್ರಾಯತೇ – ಮಹತಃ – ಭಯಾತ್ ॥

ಅ ॥ ಇಹ – ಈ ನಿಷ್ಕಾಮಕರ್ಮಯೋಗದಲ್ಲಿ, ಅಭಿಕ್ರಮನಾಶೋನಾಸ್ತಿ – ಉಪಕ್ರಮನಾಶವಿಲ್ಲವು, ಪ್ರತ್ಯವಾಯಃ – ದೋಷವು, ನವಿದ್ಯತೇ – ಇರುವದಿಲ್ಲವು, ಅಸ್ಯಧರ್ಮಸ್ಯ – ಈ ನಿಷ್ಕಾಮಕರ್ಮಯೋಗರೂಪವಾದ ಧರ್ಮದ, ಸ್ವಲ್ಪಮಪಿ – ಸ್ವ

ಲ್ಯಾಂಶವು, ಮಹತಃ - ದೊಡ್ಡದಾದ, ಭಯಾತ್ - ಜನನಮರಣಾದಿ ಪರಿವೃತ್ತಿರೂಪವಾದ ಭಯದ್ದಸೆಯಿಂದ, ತ್ರಾಯತೇ - ರಕ್ಷಿಸುವುದು. ॥೪೦॥

(ಶಂ-ಭಾ) ಆದರೂ ‹‹ ಕರ್ಮಗಳನ್ನನುಷ್ಠಿಸಿದರೆ ತತ್ಕ್ಷಣದಲ್ಲಿ ಫಲಸಿದ್ಧಿಯುಂಟಾಗುವುದಿಲ್ಲ ವಾದುದರಿಂದ ಕರ್ಮಯೋಗವು ಶ್ರೇಷ್ಠವೆಂದು ಹೇಳತಿಕ್ಕಾಗುವುದಿಲ್ಲವೆಂತಲೂ, ಕರ್ಮಯೋಗದಲ್ಲಿ ಅನೇಕದೋಷಗಳುಂಟೆಂಬದಾಗಿಯೂ, (ಅಂದರೆ ಕರ್ಮಾನುಷ್ಠಾನವಂ ಮಾಡುವುದರಲ್ಲಿ ಯಾವದಾದರೂ ಲೋಪಗಳು ಸಂಭವಿಸಿದರೆ ದೋಷಪ್ರಾಪ್ತಿ ಯಾಗುವುದಾದುದರಿಂದ ಕರ್ಮಯೋಗವು ಶ್ರೇಷ್ಠವೆಂದು ಹೇಳಲಿಕ್ಕಾಗುವುದಿಲ್ಲವೆಂತಲೂ,) ಮತ್ತು ಇದೇಮೊದಲಾದ ಅನರ್ಥಗಳಿಂದಲು ಅಹಿತಕರವಾಗಿರುವುದರಿಂದ ಕರ್ಮಯೋಗವು ದೋಷಯುಕ್ತವಾಗಿರುವುದು, ಆದುದರಿಂದಲೇ ಯೋಗಬುದ್ಧಿಯು ಶ್ರದ್ಧೆಯಿಂದ ನುಷ್ಠಿಸತಕ್ಕದ್ದಲ್ಲವೆಂತಲೂ, ಪ್ರಾಪ್ತವಾಗುವ ಶಂಕಾಪರಿಹಾರಪೂರ್ವಕವಾಗಿ ಇಂತಹ ಕರ್ಮಗಳನ್ನಾಚರಿಸುವ ವಿಷಯದಲ್ಲಿ ಮತ್ತೊಂದು ಕಾರಣವೂ ಹೇಳಲ್ಪಡುವುದೆಂದು ಪರಮಾತ್ಮನು ಅರ್ಜುನನಿಗೆ ಬೋಧಿಸುವನು— ಮತ್ತು ಕರ್ಮಯೋಗವನ್ನು ಸಮಾಧಿಯೆಂಬ ಜ್ಞಾನಯೋಗವನ್ನು ಏಕಕಾಲದಲ್ಲಿ ಅನುಷ್ಠಿಸಲಶಕ್ಯವಾಗಿರುವುದರಿಂದಲೂ, ಕರ್ಮವನ್ನಾಚರಿಸುವುದರಲ್ಲಿ ಅನೇಕವಿಘ್ನಗಳು ಪ್ರಾಪ್ತವಾಗುವುದರಿಂದಲೂ, ಕರ್ಮಫಲವಾದ ಆತ್ಮಸಾಕ್ಷಾತ್ಕಾರವು ಚಿರಕಾಲಾಭ್ಯಾಸದಿಂ ದುಂಟಾಗುವುದರಿಂದ ಈ ಜನ್ಮದಲ್ಲಿಯೇ ಉಂಟಾಗುವುದೆಂದು ಹೇಳಲಿಕ್ಕಾಗುವುದಿಲ್ಲ ವಾದುದರಿಂದಲೂ, ವಾಸ್ತವವಾಗಿ ವಿಚಾರಿಸಿ ನೋಡಿದರೆ ಕರ್ಮಗಳನ್ನಾಚರಿಸುವಂತವನು ಮಾಡುತಲಿರುವ ಕರ್ಮಗಳು ವಿಘ್ನಾದಿಗಳಿಂದ ಪೂರ್ತಿಯಾಗದೆಹೋದರೆ ಭ್ರಷ್ಟನಾಗುತ ಅನೇಕವಾದ ಅನರ್ಥಗಳಂ ಹೊಂದುವನೆಂಬ ಇಂತಹ ಶಂಕೆಗಳಿಗೂ ಈ ಶ್ಲೋಕವು ಪರಿಹಾರಕವಾಗಿರುವುದು. ವೇದೋಕ್ತ ಕರ್ಮಗಳನ್ನಾಚರಿಸುವುದರಿಂದ ಫಲವು ಅವಶ್ಯವಾಗಿ ಪ್ರಾಪ್ತವಾಗುವುದೆಂಬದಾಗಿ ಶಾಸ್ತ್ರಗಳಲ್ಲಿ ಹೇಳಿರುವುದರಿಂದ ಕೃಷಿವಾಣಿಜ್ಯಾ(ಕೃಷಿ ಅಂದರೇ ಪೈರುಮಾಡುವುದು. ವಾಣಿಜ್ಯ ಅಂದರೆ ವ್ಯಾಪಾರವು.)ದಿಗಳಲ್ಲಿ ಫಲಾಂಶವು ಹ್ಯಾಗೆ ಸಂದೇಹಯುಕ್ತವಾಗಿರುವುದೋ ಆಪ್ರಕಾರವಾಗಿ ಈ ವೇದೋಕ್ತಕ

ರ್ಮಾನುಷ್ಠಾನದಲ್ಲಿ ಸಂದೇಹವು ಸ್ವಲ್ಪವೂ ಉಂಟಾಗತಕ್ಕದ್ದಲ್ಲವು. ಕೃಷಿ ಮೊದಲಾದ ಕಾರ್ಯಗಳು ಉಪಕ್ರಮಿಸಲ್ಪಟ್ಟರೂ ಮಳೆಮೊದಲಾದವುಗಳಿಲ್ಲದೇ ಹೋಗುವಪಕ್ಷದಲ್ಲಿ ಅದಕ್ಕೆ ಫಲ ನಿಷ್ಪತ್ತಿಯುಂಟಾಗುವುದಿಲ್ಲವೆಂಬುವುದು ಯುಕ್ತವಾಗಿಯೇ ಇರುವುದು. ಒಂದು ವ್ಯಾಧಿಗೇ ಚಿಕಿತ್ಸೆಯಂ ಮಾಡುವುದರಲ್ಲಿಯೂ ವ್ಯಾಧಿಯು ಅಭಿವೃದ್ಧವಾಗಿ ಚಿಕಿತ್ಸೆಯು ವಿಫಲವಾಗುವುದಂ ಕೂಡ ಲೋಕದಲ್ಲಿ ಕಂಡಿರುವೆವು. ಈ ದೃಷ್ಟಾಂತದಿಂದ ಈ ಪ್ರಕೃತವಾದ ಕರ್ಮಾನುಷ್ಠಾನವು ವಿಫಲವಾಗುವುದೆಂದು ಹೇಳಲಿಕ್ಕಾಗುವುದಿಲ್ಲವು. ಈ ಕರ್ಮವನ್ನಾಚರಿಸಿದರೇ ಇಂತಹ ಫಲವು ತಪ್ಪದೆ ಸಿದ್ಧಿಯಾಗುವುವೆಂದು ಶಾಸ್ತ್ರಗಳಲ್ಲಿ ನಿರ್ಣಯಿಸಲ್ಪಟ್ಟಿರುವುದರಿಂದ ಕರ್ಮಾಚರಣೆಯಿಂದ ಆಯಾ ಫಲವು ತಪ್ಪದೆ ಸಿದ್ಧಿಸಲು ಸಂದೇಹವಿಲ್ಲವು. ಮತ್ತು ಈ ಕರ್ಮಗಳನ್ನಾಚರಿಸಲು ಉಪಕ್ರಮಿಸಿ ವಿಘ್ನಾದಿಗಳಿಂದ ಪೂರ್ಣವಾಗದಿದ್ದರೂ ಈ ಕರ್ಮವೂ ವಿಫಲವಾಗಲಾರದು. ‟ಸರ್ವಪಾಪ ಪ್ರಸಕ್ತೋಪಿಧ್ಯಾಯನ್ನಿಮಿಷಮಚ್ಯುತಂ । ಭೂಯಸ್ತಪಸ್ವೀಭವತಿಪಜ್ಕ್ತಿ ಪಾವನಪಾವನಃ„ ಸಮಸ್ತ ಪಾಪದಿಂದ ಕೂಡಿದವನಾಗಿದ್ದರೂ ನಿಮೇಷಮಾತ್ರವಾದರೂ ಶ್ರೀಮನ್ನಾರಾಯಣಧ್ಯಾನ ತತ್ಪರನಾದರೆ ಅಂತವನು ಪಜ್ಕ್ತಿ ಪಾವನರನ್ನು ಕೂಡ ಪವಿತ್ರರನ್ನಾಗಿ ಮಾಡಿಸುವಂತಹ ತಪಸ್ವಿಯಾಗುವನು) ಎಂಬುವ ಸ್ಮೃತಿ ಪ್ರಮಾಣದಿಂದ ಪರಮೇಶ್ವರಾರ್ಪಣರೂಪವಾಗಿ ಮಾಡಲ್ಪಡುವ ಕರ್ಮದಲ್ಲಿಸ್ವಲ್ಪವಾದರೂ ಆಚರಿಸಲ್ಪಟ್ಟರೇ ಅದು ಮಹತ್ತಾದ ಸಂಸಾರಭಯದಿಂದ ಇವನಂ ಸಂರಕ್ಷಿಸುವುದು.

(ಫಲಾಪೇಕ್ಷೆಯಿಂದ ಮಾಡಲ್ಪಟ್ಟ ಕರ್ಮವು ‟ಕ್ಷೀಣೇಪುಣ್ಯೇ ಮರ್ತ್ಯಲೋಕಂವಿಶಂತಿ„ ಎಂಬ ಶ್ರುತಿಪ್ರಮಾಣದಿಂದ ಕ್ಷಯಿಷ್ಣುವಾದಫಲಾನುಭವವಂ ಮಾಡಿದಮೇಲೆ ಪುನಃ ಸಂಸಾರಕ್ಕೆ ಕಾರಣರೂಪವಾಗುವ ಜನ್ಮಪರಂಪರಾದಿಗಳಂ ಕೊಡುವುದೆಂದು ಹೇಳಲ್ಪಟ್ಟಿರುವುದರಿಂದ ಅದು ನಿಷ್ಕಾಮಕರ್ಮಕ್ಕೆ ಯಾವವಿಧದಲ್ಲಿಯೂ ಸಮವಾಗಲಾರದೆಂದಭಿಪ್ರಾಯವು) ॥೪೦॥

(ರಾ.ಭಾ) ಮುಂದೆ ವಿವರಿಸಿಹೇಳುವ ಬುದ್ಧಿಯಿಂದಕೂಡಿದ ಕರ್ಮಯೋ

ಗದ ಮಹಿಮೆಯನ್ನು ಹೇಳುತ್ತಾನೆ= ಈ ಕರ್ಮಯೋಗವು ಪ್ರಾರಂಭಿಸಲ್ಪಟ್ಟು ಮಧ್ಯಕಾಲದಲ್ಲಿ ಬಿಡಲ್ಪಟ್ಟರೂ ಅದರಿಂದ ಈ ಕರ್ಮವು ಕಾರ್ಯಕರವಲ್ಲದೆ ಹೋಗಲಾರದು ಇದನ್ನು॥ ಪಾರ್ಥನೈವೇಹ ನಾಮುತ್ರವಿನಾಶಸ್ತಸ್ಯವಿದ್ಯತೆ,, ಎಂಬದಾಗಿ ಮುಂದೆಯೂ ವಿವರಿಸುವನು. ಇದು ಬೇರೇವಿಧವಾದ ಕೆಡಕನ್ನು ಕೂಡಾ ಉಂಟುಮಾಡಲಾರದು. ಇದರಲ್ಲಿ ಸ್ವಲ್ಪಾಂಶವು ಅನುಷ್ಠಿಸಲ್ಪಟ್ಟರೂ ಮಹತ್ತಾಗಸಂಸಾರಭಯದಿಂದ ರಕ್ಷಿತನಾಗುವನು. ಇತರವಾದ ಲೌಕಿಕ ವೈದಿಕಸಾಧನಗಳು ಮಧ್ಯಕಾಲದಲ್ಲಿ ವಿಚ್ಛಿನ್ನವಾದರೇ ಫಲವುಂಟಾಗಲಾರದು. ಮತ್ತು ವಿರುದ್ಧವಾದ ಅನಿಷ್ಟಫಲವನ್ನು ಕೂಡ ಉಂಟುಮಾಡಿಸುವುದು. ಈ ಪ್ರಕೃತವಾದ ಕರ್ಮಯೋಗಕ್ಕೆ ಲೌಕಿಕಾದಿ ಸಾಧನಗಳಂತೆ ಆ ಎರಡೂ ಇಲ್ಲವೆಂದು ಭಾವವು. ॥೪೦॥

(ಗೀ-ವಿ) ಕರ್ಮಯೋಗವನ್ನು ಸ್ತುತಿಸುತ್ತಾನೆ= ಫಲಾಪೇಕ್ಷೆಯಿಲ್ಲದೇ ಶ್ರೀಕೃಷ್ಣಾರ್ಪಣ ಬುದ್ಧಿಯಿಂದ ಮಾಡಲ್ಪಡುವ ವೈಷ್ಣವಧರ್ಮರೂಪವಾದ ಕರ್ಮಯೋಗದಲ್ಲಿ ಆರಂಭಕ್ಕೇ ನಾಶವಿಲ್ಲವು. ॥ ಪ್ರಾರಂಭಮಾತ್ರವಿಚ್ಛಿನ್ನಾವಾ ವೈಷ್ಣವಧರ್ಮೇನನಿಷ್ಫಲಾ ! ನಚಾನ್ಯಧರ್ಮಾಕರಣಾ ದ್ದೋಷವಾನ್ವೈಷ್ಣವಕರ್ಮಕೃತ್ ,, ಎಂಬುವ ಆಗ್ನೇಯಪುರಾಣ ಪ್ರಮಾಣದಿಂದ ವೈಷ್ಣವಧರ್ಮದ ಆರಂಭಮಾತ್ರದಿಂದಲೆ ಅಂದರೆ ಇದಂ ನಾನು ಮಾಡುವೆನು ಎಂಬ ಇಚ್ಛಾಮಾತ್ರದಿಂದಲೆ ಫಲವಾಗುವುದೆಂದು ತಾತ್ಪರ್ಯವು. ಈ ನಿಷ್ಕಾಮಧರ್ಮಗಳನ್ನಾರಂಭಿಸಿದನಂತರಬಿಟ್ಟರೂ, ಅನ್ಯಧರ್ಮಗಳನ್ನಾಚರಿಸದಿದ್ದರೂ ಪಾಪವು ಸಂಭವಿಸಲಾರದು. ಈ ವೈಷ್ಣವ ಧರ್ಮದ ಸ್ವಲ್ಪಾಂಶವೂ ಮಹತ್ತಾದ ಸಂಸಾರಭಯದಿಂದ ರಕ್ಷಿಸುವುದು. ॥ ಯೋಗೇಶ್ವಿಮಾಂ ಶೃಣು ,, ಎಂಬುವ ಶ್ಲೋಕದಿಂದ,ಕೇವಲ ಶ್ರವಣಮಾತ್ರದಲ್ಲಿಯೆ ಫಲವುಂಟಾಗಲಾರದು. ಆದುದರಿಂದ ಜ್ಞಾನೋಪಾಯವಾದ ಕರ್ಮಪ್ರತಿಪಾದಕವಾಗಿರುವ ಶಾಸ್ತ್ರಶ್ರವಣವಂಮಾಡಿ ಅದರಲ್ಲಿ ವಿಶ್ವಾಸವಂಮಾಡೆಂಬದಾಗಿ ಪರಮಾತ್ಮನು ಹೇಳಿದನೆಂದರಿಯಬೇಕು. ॥೪೦

ಮೂ॥ ವ್ಯವಸಾಯಾತ್ಮಿಕಾಬುದ್ಧಿ ರೇಕೇಹ ಕುರುನಂದನ । ಬಹುಶಾಖಾ ಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಮ್ ॥ ॥೪೧

ಪ॥ ವ್ಯವಸಾಯಾತ್ಮಿಕಾ-ಬುದ್ಧಿಃ - ಏಕಾ - ಇಹ- ಕುರುನಂದನ। ಬಹುಶಾಖಾಃ - ಹಿ- ಅನಂತಾಃ - ಚ- ಬುದ್ಧಯಃ - ಅವ್ಯವಸಾಯಿನಾಮ್ ॥

ಅ॥ ಹೇ ಕುರುನಂದನ - ಕುರುವಂಶದಲ್ಲಿ ಪುಟ್ಟಿದ ಎಲೈ ಅರ್ಜುನನೇ ! ಇಹ- ಈ ನಿಷ್ಕಾಮಕರ್ಮಯೋಗದಲ್ಲಿ, (ರಾ॥ ಈ ಶಾಸ್ತ್ರೋಕ್ತವಾದ ಕರ್ಮದಲ್ಲಿ,) ವ್ಯವಸಾಯಾತ್ಮಿಕಾ - ನಿಶ್ಚಯಸ್ವರೂಪವಾದ, (ರಾ॥ ಪರಮಾತ್ಮಸ್ವರೂಪವನ್ನರಿತು ನಾನುಮಾಡುವ ವೇದೋಕ್ತವಾದ ಸಕಲ ಕರ್ಮಗಳನ್ನು ಭಗವದರ್ಪಣವಮಾಡಿ ಅದರಿಂದ ನಾನು ಕೃತಾರ್ಥನಾಗುವೆನೆಂಬ ನಿಶ್ಚಯರೂಪವಾದ, (ಶ್ರೀ) ಭಾಗವದ್ಭಕ್ತಿಯಿಂದ ಸಂಸಾರಾಬ್ಧಿಯನ್ನು ದಾಟುವೆನೆಂಬ ನಿಶ್ಚಯವಾದ, (ಗೀ - ವಿ) ಶಾಸ್ತ್ರಪ್ರಮಾಣಗಳಿಂದ ನಿರ್ಣಯಿಸಲ್ಪಟ್ಟ ಪರಮಾರ್ಥವಾಗಿಯೂ, ಈಶ್ವರವಿಷಯವಾಗಿಯೂ, ಇರುವ) ಬುದ್ಧಿಃ - ಬುದ್ಧಿಯು, ಏಕಾಹಿ - ಒಂದೇಯಲ್ಲವೆ, (ರಾ॥ ಮೋಕ್ಷರೂಪವಾದ ಫಲವೂ ಒಂದೇ, ಅದಕ್ಕೇ ತಕ್ಕ ಸಾಧನವೂ ಒಂದೆಯಲ್ಲವೆ,) ಅವ್ಯವಸಾಯಿನಾಂ- ನಿಶ್ಚಯಬುದ್ಧಿರಹಿತರಾದವರುಗಳ, (ಶ್ರೀ) ಭಕ್ತಿಶೂನ್ಯರಾದ ಕಾಮ್ಯಕರ್ಮಿಗಳ, ) ಬುದ್ಧಯಃ - ಬುದ್ಧಿಗಳು, ಬಹುಶಾಖಾಃ - ನಾನಾಪ್ರಕಾರಗಳುಳ್ಳವುಗಳಾಗಿಯೂ, ಅನಂತಾಶ್ಚ - ಅನೇಕಗಳಾಗಿಯೂ ಇರುವುವು. ॥೪೧॥

(ಶಂ-ಭಾ) ಸಾಂಖ್ಯಯೋಗರೂಪವಾಗಿರುವ ಎರಡು ಬುದ್ಧಿಗಳಗಿಂತಲೂ ಅನ್ಯಗಳಾದ ಕಾಣಾದ ವ್ಯಾಕರಣ ಮೀಮಾಂಸಕ ನಾಸ್ತಿಕಾದಿಗಳಿಂದ ಹೇಳಲ್ಪಟ್ಟ ಬುದ್ಧಿಗಳನೇಕಗಳಿರುವಲ್ಲಿ ಶ್ರೀ ಪರಮಾತ್ಮನು ಅವುಗಳನ್ನುಪದೇಶಿಸದೆ ಇಲ್ಲಿ ಈ ಸಾಂಖ್ಯಯೋಗಗಳೆಂಬ ಬುದ್ಧಿದ್ವಯವನ್ನೆ ಉಪದೇಶಿಸಲು ಕಾರಣವೇನೆಂದರೆ; ಜ್ಞಾನಕ್ಕೇ ಸಾಧನವಾದ ಯೋಗವು, ಇದರಿಂದುಂಟಾಗುವ ಸಾಂಖ್ಯವು, ಎಂಬೀಬುದ್ಧಿದ್ವಯಗಳ ಸಂಸಾರವನ್ನು ನಿವರ್ತಿಮಾಡಿ ಮೋಕ್ಷಕ್ಕೆ ಸಾಧನವಾಗುವುದಾಗಿ ವೇದರೂಪಪ್ರಮಾಣಾದಿಗಳಿಂದ ನಿರ್ಣಯಿಸಲ್ಪಟ್ಟಿರುವುದರಿಂದ ಪರಮಾತ್ಮನು ಪ್ರಕೃತವಾದ ಬುದ್ಧಿದ್ವಯವನ್ನೆ ಇಲ್ಲಿ ಯುಪದೇಶಿಸಿದನು. ಮತ್ತು ಈ ಎರಡುಬುದ್ಧಿಗಳು ಯಾರಿಗುಂಟಾಗುವುವೊ ಅಂತವರಿಗೇ ಮೋಕ್ಷಪ್ರತಿಬಂಧಕವಾಗಿಯೂ ಸಂಸಾರಾಭಿವೃದ್ಧಿಗೇ ಕಾರಣವಾಗಿಯೂ ಇರುವ ಇತರಗಳಾದ ವಿಪರೀತಬುದ್ಧಿಗಳುಂಟಾಗಲಾರವು. ಅಂದರೇ ಭಗವತ್ಪ್ರೀತಿಯನ್ನೇ ಉದ್ದೇಶಿಸಿ ಕರ್ಮಗಳನ್ನು ಮಾಡಿದರೆ ಸಂಸಾರದಿಂದ ವಿಮುಕ್ತನಾಗಬಹುದೆಂಬ ನಿಶ್ಚಯವುಳ್ಳದ್ದಾಗಿರುವ ವ್ಯವಸಾಯಾತ್ಮಿಕವಾದ ಬುದ್ಧಿಯುಂಟಾಗುವುದಕ್ಕೆ ಸಂಸಾರಕಾರಣವಾದ ನಾಸ್ತಿಕಾದಿಗಳಿಂ

ದ ಹೇಳಲ್ಪಡುವ ವಿಪರೀತಬುದ್ಧಿಗಳು ನಾಶಹೊಂದುವುದೇ ಮುಖ್ಯ ಫಲವೆಂದರಿಯಬೇಕು. ವಿಪರೀತಬುದ್ಧಿಯುಳ್ಳವರು ನನಗೇ ಹೆಂಡತಿಬೇಕು, ಮಗನುಬೇಕು, ಎಂಬಿದೇ ಮೊದಲಾದ ನಾನಾ ಮನೋರಥಗಳಿಂದ ಕೂಡಿದವರಾಗಿ ಅದಕ್ಕೆ ತಕ್ಕ ಕಾಮ್ಯಕರ್ಮಗಳನ್ನು ಭಗವದರ್ಪಣಬುದ್ಧಿ ಹೀನರಾಗಿಮಾಡುವುರು. ಈಪ್ರಕಾರವಾಗಿ ಕಾಮ್ಯಕರ್ಮಗಳಂಮಾಡುವ ವಿವೇಕಹೀನರು ಮೋಕ್ಷವಂ ಹೊಂದದೆ ಸಂಸಾರದಲ್ಲಿ ಮುಣುಗಿ ನಾಶವಂಹೊಂದುವುರು. ಇತರಗಳಾದ ಕಾಣಾದಾದಿ ಬುದ್ಧಿಗಳೆಂಬ ಸ್ಥಾನದಲ್ಲಿ ಇತರಗಳೆಂದರೇ ಸಾಂಖ್ಯ, ಯೋಗ, ರೂಪವಾದ ಬುದ್ಧಿದ್ವಯಕ್ಕಿಂತಲೂ ಅನ್ಯವಾದದ್ದೆಂದು ತಿಳಿಯಬೇಕು. ಈ ಬುದ್ಧಿದ್ವಯವು ಚಿತ್ತಶುದ್ಧಿಯಿಂದ ಅಜ್ಞಾನವನ್ನು ಹೊರಪಡಿಸಿ ಮೋಕ್ಷಕ್ಕೆ ಸಾಧನವಾಗುವುದರಿಂದ ಪ್ರಕೃತವಾದ ಸಾಂಖ್ಯಯೊಗರೂಪವಾಗಿರುವ ಬುದ್ಧಿಗಳು ವೇದಾದಿ ಪ್ರಮಾಣ ಪ್ರಸಿದ್ಧಾರ್ಥವಾಗಿರುವುದರಿಂದ ಪ್ರಮಾಣೀಕವಾಗಿರುವುದೆಂದು ವಿವೇಕಿಗಳಿಗುಂಟಾಗುವು ದಂತಲೂ, ಸ್ವಕಪೋಲಕಲ್ಪಿತವಾದ ವಿಪರೀತಬುದ್ಧಿಗಳು ಅವಿವೇಕ ಮೂಲವಾಗಿರುವುದರಿಂದ ಅಪ್ರಾಮಾಣಿಕರಿಗುಂಟಾಗುವುದೆಂತಲೂ, ಆದುದರಿಂದಲೇ ವೇದಸಮ್ಮತಗಳಲ್ಲವೆಂತಲೂ, ತಿಳಿದುಕೊಳ್ಳಬೇಕು. ಮರಗಳಿಗೆ ಶಾಖಾ ಅಂದರೆ ರೆಂಬೆ, ಉಪಶಾಖಾ ಅಂದರೆ ಅದರ ಚಿಕ್ಕರೆಂಬೆಗಳು ಹ್ಯಾಗೆ ಉಂಟಾಗುವ್ರುದೊ, ಅದರಂತೆ ಅನ್ಯವಸಾ ಯಾತ್ಮಕವಾದ ವಿಪರೀತಬುದ್ಧಿಗಳಿಗೆ ಶಾಖಾಭೇದಗಳನಂತಗಳಾಗಿರುವ್ರುವು. ಶಾಖಾಭೇದಗಳಿಂದ ಅನಂತಗಳಾಗಿರುವ ವಿಪರೀತಬುದ್ಧಿಗಳಿಂದುಂಟಾಗುವ ಸಂಸಾರವೂ ಅನಂತವಾಗಿಯೆ ಇರುವುದು. ಇಂತಹ ಸಂಸಾರದ ನಿವೃತ್ತಿ ಹ್ಯಾಗಾಗುವುದೆಂದರೇ ಅನ್ವಯ ವ್ಯತಿರೇಕಗಳೆಂಬ(ಅಜ್ಞಾನವಿದ್ದರೇ ಸಂಸಾರವಿರುವುದೆಂಬುವುದು ಅನ್ವಯಪ್ರಮಾಣವು. ಅಜ್ಞಾನವಿಲ್ಲದಿದ್ದರೆ ಸಂಸಾರವಿರುವುದಿಲ್ಲವೆಂಬುವುದು ವ್ಯತಿರೇಕ ಪ್ರಮಾಣವು-ಈಪ್ರಕಾರವೇ ನಿರ್ಮಲಜ್ಞಾನವಿದ್ದರೇ ಮೋಕ್ಷವು ಆ ನಿರ್ಮಲ ಜ್ಞಾನವಿಲ್ಲದಿದ್ದರೇ ಮೋಕ್ಷವು ಇಲ್ಲವೆಂಬುವುದೂ ಅನ್ವಯವ್ಯತಿರೇಕ ಪ್ರಮಾಣಗಳು.) ಪ್ರಮಾಣಗಳಿಂದಲೂ ಪದಾರ್ಥಪರಿಶೋಧಕವಾದ ಶಾಸ್ತ್ರಗಳಿಂತಲೂ ಯಾವವಿವೇಕವೆಂಬ ಬುದ್ಧಿಯುಂಟಾ

ಗುವುದೊ ಅದರಿಂದುಂಟಾದ ಜ್ಞಾನದಿಂದ ಸಂಸಾರವು ನಿವೃತ್ತವಾಗುವುದು. ಇಂತಹ ವಿಪರೀತಜ್ಞಾನವು ವಿವೇಕಿಗಳಿಗೆ ಯುಂಟಾಗದೇ ಮತ್ತಯಾರಿಗೇ ವುಂಟಾಗುವುದೆಂದರೇ ವೇದಾಂತಾದಿ ಶಾಸ್ತ್ರಪ್ರಮಾಣದಿಂದುಂಟಾದ ಜ್ಞಾನವಿಲ್ಲದವರಿಗೆ ಬಹುಶಾಖಾಭೇದಗಳುಳ್ಳವುಗಳಾದುದರಿಂದ ಅನಂತಗಳಾದ ವಿಪರೀತಬುದ್ಧಿಗಳುಂಟಾಗುವುವು. “ಹ್ಯನಂತಾಶ್ಚ,, ಎಂಬುವ ಪದದಲ್ಲಿರುವ ಹಿಶಬ್ದವು ವಿಪರೀತಬುದ್ಧಿಗಳಿಗೇ ಇರುವ ಇಂತಹಶಾಖಾಭೇದಗಳು ಅತ್ಯಂತ ಪ್ರಸಿದ್ಧಗಳಾಗಿಯೇ ಇರುವುದನ್ನುವುದಂ ಸೂಚಿಸುವುದು. ||೪೧||

(ರಾ-ಭಾ) ಕಾಮ್ಯಕರ್ಮವಿಷಯವಾದ ಬುದ್ಧಿಗಿಂತಲೂ ಅನ್ಯವಾಗಿರುವಮೋಕ್ಷಕ್ಕೆ ಸಾಧನ ಭೂತವಾದ ಕರ್ಮವಿಷಯವಾದ ಬುದ್ಧಿಯನ್ನುಪದೇಶಿಸುತ್ತಾನೆ= ಎಲೈಕುರುಕುಲೋತ್ಪನ್ನನಾದ ಅರ್ಜುನನೆ! ಮೋಕ್ಷಾಪೇಕ್ಷೆಯುಳ್ಳವನು ಮಾಡತಕ್ಕ ಶಾಸ್ತ್ರೋಕ್ತವಾದ ಸಕಲ ಕರ್ಮಗಳಿಗೂ ಅಪೇಕ್ಷಿತವಾದ ವ್ಯವಸಾಯರೂಪವಾದ ಬುದ್ಧಿಯು ಒಂದೇಯಾಗಿರುವುದು. ವ್ಯವಸಾಯವೆಂದರೆ ನಿಶ್ಚಯವು. ಈ ಬುದ್ಧಿಯು ಆತ್ಮವಿಷಯವಾದ ಯಥಾರ್ಥಜ್ಞಾನದೊಡನೆ ಅಂದರೆ ಆತ್ಮನು ದೇಹಾದಿ ವಿಲಕ್ಷಣನು, ನಿತ್ಯನು,ಎಂಬಿದೇ ಮೊದಲಾದ ಪೂರ್ವೋಕ್ತ ಜ್ಞಾನದೊಡನೆ ಕೂಡಿರಬೇಕು. ಕಾಮ್ಯಕರ್ಮವಿಷಯವಾದ ಬುದ್ಧಿಯು ವ್ಯವಸಾಯವೆಂಬುವ ನಿಶ್ಚಯವಿಲ್ಲದೇ ಇರುವುದು. ಇದಕ್ಕೆ ಆತ್ಮನ ಯಥಾರ್ಥಜ್ಞಾನಾಪೇಕ್ಷೆಯಿಲ್ಲವು. ಆತ್ಮನು ದೇಹಕ್ಕಿಂತಲೂ ಭಿನ್ನನಾಗಿರುವುನೆಂಬೀ ಜ್ಞಾನಮಾತ್ರವೆ ಸಾಕಾಗಿರುವುದು. ಅಷ್ಟುಮಾತ್ರದಲ್ಲಿಯೇ ಸ್ವರ್ಗಾದಿಫಲಾಪೇಕ್ಷೆಯೂ, ಆ ಸ್ವರ್ಗಾದಿಫಲಕ್ಕೆತಕ್ಕಸಾಧನಭೂತವಾದ ಕರ್ಮಗಳನ್ನ ನುಷ್ಠಿಸುವಿಕೆಯೂ, ಅದರಿಂದುಂಟಾದ ಫಲವನ್ನನುಭವಿಸುವಿಕೆಯೂ, ವಿರೋಧವಿಲ್ಲದೇ ಸಂಭವಿಸಬಹುದಷ್ಟೆ. ವ್ಯವಸಾಯಾತ್ಮಿಕವಾದ ಬುದ್ಧಿಯು ಏಕವಿಷಯವಾಗಿಯೂ, ಕಾಮ್ಯಕರ್ಮವಿಷಯವಾದ ಅವ್ಯವಸಾಯಾತ್ಮಿಕವಾದ ಬುದ್ಧಿಯು ಅನೇಕವಿಷಯವಾಗಿಯೂ, ಇರುವುದು. ಅದು ಹ್ಯಾಗೆಂದರೇ ; ಮೊದಲು ಹೇಳಿರುವ ವ್ಯವಸಾಯಾತ್ಮಿಕವಾದ ಬುದ್ಧಿಯು ಮೋಕ್ಷವೆಂಬುವ ಒಂದೇಫಲಕ್ಕೆ ಸಾಧಕವಾಗಿರುವುದರಿಂದ ಆ ವಿಷಯವಾದ ಬುದ್ಧಿಯು ಒಂದೇ ಯಾಗಿರುವುದು. ಅಗ್ನೇ

ಋವೇವೊದಲಾದ ಅಯ ಯಾಗಗಳು ಪ್ರಯಾಜ ಅನುಯಾಜಾದಿಗ ಳೆಂಬ ಅಂಗದಿಂದ ಕೂಡಿದವುಗಳಾಗಿ ಸ್ವರ್ಗವೆಂಬುವ ಏಕಫಲಕ್ಕೆ ಹ್ಯಾಗೆ ಸಾಧನವಾಗುವುದೆಂಕೆಂದುಶಾಸ್ತ್ರಾರ್ಥವು ಒಂದೇಯಾಗಿರು ವುದರಿಂದ ತದ್ವಿಷಯುವಾದ ಬುದ್ದಿಯೂ ಹ್ಯಾಗೆಒಂದೇ ಯಾಗಿರುವು ದೋ;ಅದರಂತೆ ಇಲ್ಲಿಯೂ ಮೋಕ್ಷವೆಂಬುವ ಒಂದೇಫಲವನ್ನುದ್ದೇಶಿ ಸಿರುವುದೆಂಕೆಂದು ಶಾಸ್ತ್ರಾರ್ಥವು ಒಂದೇಯಾಗಿರುವುದರಿಂದ ಸಕಲ ಕರ್ಮಗಳಿಗೂ ಅಪೇಕ್ಷಿತವಾದ ವ್ಯವಸಾಯಾತ್ಮಿಕವಾದಬುದ್ಧಿಯೂ ಒಂದೇಯಾಗಿರುವುದು. ಕಾವ್ಯ ಫಲವನ್ನಪೇಕ್ಷಿಸುವನಿಗಂದರೊ ಪಶುಪುತ್ರಾನ್ನಾದಿಯಾದ ಅಪೇಕ್ಷಿತಫಲವು ಅನೇಕಗಳಾಗಿರುವುದ ರಿಂದ ತದ್ವಿಷಯುವಾದ ಬುದ್ಧಿಯೂ ಅನೇಕಗಳಾಗಿಯೆ ಇರುವುದು. ಅದರಲ್ಲಿಯೂ ದರ್ಶಪೂರ್ಣಮಾಸಾದಿ ಕರ್ಮಗಳು ಏಕಫಲಕ್ಕೋಸ್ಕರ ವಿಧಿಸಲ್ಪಟ್ಟಿದ್ದರೂ ಅವುಗಳಲ್ಲಿ ಆಯುಸ್ಸೇ ವೊದಲಾದ ಅನೇಕವಾ ದ ಅವಾಂತರ ಫಲಗಳನ್ನಪೇಕ್ಷಿಸಬೇಕಾಗಿರುವುದರಿಂದ ಅದಕ್ಕೆ ತ ಕ್ಕಂತೆ ಅವ್ಯವಸಾಯಾತ್ಮಿಕವಾದ ಬುದ್ಧಿಯು ಬಹುಶಾಖಾಭೇದಗಳು ಳ್ಳದ್ದಾಗಿರುವುದು. ಇದರಿಂದ ನಿತ್ಯನೈಮಿತ್ತಿಕರ್ಮಗಳಲ್ಲಿ ಪ್ರಧಾನ ವಾಗಿಯೂ ಅಪ್ರಧಾನವಾಗಿಯೂ ಅಪೇಕ್ಷಿಸಲ್ಪಡುವ ಫಲಾಪೇ ಕ್ಷೆಯುಂಬಿಟ್ಟು ಮೋಕ್ಷವೆಂಬುವ ಒಂದೇ ಫಲವನ್ನುದ್ದೇಶಿಸಿ ಸಕಲ ಕರ್ಮಗಳನ್ನನುಷ್ಠಿಸಬೇಕೆಂಬದಾಗಿಯೂ, ಸ್ವವರ್ಣಾ ಶ್ರಮೋಚಿತ ವಾದ ಕಾಮ್ಯಕರ್ಮಗಳನ್ನು ಫಲಾಸಕ್ತಿಯುಂಬಿಟ್ಟು ಮೋಕ್ಷಕ್ಕೆ ಸಾಧನವೆಂಬ ಬುದ್ಧಿಯೊಡನೆವಾಡುವ ನಿತ್ಯನೈಮಿತ್ತಿಕ ಕರ್ಮಗ ಳೊಡನೇ ಏಕೀಕರಿಸಿ ಯಥಾಶಕ್ತಿ ಅನುಷ್ಠಿಸಬೇಕೆಂದು ಹೇಳತೆಂ ದರಿಯಬೇಕು. ||೪೧||

(ಗೀ-೭) ಜ್ಞಾನೋಪಾಯವಿಷಯವಾದ ವಾಕ್ಯಗಳನ್ನು ಪರ ಸ್ಪರವಿರುದ್ಧವಾಗಿ ನಾನಾಮತಸ್ಥರು ನಾನಾವಿಧವಾಗಿ ಹೇಳುತಲಿ ರುವಲ್ಲಿ ಪರಮಾತ್ಮನಿಂದ ಹೇಳಲ್ಪಟ್ಟ ಪ್ರಕೃತವಾದ ಕರ್ಮಯೋಗ ವೆಂಬುವುದನ್ನೆ ಜ್ಞಾನೋಪಾಯವನ್ನಾಗಿ ಹ್ಯಾಗೆ ಹೇಳಬಹುದೆಂ ಬುವ ಶಂಕೆಯನ್ನು ಪರಿಹಾರವಾಡುತ್ತಾನೆ. ಎಲೈ ಕುರುಕುಲೋ ತ್ಪನ್ನನಾದ ಅರ್ಜುನನೆ! ಶಾಸ್ತ್ರಗಳಮಧ್ಯದಲ್ಲಿ ಪ್ರಮಾಣಗಳಿಂದ ನಿರ್ಣಯಿಸಲ್ಪಟ್ಟ ಬುದ್ಧಿಯು ಅಂದರೇ ಜ್ಞಾನೋಪಾಯ ಪ್ರತಿಪಾ

ದಕವಾದ ಶಾಸ್ತ್ರವು ಒಂದೇವಿಧವಾಗಿರುವುದು. ಈ ಬುದ್ಧಿಯೋ ವೈಷ್ಣವಧರ್ಮ ಪ್ರತಿಪಾದಕವಾಗಿರುವುದು. ಶಾಸ್ತ್ರರೂಪ ಪ್ರಮಾಣಗಳಿಂದ ಅರ್ಥನಿರ್ಣಯವಂ ಮಾಡಲಿಕ್ಕೆ ಶಕ್ತರಾಗದವರುಗಳಗೆ ಅವರವರುಗಳ ಮತಾನುಸಾರವಾಗಿ ಜ್ಞಾನೋಪಾಯ ಪ್ರತಿಪಾದಕವಾಗಿರುವ ಪರಸ್ಪರ ವಿರುದ್ಧಗಳಾದ ಈ ಕುತ್ಸಿತ ಶಾಸ್ತ್ರಗಳು ಅನೇಕಗಳಾಗಿರುವವು. ಆದುದರಿಂದ ನೀನು ಪ್ರಮಾಣಗಳಿಂದ ನಿರ್ಣಯಮಾಡಲ್ಪಟ್ಟ ಜ್ಞಾನೋಪಾಯದಲ್ಲಿ ( ಅಂದರೇ ನಿಷ್ಕಾಮ ಕರ್ಮಯೋಗದಲ್ಲಿ ) ವಿಶ್ವಾಸವಂ ಮಾಡು. ಅಪ್ರಾಮಾಣಿಕರ ಮತವಿವಾದಗಳಿಂದ ಪ್ರಾಮಾಣಿಕಾರ್ಥದಲ್ಲಿ ಅವಿಶ್ವಾಸವಂ ಮಾಡುವುದು ಉಚಿತವಲ್ಲವೆಂದು ತಾತ್ಪರ್ಯವು. ॥೪೧॥

ಮೂ ॥ ಯಾ ಮಿಮಾಂ ಪುಷ್ಪಿತಾಂ ವಾಚಂ ಪ್ರವದಂತ್ಯ ವಿಪಶ್ಚಿತಃ। ವೇದವಾದರತಾಃ ಪಾರ್ಥ ನಾನ್ಯದಸ್ತೀತಿವಾದಿನಃ ॥೪೨॥ ಕಾಮಾತ್ಮಾನ ಸ್ಸ್ವರ್ಗಪರಾ ಜನ್ಮಕರ್ಮಫಲಪ್ರದಾಂ । ಕ್ರಿಯಾವಿಶೇಷಬಹುಳಾಂ ಭೋಗೈಶ್ವರ್ಯಗತಿಂ ಪ್ರತಿ ॥೪೩॥ ॥ ಭೋಗೈಶ್ವರ್ಯಪ್ರಸಕ್ತಾನಾಂ ತಯಾಽಪಹೃತಚೇತಸಾಂ । ವ್ಯವಸಾಯಾತ್ಮಿಕಾಬುದ್ಧಿ ಸ್ಸಮಾಧೌನವಿಧೀಯತೇ ॥೪೪

ಪ॥ ಯಾಂ - ಇಮಾಂ - ಪುಷ್ಪಿತಾಂ - ವಾಚಂ - ಪ್ರವದಂತಿ - ಅವಿಪಶ್ಚಿತಃ । ವೇದವಾದರತಾಃ - ಪಾರ್ಥ - ನ - ಅನ್ಯತ್ - ಅಸ್ತಿ - ಇತಿ - ವಾದಿನಃ ॥೪೨॥ ಕಾಮಾತ್ಮಾನಃ - ಸ್ವರ್ಗಪರಾಃ - ಜನ್ಮ ಕರ್ಮಫಲಪ್ರದಾಂ । ಕ್ರಿಯಾವಿಶೇಷಬಹುಳಾಂ - ಭೋಗೈಶ್ವರ್ಯಗತಿಂ - ಪ್ರತಿ ॥೪೩॥ ಭೋಗೈಶ್ವರ್ಯಪ್ರಸಕ್ತಾನಾಂ - ತಯಾ - ಅಪಹೃತಚೇತಸಾಂ । ವ್ಯವಸಾಯಾತ್ಮಿಕಾ - ಬುದ್ಧಿಃ - ಸಮಾಧೌ - ನ - ವಿಧೀಯತೇ ॥ ೪೪ ॥

ಅ॥ ಹೇಪಾರ್ಥ - ಎಲೈ ಅರ್ಜುನನೇ ! ವೇದವಾದರತಾಃ - ವೇದಗಳಲ್ಲಿ ಅರ್ಥವಾದ ಪ್ರಮೇಯಗಳಲ್ಲಿ ವಿಶ್ವಾಸಶಾಲಿಗಳಾಗಿಯೂ, ನಾನ್ಯದಸ್ತೀತಿವಾದಿನಃ - ಸ್ವರ್ಗರೂಪವಾದ ಫಲಕ್ಕಿಂತಲೂ ಬೇರೇ ಉತ್ತಮವಾದ ಫಲವಿಲ್ಲವೆಂದು ಹೇಳುವವರಾಗಿಯೂ, (ಮ॥ ವೇದಗಳು ಪರಮಾತ್ಮನನ್ನೇ ಬೋಧಿಸುವವೆಂದರಿಯದವರಾಗಿಯೂ,

(ಗೀ-ವಿ) ಈಶ್ವರನೇ ಅಗಲೀ, ಮೋಕ್ಷವೆಂಬುವ್ರದಾಗಲೀ, ಇಲ್ಲವೆಂದು ವಾದಮಾಡ ತಕ್ಕವರಾಗಿಯೂ,) ಕಾಮಾತ್ಮಾನಃ- ಪುತ್ರಮಿತ್ರಕಳತ್ರಾದಿಗಳಲ್ಲಿ ಅಭಿಮಾನಪೂರ್ಣ ಮಾದ ಮನಸ್ಸುಳ್ಳವರಾಗಿಯೂ, ಸ್ವರ್ಗಪರಾಃ - ಸ್ವರ್ಗವೇ ಅತಿಶಯಿತಫಲವೆಂದು ತಿಳಿಸುತಲಿರುವುವರಾಗಿಯೂ ಇರುವ, ಅವಿಪಶ್ಚಿತಃ -ಜ್ಞಾನರಹಿತರಾದವರು, ಭೋಗೈ ಶ್ವರ್ಯಗತಿಂ ಪ್ರತಿ-ಭೋಗೈಶ್ವರ್ಯಗಳನ್ನು ಹೊಂದುವುದಕ್ಕಾಗಿ,ಕ್ರಿಯಾವಿಶೇಷಬಹುಲಾಂ- ನಾನಾಕರ್ಮಭೇದಗಳಿಂದ ವಿಸ್ತಾರವುಳ್ಳದ್ದಾಗಿಯೂ, ಜನ್ಮ ಕರ್ಮಫಲಪ್ರದಾಂ-ಸ್ವ ರ್ಗರೂಪವಾದ ಫಲವನ್ನನುಭವಿಸಿದನಂತರದಲ್ಲಿ ಪುನಃ, ಜನ್ಮ, ಕರ್ಮ, ವೆಂಬಫಲಗ ಳಂ ಕೊಡುತಲಿರುವ್ರದಾಗಿಯೂ, ಪುಷ್ಪಿತಾಂ - ಫಲರಹಿತವಾದ ಪುಷ್ಪಗಳುಳ್ಳ ಮರಗ ಳಂತೇ ಇರುತಲಿರುವ್ರದಾಗಿಯೂ, ಇರುವ, ಇಮಾಂ -ಇಂತಹ, ಯಾಂವಾಚಂ-ಯಾ ವತೂತನ್ನು, ಪ್ರವದಂತಿ-ಹೇಳುವರೊ, ತಯಾ-ಅಮಾತಿನಿಂದ, ಅಪಹೃತಚೇತಸಾಂ- ಅಪಹರಿಸಲ್ಪಟ್ಟ ಮನಸ್ಸುಳ್ಳವರಾಗಿಯೂ, ಇರುವ, ಭೋಗೈಶ್ವರ್ಯ ಪ್ರಸಕ್ತಾನಾಂ- ಭೋಗೈಶ್ವರ್ಯಗಳಲ್ಲಿ ಆಸಕ್ತರಾದವರಿಗೇ, ವ್ಯವಸಾಯಾತ್ಮಿಕಾ - ನಿಶ್ಚಯಾತ್ಮಕವಾದ, (ರಾ॥ ಆತ್ಮವಿಷಯವಾದ ನಿಶ್ಚಯಜ್ಞಾನಪೂರ್ವಕವಾಗಿ ಮೋಕ್ಷಸಾಧನಭೂತವಾ ಗಿರುವ ಕರ್ಮವಿಷಯವಾದ,) ಬುದ್ಧಿಃ - ಜ್ಞಾನವು, ಸಮಾಧೌ - ಮನಸಿನಲ್ಲಿ, (ಶ್ರೀ) ಯೋಗಸಮಾಧಿಯಲ್ಲಿ, (ಮ) ಈಶ್ವರಧ್ಯಾನವಿಷಯದಲ್ಲಿ, (ಗೀ-ವಿ) ಪರಮಾತ್ಮ ನಲ್ಲಿ,) ನವಿಧೀಯತೇ - ಉಂಟಾಗುವುದಿಲ್ಲವು. ॥೪೨॥೪೩॥೪೪॥

ತಾ॥ ಸ್ವರ್ಗಾದಿ ಭೋಗಗಳಲ್ಲಿ ಅತ್ಯಂತಾಸಕ್ತವಾಗಿರುವ ಮನ ಸ್ಸುಳ್ಳವರಾಗಿ, ಅಂತಹ ಸ್ವರ್ಗಾದಿಗಳಿಗಿಂತಲೂ ಬೇರೆಪುರುಷಾರ್ಥ ವಿಲ್ಲವೆಂದು ವಾದಿಸುತಲಿರುವಂತವರಾದ ಕೆಲವು ಜ್ಞಾನಹೀನರು ವೇದ ದಲ್ಲಿ ಮೇಲೆನೋಡುವದಕ್ಕೆ ರಮಣೀಯವಾಗಿ ತೋರುವ(ಸ್ವರ್ಗಾದಿ ಲೋಕಗಳಲ್ಲಿ ಪ್ರಾಪ್ತವಾಗುವ,ಸ್ರಕ್ಚಂದನರಂಭಾಪುರಿ ರಂಭರಾದಿ ದಿವ್ಯಭೋಗಗಳನ್ನು ಸ್ಮರಿಸಿಕೊಂಡು ಅದರಲ್ಲಿ ಇವರುಗಳಿಗೆ ಮನ ಸ್ಸು ಅಪಹರಿಸಲ್ಪಡುವುದಲ್ಲದೇ ಆಸ್ವರ್ಗದಲ್ಲಿರುವ ಅನಿತ್ಯತ್ವ ದುಃಖ ಮಿಶ್ರತ್ವ,ದುಃಖವನ್ನೆ ಉತ್ತರಫಲವಾಗಿರುವಿಕೆ ಮೊದಲಾದ ದೋ ಷಸಮೂಹಗಳನ್ನು ಚಿಂತಿಸದೆ ಇರುವಂತವರಾಗುವುರು.) ಸ್ವರ್ಗಾದಿ ಭೋಗಗಳನ್ನು ಹೇಳುವಂತಾ ಕೆಲವು ವೇದವಾಕ್ಯಗಳನ್ನಾಶ್ರಯಿಸಿ ಕೊಂಡು ಅನುಭೋಗೈಶ್ವರ್ಯಗಳಂ ಕುರಿತು ಹೇಳುವುವೆಂತಲೂ, ತತ್ವಜ್ಞಾನವಿಲ್ಲದೇನೆ ಕೇವಲವಾಗಿ ಕ್ರಿಯಾವಿಶೇಷಗಳನ್ನು ಮಾತ್ರ ವೆ ಅಧಿಕವಾಗಿಟ್ಟುಕೊಂಡಿರುವುದೆಂತಲೂ, ಸ್ವರ್ಗಾದಿಫಲಗಳಂ ಕೊಟ್ಟಮೇಲೆ ಪುನಃ ಜನ್ಮ ಕರ್ಮವೆಂಬ ಫಲವನ್ನು ಕೊಡುವುವೆಂ

ತಲೂ ; ಈ ಪ್ರಕಾರವಾಗಿ ಆಭೋಗದಲ್ಲಿರುವ ಅಪೇಕ್ಷೆಯಿಂದ ವ್ಯಥಾವಾದವನ್ನು ಮಾಡುವರು. ಭೋಗೈಶ್ವರ್ಯಗಳನ್ನು ಪ್ರತಿಪಾದಿಸುವ ಆವಾಕ್ಯಗಳಿಂದ ಅವರುಗಳ ಜ್ಞಾನವು ಅಪಹರಿಸಲ್ಪಟ್ಟಿರುವುದರಿಂದ ಅವರಹೃದಯದಲ್ಲಿ ಒಂದುಕಾಲದಲ್ಲಿಯೂ ಪೂರ್ವೋಕ್ತವಾದ ವ್ಯವಸಾಯಾತ್ಮಕವಾಗಿರುವ ನಿಶ್ಚಯಜ್ಞಾನ ವುಂಟಾಗುವುದೇ ಇಲ್ಲವು. ಆದುದರಿಂದ ಅವರುಗಳಂತೆ ಮೋಕ್ಷಾಪೇಕ್ಷೆಯುಳ್ಳವನು ಒಂದುಕಾಲದಲ್ಲಿಯು ಕಾಮ್ಯಕರ್ಮಗಳಲ್ಲಿ ಮನಸ್ಸನ್ನಿಡಬಾರದು||೪೨||೪೩||೪೪||

ಮೂ || ತ್ರೈಗುಣ್ಯ ವಿಷಯಾವೇದಾ ನಿಸ್ತ್ರೈಗು
ಣ್ಯೋ ಭವಾರ್ಜುನ | ನಿರ್ದ್ವಂದ್ವೋ ನಿತ್ಯಸತ್ವಸ್ಥೋ
ನಿರ್ಯೋಗ ಕ್ಷೇಮ ಆತ್ಮವಾನ್ ||೪೫|| ಯಾವಾನರ್ಥ
ಉದಪಾನೆ ಸರ್ವತ ಸ್ಸಂಪ್ಲುತೋದಕೆ | ತಾವಾನ್
ಸರ್ವೇಷು ವೇದೆಷು ಬ್ರಾಹ್ಮಣಸ್ಯ ವಿಜಾನತಃ|| ||೪೬||

ಪ|| ತ್ರೈಗುಣ್ಯವಿಷಯಾಃ - ವೇದಾಃ- ನಿಸ್ತ್ರೈಗುಣ್ಯಃ - ಭವ- ಅರ್ಜುನ| ನಿರ್ದ್ವಂದ್ವಃ – ನಿತ್ಯಸತ್ವಸ್ಥಃ - ನಿರ್ಯೋಗಕ್ಷೇಮಃ - ಆತ್ಮವಾನ್|| ||೪೫||

ಪ|| ಯಾವಾನ್ - ಅರ್ಥಃ - ಉದಪಾನೇ - ಸರ್ವತಃ – ಸಂಪ್ಲುತೋದಕೆ| ತಾವಾನ್ - ಸರ್ವೇಷು – ವೇದೇಷು – ಬ್ರಾಹ್ಮಣಸ್ಯ – ವಿಜಾನತಃ. ||೪೬|

ಅ|| ಹೇ ಅರ್ಜುನ – ಎಲೈ ಅರ್ಜುನನೆ! ವೇದಾಃ - ವೇದಗಳು, ತ್ರೈಗುಣ್ಯವಿಷಯಾಃ - ಸತ್ವರಜಸ್ತಮಸ್ಸುಗಳೆಂಬ ತ್ರಿಗುಣಗಳಿಗೇ ಸ್ವಾಧೀನರಾಗಿರುವವರ ವಿಷಯಗಳಾಗಿರುವುವು. (ಶಂ || ತ್ರಿಗುಣಗಳಿಂದುಂಟಾಗುವ ಸಂಸಾರಸ್ವರೂಪವಂ ಬೋಧಿಸುವುವು. (ಗೀ || ವಿ) ಸ್ವರ್ಗಾದಿಗಳನ್ನು ತಿಳಸತಕ್ಕವುಗಳು, ತ್ವಂತು– ನೀನೊ, ನಿಸ್ತ್ರೈಗುಣ್ಯಃ - ತ್ರಿಗುಣಗಳಂಬಿಟ್ಟವನಾಗಿ, (ಗೀ || ವಿ|| ) ತ್ರಿಗುಣಗಳನ್ನುಬಿಟ್ಟವನಾಗಿ ಅಂದರೆ ತ್ರಿಗುಣಗಳಿಂದುಂಟಾಗುವ ಕಾರ್ಯಗಳನ್ನು ತ್ಯಾಗಮಾಡಿದವನಾಗಿ, ನಿರ್ದ್ವಂದ್ವಃ- ಶೀತೋಷ್ಣಾದಿ ದ್ವಂದ್ವಶೂನ್ಯನಾಗಿ, ನಿತ್ಯಸತ್ವಸ್ಥಃ– (ಶಂ || ಭಾ|| ) ನಿತ್ಯವೂ ಸತ್ವಗುಣದಲ್ಲಿರತಕ್ಕವನಾಗಿ, (ಶ್ರೀ) ಯಾವಾಗಲೂಧೈರ್ಯವುಳ್ಳವನಾಗಿ, (ಗೀ || ವಿ) ಯಾವಾಗಲೂ ಹರಿಧ್ಯಾನಪರನಾಗಿ.) ನಿರ್ಯೋಗಕ್ಷೇಮಃ - ಯೋಗಕ್ಷೇಮಗಳಿಲ್ಲದವನಾಗಿ, (ಅಪ್ರಾಪ್ತಸ್ಯಪ್ರಾಪ್ತಿರ್ಯೋಗಃ - ತನಗೆಪ್ರಾಪ್ತವಾಗದ ವಸ್ತುವಂ ಹೊಂದುವಿಕೆಯು ಯೋಗವೆನಿಸುವುದು, ಪ್ರಾಪ್ತಸ್ಯಪರಿರಕ್ಷಣಂಕ್ಷೇಮಃ - ಪ್ರಾಪ್ತವಾದ ವಸ್ತುವನ್ನು ರಕ್ಷಿಸಿಕೊಳ್ಳುವುದು ಕ್ಷೇಮವೆನಿಸುವುದು. ಈ ಅರ್ಥವನ್ನು (ಶಂ || ರಾ|| ಶ್ರೀ || ಗೀ || ವಿ|| ) ಇವರೆಲ್ಲರು ಪೇಳೆ

ರೂಪವಾಗಿಯೂ ಹೇಳಿರುತ್ತಾರೆ. (ಸ|| ಯೋಗಶ್ಚ ಕ್ಷೇಮಂಚಯೋಗಕ್ಷೇಮೌ-ನಿರ್ಗತೌಯೋಗಕ್ಷೇಮೌ ಯಸ್ಮಾತ್ಸನಿರ್ಯೋಗಕ್ಷೇಮಃ) ಆತ್ಮವಾಂಶ್ಚ - ಆತ್ಮಜ್ಞಾನಿಯಾಗಿಯೂ, (ಗೀ || ವಿ || ಶ್ರೀಹರಿಯೇ ಸ್ವಾಮಿ ಎಂಬುವ ನಮ್ಮಕವೃಳ್ಳವನಾಗಿಯೂ,) ಭವ – ಆಗು. ||೪೫||

ಅ || ಸರ್ವತಃ - ಸುತ್ತುಮುತ್ತಲೂ, ಸಂಪ್ಲುತೋದಕೇ - ಪರಿಪೂರ್ಣವಾದ ನೀರುಳ್ಳ, ಉದಪಾನೇ – ಕೆರೇಮೊದಲಾದ ಸ್ಥಾನದಲ್ಲಿ, ಯಾವಾನರ್ಥಃ- ದಾಹಯುಕ್ತನಿಗೇ ಎಷ್ಟು(ಪ್ರ)ಯೋಜನವೋ, ಸರ್ವೇಷು ವೇದೇಷು – ಸಮಸ್ತವೇ ಗಳಲ್ಲಿ, ವಿಜಾನತಃ - ಜ್ಞಾನಿಯಾದ, (ಮೋಕ್ಷಾರ್ಥಿಯಾದ) ಬ್ರಾಹ್ಮಣಸ್ಯ - ವೈದಿಕನಾದವನಿಗೆ, ತಾವಾನ್, (ಗ್ರಾಹ್ಯಃ) ಅಷ್ಟುಮಾತ್ರವೇ ಪರಿಗ್ರಹಿಸತಕ್ಕದ್ದು. ||೪೬||

ಶಂ||ಭಾ||ವಿವೇಕ ವಿಲ್ಲದವರು ಕೂಡ ವೇದಾಭ್ಯಾಸವಂಮಾಡಿದರೆ ವಿವೇಕಬುದ್ಧಿಯುಳ್ಳವ ರಾಗುವರೋ ಅಂದರೆ ಅಂತವರು ವೇದಾಭ್ಯಾಸವಂಮಾಡಿದರೂ ಸ್ವರ್ಗಾದಿಪುಣ್ಯ ಫಲಗಳಲ್ಲಾ ಸಕ್ತರಾಗುವರು. ಅಲ್ಲದೆ ಫಲಾಪೇಕ್ಷಾರಹಿತ ರಾಗಲಾರರು. ಅಂತಹಫಲಾಪೇಕ್ಷಾ ರಹಿತರಿಗೆವಿವೇಕ ಬುದ್ಧಿ ಯುಂಟಾಗಲಾರದೆಂದೀಶ್ಲೋಕದಿಂದರ್ಜುನನಿಗೆ ಪರಮಾತ್ಮನು ಬೋಧಿಸುತ್ತಾನೆ—ವೇದಗಳು ತ್ರೈಗುಣ್ಯ ವಿಷಯಗಳು- ಅಂದರೆಸತ್ವರಜಸ್ತಮಸ್ಸುಗಳೆಂಬ ಗುಣಗಳನ್ನೆ ಸ್ವರೂಪವಾಗಿ ಉಳ್ಳ ಸಂಸಾರವನ್ನುಕುರಿತು ಹೇಳತಕ್ಕವುಗಳಾಗಿರುವುವು. ಅಂದರೆ ಜ್ಯೋತಿಷ್ಟೋಮಾದಿಯಜ್ಞಕರ್ಮಗಳನ್ನು ವಿಧಿಸುವ ವೇದವಾಕ್ಯಗಳು ಅಂತಹಯಜ್ಞಕರ್ಮ ದಿಂದುಂಟಾಗುವ ಸ್ವರ್ಗಪ್ರಾಪ್ತಿ ರೂಪವಾದ ಅನಿತ್ಯಫಲವನ್ನೆ ಬೋಧಿಸುವದಾಗಿ ಸತ್ವಗುಣ ವ್ಯಾಪಾರವಾಗಿರುವುವು. ಈಪ್ರಕಾರವೆ ತಮೋಗುಣದಿಂದುಂಟಾಗುವ ಕೇವಲಪಾಪಕರ್ಮವು ನರಕಪಾತವನ್ನು ರಜೋಗುಣದಿಂ ದುಂಟಾಗುವ ಪುಣ್ಯಪಾಪಗಳು ತಮ್ಮತಮ್ಮಗಳ ಫಲರೂಪವಾದ ಸುಖ ದುಃಖಗಳನ್ನು ಕೊಡುವುವು. ಆದುದರಿಂದ ನೀನು ಕಾಮ್ಯ ಕರ್ಮಗಳನ್ನು ಮಾಡಿ ಸುಖ ದುಃಖರೂಪವಾದ ಫಲಗಳನ್ನಪೇಕ್ಷಿಸದೇ ನಿಷ್ಕಾಮವಾಗಿಭಗವದರ್ಪಣ ಬುದ್ಧಿಯಿಂದ ಕರ್ಮಗಳನ್ನು ಮಾಡುತಲಿರುವಂತವನಾಗು. ಮತ್ತುಸುಖ ದುಃಖಗಳಿಗೆ ಕಾರಣಗಳಾಗಿರುವ ಪರಸ್ಪರ ವಿರುದ್ಧವಾದ ಶೀತೋಷ್ಣಾದಿದ್ವಂದ್ವಗಳಿಂದ ಬಿಡಲ್ಪಟ್ಟು ಅಂತಹ ಶೀತೋಷ್ಣಾದಿಗಳನ್ನು

ನಹಿಸಲು ಸಾಧನವಾದಸತ್ವಗುಣವನ್ನಾಶ್ರಯಿಸುವಂತವನಾಗಿರು.ಆದರೆ ಇಲ್ಲದೇ ಇರುವುದಂ ಸಂಪಾದಿಸಿಕೊಳ್ಳುವಿಕೆ ಎಂಬ ಯೋಗದಲ್ಲಿಯೂ, ಪ್ರಾಪ್ತವಾಗಿರುವ ವಸ್ತುವನ್ನು ಸಂರಕ್ಷಣೆ ಮಾಡಿಕೊಳ್ಳುವಿಕೆ ಎಂಬಕ್ಷೇಮದಲ್ಲಿಯೂ, ಆಸಕ್ತವಾದ ಮನಸ್ಸುಳ್ಳವಂತವನಿಗೆ ಶ್ರೇಯಸ್ಸಾಧಕವಾದ ಮಾರ್ಗದಲ್ಲಿ ಪ್ರವೃತ್ತಿ ಯುಂಟಾಗುವದು ದರ್ಲಭವಾಗಿರುವುದರಿಂದ ಯೋಗಕ್ಷೇಮಗಳೆಂಬ ವ್ಯಾಪಾರಗಳಂ ಬಿಡಬೇಕೆಂದು ಹೇಳಿತು. ಮತ್ತು ಯೋಗಕ್ಷೇಮಗಳು ಜೀವನಕ್ಕೆ ಕಾರಣಗಳಾಗಿರುವುದರಿಂದ ಪುರುಷಾರ್ಥ ಹೇತುವಾಗುವುದೆಂದೆಣಿಸದೆ ಯೋಗಕ್ಷೇಮದಲ್ಲಿ ಆಸಕ್ತನಾದವನಿಗೇ ಮೋಕ್ಷರೂಪಪುರುಷಾರ್ಥವು ಸಿದ್ಧಿಯಾಗುವುದಿಲ್ಲವೆಂತಲೇ ತಿಳಿಯಬೇಕು. ಆದುದರಿಂದರೆ "ನಿರ್ಯೋಗಕ್ಷೇಮಃ,, ಎಂದು ಹೇಳಿತು.

ಆದರೆ ಶೀತೋಷ್ಣಾದಿಗಳನ್ನು ಸಹಿಸಿದರೂ ಕ್ಷುತ್ಪಿಪಾಸಾದಿಗಳಿಂದುಂಟಾದ ಭಾಧೆಗಳನ್ನು ಸಹಿಸಲಾಗುವದಿಲ್ಲವಾದುದರಿಂದಅದಕ್ಕಾಗಿ ಯೋಗಕ್ಷೇಮಗಳೆಂಬ ವ್ಯಾಪಾರ ಪ್ರವೃತ್ತನಾಗಿರಬೇಕೆಂದರೆ ಅದಕ್ಕಾಗಿ "ಆತ್ಮವಾನ್,, ಎಂದು ಹೇಳಿರುವುದು. ಆತ್ಮವಾನ್ ಅಂದರೆ ಆತ್ಮಜ್ಞಾನವುಳ್ಳವನೆಂದರ್ಥವು. ದೃಢವಾದ ಆತ್ಮಜ್ಞಾನವುಳ್ಳವನು ಪರಮಾತ್ಮನನ್ನು ನಂಬಿ ಅವನಧ್ಯಾನಾದಿಗಳನ್ನು ಮಾಡುವಂತವನಾಗಿದ್ದರೆ ಆ ಪರಮಾತ್ಮನೆ ಇವನ ಯೋಗಕ್ಷೇಮಾದಿ ನಿರ್ವಾಹವಂ ಮಾಡುವುನೆಂದು ತಾತ್ಪರ್ಯವು. (ಈ ಅರ್ಥವು "ಅನನ್ಯಾಶ್ಚಿಂತಯಂತೋಮಾಂ ಯೇಜನಾಃಪರ್ಯುಪಾಸತೇ । ತೇಷಾಂನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂವಹಾಮ್ಯಹಂ ॥ ಎಂಬುವದಾಗಿ ಪರಮಾತ್ಮನೇಬೇರೊಂದು ಪ್ರಕರಣದಲ್ಲಿಯು ಹೇಳಿರುವುದು.) ತನ್ನಯೋಗಕ್ಷೇಮ ನಿರ್ವಾಹವನ್ನು ಪರಮಾತ್ಮನು ಮಾಡಲಾಗಿ ಆವಿಷಯದಲ್ಲಿ ತಾನು ಮಾಡುವ ಪ್ರಯತ್ನವು ಅನುಚಿತವೆಂದು ತಾತ್ಪರ್ಯವು. ಮತ್ತು ಈಗ ನಿನಗೆ ಹೇಳುವ ವಿಷಯಗಳೆಲ್ಲವು ಮುಮುಕ್ಷು ವಿಷಯವಾಗಿರುವುದರಿಂದ ನಿನಗೇ ಈ ಉಪದೇಶದಿಂದ ಪ್ರಯೋಜನವಿಲ್ಲವೆಂದು ಚಿಂತಿಸದೇ ತನ್ನ ಕುಲಕ್ಕೆ ಉಚಿತವಾದ ಧರ್ಮಗಳನ್ನು ಮಾಡುವಂತವನ ವಿಷಯವೆಂಬದಾಗಿ ತಿಳಿದುಕೊಂಡು ನಿಷ್ಕಾಮನಾಗಿ

ಶೀತೋಷ್ಣಾದಿ ದ್ವಂದ್ವಗಳನ್ನು ಸಹಿಸುತ ಸರ್ವಕಾಲದಲ್ಲಿಯು ಸತ್ವಗುಣವನ್ನಾಶ್ರಯಿಸಿ ಯೋಗಕ್ಷೇಮರಹಿತನಾಗಿಯೂ, ಆತ್ಮಜ್ಞಾನವುಳ್ಳವನಾಗಿಯೂ, ಶಬ್ದಾದಿವಿಷಯಗಳಲ್ಲಾಸಕ್ತಿಯೆಂಬ ಪ್ರಮಾದರಹಿತನಾಗಿಯೂ, ವೇದೋಕ್ತವಾದ ವರ್ಣಾಶ್ರಮೋಚಿತ ವಾಗಿರುವ ಧರ್ಮಗಳನ್ನು ಮಾಡುವಂತವನಾಗಿರೆಂದು ಶ್ರೀಕೃಷ್ಣನು ಅರ್ಜುನನಿಗೇ ಬೋಧಿಸಿದನೆಂದು ತಾತ್ಪರ್ಯವು. ||೪೫||

(ಶಂ || ಭಾ) ಯಾಗಾದಿ ಕರ್ಮಗಳನ್ನು ಮಾಡುವುದರಿಂದ ವೇದಗಳಲ್ಲಿ ಯಾವಫಲವು ಪ್ರಾಪ್ತ ವಾಗುವುದೆಂದು ಹೇಳಲ್ಪಡುವುದೊ ಆ ಫಲವನ್ನುಪೇಕ್ಷಿಸದೆ ಅಂತಹ ಫಲಾಭಿಸಂಧಿರಹಿತವಾದ ಕರ್ಮವನ್ನು ಈಶ್ವರಾರ್ಪಣ ಬುದ್ಧಿಯೊಡನೆ ಮಾಡುವುದರಿಂದ ಪ್ರಯೋಜನ ವಿಲ್ಲವೆಂಬ ಶಂಕೆಯನ್ನು ಪರಿಹರಿಸುತ್ತಾನೆ. ಲೋಕದಲ್ಲಿ ಯಾವದರಲ್ಲಿರುವ ಜಲವು ಪಾನಯೋಗ್ಯವಾಗುವುದೊ; ಅದನ್ನು ಉದಪಾನ ವೆನ್ನುವರು. ಅಂತಹ ಉದಪಾನದಲ್ಲಿ (ಕೂಪ - ಕೊಂಚವಾಗಿ ನೀರುಳ್ಳ ಭಾವಿಗಳು, ತಟಾಕ ಅಂದರೆ ಕೆರೆಗಳು.) ಅಂದರೇ ಕೂಪ ತಟಾಕಾದಿಗಳಲ್ಲಿ ನೀರು ಸ್ವಲ್ಪವೇ ಯಿರುವುದರಿಂದ ಅಲ್ಪವಾದ ಸ್ನಾನಪಾನಾದಿ ರೂಪವಾಗಿರುವ ಯಾವ ಪ್ರಯೋಜನವುಂಟೊ ಅಂತಹ ಪ್ರಯೋಜನವು ಅಪರಿಮಿತವಾದ ಜಲವುಳ್ಳ ದೊಡ್ಡದಾಗಿರುವ ಜಲಾಶಯಗಳಲ್ಲುಂಟಾಗುವುದು. ಇದರಂತೆ ವೇದಗಳಲ್ಲಿ ಕಾಮ್ಯಕರ್ಮಗಳು ಸ್ವರ್ಗಾದಿರೂಪವಾದ ಆಕರ್ಮಫಲಗಳೂ ಮಿತವಾದ ಜಲವುಳ್ಳ ಕೂಪಸ್ಥಾನೀಯವಾಗಿರುವುದೆಂದು ಹೇಳಲ್ಪಟ್ಟಿರುವುದು. ಬ್ರಹ್ಮಜ್ಞಾನದಿಂದುಂಟಾಗುವಫಲವು ಅಪರಿಮಿತವಾಗಿರುವ ಜಲಾಶಯಸ್ಥಾನೀಯವಾಗಿರುವುದಾಗಿಯೂ ಹೇಳಲ್ಪಟ್ಟಿರುವದು. ವೇದೋಕ್ತವಾದಕರ್ಮಗಳಲ್ಲಿ ಯೆಷ್ಟುಫಲವು ಹೇಳಲ್ಪಟ್ಟಿರುವುದೊ ಅಂತಹ ವಿಶಿಷ್ಟಫಲವು ಆತ್ಮತತ್ವವನ್ನು ತಿಳಿದಿರುವ ಕರ್ಮಸನ್ಯಾಸ ಮಾಡುವಂತವನಿಗುಂಟಾಗುವುದು. ಅಂದರೆ ಸಕಲ ಕರ್ಮಗಳನ್ನು ಮಾಡುವುದರಲ್ಲಿ ಯಾವಪ್ರಯೋಜನವೊ ಅಂತಹ ಪ್ರಯೋಜನವು ಬ್ರಹ್ಮಜ್ಞಾನದಿಂದುಂಟಾಗುವ ಫಲದಲ್ಲಿ ಅಡಗಿರುವುದೆಂದರ್ಥವು. ಮತ್ತು ,, ಯಾವನು ಆತ್ಮತತ್ವವನ್ನು ಸ್ಪಷ್ಟವಾಗಿ ತಿಳಿದುಕೊಳ್ಳು

ತ್ತಾನೆಯೊ ಅಂತವನು ಲೋಕದಲ್ಲಿರುವ ಸರ್ವಜನಗಳು ಮಾಡುವ ಸಕಲ ಸತ್ಕರ್ಮ ಫಲವನ್ನು ಹೊಂದುತ್ತಾನೆ. ಮತ್ತು ಲೋಕದಲ್ಲಿ ಸಕಲವು ಬ್ರಹ್ಮಸ್ವರೂಪವೆಂದು ಯಾವನು ತಿಳಿದುಕೊಳ್ಳುತ್ತಾನೆ ಯೊ ಆತವನು ಸರ್ವಜ್ಞನಾಗುವನು,, ಎಂಬೀ ಅರ್ಥವಂ ಹೇಳುವ ಶ್ರುತಿ ಪ್ರಮಾಣವುಕೂಡ ಕರ್ಮಫಲಕ್ಕೆ ಜ್ಞಾನಫಲದಲ್ಲಿಂತರ್ಭಾವವಂ ಹೇಳುವುದು. ಮತ್ತು ಕರ್ಮಫಲವು ಸಗುಣಜ್ಞಾನದಲ್ಲಂತರ್ಭವಿಸು ವುದೆಂಬದಾಗಿ ಸಂವರ್ಗ ವಿದ್ಯೆಯಲ್ಲಿ ಹೇಳಿರುವುದರಿಂದ ನಿರ್ಗುಣಬ್ರ ಹ್ಮಜ್ಞಾನದಲ್ಲಿ ಇದಕ್ಕೆ ಅಂತರ್ಭಾವವನ್ನು ಹೇಳಬಹುದೋ ಅಂದರೇ « ಸರ್ವಂಕರ್ಮಾಖಿಲಂಪಾರ್ಥಜ್ಞಾನೇಪರಿಸಮಾಪ್ಯತೇ— ಈಶ್ವರಾರ್ಪ ಣಬುದ್ಧಿಯಿಂದ ಮಾಡುವ ಸಕಲ ಕರ್ಮವು ಫಲದಿಂದಕೂಡಿ ಬ್ರಹ್ಮ ಜ್ಞಾನದಲ್ಲಡಗಿರುವುದು ,, ಎಂಬದಾಗಿ ಮುಂದೆಯು ಪರಮಾತ್ಮ ನು ಉಪದೇಶಿಸುವುದರಿಂದ ಕರ್ಮಫಲಕ್ಕೆ ಜ್ಞಾನಫಲದಲ್ಲಂತರ್ಭಾವ ವನ್ನು ಸ್ಪಷ್ಟವಾಗಿ ಹೇಳಬಹುದು. ಆದರೆ ಜ್ಞಾನನಿಷ್ಠೆಯಿಂದಲೇ ಸಕಲ ಕರ್ಮಫಲವು ಪ್ರಾಪ್ತವಾಗುವುದರಿಂದ ಕರ್ಮವನ್ನಪೇಕ್ಷಿಸದೇ ನೆ ಜ್ಞಾನನಿಷ್ಠೆಯಲ್ಲಿಯೇ ಇರಕೂಡದೋ ಅಂದರೇ ದೊಡ್ಡದಾಗಿ ರುವ ಅಪರಿಮಿತೋದಕವುಳ್ಳ ಜಲಾಶಯಗಳು ಲಭಿಸುವವರಿಗೂ ಸಮೀಪದಲ್ಲಿ ಪ್ರಾಪ್ತವಾಗಿರುವ ಚಿಕ್ಕ ಕೊಳಗಳಲ್ಲಿ ಸ್ನಾನಪಾನಾದಿ ಕೃತ್ಯಗಳನ್ನು ನೆರವೇರಿಸುವಂತಹ ನ್ಯಾಯದಿಂದ ಬ್ರಹ್ಮಜ್ಞಾನ ನಿ ಷ್ಠಾಪ್ರಾಪ್ತಿಯಾಗುವವರಿಗೂ ಕರ್ಮಾಧಿಕಾರಿಯಾಗಿ ಕರ್ಮವಂ ಮಾಡು ತಿರಬೇಕೆಂದು ತಿಳಿಯಬೇಕು. ॥೪೬॥

(ರಾ॥ಭಾ॥) ಪೂರ್ವೋಕ್ತಪ್ರಕಾರವಾಗಿ ಪುನರ್ಜನ್ಮಾದಿಗಳಂ ಕೊಡುವಂತ ಅಲ್ಪಮಾದಫಲಕ್ಕೆ ಸಾಧನವಾಗಿರುವ ಕಾಮ್ಯ ಕರ್ಮಗಳು ಕೆಲವು ಉಂಟೆಂಬದಾಗಿ ವೇದಗಳಲ್ಲಿ ಹೇಳಿರುವಂತೇ ತಿಳಿಯಬರು ವುದರಿಂದ ಜೀವಾತ್ಮನ ಉಜ್ಜೀವನದಲ್ಲಿ ಸಾವಿರಾರು ತಾಯಿತಂದೆಗ ಳಿಗಿಂತಲೂ ಅತ್ಯಧಿಕವಾಗಿ ಹಿತಕಾರಿಗಳಾದ ವೇದಗಳು ಅಕಾಮ್ಯ ಕರ್ಮಗಳನ್ನು ಪ್ರತಿಪಾದಿಸುವುದು ವ್ಯರ್ಥವೇ ಆಗುವುದು. ಆದುದರಿಂದ ಅಂತಹ ವೇದೋಕ್ತವಾಗಿರುವ ಕರ್ಮಗಳನ್ನು ತ್ಯಾಜ್ಯವೆಂದುಹೇಳುವು ದು ಉಚಿತವಲ್ಲವೆಂಬೀ ಶಂಕಾಪರಿಹಾರಾರ್ಥವಾಗಿ ಈಶ್ಲೋಕವನ್ನು

ಪರಮಾತ್ಮನು ಅರ್ಜುನನಿಗೆ ಬೋಧಿಸುತ್ತಾನೆ— ಲೋಕದಲ್ಲಿ ಸಾತ್ವಿಕರು, ರಾಜಸರು, ತಾಮಸರು, ಎಂಬದಾಗಿ ಮೂರುಬಗೆಯಾದ ಪುರುಷರಿರುವರು ; ಅವರವರುಗಳ ಗುಣಾನುಗುಣವಾಗಿ ಸ್ವರ್ಗವೇ ಮೊದಲಾದ ಫಲವನ್ನು ವೇದವು ಹೇಳುವುದು. ಆರೀತಿಯಾಗಿ ವೇದವು ಹೇಳದೇಹೋದರೆ ಇವರುಗಳು ರಜೋಗುಣ ತಮೋಗುಣಗಳಿಗೆ ವಶಪಟ್ಟಿರುವುವರಿಂದ ಸಾತ್ವಿಕವಾದ ಮೋಕ್ಷ ಫಲವನ್ನು ಕಾಣದೆ, ತಮ್ಮಗಳಿಗಿಷ್ಟವಾದ ಸ್ವರ್ಗಾದಿ ಫಲಕ್ಕೆ ಸಾಧನವು ವೇದದಲ್ಲುಂಟೋ ಎಂಬದಾಗಿ ವಿಚಾರಿಸಿ ವೇದದಲ್ಲಿ ಅದು ಕಾಣದೇಹೋದರೆ ಆಸ್ವರ್ಗಾದಿ ಭೋಗದಲ್ಲಿರುವ ಅಪೇಕ್ಷಾವಿಶೇಷದಿಂದ ಸ್ವರ್ಗಾದಿಫಲಕ್ಕೆ ಅನುಪಾಯುವಾದವುಗಳಲ್ಲಿ ಉಪಾಯ ಬುದ್ಧಿಯಿಂಮಾಡಿ ಭ್ರಷ್ಟರಾಗುವುರು. ಆದುದರಿಂದಲೇ ವೇದವು ತ್ರಿಗುಣವಿಷಯವಾಗಿರುವುದು. ನೀನೋ ಅಂತಹ ತ್ರಿಗುಣ ವಿಷಯವಲ್ಲಾಸಕ್ತನಾಗದೇ ಈಗ ನಿನಗಿರುವ ಸತ್ವಗುಣವನ್ನೆ ವೃದ್ಧಿಪಡಿಸಿಕೊಂಡು ಸಂಸಾರ ಸ್ವಭಾವದಿಂದ ವಿಮುಕ್ತನಾಗಿರು. ಅದು ಹ್ಯಾಗೆಂದರೆ; ಆತ್ಮಪ್ರಾಪ್ತಿಗೇ ಉಪಾಯವು ಯಾವದೋ ಅದಕ್ಕೆ ಬಹಿರ್ಭೂತವಾದಯೋಗಕ್ಷೇಮಗಳಂಬಿಟ್ಟು (ತನಗಿಲ್ಲದಿರುವುದಂ ಹೊಂದುವುದು ಯೋಗವೆನಿಸುವುದು. ಪ್ರಾಪ್ತವಾದದ್ದನ್ನುರಕ್ಷಿಸಿಕೊಳ್ಳುವುದು ಕ್ಷೇಮವು) ಆತ್ಮ ಸ್ವರೂಪವನ್ನು ಹುಡುಕುವುದರಲ್ಲಿಮಾತ್ರವೇ ಆಸಕ್ತನಾಗಿರು; ಈರೀತಿಯಾಗಿರುವ ನಿನಗೇ ರಜಸ್ತಮಸ್ಸುಗಳೆಂಬ ಗುಣಗಳು ಹೋಗಿ ಸತ್ವಗುಣಮಾತ್ರವೆ ಅಭಿವೃದ್ಧಮಾಗುವುದು. ವೇದದಲ್ಲಿ ಸಕಲವು ಹೇಳಿದ್ದರೂ ಎಲ್ಲವು ಯೆಲ್ಲರಿಗೂ ಅಪೇಕ್ಷಿತವಾಗಿರಲಾರದು ಎಲ್ಲರಿಗೂ ಉಪಯುಕ್ತವಾಗಿರುವ ಒಂದುಕೊಳದಲ್ಲಿ ದಾಹಯುಕ್ತನಾದವನಿಗೆ ಉತ್ತಮವಾದ ಸ್ವಾದೋದಕ (ರುಚಿಯಾದನೀರು) ಮಾತ್ರವೇ ಅಪೇಕ್ಷಿತವಾಗಿರುವುದಲ್ಲದೆ ಇತರವಾದದ್ದು ಕೂಡ ಅಪೇಕ್ಷಿತವಾಗಿರುವದೊ; ಇಲ್ಲವು. ಅದರಂತೆಮೋಕ್ಷಾಪೇಕ್ಷೆ ಯುಳ್ಳವನಿಗೆಮೋಕ್ಷೋಪಾಯವಾಗಿ ವಿಧಿಸಿರುವ ಧರ್ಮಕ್ಕಿಂತಲೂ ಅನ್ಯವಾದದ್ದಪೇಕ್ಷಿತವಾಗಿರಲಾರದೆಂದರ್ಥವು. ||೪೫||೪೬||

(ಮ|| ಭಾ|| ) ಪರೋಕ್ಷಾರ್ಥಗಳ • ಪ್ರತಿಪಾದಿಸುವವೇದಗ
ಳಿಗೆ ಸ್ವರ್ಗಾದಿರೂಪವಾದ ಅರ್ಥವಿಶೇಷಗಳಂ ಪ್ರತಿಪಾದಿಸುವವೇ
ಮುಖ್ಯಾರ್ಥವೆಂಬದಾಗಿ ಹೇಳವರೇ « ವೇದೇರಾಮಾಯಣೇಚೈವಪು
ರಾಣೆಭಾರತೇತಥಾ | ಆದಾವಂತೇಚಮಧ್ಯೇಚ ವಿಷ್ಣುಸ್ಸರ್ವತ್ರಗೀ
ಯತೇ || ಸರ್ವೇವೇದಾಯತ್ಪದಮಾಮನಂತಿ|| ವೇದೋಖಿಲೋಧರ್ಮ
ಮೂಲಂ || ವೇದಪ್ರಣಿಹಿತೋಧರ್ಮಸ್ತ್ವಧರ್ಮ ಸ್ತದ್ವಿಪರ್ಯಯಃ||
ವೇದದಲ್ಲಿಯೂ, ಆವೇದಾರ್ಥಗಳಂ ಪ್ರತಿಪಾದಿಸುವ ಶ್ರೀರಾಮಾಯ
ಣದಲ್ಲಿಯೂ, ಶ್ರೀ ವಿಷ್ಣುಪುರಾಣ ಶ್ರೀಭಾಗವತಾದಿ ಪುರಾಣಗಳಲ್ಲಿ
ಯೂ, ಶ್ರೀ ಮಹಾಭಾರತದಲ್ಲಿಯೂ, ಮತ್ತು ಇದೇಮೊದಲಾದ
ಸಮಸ್ತಗ್ರಂಥಗಳಲ್ಲಿ ಆದಿಭಾಗದಲ್ಲಿಯೂ ಕಡೇಭಾಗದಲ್ಲಿಯೂ, ಮ
ಧ್ಯಭಾಗಗಳಲ್ಲಿಯೂ, ವಿಷ್ಣು ಪ್ರತಿಪಾದಕತ್ವವೇ ಇರುವುದು. ಸಮ
ಸ್ತವಾದ ವೇದಗಳುಯಾವಪರಮಾತ್ಮನನ್ನು ಬೋಧಿಸುವುವೊ?ಅಂತ
ಹಧರ್ಮಶಬ್ದವಾಚ್ಯನಾದ ಪರಮಾತ್ಮನನ್ನು ಪ್ರತಿಪಾದಿಸಲು 'ವೇದ
ವೇಮೂಲವಾಗಿರುವುದು. ವೇದೋಕ್ತವಾಗಿರುವುದೇ ಧರ್ಮವು. ತದ್ವಿ
ರುದ್ಧಗಳೆಲ್ಲವು ಅಧರ್ಮಗಳು,, ಎಂಬಿದೇಮೊದಲಾದ ಅನೇಕಪ್ರಮಾಣಗ
ಳಿಂದ ವೇದಗಳಿಗೆ ವಿಷ್ಣುಪರತ್ವವೂ ಹೇಳಲ್ಪಡುವುದರಿಂದಲೂ, ವೇ
ದವಿಹಿತಗಳು ಯಾವವೂ ಅವುಗಳಿಗೇನೆ ಧರ್ಮತ್ವವಂಹೇಳಿ ವೇ
ವಿರುದ್ಧವಾದವುಗಳಿಗೆ ಅಧರ್ಮತ್ವವಂ ಹೇಳಿರುವುದರಿಂದಲೂ, ವೇ
ದಗಳು ಸ್ವರ್ಗಾದಿಗಳಂ ಬೋಧಿಸುವದೆಂದು ಹೇಳುವುದು ಉಚಿತ
ವಲ್ಲವು. ಆದುದರಿಂದ ಈ ಶ್ಲೋಕದಲ್ಲಿ ವೇದಪಕ್ಷವು ನಿಷೇಧಿಸಲ್ಪಡ
ಲಿಲ್ಲವು. ||೪೫||

(ಗೀ|| ವಿ||) ಈಪ್ರಕಾರವಾಗಿ "ಯೋಗೇತ್ವಿಮಾಂಶೃಣು,, ಎಂ
ಬುದರಿಂದ ಯೋಗಬುದ್ಧಿಯನ್ನು ಹೇಳುವೆನು ಅದಂ ಕೇಳೆಂದು ಅ
ರ್ಜುನನಿಗೆ ಶ್ರೀ ಕೃಷ್ಣನುಹೇಳಿ ಆಯೋಗಬುದ್ಧಿ ಯಲ್ಲಿ ಆದರವ
ನ್ನುಂಟುಮಾಡುವುದಕ್ಕಾಗಿ"ಬುದ್ಧ್ಯಾಯುಕ್ತಃ-ನೇಹಾಭಿಕ್ರಮನಾಶಃ,,
ಎಂಬುವ (೧|) ಶ್ಲೋಕಗಳಿಂದ ಅದಂಪ್ರಶಂಸೆಮಾಡಿ ತನ್ನಿಂದ ಉಪ
ದೇಶಿಸಲ್ಪಟ್ಟ ಯೋಗಬುದ್ಧಿಯಲ್ಲಿ ವಿಶ್ವಾಸ ಮಾಡದಿರುವುದಕ್ಕೆ ಕಾ
ರಣವಾದ ಕಾಮ್ಯ ಕರ್ಮಗಳಂ ಮಾಡತಕ್ಕವರನ್ನು ಮೂರು ಶ್ಲೋ

ಕಗಳಿಂದ ನಿಂದಾರೂಪವಾದ ವಾಕ್ಯಗಳಿಂದ ನಿರಾಸವಂಮಾಡಿ ಈ ಗಮೊದಲು ಪ್ರತಿಜ್ಞಾ ಮಾಡಲ್ಪಟ್ಟ ಯೋಗವನ್ನು ಪ್ರಧಾನವಾಗಿ ಈಶ್ಲೋಕದ ಮೊದಲು ಆರನೆ ಅಧ್ಯಾಯದ ಕಡೆವರಿಗೂ ಉಪ ದೇಶಿಸುತ್ತಾನೆ. ಆದರೆ "ಬಹೂನಿಮೆವ್ಯತೀತಾನಿ,, ಇತ್ಯಾದ್ಯುಪ ದೇಶಗಳಿಂದ ಭಗವದವತಾರ ರಹಸ್ಯಚಿಂತನಾದಿಗಳು ಮಧ್ಯೆ ಮಧ್ಯೆ ಪ್ರಾಸ್ತಮಾಗಲಾಗಿ ಯೋಗಬುದ್ಧಿಯನ್ನೆ ಆರನೆಅಧ್ಯಾಯದವರಿಗುಉ ಪದೇಶಿಸುತ್ತಾನೆಂದು ಹೇಳುವದು ಉಚಿತವೊ ಅಂದರೆ ಅಂತಹವಿ ಷಯುಗಳು ಪ್ರಸಂಗಸಂಗತಿಯಿಂದ ಅಪ್ರಧಾನವಾಗಿ ಪ್ರಾಪ್ತವಾಗಿ ರುವುದರಿಂದಲೂ ಈ ಯೋಗ ಬುದ್ಧಿಯ ಉಪದೇಶವೇ ಪ್ರಧಾನವಾ ಗಿರುವದರಿಂದಲೂ ಷಷ್ಠಾಧ್ಯಾಯ ಸಮಾಪ್ತಿವರಿಗೂ ಇದೇವಿಷಯ ವೆಂದು ತಿಳಿದುಕೊಳ್ಳಬೇಕು. ಹೇಅರ್ಜುನ — ಯಲೈಅರ್ಜುನನೆ; ವೇದಾಃ—ವೇದಗಳು, ತ್ರೈಗುಣ್ಯವಿಷಯಾಃ— ಸತ್ವರಜಸ್ತಮಸ್ಸು ಗಳೆಂಬ ತ್ರಿಗುಣಸಂಬಂಧಿಯಾದ ಸ್ವರ್ಗವನ್ನೆ ಅಪಾತವಾಗಿಪ್ರತಿಪಾ ದಿಸುವ ಅರ್ಥವುಳ್ಳವುಗಳು. (ಅತಃ-ಆದುದರಿಂದ) ತ್ವಂ- ನೀನು, ನಿ ಸ್ತ್ರೈಗುಣ್ಯೋಭವ-ತ್ರಿಗುಣಕಾರ್ಯವಾದಸ್ವರ್ಗರೂಪವಾಗಿರುವಪ್ರ ಯೋಜನವಂ ಬಿಟ್ಟವನಾಗಿರು, ವೇದಗಳು ಪರೋಕ್ಷಾರ್ಥಗಳುಳ್ಳವು ಗಳಾದುದರಿಂದ ತ್ರಿಗುಣ ಕಾರ್ಯಮಾದ ಸ್ವರ್ಗಾದಿಗಳನ್ನೆ ಬೋಧಿಸುವುವೆಂಬ ಭ್ರಾಂತಿಯನ್ನು ಬಿಡೆಂದುತಾತ್ಪರ್ಯವು(ಅಥವಾ ವೇದಾಃ- ವೇದಗಳು, ತ್ರೈಗುಣ್ಯ ವಿಷಯಾಃ - ತ್ರೈಗುಣ್ಯ - ತ್ರಿಗು ಣಕಾರ್ಯಮಾದ, ವಿಷ- ವಿಷಯಭೋಗಗಳೆಂಬ ವಿಷವನ್ನು, ಯಾಃ. ತಿರಸ್ಕರಿಸುವಂತವುಗಳು. ವಿಷಯಭೋಗಗಳಿಗೆ ದುಃಖಸಾಧನತ್ವ ಮೆಬ ಆಕಾರವನ್ನು ವೇದಗಳಿಂದ ತಿಳಿದರೇ ವಿಷಯೆಚ್ಛಾಪರಿತ್ಯಾಗ ವಾಗುವದೆಂದರ್ಥವು. ಅತಃ— ಆದುದರಿಂದ, ವಿಷಯಪರಿತ್ಯಾಗಕ್ಕೆ ಯಾವವೇದಾಶ್ರಯಣವು ಕಾರಣವಾಗುವುದೊ ಅಂತಹ ವೇದಾಶ್ರ ಯಣವಂಮಾಡಿ ನಿಸ್ತ್ರೈಗುಣ್ಯನಾಗಿರು. ತ್ರೈಗುಣ್ಯ ಶಬ್ದಕ್ಕೆ ಮೇಲೆವಿವರಿಸಿರುವ ಅರ್ಥವನ್ನೆ ಈಯೊಜನೆಯಲ್ಲಿಯೂ ಅನುಸಂಧಾ ನಮಾಡಬೇಕು. ತ್ರಿಗುಣಕಾರ್ಯಮಾದ ಸ್ವರ್ಗಾದಿಗಳಲ್ಲಿ ಅಪೇಕ್ಷಾರ ಹಿತನಾಗಿ ನಿಷ್ಕಾಮ ಕರ್ಮಗಳನ್ನು ಶ್ರೀಹರಿಪ್ರೀತಿಯನ್ನು ದ್ದೇಶಿಸಿ

ಮಾಡೆಂದು ತಾತ್ಪರ್ಯವು. ನಿರ್ದ್ವಂದ್ವಃ--ಶೀತೋಷ್ಣಾದಿಗಳಿಂದುಂ ಟಾಗುವ ದ್ವಂದ್ವ ದುಃಖಗಳಂ ಸಹಿಸುವಂತವನಾಗು, ನಿತ್ಯಸತ್ವಸ್ಥಃ-ನಿತ್ಯವೂ ಪರಮಾತ್ಮ ಸ್ಮರಣ ಉಳ್ಳವನಾಗಿರು, ನಿರ್ಯೋಗಕ್ಷೇಮಃ (ತಾ॥ ನಿ) ವಿರುದ್ಧವಾದ ಯೋಗಕ್ಷೇಮಗಳಲ್ಲಿ ಇಚ್ಛಾ ರಹಿತನಾಗಿರು. ಸಾಮಾನ್ಯವಾಗಿ ಯೋಗಕ್ಷೇಮಗಳ ನಿಷೇಧವಂ ಹೇಳಿದರಿ ಏಳುವುದೆ ಮೊದಲಾದ ಸರ್ವ ವ್ಯಾಪಾರಗಳನ್ನು ಮತ್ತು ಇದುವರಿಗು ತನಗೆ ಪ್ರಾಪ್ತವಾಗದ ಭಗವತ್ಪ್ರಸಾದಾದಿಗಳನ್ನು ಹೊಂದುವಿಕೆಯು, ಪ್ರಾಪ್ತವಾದ ಭಗವದನುಗ್ರಹಾದಿಗಳನ್ನು ಕಾಪಾಡಿಕೊಳ್ಳುವಿಕೇ ಮೊದಲಾದ ಸರ್ವ ವ್ಯಾಪಾರಗಳಂ ಬಿಡಬೇಕೆಂಬದಾಗಿ ಹೇಳಿದಂತೆ ಆಗುವುದು. ಅಂತಹ ಶಂಕಾನಿರಾಸಾರ್ಥವಾಗಿ “ವಿರುದ್ಧಯೋಗಕ್ಷೇಮೇಚ್ಛಾವರ್ಜಿತಃ” ಎಂಬದಾಗಿ ತಾತ್ಪರ್ಯ ನಿರ್ಣಯದಲ್ಲಿ ಆಚಾರ್ಯರಿಂದ ಅನುಗ್ರಹಿಸಲ್ಪಟ್ಟಿತು.) ಆತ್ಮವಾನ್ಭವ-ಪರಮಾತ್ಮನೇ ನಿನಗೆ ಸ್ವಾಮಿಯೆಂಬುವ ಜ್ಞಾನ ವುಳ್ಳವನಾಗಿರು. ಅಲ್ಲದೆ ಪರಮಾತ್ಮನೇ ನಾನು ಎಂಬ ಐಕ್ಯ ಜ್ಞಾನವಂ ಮಾಡಬೇಡವೆಂದು ತಾತ್ಪರ್ಯವು. ಈ ಪ್ರಕಾರವಾಗಿ ಮೇಲೆ ಹೇಳಿದ ಅರ್ಥಗಳಿಗೆ ಗೀತಾ ತಾತ್ಪರ್ಯ ನಿರ್ಣಯೋಕ್ತವಾದ ಪ್ರಮಾಣ ಸಮ್ಮತಿಯು “ಆಶ್ರಿತ್ಯ ವೇದಾಂಸ್ತು ಪುಮಾಂಸ್ತ್ರೈಗುಣ್ಯವಿಷಹಾರಿಣಃ। ನಿಸ್ತ್ರೈಗುಣ್ಯೋ ಭವೇನ್ನಿತ್ಯಂವಾಸುದೇವೈಕಸಂಶ್ರಯಃ,, ಇತ್ಯಾದಿಯಾಗಿರುವುದರಿಂದ ವಿಸ್ತಾರಾಂಶವನ್ನು ಅಲ್ಲಿಯೇ ಪ್ರಾಜ್ಞರು ನೋಡಬಹುದು. ॥೪೫॥

(ಗೀ॥ ವಿ) ಕಾಮ್ಯಕರ್ಮಗಳಂ ಮಾಡತಕ್ಕವರುಗಳು ಪರಮಾತ್ಮಧ್ಯಾನ ಶೂನ್ಯರಾಗಿರುವುದರಿಂದ ಹ್ಯಾಗಾದರೇ ಮೋಕ್ಷರೂಪವಾದ ಫಲರಹಿತರಾಗುವರೊ ಆ ರೀತಿಯಿಂದ ನಿಷ್ಕಾಮ ಕರ್ಮಗಳಂ ಮಾಡುವಂತವರೂ ಸ್ವರ್ಗಫಲವಂ ಹೊಂದಲು ಸಾಧನಭೂತಗಳಾದ ಕಾಮ್ಯ ಕರ್ಮಗಳಂ ಮಾಡದೇ ಇರುವುದರಿಂದ ಸ್ವರ್ಗ ಫಲವನ್ನು ಹೊಂದುವುದಿಲ್ಲವು. ಆದುದರಿಂದ ಈ ಯೆರಡು ಫಲವೂ ತಾರತಮ್ಯವಿಲ್ಲದೆ ಏಕರೀತಿಯಾಗಿಯೇ ಇರುವದೆಂದರೆ—ಸ್ನಾನ ಪಾನಾದಿಗಳಿಗೇ ಉಪಯೋಗವಾಗುವ ಸ್ವಲ್ಪ ನೀರುಳ್ಳ ಭಾವಿಗಳಲ್ಲಿ ಆಗುವ ಪ್ರಯೋಜನವು ಸುತ್ತುಮುತ್ತಲು ವ್ಯಾಪ್ತವಾದ ನೀರುಳ್ಳ ಮಹಾನದೀ ಮುಂತಾದ

ಸ್ಥಲಗಳಲ್ಲಿಯೂ ಆಗುವುದು. ಅಲ್ಲಿ ಸಮಸ್ತವಾದ ವೇದಗಳಲ್ಲಿ ಹೇಳಿ ರುವ ಕಾಮ್ಯಫಲವು ಮೊದಲು ಬ್ರಹ್ಮವಿಷಯವಾದ ಪರೋಕ್ಷಜ್ಞಾನ ವುಳ್ಳವನಾಗಿ ಅನಂತರದಲ್ಲಿ ಅಪರೋಕ್ಷಜ್ಞಾನವುಂಟಾಗಿ ಅದರಿಂದ ಪರ ಮಾತ್ಮನಂ ಹೊಂದುವ ಜ್ಞಾನಿಯಾದವನ ಫಲದಲ್ಲಡಗಿ ಹೋಗುವು ದೆಂದು ತಿಳಿಯಬೇಕು. ಕಾಮ್ಯಕರ್ಮವನ್ನು ಮಾಡುವಂತವನಿಗೆ ಪ್ರಾ ಪ್ತವಾಗುವ ಸ್ವರ್ಗಾದಿ ರೂಪವಾದ ಫಲವು ಭಗವದರ್ಪಣ ಬುದ್ಧಿ ಯಿಂದ ನಿಷ್ಕಾಮವಾಗಿ ಕರ್ಮವಂ ಮಾಡುವಂತ ಜ್ಞಾನಿಯಾದವನಿಗೆ ಇಲ್ಲವಾದರೂ ನಿಷ್ಕಾಮ ಕರ್ಮಗಳಂ ಮಾಡುವಂತವನಿಗೆ ಆಕರ್ಮವು ಅಂತಃ ಕರಣ ಶುದ್ಧಿಯನ್ನುಂಟುಮಾಡಿ ಅನಂತರದಲ್ಲಿ ಪರೋಕ್ಷಾ ಪರೋಕ್ಷಜ್ಞಾನವಂ ಹುಟ್ಟಿಸಿ ಮೋಕ್ಷಸಾಧನ ವಾಗುವುದರಿಂದ ಕ್ಷು ದ್ರವಾದ ಸ್ವರ್ಗಫಲಕ್ಕಿಂತಲೂ ಅತ್ಯಂತ್ಯಾತಿಶಯಿತವಾದ ಮೋಕ್ಷ ಫಲವೂ ಸರ್ವೋತ್ಕೃಷ್ಟವಾಗಿರುವುದರಿಂದ ಈ ಯೆರಡು ಫಲವೂ ಯೆಷ್ಟುಮಟ್ಟಿಗೂ ಸಮ ವಾಗಲಾರದು. ಸ್ವರ್ಗರೂಪವಾದ ಫಲವು ಸಣ್ಣಕೊಳಗಳಲ್ಲಾಗುವ ಪ್ರಯೋಜನದಂತೆ ಅತ್ಯಲ್ಪವಾಗಿರುವುದು. ಅಪರಿಚ್ಛಿನ್ನವಾದ ನದೀಸಮುದ್ರಾದಿಗಳು ಅಪಾರವಾದ ಫಲಗಳಂ ಕೊಡುವುದರಿಂದ ಸಹಸ್ರದಲ್ಲಿ ಶತಾದಿಗಳಡಗಿರುವಂತೆ ಕೊಳಗಳಲ್ಲಾ ಗುವ ಪ್ರಯೋಜನವು ಇದರಲ್ಲಡಗಿರುವುದು. ಅತ್ಯಲ್ಪ ಫಲವನ್ನು ಕೊಡುವ ಕಾಮ್ಯಕರ್ಮವಂ ನಿಂದೆಮಾಡಿರುವುದರಿಂದ ಅಕ್ಷಯ ಫಲ ಗಳಂ ಕೊಡುವ ಜ್ಞಾನಕ್ಕೆ ಸಾಧನವಾದ ನಿಷ್ಕಾಮ ಕರ್ಮಯೋಗದಲ್ಲಿ ಅರ್ಜುನನಿಗೆ ಪರಮಾತ್ಮನು ಪ್ರೇರಣವಂ ಮಾಡಿದನೆಂದು ತಿಳಿಯ ಬೇಕು. (ಅಥವಾ) ವಿಷಯಪರಿತ್ಯಾಗವಂ ಮಾಡುವುದಕ್ಕೋಸ್ಕರ ವೇದಗಳನ್ನಾಶ್ರಯಿಸಬೇಕೆಂದು ಪೂರ್ವ ಶ್ಲೋಕದಲ್ಲಿ ಹೇಳಿ ಅದಕ್ಕೆ ತಕ್ಕ ಯುಕ್ತಿಯನ್ನು ಈ ಶ್ಲೋಕದಲ್ಲಿ ಹೇಳುತ್ತಾನೆ—ಸರ್ವತಃ-ಸು ತ್ತುಮುತ್ತಲು, ಸಂಪ್ಲುತ-ವ್ಯಾಪಿಸಿರುವ, ಉದಕೇ-ಜಲಮುಳ್ಳ ಪ್ರಲ ಯಕಾಲದಲ್ಲಿ, ಉದಪಾನ-ಉತ್-ಶ್ರೇಷ್ಠನಾಗಿಯೂ, ಅಪ-ರಕ್ಷಕಾಂ ತರಶೂನ್ಯನಾಗಿಯೂ, ಅನ-ಕಾಲಾದಿ ಚೇಷ್ಟಕನಾಗಿಯೂ ಇರುವ ಪರಮಾತ್ಮನು, (ಪ್ರಸನ್ನೇಸತಿ-ಪ್ರಸನ್ನನಾಗಲಾಗಿ) ಯಾವಾನರ್ಥಃ- ಮೋಕ್ಷರೂಪವಾದ ಯಾವ ಫಲ ಮುಂಟಾಗುವದೋ, ತಾವಾನ್-

ಅಷ್ಟುಫಲವು, ಸರ್ವೇಷುವೇದೇಷು-ಸಮಸ್ತವಾದ ವೇದಗಳಲ್ಲಿ, ವಿಜಾನ ತಃ-ವಿಶೇಷಾರ್ಥಗಳಂ ತಿಳಿಯುವ, ಬ್ರಾಹ್ಮಣಸ್ಯ-ಬ್ರಹ್ಮನನ್ನು ಸೇರುವ ಜ್ಞಾನಿಯಾದವನಿಗೆ,ಭವತಿ-ಆಗುವದು. ವೇದಾರ್ಥಜ್ಞಾನದಿಂದ ಪರಮಾತ್ಮಜ್ಞಾನವು ಅದರಿಂದ ಭಗವತ್ಪ್ರಸಾದವು ಅದರಿಂದ ಮೋಕ್ಷವು ಪ್ರಾಪ್ತವಾಗುವುದರಿಂದ ವೇದಾಶ್ರಯಣವಂ ಮಾಡಬೇಕೆಂದು ತಾತ್ಪರ್ಯವು. ... ... ||೪೬||

ಮೂ || ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾ
ಚನ | ಮಾಕರ್ಮ ಫಲ ಹೇತುರ್ಭೂರ್ ಮಾತೇ ಸಂ
ಗೋಸ್ತ್ವಕರ್ಮಣಿ || ... ||೪೭||

ಪ|| ಕರ್ಮಣಿ- ಏವ- ಅಧಿಕಾರಃ- ತೆ- ಮಾ- ಫಲೇಷು- ಕದಾಚನ | ಮಾ- ಕರ್ಮಫಲಹೇತುಃ- ಭೂಃ- ಮಾ- ತೇ- ಸಂಗಃ- ತು- ಅಕರ್ಮಣಿ. ||೪೭||

ಅ|| ತೇ - ಮೋಕ್ಷಾರ್ಥಿಯಾದ ನಿನಗೆ, ಕರ್ಮಣ್ಯೇವ - ಕರ್ಮಾನುಷ್ಠಾನದಲ್ಲಿಯೆ, ಅಧಿಕಾರಃ- ಅಧಿಕಾರವಿರುವುದು, ಕದಾಚನ- ಯಾವಕಾಲದಲ್ಲಿಯೂ, ಫಲೇಷು- ಕರ್ಮ ಫಲಗಳಲ್ಲಿ, (ಅಧಿಕಾರಃ- ಅಧಿಕಾರವು) ಮಾ - ಇಲ್ಲವು, ಕರ್ಮಫಲಹೇತುರ್ಮಾಭೂಃ - ಕರ್ಮಫಲಕ್ಕೆ ಪಾತ್ರನಾಗಬೇಡ. (ಶ್ರೀ|| ಕರ್ಮಫಲಗಳನ್ನಿಚ್ಛಿಸಿದವನಾಗಿ ಪ್ರವರ್ತಿಸಬೇಡ) ಅಕರ್ಮಣಿ- ಕರ್ಮವಂ ಮಾಡದೆ ಇರುವುದರಲ್ಲಿ, ತೆ- ನಿನಗೆ, ಸಂಗಃ- ಅಪೇಕ್ಷೆಯು, ಮಾ- ಕೂಡದು. ... ... ... ||೪೭||

(ಶಂ|| ಭಾ||) ಆದರೂ ಪರಂಪರೆಯಾಗಿ ಮೋಕ್ಷಕ್ಕೆ ಸಾಧನವಾಗುವ ಕರ್ಮಯೋಗವಂ ಬಿಟ್ಟು ಸಾಕ್ಷಾತ್ತಾಗಿ ಮೋಕ್ಷಕ್ಕೆ ಸಾಧನವಾಗುವ ಜ್ಞಾನವನ್ನು ಮೋಕ್ಷರೂಪವಾದ ಪುರುಷಾರ್ಥಕ್ಕಾಗಿ ಉಪದೇಶಿಸಬೇಕು. ಆದಕ್ಕೀನೆ ನನ್ನ ಮನಸ್ಸು ಅಪೇಕ್ಷಿಸುವುದೆಂಬ ಅರ್ಜುನನ ಅಭಿಪ್ರಾಯವಂ ಕಂಡು, ಎಲೈ ಅರ್ಜುನನೇ ! ನಿನಗೆ ಕರ್ಮದಲ್ಲಿಯೆ ಅಧಿಕಾರವು,ಜ್ಞಾನದಲ್ಲಿ ಅಧಿಕಾರವಿಲ್ಲವೆಂದು ಪರಮಾತ್ಮನು ಹೇಳುತ್ತಾನೆ. ನಿನ್ನ ಸ್ಥಿತಿಯಂ ನೋಡಿದರೆ ನಿನಗೆ ಕರ್ಮದಲ್ಲಿಯೇ ಅಧಿಕಾರವು, ಅಲ್ಲದೇ ಜ್ಞಾನದಲ್ಲಿ ಯೋಗ್ಯತೆ ಇಲ್ಲವು. ಆದರೆ ಕರ್ಮವಂಮಾಡುತಲಿರುವಲ್ಲಿ ಆ ಕರ್ಮಫಲಾಪೇಕ್ಷೆಯನ್ನು ಮಾತ್ರವೇ ನೀನು ಮಾಡಕೂಡದು. ಕರ್ಮಫಲವನ್ನಪೇಕ್ಷಿಸಿದರೆ ಅದರಿಂದುಂಟಾಗುವ ಜನ್ಮಪರಂಪರಾರೂಪವಾದ ಸಂಸಾರವು ನಿನಗೆಂದಿಗೂ ತಪ್ಪುವದಿಲ್ಲವು. ಆದುದರಿಂದ ಸಂಸಾರ ವೈರಾಗ್ಯವಂ ಹೊಂದಿದರೆ ದುಃಖರೂಪವಾದ ಕಾ

ಮ್ಯಕರ್ಮಗಳಿಂದ ನಿನಗೆ ಯಾವ ಪ್ರಯೋಜನವು ಕಾಣುವದಿಲ್ಲವು. ಆದರೆ ನಿಷ್ಫಲವಾಗಿ ಕರ್ಮವನ್ನಾಚರಿಸುವುದಕ್ಕಿಂತಲೂ ಅದು ಬಿಡವುದೆ ಉಚಿತವೆಂದೆರಿಯದೆ ಭಗವದರ್ಪಣ ಬುದ್ಧಿಯಿಂದ ಕರ್ಮಗಳಂ ಮಾಡುವುದೆ ಉಚಿತವಾಗಿರುವುದರಿಂದ ಆ ರೀತಿಯಾಗಿ ಕರ್ಮಗಳಂ ಮಾಡಿದರೆ ನೀನು ಸಂಸಾರದಿಂದ ವಿಮುಕ್ತನಾಗುತ್ತೀಯೆ. ॥೪೭॥

(ರಾ॥ ಭಾ॥) ಆದರೂ ಮೋಕ್ಷಸಾಧನವಾಗಿರುವ ಧರ್ಮಕ್ಕಿಂತಲೂ ಅನ್ಯವಾದ ಧರ್ಮಾಚರಣೆಯಂ ಮಾಡದಿದ್ದರೆ ಸಕಲ ಧರ್ಮ ಪರಿತ್ಯಾಗ ಪೂರ್ವಕವಾಗಿ ನಿತ್ಯ ನೈಮಿತ್ತಿಕ ಧರ್ಮ ವ್ಯವಸ್ಥಾಪಕವಾಗಿರುವ ಶಾಸ್ತ್ರಾದಿಗಳಂ ಅತಿಕ್ರಮಿಸುವುದರಿಂದ ಮುಮುಕ್ಷುವಿಗೆ ಕಾಮಚಾರಾದಿ ದೋಷಗಳು ಪ್ರಾಪ್ತವಾಗುವದಿಲ್ಲವೋ ? ಅಂದರೆ ಸತ್ವಗುಣ ನಿಷ್ಠನಾದ ಮುಮುಕ್ಷುವಿಗೆ ಮೋಕ್ಷಾರ್ಥವಾಗಿ ವಿಧಿಸಿರುವ ಧರ್ಮಾನುಷ್ಠಾನಕ್ಕಿಂತಲೂ ಅನ್ಯವಾದ ಧರ್ಮಾನುಷ್ಠಾನದ ಆವಶ್ಯಕತೆಯೂ ಇಲ್ಲವಾದುದರಿಂದ ಕಾಮಚಾರಾದಿ ದೋಷಗಳು ಸಂಭವಿಸುವದಿಲ್ಲವು. ಆದುದರಿಂದ ಮೋಕ್ಷಾರ್ಥಿಯಾದವನಿಗೆ ಇಷ್ಟುಮಾತ್ರವೇ ಅಪೇಕ್ಷಿತವಾಗಿರುವುದೆನ್ನುತ್ತಾನೆ. ಯಾವದಾದರೊಂದು ಫಲವನ್ನು ಕೊಡುವುದೆಂದು ಹೇಳಲ್ಪಡುವ ನಿತ್ಯನೈಮಿತ್ತಿಕ ಕಾಮ್ಯಕರ್ಮಗಳನ್ನ ಮಾಡುವುದರಲ್ಲಿ ಮಾತ್ರವೆ ನಿನಗೆ ಅಧಿಕಾರವು, ಅಲ್ಲದೇ ಆ ಕರ್ಮಫಲದಲ್ಲಿ ನಿನಗಧಿಕಾರವಿಲ್ಲವು. ಅದು ಹ್ಯಾಗೆಂದರೆ ? ಫಲದಲ್ಲಿ ಅಪೇಕ್ಷೆಯುಂಟಾದರೆ ಆ ಫಲಾಸಕ್ತಿಯು ಸಂಸಾರವರ್ಧಕವಾಗಿರುವುದು, ಆ ಫಲಾಪೇಕ್ಷೆಯಿಲ್ಲದೆ ಮಾಡುವ ಕರ್ಮವು ನನ್ನ ಆರಾಧನ ರೂಪವಾಗುವುದಾದುದರಿಂದ ಮೋಕ್ಷವಂ ಕೊಡುವುದು. ಕರ್ಮದಲ್ಲಿಯೂ ಅದರ ಫಲದಲ್ಲಿಯೂ ನಾನು ಮಾಡುತ್ತೇನೆಂಬ ಕರ್ತೃತ್ವಬುದ್ಧಿಯೂ ಕೂಡದು. ಆದರೆ ಯುದ್ಧವಂ ಮಾಡಲಾರೆನೆಂಬದಾಗಿ ನೀನು ಈಗ ಹೇಳಿದಂತೆ ಕರ್ಮವನ್ನು ಮಾತ್ರ ಯಾವಕಾಲದಲ್ಲಿಯೂ ತ್ಯಾಗಮಾಡಬಾರದು ॥೪೭॥

(ಗೀ॥ ವಿ॥) ಆದರೂ ಫಲೇಚ್ಛೆಯಿಂದ ಕರ್ಮವಂ ಮಾಡುವಂತವರನ್ನು " ಯಾಮಿಮಾಂ " ಎಂಬಿದೇ ಮೊದಲಾದ ಶ್ಲೋಕಗಳಿಂದ ನಿಂದಿಸಿರುವುದು " ಜ್ಯೋತಿಷ್ಟೋಮೇನ ಸ್ವರ್ಗಕಾಮೋಯಜೇತ " ಎಂಬುವ ಶ್ರುತಿವಾಕ್ಯದಲ್ಲಿ ಫಲಕಾಮನೆಯನ್ನು ಕೂಡ ವಿಧಿಸಿರುವು

ದಕ್ಕೆ ವಿರುದ್ಧವಾಗಿರುವುದು. ವೇದವಿಹಿತವಾಗಿರುವುದರಿಂದ ಫಲಾಪೇಕ್ಷೆಯನ್ನು ನಿಂದಿಸುವದು ಯುಕ್ತವಲ್ಲವು. ಈ ವಿಧಿವಾಕ್ಯದಲ್ಲಿ ಯೂ ಸ್ವರ್ಗಕಾಮನಾವಿಶಿಷ್ಟ (ಸ್ವರ್ಗರೂಪವಾದ ಪ್ರಯೋಜನಾಪೇಕ್ಷೆಯೊಡನೆಯೇ ಜ್ಯೋತಿಷ್ಟೋಮವೆಂಬ) ಯಾಗವಿಧಿಯನ್ನಂಗೀಕರಿಸಿರುವುದರಿಂದ ಸಕಾಮರನ್ನು ನಿಂದಿಸಬಾರದೆಂದರೆ ಅದಕ್ಕೆ ತಕ್ಕ ಉತ್ತರವಂ ಪೇಳುತ್ತಾನೆ. ಎಲೈ ಪಾರ್ಥನೇ ! ನಿನಗೂ ನಿನ್ನಂತಹ ಅನ್ಯನಾದ ಜ್ಞಾನಿಗೂ ಕರ್ಮದಲ್ಲಿಯೇ ಅಧಿಕಾರವಲ್ಲದೆ ಸ್ವರ್ಗಾದಿ ರೂಪವಾದ ಫಲದಲ್ಲಿ ಅಧಿಕಾರವಿಲ್ಲವು. ಆದುದರಿಂದ ಕರ್ಮವನ್ನು ಮಾತ್ರವೇ ಮಾಡತಕ್ಕದೆಂದು ನಿನಗೆ ವಿಧಿಸಿರುವುದಲ್ಲದೆ ಫಲಾಪೇಕ್ಷೆಯನ್ನು ಕೂಡ ವಿಧಿಸಿರುವುದಿಲ್ಲವು. ಫಲಾಪೇಕ್ಷಾವಿಶಿಷ್ಟವಾದ ಯಾಗವಿಧಿಯನ್ನಂಗೀಕರಿಸುವ ಪಕ್ಷದಲ್ಲಿ " ಕುರ್ವನ್ನೇ ವೇಹಕರ್ಮಾಣಿ " ಎಂಬುವ ಶ್ರುತಿವಾಕ್ಯವು ವಿರುದ್ಧವಾಗುವುದು. ಈ ಶ್ರುತಿಯಲ್ಲಿ ಕರ್ಮಮಾತ್ರವನ್ನ ವಿಧಿಸಿರುವುದಲ್ಲದೇ ಕರ್ಮಫಲವನ್ನು ಕೂಡ ವಿಧಿಸಲಿಲ್ಲವು. ಆದುದರಿಂದ ವಿಶಿಷ್ಟವಿಧಿಯಂ ಹೇಳುವದು ಯುಕ್ತವಲ್ಲವು. ಮತ್ತು " ಕುರ್ವನ್ನೇವೇಹ " ಎಂಬುವ ಶ್ರುತಿಯಲ್ಲಿ " ಏವಂತ್ವಯಿ " ಎಂಬುವ ಉತ್ತರಾರ್ಧದಲ್ಲಿ ಕರ್ಮವನ್ನಾಚರಿಸದಿದ್ದರೆ ಯಾವ ಪ್ರತ್ಯವಾಯವು (ಬಾಧಕವು) ಹೇಳಿರುವದೊ ಅಂತಹ ಪ್ರತ್ಯವಾಯವು ಕರ್ಮಫಲಾಪೇಕ್ಷೆಯಂ ಮಾಡದವನಿಗೆ ಹೇಳಲಿಲ್ಲವು. ವಿಶಿಷ್ಟವಿಧಿಯನ್ನಂಗೀಕರಿಸುವುದಾದರೇ ನಿಷ್ಕಾಮನಿಗೂ ಪ್ರತ್ಯವಾಯವು ಸಿದ್ಧವಾಗಿರಬೇಕಾಗಿರುವುದೆಂದರ್ಥವು. ಮತ್ತು ಫಲವಂ ಕೊಡುವುದಕ್ಕೆ ನಾನು ಸ್ವತಂತ್ರನಾಗಿರುವುದರಿಂದ ಈ ವಿಷಯದಲ್ಲಿ ನಿನಗೆ ಎಷ್ಟುಮಾತ್ರವು ಸಂಬಂಧವಿರುವುದಿಲ್ಲವು. ಆದುದರಿಂದ ಪರಮಾತ್ಮನಲ್ಲಿ ಸ್ವಾಮಿಭಾವವು ನಿನ್ನಲ್ಲಿ ದಾಸಭಾವವನ್ನನುಸಂಧಾನಮಾಡುತ ಭಗವದಾರಾಧನರೂಪವಾಗಿ ಫಲಾಪೇಕ್ಷೆಯಿಲ್ಲದೆ ಕರ್ಮಗಳನ್ನಾಚರಿಸುತಲಿರೆಂದು ತಾತ್ಪರ್ಯವು. ... ... ॥೪೭॥

ಮೂ॥ ಯೋಗಸ್ಥಃ ಕುರುಕರ್ಮಾಣಿ ಸಂಗಂತ್ಯಕ್ತ್ವಾ ಧನಂಜಯ । ಸಿದ್ಧ್ಯಸಿದ್ಧ್ಯೋಸ್ಸಮೋಭೂತ್ವಾ ಸಮ

ತ್ವಂಯೋಗಉಚ್ಯತೇ ॥ ... ॥೪೮॥

ಪ॥ ಯೋಗಸ್ಥಃ- ಕುರು- ಕರ್ಮಾಣಿ- ಸಂಗಂ- ತ್ಯಕ್ತ್ವಾ- ಧನಂಜಯ । ಸಿದ್ಧ್ಯಸಿದ್ಧ್ಯೋಃ - ಸಮಃ- ಭೂತ್ವಾ- ಸಮತ್ವಂ- ಯೋಗಃ- ಉಚ್ಯತೆ ॥ ॥೪೮॥

ಅ॥ ಹೇ ಧನಂಜಯ- ಎಲೈ ಅರ್ಜುನನೇ ! ತ್ವಂ- ನೀನು, ಯೋಗಸ್ಥಃ- ಯೋಗನಿಷ್ಠೆಯುಳ್ಳವನಾಗಿ, (ಗೀ॥ ವಿ॥ ಜ್ಞಾನೋಪಾಯವಾದ ಕರ್ಮಯೋಗನಿಷ್ಠನಾಗಿ) ಸಂಗಂ ತ್ಯಕ್ತ್ವಾ- ಅಭಿಮಾನವಂಬಿಟ್ಟು, (ಶಂ॥ ಪರಮಾತ್ಮನಂ ತೃಪ್ತಿಪಡಿಸಬೇಕೆಂಬ ಚಿಂತೆಯಂಬಿಟ್ಟು, ರಾ॥ ರಾಜ್ಯ, ಬಂಧು, ಪುತ್ರ, ಮಿತ್ರಾದಿಗಳಲ್ಲಿ ಅಭಿಮಾನಶೂನ್ಯನಾಗಿ, ಗೀ॥ ವಿ॥ ಫಲಾಭಿಸಂಧಿರಹಿತನಾಗಿ) ಸಿದ್ಧ್ಯಸಿದ್ಧ್ಯೋಃ- ಫಲರೂಪವಾದ ಜ್ಞಾನಸಿದ್ಧಿಯಂ ಹೊಂದಿದರು ಹೊಂದದೇ ಇದ್ದರೂ ಇವುಗಳಲ್ಲಿ (ರಾ॥ ಯುದ್ಧಾದಿಗಳಿಂದುಂಟಾಗುವ ಜಯಾಪಜಯಾದಿ ರೂಪವಾಗಿರುವ ಸಿದ್ಧ್ಯಸಿದ್ಧಿಗಳಲ್ಲಿ) ಸಮೋಭೂತ್ವಾ- ಸಮವಾಗಿರತಕ್ಕವನಾಗಿ, ಕರ್ಮಾಣಿ- ಯುದ್ಧವೇ ಮೊದಲಾದ ಕರ್ಮಗಳನ್ನು, ಕುರು- ಮಾಡು. ಸಮತ್ವಂ-ಜಯಾಪಜಯಗಳಲ್ಲಿ ಸಮವಾಗಿರುವಿಕೆಯು, ಯೋಗಉಚ್ಯತೇ- ಯೋಗವೆಂದು ಹೇಳಲ್ಪಡುವುದು. ... ... ॥೪೮॥

(ರಾ॥ ಭಾ॥) ಈ ಪೂರ್ವೋಕ್ತ ಶ್ಲೋಕಾರ್ಥವನ್ನೇ ಈ ಶ್ಲೋಕದಲ್ಲಿಯೂ ವ್ಯಕ್ತಪಡಿಸುತ್ತಾನೆ-ರಾಜ್ಯ ಬಂಧು ಮಿತ್ರಾದಿಗಳಲ್ಲಿ ಸಂಗವಂಬಿಟ್ಟುಯೋಗನಿಷ್ಠನಾಗಿ,ಅಂದರೆ ಯುದ್ಧಾದಿಗಳಲ್ಲಿ ಪ್ರಾಪ್ತವಾಗುವ ಜಯಾಪಜಯಗಳಲ್ಲಿ ಸಮಚಿತ್ತನಾಗಿ ಯುದ್ಧಾದಿ ಕರ್ಮಗಳನ್ನು ಮಾಡುವಂತವನಾಗು. ಇಲ್ಲಿ ಹೇಳಿರುವ ಯೋಗಶಬ್ದವು ಯುದ್ಧದಲ್ಲಿ ಜಯರೂಪವಾದ ಸಿದ್ಧಿವಿಷಯದಲ್ಲಿಯು ಅಪಜಯ ರೂಪವಾದ ಅಸಿದ್ಧಿವಿಷಯದಲ್ಲಿಯೂ ಸಮವಾಗಿರುವಿಕೆ ಎಂಬ ಚಿತ್ತ ಸಮಾಧಾನವಂ ಸೂಚಿಸುವುದು. ॥೪೮॥

ಮೂ ॥ ದೂರೇಣ ಹ್ಯವರಂಕರ್ಮ ಬುದ್ಧಿಯೋಗಾದ್ಧನಂಜಯ । ಬುದ್ಧೌ ಶರಣ ಮನ್ವಿಚ್ಛ ಕೃಪಣಾಃ ಫಲಹೇತವಃ ॥ ॥೪೯॥

ಪ॥ ದೂರೇಣ- ಹಿ- ಅವರಂ- ಕರ್ಮ- ಬುದ್ಧಿಯೋಗಾತ್- ಧನಂಜಯ । ಬುದ್ಧೌ- ಶರಣಂ- ಅನ್ವಿಚ್ಛ- ಕೃಪಣಾಃ- ಫಲಹೇತವಃ ॥ ... ॥೪೯॥

ಅ॥ ಹೇ ಧನಂಜಯ- ಎಲೈ ಅರ್ಜುನನೇ ! ಬುದ್ಧಿಯೋಗಾತ್- ನಿಶ್ಚಯಾತ್ಮಕವಾದ ಬುದ್ಧಿಯಿಂದ ಮಾಡಲ್ಪಡುವ ನಿಷ್ಕಾಮ ಕರ್ಮಯೋಗಕ್ಕಿಂತಲೂ, ಕರ್ಮ- ಕಾಮ್ಯಕರ್ಮವು, ದೂರೇಣ ಅವರಂ- ಅತ್ಯಂತ ನಿಕೃಷ್ಟವಾದದ್ದಲ್ಲವೇ, ಅತಃ- ಆದುದರಿಂದ, ಬುದ್ಧೌ-

ನಿಶ್ಚಯಾತ್ಮಕವಾದ ಬುದ್ಧಿಯಲ್ಲಿ, ಶರಣಂ - ಕಾರಣವಾದ ನಿಷ್ಕಾಮ ಕರ್ಮಯೋಗವನ್ನು, ಅನ್ವಿಚ್ಛ - ಆಶ್ರಯಿಸುವಂತೆವನಾಗು, (ಶಂ|| ಬುದ್ಧೌ - ನಿಷ್ಕಾಮ ಕರ್ಮಯೋಗದಲ್ಲಿ, ಅಥವಾ- ಸಾಂಖ್ಯಬುದ್ಧಿಯಲ್ಲಿ, ಶರಣಂ- ಆಶ್ರಯವನ್ನು, ಅನ್ವಿಚ್ಛ - ಆಶ್ರಯಿಸುವಂತವನಾಗು, ಅಂದರೇ ಪರಮಾರ್ಥ ಜ್ಞಾನವನ್ನು ಶರಣವನ್ನಾಗಿ ಹೊಂದು. ಶ್ರೀ|| ಬೌದ್ಧ-ಜ್ಞಾನಕ್ಕೋಸ್ಕರವಾಗಿ, ಶರಣಂ-ಕಾರಣವಾದಕರ್ಮಯೋಗವನ್ನು, (ಅಥವಾ) ರಕ್ಷಕನಾದ ಪರಮಾತ್ಮನನ್ನು, ಆನ್ವಿಚ್ಛ - ಆಶ್ರಯಿಸುವಂತವನಾಗು. (ಮ|| ಗೀ|| ವಿ) ಬುದ್ಧೌ - ಜ್ಞಾನೋಪಾಯವಾದ ನಿಷ್ಕಾಮ ಕರ್ಮಯೋಗದಲ್ಲಿ) ಫಲಹೇತವಃ - ಫಲವನ್ನಪೇಕ್ಷಿಸತಕ್ಕವರು, ಕೃಪಣಾಃ - ದುಃಖವನ್ನು ಹೊಂದತಕ್ಕವರು. (ಶಂ|| ರಾ|| ಜನನಮರಣ ರೂಪವಾದ ದುಃಖವನ್ನು ಹೊಂದತಕ್ಕವರು. (ಗೀ|| ವಿ|| ಫಲಹೇತವಃ ಕೃಪಣಾಃ-ಈಶ್ವರೈಕ್ಯಜ್ಞಾನವನ್ನಪೇಕ್ಷಿಸುವಂತವರು ಅಂಧಂತಮಸ್ಸನ್ನು ಹೋದುವರು.

(ರಾ|| ಭಾ||) ಸಿದ್ಧಿ ಅಸಿದ್ಧಿಗಳ ವಿಷಯದಲ್ಲಿ ಸಮತ್ವಾನು ಸಂಧಾನ ರೂಪವಾದ ಚಿತ್ತ ಸಮಾಧಾನವನ್ನ ಯಾವದಕ್ಕೋಸ್ಕರವಾಗಿ ಪುನಃಪುನಃ ಹೇಳಬೇಕೆಂದರೆ ಅದಕ್ಕುತ್ತರವಂ ಪೇಳುತ್ತಾನೆ=ಪೂರ್ವೋಕ್ತವಾದ ಪ್ರಧಾನಫಲತ್ಯಾಗ ವಿಷಯವಾಗಿಯು ಅವಾಂತರಫಲವಾದ ಸಿದ್ಧ್ಯಸಿದ್ಧಿಗಳಲ್ಲಿ ಸಮತ್ವವಿಷಯವಾಗಿಯೂ ಇರುವಬುದ್ಧಿಯೋಗದೊಡನೆ ಸೇರಿ ಮಾಡುವ ಕರ್ಮವಲ್ಲದೆ ಅನ್ಯವಾದ ಕರ್ಮಗಳೆಲ್ಲವೂ ಅತ್ಯಂತವಾಗಿ ನೀಚವಾದದ್ದು. ಅದು ಹ್ಯಾಗಂದರೆ, ಅದು ಪರಮಪುರುಷಾರ್ಥವಾದ ಮೋಕ್ಷವಂ ಕೊಡುವುದು. ಇತರವಾದ ಕರ್ಮವು ನಿತ್ಯದುಃಖವಾದ ಸಂಸಾರವನ್ನು ಕೊಡುವುದು. ಈ ಯೆರಡಕ್ಕೂ ಉತ್ಕರ್ಷಾಪಕರ್ಷರೂಪವಾದ ತಾರತಮ್ಯವೂ ಸಿದ್ಧವಾಗಿರುವುದು. ಆದುದರಿಂದ ಮೇಲೆ ಹೇಳಿರುವ ಬುದ್ಧಿ ಯೋಗವಂ ಬಿಡದಿರು. ಫಲಸಂಗಾದಿಗಳಿಂದ ಕರ್ಮವಂ ಮಾಡತಕ್ಕವರು ಸಂಸಾರಿಗಳಾಗುವರು. ... ... ... ||೪೯||

ಮೂ|| ಬುದ್ಧಿಯುಕ್ತೋ ಜಹಾತೀಹ ಉಭೇಸುಕೃತ
ದುಷ್ಕೃತೇ | ತಸ್ಮಾದ್ಯೋಗಾಯಯುಜ್ಯಸ್ವ ಯೋ
ಗಃಕರ್ಮಸುಕೌಶಲಂ || ||೫೦||

ಪ || ಬುದ್ಧಿಯುಕ್ತಃ - ಜಹಾತಿ- ಇಹ- ಉಭೇ- ಸುಕೃತದುಷ್ಕೃತೇ | ತಸ್ಮಾತ್- ಯೋಗಾಯ- ಯುಜ್ಯಸ್ವ- ಯೋಗಃ- ಕರ್ಮಸು- ಕೌಶಲಂ || ||೫೦||

ಅ॥ ಬುದ್ಧಿಯುಕ್ತಃ - ಪೂರ್ವೋಕ್ತವಾದ ಬುದ್ಧಿಯೊಡನೆ ಕೂಡಿರುವಂತಹವನು, (ಗೀ॥ವಿ॥ ಭಗವದ್ಜ್ಞಾನದಿಂದ ಕೂಡಿದವನು. ಉಭೇಸುಕೃತದುಷ್ಕೃತೇ- ಪುಣ್ಯಪಾಪಗಳೆರಡನ್ನೂ, ಇಹ- ಈ ಜನ್ಮದಲ್ಲಿ, ಜಹಾತಿ- ಬಿಟ್ಟುಬಿಡುವನು. ತಸ್ಮಾತ್ - ಆದುದರಿಂದ, ಯೋಗಾಯ- ಬುದ್ಧಿಯೋಗಕ್ಕೋಸ್ಕರವಾಗಿ, (ಗೀ॥ ವಿ॥ ಜ್ಞಾನೋಪಾಯವಾದ ನಿಷ್ಕಾಮ ಕರ್ಮಯೋಗಕ್ಕೋಸ್ಕರವಾಗಿ) ಯುಜ್ಯಸ್ವ- ಪ್ರಯತ್ನ ಮಾಡುವಂತವನಾಗು, ಕರ್ಮಸು- ಕರ್ಮಗಳಲ್ಲಿರುವ, ಕೌಶಲಂ- ಸಾಮರ್ಥ್ಯವು, ಯೋಗಃ-ಯೋಗವೆನ್ನಲ್ಪಡುವದು. (ಶಂ॥ ಕರ್ಮಸು- ಸ್ವಧರ್ಮವಾದ ಕರ್ಮಗಳಲ್ಲಿರುವ, ಕೌಶಲಂ - ಸಮತ್ವಬುದ್ಧಿಯಿಂದ ಬಂಧಕ ಸ್ವಭಾವವುಳ್ಳ ಕರ್ಮಗಳಿಂದ ನಿವರ್ತಿಸುವ ಸಾಮರ್ಥ್ಯವು. (ಗೀ॥ವಿ॥ ಕರ್ಮಸು ಕೌಶಲಂ- ಕರ್ಮಗಳಲ್ಲಿ ಶ್ರೇಷ್ಠವಾಗಿರುವುದು. ॥೫೦॥

(ಶಂ॥ ಭಾ॥) ಸಮತ್ವ ಬುದ್ಧಿಯುಳ್ಳವನಾಗಿ ಫಲಾಭಿಸಂಧಿಯಿಲ್ಲದೆ ತನಗೆ ವಿಹಿತವಾದ ಕರ್ಮಗಳನ್ನು ಮಾಡುವಂತವರಿಗೆ ಯಾವ ಫಲವು ಪ್ರಾಪ್ತವಾಗುವುದೊ ಅದಂ ಕೇಳೆಂದು ಅರ್ಜುನನಂ ಕುರಿತು ಶ್ರೀ ಪರಮಾತ್ಮನಾದ ಕೃಷ್ಣನುಪದೇಶಿಸುತ್ತಾನೆ=ಸಮತ್ವಬುದ್ಧಿಯುಳ್ಳವನಾಗಿ ನಿಷ್ಕಾಮ ಕರ್ಮಗಳಂ ಮಾಡತಕ್ಕವನು ಸತ್ವಶುದ್ಧಿಯನ್ನು ಮತ್ತು ಜ್ಞಾನವನ್ನೂ ಹೊಂದಿ ಈ ಲೋಕದಲ್ಲಿಯೆ ಪುಣ್ಯಪಾಪಗಳನ್ನು ಬಿಡುವನು. ಆದುದರಿಂದ ಸಮತ್ವಬುದ್ಧಿರೂಪವಾದ ಯೋಗವನ್ನಭ್ಯಾಸಮಾಡು. ಕರ್ಮಗಳು ಬಂಧಕಸ್ವಭಾವವುಳ್ಳವುಗಳಾದರೂ ಸಮತ್ವಬುದ್ಧಿಯೊಡನೆ ಮಾಡಲ್ಪಡುವುವಾದರೇ ಅವು ಬಂಧಕವಾದ ಸ್ವಾಭಾವಿಕಾಕಾರವನ್ನು ಬಿಟ್ಟು ಜ್ಞಾನ ಪ್ರಾಪ್ತಿಗೆ ಸಾಧನವಾಗುವುದು. ಆದುದರಿಂದ ಸಮತ್ವ ಬುದ್ಧಿಯುಳ್ಳವನಾಗಿ ಕರ್ಮಗಳನ್ನು ಮಾಡುತಲಿರು ಅದರೆ ಪಾಪಗಳನ್ನು ಮಾತ್ರ ಬಿಡುವುದಕ್ಕೆ ಇಚ್ಛೆಯುಂಟಾಗುವುದಲ್ಲದೆ ಪುಣ್ಯಫಲಗಳನ್ನು ಕೂಡಾ ತ್ಯಾಗಮಾಡಲಾಗುವುದೊ ಅಂದರೆ ಪಾಪಫಲಗಳನ್ನು ನರಕಗಳಲ್ಲನುಭವಿಸಿ ಪುನಶ್ಚ ನರಜನ್ಮಾದಿಗಳಂ ಹೊಂದುವುದು ಹ್ಯಾಗೆ ಸಂಭಾವಿತವೊ ಅದೇ ರೀತಿಯಾಗಿ ಪುಣ್ಯಫಲಗಳಾದ ಸ್ವರ್ಗಾದಿಗಳನ್ನನುಭವಿಸಿದರೂ ಅಂತಹ ಪುಣ್ಯಫಲಗಳನ್ನನುಭವಿಸಿದನಂತರದಲ್ಲಿ ಪುನಶ್ಚ ಜನ್ಮಾದಿಗಳಂ ಸ್ವೀಕರಿಸದೇ ಇರಲಾಗುವುದಿಲ್ಲವು. ಜನ್ಮರಾಹಿತ್ಯರೂಪವಾದ ಸಂಸಾರ ನಿವೃತ್ತಿಯು ಪುಣ್ಯಕರ್ಮಗಳಿಂದಲೂ ಲಭ್ಯವಾಗುವದಿಲ್ಲವಾದುದರಿಂದ ಪುಣ್ಯಪಾಪಗಳೆಂಬೀ ಯೆರಡನ್ನೂ ಜ್ಞಾನಿಯಾದವನು ಬಿಡಬೇಕೆಂದು ತಾತ್ಪರ್ಯವು ॥೫೦॥

(ರಾ॥ ಭಾ॥) ಬುದ್ಧಿಯೋಗದಿಂದ ಕೂಡಿರುವ್ರವನೇ ಕರ್ಮವನ್ನು ಮಾಡಿದವನಾಗಿರುತ ಅನಾದಿಕಾಲದಿಂದ ಅಪಾರವಾಗಿ ಸಂಪಾದಿಸಲ್ಪಟ್ಟ ಸಂಸಾರ ಹೇತುವಾದ ಪುಣ್ಯಪಾಪಗಳಂ ತೊಲಗಿಸುವನು. ಆದುದರಿಂದ ನಾವು ಹೇಳಿರುವ ಬುದ್ಧಿಯೋಗವಂ ಪೊಂದಲು ಪ್ರಯತ್ನ ಪಡುವಂತವನಾಗು. ಕರ್ಮವನ್ನು ಮಾಡುವುದರಲ್ಲಿ ಇದೇ ವಿಶೇಷ ಸಾಮರ್ಥ್ಯವು. ಸಮರ್ಥನಾಗಿರುವುವನಿಂದ ಸಾಧಿಸತಕ್ಕದ್ದೆಂದರ್ಥವು॥೫೦॥

(ಗೀ॥ ವಿ॥) ದೂರೇಣಹ್ಯವರಂಕರ್ಮ, ಎಂಬ ಶ್ಲೋಕದಿಂದ ಜ್ಞಾನ ಫಲಕ್ಕಿಂತಲೂ ಕರ್ಮಫಲವು ಅತ್ಯಂತ ನೀಚವಾದುದರಿಂದ ಕಾಮ್ಯಕರ್ಮಗಳಂ ಮಾಡತಕ್ಕವರುಗಳು ತಪೋಯೋಗ್ಯರೆಂಬದಾಗಿ ಹೇಳಿ ಈ ಶ್ಲೋಕದಿಂದಲೂ ಕರ್ಮಫಲಕ್ಕಿಂತಲೂ ಜ್ಞಾನಫಲವು ವಿಲಕ್ಷಣವೆಂಬದಾಗಿ ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸುತ್ತಾನೆ= ಬುದ್ಧಿಯುಕ್ತಃ - ಭಗವದ್ಧ್ಯಾನವುಳ್ಳವನು, ಉಭೆ - ಯರಡು ವಿಧವಾದ, ಸುಕೃತ ದುಷ್ಕೃತೇ- ಪುಣ್ಯ ಪಾಪಗಳನ್ನು, ಜಹಾತಿ - ಬಿಡುತ್ತಾನೆ. ಪಾಪಫಲವು ಅನಿಷ್ಟವಾದುದರಿಂದ ಅದಂ ತ್ಯಾಗಮಾಡುವುದು ಉಚಿತವಾದರೂ ಪುಣ್ಯಫಲವು ತನಗೆ ಇಷ್ಟವಾದುದರಿಂದ ಇದರ ತ್ಯಾಗ ವ್ಯಾಉಚಿತವ್ಯೋ ಎಂಬುವ ಆಕ್ಷೇಪಕ್ಕೆ ಪುಣ್ಯಫಲದಲ್ಲಿಯೂ ಪುನಃ ಮನುಷ್ಯಾದಿ ಜನ್ಮಗಳಂ ಕೊಡುವ ಪುಣ್ಯವು ಅನಿಷ್ಟವಾದುದರಿಂದ ಅದಂ ತ್ಯಾಗಮಾಡುತ್ತಾನೆಂಬ ಸಮಾಧಾನವನ್ನರಿಯಬೇಕು. ಭಗವದುಪಾಸನಾದಿಗಳಿಂದುಂಟಾಗುವ, ಜ್ಞಾನ ವೃದ್ಧಿಯಂ ಮಾಡತಕ್ಕದ್ದಾಗಿಯೂ, ಮುಕ್ತಿ ದಶೆಯಲ್ಲಿ ಆನಂದಾಭಿವೃದ್ಧಿಯಂ ಮಾಡತಕ್ಕದ್ದಾಗಿಯೂ ಇರುವ, ಪುಣ್ಯಫಲವು ಇಷ್ಟವಾದುದರಿಂದ ಅದಂ ಬಿಡುವುದೇ ಇಲ್ಲವು. ಅನಿಷ್ಟವಾದುದರಿಂದ ಪಾಪಫಲಮಾತ್ರವೆ ಸರ್ವಪ್ರಕಾರದಲ್ಲಿಯೂ ಬಿಡತಕ್ಕದ್ದಾಗಿರುವುದು. ತಸ್ಮಾತ್-ಜ್ಞಾನಕ್ಕೆ ಸಮಸ್ತವಾದ ಅನಿಷ್ಟಗಳಂ ಪರಿಹರಿಸಿ ಜ್ಞಾನಾನಂದಗಳನ್ನಭಿವೃದ್ಧಿಪಡಿಸುವ ಮಹಾಫಲರೂಪತ್ವವಿರುವುದರಿಂದ, ಯೋಗಾಯ - ಜ್ಞಾನೋಪಾಯಮಾದ ನಿಷ್ಕಾಮಕರ್ಮಕೌಶಲ್ಯಕರವಾಗಿ, ಯುಜ್ಯಸ್ವ-ಸನ್ನದ್ಧನಾಗಿರು. (ಅಥವಾ, ಪ್ರಯತ್ನವಂ ಮಾಡು. ಈ ಯೋಗವನ್ನು ಸ್ತೋತ್ರಮಾಡುತ್ತಾನೆ = ಯೋಗಃ - ಜ್ಞಾನೋಪಾಯಮಾದ ನಿಷ್ಕಾ

ಮಕರ್ಮವು, ಕರ್ಮಸು - ಕರ್ಮಗಳಲ್ಲಿ, ಕೌಶಲಂ-ಶ್ರೇಷ್ಠವಾದದ್ದು. (ಅಥವಾ) ಜ್ಞಾನೋಪಾಯದಲ್ಲಿ ಪ್ರಯತ್ನಪಡುವುದು ಉಚಿತವಾಗಿದ್ದರೂ ಫಲಸಂಗವಿಲ್ಲದ ಕರ್ಮಗಳಿಂದೇನುಪ್ರಯೋಜನವು ? ಎಂಬುವ ಶಂಕಾಪರಿಹಾರಾರ್ಥವಾಗಿ"ಯೋಗಃಕರ್ಮಸುಕೌಶಲಂ"ಎಂಬದಾಗಿಹೇಳಿದನೆಂದರಿಯಬೇಕು. ಕರ್ಮಗಳ ಮಧ್ಯದಲ್ಲಿ ಪರಮಾತ್ಮಜ್ಞಾನದೊಡನೆ ಫಲಸ್ನೇಹವಿಲ್ಲದೇ ಶ್ರೀಪರಮಾತ್ಮನನ್ನುದ್ದೇಶಿಸಿ ಮಾಡುವ ಕರ್ಮವು ಶ್ರೇಷ್ಠವಾದದ್ದೆಂದು ತಾತ್ಪರ್ಯವು. ಇದಕ್ಕೇನೆಯೋಗವೆಂಬ ಹೆಸರೂ ಹೇಳಲ್ಪಡುವುದು. ಆದುದರಿಂದ ಫಲಸ್ನೇಹಾದಿರಹಿತವಾದ ನಿಷ್ಕಾಮಕರ್ಮವೇಜ್ಞಾನೋಪಾಯವೆಂದರಿಯಬೇಕು. (ಇಲ್ಲಿ ಶ್ರೀಮನ್ಮಧ್ವಾಚಾರ್ಯರು ಕೂಡ ಈಮೇಲೆ ಹೇಳಿರುವ ಅರ್ಥವನ್ನ ವಿಸ್ತಾರವಾಗಿ ಅನುಗ್ರಹಿಸಿರುವುವರಲ್ಲದೆ ಕರ್ಮಫಲವು ನೀಚವಾದದ್ದೆಂಬುವುದರಲ್ಲಿಯೂ, ಜ್ಞಾನಫಲವಾದ ಮೋಕ್ಷವು ಅತ್ಯಂತ ಶ್ರೇಷ್ಠವಾದದ್ದೆಂಬುವುದರಲ್ಲಿಯೂ ಅನೇಕ ಪ್ರಮಾಣಗಳನ್ನುದಹರಿಸಿ ಸ್ಥಾಪಿಸಿರುತ್ತಾರೆ.) ||೫೦||

(ಶ್ರೀ) ಕರ್ಮಗಳಲ್ಲಿರುವ ಸಾಮರ್ಥ್ಯವು ಅಂದರೆ ಕರ್ಮ ಸ್ವಭಾವವು ಬಂಧವನ್ನು ಕೊಡುವದಾಗಿದ್ದರೂ ಅಂತಹ ಕರ್ಮವೇ ಫಲಾಪೇಕ್ಷೆಯಿಲ್ಲದೇ ಭಗವದರ್ಪಣ ಬುದ್ಧಿಯಿಂದ ಮಾಡಲ್ಪಟ್ಟರೇ ಮೋಕ್ಷ ಸಾಧನವಾಗುವದು. ||೫೦||

ಶ್ಲೋ || ಕರ್ಮಜಂಬುದ್ಧಿಯುಕ್ತಾಹಿ ಫಲಂತ್ಯಕ್ತ್ವಾ
ಮನೀಷಿಣಃ | ಜನ್ಮಬಂಧವಿನಿರ್ಮುಕ್ತಾಃ ಪದಂಗಚ್ಛಂ
ತ್ಯನಾಮಯಂ || ||೫೧||

ಪ|| ಕರ್ಮಜಂ- ಬುದ್ಧಿಯುಕ್ತಾಃ- ಹಿ- ಫಲಂ- ತ್ಯಕ್ತ್ವಾ- ಮನೀಷಿಣಃ | ಜನ್ಮಬಂಧವಿನಿರ್ಮುಕ್ತಾಃ- ಪದಂ- ಗಚ್ಛಂತಿ- ಅನಾಮಯಂ ||

ಅ|| ಬುದ್ಧಿಯುಕ್ತಾಃ- (ರಾ) ಪೂರ್ವೋಕ್ತವಾದ ಬುದ್ಧಿಯೊಡನೆ ಸೇರಿರುವಂತವರು. (ಶಂ|| ಸುಖದುಃಖಾದಿಗಳಲ್ಲಿ ಸಮತ್ವ ಬುದ್ಧಿಯುಳ್ಳವರು, (ಅಥವಾ) ಪರಮಾತ್ಮ ತತ್ವಜ್ಞಾನವುಳ್ಳವರು, ಕರ್ಮಜಂ- ಕರ್ಮದಿಂದುಂಟಾಗುವ, ಫಲಂ-ಫಲವನ್ನು, ತ್ಯಕ್ತ್ವಾ- ಬಿಟ್ಟು, (ಗೀ|| ವಿ|| ಕರ್ಮಜಂಫಲಂತ್ಯಕ್ತ್ವಾ- ಕರ್ಮಗಳಿಂದುಂಟಾಗುವ ಫಲವನ್ನು ವಿಷಯವಾಸನೆಗಳನ್ನೂ ಬಿಟ್ಟು.) ಮನೀಷಿಣಃ- ಜ್ಞಾನವುಳ್ಳವರಾಗಿ, ಜನ್ಮಬಂಧವಿನಿರ್ಮುಕ್ತಾಃ- ಹುಟ್ಟುವುದೆಂಬ ಬಂಧದಿಂದ ವಿಮುಕ್ತರಾಗುತ,(ಶಂ)ಜೀವನ್ಮುಕ್ತರಾಗುತ,ಅನಾಮಯಂ- ಉಪದ್ರವರಹಿತವಾದ, ಪದಂ- ಮೋಕ್ಷಸ್ಥಾನವನ್ನು, ಗಚ್ಛಂತಿ- ಹೊಂದುವರು. ||೫೧||

(ರಾ|| ಭಾ||) ಬುದ್ಧಿಯೋಗನಿಂದ ಕೂಡಿದವರು ಫಲಾಪೇಕ್ಷಾರಹಿತರಾಗಿ ಕರ್ಮ ಮಾತ್ರವಂಮಾಡುತ್ತ, ಆದುದರಿಂದ ಜನ್ಮವೆಂಬ ಬಂಧದಿಂದ ಬಿಡಲ್ಪಟ್ಟು ಆರೋಗ್ಯವಾದ ಸ್ಥಾನವನ್ನು ( ಮೋಕ್ಷಸ್ಥಾನವನ್ನು ) ಹೊಂದವುರು. ಈ ಶ್ಲೋಕದಲ್ಲಿರುವ ಹಿ ಶಬ್ದವು ಈ ಅರ್ಥವು ಸಮಸ್ತವಾದ ಉಪನಿಷತ್ತುಗಳಲ್ಲಿಯೂ ಪ್ರಸಿದ್ಧ ವೆಂಬುವುದನ್ನು ಸೂಚಿಸುವುದು. ... ... ||೫೧||

ಶ್ಲೋ || ಯದಾತೇ ಮೋಹಕಲಿಲಂ ಬುದ್ಧಿರ್ವ್ಯತಿತರಿಷ್ಯತಿ । ತದಾಗಂತಾಸಿನಿರ್ವೇದಂ ಶ್ರೋತವ್ಯಸ್ಯಶ್ರುತಸ್ಯಚ || ||೫೨||

ಪ || ಯದಾ- ತೇ- ಮೋಹಕಲಿಲಂ - ಬುದ್ಧಿಃ - ವ್ಯತಿತರಿಷ್ಯತಿ | ತದಾ- ಗಂತಾ- ಅಸಿ- ನಿರ್ವೇದಂ- ಶ್ರೋತವ್ಯಸ್ಯ- ಶ್ರುತಸ್ಯ- ಚ||

ಅ|| ಯದಾ- ಯಾವಾಗ- ತೇ- ನಿನ್ನ- ಬುದ್ಧಿಃ- ಬುದ್ಧಿಯು- ಮೋಹಕಲಿಲಂ-ದೇಹಾತ್ಮಭ್ರಮರೂಪವಾಗಿರುವ ಅಜ್ಞಾನ ದೋಷವನ್ನು, ವ್ಯತಿತರಿಷ್ಯತಿ- ದಾಟುವುದೊ, ತದಾ - ಆವಾಗ, ಶ್ರೋತವ್ಯಸ್ಯ - ಕೇಳತಕ್ಕ ವೇದಾರ್ಥಗಳಲ್ಲಿಯೂ, ಶ್ರುತಸ್ಯಚ- ಕೇಳಿರುವ ವೇದಾರ್ಥಗಳಲ್ಲಿಯೂ, ನಿರ್ವೇದಂ - ವೈರಾಗ್ಯವನ್ನು, (ಮ|| ಗೀ|| ವಿ|| ಫಲ ಲಾಭವನ್ನು) ಗಂತಾ- ಹೊಂದುವವನಾಗಿ, ಅಸಿ- ಆಗುತ್ತೀಯೆ. ||೫೨||

(ಶಂ|| ಭಾ||) ನಿಷ್ಕಾಮ ಕರ್ಮಾನುಷ್ಠಾನದಿಂದುಂಟಾದ ಸತ್ವಶುದ್ಧಿಯಿಂದ ಜ್ಞಾನವು ಯಾವಾಗ ವುಂಟಾಗುವುದೆಂದರೇ ಅದಂ ಕೇಳು—ಆತ್ಮಾನಾತ್ಮವಿವೇಕಗಳನ್ನು ಹರಿಸಿ ವಿಷಯಸುಖಗಳಲ್ಲಂತಃ ಕರಣಪ್ರವೃತ್ತಿಯನ್ನುಂಟುಮಾಡುವ ಮೋಹರೂಪವಾದ ಅವಿವೇಕವೆಂಬಕಾಲುಷ್ಯವನ್ನು ನಿನ್ನಮನಸ್ಸುಯಾವಾಗಲಾದರೆ ಅತಿಕ್ರಮಿಸುವುದೊಆವಾಗ ಆದುವರಿಗೂ ಕೇಳಿರುವವೇದಾಂತಗಳಂ ಕುರಿತೂನೂ ಮುಂದೆಕೇಳತಕ್ಕವುಗಳಾದ ವೇದಾಂತಂಗಳಂ ಕುರಿತೂನೂ ವೈರಾಗ್ಯವಂಹೊಂದುವಿ ಅಂದರೇ ಮನಸ್ಸು ನಿರ್ವಿಷಯ ಮಾಗಿಯೂ ನಿರ್ಮಲವಾಗಿಯೂ ಸ್ವಾಧೀನವಾದರೆ ಉಪದೇಶಗಳಿಂದ ಪ್ರಯೋಜನವಿಲ್ಲವು. ಅಷ್ಟರಲ್ಲಿಯೆ ಜ್ಞಾನವುಂಟಾಗುವುದು. ಅಂತಹ ಜ್ಞಾನದಿಂದ ಸಂಸಾರವಿಮುಕ್ತನಾಗುತ್ತೀಯೆ. ಅಂದರೇ ಅವಿವೇಕ ರೂಪವಾಗಿಯೂ ಆತ್ಮಾನಾತ್ಮವಿವೇಕವನ್ನು ಹೋಗಲಾಡಿಸುವುದಾಗಿಯೂ, ದೇಹವೇಆತ್ಮಸಂಬ

ಭ್ರಮಕ್ಕೆ ಕಾರಣವಾಗಿಯೂ ಇರುವ ಅಜ್ಞಾನವು ಯಾವಾಗಲೀದರೆ ಹೋಗುವುದೋ ಆವಾಗ ನಿರ್ಮಲಸ್ವಭಾವ ವುಂಟಾಗುವುದು. ಅಂತಹ ನಿರ್ಮಲ ಸ್ವಭಾವ ವುಂಟಾದರೇ ವೇದಾಂತ ಶಾಸ್ತ್ರಕ್ಕಿಂತಲೂ ಇತರಗಳಾದ ಶಾಸ್ತ್ರಗಳಿಂದ ಇದುವರಿವಿಗು ಕೇಳಿದ ಮತ್ತು ಮುಂದೆ ಕೇಳುವ ಅರ್ಥಗಳಲ್ಲಿ ವೈರಾಗ್ಯವೂ ವುಂಟಾಗುವುದು. ಆ ವೈರಾಗ್ಯ ವುಂಟಾದತತ್ಕ್ಷಣವೇ ವೇದಾಂತಕ್ಕಿಂತಲೂಅನ್ಯವಾದ ಶಾಸ್ತ್ರಗಳಿಂದ ಕೇಳಿದ ಅರ್ಥಗಳು ಕೇಳಬೇಕಾದ ಅರ್ಥಗಳು ವ್ಯರ್ಥವಾಗಿ ಹೋಗುವುವು. ಮತ್ತು ಆತ್ಮಾನಾತ್ಮವಿವೇಕ ವುಂಟಾದ ಮೇಲೆ ಸಕಲವಾದ ಅನಾತ್ಮ ಪದಾರ್ಥಗಳು ನಿಷ್ಫಲಗಳೆಂಬ ಅಭಿಪ್ರಾಯ ವುಂಟಾಗುವುದೆಂತಲೂ ತಿಳಿಯಬೇಕು. ॥೫೨॥

(ರಾ॥ ಭಾ॥) ನಾವು ಹೇಳಿರುವಂತೆ ಕರ್ಮದ ದೆಶೆಯಿಂದ ಪಾಪಗಳಂ ತೊಲಗಿಸಿ,ನಿನ್ನ ಬುದ್ಧಿಯು ಅಲ್ಪ ಫಲಗಳಲ್ಲಿ ಮನಸ್ಸಿನಾಸಕ್ತ ವಾಗಿ ಮಾಡುವ ಮೊಹರೂಪವಾದ ಕಲ್ಕವನ್ನು ಯಾವಾಗ ಬಿಡುವುದೊಆವಾಗ ನಾವುಪೂರ್ವದಲ್ಲಿ ತ್ಯಾಜ್ಯವೆಂಬದಾಗಿ ಹೇಳಿರುವುದೂ, ಮತ್ತು ಮುಂದೆ ಹೇಳುವದಾಗಿಯೂ ಇರುವ ಫಲ ಮೊದಲಾದವುಗಳಲ್ಲಿ ನಿನಗೇನೆ ವೈರಾಗ್ಯಮುಂಟಾಗುವುದು. ॥೫೨॥

(ಮ॥ ಭಾ॥) ಈ ಪ್ರಕಾರವಾಗಿ ಮೋಕ್ಷಾಪೇಕ್ಷೆ ಯುಳ್ಳವನಿಂದ ಕರ್ಮವು ಯಾವ ಪರ್ಯನ್ತವನುಷ್ಠಿಸಬೇಕೆಂದರೆ ಅದಕ್ಕುತ್ತರವಂ ಹೇಳುತ್ತಾನೆ–ಇಲ್ಲಿನ ನಿರ್ವೇದ ಶಬ್ದಕ್ಕೆ "ಪಾಂಡಿತ್ಯಂ ನಿರ್ವಿದ್ಯ" ಎಂಬುವ ಕಡೆ ಹೇಳಿರುವಂತೆ ಫಲ ಲಾಭವನ್ನೆಂದರ್ಥವಂ ಸ್ವೀಕರಿಸಬೇಕು. ಫಲ ಲಾಭವೆಂಬುವ ಅರ್ಥವಂ ಸ್ವೀಕರಿಸದೆ ವೈರಾಗ್ಯವನ್ನೆಂಬ ಅರ್ಥವಂ ಹೇಳುವುದರಲ್ಲಿ "ಶ್ರೋತವ್ಯಸ್ಯಶ್ರುತಸ್ಯಚನಿರ್ವೇದಂಗಂತಾಸಿ,, ಎಂಬದಾಗಿರುವುದರಿಂದ ಜ್ಞಾನಿಗಳಿಗೆ ಭಗವನ್ಮಾಹಾತ್ಮ್ಯಶ್ರವಣಾದಿಗಳಲ್ಲಿಕೂಡ ವೈರಾಗ್ಯವನ್ನು ಪದೇಶಿಸಿದಂತೆ ಆಗುವದು. ಜ್ಞಾನಿಗಳಿಗೆ ಹೇಯವಿಷಯಗಳಲ್ಲಿ ವೈರಾಗ್ಯವು ವುಚಿತವಾಗಿರುವುದಲ್ಲದೆ ಭಗವನ್ಮಾಹಾತ್ಮ್ಯ ಶ್ರವಣದಲ್ಲಿಯೂ ವೈರಾಗ್ಯವಿರಬೇಕೆಂದು ಹೇಳುವುದು ವುಚಿತವಲ್ಲವು. ಜ್ಞಾನಿಗಳು ಮೋಕ್ಷದಲ್ಲಿಕೂಡ ಆಸಕ್ತಿಯಂ ಬಿಟ್ಟು ಇಲ್ಲಿಯೇ ಕಥಾಶ್ರವಣಾದಿಗಳಲ್ಲಿ ತತ್ಪರರಾಗಿರುವರು. ಶ್ರೀಕು

ಕಾಚಾರ್ಯಾದಿಗಳ ಅನುಷ್ಠಾನವು ಆ ಪ್ರಕಾರವಾಗಿಯೇ ಇರುವುದು. ಶ್ರೀಭಾಗವತದಲ್ಲಿಯೂ "ಆತ್ಮಾರಾಮಾಶ್ಚಮುನಯೋ ನಿರ್ಗ್ರಂಥಾ ಅಪ್ಯುರುಕ್ರಮೇ। ಕುರ್ವಂತ್ಯಹೈತುಕೀಂಭಕ್ತಿಮಿತ್ಥಂಭೂತಗುಣೋ ಹರಿಃ॥ ಯಾನಿರ್ವೃತಿಸ್ತನುಭೃತಾಂ ತವಪಾದಪದ್ಮ ಧ್ಯಾನಾದ್ಭವಜ್ಜನಕಥಾ ಶ್ರವಣೇನವಾಸ್ಯಾತ್ । ಸಾಬ್ರಹ್ಮಣಿಸ್ವಮಹಿಮನ್ಯಪಿ ನಾಥ ಮಾಭೂತ್ಕಿಂತ್ವಂತಕಾಸಿಲುಲಿತಾ ತ್ಪತತಾಂವಿಮಾನಾತ್ ॥" ಇತ್ಯಾದಿ ಪ್ರಮಾಣಗಳಿಂದ ಅನಿತ್ಯವಾದ ಸ್ವರ್ಗಾದಿಫಲಗಳಲ್ಲಿ ವೈರಾಗ್ಯಪೂರ್ವಕವಾಗಿ ಭಗವತ್ಕಥಾಶ್ರವಣಾದಿಗಳಲ್ಲಿಯೇ ಆಸಕ್ತಿಯು ಜ್ಞಾನಿಗಳಿಗುಂಟಾಗಿರುವುದೆಂದು ತೋರಿಸಲ್ಪಟ್ಟಿರುವುದು. ಆದರೆ ಮೋಕ್ಷದಶೆಯಲ್ಲಿಯೂ ಇಲ್ಲಿನ ಭಗವದುಪಾಸನ ತಾರತಮ್ಯಾನುಗುಣವಾದ ಆನಂದ ತಾರತಮ್ಯವಂ ಅವಶ್ಯವಾಗಿ ತಿಳಿಯಬೇಕು. "ಯಥಾಭಕ್ತಿ ವಿಶೇಷೋತ್ರ ದೃಶ್ಯತೇ ಪುರುಷೋತ್ತಮೇ । ತಥಾಮುಕ್ತಿವಿಶೇಷೋಽಪಿ ಜ್ಞಾನಿನಾಂ ಲಿಂಗಭೇದನೇ ॥ ಯೋಗಿನಾಂಭಿನ್ನಲಿಂಗಾನಾ ಮಾವಿರ್ಭೂತಸ್ವರೂಪಿಣಾಂ । ಪ್ರಾಪ್ತಾನಾಂಪರಮಾನಂದಂ ತಾರತಮ್ಯಂ ಸದೈವಹಿ ॥"ಇತ್ಯಾದಿ ಪ್ರಮಾಣಗಳಲ್ಲಿ ಇಲ್ಲಿನ ಭಕ್ತಿ ತಾರತಮ್ಯಾನುಗುಣವಾದ ಮೋಕ್ಷಾನಂದ ತಾರತಮ್ಯವು ಸ್ಪಷ್ಟವಾಗಿರುವುದು. ಮುಕ್ತಿದೆಶೆಯಲ್ಲಿ ತಾರತಮ್ಯವಿಲ್ಲವೆಂಬ ವಚನಗಳು ಮೋಕ್ಷದಶೆಯಲ್ಲಿ ದುಃಖವಿಲ್ಲವೆಂಬುವ ಆಕಾರವನ್ನು ಮತ್ತು ಲಿಂಗಶರೀರ ಭಂಗವು ಯೆಲ್ಲರಿಗೂ ಸಮವಾಗಿರುವುದೆಂಬುವುದನ್ನು ಮಾತ್ರವೇ ಹೇಳುವುದಲ್ಲದೆ ಉಪಾಸನ ತಾರತಮ್ಯಾನುಗುಣವಾದ ಆನಂದ ತಾರತಮ್ಯವನ್ನೂ ಕೂಡ ನಿಷೇಧಿಸಲಿಲ್ಲವು. ಆದುದರಿಂದ ಪ್ರಕೃತದಲ್ಲಿ ಭಗವನ್ಮಾಹಾತ್ಮ್ಯ ಶ್ರವಣಾದಿಗಳಂ ಮಾಡಿ ಪೂರ್ಣವಾಯಿತು, ಇದರಲ್ಲಿ ವೈರಾಗ್ಯವಂ ಸ್ವೀಕರಿಸಬಹುದೆಂದು ತಿಳಿಯದೆ ಇಲ್ಲಿನ ವ್ಯವಸಾಯಾನುಗುಣವಾಗಿ ಮೋಕ್ಷದಶೆಯಲ್ಲಿ ಜ್ಞಾನ ತಾರತಮ್ಯವು ಸಿದ್ಧವೆಂದು ತಿಳಿದು ಅದಕ್ಕಾಗಿ ಕೇಳಿದ ಅರ್ಥಗಳ ಫಲಲಾಭವಂ ಹೊಂದುತ್ತೀ ಎಂಬ ಅರ್ಥವನ್ನೇ ಸ್ವೀಕರಿಸಬೇಕು. (ಇಲ್ಲಿ ಈ ಶ್ಲೋಕಾರ್ಥವು ಸಂಗ್ರಹಿಸಿ ಬರೆಯಲ್ಪಟ್ಟಿರುವುದು, ವಿಸ್ತಾರಾಂಶವನ್ನು ಭಾಷ್ಯದಲ್ಲಿಯೇ ನೋಡಬಹುದು.) ... ... ॥೫೦॥

(ಗೀ|| ೬||) ಫಲಾಪೇಕ್ಷಾದಿ ರಹಿತವಾದ ಭಗವದಾರಾಧನ ರೂಪವಾಗಿರುವ ಕರ್ಮಗಳು ಮೋಕ್ಷಸಾಧನವಾದ ಜ್ಞಾನವನ್ನಪೇಕ್ಷಿಸುವುವನಾದ ಅಧಿಕಾರಿಯಿಂದ ಯಾವವರಿವಿಗೂ ಅನುಷ್ಠಿಸಬೇಕೆಂಬುವುದಕ್ಕೆ ಉತ್ತರವಂ ಪೇಳುತ್ತಾನೆ,— ಯಾವಾಗ ನಿನ್ನಬುದ್ಧಿಯು ವಿಪರೀತಜ್ಞಾನವೆಂಬ ದೋಷವನ್ನತಿಕ್ರಮಿಸುವುದೊ ಆವಾಗ ಇದುವರಿಗೂ ಹರಿಯಿಂದ ಕೇಳಿರುವ, ಮತ್ತು ಮುಂದೆ ಕೇಳುವ ವೇದಾಂತಾರ್ಥಗಳ ಫಲವನ್ನು ಹೊಂದುತ್ತೀಯೆ, ಅಂದರೆ ನಿಷ್ಕಾಮ ಕರ್ಮಯೋಗದಿಂದುಂಟಾಗಿರುವುದಾಗಿಯೂ ಮೋಕ್ಷಕ್ಕೆ ಕಾರಣವಾಗಿಯೂ ಇರುವ ಜ್ಞಾನವನ್ನು ಹೊಂದುತ್ತೀಯೆಂದು ತಾತ್ಪರ್ಯವು. ಮಿಥ್ಯಾಜ್ಞಾನನಾಶವೇ ನಿವೃತ್ತಕರ್ಮ ಅಂದರೆ ಜ್ಞಾನೋಪಾಯವಾದ ನಿಷ್ಕಾಮಕರ್ಮಕ್ಕೆ ಫಲವಾಗಿರುವುದರಿಂದ ಅಂತಹ ಮಿಥ್ಯಾಜ್ಞಾನವು ನಾಶವಾಗುವ ಪರ್ಯಂತವು ಕರ್ಮಮಾಡಬೇಕೆಂದು ತಾತ್ಪರ್ಯವು. ||೫೨||

ಮೂ || ಶ್ರುತಿವಿಪ್ರತಿಪನ್ನಾತೇ ಯದಾಸ್ಥಾಸ್ಯತಿ ನಿಶ್ಚಲಾ | ಸಮಾಧಾವಚಲಾ ಬುದ್ಧಿ ಸ್ತದಾಯೋಗ ಮವಾಪ್ಸ್ಯಸಿ || ... ... ||೫೩||

ಪ || ಶ್ರುತಿವಿಪ್ರತಿಪನ್ನಾ- ತೇ- ಯದಾ- ಸ್ಥಾಸ್ಯತಿ- ನಿಶ್ಚಲಾ | ಸಮಾಧೌ- ಅಚಲಾ- ಬುದ್ಧಿಃ- ತದಾ- ಯೋಗಂ- ಅವಾಪ್ಸ್ಯಸಿ || ... ||೫೩||

ಅ|| ಶ್ರುತಿವಿಪ್ರತಿಪನ್ನಾ-ನಾನಿದುವರಿಗೂ ಕೇಳಿದ ಶಾಸ್ತ್ರಾರ್ಥಗಳಂ ಕೇಳುವುದರಿಂದ ವಿವೇಕಯುಕ್ತವಾಗಿರುವ, ತೇ - ನಿನ್ನ, ಬುದ್ಧಿಃ- ಬುದ್ಧಿಯು, ಯದಾ - ಯಾವಾಗ, ಸಮಾಧೌ- ಮನಸ್ಸಿನಲ್ಲಿ, ನಿಶ್ಚಲಾ- ಚಲಿಸದೇ, ಅಚಲಾ- ಏಕರೂಪವಾಗಿ, (ಶಂ|| ವಿಕಲ್ಪರಹಿತವಾಗಿ) ಸ್ಥಾಸ್ಯತಿ- ಇರುವುದೋ, ತದಾ- ಆವಾಗ, ಯೋಗಂ - ಜ್ಞಾನಯೋಗವೆಂಬ ಆತ್ಮ ಸಾಕ್ಷಾತ್ಕಾರವನ್ನು, (ಅಥವಾ) ಕರ್ಮಯೋಗದಿಂದ ಸಾಧಿಸತಕ್ಕ ಜ್ಞಾನಯೋಗವನ್ನು.) ಅವಾಪ್ಸ್ಯಸಿ- ಹೊಂದುತ್ತೀಯೆ. ... ||೫೩||

(ಶಂ|| ಭಾ||) ಮೋಹರೂಪವಾದ ಕಾಲುಷ್ಯರಹಿತನಾಗಿ ಆತ್ಮವಿಷಯಕವಾದ ವಿವೇಕವುಳ್ಳವನು ಕರ್ಮಯೋಗ ಫಲವಾದ ಜ್ಞಾನಯೋಗ ಫಲವನ್ನು ಯಾವಾಗ ಹೊಂದುವನು ? ಅಂದರೆ ಪ್ರತ್ಯುತ್ತರವಂ ಪೇಳುತ್ತಾನೆ=ಅನೇಕಗಳಾದ ಸಾಧ್ಯಸಾಧನಗಳನ್ನು, (ಸಾಧ್ಯ ಅಂದರೆ ಫಲವು, ಆ ಫಲವನ್ನು ಹೊಂದಲು ಉಪಾಯವಾದದ್ದನ್ನು

ಸಾಧನವೆನ್ನುವುರು.) ಅಂತಹ ಸಾಧ್ಯ ಸಾಧನಗಳ ಸಂಬಂಧವನ್ನು, ಬೋಧಿಸುವುದಾಗಿಯೂ ಇದಂ ಮಾಡು ಇದಂ ಮಾಡಬೇಡವೆಂಬುವ ಪ್ರವೃತ್ತಿ ನಿವೃತ್ತಿಗಳಂ ಬೋಧಿಸುವುದಾಗಿಯೂ ಇರುವ ಅರ್ಥವಾದಗಳನ್ನು ಬೋಧಿಸುವ ಶ್ರುತಿವಾಕ್ಯಗಳಲ್ಲಾಸಕ್ತವಾಗಿರುವುದರಿಂದ ನಾನಾವಿಧವಾದ ಆಲೋಚನೆಗಳೊಡನೆ ಸೇರಿರುವ ನಿನ್ನ ಬುದ್ಧಿಯು ಪರಮೇಶ್ವರಾನುಭವದಲ್ಲಿ ನಿಶ್ಚಲವಾಗಿ ಪ್ರವೇಶಿಸಿ ಯಾವ ವಿಧವಾದ ವಿಕಲ್ಪಗಳಿಲ್ಲದೇ ಆಗುವದೋ ಆವಾಗ ಯೋಗಫಲವಾದ ವಿವೇಕಪ್ರಜ್ಞಾ ಎಂಬುವ ಜ್ಞಾನನಿಷ್ಠೆಯನ್ನು ಹೊಂದುತ್ತೀಯೆ. ಯಾವಾಗಲಾದರೆ ವಿಕ್ಷೇಪವು ವಿಕಲ್ಪವು ಸಂಶಯ ವಿಪರ್ಯಯಗಳೆಂಬ ಚಿತ್ತದೋಷಗಳು ಹೋಗುವದೊ ಆವಾಗಲೆ ವಿವೇಕ ಜ್ಞಾನರೂಪವಾದ ಜ್ಞಾನನಿಷ್ಠೆಯು ಪ್ರಾಪ್ತವಾಗುವುದೆಂದರ್ಥವು. (ನಾನಾವಿಧವಾದ ಮನೋರಥಧ್ಯಾನವಂ ಮಾಡುವುದು ವಿಕ್ಷೇಪವು, ಇದೇ ವಿಪರ್ಯಯವು. ಸಂಶಯವೆಂದರೆ ಈ ಅರ್ಥವು ಹೀಗಿರುವುದೋ ಅಥವಾ ಬೇರೆ ವಿಧವಾಗಿರುವುದೋ ಎಂಬ ಸಂದೇಹವು, ಇದನ್ನೇ ವಿಕಲ್ಪವೆನ್ನುವುರು.॥

(ರಾ॥ ಭಾ॥) ಆತ್ಮನನ್ನು ಯಥಾರ್ಥಸ್ಥಿತಿಯಿಂದ ತಿಳಿದು ಪರಮಪುರುಷಾರ್ಥವಾದ ಮೋಕ್ಷವಲ್ಲದೆ ಅನ್ಯಫಲಗಳಲ್ಲಿ ಪುರುಷಾರ್ಥತ್ವಸಂಭಾವನಾರಹಿತವಾದ ಬುದ್ಧಿವಿಶೇಷದಿಂದ ಕೂಡಿ ಕರ್ಮವನ್ನು ಮಾಡಿದರೆ ಆತ್ಮದರ್ಶನ ರೂಪವಾದ ಯೋಗಫಲವು ಸಿದ್ಧಿಸುವುದೆಂಬದಾಗಿ ಉಪದೇಶಿಸುತ್ತಾನೆ- ಎಲೈ ಅರ್ಜುನನೇ ! ಸರ್ವಜ್ಞನಾಗಿಯೂ ಸರ್ವಶಕ್ತನಾಗಿಯೂ, ಪರಮ ಕಾರುಣ್ಯಾದಿ ಗುಣಗಳಿರುವುದರಿಂದ ಭ್ರಮವಂಚನಾದಿಗಳೆಂಬ ದೋಷಗುಣಗಳಿಲ್ಲದವನಾಗಿಯೂ, ಅವ್ಯಾಜಬಂಧುವಾಗಿಯೂ ಇರುವ ಈಶ್ವರನಾದ ನನ್ನಿಂದ ಕೇಳಿದಮೇಲೆ ಆತ್ಮವು ಸಕಲ ಪದಾರ್ಥಗಳಲ್ಲಿಯೂ ಭಿನ್ನನಾಗಿ ನಿತ್ಯ ನಿರತಿಶಯ ಸೂಕ್ಷ್ಮವಾಗಿರುವುದೆಂದು ತಿಳಿದು ಯಾವಾಗಲೂ ಒಂದೇರೀತಿಯಾಗಿರುವ ನಿನ್ನ ಬುದ್ಧಿಯು ಸಂಗರಹಿತವಾಗಿ ಮಾಡುವ ಕರ್ಮಾನುಷ್ಠಾನದಿಂದ ನಿರ್ಮಲವಾದ ಮನಸ್ಸಿನಲ್ಲಿ ಯಾವಾಗಲಾದರೆ ಸ್ಥಿರವಾಗಿರುವುದೊ ಆವಾಗತಾನೇ ಯೋಗವನ್ನು ಹೊಂದುತ್ತೀಯೆ, ಅಂದರೆ ಶಾಸ್ತ್ರದಿಂದುಂಟಾದ ಆತ್ಮಜ್ಞಾನದೊಡನೆ ಮಾಡಲ್ಪಡುವ ಕರ್ಮಯೋಗವು ಸ್ಥಿತಪ್ರ

ಜ್ಞಾತಾ ಎಂಬುವ ಜ್ಞಾನನಿಷ್ಠೆಯನ್ನುಂಟುಮಾಡುವುದು. ಅದು ಯೋಗವೆಂಬುವ ಆತ್ಮದರ್ಶನವನ್ನುಂಟುಮಾಡುವುದೆಂದು ಭಾವವು. ||೫೩||

ಮೂ ॥ ಅರ್ಜುನ ಉವಾಚ ॥ ಸ್ಥಿತಪ್ರಜ್ಞಸ್ಯಕಾಭಾಷಾ ಸಮಾಧಿಸ್ಥಸ್ಯಕೇಶವ | ಸ್ಥಿತಧೀಃಕಿಂಪ್ರಭಾಷೇತ ಕಿಮಾಸೀತ ವ್ರಜೇತಕಿಂ ॥ ... ||೫೪||

ಪ॥ ಸ್ಥಿತಪ್ರಜ್ಞಸ್ಯ- ಕಾ- ಭಾಷಾ- ಸಮಾಧಿಸ್ಥಸ್ಯ- ಕೇಶವ | ಸ್ಥಿತಧೀಃ- ಕಿಂ- ಪ್ರಭಾಷೇತ- ಕಿಂ- ಆಸೀತ- ವ್ರಜೇತ-ಕಿಂ ॥ ... ... ||೫೪||

ಅ॥ ಅರ್ಜುನಃ- ಅರ್ಜುನನು, ಉವಾಚ- ನುಡಿಯುವನು. ಹೇ ಕೇಶವ- ಎಲೈ ಶ್ರೀಕೃಷ್ಣನೇ! ಸಮಾಧಿಸ್ಥಸ್ಯ- ಸಮಾಧಿಯೋಗದಲ್ಲಿರುವ, ಸ್ಥಿತಪ್ರಜ್ಞಸ್ಯ - ಸ್ಥಿರವಾದ ಜ್ಞಾನನಿಷ್ಠೆಯುಳ್ಳವನ. (ಶಂ॥ ನಾನೇ ಬ್ರಹ್ಮವೆಂಬುವ ಜ್ಞಾನವಂ ಹೊಂದಿರುವುವನ) ಭಾಷಾ- ಸ್ವರೂಪವು, ಕಾ- ಯಾವದು, ಸ್ಥಿತಧೀಃ- ಸ್ಥಿರಜ್ಞಾನವುಳ್ಳವನು, ಕಿಂಪ್ರಭಾಷೇತ ಹ್ಯಾಗೆ ಮಾತನಾಡುವನು. (ಅವನು ಮಾತನಾಡುವುದೇ ಮೊದಲಾದದ್ದು ಹ್ಯಾಗಿರುವುವೆಂದರ್ಥವು) ಕಿಮಾಸೀತ- ಹ್ಯಾಗಿರುವನು, (ಇವನ ಮಾನಸ ವ್ಯಾಪಾರವು ಹ್ಯಾಗಿರುವುವೆಂದರ್ಥವು) (ಗೀ॥ ವಿ॥ ಎಲ್ಲಿರುವನು,) ಕಿಂವ್ರಜೇತ- ಯಾವ ವಿಧವಾದ ನಡತೆಯುಳ್ಳವನು. (ಕಾಯಿಕವಾದ ಅಂದರೆ ದೇಹಸಂಬಂಧವಾದ ವೃತ್ತಿಯು ಹ್ಯಾಗಿರುವುದೆಂದರ್ಥವು.)(ಮ॥ ಅಂತವನ ನಡತೆಯು ಅಥವಾಕೃತ್ಯವು ಯಾವರೀತಿಯಾಗಿರುವುದು.)||೫೪||

(ಶಂ ॥ ಭಾ॥) ಫಲಾಭಿಲಾಷೆಯಂ ಬಿಟ್ಟು ವೇದೋಕ್ತಗಳಾದ ಕರ್ಮಗಳನ್ನು ಈಶ್ವರಾರ್ಪಣ ಬುದ್ಧಿಯಿಂದ ಮಾಡುವಂತ ಸನ್ಯಾಸಿಯಾದವನಿಗೆ ಜ್ಞಾನ ನಿಷ್ಠೆಯು ಉಂಟಾಗುವುದೆಂಬದಾಗಿ ಪರಮಾತ್ಮನು ಅರ್ಜುನನಿಗೆ ಹೇಳಿದಮಾತ್ರದಿಂದಲೇ ಅಂತಹ ಜ್ಞಾನನಿಷ್ಠೆಯುಳ್ಳವನ ಲಕ್ಷಣಗಳಂ ಕೇಳಬೇಕೆಂಬ ಪ್ರಶ್ನಬೀಜವುಂಟಾಗಲಾಗಿ ಅದನ್ನರ್ಜುನನು ಪ್ರಶ್ನವಂ ಮಾಡುವನು- ಆತ್ಮನಲ್ಲಿ ಹೊಂದಲ್ಪಟ್ಟ ಪರಮಾರ್ಥಜ್ಞಾನವುಳ್ಳವನ ಅಥವಾ ಚಿತ್ತಶುದ್ಧಿಯಿಂದ ಅಥವಾ ಚಿತ್ತ ಸಮಾಧಾನದಿಂದ ಹೊಂದಲ್ಪಟ್ಟ ಪರಮಾರ್ಥ ಜ್ಞಾನವುಳ್ಳವನ ಲಕ್ಷಣಗಳು ಯಾವವು ? ಮತ್ತು ಸಮಾಧಿಯಲ್ಲಿರುವವನಾದ (ಅಹಂ ಬ್ರಹ್ಮಾಸ್ಮಿ) ನಾನೇ ಬ್ರಹ್ಮನಾಗಿರುವೆನೆಂಬ ಪರಮಾರ್ಥ ಜ್ಞಾನವುಳ್ಳವನಾಗಿರುವವನು ಜನಗಳಿಂದ ಯಾವ ವಿಧವಾಗಿ ಕರೆಯಲ್ಪಡುವವನು ? ಮತ್ತು ಜ್ಞಾನನಿಷ್ಠೆಯನ್ನು ಹೊಂದಲು ತಕ್ಕ ಸಾಧನದೊಡನೆ ಜ್ಞಾನನಿಷ್ಠನ ಲಕ್ಷಣಗಳನ್ನರಿಯಲಪೇಕ್ಷೆಯಿಂದ ಅರ್ಜುನ

ಪ್ರಶ್ನವಂ ತೋರಿಸಲು " ಸಮಾಧಿಸ್ಥಸ್ಯ " ಎಂದು ಹೇಳಿತು. ಪರಮಾರ್ಥಜ್ಞಾನವುಳ್ಳವನು ಮಾಡುವ ಕಾರ್ಯಗಳನ್ನರಿಯಲು ಅಂತವನು ಯಾವ ಪ್ರಕಾರವಾಗಿ ಮಾತನಾಡುತ್ತಾನೆ ? ಯಾವ ರೀತಿಯಾಗಿ ಕುಳಿತುಕೊಳ್ಳುವನು ? ಯಾವ ವಿಧವಾಗಿ ಪ್ರವರ್ತಿಸುವನು ? ಎಂಬ ಮೂರು ಪ್ರಶ್ನೆಗಳನ್ನರ್ಜುನನು ಮಾಡಿದನೆಂಬದಾಗಿ ತಿಳಿಯಬೇಕೆಂದು ತಾತ್ಪರ್ಯವು. ... ... ॥೫೪॥

(ರಾ॥ ಭಾ॥) ಈ ಪ್ರಕಾರವಾಗಿ ಶ್ರೀಕೃಷ್ಣ ಪರಮಾತ್ಮನುಪದೇಶಿಸಲು ಅದಂಕೇಳಿ ಅರ್ಜುನನು, ಕರ್ಮಯೋಗದಿಂದ ಸಾಧಿಸತಕ್ಕದ್ದಾಗಿಯೂ,ಯೋಗಕ್ಕೆ ಸಾಧನವಾಗಿಯೂ ಇರುವ,ಸ್ಥಿತಪ್ರಜ್ಞತಾ ಎಂಬುವ ಜ್ಞಾನನಿಷ್ಠಾಸ್ವರೂಪವನ್ನು,ಮತ್ತು ಆ ನಿಷ್ಠೆಯುಳ್ಳವನುಮಾಡುವ ಅನುಷ್ಠಾನ ಪ್ರಕಾರವನ್ನು ಪ್ರಶ್ನೆಮಾಡುತ್ತಾನೆ,—ಎಲೈ ಶ್ರೀಕೃಷ್ಣನೇ! ಸ್ಥಿತಪ್ರಜ್ಞನ ಸ್ವರೂಪವು ಹ್ಯಾಗಿರುವುದು ? ಸಮಾಧಿನಿಷ್ಠನಾದ ಅವನು ಮಾತನಾಡುವುದು ಹ್ಯಾಗೆ ? ಅವನ ನಡತೆ ಹ್ಯಾಗಿರುವುದು ? ಯಾವ ವಿಧವಾದ ಆಸನದಲ್ಲಿ ಕುಳಿತಿರುವನು ? ಇದೇ ಮೊದಲಾದವುಗಳಂ ಹೇಳಬೇಕು. ... ॥೫೪॥

ಮೂ॥ ಶ್ರೀಭಗವಾನುವಾಚ ॥ ಪ್ರಜಹಾತಿ ಯದಾಕಾಮಾನ್ ಸರ್ವಾನ್ಪಾರ್ಥ ಮನೋಗತಾನ್ | ಆತ್ಮನ್ಯೇವಾತ್ಮನಾತುಷ್ಟಃ ಸ್ಥಿತಪ್ರಜ್ಞಸ್ತದೋಚ್ಯತೇ ॥೫೫॥

ಶ್ರೀಭಗವಾನುವಾಚ—ಶ್ರೀಕೃಷ್ಣನು ಹೇಳುತ್ತಾನೆ.

ಪ॥ ಪ್ರಜಹಾತಿ- ಯದಾ- ಕಾಮಾನ್- ಸರ್ವಾನ್- ಪಾರ್ಥ- ಮನೋಗತಾನ್ | ಆತ್ಮನಿ- ಏವ- ಆತ್ಮನಾ- ತುಷ್ಟಃ- ಸ್ಥಿತಪ್ರಜ್ಞಃ- ತದಾ- ಉಚ್ಯತೇ ॥ ॥೫೪॥

ಅ॥ ಹೇ ಪಾರ್ಥ- ಎಲೈ ಅರ್ಜುನನೇ ! ಯದಾ- ಯಾವಾಗ, ಮನೋಗತಾನ್- ಮನಸ್ಸಿನಲ್ಲಿರುವ, ಸರ್ವಾನ್ಕಾಮಾನ್- ಸಮಸ್ತವಾದ ಮನೋರಥಗಳನ್ನು, (ಗೀ॥ ವಿ॥ ಸಮಸ್ತವಾದ ಕಾಮಕ್ರೋಧಾದಿಗಳನ್ನು.) ಪ್ರಜಹಾತಿ- ಸಂಪೂರ್ಣವಾಗಿ ಬಿಡುತ್ತಾನೆಯೊ, (ಯದಾ- ಯಾವಾಗ) ಆತ್ಮನಾ- ತನ್ನಿಂದ, (ರಾ॥ ಮನಸ್ಸಿನಿಂದ, ಮ॥ ಗೀ॥ ವಿ॥ ಪರಮಾತ್ಮ ಪ್ರಸಾದದಿಂದ,) ಆತ್ಮನ್ಯೇವ- ಪ್ರತ್ಯಗಾತ್ಮನಾದ ಜೀವನಲ್ಲಿಯೇ, (ಶ್ರೀ॥ ತನ್ನ ಸ್ವರೂಪಾನಂದದಲ್ಲಿಯೇ) ತುಷ್ಟಃ- ಸಂತುಷ್ಟನಾಗುವನೋ, ತದಾ - ಆವಾಗ, ಸ್ಥಿತಪ್ರಜ್ಞಇತಿ- ಸ್ಥಿರವಾದ ಜ್ಞಾನವುಳ್ಳವನೆಂಬುದಾಗಿ, ಉಚ್ಯತೇ-ಹೇಳಲ್ಪಡುವನು. ॥೫೫॥

(ಶಂ॥ ಭಾ॥) ಬ್ರಹ್ಮಚರ್ಯಾವಸ್ಥೆಯು ಮೊದಲು ಕರ್ಮಸನ್ಯಾಸವಂಮಾಡಿ ಜ್ಞಾನ ಯೋಗನಿಷ್ಠನೆಂಬದಾಗಿಯೂ ನಿಷ್ಕಾಮ ಕರ್ಮಯೋಗನಿಷ್ಠನೆಂಬದಾಗಿಯೂ ಇರುವ ಈ ಇಬ್ಬರುಗಳಲ್ಲಿ ಜ್ಞಾನಯೋಗನಿಷ್ಠನಂ ಕುರಿತು, ಈ ಶ್ಲೋಕದ ಮೊದಲು ಅಧ್ಯಾಯ ಸಮಾಪ್ತಿಪರ್ಯಂತವಾಗಿ ಹೇಳುತ್ತಾನೆ.—ಸಮಸ್ತವಾದ ಅಧ್ಯಾತ್ಮ ಶಾಸ್ತ್ರಗಳಲ್ಲಿ, ಕೃತಕೃತ್ಯನಿಗೆ ಎಂತಹ ಲಕ್ಷಣಗಳು ಹೇಳಲ್ಪಟ್ಟಿರುವುದೊ, ಅವುಗಳೇ ಜ್ಞಾನಾಭ್ಯಾಸವಂ ಮಾಡತಕ್ಕವನಿಗೆ ಲಕ್ಷಣಗಳೆಂಬದಾಗಿ ಉಪದೇಶಿಸುತ್ತಾನೆ,— ಎಲೈ ಅರ್ಜುನನೇ ! ಮನಸ್ಸಿನಲ್ಲಿ ಪ್ರವೇಶಿಸಿರುವ ಸಮಸ್ತವಾದ ಇಚ್ಛೆಗಳನ್ನು ಸಂಪೂರ್ಣವಾಗಿ ಬಿಟ್ಟು ಅಂದರೆ ಬಾಹ್ಯಲಾಭಗಳಲ್ಲಿ ಯೆಷ್ಟುಮಾತ್ರವು ಅಪೇಕ್ಷೆಯಿಲ್ಲದೇ ಪರಮಾರ್ಥದರ್ಶನ ರೂಪವಾದ ಅಮೃತರಸಲಾಭದಿಂದ ಇತರ ವಿಷಯಗಳಲ್ಲಿ ಯಾವಾಗಲಾದರೆ ವೈರಾಗ್ಯವಂ ಹೊಂದುವನೊ,ಆವಾಗ ಸ್ಥಿತಪ್ರಜ್ಞನೆಂದರೆ ಆತ್ಮಾನಾತ್ಮ ವಿವೇಕದಿಂದುಂಟಾದ ನಿಶ್ಚಲ ಜ್ಞಾನವುಳ್ಳವನೆಂದು ಹೇಳಲ್ಪಡುವನು. ಅಂದರೆ ದಾರೇಷಣ ಧನೇಷಣ ವಿತ್ತೇಷಣವೆಂಬೀ ಈ ಷಣತ್ರಯಗಳಿಲ್ಲದವನಾಗಿ ಕರ್ಮಸನ್ಯಾಸವಂ ಮಾಡಿ, "ಅಹಂ ಬ್ರಹ್ಮಾಸ್ಮಿ" ಎಂಬುವ ಸದಾನುಭವವುಳ್ಳವನನ್ನು ಸ್ಥಿತ ಪ್ರಜ್ಞನೆಂಬದಾಗಿ ಹೇಳುವುದು.ಇದರಿಂದ ಆತ್ಮನನ್ನು ತಿಳಿಯಲಪೇಕ್ಷೆಯುಳ್ಳವನು ವೈರಾಗ್ಯದಿಂದ ಸಮಸ್ತವಾದ ಈಷಣಗ (ಅಪೇಕ್ಷೆಗ) ಳನ್ನು ಬಿಡುವುದನ್ನೇ ಸ್ವರೂಪವಾಗಿಯುಳ್ಳ ಸನ್ಯಾಸವನ್ನಾಶ್ರಯಿಸಿ ಶ್ರವಣ ಮನನಾದಿಗಳನ್ನು ಆಗಾಗ್ಗೇ ಮಾಡುವುದರಿಂದ ಆತ್ಮಜ್ಞಾನವಂ ಹೊಂದಿ ಆ ಆತ್ಮನಲ್ಲಿಯೇ ವಿಶೇಷವಾದ ಪ್ರೀತಿಯುಳ್ಳವನಾಗಿರುವುದರಿಂದ ವಿಷಯೇಚ್ಛೆಗಳಲ್ಲಾಸಕ್ತಿಯಂ ಬಿಟ್ಟು ಆತ್ಮಜ್ಞಾನಕ್ಕೆ ಫಲವಾದ ಪರಿತುಷ್ಟಿಯನ್ನು ಅಂದರೇ ಪರಮಾನಂದವನ್ನು ಅಲ್ಲಿಯೇ (ಆತ್ಮನಲ್ಲಿಯೇ) ಹೊಂದುವಂತವನು ಸ್ಥಿತಪ್ರಜ್ಞನೆಂದು ಹೇಳಲ್ಪಡುವನೆಂಬದಾಗಿ ತಿಳಿಯಬೇಕು. ... ... ॥೫೫॥

(ರಾ॥ ಭಾ॥) ಈ ಪ್ರಕಾರವಾದ ಅರ್ಜುನನ ವಾಕ್ಯವಂ ಕೇಳಿ, ಶ್ರೀಪರಮಾತ್ಮನು ಸ್ಥಿತಪ್ರಜ್ಞನ ಅಂದರೆ ಜ್ಞಾನನಿಷ್ಠೆಯುಳ್ಳವನ ನಡತೆಗಳಂ ಹೇಳಿದ ಮಾತ್ರದಲ್ಲಿಯೇ ಅವನ ಸ್ವರೂಪವು ಉಕ್ತವಾಗುವು

ಕೊಂದು ಯೋಚಿಸಿ ಮೊದಲು ಜ್ಞಾನನಿಷ್ಠೆಯುಳ್ಳವನ ವೃತ್ತಿಯನ್ನುಪ
ದೇಶಿಸುತ್ತಾನೆ,— ಎಲೈ ಪಾರ್ಥನೇ ! ಆತ್ಮಮಾತ್ರಾವಲಂಬನದಿಂ
ದಲೆ (ಅಂದರೆ ಮನಸ್ಸಿನಿಂದ ಆತ್ಮನನ್ನು ಮಾತ್ರವೇ ಆಶ್ರಯಿಸಿ ಅದ
ರಿಂದಲೇ) ಸಂತೋಷಯುಕ್ತನಾಗಿ ಅದರಿಂದ ಅದಕ್ಕೆ ಹೊರಗಾಗಿರುವ
ಸಕಲವಾದ ಮನೋಗತವಾಗಿರುವ ಕಾಮಗಳನ್ನು ಯಾವಾಗಲಾದ
ರೆ ಸವಾಸನವಾಗಿ ಬಿಡುವನೋ ? ಆವಾಗತಾನೆ ಆವನನ್ನು ಸ್ಥಿತ
ಪ್ರಜ್ಞನೆಂಬದಾಗಿ ಹೇಳುವುದು. ಇದುತಾನೆ ಜ್ಞಾನನಿಷ್ಠೆಯುಳ್ಳವನ
ನಾಲ್ಕನೇ ಅವಸ್ಥೆಯು, ಈ ಅವಸ್ಥೆಯು ವಶೀಕಾರವೆಂಬ ಹೆಸರುಳ್ಳ
ದ್ದಾಗಿರುವುದು. ... ... ॥೫೫॥

ಮೂ॥ ದುಃಖೇಷ್ವನುದ್ವಿಗ್ನಮನಾಸ್ಸುಖೇಷು ವಿಗ
ತಸ್ಪೃಹಃ । ವೀತರಾಗಭಯಕ್ರೋಧಸ್ಸ್ಥಿತಧೀರ್ಮುನಿ
ರುಚ್ಯತೇ ॥ ... ... ॥೫೬॥

ಪ॥ ದುಃಖೇಷು- ಅನುದ್ವಿಗ್ನಮನಾಃ- ಸುಖೇಷು- ವಿಗತಸ್ಪೃಹಃ । ವೀತರಾಗಭಯ
ಕ್ರೋಧಃ- ಸ್ಥಿತಧೀಃ- ಮುನಿಃ- ಉಚ್ಯತೇ ॥ ... ... ॥೫೬॥

ಪ॥ ದುಃಖೇಷು-ದುಃಖಪ್ರಾಪ್ತಿಯಲ್ಲಿ, ಅನುದ್ವಿಗ್ನಮನಾಃ-ವ್ಯಾಕುಲವಾದಮನಸ್ಸಿಲ್ಲ
ದವನಾಗಿ, ಸುಖೇಷು- ಸುಖಪ್ರಾಪ್ತಿಯಲ್ಲಿ, ವಿಗತಸ್ಪೃಹಃ-ಅಪೇಕ್ಷೆಯಿಲ್ಲದವನಾಗಿ, ವೀತ
ರಾಗಭಯಕ್ರೋಧಃ- ರಾಗಭಯ ಕೋಪಗಳಿಲ್ಲದವನಾಗಿರುವ, ಮುನಿಃ- ಸನ್ಯಾಸಿಯು,
(ಅಥವಾ ರಾ॥ ಆತ್ಮಚಿಂತನದಲ್ಲಾಸಕ್ತವಾದ ಮನಸ್ಸುಳ್ಳವನು) ಸ್ಥಿತಧೀಃ- ಸ್ಥಿರವಾದ
ಜ್ಞಾನವುಳ್ಳವನಾಗಿ, ಉಚ್ಯತೆ - ಹೇಳಲ್ಪಡುವನು. ... ॥೫೬॥

(ರಾ॥ ಭಾ॥) ಈ ರೀತಿಯಾಗಿ ಜ್ಞಾನನಿಷ್ಠೆಯ ನಾಲ್ಕನೇ ಅವಸ್ಥೆ
ಯನ್ನು ಹೇಳಿ ಅದಕ್ಕೆ ಪೂರ್ವವಾದ ಏಕೇಂದ್ರಿಯಾವಸ್ಥೆ ಎಂಬುವ
ಮೂರನೇ ಅವಸ್ಥೆಯನ್ನು ಈ ಶ್ಲೋಕದಲ್ಲುಪದೇಶಿಸುತ್ತಾನೆ.

ತನಗೆ ಪ್ರಿಯವಾಗಿರುವದೊಂದು ತಪ್ಪಿಹೋಗುವುದೇ ಮೊದಲಾದ
ದುಃಖಕಾರಣಗಳುಂಟಾದ ಕಾಲದಲ್ಲಿ ದುಃಖಿಸದೇಲೂ ಸುಖಹೇತುಗ
ಳುಂಟಾದರೂ ಅವುಗಳನ್ನಪೇಕ್ಷಿಸದೇಲೂ ತನಗಿಲ್ಲದ ವಸ್ತುವಿನಲ್ಲುಂ
ಟಾಗುವ ಅಪೇಕ್ಷೆಎಂಬುವ ರಾಗವೇನು, ಪ್ರಿಯವಾಗಿರುವುದು ತಪ್ಪಿ
ಹೋಗುವುದಕ್ಕೂ ಅಪ್ರಿಯವಾಗಿರುವುದು ಪ್ರಾಪ್ತವಾಗುವುದಕ್ಕೂ
ಕಾರಣಗಳನ್ನು ಕಾಣುವುದರಿಂದುಂಟಾದ ದುಃಖವೆಂಬುವ ಭಯವೇ

ನು, ಅನ್ಯರಿಗೆ ದುಃಖವನ್ನುಂಟುಮಾಡುವುದಕ್ಕಾಗಿ ತನ್ನ ಮನಸ್ಸಿನಲ್ಲುಂಟಾಗುವ ವಿಕಾರರೂಪವಾದ ಕೋಪವೇನು, ಇವುಗಳಿಲ್ಲದವನಾಗಿ ಆತ್ಮನನ್ನೇ ಚಿಂತಿಸುತಲಿರುವುವನು ಸ್ಥಿತಪ್ರಜ್ಞನೆನ್ನಲ್ಪಡುವನು||೫೬||

(ತಾ|| ಚಂ||) ಈ ಅವಸ್ಥೆಯು ನಾಲ್ಕನೇ ವಶೀಕಾರಾವಸ್ಥೆಯೊಡನೆ ಧರ್ಮುಕಾಮಾದಿಗಳಿಲ್ಲದೇಇರುವುದರಿಂದ ಏಕೀಭೂತವಾಗಿ ಕಾಣಲ್ಪಟ್ಟರೂ ಬೂದಿಯಿಂದ ಮುಚ್ಚಲ್ಪಟ್ಟ ಬೆಂಕಿಯಂತೆ ಸ್ವಲ್ಪಮಟ್ಟಿಗೆ ವಿಷಯವಾಸನಾ ಮಾತ್ರದಅನುವೃತ್ತಿ ಇರುವುದರಿಂದ ನಾಲ್ಕನೇಅವಸ್ಥೆಗಿಂತಲೂ ಏಕೇಂದ್ರಿಯಸಂಜ್ಞಕವಾದ ಈಅವಸ್ಥೆಯು ಭಿನ್ನವಾಗಿರುವುದು. ಈ ವಿಷಯ ವಾಸನಾಮಾತ್ರವು ಕೂಡ ವಶೀಕಾರಾವಸ್ಥೆಯಲ್ಲಿಲ್ಲವಾದುದರಿಂದ ಈ ಅವಸ್ಥೆಗಿಂತಲೂ ಅದುಶ್ರೇಷ್ಠವಾಗಿರುವುದು.||೫೬||

(ಶ್ರೀ) ಈ ಶ್ಲೋಕದಿಂದಲೂ ಇದಕ್ಕೆ ಮುಂದಿನ ಶ್ಲೋಕದಿಂದಲೂ "ಸ್ಥಿತಪ್ರಜ್ಞಸ್ಯಕಾಭಾಷಾ" ಸ್ಥಿರಜ್ಞಾನವುಳ್ಳವನ ಲಕ್ಷಣವು ಯಾವದು ? ಎಂಬ ಪ್ರಶ್ನಕ್ಕೆ ಉತ್ತರವು ಹೇಳಲ್ಪಟ್ಟಿತೆಂದರಿಯಬೇಕು. ... ... ... ||೫೬||

ಮೂ|| ಯಸ್ಸರ್ವತ್ರಾನಭಿಸ್ನೇಹಸ್ತತ್ತತ್ಪ್ರಾಪ್ಯಶು
ಭಾಶುಭಂ | ನಾಭಿನಂದತಿನದ್ವೇಷ್ಟಿ ತಸ್ಯಪ್ರಜ್ಞಾಪ್ರ
ತಿಷ್ಠಿತಾ || ... ... ||೫೭||

ಪ|| ಯಃ- ಸರ್ವತ್ರ- ಅನಭಿಸ್ನೇಹಃ- ತತ್- ತತ್-ಪ್ರಾಪ್ಯ- ಶುಭಾಶುಭಂ| ನ- ಅಭಿನಂದತಿ- ನ- ದ್ವೇಷ್ಟಿ- ತಸ್ಯ- ಪ್ರಜ್ಞಾ- ಪ್ರತಿಷ್ಠಿತಾ || ... ||೫೭||

ಅ|| ಯಃ - ಯಾವನು, ಸರ್ವತ್ರ - ಸಕಲ ವಿಷಯಗಳಲ್ಲಿಯೂ, (ಶಂ|| ದೇಹೇಂದ್ರಿಯ ಪ್ರಾಣಾದಿಗಳಲ್ಲಿ,) (ಶ್ರೀ|| ಪುತ್ರ ಮಿತ್ರ ಕಳತ್ರಾದಿಗಳಲ್ಲಿ) (ರಾ|| ತನಗಿಷ್ಟವಾದ ವಸ್ತುಗಳಲ್ಲಿ,) ಅನಭಿಸ್ನೇಹಃ- ಅಭಿಮಾನವಿಲ್ಲದವನಾಗಿ, (ರಾ|| ಉದಾಸೀನನಾಗಿ) ತತ್ತತ್ ಶುಭಾಶುಭಂ - ಆಯಾ ಇಷ್ಟಾನಿಷ್ಟಗಳನ್ನು, ಪ್ರಾಪ್ಯ - ಹೊಂದಿ, ನಾಭಿನಂದತಿ - ಸಂತೋಷಪಡುವುದಿಲ್ಲವೋ, ನದ್ವೇಷ್ಟಿ - ದ್ವೇಷಿಸುವುದಿಲ್ಲವೋ, ತಸ್ಯ- ಅವನ, ಪ್ರಜ್ಞಾ- ಜ್ಞಾನವು, ಪ್ರತಿಷ್ಠಿತಾ- ಸ್ಥಿರವಾದದ್ದು. ... ||೫೭||

(ರಾ|| ಭಾ||) ಮೂರನೇ ಏಕೇಂದ್ರಿಯಾವಸ್ಥೆಗಿಂತಲೂ ಅನ್ಯವಾಗಿರುವ ಎರಡನೇದಾದ ವ್ಯತಿರೇಕಾವಸ್ಥೆಯನ್ನು ಉಪದೇಶಿಸುತ್ತಾನೆ,— ತನಗೆ ಪ್ರಿಯವಾದದ್ದು ಯಾವದು ಪ್ರಾಪ್ತವಾದರೂ ಅದರಲ್ಲಧಿಕ

ವಾದ ಸ್ನೇಹವನ್ನಿಡದೇ ಶುಭಾಶುಭಗಳು ಪ್ರಾಪ್ತವಾದ ಕಾಲದಲ್ಲಿ ಹ ರ್ಷ-ಶೋಕಗಳಿಲ್ಲದವನು ಯಾವನೋ ಅವನು ಸ್ಥಿತಪ್ರಜ್ಞನೆನ್ನಿಲ್ಪ ಡುವನು. ... ... ... ||೫೭||

(ಶ್ರೀ) ಈ ಶ್ಲೋಕವು ಸುಖದುಃಖಾದಿಗಳಲ್ಲುದಾಸೀನನಾಗಿರುವ ಜ್ಞಾನನಿಷ್ಠನ ವಿಷಯವಾಗಿರುವುದು. ಅದು ಹ್ಯಾಗೆಂದರೇ ! ದುಃಖವು ಪ್ರಾಪ್ತವಾದರೂ ತಾನು ದುಃಖಕ್ಕೆ ಸ್ವಾಧೀನನಾಗದೆ ಈ ದುಃಖದಲ್ಲಿ ನನಗೇನು ಸಂಬಂಧವೆಂಬದಾಗಿಯೂ, ಸುಖವುಂಟಾದರೆ ಅದರಲ್ಲಿ ಸಂ ತೋಷಪಡದೇ ಈ ಪ್ರಾಪಂಚಿಕ ಸುಖವು ಒಂದು ಸುಖವೇ ? ಅದು ನನಿಗೆ ಸಂತೋಷವನ್ನುಂಟು ಮಾಡಲಾರದೆಂಬದಾಗಿಯೂ, ಹೇಳುವು ನು. ಇದು “ಸ್ಥಿತಧೀಃಕಿಂಪ್ರಭಾಷೇತ” ಸ್ಥಿರಜ್ಞಾನವುಳ್ಳವನು ಹ್ಯಾ ಗೆ ಮಾತನಾಡುವುನೆಂಬಪ್ರಶ್ನೆಗೆ ಉತ್ತರವಾಗಿರುವುದು. ||೫೭||

ಮೂ || ಯದಾ ಸಂಹರತೇಚಾಯಂ ಕೂರ್ಮೋಂಗಾ
ನೀವಸರ್ವಶಃ | ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ
ಪ್ರಜ್ಞಾಪ್ರತಿಷ್ಠಿತಾ || ||೫೮||

ಪ|| ಯದಾ- ಸಂಹರತೆ - ಚ - ಅಯಂ - ಕೂರ್ಮಃ- ಅಂಗಾನಿ- ಇವ - ಸರ್ವಶಃ| ಇಂದ್ರಿಯಾಣಿ- ಇಂದ್ರಿಯಾರ್ಥೇಭ್ಯಃ- ತಸ್ಯ- ಪ್ರಜ್ಞಾ- ಪ್ರತಿಷ್ಠಿತಾ || ||೫೮||

ಅ|| ಅಯಂ- ಜ್ಞಾನನಿಷ್ಠೆಯುಳ್ಳ ಈ ಯೋಗಿಯು, (ಶಂ|| ಜ್ಞಾನನಿಷ್ಠೆಯಲ್ಲಿ ಪ್ರ ವರ್ತಿಸುತಲಿರುವ ಸನ್ಯಾಸಿಯಾದವನು,) (ಗೀ|| ವಿ|| ಜ್ಞಾನಿಯು.) ಕೂರ್ಮಃ- ಕೂ ರ್ಮವು, ಅಂಗಾನೀವ- ಅವಯವಗಳಂತೆ, ಸರ್ವಶಃ- ಸಕಲವಾದ, ಇಂದ್ರಿಯಾರ್ಥೇಭ್ಯಃ- ವಿಷಯಗಳವೆಡೆಯಿಂದ, ಇಂದ್ರಿಯಾಣಿ - ಇಂದ್ರಿಯಗಳನ್ನು, ಯದಾ- ಯಾವಾಗ, ಸಂ ಹರತಿ- ಎಳೆದುಕೊಳ್ಳುವನೊ, (ತದಾ - ಆವಾಗ,) ತಸ್ಯ - ಅಂತವನ, ಪ್ರಜ್ಞಾ - ಜ್ಞಾ ನವು, ಪ್ರತಿಷ್ಠಿತಾ- ಸ್ಥಿರವಾದದ್ದು. ||೫೮||

(ಶಂ|| ಭಾ||) ಕೂರ್ಮವು ಅಥವಾ ತಾಬೇಲು ಅಥವಾ ಆಮೆಯುಭಯು ದಿಂದ ತನ್ನ ತಲೆಯನ್ನು ಮತ್ತು ಕೈಕಾಲುಗಳನ್ನು ಹ್ಯಾಗೆ ಪರೆಒಳಗೆ ಸೇ ರಿಸಿಕೊಳ್ಳುವುದೊ ಆ ರೀತಿಯಾಗಿ ಜ್ಞಾನನಿಷ್ಠನು ವಿಷಯವರ್ಗಗ ಳಲ್ಲಿ ಭಯವುಳ್ಳವನಾಗಿ ಇಂದ್ರಿಯಗಳನ್ನು ವಿಷಯಗಳಲ್ಲಿ ಪ್ರವರ್ತಿಸ ದಂತೆ ಯಾವಾಗಲಾದರೆ ಮಾಡುವುನೋ ಆವಾಗ ಅವನ ಜ್ಞಾನವು ಸ್ಥಿರ ವಾಗಿರುವುದೆಂದು ಹೇಳಲ್ಪಡುವುದು. ... ||೫೮||

(ರಾ॥ ಭಾ॥) ಈ ಅವಸ್ಥೆಗಿಂತಲೂ ಮೊದಲನೇದಾದ ಯತಮಾನಸಂಜ್ಞಾವಸ್ಥೆಯನ್ನುಪದೇಶಿಸುತ್ತಾನೆ,—ಇಂದ್ರಿಯಗಳು ವಿಷಯಗಳನ್ನು ಹುಡುಕಿಕೊಂಡು ಹೋಗುವ ಕಾಲದಲ್ಲಿ ಅವುಗಳಲ್ಲಿ ಹೋಗದಂತೆ,ಕೂರ್ಮವು ತನ್ನ ಅವಯವಗಳನ್ನು ಒಳಗೆಉಪಸಂಹಾರಮಾಡಿಕೊಳ್ಳುವರೀತಿಯಾಗಿನಿರೋಧಿಸಿಮನಸ್ಸನ್ನು ಆತ್ಮನಲ್ಲಿ ಯಾವನು ಸ್ಥಿರವಾಗಿ ಸ್ಥಾಪಿಸುವನೂ ಅಂತವನು ಸ್ಥಿತಪ್ರಜ್ಞನೆನ್ನಲ್ಪಡುವನು. ಈ ನಾಲ್ಕವಸ್ಥೆಗಳು ಒಂದಕೊಂದು ಕಾರ್ಯಕಾರಣಗಳಾಗಿರುವವು. ಅಂದರೆ ಯತಮಾನಾವಸ್ಥೆಯಿಂದ ವ್ಯತಿರೇಕಾವಸ್ಥೆಯು,ಅದರಿಂದ ಏಕೇಂದ್ರಿಯಾವಸ್ಥೆಯು, ಅದರಿಂದ ವಶೀಕಾರಾವಸ್ಥೆಯು, ಪ್ರಾಪ್ತವಾಗುವುದೆಂದು ತಿಳಿಯಬೇಕು. ॥೫೮॥

(ಶ್ರೀ)ಆಮೆಯು ತನ್ನ ತಲೆ ಕೈಕಾಲು ಮೊದಲಾದ ಅವಯವಗಳನ್ನು ಒಳಗೆ ಎಳದುಕೊಳ್ಳುವುದಕ್ಕೆ ಹ್ಯಾಗಾದರೇ ಆಯಾಸ ಪಡುವುದಿಲ್ಲವೋ ಆ ಪ್ರಕಾರವೇ ಸ್ಥಿರಜ್ಞಾನವುಳ್ಳವನು ವಿಷಯಗಳಲ್ಲಿ ಪ್ರವರ್ತಿಸಿರುವ ಇಂದ್ರಿಯಗಳನ್ನು ಪ್ರಯಾಸವಿಲ್ಲದೇ ಸ್ವಾಧೀನಪಡಿಸಿಕೊಳ್ಳುವನೆಂಬುವುದಕ್ಕೆ ಆಮೆಯನ್ನು ದೃಷ್ಟಾಂತವಾಗಿ ಹೇಳಿತು. ॥೫೮॥

ಮೂ ॥ ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ । ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ॥ ... ... ॥೫೯॥

ಪ॥ ವಿಷಯಾಃ – ವಿನಿವರ್ತಂತೇ – ನಿರಾಹಾರಸ್ಯ– ದೇಹಿನಃ । ರಸವರ್ಜಂ – ರಸಃ– ಅಪಿ– ಅಸ್ಯ– ಪರಂ– ದೃಷ್ಟ್ವಾ– ನಿವರ್ತತೇ ॥ ... ॥೫೯॥

ಅ ॥ ನಿರಾಹಾರಸ್ಯ– ಇಂದ್ರಿಯಗಳಿಗೆ ವಿಷಯಗಳೆಂಬ ಆಹಾರಗಳಂ ತೆಗದುಕೊಳ್ಳದೇ ಇರುವ, ದೇಹಿನಃ – ಪ್ರಾಣಿಯಾದವನಿಗೆ, ರಸವರ್ಜಂ– ಇಷ್ಟಾಪೇಕ್ಷೆಯಂಬಿಟ್ಟು, ವಿಷಯಾಃ– ವಿಷಯಾನುಭವಗಳು, (ಶಂ॥ ಇಂದ್ರಿಯಗಳು)ವಿನಿವರ್ತಂತೇ – ನಿವೃತ್ತವಾಗುವವು. ಅಸ್ಯ – ಇಂತವನಿಗೆ, ರಸೋಽಪಿ – ವಿಷಯಾಪೇಕ್ಷೆಯೂ, ಪರಂ – ತನಗಿಂತಲೂ ಅನ್ಯನಾದ ಅಥವಾ ಶ್ರೇಷ್ಠನಾದ ಪರಮಾತ್ಮನನ್ನು, (ಶಂ॥ ತನ್ನನ್ನೇ ಪರಮಾತ್ಮನಂತೆ. ರಾ॥ ವಿಷಯವರ್ಗಕ್ಕಿಂತಲೂ ಅನ್ಯವಾಗಿಯೂ ಸುಖಸ್ವರೂಪವಾಗಿಯೂ ಇರುವ ಆತ್ಮಸ್ವರೂಪವನ್ನು,) ದೃಷ್ಟ್ವಾ– ನೋಡಿ, (ಶಂ॥ ದೃಷ್ಟ್ವಾ– ತಿಳಿದು,) ನಿವರ್ತತೇ– ನಿವೃತ್ತವಾಗುವುದು. ... ... ॥೫೯॥

(ಶಂ॥ ಭಾ॥) ಆದರೂ ಆಮೆಯು ತನ್ನ ಅವಯವಗಳನ್ನು ಒಳಗೆ

ತಿಳಿದುಕೊಳ್ಳುವರೀತಿಯಾಗಿ ಇಂದ್ರಿಯಗಳನ್ನು ವಿಷಯಗಳಲ್ಲಿ ಹೋಗ
ದಂತೆ ಮಾಡಬೇಕೆಂಬದಾಗಿಯೂ ಆರೀತಿಯಾಗಿ ಮಾಡುವಂತವನಿಗೆ ಜ್ಞಾ
ನವು ಸ್ಥಿರವಾಗಿರುವುದೆಂಬದಾಗಿಯೂ “ ಯದಾಸಂಹರತೇಚಾಯಂ ”
ಎಂಬುವ ಶ್ಲೋಕದಲ್ಲಿ ಹೇಳಿರುವುದು ಉಚಿತವಾಗಿ ತೋರಲಿಲ್ಲವು.
ಲೋಕದಲ್ಲಿ ಇಂದ್ರಿಯಗಳಿಂದ ವಿಷಯಗಳನ್ನು ಅನುಭವಿಸದವನಿಗೂ
ರೋಗಾದಿಗಳಿಂದ ಬಾಧೆಪಡುತಲಿರುವುವನಿಗೂ ಸಮವಾಗಿ ಇಂದ್ರಿಯ
ಗಳು ವಿಷಯಗಳಲ್ಲಿ ಪ್ರವರ್ತಿಸುವುದಿಲ್ಲವೆನ್ನುವುದಂ ಕಂಡಿರುವೆವು. ಈರೀ
ತಿಯಾಗಿ ಇಂದ್ರಿಯಗಳು ವಿಷಯಾಭಿಮುಖ್ಯವಂ ಹೊಂದದಿದ್ದರೂ ಅದ
ನ್ನನುಭವಿಸಬೇಕೆಂಬ ಅಪೇಕ್ಷಾಮಾತ್ರವಿಲ್ಲದೇ ಹೋಗಲಾರದು. ಅಂತ
ಹ ವಿಷಯಾಪೇಕ್ಷೆಯು ಹೋಗದಿದ್ದರೆ ಪ್ರಜ್ಞಾಯೆಂಬುವುದು ಹ್ಯಾಗೆ
ಲಭಿಸುವುದು? ಮತ್ತು ಜ್ಞಾನಕ್ಕೆ ವಿಷಯಾಪೇಕ್ಷೆಯು ವಿರೋಧಿಯಾಗಿ
ರುವುದರಿಂದ ವಿರೋಧಿಯಾದ ವಿಷಯಾಪೇಕ್ಷೆಯಿರುವವರಿಗೂ ಜ್ಞಾನ
ಸಿದ್ಧಿಯಾಗುವದಿಲ್ಲವು. ಆದುದರಿಂದ ಅಂತಹ ವಿಷಯಾಪೇಕ್ಷೆಯು
ಹೋಗುವದಕ್ಕೂ ಜ್ಞಾನ ಸ್ಥೈರ್ಯಕ್ಕೂ ತಕ್ಕ ಸಾಧನವನ್ನು ಹೇಳಬೇ
ಕೆಂಬ ಅರ್ಜುನನ ಪ್ರಶ್ನೆಯನ್ನು ತಾನಾಗಿಯೆ ಚಿಂತಿಸಿ ಶ್ರೀ ಪರಮಾ
ತ್ಮನು ಅದಕ್ಕುತ್ತರವನ್ನೀಶ್ಲೋಕದಿಂದ ಹೇಳುತ್ತಾನೆ,—ಲೋಕದಲ್ಲಿ
ಯಾವನಾದರೆ ವಿಷಯಪ್ರವಣನಾಗದೇ ಇರುವುದರಿಂದ ನಿರಾಹಾರನಾ
ಗಿರುವುನೊ ಅಂತವನಿಗೂ, ಅತ್ಯಂತ ಕಷ್ಟವಾದ ತಪಸ್ಸನ್ನು ಮಾ
ಡುವ ವಿದ್ಯಾವಿಹೀನನಾದ ದೇಹಿಯಾಗಿರುವ ಮೂರ್ಖನಿಗೂ ಇಂದ್ರಿ
ಯಗಳು ಶಬ್ದಾದಿ ವಿಷಯಗಳಲ್ಲಿ ಪ್ರವೃತ್ತಿಸದೇ ಹೋದರೂ ವಿಷ
ಯಗಳನ್ನನುಭವಿಸಬೆಕೆಂಬ ಅಪೇಕ್ಷಾಮಾತ್ರವು ಹೋಗುವದಿಲ್ಲವು.
ಅಂತಹ ಅಪೆಕ್ಷೆಯು “ ಅಹಂಬ್ರಹ್ಮಾಸ್ಮಿ ” ಎಂಬುವ ಆತ್ಮಸಾಕ್ಷಾ
ತ್ಕಾರ ಜ್ಞಾನದಿಂದ ಹೋಗುವುದು. ಈ ಶ್ಲೋಕದಲ್ಲಿರುವ ರಸ ಶಬ್ದ
ಕ್ಕೆ ಉಪ್ಪು ಮೊದಲಾದ ಷಡ್ರಸಗಳು ಅರ್ಥವಲ್ಲವು. ಮತ್ತೇನಂ
ದರೇ “ ಸ್ವರಸೇನಪ್ರವೃತ್ತೋರಸಿ ಕೋರಸಜ್ಞಾಃ ” ಎಂಬಿದೆ ಮೊದ
ಲಾದ ಪ್ರಯೋಗಬಲದಿಂದ ರಸ ಶಬ್ದಕ್ಕೆ ಅಪೇಕ್ಷೆಯಲ್ಲಿ ಅರ್ಥಸ್ವೀಕಾ
ರವಂ ಮಾಡಬೇಕು. ಮತ್ತು ಒಂದು ಕಾಲದಲ್ಲಿ ಇಂದ್ರಿಯಗಳನ್ನು
ವಿಷಯಗಳಲ್ಲಿ ಪ್ರವರ್ತಿಸದಂತೆ ಮಾಡುವುವನಿಗೆ ವಿಷಯಗಳನ್ನನುಭ

ವಿಸಲು ಅಪೇಕ್ಷೆ ಯಿಲ್ಲದಿದ್ದರೂ ಅದು ಸ್ಥಿರವಾಗಿರಲಾರದು. ಅಂತಹ ವಿಷಯಾಪೇಕ್ಷೆಯನ್ನು ಅತ್ಯಂತವಾಗಿ ನಿವೃತ್ತಿಮಾಡಿಕೊಳ್ಳುವುದಕ್ಕೆ ಸದ್ಗುರೂಪದೇಶಾದಿಗಳಿಂದ " ಅಹಂಬ್ರಹ್ಮಾಸ್ಮಿ " ಎಂಬುವ ದೃಢ ಜ್ಞಾನವು ಸಾಧನವಾಗಿರುವುದೆಂದರಿಯಬೇಕು. ಆದರೂ ಸ್ಥಿರವಾದ ಆತ್ಮಜ್ಞಾನ ವುಂಟಾಗದಿದ್ದರೆ ವಿಷಯಾಪೇಕ್ಷೆಯು ನಿವರ್ತಿಸುವುದಿಲ್ಲ ವಾದುದರಿಂದಲೂ, ವಿಷಯಾಪೇಕ್ಷೆಯು ಹೋದದ್ದಲ್ಲದೆ ಸ್ಥಿರವಾದ ಆತ್ಮಜ್ಞಾನ ವುಂಟಾಗುವುದಿಲ್ಲವಾದುದರಿಂದಲೂ, ಅನ್ಯೋನ್ಯಾಶ್ರಯ ವೆಂಬ ದೋಷವು ಪ್ರಾಪ್ತವಾಗುವದೆಂದೆಣಿಸದೆ ವಿವೇಕದಿಂದ ಇಂದ್ರಿಯಗಳನ್ನು ವಿಷಯಗಳ ಮೇಲೆ ಅಧಿಕವಾದ ಅಪೇಕ್ಷೆಯಿಂದ ಹೋಗದಂತೆ ಮಾಡಿದರೆ ಸ್ಥೂಲವಾದ ವಿಷಯಾಪೇಕ್ಷೆಯು ಹೋಗುವುದೆಂತಲೂ ಅದರಿಂದಸ್ಥಿರವಾದ ಆತ್ಮಜ್ಞಾನ ವುಂಟಾಗುವದೆಂತಲೂ ಅಂತಹ ಆತ್ಮಜ್ಞಾನದಿಂದ ಸೂಕ್ಷ್ಮವಾಗಿ ಅನುವರ್ತಿಸಿ ಬರುವ ವಿಷಯಾಭಿಲಾಷೆಯು ಕ್ರಮಕ್ರಮವಾಗಿ ಹೋಗುವುದರಿಂದ ಅನ್ಯೋನ್ಯಾಶ್ರಯ ದೋಷವುಂಟಾಗುವುದಕ್ಕೆ ಅವಕಾಶವಿಲ್ಲವೆಂತಲೇ ತಿಳಿಯಬೇಕು. ಆದುದರಿಂದ ಆತ್ಮಸ್ವರೂಪ ಸಾಕ್ಷಾತ್ಕಾರಯೋಗ್ಯವಾದ ಸ್ಥಿರ ಜ್ಞಾನವಂ ಸಂಪಾದಿಸಬೇಕೆಂದು ಹೇಳಿತೆಂದಭಿಪ್ರಾಯವು. ॥ ೫೯ ॥

(ರಾ॥ ಭಾ॥) ಈಗ ಜ್ಞಾನನಿಷ್ಠೆಯನ್ನು ಹೊಂದುವುದು ದುರ್ಲಭ ವೆಂಬದಾಗಿಯೂ ಅದು ಹೊಂದುವುದಕ್ಕೆ ತಕ್ಕ ಉಪಾಯವನ್ನೂ ಹೇಳುತ್ತಾನೆ,— ಇಂದ್ರಿಯಗಳಿಗೆ ಆಹಾರಗಳು ಶಬ್ದ ಸ್ಪರ್ಶ ರೂಪ ರಸ ಗಂಧಗಳೆಂಬ ವಿಷಯಗಳು, ಅಂತಹ ಆಹಾರಗಳನ್ನವುಗಳಿಗೆ ಹಾಕದೇ ಯಾವನು ಇಂದ್ರಿಯಗಳನ್ನು ನಿರಾಹಾರಗಳನ್ನಾಗಿ ಮಾಡುವನೊ ಅವನನ್ನು ಶಬ್ದಾದಿವಿಷಯಗಳು ಹೊಂದಲಾರವು, ಆದರೆ ವಿಷಯಗಳಲ್ಲಾಸಕ್ತಿಮಾತ್ರ ಇವನಿಗಿರುವುದು. ಆ ಆಸಕ್ತಿ ವಿಶೇಷವು ಕೂಡ ವಿಷಯಗಳಿಗಿಂತಲೂ ಶ್ರೇಷ್ಠನಾಗಿರುವ ನಿರತಿಶಯ ಸುಖ ರೂಪನಾದ ನನ್ನನ್ನು ಸಾಕ್ಷಾತ್ಕರಿಸಿದರೆ ನಿವೃತ್ತವಾಗುವುದು. ॥೫೯॥

(ಗೀ॥ ವಿ॥) ಆದರೂ ಅಂತಹ ಜ್ಞಾನವನ್ನೆಲ್ಲರು ಸಂಪಾದಿಸದೆ ಯಾತಕ್ಕೋಸ್ಕರವಾಗಿ ಉದಾಸೀನರಾಗಿರುತ್ತಾರೇದರೆ ಜ್ಞಾನ ಸಂಪಾದನವು ಅತಿಕಷ್ಟಸಾಧ್ಯವೆಂಬದಾಗಿ ಹೇಳಲು ಅಂತಹಜ್ಞಾನವು ಇಂದ್ರಿಯ

ಜಯದಿಂದುಂಟಾಗುವ್ರದೆಂಬದಾಗಿಯೂ, ಅಂತಹ ಇಂದ್ರಿಯ ಜಯವು ಮಹಾ ಪ್ರಯತ್ನಸಾಧ್ಯವೆಂಬದಾಗಿಯೂ ಈ ಮೂರು ಶ್ಲೋಕಗಳಿಂದ ಹೇಳುತ್ತಾನೆ,— ಈ ಶ್ಲೋಕದಲ್ಲಿ ಇಂದ್ರಿಯ ಜಯಪ್ರಕಾರವು ಹೇಳಲ್ಪಡುವುದು. ನಿರಾಹಾರಸ್ಯ- ಆಹಾರಶೂನ್ಯನಾದ, ದೇಹಿನಃ - ದೇಹವೃತ್ತಿ ಪ್ರಾಣಿಗೆ, ವಿಷಯಾಃ - ರೂಪಾದಿವಿಷಯಗಳು, (ಅಥವಾ) ವಿಷಯಭೋಗಕ್ಕೆ ಸಾಧನವಾಗಿರುವ ಇಂದ್ರಿಯಗಳು, ರಸವರ್ಜಂ- ವಿಷಯಭೋಗಾಪೇಕ್ಷೆಯನ್ನು ಮಾತ್ರ ಬಿಟ್ಟು, ವಿನಿವರ್ತಂತೇ-ನಿವೃತ್ತವಾಗುತ್ತವೆ. ನಿರಾಹಾರತ್ವ ರೂಪವಾದ ಕಾರಣದಿಂದ ಇಂದ್ರಿಗಳಿಗೆ ವಿಷಯಭೋಗ ಸಾಮರ್ಥ್ಯ ಮಾತ್ರಕ್ಕೆ ಲೋಪಬರುವುದಲ್ಲದೇ ಅದರ ಅಪೇಕ್ಷೆಯೂ ಕೂಡ ನಿವೃತ್ತಿಯಾಗುವುದಿಲ್ಲವೆಂದರ್ಥವು. ಇಂದ್ರಿಯಗಳಿಗೆ ವಿಷಯಭೋಗ ಸಾಮರ್ಥ್ಯಮಾತ್ರ ತಪ್ಪಿ ವಿಷಯಾಪೇಕ್ಷಾನುವೃತ್ತಿಯುಂಟಾದರೂ ಪ್ರಯೋಜನವಿಲ್ಲವಾದುದರಿಂದ ಆ ಅಪೇಕ್ಷಾನಿವೃತ್ತಿ ಪ್ರಕಾರವನ್ನು ಹೇಳುತ್ತಾನೆ,— ಅಸ್ಯ - ಈ ದೇಹವೃತ್ತಿವನ, ರಸೋಽಪಿ - ವಿಷಯರಾಭಿಲಾಷೆಯು, ಪರಂ- ಪರಮಾತ್ಮನನ್ನು, ದೃಷ್ಟ್ವಾ - ನೋಡಿ, ನಿವರ್ತತೇ - ನಿವೃತ್ತವಾಗುತದೆ. (ಅಥವಾ) ಆಹಾರವಿಲ್ಲದವನಿಗೆ ರೂಪಶಬ್ದ ಸ್ಪರ್ಶಗಂಧಗಳೆಂಬ ವಿಷಯಗಳು ನಿವೃತ್ತವಾದರೂ ರಸರೂಪವಾದ ವಿಷಯವು ನಿವೃತ್ತವಾಗುವುದಿಲ್ಲವು. ಇಲ್ಲಿಯೂ ವಿಷಯಶಬ್ದಕ್ಕೆ ಇಂದ್ರಿಯಗಳಿಗೆ ಭೋಗಸಾಮರ್ಥ್ಯವು ನಿವೃತ್ತವಾಗುವುದೆಂತಲೇ ಅರ್ಥವು. ಕಣ್ಣು ಮೊದಲಾದ ಇಂದ್ರಿಯಗಳಿಗೆ ರೂಪಾದಿ ವಿಷಯಗಳನ್ನು ಗ್ರಹಿಸುವ ಶಕ್ತಿಯೂ ಮನಸ್ಸಿಗೆ ಅದರ ಅಪೇಕ್ಷೆಯೂ ನಿವೃತ್ತವಾದರೂ ರಸರೂಪವಾದ ವಿಷಯಾನುಭವಶಕ್ತಿಯು ಮತ್ತೂ ಅದರ ಅಪೇಕ್ಷೆಯೂ ಅನುಸರಿಸಿಯೇ ಬರುವುದು. ಇವು ನಿರಾಹಾರತ್ವರೂಪಕಾರಣದಿಂದ ನಿವೃತ್ತವಾಗುವುದಿಲ್ಲವೆಂದು ತಾತ್ಪರ್ಯವು. ವಿಷಯಾನುಭವಶಕ್ತಿಯು ಮತ್ತೂ ಅದರ ಮಾನಸಾಪೇಕ್ಷೆಯೂ ಯಾವಾಗ ನಿವೃತ್ತವಾಗುವುದೆಂದರೆ ಪರಮಾತ್ಮನಂ ಕಂಡರೆ ನಿವೃತ್ತವಾಗುವುದೆಂದು ತಿಳಿಯಬೇಕು. ಇಲ್ಲಿ ಯಾವಾಗಲಾದರೆ ಬಾಹ್ಯೇಂದ್ರಿಯಗಳಿಗೆ ವಿಷಯಗಳ ಸಂಬಂಧವುಂಟಾಗುವದೊ ಆ ಕಾಲದಲ್ಲಿ ಮನಸ್ಸು ವಿಷಯದಲ್ಲಿ ಪ್ರವೃತ್ತಿಸುತದೆ. ಅನಂತರದಲ್ಲಿ ವಿಷಯಾ

ಪೇಕ್ಷೆಯು, ತರುವಾಯ ಜೀವನಿಗೆ ಅದರಲ್ಲಿ ಪ್ರಯತ್ನವುಂಟಾಗುವುದು. ಇದು ಇಂದ್ರಿಯಗಳ ಜಯವಲ್ಲವೆಂಬದಾಗಿ ಹೇಳಲ್ಪಡುವುದು. ಯಾವಾಗಲಾದರೆ ಇಂದ್ರಿಯಗಳಿಗೆ ವಿಷಯ ಸಂಬಂಧವಾಗುವುದಿಲ್ಲವೋ, ಸಂಬಂಧವಿದ್ದರೂ ಮನಸ್ಸು ವಿಷಯಗಳಲ್ಲಿ ಪ್ರವೃತ್ತವಾಗುವುದಿಲ್ಲವೊ, ಪ್ರವೃತ್ತವಾದರೂ ವಿಷಯಾಪೇಕ್ಷೆಯುಂಟಾಗುವುದಿಲ್ಲವೋ ಆ ಸಮಯದಲ್ಲಿ ಜೀವನಿಗೆ ಮನಃಕ್ಷೋಭವುಂಟಾಗುವುದಿಲ್ಲವು. ಇದೇ ಇಂದ್ರಿಯ ಜಯವೆಂಬದಾಗಿ ಹೇಳಲ್ಪಡುವುದು. ಈ ಇಂದ್ರಿಯ ಜಯವು ಬಾಹ್ಯೇಂದ್ರಿಯಗಳಿಗೆ ಶಕ್ತಿಕ್ಷಯದಿಂದಲೂ ಮನಸ್ಸಿನಲ್ಲಿ ರಾಗ (ಅಂದರೆ ಅಪೇಕ್ಷಾ) ಕ್ಷಯದಿಂದಲೂ ಉಂಟಾಗುವುದೆಂದು ಯೆರಡು ಪ್ರಕಾರವಾಗಿ ಹೇಳಲ್ಪಡುವುದು. ಈ ಯೆರಡೂನೂ ಮೇಲೆ ಹೇಳಿರುವ ನಿರಾಹಾರತ್ವವೇನು, ಬ್ರಹ್ಮಸಾಕ್ಷಾತ್ಕಾರವೇನು, ಇವುಗಳಿಂದ ಸಾಧಿಸತಕ್ಕದ್ದಾದುದರಿಂದ ಇಂದ್ರಿಯ ಜಯವು ಮಹಾಪ್ರಯತ್ನ ಸಾಧ್ಯವೆಂದರಿಯಬೇಕು. ... ||೫೯||

(ಶ್ರೀ) ಇಂದ್ರಿಯಗಳು ಬಾಹ್ಯ ವಿಷಯಗಳೆಂಬ ವಸ್ತುಗಳನ್ನೇ ಯಾವಾಗಲೂ ನೋಡಿಕೊಂಡಿರುವುದರಿಂದ ಇಂದ್ರಿಯಗಳಿಗೆ ವಿಷಯಗಳಾಕಾರಗಳಾಗಿರುವುವು. ಆದುದರಿಂದ ಮೊದಲು ಇಂದ್ರಿಯ ನಿಗ್ರಹವಂ ಮಾಡಬೇಕು. ಇಂದ್ರಿಯ ನಿಗ್ರಹವಂ ಮಾಡಿದರೂ ಅಪೇಕ್ಷಾಯುಕ್ತವಾದ ಮನಸ್ಸಡಗುವುದಿಲ್ಲವು. ಪರಮಾತ್ಮ ಸಾಕ್ಷಾತ್ಕಾರದಿಂದ ಅಂತಹ ಇಚ್ಛೆಯೂ ನಿವೃತ್ತಿಸಬಹುದು. (ಅಥವಾ) ಅಹಾರವಿಲ್ಲದೇ ಇರುವುವನಿಗೆ ಕ್ಷುತ್ಪಿಪಾಸಾದಿಗಳಿಂದ ಶ್ರಮ ಪಟ್ಟುಕೊಂಡಿರುವಲ್ಲಿ ದೇಹದಾರ್ಢ್ಯವು ಕ್ಷೀಣವಾಗಿ ಆಯಾಸದಿಂದ ಇಂದ್ರಿಯಗಳು ವಿಷಯಗಳಲ್ಲಿ ಪ್ರವರ್ತಿಸದಿದ್ದರೂ ಮನೋಗತವಾದ ಇಚ್ಛಾಮಾತ್ರಕ್ಕೆ ನಿವೃತ್ತಿಯಿಲ್ಲವು. ಇಂತಹ ಇಚ್ಛಾನಿವೃತ್ತಿಯಾಗದ ಮನಸ್ಸು ಆತ್ಮಸಾಕ್ಷಾತ್ಕಾರಕ್ಕೆ ಯೋಗ್ಯವಾಗುವುದಿಲ್ಲವು. ಜ್ಞಾನಿಯಾದವನು ಇಂದ್ರಿಯಗಳನ್ನು ತಾನಾಗಿಯೇ ಅಡಗಿಸಿ ಪರಮಾತ್ಮನಲ್ಲಿ ಮನಸ್ಸನ್ನಿರಿಸುವುದರಿಂದ ವಿಷಯಗಳಲ್ಲಿ ಇಚ್ಛಾರಹಿತವಾದ ಇಂತಹ ಮನಸ್ಸು ಆತ್ಮದರ್ಶನ ಯೋಗ್ಯವಾಗುವುದೆಂದರಿಯಬೇಕು. ||೫೯||

**ಮೂ॥ ಯತತೋಹ್ಯಪಿ ಕೌಂತೇಯ ಪುರುಷಸ್ಯ ವಿಪಶ್ಚಿತಃ । ಇಂದ್ರಿಯಾಣಿ ಪ್ರಮಾಥೀನಿ ಹರಂತಿ ಪ್ರಸಭಂಮನಃ ॥ ॥೬೦॥**

ಪ॥ ಯತತಃ- ಹಿ- ಅಪಿ- ಕೌಂತೇಯ- ಪುರುಷಸ್ಯ- ವಿಪಶ್ಚಿತಃ । ಇಂದ್ರಿಯಾಣಿ- ಪ್ರಮಾಥೀನಿ- ಹರಂತಿ- ಪ್ರಸಭಂ- ಮನಃ ॥ ॥೬೦॥

ಅ॥ ಹೇಕೌಂತೇಯ- ಎಲೈ ಕುಂತೀಕುಮಾರನಾದ ಅರ್ಜುನನೇ! ಯತತಃ- ಮೋಕ್ಷಾರ್ಥವಾಗಿ ಪ್ರಯತ್ನಿಸುತಲಿರುವ, ವಿಪಶ್ಚಿತಃ- ವಿವೇಕಿಯಾದ, ಪುರುಷಸ್ಯ- ಪುರುಷನ, ಮನೋಽಪಿ- ಮನಸ್ಸನ್ನುಕೂಡ, ಪ್ರಮಾಥೀನಿ- ವ್ಯಾಕುಲವಾಗಿ ಮಾಡುವ, ಇಂದ್ರಿಯಾಣಿ- ಇಂದ್ರಿಯಗಳು, ಪ್ರಸಭಂ- ಬಲಾತ್ಕಾರವಾಗಿ, ಹರಂತಿ-ಅಪಹರಿಸುವುವಲ್ಲವೆ॥೬೦॥

(ರಾ॥ ಭಾ॥) ಆತ್ಮದರ್ಶನವುಂಟಾಗದಿದ್ದರೇ ವಿಷಯರಾಗವು ನಿವೃತ್ತವಾಗಲಾರದು. ವಿಷಯಾನುರಾಗವು ನಿವೃತ್ತವಾಗದೆ ಆತ್ಮದರ್ಶನಕ್ಕೆ ಪ್ರಯತ್ನಿಸಿದರೆ ಅವನು ಬಹು ವಿದ್ವಾಂಸನಾಗಿದ್ದರೂ ಕೂಡ ಇಂದ್ರಿಯಗಳು ಬಲಿಷ್ಠಗಳಾಗಿರುವುದರಿಂದ ಅವನ ಮನಸ್ಸನ್ನು ಬಲಾತ್ಕಾರವಾಗಿ ಅಪಹರಿಸುವುವು. ಈರೀತಿಯಾಗಿ ಇಂದ್ರಿಯಜಯವು ಆತ್ಮದರ್ಶನದಿಂ ದುಂಟಾಗುವುದಾಗಿಯೂ,ಆತ್ಮದರ್ಶನವು ಇಂದ್ರಿಯಜಯದಿಂದುಂಟಾಗತಕ್ಕದ್ದಾಗಿಯೂ ಇರುವುದರಿಂದ ಜ್ಞಾನನಿಷ್ಠಾಪ್ರಾಪ್ತಿಯು ದುರ್ಲಭವಾಗಿರುವುದು. ॥೬೦॥

(ಗೀ॥ ವಿ॥) "ವಿಷಯಾವಿನಿವರ್ತಂತೇ" ಎಂಬುವ ಶ್ಲೋಕದಲ್ಲಿ ಇಂದ್ರಿಯ ನಿಗ್ರಹಪುರಸ್ಕರವಾಗಿ ನಿರಾಹಾರತ್ವರೂಪವಾದ ಮಹಾ ಪ್ರಯತ್ನವಂ ಮಾಡಬೇಕೆಂಬದಾಗಿಯೂ, ವಿಷಯಾಭಿಲಾಷೆಯು ನಿವೃತ್ತವಾಗಬೇಕಾದರೆ ಬ್ರಹ್ಮಾ ಪರೋಕ್ಷಜ್ಞಾನವು ಅವಶ್ಯಕವೆಂಬದಾಗಿಯೂ ಹೇಳಿತು. ಈ ಶ್ಲೋಕದಲ್ಲಿ ವಿಷಯಗಳಲ್ಲಿ ಪ್ರವೃತ್ತಿಸಿರುವ ಮನಸ್ಸನ್ನು ಅವುಗಳಿಂದ ನಿವೃತ್ತಿಸುವುದೆಂಬ ಪ್ರತ್ಯಾಹಾರಾದಿಗಳಿಂದಲೂ ಇಂದ್ರಿಯ ಜಯವು ಸಿದ್ಧಿಸುವುದರಿಂದ ನಿರಾಹಾರತ್ವ ರೂಪವಾದ ಪ್ರಯತ್ನದಿಂದ ಪ್ರಯೋಜನವಿಲ್ಲವು, ಮತ್ತು ನಿತ್ಯಾನಿತ್ಯ ವಸ್ತುವಿವೇಕವಿಂದಲೂ ವಿಷಯಾಭಿಲಾಷೆಯು ನಿವೃತ್ತಿಸ ಬಹುದಾದುದರಿಂದ ಬ್ರಹ್ಮಾಪರೋಕ್ಷ ಜ್ಞಾನವು ಅಪೇಕ್ಷಿತವಲ್ಲವು, ಎಂಬೀ ಶಂಕಾದ್ವಯನ್ನು ಪರಿಹರಿಸುತ್ತಾನೆ,— ಎಲೈ ಅರ್ಜುನನೇ ! ಪ್ರತ್ಯಾ

ಹಾರಾದಿ ಪ್ರಯತ್ನವುಳ್ಳ ದೇಹಾಭಿಮಾನಿಯಾದ ಪರೋಕ್ಷ ಜ್ಞಾನವುಳ್ಳ ಪುರುಷನ ಮನಸ್ಸನ್ನು ಇಂದ್ರಿಯಗಳು ಬಲಾತ್ಕಾರದಿಂದ ವ್ಯಾಕುಲಪ ಡಿಸುವುವು. ವಿಷಯ (ಸಮೀಪದಲ್ಲಿರುವ) ಸನ್ನಿಕೃಷ್ಟ ವಾದ ಇಂದ್ರಿ ಯಗಳು ವಿಷಯಾಭಿಮುಖ್ಯವನ್ನುಂಟುಮಾಡಿ, ವಿಷಯಾಪೇಕ್ಷೆಯ ನ್ನೇ ಹುಟ್ಟಿಸುವುದರಿಂದ ಅದಂ ನಿವೃತ್ತಿಪಡಿಸಲು ನಿರಾಹಾರತ್ವರೂಪ ಮಹಾಪ್ರಯತ್ನವು ಮತ್ತು ವಿಷಯಾಪೇಕ್ಷಾ ನಿವೃತ್ತಿಗಾಗಿ ಬ್ರಹ್ಮ ಪರೋಕ್ಷಜ್ಞಾನವು ಅವಶ್ಯಾಪೇಕ್ಷಿತವಾಗಿರುವುದೆಂದು ತಿಳಿಯಬೇಕು. ವಿಷಯ ಸನ್ನಿಕೃಷ್ಟವಾದ ಇಂದ್ರಿಯಗಳು ಮನಸ್ಸಿಗೆ ವಿಷಯಾಭಿ ಮುಖ್ಯವನ್ನುಂಟುಮಾಡಿ ವಿಷಯಾನುರಾಗವುಳ್ಳವನನ್ನಾಗಿ ಮಾಡುವು ದು. ಆದುದರಿಂದ ಪ್ರತ್ಯಾಹಾರವು ಮತ್ತು ನಿತ್ಯಾನಿತ್ಯ ವಸ್ತುವಿವೇ ಕವು ಇಂದ್ರಿಯಜಯಕ್ಕೆ ಪರ್ಯಾಪ್ತವಾಗುವುದಿಲ್ಲವೆಂದು ತಾತ್ಪರ್ಯವು.

ಮೂ॥ ತಾನಿಸರ್ವಾಣಿ ಸಂಯಮ್ಯ ಯುಕ್ತ ಆಸೀತ
ಮತ್ಪರಃ । ವಶೇಹಿಯಸ್ಯೇಂದ್ರಿಯಾಣಿ ತಸ್ಯಪ್ರಜ್ಞಾ
ಪ್ರತಿಷ್ಠಿತಾ ॥ ॥೬೧॥

ಪ॥ ತಾನಿ- ಸರ್ವಾಣಿ - ಸಂಯಮ್ಯ - ಯುಕ್ತಃ- ಆಸೀತ- ಮತ್ಪರಃ । ವಶೇ- ಹಿ- ಯಸ್ಯ- ಇಂದ್ರಿಯಾಣಿ- ತಸ್ಯ- ಪ್ರಜ್ಞಾ- ಪ್ರತಿಷ್ಠಿತಾ ॥ ॥೬೧॥

ಅ ॥ ತಾನಿಸರ್ವಾಣಿ- ಆ ಇಂದ್ರಿಯಗಳೆಲ್ಲವನ್ನು, ಸಂಯಮ್ಯ-ಅಡಗಿಸಿಕೊಂಡು, ಯು ಕ್ತಃ- ಮನಸ್ಥೈರ್ಯವುಳ್ಳವನಾಗಿಯೂ,ಮತ್ಪರಃ-ನನ್ನಲ್ಲಾಸಕ್ತನಾದ ಮನಸ್ಸುಳ್ಳವ ನಾಗಿಯೂ, (ಅಂ॥ ತನ್ನನ್ನೇ ಪರಮಾತ್ಮನೆಂದು ತಿಳಿದುಕೊಳ್ಳುವಂತವನಾಗಿಯೂ,) ಆಸೀತ- ಇರಬೇಕು, (ಗೀ॥ ವಿ॥ ಜ್ಞಾನಸಮಾಧಿಯಲ್ಲಿರಬೇಕು.) ಇಂದ್ರಿಯಾಣಿ - ಇಂ ದ್ರಿಯಗಳು, ಯಸ್ಯವಶೇ- ಯಾವ ಪುರುಷನ ಸ್ವಾಧೀನದಲ್ಲಿರುವುವೋ, ತಸ್ಯ- ಅಂತವನ, ಪ್ರಜ್ಞಾ- ಜ್ಞಾನವು, ಪ್ರತಿಷ್ಠಿತಾ- ಸ್ಥಿರವಾದದ್ದು. ॥೬೧॥

(ರಾ॥ ಭಾ॥) ಆದುದರಿಂದ ವಿಷಯಾಪೇಕ್ಷೆಯಿಂದೋಡುವ ಇಂದ್ರಿ ಯಗಳನ್ನಡಗಿಸಿ ಕ್ಷೇಮಸ್ಥಾನವಾದ ನನ್ನಲ್ಲಿ ಮನಸ್ಸನ್ನುನಿಲ್ಲಿಸಿ ಒಂ ದೇಮನಸ್ಸುಳ್ಳವನಾಗಿರಬೇಕು. ಮನಸ್ಸು ನನ್ನ ವಿಷಯದಲ್ಲಿ ತಿರಿಗಿದಾ ಗಲೇ ಸಕಲಪಾಪಗಳು ನಶಿಸಿಪೋಗುವುದರಿಂದ ಮನಸ್ಸಿಗೂ ವಿಷಯಾ ನುರಾಗವೆಂಬ ಕಲ್ಮಲವಿಲ್ಲದೇ ಯಿರುವುದರಿಂದ ನಿರ್ಮಲವಾಗಿ ಇಂದ್ರಿಯ ಗಳೂ ತನಗೆ ವಶಪಡುವುವು. ಅನಂತರದಲ್ಲಿ ಇಂದ್ರಿಯಗಳನ್ನು ಸ್ವಾ

ಧೀನಪಡಿಸಿಕೊಂಡಿರುವ ಮನಸ್ಸು ಆತ್ಮ ದರ್ಶನಕ್ಕೆ ಯೋಗ್ಯವಾಗು ವುದು. ಈ ಅಭಿಪ್ರಾಯವು "ಯಥಾಗ್ನಿರುತ್ಥಿತಶಿಖಃ ಕಕ್ಷಂದಹತಿ ಸಾನಿಲಃ । ತಥಾಚಿತ್ತ ಸ್ಥಿತೋವಿಷ್ಣು ರ್ಯೋಗಿನಾಂ ಸರ್ವಕಿಲ್ಬಿ ಷಮ್ " ಎಂಬುವ ಶ್ಲೋಕದಲ್ಲಿಯೂ ಹೇಳಲ್ಪಟ್ಟಿರುವುದು. ಇದನ್ನೇ " ವಶೇಹಿಯಸ್ಯೇಂದ್ರಿಯಾಣಿ ತಸ್ಯಪ್ರಜ್ಞಾ ಪ್ರತಿಷ್ಠಿತಾ " ಎಂಬ ದಾಗಿ ಇಂದ್ರಿಯಗಳು ಸ್ವಾಧೀನವಾದರೇ ಆತ್ಮದರ್ಶನಕ್ಕೆ ಉಪಯು ಕ್ತವಾದ ಸಾಮರ್ಥ್ಯವು ಮನಸ್ಸಿನಲ್ಲುಂಟಾಗುವುದರಿಂದ ಆತ್ಮ ದರ್ಶ ನವು ಸಿದ್ಧವಾಗುವುದೆಂದು ಹೇಳಿದನು. .. ॥೬೧॥

(ಗೀ॥ ವಿ॥) ಆದರೆ ಸಾಧಾರಣ ಪ್ರಯತ್ನವೇನು, ನಿತ್ಯಾನಿತ್ಯ ವಸ್ತು ವಿವೇಕಜ್ಞಾನವೇನು, ಇವುಗಳಿಂದ ಇಂದ್ರಿಯಗಳಂ ಜಯಿಸಲು ಆಗದಿದ್ದರೆ ಇಂದ್ರಿಯಗಳಂ ಜಯಿಸುವುದು ಅಶಕ್ಯವೇ ಆಗುವುದು. ನಿರಾಹಾರತ್ವಾದಿಗಳಿಂದ ಜಯಿಸಬಹುದೆಂದರೆ ಆಹಾರವಿಲ್ಲದವನಿಗೆ ಶರೀ ರವೇನಿಲ್ಲದೇ ಇರಲು ಇಂದ್ರಿಯ ಜಯವು ಹ್ಯಾಗೆ ವುಂಟಾಗುವುದು ? ಮತ್ತು ಬ್ರಹ್ಮಾಪರೋಕ್ಷಜ್ಞಾನದಿಂದ ಇಂದ್ರಿಯಜಯವು, ಇಂದ್ರಿ ಯ ಜಯದಿಂದ ಬ್ರಹ್ಮಾಪರೋಕ್ಷಜ್ಞಾನವು, ಎಂಬದಾಗಿ ಅನ್ಯೋ ನ್ಯಾಶ್ರಯ ದೋಷಪ್ರಸಂಗವುಂಟಾಗುವುದರಿಂದ ಅಪರೋಕ್ಷ ಜ್ಞಾನ ದಿಂದಲೂ ಇಂದ್ರಿಯ ಜಯವೆಂಬದಾಗಿ ಹೇಳುವುದು ಅಸಂಗತವು. ಆದುದರಿಂದ ದುಸ್ಸಾಧ್ಯವಾದ (ಸಾಧಿಸಲಶಕ್ಯವಾದ) ಇಂದ್ರಿಯ ಜಯಕ್ಕೆ ಜ್ಞಾನ ಸಾಧನತ್ವ ವುಂಟಾಗುವುದಿಲ್ಲವೆಂಬದಾಗಿ ಒರುವ ಆಕ್ಷೇಪಕ್ಕೆ ಸಮಾಧಾನವನ್ನೀ ಶ್ಲೋಕದಿಂದುಪದೇಶಿಸುತ್ತಾನೆ,—

ವಿವಿಕ್ತ ದೇಶವಾಸವೇನು, ಲಘುವಾದ ಆಹಾರವೇನು, ಇದೇ ಮೊ ದಲಾದ ಮಹಾ ಪ್ರಯತ್ನದಿಂದ ಮನಸ್ಸನ್ನು ವಿಷಯದಲ್ಲಿ ಪ್ರವೃ ತ್ತಿಸದಂತೆ ನಿಗ್ರಹಿಸಿ ಅದಂ ನನ್ನಲ್ಲಿಟ್ಟು ಮತ್ತು ನಾನೇ ಸರ್ವೋತ್ತಮ ನೆಂಬ ಜ್ಞಾನವುಳ್ಳವನಾಗಿರಬೇಕು. ಶ್ರೀಹರಿಯು ಸರ್ವರಿಗೂ ಸ್ವಾಮಿ ಯಾಗಿರುವನು, ಆ ಪರಮಾತ್ಮನಿಗೆ ನಾನು ದಾಸನೆಂಬ ಬುದ್ಧಿಯಿಂದ ಕೃಷ್ಣನಲ್ಲಿ ಏಕಾಗ್ರಚಿತ್ತನಾದವನಿಗೆ ಅಲ್ಪಾಹಾರಾದಿ ಬಹುತರ ಪ್ರ ಯತ್ನಗಳಿಂದ ಇಂದ್ರಿಯ ಜಯವು ಸಿದ್ಧಿಸುತದೆಂಬದಾಗಿಯೇ ತಿಳಿ ಯಬೇಕು. ಪರಮಾತ್ಮನಲ್ಲಿ ಮನಸ್ಸಿನ್ನಿಡುವುದು ಇಂದ್ರಿಯಜಯಕ್ಕೆ

ಮುಖ್ಯಸಾಧನವು, ನಿರಾಹಾರತ್ವಾದಿಗಳು ವಸ್ತುಗತಿ ಪ್ರದರ್ಶನಕ್ಕೋಸ್ಕರವಾಗಿ ಹೇಳಿತೆಂದರಿಯಬೇಕು. ಈ ಪ್ರಕಾರವಾಗಿರುವ ಆಯಾಸ ಸಾಧ್ಯವಾದ ಇಂದ್ರಿಯಜಯಕ್ಕೆ ಬ್ರಹ್ಮಾಪರೋಕ್ಷಜ್ಞಾನವೇ ಫಲವೆಂಬದಾಗಿ "ವಶೇಹಿ" ಎಂಬುವ ಉತ್ತರಾರ್ಧದಲ್ಲಿ ಹೇಳುತ್ತಾನೆ,— ಯಾವ ಪುರುಷನ ವಶದಲ್ಲಿ ಇಂದ್ರಿಯಗಳಿರುವುವೋ ಅವನ ಅಪರೋಕ್ಷಜ್ಞಾನವು ನಿಶ್ಚಲವಾಗಿರುವುದು. ಇಂತಹ ಇಂದ್ರಿಯಜಯವು ಆಯಾಸಸಾಧ್ಯವಾದುದರಿಂದ ಆಯಾಸದಿಂದ ಭೀತರಾಗಿ ಯೆಲ್ಲರೂ ಜ್ಞಾನ ಸಂಪಾದನದಲ್ಲಿ ಪ್ರಯತ್ನ ಪಡುವುದಿಲ್ಲವೆಂಬದಾಗಿ ಈ ಮೂರು ಶ್ಲೋಕಗಳ ತಾತ್ಪರ್ಯ ಸಂಗ್ರಹವು. ... ... ||೬೧||

(ಶ್ರೀ||) ಅರ್ಜುನನ ಮೂರನೇ ಪ್ರಶ್ನೆಯಾದ "ವ್ರಜೇತಕಿಂ" ಹ್ಯಾಗಿರುವನು, ಎಂಬುವುದಕ್ಕೆ ಇದರಿಂದ ಉತ್ತರವು ಹೇಳಲ್ಪಟ್ಟಿತು.

ಮೂ|| ಧ್ಯಾಯತೋವಿಷಯಾನ್ಪುಂಸಃ ಸಂಗಸ್ತೇಷೂ
ಪಜಾಯತೆ | ಸಂಗಾತ್ಸಂಜಾಯತೇ ಕಾಮಃ ಕಾಮಾ
ತ್ಕ್ರೋಧೋಽಭಿಜಾಯತೇ ||೬೨|| ಕ್ರೋಧಾದ್ಭವತಿ
ಸಮ್ಮೋಹ ಸ್ಸಂಮೋಹಾ ತ್ಸ್ಮೃತಿವಿಭ್ರಮಃ | ಸ್ಮೃತಿ
ಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ಪ್ರಣಶ್ಯತಿ ||೬೩||

ಪ|| ಧ್ಯಾಯತಃ- ವಿಷಯಾನ್- ಪುಂಸಃ- ಸಂಗಃ- ತೇಷು- ಉಪಜಾಯತೇ| ಸಂಗಾತ್- ಸಂಜಾಯತೇ- ಕಾಮಃ- ಕಾಮಾತ್- ಕ್ರೋಧಃ- ಅಭಿಜಾಯತೇ || ಕ್ರೋಧಾತ್- ಭವತಿ- ಸಮ್ಮೋಹಃ- ಸಮ್ಮೋಹಾತ್- ಸ್ಮೃತಿವಿಭ್ರಮಃ | ಸ್ಮೃತಿಭ್ರಂಶಾತ್- ಬುದ್ಧಿನಾಶಃ- ಬುದ್ಧಿನಾಶಾತ್- ಪ್ರಣಶ್ಯತಿ || ... ... ||೬೨||೬೩||

ಅ|| ವಿಷಯಾನ್- ವಿಷಯವರ್ಗಗಳನ್ನು, ಧ್ಯಾಯತಃ- ಚಿಂತಿಸುತಲಿರುವ, ಪುಂಸಃ- ಪುರುಷನಿಗೆ, ತೇಷು- ಅವುಗಳಲ್ಲಿ, ಸಂಗಃ - ಪ್ರೀತಿರೂಪವಾದ ಸಂಬಂಧವು, ಉಪಜಾಯತೆ - ಉಂಟಾಗುವದು. ಸಂಗಾತ್- ಪ್ರೀತಿರೂಪವಾದ ಸಂಬಂಧದಿಂದ, ಕಾಮಃ- ಇಚ್ಛೆಯು, ಸಂಜಾಯತೆ - ಉಂಟಾಗುವದು, ಕಾಮಾತ್ - ಇಚ್ಛಾವಿಶೇಷದ ದೆಸೆಯಿಂದ, (ಶಾ || ಗೀ || ವಿ || ಅಪೇಕ್ಷಿತವಾದ ವಸ್ತುಪ್ರಾಪ್ತಿಯಲ್ಲಿ ವಿರೋಧವುಂಟಾಗುವುದರಿಂದ) ಕ್ರೋಧಃ- ಕೋಪವು, ಅಭಿಜಾಯತೇ - ಉಂಟಾಗುವುದು. ಕ್ರೋಧಾತ್ - ಕೋಪದ ದೆಸೆಯಿಂದ, ಸಮ್ಮೋಹಃ- ಅವಿವೇಕವು, (ಮ| ಗೀ| ವಿ|| ಪಾಪಕಾರ್ಯದಲ್ಲಾಸಕ್ತಿಯು) ಭವತಿ - ಉಂಟಾಗುವುದು. ಸಮ್ಮೋಹಾತ್ - ಅವಿವೇಕ ಜ್ಞಾನದಿಂದ, ಸ್ಮೃತಿವಿಭ್ರಮಃ-

ಜ್ಞಾಪಕವಿಲ್ಲದಿರುವಿಕೆಯು, (ಶಂ| ಶ್ರೀ| ಮ|| ಶಾಸ್ತ್ರವೇಸು ಆಚಾರ್ಯೋಪದೇಶವೇನು, ಇವುಗಳಿಂದ ತಿಳಿದುಕೊಂಡಿರುವ ಅರ್ಥಗಳಂ ಮರೆತು ಹೋಗುವಿಕೆಯು.) ಭವತಿ- ಆಗುವುದು, ಸ್ಮೃತಿಭ್ರಂಶಾತ್- ಜ್ಞಾಪಕವಿಲ್ಲದಿರುವಿಕೆಯಿಂದ, ಬುದ್ಧಿನಾಶಃ - ಬುದ್ಧಿ ನಾಶವು, (ಶಂ|| ಇದು ಮಾಡತಕ್ಕದ್ದು ಇದು ಮಾಡತಕ್ಕದ್ದಲ್ಲವೆಂಬ ವಿವೇಕಕ್ಕೆ ಯೋಗ್ಯವಾದ ಅಂತಃಕರಣದ ಮಾಲಿನ್ಯವು.) ಭವತಿ- ಆಗುವುದು. ಬುದ್ಧಿನಾಶಾತ್- ಬುದ್ಧಿ ಕೆಡುವಿಕೆಯಿಂದ, ಪ್ರಣಶ್ಯತಿ - ಸ್ವಾರ್ಥವಾಗಿ ನಾಶ ಹೊಂದುವನು. (ಶಂ|| ಪುರುಷಾರ್ಥವೆಂಬ ಮೋಕ್ಷಕ್ಕೆ ಯೋಗ್ಯನಾಗುವುದಿಲ್ಲವು. ರಾ || ಸಂಸಾರವನ್ನು ಹೊಂದುತ್ತಾನೆ. ಮ| ಗೀ| ವಿ|| ನರಕವನ್ನು ಹೊಂದುತ್ತಾನೆ.) ||೬೩||೬೩||

(ರಾ|| ಭಾ||) ವಿಷಯಾನುರಾಗವು ನಿವೃತ್ತವಾಗದೇ ಇರುವುದರಿಂದ ಮನಸ್ಸನ್ನು ನನ್ನಲ್ಲಿ ಯಾವನು ಇಡುವುದಿಲ್ಲವೋ ಅಂತವನು ಇಂದ್ರಿಯಗಳನ್ನಡಗಿಸಿಕೊಂಡಿರುವವನಾದರೂ ಅನಾದಿ ಪಾಪವಾಸನಾಸಂಬಂಧದಿಂದ ವಿಷಯಚಿಂತೆಯು ಅಂತವನಿಗೆ ಯಾವಕಾಲದಲ್ಲಿಯೂ ವಿರಾಮವಂ ಹೊಂದಲಾರದು. ಅಂತಹ ವಿಷಯ ಚಿಂತೆಯುಳ್ಳವನಿಗೆ ಅವುಗಳಲ್ಲಿ ಸಂಗವು ವೃದ್ಧಿಯಾಗುವುದು. ಆ ಸಂಗ ವಿಶೇಷದಿಂದ ಅಪೇಕ್ಷಿತವಾದದ್ದನ್ನನುಭವಿಸದೇ ತೀರದ ಆಶಾ ವಿಶೇಷವೆಂಬ ಕಾಮವುಂಟಾಗುವುದು. ಅದು ಕೋಪವನ್ನುಂಟುಮಾಡುವುದು. ಅದು ಹ್ಯಾಗೆಂದರೇ ! ಅಪೇಕ್ಷಿತಾಂಶವು ಪ್ರಾಪ್ತವಾಗದೇ ಹೋದರೆ ಸಮೀಪದಲ್ಲಿರುವವರನ್ನು ನೋಡಿ ಇವರಿಂದ ನನ್ನ ಮನೋರಥವು ಸಿದ್ಧಿಸಲಿಲ್ಲವೆಂದು ಅವರುಗಳಮೇಲೆ ಕೋಪವುಂಟಾಗುವುದು. ಕೋಪದಿಂದ ಇದು ಮಾಡತಕ್ಕದ್ದು ಇದು ಮಾಡತಕ್ಕದಲ್ಲವೆಂಬ ವಿವೇಕಜ್ಞಾನವಿಲ್ಲದ ಮೋಹವುಂಟಾಗುವುದು. ಆ ಮೋಹ ರೂಪವಾದ ಅಜ್ಞಾನವುಳ್ಳವನಾಗಿರುವುದರಿಂದ ತನ್ನ ಮನಸ್ಸಿಗೆ ತೋರಿದ ಕಾರ್ಯಗಳಂ ಮಾಡುವನು. ಈ ಪ್ರಕಾರವಾಗಿ ಮನಸ್ಸಿಗೆ ತೋರಿದ ಕಾರ್ಯಗಳಂ ಮಾಡುವುದರಿಂದ ಇಂದ್ರಿಯಜಯವಂ ಮಾಡಲುಪಕ್ರಮಿಸಿರುವ ತಕ್ಕ ಪ್ರಯತ್ನಗಳಲ್ಲಿ ಜ್ಞಾನವು ಶೂನ್ಯವಾಗುವುದು. ಅಂತಹ ಸ್ಮೃತಿಭ್ರಂಶವೆಂಬ ಜ್ಞಾನವಿಲ್ಲದೇ ಇರುವುದರಿಂದ ಆತ್ಮಜ್ಞಾನಕಾಗಿ ಇವನಿಂದ ಸ್ವೀಕೃತವಾಗಿರುವ ಬುದ್ಧಿಯು ನಾಶವನ್ನೈದುವುದು. ಅಂತಹ ಬುದ್ಧಿನಾಶದಿಂದ ಪುನಃ ಸಂಸಾರದಲ್ಲಿ ಮುಣುಗಿ ನಾಶವಾಗುವನು. ||೬೨||೬೩||

ಮೂ|| ರಾಗದ್ವೇಷವಿಯುಕ್ತೈಸ್ತು ವಿಷಯಾನಿಂದ್ರಿಯೈಶ್ಚರನ್ | ಆತ್ಮವಶ್ಯೈರ್ವಿಧೇಯಾತ್ಮಾ ಪ್ರಸಾದಮಧಿಗಚ್ಛತಿ || ... ... ||೬೪||

ಪ|| ರಾಗದ್ವೇಷವಿಯುಕ್ತೈಃ - ತು- ವಿಷಯಾನ್- ಇಂದ್ರಿಯೈಃ- ಚರನ್ | ಆತ್ಮವಶ್ಯೈಃ- ವಿಧೇಯಾತ್ಮಾ- ಪ್ರಸಾದಂ- ಅಧಿಗಚ್ಛತಿ || ||೬೪||

ಅ|| ರಾಗದ್ವೇಷವಿಯುಕ್ತೈಃ- ರಾಗದ್ವೇಷಗಳಿಲ್ಲದ, ಆತ್ಮವಶ್ಯೈಃ- ತನಗೆ ಸ್ವಾಧೀನಗಳಾಗಿರುವ, ಇಂದ್ರಿಯೈಃ - ಇಂದ್ರಿಯಗಳಿಂದ, (ಗೀ | ವಿ || ಬಾಹ್ಯೇಂದ್ರಿಯಗಳಿಂದ) ವಿಷಯಾನ್- ವಿಷಯಭೋಗಗಳನ್ನು, ಚರಂಸ್ತು- ಅನುಭವಿಸುವಂತವನಾದರೂ, (ರಾ|| ಅನುಭವಿಸದೇ ಬಿಡುವಂತವನೂ) ವಿಧೇಯಾತ್ಮಾ - ಸ್ವಾಧೀನವಾದ ಮನಸ್ಸುಳ್ಳವನಾಗಿ, ಪ್ರಸಾದಂ- ಮನಸ್ಸಮಾಧಾನವನ್ನು, ಅಧಿಗಚ್ಛತಿ-ಹೊಂದುತ್ತಾನೆ ||೬೪||

(ಶಂ|| ಭಾ||) ವಿಷಯ ಚಿಂತೆಯು ಸಮಸ್ತಗಳಾದ ಅನರ್ಥಗಳಿಗೂ ಮೂಲಕಾರಣವೆಂಬದಾಗಿ " ಧ್ಯಾಯತೋವಿಷಯಾನ್-ಕ್ರೋಧಾದ್ಭವತಿ " ಎಂಬುವ ಶ್ಲೋಕದ್ವಯದಿಂದ ಹೇಳಿ, ಈ ಶ್ಲೋಕದಿಂದ ಮೋಕ್ಷಕಾರಣವನ್ನು ಹೇಳುತ್ತಾನೆ,— ಇಂದ್ರಿಯಗಳಿಗೆ ವಿಷಯ ಪ್ರವೃತ್ತಿಯುಂಟಾಗಬೇಕಾದರೆ ಸಹಜವಾಗಿ ರಾಗದ್ವೇಷಾದಿಗಳುಂಟಾಗುವುದು ಅನುಭವಸಿದ್ಧವಾಗಿರುವುದರಿಂದ ಮೋಕ್ಷಾಪೇಕ್ಷೆಯುಳ್ಳವನು ಇಂದ್ರಿಯಗಳನ್ನು ರಾಗದ್ವೇಷಗಳಿಲ್ಲದಂತೆ ಮಾಡಿ, ಪ್ರಾಣಸಂರಕ್ಷಣಮಾತ್ರಕ್ಕೆ ಉಪಯುಕ್ತವಾಗಿಯೂ, ನಿಷಿದ್ಧಗಳಲ್ಲದೇ ಇರುವುದಾಗಿಯೂ, ಇರುವ ಶಬ್ದಾದಿವಿಷಯಗಳನ್ನು ಕಿವಿ ಮೊದಲಾದ ಇಂದ್ರಿಯಗಳಿಂದ ಅನುಭವಿಸುತಿರಬೇಕು. ಆದರೆ ಇಂದ್ರಿಯಗಳನ್ನು ವಿಷಯಗಳಮೇಲೆ ಪ್ರವೇಶಿಸುವಂತೆ ಮಾಡಿದರೆ ಅವು ನಿಯಮವಿಹೀನಗಳಾಗಿ ನಿಷಿದ್ಧಗಳಾದ ವಿಷಯಗಳಮೇಲೆ ಹೋಗುವುದಿಲ್ಲವೆ ? ಅಂದರೆ ಇಂದ್ರಿಯಗಳು ನಿಯಮಗಳಿಲ್ಲದೇ ನಿಷಿದ್ಧ ವಿಷಯಗಳಲ್ಲಿ ಪ್ರವೇಶಿಸದಂತೆ ಪ್ರಾಣ ಸಂರಕ್ಷಣ ಮಾತ್ರಕ್ಕೆ ಉಪಯೋಗವಾಗುವಷ್ಟು ವಿಷಯಾನುಭವ ಮಾಡುವುದರಲ್ಲಿ ಬಾಧಕವಿಲ್ಲವು. ಆದರೆ ಇಂದ್ರಿಯಗಳನ್ನಿಚ್ಛಾನುಗುಣವಾಗಿ ಬಿಡದಂತೇ ಮಾಡಬೇಕೆಂದು ತಿಳಿಯಬೇಕು. ಇಂದ್ರಿಯಗಳು ಮನಸ್ಸಿಗೆ ಸ್ವಾಧೀನವಾಗಿದ್ದರೂ ಮನಸ್ಸಿಗೆ ನಿಯಮಗಳಿಲ್ಲದಿದ್ದರೆ ಅಂತಹ ಮನಸ್ಸಿಗೆಸ್ವಾಧೀನವಾದ ಇಂದ್ರಿಯಗಳು

ಕೂಡ ನಿಯಮವಿಲ್ಲದೆ ಹೋಗುವುದು. ಆದುದರಿಂದ ಅಂತಃಕರಣವು ಸ್ವಾಧೀನವಾಗಿರಬೇಕೆಂಬುವುದಕ್ಕಾಗಿ "ವಿಧೇಯಾತ್ಮಾ" ಎಂದು ಹೇಳಿತು. ಈ ವಿಷಯಗಳೆಲ್ಲವಂ ತಿಳಿದು ರಾಗದ್ವೇಷವಿಹೀನಗಳಾಗಿರುವ ಸ್ವಾಧೀನಗಳಾದ ಇಂದ್ರಿಯಗಳಿಂದ ಪ್ರಾಣಸಂರಕ್ಷಣಮಾತ್ರಕ್ಕಾಗಿ ನಿಷಿದ್ಧವಲ್ಲದ ವಿಷಯಗಳನ್ನನುಭವಿಸುತ ಮನಸ್ಸನ್ನು ಸ್ವಾಧೀನವಾಗಿ ಮಾಡಿಕೊಳ್ಳುವವನು ಪ್ರಸಾದ (ಅಂದರೆ ಪ್ರಸನ್ನತಾ, ಅಥವಾ ಸ್ವಾಸ್ಥ್ಯ) ವನ್ನು ಹೊಂದುತ್ತಾನೆ. ... ||೬೪||

(ರಾ|| ಭಾ||) ಪೂರ್ವೋಕ್ತಪ್ರಕಾರವಾಗಿ ಮನಸ್ಸಿಗೆ ಶುಭಸ್ಥಾನವಾದ ಸರ್ವೇಶ್ವರನಾಗಿರುವ ನನ್ನಲ್ಲಿ ಮನಸ್ಸನ್ನಿಡುವುವನು ಸಕಲ ಪಾಪಗಳಿಂದ ಬಿಡಲ್ಪಡುವುವನಾದುದರಿಂದ, ರಾಗದ್ವೇಷ ವಿಹೀನನಾಗಿ ಇಂದ್ರಿಯಗಳು ತನಗೆ ವಶಪಟ್ಟಿರುವುದರಿಂದ ವಿಷಯವರ್ಗಗಳನ್ನನುಭವಿಸದೇ ತಿರಸ್ಕರಿಸಿ ಸ್ವಾಧೀನ ಚಿತ್ತನಾಗಿ ನಿರ್ಮಲಾಂತಃಕರಣನಾಗುವುನು. ... ... ||೬೪||

(ಶ್ರೀ||) ೬೨-೬೩ನೇ ದಾದ "ಧ್ಯಾಯತೋವಿಷಯಾನ್- ಕ್ರೋಧಾದ್ಭವತಿ" ಎಂಬ ಯೆರಡು ಶ್ಲೋಕಗಳು ಈ ಶ್ಲೋಕಕ್ಕೆ ಸೇರಿದವುಗಳಾಗಿಯೇ ಇರುವುವು. ವಿಷಯಗಳನ್ನು ಬಿಡಬೇಕೆಂದು ಆ ಎರಡು ಶ್ಲೋಕಗಳಲ್ಲಿ ಹೇಳಿದ್ದರೂ ಬೇಕಾದ ಮಟ್ಟಿಗೆ ವಿಷಯಗಳನ್ನನುಭವಿಸುವುದರಿಂದ ಬಾಧಕವಿಲ್ಲವೆಂಬುವುದು ಈ ಶ್ಲೋಕದಲ್ಲಿ ಹೇಳಲ್ಪಡುವುದು. ಇದೂ "ವ್ರಜೇತಕಿಂ" ಎಂಬುವುದಾಗಿ ಅರ್ಜುನನು ಈ ಅಧ್ಯಾಯದ (೫೪) ನೇ ಶ್ಲೋಕದಲ್ಲಿ ಮಾಡಿದ ೪ನೇ ಪ್ರಶ್ನೆಗೇನೆ ಉತ್ತರವಾಗಿರುವುದು. ... ... ||೬೪||

ಮೂ|| ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ | ಪ್ರಸನ್ನ ಚೇತಸೋಹ್ಯಾಶು ಬುದ್ಧಿಃಪರ್ಯವತಿಷ್ಠತಿ || ||೬೫||

ಪ|| ಪ್ರಸಾದೇ- ಸರ್ವದುಃಖಾನಾಂ- ಹಾನಿಃ- ಅಸ್ಯ - ಉಪಜಾಯತೇ | ಪ್ರಸನ್ನಚೇತಸಃ- ಹಿ- ಆಶು- ಬುದ್ಧಿಃ- ಪರ್ಯವತಿಷ್ಠತಿ || ... ... ||೬೫||

ಅ|| ಪ್ರಸಾದೇಸತಿ- ಮನಸ್ಸಮಾಧಾನ ಉಂಟಾದರೆ, ಅಸ್ಯ - ಈ ಪುರುಷನಿಗೆ, ಸರ್ವದುಃಖಾನಾಂ- ಸಮಸ್ತದುಃಖಗಳ, ಹಾನಿಃ-ನಾಶವು, ಉಪಜಾಯತೇ - ಉಂಟಾಗುವುದು.

ಪ್ರಸನ್ನಚೇತಸೋಹಿ - ಪ್ರಸನ್ನವಾದ ಮನಸ್ಸುಳ್ಳವನಿಗಲ್ಲವೆ, (ಶಂ॥ ಶುದ್ಧವಾದ ಅಂತಃಕರಣವುಳ್ಳವನಿಗೆ, ರಾ॥ ಆತ್ಮದರ್ಶನಕ್ಕೆ ವಿರುದ್ಧವಾದ ದೋಷಗಳಂ ತೊಲಗಿಸಿರುವ ಮನಸ್ಸುಳ್ಳವನಿಗೆ,) ಆಶು- ಶೀಘ್ರವಾಗಿ, ಬುದ್ಧಿಃ- ಬುದ್ಧಿಯು, (ಶಂ॥ ಬುದ್ಧಿಃ ಪರ್ಯವತಿಷ್ಠತಿ- ಬುದ್ಧಿಯು ಅಖಂಡ ಬ್ರಹ್ಮಾಕಾರವಾಗಿ ನಿಲ್ಲುವುದು. (ರಾ॥ ಗೀ॥ ವಿ॥) ಆತ್ಮದರ್ಶನವುಂಟಾಗುವುದು. ಪರ್ಯವತಿಷ್ಠತಿ- ಸ್ಥಿರವಾಗಿರುವುದು. ಪರ್ಯವತಿಷ್ಠತೆ ಎಂಬದಾಗಿ ಶ್ರೀಧರೀಯಪಾಠವು. ... ... ॥೬೫॥

(ರಾ॥ ಭಾ॥) ಈ ಪುರುಷನಿಗೆ ಆತ್ಮಜ್ಞಾನ ವಿರೋಧಿಯಾದ ದೋಷಗಳೆಲ್ಲವೂ ನಿವೃತ್ತವಾಗಿ ಮನಸ್ಸು ನಿರ್ಮಲವಾದರೆ ಆತ್ಮಜ್ಞಾನವು ಸ್ಥಿರವಾಗುವುದರಿಂದ ಪ್ರಕೃತಿಸಂಬಂಧದಿಂದುಂಟಾಗುವ ದುಃಖಗಳೆಲ್ಲವು ವಿನಷ್ಟಗಳಾಗುವುವು. ... ... ॥೬೫॥

ಮೂ॥ ನಾಸ್ತಿಬುದ್ಧಿ ರಯುಕ್ತಸ್ಯ ನಚಾಯುಕ್ತಸ್ಯ
ಭಾವನಾ । ನಚಾಭಾವ ಯತ ಶ್ಶಾಂತಿ ರಶಾಂತಸ್ಯ ಕುತ
ಸ್ಸುಖಂ ॥ ... ... ॥೬೬॥

ಪ ॥ ನಾಸ್ತಿ- ಬುದ್ಧಿಃ- ಅಯುಕ್ತಸ್ಯ- ನ- ಚ- ಅಯುಕ್ತಸ್ಯ- ಭಾವನಾ । ನ- ಚ- ಅಭಾವಯತಃ- ಶಾಂತಿಃ- ಅಶಾಂತಸ್ಯ- ಕುತಃ- ಸುಖಂ ॥ ... ॥೬೬॥

ಅ॥ ಅಯುಕ್ತಸ್ಯ- ಶಂ॥ ಮನಸ್ಸಮಾಧಾನವಿಲ್ಲದವನಿಗೆ, (ರಾ॥ ನನ್ನಲ್ಲಿ ಮನಸ್ಸನ್ನಿಡದೆ ಇಂದ್ರಿಯ ಪರತಂತ್ರನಾಗಿರುವವನಿಗೆ) ಬುದ್ಧಿಃ- ಬುದ್ಧಿಯು, ಅಥವಾ ಆತ್ಮಸ್ವರೂಪ ವಿಷಯವಾದ ಜ್ಞಾನವು, (ರಾ॥ ಪ್ರಕೃತಿಯಿಂದ ಬಿಡಲ್ಪಟ್ಟ ಆತ್ಮಸ್ವರೂಪ ಜ್ಞಾನವು,) ನಾಸ್ತಿ- ಇಲ್ಲವು. ಅಯುಕ್ತಸ್ಯ- ಇಂದ್ರಿಯ ಪರತಂತ್ರನಾದ ಪುರುಷನಿಗೆ, ಭಾವನಾಚ- ಆತ್ಮಸ್ವರೂಪ ಚಿಂತನವೂ, (ಶಂ॥ ಆತ್ಮಜ್ಞಾನದಲ್ಲಿ ಪ್ರೀತಿಯೂ) ನ-ಇಲ್ಲವು, ಅಭಾವಯತಃ- ಆತ್ಮಸ್ವರೂಪ ಚಿಂತನವಿಲ್ಲದವನಿಗೆ, (ಅಥವಾ) ಆತ್ಮಧ್ಯಾನವಿಲ್ಲದವನಿಗೆ, ಶಾಂತಿರ್ನಚ - ವಿಷಯಾಪೇಕ್ಷೆಯು ಇಲ್ಲವೇ ಹೋಗುವಿಕೆ ಇಲ್ಲವು. (ಅಥವಾ) ಆತ್ಮನಲ್ಲಿ ಮನಸ್ಸು ಸ್ಥಿರವಾಗಿರುವಿಕೆಯು ಇಲ್ಲವು. ಅಶಾಂತಸ್ಯ- ಅಸ್ಥಿರಚಿತ್ತನಿಗೆ, (ರಾ॥ ವಿಷಯಾಪೇಕ್ಷೆಯು ನಿವೃತ್ತವಾಗದವನಿಗೆ) ಸುಖಂ- ಸುಖವು, ಕುತಃ- ಎಲ್ಲಿ. (ಶಂ॥ ಇಂದ್ರಿಯ ನಿಗ್ರಹದಿಂದುಂಟಾದ ಸುಖವಿಲ್ಲವು. ಇಂದ್ರಿಯಗಳನ್ನು ವಿಷಯಗಳಲ್ಲಿ ಬಿಟ್ಟಿರುವವರಿಗೂ ಸುಖವಿಲ್ಲವೆಂದರ್ಥವು. ರಾ॥ ಮೋಕ್ಷಾನಂದವೆಂಬ ಸುಖವೆಲ್ಲಿ. ಗೀ॥ ವಿ॥ ಅಯುಕ್ತಸ್ಯ- ಮನೋನಿಗ್ರಹವಿಲ್ಲದವನಿಗೆ, ಭಾವನಾ - ಧ್ಯಾನವು, ನಾಸ್ತಿ - ಇಲ್ಲವು, ಅಭಾವಯತಃ- ಧ್ಯಾನವಿಲ್ಲದವನಿಗೆ, ಬುದ್ಧಿರ್ನ- ಅಪರೋಕ್ಷಜ್ಞಾನವಿಲ್ಲವು, ಅಬುದ್ಧೇಃ- ಅಪರೋಕ್ಷಜ್ಞಾನವಿಲ್ಲದವನಿಗೆ, ಶಾಂತಿರ್ನ- ಮೋಕ್ಷವಿಲ್ಲವು, ಅಶಾಂತಸ್ಯ - ಮೋಕ್ಷವಿಲ್ಲದವನಿಗೆ, ಸುಖಂ- ಸುಖವು, ಕುತಃ- ಎಲ್ಲಿ. ... ... ॥೬೬॥

(ಶಂ॥ ಭಾ॥) ಚಿತ್ತಶುದ್ಧಿಯಿಂದಲೇ ಆತ್ಮಾನಾತ್ಮವಿವೇಕಗಳಿಂದುಂಟಾದ ಜ್ಞಾನವು ಸ್ಥಿರವಾಗಿರುವುದೊ ? ಎಂಬದಾಗಿ ಸಂದೇಹಿಸದೇ ಚಿತ್ತಶುದ್ಧಿಯಿಂದಲೇ ಆತ್ಮಾನಾತ್ಮ ವಿವೇಕದಿಂದುಂಟಾದಜ್ಞಾನವು ಸ್ಥಿರವಾಗದಿದ್ದರೂ ಕ್ರಮ ಕ್ರಮ ವಾಗಿ ಅಂತಹ ಜ್ಞಾನಕ್ಕೆ ಸಾಧನವಾಗುವುದರಿಂದ ಚಿತ್ತಶುದ್ಧಿಯೇ ಸರ್ವೋತ್ತಮವೆಂಬದಾಗಿ ಈ ಶ್ಲೋಕದಿಂದ ಸ್ತುತಿಸಲ್ಪಡುವುದು. ಚಿತ್ತಶುದ್ಧಿ ಯಿಲ್ಲದವನಿಗೆ ಆತ್ಮಸ್ವರೂಪವಿಷಯವಾದ ಬುದ್ಧಿ ಯುಂಟಾಗುವದಿಲ್ಲವು. ಆದರೆ ಚಿತ್ತಶುದ್ಧಿಯಿಲ್ಲದವನಿಗೂ ಸಾಮಾನ್ಯವಾಗಿ ಬುದ್ಧಿಯೆಂಬುವುದುಂಟಾಗಲಾಗಿ ಬುದ್ಧಿಯುಂಟಾಗುವುದಕ್ಕೆ ಚಿತ್ತಶುದ್ಧಿಯನ್ನು ಕಾರಣವಾಗಿ ಹೇಳುವುದು ಉಚಿತವೊ ? ಅಂದರೆ ಚಿತ್ತಶುದ್ಧಿಯಿಲ್ಲದವನಿಗೆ ಸಾಮಾನ್ಯವಾಗಿ ವೇದಾಂತಶ್ರವಣವಂ ಮಾಡುವುದರಿಂದ "ನಾನು ಬ್ರಹ್ಮ" ಎಂಬುವ ಬುದ್ಧಿಯುಂಟಾದರೂ ಅಂತಹ ಬುದ್ಧಿಯು ನಿಶ್ಚಯಾತ್ಮಕವಾಗಬೇಕಾದರೆ ಚಿತ್ತಶುದ್ಧಿಯನ್ನೇ ಅಪೇಕ್ಷಿಸುವುದರಿಂದ ಚಿತ್ತಶುದ್ಧಿಯಿಲ್ಲದವನಿಗೆ ಆತ್ಮವಿಷಯವಾದ ಜ್ಞಾನ ವುಂಟಾಗುವುದಿಲ್ಲವೆಂದು ಹೇಳಿತು. ಮತ್ತು ಚಿತ್ತಶುದ್ಧಿ ಯಿಲ್ಲದವನಿಗೆ ಆತ್ಮಜ್ಞಾನವನ್ನು ಸಂಪಾದಿಸಬೇಕೆಂಬ ಅಭಿನಿವೇಶವೂ ವುಂಟಾಗುವದಿಲ್ಲವು. ಸರ್ವಕಾಲದಲ್ಲಿಯೂ ತನ್ನನ್ನು ಆತ್ಮನನ್ನಾಗಿ ಭಾವಿಸುವಂತವನಿಗಲ್ಲದೆ ಚಿತ್ತಶುದ್ಧಿಯಿಲ್ಲದವನಿಗೆ ನಾನು ಬ್ರಹ್ಮನಾದೆನೆಂಬ ಸ್ಥಿರಜ್ಞಾನ ವುಂಟಾಗುವುದಿಲ್ಲವೆಂದರ್ಥವು. ಅಂತಹ ಬ್ರಹ್ಮ ಭಾವನಾಶೂನ್ಯನಾದವನಿಗೆ ಬಾಹ್ಯ ವಿಷಯಗಳಲ್ಲಿ ಮನಃಪ್ರವೃತ್ತಿ ರಾಹಿತ್ಯವೆಂಬ ಚಿತ್ತೋಪಶಾಂತಿ ಯುಂಟಾಗುವುದಿಲ್ಲವು. ಮತ್ತು ಬಾಹ್ಯವಿಷಯಗಳಲ್ಲಿ ಮನಃಪ್ರವೃತ್ತಿ ಎಂಬ ಅನರ್ಥವುಳ್ಳವನಾಗಿಯೂ ಪರಮಾನಂದ ಸಮುದ್ರದಲ್ಲಿ ವಿಭಕ್ತನಾಗಿ ಅಂದರೆ ಪರಮಾನಂದ ವಿಲ್ಲದವನಾಗಿಯೂ, ಸಂಸಾರ ಸಾಗರದಲ್ಲಿ ಮಗ್ನನಾಗಿಯೂ ಇರುವವನಿಗೆ ಮೋಕ್ಷರೂಪವಾದ ಸುಖವುಂಟಾಗುವುದಿಲ್ಲವು. ಇಲ್ಲಿ ಇಂದ್ರಿಯಗಳಿಗೆವಿಷಯಸೇವಾಪ್ರವೃತ್ತಿಯನ್ನು ದುಃಖವೆಂಬುವುದಾಗಿಯೂ ಇಂದ್ರಿಯಗಳನ್ನು ವಿಷಯಗಳಕೂಡ ಪ್ರವೇಶಿಸದಂತೆ ಮಾಡುವುದನ್ನು ಸುಖ ವೆಂಬದಾಗಿಯೂ ಆಚಾರ್ಯರು ಹೇಳಿರುವರು. ಆದುದರಿಂದ ವಿಷಯಾಪೇಕ್ಷೆ ಯುಂಟಾದರೆ ಸುಖದ ಗಂಧ

ಮಾತ್ರವು (ಸುಖದ ಸ್ವಲ್ಪಾಂಶವು) ಕೂಡ ಉಂಟಾಗುವುದಿಲ್ಲವೆಂದು ತಾತ್ಪರ್ಯವು. ... ... ... ||೬೬||

(ರಾ|| ಭಾ||) ನನ್ನಲ್ಲಿ ಮನಸ್ಸನ್ನಿಡದೆ ತಾನಾಗಿಯೇ ಇಂದ್ರಿಯಗಳನ್ನು ಜಯಿಸುವೆನೆಂದು ಪ್ರಯತ್ನವಂ ಮಾಡುವಂತವನಿಗೆ ವಿಲಕ್ಷಣಮಾದ ಆತ್ಮಸಾಕ್ಷಾತ್ಕಾರವುಸಿದ್ಧಿಸುವುದಿಲ್ಲವು. ಆದುದರಿಂದಲೆ ಸರ್ವಕಾಲದಲ್ಲಿಯೂ ಆತ್ಮಸ್ವರೂಪಾನುಚಿಂತನವೆಂಬ ಆತ್ಮಭಾವನೆಯು ಸಂಭವಿಸುವದಿಲ್ಲವು. ಆತ್ಮಭಾವನವಿಲ್ಲದಿದ್ದರೆ ವಿಷಯಾಪೇಕ್ಷೆಯು ನಿವೃತ್ತವಾಗುವುದಿಲ್ಲವು. ಅದಿಲ್ಲದವನಿಗೆ ನಿತ್ಯವಾದಸುಖವು ಹ್ಯಾಗೆತಾನೇ ಉಂಟಾಗುವುದು. ... ... ||೬೬||

(ಗೀ|| ವಿ||) ಶ್ರವಣ ಮನನಾದಿಗಳಿಂದುಂಟಾದ ಧ್ಯಾನದಿಂದಲೆ ಅಪರೋಕ್ಷಜ್ಞಾನ ಸಿದ್ಧಿಯಾಗುವಲ್ಲಿ ಮನಃಪ್ರಸಾದವಿಂದೇನು ? ಎಂಬುವ ಶಂಕೆಯನ್ನು ಮುಂದಣ ಶ್ಲೋಕಗಳಿಂದ ಪರಿಹಾರಮಾಡುತ್ತಾನೆ,— "ನಹಿಪ್ರಸಾದಾಭಾವೇಯುಕ್ತಿಃ" ಎಂಬುವುದನ್ನು ಸೇರಿಸಿಕೊಳ್ಳಬೇಕು. ಪ್ರಸಾದಾಭಾವೇ - ಮನಃಪ್ರಸಾದವಿಲ್ಲದಿದ್ದರೆ, ಯುಕ್ತಿಃ- ಅಂತಃಕರಣ ನಿರೋಧವು, ನಹಿ - ಉಂಟಾಗುವುದಿಲ್ಲವು, ಅಯುಕ್ತಸ್ಯ - ಅಂತಃಕರಣ ನಿರೋಧವಿಲ್ಲದವನಿಗೆ, ಬುದ್ಧಿಃ - ಅಪರೋಕ್ಷಜ್ಞಾನವು, ನಾಸ್ತಿ-ಇಲ್ಲವು (ಧ್ಯಾನದಿಂದಲೇಅಪರೋಕ್ಷಜ್ಞಾನಸಿದ್ಧಿಯಾಗುವುದರಿಂದ ಅಂತಃಕರಣ ನಿರೋಧಾಪೇಕ್ಷೆಯಿಲ್ಲವೆಂದು ಹೇಳಿದಕಾರಣಕ್ಕಾಗಿ ಈ ಶ್ಲೋಕದ ಪೂರ್ವ ಪಾದವು ಪ್ರವೃತ್ತವಾಯಿತು) ಅಯುಕ್ತಸ್ಯ- ಅಂತಃಕರಣ ನಿರೋಧವೆಂಬ ಚಿತ್ತೈಕಾಗ್ರ್ಯ ವಿಲ್ಲದವನಿಗೆ, ಭಾವನಾ- ಧ್ಯಾನವು, ನಚ- ಇಲ್ಲವು. (ಇಲ್ಲಿ ಧ್ಯಾನವುಂಟಾಗಬೇಕಾದರೂ ಅದಕ್ಕೆ ಚಿತ್ತೈಕಾಗ್ರತೆಯೇ ಅವಶ್ಯಾಪೇಕ್ಷಿತವಾಗಿರುವುದೆಂದು ಹೇಳಿತು. ಇನ್ನು ಕೆಲವು ಪ್ರಸಂಗಸಂಗತಿಯಿಂದ ಹೇಳಲ್ಪಡುವುದು.) ಅಭಾವಯತಃ - ಧ್ಯಾನರಹಿತನಾದವನಿಗೆ, ಜ್ಞಾನಂ - ಅಪರೋಕ್ಷಜ್ಞಾನವು, ನ-ಇಲ್ಲವು, ಅಜ್ಞಾನಿನಃ- ಪರೋಕ್ಷಜ್ಞಾನವಿಲ್ಲದವನಿಗೆ, ಶಾಂತಿಃ- ಮೋಕ್ಷವು, (ಅಥವಾ) ಪರಮಾತ್ಮ ನಿಷ್ಠಾಬುದ್ಧಿಯು, ನಚ-ಇಲ್ಲವು, ಅಶಾಂತಸ್ಯ- ಶಾಂತಿಯಿಲ್ಲದವನಿಗೆ, ಸುಖಂ- ಸುಖವು, ಕುತಃ-ಎಲ್ಲಿಂದ ಪ್ರಾಪ್ತವಾಗುವುದು. ಅಂದರೆ ಇಲ್ಲವೆಂದರ್ಥವು. ||೬೬||

ಮೂ || ಇಂದ್ರಿಯಾಣಾಂಹಿ ಚರತಾಂ ಯನ್ಮನೋಽನು ವಿಧೀಯತೇ | ತದಸ್ಯ ಹರತಿ ಪ್ರಜ್ಞಾಂ ವಾಯುರ್ನಾವಮಿವಾಂಭಸಿ || ... ... ||೬೭||

ಪ || ಇಂದ್ರಿಯಾಣಾಂ- ಹಿ - ಚರತಾಂ- ಯತ್- ಮನಃ- ಅನು - ವಿಧೀಯತೇ| ತತ್- ಅಸ್ಯ- ಹರತಿ- ಪ್ರಜ್ಞಾಂ- ವಾಯುಃ- ನಾವಂ- ಇವ- ಅಂಭಸಿ || ||೬೭||

ಅ|| ಚರತಾಂ- ಅತಿಗವೇ ವಿಷಯಗಳಲ್ಲಿ ಪ್ರವೇಶಿಸುವ, ಇಂದ್ರಿಯಾಣಾಂ - ಇಂದ್ರಿಯಗಳನ್ನು, ಯನ್ಮನಃ- ಯಾವಮನಸ್ಸು, ಅನುವಿಧೀಯತೇ-ಅನುಸರಿಸಿಹೋಗುವುದೋ, ತನ್ಮನಃ-ಆ ಮನಸ್ಸು, ಅಸ್ಯಪ್ರಜ್ಞಾಯ- ಇವನ ಜ್ಞಾನವನ್ನಲ್ಲವೆ, ಅಂಭಸಿ-ಸಮುದ್ರೋದಕದಲ್ಲಿ, ನಾವಂ- ಹಡಗನ್ನು, ವಾಯುರಿವ- ಪ್ರತಿಕೂಲವಾದ ಘಾಳಿಯಂತೆ, ಹರತಿ- ಅಪಹರಿಸಿಕೊಂಡು ಹೋಗುವುದು. ... ... ||೬೭||

(ಶ್ರೀ) ಚರತಾಂ- ವಿಷಯಗಳಲ್ಲಿ ಪ್ರವೇಶಿಸುವ, ಇಂದ್ರಿಯಾಣಾಂ- (ಮಧ್ಯೆ) ಇಂದ್ರಿಯಗಳ ಮಧ್ಯದಲ್ಲಿ, ಯತ್- ಯಾವ ಇಂದ್ರಿಯವನ್ನು, ಮನಃ- ಮನಸ್ಸು, ಅನುವಿಧೀಯತೇ- ಅನುಸರಿಸಿ ಹೋಗುವುದೋ, ತತ್- ಆ ಒಂದೇ ಇಂದ್ರಿಯವು, ಅಸ್ಯಪ್ರಜ್ಞಾಂ- ಈ ಪುರುಷನ ವಿವೇಕಜ್ಞಾನವನ್ನು, ಅಂಭಸಿ- ಸಮುದ್ರಜಲದಲ್ಲಿ, ನಾವಂ- ಹಡಗನ್ನು, ವಾಯುರಿವ- ಘಾಳಿಯಂತೆ, ಹರತಿ- ಅಪಹರಿಸುವುದಲ್ಲವೆ. ||೬೭||

(ರಾ|| ಭಾ||) ಪೂರ್ವೋಕ್ತ ಪ್ರಕಾರವಾಗಿ ಇಂದ್ರಿಯ ಜಯವಿಲ್ಲದವನಿಗೆ ಪ್ರಾಪ್ತವಾಗುವ ಅನರ್ಥಗಳನ್ನು ಪುನಶ್ಚ ಹೇಳುತ್ತಾನೆ. ವಿಷಯಗಳನ್ನು ಹುಡುಕಿಕೊಂಡು ಹೋಗುವ ಇಂದ್ರಿಯಗಳ ಮಾರ್ಗವಾಗಿ ಮನಸ್ಸನ್ನು ವಿನಿಯೋಗಿಸತಕ್ಕವನಾದರೇ ಅಂತಹ ಮನಸ್ಸು ಆತ್ಮಸ್ವರೂಪ ವಿಷಯವಾದ ಜ್ಞಾನವನ್ನು ಬಿಟ್ಟು ನೀರಿನಲ್ಲಿ ಸಂಚರಿಸುವ ಹಡಗನ್ನು ಎದುರಾಗಿ ಬರುವ ಪ್ರತಿಕೂಲವಾದ ಘಾಳಿಯು ಬಲಾತ್ಕಾರವಾಗಿ ಆಕರ್ಷಣವಾಡುವ ರೀತಿಯಿಂದ ಶಬ್ದಾದಿ ವಿಷಯಗಳಲ್ಲಿ ಆಸಕ್ತವಾಗಿ ಮಾಡುವುದು. ... ||೬೭||

ಮೂ || ತಸ್ಮಾದ್ಯಸ್ಯಮಹಾಬಾಹೋ ನಿಗೃಹೀತಾನಿ ಸರ್ವಶಃ | ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾಪ್ರತಿಷ್ಠಿತಾ || ... ||೬೮||

ಪ || ತಸ್ಮಾತ್- ಯಸ್ಯ- ಮಹಾಬಾಹೋ- ನಿಗೃಹೀತಾನಿ- ಸರ್ವಶಃ | ಇಂದ್ರಿಯಾಣಿ- ಇಂದ್ರಿಯಾರ್ಥೇಭ್ಯಃ- ತಸ್ಯ-ಪ್ರಜ್ಞಾ- ಪ್ರತಿಷ್ಠಿತಾ || ... ||೬೮||

ಅ|| ಹೇ ಮಹಾಬಾಹೋ- ಎಲೈ ವಿಸ್ತಾರವಾದ ಭುಜವುಳ್ಳ ಅರ್ಜುನನೇ! ತಸ್ಮಾತ್- ಆದುದರಿಂದ, ಯಸ್ಯ- ಯಾವ ಪುರುಷನ, ಇಂದ್ರಿಯಾಣಿ- ಇಂದ್ರಿಯಗಳು, ಸರ್ವಶಃ- ಸಮಸ್ತವಾದ, ಇಂದ್ರಿಯಾರ್ಥೇಭ್ಯಃ- ವಿಷಯಗಳ ದೆಸೆಯಿಂದ, ನಿಗೃಹೀತಾನಿ- ಬಿಡಿಸಲ್ಪಡುವುವೋ, ತಸ್ಯ-ಅವನ, ಪ್ರಜ್ಞಾ- ಜ್ಞಾನವು, ಪ್ರತಿಷ್ಠಿತಾ-ಸ್ಥಿರವಾಗಿರುವುದು.||

(ರಾ|| ಭಾ||) ಆದುದರಿಂದ ಪೂರ್ವೋಕ್ತ ಪ್ರಕಾರವಾಗಿ ಶುಭಾಶ್ರಯನಾದ ನನ್ನಲ್ಲಿ ಯಾವನು ಮನಸ್ಸನ್ನಿಟ್ಟು ಇಂದ್ರಿಯಗಳನ್ನು ವಿಷಯವರ್ಗಗಳಲ್ಲಿ ಪ್ರವರ್ತಿಸುವಂತೆ ಮಾಡದೆ ನಿರೋಧಿಸುತ್ತಾನೋ ಅವನಿಗೇನೆ ಆತ್ಮವಿಷಯವಾದ ಜ್ಞಾನವು ಸ್ಥಿರವಾಗಿರುವುದು. ||೬೮||

ಮೂ || ಯಾನಿಶಾಸರ್ವಭೂತಾನಾಂ ತಸ್ಯಾಂಜಾಗರ್ತಿ
ಸಂಯಮೀ | ಯಸ್ಯಾಂಜಾಗ್ರತಿಭೂತಾನಿ ಸಾನಿಶಾಪ
ಶ್ಯತೋಮುನೇಃ || ... ... ||೬೯||

ಪ|| ಯಾ- ನಿಶಾ- ಸರ್ವಭೂತಾನಾಂ- ತಸ್ಯಾಂ- ಜಾಗರ್ತಿ- ಸಂಯಮೀ| ಯಸ್ಯಾಂ- ಜಾಗ್ರತಿ- ಭೂತಾನಿ- ಸಾ- ನಿಶಾ- ಪಶ್ಯತಃ- ಮುನೇಃ || ... ||೬೯||

ಅ || ಸರ್ವಭೂತಾನಾಂ - ಸಮಸ್ತ ಪ್ರಾಣಿಗಳಿಗೂ, ಯಾ- ಯಾವ ಬ್ರಹ್ಮವಿಷಯವಾದ ಜ್ಞಾನವು, ನಿಶಾ- ರಾತ್ರಿಯೋ, ಅಂದರೆ ರಾತ್ರಿಯಂತೇ ಪ್ರಕಾಶವಿಲ್ಲದೆ ಇರುವುದೊ, ತಸ್ಯಾಂ- ಆ ರಾತ್ರಿಯಲ್ಲಿ, ಸಂಯಮೀ- ಇಂದ್ರಿಯಗಳನ್ನಡಗಿಸಿರುವ ವಿವೇಕವುಳ್ಳವನಾದ ಬ್ರಹ್ಮಜ್ಞಾನಿಯು, ಜಾಗರ್ತಿ- ಪ್ರಬುದ್ಧನಾಗಿರುವನು. ಅಂದರೆ ನಿದ್ರೆಯಿಲ್ಲದವನು ತನ್ನ ವ್ಯಾಪಾರಗಳಲ್ಲಿ ಹ್ಯಾಗಿರುವನೊ, ಆರೀತಿಯಾಗಿ ಬ್ರಹ್ಮವಿಷಯದಲ್ಲಿ ಇವನು ಜಾಗ್ರದ್ದಶೆಯನ್ನು ಹೊಂದಿದವನಂತೆ ಜಾಗರೂಕನಾಗಿರುವನು. ಬ್ರಹ್ಮವಿಷಯವಾದ ಜ್ಞಾನವು ವಿಷಯಭೋಗದಲ್ಲಾಸಕ್ತರಾದ ಸಂಸಾರಿಗಳಿಗೆ ರಾತ್ರಿಯಂತೆ ಅಪ್ರಕಾಶವಾಗಿರುವುದೆಂದರ್ಥವು. ಯಸ್ಯಾಂ- ಯಾವ ಅಜ್ಞಾನಪ್ರಯುಕ್ತವಾದ ವಿಷಯಭೋಗಾದಿ ಸಂಸಾರಿಗಳ ಅವಸ್ಥೆಯಲ್ಲಿ, ಭೂತಾನಿ - ಪ್ರಾಣಿಗಳು, ಜಾಗ್ರತಿ - ಜಾಗ್ರದ್ದಶೆಯನ್ನು ಹೊಂದಿದವರಂತೆ ಜಾಗರೂಕರಾಗಿರುವರೊ, ಸಾ - ಆ ಅಜ್ಞಾನಪ್ರಯುಕ್ತವಾದ ವಿಷಯ ಭೋಗಾದಿ ಸಂಸಾರಿಗಳ ಅವಸ್ಥೆಯು, ಪಶ್ಯತೋಮುನೇಃ- ಆತ್ಮಸಾಕ್ಷಾತ್ಕಾರವುಳ್ಳ ಮುನಿವ್ರತನಿಷ್ಠನಾದವನಿಗೆ, ನಿಶಾ- ರಾತ್ರಿಯು, ಅಂದರೆ ರಾತ್ರಿಯಂತೆ ಅಪ್ರಕಾಶವಾಗಿರುವುದು. ಸಂಸಾರಿಗಳಿಗೆ ಅವಶ್ಯವಾಗಿ ಅನುಭವಿಸತಕ್ಕದ್ದೆಂದು ಪರಮಾತುರದಿಂದ ತೋರುವ ವಿಷಯಭೋಗಾವಸ್ಥೆಗಳು ಬ್ರಹ್ಮಜ್ಞಾನಿಗೆ ರಾತ್ರಿಯಂತೆ ಅಪ್ರಕಾಶವಾಗಿಯೇ ಇರುವುದು. ಅದನ್ನನುಭವಿಸಲಿಚ್ಛೆಯು ಮನಸ್ಸಿನಲ್ಲಿ ಕುತೂಹಲವುಂಟಾಗುವುದಿಲ್ಲವೆಂದರ್ಥವು. ... ... ... ||೬೯||

(ಶಂ॥ ಭಾ॥) ಆತ್ಮವೇದಿಯಾದ ಸ್ಥಿತಪ್ರಜ್ಞನಿಗೆ ಸರ್ವಕರ್ಮ ಪರಿತ್ಯಾಗದಲ್ಲಿ ಅಧಿಕಾರವೆಂತಲೂ, ತದ್ವಿಪರೀತನಾದ (ಆತ್ಮವೇದಿಯಲ್ಲದ) ಜ್ಞಾನಶೂನ್ಯನಿಗೆ ಕರ್ಮದಲ್ಲಿ ಅಧಿಕಾರವೆಂತಲೂ, ಲೌಕಿಕವು ವೈದಿಕವು ಆದ ಯಾವ ವ್ಯವಹಾರವುಂಟೋ ಅದು ಅವಿದ್ಯಾಕಾರ್ಯ ವಾಗಿರುವುದರಿಂದ ಅವಿದ್ಯೆಯು ನಿವೃತ್ತವಾದರೇ ನಿವೃತ್ತನಿ ಹೋಗುವುದೆಂಬದಾಗಿಯೂ,ಮತ್ತು ಅವಿದ್ಯೆಗೆ ವಿದ್ಯೆಯೆಂಬುವುದು ವಿರೋಧಿಯಾದುದರಿಂದ ವಿದ್ಯೋತ್ಪತ್ತಿಯಾದ ಬಳಿಕ ಅವಿದ್ಯಾನಿವೃತ್ತಿಯಾಗುವುದೆಂಬೀ ಅರ್ಥವಂ ಸ್ಫುಟವಾಗಿ ತಿಳಿಸಲು ಶ್ರೀಕೃಷ್ಣನೀಶ್ಲೋಕವಂ ಪೇಳುತ್ತಾನೆ, ಸ್ಥಿತಪ್ರಜ್ಞನಿಗೆ ವಿಷಯವಾದ ಪರಮಾರ್ಥತತ್ವವು, ಅವಿವೇಕವುಳ್ಳ ಸಕಲ ಭೂತಗಳಿಗೂ ಅಂಧಕಾರವನ್ನೇ ಸ್ವರೂಪವಾಗಿ ವುಳ್ಳದ್ದಾದುದರಿಂದ ಸರ್ವ ಪದಾರ್ಥಗಳನ್ನು ಕಾಣದಂತೆ ಮಾಡುವ ರಾತ್ರಿಯಂತೆ ಇರುವುದು. (ಸ್ಥಿತಪ್ರಜ್ಞನಿಗೆ ಗೋಚರವಾದ ಪರಮಾರ್ಥತತ್ವವು ಜ್ಞಾನಹೀನರಿಗೆ ಗೋಚರವಾಗಲಾರದೆಂದರ್ಥವು.) ಹ್ಯಾಗಾದರೆ ಸರ್ವಜನರಿಗೂ ಹಗಲಂತೇ ಕಾಣುವ ಕಾಲವು ರಾಕ್ಷಸರಿಗೆ ರಾತ್ರಿಯಾಗಿರುವುದೋ ಆಪ್ರಕಾರವೆ ಜ್ಞಾನಿಯಾದವನಿಗೆ ಪ್ರಕಾಶರೂಪವಾಗಿ ಕಂಡುಬರುವ ಪರಮಾರ್ಥತತ್ವವು ರಾಕ್ಷಸಸ್ಥಾನೀಯರಾದ ಅವಿವೇಕಿಗಳಿಗೆ ಪ್ರಕಾಶ ಹೀನವಾದ ರಾತ್ರಿಕಾಲದಂತಿರುವುದು. ಅಜ್ಞಾನವೆಂಬ ನಿದ್ರೆಯನ್ನು ಬಿಟ್ಟವನಾಗಿರುವ ಜಿತೇಂದ್ರಿಯನಾದ ಜ್ಞಾನಿಯು ಪರಮಾರ್ಥತತ್ವಜ್ಞಾನವನ್ನೇ ಸ್ವರೂಪವಾಗಿಯುಳ್ಳ ಸರ್ವಪ್ರಾಣಿಗಳ ರಾತ್ರಿಯಂತೆ ಹೇಳಲ್ಪಡುವ ಅಜ್ಞಾನಾವಸ್ಥೆಯಲ್ಲಿ ಸೇರದೆ ಆತ್ಮನನ್ನು ನೋಡುತಲಿರುವನೆಂದರ್ಥವು.

ಇದು ಗ್ರಹಿಸತಕ್ಕದ್ದು ಇವನು ಗ್ರಹಿಸುವಂತವನೆಂಬ ಭೇದಜ್ಞಾನವೇ ಸ್ವರೂಪವಾಗಿಯುಳ್ಳ ಅವಿದ್ಯೆಯೆಂಬ ನಿದ್ರೆಯಲ್ಲಿ ಅಂದರೇ ಅಜ್ಞಾನಾವಸ್ಥೆಯಲ್ಲಿ, ನಿದ್ರೆಯಂ ಹೊಂದಿದವರೇ ಅಂದರೆ ಸಮಸ್ತವು ಬ್ರಹ್ಮಸ್ವರೂಪವೆಂಬುವ ಜ್ಞಾನವಿಲ್ಲದವರೇ ಪ್ರಬುದ್ಧರಾಗಿರುವರೆಂಬದಾಗಿ ಬ್ರಹ್ಮಜ್ಞಾನ ವಿಲ್ಲದವರು ಹೇಳುವರು. ಆದರೇ ಪ್ರಸುಪ್ತರೆಂದರೆ ನಿದ್ರೆಯಂ ಹೊಂದಿದವರು. ಅಂತವರನ್ನು ಪ್ರಬುದ್ಧರೆಂಬದಾಗಿ ಹೇಳುವುದು ಉಚಿತವಿಲ್ಲವೆಂದು ಶಂಕಿಸದೆ ರಾತ್ರಿಕಾಲದಲ್ಲಿ ನಿದ್ರಾಪರ

ವಶರಾಗಿದ್ದರೂ ಸ್ವಪ್ನವಂ ಕಾಣುವಕಾಲದಲ್ಲಿ ತಾವು ಪ್ರಬುದ್ಧರೆಂಬದಾಗಿ ತಿಳಿಯುತಕ್ಕವರಂತೆ ಸರ್ವಪ್ರಪಂಚವು ಬ್ರಹ್ಮರೂಪವಾಗಿರಲಾಗಿ 'ಅವನು, ಇವನು, ನನ್ನದು, ನಿನ್ನದು, ಎಂಬುವ ಭೇದಜ್ಞಾನಿಗಳು ತಾವು ತಿಳಿದಿರುವ ಭೇದವೇಸತ್ಯವೆಂಬದಾಗಿ ನೆನೆಸುತ್ತಾರಾದುದರಿಂದ ಬ್ರಹ್ಮಜ್ಞಾನ ವಿಲ್ಲದವರು ಪ್ರಬುದ್ಧರಾಗಿರುವುದೆಂಬದಾಗಿ ನಿದ್ರಿತರನ್ನ ಹೇಳುವರೆಂದು ತಿಳಿಯಬೇಕು. ಪರಮಾರ್ಥತತ್ವವನ್ನು ಕಾಣುವಂತವನಾದ ಅವಿದ್ಯಾರಹಿತನಾಗಿರುವ ಯೋಗಿಯಾದವನಿಗೆ ದ್ವೈತಾವಸ್ಥೆಯು ಅವಿದ್ಯಾ ರೂಪವಾಗಿರುವುದರಿಂದ ರಾತ್ರಿಯಂತೆ ಇರುವುದು.

ಈರೀತಿಯಾಗಿ ಅಜ್ಞಾನಿಗಳಿಗೆ ಪರಮಾರ್ಥಾವಸ್ಥೆಯು ಜ್ಞಾನಿಗಳಿಗೆ ದ್ವೈತಾವಸ್ಥೆಯು ರಾತ್ರಿಯಂತೆ ಪ್ರಕಾಶ ಹೀನವಾಗಿರುವುದರಿಂದ ಅವಿದ್ಯಾವಸ್ಥೆಯಲ್ಲಿಯೇ ಕರ್ಮಗಳು ವಿಧಿಸಲ್ಪಡುವುದಲ್ಲದೆ ವಿದ್ಯಾವಸ್ಥೆಯಲ್ಲಿ ಕರ್ಮಾಧಿಕಾರವಿಲ್ಲವೆಂತಲೆ ತಿಳಿಯಬೇಕು ಸೂರ್ಯೋದಯವಾದಮೇಲೆ ರಾತ್ರಿಸಂಬಂಧವಾದ ಅಂಧಕಾರವು ಹ್ಯಾಗೆ ಇಲ್ಲವೋ ಆರೀತಿಯಾಗಿ ವಿದ್ಯೋತ್ಪತ್ತಿಯಾದ ಬಳಿಕ ಅವಿದ್ಯೆಯು ನಾಶ ಹೊಂದುವುದು. ವಿದ್ಯೋತ್ಪತ್ತಿಯಾಗುವದಕ್ಕೆ ಪೂರ್ವದಲ್ಲಿ ಅವಿದ್ಯೆಯು ಅಬಾಧಿತನಾಗಿರುವುದರಿಂದ ಇದು ಮಾಡತಕ್ಕದ್ದು, ಇವನು ಮಾಡತಕ್ಕವನು, ಇದರಿಂದ ಈಫಲವುಂಟಾಗುವುದೆಂಬೀ ಕ್ರಿಯಾಕಾರಕಫಲಭೇದವನ್ನುಂಟುಮಾಡಿ ಪ್ರಮಾಣವೆಂಬ ಬುದ್ಧಿಯಿಂದಗ್ರಹಿಸಲ್ಪಟ್ಟು ಸರ್ವಕರ್ಮಗಳಂ ಮಾಡುವುದಕ್ಕೆ ಅವಿದ್ಯೆಯು ಕಾರಣಭೂತ ವಾಗುವುದು. ವಿದ್ಯೋತ್ಪತ್ತಿಯಾದಮೇಲೆ ಅವಿದ್ಯೆಯು ಬಾಧಿತವಾಗಿರುವುದರಿಂದ ಕ್ರಿಯಾಕಾರಕ ಫಲಭೇದವು ಸತ್ಯವಲ್ಲವೆಂಬೀ ಜ್ಞಾನ ಉಂಟಾಗುವುದರಿಂದ ಕರ್ಮಮಾಡುವುದಕ್ಕೆ ಕಾರಣವೇ ಇಲ್ಲವು. ಪ್ರಮಾಣ ಭೂತವಾದ ವೇದದಿಂದ ಕಾಮನಾದಿ ಯುಕ್ತನಾದವನು ಅಂದರೆ ಫಲಾಪೇಕ್ಷಾದಿಗಳುಳ್ಳವನು ನನಿಗೆ ಈ ಕರ್ಮವು ಮಾಡತಕ್ಕದ್ದಾಗಿರುವುದೆಂಬ ಜ್ಞಾನದಿಂದಲ್ಲವೆ ಕರ್ಮಗಳಲ್ಲಿ(ಅದಂ ಮಾಡತಕ್ಕವನು)ಪ್ರವರ್ತಿಸುವನು. ವೇದಗಳು ಅಪೇಕ್ಷಿತಾಂಶವನ್ನು ಪೂರ್ಣಮಾಡುವುದಕ್ಕೆ ತಕ್ಕ ಸಾಧನಗಳನ್ನು ಹೇಳುವುವಾದುದರಿಂದ ಕರ್ಮವಿಧಿಯು ಅಪೇಕ್ಷಾದಿಗಳುಳ್ಳವನ

ವಿಷಯವೆಂಬದಾಗಿ ತಿಳಿಯಬೇಕು. ವಿವೇಕಿಯಾದವನು ಕರ್ಮವಂ ಮಾಡಲು ತಕ್ಕ ಕಾರಣವೇ ಇಲ್ಲವಾದುದರಿಂದ ಅವಿದ್ಯಾಮಾತ್ರವಾದ ಈ ದ್ವೈತಪ್ರಪಂಚ ವೆಲ್ಲವು ರಾತ್ರಿಯಂತೆ ಇರುವುದೆಂದು ತಿಳಿದು ಕರ್ಮದಲ್ಲಿ ಪ್ರವರ್ತಿಸುವದಿಲ್ಲವು. ಯಾವನಾದರೇ ಈ ಭೇದಪ್ರಪಂಚ ವೆಲ್ಲವು ವಾಸ್ತವವಲ್ಲವಾದುದರಿಂದ ರಾತ್ರಿಯಂತಿರುವುದೆಂದು ತಿಳಿಯುವುನೊ ಅಂತಹ ಬ್ರಹ್ಮಜ್ಞಾನಿಗೆ ಸರ್ವಕರ್ಮ ಸನ್ಯಾಸದಲ್ಲಿ ಅಧಿಕಾರವಲ್ಲದೇ ಕರ್ಮದಲ್ಲಿ ಅಧಿಕಾರವಿಲ್ಲವು. ಬ್ರಹ್ಮಜ್ಞಾನಿಗೆ ಸರ್ವಕರ್ಮ ಸನ್ಯಾಸರೂಪವಾದ ಜ್ಞಾನನಿಷ್ಠೆಯಲ್ಲಿಯೇ ಅಧಿಕಾರವೆಂಬೀ ಅರ್ಥವನ್ನು ೫ ನೇ ಅಧ್ಯಾಯದ ೧೭ನೆ ದಾದ "ತದ್ಬುದ್ಧಯಸ್ತದಾತ್ಮಾನಃ" ಎಂಬುವ ಶ್ಲೋಕದಲ್ಲಿ ಪರಮಾತ್ಮನೇ ಹೇಳಿರುವನು.

"ಹ್ಯಾಗಾದರೆ ವಿಧಿವಾಕ್ಯವಿಲ್ಲದಿದ್ದರೆ ಕರ್ಮದಲ್ಲಿ ಪ್ರವೃತ್ತಿಯುಂಟಾಗುವುದಿಲ್ಲವೋ ಆಪ್ರಕಾರ ಜ್ಞಾನಿಯು ಜ್ಞಾನನಿಷ್ಠೆಯಲ್ಲಿ ಪ್ರವರ್ತಿಸುವುದಕ್ಕೂ ವಿಧಿವಾಕ್ಯವು ಅಪೇಕ್ಷಿತವಾಗಿರುವುದೆನ್ನುವುದು" ಕೂಡ ಯುಕ್ತವಲ್ಲವು. ಅದು ಹೇಗೆಂದರೆ ಇಲ್ಲಿ ಆತ್ಮಜ್ಞಾನವು ವಿಧಿವಾಕ್ಯದಿಂದ ಹೇಳಲ್ಪಡುವುದೋ? ಅಥವಾ ಆತ್ಮವೇ ವಿಧಿವಾಕ್ಯದಿಂದ ಹೇಳಲ್ಪಡುವುದೊ ? ವಿಚಾರಿಸಬೇಕು. ಆತ್ಮನೇ ವಿಷಯವಾಗಿರುವುದರಿಂದ ಆತ್ಮಜ್ಞಾನವು ವಿಧಿಸಲ್ಪಡುವುದಿಲ್ಲವು. ಅಂದರೇ ತಿಳಿದುಕೊಳ್ಳುವವನಿಗಿಂತಲೂ ಇತರವಾದ ವಸ್ತುವಿಷಯಜ್ಞಾನವು ವಿಧಿಸಲ್ಪಡುವುದು ಅನುಭವಸಿದ್ಧವಾಗಿರುವುದರಿಂದಲೂ, ಆತ್ಮಜ್ಞಾನದಿಂದ ತಿಳಿಯತಕ್ಕವಸ್ತುವು ಆತ್ಮನೇ ಆಗಿರುವುದರಿಂದಲೂ ಆತ್ಮಜ್ಞಾನವು ವಿಧಿಸಲ್ಪಡುವುದಿಲ್ಲವು. ಈಪ್ರಕಾರವೇ ವೇದರೂಪವಾದ ಪ್ರವರ್ತಕಪ್ರಮಾಣದಿಂದ ಸಾಧ್ಯವಾದವಸ್ತುವು ವಿಧಿಸಲ್ಪಡುವುದಲ್ಲದೆ ಅಸಾಧ್ಯವಾದವಸ್ತುವು ವಿಧಿಸಲ್ಪಡುವುದಿಲ್ಲವು. ಆದುದರಿಂದ ಯೋಚಿಸಿ ನೋಡಿದರೇ ಸಾಧಿಸಲಶಕ್ಯವಾದುದರಿಂದ ಆತ್ಮವೂ ವಿಧಿಸಲ್ಪಡುವುದಿಲ್ಲವು. ಮತ್ತು ತಿಳಿದುಕೊಳ್ಳುವಸ್ತುವು ಆತ್ಮವೇ ಆಗಿರುವುದರಿಂದ ಆತ್ಮನಲ್ಲಿ ವೇದರೂಪವಾದ ಪ್ರವರ್ತಕ ಪ್ರಮಾಣಾಪೇಕ್ಷೆಯೂ ಇಲ್ಲವು. ಅಂದರೆ ಪ್ರಪಂಚದಲ್ಲಿ ಯಾರಿಗೂ ತನ್ನಲ್ಲಿ ತಾನಿರುತ್ತಾನೆಯೊ ? ಇಲ್ಲವೊ? ಎಂಬ ಸಂದೇಹವುಂಟಾಗಲಾರದಲ್ಲವೆ. ತನ್ನಲ್ಲಿ ತಾನಿದ್ದರೇನ ತನಿಗಿಂತಲೂ ಇತರ

ವಾದ ವಸ್ತುವಿಷಯವಾದ ಆಲೋಚನವು ಸಂಗತವಾಗುವುದು. ಆದು ದರಿಂದ ತನ್ನಲ್ಲಿ ತಾನಿರುವ ವಿಷಯದಲ್ಲಿ ಸಂದೇಹವಿಲ್ಲವು. ಇತರ ವಿಷಯವಾದ ಜ್ಞಾನಕ್ಕೆ ಪ್ರವರ್ತಕ ಪ್ರಮಾಣಾಪೇಕ್ಷೆಯು ಅತ್ಯಾವಶ್ಯಕವಾಗಿರುವುದು. ಆದುದರಿಂದ ವಿಧಿವಾಕ್ಯದಿಂದ ಕರ್ಮದಲ್ಲಿ ಪ್ರವೃತ್ತಿಯುಂಟಾಗುವಂತೆ ಆತ್ಮಜ್ಞಾನವು ಮತ್ತು ಆತ್ಮವೂ ವಿಧಿಸಾಪೇಕ್ಷವಾಗಿರುವುದೆಂದು ಹೇಳುವುದು ಸರಿಯಾದದ್ದಲ್ಲವು.

ಆದರೆ ಆತ್ಮಕ್ಕೂ ಆತ್ಮಜ್ಞಾನಕ್ಕೂ ವಿಧಿಸಾಪೇಕ್ಷತೆ ಯಿಲ್ಲವಿದ್ದರೂ ಜ್ಞಾನಿಯಾದವನಿಗೆ ಪ್ರಮಾಣಪ್ರಮೇಯವ್ಯವಹಾರಕ್ಕಾಗಿ ವಿಧ್ಯಪೇಕ್ಷೆಯುಂಟೆಂಬದಾಗಿಯೂ ಹೇಳಲಾಗುವುದಿಲ್ಲವು. ಸಮಸ್ತವಾದ ಪ್ರಮಾಣಗಳಿಗೂ ಪ್ರಾಮಾಣ್ಯವು ಆತ್ಮಜ್ಞಾನ ಉಂಟಾಗುವವರೆಗೂ ವುಂಟಾಗಿರುವುದಲ್ಲದೆ ಆತ್ಮಜ್ಞಾನವುಂಟಾದ ನಂತರವೂ ಕೂಡ ವುಂಟಾಗುವುದಿಲ್ಲವು. ಆದುದರಿಂದ ಆತ್ಮಜ್ಞಾನೋತ್ಪತ್ತಿಯಾದ ಬಳಿಕ ಪ್ರಮಾಣ ಪ್ರಮೇಯವೆಂಬ ವ್ಯವಹಾರಕ್ಕೇನೇ ಅವಕಾಶವಿರಲಾರದು. ಆದುದರಿಂದಲೆ ಪ್ರಮಾಣ ಪ್ರಮೇಯ ವ್ಯವಹಾರಾರ್ಥವಾಗಿ ಜ್ಞಾನಿಯಾದವನಿಗೆ ವಿಧಿಸಾಪೇಕ್ಷತೆ ಯಿಲ್ಲವು. ಆದರೆ ಧರ್ಮಸ್ವರೂಪವಂ ತಿಳಿದಮೇಲೆ ಪ್ರಮಾಣಪ್ರಮೇಯ ವ್ಯವಹಾರಾಂಗೀಕಾರದಂತೆ ಆತ್ಮಸ್ವರೂಪ ಪರಿಜ್ಞಾನಾನಂತರದಲ್ಲಿಯೂ ಪ್ರಮಾಣಪ್ರಮೇಯವ್ಯವಹಾರವನ್ನು ಅಂಗೀಕಾರಮಾಡಕೂಡದೋ, ಅಂದರೆ ಸ್ವಪ್ನಕಾಲಿಕವಾದ ಪ್ರಮಾಣವು ಪ್ರಬೋಧವುಂಟಾದ ಮೇಲೆ ಸ್ವಪ್ನದೊಡನೆ ನಾಶವೊಂದುವಂತೆ ದೇಹಾದಿ ವಿಷಯಕವಾದ ಪ್ರಮಾಣವೂ ಆತ್ಮನಿಗೆ ಪ್ರಮಾತೃತ್ವವನ್ನು (ಅಂದರೆ ತಿಳಿದುಕೊಳ್ಳುವವನ ಧರ್ಮವನ್ನು) ಹೋಗಲಾಡಿಸುತ ತಾನೂ ನಾಶವೊಂದುವುದು. ಅಂದರೆ ಪ್ರಮಾಣವಲ್ಲವೇ ಹೋಗ್ವುದೆಂದರ್ಥವು. ಆದುದರಿಂದ ಪ್ರಮಾಣ ಪ್ರಮೇಯ ವ್ಯವಹಾರದ ನಿಯಮಾರ್ಥವಾಗಿ ವಿಧಿಸಾಪೇಕ್ಷತೆಯಿಲ್ಲವೆಂದು ತಿಳಿಯಬೇಕು. ಲೋಕದಲ್ಲಿಯೂ ಒಂದುವಸ್ತುವಿನ ವಾಸ್ತವಜ್ಞಾನ ವುಂಟಾಗುವವರೆಗೂ ಪ್ರಮಾಣಾಪೇಕ್ಷೆಯುಂಟಾಗುವುದಲ್ಲದೆ ವಸ್ತುವಿನ ವಾಸ್ತವಜ್ಞಾನವುಂಟಾದನಂತರವೂ ಕೂಡ ಪ್ರವರ್ತಕ ಪ್ರಮಾಣಸಾಪೇಕ್ಷತೆ ಇಲ್ಲವಾದುದರಿಂದಲೆ ಅದ್ವೈತಜ್ಞಾನವೂ ವಾಸ್ತವವಾಗಿರುವುದೆಂಬ ಆದಕ್ಕೆ

ವಿಧಿಸಾಪೇಕ್ಷತ್ವವಿಲ್ಲವು. ಕಿಂಚ- ಹಗ್ಗದಲ್ಲಿ ಸರ್ಪಜ್ಞಾನವು ಹೋದಬಳಿಕ ರಜ್ಜು (ಹಗ್ಗ) ಜ್ಞಾನವು ವಾಸ್ತವವಾಗಿ ಉಂಟಾಗುವುದರಿಂದ ರಜ್ಜು ಜ್ಞಾನಕ್ಕೆ ವಿಧಿಸಾಪೇಕ್ಷತ್ವವು ಹೇಗಾದರೆ ಇಲ್ಲವೋ ಅದರಂತೆ ನೀನು ನಾನು ಎಂಬ ಭೇದಜ್ಞಾನವು ನಿವೃತ್ತವಾದನಂತರ ವಾಸ್ತವವಾದ ಅದ್ವೈತಜ್ಞಾನವುಂಟಾಗುವುದರಿಂದ ಅಂತಹ ಅದ್ವೈತಜ್ಞಾನಕ್ಕೆ ವಿಧಿಸಾಪೇಕ್ಷತ್ವವಿಲ್ಲವೆಂದರ್ಥವು. ಆದುದರಿಂ (ಆತ್ಮಜ್ಞಾನವುಳ್ಳವನಿಗೆ ಆ ಆತ್ಮನಿಷ್ಠೆಯು ವಿಧಿಸಾಪೇಕ್ಷತ್ವವಿಲ್ಲದೇನೆ ಆತ್ಮಜ್ಞಾನ ಮಹಾತ್ಮ್ಯದಿಂದಲೇ ಸಿದ್ಧಿಸುವುದರಿಂದ) ಆತ್ಮಜ್ಞಾನವುಳ್ಳವನಿಗೆ ಸನ್ಯಾಸದಲ್ಲಿಯೆ ಅಧಿಕಾರವಲ್ಲದೆ ಕರ್ಮದಲ್ಲಿ ಅಧಿಕಾರವಿಲ್ಲವೆಂದು ಸಿದ್ಧವಾಗಿರುವುದು. ... ... ||೬೯||

(ರಾ|| ಭಾ||) ಈ ರೀತಿಯಾಗಿ ಇಂದ್ರಿಯಗಳನ್ನು ಜಯಿಸಿ ನಿರ್ಮಲಾಂತಃಕರಣವುಳ್ಳವನಿಗುಂಟಾಗುವ ಸಿದ್ಧಿಯನ್ನುಪದೇಶಿಸುತ್ತಾನೆ. ಸಕಲ ಪ್ರಾಣಿಗಳಿಗೂ ಆತ್ಮವಿಷಯವಾದ ಯಾವ ಬುದ್ಧಿಯು ರಾತ್ರಿಕಾಲದಂತೆ ಪ್ರಕಾಶವಿಲ್ಲವೇ ಇರುವುದೋ ಅಂತಹ ಆತ್ಮವಿಷಯವಾದ ಬುದ್ಧಿಯಲ್ಲಿ ಇಂದ್ರಿಯಗಳನ್ನು ಜಯಿಸಿರುವುದರಿಂದ ಪ್ರಸನ್ನಚಿತ್ತನಾದವನು ಜಾಗ್ರದ್ದಶೆಯನ್ನು ಹೊಂದಿದವನಾಗಿರುವನು. ಅಂದರೆ ಯಾವಾಗಲೂ ಆತ್ಮನನ್ನು ಸಾಕ್ಷಾತ್ಕರಿಸುವನು. ಆ ಪ್ರಕಾರವೇ ಸರ್ವಪ್ರಾಣಿಗಳಿಗೂ ಶಬ್ದಾದಿ ವಿಷಯವರ್ಗದಲ್ಲಿ ಆಸಕ್ತವಾಗಿರುವ ಯಾವ ಬುದ್ಧಿಯು ಪ್ರಕಾಶಬಹುಳವಾಗಿರುವುದೋ ಅಂತಹ ಬುದ್ಧಿಯು ಆತ್ಮಸಾಕ್ಷಾತ್ಕಾರವನ್ನು ಮಾಡುವ ಮನನಶೀಲನಿಗೆ ರಾತ್ರಿಯಂತೆ ಪ್ರಕಾಶವಿಲ್ಲದೇ ಇರುವುದು. (ನಿದ್ರಾಪರವಶನಿಗೆ ರಾತ್ರಿಕಾಲದಲ್ಲಿ ಇತರವಿಷಯಗಳು ಹ್ಯಾಗೆ ಗೋಚರವಾಗುವುದಿಲ್ಲವೋ ಆ ಪ್ರಕಾರವೆ ಆತ್ಮಜ್ಞಾನವುಳ್ಳವನಿಗೆ ವಿಷಯಾಪೇಕ್ಷೆ ಮೊದಲಾದವುಗಳು ಗೋಚರವಾಗುವುದಿಲ್ಲವೆಂದು ತಾತ್ಪರ್ಯವು.) ... ||೬೯||

ಮೂ|| ಅಪೂರ್ಯಮಾಣ ಮಚಲಪ್ರತಿಷ್ಠಂ ಸಮುದ್ರ
ಮಾಪಃ ಪ್ರವಿಶಂತಿ ಯದ್ವತ್ । ತದ್ವತ್ಕಾಮಾಯಂ ಪ್ರ
ವಿಶಂತಿ ಸರ್ವೇ ಸಶಾಂತಿಮಾಪ್ನೋತಿ ನಕಾಮಕಾಮೀ ||೭೦||

ಪ || ಆಪೂರ್ಯಮಾಣಂ- ಅಚಲಪ್ರತಿಷ್ಠಂ- ಸಮುದ್ರಂ- ಆಪಃ- ಪ್ರವಿಶಂತಿ - ಯ ದ್ವತ್ | ತದ್ವತ್- ಕಾಮಾಃ- ಯಂ- ಪ್ರವಿಶಂತಿ - ಸರ್ವೇ- ಸಃ- ಶಾಂತಿಂ - ಆಪ್ನೋತಿ- ನ- ಕಾಮಕಾಮೀ || ... ... ... ||೭೦||

ಅ || ಆಪೂರ್ಯಮಾಣಂ - ಜಲಗಳಿಂದ ಪೂರ್ಣವಾಗಿ, ಅಚಲಪ್ರತಿಷ್ಠಂ - ಸ್ಥಿರವಾಗಿರುವ, ಸಮುದ್ರಂ - ಸಮುದ್ರವನ್ನು, ಆಪಃ - ನದೀ ಮೊದಲಾದ ನೀರುಗಳು, ಯದ್ವತ್- ಹೇಗೆ, ಪ್ರವಿಶಂತಿ- ಪ್ರವೇಶಿಸುವುವೋ, (ಶಂ|| ಲಯವಂ ಹೊಂದಿ ಒಂದಾಗಿಯೇ ಆಗುವುವೋ) ತದ್ವತ್ - ಆ ಪ್ರಕಾರವಾಗಿ, ಸರ್ವೇಕಾಮಾಃ - ಸಮಸ್ತವಾದ ವಿಷಯಗಳು, ಯಂ - ಯಾವ ಬ್ರಹ್ಮಜ್ಞಾನಿಯನ್ನು, ಪ್ರವಿಶಂತಿ - ಪ್ರವೇಶಿಸುವುವೋ, ಸಃ- ಅವನು, ಶಾಂತಿಂ- ಮೋಕ್ಷಾನಂದವನ್ನು, ಆಪ್ನೋತಿ - ಹೊಂದುತ್ತಾನೆ. ಕಾಮಕಾಮೀ- ವಿಷಯೇಚ್ಛೆಯುಳ್ಳವನು, ನ- ಮೋಕ್ಷವಂ ಹೊಂದುವುದಿಲ್ಲವು. ||೭೦||

(ರಾ|| ಭಾ||) ತಾನಾಗಿಯೇ ತುಂಬಿ ಏಕರೂಪವಾಗಿರುವ ಸಮುದ್ರದಲ್ಲಿ ನದೀಜಲವೇ ಮೊದಲಾದವುಗಳು ಸೇರಿದರೂ ಸೇರದೇ ಇದ್ದರೂ, ಅದರಿಂದ ಸಮುದ್ರಕ್ಕೆ ವೃದ್ಧಿಕ್ಷಯಗಳು ಹ್ಯಾಗೆ ಉಂಟಾಗುವುದಿಲ್ಲವೋ ಆ ಪ್ರಕಾರವೇ ಇಂದ್ರಿಯಗಳಿಗೆ ಶಬ್ದಾದಿ ವಿಷಯಗಳು ಪ್ರಾಪ್ತವಾದರೂ, ಪ್ರಾಪ್ತವಾಗದಿದ್ದರೂ, ಅದಂ ಲಕ್ಷ್ಯವಿಡದೆ ಯಾವನಾದರೆ ಆತ್ಮ ಸಾಕ್ಷಾತ್ಕಾರದಿಂದ ತೃಪ್ತನಾಗಿರುವನೋ, ಅವನಿಗೇನೆ ಶಾಂತಿಯುಂಟಾಗುವುದು. ಅಲ್ಲದೆ ಶಬ್ದಾದಿ ವಿಷಯಗಳಲ್ಲಿ ಚಪಲಚಿತ್ತನಾಗಿರುವಂತವನಿಗೆ ಶಾಂತಿಯುಂಟಾಗುವುದಿಲ್ಲವು. ||೭೦||

ಮೂ || ವಿಹಾಯಕಾಮಾನ್ ಯಸ್ಸರ್ವಾನ್ ಪುಮಾಂಶ್ಚರತಿನಿಸ್ಪೃಹಃ | ನಿರ್ಮಮೋನಿರಹಂಕಾರಸ್ಸಶಾಂತಿಮಧಿಗಚ್ಛತಿ || ... ... ||೭೧||

ಪ|| ವಿಹಾಯ- ಕಾಮಾನ್- ಯಃ- ಸರ್ವಾನ್- ಪುಮಾನ್- ಚರತಿ- ನಿಸ್ಪೃಹಃ| ನಿರ್ಮಮಃ- ನಿರಹಂಕಾರಃ- ಸಃ- ಶಾಂತಿಂ- ಅಧಿಗಚ್ಛತಿ || ... ||೭೧||

ಅ || ಯಃಪುಮಾನ್ - ಯಾವ ಬ್ರಹ್ಮಜ್ಞಾನಿಯಾದ ಪುರುಷನು, ಸರ್ವಾನ್ಕಾಮಾನ್- ಸಮಸ್ತವಾದವಿಷಯ ಭೋಗಗಳನ್ನು, ವಿಹಾಯ- ಬಿಟ್ಟು, ನಿಸ್ಪೃಹಃ-ಅಪೇಕ್ಷಾರಹಿತನಾಗಿಯೂ, ನಿರ್ಮಮಃ - ನನ್ನದೆಂಬುವ ಮಮತಾಶೂನ್ಯನಾಗಿಯೂ, (ಶಂ|| ತನ್ನ ದೇಹದಲ್ಲಿಯಾದರೂ, ತನ್ನ ದೇಹರಕ್ಷಣಾರ್ಥವಾಗಿಸ್ವೀಕರಿಸುವಪದಾರ್ಥಗಳಲ್ಲಿಯಾದರೂ, ನನ್ನದೆಂಬುವಅಭಿಮಾನಶೂನ್ಯನಾಗಿಯೂ,) ನಿರಹಂಕಾರಃ-ನಾನೆಂಬುವ ಅಭಿಮಾನವಿಲ್ಲದವನಾಗಿಯೂ, (ಶಂ|| ನಾನು ಬ್ರಹ್ಮಜ್ಞಾನಿಯು, ಅನ್ಯರು ಹೀಗಿರಲಾಗುವುದೊ ಎಂಬ ಅಹಂಕಾರರಹಿತನಾಗಿಯೂ. ರಾ|| ದೇಹಾತ್ಮಭ್ರಮರಹಿತನಾಗಿಯೂ.) ಚರತಿ - ಸಂಚರಿಸುವುನೋ,

(ಶಂ॥ ದೇಹಸಂರಕ್ಷಣ ಮಾತ್ರಕ್ಕಾಗಿ ಸಂಚರಿಸುವನೊ, (ರಾ॥) ಪ್ರಾರಬ್ಧ ಕರ್ಮಫಲವನ್ನನುಭವಿಸುತ್ತಾನೆಯೊ) ಸಃ- ಅವನು, ಶಾಂತಿಂ-ಮೋಕ್ಷವನ್ನು, (ಶಂ॥ ಬ್ರಹ್ಮಸ್ವರೂಪವನ್ನು, ಅಧಿಗಚ್ಛತಿ- ಹೊಂದುತ್ತಾನೆ. . ... ... ॥೭೧॥

(ಶಂ॥ ಭಾ॥) ಮನಸ್ಸಿನಿಂದ ಸಮಸ್ತವಾದ ಅಭಿಮಾನಗಳಂ ತ್ಯಾಗಮಾಡಿ ತನ್ನನ್ನು ಕೂಟಸ್ಥನಾದ ಬ್ರಹ್ಮವಾಗಿ ತಿಳಿಯುತಲಿರುವ ಗೃಹಸ್ಥನಿಂದಲೂ ಮೋಕ್ಷವು ಹೊಂದಲ್ಪಡುವುದೆಂತಲೂ, ಗೃಹಸ್ಥನು ಮೋಕ್ಷಾರ್ಹನಾಗುವನೆಂತಲೂ, ತಿಳಿಯುವಿಕೆಯು ಮಾರ್ಗವಲ್ಲದೆ ಬೇರೆಯಲ್ಲವೆಂದು ಈ ಶ್ಲೋಕದಿಂದ ಹೇಳಲ್ಪಡುವುದು. ಮತ್ತು ಶಬ್ದಾದಿ ವಿಷಯಗಳಲ್ಲಿ ಆಸಕ್ತವಾದ ಮನಸ್ಸುಳ್ಳವನಾಗಿಯೂ, ನಾನಾ ಮನೋರಥಗಳಲ್ಲಿಇಚ್ಛೆಯುಳ್ಳವನಾಗಿಯೂ, ಇರುವಗೃಹಸ್ಥನಿಗೆಮೋಕ್ಷವುಂಟಾಗುವುದಿಲ್ಲವೆಂಬದಾಗಿ ಈ ವರೆಗೂ ಹೇಳಿದ ಅರ್ಥವನ್ನೇ ಈ ಶ್ಲೋಕದಿಂದಲೂ ದೃಢಪಡಿಸುತ್ತಾನೆ. ಯಾವನಾದರೆ ಜೀವನಮಾತ್ರಕ್ಕೆ ಉಪಯುಕ್ತವಾದ ಚೇಷ್ಟೆ ಅಥವಾ ಪ್ರವೃತ್ತಿಯುಳ್ಳವನಾಗಿಯೂ, ಒಂದೇ ಪ್ರದೇಶದಲ್ಲಿ ವಾಸಮಾಡಿದರೆ ರಾಗದ್ವೇಷಾದಿಗಳಿಗೆ ಅವಕಾಶವುಂಟಾಗುವುದೆಂಬ ಭಯದಿಂದ ಗ್ರಾಮೈಕರಾತ್ರನಾಗಿ ಅನೇಕಪ್ರದೇಶಗಳಲ್ಲಿ ತಿರುಗುತಲಿರುವವನಾಗಿಯೂ, ಶರೀರ ಜೀವನದಲ್ಲಿಯೂ ಆಶಾರಹಿತನಾಗಿಯೂ, ವಿಷಯಗಳಿದ್ದರೂ ನನ್ನದೆಂಬ ಅಭಿಮಾನವಿಲ್ಲದವನಾಗಿಯೂ, ನಾನಿಂದ್ರಿಯನಿಗ್ರಹವುಳ್ಳವನೆಂಬ ಅಹಂಕಾರ ಶೂನ್ಯನಾಗಿಯೂ ಇರುವಂತವನಾಗಿ ಶರೀರ ಪಾತಪರ್ಯಂತವು ಜೀವನ ಮಾತ್ರ ನಿಮಿತ್ತವಾಗಿ ಸಂಚರಿಸುತಲಿರುವನೊ ಅಂತಹ ಸ್ಥಿತಪ್ರಜ್ಞನು ಸಮಸ್ತವಾದ ಸಂಸಾರದುಃಖದ ನಿವೃತ್ತಿರೂಪವಾದ ನಿರ್ವಾಣವೆಂಬುವ ನಿತ್ಯಾನಂದವನ್ನು ಹೊಂದುವನು. ಅಂದರೆ ಬ್ರಹ್ಮಸ್ವರೂಪನಾಗುವನೆಂದು ತಾತ್ಪರ್ಯವು. ... ॥೭೧॥

(ರಾ॥ ಭಾ॥) ಯಾವನಾದರೆ ಶಬ್ದಾದಿವಿಷಯಗಳೆಲ್ಲವನ್ನು ತ್ಯಜಿಸಿ ಅವುಗಳಲ್ಲಿ ಮಮತಾರಹಿತನಾಗಿ ಅಂದರೆ ಅವುಗಳನ್ನನುಭವಿಸಬೇಕೆಂಬ ಅಪೇಕ್ಷಾಶೂನ್ಯನಾಗಿಯೂ, ಆತ್ಮನಿಗಿಂತಲೂ ಅನ್ಯವಾದ ದೇಹದಲ್ಲಿ ಆತ್ಮನೆಂಬ ಬುದ್ಧಿಯಿಲ್ಲದವನಾಗಿಯೂ ಸಂಚರಿಸುವನೊ ಅಂತವನು ಆತ್ಮಸಾಕ್ಷಾತ್ಕಾರವನ್ನು ಹೊಂದಿ ಶಾಂತಿಯನ್ನು ಹೊಂದುವನು. ॥೭೧॥

(ಗೀ॥ ವಿ॥) "ಆಪೂರ್ಯಮಾಣಂ" ಎಂಬುವ ಶ್ಲೋಕದಲ್ಲಿ ಹೇಳಿರುವ ತಾತ್ಪರ್ಯವನ್ನು ವ್ಯಕ್ತಪಡಿಸುತ್ತಾನೆ.— ಯಾವ ಬ್ರಹ್ಮನಿಷ್ಠೆಯುಳ್ಳ ಪುರುಷನು ನಿಷಿದ್ಧವಾದ ಅಪೇಕ್ಷಾರಹಿತನಾಗಿಯೂ, ತಾನೇ ಸ್ವಾಮಿ ಎಂಬ ಅಭಿಮಾನಶೂನ್ಯನಾಗಿಯೂ, ಇದಂ ನಾನು ಭಕ್ಷಿಸುವೆನೆಂಬ ಕರ್ತೃತ್ವಾಭಿಮಾನವಿಲ್ಲದವನಾಗಿಯೂ ಇರುತ ಸಕಲ ವಿಷಯಗಳಲ್ಲಿ ಸಂಬಂಧವಂ ಬಿಟ್ಟು ಸಂಚರಿಸುವನೋ (ಕರ್ತೃತ್ವಾದ್ಯಭಿಮಾನ ಶೂನ್ಯತೆಯು ವಿಷಯ ಪರಿತ್ಯಾಗಕ್ಕೆ ಕಾರಣವಾಗುವುದೆಂದು ತಾತ್ಪರ್ಯವು.) ಅಂತವನೇ ಪುರುಷಶಬ್ದಕ್ಕೆ ಅರ್ಹನಾಗುವನು. ಇತರನಾದವನನ್ನು ಪಶುವೆಂಬದಾಗಿ ತಿಳಿಯಬೇಕು. ಅಥವಾ ಅಂತವನೇ ಶಾನ್ತಿಯನ್ನು ಹೊಂದುತ್ತಾನೆ. ಇದು ಜ್ಞಾನಿಯಾದವನ ಸ್ತುತಿಯಾಗಿರುವುದು. ... ... ॥೭೧॥

ಮೂ ॥ ಏಷಾ ಬ್ರಾಹ್ಮೀ ಸ್ಥಿತಿಃಪಾರ್ಥ ನೈನಾಂಪ್ರಾಪ್ಯವಿಮುಹ್ಯತಿ । ಸ್ಥಿತ್ವಾಸ್ಯಾಮಂತಕಾಲೇಪಿ ಬ್ರಹ್ಮನಿರ್ವಾಣಮೃಚ್ಛತಿ ॥ ... ॥೭೨॥

ಇತಿ ಶ್ರೀ ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನ ಸಂವಾದೇ ಸಾಂಖ್ಯಯೋಗೋನಾಮ ದ್ವಿತೀಯೋಽಧ್ಯಾಯಃ.

---

ಪ॥ ಏಷಾ- ಬ್ರಾಹ್ಮೀ- ಸ್ಥಿತಿಃ- ಪಾರ್ಥ- ನ- ಏನಾಂ- ಪ್ರಾಪ್ಯ- ವಿಮುಹ್ಯತಿ । ಸ್ಥಿತ್ವಾ- ಅಸ್ಯಾಂ- ಅಂತಕಾಲೇ- ಅಪಿ- ಬ್ರಹ್ಮನಿರ್ವಾಣಂ- ಋಚ್ಛತಿ ॥ ॥೭೨॥

ಅ॥ ಹೇ ಪಾರ್ಥ- ಎಲೈ ಅರ್ಜುನನೇ ! ಏಷಾ - ಇದುವರೆಗೂ ಹೇಳಿರುವುದು, ಬ್ರಾಹ್ಮೀಸ್ಥಿತಿಃ- ಬ್ರಹ್ಮವನ್ನು ಸೇರಲು ಯೋಗ್ಯವಾದ ನಿಷ್ಠೆಯು. ಏನಾಂ- ಈ ಬ್ರಹ್ಮಜ್ಞಾನ ನಿಷ್ಠೆಯನ್ನು, ಪ್ರಾಪ್ಯ-ಹೊಂದಿ, ನವಿಮುಹ್ಯತಿ- ಸಂಸಾರ ಮೋಹವಂ ಹೊಂದುವುದಿಲ್ಲವು ಅಸ್ಯಾಂ- ಈ ಬ್ರಹ್ಮಜ್ಞಾನನಿಷ್ಠೆಯಲ್ಲಿ, ಅಂತಕಾಲೇ - ಮರಣಕಾಲದಲ್ಲಿ, (ಶಂ॥ರಾ॥ಗೀ॥ವಿ॥ಅಂತಕಾಲೇಪಿ-ಅಂತ್ಯಕಾಲದಲ್ಲಿಯೂಕೂಡ,ಮರಣಪರ್ಯಂತವಾಗಿ ಬ್ರಹ್ಮನಿಷ್ಠೆಯಲ್ಲಿರುವಂತವನಿಗೆ ಮೋಕ್ಷವೆಂದರ್ಥವು ಸೂಚಿತವಾಗುವುದು.) ಸ್ಥಿತ್ವಾಪಿ- ಇದ್ದರೂ ಕೂಡ, ಬ್ರಹ್ಮನಿರ್ವಾಣಂ- ಬ್ರಹ್ಮಾನಂದವನ್ನು, (ಶಂ॥ ಬ್ರಹ್ಮನಲ್ಲಿ ಲಯವನ್ನು. ಗೀ॥ ವಿ॥ ಪ್ರಾಕೃತಶರೀರವಿಲ್ಲದ ಬ್ರಹ್ಮನನ್ನು.) ಋಚ್ಛತಿ- ಹೊಂದುವನು. ॥೭೨॥

(ಶಂ॥ಭಾ॥) ಅಲ್ಲಲ್ಲಿ ಸಂಕ್ಷೇಪವಾಗಿಯೂ,ವಿಸ್ತಾರವಾಗಿಯೂ,

ತೋರಿಸಲ್ಪಟ್ಟ ಜ್ಞಾನನಿಷ್ಠೆಯನ್ನು ಮುಮುಕ್ಷುವಾದ ಅಧಿಕಾರಿಗಳಿಗೆ ಇದರಲ್ಲಿ ಪ್ರವೃತ್ತಿಯುಂಟಾಗುವುದಕ್ಕಾಗಿ ಸ್ತುತಿಸುತ್ತಾನೆ,— ಎಲೈ ಅರ್ಜುನನೇ ! ನಿನಗಿದುವರೆಗೂ ಉಪದೇಶಿಸಿರುವುದೇ ಕರ್ಮಸನ್ಯಾಸವಂ ಮಾಡಿ, ಬ್ರಹ್ಮ ರೂಪ ದಿಂದಲೇ ಇರುವ ಸ್ಥಿತಿಯು. ಈ ಸ್ಥಿತಿಗೆ ಬಂದಿರುವಂತವನು ಪುನಶ್ಚ ಮೋಹವನ್ನು ಹೊಂದಲಾರನು. (ಯೌವನವಯಸ್ಸಿನಲ್ಲಿಯೇ ಕರ್ಮಸನ್ಯಾಸವಂ ಮಾಡಿ ಬ್ರಹ್ಮನಿಷ್ಠೆಯಲ್ಲಿದ್ದರೆ ಉತ್ತಮೋತ್ತಮವು, ಅದಿಲ್ಲದಿದ್ದರೂ) ಅಂತಕಾಲದಲ್ಲಿ ಅಂದರೆ ಮರಣಕಾಲದಲ್ಲಿ ಯಾದರೂ ಈ ಬ್ರಹ್ಮನಿಷ್ಠಾರೂಪವಾದ ಸ್ಥಿತಿಯಲ್ಲಿರುವಂತವನು ಕೂಡ ಮೋಕ್ಷವಂ ಹೊಂದುವನು. ಆದುದರಿಂದ ಬ್ರಹ್ಮಚರ್ಯದ ಮೊದಲು ಕರ್ಮಸನ್ಯಾಸವಂ ಮಾಡಿ ಯಾವಜ್ಜೀವವೂ ಬ್ರಹ್ಮೈಕ್ಯಾನು ಸಂಧಾನವಂ ಮಾಡುವನು ಮುಕ್ತನಾಗುವನೆಂಬ ವಿಷಯದಲ್ಲಿ ಹೇಳಬೇಕಾದದ್ದೇನಿರುವುದು. ಅಂತವನು ಮುಕ್ತನಾಗುವನೆಂಬುವುದರಲ್ಲಿ ಸಂದೇಹವಿಲ್ಲವೆಂದು ತಾತ್ಪರ್ಯವು. ... ... ||೭೨||

(ರಾ|| ಭಾ||) ಎಲೈ ಅರ್ಜುನನೇ! ಆತ್ಮನ ಯಥಾರ್ಥ ಸ್ವರೂಪವನ್ನರಿತು ಅದರಿಂದ ಕೂಡಿ ಫಲಾಪೇಕ್ಷಾರಹಿತವಾಗಿ ಮಾಡತಕ್ಕದ್ದೆಂದು ನಾವು ಹೇಳಿದ ಕರ್ಮನಿಷ್ಠೆಯು, ಜ್ಞಾನಯೋಗವೆಂಬುವ ಸ್ಥಿತಪ್ರಜ್ಞತೆಗೆ ಸಾಧನವಾಗಿರುವುದು. ಈಜ್ಞಾನನಿಷ್ಠೆಯು ಪರಬ್ರಹ್ಮಪ್ರಾಪಕವಾಗಿರುವುದು. ಇಂತಹ ಕರ್ಮನಿಷ್ಠೆಯನ್ನು ಹೊಂದಿದವನು ಪುನಶ್ಚ ಸಂಸಾರವನ್ನು ಹೊಂದುವುದಿಲ್ಲವು. ಪುರುಷನು ಅಂತ್ಯಕಾಲದಲ್ಲಿಯಾದರೂ ಈ ಜ್ಞಾನ ನಿಷ್ಠೆಯಲ್ಲಿ ರುವಂತವನಾದರೆ ಸುಖರೂಪವಾದ ಆತ್ಮನನ್ನು ಹೊಂದುವನು. ಈ ಪ್ರಕಾರವಾಗಿ ಆತ್ಮನ ಯಥಾರ್ಥ ಸ್ವರೂಪವನ್ನು, ಮತ್ತು ಯುದ್ಧರೂಪವಾದ ಕರ್ಮವು ಅಂತಹ ಆತ್ಮ ಪ್ರಾಪ್ತಿಗೆ ಸಾಧನವಾಗುವದೆಂಬ ಆಕಾರವನ್ನೂ ತಿಳಿಯದೆ ದೇಹಾತ್ಮ ಭ್ರಾಂತಿಯಿಂದ ಮೋಹಿತನಾಗಿ ಆ ಮೋಹದಿಂದ ಯುದ್ಧವಂ ಮಾಡುವುದಿಲ್ಲವೆಂದು ಅದರಿಂದ ನಿವೃತ್ತನಾಗಿರುವ ಅರ್ಜುನನ ಅಜ್ಞಾನವನ್ನು ನಿವೃತ್ತಿ ಮಾಡುವುದಕ್ಕೋಸ್ಕರವಾಗಿ ಶ್ರೀಕೃಷ್ಣಪರಮಾತ್ಮನು ನಿತ್ಯವಾದ ಆತ್ಮ ವಿಷಯವಾಗಿರುವ (ತಾ|| ಚಂ|| ಸಂಖ್ಯಾ ಅಂದರೆ ಬುದ್ಧಿ

ಯು, ಅದರಿಂದುಂಟಾಗುವ ಆತ್ಮಜ್ಞಾನವು ಸಾಂಖ್ಯಬುದ್ಧಿ ಎನ್ನಲ್ಪಡುವುದು.) ಸಾಂಖ್ಯಬುದ್ಧಿಯನ್ನೂ, ಮತ್ತು ಆ ಬುದ್ಧಿಯಿಂದ ಕೂಡಿರುವ ಸ್ಥಿತಪ್ರಜ್ಞತಾ ಎಂಬುವ ಜ್ಞಾನನಿಷ್ಠೆಗೆ ಸಾಧನವಾಗಿರುವ ಕರ್ಮಯೋಗಕ್ಕೆ ಬೇಕಾದಬುದ್ಧಿಯನ್ನೂ ಈ ದ್ವಿತೀಯಾಧ್ಯಾಯದಲ್ಲಿ ಅರ್ಜುನನಂ ವ್ಯಾಜೀಕರಿಸಿ ಸರ್ವಲೋಕಾನುಗ್ರಹಾರ್ಥವಾಗಿ ಉಪದೇಶಿಸಿದನು. ಇದನ್ನೇ ಶ್ರೀ ಯಾಮುನಾಚಾರ್ಯರೂ ಶ್ರೀಮದ್ಗೀತಾರ್ಥಸಂಗ್ರಹದಲ್ಲಿ “ ನಿತ್ಯಾತ್ಮಾಸಂಗಕರ್ಮೇಹಾ ” ಎಂಬುವ ಶ್ಲೋಕದಿಂದ ಹೇಳಿರುತ್ತಾರೆ.

---

## ಅ ದ್ವೈ ತ ಸಿ ದ್ಧಾ ನ್ತಾ ನು ಸಾ ರ ವಾ ದ

### ೧ನೇ ಅಧ್ಯಾಯದ ಸಂಗ್ರಹ ಶ್ಲೋಕವು.

ಶ್ಲೋ॥ ಸದ್ಯೋಮೋಕ್ಷಾಧಿಕಾರೀ ಸಭವತಿಖಲುಯಃ
ಪಾಪಭೀರುರ್ವಿ ತೃಷ್ಣಸ್ತದ್ವಕ್ಪಾರ್ಥೋऽಸ್ತಿತಸ್ಮಾನ್ನಿ
ಜಕುಲ ದಮನಾದಾ ಪ್ರಜ್ಯ ಭೋಗಾನ್ನಿವೃತ್ತಃ । ಮತ್ವೈ
ವಂ ಯಾದವೇಶೋऽಸ್ಯವಪದವಪು ಕರೋದ್ಬ್ರಹ್ಮ ವಿ
ದ್ಯೋಪದೇಶಂ ಭೂಭೃದ್ಧರ್ಮಾನುರೂಪಂ ತದಿದಮಭಿತಿಂ
ತಂತ್ವಾದಿ ಮಧ್ಯಾಯಕೃತ್ಯಂ ॥ ॥೧॥

ತಾ ॥ ಪಾಪಭೀತಿ ಯುಳ್ಳವನಾಗಿಯೂ, ದುರಾಶಾ ರಹಿತನಾಗಿಯೂ, ಇರುವವನು ಬ್ರಹ್ಮನಿಷ್ಠೆಗೆ ಅರ್ಹನಾದವನಲ್ಲವೆ ? ಅರ್ಜುನನೂ ಆರೀತಿಯಾಗಿರುವನು. ಆದುದರಿಂದಲೆ ಕೌರವರನ್ನು ಸಂಹಾರವಾಡುವುದರಿಂದ ಪಾಪವು ಪ್ರಾಪ್ತವಾಗುವುದೆಂದು ಭಯಪಡುತ ಪ್ರಾಪ್ತವಾಗುವ ರಾಜ್ಯದಲ್ಲಿ ಅಪೇಕ್ಷೆಯನ್ನು ಕೂಡ ಬಿಟ್ಟನೆಂಬದಾಗಿ ಶ್ರೀ ಕೃಷ್ಣನು ಊಹಿಸಿ ರಾಜಯೋಗ್ಯವಾದ ಬ್ರಹ್ಮವಿದ್ಯೆಯನ್ನು ಕೂಡಲೇ ಉಪದೇಶಿಸಿದನೆಂಬ ಸಂಗತಿಯು ಮೊದಲನೆಯ ಅಧ್ಯಾಯದಲ್ಲಿ ವ್ಯಕ್ತವಾಡಲಟ್ಟಿತು. ॥೧॥

೨ನೇ ಅಧ್ಯಾಯದ ಸಂಗ್ರಹಶ್ಲೋಕವು.

ಶ್ಲೋ॥ ಶೋಕೋದೇಹಾತ್ಮಬುದ್ಧ್ಯಾನನುಭವತಿವೃಥಾ
ಯೇನದೇಹಾತಿರಿಕ್ತೋದೇಹದೃಷ್ಟ್ಯೈಕಆತ್ಮಾವಿಭುರನು
ಪಹತೋಹಂತ್ಯಹನ್ಯತ್ವಶೂನ್ಯಃ। ತಸ್ಯಜ್ಞಾನಾನ್ನಶೋ
ಕಸ್ತದಿಹನಿಜಮನಶ್ಶುದ್ಧಿತಸ್ಸ್ಯಾತ್ಸ್ವಧರ್ಮಾದ್ವೇದೋ
ಕ್ತಸ್ಸದ್ವಿತೀಯೇಭ್ಯಶ ಮಿಮುಮವದ ತ್ಸಾಂಖ್ಯ ಯೋ
ಗಾಧಿಕಾರಂ॥ ೨॥

ತಾ॥ ತನಿಗಾಗಲಿ ಇತರರಿಗಾಗಲಿ ಮರಣವು ಪ್ರಾಪ್ತವಾಗುವ ಕಾಲದಲ್ಲಿ ಪಾಮರನಿಗೆ ದೇಹವೇ ಆತ್ಮನೆಂಬ ಅಜ್ಞಾನದಿಂದ ವ್ಯರ್ಥವಾಗಿ ದುಃಖವುಂಟಾಗುವದು. ಜ್ಞಾನಿಯಾದವನಿಗೆ ಆ ರೀತಿ ಯುಂಟಾಗಕೂಡದು. ಏತಕ್ಕೆಂದರೆ,—ದೇಹವನ್ನು ತಿಳಿಯುವಂತವನಾಗಿಯೂ, ಸರ್ವವ್ಯಾಪಿಯಾಗಿಯೂ, ನಿತ್ಯನಾಗಿಯೂ, ಕೊಲ್ಲಿಸಿಕೊಳ್ಳುವುದು ಕೊಲ್ಲುವುದು ಇಲ್ಲದವನಾಗಿಯೂ, ಇರುವ ಆತ್ಮನು ದೇಹಕ್ಕಿಂತಲೂ ಅನ್ಯನಾಗಿರುವನು. ಆ ರೀತಿಯಾದ ಆತ್ಮನಂ (ಸ್ವಸ್ವರೂಪವನ್ನು) ತಿಳಿದುಕೊಂಡವನಾದರೆ ಶೋಕಕ್ಕೆ ಅವಕಾಶವಿಲ್ಲವು. ಅಂತಹ ವಿವೇಕವು ಚಿತ್ತಶುದ್ಧಿಯಿಂದಲೂ, ಆ ಚಿತ್ತಶುದ್ಧಿಯು ನಿಷ್ಕಾಮ ಕರ್ಮಗಳನ್ನಾಚರಿಸುವದರಿಂದಲೂ ಉಂಟಾಗುವುದು. ಅವುಗಳೇ ತಮ್ಮತಮ್ಮಗಳ ವರ್ಣಾಶ್ರಮಾನುಗುಣವಾಗಿ ಅನುಷ್ಠಿಸತಕ್ಕವೆಂದು ವೇದಗಳಲ್ಲಿ ಹೇಳಲ್ಪಟ್ಟಿರುವುದು. ಈ ರೀತಿಯಾದ ಸಾಂಖ್ಯಯೋಗವಿವರವನ್ನು ಈ ಎರಡನೇ ಅಧ್ಯಾಯದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿದನು.

ಶ್ರೀಮದ್ಗೀತಾರ್ಥ ಸಂಗ್ರಹವು.

ವಿಶಿಷ್ಟಾದ್ವೈತ ಸಿದ್ಧಾಂತವು.

ಶ್ಲೋ॥ ನಿತ್ಯಾತ್ಮಾ ಸಂಗಕರ್ಮೇಹಾಗೋಚರಾಸಾಂಖ್ಯ
ಯೋಗಧೀಃ । ದ್ವಿತೀಯೇ ಸ್ಥಿತಧೀಲಕ್ಷಾ ಪ್ರೋಕ್ತಾ ತ
ನ್ಮೋಹಶಾಂತಯೇ । ॥೬॥

ತಾ॥ ಈ ದ್ವಿತೀಯಾಧ್ಯಾಯದಲ್ಲಿ ಅರ್ಜುನನ ಮೋಹವನ್ನು ಶಾಂತಿಗೊಳಿಸಲು ನಿತ್ಯವಾದ ಆತ್ಮವಿಷಯವಾಗಿರುವ ಸಾಂಖ್ಯಬುದ್ಧಿಯೂ, ಅಂತಹ ಸಾಂಖ್ಯಬುದ್ಧಿಪೂರ್ವಕವಾದ ಸ್ಥಿತ ಪ್ರಜ್ಞತಾ ಎಂಬುವ ಜ್ಞಾನಯೋಗಕ್ಕೆ ಸಾಧನವಾಗುವ ಕರ್ಮಯೋಗ ವಿಷಯವಾದ ಬುದ್ಧಿಯೂ ಹೇಳಲ್ಪಟ್ಟಿತು. ॥೬॥

ಇತಿ ದ್ವಿತೀಯಾಧ್ಯಾಯ ಸಂಗ್ರಹಶ್ಲೋಕಃ.

## ಶ್ರೀಮನ್ನಿಗಮಾನ್ತ ಮಹಾದೇಶಿಕ ರನುಗ್ರಹಿಸಿರುವ ಶ್ರೀಮದ್ಗೀತಾರ್ಥಸಂಗ್ರಹದಲ್ಲಿ ದ್ವಿತೀಯಾಧ್ಯಾಯಸಂಗ್ರಹ ಗಾಥೆಯು.

(೦)

ಉಡಲುಮೞಿನ್ದಿಡು ಮುಳ್ಳುಯಿರೊನ್ಱುೞಿಯಾದೆನ್ನೈಪ್ಪೋಲ್
ವಿಡುಮುಮಪಱ್ಱು ವಿಡಾತತಡೈತ್ತಕಿರಿಶೈಕಳೇ-
ಕಡುಕ ವುನಕ್ಕುಯಿರ್ಕಾಟ್ಟುಂನಿನ್ನೈವತನಾಲುಳದಾಂ
ವಿಡುಮುಯಲೆನ್ಱು ವಿಶಯನ್ನೈತ್ತೇತ್ತಿನ್ಱವಿತ್ತಕನೆ. ॥೩॥

ತಾ॥ ಈ ಪ್ರಕಾರವಾಗಿ ಶಾಸ್ತ್ರೋಪೋದ್ಘಾತ ರೂಪವಾದ ಪ್ರಥಮಾಧ್ಯಾಯಾರ್ಥಗಳಂ ಸಂಗ್ರಹವಾಗಿ ಒಂದುಗಾಥೆಯಿಂದ ಹೇಳಿ ಈ ಮೂರನೇಗಾಥೆಯಿಂದ "ನಿತ್ಯಾತ್ಮಾಸಂಗಕರ್ಮೇಹಾ+ತನ್ಮೋಹಶಾಂತಯೇ" ಎಂಬುವ ಸಂಗ್ರಹಶ್ಲೋಕೋಕ್ತಪ್ರಕಾರವಾಗಿ "ನತ್ವೇವಾಹಂ" ಎಂಬುವ ಶ್ಲೋಕದ ಮೊದಲು ಹೇಳಲ್ಪಟ್ಟ ಶ್ರೀಭಗವದ್ಗೀತೆಯ ದ್ವಿತೀಯಾಧ್ಯಾಯಾರ್ಥಗಳನ್ನು ಸಂಗ್ರಹಿಸಿ ಹೇಳುತ್ತಾರೆ. ವಿತ್ತಕನ್- ಆಶ್ಚರ್ಯಪಡತಕ್ಕ ಚರಿತ್ರವುಳ್ಳವನಾದ ಸರ್ವೇಶ್ವರನು, ಈ ಪದಕ್ಕೆ ವಾಕ್ಯಾಂತದಲ್ಲಿರುವ ಕ್ರಿಯಾಪದದೊಡನೆ ಅನ್ವಯವು. ಇಲ್ಲಿ ಸಾರಥ್ಯರೂಪವಾದ ಪ್ರೇಷ್ಯಕೃತ್ಯವನ್ನು ಮಾಡುತಲಿರುವವನಾದವನೇ ತತ್ವೋಪದೇಶರೂಪವಾದ ಆಚಾರ್ಯಕೃತ್ಯವನ್ನು ಮಾಡುವುದರಿಂದ ಇವನನ್ನು "ವಿತ್ತಕನ್- ಆಶ್ಚರ್ಯಚೇಷ್ಟಿತ" ನೆಂಬದಾಗಿ ಹೇಳಿತು. ನೀನು ಯುದ್ಧದಿಂದ ನಿವೃತ್ತನಾಗುವುದು ಆಚಾರ್ಯಾದಿಗಳ ದೇಹನಾಶ

ಭಯದಿಂದಲೊ ? ಅಥವಾ ಆತ್ಮನಾಶ ಭಯದಿಂದಲೊ ? ಎಂಬದಾಗಿ ವಿಕಲ್ಪಿಸಿ ಪ್ರಥಮವಿಕಲ್ಪಕ್ಕೆ ಉತ್ತರವನ್ನು ಹೇಳುತ್ತಾನೆ. ಉಡಲವ್- ಶರೀರವು, ಅಳಿನ್ದಿಡುಮ್-ನಶಿಸಿ ಹೋಗುವದು, "ಇಡುಮ್"ಎಂಬುವ ಪದದಿಂದ ಶಸ್ತ್ರಪ್ರಹಾರಾದಿಗಳಿಲ್ಲದಿದ್ದರೂ ಪರಿಣಾಮೈಕ ಸ್ವಭಾವವುಳ್ಳದ್ದಾದುದರಿಂದ ದೇಹವುಸ್ವಯಮೇವನಾಶಹೊಂದುವುದೆಂಬಅರ್ಥವುಸೂಚಿತವಾಗುವದು. ಇದು "ಅನ್ತವಂತ ಇಮೇದೇಹಾಃ"ಇತ್ಯಾದಿಗಳಿಂದ ಪ್ರಪಂಚಿತವಾಗಿ ಸಂಗ್ರಹಶ್ಲೋಕದಲ್ಲಿ ಆತ್ಮ ನಿತ್ಯತ್ವವಂ ಹೇಳುವುದರಿಂದ ಪ್ರಕಾಶಿತವಾದ ದೇಹನಶ್ವರತ್ವವನ್ನು ಹೇಳಿದಪ್ರಕಾರ ವೆಂದರಿಯಬೇಕು. ಇದರಿಂದ ನೀನು ಯುದ್ಧವಂಮಾಡದೆ ನಿವೃತ್ತನಾದರೂ ಅವರುಗಳ ಶರೀರ ನಾಶವು ಸಿದ್ಧವಾದುದರಿಂದ ಇದು ಶೋಕಸ್ಥಾನವಲ್ಲ ವೆಂಬೀಅಂಶವು ಫಲಿತವಾಯಿತು. ದ್ವಿತೀಯ ವಿಕಲ್ಪವನ್ನು ಪರಿಹರಿಸುತ್ತಾನೆ, ಉಳ್- ಒಳಗೆ ಇರುತಲಿರುವ, ಉಯಿರೊನ್ನು- ಆತ್ಮ ನೊಬ್ಬನು, ಅಳಿಯಾದು- ನಾಶಹೊಂದಲಾರನು. ಇಲ್ಲಿ ಆತ್ಮನಿಗೆ ಅಂತರ್ವರ್ತಿಯೆಂಬ ಆಕಾರದಿಂದ ಅತ್ಯಂತ ಸೂಕ್ಷ್ಮತ್ವವು ಸಿದ್ಧವಾಗಿರುವುದರಿಂದ "ನೈನಂಛಿಂದಂತಿಶಸ್ತ್ರಾಣಿ" ಇತ್ಯಾದಿ ಶ್ಲೋಕಗಳಿಂದ ಹೇಳಲ್ಪಟ್ಟ ಛೇದನ ದಹನ ಶೋಷಣಾದಿಗಳಿಗೆ ಅರ್ಹನಲ್ಲವೆಂಬುವ ಅರ್ಥವು ಸೂಚಿತವಾಯಿತು. ಎನ್ನೈಪ್ಪೋಲ್- ಪರಮಾತ್ಮನಾಗಿರುವ ಸರ್ವೇಶ್ವರನಾದ ನನ್ನಂತೆ, ಇದರಿಂದ ಜೀವನಿತ್ಯತ್ವವಂ ತಿಳಿಯದ ಅರ್ಜುನನಂ ಕುರಿತು ಈಶ್ವರ ನಿತ್ಯವನ್ನು ಪನ್ಯಾಸಮಾಡಿ "ಯಥಾಹಂಸರ್ವೇಶ್ವರಃ- ಸರ್ವೇಶ್ವರನಾದ ನಾನು ನಿತ್ಯನೆಂಬುವುದರಲ್ಲಿ ಹ್ಯಾಗೆ ಸಂಶಯ ವಿಲ್ಲವೊ ಆ ಪ್ರಕಾರವಾಗಿಯೇ ಜೀವಾತ್ಮರಾದ ನೀವುಗಳು ನಿತ್ಯರೆಂಬದಾಗಿ ತಿಳಿದುಕೊಳ್ಳಬೇಕೆಂ" ಬದಾಗಿ ಭಾಷ್ಯದಲ್ಲಿ ಹೇಳಿರುವಂತೆ ಪರಮಾತ್ಮದೃಷ್ಟಾಂತದಿಂದ ಜೀವನಿತ್ಯತ್ವವು ದರ್ಶಿತವಾಗಿ ಆತ್ಮನಾಶ ಪ್ರಯುಕ್ತವಾದ ಶೋಕಕ್ಕೆ ಅವಕಾಶವಿಲ್ಲವೆಂಬುವುದು ಸೂಚಿತವಾಯಿತು. ಈ ಪ್ರಕಾರವಾಗಿ ಹೇಳುವ ಪಕ್ಷದಲ್ಲಿ ದೇಹಾತ್ಮ ಸ್ವರೂಪ ಸ್ವಭಾವ ವಿವೇಕವುಳ್ಳವನಿಗೆ ಸ್ವೇಚ್ಛಾಪ್ರಯುಕ್ತವಾದ ಹಿಂಸಾದಿಗಳಿಗೆ ಅವಕಾಶವು ಉಂಟಾಗುವುದರಿಂದ ಹಿಂಸಾನಿಷೇಧಕವಾದ ಪ್ರಮಾಣಗಳಿಗೆ ವ್ಯಾಕೋಪವುಂಟಾಗುವುದಿಲ್ಲವೊ ? ಅಂದರೆ ಈ ಶಂಕಾಪರಿಹಾರಕ್ಕಾಗಿ

ಮುಂದಿನ ವಾಕ್ಯವು ಪ್ರವರ್ತಿಸಿರುವುದು. ಅಡೈನ್ದ- ನಿವೇಶಿತಗಳಾದ, (ಶಾಸ್ತ್ರಚೋದಿತಗಳಾದ) ಕರಿಶೈಕಳ್- ಕ್ರಿಯೆಗಳು, ವಿಡಾತತು- ಬಿಡತಕ್ಕದ್ದಲ್ಲವಾಗಿರುವುದು. ಪಱ್ಱು(ತ್ತು)-ಸಂಬಂಧವು, (ಅಂದರೆ ಫಲಾಪೇಕ್ಷೆಯು) ವಿಡುವದು- ಬಿಡತಕ್ಕದ್ದಾಗಿರುವುದು. ಇದರಿಂದ ಬ್ರಾಹ್ಮಣಾದಿ ಚಾತುರ್ವರ್ಣ್ಯಕ್ಕೂ "ಪ್ರತಿಗ್ರಹ, ಯುದ್ಧ, ವಾಣಿಜ್ಯ, ಶಿಶ್ರೂಷಾ" ದಿ ರೂಪದಿಂದ ವಿಭಾಗಿಸಲ್ಪಟ್ಟು ಶ್ರುತಿಯಿಂದ ದರ್ಶಿತಗಳಾದ ಕರ್ಮಗಳಲ್ಲಿ ಫಲಾಪೇಕ್ಷೆಯನ್ನುಮಾತ್ರ ಬಿಟ್ಟು ಕರ್ಮಗಳನ್ನವಶ್ಯವಾಗಿ ಅನುಷ್ಠಿಸಬೇಕೆಂದು ಹೇಳಿತು. ಫಲಸಂಗತ್ಯಾಗವನ್ನುಮಾತ್ರವೇ ಇಲ್ಲಿ ಹೇಳಿರುವುದರಿಂದ ಕರ್ಮಸ್ವರೂಪತ್ಯಾಗವು ಶಾಸ್ತ್ರವಿರುದ್ಧವೆಂಬದಾಗಿ ತೋರಿಸಲ್ಪಟ್ಟಿತು. "ಕರ್ಮಣ್ಯೇವಾಧಿಕಾರಸ್ತೇ- ಯೋಗಸ್ಥಃ ಕುರುಕರ್ಮಾಣಿ ಸಂಗಂತ್ಯಕ್ತ್ವಾ ಫಲಾನಿಚ" ಇತ್ಯಾದ್ಯರ್ಥವು ಇದರಿಂದ ಸಂಗ್ರಹಿಸಲ್ಪಟ್ಟಿತು. ದೇಹಾತ್ಮ ವಿವೇಕವನ್ನು ತೋರಿಸುವುದು ಯುದ್ಧದಲ್ಲಿ ಪ್ರವೃತ್ತಿ ಯುಂಟಾಗುವದಕ್ಕಾಗಿರುವುದರಿಂದ, ಸ್ವಪರಹಿಂಸಾಪ್ರಸಕ್ತಿಯಿಲ್ಲವೆಂದು ಮೇಲೆ ಹೇಳಿರುವ ಶಂಕೆಗೆ ಸಮಾಧಾನವು ಸೂಚಿತವಾಯಿತು. ಈ ಅರ್ಥವು ಶ್ರೀಮದ್ಗೀತಾಭಾಷ್ಯತಾತ್ಪರ್ಯಚಂದ್ರಿಕೆಯಲ್ಲಿ ಕಂಠೋಕ್ತವಾಗಿರುವುದು. ಇನ್ನು ಮುಂದೆ ಆತ್ಮ ಯಾಥಾತ್ಮ್ಯ ವಿವೇಕಪೂರ್ವಕವಾಗಿ ಫಲಾದಿಸಂಗವಂಬಿಟ್ಟು ಭಗವದಾರಾಧನವೆಂಬುವ ಒಂದೇರೂಪದಿಂದ ಮಾಡತಕ್ಕ ಕರ್ಮಾನುಷ್ಠಾನರೂಪವಾಗಿರುವ ಕರ್ಮಯೋಗಕ್ಕೆ ಫಲವು ಹೇಳಲ್ಪಡುವುದು. ಅದಿನಾಲ್-ಅಂತಹ ಸಂಗರಹಿತವಾದ ಕರ್ಮಯೋಗದಿಂದ,ಉನಕ್ಕು-ದೇಹಾತ್ಮವಿವೇಕವಿಲ್ಲದವನಾಗಿ ಈಗ ನನ್ನಿಂದ ಕೇಳಲ್ಪಟ್ಟ ದೇಹಾತ್ಮವಿವೇಕಮುಳ್ಳನಿನಗೆ,ಉಯಿರ್-ಆತ್ಮಸ್ವರೂಪವನ್ನು,ಕಾಟ್ಟುಮ್-ಸಾಕ್ಷಾತ್ಕರಿಸುವುದಾದ, ನಿನೈವು- ಸ್ಮೃತಿಯು, ಸ್ಮೃತಿಸಂತಾನರೂಪವಾದಧ್ಯಾನವೆಂದು ತಾತ್ಪರ್ಯವು. (ಆತ್ಮಾವಲೋಕನಸಾಧನವಾಗಿಯೂ, ದೇಹಾದಿ ವಿಲಕ್ಷಣವಾದ ಆತ್ಮಸ್ವರೂಪವನ್ನು ಯಾವಾಗಲೂ ಚಿಂತಿಸುತ್ತಿರುವದನ್ನೇ ಸ್ವರೂಪವಾಗಿವುಳ್ಳದ್ದಾಗಿಯೂ, ಇರುವ ಸ್ಥಿತಪ್ರಜ್ಞತೆಯ ಅಪರಪರ್ಯಾಯವಾದ ಜ್ಞಾನಯೋಗವೆಂದರ್ಥವು.) ಕಡುಕ- ಶೀಘ್ರವಾಗಿ, ಉಳತಾಮ್- ಉಂಟಾಗುವುದು. (ಅಥವಾ- ಹುಟ್ಟುವುದು,)

ಮೆಯಲ್- ಮೋಹವನ್ನು, ವಿಡು- ಬಿಟ್ಟುಬಿಡು, ಎನ್ನು- ಎಂಬದಾಗಿ, ವಿಶಯನ್ಕೆ-ಅರ್ಜುನನನ್ನು, ತೇಱ್ಱಿ(ತ್ತಿ)ನಾ೯-ಸಮಾಧಾನಪಡಿಸಿದನು. ಕರ್ಮಯೋಗಕ್ಕೆ ಫಲರೂಪವಾಗಿ ಸ್ಥಿತಪ್ರಜ್ಞತಾರೂಪವಾದ ಜ್ಞಾನಯೋಗವುಂಟಾಗುವದರಿಂದ ಸ್ವಜಾತ್ಯುಚಿತವಾದ ಯುದ್ಧಾದಿಸತ್ಕರ್ಮಗಳಂ ಮಾಡುತಲಿರೆಂದರ್ಜುನನಿಗೆ ಬೋಧಿಸಿ ಅವನಿಗುಂಟಾದ ಶೋಕವನ್ನು ಸಮಾಧಾನಪಡಿಸಿದನೆಂದು ತಾತ್ಪರ್ಯವು. ||೨||

ಇಂತು ಶ್ರೀ ಗೀತಾರ್ಥಸಾರದಲ್ಲಿ ದ್ವಿತೀಯಾಧ್ಯಾಯವು
ಸ ಮಾ ಪ್ತ ಮಾ ಗಿ ರು ವು ದು.

---

## ಶ್ರೀ ಭಗವದ್ಗೀತೆಯೊಳು ಕರ್ಮಯೋಗವೆಂಬ ತೃತೀಯಾಧ್ಯಾಯವು.

---

(ಶಂ|| ಭಾ||) ಶಾಸ್ತ್ರಾರಂಭಕ್ಕೆ ಕಾರಣಗಳಾಗಿಯೂ, ಪ್ರವೃತ್ತಿ ನಿವೃತ್ತಿಗಳನ್ನೆ ವಿಷಯವಾಗಿ ವುಳ್ಳದ್ದಾಗಿಯೂ, ಇರುವ ಸಾಂಖ್ಯಬುದ್ಧಿ ಯೋಗಬುದ್ಧಿ ಎಂಬೀ ಯೆರಡು ಬುದ್ಧಿಗಳು ಭಗವಂತನಿಂದ ಹೇಳಲ್ಪಟ್ಟಿತು. ಅಂದರೆ ಗೀತಾಶಾಸ್ತ್ರಾರಂಭಕ್ಕೆ ಅಪೇಕ್ಷಿತವಾಗಿ ಬ್ರಹ್ಮಜ್ಞಾನವಂ ಹೊಂದುವುದಕ್ಕೆ ಫಲವೂ ಸಾಧನವೂ ಆಗಿರುವ ಸಾಂಖ್ಯಯೋಗಗಳೆಂಬ ಬುದ್ಧಿದ್ವಯಗಳು ಭಗವಂತನಿಂದ ಉಪದೇಶಿಸಲ್ಪಟ್ಟಿತೆಂದು ತಾತ್ಪರ್ಯವು. ದ್ವಿತೀಯಾಧ್ಯಾಯೋಕ್ತವಾದ ಅರ್ಥಗಳು ಅಥವಾ ಯೆರಡು ಪ್ರಕಾರಗಳಾದ ಬುದ್ಧಿಗಳು ಹೇಳುತಲಿರುವಲ್ಲಿ "ಪ್ರಜಹಾತಿಯದಾಕಾಮಾ೯ ಅ|| ೨|| ಶ್ಲೋ|| ೫೫" ಎಂಬುವ ಶ್ಲೋಕದ ಮೊದಲು ಅಧ್ಯಾಯ ಪೂರ್ತಿಪರ್ಯಂತ ವಾಗಿ ಸಾಂಖ್ಯಬುದ್ಧಿಯನ್ನಾಶ್ರಯಿಸಿದವರಿಗೆ ಸನ್ನ್ಯಾಸವು ಕರ್ತ್ತವ್ಯವೆಂದು ಹೇಳಿ "ಏಷಾಬ್ರಾಹ್ಮೀಸ್ಥಿತಿಃಪಾರ್ಥ ಅ|| ೨|| ಶ್ಲೋ|| ೭೨||" ಎಂಬುವ ಶ್ಲೋಕದಿಂದ ಆ ಸನ್ನ್ಯಾಸಿಗಳು ಬ್ರಹ್ಮನಿಷ್ಠೆಯಿಂದಲೇ ಕೃತಾರ್ಥರಾಗುವುರೆಂದು ಹೇಳಲ್ಪಟ್ಟಿತು. ಅರ್ಜುನನಿಗೊ "ಕರ್ಮಣ್ಯೇ ವಾಧಿಕಾರಸ್ತೆ ಅ|| ೨|| ಶ್ಲೋ|| ೪೭||" ಎಂಬುವ ಶ್ಲೋಕದಿಂದ ಯೋಗ

ಬುದ್ಧಿಯನ್ನಾಶ್ರಯಿಸಿ ಕರ್ಮವನ್ನೆ ಮಾಡಬೇಕೆಂದು ಹೇಳಿದನಲ್ಲದೆ ಆ ಕರ್ಮದಿಂದಲೇ ಮೋಕ್ಷರೂಪವಾದ ಶ್ರೇಯಃಪ್ರಾಪ್ತಿಯನ್ನು ಹೇಳಲಿಲ್ಲವು. ಆದುದರಿಂದ ಭಕ್ತನಾಗಿಯೂ, ಮುಮುಕ್ಷು (ಮೋಕ್ಷಾಪೇಕ್ಷೆಯುಳ್ಳವನಾಗಿಯೂ) ವಾಗಿಯೂ, ಇರುವ ನನಗೆ ಸಾಕ್ಷಾನ್ಮೋಕ್ಷ ಸಾಧನವಾದ ಸಾಂಖ್ಯಬುದ್ಧಿ ನಿಷ್ಠಾಪ್ರಕಾರವನ್ನು ಹೇಳಿಯು ಅನೇಕಗಳಾದ ಅನರ್ಥಗಳಿಂದ ಕೂಡಿರುವುದಾಗಿಯೂ, ಪರಂಪರೆಯಿಂದಲಾದರೂ ಅನಿಶ್ಚಿತವಾದ ಮೋಕ್ಷಫಲವುಳ್ಳದ್ದಾಗಿಯೂ, ಇರುವ ಕರ್ಮಯೋಗದಲ್ಲಿಯೇ ನನಗಧಿಕಾರವೆಂದುಪದೇಶಿಸಿದನಲ್ಲವೆ, ಎಂಬದಾಗಿ ಅರ್ಜುನನು ವ್ಯಾಕುಲಪಟ್ಟು ಈ ಅಧ್ಯಾಯದ ಪ್ರಥಮಶ್ಲೋಕದಲ್ಲಿ ಹೇಳಿರುವಂತೆ ಪ್ರಶ್ನವಂಗೈದನು.

(ದ್ವಿತೀಯಾಧ್ಯಾಯದಿಂದ ಶ್ರೀ ಭಗವದುಕ್ತವಾದ ಅರ್ಥವಿಶೇಷದಲ್ಲಿ ಸಂದೇಹಯುಕ್ತನಾಗಿ ಅಂತಹ ಸಂದೇಹ ಪರಿಹಾರಾರ್ಥವಾಗಿ ಈ ಅಧ್ಯಾಯದ ಮೊದಲನೇ ಶ್ಲೋಕದಿಂದ ಅರ್ಜುನನುಪ್ರಶ್ನವಂ ಮಾಡುವದರಿಂದ ಈ ಯೆರಡು ಮೂರನೆ ಅಧ್ಯಾಯಗಳಿಗೆ ಉತ್ಥಾಪ್ಯೋತ್ಥಾಪಕ (ಹುಟ್ಟುವುದು ಹುಟ್ಟಿಸುವುದೆಂಬ) ವೆಂಬ ಸಂಗತಿಯನ್ನು ತಿಳಿದುಕೊಳ್ಳಬೇಕು.)

ಮತ್ತು ಜ್ಞಾನನಿಷ್ಠರು ಕೃತಾರ್ಥರಾಗುವರು, ಕರ್ಮನಿಷ್ಠರು ಕೃತಾರ್ಥರಾಗಲಾರರೆಂಬ ವಿಭಾಗವನ್ನುಮಾಡಿ ಹೇಳಿದ ಈ ಶಾಸ್ತ್ರದಲ್ಲಿ "ಲೋಕೇಸ್ಮಿನ್ದ್ವಿವಿಧಾನಿಷ್ಠಾ ಅ॥ ೩ ಶ್ಲೋ॥ ೩॥" (ಈ ಲೋಕದಲ್ಲಿ ಯೆರಡುವಿಧಗಳಾದ ನಿಷ್ಠೆಗಳು ಪೂರ್ವದಲ್ಲಿ ನನ್ನಿಂದ ಹೇಳಲ್ಪಟ್ಟಿತು.) ಎಂಬುವ ಭಗವದ್ವಾಕ್ಯವು ಕೂಡ, ಅರ್ಜುನನ ಪ್ರಶ್ನಕ್ಕೆ ಸಹಕಾರಿಯಾಗಿರುವುದು.

ಕೆಲವರು ಅರ್ಜುನ ಪ್ರಶ್ನಾರ್ಥವನ್ನು ಬೇರೇವಿಧವಾಗಿ ಹೇಳಿ ಭಗವಂತನ ಪ್ರತ್ಯುತ್ತರವನ್ನು ಆ ಪ್ರಶ್ನೆಗೆ ಪ್ರತಿಕೂಲವಾಗಿ ವರ್ಣನಮಾಡುವರು. ಮತ್ತು ಗೀತಾಶಾಸ್ತ್ರಾರಂಭದ ಉಪೋದ್ಘಾತದಲ್ಲಿ ಹೇಳಲ್ಪಟ್ಟ ಗೀತಾಶಾಸ್ತ್ರಾರ್ಥಕ್ಕೆ ವ್ಯತಿರಿಕ್ತವಾಗಿ ಈ ತೃತೀಯಾಧ್ಯಾಯದ ಮೊದಲಿನಲ್ಲಿ ಪ್ರಶ್ನೋತ್ತರಗಳಿಗೆ ಅರ್ಥವನ್ನು ಹೇಳುತ್ತಾರೆ. ಅದು ಹೇಗಂದರೆ ವೃತ್ತಿಕಾರರು ಗೀತಾಶಾಸ್ತ್ರದ ಉಪೋದ್ಘಾತದಲ್ಲಿ

ಬ್ರಹ್ಮಚರ್ಯ ಗಾರ್ಹಸ್ಥ್ಯವಾನಪ್ರಸ್ಥ ಯತ್ಯಾಶ್ರಮಗಳೆಂಬ ಸಮಸ್ತವಾದ ಆಶ್ರಮಗಳಿಗೂ ಜ್ಞಾನಕರ್ಮ ಸಮುಚ್ಚಯವು (ಜ್ಞಾನಕರ್ಮಗಳೆರಡೂ ಸೇರಿ ಮೋಕ್ಷಸಾಧನಗಳಾಗುವುದು) ಗೀತಾಶಾಸ್ತ್ರದಲ್ಲಿ ನಿರೂಪಿತವಾದ ಅರ್ಥವೆಂದು ಹೇಳಿದರು. ಮತ್ತು ಜೀವಿಸಿರುವ ಪರ್ಯಂತವು ಮಾಡತಕ್ಕದ್ದೆಂದು ವೇದಗಳಿಂದಚೋದಿತಗಳಾದ ಕರ್ಮಗಳನ್ನು ಬಿಟ್ಟು ಕೇವಲಜ್ಞಾನಾವಲಂಬನ ಮಾತ್ರದಿಂದ ಯೆಷ್ಟುಮಟ್ಟಿಗೂ ಮೋಕ್ಷಸಿದ್ಧಿಯಾಗುವುದಿಲ್ಲವಾದುದರಿಂದ ವೇದ ಚೋದಿತಗಳಾದ ಕರ್ಮಗಳಂ ತ್ಯಜಿಸಿ ಕೇವಲ ಜ್ಞಾನದಿಂದಲೇ ಮೋಕ್ಷವುಂಟಾಗುವುದೆಂಬ ಮತವು ಜೀವಿಸಿರುವ ಪರ್ಯನ್ತವು ಕರ್ಮಗಳಂ ಮಾಡುತಲಿರಬೇಕೆಂಬ ಶ್ರುತಿಗಳಿಂದ ನಿಯಮವಾಗಿ ನಿಷೇಧಿಸಲ್ಪಡುವುದರಿಂದ ಕರ್ಮಜ್ಞಾನ ಸಮುಚ್ಚಯವಲ್ಲದೆ ಕೇವಲ ಜ್ಞಾನದಿಂದ ಮೋಕ್ಷ ವುಂಟಾಗುವುದೆಂಬ ಮತವು ಅಂಗೀಕರಿಸತಕ್ಕದಲ್ಲವೆಂದು ಹೇಳಿ ಇದಕ್ಕೆ ವಿರುದ್ಧವಾಗಿ ಈ ಮೂರನೇ ಅಧ್ಯಾಯಾರಂಭದಲ್ಲಿ ನಾಲ್ಕುವಿಧಗಳಾದ ಆಶ್ರಮಗಳಲ್ಲಿ ಯಾವ ಆಶ್ರಮವನ್ನಾದರೂ ಸ್ವೀಕರಿಸಬಹುದೆಂಬದಾಗಿ ಆಶ್ರಮವಿಕಲ್ಪವನ್ನು ತೋರಿಸುತಲಿರುವ ವೃತ್ತಿಕಾರರಿಂದ ಜೀವಿತಕಾಲ ಪರ್ಯಂತವೂ ಮಾಡತಕ್ಕದ್ದೆಂದು ವೇದಚೋದಿತಗಳಾದ ಕರ್ಮಗಳಿಗೇನೆ ಪರಿತ್ಯಾಗವು ಹೇಳಲ್ಪಟ್ಟಿತು. ಇಂತಹ ವಿರುದ್ಧವಾದ ಅರ್ಥವನ್ನು ಹೇಗೆತಾನೇ ಪರಮಾತ್ಮನು ಅರ್ಜುನನಿಗೆ ಹೇಳುವನು. ಇದಂ ಕೇಳತಕ್ಕವನಾದ ಅರ್ಜುನನಾದರೂ ಇಂತಹ ವಿರುದ್ಧಾರ್ಥವನ್ನು ಹೇಗೆತಾನೆ ತಿಳಿದುಕೊಳ್ಳುವನು. ಮತ್ತು ವೇದೋಕ್ತಕರ್ಮರಹಿತವಾದ ಕೇವಲಜ್ಞಾನದಿಂದ ಮೋಕ್ಷವಿಲ್ಲದೇ ಹೋಗುವಿಕೆಯು ಗೃಹಸ್ಥಾಶ್ರಮಿಗಳಿಗಲ್ಲದೆ ಇತರಾಶ್ರಮಿಗಳಿಗಲ್ಲ ವೆಂದೀರೀತಿಯಾಗಿ ಹೇಳುವುದರಿಂದ ಪೂರ್ವೋತ್ತರ ವಿರೋಧಗಳು ಪರಿಹೃತವಾಗಲಾರದೊ? ಅಂದರೆ ಇದೂ ಪೂರ್ವೋತ್ತರ ವಿರೋಧವುಳ್ಳದಾಗಿಯೇ ಇರುವುದು. ಅದು ಹೇಗೆಂದರೆ! ಗೀತಾಶಾಸ್ತ್ರೋಪೋದ್ಘಾತದಲ್ಲಿ ಸರ್ವಾಶ್ರಮಿಗಳಿಗೂ ಜ್ಞಾನಕರ್ಮಸಮುಚ್ಚಯವು ಈ ಶಾಸ್ತ್ರದಲ್ಲಿ ಹೇಳಲ್ಪಟ್ಟ ಅರ್ಥವೆಂದು ಪ್ರತಿಜ್ಞೆ ಮಾಡಿ ಈ ಮೂರನೇ ಅಧ್ಯಾಯದ ಆರಂಭದಲ್ಲಿ ಅದಕ್ಕೆ ವಿರುದ್ಧವಾಗಿ ಗೃಹಸ್ಥಾಶ್ರಮಿಗಳಿಗಿಂತಲೂ ಇತರರಾದ ಆಶ್ರಮಿಗಳಿಗೆ ಕೇವಲಾತ್ಮ

ಜ್ಞಾನವಿಂದಲೇ ಮೋಕ್ಷ ವುಂಟಾಗುವುದೆಂದು ಹೇಳುವುದರಿಂದ ಪೂರ್ವಾಪರವಿರೋಧವು ಬರುವುದು.

ಮತ್ತು ಈ ಪೂರ್ವಾಪರವಿರೋಧ ಪರಿಹಾರಾರ್ಥವಾಗಿ, "ವೇದೋಕ್ತಕರ್ಮಗಳನ್ನಪೇಕ್ಷಿಸಿ, ವೇದಚೋದಿತ ಕರ್ಮರಹಿತವಾದ ಕೇವಲ ಜ್ಞಾನವಿಂದಲೇ ಗೃಹಸ್ಥರಿಗೆ ಮೋಕ್ಷಪ್ರಾಪ್ತಿ ಯಾಗುವುದಿಲ್ಲವೆಂದು ಹೇಳಿತು. ಆದರೆ, ವೇದೋಕ್ತಕರ್ಮಗಳಿಲ್ಲದಿದ್ದರೂ ಜ್ಞಾನದಿಂದ ಕೂಡಿದ ಸ್ಮಾರ್ತಕರ್ಮಗಳುಂಟಾಗಿರುವಲ್ಲಿ ಕೇವಲ ಜ್ಞಾನವೆಂಬುವುದು ಹೇಗೆ ಸಂಭವಿಸುವುದೆಂದು ಯೋಚಿಸದೆ ಜ್ಞಾನದೊಡನೆ ಸ್ಮಾರ್ತ ಕರ್ಮವುಂಟಾಗಿದ್ದರೂ ಅದಿಲ್ಲದಂತೆ ತಿಳಿದು ಕೇವಲ ಜ್ಞಾನವೆಂದು ಹೇಳಿತು" ಎಂಬುವದಾಗಿ ಒಂದುವೇಳೆ ಹೇಳಿದರೂ ಇದುಕೂಡ ವಿರುದ್ಧವಾಗಿಯೇ ಇರುವುದು. ಹೇಗೆಂದರೆ ಗೃಹಸ್ಥರಿಗೆ ಶ್ರೌತಕರ್ಮದಿಂದ ಕೂಡಿದ ಜ್ಞಾನವು ಮೋಕ್ಷಹೇತುವೆಂಬದಾಗಿಯೂ, ಇತರರಿಗೆ ಸ್ಮಾರ್ತಕರ್ಮದಿಂದ ಕೂಡಿದ ಜ್ಞಾನವು ಮುಕ್ತಿ ಹೇತುವೆಂಬದಾಗಿಯೂ, ಈಗ ಹೇಳಿದಂತೆ ಆಗುವುದು. ಈರೀತಿಯಾಗಿ ಹೇಳಲು ತಕ್ಕ ಕಾರಣವು ಕಾಣಲ್ಪಡಲಿಲ್ಲವು. ಮತ್ತು ಗೃಹಸ್ಥಾಶ್ರಮಿಗಳಿಗೇನ ಸ್ಮಾರ್ತಕರ್ಮಸಹಿತವಾದ ಜ್ಞಾನದಿಂದ ಮೋಕ್ಷ ವುಂಟಾಗುವುದಿಲ್ಲವೆಂಬದಾಗಿಯೂ ಇತರಾಶ್ರಮಿಗಳಿಗೆ ಸ್ಮಾರ್ತಕರ್ಮ ಸಮುಚ್ಚಿತವಾದ ಜ್ಞಾನದಿಂದ ಮೋಕ್ಷ ವುಂಟಾಗುವುದೆಂಬದಾಗಿಯೂ, ಹೇಳಿದ ಮಾತುಗಳು ವಿವೇಕಿಗಳಿಂದ ತಿಳಿಯಲಶಕ್ಯವಾಗಿರುವುದು. ಮತ್ತು ಊರ್ಧ್ವ ರೇತಸ್ಸುಗಳು ಅಂದರೆ ಸನ್ಯಾಸಿಗಳಿಗೆಸ್ಮಾರ್ತಕರ್ಮ ಸಮುಚ್ಚಿತವಾದ ಜ್ಞಾನದಿಂದ ಮೋಕ್ಷವುಂಟಾಗುವುದೆಂದರೆ ಅದೇರೀತಿಯಿಂದ ಗೃಹಸ್ಥರಿಗೂ ಸ್ಮಾರ್ತಕರ್ಮದಿಂದ ಕೂಡಿದ ಜ್ಞಾನದಿಂದಲೆ ಮೋಕ್ಷವುಂಟಾಗಬೇಕಲ್ಲದೆ ಶ್ರೌತಕರ್ಮ ಸಮುಚ್ಚಿತವಾದ ಜ್ಞಾನದಿಂದ ಮೋಕ್ಷವುಂಟಾಗುವುದೆಂದು ಹೇಳಕೂಡದು.

ಆದರೆ " ಶ್ರೌತಸ್ಮಾರ್ತಗಳೆಂಬ ಯೆರಡು ಕರ್ಮಗಳಿಂದಲೂ ಕೂಡಿದ ಜ್ಞಾನವಿಂದ ಗೃಹಸ್ಥರಿಗೆ ಮೋಕ್ಷವೆಂಬದಾಗಿಯೂ, ಊರ್ಧ್ವರೇತಸ್ಸುಗಳಿಗೆಂದರೊ ಸ್ಮಾರ್ತಕರ್ಮಮಾತ್ರದಿಂದ ಕೂಡಿದಜ್ಞಾನದಿಂದಲೇ ಮೋಕ್ಷವೆಂಬುವುದಾಗಿಯೂ,ಹೇಳುವ ಪಕ್ಷದಲ್ಲಿಇದುಕೂಡಯುಕ್ತ

ವಲ್ಲವು. ಅದು ಹೇಗೆಂದರೆ,—ಗೃಹಸ್ಥರಿಗೆ ಶ್ರೌತಸ್ಮಾರ್ತ ಕರ್ಮಗಳೊಡನೇ ಕೂಡಿದ ಜ್ಞಾನವು ಮೋಕ್ಷಸಾಧನವಾಗುವ ಪಕ್ಷದಲ್ಲಿ ಆ ಕರ್ಮಗಳು ಬಹು ದುಃಖರೂಪವಾಗಿರುವುದರಿಂದ ಗೃಹಸ್ಥಾಶ್ರಮಿಗಳ ಶಿರಸ್ಸಿನಲ್ಲಿ ಆಯಾಸ ಬಹುಳವಾದ ಕರ್ಮವನ್ನಿಟ್ಟಂತೇ ಆಗುವುದು. ( ಈ ವಿಭಾಗದಿಂದ ಕ್ಲೇಶಾತ್ಮಕವಾದ ಕರ್ಮಗಳಿಂದ ಬಹುಳವಾದ ಗೃಹಸ್ಥಾಶ್ರಮವು ಅನುಪಾದೇಯವೆಂಬದಾಗಿ ಫಲಿಸುವದರಿಂದ ಆರೀತಿಯಾಗಿ ಹೇಳಕೂಡದೆಂದು ತಾತ್ಪರ್ಯವು) ಮತ್ತು "ಆಯಾಸ ಬಹುಳವಾದ ಶ್ರೌತಸ್ಮಾರ್ತ ಕರ್ಮಸಮುಚ್ಚಿತವಾದ ಜ್ಞಾನವಿರುವುದರಿಂದ ಗೃಹಸ್ಥರಿಗೇನೇ ಮೋಕ್ಷ ವುಂಟಾಗುವುದಲ್ಲದೆ ಯಾವಜ್ಜೀವಾದಿಶ್ರುತಿಚೋದಿತಗಳಾದ ನಿತ್ಯಕರ್ಮಗಳಿಲ್ಲದೇ ಇರುವುದರಿಂದ ಆಯಾಸವಿಲ್ಲವಾದುದರಿಂದ ಸನ್ಯಾಸಿಗಳಿಗೆ ಮೋಕ್ಷವಿಲ್ಲವೆಂದು" ಹೇಳುವುದಾದರೆ ಸಮಸ್ತಗಳಾದ ಉಪನಿಷತ್ತುಗಳಲ್ಲಿಯೂ, ಇತಿಹಾಸ ಪುರಾಣ ಯೋಗಶಾಸ್ತ್ರಗಳಲ್ಲಿಯೂ, ಮುಮುಕ್ಷುವಾದವನಿಗೆ ಜ್ಞಾನಾಂಗವಾಗಿ ಅಂದರೆ ಜ್ಞಾನವಂ ಸಾಧಿಸುವುದಕ್ಕಾಗಿ ಸರ್ವ ಕರ್ಮಸನ್ಯಾಸ ವಿಧಾನವಿರುವುದರಿಂದಲೂ, ಶ್ರುತಿಸ್ಮೃತಿಗಳಲ್ಲಿ ಯಾವ ಅಶ್ರಮದಲ್ಲಿದ್ದರೂ ಸನ್ಯಾಸವನ್ನಾಶ್ರಯಿಸಬಹುದೆಂಬದಾಗಿಯೂ ಕ್ರಮವಾಗಿ ಬ್ರಹ್ಮಚರ್ಯಾದಿಯಾದ ಯೆಲ್ಲಾ ಆಶ್ರಮಗಳಲ್ಲಿದ್ದು ಸನ್ಯಾಸವನ್ನವಲಂಬಿಸಬಹುದೆಂತಲೂ ಹೇಳಿರುವುದರಿಂದ ಶ್ರೌತಕರ್ಮವಿಲ್ಲದೇ ಇರುವುದರಿಂದ ಸನ್ಯಾಸಿಗಳಿಗೆ ಮೋಕ್ಷವಿಲ್ಲವೆಂದು ಹೇಳುವುದೂ ಯುಕ್ತವಲ್ಲವು.

"ಆದರೆ ಸರ್ವಾಶ್ರಮಿಗಳಿಗೂ ತಮ್ಮತಮ್ಮಗಳಿಗೆ ವಿಹಿತಗಳಾದ ಕರ್ಮಗಳಿಂದ ಕೂಡಿದ ಜ್ಞಾನದಿಂದಲೇ ಮೋಕ್ಷವುಂಟಾಗುವುದರಿಂದ ಜ್ಞಾನಕರ್ಮ ಸಮುಚ್ಚಯವು ಸಿದ್ಧವಾಗಿಯೇ ಇರುವುದೆಂದರೆ ಒಂದುವೇಳೆ ಸರ್ವಾಶ್ರಮಿಗಳಿಗೂ ಜ್ಞಾನಕರ್ಮ ಸಮುಚ್ಚಯವು ವಿಧಿಸಲ್ಪಟ್ಟಿದ್ದರೂ ಮುಮುಕ್ಷುವಾದವನಿಗೆ ಸರ್ವಕರ್ಮ ಸನ್ಯಾಸವಿಧಾನ ವಿರುವದರಿಂದ ಜ್ಞಾನಕರ್ಮ ಸಮುಚ್ಚಯವೆಂಬುವುದು ಸರಿಯಾದದ್ದಲ್ಲವು. (ಇಲ್ಲಿ ಆಶ್ರಮಕರ್ಮಗಳು ಜ್ಞಾನಸಾಧನಗಳಾಗಿದ್ದರೂ ಶ್ರುತಿ ಸ್ಮೃತಿಗಳಲ್ಲಿ ಸರ್ವಕರ್ಮ ಸನ್ಯಾಸ ವಿಧಾನ ವಿರುವುದರಿಂದ ಜ್ಞಾನವು ಹುಟ್ಟಿದಮೇಲೆ ಅಂತಹ ಜ್ಞಾನವು ತಾನಾಗಿಯೇ ಮೋಕ್ಷವಂ ಕೊಡುವುದಲ್ಲದೆ

ಮೋಕ್ಷರೂಪವಾದ ಫಲದಲ್ಲಿ ಕರ್ಮವನ್ನಪೇಕ್ಷಿಸುವುದಿಲ್ಲವು. ಮತ್ತು "ಪುತ್ರರಲ್ಲಿಯೂ, ಭಾರ್ಯೆಗಳಲ್ಲಿಯೂ, ಧನಗಳಲ್ಲಿಯೂ, ಈ ಲೋಕಗಳಲ್ಲಿಯೂ, ಅಪೇಕ್ಷೆಯಂಬಿಟ್ಟು, ಅನಂತರ ಸನ್ಯಾಸವನ್ನಾಶ್ರಯಿಸುವರೆಂಬ" ಬೃಹದಾರಣ್ಯಕದಲ್ಲಿ(೫-೫-೧)ನೇ ವಾಕ್ಯವು— "ಆದುದರಿಂದ ವೈರಾಗ್ಯವುಳ್ಳವರಿಗೆ ಸನ್ಯಾಸವನ್ನಧಿಕವಾಗಿ ಹೇಳುವುರೆಂ." ತೈತ್ತರೀಯದಲ್ಲಿ(೪-೭೯)ನೇ ವಾಕ್ಯವು—"ಸನ್ಯಾಸವೇ ಅಧಿಕವಾದದ್ದಾಯಿತು" ಎಂಬ ಅದೇ (೪-೭೮)ನೇವಾಕ್ಯವು- "ಕರ್ಮದಿಂದಲೂ, ಸಂತಾನದಿಂದಲೂ,ಧನದಿಂದಲೂ,ಮೋಕ್ಷವಂಹೊಂದಲಾರರು ಸನ್ಯಾಸದಿಂದಲೇ ಮೋಕ್ಷವಂ ಹೊಂದುವುರು" ಎಂಬ ಅದೇ (೪-೧೨) ನೇ ವಾಕ್ಯವು- "ಬ್ರಹ್ಮಚರ್ಯಾಶ್ರಮದಿಂದಲೇ ಸನ್ಯಾಸವನ್ನಾಶ್ರಯಿಸಬೇಕು" ಎಂಬ(ಜಾ॥ಉ॥೪) ನೇ ವಾಕ್ಯವು-ಮತ್ತು ಮೋಕ್ಷಧರ್ಮದಲ್ಲಿ (೨೪೧-೭)ನೇಶ್ಲೋಕವು "ತ್ಯಜಧರ್ಮಮಧರ್ಮಂಚಉಭೇಸತ್ಯಾನೃತೇತ್ಯಜ। ಉಭೇಸತ್ಯಾನೃತೇತ್ಯಕ್ತ್ವಾಯೇನತ್ಯಜಸಿತತ್ತ್ಯಜ ॥ ಸಂಸಾರಮೇವ ನಿಸ್ಸಾರಂದೃಷ್ಟ್ವಾಸಾರದಿದೃಕ್ಷಯಾ। ಪ್ರವ್ರಜನ್ತ್ಯಕೃತೋದ್ವಾಹಾಃ ಪರಂವೈರಾಗ್ಯಮಾಶ್ರಿತಾಃ" (ಅರ್ಥವು) ಧರ್ಮವನ್ನೂ ಅಧರ್ಮವನ್ನೂ ಸತ್ಯವನ್ನೂ ಅಸತ್ಯವನ್ನೂ ಬಿಟ್ಟುಬಿಡು. ಧರ್ಮಾಧರ್ಮಗಳನ್ನೂ ಸತ್ಯಾಸತ್ಯಗಳನ್ನೂ ಯಾವಜ್ಞಾನದಿಂದ ಬಿಟ್ಟುಬಿಡುತ್ತೀಯೊ ಆ ಜ್ಞಾನವನ್ನು ಕೂಡ ಬಿಡು. ಸಂಸಾರವನ್ನು ಸಾರರಹಿತವನ್ನಾಗಿ ನೋಡಿ ಸಾರವಾದದ್ದನ್ನು ನೋಡಬೇಕೆಂಬ ಅಪೇಕ್ಷೆಯಿಂದ ವಿವಾಹವಂ ಮಾಡಿಕೊಳ್ಳದೆ ಶ್ರೇಷ್ಠವಾದ ವೈರಾಗ್ಯವನ್ನವಲಂಬಿಸಿದವರಾಗಿ ಸನ್ಯಾಸವನ್ನವಲಂಬಿಸುವುರು. ಎಂಬದಾಗಿ ಬೃಹಸ್ಪತಿಯು—ಮತ್ತು "ಕರ್ಮಣಾಬದ್ಧ್ಯತೇ ಜಂತುರ್ವಿದ್ಯಯಾಚವಿಮುಚ್ಯತೆ। ತಸ್ಮಾತ್ಕರ್ಮನಕುರ್ವಂತಿ ಯತಯಃಪಾರದರ್ಶಿನಃ"—(ಅರ್ಥವು) ಪ್ರಾಣಿಯು ಕರ್ಮದಿಂದ ಬಂಧವನ್ನು ವಿದ್ಯೆಯಿಂದ ಮೋಕ್ಷವನ್ನೂ ಹೊಂದುವುನು. ಆದುದರಿಂದ ಸರ್ವಜ್ಞರಾದ ಯತಿಗಳು ಕರ್ಮಗಳಂ ಮಾಡುವುದಿಲ್ಲವೆಂಬದಾಗಿ ಶುಕಾನುಶಾಸನವು— ಮತ್ತು ಇಲ್ಲಿಯೂ "ಸರ್ವಕರ್ಮಾಣಿಮನಸಾಸನ್ನ್ಯಸ್ಯ" (೫-೧೩) ಸಮಸ್ತವಾದ ಕರ್ಮಗಳನ್ನು ಮನಸ್ಸಿನಿಂದ ಬಿಟ್ಟು—ಎಂಬಿದೇಮೊದಲಾದ ಶ್ರುತಿಸ್ಮೃತಿಗಳಲ್ಲಿಯೂ ಸರ್ವ

ಕರ್ಮಸನ್ಯಾಸವೇ ಹೇಳಿರುತ್ತದೆ. ಮತ್ತು ಇಲ್ಲಿ ಕರ್ಮಜ್ಞಾನ ಸಮುಚ್ಚಯಾನಂಗೀಕಾರವು ಶ್ರುತಿಸ್ಮೃತಿಗಳಿಂದ ಹೇಳಲ್ಪಟ್ಟಿರುವ ಸನ್ಯಾಸವಿಧಿ ಭಂಗದಿಂದಲ್ಲದೆ ಮೋಕ್ಷ ಸ್ವಭಾವವನ್ನಾಲೋಚಿಸಿದರೂ ಮೋಕ್ಷವು ಅಕಾರ್ಯವು ( ಹುಟ್ಟದೇ ಇರುವುದು ) ಆಗುವುದರಿಂದಲೂ ಕರ್ಮಗಳಿಂದ ಪ್ರಯೋಜನವಿಲ್ಲವಾದುದರಿಂದ ಕರ್ಮಜ್ಞಾನ ಸಮುಚ್ಚಯವನ್ನಂಗೀಕರಿಸುವುದು ಯುಕ್ತವಾಗಿ ತೋರಲಿಲ್ಲವು.

ಆದರೂ "ಅಕುರ್ವನ್ವಿಹಿತಂಕರ್ಮ ನಿಂದಿತಂಚಸಮಾಚರನ್ ಪ್ರಸಜ್ಜಂಶ್ಚೇಂದ್ರಿಯಾರ್ಥೇಷು ನರಃಪತನಮೃಚ್ಛತಿ" ಎಂಬುವ ಸ್ಮೃತಿಪ್ರಮಾಣಾರ್ಥಗಳನ್ನಾಲೋಚಿಸಿದರೆ ಮಾಡಬೇಕಾದ ನಿತ್ಯಕರ್ಮಗಳನ್ನು ಬಿಡುವುದರಿಂದ ಪಾತಿತ್ಯವುಂಟಾಗುವುದು; ಅಂತಹ ಪ್ರತ್ಯವಾಯು ಪರಿಹಾರಕ್ಕಾಗಿ ನಿತ್ಯಕರ್ಮಗಳನ್ನಾಚರಿಸಬೇಕೆಂದರೆ" ಈ ವಾಕ್ಯವು ಗೃಹಸ್ಥರೇ ಮೊದಲಾದವರಿಗಲ್ಲದೆ ಸನ್ಯಾಸಿಗಳ ವಿಷಯದಲ್ಲಿ ಅನ್ವಯಿಸುವುದಿಲ್ಲವು. ಬ್ರಹ್ಮಚರ್ಯಾಶ್ರಮಕ್ಕೆ ಚೋದಿತಗಳಾದ ಅಗ್ನಿಕಾರ್ಯಾದಿಗಳನ್ನು ಸನ್ಯಾಸಿಯಾದವನು ಮಾಡದೇ ಹೋದರೆ ಪ್ರತ್ಯವಾಯುವು (ಅಂದರೆ ದೋಷವು) ಸನ್ಯಾಸಿಗಳಲ್ಲದ ಬ್ರಹ್ಮಚಾರಿಗಳಿಗೆ ಹೇಗೋ ಆರೀತಿಯಾಗಿ ದೋಷವನ್ನು ಸನ್ಯಾಸಿಯಾದವನಿಗೆ ಕಲ್ಪಿಸಲು ಆಗುವುದಿಲ್ಲನಷ್ಟೆ ! ಯಾವ ಯಾವ ಆಶ್ರಮಗಳಿಗೆ ಯಾವ ಯಾವ ಕರ್ಮವು ವಿಧಿಸಲ್ಪಟ್ಟಿರುವುದೊ ಅದರ ತ್ಯಾಗಮಾಡಿದರಲ್ಲವೆ ದೋಷವುಂಟಾಗುವುದು. ಸನ್ಯಾಸಿಗಳಿಗೆ ಗೃಹಸ್ಥರಂತೇ ಕರ್ಮಗಳನ್ನಾಚರಿಸುವುದು ದೋಷವಾಗುವುದರಿಂದ ಪ್ರತ್ಯವಾಯು ಪರಿಹಾರಾರ್ಥವಾಗಿ ಕರ್ಮಗಳನ್ನು ಸನ್ಯಾಸಿಗಳು ಮಾಡಬೇಕೆಂದು ಹೇಳುವುದು ಉಚಿತವಲ್ಲವು. ಮತ್ತು "ಅಸತ್ತಿನಿಂದ ಸತ್ತು ಹೇಗೆ ವುಂಟಾಗುವುದು? ಅಥವಾ ಅಭಾವದಿಂದ (ಅಂದರೆ ಇಲ್ಲದೇ ಇರುವುದರಿಂದ) ಇರುವುದು ಹೇಗೆ ಹುಟ್ಟುವುದೆಂಬ ಶ್ರುತಿಬಲದಿಂದ ಸನ್ಯಾಸಿಗಳಿಗೆ ಇಲ್ಲದೇ ಇರುವ ನಿತ್ಯಕರ್ಮಗಳಿಂದ ಭಾವರೂಪವಾದ ಪ್ರತ್ಯವಾಯದ ಹುಟ್ಟುವಿಕೆಯನ್ನು ಕಲ್ಪನಮಾಡಲು ಆಗುವುದಿಲ್ಲವು. ಮತ್ತು ನಿತ್ಯಕರ್ಮಗಳನ್ನು ವಿಧಿಸುವ ವೇದವು, ನಿತ್ಯಕರ್ಮಗಳನ್ನು ಮಾಡದೇಇರುವುದರಿಂದ ಪ್ರತ್ಯವಾಯುವನ್ನು ಹೇಳುತಲಿರುವಲ್ಲಿ ಶ್ರುತ್ಯಂತರ ವಿರೋಧ

ವನ್ನು ಶಂಕಿಸಿ ನಿತ್ಯಕರ್ಮಗಳಂ ಮಾಡದೆ ಹೋಗುವುದರಿಂದ ಪ್ರತ್ಯವಾಯುವಿಲ್ಲವೆಂದು ಹೇಳುವುದು ಯುಕ್ತವಲ್ಲವೆಂದು ತಿಳಿದು, ವೇದೋಕ್ತಕರ್ಮಗಳನ್ನು ಮಾಡದೇ ಹೋಗುವುದರಿಂದ ಪ್ರತ್ಯವಾಯುವುಂಟಾಗುವುದೆಂದು ತಿಳಿಯಕೂಡದು. ಏತಕ್ಕೆಂದರೆ ? ವಿಹಿತವಾದ ಕರ್ಮಗಳನ್ನಾಚರಿಸುವುದರಿಂದ ಪಿತೃಲೋಕ ಪ್ರಾಪ್ತಿ ರೂಪವಾದ ಫಲವು ನಿಮ್ಮಿಂದ ಇಚ್ಛಿಸಲ್ಪಡುವುದರಿಂದ ಧೂಮಾದಿ ಮಾರ್ಗವಾಗಿ ಅಂತಹ ಲೋಕಕ್ಕೆ ಹೋಗುವ ಕಾಲದಲ್ಲಿ ನೇತ್ರಪೀಡಾದಿ ದುಃಖವೇನೋ ಪ್ರತ್ಯಕ್ಷವಾಗಿಯೇ ಇರುವುದು. ವಿಹಿತಕರ್ಮಗಳನ್ನಾಚರಿಸದೇ ಹೋದರೇ ಪ್ರತ್ಯವಾಯುವೂ ವುಂಟಾಗುವುದು. ಆದುದರಿಂದ ಯೆರಡುಪ್ರಕಾರದಲ್ಲಿಯೂ ಪುರುಷನಿಗೆ ವೇದವು ಅನರ್ಥಕವಾದುದರಿಂದ ಅಪ್ರಮಾಣ್ಯಕೋಟಿಯಲ್ಲಿಯೇ ಸೇರುವುದರಿಂದ ಶ್ರೌತಕರ್ಮವನ್ನಾಚರಿಸದಿದ್ದರೇ ಪ್ರತ್ಯವಾಯುವು ಪ್ರಾಪ್ತವಾಗಬಹುದೆಂದು ಚಿಂತಿಸಕೂಡದು. ಇದರಿಂದ ವಿಹಿತಕರ್ಮಗಳನ್ನು ಮಾಡಿದರೂ ಮಾಡದಿದ್ದ ದುಃಖಮಾತ್ರ ಫಲತ್ವವು ತಪ್ಪುವದಿಲ್ಲವೆಂದು ಹೇಳಿತು. ಮತ್ತು " ಇಲ್ಲದೇ ಇರುವುದನ್ನು ಇರುತಲಿರುವುದನ್ನಾಗಿ ಮಾಡುವ ಸಾಮರ್ಥ್ಯವನ್ನು ವೇದವು ಸಂಪಾದಿಸುವುದು. ಆದುದರಿಂದ ವೇದ ವಿಹಿತಗಳಾದ ನಿತ್ಯಕರ್ಮಗಳನ್ನು ಮಾಡದೇ ಇರುವುದರಿಂದುಂಟಾದ ಪ್ರತ್ಯವಾಯುವು ವಿಹಿತ ಕರ್ಮಗನ್ನಾಚರಿಸುವುದರಿಂದ ಪರಿಹೃತವಾಗುವುದೆಂದು ಹೇಳುವುದೂ " ಯುಕ್ತವಲ್ಲವು. ಲೋಕದಲ್ಲಿ ಪ್ರಸಿದ್ಧವಾಗಿ ಕಾಣಲ್ಪಡುವ ಪದಾರ್ಥಶಕ್ತಿಗಳನ್ನವಲಂಬಿಸಿ ಶಾಸ್ತ್ರಪ್ರವೃತ್ತಿಯನ್ನಂಗೀಕರಿಸಿರುವುರಲ್ಲದೆ ಲೋಕಪ್ರಸಿದ್ಧಗಳಲ್ಲದ ಪದಾರ್ಥಶಕ್ತಿಯನ್ನಾಶ್ರಯಿಸಿ ಅಂಗೀಕರಿಸಲಿಲ್ಲವು. ಆದುದರಿಂದ ಅಭಾವಕ್ಕೆ (ಇಲ್ಲದೇ ಇರುವುದಕ್ಕೆ) ಭಾವರೂಪತ್ವವನ್ನು (ಉಂಟೆಂಬ ಆಕಾರವನ್ನು) ಕಲ್ಪಿಸುವ ಸಾಮರ್ಥ್ಯವನ್ನು ವೇದವು ಸಂಪಾದಿಸುವುದೆಂದು ಹೇಳುವಪಕ್ಷದಲ್ಲಿ ವೇದಕ್ಕೆ (೧) ಕಾರಕತ್ವವಲ್ಲದೆ (೨) ಜ್ಞಾಪಕತ್ವವಿಲ್ಲದೇ ಹೋಗುವುದರಿಂದ ಅಪ್ರಮಾಣ್ಯವೂ ಬರುವುದು. ಆ

(೧) ಕಾರಕತ್ವವೆಂದರೆ— ಲೋಕಪ್ರಸಿದ್ಧಗಳಲ್ಲದ ಸಂಗತಿಯನ್ನು ಹೇಳುವಿಕೆಯು.

(೨) ಜ್ಞಾಪಕತ್ವವೆಂದರೆ—ಲೋಕಪ್ರಸಿದ್ಧಗಳಾದ ಸಂಗತಿಯನ್ನು ಹೇಳುವಿಕೆಯು.

ದುದರಿಂದ ವೇದೋಕ್ತನಿತ್ಯಕರ್ಮಗಳನ್ನು ಮಾಡದೇ ಇರುವುದರಿಂ ದುಂಟಾಗುವ ಪ್ರತ್ಯವಾಯವು ಅವುಗಳಂ ಮಾಡುವುದರಿಂದ ಹೋಗು ವುದೆಂಬುದಾಗಿ ಹೇಳುವುದೂ ಸರಿಯಲ್ಲವು. ವೇದವು ಜ್ಞಾಪಕಶಾಸ್ತ್ರ ವಲ್ಲದೇ ಕಾರಕಶಾಸ್ತ್ರವಾಗಿ ಅಸಂಗತವಾದ ಅರ್ಥವನ್ನು ಬೋಧಿ ಸತಕ್ಕದ್ದಲ್ಲವಾದುದರಿಂದ ಈ ಪ್ರಕಾರವಾಗಿ ಹೇಳುವದೂ ಸಮ್ಮತ ವಾಗಲಾರದು. ಆದುದರಿಂದ ಸನ್ಯಾಸಿಗಳಿಗೆ ಕರ್ಮವಿಲ್ಲವು; ಆದು ದರಿಂದಲೇ ಜ್ಞಾನಕರ್ಮ ಸಮುಚ್ಚಯವಂ ಹೇಳುವುದು ಸಂಗತವಲ್ಲವು.

ಮತ್ತು ಕರ್ಮಜ್ಞಾನ ಸಮುಚ್ಚಯವಂ ಹೇಳುವ ಪಕ್ಷದಲ್ಲಿ "ಜ್ಯಾ ಯಸೀಚೇತ್ಕರ್ಮಣಸ್ತೇ ಮತಾಬುದ್ಧಿಃ" ಎಂಬ ಪ್ರಶ್ನೆಗೆ ಅನುಪಪ ತ್ತಿಯೂ ಉಂಟಾಗುವುದು.(ಈ ಪ್ರಶ್ನದಲ್ಲಿ "ಕರ್ಮಕ್ಕಿಂತಲೂ ಜ್ಞಾನವು ಶ್ರೇಷ್ಠವೆಂಬದಾಗಿ ನಿನ್ನ ಅಭಿಪ್ರಾಯವಾದರೆ"ಎಂಬವುದಾಗಿರುವುದ ರಿಂದ ಸಮುಚ್ಚಯವಂ ಹೇಳುವ ಪಕ್ಷದಲ್ಲಿ ಈ ಎರಡೂ ಸಮವಾಗಿ ರುವುದೆಂಬ ಅಭಿಪ್ರಾಯವಲ್ಲವೇ ಇರಬೇಕೆಂದರ್ಥವು) ಒಂದುವೇಳೆ ಭಗವಂತನಿಂದ ದ್ವಿತೀಯಾಧ್ಯಾಯದಲ್ಲಿ ಜ್ಞಾನಕರ್ಮಗಳನ್ನು ನೀನೊ ಬ್ಬನೆ ಅನುಷ್ಠಿಸಬೇಕೆಂಬದಾಗಿ ಹೇಳಲ್ಪಟ್ಟಿದ್ದರೆ ಈ ಅಧ್ಯಾಯದ ಮೊದಲಿನಲ್ಲಿ ಅರ್ಜುನನು ಮಾಡಿದ "ಕರ್ಮಕ್ಕಿಂತಲೂ ಜ್ಞಾನವುಶ್ರೇಷ್ಠ ವಾಗಿದ್ದರೆ" ಎಂಬ ಪ್ರಶ್ನವು ಅಸಂಗತವಾಗಬಹುದಾಗಿತ್ತು, ಈ ರೀತಿ ಯಾಗಿ ಕರ್ಮಜ್ಞಾನಗಳನ್ನೊಬ್ಬನೇ ಅನುಷ್ಠಿಸಬೇಕೆಂಬದಾಗಿ ಅರ್ಜುನ ನಿಗೆ ಶ್ರೀಕೃಷ್ಣನು ಹೇಳಲಿಲ್ಲವು.ಆ ರೀತಿಯಾಗಿಕರ್ಮಜ್ಞಾನಗಳೆರಡನ್ನೂ ನೀನನುಷ್ಠಿಸಬೇಕೆಂದು ಪರಮಾತ್ಮನು ಅರ್ಜುನನಿಗೆ ಹೇಳಿದ್ದ ಪಕ್ಷದಲ್ಲಿ ಕರ್ಮಕ್ಕಿಂತಲೂ ಶ್ರೇಷ್ಠವಾದ ಸಾಂಖ್ಯಬುದ್ಧಿಯು ಹೇಳಲ್ಪಟ್ಟೇ ಇರುವುದರಿಂದ "ತತ್ಕಿಂ ಕರ್ಮಣಿ ಘೋರೇಮಾಂ ನಿಯೋಜಯಸಿ ಕೇ ಶವ" ಎಂಬುವ ಅರ್ಜುನನ ಪ್ರಶ್ನವಾಗಲೀ ಉಪಾಲಂಭವಾಗಲೀ, (ಉಪಾಲಂಭವೆಂದರೆ ನಿಂದಿಸುವುದು) ಯಾವ ಪ್ರಕಾರದಲ್ಲಿಯೂ ಯು ಕ್ತವಾಗುವುದಿಲ್ಲವು. ಮತ್ತು "ಏಷಾತೇಽಭಿಹಿತಾಸಾಂಖ್ಯೇ" (ಅ॥ ೨॥ ಶ್ಲೋ॥ ೩೯) ಎಂಬುವ ಶ್ಲೋಕದಲ್ಲಿ ಅರ್ಜುನನಿಗೆ ಸಾಂಖ್ಯಬು ದ್ಧಿಯು ಹೇಳಲ್ಪಟ್ಟಿರುವುದರಿಂದ ಈಗ ಅರ್ಜುನನು ಮಾಡಿದ ಪ್ರಶ್ನ ವು ಯುಕ್ತವಾಗಿರುವುದೆಂದು ಹೇಳುವದಕ್ಕೆ "ಕರ್ಮಣ್ಯೇವಾಧಿಕಾರ

ಸ್ತೇ" (ಅ॥೨॥ ಶ್ಲೋ॥೪೭) ಎಂಬುವ ಶ್ಲೋಕದಿಂದ ಅರ್ಜುನನಿಗೆ ಸಾಂಖ್ಯಬುದ್ಧಿಯನ್ನು ಪರಿತ್ಯಜಿಸಿ ಯೋಗಬುದ್ಧಿಯನ್ನೇ ಹೇಳುವುದರಿಂದ ಸಾಂಖ್ಯಬುದ್ಧಿ ಅರ್ಜುನನಿಗೇನೆ ಅನುಷ್ಠಿಸತಕ್ಕದ್ದೆಂದು ಪರಮಾತ್ಮನಿಂದ ಹೇಳಲ್ಪಡಲಿಲ್ಲವೆಂಬುವುದೂ ಉಚಿತವಲ್ಲವು.

ಮತ್ತೂ ಒಬ್ಬ ಮನುಷ್ಯನು ಏಕಕಾಲದಲ್ಲಿ ಜ್ಞಾನಕರ್ಮಗಳೆಂಬೀ ಯೆರಡನ್ನೂ ಅನುಷ್ಠಿಸಲು ಅವಕಾಶವಿಲ್ಲವಾದುದರಿಂದ ಜ್ಞಾನಕರ್ಮಗಳು ಭಿನ್ನಪುರುಷರಿಗೆ ಅನುಷ್ಠೇಯವೆಂಬದಾಗಿ ಪರಮಾತ್ಮನು ಹೇಳಿರುವ ಪಕ್ಷದಲ್ಲಿಯೇ ಈಗ ಅರ್ಜುನನು ಮಾಡಿರುವ ಪ್ರಶ್ನವು ಯುಕ್ತವಾಗುವುದೆಂದರಿಯಬೇಕು. ಭಗವದ್ವಾಕ್ಯಗಳಿಗೆ ಅರ್ಥಗಳಂ ತಿಳಿದುಕೊಳ್ಳಲು ಶಕ್ತಿಯಿಲ್ಲದೆ ಅರ್ಜುನನು ಈ ರೀತಿಯಾಗಿ ಪ್ರಶ್ನೆ ಮಾಡಿರುವುನೆಂಬದಾಗಿ ಹೇಳಿದರೆ ಆ ಪ್ರಶ್ನಕ್ಕನುಗುಣವಾಗಿ ಜ್ಞಾನಕರ್ಮಗಳೆರಡು ಭಿನ್ನ ಪುರುಷಾನುಷ್ಠೇಯಗಳೆಂಬ ಭಗವತ್ಪ್ರತಿವಚನವೂ ಇರುವುದರಿಂದ ಅರ್ಜುನನ ಪ್ರಶ್ನವು ಅವಿವೇಕಮೂಲವೆಂಬದಾಗಿ ಹೇಳಕೂಡದು. ಭಗವಂತನು ಸರ್ವಜ್ಞನಾದುದರಿಂದ ಅರ್ಜುನನ ಪ್ರಶ್ನಾರ್ಥವಂ ತಿಳಿದುಕೊಳ್ಳಲು ಜ್ಞಾನವಿಲ್ಲದೆ ಪ್ರಶ್ನಕ್ಕೆ ಅನುಚಿತವಾದ ಪ್ರತ್ಯುತ್ತರವಂ ಹೇಳಿದನೆಂಬುವುದೂ ಸರಿಯಾದದ್ದಲ್ಲವು. ಮತ್ತು ಜ್ಞಾನಕರ್ಮಗಳೆರಡೂ ಭಿನ್ನಪುರುಷರಿಂದ ಅನುಷ್ಠಿಸತಕ್ಕದ್ದೆಂಬದಾಗಿ ಈ ಪ್ರಶ್ನಕ್ಕೆ ಪ್ರತ್ಯುತ್ತರವಂ ಪರಮಾತ್ಮನು ಹೇಳುವುದರಿಂದ ಜ್ಞಾನಕರ್ಮಗಳು ಏಕಪುರುಷನಿಂದ ಮಾಡತಕ್ಕವುಗಳೆಂದು ಸಮುಚ್ಚಯವನ್ನಂಗೀಕರಿಸಕೂಡದು. ಆದುದರಿಂದ ಕರ್ಮರಹಿತವಾದ ಕೇವಲ ಜ್ಞಾನದಿಂದಲೇ ಮೋಕ್ಷಸಿದ್ಧಿಯಾಗುವುದೆಂಬದಾಗಿ ಗೀತಾಶಾಸ್ತ್ರದಲ್ಲಿಯೂ ಸಮಸ್ತಗಳಾದ ಉಪನಿಷತ್ತುಗಳಲ್ಲಿಯೂ ನಿರ್ಣಯಿಸಲ್ಪಟ್ಟಿರುವುದೆಂದರಿಯಬೇಕು. ಜ್ಞಾನಕರ್ಮಗಳ ಸಮುಚ್ಚಯಾಂಗೀಕಾರ ಪಕ್ಷದಲ್ಲಿ ಜ್ಞಾನಕರ್ಮಗಳೆರಡೂ ಸೇರಿ ಮೋಕ್ಷಸಾಧನವಾಗಬೇಕಾಗಿರುವುದರಿಂದ ಜ್ಞಾನಕರ್ಮಗಳೆರಡರಲ್ಲಿ ಯಾವದು ಮೋಕ್ಷಸಾಧನವೋ ಅದಂ ನಿಶ್ಚೈಸಿಹೇಳೆಂದು ಏಕವಿಷಯವಾದ ಪ್ರಾರ್ಥನವು ಅನುಪಪನ್ನವಾಗಬೇಕಾಗಿರುವುದು. ಮತ್ತು "ಕುರುಕರ್ಮೈವತಸ್ಮಾತ್ತ್ವಂ" (ಅ॥೪॥ ಶ್ಲೋ॥೧೫) ಎಂಬುವ ಶ್ಲೋಕದಿಂದ ಕರ್ಮವನ್ನೇ ನೀನು ಮಾಡು

ಎಂಬ ಅವಧಾರಣದಿಂದಲೂ ಅರ್ಜುನನಿಗೆ ಜ್ಞಾನನಿಷ್ಠೆಯಲ್ಲಧಿಕಾರವಿಲ್ಲವೆಂಬರ್ಥವು ದರ್ಶಿತವಾಗಿರುವುದು. ಕರ್ಮಯೋಗಾಧಿಕಾರಿಯಾದ ಅರ್ಜುನನಿಗೆ ಜ್ಞಾನಾಧಿಕಾರವಿಲ್ಲವೆಂಬೀವಾಕ್ಯದಿಂದಲೂ ಜ್ಞಾನಕರ್ಮಸಮುಚ್ಚಯವು ಶಾಸ್ತ್ರಾರ್ಥವಲ್ಲವೆಂಬುವ ಸಂಗತಿಯು ಸೂಚಿತವಾಯಿತು.

(ರಾ॥ ಭಾ॥) ಇದುವರೆಗೂ ಮೋಕ್ಷಾಪೇಕ್ಷೆಯುಳ್ಳವರಿಗೆ ಪ್ರಾಪ್ಯವಾಗಿ (ಫಲವಾಗಿ) ವೇದಾಂತದಲ್ಲಿ ಹೇಳಲ್ಪಟ್ಟ ಅವಿದ್ಯಾದಿಗಳಾದ ಸಕಲ ದೋಷಗಳನ್ನು ಸವಾಸನವಾಗಿ ಬಿಟ್ಟು ಅತ್ಯಂತಾಧಿಕವಾದ ಅತಿಶಯವುಳ್ಳದ್ದಾಗಿಯೂ, ಅಸಂಖ್ಯೇಯವಾಗಿಯೂ ಇರುವ ಸಕಲ ಕಲ್ಯಾಣಗುಣಗಳೊಡನೆ ಕೂಡಿರುವ ಪರಬ್ರಹ್ಮನಾದ ಪುರುಷೋತ್ತಮನನ್ನು ಹೊಂದಲು ತಕ್ಕ ಸಾಧನವು "ವೇದನ, ಉಪಾಸನ, ಧ್ಯಾನ" ಇವೇ ಮೊದಲಾದ ಶಬ್ದಗಳಿಂದ ಹೇಳಲ್ಪಡುವುದಾಗಿಯೂ, ಮೋಕ್ಷದಶೆಯಲ್ಲಿಯೂ ಪ್ರಾಪ್ಯಪ್ರಾಪಕ ಭೂತನಾದ ಪರಮಾತ್ಮನ ಶ್ರೀಚರಣಾರವಿಂದಗಳಲ್ಲಿ ಮಾತ್ರವೇ ಮಾಡತಕ್ಕದ್ದಾಗಿಯೂ, ಇರುವ ಭಕ್ತಿಯೋಗವೇ ಎಂಬದಾಗಿ ಹೇಳಲುದ್ದೇಶಿಸಿ ಅಂತಹ ಭಕ್ತಿಯೋಗಕ್ಕೆ ಅಂಗವಾದ ಛಾಂದೋಗ್ಯದಲ್ಲಿ ಪ್ರಜಾಪತಿ ವಾಕ್ಯದಿಂದ ಹೇಳಲ್ಪಟ್ಟ ಜೀವಾತ್ಮ ಸಾಕ್ಷಾತ್ಕಾರವು ಕರ್ಮಯೋಗ ಸಹಕೃತವಾಗಿರುವ ಜ್ಞಾನಯೋಗದಿಂದ ಸಾಧಿಸತಕ್ಕದ್ದೆಂಬದಾಗಿ ಹೇಳಲ್ಪಟ್ಟಿತು. ಪ್ರಜಾಪತಿವಾಕ್ಯದಲ್ಲಿಯೂ (ಛಾಂದೋಗ್ಯ ೮ನೇ ಪ್ರಪಾಠಕದ ೭ನೇ ಖಂಡದ ವಾಕ್ಯದಲ್ಲಿ) ಪರಮಾತ್ಮನಂ ಸೇರತಕ್ಕವನಾದ ಜೀವಾತ್ಮನದರ್ಶನವು ದಹರವಾಕ್ಯದಲ್ಲಿ ಹೇಳಿದ ಪರವಿದ್ಯೆಗೆ ಶೇಷವಾಗಿರುವುದೆಂದು ಹೇಳಿ ಜಾಗ್ರತ್ಸ್ವಪ್ನ ಸುಷುಪ್ತ್ಯವಸ್ಥೆಗಳನ್ನತಿಕ್ರಮಿಸಿರುವ ಅಂತಹ ಜೀವಾತ್ಮಸ್ವರೂಪವು ಶರೀರಕ್ಕಿಂತಲೂ ವಿಲಕ್ಷಣವಾಗಿರುವುದೆಂದು ಹೇಳಿ (ಛಾಂ॥೮-೩-೪) "ಈ ಪ್ರಕಾರವೇ ಈ ಜೀವಾತ್ಮನು ಶರೀರದಿಂದ ಹೊರಟು ಪರಂಜ್ಯೋತಿಸ್ಸ್ವರೂಪನಾದ ಪರಮ ಪುರುಷನನ್ನು ಹೊಂದಿ ಸ್ವಸ್ವರೂಪದಿಂದ ಪ್ರಕಾಶಿಸುವ" ನೆಂಬ ಅರ್ಥವಂ ಪ್ರತಿಪಾದಿಸುವ ಛಾಂದೋಗ್ಯವಾಕ್ಯದಿಂದ ದಹರವಿದ್ಯೆಗೆ ಫಲವನ್ನು ಹೇಳಿ ಉಪಸಂಹಾರಮಾಡಲ್ಪಟ್ಟಿತು. ಅದೇ ಪ್ರಕಾರವಾಗಿಯೇ ಅಲ್ಲಿಯೂ "ಆತ್ಮ

ವಿಜ್ಞಾನವಿಂದ ಪರಮಾತ್ಮನನ್ನು ತಿಳಿದು ಸುಖದುಃಖಗಳನ್ನು ಬಿಡು ವನು" (ಕಠ ೧॥ ೨॥ ೧೨॥) ಇತ್ಯಾದಿ ವಾಕ್ಯಗಳಲ್ಲಿ "ಪರಮಾತ್ಮನನ್ನು ತಿಳಿದು" ಎಂಬದಾಗಿ ವಿಧಿಸಲ್ಪಟ್ಟಿರುವ ಪರವಿದ್ಯೆಯ ಅಂಗವಾಗಿ "ಆತ್ಮ ವಿಜ್ಞಾನದಿಂದ" ಎಂಬದಾಗಿ ಜೀವಾತ್ಮ ಜ್ಞಾನವನ್ನು ವಿಧಿಸಿ, ಜ್ಞಾತಾವಾಗಿರುವ ಆತ್ಮನು ಉತ್ಪತ್ತಿಶೂನ್ಯನಾದುದರಿಂದ ಹುಟ್ಟುವುದಿಲ್ಲವು, ನಿತ್ಯನಾದುದರಿಂದ ಮೃತಿಹೊಂದುವುದಿಲ್ಲವು. (ಕಠ॥ ೧॥ ೨॥ ೧೮॥) ಇತ್ಯಾದ್ಯರ್ಥವುಳ್ಳ ವಾಕ್ಯಗಳಿಂದ ಜೀವಾತ್ಮ ಸ್ವರೂಪ ಶೋಧನವನ್ನು ಕೂಡ ಮಾಡಿ "ಅಣುವುಗಿಂತಲೂ ಅಣುವಾಗಿ ಮಹತ್ತಿಗಿಂತಲೂ ಮಹತ್ತಾಗಿರುವ" (ಕಠ॥ ೧॥೨॥೨೦) ಎಂಬ ವಾಕ್ಯದ ಮೊದಲು ಅಪ್ರಾಕೃತ ಸ್ವಾಸಾಧಾರಣ ದಿವ್ಯಮಂಗಳ ವಿಗ್ರಹ ಯುಕ್ತನಾಗಿರುವ ಪರಮಾತ್ಮನನ್ನು ತಿಳಿದವನಿಗೆ ಶೋಕವಿಲ್ಲವು. (ಕಠ॥ ೧॥೨॥೨೨) ಕೇವಲವಾದ ಶ್ರವಣ ಮನನ ನಿದಿಧ್ಯಾಸನಗಳಿಂದ ಈ ಆತ್ಮನು ಹೊಂದಲ್ಪಡಲಾರನು. ಆ ಪರಮಾತ್ಮನ ಪ್ರೀತಿಯನ್ನು ಹೊಂದಿದರೆ ಅವನನ್ನು ಹೊಂದಬಹುದು. ಆದುದರಿಂದ ಪರಮಾತ್ಮನಲ್ಲಿ ನಿರತಿಶಯವಾದ ಪ್ರೀತಿಯನ್ನುಮಾಡಿ ಉಪಾಸನಮಾಡಿದರೆ ಅವನಅನುಗ್ರಹದಿಂದ ನಿತ್ಯವಿಭೂತಿಯಲ್ಲಿ ನಿತ್ಯಾನಂದ ಸ್ವರೂಪವಾಗಿರುವ ನಿತ್ಯಮಂಗಳ ವಿಗ್ರಹ ಯುಕ್ತವಾದ ದಿವ್ಯಾತ್ಮಸ್ವರೂಪವನ್ನು ಕಂಡು ಸಂತೋಷಿಸಬಹುದೆಂಬ ತಾತ್ಪರ್ಯಗರ್ಭಿತವಾದ (ಕಠ॥ ೧॥ ೨॥ ೨೩॥) ಇತ್ಯಾದಿ ವಾಕ್ಯದಿಂದ ಪರಸ್ವರೂಪವನ್ನು ಮತ್ತೂ ಅವನ ಉಪಾಸನ ಪ್ರಕಾರವನ್ನೂ, ಮತ್ತು ಆ ಉಪಾಸನವು ಭಕ್ತಿರೂಪವಾಗಿರಬೇಕೆಂಬುವುದನ್ನೂ ಪ್ರತಿಪಾದಿಸಿ ಯಾವನು ಒಳ್ಳೇಜ್ಞಾನದಿಂದ ಮನಸ್ಸನ್ನು ಸ್ವಾಧೀನಪಡಿಸಿ ಕೊಂಡಿರುವನೋಅವನು ಸಂಸಾರಮಾರ್ಗಕ್ಕೆ ಪಾರವಾದ ವಿಷ್ಣುಸ್ಥಾನವನ್ನು ಹೊಂದುವನು. (ಕಠ॥ ೧॥ ೩॥ ೯॥) ಎಂಬದಾಗಿ ಪರಮಪದಪ್ರಾಪ್ತಿಯೇ ಇಂತಹಪರವಿದ್ಯೆಗೆ ಫಲವೆಂಬದಾಗಿ ಉಪಸಂಹಾರ ಮಾಡಲ್ಪಟ್ಟಿತು. ಇನ್ನುಮೇಲೆ ನಾಲ್ಕು. ಅಧ್ಯಾಯಗಳಿಂದ ಆ ಜೀವಾತ್ಮ ಸಾಕ್ಷಾತ್ಕಾರವು ಅದಕ್ಕೆ ತಕ್ಕಉಪಾಯಾದಿಗಳೂ ವಿವರಿಸಲ್ಪಡುವುದು.

(ಗೀ॥ ವಿ॥) ಪೂರ್ವಾಧ್ಯಾಯದಲ್ಲಿ "ನತ್ವೇವಾಹಂ" (೨ನೇ ಅ॥ ೧೨ನೇ ಶ್ಲೋ॥) ಎಂಬುವ ಶ್ಲೋಕದ ಮೊದಲು "ಏಷಾತೇಭಿಹಿ ತಾಸಾಂಖ್ಯೇ" (೨ನೇ ಅ॥ ೩೯ನೇ ಶ್ಲೋ॥) ಎಂಬುವ ಶ್ಲೋಕದ ವರೆಗೂ ಜೀವೇಶ್ವರ ಸ್ವರೂಪವು ಹೇಳಲ್ಪಟ್ಟಿತು. ಅನಂತರದಲ್ಲಿ "ಯೋಗೇತ್ವಿಮಾಂಶ್ರೃಣು" (೨॥ ೩೯) ಇತ್ಯಾದಿ ಶ್ಲೋಕಗಳಿಂದ ಪ್ರತಿಜ್ಞಾಪೂರ್ವಕವಾಗಿ ಜ್ಞಾನಸಾಧನವಾದ ಯೋಗವನ್ನು "ತ್ರೈಗುಣ್ಯಾವಿಷಯಾವೇದಾ" (೨॥ ೪೫) ಇತ್ಯಾದಿಗಳಿಂದ ಹೇಳಿ ಅದನ್ನೇ "ಕರ್ಮಜಂ ಬುದ್ಧಿಯುಕ್ತಾಹಿ" (೨॥ ೫೧) ಎಂಬಿದೇ ಮೊದಲಾದ ಶ್ಲೋಕಗಳಿಂದ ಸ್ವಲ್ಪಸ್ವಲ್ಪವಾಗಿ ವಿಸ್ತಾರಪಡಿಸಿದನು. ಈ ಕರ್ಮಯೋಗಾಧ್ಯಾಯದಲ್ಲಿ ಪೂರ್ವಾಧ್ಯಾಯೋಕ್ತವಾದ ಜ್ಞಾನೋಪಾಯವಾಗಿರುವ ಯೋಗವನ್ನು ಅವಶ್ಯವಾಗಿ ಅನುಷ್ಠಿಸಬೇಕೆಂಬುವುದನ್ನು ವ್ಯಕ್ತಪಡಿಸುತ್ತಾರೆಂದು ಪೂರ್ವೋತ್ತರಾಧ್ಯಾಯಗಳಿಗೆ ಪೌರ್ವಾಪರ್ಯವಂ ತಿಳಿಯಬೇಕು.

ಮೂ॥ ಅರ್ಜುನ ಉವಾಚ ॥ ಜ್ಯಾಯಸೀಚೇತ್ಕರ್ಮಣ
ಸ್ತೇ ಮತಾಬುದ್ಧಿ ರ್ಜನಾರ್ದನ । ತತ್ಕಿಂ ಕರ್ಮಣಿ ಘೋರೆ
ಮಾಂ ನಿಯೋಜಯಸಿಕೇಶವ ॥ ... ॥೧॥

ಪ ॥ ಜ್ಯಾಯಸೀ– ಚೇತ್– ಕರ್ಮಣಃ– ತೇ– ಮತಾ– ಬುದ್ಧಿಃ– ಜನಾರ್ದನ । ತತ್– ಕಿಂ– ಕರ್ಮಣಿ– ಘೋರೆ – ಮಾಂ– ನಿಯೋಜಯಸಿ– ಕೇಶವ ॥ ॥೧॥

ಅ॥ ಅರ್ಜುನನ ಪ್ರಶ್ನವು॥ ಹೇ ಜನಾರ್ದನ– ಎಲೈ ಕೃಷ್ಣನೇ ! ಕರ್ಮಣಃ– ಕರ್ಮಕ್ಕಿಂತಲೂ, ಬುದ್ಧಿಃ– ಜ್ಞಾನವು, ಜ್ಯಾಯಸೀ– ಶ್ರೇಷ್ಠವು, (ಇತಿ–ಎಂಬದಾಗಿ) ತೇ– ನಿನಗೆ, ಮತಾಚೇತ್ – ಅಭಿಮತವಾಗಿದ್ದರೆ, ತತ್ – ಆವಾಗ, ಹೇ ಕೇಶವ – ಎಲೈ ಕೇಶವನೆ, ಘೋರೆ– ಭಯಂಕರವಾದ, ಕರ್ಮಣಿ– ಯುದ್ಧಾದಿರೂಪವಾದ ಕರ್ಮದಲ್ಲಿ, ಮಾಂ– ನನ್ನನ್ನು, ಕಿಂನಿಯೋಜಯಸಿ– ಏತಕ್ಕೆ ಪ್ರೇರಿಸುತ್ತೀ. ... ॥೧॥

(ಶಂ॥ ಭಾ॥) ಏಕಾಧಿಕಾರಿ ವಿಷಯದಲ್ಲಿ ಬುದ್ಧಿಕರ್ಮಗಳಿಗೆ ಸಮುಚ್ಚಯವನ್ನಂಗೀಕರಿಸುವ ಪಕ್ಷದಲ್ಲಿ "ಕರ್ಮಕ್ಕಿಂತಲೂ ಜ್ಞಾನವು ಶ್ರೇಷ್ಠವೆಂಬದಾಗಿ ನಿನಗೆ ಅಭಿಮತವಾಗಿದ್ದರೆ" ಎಂಬ ಅರ್ಜುನನ ಪ್ರಶ್ನಾನುಗುಣವಾಗಿ ಕರ್ಮಕ್ಕಿಂತಲೂ ಬುದ್ಧಿಗೆ ಶ್ರೈಷ್ಠ್ಯವರ್ಣನವು ಅಸಂಗತವಾಗುವುದು. ಮತ್ತು "ದೂರೇಣಹ್ಯವರಂಕರ್ಮ" (೨॥

೫೦॥) ಎಂಬುವ ಶ್ಲೋಕದಿಂದ ಪರಮಾತ್ಮನು ಕರ್ಮಕ್ಕಿಂತಲೂ ಜ್ಞಾನವು ಶ್ರೇಷ್ಠವೆಂಬದಾಗಿಯೂ, ಜ್ಞಾನಕ್ಕಿಂತಲೂ ಕರ್ಮವು ನೀಚ ವೆಂಬದಾಗಿಯೂ ಹೇಳಿ "ಕರ್ಮಣ್ಯೇವಾಧಿಕಾರಸ್ತೇ" (೨॥ ೪೭॥) ಎಂಬುವ ಶ್ಲೋಕದಿಂದ ಮಿತ್ರನಾಗಿಯೂ ಭಕ್ತನಾಗಿಯೂ ಇರುವ ನನಿಗೆ ಅತ್ಯಂತ ಭಯಂಕರವಾಗಿಯೂ ಕ್ರೂರವಾಗಿಯೂ, ನೀಚವಾ ಗಿಯೂ, ಹಿಂಸಾರೂಪವಾಗಿಯೂ ಇರುವ ಕರ್ಮವನ್ನು ಹೇಗೆ ಉಪದೇ ಶಿಸಿದನು ? ಈ ಪ್ರಕಾರವಾಗಿ ಹೇಳಲು ಕಾರಣವೇನು ? ಎಂಬದಾಗಿ ಪಶ್ಚಾತ್ತಾಪದಿಂದರ್ಜುನನು ಈ ಪ್ರಶ್ನವಂ ಮಾಡಿರುವುದರಿಂದಲೂ ಜ್ಞಾನಕರ್ಮ ಸಮುಚ್ಚಯಾವಕಾಶ ವಿರುವುದಿಲ್ಲವೆಂದರಿಯಬೇಕು. ॥೧॥

(ರಾ॥ ಭಾ॥) ಎಲೈ ಜನಾರ್ದನನೇ! ಇದುವರೆಗೂ ನೀನು ಹೇಳಿದ ವಾಕ್ಯಗಳನ್ನು ಕೇಳಿದ್ದರಿಂದ ಆತ್ಮಸಾಕ್ಷಾತ್ಕಾರಕ್ಕೆ ಜ್ಞಾನನಿಷ್ಠೆಯೇ ಸಾಕ್ಷಾತ್ಸಾಧನವೆಂಬದಾಗಿಯೂ, ಕರ್ಮನಿಷ್ಠೆಯು ಅಂಥಾ ಜ್ಞಾನನಿ ಷ್ಠೆಗೆ ಸಾಧನವೆಂಬದಾಗಿಯೂ, ಆ ಜ್ಞಾನ ನಿಷ್ಠೆಯು ಸಮಸ್ತವಾದ ಇಂದ್ರಿಯ ವ್ಯಾಪಾರಗಳನ್ನು ಬಿಡುವುದರಿಂದ ಹೊಂದತಕ್ಕದ್ದೆಂಬದಾ ಗಿಯೂ ವಿದಿತವಾಯಿತು. ಇದರಿಂದ ಆತ್ಮಸಾಕ್ಷಾತ್ಕಾರ ವಿಷಯದಲ್ಲಿ ಕ ರ್ಮನಿಷ್ಠೆಗಿಂತಲೂ ಜ್ಞಾನನಿಷ್ಠೆಯೇ ಶ್ರೇಷ್ಠವೆಂಬದಾಗಿ ನಿನ್ನ ಅಭಿಪ್ರಾ ಯವಿರುವುದೆಂದು ತೋರುತದೆ. ಹೀಗಾದರೆ ನನಗೆ ಆತ್ಮಸಾಕ್ಷಾತ್ಕಾ ರವು ಸಿದ್ಧಿಸಬೇಕಾದರೆ ಇಂದ್ರಿಯ ವ್ಯಾಪಾರೋಪರತಿ ಪೂರ್ವಕವಾಗಿ ಹೊಂದತಕ್ಕದಾಗಿರುವ ಜ್ಞಾನಯೋಗವನ್ನು ಮಾಡೆಂಬದಾಗಿ ಹೇಳಬೇ ಕಾಗಿರಲು ಅಂಥಾ ಜ್ಞಾನನಿಷ್ಠೆಗೆ ವಿರುದ್ಧವಾಗಿರುವ ಇಂದ್ರಿಯ ವ್ಯಾ ಪಾರ ರೂಪವಾದ ಕರ್ಮಯೋಗವನ್ನು ಮಾಡೆಂದು ಹೇಳುವುದಂ ನೋ ಡಿದರೆ ಅನ್ಯೋನ್ಯವಿರುದ್ಧವಾದ ವಾಕ್ಯಗಳಂ ಹೇಳಿ ನನ್ನನ್ನು ವ್ಯಾಕು ಲಪಡಿಸುವಂತೆ ಕಾಣುತದೆ. ಆದುದರಿಂದ ನನ್ನ ಕ್ಷೇಮವನ್ನಪೇಕ್ಷಿಸಿ ನಾನು ಮಾಡತಕ್ಕದ್ದನ್ನು ನಿಶ್ಚಯಿಸಿಕೊಳ್ಳಲೂ ಯೋಗ್ಯವಾದ ಒಂದು ವಾಕ್ಯವನ್ನು ಹೇಳಬೇಕು. ॥೧॥೨॥

(ಗೀ॥ ವಿ॥) ಎಲೈ ಜನಾರ್ದನನೇ ! ಕರ್ಮಕ್ಕಿಂತಲೂ ಜ್ಞಾನವು ಶ್ರೇ ಷ್ಠವೆಂಬದಾಗಿ ನಿನ್ನ ಅಭಿಪ್ರಾಯವಿರುವ ಪಕ್ಷದಲ್ಲಿ ಕರ್ಮದಲ್ಲಿ ನನ್ನ ನ್ನು ನಿಯೋಜಿಸುವುದು ಹೇಗೆ ? ಎಂಬದಾಗಿ ಒಂದು ಪ್ರಶ್ನವು.

ಅದರಲ್ಲಿಯೂ ರಾಗದ್ವೇಷಾದಿಗಳೊಡನೆ ಸೇರಿರುವ ಯುದ್ಧವೆಂಬ ಕರ್ಮದಲ್ಲಿ ಏತಕ್ಕೆ ನನ್ನನ್ನು ಪ್ರೇರಿಸುತ್ತೀ ? ಎಂಬದಾಗಿ ಎರಡನೇ ಪ್ರಶ್ನವು. ಅಂದರೆ ಇವರೆಲ್ಲರು ಪುಣ್ಯಲೋಕಗಳಂ ಹೊಂದುವರೆಂಬದಾಗಿ ಸರ್ವಕರ್ಮಗಳಿಗೂ ಫಲಶ್ರವಣವಿರುವುದರಿಂದಲೂ “ ಹತೋವಾ ಪ್ರಾಪ್ಸ್ಯಸೇಸ್ವರ್ಗಂ ” (೨॥ ೩೭॥) ಇತ್ಯಾದಿಗಳಿಂದ ಯುದ್ಧರೂಪವಾದ ಕರ್ಮಕ್ಕೂ ಕಾಮ್ಯತ್ವಶ್ರವಣವಿರುವುದರಿಂದಲೂ ಇವು ಬುದ್ಧಿಯೋಗಕ್ಕಿಂತ ಅತ್ಯಂತ ನೀಚವಾಗಿರುವುವು. ಯತ್ಯಾಶ್ರಮ ವಿಹಿತಗಳಾದ ಶಮದಮಾದಿಗಳಿಗೆ ಫಲಶ್ರವಣವಿಲ್ಲದೇ ಇರುವುದರಿಂದ ಕಾಮ್ಯತ್ವವಿಲ್ಲದೆ ಕೇವಲ ಜ್ಞಾನಾರ್ಥತ್ವವೇ ಇರುವುದರಿಂದ ಸನ್ಯಾಸಾಶ್ರಮವನ್ನು ಸ್ವೀಕರಿಸಿ ಅಂಥಾ ಧರ್ಮನಿಷ್ಠನಾಗಿರೆಂಬದಾಗಿ ನನ್ನನ್ನು ಕುರಿತು ಹೇಳಬೇಕಲ್ಲದೇ ಕಾಮ್ಯಕರ್ಮವಾದ ಯುದ್ಧದಲ್ಲಿ “ ಯುದ್ಧ್ಯಸ್ವ ಭಾರತ ” (೨॥ ೧೮॥) ಎಂಬದಾಗಿ ಪ್ರೇರಿಸುವುದು ಯುಕ್ತವಲ್ಲವೆಂದು ತಾತ್ಪರ್ಯವು. ... ... ॥೧॥

ಮೂ ॥ ವ್ಯಾಮಿಶ್ರೇ (ಶಂ॥ ಣೇವ) ಣ್ಯೈವವಾಕ್ಯೇನ ಬು
ದ್ಧಿಂಮೋಹಯಸೀವಮೇ । ತದೇಕಂ ವದನಿಶ್ಚಿತ್ಯ ಯೇ
ನಶ್ರೇಯೋಽಹಮಾಪ್ನುಯಾಂ ॥ ॥೨॥

ಪ॥ ವ್ಯಾಮಿಶ್ರೇಣ (ಶಂ॥ ಇವ) ಏವ- ವಾಕ್ಯೇನ- ಬುದ್ಧಿಂ- ಮೋಹಯಸಿ – ಇವ- ಮೇ । ತತ್- ಏಕಂ- ವದ- ನಿಶ್ಚಿತ್ಯ- ಯೇನ- ಶ್ರೇಯಃ- ಅಹಂ- ಆಪ್ನುಯಾಂ- ॥೨॥

ಅ ॥ ವ್ಯಾಮಿಶ್ರೇಣೈವ- (ಮನಸ್ಸಿಗೆ) ವ್ಯಾಕುಲವನ್ನುಂಟುಮಾಡತಕ್ಕದ್ದಾಗಿಯೇ ಇರುವ, (ಶಂ॥ ವ್ಯಾಮಿಶ್ರೇಣೇವ- ವ್ಯಾಕುಲವನ್ನುಂಟುಮಾಡತಕ್ಕಂತೇ ಇರುವ) ವಾಕ್ಯೇನ- ಮಾತಿನಿಂದ, ಮೇ- ನನ್ನ, ಬುದ್ಧಿಂ- ಬುದ್ಧಿಯನ್ನು, ಮೋಹಯಸೀವ- ಮೋಹಪಡಿಸುವಂತೇ ಇರುವಿರಿ, ಯೇನ – ಯಾವದರಿಂದ, ಅಹಂ – ನಾನು, ಶ್ರೇಯಃ – ಪರಮಪುರುಷಾರ್ಥವೆಂಬ ಮೋಕ್ಷವನ್ನು, ಆಪ್ನುಯಾಂ- ಹೊಂದುವೆನೊ, ತದೇಕಂ- ಆ ಒಂದನ್ನು, ನಿಶ್ಚಿತ್ಯ- ನಿಶ್ಚಯಿಸಿ, ವದ- ಹೇಳು. ... ॥೨॥

(ಶಂ॥ ಭಾ॥) ಮಂದಬುದ್ಧಿಯಾದ ನನ್ನ ವ್ಯಾಮೋಹ ಶಮನಾರ್ಥವಾಗಿ ಉಪದೇಶಿಸುವ ನಿನ್ನವಾಕ್ಯವಂ ಕೇಳುವ ನನ್ನಬುದ್ಧಿಗೆ ಇನ್ನೂ ವ್ಯಾಮೋಹವೇ ಪ್ರಬಲವಾಗುತದೆ. ನಿನ್ನ ವಾಕ್ಯಗಳು ನನ್ನ ಮೋಹಾರ್ಥವಾಗಿ ಪ್ರವರ್ತಿಸದೇ ಇದ್ದರೂ ಮಂದಬುದ್ಧಿಯಾದ ನನ್ನ

ಮೋಹವನ್ನು ಪರಿಹರಿಸಲಿಕ್ಕೋಸ್ಕರ ನೀನು ಪ್ರವರ್ತಿಸಿದವನಾದರೂ ಮಂದಬುದ್ಧಿಯುಳ್ಳವನಾದ ನನಿಗೆ ನೀನು ಮೋಹಪಡಿಸುವವನಂತೆ ಕಾಣುತ್ತಿಯೆ. ವಾಸ್ತವವಾಗಿ ನನ್ನನ್ನು ಮೋಹಗೊಳಿಸಲು ನೀನು ಪ್ರವರ್ತಿಸಿದವನಲ್ಲವು. ಆದುದರಿಂದ ಜ್ಞಾನಕರ್ಮಗಳು ಏಕಾಧಿಕಾರಿಗಳಿಗೆ ವಿಹಿತಗಳಲ್ಲವಾದುದರಿಂದ ಅವುಗಳಲ್ಲಿ ಯಾವದು ಪುರುಷಾರ್ಥಸಾಧನವೋ ಅದಂ ನಿಶ್ಚಯಿಸಿ ನನಿಗೆ ಹೇಳಬೇಕು. ಎಂದರ್ಜುನನು ಪ್ರಶ್ನೆ ಮಾಡಿದನು. ... ... ||೨||

ಮೂ|| ಶ್ರೀಭಗವಾನುವಾಚ|| ಲೋಕೇಽಸ್ಮಿನ್ದ್ವಿವಿಧಾ ನಿಷ್ಠಾ ಪುರಾಪ್ರೋಕ್ತಾಮಯಾಽನಘ | ಜ್ಞಾನಯೋಗೇನಸಾಂಖ್ಯಾನಾಂ ಕರ್ಮಯೋಗೇನಯೋಗಿನಾಂ ||೩||

ಪ || ಶ್ರೀಭಗವಾನ್- ಉವಾಚ- ಲೋಕೇ- ಅಸ್ಮಿನ್- ದ್ವಿವಿಧಾ- ನಿಷ್ಠಾ- ಪುರಾ- ಪ್ರೋಕ್ತಾ- ಮಯಾ-ಅನಘ|ಜ್ಞಾನಯೋಗೇನ- ಸಾಂಖ್ಯಾನಾಂ- ಕರ್ಮಯೋಗೇನ- ಯೋಗಿನಾಂ||

ಅ|| ಹೇ ಅನಘ- ಎಲೈ ಪಾಪರಹಿತನಾದ ಅರ್ಜುನನೇ ! ಪುರಾ - ಪೂರ್ವದಲ್ಲಿ, (ಸೃಷ್ಟ್ಯಾದಿಯಲ್ಲಿ ಬ್ರಹ್ಮವಿದ್ಯಾ ಸಂಪ್ರದಾಯವನ್ನು ವ್ಯಕ್ತಪಡಿಸುವ ಸಮಯದಲ್ಲಿ,ಅಥವಾ ದ್ವಿತೀಯಾಧ್ಯಾಯದಲ್ಲಿ) ಅಸ್ಮಿನ್‌ಲೋಕೇ- ಈ ಲೋಕದಲ್ಲಿ, ಸಾಂಖ್ಯಾನಾಂ- ತತ್ವ ವಿಚಾರಪೂರ್ವಕವಾಗಿ ಬ್ರಹ್ಮನಿಷ್ಠೆಯಂ ಮಾಡಲು ಪ್ರಯತ್ನಿಸುವ ಸಾಂಖ್ಯರಿಗೆ,(ರಾ || ಜ್ಞಾನಯೋಗಾಧಿಕಾರಿಗಳಿಗೆ,) ಜ್ಞಾನಯೋಗೇನ- ಜ್ಞಾನಯೋಗದಿಂದಲೂ, ಯೋಗಿನಾಂ- ಕರ್ಮವನ್ನು ಮಾಡಿ ಚಿತ್ತಶುದ್ಧಿಯುಂಟಾದಮೇಲೆ ತತ್ವವಿಚಾರವಂ ಮಾಡಲಿಚ್ಛೈಸುವ ಕರ್ಮಯೋಗಿಗಳಿಗೆ, (ರಾ|| ಕರ್ಮಯೋಗಾಧಿಕಾರಿಗಳಿಗೆ,) ಕರ್ಮಯೋಗೇನ- ನಿಷ್ಕಾಮ ಕರ್ಮಯೋಗದಿಂದಲೂ, ದ್ವಿವಿಧಾ- ಯರಡು ವಿಧವಾದ, ನಿಷ್ಠಾ- ಸ್ಥಿತಿಯು, ಅಥವಾ ಅನುಷ್ಠಾನಪ್ರಕಾರವು, ಮಯಾ- ನನ್ನಿಂದ, ಪ್ರೋಕ್ತಾ- ಹೇಳಲ್ಪಟ್ಟಿತು. ||೩||

(ಶಂ|| ಭಾ||) ಎಲೈ ಪಾಪರಹಿತನಾದ ಅರ್ಜುನನೇ ! ಸೃಷ್ಟ್ಯಾದಿಯಲ್ಲಿ ಈ ಲೋಕದ ಜನರನ್ನು ಅನುಗ್ರಹಿಸಬೇಕೆಂಬ ಅಪೇಕ್ಷೆಯಿಂದ ದ್ವಿವಿಧವಾದ ಮಾರ್ಗಗಳನ್ನು ತೋರಿಸಿರುವೆನು. ಅದು ಹೇಗೆಂದರೆ,—ಆತ್ಮವಿಷಯವಾದ ವಿವೇಕ ಜ್ಞಾನವುಳ್ಳವರಾಗಿಯೂ,ಬ್ರಹ್ಮಚರ್ಯದಿಂದಲೇ ತತ್ವವಿಚಾರವಂಮಾಡಿ ಸನ್ನ್ಯಾಸವಂ ಸ್ವೀಕರಿಸಿದವರಾಗಿಯೂ, ವೇದಾಂತ ವಿಜ್ಞಾನದಿಂದ ನಿಶ್ಚಯಿಸಲ್ಪಟ್ಟ ಪರತತ್ವವುಳ್ಳವರಾಗಿಯೂ, ಪರಮಹಂಸ ಪರಿವ್ರಾಜಕರಾಗಿಯೂ, ಸರ್ವದಾ

ಸೋಽಹಂ ಬ್ರಹ್ಮಾತ್ಮೈಕವಾದ ಸಮಾಧಿನಿಷ್ಠರಾಗಿಯೂ ಇರುವ ಮಹಾತ್ಮರು ಜ್ಞಾನಯೋಗ ನಿಷ್ಠರಾಗಿರುವರು. ಫಲಾಭಿ ಸಂಧಿರಹಿತವಾಗಿ ಕರ್ಮಗಳನ್ನಾಚರಿಸಿ ಅದರಿಂದ ಚಿತ್ತಶುದ್ಧಿಯುಳ್ಳವರಾಗಿ ತರುವಾಯ ಜ್ಞಾನವನ್ನು ತದ್ದ್ವಾರಾ ಮೋಕ್ಷವನ್ನು ಹೊಂದಲಿಚ್ಛೈಸುತಲಿರುವ ಕರ್ಮಯೋಗಿಗಳು ನಿಷ್ಕಾಮ ಕರ್ಮಾಚರಣನಿಷ್ಠರಾಗಿರುವರು. ಮೋಕ್ಷಾರ್ಥವಾಗಿ ಜ್ಞಾನಕರ್ಮಗಳನ್ನು ಒಬ್ಬನೇ ಆಚರಿಸಬೇಕೆಂದು ಶ್ರೀಕೃಷ್ಣನು ಹೇಳಿದ್ದರೂ ಮುಂದೆ ಹೇಳಲುದ್ದೇಶಿಸಿದ್ದರೂ ಉಪದೇಶವಂ ಹೊಂದಲಪೇಕ್ಷಿಸಿ ಶಿಷ್ಯನಾಗಿರುವ ಅರ್ಜುನನಿಗೆ ಜ್ಞಾನಕರ್ಮನಿಷ್ಠೆಗಳು ಭಿನ್ನ ಪುರುಷಾನುಷ್ಠೇಯಗಳೆಂಬದಾಗಿ ಇಲ್ಲಿ ಏತಕ್ಕೆ ಹೇಳಬೇಕಾಗಿರುವುದು ? ಮತ್ತು ಇತರಾಧಿಕಾರಿಗಳು ಭಿನ್ನಭಿನ್ನವಾಗಿ ಕರ್ಮನಿಷ್ಠರಾಗಿಯೋ ಜ್ಞಾನನಿಷ್ಠರಾಗಿಯೋ ಇರಬಹುದು; ಅರ್ಜುನನು ಮಾತ್ರವೇ ಜ್ಞಾನಕರ್ಮಗಳಂ ಸೇರಿಸಿ ಅನುಷ್ಠಿಸಬೇಕೆಂಬದಾಗಿ ಭಗವದಭಿಪ್ರಾಯವಿರುವುದೆಂದರೆ ಭಗವಂತನು ರಾಗ ದ್ವೇಷಾದಿಗಳುಳ್ಳವನು, ಮತ್ತು ಅಪ್ರಮಾಣಭೂತನೆಂದು ಹೇಳಬೇಕಾಗಿ ಬರುವುದು. ಆ ಪ್ರಕಾರವಾಗಿ ಹೇಳುವುದು ಸರಿಯಾದದ್ದಲ್ಲವಾದುದರಿಂದ ಯಾವ ಯುಕ್ತಿಯಿಂದಲಾದರೂ ಜ್ಞಾನಕರ್ಮಗಳೆರಡೂ ಸೇರಿಯೇ ಮೋಕ್ಷಪ್ರಾಪ್ತಿಗೆ ಸಾಧನವಾಗುವುದೆಂದು ಹೇಳುವುದು ಪ್ರಶಸ್ತವಲ್ಲವು. ॥೩॥

(ರಾ॥ ಭಾ॥) ದ್ವಿತೀಯಾಧ್ಯಾಯದಲ್ಲಿ ನಾನು ಹೇಳಿದ ಅರ್ಥವು ಸವಿಸ್ತಾರವಾಗಿ ನಿನ್ನಿಂದ ಗ್ರಹಿಸಲ್ಪಡಲಿಲ್ಲವು. ಲೋಕದಲ್ಲಿ ಜನಗಳಿಗೆ ಯೋಗ್ಯತೆಯು ನಾನಾವಿಧವಾಗಿರುವುದರಿಂದ ಅವರವರ ಅಧಿಕಾರಾನುಗುಣವಾಗಿ ಜ್ಞಾನ ಕರ್ಮನಿಷ್ಠೆಗಳು ನನ್ನಿಂದ ಹೇಳಲ್ಪಟ್ಟಿತು. ಅದು ಹೇಗೆಂದರೆ— ವಿಷಯ ವ್ಯಾಕುಲಿತವಾದ ಬುದ್ಧಿಯುಳ್ಳ ಯೋಗಿಗಳಿಗೆ ಕರ್ಮಯೋಗದಲ್ಲಧಿಕಾರವೆಂಬದಾಗಿಯೂ, ಆತ್ಮಾವಲೋಕನದಲ್ಲಾಸಕ್ತರಾದವರಿಗೆ ಜ್ಞಾನಯೋಗದಲ್ಲಧಿಕಾರವೆಂಬದಾಗಿಯೂ,ವಿವೇಚನ ಪುರಸ್ಸರವಾಗಿಯೇ ನಾವು ಹೇಳಿರುವೆವು. ಆದರೆ ಮೋಕ್ಷಾರ್ಥಿಯಾದವನಿಗೆ ಜ್ಞಾನಯೋಗವನ್ನುಪದೇಶಿಸದೆ ಕರ್ಮದಲ್ಲಿ ಮಾತ್ರವೇ ಪ್ರವೃತ್ತಿಯನ್ನುಂಟುಮಾಡುವುದು ಯುಕ್ತವೋ ? ಎಂಬುವ ಪಕ್ಷದಲ್ಲಿ ಅದಕ್ಕುತ್ತರವು. ಲೋಕದಲ್ಲಿ ಮೋಕ್ಷಾಪೇಕ್ಷೆಯುಳ್ಳ ಸಕಲರಿಗೂ

ತತ್ಕ್ಷಣವೇ ಜ್ಞಾನಯೋಗದಲ್ಲಧಿಕಾರವುಂಟಾಗುವುದಿಲ್ಲವು. ಫಲಾಸಕ್ತಿಯಂ ಬಿಟ್ಟು ಕೇವಲ ಭಗವದಾರಾಧನ ರೂಪದಿಂದ ಕರ್ಮಗಳನ್ನನುಷ್ಠಿಸಿ ಅದರಿಂದ ಮನಃಕಾಲುಷ್ಯವಂ ತ್ಯಜಿಸಿ ಇಂದ್ರಿಯ ವ್ಯಾಕುಲವಂ ಪರಿಹರಿಸಿಕೊಂಡವನೇ ಜ್ಞಾನನಿಷ್ಠಾಧಿಕಾರಿಯಾಗುವನು. ಕರ್ಮಾನುಷ್ಠಾನವು ಪರಮ ಪುರುಷಾರಾಧನ ರೂಪವಾಗಿರುವುದೆನ್ನುವುದಂ "ಯತಃಪ್ರವೃತ್ತಿರ್ಭೂತಾನಾಂ" (೧೮||೪೬) ಎಂಬದಾಗಿ ಮುಂದೆ ವಿವರಿಸುವನು. ಆದುದರಿಂದಲೆ (ಕರ್ಮಯೋಗದಲ್ಲಿ ಪ್ರವರ್ತಿಸದೆ ಜ್ಞಾನಯೋಗವು ಸಾಧ್ಯವಾಗುವುದಿಲ್ಲವಾದುದರಿಂದಲೆ) ಕರ್ಮಗಳನ್ನಾಚರಿಸಬೇಕೆಂದು ಹೇಳಿದೆನೆಂದು ತಾತ್ಪರ್ಯವು. ಈ ದ್ವಿತೀಯಾಧ್ಯಾಯದಲ್ಲಿಯೂ "ಕರ್ಮಣ್ಯೇವಾಧಿಕಾರಸ್ತೇ" (೨|| ೪೭||) ಇತ್ಯಾದಿ ಶ್ಲೋಕಗಳಿಂದ ಫಲಾಭಿಸಂಧಿ ರಹಿತವಾಗಿ ಕರ್ಮಗಳನ್ನಾಚರಿಸಬೇಕೆಂದು ಹೇಳಿ ಇಂಥಾ ಕರ್ಮಾನುಷ್ಠಾನದಿಂದ ವಿಷಯ ವ್ಯಾಕುಲತಾರೂಪವಾದ ಅಜ್ಞಾನದಿಂದ ಬಿಡಲ್ಪಟ್ಟ ಬುದ್ಧಿಯುಳ್ಳವನಿಗೆ "ಪ್ರಜಹಾತಿಯದಾಕಾಮಾನ್" (೨|| ೫೫||) ಇತ್ಯಾದಿ ಶ್ಲೋಕಗಳಿಂದ ಜ್ಞಾನಯೋಗರೂಪವಾದ ಫಲವು ಹೇಳಲ್ಪಟ್ಟಿತು. ಆದುದರಿಂದ ಸಾಂಖ್ಯರಿಗೆ ಜ್ಞಾನಯೋಗದಿಂದಲೂ ಯೋಗಿಗಳಿಗೆ ಕರ್ಮಯೋಗದಿಂದಲೂ ಸ್ಥಿತಿಯು ಹೇಳಲ್ಪಟ್ಟಿತು. ಸಂಖ್ಯಾ ಅಂದರೆ ಬುದ್ಧಿಯು, ಆತ್ಮೈಕ ವಿಷಯವಾದ ಬುದ್ಧಿಯುಳ್ಳವರು ಸಾಂಖ್ಯರು. ಇಂಥಾ ಬುದ್ಧಿಗೆ ಅನರ್ಹರಾದ ಕರ್ಮಯೋಗಾಧಿಕಾರಿಗಳು ಯೋಗಿಗಳೆನ್ನಲ್ಪಡುವರು. ವಿಷಯವ್ಯಾಕುಲಿತವಾದ ಬುದ್ಧಿಯುಳ್ಳವರಿಗೆ ಕರ್ಮಯೋಗದಲ್ಲಧಿಕಾರವೆಂಬದಾಗಿಯೂ, ವ್ಯಾಕುಲ ಬುದ್ಧಿಯಿಲ್ಲದವರಿಗೆ ಜ್ಞಾನದಲ್ಲಧಿಕಾರವೆಂಬದಾಗಿಯೂ ಹೇಳಿರುವುದರಿಂದ ಅಲ್ಲಿ ವಿರುದ್ಧವಾಗಿಯೂ, ವ್ಯಾಮಿಶ್ರವಾಗಿಯೂ ಹೇಳಲಿಲ್ಲವೆಂಬದಾಗಿ ಅರ್ಜುನನ ಪ್ರಶ್ನೆಗೆ ಉತ್ತರವು. ... ... ||೩||

ಮೂ|| ನಕರ್ಮಣಾಮನಾರಂಭಾನ್ನೈಷ್ಕರ್ಮ್ಯಂಪುರು
ಷೋಽಶ್ನುತೇ | ನಚ ಸನ್ನ್ಯಾಸನಾದೇವ ಸಿದ್ಧಿಂಸಮ
ಧಿಗಚ್ಛತಿ || ... ... ||೪||

ಅ|| ನ- ಕರ್ಮಣಾಂ- ಅನಾರಂಭಾತ್- ನೈಷ್ಕರ್ಮ್ಯಂ-ಪುರುಷಃ-ಅಶ್ನುತೇ | ನ- ಚ- ಸನ್ನ್ಯಸನಾತ್- ಏವ- ಸಿದ್ಧಿಂ- ಸಮಧಿಗಚ್ಛತಿ || ... ||೪||

ಅ|| ಪುರುಷಃ- ಪುರುಷನು, ಕರ್ಮಣಾಂ- ಕರ್ಮಗಳ, (ಸಂ|| ಸಕಲ ಪಾಪಗಳನ್ನು ಪರಿ

ಹರಿಸಿ ಚಿತ್ತಶುದ್ಧಿಯನ್ನುಂಟುಮಾಡಿ ಜ್ಞಾನನಿಷ್ಠೆಗೆ ಕಾರಣವಾಗುವ ಕರ್ಮಗಳ. ಶ್ರೀ|| ನಿಷ್ಕಾಮಕರ್ಮಗಳ, ರಾ|| ಭಗವದಾರಾಧನ ರೂಪವಾಗಿಯೂ ಚಿರಕಾಲಾರ್ಜಿತವಾದಪಾಪಗಳನ್ನು ನಿವರ್ತಿಸುವನಾಗಿಯೂ ಇರುವ ನಿಷ್ಕಾಮಕರ್ಮಗಳ,) ಅನಾರಂಭಾತ್-ಆಚರಣೆ ಇಲ್ಲದೆ ಇರುವುದರಿಂದ, ನೈಷ್ಕರ್ಮ್ಯಂ-(ಶಂ|| ಜ್ಞಾನನಿಷ್ಠೆಯಿಂದುಂಟಾಗುವ ಆತ್ಮಾನುಭವವನ್ನು, ರಾ|| ಜ್ಞಾನನಿಷ್ಠೆಯನ್ನು, ಮ|| ಜ್ಞಾನದಿಂದುಂಟಾಗುವ ಮೋಕ್ಷವನ್ನು, ಗೀ|| ವಿ|| ಕಾಮ್ಯಕರ್ಮಗಳಿಂದ ಹೊಂದಲಶಕ್ಯವಾದ ಮೋಕ್ಷವನ್ನು,) ನಾಶ್ನುತೇ - ಹೊಂದುವುದಿಲ್ಲವು, ಸನ್ನ್ಯಸನಾದೇವ- ಕರ್ಮತ್ಯಾಗದಿಂದಲೇನೆ, (ಶಂ|| ಜ್ಞಾನೋತ್ಪತ್ತಿಗೆ ಪೂರ್ವದಲ್ಲಿಯೇ ಕರ್ಮತ್ಯಾಗವು ಮಾಡುವುದರಿಂದಲೇನೆ, ಶ್ರೀ|| ಗೀ|| ವಿ|| ಜ್ಞಾನಹೀನವಾದ ಸನ್ನ್ಯಾಸದಿಂದಲೇನೆ, ರಾ|| ಅನುಷ್ಠಿಸತಕ್ಕದ್ದಾಗಿಯೂ ಶಾಸ್ತ್ರಚೋದಿತಗಳಾಗಿಯೂ ಇರುವ ಕರ್ಮಗಳಂ ಬಿಡುವುದರಿಂದಲೇನೆ,) ಸಿದ್ಧಿಂ- ಜ್ಞಾನನಿಷ್ಠೆಯನ್ನು, ಅಥವಾ ನೈಷ್ಕರ್ಮ್ಯರೂಪವಾದ ಸಿದ್ಧಿಯನ್ನು, ನಚಸಮಧಿಗಚ್ಛತಿ-ಹೊಂದುವುದೇ ಇಲ್ಲವು. ||೪||

(ಶಂ|| ಭಾ||) ಜ್ಞಾನವು ಕರ್ಮನಿಷ್ಠೆಗಿಂತಲೂ ಶ್ರೇಷ್ಠವೆಂಬದಾಗಿ ಅರ್ಜುನನು ಹೇಳಿದ್ದಕ್ಕೆ ಅದು ಸರಿಯಾದದ್ದಲ್ಲವೆಂದು ಪರಮಾತ್ಮನು ನಿರಾಕರಿಸದೇ ಇರುವುದರಿಂದ ಜ್ಞಾನನಿಷ್ಠೆಯನ್ನು ಸನ್ನ್ಯಾಸಿಗಳಾಚರಿಸಬೇಕೆಂತಲೂ ಕರ್ಮಜ್ಞಾನನಿಷ್ಠೆಗಳು ಭಿನ್ನಾಧಿಕಾರಿಗಳಿಗೆ ಹೇಳಲ್ಪಟ್ಟಿರುವುದೆಂಬದಾಗಿಯೂ, ಶ್ರೀಕೃಷ್ಣಮೂರ್ತಿಯ ಅಭಿಪ್ರಾಯವೆಂಬದಾಗಿ ತೋರುತದೆ. ಬಂಧಕಾರಣವಾದ ಕರ್ಮಗಳನ್ನಾಚರಿಸಬೇಕೆಂದು ನನಗೆ ಪ್ರೇರಣೆಮಾಡಿದನಲ್ಲವೆ, ಎಂಬದಾಗಿ ವ್ಯಸನಪಡುತ ಕರ್ಮಗಳಂ ಮಾಡಲಾರೆನೆಂದು ನೆನೆಸುತಲಿರುವ ಅರ್ಜುನನಂ ಕುರಿತು, ಶ್ರೀ ಪರಮಾತ್ಮನು ಇವನು ಕರ್ಮಗಳಂಮಾಡದೆ ಹೋದರೆ ವೃಥಾ ಕೆಟ್ಟುಹೋಗುವನೆಂದು ಪರಮದಯಾ ವಿಶಿಷ್ಟನಾಗಿ ಈ ಶ್ಲೋಕವನ್ನು ಹೇಳುತ್ತಾನೆ. (ಅಥವಾ) ಜ್ಞಾನಕರ್ಮನಿಷ್ಠೆಗಳು ಪರಸ್ಪರ ವಿರುದ್ಧಗಳಾಗಿರುವುದರಿಂದ ಒಬ್ಬನು ಏಕಕಾಲದಲ್ಲಿ ಈ ಯೆರಡನ್ನನುಷ್ಠಿಸುವುದು ಶಕ್ಯವಲ್ಲವು. ಆದುದರಿಂದ ಜ್ಞಾನಕರ್ಮಗಳೆಂಬೀಯೆರಡೂ ಸಮಾನವಾಗಿ ಪುರುಷಾರ್ಥ ಸಾಧನಗಳಾಗಬೇಕಾಗಿರುವುದರಿಂದ ಕರ್ಮನಿಷ್ಠೆಗೆ ಜ್ಞಾನನಿಷ್ಠಾಪ್ರಾಪ್ತಿಯೇ ಪುರುಷಾರ್ಥವೆಂಬದಾಗಿಯೂ, ಜ್ಞಾನನಿಷ್ಠೆಯು ಕರ್ಮಯೋಗದಿಂದ ಸಿದ್ಧಿಸಲ್ಪಟ್ಟು ಇತರಾಪೇಕ್ಷೆಯಿಲ್ಲದೇ ಸ್ವತಂತ್ರವಾಗಿ ಪುರುಷಾರ್ಥ ಸಾಧನವಾಗುವದೆಂಬದಾಗಿಯೂ, ತಿಳಿಸಲುದ್ದೇಶಿಸಿ ಈ ಶ್ಲೋಕವನ್ನು ಹೇಳುತ್ತಾನೆ.

ಯಜ್ಞಾದಿ ಸಮಸ್ತವಾದ ಕರ್ಮಗಳು ಈ ಜನ್ಮದಲ್ಲಿ ಅಥವಾ ಜನ್ಮಾಂತರದಲ್ಲಿಯಾದರೂ ಅನುಷ್ಠಿಸಲ್ಪಟ್ಟರೆ ಅವು ಪಾಪಗಳಂ ಪರಿಹರಿಸಿ ಸತ್ವಶುದ್ಧಿಗೆ ಕರಣಗಳಾಗಿ ಜ್ಞಾನೋತ್ಪತ್ತಿದ್ವಾರಾ ಜ್ಞಾನನಿಷ್ಠಾ ಹೇತುಗಳಾಗುವುವು. ಈ ಅರ್ಥವು " ಜ್ಞಾನ ಮುತ್ಪದ್ಯತೇ ಪುಂಸಾಂ ಕ್ಷಯಾತ್ಪಾಪಸ್ಯಕರ್ಮಣಃ । ಯಥಾಽಽದರ್ಶತಲಪ್ರಖ್ಯೇಪಶ್ಯತ್ಯಾತ್ಮಾನಮಾತ್ಮನಿ॥ " ಎಂಬ ಪ್ರಮಾಣದಲ್ಲಿ ವ್ಯಕ್ತವಾಗಿರುವುದು. ಇಂಥಾ ಕರ್ಮಗಳನ್ನಾಚರಿಸದೇ ಹೋದರೆ ಕರ್ಮಶೂನ್ಯತೆ ಎಂಬ ಜ್ಞಾನನಿಷ್ಠೆಯನ್ನು (ಅಂದರೆ ನಿಷ್ಕ್ರಿಯಾತ್ಮ ಸ್ವರೂಪದಿಂದಿರುವಿಕೆಯನ್ನು) ಹೊಂದಲಾರನು. ಇದರಿಂದ ಕರ್ಮಗಳನ್ನಾಚರಿಸಿದರೆ ನಿಷ್ಕ್ರಿಯಾತ್ಮ ಸ್ವರೂಪದಿಂದಿರುವಿಕೆಯನ್ನು ಹೊಂದುವನೆಂಬದಾಗಿ ತಿಳಿಯಬರುತದೆ. ಕರ್ಮಾರಂಭ ರೂಪವಾದ ಕಾರಣದಿಂದ ನೈಷ್ಕರ್ಮ್ಯರೂಪವಾದ ಸಿದ್ಧಿಯನ್ನು ಹೊಂದುತ್ತಾನೆಂದರ್ಥವು. ಇಲ್ಲಿ ಉಪಾಯವಿಲ್ಲದೆ ಉಪೇಯ ಅಂದರೆ ಹೊಂದತಕ್ಕ ಫಲವು ಲಭಿಸುವದಿಲ್ಲವಾದುದರಿಂದ ನೈಷ್ಕರ್ಮ್ಯರೂಪವಾದ ಸಿದ್ಧಿ ವಿಷಯದಲ್ಲಿ ಕರ್ಮಾರಂಭ ರೂಪವಾದ ಉಪಾಯವು ದರ್ಶಿತವಾಯಿತು. ಕರ್ಮಗಳನ್ನಾಚರಿಸದಿದ್ದರೆ ಚಿತ್ತಶುದ್ಧಿಯು ತದ್ದ್ವಾರಾ ಜ್ಞಾನವೂ ಉಂಟಾಗುವುದಿಲ್ಲವೆಂಬ ಅರ್ಥವು " ಆ ಪರಮಾತ್ಮಸ್ವರೂಪ ವಿಷಯಕವಾದ ಜ್ಞಾನವನ್ನು ವೇದಚೋದಿತವಾದ ಕರ್ಮಗಳನ್ನನುಷ್ಠಿಸುವುದರಿಂದ ಬ್ರಹ್ಮ ಜ್ಞಾನಿಗಳು ಹೊಂದುವರೆಂಬ " (ಬೃ॥ ಉ॥ ೬-೪-೨೨) ಶ್ರುತಿಯಲ್ಲಿ ವ್ಯಕ್ತವಾಗಿರುವುದು. ಇಲ್ಲಿಯೂ ೫ನೇ ಅಧ್ಯಾಯದ ಆರನೇ ಶ್ಲೋಕದಲ್ಲಿಯೂ ಮತ್ತು (೫-೧೧) ನೇ ಶ್ಲೋಕದಲ್ಲಿಯೂ, (೧೮-೫) ನೇ ಶ್ಲೋಕದಲ್ಲಿಯೂ ಮುಂದೆ ಹೇಳುವನು. ಆದರೆ " ಅಭಯಂಸರ್ವಭೂತೇಭ್ಯೋ ದತ್ವಾನೈಷ್ಕರ್ಮ್ಯಮಾಚರೇತ್! " ಇತ್ಯಾದಿ ಪ್ರಮಾಣಗಳಿಂದ ಸರ್ವಭೂತಗಳಿಗೂ ಅಭಯ ಪ್ರದಾನಾದಿಗಳಂ ಮಾಡುವುದರಿಂದಲೇ ನೈಷ್ಕರ್ಮ್ಯರೂಪವಾದ ಸಿದ್ಧಿ ಪ್ರಾಪ್ತಿಯು ಹೇಳಲ್ಪಡುವುದರಿಂದ ಕರ್ಮಾರಂಭದಿಂದ ಪ್ರಯೋಜನವೇನೆಂದು ಚಿಂತಿಸದೆ ಜ್ಞಾನರಹಿತವಾದ ಕೇವಲ ಕರ್ಮತ್ಯಾಗದಿಂದಲೇ ನೈಷ್ಕರ್ಮ್ಯಲಕ್ಷಣವಾದ ಜ್ಞಾನ ಯೋಗನಿಷ್ಠೆಯನ್ನು ಹೊಂದುವುದಿಲ್ಲವೆಂದು ತಿಳಿಯಬೇಕು. ... ... ॥೪॥

(ರಾ॥ ಭಾ॥) ಲೋಕದಲ್ಲಿ ಎಲ್ಲರಿಗೂ ಮೋಕ್ಷದಲ್ಲಿ ಇಚ್ಛೆಯುಂಟಾದ ಕಾಲದಲ್ಲಿಯೇ ಜ್ಞಾನಯೋಗವನ್ನನುಷ್ಠಿಸುವ ಸ್ಥಿತಿಯುಂಟಾಗುವುದು ದುರ್ಲಭವೆನ್ನುತ್ತಾನೆ. ಪರಮ ಪುರುಷನ ಆರಾಧನರೂಪವಾಗಿ ಶಾಸ್ತ್ರಗಳಲ್ಲಿ ಹೇಳಲ್ಪಡುವ ಕರ್ಮಗಳಂ ಮಾಡದೇ ಇರುವುದರಿಂದಲಾದರೂ, ಮಾಡಲುಪಕ್ರಮಿಸಿ ಮಧ್ಯದಲ್ಲಿ ಬಿಡುವುದರಿಂದಲಾದರೂ, ಜ್ಞಾನನಿಷ್ಠೆಯು ಸಿದ್ಧಿಸುವುದೆಂಬದಾಗಿ ತಿಳಿಯಬೇಡ ; ಫಲಾಪೇಕ್ಷಾಶೂನ್ಯವಾದ ಕರ್ಮಗಳಿಂದ ಗೋವಿಂದನನ್ನು ಆರಾಧಿಸಿ ಅದರಿಂದ ಅನಾದಿಕಾಲದಿಂದ ಸಂಪಾದಿಸಲ್ಪಟ್ಟ ಪಾಪಗಳನ್ನು ತ್ಯಾಗಮಾಡದವರಿಗೆ ಇಂದ್ರಿಯ ವ್ಯಾಕುಲವಂ ಬಿಟ್ಟು ಹೊಂದತಕ್ಕದ್ದಾಗಿರುವ ಆತ್ಮನಿಷ್ಠಾಪ್ರಾಪ್ತಿಯು ದುರ್ಲಭವು. ... ॥೪॥

(ಗೀ॥ ವಿ॥) ಶಮಾದಿಗಳಾದ ಯತಿಧರ್ಮಗಳನುಷ್ಠಿಸತಕ್ಕವುಗಳೆಂತಲೂ, ಗೃಹಸ್ಥಧರ್ಮಗಳನುಷ್ಠಿಸತಕ್ಕದ್ದಲ್ಲವೆಂತಲೂ, ಅವುಗಳಲ್ಲಿಯೂ ಘೋರರೂಪವಾದ ಯುದ್ಧಾದಿಕರ್ಮಗಳನುಷ್ಠಿಸತಕ್ಕದ್ದಲ್ಲವೆಂತಲೂ ಹೇಳುತಲಿರುವ ಅರ್ಜುನನನ್ನು ಕುರಿತು ಎಲೈ ಅರ್ಜುನನೇ ! ನೀನು ಇಂದ್ರಾವತಾರನಾಗಿ ಜನಕಾದಿಗಳಂತೆ ಅಧಿಕಾರ ಪುರುಷನಾಗಿರುವುದರಿಂದ ವರ್ಣಾಶ್ರಮಧರ್ಮಗಳು ನಿನ್ನಿಂದ ಅವಶ್ಯವಾಗಿ ಅನುಷ್ಠಿಸತಕ್ಕವುಗಳೆಂದು ಶ್ರೀಕೃಷ್ಣನು ಪೂರ್ವಶ್ಲೋಕದಲ್ಲಿ ಹೇಳಿದನು. ಈ ಶ್ಲೋಕದಲ್ಲಿ ಕರ್ಮಗಳಂ ಮಾಡಕೂಡದೆಂದು ಹೇಳುವ ಪಕ್ಷವನ್ನು ವಿಕಲ್ಪಿಸಿ ದೂಷಿಸುತ್ತಾನೆ. ಕರ್ಮತ್ಯಾಗವೇ ಮೋಕ್ಷಸಾಧನವಾದುದರಿಂದ ಅದಂ ಮಾಡಕೂಡದೆಂದಭಿಪ್ರಾಯವೇ ? ಅಥವಾ ಜ್ಞಾನವು ಮೋಕ್ಷಸಾಧನವಾಗಿರುವುದರಿಂದಲೂ ಕರ್ಮವು ಮೋಕ್ಷಪ್ರತಿಬಂಧಕವಾಗಿರುವುದರಿಂದಲೂ ಕರ್ಮಗಳಂ ಮಾಡಕೂಡದೆಂದಭಿಪ್ರಾಯವೇ ? ಕಿಂಚ ಕರ್ಮತ್ಯಾಗವೇ ಮೋಕ್ಷಸಾಧನವೆಂಬುವ ಪಕ್ಷದಲ್ಲಿ ಮೋಕ್ಷಕ್ಕೆ ಕರ್ಮಾಭಾವ ಸಾಧ್ಯತ್ವರೂಪವಾದ (ಮೋಕ್ಷವು ಕರ್ಮಗಳಂ ಮಾಡದೇ ಇರುವುದರಿಂದ ಹೊಂದತಕ್ಕದ್ದೆಂಬ) ಅರ್ಥವನ್ನು ಹೇಳುವ ನೈಷ್ಕರ್ಮ್ಯವೆಂಬ ಹೆಸರಿರುವಿಕೆಯೋ ಕಾರಣವೋ ? ಅಥವಾ ಕರ್ಮವಂ ತ್ಯಜಿಸಿದರೆ ಕರ್ಮಮೂಲವಾದ ಸಂಸಾರ ನಿವೃತ್ತಿಯಾಗುವುದರಿಂದ ಮೋಕ್ಷವುಂಟಾಗುವುದೆಂಬ ಯುಕ್ತಿಯೋ ? ಎಂಬದಾಗಿ ವಿಕಲ್ಪಮಾಡಿ

ಮೋಕ್ಷಕ್ಕೆ ನೈಷ್ಕರ್ಮ್ಯವೆಂಬ ನಾಮವಿರುವುದರಿಂದ ಕರ್ಮಗಳಂ ತ್ಯಜಿಸಬೇಕೆಂಬ ಪಕ್ಷವನ್ನು ದೂಷಿಸುತ್ತಾನೆ. ಕರ್ಮಣಾಂ- ಕರ್ಮಗಳ, ಅನಾರಂಭಾತ್- ಅನುಷ್ಠಿಸಲಾರಂಭವಮಾಡದೆ ಇರುವುದರಿಂದ, ನೈಷ್ಕರ್ಮ್ಯಂ- ಕರ್ಮತ್ಯಾಗ ಸಾಧನವಾದ ಮೋಕ್ಷವನ್ನು, ನಾಶ್ನುತೇ- ಹೊಂದುವುದಿಲ್ಲವು. ನಿರ್ಗತಂಕರ್ಮ- ಕಾಮ್ಯಕರ್ಮ ಯಸ್ಮಾತ್ಸಃನಿಷ್ಕರ್ಮಾ- ತಸ್ಯಭಾವೋ ನೈಷ್ಕರ್ಮ್ಯಮ್. ಕಾಮ್ಯ ಕರ್ಮತ್ಯಾಗದಿಂದ ಮೋಕ್ಷವುಂಟಾಗುವುದೆಂಬ ಕಾರಣದಿಂದ ಮೋಕ್ಷಕ್ಕೆ ನೈಷ್ಕರ್ಮ್ಯವೆಂಬ ಹೆಸರಲ್ಲದೆ ಸರ್ವಥಾ ಕರ್ಮತ್ಯಾಗದಿಂದಲೇ ಮೋಕ್ಷವುಂಟಾಗುವುದೆಂಬ ಕಾರಣದಿಂದ ನೈಷ್ಕರ್ಮ್ಯವೆಂಬ ಸಂಜ್ಞೆ ಇಲ್ಲವೆಂದು ತಾತ್ಪರ್ಯವು. ಮತ್ತು "ಕರ್ಮತ್ಯಾಗದಿಂದಲೇ ಮೋಕ್ಷವುಂಟಾಗುವುದೆಂಬ" ಶಂಕೆಯನ್ನು ಸಮಾಧಾನಪಡಿಸುವುದಕ್ಕೋಸ್ಕರ ಇಲ್ಲಿ ಪುರುಷಶಬ್ದವು ಪ್ರಯೋಗಿಸಲ್ಪಟ್ಟಿರುವುದು. ಪುರುಷಃ- ಪುರು- ದೇಹದಿಂದ, ಷಃ-ಸೇರಿರುವವನು. ಕರ್ಮತ್ಯಾಗದಿಂದ ಮೋಕ್ಷವೆಂಬುವ ಪಕ್ಷದಲ್ಲಿ ಅನಾದಿಯಾಗಿ ಅನುವರ್ತಿಸಿ ಬರುತಲಿರುವ ಈ ಸಂಸಾರದಲ್ಲಿ ಕರ್ಮಾಧಿಕಾರ ಶೂನ್ಯವಾದ ಮನುಷ್ಯೇತರ ಜನ್ಮಗಳು ಪ್ರಾಪ್ತವಾಗಿ ಅವುಗಳಲ್ಲಿ ವಿಹಿತನಿಷಿದ್ಧಗಳೆಂಬ ಕರ್ಮಗಳಿಲ್ಲದೇ ಇರುವುದರಿಂದ ಆವಾಗಲೇ ಇವನು ಮೋಕ್ಷವಂ ಹೊಂದಿರಬೇಕಾಗಿರುವಲ್ಲಿ ಈಗ ಪುರುಷ ಶಬ್ದ ವಾಚ್ಯವಾದ ಮನುಷ್ಯಜನ್ಮಕ್ಕೇನೆ ಅವಕಾಶವಿಲ್ಲವಾದುದರಿಂದ ಕರ್ಮತ್ಯಾಗದಿಂದ ಮೋಕ್ಷವೆಂಬುವವಾದವು ಸಮೀಚೀನವಾದದ್ದಲ್ಲವು. ಸರ್ವಕರ್ಮಗಳನ್ನು ಮಾಡದೇ ಇರುವುದರಿಂದಲೇ ಮೋಕ್ಷವುಂಟಾಗುವ ಪಕ್ಷದಲ್ಲಿ ಕರ್ಮಾನಧಿಕೃತ ಸ್ಥಾವರ ಪಶ್ವಾದಿಗಳಿಗೂ ಮೋಕ್ಷವುಂಟಾಗಬೇಕಾಗುವುದು. ಇದನ್ನಂಗೀಕರಿಸುವ ಪಕ್ಷದಲ್ಲಿ ಅನಾದಿಯಾದ ಸಂಸಾರದಲ್ಲಿ ಈ ಪುರುಷಜನ್ಮಕ್ಕೆ ಪೂರ್ವದಲ್ಲಿಯೇ ಸ್ಥಾವರಾದಿ ಜನ್ಮಗಳು ಪ್ರಾಪ್ತವಾಗಿ ಆವಾಗಲೇ ಮೋಕ್ಷವಂ ಹೊಂದಬೇಕಾಗಿರುವುದರಿಂದ ಈಗ ಕಾಣಲ್ಪಡುವ ಪುರುಷಜನ್ಮವು ಅಸಂಗತವಾಗಬೇಕಾಗುವುದು. ಕರ್ಮಗಳಂ ಬಿಟ್ಟರೇನೆ ಕರ್ಮಮೂಲವಾಗಿರುವ ಸಂಸಾರ ನಿವೃತ್ತಿಯಾಗುವುದರಿಂದ ಮೋಕ್ಷವುಂಟಾಗುವುದೆಂಬವಾದಕ್ಕೂ "ನಕರ್ಮಣಾಮನಾರಂಭಾತ್" ಎಂಬುವುದರಿಂದಲೆ ಸಮಾಧಾನವು ಹೇಳಲ್ಪಡುವುದು.

ಈ ವಾದ ನಿರಾಕರಣಕ್ಕೂ ಪುರುಷಶಬ್ದವೇ ಕಾರಣವಾಗಿರುವುದು. ಅದು ಹೇಗೆಂದರೆ—ಈ ಜೀವನಿಗೆ ಸಂಸಾರವು ಅನಾದಿಯಾಗಿರುವುದು, ಇಂಥಾ ಅನಾದಿ ಸಂಸಾರದಲ್ಲಿ ಕರ್ಮಾಧಿಕಾರಯೋಗ್ಯವಾದ ಅನಂತಜನ್ಮಗಳುಂಟಾಗಿ ಸದಾ ಪುರುಷಶಬ್ದದಿಂದ ಹೇಳಲ್ಪಡುವ ದೇಹಸಂಬಂಧವಿರುವುದರಿಂದ ಅನಂತವಾದ ಕರ್ಮಗಳಿರುತ ಈಗಿನ ದೇಹದಿಂದ ಕೂಡಿರುವ ಅವಸ್ಥೆಯಲ್ಲಿ ಕರ್ಮಗಳಂ ಮಾಡದೇ ಹೋದಮಾತ್ರದಲ್ಲಿಯೇ ಕರ್ಮಗಳಂಬಿಟ್ಟರೇ ಕರ್ಮಮೂಲವಾದ ಸಂಸಾರ ನಿವೃತ್ತಿಯಿಂದ ಮೋಕ್ಷವುಂಟಾಗುವುದೆಂದು ಹೇಳಲು ಆಗುವುದೋ? ಇಲ್ಲವು. "ಕರ್ಮಣಾಬಧ್ಯತೇಜಂತುಃ" ಎಂಬ ಸ್ಮೃತಿವಚನದಿಂದ ಕರ್ಮಗಳಿಗೆ ಬಂಧಕತ್ವರೂಪವಾದ ಆಕಾರವಿರುವುದರಿಂದ ಕರ್ಮಾಕರಣವೇ ಮೋಕ್ಷಸಾಧನವೆಂಬುವ ಮತವನ್ನು ಮುಂದೇ "ಯಜ್ಞಾರ್ಥಾತ್ಕರ್ಮಣೋಽನ್ಯತ್ರ" (೩॥ ೯॥) ಎಂಬುವ ಶ್ಲೋಕದಲ್ಲಿ ದೂಷಿಸುತ್ತಾನೆ. ಆದರೂ "ನಿಷ್ಕಾಮಂಜ್ಞಾನಪೂರ್ವಂತು ನಿವೃತ್ತಮಿಹಚೋಚ್ಯತೇ। ನಿವೃತ್ತಂ ಸೇವಮಾನಸ್ತು ಬ್ರಹ್ಮಾಪ್ಯೇತಿ ಸನಾತನಮ್॥" ಎಂಬ ಸ್ಮೃತಿವಚನವು ನಿಷ್ಕಾಮಕರ್ಮಕ್ಕೆ ಮೋಕ್ಷಸಾಧನತ್ವವಂ ಹೇಳುವುದು. ಹೇಗಾದರೆ ನಿಷ್ಕಾಮಕರ್ಮವು ಫಲಶೂನ್ಯತೆಯಿಂದ ಮೋಕ್ಷಸಾಧನವಾಗುವುದೋ ಆ ಪ್ರಕಾರವೇ ಕರ್ಮತ್ಯಾಗವೂ ಫಲಶೂನ್ಯತಾರೂಪವಾದ ಆಕಾರ ಸಾದೃಶ್ಯದಿಂದ ಮೋಕ್ಷಸಾಧನವಾಗಲಿ ? ಮತ್ತು ಕರ್ಮಗಳಂ ಮಾಡದೆ ಇರುವುದರಲ್ಲಿ ಆಯಾಸಾಭಾವರೂಪವಾದ ಗುಣವೂ ಇರುವುದು. ಕರ್ಮವಂ ಮಾಡದೇ ಇರುವುದರಿಂದ ಪ್ರತ್ಯವಾಯ ಸ್ಮರಣವು ಅಮುಮುಕ್ಷು ವಿಷಯವಾಗಿರುವುದರಿಂದ ಕರ್ಮಗಳು ಮಾಡತಕ್ಕದ್ದಲ್ಲವು, ಎಂಬ ಶಂಕಾಸಮಾಧಾನಾರ್ಥವಾಗಿ ಈ ಶ್ಲೋಕದ ಉತ್ತರಾರ್ಧವು ಪ್ರವೃತ್ತವಾಗಿರುವುದು. ಸನ್ನ್ಯಸನಾದೇವ- ನಿಷ್ಕಾಮಕರ್ಮದ ದಶೆಯಿಂದಲೆ, ಸಿದ್ಧಿಂ- ಮೋಕ್ಷವನ್ನು, ನಸಮಧಿಗಚ್ಛತಿ- ಹೊಂದುವುದಿಲ್ಲವು. ನಿಷ್ಕಾಮಕರ್ಮವು ಅಂತಃಕರಣ ಶುದ್ಧಿಯನ್ನು ಹುಟ್ಟಿಸಿ ವಿಷಯ ವೈರಾಗ್ಯಾದಿದ್ವಾರಾ ಮೋಕ್ಷಸಾಧನವಾಗುವುದೆಂದಭಿಪ್ರಾಯವು. ಈ ಅರ್ಥವು "ಕರ್ಮಭಿಶ್ಶುದ್ಧಸತ್ವಸ್ಯ ವೈರಾಗ್ಯಂ ಜಾಯತೇ ಹೃದಿ" ಎಂಬುವ ಪ್ರಮಾಣ ಪ್ರತಿಪನ್ನವಾಗಿರುವುದರಿಂದ ಫಲಶೂನ್ಯ

ತಾರೂಪವಾದ ಕಾರಣದಿಂದ ನಿಷ್ಕಾಮಕರ್ಮಕ್ಕೆ ಮೋಕ್ಷಸಾಧನತ್ವವಂ ಹೇಳಿ ಆ ದೃಷ್ಟಾಂತದಿಂದ ಕರ್ಮಾಕರಣವೇ ಮೋಕ್ಷಸಾಧನವೆಂಬುವು ದಾಗಿ ಹೇಳುವದೂ ಯುಕ್ತವಲ್ಲವು. ಮತ್ತು ಫಲರಹಿತವಾದ ಕಾಮ್ಯಕರ್ಮದಂತೆ ಫಲಶೂನ್ಯತ್ವಮಾತ್ರ ಸಾದೃಶ್ಯವುಳ್ಳ ಕರ್ಮಾಕರಣವು ಅಂತಃಕರಣ ಶುದ್ಧಿಯನ್ನುಂಟುಮಾಡಿ ವಿಷಯ ವೈರಾಗ್ಯಾದಿ ದ್ವಾರಾ ಮೋಕ್ಷಸಾಧನವಾಗುವುದೆಂದು ಹೇಳಲು ಯಾರಿಂದಲೂ ಆಗಲಾರದು.

ಆದರೂ " ಸನ್ನ್ಯಾಸಾಶ್ರಮ ವಿಹಿತಗಳಾದ ಧರ್ಮಗಳಿಗೆ ಫಲವಿಲ್ಲವೆಂಬ ಕಾರಣದಿಂದ ಮುಕ್ತಿಹೇತುತ್ವವು ಶ್ರುತಿಸಿದ್ಧವಾಗಿರುವುದರಿಂದ ಅದೇ ಪ್ರತಿಬಂದಿಯಿಂದಲೇ ಕರ್ಮಾಕರಣಕ್ಕೂ ಮೋಕ್ಷಸಾಧನತ್ವವಾಗಬಹುದೆಂಬದಾಗಿ ಪ್ರಶ್ನೆ ಅಂಕುರಿತವಾದ ಶಂಕಾ ಸಮಾಧಾನವು " ನಚಸನ್ನ್ಯಸನಾದೇವ " ಎಂಬುವದರಿಂದಲೇ ಹೇಳಲ್ಪಡುವುದು. ಕೇವಲ ಯತ್ಯಾಶ್ರಮದಿಂದಲೇ ಮೋಕ್ಷವುಂಟಾಗಲಾರದು; ಆದರೆ ಅದು ಪರಮಾತ್ಮನಲ್ಲಿ ಮನಸ್ಸಮಾಧಾನಮೂಲವಾಗಿಯೋ ಅಥವಾ ಭಗವತ್ಪ್ರೀತಿ ವಿಶೇಷಮೂಲವಾಗಿಯೋ ಮೋಕ್ಷಹೇತುವಾಗುವುದಲ್ಲದೆ ಫಲಾಂತರವಿಲ್ಲವೆಂಬ ಆಕಾರಮಾತ್ರದಿಂದಲೇ ಮೋಕ್ಷಹೇತುವಾಗುವುದಿಲ್ಲವು. ಆದುದರಿಂದ ಫಲಾಂತರಾಭಾವವತ್ತ್ವಪ್ರಯುಕ್ತವಾಗಿ ಕರ್ಮಾಕರಣಕ್ಕೆ ಮೋಕ್ಷಸಾಧನತ್ವವಂ ಹೇಳಕೂಡದು. ಮತ್ತು ಈಗ ನಿನಗೆ ಅಧಿಕಾರಿಕತ್ವರೂಪವಾದ ಕಾರಣಮಾತ್ರದಿಂದಲೆ ಕರ್ಮಗಳಂ ಮಾಡಬೇಕೆಂದು ಹೇಳಲಿಲ್ಲವು. ಇಲ್ಲಿ ನೀನು ಹೇಳಿದ ಪ್ರಕಾರವಾಗಿ ಕರ್ಮಾಕರಣಕ್ಕೆ ಮೋಕ್ಷಸಾಧನತ್ವವಿಲ್ಲವಾದುದರಿಂದಲೂ ನೀನು ಕರ್ಮಗಳಂ ಮಾಡಬೇಕೆಂದು ಹೇಳಿದೆನೆಂದು ಶ್ರೀಕೃಷ್ಣನು ಅರ್ಜುನನಿಗುಪದೇಶಿಸಿದನೆಂದರಿಯಬೇಕು. ಜ್ಞಾನ ಮಾತ್ರದಿಂದ ಲಿಂಗದೇಹ ನಿವೃತ್ತಿರೂಪವಾದ ಮೋಕ್ಷವೂ ಕರ್ಮದಿಂದ ಆನಂದಾಭಿವೃದ್ಧಿರೂಪವಾದ ಮೋಕ್ಷವು ಆಗುವುದೆಂಬದಾಗಿ ಜ್ಞಾನಕರ್ಮಗಳಿಗೆ ಮೋಕ್ಷವಿಷಯದಲ್ಲಿ ಪ್ರಯೋಜನವನ್ನರಿಯಬೇಕು. ... ॥೪॥

ಮೂ॥ ನಹಿಕಶ್ಚಿತ್ಕ್ಷಣಮಪಿ ಜಾತುತಿಷ್ಠತ್ಯಕರ್ಮ
ಕೃತ್ । ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈ
ರ್ಗುಣೈಃ ॥ ... ... ॥೫॥

ಪ|| ನ- ಹಿ- ಕಶ್ಚಿತ್- ಕ್ಷಣಂ- ಅಪಿ- ಜಾತು- ತಿಷ್ಠತಿ- ಅಕರ್ಮಕೃತ್ | ಕಾರ್ಯತೇ- ಹಿ- ಅವಶಃ- ಕರ್ಮ- ಸರ್ವಃ- ಪ್ರಕೃತಿಜೈಃ- ಗುಣೈಃ || ... ||೫||

ಅ|| ಜಾತು- ಒಂದುಕಾಲದಲ್ಲಿಯೂ, (ಗೀ|| ವಿ|| ಜಾಗ್ರತ್ಸ್ವಪ್ನ ಸುಷುಪ್ತ್ಯವಸ್ಥೆಗಳಲ್ಲಿಯೂ) ಕ್ಷಣಮಪಿ- ಒಂದುಕ್ಷಣವಾದರೂ, ಕಶ್ಚಿತ್- ಯಾವನೂ, (ಗೀ|| ವಿ|| ಜ್ಞಾನಿಯಾದರೂ ಅಜ್ಞಾನಿಯಾದರೂ,) ಅಕರ್ಮಕೃತ್- ಕರ್ಮಗಳಂ ಮಾಡದವನಾಗಿ, ನತಿಷ್ಠತಿ- ಇರುವದಿಲ್ಲವಷ್ಟೆ, ಹಿ- ಏತಕ್ಕೆಂದರೆ ! ಅವಶಃ - ಪರಾಧೀನನಾಗಿರುವ, (ಗೀ|| ವಿ|| ವಿಷ್ಣುವಿಗೆ ಸ್ವಾಧೀನವಾಗಿರುವ, ಸರ್ವಃ- ಎಲ್ಲರು, (ಗೀ|| ವಿ|| ಸರ್ವೋಜನಃ- ಸರ್ವಜನಗಳಿಂದ,) ಪ್ರಕೃತಿಜೈಃ- ಸ್ವಭಾವದಿಂದುಂಟಾದ, (ಶಂ|| ಮಾಯೆಯಿಂದುಂಟಾದ, ರಾ|| ಪ್ರಕೃತಿಯಿಂದುಂಟಾದ, (ಗೀ|| ವಿ|| ಪ್ರಕೃತಿಜೈರ್ಗುಣೈಃ- ಪ್ರಕೃತಿಯಿಂದುಂಟಾದ ಸತ್ವಾದಿ ಗುಣಗಳಿಂದ) ಗುಣೈಃ- (ರಾ|| ಪ್ರಾಚೀನ ಕರ್ಮಾನುಗುಣವಾಗಿ ವೃದ್ಧಿ ಹೊಂದತಕ್ಕ ಸತ್ವಾದಿಗುಣಗಳಿಂದ, ಶಂ|| ಸತ್ವರಜಸ್ತಮೋಗುಣಗಳಿಂದ) ಕರ್ಮ- ಕರ್ಮವನ್ನು, (ಗೀ|| ವಿ|| ಕರ್ಮವು) ಕಾರ್ಯತೇ- ಮಾಡಿಸಲ್ಪಡುತ್ತಾನೆ. (ಗೀ|| ವಿ|| ಮಾಡಲ್ಪಡುವುದು. ||೫||

(ಶಂ|| ಭಾ||) ಜ್ಞಾನರಹಿತವಾದ ಕೇವಲ ಕರ್ಮಸನ್ಯಾಸಮಾತ್ರದಿಂದಲೇ ನೈಷ್ಕರ್ಮ್ಯರೂಪವಾದ ಸಿದ್ಧಿಯು ಏತಕ್ಕೆ ಉಂಟಾಗಕೂಡದೆಂಬ ಶಂಕೆಯನ್ನು ಪರಿಹರಿಸುತ್ತಾನೆ. ಪ್ರತಿ ಮನುಷ್ಯನು ಅಸ್ವತಂತ್ರನಾಗಿರುವುದರಿಂದ ಪ್ರಕೃತಿಯಿಂದುಂಟಾದ ಸತ್ವರಜಸ್ತಮೋಗುಣಗಳಿಂದ ಪ್ರೇರಿತನಾಗಿ ಕರಚರಣಾದ್ಯವಯುವ ಚೇಷ್ಟಾರೂಪವಾದ ಕರ್ಮಗಳಂ ಮಾಡುತಲೇ ಇರುವನು. ಇಲ್ಲಿ "ಗುಣೈರ್ಯೋನವಿಚಾಲ್ಯತೇ" (೧೪|| ೨೩||) ಎಂಬುವುದಾಗಿ ಮುಂದೆ ಹೇಳುವ ಪ್ರಕಾರವಾಗಿ ಅಜ್ಞರಿಗೇನೆ ಕರ್ಮಕರ್ತೃತ್ವವಿರುವುದೆಂದು ತಿಳಿಯಬೇಕು. ಸಾಂಖ್ಯರಿಗೆ ಪೃಥಕ್ಕರಣವಿರುವುದರಿಂದ ಅಜ್ಞರಿಗಲ್ಲದೆ ಕರ್ಮಯೋಗವು ವಿಹಿತವಾಗಿರುವುದು. ಜ್ಞಾನಿಗಳಲ್ಲವು. ಜ್ಞಾನಿಗಳಿಗೆಂದರೊ ಗುಣಾಧೀನತ್ವವಿಲ್ಲದೇ ಇರುವುದರಿಂದ ಕರ್ಮಯೋಗವುಂಟಾಗುವುದೇ ಇಲ್ಲವು. ಈ ವಿಷಯವು ವಿಸ್ತಾರವಾಗಿ "ವೇದಾವಿನಾಶಿನಂ" (೨|| ೨೧||) ಎಂಬುವ ಶ್ಲೋಕದಲ್ಲಿ ವ್ಯಾಖ್ಯಾತವಾಗಿರುತ್ತದೆ. ... ... ||೫||

(ರಾ|| ಭಾ||) ಇದನ್ನೇ ತರ್ಕಯುಕ್ತಿಗಳಿಂದ ನಿರೂಪಿಸುತ್ತಾನೆ,— ಲೋಕದಲ್ಲಿ ಯಾವನು ಯಾವಕಾಲದಲ್ಲಿಯೂ ಯಾವ ಕೆಲಸವನ್ನೂ ಮಾಡದೇ ಇರಲಾರನು. ಆ ಮೇರಿಗೆ ಮಾಡದೇ ಇರುವೆನೆಂದು ಯಾವನಾದರೂ ನಿವೃತ್ತನಾದ ಪಕ್ಷದಲ್ಲಿ ಇವನ ಪೂರ್ವಕರ್ಮಾನುಸಾರವಾಗಿ

ವೃದ್ಧಿಹೊಂದುತಲಿರುವ ಪ್ರಕೃತಿಯಿಂದುಂಟಾದ ಸತ್ವಾದಿಗುಣತ್ರಯ ಗಳು ಅವನಿಗೆ ತಿಳಿಯದೇ ಸ್ವೋಚಿತವಾದ ಕೆಲವು ಕಾರ್ಯಗಳಲ್ಲಿವನನ್ನು ಪ್ರವೇಶಿಸುವಂತೆ ಮಾಡಿಸುವುದು. ಆದುದರಿಂದ ಪೂರ್ವೋಕ್ತವಾದ ಕರ್ಮಯೋಗದಿಂದ ಪ್ರಾಚೀನವಾದ ಪಾಪ ಸಂಚಯವನ್ನು ನಾಶಪಡಿಸಿಕೊಂಡು ಮತ್ತು ಸತ್ವಾದಿಗುಣಗಳನ್ನು ಸ್ವಾಧೀನ ಪಡಿಸಿಕೊಂಡು ನಿರ್ಮಲಾಂತಃಕರಣದಿಂದ ಜ್ಞಾನಯೋಗವು ಸಂಪಾದಿಸತಕ್ಕದ್ದು. ||೫||

ಮೂ|| ಕರ್ಮೇಂದ್ರಿಯಾಣಿ ಸಂಯಮ್ಯ ಯಆಸ್ತೇಮನ
ಸಾಸ್ಮರನ್ | ಇಂದ್ರಿಯಾರ್ಥಾನ್ ವಿಮೂಢಾತ್ಮಾ ಮಿಥ್ಯಾ
ಚಾರಸ್ಸ ಉಚ್ಯತೇ || ... ||೬||

ಪ|| ಕರ್ಮೇಂದ್ರಿಯಾಣಿ- ಸಂಯಮ್ಯ- ಯಃ- ಆಸ್ತೇ- ಮನಸಾ- ಸ್ಮರನ್| ಇಂದ್ರಿಯಾರ್ಥಾನ್- ವಿಮೂಢಾತ್ಮಾ- ಮಿಥ್ಯಾಚಾರಃ- ಸಃ- ಉಚ್ಯತೇ || ... ||೬||

ಅ|| ಕರ್ಮೇಂದ್ರಿಯಾಣಿ- ಕರ್ಮೇಂದ್ರಿಯಗಳನ್ನು, (ಅಂದರೆ|| ಕಿವಿ, ಕಣ್ಣು, ನಾಲಿಗೆ, ಮೂಗು, ತ್ವಕ್, ಎಂಬುವ ಜ್ಞಾನೇಂದ್ರಿಯಗಳನ್ನು, ಹೊರತು ; ಬಾಯಿ, ಕೈ, ಕಾಲು, ಪಾಯು, ಉಪಸ್ಥ, ಎಂಬ ಕರ್ಮೇಂದ್ರಿಯಗಳನ್ನು, ಸಂಯಮ್ಯ- ಅಡಗಿಸಿ, ಯಃ- ಯಾವನು, ಮನಸಾ- ಮನಸ್ಸಿನಿಂದ, ಇಂದ್ರಿಯಾರ್ಥಾನ್- ವಿಷಯಗಳನ್ನು, ಸ್ಮರನ್ಆಸ್ತೇ- ನೆನಸಿಕೊಂಡಿರುತ್ತಾನೋ, ವಿಮೂಢಾತ್ಮಾ- ಮೋಹಗೊಂಡವನಾದ, ಸಃ- ಅವನು, ಮಿಥ್ಯಾಚಾರಃ- ಮಿಥ್ಯಾಚಾರನೆಂದು, (ರಾ|| ಆತ್ಮಜ್ಞಾನಾರ್ಥ ಪ್ರಯತ್ನವುಳ್ಳವನಾದರೂ ವಿಪರೀತಜ್ಞಾನವುಳ್ಳವನಾದ್ದರಿಂದ ವಿನಷ್ಟನಾಗುವನೆಂದು, ಶ್ರೀ|| ಡಂಭಾಚಾರ ಪ್ರವೃತ್ತನೆಂದು,) ಉಚ್ಯತೇ - ಹೇಳಲ್ಪಡುವನು. ... ... ||೬||

(ಶಂ|| ಭಾ||) ಆತ್ಮಜ್ಞಾನವಿಲ್ಲದವನು ಕರ್ಮಗಳಂ ಮಾಡದೆ ಬಿಟ್ಟದ್ದೇ ಆದರೆ ಅಂಥಾವನು ಪಾಪಿಯಾಗುವನೆಂದು ಈ ಶ್ಲೋಕದಲ್ಲಿ ಹೇಳಲ್ಪಡುವುದು. ... ... ... ||೬||

(ರಾ|| ಭಾ||) ಆ ಪ್ರಕಾರವಿಲ್ಲದೇ ಜ್ಞಾನಯೋಗದಲ್ಲಿ ಪ್ರವರ್ತಿಸಿದರೆ ಮಿಥ್ಯಾಚಾರನಾಗುವುನೆಂದು ಹೇಳುತ್ತಾನೆ. ಪಾಪಗಳು ವಿನಷ್ಟಗಳಾಗದೆ ಇರುವುದರಿಂದ ಅಂತಃಕರಣ ಬಹಿಃಕರಣಗಳು ಯಾವನಿಗಾದರೆ ವಶಪಡುವುದಿಲ್ಲವೊ ಅಂಥಾವನು ಆತ್ಮಜ್ಞಾನಾರ್ಥವಾಗಿ ಪ್ರಯತ್ನಿಸಿದರೆ ಅವನು ಶಬ್ದಾದಿ ವಿಷಯಗಳಲ್ಲಿ ಆಪೇಕ್ಷೆಯುಳ್ಳವನಾಗಿರುವುದರಿಂದ ಆತ್ಮವಿಷಯದಲ್ಲಿ ವಿಮುಖವಾದ ಮನಸ್ಸುಳ್ಳವನಾಗಿ ವಿಷಯಗಳನ್ನೇ ನೆನೆ

ಸುತಲಿರುವನು. ಆ ಪ್ರಕಾರವಾಗಿ ಒಂದು ಕಾರ್ಯವನ್ನು ಮಾಡಲುಜ್ಜಗಿಸಿ ಬೇರೆಯೊಂದನ್ನು ಮಾಡುವುದರಿಂದ ಅವನು ಮಿಥ್ಯಾಚಾರನೆಂದು ಹೇಳಲ್ಪಡುವನು. ಅಂದರೆ ಆತ್ಮಜ್ಞಾನಾರ್ಥವಾಗಿ ಪ್ರಯತ್ನಿಸಿದವನು ಅದಕ್ಕೆ ವಿಪರೀತವಾದ ಕಾರ್ಯಗಳಂ ಮಾಡುವುದರಿಂದ ವಿನಷ್ಟನಾಗುತ್ತಾನೆಂದರ್ಥವು. ... ... ॥೬॥

ಮೂ॥ ಯಸ್ತ್ವಿಂದ್ರಿಯಾಣಿ ಮನಸಾ ನಿಯಮ್ಯಾ
ರಭತೇಽರ್ಜುನ | ಕರ್ಮೇಂದ್ರಿಯೈಃ ಕರ್ಮಯೋಗ ಮಸಕ್ತ
ಸ್ಸವಿಶಿಷ್ಯತೇ ॥ ... ... ॥೭॥

ಪ॥ ಯಃ- ತು- ಇಂದ್ರಿಯಾಣಿ- ಮನಸಾ- ನಿಯಮ್ಯ- ಆರಭತೇ- ಅರ್ಜುನ| ಕರ್ಮೇಂದ್ರಿಯೈಃ- ಕರ್ಮಯೋಗಂ- ಅಸಕ್ತಃ- ಸಃ- ವಿಶಿಷ್ಯತೇ ॥ ... ॥೭॥

ಅ॥ ಯಸ್ತು- ಯಾವನಾದರೆ, ಇಂದ್ರಿಯಾಣಿ- ಜ್ಞಾನೇಂದ್ರಿಯಗಳನ್ನು, ಮನಸಾ- ಮನಸ್ಸಿನಿಂದ, (ರಾ॥ ಆತ್ಮದರ್ಶನದಲ್ಲಿ ಪ್ರವೃತ್ತವಾದ ಮನಸ್ಸಿನಿಂದ) ನಿಯಮ್ಯ- ಅಡಗಿಸಿ, (ಶ್ರೀ॥ ಈಶ್ವರ ಧ್ಯಾನದಲ್ಲಿ ನಿಯುಕ್ತವಾಗಿ ಮಾಡಿ,) ಕರ್ಮೇಂದ್ರಿಯೈಃ- ಕರ್ಮೇಂದ್ರಿಯಗಳಿಂದ, ಕರ್ಮಯೋಗಂ- ಕರ್ಮಯೋಗವನ್ನು, (ಮ॥ ಗೀ॥ವಿ॥ ಶಾಸ್ತ್ರಪ್ರಚೋದಿತವಾಗಿರುವ ಜ್ಞಾನಸಾಧನವಾದ ಕರ್ಮವನ್ನು), ಅಸಕ್ತಃ- ಫಲಾಪೇಕ್ಷಾ ರಹಿತನಾಗಿ, ಆರಭತೇ- ಮಾಡಲಾರಂಭಿಸುತ್ತಾನೋ, ಹೇ ಅರ್ಜುನ- ಎಲೈ ಅರ್ಜುನನೇ! ಸಃ- ಅವನು, ವಿಶಿಷ್ಯತೇ- ಶ್ರೇಷ್ಠನಾಗುತ್ತಾನೆ. (ಶಂ॥ ಮಿಥ್ಯಾಚಾರನಿಗಿಂತಲೂ ಶ್ರೇಷ್ಠನು, ಶ್ರೀ॥ ಜ್ಞಾನ ಪ್ರಬಲನಾಗುತ್ತಾನೆ.) ... ... ॥೭॥

(ಶಂ॥ ಭಾ॥) ಪೂರ್ವಶ್ಲೋಕದಲ್ಲಿ ಹೇಳಲ್ಪಟ್ಟ ಮಿಥ್ಯಾಚಾರನಿಗಿಂತಲೂ, ವೇದಚೋದಿತಗಳಾದ ಕರ್ಮಗಳನ್ನು ಭಗವದರ್ಪಣ ಬುದ್ಧಿಯಿಂದ ಫಲಾಭಿಲಾಷೆಯನ್ನು ಬಿಟ್ಟು ಮಾಡುವಂಥಾ ಗೃಹಸ್ಥನು ಸದಾಚಾರವುಳ್ಳವನಾದುದರಿಂದ ಉತ್ತಮನೆಂದು ಹೇಳಲ್ಪಡುವನು. ॥೭॥

(ರಾ॥ ಭಾ॥) ಯಾವನಾದರೆ ತಾನು ಪೂರ್ವದಲ್ಲಿ ಅಭ್ಯಾಸಮಾಡಲ್ಪಟ್ಟ ಕರ್ಮಗಳಂತೆ ಶಾಸ್ತ್ರೋಕ್ತವಾದ ಕರ್ಮಗಳೂ ಕೆಲವು ಇರುವುದರಿಂದ ಅವುಗಳಲ್ಲಿ ಆತ್ಮದರ್ಶನ ಪ್ರವೃತ್ತವಾದ ಮನಸ್ಸಿನಿಂದ ಇಂದ್ರಿಯಗಳನ್ನಡಗಿಸಿ ತಮ್ಮ ತಮ್ಮ ಕರ್ಮಗಳಲ್ಲಿ ಪ್ರವರ್ತಿಸುವ ಸ್ವಭಾವವುಳ್ಳ ಇಂದ್ರಿಯಗಳಿಂದ ಫಲಾಸಕ್ತಿರಹಿತನಾಗಿ ಕರ್ಮಯೋಗವಂ ಮಾಡಲುಪಕ್ರಮಿಸುತ್ತಾನೋ ಅವನೇ ಶ್ರೇಷ್ಠನು. ಅಂದರೆ ಅವ

ನಿಗೆ ಯಾವವಿಧವಾದ ಪ್ರಮಾದವು ಸಂಭವಿಸುವುದಿಲ್ಲವಾದುದರಿಂದ ಅವನು ಮೇಲೆಹೇಳಲ್ಪಟ್ಟ ಜ್ಞಾನನಿಷ್ಠನಿಗಿಂತಲೂ ಶ್ರೇಷ್ಠನೆಂದರ್ಥವು||

ಮೂ|| ನಿಯತಂ ಕುರುಕರ್ಮತ್ವಂ ಕರ್ಮಜ್ಯಾಯೋಹ್ಯ
ಕರ್ಮಣಃ | ಶರೀರ ಯಾತ್ರಾಪಿಚತೇ ನಪ್ರಸಿದ್ಧ್ಯೇದ
ಕರ್ಮಣಃ || ... ... ||೮||

ಪ|| ನಿಯತಂ- ಕುರು - ಕರ್ಮ- ತ್ವಂ- ಕರ್ಮ- ಜ್ಯಾಯಃ- ಹಿ- ಅಕರ್ಮಣಃ | ಶರೀರ ಯಾತ್ರಾ- ಅಪಿ- ಚ- ತೇ- ನ- ಪ್ರಸಿದ್ಧ್ಯೇತ್- ಅಕರ್ಮಣಃ || ||೮||

ಪ|| ನಿಯತಂ- ನಿತ್ಯವಾಗಿ ಮಾಡತಕ್ಕ, (ಮ|| ಗೀ|| ವಿ|| ನಿಯತಂಕರ್ಮ- ಶಾಸ್ತ್ರಚೋದಿತ ಕರ್ಮಗಳು.) ಕರ್ಮ- ಕರ್ಮಗಳನ್ನು, ತ್ವಂ- ನೀನು, ಕುರು- ಮಾಡು, ಅಕರ್ಮಣಃ- ಕರ್ಮಗಳನ್ನು ಮಾಡದೇ ಇರುವುದಕ್ಕಿಂತಲೂ, ಕರ್ಮ- ಕರ್ಮವನ್ನು ಮಾಡುವಿಕೆಯು, ಜ್ಯಾಯಃ- ಶ್ರೇಷ್ಠವಲ್ಲವೇ, ಅಕರ್ಮಣಃ- ಕರ್ಮಗಳಂ ಮಾಡದೇ ಇರುವ, (ಅ|| ಕರ್ಮಗಳನ್ನು ಮಾಡದೇ ಇರುವುದರಿಂದ,) ತೇ - ನಿನ್ನ, ಶರೀರಯಾತ್ರಾಪಿ - ಶರೀರ ರಕ್ಷಣವು ಕೂಡ, ನಪ್ರಸಿದ್ಧ್ಯೇತ್- ಸಿದ್ಧಿಯಾಗುವುದಿಲ್ಲವು. ... ||೮||

(ಶಂ|| ಭಾ||) ಕರ್ಮಗಳನ್ನು ಮಾಡದೇ ಇರುವವನಿಗಿಂತಲೂ ಕರ್ಮಗಳನ್ನು ಮಾಡತಕ್ಕವನು ಶ್ರೇಷ್ಠನೆಂದು ಹೇಳಿದ ಶ್ಲೋಕಾರ್ಥವನ್ನೇ ಪುನಃ ಹೇಳಲುದ್ದೇಶಿಸಿ ಕರ್ಮಾನುಷ್ಠಾನದಲ್ಲಧಿಕಾರಿಯಾದವನು ಕರ್ಮಗಳನ್ನೇ ಮಾಡಬೇಕೆಂದು ತಿಳಿಸಲು ಮತ್ತೊಂದು ಕಾರಣವನ್ನು ಕೂಡ ಈ ಶ್ಲೋಕದಲ್ಲಿ ಹೇಳುತ್ತಾನೆ.— ಕರ್ಮಗಳನ್ನು ಮಾಡದೇ ಇರುವವನಿಗಿಂತಲೂ ಕರ್ಮಗಳನ್ನು ಮಾಡುವವನು ಶ್ರೇಷ್ಠನಾದುದರಿಂದ ಕರ್ಮಾನುಷ್ಠಾನದಲ್ಲಿ ಅಧಿಕಾರವುಳ್ಳವನು, ಶಾಸ್ತ್ರ ಚೋದಿತವಾದ ನಿತ್ಯಕರ್ಮಗಳನ್ನು ಅವಶ್ಯವಾಗಿಮಾಡಿಯೇ ತೀರಬೇಕು. ಆದರೆ ಕರ್ಮಾಧಿಕಾರಿಯಾದವನು ಶಾಸ್ತ್ರೋಕ್ತಗಳಾದ ನಿತ್ಯಕರ್ಮಗಳನ್ನು ಮಾಡಬೇಕೆಂದು ಹೇಳುವಪಕ್ಷದಲ್ಲಿ ಸ್ವರ್ಗಾದಿ ಫಲಗಳನ್ನು ಕೊಡುತಲಿರುವ ದರ್ಶ ಪೂರ್ಣಮಾಸಾದಿ ಕರ್ಮಗಳಲ್ಲಿ ಅಧಿಕಾರವುಳ್ಳವನಿಗೆ, ಇಂಥಾ ಕರ್ಮಗಳು ಕೂಡ ನಿತ್ಯಕರ್ಮಗಳೇ ಆಗುವುದರಿಂದ ಅವುಗಳನ್ನು ಕೂಡಾ ಮಾಡಬೇಕೋ ? ಅಂದರೆ ಯಾವ ಯಾವ ಕರ್ಮಗಳು ಫಲಕ್ಕೋಸ್ಕರವಾಗಿ ಶ್ರುತವಾಗುವುದಿಲ್ಲವೋ ಅಂಥಾ ನಿತ್ಯಕರ್ಮಗಳು ಮಾಡತಕ್ಕವುಗಳೆಂತಲೂ, ಫಲಾರ್ಥವಾಗಿಯೇ ಶ್ರುತಗಳಾಗುವ ಕರ್ಮಗಳು ನಿತ್ಯಕರ್ಮಗಳಾ

ಗುವುದಿಲ್ಲವಾದುದರಿಂದ ಅಂಥಾ ಕಾಮ್ಯಕರ್ಮಗಳಂ ಮಾಡದೇ ಇರು ವುದರಿಂದ ಬಾಧಕವಿಲ್ಲವೆಂತಲೂ ತಿಳಿದು ಕರ್ಮಾಧಿಕಾರಿಯಾದವನು ಕಾಮ್ಯ ಕರ್ಮಗಳಂ ಮಾಡಲವಶ್ಯಕವಿಲ್ಲವು. ಮತ್ತು ಕರ್ಮಗಳಂ ಮಾ ಡುವುದರಿಂದ ಅದೃಷ್ಟವಾದ ಚಿತ್ತಶುದ್ಧಿ ರೂಪ ಫಲಮಾತ್ರವೇ ಪ್ರಾಪ್ತವಾಗುವುದಲ್ಲದೇ ದೇಹಾದಿ ಚೇಷ್ಟಾದ್ವಾರಾ ಶರೀರಸ್ಥಿತಿಗೂ ಸಾಧನ ವಾಗುವುದರಿಂದ ಶರೀರ ಯಾತ್ರೆಯೂ ಸಿದ್ಧಿಸುವುದೆಂದು ಹೇಳಿತು. ... ... ||೮||

(ರಾ|| ಭಾ||) ಅನಾದಿವಾಸನೆಯಿಂದ ಪ್ರಕೃತಿವಶ್ಯನಾದ ಪುರುಷ ನಿಗೆ ಕರ್ಮಾಚರಣವು ಸ್ವಭಾವ ಸಿದ್ಧವಾಗಿರುವುದರಿಂದ ಅದಂ ಮಾಡು ವುದು ಸುಖಕರವಾಗಿಯೂ ಪ್ರಮಾದವನ್ನು ಕೊಡದೆಯೂ ಇರುವು ದು. ಜ್ಞಾನನಿಷ್ಠೆಯೋ ಅಭ್ಯಾಸವಿಲ್ಲದೇ ಮಾಡಲು ಕಷ್ಟವಾಗಿಯೂ, ಅನರ್ಥ ಹೇತುವಾಗಿಯೂ ಇರುವುದು. ಈ ಪ್ರಕಾರವಾಗಿ ಕರ್ಮವು ಮಾಡುವುದಕ್ಕೆ ಸುಖವಾಗಿರುವುದರಿಂದಲೂ, ಇದನ್ನು ಮಾಡುವ ಕಾ ಲದಲ್ಲಿ ಆತ್ಮನ ಯಥಾರ್ಥ ಸ್ವರೂಪವನ್ನು ತಿಳಿದು, ಆತ್ಮನಿಗೆ ಕರ್ತೃ ತ್ವಾದಿಗಳಿಲ್ಲವೆಂದು ತಿಳಿಯ ಬೇಕಾಗಿರುವುದರಿಂದ ಜ್ಞಾನಯೋಗವು ಈ ಕರ್ಮಯೋಗದಲ್ಲಂತರ್ಭವಿಸಿರುವುದರಿಂದಲೂ, ಇದು ಜ್ಞಾನಯೋಗ ಕ್ಕಿಂತಲೂ ಶ್ರೇಷ್ಠವಾಗಿರುವುದು. ಆದರೆ ಜ್ಞಾನಯೋಗವು ಶ್ರೇಷ್ಠ ವೆಂದು ಹೇಳಲೂ ಕಾರಣವೇನೆಂದರೆ ? ಅದು ಆ ಜ್ಞಾನನಿಷ್ಠೆಗೆ ತಕ್ಕ ಅಧಿಕಾರಿಯ ವಿಷಯವಾಗಿರುವುದು. ಮತ್ತು ಸಕಲಕರ್ಮಗಳಂ ಬಿಟ್ಟು ಮೊದಲು ಜ್ಞಾನನಿಷ್ಠೆಯಲ್ಲಿ ಪ್ರವರ್ತಿಸುವಂತವನಿಗೆ ಅಂಥಾ ನಿಷ್ಠೆಗೆ ಅವಶ್ಯಕವಾದ ಶರೀರಧಾರಣವೇ ಸಿದ್ಧಿಸುವುದಿಲ್ಲವು. ಮೊದಲುನ್ಯಾಯಾ ರ್ಜಿತವಾದ ದ್ರವ್ಯಗಳಿಂದ ಮಾಡಲ್ಪಡುವ ಯಜ್ಞಶೇಷದಿಂದ ಶರೀರರ ಕ್ಷಣವಂ ಮಾಡಬೇಕಾಗಿರುತದೆ. "ಆಹಾರವು ಶುದ್ಧವಾದರೇ ಸತ್ವ ಶು ದ್ಧಿಯುಂಟಾಗುವುದು. ಅದರಿಂದ ಧ್ರುವಾನುಸ್ಮೃತಿಯುಂಟಾಗುವು ದೆಂದು " ವೇದದಲ್ಲಿ ಹೇಳಿರುವ ಪ್ರಕಾರವಾಗಿ ಅಂಥಾಸ್ಮೃತಿಯು ಜ್ಞಾ ನಯೋಗಕ್ಕೆ ಉಪಕಾರಕ ವಾಗಿರುವುದರಿಂದ, ಯಜ್ಞಶೇಷದಿಂದ ಶರೀರ ಧಾರಣವಂ ಮಾಡಬೇಕೆಂದರಿಯಬೇಕು. ಈ ಅರ್ಥವು " ತೇತ್ವ ಘಂ ಭುಂಜತೇಪಾಪಾ ಯೇಪಚಂತ್ಯಾತ್ಮಕಾರಣಾತ್| " ( ೩|| ೧೩ ||)

ಎಂಬುವುದಾಗಿ ಮುಂದೆಯೂ ಹೇಳಲ್ಪಡುವುದು. ಸಾಧನಪೂರ್ತಿಯಾ ಗುವವರೆಗೂ ಶರೀರವು ಇದ್ದೇ ತೀರಬೇಕು. ಯಜ್ಞಶೇಷದಿಂದ ಶರೀರಪೋಷಣವಂ ಮಾಡಬೇಕೆಂಬುವುದು ಸಿದ್ಧವಾಯಿತು. ಕರ್ಮವಿಲ್ಲದೆ ಯಜ್ಞಮಾಡುವುದು ಹೇಗೆ ? ಆದುದರಿಂದ ಜ್ಞಾನನಿಷ್ಠನಿಗೂ ಶರೀರವಿರುವವರೆಗೂ ನಿತ್ಯನೈಮಿತ್ತಿಕ ಕರ್ಮಗಳು ಅವಶ್ಯಾನುಷ್ಠೇಯಗಳಾಗಿರುವುದರಿಂದಲೂ, ಕರ್ಮಯೋಗದಲ್ಲಿ ಆತ್ಮಜ್ಞಾನವು ಅಡಗಿರುವುದರಿಂದಲೂ, ಪ್ರಾಕೃತಪುರುಷರಿಗೆ ಕರ್ಮಾಚರಣವು ಸುಲಭವಾಗಿಯೂ ಪ್ರಮಾದವನ್ನುಂಟುಮಾಡದೆಯೂ ಇರುವುದರಿಂದಲೂ, ಜ್ಞಾನನಿಷ್ಠಾಧಿಕಾರಿಗೂ ಕೂಡ ಕರ್ಮಯೋಗವೇ ಶ್ರೇಷ್ಠವಾದದ್ದೆಂದರಿಯಬೇಕು. (ಆದುದರಿಂದ ನೀನು ಕರ್ಮಯೋಗವನ್ನುಮಾಡೆಂದು ತಾತ್ಪರ್ಯವು.)॥೮॥

ಮೂ ॥ ಯಜ್ಞಾರ್ಥಾತ್ಕರ್ಮಣೋಽನ್ಯತ್ರ ಲೋಕೋ
ಯಂಕರ್ಮಬಂಧನಃ । ತದರ್ಥಂ ಕರ್ಮಕೌಂತೇಯ ಮು
ಕ್ತಸಂಗಸ್ಸಮಾಚರ ॥ .. ॥೯॥

ಪ॥ ಯಜ್ಞಾರ್ಥಾತ್- ಕರ್ಮಣಃ- ಅನ್ಯತ್ರ- ಲೋಕಃ- ಅಯಂ- ಕರ್ಮಬಂಧನಃ। ತದರ್ಥಂ- ಕರ್ಮ- ಕೌಂತೇಯ- ಮುಕ್ತಸಂಗಃ- ಸಮಾಚರ ॥ ... ॥೯॥

ಅ ॥ ಯಜ್ಞಾರ್ಥಾತ್- (ಶಂ॥ ಶ್ರೀ॥ ಗೀ॥ವಿ॥ ವಿಷ್ಣುವಿನ ಆರಾಧನ ರೂಪವಾದ, ರಾ॥ ಯಾಗ ನಿಮಿತ್ತವಾದ,) ಕರ್ಮಣಃ- ಕರ್ಮಕ್ಕಿಂತಲೂ, ಅನ್ಯತ್ರ- ಇತರವಾದ ಕಾಮ್ಯಕರ್ಮಗಳಲ್ಲಿ, (ರಾ॥ ಇತರವಾದಕರ್ಮಗಳಲ್ಲಿ)ಅಯಂಲೋಕಃ- ಈ ಜನರು,(ಇದು ಜಾತ್ಯೇಕವಚನವಾಗಿರುವುದು) ಕರ್ಮಬಂಧನಃ- ಕರ್ಮದಿಂದ ಬದ್ಧರಾಗಿರುವರು. ತದರ್ಥಂ - ಆ ವಿಷ್ಣುವಿನ ಆರಾಧನಾರ್ಥವಾಗಿ, (ರಾ॥ ಆ ಯಜ್ಞಾದಿಗಳಿಗುಚಿತವಾಗಿ) ಕರ್ಮ - ಕರ್ಮವನ್ನು, ಮುಕ್ತಸಂಗಃ - ಫಲಾಪೇಕ್ಷೆಯನ್ನು ಬಿಟ್ಟು, ಹೇ ಕೌಂತೇಯ - ಎಲೈ ಕುಂತೀಪುತ್ರನಾದ ಅರ್ಜುನನೇ ! ಸಮಾಚರ- ಸಮೀಚೀನವಾಗಿ ಮಾಡು. ... ॥೯॥

(ಶಂ॥ ಶ್ರೀ॥ ಗೀ॥ ವಿ॥) “ ಕರ್ಮಣಾಬಧ್ಯತೇಜಂತುರ್ವಿದ್ಯಯಾಚವಿಮುಚ್ಯತೇ । ತಸ್ಮಾತ್ಕರ್ಮನಕುರ್ವಂತಿಯತಯಃಪಾರದರ್ಶಿನಃ॥ ” ಎಂಬುವ ಸ್ಮೃತಿಪ್ರಮಾಣವು ಕರ್ಮಕ್ಕೆ ಮೋಕ್ಷಪ್ರತಿಬಂಧಕತ್ವವಂ ಹೇಳುವುದರಿಂದ ಯುದ್ಧಾದಿಕರ್ಮಗಳಂ ಮಾಡಲಾರೆನೆಂದು ಹೇಳುತಲಿರುವ ಅರ್ಜುನನ ಸಮಾಧಾನಾರ್ಥವಾಗಿ ಈ ಶ್ಲೋಕವು ಪ್ರವೃತ್ತವಾಯಿತು. ಶ್ರುತಿಯಲ್ಲಿ ಯಜ್ಞಶಬ್ದವು ವಿಷ್ಣುವಿನ ನಾಮವೆಂದು ಹೇಳು

ವುದರಿಂದ ಅಂಥಾ ವಿಷ್ಣುವಿನ ಆರಾಧನಾರ್ಥವಾದ ಕರ್ಮಕ್ಕಿಂತಲೂ ಇತರಗಳಾದ ಕರ್ಮಗಳು ಬಂಧಕವಾದುದರಿಂದ ನೀನು ಸ್ವೋಚಿತವಾದ ಕರ್ಮಗಳನ್ನು ಆ ವಿಷ್ಣ್ವಾರಾಧನ ರೂಪವಾಗಿ ಫಲಸಂಗಾದಿಗಳಂ ಬಿಟ್ಟು ಮಾಡುತಲಿರು. ... ... ॥೯॥

(ರಾ॥ಭಾ॥) ಈ ಪ್ರಕಾರವಾಗಿ ಹೇಳಿದರೆ ದ್ರವ್ಯಾನ್ವೇಷಣವೇ ಮೊದಲಾದ ಕರ್ಮಗಳು ಅಹಂಕಾರ ಮಮಕಾರಗಳೇ ಮೊದಲಾದ ಇಂದ್ರಿಯ ವ್ಯಾಕುಲವನ್ನುಂಟುಮಾಡುವುದರಿಂದ ಪುರುಷನಿಗೆ ಕರ್ಮವಾಸನೆಯುಂಟಾಗಿ ಅದರಿಂದ ಸಂಸಾರ ವುಂಟಾಗಲಾರದೋ ? ಎಂದರೇ ಉತ್ತರವನ್ನು ಹೇಳುತ್ತಾನೆ. ಶಾಸ್ತ್ರ ಚೋದಿತಗಳಾದ ಯಜ್ಞಾದಿಕರ್ಮಗಳಿಗಾಗಿ ದ್ರವ್ಯಾನ್ವೇಷಣವೇ ಮೊದಲಾದ ಕರ್ಮಗಳಂ ತ್ಯಜಿಸಿ ಸ್ವಪ್ರಯೋಜನಾರ್ಥವಾಗಿ ಮಾಡುವ ಕರ್ಮಗಳೆಲ್ಲವೂ ಬಂಧಕವಾದ ಸಂಸಾರಕ್ಕೆ ಕಾರಣವಾಗುವುದು. ಆದುದರಿಂದ ನೀನು ಯಜ್ಞಾರ್ಥವಾದ ದ್ರವ್ಯಾರ್ಜನಾದಿ ಕರ್ಮವನ್ನು ಮಾಡು. ಆದರೇ ಇಂಥಾ ಕರ್ಮಗಳಂ ಮಾಡುತಲಿರುವಲ್ಲಿ ನನಗೆ ಈ ಕರ್ಮವು ಪ್ರಯೋಜನಕಾರಿಯಾಗಿರುವುದೆಂಬ ಫಲ ಸಂಗವನ್ನು ಬಿಟ್ಟು ಮಾಡು. ಸಂಗರಹಿತನಾಗಿ ಮಾಡುತಲಿರುವ ಯಜ್ಞಾದಿಗಳಿಗಾಗಿ ಕರ್ಮಗಳಂ ಮಾಡುತ್ತಾ ಬಂದರೇ ಆ ಯಜ್ಞಾದಿಗಳಿಂದ ಪರಮ ಪುರುಷನು ಆರಾಧಿಸಲ್ಪಟ್ಟು ಅನಾದಿಕಾಲದಿಂದ ಪ್ರವೃತ್ತವಾದ ಕರ್ಮವಾಸನೆಯಂ ಬಿಡಿಸಿ ವ್ಯಾಕುಲರಹಿತವಾದ ಆತ್ಮದರ್ಶನವನ್ನುಂಟುಮಾಡಿಸುವನೆಂದು ತಾತ್ಪರ್ಯವು. ... ... ॥೯॥

ಮೂ॥ ಸಹಯಜ್ಞಾಃ ಪ್ರಜಾಸ್ಸೃಷ್ಟ್ವಾ ಪುರೋವಾ
ಚ ಪ್ರಜಾಪತಿಃ । ಅನೇನ ಪ್ರಸವಿಷ್ಯಧ್ವ ಮೇಷವೋ
ಸ್ತ್ವಿಷ್ಟಕಾಮಧುಕ್ ॥ ... ॥೧೦॥

ಪ॥ ಸಹಯಜ್ಞಾಃ- (ಶಂ॥ ಸಹಯಜ್ಞಾಃ-) ಪ್ರಜಾಃ- ಸೃಷ್ಟ್ವಾ- ಪುರಾ- ಉವಾಚ- ಪ್ರಜಾಪತಿಃ । ಅನೇನ- ಪ್ರಸವಿಷ್ಯಧ್ವಂ- ಏಷಃ- ವಃ- ಇಷ್ಟಕಾಮಧುಕ್ ॥ ॥೧೦॥

ಅ॥ ಪ್ರಜಾಪತಿಃ – ಬ್ರಹ್ಮದೇವರು, (ರಾ॥ ಬ್ರಹ್ಮನೇ ಮೊದಲಾದ ಸಕಲ ದೇವತೆಗಳಿಗೂ ಅಧಿಪತಿಯಾದ ವಿಷ್ಣುವು.) ಸಹಯಜ್ಞಾಃ – ಯಜ್ಞಗಳೊಡನೆ, (ಶಂ॥ ಯಜ್ಞಗಳೊಡನೇ ಕೂಡಿದ) ಪ್ರಜಾಃ–ಪ್ರಜೆಗಳನ್ನು, ಪುರಾ– ಆದಿಕಾಲದಲ್ಲಿ, ಸೃಷ್ಟ್ವಾ– ಸೃಷ್ಟಿ ಮಾಡಿ, ಅನೇನ– ಈ ಯಜ್ಞದಿಂದ, ಪ್ರಸವಿಷ್ಯಧ್ವಂ–ವೃದ್ಧಿಯಂ ಹೊಂದುವಿರಿ, ಏಷಃ–

ಈ ಯಜ್ಞವು, ವಃ - ನಿಮ್ಮಗಳಿಗೆ, ಇಷ್ಟಕಾಮಧುಕ್ - ಇಷ್ಟವಾದ ಭೋಗವನ್ನು ಕೊಡುವುದಾಗಿ, ಅಸ್ತು- ಆಗಲಿ, (ಇತಿ- ಎಂಬದಾಗಿ,) ಉವಾಚ- ಹೇಳಿದನು. ||೧೦||

(ರಾ|| ಭಾ||) ಸಮಸ್ತವಾದ ಪುರುಷಾರ್ಥ ಸಾಧನನಿಷ್ಠರಿಗೂ ಯಜ್ಞಶೇಷದಿಂದಲೇ ಶರೀರಧಾರಣವು ಕರ್ತವ್ಯವಾಗಿರುವುದರಿಂದ ಬೇರೆ ಪ್ರಕಾರವಾಗಿ ಶರೀರ ಧಾರಣವಂ ಮಾಡುವಂತವರಿಗೆ ದೋಷವುಂಟೆಂದು ಹೇಳುತ್ತಾನೆ. ಅಲ್ಲಿನ ಪ್ರಜಾಪತಿ ಶಬ್ದವು ನಿರುಪಾಧಿಕವಾಗಿ ಸರ್ವೇಶ್ವರನಾಗಿಯೂ ಸರ್ವಪ್ರಪಂಚಕ್ಕೂ ಸೃಷ್ಟಿಕರ್ತನಾಗಿಯೂ, ವಿಶ್ವಾತ್ಮನಾಗಿಯೂ ಇರುವ ಶ್ರೀಮನ್ನಾರಾಯಣನನ್ನೆ ಹೇಳುವುದು. ಶ್ರುತಿಯಲ್ಲಿಯೂ ಈ ಪ್ರಕಾರವೇ ಹೇಳಿರುವುದು. ಸಕಲ ಪ್ರಜೆಗಳಿಗೂ ನಿರುಪಾಧಿಕಪತಿಯಾದ ಶ್ರೀಮನ್ನಾರಾಯಣನು, ಸೃಷ್ಟಿಕಾಲದಲ್ಲಿ ಅನಾದಿಕಾಲದಿಂದನುವೃತ್ತವಾಗಿ ಬಂದಿರುವ ಪ್ರಕೃತ ಸಂಬಂಧದಿಂದ ಪರವಶರಾಗಿಯೂ, ನಾಮರೂಪ ವಿಭಾಗರಾಹಿತ್ಯದಿಂದ ತನ್ನಲ್ಲಿ ಲಯವಂಹೊಂದಿ ಯಾವ ಪುರುಷಾರ್ಥವನ್ನೂ ಹೊಂದಲು ಯೋಗ್ಯರಲ್ಲದವರಾಗಿಯೂ ಇರುವ ಅಚೇತನಪ್ರಾಯರಾದ ಪ್ರಜೆಗಳಂ ನೋಡಿ ಪರಮ ದಯಾಳುವಾದುದರಿಂದ ಅವರುಗಳ ಉಜ್ಜೀವನಾರ್ಥವಾಗಿ ತನ್ನ ಆರಾಧನರೂಪವಾದ ಯಜ್ಞವನ್ನು ಮಾಡಬೇಕೆಂದು ಯಜ್ಞಗಳೊಡನೆಯೇ ಅವರುಗಳನ್ನು ಸೃಷ್ಟಿಸಿ, ಈ ಯಜ್ಞದಿಂದಲೇ ನೀವುಗಳು ವೃದ್ಧಿಯಾಗಬೇಕು. ಇದುತಾನೇ ಮೋಕ್ಷವನ್ನು ಮತ್ತು ಮೋಕ್ಷಾನುಗುಣಗಳಾದ ಅಷ್ಟಾರ್ಥಗಳನ್ನೂ ಕೊಡುವುದೆಂದು ಹೇಳಿದನು. ||೧೦||

ಮೂ|| ದೇವಾನ್ ಭಾವಯತಾನೇನ ತೇ ದೇವಾ ಭಾವಯಂತು ವಃ | ಪರಸ್ಪರಂ ಭಾವಯಂತಶ್ಶ್ರೇಯಃ ಪರಮವಾಪ್ಸ್ಯಥ || .. ... ||೧೧||

ಪ|| ದೇವಾನ್- ಭಾವಯತಾ- ಅನೇನ- ತೇ- ದೇವಾಃ- ಭಾವಯಂತು- ವಃ | ಪರಸ್ಪರಂ- ಭಾವಯಂತಃ- ಶ್ರೇಯಃ- ಪರಂ- ಅವಾಪ್ಸ್ಯಥ || ... ||೧೧||

ಅ|| ಅನೇನ- ಈ ಯಜ್ಞದಿಂದ, ದೇವಾನ್ - ದೇವತೆಗಳನ್ನು, (ರಾ|| ನನ್ನ ಶರೀರಭೂತರಾದ ದೇವತೆಗಳನ್ನು,) ಭಾವಯತ- ಆರಾಧಿಸಿರಿ, ತೇ ದೇವಾಃ- ಆ ದೇವತೆಗಳು, ವಃ- ನಿಮ್ಮಗಳನ್ನು, ಭಾವಯಂತು - ರಕ್ಷಿಸಲಿ, ಪರಸ್ಪರಂಭಾವಯನ್ತಃ - ಅನ್ಯೋನ್ಯಧಿಷ ಭಾವಿಸಲ್ಪಟ್ಟವರಾಗಿ, ಪರಂ- ಶ್ರೇಷ್ಠವಾದ, ಶ್ರೇಯಃ - ಶ್ರೇಯಸ್ಸನ್ನು, (ಕ||

ರು|| ಗೀ|| ವಿ|| ಮೋಕ್ಷವನ್ನು, ಶಂ|| ಅಥವಾ ಸ್ವರ್ಗವನ್ನು,) ಅವಾಪ್ಸ್ಯಥ- ಹೊಂದುವ ತವರಾಗುವಿರಿ. ... ... ... ||೧೧||

(ರಾ|| ಭಾ||) ದೇವತಾರಾಧನ ರೂಪವಾದ ಈ ಯಜ್ಞದಿಂದ ನನಗೆ ಶರೀರ ಭೂತರಾದ ದೇವತೆಗಳ ಆರಾಧನವನ್ನು ಮಾಡಿ. ಆ ರೀತಿಯಾಗಿ ಆರಾಧಿತರಾದ ಅವರುಗಳು ತಮ್ಮಗಳ ಆರಾಧನಕ್ಕೆ ಬೇಕಾದ ಅನ್ನಪಾನಾದಿಗಳನ್ನು ಕೊಟ್ಟು ನಿಮ್ಮಗಳನ್ನು ಪೋಷಿಸುವರು. ಈಪ್ರಕಾರವಾಗಿ ಒಬ್ಬರಿಗೊಬ್ಬರು ಪರಸ್ಪರ ಭಾವಿಸಿಕೊಂಡರೆ ಮೋಕ್ಷವೆಂಬುವ ಪರಮ ಪುರುಷಾರ್ಥವನ್ನು ಹೊಂದುತ್ತೀರಿ. ... ||೧೧||

ಮೂ|| ಇಷ್ಟಾನ್ಭೋಗಾನ್ ಹಿವೋದೇವಾ ದಾಸ್ಯಂತೇ
ಯಜ್ಞ ಭಾವಿತಾಃ | ತೈರ್ದತ್ತಾನ ಪ್ರದಾ ಯೈಭ್ಯೋ
ಯೋಭುಂಕ್ತೇ ಸ್ತೇನಏವಸಃ || ... ||೧೨||

ಪ|| ಇಷ್ಟಾನ್- ಭೋಗಾನ್- ಹಿ- ವಃ- ದೇವಾಃ- ದಾಸ್ಯಂತೆ-ಯಜ್ಞಭಾವಿತಾಃ | ತೈಃ- ದತ್ತಾನ್- ಅಪ್ರದಾಯ- ಏಭ್ಯಃ- ಯಃ- ಭುಂಕ್ತೇ- ಸ್ತೇನ- ಏವ-ಸಃ || ||೧೧||

ಅ|| ಯಜ್ಞಭಾವಿತಾಃ - ಯಜ್ಞಗಳಿಂದ ಆರಾಧಿಸಲ್ಪಟ್ಟ, ದೇವಾಃ - ದೇವತೆಗಳು, ವಃ- ನಿಮ್ಮಗಳಿಗೆ, ಇಷ್ಟಾನ್- ಇಷ್ಟಗಳಾದ, ಭೋಗಾನ್- ಸುಖಗಳನ್ನು, ದಾಸ್ಯಂತೇಹಿ- ಕೊಡುತ್ತಾರಲ್ಲವೆ, ತೈಃ-ಆ ದೇವತೆಗಳಿಂದ, ದತ್ತಾನ್-ಕೊಡಲ್ಪಡುವ ಅನ್ನಾದಿಗಳನ್ನು, ಏಭ್ಯಃ- ಈ ದೇವತೆಗಳಿಗೋಸ್ಕರ, ಅಪ್ರದಾಯ- ಕೊಡದೆ, ಯಃ- ಯಾವನು, ಭುಂಕ್ತೇ- ಅನುಭವಿಸುತ್ತಾನೊ, ಸಃ- ಅವನು, ಸ್ತೇನಏವ- ಕಳ್ಳನೆ (ಆಗುತ್ತಾನೆ) ||೧೨||

(ರಾ|| ಭಾ||) ಯಜ್ಞದಿಂದ ಆರಾಧಿಸಲ್ಪಟ್ಟ ಆ ದೇವತೆಗಳು ನಿಮ್ಮಗಳಿಗಿಷ್ಟವಾದ ಭೋಗಗಳನ್ನು ಮೇಲುಮೇಲೆ ಕೊಡುತ್ತಾ ಬರುವರು. ಅವರುಗಳು ತಮ್ಮಗಳ ಆರಾಧನಾರ್ಥವಾಗಿ ಕೊಟ್ಟ ವಸ್ತುಗಳನ್ನು ಅವರುಗಳಿಗೆ ಕೊಡದೆ ಯಾವನು ಭುಜಿಸುವನೋ ಅವನು ಕಳ್ಳನಾಗುವನು. ಕಳ್ಳತನವೆಂಬುವುದು ಅನ್ಯರ ಪ್ರಯೋಜನಕ್ಕಾಗಿ ಸಿದ್ಧವಾದ ವಸ್ತುವಿನಲ್ಲಿ ತನ್ನದೆಂಬುವ ಬುದ್ಧಿಯನ್ನು ಮಾಡಿ, ಅದರಿಂದ ತನ್ನನ್ನು ಪೋಷಣವಾಡಿಕೊಳ್ಳುವುದಲ್ಲವೆ; ಈ ಕಳ್ಳತನದಿಂದ ಇವನಿಗೆ ಪರಮಪುರುಷಾರ್ಥ ಮಾತ್ರವೇ ಪ್ರಾಪ್ತವಾಗದೇ ಹೋಗುವುದಲ್ಲದೆ ನರಕವೂ ಪ್ರಾಪ್ತವಾಗುವುದೆಂದಭಿಪ್ರಾಯವು. ... ||೧೨||

ಮೂ|| ಯಜ್ಞಶಿಷ್ಟಾಶಿನಸ್ಸಂತೋ ಮುಚ್ಯಂತೇಸರ್ವ

ಕಿಲ್ಬಿಷೈಃ । ತೇತ್ವಘಂ ಭುಂಜತೇಪಾಪಾ ಯೇಪಚಂ
ತ್ಯಾತ್ಮಕಾರಣಾತ್ ‖ ... ‖೧೩‖

ಪ॥ ಯಜ್ಞಶಿಷ್ಟಾಶಿನಃ- ಸಂತಃ- ಮುಚ್ಯಂತೇ- ಸರ್ವಕಿಲ್ಬಿಷೈಃ । ತೇ- ತು- ಅಘಂ- ಭುಂಜತೇ- ಪಾಪಾಃ- ಯೇ- ಪಚಂತಿ- ಆತ್ಮಕಾರಣಾತ್ ‖ ... ‖೧೩‖

ಅ॥ ಯಜ್ಞಶಿಷ್ಟಾಶಿನಸ್ಸಂತಃ- (ಶಂ॥ ದೇವಯಜ್ಞಮಾಡಿ ಮಿಕ್ಕ ಅನ್ನವನ್ನು ಭುಜಿಸುವ ಸತ್ಪುರುಷರು. ಶ್ರೀ॥ ವೈಶ್ವದೇವವೇ ಮೊದಲಾದ ಪಂಚಮಹಾ ಯಜ್ಞವಂಮಾಡಿ ಮಿಗಿಲಿದ ಅನ್ನವನ್ನು ಭುಜಿಸುವ ಸತ್ಪುರುಷರು. ರಾ॥ ಪರಮ ಪುರುಷಾರಾಧನ ರೂಪವಾದ ಯಜ್ಞದ ಶಿಷ್ಟಾನ್ನವನ್ನು ಭುಜಿಸುವ ಸತ್ಪುರುಷರು. ಗೀ॥ ವಿ॥ ವಿಷ್ಣುವಿಗೂ ಇತರ ದೆ ವತೆಗಳಿಗೂ ನಿವೇದನಮಾಡಿ ಮಿಗಿಲಿರುವ ಅನ್ನವನ್ನು ಸ್ವೀಕರಿಸುವ ಸತ್ಪುರುಷರು) ಸರ್ವಕಿಲ್ಬಿಷೈಃ-ಪಂಚಸೂನಾದೇ ಮೊದಲಾದಸಮಸ್ತ ಪಾಪಗಳಿಂದ,(ರಾ॥ ಅನಾದಿಕಾಲದಿಂದ ಬಂದಿರುವ ಸಮಸ್ತಪಾಪಗಳಿಂದ.ಗೀ॥ವಿ॥ಸರ್ವಪಾಪಗಳಿಂದ,ಮುಚ್ಯಂತೇ-ಬಿಡಲ್ಪಡುತ್ತಾರೆ.) ಯೇ- ಯಾರು, ಆತ್ಮಕಾರಣಾತ್- ತಮ್ಮಗಳಿಗಾಗಿಯೇ, ಪಚಂತಿ- ಪಾಕವಂ ಮಾಡುತ್ತಾರೋ, ತೇಪಾಪಾಃ - ಆ ಪಾಪಿಷ್ಠರು, ಅಘಂತು - ಪಾಪಗಳನ್ನೇ, ಭುಂಜತೇ - ಭುಜಿಸುವರು. ... ... ... ‖೧೩‖

(ಶಂ॥ ಭಾ॥) ಯಾರಾದರೇ ದೇವಯಜ್ಞಾದಿಗಳೆಂಬ ಪಂಚಮಹಾ ಯಜ್ಞಗಳನ್ನು ಮಾಡಿ ಅಮೃತವೆಂಬ ಹೆಸರುಳ್ಳ ತಚ್ಛೇಷಾನ್ನವನ್ನು ಭುಜಿಸುತ್ತಾರೋಅವರುಪಂಚಸೂನಾ ದೋಷಗಳಿಂದಲೂ,ಪ್ರಮಾದಕೃತವಾದಪಾಪಗಳಿಂದಲೂಬಿಡಲ್ಪಡುವರು.ಯಾರಾದರೇಸ್ವೋದರಪಾತ್ರಪೂರಣ ಪರರಾಗುವರೊ ಅಂಥಾ ಪಾಪಾತ್ಮರು ಪಾಪಫಲಗಳನ್ನೇ ಅನುಭವಿಸುವರು. ಆದುದರಿಂದ ಸ್ವಾಧಿಕಾರಾನುಗುಣವಾಗಿ ತಮ್ಮತಮ್ಮಗಳ ವರ್ಣಾಶ್ರಮೋಚಿತ ಕರ್ಮಗಳನ್ನು ಎಲ್ಲರೂ ಮಾಡಿಯೇ ತೀರಬೇಕು. ದೇವಯಜ್ಞಾದಿಗಳು ಯಾವವಂದರೆ, “ ಅಧ್ಯಾಪನಂಬ್ರಹ್ಮಯಜ್ಞಃ ಪಿತೃಯಜ್ಞಸ್ತು ತರ್ಪಣಂ । ಹೋಮೋದೈವೋ ಬಲಿರ್ಭೌತೋ ನೃಯಜ್ಞೋಽತಿಥಿಪೂಜನಮ್ ‖ ಪಂಚೈತಾನ್ಯೋ ಮಹಾಯಜ್ಞಾನ್ನಹಾಪಯತಿಶಕ್ತಿತಃ । ಸಗೃಹೇಪಿವಸನ್ನಿತ್ಯಂಸೂನಾದೋಷೈರ್ನಲಿಪ್ಯತೇ‖ ” ಅ॥ವೇದಾಧ್ಯಯನವಂ ಮಾಡುವಿಕೆಯನ್ನುಬ್ರಹ್ಮಯಜ್ಞವೆಂಬುವುದಾಗಿಯೂ,ಪ್ರತಿದಿನದಲ್ಲಿಯೂಪಿತೃದೇವತೆಗಳನ್ನು ಪಿತೃತರ್ಪಣಾದಿಗಳಿಂದತೃಪ್ತಿಪಡಿಸುವುದಂಪಿತೃಯಜ್ಞವೆಂಬದಾಗಿಯೂ,ನಿತ್ಯವಾಗಿಅಗ್ನಿಯಲ್ಲಿಹೋಮವಂಮಾಡುವಿಕೆಯನ್ನು ದೇವಯಜ್ಞವೆಂಬದಾಗಿಯೂ,ನಿತ್ಯ

ದಲ್ಲಿಯೂ ಪ್ರಾಣಿಗಳಿಗೆಬಲಿಪ್ರದಾನವಂ ಮಾಡುವುದನ್ನು ಭೂತಯಜ್ಞವೆಂಬದಾಗಿಯೂ,ಪ್ರಾಪ್ತರಾದ ಅತಿಥಿಗಳಿಗೆ ಅನ್ನದಾನ ಮಾಡುವುದನ್ನುಮನುಷ್ಯ ಯಜ್ಞ ವೆಂಬುವುದಾಗಿಯೂ ಹೇಳುವರು. ಇಂತಹಪಂಚಮಹಾ ಯಜ್ಞಗಳನ್ನು ಪ್ರತಿದಿನದಲ್ಲಿಯೂ ಮಾಡುವಂತವರುಪಂಚಸೂನಾ ದೋಷಗಳಿಂದಬಿಡಲ್ಪಡುವರು. ಸೂನಾ ದೋಷಗಳ್ಯಾವವೆಂದರೆ,—" ಕಂಡನೀಪೇಷಿಣೀಚುಳ್ಳೀಉದಕುಂಭೀಚಮಾರ್ಜನೀ | ಪಂಚಸೂನಾಗೃಹಸ್ಥಸ್ಯ ತಾಭಿಸ್ಸ್ವರ್ಗಂನವಿಂದತಿ॥ " ಅ॥ ಒನಕೆ, ಅರೆಕಲ್ಲು, ಒಲೆ, ನೀರಿನಪಾತ್ರೆ, ಪೊರಕೆ, ಇವುಗಳಿಂದ ಮಾಡತಕ್ಕ ಕೆಲಸಗಳಿಂದ ಪಂಚಸೂನಾ ದೋಷಗಳು ಗೃಹಸ್ಥನಿಗುಂಟಾಗುವುವು. ಇವುಗಳು ಸ್ವರ್ಗಪ್ರತಿಬಂಧಕವಾಗಿರುವ ಪಾಪಗಳಾದುದರಿಂದ ಇಂತಹ ಪಾಪನಿವಾರಣಾರ್ಥವಾಗಿ ಪಂಚಮಹಾ ಯಜ್ಞಗಳನ್ನು ಮಾಡಿ ತಚ್ಛೇಷಾನ್ನವನ್ನು ಸ್ವೀಕರಿಸಿದರೆ ಇಂಥಾ ಪಾಪಗಳಿಂದ ಬಿಡಲ್ಪಡುವರೆಂದು ತಾತ್ಪರ್ಯವು. ... ॥೧೩॥

(ರಾ॥ ಭಾ॥) ಇದನ್ನೇ ವಿವರವಾಗಿ ಹೇಳುತ್ತಾನೆ.— ಇಂದ್ರಾದಿಗಳಿಗಂತರಾತ್ಮನಾಗಿರುವ ಪರಮ ಪುರುಷನನ್ನಾರಾಧಿಸಬೇಕೆಂದು ದ್ರವ್ಯಗಳಂ ಹುಡುಕಿ ಸಂಪಾದಿಸಿ ಅವುಗಳಿಂದ ಅಂತಹ ಪರಮಪುರುಷನನ್ನಾರಾಧಿಸಿ ತಚ್ಛೇಷವನ್ನು ಭೋಜನಮಾಡಿ ಯಾರಾದರೆ ಶರೀರಗಳನ್ನು ಪೋಷಿಸುವರೊ ಅವರುಗಳೇ ಅನಾದಿಕಾಲದಿಂದ ಸಂಪಾದಿಸಲ್ಪಟ್ಟವುಗಳಾಗಿಯೂ, ಆತ್ಮಸ್ವರೂಪ ವಿಷಯಮಾದ ಯಥಾರ್ಥಜ್ಞಾನಕ್ಕೆ ವಿರೋಧಿಗಳಾಗಿಯೂ ಇರುವ ಸಕಲ ಪಾಪಗಳಿಂದ ಬಿಡಲ್ಪಡುವರು. ಯಾರಾದರೇ ಅಂಥಾ ಪರಮ ಪುರುಷನ ಆರಾಧನಕ್ಕೆಂಬದಾಗಿ ಸಿದ್ಧವಾಗಿರುವ ದ್ರವ್ಯಗಳನ್ನು ತಮಗಳಿಗೆಂಬದಾಗಿಸಂಪಾದಿಸಿ ಅದಂ ಪಕ್ವಮಾಡಿ ಭುಜಿಸುವರೊ ಅಂಥಾ ಪಾಪಿಗಳು ಪಾಪಫಲವನ್ನೇ ಅನುಭವಿಸುವರು. ಅಂದರೆ ಆತ್ಮಜ್ಞಾನದಲ್ಲಿ ವೈಮುಖ್ಯವಂಹೊಂದಿ ನರಕಪಾತಕ್ಕೋಸ್ಕರವಾಗಿಯೇ ಪಚನಮಾಡುವರೆಂದರ್ಥವು. ॥೧೩॥

ಮೂ ॥ ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾ ದನ್ನ
ಸಂಭವಃ | ಯಜ್ಞಾದ್ಭವತಿಪರ್ಜನ್ಯೋ ಯಜ್ಞಃಕರ್ಮ

ಸಮುದ್ಭವಃ ॥೧೪॥ ಕರ್ಮಬ್ರಹ್ಮೋದ್ಭವಂವಿದ್ಧಿಬ್ರಹ್ಮಾ
ಕ್ಷರಸಮುದ್ಭವಂ । ತಸ್ಮಾತ್ಸರ್ವಗತಂಬ್ರಹ್ಮ ನಿತ್ಯಂ
ಯಜ್ಞೇಪ್ರತಿಷ್ಠಿತಂ ॥೧೫॥ ಏವಂಪ್ರವರ್ತಿತಂ ಚ
ಕ್ರಂ ನಾನುವರ್ತಯತೀಹಯಃ। ಅಘಾಯುರಿಂದ್ರಿಯಾ
ರಾಮೋ ಮೋಘಂಪಾರ್ಥ ಸಜೀವತಿ ॥ ॥೧೬॥

ಪ॥ ಅನ್ನಾತ್- ಭವಂತಿ- ಭೂತಾನಿ- ಪರ್ಜನ್ಯಾತ್- ಅನ್ನಸಂಭವಃ। ಯಜ್ಞಾತ್- ಭವತಿ- ಪರ್ಜನ್ಯಃ- ಯಜ್ಞಃ- ಕರ್ಮಸಮುದ್ಭವಃ ॥ ಕರ್ಮ - ಬ್ರಹ್ಮೋದ್ಭವಂ - ವಿದ್ಧಿ- ಬ್ರಹ್ಮ- ಅಕ್ಷರಸಮುದ್ಭವಂ । ತಸ್ಮಾತ್- ಸರ್ವಗತಂ- ಬ್ರಹ್ಮ- ನಿತ್ಯಂ- ಯಜ್ಞೇ- ಪ್ರತಿಷ್ಠಿತಂ ॥ ಏವಂ- ಪ್ರವರ್ತಿತಂ-ಚಕ್ರಂ-ನ-ಅನುವರ್ತಯತಿ- ಇಹ-ಯಃ । ಅಘಾಯುಃ- ಇಂದ್ರಿಯಾರಾಮಃ- ಮೋಘಂ- ಪಾರ್ಥ- ಸಃ- ಜೀವತಿ ॥ ॥೧೪॥೧೫॥೧೬॥

ಅ॥ ಅನ್ನಾತ್- ಅನ್ನದ ಮೂಲಕ, (ಅನ್ನರಸದಿಂದುಂಟಾದ ವೀರ್ಯದ ದೆಸೆಯಿಂದ) ಭೂತಾನಿ- ಪ್ರಾಣಿಶರೀರಗಳು, ಭವಂತಿ- ಉಂಟಾಗುವುವು, ಪರ್ಜನ್ಯಾತ್- ಮೇಘದಿಂದ (ಮಳೆಯಿಂದ,) ಅನ್ನಸಂಭವಃ - ಆಹಾರೋಪಯುಕ್ತವಾದ ಅನ್ನವುಂಟಾಗುವುದು, ಯಜ್ಞಾತ್ - ಯಜ್ಞದಿಂದ, ಪರ್ಜನ್ಯಃ - ಮೇಘವು, (ಮೇಘದ ಮೂಲವಾಗಿ ಮಳೆಯು,) ಭವತಿ- ಆಗುವುದು. ಯಜ್ಞಃ - ಯಜ್ಞವು, ಕರ್ಮಸಮುದ್ಭವಃ - ಕರ್ಮದಿಂದುಂಟಾಗುವುದು, ಕರ್ಮ- ಕರ್ಮವು, ಬ್ರಹ್ಮೋದ್ಭವಂ- ವೇದದಿಂದುಂಟಾಗುವುದು, (ರಾ॥ ಕರ್ಮ- ಕರ್ಮವು, ಬ್ರಹ್ಮೋದ್ಭವಂ - ಪ್ರಕೃತಿ ಪರಿಣಾಮವಾದ ದೇಹದಿಂದುಂಟಾಗುವುದು. (ಗೀ॥ ವಿ॥ ಕರ್ಮವು ಬ್ರಹ್ಮದಿಂದುಂಟಾಗುವುದು,) ಬ್ರಹ್ಮ- ವೇದವು, ಅಕ್ಷರಸಮುದ್ಭವಂ- ಪರಬ್ರಹ್ಮದಿಂದುಂಟಾಗುವುದು. (ರಾ॥ ದೇಹವು ಜೀವನಿಂದುಂಟಾಗುವುದು. ಗೀ॥ ವಿ॥ ಪರಬ್ರಹ್ಮವು ವೇದಗಳಿಂದರಿಯತಕ್ಕದ್ದಾಗಿರುವುದು ) ಸರ್ವಗತಂ - ಎಲ್ಲಿಯೂ ವ್ಯಾಪಿಸಿರುವ, ಬ್ರಹ್ಮ- ಅಂಥಾ ಪರಬ್ರಹ್ಮವು, ನಿತ್ಯಂ- ಯಾವಾಗಲೂ, ಯಜ್ಞೇ- ಯಜ್ಞದಲ್ಲಿ, ಪ್ರತಿಷ್ಠಿತಂ- ಸ್ಥಿರವಾಗಿರುವುದು. (ಶಂ॥ ಶ್ರೀ॥ ವೇದವು ಯಜ್ಞವನ್ನು ವಿಶೇಷವಾಗಿ ಹೇಳುವುದು, ರಾ॥ ಸರ್ವಗತಂ- ಸರ್ವಜೀವರನ್ನು ಹೊಂದಿರುವ,) ಬ್ರಹ್ಮ- ದೇಹವು, ನಿತ್ಯಂ-ಯಾವಾಗಲೂ, ಯಜ್ಞೇಪ್ರತಿಷ್ಠಿತಂ- ಯಜ್ಞಕ್ಕೆ ಮೂಲವಾಗಿರುವುದು. (ಗೀ॥ ವಿ॥ ಸರ್ವವ್ಯಾಪಕನಾದ ಪರಬ್ರಹ್ಮವು ಯಾವಾಗಲೂ ಯಜ್ಞದಲ್ಲಿರುವುದು, ಯಜ್ಞವು ವಿಷ್ಣುವೆಂಬುದಾಗಿ ಶ್ರುತಿಯಲ್ಲಿ ಹೇಳಿರುವುದರಿಂದಲೂ ಯಜ್ಞವು ಶ್ರೀಮಹಾವಿಷ್ಣುವಿಗೆ ಅತ್ಯಂತಪ್ರಿಯವಾಗಿರುವದರಿಂದಲೂ, ಯಜ್ಞದಲ್ಲಿ ಪರಬ್ರಹ್ಮವು ಯಾವಾಗಲೂ ಇರುವುದೆಂದು ಹೇಳಿತು.) ತಸ್ಮಾತ್- ಆದುದರಿಂದ, ಏವಂ- ಈ ಪ್ರಕಾರವಾಗಿ, ಪ್ರವರ್ತಿತಂ - ಪರಬ್ರಹ್ಮದಿಂದ ಪ್ರವರ್ತಿಸಲ್ಪಟ್ಟ, ಚಕ್ರಂ - ಕರ್ಮಸಮೂಹವೇ ಮೊದಲಾದ ಚಕ್ರವನ್ನು, ಇಹ- ಈ ಲೋಕದಲ್ಲಿ, ಯಃ- ಯಾವನು, ನಾನುವರ್ತಯತಿ - ಅನುಸರಿಸುವುದಿಲ್ಲವೋ, ಅಘಾ

ಯುಃ- ಹು ಪರೂಪವಾದ ಆಯುಸ್ಸುಳ್ಳವನಾಗಿಯೂ,(ರಾ|| ಪಾಪದಿಂದುಂಟಾದ ಆಯುಸ್ಸು ಅಥವಾ ಪಾಪಕ್ಕೆ ಹೇತುಭೂತವಾದ ಆಯುಸ್ಸುಳ್ಳವನಾಗಿಯೂ,) ಇಂದ್ರಿಯಾರಾಮಃ-ಇಂದ್ರಿಯಗಳ ಮೂಲವಾಗಿ ಯಾವಾಗಲೂ ವಿಷಯಗಳನ್ನನುಭವಿಸುವಂತವನಾಗಿಯೂ ಇರುವ, ಸಃ- ಅವನು, ಹೇಪಾರ್ಥ- ಎಲೈ ಪೃಥಾ ಪುತ್ರನಾದ ಅರ್ಜುನನೇ! ಮೋಘಂ- ವ್ಯರ್ಥವಾಗಿ, ಜೀವತಿ- ಜೀವಿಸುತ್ತಾನೆಂದು, ವಿದ್ಧಿ- ತಿಳಿದುಕೊಳ್ಳು. ||೧೪||೧೫||೧೬||

(ರಾ|| ಭಾ||) ಪುನಶ್ಚ ಸಕಲವು ಯಜ್ಞದಿಂದುಂಟಾಗಿರುವುದೆನ್ನುವುದಂ ಲೋಕರೀತಿಯಾಗಿಯೂ, ಶಾಸ್ತ್ರರೀತಿಯಾಗಿಯೂ, ಪ್ರದರ್ಶನ ಮಾಡಿ ಯಜ್ಞವನ್ನನುಸರಿಸುವುದು ಅವಶ್ಯಕವೆಂಬದಾಗಿಯೂ, ಅದಂ ಮಾಡದೇಹೋದರೆ ದೋಷವುಂಟಾಗುವುದೆಂಬುದಾಗಿಯೂ ಹೇಳುತ್ತಾನೆ. ಸಕಲ ಭೂತಗಳೂ ಅನ್ನದಿಂದುಂಟಾಗಿರುವುದೆನ್ನುವುದು ಮತ್ತು ಆ ಅನ್ನವು ವರ್ಷದಿಂದುಂಟಾಗುವುದೆಂಬುವುದೂ ಯೆಲ್ಲರಿಗೂ ಪ್ರತ್ಯಕ್ಷವಾಗಿಯೇ ಕಾಣುವುದು. ಆ ವರ್ಷವು ಯಜ್ಞದಿಂದುಂಟಾಗುವುದೆಂಬುವುದು "ಅಗ್ನೌ ಪ್ರಾಸ್ತಾಹುತಿಸ್ಸಮ್ಯಗಾದಿತ್ಯಮುಪತಿಷ್ಠತೇ| ಆದಿತ್ಯಾಜ್ಜಾಯತೇವೃಷ್ಟಿಃ" ಇತ್ಯಾದಿಶಾಸ್ತ್ರಗಳಿಂದ ವ್ಯಕ್ತವಾಗಿರುವುದು. ಆ ಯಜ್ಞವು ಪುರುಷವ್ಯಾಪಾರರೂಪವಾದ ಕರ್ಮದಿಂದುಂಟಾಗುವುದು. ಆ ಕರ್ಮವು ಪ್ರಕೃತಿ ಪರಿಣಾಮರೂಪವಾದ ಶರೀರದಿಂದುಂಟಾಗುವುದು. ಬ್ರಹ್ಮಶಬ್ದದಿಂದ ಪ್ರಕೃತಿ ಪರಿಣಾಮರೂಪವಾದ ಶರೀರವು ಹೇಳಲ್ಪಡುವುದು. ಶ್ರುತಿಯೂ ಬ್ರಹ್ಮಶಬ್ದದಿಂದ ಪ್ರಕೃತಿಯನ್ನು ನಿರ್ದೇಶಿಸುವುದಲ್ಲದೇ ಇಲ್ಲಿಯೂ ಮುಂದೆ "ಮಮಯೋನಿರ್ಮಹದ್ಬ್ರಹ್ಮ" (೧೪||೩||) ಎಂಬುವ ಸ್ಥಾನದಲ್ಲಿಯು ಹೇಳಲ್ಪಡುವುದು. ಆ ಶರೀರವು ಜೀವನಿಂದುಂಟಾಗುವುದು. ಅದು ಹೇಗೆಂದರೆ ! ಅನ್ನಪಾನಾದಿಗಳಿಂದ ತೃಪ್ತಿಹೊಂದಿರುವ ಜೀವಾತ್ಮನೊಡನೆ ಕೂಡಿದ್ದರೆ ಮಾತ್ರವೇ ಶರೀರವು ಕರ್ಮವಂ ಮಾಡುವುದಕ್ಕೆ ಯೋಗ್ಯವಾಗುವುದು. ಈ ಪ್ರಕಾರ ಹೇಳುವುದರಿಂದ ಸರ್ವ ಶರೀರವೂ ಯಜ್ಞದಿಂದಲೇ ಸಿದ್ಧವಾಗುವುದೆಂದು ಹೇಳಿದಂತೇ ಆಯಿತು. ಈ ಪ್ರಕಾರ ಜೀವನೊಡನೇ ಕೂಡದ ಶರೀರಕ್ಕೆ ಅನ್ನವೂ, ಅನ್ನಕ್ಕೆ ವರ್ಷವೂ, ವರ್ಷಕ್ಕೆ ಯಜ್ಞವೂ ಯಜ್ಞಕ್ಕೆ ಮಾಡತಕ್ಕವನ ವ್ಯಾಪಾರರೂಪವಾದ ಕರ್ಮವೂ, ಕರ್ಮಕ್ಕೆ ಜೀವನೊಂದಕೂಡಿದ ಶರೀರವೂ, ಶರೀರಕ್ಕೆ ಪುನಶ್ಚ ಅನ್ನವೂ, ಎಂಬ

ದಾಗಿ ಒಂದಕ್ಕೊಂದು ಕಾರ್ಯವಾಗಿಯೂ ಕಾರಣವಾಗಿಯೂ, ಪರಮ ಪುರುಷನಿಂದ ನಿರ್ಮಿಸಲ್ಪಟ್ಟ ಈ ಚಕ್ರವನ್ನು ಜ್ಞಾನಯೋಗಾಧಿಕಾರಿಯೇ, ಅಥವಾ ಕರ್ಮಯೋಗಾಧಿಕಾರಿಯೊ, ಯಾವನಾದರೇ ನಡಿಸುವುದಿಲ್ಲವೊ ಅಂದರೇ ಯಜ್ಞಶೇಷದಿಂದ ದೇಹವನ್ನು ಧರಿಸುವುದಿಲ್ಲವೊ ಅವನು ತಾನು ಜೀವಿಸುತಲಿರುವ ಕಾಲವೆಲ್ಲವನ್ನೂ ಪಾಪಕ್ಕೇನೆ ಅರ್ಪಿಸುವನು. ಅಂದರೇ ಅಂತವನ ಆಯುಸ್ಸು ಪಾಪಾರಂಭಕ್ಕಾಗಿಯೇ ಆಗುವುದು. ಅಥವಾ ಅವನು ಪಾಪ ಪರಿಣಾಮರೂಪವಾದ ಆಯುಸ್ಸುಳ್ಳವನಾಗಿಯೇ ಆಗುವನು. ಆದುದರಿಂದಲೇ ಅಂತವನು ಇಂದ್ರಿಯಗಳಿಗೆ ತೃಪ್ತಿಯನ್ನುಂಟುಮಾಡತಕ್ಕವನಲ್ಲದೇ ಆತ್ಮನಿಗೆ ತೃಪ್ತಿಮಾಡತಕ್ಕವನಲ್ಲವು. ಅವನು ತನ್ನ ಶರೀರವನ್ನು ಮನಸ್ಸನ್ನು ಅಶುದ್ಧವಾದ ಅನ್ನದಿಂದ ಬೆಳಸುವುದರಿಂದ ರಜಸ್ತಮಸ್ಸುಗಳೆಂಬೀ ಯೆರಡು ಗುಣಗಳೂತಲೆ ದೋರೆದು ಆತ್ಮದರ್ಶನದಲ್ಲಿ ಆಸಕ್ತನಾಗದೆ ವಿಷಯ ಭೋಗದಲ್ಲಾಸಕ್ತನಾಗುವನು. ಆದುದರಿಂದ ಅವನು ಜ್ಞಾನಯೋಗಾದಿಗಳಲ್ಲಿ ಪ್ರಯತ್ನವುಳ್ಳವನಾಗಿದ್ದರೂ ಅದು ನಿಷ್ಫಲವಾಗುವುದರಿಂದ ವ್ಯರ್ಥವಾಗಿಯೇ ಜೀವಿಸುತ್ತಾನೆ. ॥೧೪॥೧೫॥೧೬॥

(ಗೀ॥ ವಿ॥) ಈ ಚಕ್ರವನ್ನು ಅನುಸರಿಸಬೇಕೆಂಬುವುದು ಗೃಹಸ್ಥಾಶ್ರಮಿಗಳಿಗೆ ಮಾತ್ರವಲ್ಲದೇ ಇತರವಾದ ಬ್ರಹ್ಮಚರ್ಯಾದ್ಯಾಶ್ರಮುತ್ರಯನಿಷ್ಠರಿಗೆಂಬುವುದಾಗಿಯೂ ತಿಳಿಯಬೇಕು. ಅವರುಗಳಿಗೂ ಮನೋವಾಕ್ಕಾಯಗಳಿಂದ ಮಾಡತಕ್ಕ ವಿದ್ಯಾದಾನವೇನು, ಅಭಯದಾನವೇನು, ತಾನು ಭುಜಿಸುವ ಅನ್ನದಾನವೇನು, ಮತ್ತು ಅಧ್ಯಯನ ಪ್ರವಚನ ಧ್ಯಾನಾದಿಗಳಾದ ವಾಚಿಕ ಮಾನಸಿಕಾದಿ ಕರ್ಮಗಳೂ ಮತ್ತು ಕೃಛ್ರಚಂದ್ರಾಯಣಾದಿ ತಪಸ್ಸುಗಳು ಇವುಗಳನ್ನನುವರ್ತಿಸಬೇಕಾಗಿರುವುದು. ಈ ಅರ್ಥವು " ವಾಚಿಕೋಮನಸೋಜ್ಞೇಯೊ ನ್ಯಾಸಿನಾಂತು ವಿಶೇಷತಃ " ಎಂಬುವ ಪ್ರಮಾಣ ಸಿದ್ಧವಾಗಿರುವುದು ॥೧೬॥

ಮೂ ॥ ಯಸ್ತ್ವಾತ್ಮ ರತಿರೇವಸ್ಯಾ ದಾತ್ಮತೃಪ್ತಶ್ಚ
ಮಾನವಃ । ಆತ್ಮನ್ಯೇವಚಸಂತುಷ್ಟಸ್ತಸ್ಯಕಾರ್ಯಂನ
ವಿದ್ಯತೇ ॥ ॥೧೭॥

ಪ॥ ಯಃ- ತು- ಆತ್ಮರತಿಃ- ಏವ- ಸ್ಯಾತ್- ಆತ್ಮತೃಪ್ತಃ- ಚ-ಮಾನವಃ । ಆತ್ಮನಿ- ಏವ- ಚ- ಸಂತುಷ್ಟಃ- ತಸ್ಯ- ಕಾರ್ಯಂ- ನ- ವಿದ್ಯತೇ ॥ ॥೧೭॥

ಅ॥ ಯಸ್ತು-ಮಾನವಃ-ಯಾವಮನುಷ್ಯನಾದರೂ, ಆತ್ಮರತಿರೇವ-ಆತ್ಮನಲ್ಲಿಯೇ ಪ್ರೀತಿಯುಳ್ಳವನಾಗಿಯೂ,ಆತ್ಮತೃಪ್ತಶ್ಚ-ಆತ್ಮನಲ್ಲಿಯೇ ತೃಪ್ತಿಹೊಂದಿರುವಂತನಾಗಿಯೂ, ಆತ್ಮನ್ಯೇವಚ- ಆತ್ಮನಲ್ಲಿಯೇ, ಸಂತುಷ್ಟಃ- ಸಂತೋಷವುಳ್ಳವನಾಗಿಯೂ,ಸ್ಯಾತ್-ಆಗುವನೊ, ತಸ್ಯ- ಅವನಿಗೆ, ಕಾರ್ಯಂ- ಮಾಡತಕ್ಕದ್ದು, ನವಿದ್ಯತೇ- ಇರುತ್ತದಿಲ್ಲವು. ॥೧೭॥

( ಶಂ॥ ಭಾ॥ ) ಎಲೈ ಶ್ರೀಕೃಷ್ಣನೆ ! ಈ ಪ್ರಕಾರವಾಗಿ ನೀನು ಹೇಳಿದಂತೆ ಜಗಚ್ಚಕ್ರಪ್ರವೃತ್ತಿಗೆ ಕಾರಣವೆಂಬದಾಗಿ ಹೇಳಲ್ಪಡುವ ಕರ್ಮವು ಜ್ಞಾನಿ ಅಜ್ಞಾನಿಗಳೆಂಬ ಸರ್ವರಿಂದಲೂ ಮಾಡತಕ್ಕದ್ದಾಗಿರುವುದೊ? ಅಥವಾ ಕರ್ಮಯೋಗವೆಂಬಸಾಧನದಿಂದ ಹೊಂದತಕ್ಕದ್ದಾಗಿರುವ ಆತ್ಮವೇದಿಗಳಿಗೆ ಅರ್ಹವಾದ ಜ್ಞಾನಯೋಗದಲ್ಲಿ ನಿಷ್ಠೆಯುಳ್ಳ ಸಾಂಖ್ಯರಿಂದ ಹೊಂದತಕ್ಕದ್ದಾಗಿರುವುದೊ ? ಹಾಗಿಲ್ಲದಿದ್ದರೆ ಜ್ಞಾನಯೋಗನಿಷ್ಠೆಯನ್ನು ಹೊಂದದೇ ಇರುವವರಿಂದ ಮಾತ್ರವೇ ಅನುಷ್ಠಿಸತಕ್ಕದ್ದಾಗಿರುವುದೊ ? ಎಂಬದಾಗಿ ಅರ್ಜುನನ ಪ್ರಶ್ನವನ್ನೂಹಿಸಿ ಶ್ರೀಕೃಷ್ಣಪರಮಾತ್ಮನು ಈ ಗೀತಾಶಾಸ್ತ್ರಾಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸುವದಕ್ಕೋಸ್ಕರವಾಗಿಯೂ, ಅರ್ಜುನನ ಸಂದೇಹ ಪರಿಹಾರಾರ್ಥವಾಗಿಯೂ, ಎಲೈ ಅರ್ಜುನನೆ ! ಆತ್ಮತತ್ವವನ್ನು ತಿಳಿದುಕೊಂಡು ಪ್ರಪಂಚವು ಸತ್ಯವೆಂಬ ಮಿಥ್ಯಾಜ್ಞಾನವನ್ನು ಬಿಟ್ಟವರಾಗಿಯೂ, ಪ್ರಪಂಚವು ಸತ್ಯವೆಂಬದಾಗಿ ತಿಳಿದುಕೊಂಡಿರುವ ಅಜ್ಞಾನಿಗಳಿಂದ ಅವಶ್ಯವಾಗಿ ಮಾಡಲ್ಪಟ್ಟ ದಾರಪುತ್ರಧನಗಳಲ್ಲಿ ಅಭಿಲಾಷೆಯಂ ತ್ಯಜಿಸಿ, ತರುವಾಯ ಶರೀರಧಾರಣ ಮಾತ್ರಕ್ಕಾಗಿ ತಕ್ಕಷ್ಟು ಅನ್ನವನ್ನು ಭೈಕ್ಷವೃತ್ತಿಯಿಂದ ಸಂಪಾದಿಸಿ ಭುಂಜಿಸುತಲಿರುವಂತವರಾಗಿಯೂ,ಇರುವ ಬ್ರಾಹ್ಮಣರಿಗೆ ಆತ್ಮಜ್ಞಾನನಿಷ್ಠೆಗಿಂತಲೂ ಇತರವಾದ ಕರ್ಮವು ಯಾವದೂಇಲ್ಲವೆಂಬ ವೇದಾರ್ಥವೇ ಈಗೀತಾಶಾಸ್ತ್ರದಲ್ಲಿ ಹೇಳಲ್ಪಡುವುದರಿಂದ ಜ್ಞಾನಿಗಳಿಗೆ ಕರ್ಮವಿಲ್ಲವೆಂತಲೂ, ಅಜ್ಞಾನಿಗಳಿಗೇನೇ ಕರ್ತವ್ಯವೆಂತಲೂ, ತಿಳಿಸಲು ಈ ಶ್ಲೋಕವನ್ನು ಹೇಳುತ್ತಾನೆ. ಯಾವ ಆತ್ಮಜ್ಞಾನ ನಿಷ್ಠನಾದರೇ ವಿಷಯಸಂಗರಹಿತನಾಗಿ ಆತ್ಮನಲ್ಲಿಯೇ ರತಿಯುಳ್ಳವನಾಗಿಯೂ,ಮತ್ತು ಅನ್ನರಸಾದಿಗಳಿಂ

ದತೃಪ್ತಿಯನ್ನು ಹೊಂದದೇ ಆತ್ಮನನ್ನು ತಿಳಿದವನು ವಿವೇಕಯುಕ್ತನಾಗಿ ತನ್ನಿಂದಲೇ ತೃಪ್ತಿ ಹೊಂದುವಂತವನಾಗಿಯೂ, ಮತ್ತು ಆತ್ಮವೇದಿಯಾದವನು ಸರ್ವವಿಷಯಗಳಲ್ಲಿ ವೈರಾಗ್ಯವುಳ್ಳವನಾಗಿರುವವನೆಂಬದಾಗಿಯೂ,ಸರ್ವರಿಗೂ ಅಪೇಕ್ಷಿತವಾದ ಬಾಹ್ಯಾರ್ಥಗಳ ಲಾಭದಲ್ಲಾಸಕ್ತನಾಗದೇ ವಿಷಯ ತೃಷ್ಣಾಶೂನ್ಯನಾಗಿ ಆತ್ಮನಲ್ಲಿಯೇ ಆಸಕ್ತನಾಗಿರುವನೆಂಬದಾಗಿಯೂ, ಇಂಥಾ ಆತ್ಮವೇದಿಯಾದವನಿಗೆ ಮಾಡತಕ್ಕ ಕರ್ಮವು ಯಾವದೂ ಇಲ್ಲವೆಂತಲೂ ತಿಳಿಯಬೇಕು. ||೧೭||

(ಆ|| ಗಿ||) ಈ ಶ್ಲೋಕದಲ್ಲಿರುವ "ರತಿ, ತೃಪ್ತಿ, ಸಂತೋಷ" ಶಬ್ದಗಳು ಏಕಾರ್ಥಗಳಾದ ಮೋದಪ್ರಮೋದಾನಂದ ಶಬ್ದಗಳಂತೇ ಒಂದೇ ಅರ್ಥಗಳುಳ್ಳದ್ದಾಗಿರುವುವು. ಅಥವಾ = ರತಿಃ - ವಿಷಯಾಸಕ್ತಿಯು, ತೃಪ್ತಿಃ- ವಿಷಯ ವಿಶೇಷ ಸಂಪರ್ಕದಿಂದುಂಟಾದ ಸುಖವು, ಸಂತೋಷಃ-ಇಷ್ಟವಾದ ವಿಷಯಲಾಭಾಧೀನವಾದ ಸುಖಸಾಮಾನ್ಯವು. ಆತ್ಮರತಿಯಾಗಿಯೂ ಆತ್ಮನಿಂದ ತೃಪ್ತನಾಗಿಯೂ, ಆತ್ಮನಲ್ಲಿಯೇ ಸಂತೋಷವುಳ್ಳವನಾಗಿಯೂ ಇರುವಂತವನಿಗೆ ಮೋಕ್ಷಾರ್ಥವಾಗಿ ಮಾಡತಕ್ಕ ಕರ್ಮಗಳುಂಟೋ ಎಂಬ ಶಂಕಾಸಮಾಧಾನಾರ್ಥವಾಗಿ ಅಂಥಾವನಿಗೇ ಮಾಡತಕ್ಕ ಕರ್ಮಗಳು ಯಾವದೂ ಇಲ್ಲವೆಂದು "ತಸ್ಯ ಕಾರ್ಯಂನವಿದ್ಯತೆ" ಎಂಬ ನಾಲ್ಕನೇ ಪಾದದಲ್ಲಿ ಹೇಳಿತು. ||೧೭||

(ಶ್ರೀ)ಈ ಅಧ್ಯಾಯದ ೮ನೇ ಶ್ಲೋಕದ ಮೊದಲು ೧೬ನೇ ಶ್ಲೋಕದವರೆಗೂ ಅಜ್ಞಾನಿಯಾದವನು ಅಂತಃ ಕರಣ ಶುದ್ಧಿಗಾಗಿ ಕರ್ಮಗಳಂ ಮಾಡಬೇಕೆಂದು ಹೇಳಲ್ಪಟ್ಟಿತು. ಈ ಶ್ಲೋಕದಿಂದಲೂ ಮುಂದಿನ ಶ್ಲೋಕದಿಂದಲೂ ಬ್ರಹ್ಮಜ್ಞಾನಿಯಾದವನಿಗೆ ಕರ್ಮದಿಂದಾಗಬೇಕಾದದ್ದೇನೂ ಇಲ್ಲ ವೆಂಬುವುದು ಹೇಳಲ್ಪಡುವುದು || ||೧೭||

ಮೂ|| ನೈವತಸ್ಯ ಕೃತೇನಾರ್ಥೋ ನಾಕೃತೇನೇಹಕಶ್ಚನ | ನಚಾಸ್ಯ ಸರ್ವಭೂತೇಷು ಕಶ್ಚಿದರ್ಥವ್ಯಪಾಶ್ರಯಃ || ||೧೮||

ಪ|| ನ- ಏವ- ತಸ್ಯ- ಕೃತೇನ- ಅರ್ಥಃ- ನ- ಅಕೃತೇನ- ಇಹ- ಕಶ್ಚನ | ನ- ಚ- ಅಸ್ಯ- ಸರ್ವಭೂತೇಷು- ಕಶ್ಚಿತ್- ಅರ್ಥವ್ಯಪಾಶ್ರಯಃ || ||೧೮||

ಅ॥ ತಸ್ಯ- ಅವನಿಗೆ, ಕೃತೇನ- ಮಾಡಲ್ಪಟ್ಟ, ಕರ್ಮಣಾ- ಕರ್ಮದಿಂದ, ಅರ್ಥಃ- ಪ್ರಯೋಜನವು, ನೈವ- ಇರುವುದೇ ಇಲ್ಲವು. ಅಕೃತೇನ- ಮಾಡದೇ ಇರುವುದರಿಂದ, ಕಶ್ಚನಾನರ್ಥೋ ನ- ಯಾವ ಅನರ್ಥವೂ ಇರುವುದಿಲ್ಲವು. ಇಹ- ಈ ಲೋಕದಲ್ಲಿ, ಅಸ್ಯ- ಇವನಿಗೆ, ಸರ್ವಭೂತೇಷು – ಸರ್ವಭೂತಗಳಲ್ಲಿಯೂ, ಅರ್ಥವ್ಯಪಾಶ್ರಯಃ – ಪ್ರಯೋಜನಾರ್ಥವಾಗಿ ಆಶ್ರಯಿಸತಕ್ಕದ್ದು, ಕಶ್ಚಿದಪಿ- ಯಾವದೂ, ನಚ- ಇರುವುದೇ ಇಲ್ಲವು. ॥೧೮॥

(ಶಂ॥ ಭಾ॥) ಬ್ರಹ್ಮವೇದಿಯಾದವನಿಗೆ ಮಾಡತಕ್ಕ ಕರ್ಮವು ಯಾವದೂ ಇಲ್ಲವೆಂಬುವುದನ್ನೇ ಈ ಶ್ಲೋಕದಿಂದಲೂ ಹೇಳುತ್ತಾನೆ.— ಬ್ರಹ್ಮನಿಷ್ಠನಾದವನಿಗೆ, ತಾನಿರುವ ಸ್ಥಿತಿಗಿಂತಲೂ ಉತ್ತಮ ಸ್ಥಿತಿಯನ್ನುಂಟುಮಾಡಲು ಕರ್ಮಗಳಿಗೆ ಶಕ್ತಿಯಿಲ್ಲವಾದುದರಿಂದ ಕರ್ಮಾನುಷ್ಠಾನಾವಶ್ಯಕತೆಯು ಕಾಣಲಿಲ್ಲವು. ಅಂತವನು ವಿಧಿನಿಷೇಧಾತೀತನಾಗಿರುವುದರಿಂದ ಕರ್ಮಗಳಂ ಮಾಡದೇ ಇರುವುದರಿಂದಲೇ ಯಾವವಿಧವಾದ ಪ್ರತ್ಯವಾಯವೂ ಇರುವುದಿಲ್ಲವು. ಮತ್ತು ಅಂತವನಿಗೆ ಸ್ವಾನುಭವಕ್ಕಿಂತಲೂ ಅನ್ಯವಾದ ಪ್ರಯೋಜನ ವಿಲ್ಲವಾದುದರಿಂದ ಆ ಬ್ರಹ್ಮಸ್ತಂಬ ಪರ್ಯಂತಗಳಾದ ಭೂತಗಳಲ್ಲಿ ಒಂದು ಪ್ರಯೋಜನ ನಿಮಿತ್ತವಾಗಿಯೂ ಯಾರನ್ನೂ ಆಶ್ರಯಿಸತಕ್ಕದ್ದೇನೂ ಇರುವುದಿಲ್ಲವು॥೧೮॥

(ಗೀ॥ ವಿ॥) ಈ ಪ್ರಕಾರವಾಗಿ "ನಕರ್ಮಣಾಮನಾರಂಭಾತ್" (೩॥೪॥) "ಯಜ್ಞಾರ್ಥಾತ್ಕರ್ಮಣೋಽನ್ಯತ್ರ"(೩॥೮॥) ಎಂಬ ಶ್ಲೋಕಗಳಿಂದ ಕರ್ಮಗಳಂ ಮಾಡದೇ ಹೋದರೇ ಹಾನಿಯು, ಮಾಡುವುದರಲ್ಲಿ ಲಾಭವೂ ಹೇಳಲ್ಪಟ್ಟಿರುವುದಷ್ಟೇ. ಈ ಪ್ರಕಾರವಾಗಿ ಕರ್ಮಾಕರಣದಿಂದ ಹಾನಿಯು ಶ್ರುತವಾಗಿರುವುದರಿಂದ ಅಸಂಪ್ರಜ್ಞಾತ ಸಮಾಧಿಯುಳ್ಳವನಿಗೆ (ಭೇರೀ ಮೊದಲಾದ ವಾದ್ಯಗಳು ಬಾರಿಸಲ್ಪಟ್ಟಿರು ಅವುಗಳಲ್ಲಾಸಕ್ತನಾಗದೇ ದೇಹಾದಿಗಳಸ್ಮರಣವಿಲ್ಲದೆ ಪರಮಾತ್ಮಧ್ಯಾನಾಸಕ್ತನಾದವನನ್ನು ಅಸಂಪ್ರಜ್ಞಾತಸಮಾಧಿನಿಷ್ಠನೆಂದು ಹೇಳುವರು.) ಕರ್ಮಲೋಪವು ಪ್ರಾಪ್ತನಾಗುವುದು. ಅಂತಹ ಕರ್ಮಲೋಪವು ಪ್ರಾಪ್ತವಾಗದೇ ಇರುವುದಕ್ಕಾಗಿ ಅಸಂಪ್ರಜ್ಞಾತ ಸಮಾಧಿಯುಂ ಮಾಡದೇ ಹೋಗಬೇಕಾಗುವುದೆಂಬ ಶಂಕೆಯನ್ನು ಪರಿಹರಿಸುವುದಕ್ಕಾಗಿ "ಯಸ್ತ್ವಾತ್ಮರತಿರೇವ" (೩॥ ೧೭॥) ಎಂಬುವ ಶ್ಲೋಕದಲ್ಲಿ ಅಸಂಪ್ರಜ್ಞಾತ ಸಮಾಧಿನಿಷ್ಠನಿಗೆ ಅಂಥಾ ಸಮಾಧಿರೂಪವಾದ ಪರಮಾತ್ಮಧ್ಯಾನಕ್ಕಿಂತ

ಲೂ ಇತರವಾದ ಕರ್ಮಗಳು ಯಾವದೂ ಮಾಡತಕ್ಕದ್ದಿಲ್ಲವೆಂಬದಾಗಿ ಹೇಳಿತು ಈ ಶ್ಲೋಕದಲ್ಲಿ "ಕರ್ಮಲೋಪ ವಾಗುವುದೆಂಬ ಭಯದಿಂದ ಅಸಂಪ್ರಜ್ಞಾತ ಸಮಾಧಿಯನ್ನು ಬಿಡುವುದು ಉಚಿತವಲ್ಲವು. ಕರ್ಮವನ್ನನುಷ್ಠಿಸುವ ಕಾಲದಲ್ಲಿ ನೀನು ನನ್ನನ್ನೆಬ್ಬಿಸೆಂದು ಪಕ್ಕದಲ್ಲಿರುವ ಒಬ್ಬನನ್ನು ಕುರಿತು ಹೇಳಿ ಸಮಾಧಿ ನಿಷ್ಠನಾಗಿರುವಂತವನು ಕರ್ಮಾನುಷ್ಠಾನ ಕಾಲದಲ್ಲಿ ಅನ್ಯನಿಂದ ಯೋಗಶಾಸ್ತ್ರದಲ್ಲಿ ಹೇಳಿರುವ ಉಪಾಯಗಳಿಂದ ಉದ್ಬೋಧಿತನಾದರೇ ಕರ್ಮ ಲೋಪಕ್ಕೆ ಅವಕಾಶವಿಲ್ಲವಾದುದರಿಂದಅಪ್ರಕಾರವಮಾಡಲುವಿರೋಧವೇನು?" ಎಂಬ ಶಂಕೆಯನ್ನು ಪ್ರಥಮಪಾದದಲ್ಲಿ ಪರಿಹರಿಸುತ್ತಾನೆ. ನೈವತಸ್ಯ ಕೃತೇನಾರ್ಥಃ-ಸಮಾಧಿನಿಷ್ಠನಾದವನಿಗೆ ಸಮಾಧಿಯಂ ತ್ಯಜಿಸಿ ಮಾಡಲ್ಪಡುವ ಯಜ್ಞಾದಿ ಕರ್ಮಗಳಿಂದ ಆತ್ಮರತಿಗಿಂತಲೂ ಅಧಿಕ ಅಥವಾಸಮವಾದ ಪುರುಷಾರ್ಥವು ಯಾವದೂ ಆಗಲಾರದೆಂದರ್ಥವು. ಆದರೇ ಯಜ್ಞಾದ್ಯನುಷ್ಠಾನಕ್ಕಾಗಿ ಸಮಾಧಿಯಿಂದ ಯೇಳಬೇಕಾದದ್ದವಶ್ಯಕವಿಲ್ಲವಾದರೂ ನಿತ್ಯನೈಮಿತ್ತಿಕಕರ್ಮಗಳಂ ಮಾಡದೇ ಹೋದರೇ ಪ್ರತ್ಯವಾಯುವುಂಟಾಗುವುದರಿಂದ ಆಥಾ ಪ್ರತ್ಯವಾಯಪರಿಹಾರಾರ್ಥವಾಗಿ ಸಮಾಧಿಯಿಂದಲುದ್ಬೋಧಿತನಾಗಬೇಕೆಂದರೇ ಅದಕ್ಕುತ್ತರವು. ನಾಕೃತೇನೇಹಕಶ್ಚನ-ಸಮಾಧಿನಿಷ್ಠನಿಗೆ ತತ್ತತ್ಕಾಲಗಳಲ್ಲಿ ಆಚರಿಸತಕ್ಕ ಸಂಧ್ಯಾವಂದನಾದಿ ಕರ್ಮಗಳಂ ಮಾಡದೇ ಹೋಗುವುದರಿಂದ ಯಾವದೋಷವೂ ಇಲ್ಲವು. ಆದರೇ ಅಲ್ಪಫಲಪ್ರದಗಳಾದ ಯಜ್ಞಾದಿಗಳಂಮಾಡದೇಇರುವುದರಿಂದಲೂ ಸಂಧ್ಯಾದಿಕರ್ಮಗಳಂಮಾಡದೇಇರುವುದರಿಂದಲೂ ಪ್ರತ್ಯವಾಯವಿಲ್ಲದಿದ್ದರೂ ಗುರುದೇವತಾದಿಪೂಜಾದಿಗಳಂ ಮಾಡದೇಹೋದರೆಪ್ರತ್ಯವಾಯ ವುಂಟಾಗುವುದೆಂಬ ಶಂಕಾಸಮಾಧಾನಾರ್ಥವಾಗಿ "ನಚಾಸ್ಯ ಸರ್ವಭೂತೇಷು" ಎಂಬ ಮೂರನೇ ಪಾದವು ಪ್ರವೃತ್ತವಾಯಿತು. ಈ ಅಸಂಪ್ರಜ್ಞಾತ ಸಮಾಧಿಯುಳ್ಳವನಿಗೆಗುರುಗಳೇಮೊದಲಾದ ಹಿರಿಯರನ್ನುಸತ್ಕರಿಸಿ ಹೊಂದಬೇಕಾದ ಪುರುಷಾರ್ಥವು ಯಾವದೂಇಲ್ಲವಾದುದರಿಂದಲೂ ಗುರುದೇವತಾದಿಗಳ ಶುಶ್ರೂಷಾದಿಗಳಿಂದುಂಟಾದ ಸುಖವು ಅಸಂಪ್ರಜ್ಞಾತ ಸಮಾಧಿಯಿಂದಲೇ ಪ್ರಾಪ್ತವಾಗಿರುವುದರಿಂದಲೂ, ಅಸಂಪ್ರಜ್ಞಾತ ಸಮಾಧಿಯಂ ಬಿಟ್ಟು ಗುರು ದೇವತಾದಿಗಳ ಸತ್ಕಾ

ರವು ಸಮಾಧಿಸ್ಥನಿಗೆ ಅನಾವಶ್ಯಕವೆಂದರಿಯಬೇಕು. (ಅಥವಾ) “ ಕೃಷ್ಣೋ ಮುಕ್ತೈರಿಜ್ಯತೇ ವೀತಮೋಹೈಃ” ಎಂಬ ಶ್ಲೋಕದಲ್ಲಿ ಮೋಹರಹಿತರಾದ ಮುಕ್ತರಿಂದಲೂ ಕರ್ಮ ಕರ್ತವ್ಯವೆಂಬುದಾಗಿ ತಿಳಿಯಬರುವುದರಿಂದ ಮುಕ್ತರಿಗೂ ಕರ್ಮಾನುಷ್ಠಾನವು ಅವಶ್ಯಕವೆಂಬ ಶಂಕಾಸಮಾಧಾನಕ್ಕಾಗಿ ಈ ಶ್ಲೋಕವು ಪ್ರವೃತ್ತವಾಗಿರುವುದು. ಮುಕ್ತರಿಗೆ ಸ್ವೇಚ್ಛೆಯಿಂದಲೇ ಭಗವದ್ವಿಷಯವಾದ ಕರ್ಮ ಕರಣವಲ್ಲದೇ ವಿಧಿ ಒದ್ದರ್ತೃಕ ಕರ್ಮಾನುಷ್ಠಾನವಿಲ್ಲವು. ಮೋಕ್ಷರೂಪವಾದ ಫಲಕ್ಕಿಂತಲೂ ಅತಿಶಯಿತ ಫಲವಿಲ್ಲವಾದುದರಿಂದ ಫಲಾಂತರಾಪೇಕ್ಷೆಯಿಂದಲೂ ಕರ್ಮವು ಮಾಡತಕ್ಕದ್ದಲ್ಲವು. ... ... ॥೧೮॥

ಮೂ॥ ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚರ । ಅಸಕ್ತೋ ಹ್ಯಾಚರನ್ಕರ್ಮ ಪರಮಾಪ್ನೋತಿ ಪೂರುಷಃ ॥ ॥೧೯॥

ಪ॥ ತಸ್ಮಾತ್- ಅಸಕ್ತಃ- ಸತತಂ- ಕಾರ್ಯಂ- ಕರ್ಮ- ಸಮಾಚರ । ಅಸಕ್ತಃ- ಹಿ- ಆಚರನ್- ಕರ್ಮ- ಪರಂ- ಆಪ್ನೋತಿ- ಪೂರುಷಃ ॥ ॥೧೯॥

ಅ॥ ತಸ್ಮಾತ್- ಆದುದರಿಂದ, ಅಸಕ್ತಃ- ಫಲಾಪೇಕ್ಷಾರಹಿತನಾಗಿ, ಸತತಂ- ಯಾವಾಗಲೂ, ಕಾರ್ಯಂಕರ್ಮ- ಮಾಡತಕ್ಕಕರ್ಮವನ್ನು, ಸಮಾಚರ- ಸಮೀಚೀನವಾಗಿಮಾಡು. ಹಿ- ಏತಕ್ಕೆಂದರೇ, ಅಸಕ್ತಃ-ಫಲಾಪೇಕ್ಷೆಯಿಲ್ಲದವನಾಗಿ, ಕರ್ಮ- ಕರ್ಮವನ್ನು, ಆಚರನ್- ಅನುಷ್ಠಿಸುವಂತವನಾದ, ಪೂರುಷಃ- ಪುರುಷನು, ಪರಂ- ( ಶಂ॥ ಮೋಕ್ಷವನ್ನು, ರಾ॥ ಇಂದ್ರಿಯಾದಿಗಳಿಗಿಂತಲೂ ಶ್ರೇಷ್ಠನಾದ ಆತ್ಮನನ್ನು,) ಆಪ್ನೋತಿ-ಹೊಂದುತ್ತಾನೆ॥೧೯॥

(ಶಂ॥ ಭಾ॥) ಸಮೀಚೀನವಾದ ಜ್ಞಾನವಿಲ್ಲದ ದಶೆಯಲ್ಲಿ ಕರ್ಮಾನುಷ್ಠಾನವು ಅವಶ್ಯಕವಾದುದರಿಂದ(ಅಂದರೇ ನೀನು ಜ್ಞಾನನಿಷ್ಠೆಯಿಲ್ಲದವನಾಗಿರುವುದರಿಂದ) ಫಲಸಂಬಂಧ ವಿಲ್ಲದವನಾಗಿ ಯಾವಾಗಲೂ ಮಾಡತಕ್ಕ ನಿತ್ಯ ಕರ್ಮಗಳನ್ನು ಮಾಡೆಂದು ಈ ಶ್ಲೋಕದಿಂದ ದರ್ಜುನನಿಗೆ ಪರಮಾತ್ಮನು ಬೋಧಿಸುತ್ತಾನೆ. ಉತ್ತಮೋತ್ತಮವಾದ ಮೋಕ್ಷವನ್ನಪೇಕ್ಷಿಸುವಂತವನಿಗೆ ನೀಚವಾದ ಸ್ವರ್ಗಾದಿ ಸುಖರೂಪ ಫಲಗಳಂ ಕೊಡುವ ಕರ್ಮಗಳಂ ಮಾಡಬೇಕೆಂಬ ಅಪೇಕ್ಷೆಯುಂಟಾಗುವುದಿಲ್ಲವಾದುದರಿಂದ ಅಂಥಾ ಕರ್ಮಗಳಂ ಮಾಡೆಂದು ಹೇಳುವುದು ಉಚಿತವಲ್ಲವೆಂಬುದಾಗಿ ಚಿಂತಿಸದೆ, ಮತ್ತು ಫಲಾಂತರಗಳಂ ಕೊಡುವ

ಕರ್ಮವು ಮೋಕ್ಷರೂಪ ಫಲಗಳನ್ನು ಹೇಗೆ ಕೊಡುವುದು ? ಎಂಬದಾಗಿ ಯೂ ಚಿಂತಿಸದೆ, ಫಲಸಂಬಂಧರಹಿತನಾಗಿ ಕರ್ಮಗಳನ್ನು ಮಾಡಿದರೆ ಚಿತ್ತಶುದ್ಧಿದ್ವಾರಾ ಮೋಕ್ಷವನ್ನು ಹೊಂದಬಹುದೆಂಬ ತಾತ್ಪರ್ಯವಂ ತಿಳಿಯಪಡಿಸಲೂ ಇಲ್ಲಿ " ಅಸಕ್ತಃ " ಎಂಬದಾಗಿ ಹೇಳಿದನು. ಲೋಕದಲ್ಲಿ ಫಲಾಸಕ್ತನಾಗದೆ ಕರ್ಮಗಳಂ ಮಾಡುತಲಿರುವ ಪುರುಷನು ಚಿತ್ತ ಶುದ್ಧಿಯಂ ಪಡೆದು ಅದರಿಂದ ಮೋಕ್ಷವಂ ಹೊಂದುವನಾದುದರಿಂದ ನೀನೂ ಅದೇಪ್ರಕಾರವಾಗಿಯೆ ಕರ್ಮಗಳಂ ಮಾಡಿ ಮೋಕ್ಷವಂ ಹೊಂದಬಹುದೆಂದು ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ಬೋಧಿಸಿದನು. ||೧೯||

(ರಾ|| ಭಾ||) ಸಾಧನವಿಲ್ಲದೇ ಆತ್ಮದರ್ಶನವಂ ಹೊಂದಿದವುಕ್ತನಿಗೇನೆ ಈ ವರ್ಣಾಶ್ರಮ ಧರ್ಮಗಳು ಅಪೇಕ್ಷಿತವಲ್ಲವೆನ್ನುತ್ತಾನೆ. ಜ್ಞಾನಕರ್ಮ ಯೋಗಗಳೆಂಬೀ ಯೆರಡನ್ನೂ ಅಪೇಕ್ಷಿಸದೇ ತನಗೆ ತಾನೇ ಆತ್ಮದರ್ಶನವಂ ಮಾಡುವಂತವನು ಯಾವನೊ ಅವನು ಇತರಗಳಾದ ಅನ್ನಪಾನಾದಿಗಳಲ್ಲದೇ ಆತ್ಮನಿಂದಲೇ ತೃಪ್ತನಾಗಿಯೂ, ಉದ್ಯಾನವನವು, ಪುಷ್ಪಮಾಲಿಕೆಯು, ಚಂದನವು, ಗಾನವು, ವಾದ್ಯವು, ನರ್ತನವು, ಇವೇ ಮೊದಲಾದವುಗಳಲ್ಲಾಸಕ್ತನಾಗದೆ ಕೇವಲವಾಗಿ ಆತ್ಮನಲ್ಲಿಯೆ ಸಂತೋಷವುಳ್ಳವನಾಗಿಯೂ ಧಾರಕ ಪೋಷಕ ಭೋಗ್ಯವೆಲ್ಲವೂ ಆತ್ಮನೇ ಎಂದು ತಿಳಿದವನಾಗಿಯೂ ಇರುವಂತವನಿಗೆ ಮಾಡತಕ್ಕ ಕರ್ಮಗಳು ಯಾವದೂ ಇಲ್ಲವು. (ಶರೀರಧಾರಣೋಪಯುಕ್ತವಾದ ಅನ್ನಾದಿಗಳನ್ನು ಧಾರಕವೆಂಬದಾಗಿಯೂ, ವೃದ್ಧಿಕಾರಣವಾದ ಹಾಲು ಮೊದಲಾದವುಗಳನ್ನು ಪೋಷಕ ವೆಂಬದಾಗಿಯೂ, ಸುಖವನ್ನೀಯುವ ತಾಂಬೂಲಾದಿಗಳನ್ನು ಭೋಗ್ಯ ವೆಂಬದಾಗಿಯೂ ಹೇಳುವರು.) ಆತ್ಮದರ್ಶನವೆಂಬ ಫಲವು ಕೈಕೂಡಿರುವುದರಿಂದ ಅದಕ್ಕಾಗಿ ಕರ್ಮವಂ ಮಾಡುವುದರಿಂದ ಪ್ರಯೋಜನವಿಲ್ಲವು. ಆತ್ಮದರ್ಶನಾರ್ಥವಾಗಿ ಕರ್ಮವಂ ಮಾಡದೇ ಇರುವುದರಿಂದ ದೋಷವೂ ಇಲ್ಲವು. ತಾನಾಗಿಯೆ ಆತ್ಮಸಂತುಷ್ಟನಾಗಿ ಎಲ್ಲಾವಸ್ತುಗಳನ್ನು ಪೇಕ್ಷಿಸಿರುವವನಾಗಿರುವುದರಿಂದ ಪ್ರಕೃತಿ ವಿಕಾರಗಳಾದ ಆಕಾಶಾದಿ ಭೂತಗಳಿಂದಲಾಗಲೀ, ಅವುಗಳ ಕಾರ್ಯಗಳಿಂದಲಾಗಲೀ, ಅಂತವನಿಗೇನು ಪ್ರಯೋಜನ ವಿರುವುದು ?

ಸಾಧನಗಳಂ ಮಾಡುವ ದೆಲ್ಲವು ಅವುಗಳಲ್ಲಾಪೇಕ್ಷೆಯುಂಟಾಗುವುದಕ್ಕಲ್ಲವೇ? ಇವನಿಗೂ ಅದುವುಂಟಾಗಿಯೇ ಇರುವುದು. ಆದುದರಿಂದಿವನು ಹಿತಕ್ಕೆ ಕರ್ಮಗಳಂ ಮಾಡಬೇಕು. ತನಗೆ ತಾನೆ ಆತ್ಮದರ್ಶನವಂ ಮಾಡತಕ್ಕವನಿಗೆ ಸಾಧನದಲ್ಲಿ ಪ್ರವೃತ್ತಿಸಬೇಕಾದದ್ದವಶ್ಯಕವಿಲ್ಲವಾದುದರಿಂದಲೂ, ಸಾಧನದಲ್ಲಿ ಪ್ರವೃತ್ತಿಸಿರುವವನಿಗೆ ಈ ಕರ್ಮಯೋಗವುಸುಲಭವಾಗಿಯೂ ಅನನ್ಯ ರಹಿತವಾಗಿಯೂ ಆತ್ಮಜ್ಞಾನವನ್ನಡಗಿಸಿಕೊಂಡಿರುವುದಾಗಿರುವುದರಿಂದಲೂ, ಜ್ಞಾನಯೋಗ ನಿಷ್ಠನಿಗೂ ಈಕರ್ಮಯೋಗದಲ್ಲಿಕೆಲವು ಅನುಷ್ಠಿಸಬೇಕಾಗಿರುವುದರಿಂದಲೂ, ಆತ್ಮದರ್ಶನಕ್ಕಾಗಿ ಕರ್ಮಯೋಗವೇ ಶ್ರೇಷ್ಠವಾಗಿರುವುದು. ಆದುದರಿಂದ ಎಲೈ ಅರ್ಜುನನೆ! ಫಲ ಸಂಗ ಕರ್ತೃತ್ವಾದಿತ್ಯಾಗ ಪೂರ್ವಕವಾಗಿ ಕರ್ಮವು ಮಾಡತಕ್ಕದ್ದೆಂಬ ಅಭಿಪ್ರಾಯದೊಡನೆ ಫಲಸಿದ್ಧಿಯಾಗುವವರೆಗೂ ಕರ್ಮವಂ ಮಾಡು. ಮುಂದೆ ಹೇಳಲ್ಪಡುವ ಅಕರ್ತೃತ್ವಾದಿ (ನಾನು ಮಾಡತಕ್ಕವನಲ್ಲ ವೆಂಬುವದೇ ಮೊದಲಾದ) ಅನುಸಂಧಾನ ಪೂರ್ವಕವಾಗಿ ಮಾಡುವ ಆಕರ್ಮಯೋಗದಿಂದಲೆ ಮುಂದೆ ಹೇಳುವ ರೀತಿಯಿಂದ ದೇಹೇಂದ್ರಿಯಾದಿ ವಿಲಕ್ಷಣನಾದ ಆತ್ಮನನ್ನು ಹೊಂದುತಾನೆ. ||೧೭|| ||೧೮|| ||೧೯||

(ಗೀ|| ೨೦||) ಅಸಂಪ್ರಜ್ಞಾತ ಸಮಾಧಿನಿಷ್ಠನಿಗೂ, ಮೋಕ್ಷವಂ ಹೊಂದಿದವನಿಗೂ, ಕರ್ಮಕರ್ತವ್ಯವಲ್ಲವೆಂಬ ಕಾರಣದಿಂದಲೇ ನೀನು ಕರ್ಮಗಳಂ ಮಾಡದೇ ಇರಕೂಡದು. ಫಲಸ್ನೇಹರಹಿತನಾಗಿ ಭಗವದಾರಾಧನ ರೂಪದಿಂದ ಅವಶ್ಯವಾಗಿ ಕರ್ಮವಂ ಮಾಡು. ಆದರೆ ಮುಕ್ತನಾದವನಿಗೆ ಪ್ರಯೋಜನವಿಲ್ಲವಾದುದರಿಂದ ಹೇಗಾದರೆ ಕರ್ಮಕರ್ತವ್ಯವಿಲ್ಲವೊ ಆ ಪ್ರಕಾರವೇ ಮುಮುಕ್ಷುವಾದವನಿಗೂ ಕರ್ಮದಿಂದ ಫಲವಿಲ್ಲವಾದುದರಿಂದ ಕರ್ಮವು ಮಾಡತಕ್ಕದ್ದಲ್ಲವೆಂಬದಾಗಿ ಚಿಂತಿಸದೆ ಮುಮುಕ್ಷುವಾದ ಪುರುಷನು ಫಲಸಂಗರಹಿತನಾಗಿ ಭಗವದಾರಾಧನ ರೂಪದಿಂದ ಕರ್ಮಗಳಂ ಮಾಡಿದರೇ ಜ್ಞಾನದ್ವಾರಾಮೋಕ್ಷವನ್ನು ಹೊಂದುವನೆಂದು ತಿಳಿಯಬೇಕು. ಮುಕ್ತನಿಗೂ ಅಸಂಪ್ರಜ್ಞಾತ ಸಮಾಧಿನಿಷ್ಠನಿಗೂ ಕರ್ಮದಿಂದ ಪ್ರಯೋಜನವಿಲ್ಲದಿದ್ದರೂ ಮುಮುಕ್ಷುವಾದವನಿಗೆ ಕರ್ಮಾನುಷ್ಠಾನದಿಂದ ಜ್ಞಾನರೂಪ ಪ್ರಯೋಜನ ವಿರುವು

ದರಿಂದ ಕರ್ಮವು ಮಾಡತಕ್ಕದ್ದೆಂದರಿಯಬೇಕು. ... ||೧೯||

ಮೂ|| ಕರ್ಮಣೈವಹಿ ಸಂಸಿದ್ಧಿ ಮಾಸ್ಥಿತಾಃಜನಕಾದ
ಯಃ | ಲೋಕಸಂಗ್ರಹ ಮೇವಾಪಿ ಸಂಪಶ್ಯನ್ಕರ್ತು
ಮರ್ಹಸಿ | |೨೦||

ಪ|| ಕರ್ಮಣಾ- ಏವ- ಹಿ- ಸಂಸಿದ್ಧಿಂ- ಆಸ್ಥಿತಾಃ-ಜನಕಾದಯಃ | ಲೋಕಸಂಗ್ರಹಂ- ಏವ- ಅಪಿ- ಸಂಪಶ್ಯನ್- ಕರ್ತುಂ- ಅರ್ಹಸಿ || ||೨೦||

ಅ|| ಜನಕಾದಯಃ - ಜನಕರೇ ಮೊದಲಾದವರು, ಕರ್ಮಣೈವಹಿ - ನಿಷ್ಕಾಮಕರ್ಮಾನುಷ್ಠಾನದಿಂದಲೇ, ಸಂಸಿದ್ಧಿಂ - ಜ್ಞಾನವನ್ನು, (ರಾ|| ಆತ್ಮನನ್ನು) ಆಸ್ಥಿತಾಃ- ಹೊಂದಿರುವರು. ಲೋಕಸಂಗ್ರಹಂಸಂಪಶ್ಯನ್ನಪಿ-ಜನರು ಆನ್ಮಾರ್ಗದಲ್ಲಿ ಪ್ರವೃತ್ತಿಸದೇ ನಿವಾರಿಸತಕ್ಕವರೆಂಬ ಪ್ರಯೋಜನವನ್ನಾಲೋಚಿಸುವವರು, ಕರ್ತುಮೇವ- ಮಾಡುವುದಕ್ಕೇನೆ, ಅರ್ಹಸಿ- ಯೋಗ್ಯನಾಗುತ್ತೀಯೆ. ||೨೦||

(ಶಂ|| ಭಾ||) ಎಲೈ ಶ್ರೀಕೃಷ್ಣನೇ ಇಂದ್ರಿಯಗಳನ್ನು ಜಯಿಸಿದವನೂ, ಆತ್ಮಾನಾತ್ಮ ವಿವೇಕವುಳ್ಳವನೂ, ಶ್ರವಣಮನನಾದಿಗಳನ್ನು ಸರ್ವಕಾಲಗಳಲ್ಲಿ ಮಾಡುತಲಿರುವುದರಿಂದ ಬ್ರಹ್ಮನಲ್ಲಿ ನಿಷ್ಠೆಯನ್ನವಲಂಬಿಸಲೂ ಸಮರ್ಥನಾಗುತ್ತಾನಲ್ಲವೆ, ಆ ಪ್ರಕಾರವಾಗಿಯೇ ನಾನುಕೂಡ ಸಮಸ್ತಗಳಾದ ಕರ್ಮಗಳಂ ಮಾಡದೇ ಇರುವೆನೆಂಬದಾಗಿಯೂ, ಏತಕ್ಕಾಗಿ ಕರ್ಮಗಳಂ ಮಾಡಬೇಕೆಂಬದಾಗಿಯೂ ಅರ್ಜುನನ ಪ್ರಶ್ನವನ್ನು ತಾನಾಗಿಯೆ ಚಿಂತಿಸಿ ಶ್ರೀ ಪರಮಾತ್ಮನು ಎಲೈ ಅರ್ಜುನನೇ ! ಒಂದುವೇಳೆ ನೀನು ಆತ್ಮಾನಾತ್ಮ ವಿವೇಕ ವುಳ್ಳವನಾಗಿಯೇ ಇದ್ದರೂ, ಕ್ಷತ್ರಿಯನಾದುದರಿಂದ ಸನ್ಯಾಸಕ್ಕೆ ಯೋಗ್ಯನಲ್ಲವೆಂಬದಾಗಿಯೂ, ಕರ್ಮವನ್ನೇ ಮಾಡತಕ್ಕವನಾಗಿರುತ್ತೀಯೆಂಬದಾಗಿಯೂ ಹೇಳಲೀ ಶ್ಲೋಕವನ್ನುಪದೇಶಿಸುತ್ತಾನೆ. ಜನಕಚಕ್ರವರ್ತಿಯು, ಅಶ್ವಪತಿ, ಭಗೀರಥಾದಿಗಳಾದ ರಾಜರ್ಷಿಗಳೆಲ್ಲರು ಕರ್ಮದಿಂದ ಪರಿಶುದ್ಧಾಂತಃಕರಣವುಳ್ಳವರಾಗಿ ಮೋಕ್ಷವನ್ನು ಹೊಂದಲು ಪ್ರಯತ್ನಿಸಿದರು. ಆದರೇ ಸಕಲ ಕರ್ಮಗಳನ್ನು ಬಿಟ್ಟಿರುವ ಬ್ರಹ್ಮಜ್ಞಾನಿಗಳಿಗೆ ಮೋಕ್ಷವು ಲಭಿಸುವುದಲ್ಲದೆ ಇತರರಗೆ ಲಭಿಸಲಾರದೆಂದು ಅನೇಕ ಶ್ರುತಿಸ್ಮೃತಿಗಳು ಹೇಳುತಲಿರುವಲ್ಲಿ ಜನಕಾದಿಗಳು ಕರ್ಮದಿಂದಲೇ ಮೋಕ್ಷವನ್ನು ಹೊಂದಿದರೆಂದು ಹೇಳುವುದು ಉಚಿತವಾಗಿಹೆಯೆ ? ಎಂಬದಾಗಿ ಚಿಂತಿಸದೆ

ಅಂಥಾ ಜನಕಾದಿಗಳು ಆತ್ಮಜ್ಞಾನಪ್ರಳ್ಳವರಾಗಿದ್ದರೊ ? ಅಥವಾ ಬ್ರಹ್ಮಜ್ಞಾನ ವಿಲ್ಲದವರಾಗಿದ್ದರೊ ? ಎಂಬದಾಗಿ ವಿಚಾರಿಸಬೇಕಾಗಿರುವುದು. ಜನಕಾದಿಗಳು ಆತ್ಮಜ್ಞಾನ ಪ್ರಳ್ಳವರಾಗಿದ್ದರೆಂದರೆ ಪ್ರಾರಬ್ಧಕರ್ಮಪ್ರಳ್ಳವರಾದುದರಿಂದ ಲೋಕಸಂಗ್ರಹಾರ್ಥವಾಗಿ ಕರ್ಮಗಳಂ ಮಾಡುತ್ತಾ ಕರ್ಮಸನ್ಯಾಸವಿಲ್ಲದಜ್ಞಾನ ಮಹಾತ್ಮ್ಯದಿಂದಲೇ ಮೋಕ್ಷವನ್ನು ಪೊಂದಿದುವರೆಂದರಿಯಬೇಕು. ಬ್ರಹ್ಮಜ್ಞಾನ ವಿಲ್ಲದೇಕರ್ಮಗಳಂ ಮಾಡುತ್ತಿದ್ದರೆಂದರೆ ಚಿತ್ತಶುದ್ಧಿಗಾಗಿ ಸತ್ಕರ್ಮಗಳಂ ಮಾಡಿ ಆದರಿಂದ ಚಿತ್ತಶುದ್ಧಿಯನ್ನು ಸಂಪಾದಿಸಿ ತದ್ದ್ವಾರಾ ಬ್ರಹ್ಮಜ್ಞಾನ ಪ್ರಳ್ಳವರಾಗಿ ಮೋಕ್ಷವಂ ಹೊಂದಿದರೆಂದರಿಯಬೇಕು.

ಆದರೂ ಪೂರ್ವರಾದ ಜನಕಾದಿಗಳು ಬ್ರಹ್ಮಜ್ಞಾನ ರಹಿತರಾದುದರಿಂದಲೇ ಮಾಡತಕ್ಕ ಕರ್ಮಗಳಂ ಮಾಡುತ್ತಿದ್ದರು ; ಬ್ರಹ್ಮಜ್ಞಾನಪ್ರಳ್ಳ ಕೃತಕೃತ್ಯರು, ಜನಕಾದಿಗಳು ಕರ್ಮಗಳಂ ಮಾಡುತ್ತಿದ್ದರೆಂಬ ಮಾತ್ರದಿಂದಲೇ ಕರ್ಮಗಳು ಮಾಡತಕ್ಕದ್ದಲ್ಲವೆಂಬದಾಗಿ ಚಿಂತಿಸದೇ, ಎಲೈ ಅರ್ಜುನನೆ ! ನೀನು ಪ್ರಾರಬ್ಧಕರ್ಮಾಧೀನನಾಗಿರುವುದರಿಂದ ಲೋಕಸಂಗ್ರಹವನ್ನೇ ಮುಖ್ಯ ಪ್ರಯೋಜನವಾಗಿ ತಿಳಿದು ಅಂದರೇ ನಾನು ಕರ್ಮಗಳಂ ಮಾಡದೇ ಹೋದರೇಜ್ಞಾನಿಯಾದ ಅರ್ಜುನನೇ ಕರ್ಮಗಳಂ ಮಾಡಲಿಲ್ಲವು, ನಮಗೇನು ? ಎಂಬದಾಗಿ ಚಿಂತಿಸಿ ಲೋಕರೆಲ್ಲರು ಕರ್ಮಗಳಂ ಮಾಡದೇ ಕೆಟ್ಟುಹೋಗುವುದಂ ನಿವಾರಿಸುವುದೆಂಬ ಲೋಕಸಂಗ್ರಹ ರೂಪವಾದ ಪ್ರಯೋಜನವನ್ನಾದರೂ ನೋಡಿ ನೀನು ಕರ್ಮಗಳಂ ಮಾಡಬೇಕು. ... ... ||೨೦||

(ರಾ|| ಭಾ||) ಜ್ಞಾನಯೋಗಾಧಿಕಾರಿಯಾದವನಿಗೂ ಕರ್ಮವೇ ಶ್ರೇಷ್ಠವಾದುದರಿಂದಲೇ ಜ್ಞಾನಿಗಳಲ್ಲಿ ಶ್ರೇಷ್ಠರಾದ ಜನಕಾದಿರಾಜರ್ಷಿಗಳೂ ಕರ್ಮಯೋಗದಿಂದಲೇ ಆತ್ಮಪ್ರಾಪ್ತಿರೂಪವಾದ ಸಂಸಿದ್ಧಿಯನ್ನು ಹೊಂದಿದರೆಂದರ್ಥವು. ... ... ||೨೦||

(ಗೀ|| ವಿ||) ಆದರೇ ಜ್ಞಾನದಿಂದಲೇ ಮೋಕ್ಷಸಿದ್ಧಿಯಾಗುವುದರಿಂದ "ಅಸಕ್ತೋಹ್ಯಾಚರನ್‌ಕರ್ಮ ಪರಮಾಪ್ನೋತಿಪೂರುಷಃ" (೩|| ೧೯) ಎಂಬದಾಗಿ ಫಲಸಂಗಾದಿತ್ಯಾಗ ಪುರಸ್ಸರವಾಗಿ ಕರ್ಮವಂ ಮಾಡತಕ್ಕ

ವನಿಗೆ ಮೋಕ್ಷರೂಪವಾದ ಸಂಸಿದ್ಧಿಯನ್ನು ಹೇಳಲು ಕಾರಣವೇನು? ಎಂಬುವ ಶಂಕಾಸಮಾಧಾನಾರ್ಥವಾಗಿ ಮುಕ್ತಿದಶೆಯಲ್ಲಿ ಆನಂದಾಭಿವೃದ್ಧಿಯನ್ನುದ್ದೇಶಿಸಿ ಕರ್ಮಗಳಂ ಮಾಡಬೇಕೆಂಬುವುದಕ್ಕೆ ಜ್ಞಾನಿಗಳ ಆಚಾರವನ್ನು ಪ್ರಮಾಣೀಕರಿಸಿ ಉಪದೇಶಿಸುತ್ತಾನೆ.

ಇಲ್ಲಿ ಕರ್ಮಣಾ ಎಂಬುವ ತೃತೀಯಾವಿಭಕ್ತಿಯು ಕರ್ಮದೊಡನೆಯೇ ಎಂಬದಾಗಿ "ಸಹಯೋಗೇತೃತೀಯಾ" ಎಂಬ ನಿಯಮಯುಕ್ತವಾಗಿರುವುದು. ಜನಕ ಪ್ರಿಯವ್ರತಾದಿಗಳಾದ ಜ್ಞಾನಿಗಳು ಕರ್ಮದೊಡನೆಯೇ ಅಂದರೇ ಕರ್ಮಗಳಂ ಮಾಡುತಲೇ ಸಂಪೂರ್ಣವಾದ ಮೋಕ್ಷವನ್ನು ಹೊಂದಿರುವರು. ಜ್ಞಾನಮಾತ್ರದಿಂದ ಮೋಕ್ಷವು ಸಿದ್ಧವಾದರೂ ಆ ಮೋಕ್ಷದಶೆಯಲ್ಲಿ ಆನಂದಾತಿಶಯಾರ್ಥವಾಗಿ ಕರ್ಮಗಳಂ ಮಾಡುತ್ತಾರೆಂದರ್ಥವು. ಅಥವಾ ಈ ತೃತೀಯಾವಿಭಕ್ತಿಗೆ "ಲಾಂಗಲೇನಜೀವಾಮಃ" ಎಂಬ ರೀತಿಯಿಂದ ಕರಣಾರ್ಥತ್ವವೂ ಉಂಟು. ಕರ್ಮರೂಪವಾದ ಸಾಧನದಿಂದ ಮೋಕ್ಷವನ್ನು ಹೊಂದಿರುತ್ತಾರೆಂದರ್ಥವು. ಈ ಸಾಧನವು ಜ್ಞಾನದ್ವಾರಾ ಮೋಕ್ಷಸಿದ್ಧಿಯನ್ನೇ ಹೇಳುವುದು. (ಯದ್ವಾ) ಸಂಸಿದ್ಧಿಂ-ಜ್ಞಾನವನ್ನು, ಕರ್ಮಣಾ-ಕರ್ಮದಿಂದ, ಹೊಂದಿರುವರೆಂಬದಾಗಿ ತಿಳಿಯಬೇಕು. ಆದರೂ ಜ್ಞಾನಿಗಳಾದ ಜನಕಾದಿಗಳ ಆಚಾರವಿರುವ ಮಾತ್ರದಿಂದಲೇ ನೀನು ಕರ್ಮವಂ ಮಾಡಬೇಕೆಂದು ಹೇಳಲಿಲ್ಲವು; ಮತ್ತೇನೆಂದರೇ ಭಗವತ್ಪ್ರೀತಿದ್ವಾರಾ ಈ ಕರ್ಮವು ಮೋಕ್ಷದಲ್ಲಿ ಆನಂದಾಭಿವೃದ್ಧಿಯಂ ಮಾಡುವುದರಿಂದಲೂ, ಮತ್ತು ಕರ್ಮಾನುಷ್ಠಾನದಿಂದ ಲೋಕಸಂಗ್ರಹರೂಪ ಪ್ರಯೋಜನವನ್ನು ಚಿಂತಿಸಿ ಯಾದರೂ ಅವಶ್ಯಕವೆಂದು ತಿಳಿಯಬೇಕು. ಮತ್ತು ಈ ಕರ್ಮವು ಅಜ್ಞಾನಿಗಳಿಗೆ ಜ್ಞಾನಪ್ರದವಾಗಿಯೂ, ಜ್ಞಾನಿಗಳಿಗೆ ಲೋಕಸಂಗ್ರಹಾರ್ಥವಾಗಿಯೂ, ತತ್ಕ್ಷಣದಲ್ಲಿ ಪರಮಾತ್ಮನಿಗೆ ಪ್ರೀತಿ ವಿಶೇಷವನ್ನುಂಟು ಮಾಡತಕ್ಕದ್ದಾಗಿಯೂ, ಮುಕ್ತಿದಶೆಯಲ್ಲಿ ಆನಂದ ವೃದ್ಧಿಯನ್ನು ಮಾಡತಕ್ಕದ್ದಾಗಿಯೂ, ಇರುವುದರಿಂದ ಅವಶ್ಯಕವಾಗಿ ಮಾಡತಕ್ಕದ್ದೆಂಬೀ ಅರ್ಥವು "ಅಜ್ಞಾನಾಂಜ್ಞಾನದಂ ಕರ್ಮಜ್ಞಾನಿನಾಂ ಲೋಕಸಂಗ್ರಹಾತ್ । ಅದೃಷ್ಟವತುಷ್ಟಿದಂಮುಖ್ಯಂ ಸ್ವಮುಕ್ತಾನಂದ ಪೂರ್ತಿದಾ" ಎಂಬದಾಗಿ ಕೃಷ್ಣಸಂಹಿತೆಯಲ್ಲಿಯೂ ವಿವರಿಸಲ್ಪಟ್ಟಿರುವುದು. ॥೨೦॥

ಮೂ॥ ಯದ್ಯದಾಚರತಿ ಶ್ರೇಷ್ಠಸ್ತತ್ತ ದೇವೇತರೋ ಜನಃ । ಸಯತ್ಪ್ರಮಾಣಂಕುರುತೇ ಲೋಕಸ್ತದನು ವರ್ತತೇ ॥ ... ॥೨೧॥

ಪ॥ ಯತ್‌- ಯತ್‌- ಆಚರತಿ- ಶ್ರೇಷ್ಠಃ - ತತ್‌- ತತ್‌ - ಏವ- ಇತರಃ- ಜನಃ। ಸಃ- ಯತ್‌- ಪ್ರಮಾಣಂ-ಕುರುತೇ-ಲೋಕಃ- ತತ್‌- ಅನುವರ್ತತೇ ॥ ॥೨೧॥

ಅ॥ ಶ್ರೇಷ್ಠಃ - ಸಮಸ್ತಶಾಸ್ತ್ರಜ್ಞನಾದುದರಿಂದಲೂ ಕರ್ಮಾನುಷ್ಠಾತೃವಾಗಿರುವು ದರಿಂದಲೂ ಶ್ರೇಷ್ಠನಾದ ಪುರುಷನು, ಯದ್ಯತ್‌- ಯಾವ ಯಾವ ಕರ್ಮವನ್ನು, ಆಚರತಿ- ಮಾಡುತ್ತಾನೊ, ತತ್ತದೇವ- ಆಯಾಕರ್ಮವನ್ನೇ, ಇತರೋಜನಃ- ಇತರನಾದ ಮನು ಷ್ಯನು, ಆಚರತಿ - ಅನುಷ್ಠಿಸುತ್ತಾನೆ, ಸಃ - ಶ್ರೇಷ್ಠನಾದ ಆಪುರುಷನು, ಯತ್ಪ್ರ ಮಾಣಂಕುರುತೆ - ಯಾವದನ್ನು ಪ್ರಮಾಣವಾಗಿ ಮಾಡುತ್ತಾನೊ, ಲೋಕಃ - ಲೋ ಕವು, ತತ್‌- ಅದನ್ನೇ, ಅನುವರ್ತತೇ- ಅನುಸರಿಸುತ್ತಾನೆ. ॥ ೧॥

(ರಾ॥ ಭಾ॥) ಈ ಪ್ರಕಾರವಾಗಿ ಮೋಕ್ಷಾಪೇಕ್ಷೆಯುಳ್ಳವನಿಗೆ ಜ್ಞಾನ ಯೋಗಕ್ಕೆ ತಾನನರ್ಹನಾಗಿರುವುದರಿಂದ ಕರ್ಮಯೋಗವೇ ಮಾಡತ ಕ್ಕದ್ದೆಂದುಹೇಳಿ ಜ್ಞಾನಯೋಗಾಧಿಕಾರಿಗೂ ಕರ್ಮಯೋಗವೇ ಶ್ರೇಷ್ಠ ವೆಂಬುವುದನ್ನೂ ಕಾರಣ ಪ್ರದರ್ಶನ ಪೂರ್ವ್ವಕವಾಗಿ ಉಪದೇಶಿಸುತ್ತಾ ನೆ. ಎಲೈ ಅರ್ಜುನನೆ ! ನೀನು ಲೋಕದವರ ಕ್ಷೇಮವನ್ನು ನೋಡಿ ಯಾದರೂ ಕರ್ಮವನ್ನೇ ಮಾಡತಕ್ಕವನಾಗುತ್ತೀಯೆ; ಏತಕ್ಕೆಂದರೆ ! ಸಕಲ ಶಾಸ್ತ್ರಗಳನ್ನು ತಿಳಿದು ಅದರಂತೆ ಅನುಷ್ಠಿಸಿ ಪ್ರಸಿದ್ಧನಾದ ಒಂದು ಪುರುಷನು ( ಯಾವ ಪ್ರಮಾಣದಿಂದ ಯಾವ ಅಂಗದೊಡನೆ) ಯಾವದನ್ನು ಮಾಡುತ್ತಾನೆಯೊ ಅದನ್ನೇ ಪೂರ್ತಿಯಾಗಿ ತಿಳಿದುಕೊ ಳ್ಳದ (ಪೂರ್ತಿಯಾಗಿ ತಿಳಿದುಕೊಳ್ಳದ ಅಂದರೆ ಶಾಸ್ತ್ರಾರ್ಥದಲ್ಲಿ ಏಕದೇ ಶವನ್ನು ತಿಳಿದುಕೊಂಡ) ಜನವೂ ಆಪ್ರಕಾರವಾಗಿಯೇ ಅನುಷ್ಠಿಸು ವುದು. ಆದುದರಿಂದ ಲೋಕ ರಕ್ಷಣಾರ್ಥವಾಗಿ ಅಂಥಾ ಶ್ರೇಷ್ಠನಾ ಗಿರುವವನು ಕೂಡ ತನ್ನ ವರ್ಣಾಶ್ರಮಗಳಿಗೆ ಉಚಿತವಾದ ಸಕಲಕ ರ್ಮಗಳನ್ನು ಅನುಷ್ಠಿಸುವನು. ಇಲ್ಲದಿದ್ದರೆ ಲೋಕನಾಶದಿಂದುಂ ಟಾದ ಪಾಪವು ಇವನನ್ನು ಜ್ಞಾನಯೋಗದಿಂದಲೂ ಜಾರುಪಂತೆ ಮಾ ಡುವುದು. ... - ... ॥೨೧॥

ಮೂ ॥ ನಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷುಲೋ

ಕೇಷು ಕಿಂಚನ | ನಾನವಾಪ್ತ ಮವಾಪ್ತವ್ಯಂ ವರ್ತ ಏವ
ಚ ಕರ್ಮಣಿ ‖ ‖೨೨‖

ಪ‖ ನ- ಮೇ- ಪಾರ್ಥ- ಅಸ್ತಿ- ಕರ್ತವ್ಯಂ- ತ್ರಿಷು-ಲೋಕೇಷು-ಕಿಂಚನ | ನ- ಅನವಾಪ್ತಂ- ಅವಾಪ್ತವ್ಯಂ- ವರ್ತೇ- ಏವ- ಚ- ಕರ್ಮಣಿ ‖ ... ‖೨೨‖ [?]

ಅ‖ ಹೇ ಪಾರ್ಥ- ಎಲೈ ಅರ್ಜುನನೆ, ಮೇ- ನನಗೆ, ಕರ್ತವ್ಯಂ-ಮಾಡತಕ್ಕದ್ದು, ನಾಸ್ತಿ- ಇಲ್ಲವು, ತ್ರಿಷುಲೋಕೇಷು- ಮೂರುಲೋಕಗಳಲ್ಲಿ, ಅನವಾಪ್ತಂ-ಹೊಂದದೇ ಇರುವುದು, ಅವಾಪ್ತವ್ಯಂ- ಹೊಂದತಕ್ಕದ್ದಾಗಿರುವುದು, ಕಿಂಚನ- ಸ್ವಲ್ಪಾಂಶವು, ನಾಸ್ತಿ - ಇಲ್ಲವು, (ತಥಾಪಿಚ-ಆದರೂ,) ಕರ್ಮಣಿ- ಕರ್ಮದಲ್ಲಿ, ವರ್ತ ಏವ- ಪ್ರವರ್ತಿಸಿಯೇ ಇರುವೆನು ‖೨೨‖ [?]

(ರಾ‖ ಭಾ‖) ಸರ್ವೇಶ್ವರನಾಗಿಯೂ, ಹೊಂದಲ್ಪಟ್ಟ ಸರ್ವೇಷ್ಟಾರ್ಥವುಳ್ಳವನಾಗಿಯೂ, ಸರ್ವಜ್ಞನಾಗಿಯೂ, ಸತ್ಯಸಂಕಲ್ಪನಾಗಿಯೂ ಮೂರುಲೋಕಗಳಲ್ಲಿ ದೇವ ಮನುಷ್ಯಾದಿರೂಪದಿಂದ ಅವತಾರವಂ ಮಾಡಿರುವ ನನಗೆ ಸ್ವಲ್ಪವೂ ಅನುಷ್ಠಿಸತಕ್ಕದಿಲ್ಲವು. ಇದುವರೆಗೂ ನಾನು ಹೊಂದದೇ ಇರುವುದು ಕರ್ಮವಂ ಮಾಡಿ ಹೊಂದತಕ್ಕದ್ದಾಗಿಯೂ ಇರುವುದಿಲ್ಲವು. ಆದರೂ ಲೋಕರಕ್ಷಣಾರ್ಥವಾಗಿ ಕರ್ಮಗಳನ್ನಾಚರಿಸುವೆನು. ... ... ‖೨೨‖ [?]

ಮೂ‖ ಯದಿಹ್ಯಹಂ ನವರ್ತೇಯಂ ಜಾತುಕರ್ಮಣ್ಯತಂ
ದ್ರಿತಃ | ಮಮವರ್ತ್ಮಾನುವರ್ತಂತೇ ಮನುಷ್ಯಾಃ ಪಾ
ರ್ಥ ಸರ್ವಶಃ ‖ ೨೩ ‖ [?] ಉತ್ಸೀದೇಯುರಿಮೇ ಲೋಕಾನ
ಕುರ್ಯಾಂ ಕರ್ಮಚೇದಹಂ | ಸಂಕರಸ್ಯಚಕರ್ತಾಸ್ಯಾಮು
ಪಹನ್ಯಾಮಿಮಾಃಪ್ರಜಾಃ ‖ ‖೨೪‖

ಪ‖ ಯದಿ- ಹಿ- ಅಹಂ- ನ- ವರ್ತೇಯಂ- ಜಾತು- ಕರ್ಮಣಿ- ಅತಂದ್ರಿತಃ | ಮಮ- ವರ್ತ್ಮ- ಅನುವರ್ತಂತೇ- ಮನುಷ್ಯಾಃ- ಪಾರ್ಥ- ಸರ್ವಶಃ- ‖ ಉತ್ಸೀದೇಯುಃ- ಇಮೇ- ಲೋಕಾಃ- ನ- ಕುರ್ಯಾಂ- ಕರ್ಮ - ಚೇತ್- ಅಹಂ | ಸಂಕರಸ್ಯ- ಚ - ಕರ್ತಾ-ಸ್ಯಾಂ- ಉಪಹನ್ಯಾಂ- ಇಮಾಃ- ಪ್ರಜಾಃ ‖ ... ... ‖೨೩‖೨೪‖ [?]

ಅ ‖ ಹೇ ಪಾರ್ಥ - ಎಲೈ ಅರ್ಜುನನೇ ! ಅಹಂ- ನಾನು, ಜಾತು- ಯಾವಕಾಲದಲ್ಲಿಯೂ, ಅತಂದ್ರಿತಃ- ಜಾಗರೂಕನಾಗಿ, ಕರ್ಮಣಿ - ಕರ್ಮಾನುಷ್ಠಾನದಲ್ಲಿ, ನವರ್ತೇಯಂ ಯದಿ- ಪ್ರವರ್ತಿಸದೇ ಹೋದವನೇ ಆದರೆ, ಮನುಷ್ಯಾಃ- ಮನುಷ್ಯರು, ಸರ್ವಶಃ- ಸರ್ವಪ್ರಕಾರದಲ್ಲಿಯೂ, ಮಮ- ನನ್ನ, ವರ್ತ್ಮ- ಮಾರ್ಗವನ್ನು, ಅನುವರ್ತಂತೇಹಿ- ಅನು

ಸರಿಸುವರಲ್ಲವೆ. (ಶಂ|| ಭಾ|| ಆದರೂ ಪ್ರಾಪ್ತವಾದ ದೋಷವೇನೆಂದರೆ,) ಅಹಂ - ನಾನು, ಕರ್ಮ - ಕರ್ಮವನ್ನು, ನಕುರ್ಯಾಂಚೇತ್ - ಮಾಡದೇ ಹೋದನೇ ಆದರೆ, ಇಮೇಲೋಕಾಃ- ಈ ಜನಗಳು, ಉತ್ಸೀದೇಯುಃ- ಕರ್ಮಲೋಪದಿಂದ ಕೆಟ್ಟುಹೋಗುವರು. ಸಂಕರಸ್ಯಚ- ಜಾತಿಸಾಂಕರ್ಯಕ್ಕೂನೂ, (ಗೀ|| ವಿ|| ಕರ್ಮದಿಂದ ವರ್ಣಾಶ್ರಮ ಧರ್ಮಗಳು ಸ್ಥಿರವಾಗಿ ನಿಂತಿರುವುದರಿಂದ ಕರ್ಮಗಳಂ ಮಾಡದೇ ಹೋದರೆ ವರ್ಣಾಶ್ರಮ ಧರ್ಮಗಳು ಕೆಟ್ಟು ಅದರಿಂದ ಜಾತಿಸಾಂಕರ್ಯವೂ ಆಗುವುದು.) ಕರ್ತಾ- ಮಾಡುವಂತವನಾಗಿ, ಸ್ಯಾಂ- ಆದೇನು, ಇಮಾಃಪ್ರಜಾಃ-ಈ ಜನಗಳನ್ನು, ಉಪಹನ್ಯಾಂ- ಸಂಹರಿಸಿದವನಾಗುವೆನು||೩||೨೪||

(ರಾ|| ಭಾ) ಸರ್ವೇಶ್ವರನಾಗಿಯೂ, ಸತ್ಯಸಂಕಲ್ಪನಾಗಿಯೂ, ಸಂಕಲ್ಪಮಾತ್ರದಿಂದ ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನೇ ಲೀಲೆಯಾಗಿವುಳ್ಳವನಾಗಿಯೂ, ಇರುವ ನಾನು ಲೋಕೋಪಕಾರಾರ್ಥವಾಗಿ ನನ್ನ ಇಚ್ಛೆಯಿಂದ ಮನುಷ್ಯನಾಗಿ ಅವತಾರವಂ ಮಾಡಿದವನಾದರೂ ಶಿಷ್ಟಜನರಲ್ಲಿ ಶ್ರೇಷ್ಠರಾದ ವಸು ದೇವರ ಗೃಹದಲ್ಲಿ ಅವತರಿಸಿರುವವನಾದುದರಿಂದ ಅಂಥಾ ಕುಲಕ್ಕೆ ಉಚಿತವಾದ ಕರ್ಮಗಳನ್ನು ಆಲಸ್ಯವಿಲ್ಲದವನಾಗಿ ಯಾವಾಗಲೂ ನಾನು ಮಾಡದೇಹೋದನ್ನೇ ಆದರೆ ,, ಶಿಷ್ಟಜನಗಳಲ್ಲಿ ಶ್ರೇಷ್ಠರಾದ ವಸುದೇವಕುಮಾರನಾದ ಕೃಷ್ಣನು ಆಚರಿಸಿರುವ ಮಾರ್ಗವೇ ನಮಗೂ ಮಾರ್ಗವೆಂಬದಾಗಿ ತಿಳಿದು ಸಕಲವನ್ನು ತಿಳಿಯದ ಕೆಲವು ಶಿಷ್ಟರುಗಳು ಅದನ್ನೇ ಅನುಸರಿಸುವರು. ಆವಾಗ ಅವರುಗಳು ತಾವು ಮಾಡತಕ್ಕ ಕರ್ಮಗಳಂ ಮಾಡದೇ ಇರುವುದರಿಂದ ಆತ್ಮನನ್ನು ಹೊಂದದೇ ನರಕಪಾತಕ್ಕೂ ಯೋಗ್ಯರಾಗುವರು. ನಾನೂ ಶಾಸ್ತ್ರೋಕ್ತವಾದ ಆಚಾರವನ್ನು ಪರಿಪಾಲಿಸದೇ ಇರುವುದರಿಂದ ಸಕಲವಾದ ಶಿಷ್ಟಕುಲಗಳಿಗೂ ಸಂಕರವನ್ನು (ವರ್ಣಾಶ್ರಮಾಚರಗಳ ಸಾಂಕರ್ಯವನ್ನು) ಮಾಡಿ ಈ ಪ್ರಾಣಿಗಳೆಲ್ಲವನ್ನೂ ನಾಶಪಡಿಸುವಂತವನಾಗುವೆನು. ಆದುದರಿಂದ ನೀನೂ ಈ ಪ್ರಕಾರವೇ ಶಿಷ್ಟಜನಾಗ್ರೇಸರನಾದ ಪಾಂಡುರಾಜನ ಕುಮಾರನೆಂಬದಾಗಿಯೂ ಧರ್ಮಪುತ್ರರ ತಮ್ಮನೆಂಬದಾಗಿಯೂ, ಅರ್ಜುನನೆಂಬದಾಗಿಯೂ ಪ್ರಸಿದ್ಧಿಯಂಹೊಂದಿ ಕರ್ಮಗಳಂ ಬಿಟ್ಟು ಜ್ಞಾನನಿಷ್ಠೆಯಲ್ಲಿ ಪ್ರವರ್ತಿಸಿದವನಾದರೇ ಮೋಕ್ಷಾಪೇಕ್ಷೆಮಾತ್ರವುಳ್ಳವರಾಗಿ ಶಾಸ್ತ್ರಾರ್ಥಗಳನ್ನು ಪೂರ್ಣವಾಗಿ ತಿಳಿಯದ ಕೆಲವು ಶಿಷ್ಟಜನರು ನಿನ್ನ ಆಚಾರವನ್ನೇ ಅನುಸರಿಸಿ ತಮಗಳಿಗುಚಿತವಾದ ಕರ್ಮದಲ್ಲಿ ನಿಲ್ಲದೇ ನಶಿಸಿ ಹೋಗುವುರು.

ಆದುದರಿಂದ ಪ್ರಸಿದ್ಧರಾದ ಶಿಷ್ಟಜನಗಳಿಗೂ ಕೂಡ ಕರ್ಮಾನು ಷ್ಠಾನವು ಅವಶ್ಯವಾಗಿರಬೇಕೆಂದರ್ಥವು. ॥೨೩॥೨೪॥

(ತಾ॥ ಚಂ) ಮುಂದಿನ ಶ್ಲೋಕವು ಮೂರುಲೋಕದಲ್ಲೆಂಬದಾಗಿ ಹೇಳಿರುವುದರಿಂದ ಪರಮಾತ್ಮನ ಸಮಸ್ತಾವತಾರಪರವು. ಈ ಶ್ಲೋಕವು ಮನುಷ್ಯರೆಂಬುವುದರಿಂದ ಶ್ರೀಕೃಷ್ಣಾವತಾರಮಾತ್ರವನ್ನೇ ಬೋಧಿಸುವುದು. ಇಲ್ಲಿ (ಅಹಂ) ಎಂಬುವ ನಿರ್ದೇಶವು ಈಶ್ವರ ಸ್ವಭಾವವನ್ನು ಬಿಡದ ಕೃಷ್ಣಾವತಾರ ಸಾಧಾರಣ ವೆಂಬದಾಗಿ ತಿಳಿಯಬೇಕು. ॥೨೩॥

(ಗೀ॥ ವಿ॥) ನಾನು ಪ್ರಯೋಜನಾಪೇಕ್ಷೆಯಿಲ್ಲದವನಾದರೂ ಕೇವಲಾನುಗ್ರಹದಿಂದ ಲೋಕಸಂಗ್ರಹಾರ್ಥವಾಗಿ ಕರ್ಮಗಳಂ ಮಾಡುತಲಿರುವಲ್ಲಿ ಜ್ಞಾನಿಗಳು ಮೋಕ್ಷದಲ್ಲಿ ಆನಂದಾತಿಶಯಾರ್ಥವಾಗಿ ಕರ್ಮಗಳನ್ನು ಮಾಡಬೇಕೆಂಬ ವಿಷಯದಲ್ಲಿ ಹೇಳತಕ್ಕದ್ದೇನಿರುವುದು ? ಎಂಬದಾಗಿ ಈ ಮೂರು ಶ್ಲೋಕಗಳಿಂದಲೂ ಹೇಳುತ್ತಾನೆ. ॥೨೪॥

ಮೂ॥ ಸಕ್ತಾಃಕರ್ಮಣ್ಯವಿದ್ವಾಂಸೋ ಯಥಾಕುರ್ವಂತಿ ಭಾರತ । ಕುರ್ಯಾದ್ವಿದ್ವಾಂ ಸ್ತಥಾ ಸಕ್ತಶ್ಚಿಕೀರ್ಷುರ್ಲೋಕಸಂಗ್ರಹಂ ॥೨೫॥ ನಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಂ । ಜೋಷಯೇತ್ಸರ್ವಕರ್ಮಾಣಿ ವಿದ್ವಾನ್ಯುಕ್ತಸ್ಸಮಾಚರನ್ ॥. ॥೨೬॥

ಪ॥ ಸಕ್ತಾಃ- ಕರ್ಮಣಿ- ಅವಿದ್ವಾಂಸಃ- ಯಥಾ- ಕುರ್ವಂತಿ- ಭಾರತ । ಕುರ್ಯಾತ್- ವಿದ್ವಾನ್- ತಥಾ- ಸಕ್ತಃ- ಚಿಕೀರ್ಷುಃ - ಲೋಕಸಂಗ್ರಹಂ ॥ ನ- ಬುದ್ಧಿಭೇದಂ- ಜನಯೇತ್- ಅಜ್ಞಾನಾಂ- ಕರ್ಮಸಂಗಿನಾಂ । ಜೋಷಯೇತ್ - ಸರ್ವಕರ್ಮಾಣಿ - ವಿದ್ವಾನ್- ಯುಕ್ತಃ- ಸಮಾಚರನ್ ॥ ... ... ॥೨೫॥೨೬॥

ಅ॥ ಅವಿದ್ವಾಂಸಃ- ಅಜ್ಞಾನಿಗಳು, ಕರ್ಮಣಿ - ಕರ್ಮದಲ್ಲಿ, ಸಕ್ತಾಸ್ಸಂತಃ - ಆಸಕ್ತಿಯುಳ್ಳವರಾಗಿ, ಯಥಾ- ಯಾವ ಪ್ರಕಾರವಾಗಿ, ಕುರ್ವಂತಿ - ಮಾಡುತ್ತಾರೋ, ತಥಾ- ಆ ಪ್ರಕಾರವಾಗಿ, ವಿದ್ವಾನ್ - ಆತ್ಮಜ್ಞಾನವುಳ್ಳವನು, ಅಸಕ್ತಃ - ಸಂಗವಿಲ್ಲದವನಾಗಿ, ಲೋಕಸಂಗ್ರಹಂ- ಲೋಕಾನುಗ್ರಹವನ್ನು, ಚಿಕೀರ್ಷುಃ - ಮಾಡಲಪೇಕ್ಷೆಯುಳ್ಳವನಾಗಿ, ಕುರ್ಯಾತ್ - ಕರ್ಮಯೋಗವಂ ಮಾಡಬೇಕು. ವಿದ್ವಾನ್ - ಆತ್ಮಜ್ಞಾನವುಳ್ಳವನು, ಕರ್ಮಸಂಗಿನಾಂ- ಕರ್ಮಾಸಕ್ತರಾದ, ಅಜ್ಞಾನಾಂ - ಜ್ಞಾನವಿಲ್ಲದವರುಗಳಿಗೆ, ಬುದ್ಧಿಭೇದಂ-

ಬುದ್ಧಿ ವ್ಯಾಕುಲವನ್ನು, ನಜನಯೇತ್ - ಉಂಟುಮಾಡಬಾರದು, ಯುಕ್ತಃ - ಅವಶ್ಯವಾಗಿ ಕರ್ಮವು ಮಾಡತಕ್ಕದ್ದೆಂಬ ಬುದ್ಧಿಯುಳ್ಳವನಾಗಿ. ಸರ್ವಕರ್ಮಾಣಿ- ಸಕಲ ಕರ್ಮಗಳನ್ನು, ಸಮಾಚರನ್- ಚನ್ನಾಗಿ ಮಾಡುತಲೇ, ಜೋಷಯೇತ್- ಪ್ರೀತಿಮಾಡಿಸಬೇಕು. ||

(ಶಂ|| ಭಾ||) ಈ ರೀತಿಯಾಗಿ ಲೋಕಸಂಗ್ರಹವನ್ನು ಮಾಡಬೇಕೆಂಬ ಅಪೇಕ್ಷೆಯುಳ್ಳವನಾಗಿಯೂ,ಆತ್ಮವೇದಿಯಾಗಿಯೂ ಇರುವವನು ಮಾಡತಕ್ಕ ಕರ್ಮವು ಯಾವದೂ ಇಲ್ಲವೆಂತಲೂ, ಮತ್ತು ಆತ್ಮವೇದಿಯಾದ ಇತರನಿಗೂಕೂಡ ಲೋಕಸಂಗ್ರಹಾರ್ಥವಾದಕರ್ಮಕ್ಕಿಂತಲೂ ಇತರವಾದ ಕರ್ಮವು ಯಾವದೂ ಇಲ್ಲವೆಂತಲೂ ಹೇಳಿರುವ ಶ್ರೀ ಕೃಷ್ಣನೀಶ್ಲೋಕದಿಂದ ಆತ್ಮಜ್ಞನಿಗೆ ಉಪದೇಶಮಾಡಬೇಕಾದ ವಿಷಯವನ್ನು ಉಪದೇಶಿಸುತ್ತಾನೆ. ಈ ಕರ್ಮವು ನನ್ನಿಂದ ಮಾಡತಕ್ಕದ್ದು, ಈ ಕರ್ಮಫಲವನ್ನು ನಾನನುಭವಿಸುವೆನು, ಎಂಬದಾಗಿ ತಿಳಿದು ಕರ್ಮವನ್ನು ಮಾಡುತಿರುವವನಿಗೆ ಆತ್ಮವೇದಿಯಾದವನು ಕರ್ಮಫಲವು ನಶ್ವರವು, (ಅಸ್ಥಿರವು,) ಇದರಿಂದ ಶಾಶ್ವತಫಲವು ಲಭಿಸಲಾರದು, ಇತ್ಯಾದಿಯಾದ ಉಪದೇಶಗಳಂ ಮಾಡಿ ಬುದ್ಧಿಚಾಂಚಲ್ಯವನ್ನುಂಟುಮಾಡಬಾರದು. ಮತ್ತೇನೆಂದರೆ ! ಅಂಥಾ ಕರ್ಮಾಸಕ್ತನು ಪ್ರೀತಿಯೊಡನೆ ಕರ್ಮವಂಮಾಡುವುದಕ್ಕಾಗಿ ತಾನೂ,ಅವಿವೇಕಿಯಾದ ಕರ್ಮಾಸಕ್ತನು ಮಾಡುತಲಿರುವ ಕರ್ಮಗಳನ್ನೇ ಭಕ್ತಿಶ್ರದ್ಧೆಗಳಿಂದ ಮಾಡುತಲಿರಬೇಕು. ಅಂದರೇ ತಾನು ಭಕ್ತಿಶ್ರದ್ಧೆಗಳಿಂದ ಕರ್ಮಗಳಂ ಮಾಡುತ *ಅನ್ಯರಿಂದಲೂ ಅದೇರೀತಿಯಾಗಿ ಕರ್ಮವನ್ನು ಮಾಡಿಸಬೇಕೆಂದರ್ಥವು. ||೨೬||

(ರಾ|| ಭಾ||) ಆತ್ಮ ವಿಷಯದಲ್ಲಿ ಸಕಲವು ತಿಳಿಯದವರುಗಳಾಗಿ ಕರ್ಮದಲ್ಲಿ ಬಿಡಲಶಕ್ಯವಾದ ಸಂಬಂಧವುಳ್ಳವರಾದ ಕರ್ಮಾಧಿಕಾರಿಗಳು ಅಂಥಾ *ಆತ್ಮಾಭ್ಯಾಸರೂಪವಾದ ಜ್ಞಾನಯೋಗದಲ್ಲಿ ಪ್ರವೇಶಿಸುವುದು ತಮ್ಮಗಳಿಂದಾಗುವುದಿಲ್ಲವೆಂದು ತಮ್ಮಗಳಿಗೆ ಸುಲಭಸಾಧ್ಯವಾದ ಕರ್ಮಯೋಗದಲ್ಲಿ ಹೇಗಾದರೆ ಇಳಿಯುವರೋ,ಆರೀತಿಯಾಗಿಯೇ ಆತ್ಮ ವಿಷಯದಲ್ಲಿ ಸಂಪೂರ್ಣಜ್ಞಾನವುಳ್ಳವನಾಗಿ ಕರ್ಮದಲ್ಲಿ ಸಂಬಂಧವನ್ನು ತ್ಯಜಿಸಿ ಜ್ಞಾನಯೋಗಕ್ಕೆ ಯೋಗ್ಯನೆಂಬ ಹೆಸರನ್ನು ಹೊಂದಿರುವ ಶಿಷ್ಟನುಕೂಡ ತನ್ನ ಆಚಾರದಿಂದ ಶಿಷ್ಟಜನಗಳಿಗೆ ಧರ್ಮನಿಶ್ಚಯವಂ

ಮಾಡಿಕೊಡುವವನೆಂಬ ಲೋಕರಕ್ಷಣಕ್ಕಾಗಿ ಕರ್ಮಯೋಗವನ್ನೇ ಮಾಡುವನು. ಅದುಮಾತ್ರವಲ್ಲದೇ ಆತ್ಮವಿಷಯದಲ್ಲಿ ಸಕಲವೂ ತಿಳಿದವನಾಗಿರುವ ಕರ್ಮಯೋಗಾಧಿಕಾರಿಗಾದರೂ, ಜ್ಞಾನಯೋಗಾಧಿಕಾರಿಗಾದರೂ ಕರ್ಮಕ್ಕಿಂತಲೂ ಜ್ಞಾನವೆಂಬದಾಗಿ ಬೇರೇ ಒಂದು ಸಾಧನವುಂಟೆಂಬ ಬುದ್ಧಿಯನ್ನು ಸ್ವಲ್ಪಮಾತ್ರವೂ ಉಂಟುಮಾಡಕೂಡದು. ಮತ್ತೇನುಮಾಡಬೇಕೆಂದರೆ! ಜ್ಞಾನಯೋಗನಿರಪೇಕ್ಷವಾಗಿ ಕರ್ಮಯೋಗವೇ ಆತ್ಮಸಾಕ್ಷಾತ್ಕಾರಕ್ಕೆ ಸಾಧನವಾಗುವುದೆಂಬ ಬುದ್ಧಿಯೊಡನೆ ಕರ್ಮವನ್ನೇ ಮಾಡುತಾಬಂದು ಸಂಪೂರ್ಣವಾಗಿ ತಿಳಿಯದವರುಗಳಿಗೆ ಸಕಲ ಕರ್ಮಗಳಲ್ಲಿಯೂ ಪ್ರೀತಿಯನ್ನುಂಟುಮಾಡುತಿರಬೇಕು. ॥೨೬॥

ಮೂ॥ ಪ್ರಕೃತೇಃ ಕ್ರಿಯಮಾಣಾನಿ ಗುಣೈಃಕರ್ಮಾಣಿ ಸರ್ವಶಃ । ಅಹಂಕಾರ ವಿಮೂಢಾತ್ಮಾ ಕರ್ತಾಹಮಿತಿಮನ್ಯತೇ ॥೨೭॥ ತತ್ತ್ವವಿತ್ತು ಮಹಾಬಾಹೋ ಗುಣಕರ್ಮವಿಭಾಗಯೋಃ । ಗುಣಾಗುಣೇಷು ವರ್ತಂತ ಇತಿಮತ್ವಾ ನಸಜ್ಜತೇ ॥ ॥೨೮॥

ಪ॥ ಪ್ರಕೃತೇಃ - ಕ್ರಿಯಮಾಣಾನಿ - ಗುಣೈಃ- ಕರ್ಮಾಣಿ - ಸರ್ವಶಃ । ಅಹಂಕಾರವಿಮೂಢಾತ್ಮಾ - ಕರ್ತಾ- ಅಹಂ- ಇತಿ- ಮನ್ಯತೇ ॥ ತತ್ತ್ವವಿತ್- ತು- ಮಹಬಾಹೋ- ಗುಣಕರ್ಮವಿಭಾಗಯೋಃ। ಗುಣಾಃ- ಗುಣೇಷು- ವರ್ತಂತೇ- ಇತಿ- ಮತ್ವಾ-ನ-ಸಜ್ಜತೇ॥೨೭॥೨೮॥

ಅ॥ ಅಹಂಕಾರವಿಮೂಢಾತ್ಮಾ - ಅಹಂಕಾರದಿಂದ ವಿಮೂಢವಾದ ಸ್ವರೂಪವುಳ್ಳವನು, ಪ್ರಕೃತೇಃ - ಪ್ರಕೃತಿಯ, (ಅಥವಾ ಮಾಯೆಯ) ಗುಣೈಃ- ಗುಣಗಳಿಂದ, ಕ್ರಿಯಮಾಣಾನಿ - ಮಾಡಲ್ಪಡುವ, ಕರ್ಮಾಣಿ- ಸಕಲ ಕರ್ಮಗಳನ್ನು, ಅಹಂಕರ್ತಾ - ನಾನುಮಾಡುವಂತವನು, ಇತಿ- ಎಂಬದಾಗಿ, ಮನ್ಯತೇ- ಎಣಿಸುತ್ತಾನೆ, ಹೇಮಹಾಬಾಹೋ- ದೀರ್ಘವಾದ ಭುಜವುಳ್ಳ ಎಲೈಅರ್ಜುನನೆ! ಗುಣಕರ್ಮವಿಭಾಗಯೋಃ- ಗುಣಗಳೇನು, ಕರ್ಮಗಳೇನು, ಇವುಗಳ ವಿಭಾಗದ, ತತ್ತ್ವವಿತ್ತು- ಯಥಾರ್ಥವನ್ನರಿತವನೋ,ಗುಣಾಃ- ಗುಣಗಳು, ಗುಣೇಷು- ತನ್ನ ಕಾರ್ಯಗಳಲ್ಲಿ, ವರ್ತಂತೆ - ಪ್ರವರ್ತಿಸುವುವು, ಇತಿ - ಈರೀತಿಯಾಗಿ, ಮತ್ವಾ- ನೆನೆಸಿ, ನಸಜ್ಜತೆ - ಅಭಿಮಾನಿಯಾಗುವುದಿಲ್ಲವು. ॥೨೭॥ ॥೨೮॥

(ರಾ॥ ಭಾ॥) ಕರ್ಮಯೋಗವನ್ನು ಮಾಡುವುದರಲ್ಲಿ, ತಿಳಿದವನಿಗೂ ತಿಳಿಯದವನಿಗೂ ಇರುವ ಭೇದವನ್ನು ತೋರಿಸುತಾ ಕರ್ಮಯೋಗಾ

ಪೇಕ್ಷಿತವಾದ"ನಾನುಮಾಡುವಂತವನಲ್ಲ"ವೆಂಬದಾಗಿ ನೆನೆಸುವ(ಆತ್ಮನಿಗೆಕರ್ತೃತ್ವವಿಲ್ಲವೆಂಬ ಅನುಸಂಧಾನ)ಪ್ರಕಾರವನ್ನುಪದೇಶಿಸುತ್ತಾನೆ. ಅಹಂಕಾರದಿಂದ ಆತ್ಮಜ್ಞಾನಶೂನ್ಯನಾದ ಮೂಢನು, ಪ್ರಕೃತಿಯಗುಣಗಳಾದ ಸತ್ವ ರಜಸ್ತಮಸ್ಸುಗಳಿಂದ ಮಾಡಲ್ಪಡುವ ಕರ್ಮಗಳನ್ನು ತಾನು ಮಾಡಿದವನಾಗಿಯೇ ನೆನೆಸುತ್ತಾನೆ. ಅಹಂಕಾರವೆಂದರೆ ಅಹಮರ್ಥವಾದ ಜೀವಾತ್ಮನಿಗಿಂತಲೂ ಅನ್ಯವಾದ ಪ್ರಕೃತಿಯಲ್ಲಿ ಅಹಮರ್ಥವಾದ ಜೀವಾತ್ಮನೆಂಬ ಅಭಿಮಾನವು. (ಇದನ್ನೂ ದೇಹಾತ್ಮಭ್ರಾಂತಿಯೆನ್ನುವರು) ಅಹಂಕಾರದಿಂದ ಆತ್ಮಸ್ವರೂಪ ಜ್ಞಾನಶೂನ್ಯನಾಗಿ ಗುಣಗಳಿಂದ ಮಾಡಲ್ಪಟ್ಟ ಕರ್ಮಗಳಲ್ಲಿ ನಾನು ಮಾಡತಕ್ಕವನೆಂದೆಣಿಸುತ್ತಾನೆಂದರ್ಥವು. ಸತ್ವಾದಿಗುಣಗಳೇನು, ಅವುಗಳ ಕಾರ್ಯಗಳೇನು, ಇವುಗಳ ವಿಭಾಗವನ್ನು ಚೆನ್ನಾಗಿ ಅರಿತವನೂ ಗುಣಗಳು ತಮ್ಮತಮ್ಮಗಳ ಕಾರ್ಯಗಳನ್ನು ಮಾಡುವುವೆಂಬದಾಗಿ ತಿಳಿದಿರುವವನಾದುದರಿಂದ ಅದರಲ್ಲಿ ನಾನು ಮಾಡಿದೆನೆಂಬ ಸಂಬಂಧವನ್ನಿಡಲಾರನು. ||೨೭||೨೮||

(ಗೀ|| ವಿ||) ಜ್ಞಾನಿಯಾದವನು ಮಾಡುವ ಕರ್ಮಕ್ಕೂ ಅಜ್ಞಾನಿಯಾದವನು ಮಾಡುವ ಕರ್ಮಕ್ಕೂ ವೈಲಕ್ಷಣ್ಯವನ್ನು "ಸಕ್ತಾಃಕರ್ಮಣಿ" (೩||೨೫||೨೬||) ಎಂಬ ಯರಡುಶ್ಲೋಕಗಳಿಂದ ಹೇಳಿ ಅದನ್ನೇ ಇಲ್ಲಿಯೂ"ಪ್ರಕೃತೇಃ ಕ್ರಿಯಮಾಣಾನಿ" (೩||೨೭||)ಎಂಬದೇ ಮೊದಲಾದಮೂರು ಶ್ಲೋಕಗಳಿಂದ ವಿಸ್ತಾರವಾಗಿ ಹೇಳುತ್ತಾನೆ. ಈಶ್ಲೋಕದಲ್ಲಿರುವ ಪ್ರಕೃತಿಶಬ್ದದಿಂದ ಜೀವಸ್ವಭಾವವೇನು,ಈಶ್ವರನೇನು,ಜಡಪ್ರಕೃತಿಯೇನು, ಇವುಗಳು ಗ್ರಹಿಸತಕ್ಕವುಗಳಾಗಿರುವುವು. ಅಹಂಕಾರವಿಮೂಢಾತ್ಮಾ - ನಾನು ಮಾಡತಕ್ಕವನೆಂಬ ಸ್ವಾತಂತ್ರ್ಯಾಭಿಮಾನದಿಂದ ಅತ್ಯಂತ ಮೂಢವಾದ ಬುದ್ಧಿಯುಳ್ಳವನು, ಪ್ರಕೃತೇಃ- ಜಡಪ್ರಕೃತಿಯ, ಗುಣೈಃ - ಕಾರ್ಯವಾದ ಶರೀರೇಂದ್ರಿಯಗಳಿಂದ, (ಅಥವಾ) ಪ್ರಕೃತೇಃ - ಪ್ರಕೃಷ್ಟಕೃತಿಮತ್ತ್ವರೂಪವಾದ ಕಾರಣದಿಂದ ಪ್ರಕೃತಿ ಶಬ್ದ ವಾಚ್ಯನಾಗಿರುವ ಪರಮಾತ್ಮನ, ಗುಣೈಃ- ಸ್ವತಂತ್ರವಾದ ಇಚ್ಛಾಜ್ಞಾನ ಪ್ರಯತ್ನಾದಿರೂಪವಾದ ಗುಣಗಳಿಂದ, (ಅಥವಾ) ಪ್ರಕೃತೇಃ- ಉತ್ತಮ ಮಧ್ಯಮಾಧಮರೂಪವಾದ ಜೀವರಾ

ಕಿಗಳ ಜ್ಞಾನಸ್ವಭಾವಕ್ಕೆ, ಗುಣೈಃ - ಅನುಗುಣಗಳಾದ ತತ್ವಜ್ಞಾನ ವಿಶ್ರಜ್ಞಾನ ಮಿಥ್ಯಾಜ್ಞಾನಾದಿ ರೂಪವಾಗಿರುವ ಪರಮಾತ್ಮಾಧೀನವಾದ ಗುಣಗಳಿಂದ (ಅಥವಾ) ಪ್ರಕೃತೇಃ- ಜಡಪ್ರಕೃತಿಯ, ಗುಣೈಃ - ಸತ್ವಾದಿಗುಣಗಳಿಂದ, ಕ್ರಿಯಮಾಣಾನಿ- ಮಾಡಲ್ಪಡುವ, ಸರ್ವಶಃ-ಸಮಸ್ತವಾದ, ಕರ್ಮಾಣಿ- ಸಾಧುಕರ್ಮ, ಮಿಶ್ರಕರ್ಮ, ಅಸಾಧುಕರ್ಮಗಳನ್ನು, ಅಹಂಕರ್ತೇತಿ-ನಾನು ಸ್ವತಂತ್ರನಾಗಿ ಮಾಡತಕ್ಕವನೆಂಬದಾಗಿ, ಮನ್ಯತೇ - ನೆನೆಸುತ್ತಾನೆ. ||೨೭||

(ಗೀ||ವಿ||) ಈ ಪ್ರಕಾರವಾಗಿ ಜ್ಞಾನವಿಲ್ಲದವನು ಮಾಡಿದರೇವಿದ್ವಾನ್ ಎಂಬವನು ಹೇಗೆ ಮಾಡುವನೆಂದರೆ ! ಉತ್ತರವನ್ನು ಹೇಳುತ್ತಾನೆ. ಹೇಮಹಾಬಾಹೊ-ಎಲೈ ಮಹಾಬಾಹುವುಳ್ಳ ಅರ್ಜುನನೇ ! ಗುಣಕರ್ಮವಿಭಾಗಯೋಃ - ಭಗವಂತನ ಇಚ್ಛೆಯೇ ಮೊದಲಾದ ಗುಣಗಳಿಗೂ, ಪ್ರಕೃತಿಗತವಾದ ಸತ್ವಾದಿಗುಣಗಳಿಗೂ, ಪ್ರಕೃತಿ ವಿಕಾರವಾದ ದೇಹೇಂದ್ರಿಯ ಮನಸ್ಸುಗಳಿಗೂ ಇರುವ ಪರಸ್ಪರ ಭೇದವನ್ನು, ಮತ್ತು ಭಗವತ್ಸೃಷ್ಟಿಯೇ ಮೊದಲಾದ ಕರ್ಮಗಳಿಗೂ,ಭಗವದಧೀನನಾಗಿರುವ ಜೀವಾತ್ಮನಿಂದ ಮಾತಲ್ಪಡುವ ಕರ್ಮಗಳಿಗೂ ಇರುವ ಪರಸ್ಪರ ಭೇದವನ್ನು, ತತ್ವವಿತ್ತು - ಯಥಾರ್ಥದಿಂದರಿತವನು, ಗುಣಾಃ- ಭಗವದಿಚ್ಛಾದಿ ಗುಣಗಳು, ಗುಣೇಷು - ಜೀವೇಚ್ಛಾದಿ ಗುಣಗಳಲ್ಲಿ, ವರ್ತಂತೆ - ಪ್ರವರ್ತಿಸುವುವು. (ಆದುದರಿಂದ) ಗುಣಾಃ - ಇಂದ್ರಿಯಗಳು; (ಭಗವದಿಚ್ಛಾನುಸಾರವಾಗಿ) ಗುಣೇಷು - ಶಬ್ದಾದಿವಿಷಯಗಳಲ್ಲಿ, ವರ್ತಂತೆ - ಪ್ರವರ್ತಿಸುವುವು, ಇತಿ - ಎಂಬದಾಗಿ, ಮತ್ವಾ - ತಿಳಿದು, ನಸಜ್ಜತೆ - ಅಹಂಕರ್ತಾ ಎಂಬ ಸ್ವಾತಂತ್ರ್ಯಾಭಿಮಾನವುಳ್ಳವನಾಗುವುದಿಲ್ಲವು. ತನ್ನಲ್ಲಿ ಸ್ವಾತಂತ್ರ್ಯಾಭಿಮಾನವನ್ನಿಟ್ಟುಕೊಂಡು ಸಂಸಾರವಗ್ನನಾಗುವುದಿಲ್ಲವೆಂದರ್ಥವು. ||೨೮||

( ಶ್ರೀ|| ) ಗುಣಕರ್ಮಗಳ ವಿಭಾಗದ ಯಥಾರ್ಥವನ್ನು ತಿಳಿದವನೆಂದರೆ " ಸತ್ವರಜಸ್ತಮಸ್ಸುಗಳೆಂಬ ಗುಣಗಳು ತನ್ನದಲ್ಲವು, ಆತ್ಮನಾದ ತಾನೂ ಆ ಗುಣಗಳಲ್ಲವು. ಕರ್ಮವೂ ತನ್ನದಲ್ಲವು, ತಾನು ಕರ್ಮಗಳನ್ನು ಮಾಡತಕ್ಕವನೂ ಅಲ್ಲವು. ಗುಣಗಳು ಕರ್ಮಗಳು ಇವುಗಳಿಗೆ ತಾನು ಭಿನ್ನ " ನೆಂಬುವದನ್ನು ತಿಳಿದವನೇ ಗುಣಕರ್ಮವಿಭಾಗಗ

ಳನ್ನು ತಿಳಿದವನು. ... ... ||೨೭||೨೮||

ಮೂ|| ಪ್ರಕೃತೇರ್ಗುಣ ಸಮ್ಮೂಢಾಃ ಸಜ್ಜಂತೇ ಗುಣಕರ್ಮಸು | ತಾನಕೃತ್ಸ್ನವಿದೋಮಂದಾನ್ ಕೃತ್ಸ್ನವಿನ್ನವಿಚಾಲಯೇತ್ | ||೨೯||

ಪ|| ಪ್ರಕೃತೇಃ- ಗುಣಸಮ್ಮೂಢಾಃ - ಸಜ್ಜಂತೇ - ಗುಣಕರ್ಮಸು | ತಾನ್- ಅಕೃತ್ಸ್ನವಿದಃ - ಮಂದಾನ್- ಕೃತ್ಸ್ನವಿತ್ - ನ- ವಿಚಾಲಯೇತ್ || ||೨೯||

ಅ|| ಪ್ರಕೃತೇಃ- ಪ್ರಕೃತಿಯ, (ಅಥವಾ) ಶರೀರದ, ಗುಣಸಮ್ಮೂಢಾಃ-ಗುಣಗಳಿಂದ ಮೋಹಪ್ರಾಪ್ತರಾದವರೂ, ಗುಣಕರ್ಮಸು- ಗುಣಾಧೀನಗಳಾದಕರ್ಮಗಳಲ್ಲಿ, ಸಜ್ಜಂತೇ-ನಾನು ಮಾಡತಕ್ಕವನೆಂದಭಿಮಾನಿಸುತ್ತಾರೆ, ಅತಃ - ಆದುದರಿಂದ, ಅಕೃತ್ಸ್ನವಿದಃ-ಸಂಪೂರ್ಣವಾಗಿ ತಿಳಿದವರಲ್ಲದ, ತಾನ್ಮಂದಾನ್ - ಆ ಮಂದಮತಿಗಳನ್ನು, ಕೃತ್ಸ್ನವಿತ್-ಸಂಪೂರ್ಣವಾಗಿ ಆತ್ಮಸ್ವರೂಪವನ್ನರಿತವನು, ನವಿಚಾಲಯೇತ್- ಚಲಿಸುವಂತೇ ಮಾಡಕೂಡದು. ... .. ... ||೨೯||

(ರಾ|| ಭಾ||) ಸಕಲವೂ ತಿಳಿಯದೆ ಸ್ವಲ್ಪವಾಗಿ ತಿಳಿದುಕೊಂಡು ಆತ್ಮದರ್ಶನಕ್ಕಾಗಿ ಪ್ರಯತ್ನಿಸುವಂತವರು ಪ್ರಕೃತಿಯೊಡನೆ ಸೇರಿರುವ್ರದರಿಂದ ಆ ಪ್ರಕೃತಿಗುಣದಿಂದ ಆತ್ಮಸ್ವರೂಪದ ಯಥಾರ್ಥ್ಯವನ್ನರಿಯದೇ ಮೂಢರಾಗಿ ಈ ಗುಣಕ್ರಿಯೆಗಳಲ್ಲಿ ಸಕ್ತರಾಗುತಾರೆ.ಅದಕ್ಕಿಂತಲೂ ಅನ್ಯವಾಗಿರುವ ಆತ್ಮಸ್ವರೂಪವನ್ನು ಸ್ವಲ್ಪವೂ ನೆನಸಲಾರರು. ಆದುದರಿಂದಿವರು ಜ್ಞಾನಯೋಗಕ್ಕೆತಕ್ಕವರಲ್ಲವ್ರು. ಕರ್ಮಯೋಗದಲ್ಲಿಯೇ ಇವರುಗಳಿಗಧಿಕಾರವಿರುವ್ರದು. ಈ ಪ್ರಕಾರವಾಗಿ ಚೆನ್ನಾಗಿ ತಿಳಿದುಕೊಳ್ಳದ ಈ ಮೂಢರುಗಳನ್ನು, ಚನ್ನಾಗಿ ತಿಳಿದವನು ತನ್ನ ಜ್ಞಾನಯೋಗಸ್ಥಿತಿಯಂ ಪ್ರದರ್ಶನಮಾಡಿ ಮೋಹಪಡಿಸಬಾರದು, ಏತಕ್ಕೆಂದರೆ ! ಇವರು ಮಂದಬುದ್ಧಿಯುಳ್ಳವರಾಗಿ ಶ್ರೇಷ್ಠಜನಗಳ ಆಚಾರಾನುವರ್ತಿಗಳಾಗಿರುವ್ರದರಿಂದಲೇ ಶ್ರೇಷ್ಠನಾದ ಇವನಂತೆಯೇ ತಾವ್ರುಗಳು ಕರ್ಮವನ್ನು ಬಿಡುವರು. ಆದುದರಿಂದ ಈ ಶ್ರೇಷ್ಠನಾದವನುಕೂಡ ತಾನು ಕರ್ಮಯೋಗದಲ್ಲಿರುತ ಆತ್ಮಸ್ವರೂಪದ ಯಥಾರ್ಥ್ಯಜ್ಞಾನದಿಂದ ಆತ್ಮನಿಗೆ ಕರ್ತೃತ್ವಾದಿಗಳಿಲ್ಲವೆಂಬ ಅನುಸಂಧಾನದೊಡನೆ ಕರ್ಮಯೋಗವೇ ಆತ್ಮದರ್ಶನದಲ್ಲಿ ನಿರಪೇಕ್ಷಸಾಧನವೆಂಬದಾಗಿ ತೋ

ರಿಸಿ ಸಕಲನನ್ನರಿಯದ ಆ ಮಂದಮತಿಗಳಿಗೆ ಕರ್ಮದಲ್ಲಿ ಪ್ರೀತಿಯನ್ನುಂಟುಮಾಡಬೇಕು. ಜ್ಞಾನಯೋಗಾಧಿಕಾರಿಗಳಿಗೂ ಕೂಡ ಜ್ಞಾನಯೋಗಕ್ಕಿಂತಲೂ ಕರ್ಮಯೋಗವೇ ಶ್ರೇಷ್ಠವೆಂಬದಾಗಿ ಪೂರ್ವದಲ್ಲಿ ಹೇಳಲ್ಪಟ್ಟಿತು. ಆದುದರಿಂದ ಲೋಕಸಂಗ್ರಹಾರ್ಥವಾಗಿ ಈ ಕರ್ಮಯೋಗವನ್ನೇ ಜ್ಞಾನಯೋಗಾಧಿಕಾರಿಯೂ ಮಾಡಬೇಕೆಂದು ಹೇಳತಕ್ಕದ್ದಾಗಿರುವುದು. ಇದರಿಂದ ಪ್ರಕೃತಿ ವಿಲಕ್ಷಣವಾದ ಆತ್ಮಸ್ವಭಾವನ್ನು ಚೆನ್ನಾಗಿ ತಿಳಿದವನಿಂದ ಕರ್ತೃತ್ವವನ್ನು ಗುಣಗಳಲ್ಲಾರೋಪಿಸಿ ಕರ್ಮವನ್ನನುಷ್ಠಿಸಬೇಕೆಂದು ಹೇಳಿದಂತೇ ಆಯಿತು. ಅಚೇತನಗಳಾದ ಗುಣಗಳಿಗೆ ಜ್ಞಾನಚಿಕೀರ್ಷಾ (ಮಾಡಬೇಕೆಂಬ ಅಪೇಕ್ಷಾ) ಪ್ರಯತ್ನಗಳನ್ನು ಲಕ್ಷಣವಾಗಿವುಳ್ಳ ಕರ್ತೃತ್ವವು ಹೇಗೆ ಉಂಟಾಗುವುದೆಂಬದಾಗಿ ಸಂದೇಹಿಸಕೂಡದು. ಇಲ್ಲಿ ಅಚೇತನವಾದ ಗುಣಗಳಲ್ಲಿ ಕರ್ತೃತ್ವವನ್ನಾರೋಪಿಸುವುದೆಂದರೆ ಆತ್ಮನಿಗೆ ಸ್ವಭಾವದಿಂದ ಕರ್ತೃತ್ವವಿಲ್ಲದಿದ್ದರೂ ಗುಣಸಂಬಂಧದಿಂದ ಕರ್ತಾ (ನಾನು ಮಾಡತಕ್ಕವನು) ಎಂಬದಾಗಿ ತೋರುವಂತೆ ನೆನೆಸುವುದು. ||೨೯||

(ಮ|| ಭಾ||) ಇಂದ್ರಿಯಗಳು, ಶಬ್ದಾದಿ ವಿಷಯಗಳು, ಅಪ್ರಧಾನಗಳ್ಯಾವವೋ ಅವುಗಳು, ಇವುಗಳಿಗೆಲ್ಲವೂ ಗುಣಗಳೆಂಬ ಅಭಿಧಾನವುಂಟೆಂಬದಾಗಿ "ಶಬ್ದಾದ್ಯಾಇಂದ್ರಿಯಾದ್ಯಾಶ್ಚ ಸತ್ವಾದ್ಯಾಶ್ಚ ಶುಭಾನಿಚ | ಅಪ್ರಧಾನಿಚಗುಣಾ ನಿಗದ್ಯಂತೇ ನಿರುಕ್ತಿಗೈಃ" ಎಂಬ ಪ್ರಮಾಣದಲ್ಲಿ ಹೇಳಿರುವುದು. ||೨೯||

ಮೂ|| ಮಯಿಸರ್ವಾಣಿ ಕರ್ಮಾಣಿ ಸನ್ನ್ಯಸ್ಯಾಧ್ಯಾತ್ಮ
ಚೇತಸಾ | ನಿರಾಶೀರ್ನಿರ್ಮಮೋಭೂತ್ವಾ ಯುಧ್ಯಸ್ವವಿಗ
ತಜ್ವರಃ || ||೩೦||

ಪ|| ಮಯಿ– ಸರ್ವಾಣಿ – ಕರ್ಮಾಣಿ– ಸನ್ನ್ಯಸ್ಯ – ಅಧ್ಯಾತ್ಮಚೇತಸಾ | ನಿರಾಶೀಃ– ನಿರ್ಮಮಃ – ಭೂತ್ವಾ – ಯುಧ್ಯಸ್ವ– ವಿಗತಜ್ವರಃ || ||೩೦||

ಅ|| ಸರ್ವಾಣಿ ಕರ್ಮಾಣಿ – ಸಮಸ್ತ ಕರ್ಮಗಳನ್ನು, ಮಯಿ – ಪರಮಾತ್ಮನಾದ ನನ್ನಲ್ಲಿ, ಸನ್ನ್ಯಸ್ಯ – ಸಮರ್ಪಿಸಿ, ( ಗೀ|| ವಿ ) ಪರಮಾತ್ಮನೇ ನನ್ನ ಹೃದಯಸ್ಥಾನದಲ್ಲಿದ್ದು ಮಾಡುತ್ತಾನೆಂಬದಾಗಿ ನೆನೆಸಿಕೊಂಡು ಮಾಡಿ ಪರಮಾತ್ಮನಿಗರ್ಪಿಸಿ ) ಅಧ್ಯಾತ್ಮಚೇತಸಾ – ಆತ್ಮಗತವಾಗಿಯೇ ಇರುವ ಮನಸ್ಸಿನಿಂದ, ( ಮ|| ಗೀ|| ವಿ|| ) ಶ್ರೀಕೃಷ್ಣನು

ಸರ್ವೋತ್ತಮನಾದ ಪರಮಾತ್ಮನೆಂಬ ಬುದ್ಧಿಯಿಂದ,) ನಿರಾಶೀಃ- ನನ್ನದೆಂಬ ಅಭಿಮಾ ನವಂಬಿಟ್ಟವನಾಗಿಯೂ, ವಿಗತಜ್ವರಃ - ನನ್ನಬಂಧುಜನಗಳನ್ನು ನಾನು ಹೇಗೆ ಕೊಲ್ಲ ಬಹುದೆಂಬ ವ್ಯಸನವನ್ನು ಬಿಟ್ಟವನಾಗಿಯೂ, ಭೂತ್ವಾ - ಆಗಿ, ಯುಧ್ಯಸ್ವ - ಯು ದ್ಧವನ್ನು ಮಾಡು. ||೩೦||

(ರಾ|| ಭಾ||) ಈಗ ಆತ್ಮಗಳು ಪರಮಪುರುಷನಿಗೆ ಶರೀರವಾಗಿರು ವುದರಿಂದ ಅವನಿಗೆ ಶೇಷಭೂತರಾಗಿರುವುದಂ ನೆನೆಸಿ, ಗುಣಪ್ರಾಪ್ತ ವಾದ ಕರ್ತೃತ್ವವನ್ನು ಸರ್ವಾತ್ಮಭೂತನಾದ ಪರಮಪುರುಷನಲ್ಲರ್ಪಿಸಿ ಕರ್ಮಗಳು ಮಾಡತಕ್ಕದ್ದೆಂದು ಹೇಳಲ್ಪಡುವುದು. ಎಲೈ ಅರ್ಜುನನೆ! ಆತ್ಮಸ್ವರೂಪವನ್ನು ತತ್ವವಾಗಿ ತಿಳಿದು ಸಕಲ ಕರ್ಮಗಳನ್ನು ಸರ್ವೇ ಶ್ವರನಾಗಿಯೂ ಸರ್ವಭೂತಗಳಿಗೂ ಅನ್ತರಾತ್ಮನಾಗಿಯೂ ಇರುವ ನನ್ನಲ್ಲಿ ಸಮರ್ಪಿಸಿ ಫಲಾಸಕ್ತನಾಗದೇ ನನ್ನದೆಂಬುವ ಅಭಿಮಾನಶೂ ನ್ಯನಾಗಿ ವ್ಯಾಕುಲ ವಿಲ್ಲದೆಯುದ್ಧಾದಿಯಾದ ಶಾಸ್ತ್ರಚೋದಿತವಾಗಿರುವ ಕರ್ಮಗಳನ್ನು ಮಾಡು. ಆತ್ಮನಲ್ಲಿರುವ ಯಾವ ಮನಸ್ಸುಂಟೊ ಅದು ಅಧ್ಯಾತ್ಮಚೇತಸ್ಸು. ಅನೇಕ ಶ್ರುತಿಸಿದ್ಧಗಳಾದ ಆತ್ಮಸ್ವರೂಪ ವಿಷ ಯವಾದ ಜ್ಞಾನವಿಂದೆಂದರ್ಥವು. " ಈ ಆತ್ಮವು ಸರ್ವೇಶ್ವರನಾದ ಪ ರಮಪುರುಷನಿಗೆ ಶರೀರವಾಗಿಯೂ,ಭಗವದಾಜ್ಞಾಪ್ತವಾದ ಕಾರ್ಯಗಳಂ ಮಾಡುವಂತೆ ಆ ಪರಮಾತ್ಮನಿಗೇ ಸ್ವಾಧೀನವಾಗಿರುವುದರಿಂದಸಕಲ ಕ ರ್ಮಗಳು ಸರ್ವಭೂತಾಂತರಾತ್ಮನಾದ ಅವನಿಂದ ಮಾಡಿಸಲ್ಪಡುವುದು" ಎಂಬ ಅರ್ಥವು ಶ್ರುತಿಗಳಲ್ಲಿಯೂ, ಮತ್ತು " ಪ್ರಶಾಸಿತಾರಂ ಸರ್ವೇ ಷಾಂ "ಇತ್ಯಾದಿ ಸ್ಮೃತಿಗಳಲ್ಲಿಯೂಹೇಳಲ್ಪಡುವುದಲ್ಲದೆ ಆಶ್ರುತಿಸ್ಮೃತಿ ಗಳು ಪರಮಾತ್ಮನನ್ನು ಪ್ರವರ್ತಯಿತಾ,ಎಂಬದಾಗಿಯೂ,(ಒಂದು ಕ ರ್ಮದಲ್ಲಿ ಪ್ರವೃತ್ತಿಸುವಂತೆ ಮಾಡತಕ್ಕವನೆಂಬದಾಗಿಯೂ,ಅವನ ಶರೀರ ಭೂತನಾದ ಜೀವಾತ್ಮನನ್ನು ಪರಮಪುರುಷನಿಂದ ಪ್ರವರ್ತ್ಯನೆಂಬದಾ ಗಿಯೂ, ಹೇಳುವುವು. ಈ ಭಗವದ್ಗೀತೆಯಲ್ಲಿಯೂ ಮುಂದೆ " ಸರ್ವ ಸ್ಯಚಾಹಂಹೃದಿಸನ್ನಿವಿಷ್ಟೋ ಮತ್ತಸ್ಸ್ಮೃತಿಜ್ಞಾನ ಮಪೋಹನಂಚ|| ಈಶ್ವರಸ್ಸರ್ವಭೂತಾನಾಂಹೃದ್ದೇಶೇರ್ಜುನತಿಷ್ಠತಿ | ಭ್ರಾಮಯನ್ಸ ರ್ವಭೂತಾನಿ ಯಂತ್ರಾರೂಢಾನಿಮಾಯಯಾ " ಎಂಬದಾಗಿ ಈ ಅರ್ಥ ವುಹೇಳಲ್ಪಡುವುದು. ಈಅರ್ಥವನ್ನನುಸಂಧಾನಮಾಡಿ ಆ ಕರ್ಮಗಳು

ಪರಮಪುರುಷನಾದ ನನ್ನ ಆರಾಧನರೂಪವಾಗಿರುವುದರಿಂದ, ಅವುಗಳ ಫಲದಲ್ಲಪೇಕ್ಷೆಯನ್ನು ಮತ್ತು ನನ್ನದೆಂಬುವ ಅಭಿಮಾನವನ್ನು ತ್ಯಜಿಸಿ ಮನಸ್ಸಂತಾಪವಿಲ್ಲದೇ ಧಾರಾಳವಾಗಿ ಯುದ್ಧವೇ ಮೊದಲಾದ ಕರ್ಮಗಳನ್ನು ಮಾಡು. "ಸ್ವಕೀಯೇನಾತ್ಮನಾಕರ್ತ್ರಾ ಸ್ವಕೀಯೈಶ್ಚೋಪಕರಣೈಸ್ಸ್ವಾರಾಧನೈಕಪ್ರಯೋಜನಾಯ ಪರಮಪುರುಷಸ್ಸರ್ವೇಶ್ವರಸ್ಸರ್ವಶೇಷೀಸ್ವಯಮೇವ ಕರ್ಮಾಣಿಕಾರಯತಿ" =ಸರ್ವೇಶ್ವರನು ತನ್ನ ಆರಾಧನಾರ್ಥವಾಗಿ ತನಗೆ ಶೇಷಭೂತಗಳಾದ ಆತ್ಮಗಳಂ ಪರಿಗ್ರಹಿಸಿ ತನ್ನ ಉಪಕರಣಗಳಿಂದ ತನ್ನ ಕರ್ಮಗಳನ್ನು ಮಾಡಿಸಿಕೊಳ್ಳುತ್ತಾನೆ, ಎಂಬದಾಗಿ ಫಲಸಂಗತ್ಯಾಗ ಕರ್ತೃತ್ವತ್ಯಾಗ ಮಮತಾತ್ಯಾಗಾದಿಗಳೆಂಬ ಸಾತ್ವಿಕ ತ್ಯಾಗಪ್ರಕಾರವನ್ನನುಸಂಧಾನಮಾಡಿ ಕರ್ಮಗಳಲ್ಲಿ ನನ್ನದೆಂಬ ಬುದ್ಧಿಯನ್ನು ಬಿಟ್ಟು ಅನಾದಿಕಾಲದಿಂದ ನಮ್ಮನ್ನನುಸರಿಸಿ ಬರುವ ಪ್ರಾಚೀನ ಪಾಪಗಳಿಗೆ ನಾವೇನುಮಾಡುವೆವು? ಎಂಬ ಭಯವನ್ನೂ ಬಿಟ್ಟು ಸರ್ವಕರ್ಮಗಳಿಂದಲೂ ಆರಾಧಿಸಲ್ಪಡುವಂತಾಪರಮಾತ್ಮನೇನನ್ನನ್ನು ಸಂಸಾರದಿಂದ ಬಿಡಿಸುವನೆಂಬ ದೃಢಜ್ಞಾನದೊಡನೆ ಸುಖವಾಗಿ ಕರ್ಮಯೋಗವನ್ನೇ ಮಾಡೆಂದು ತಾತ್ಪರ್ಯವು. ಪರಮಪುರುಷನಿಗೆ ಸರ್ವೇಶ್ವರತ್ವವು ಮತ್ತು ಸರ್ವಶೇಷಿತ್ವವು ಅನೇಕ ಶ್ರುತಿಸಿದ್ಧಗಳಾಗಿರುವುವು. ||೩೦||

ಮೂ|| ಯೇಮೇಮತ ಮಿದಂ ನಿತ್ಯ ಮನುತಿಷ್ಠಂತಿ
ಮಾನವಾಃ | ಶ್ರದ್ಧಾವಂತೋಽನಸೂಯಂತೋ ಮುಚ್ಯಂ
ತೇತೇಪಿಕರ್ಮಭಿಃ || ||೩೧||

ಪ|| ಯೇ - ಮೇ - ಮತಂ - ಇದಂ - ನಿತ್ಯಂ - ಅನುತಿಷ್ಠಂತಿ - ಮಾನವಾಃ| ಶ್ರದ್ಧಾವಂತಃ - ಅನಸೂಯಂತಃ - ಮುಚ್ಯಂತೇ - ತೇ - ಅಪಿ - ಕರ್ಮಭಿಃ || ||೩೧||

ಅ|| ಯೇಮಾನವಾಃ - ಯಾವ ಮನುಷ್ಯರು, ಶ್ರದ್ಧಾವಂತಃ - ನನ್ನವಾಕ್ಯಗಳಲ್ಲಿ ವಿಶ್ವಾಸವುಳ್ಳವರಾಗಿಯೂ, ಅನಸೂಯಂತಃ - ನನ್ನಲ್ಲಿ ದ್ವೇಷವಿಲ್ಲದವರಾಗಿಯೂ,ಮೇ-ನನ್ನ, ಇದಂಮತಂ - ಈ ಅಭಿಪ್ರಾಯವನ್ನು, (ಅಥವಾ) ನನ್ನ ಸಿದ್ಧಾಂತವನ್ನು, ನಿತ್ಯಂ-ಯಾವಾಗಲೂ, ಅನುತಿಷ್ಠಂತಿ- ಅನುಸರಿಸಿ ನಡೆಯುತ್ತಾರೊ, ತೇಪಿ - ಅವರುಗಳುಕೂಡ, ಕರ್ಮಭಿಃ - ಪುಣ್ಯಪಾಪಾತ್ಮಕಗಳಾದ ಕರ್ಮಗಳಿಂದ, ಮುಚ್ಯಂತೆ - ಬಿಡಲ್ಪಡುತ್ತಾರೆ ||

(ರಾ|| ಭಾ||) ಈ ಅರ್ಥವೇ ಸಾಕ್ಷಾದುಪನಿಷತ್ಸಾರಭೂತವೆನ್ನುತ್ತಾನೆ. ಶಾಸ್ತ್ರಾರ್ಥಗಳನ್ನನುಷ್ಠಿಸತಕ್ಕವರಲ್ಲಿ ಯಾರಾದರೆ, ಇದು ತಾನೆ ಶಾಸ್ತ್ರಾರ್ಥವೆಂಬುವುದೇ ನನ್ನ ಅಭಿಪ್ರಾಯವೆಂಬದಾಗಿ ನಿಶ್ಚಯಿಸಿಕೊಂಡು ಆ ಪ್ರಕಾರವಾಗಿ ಅನುಷ್ಠಿಸುತ್ತಾರೊ, ಯಾರಾದರೆ ಇಂತಹ ಶಾಸ್ತ್ರಾರ್ಥಗಳನ್ನನುಷ್ಠಿಸದಿದ್ದರೂ ಇದರಲ್ಲಿ ಶ್ರದ್ಧಾಯುಕ್ತರಾಗಿರುವುರೊ, ಯಾರಾದರೆ ತಮ್ಮಗಳಿಗೆ ಶ್ರದ್ಧೆಯಿಲ್ಲದಿದ್ದರೂ ಇದು ಶಾಸ್ತ್ರಾರ್ಥವಾಗುವುದಿಲ್ಲವೆಂಬದಾಗಿ ಹೇಳತಕ್ಕ ಅಸೂಯಾಗ್ರಸ್ತರಾಗುವುದಿಲ್ಲವೋ ಅಂದರೆ ಮಹಾಗುಣವುಳ್ಳ ಶಾಸ್ತ್ರಾರ್ಥದಲ್ಲಿ ಯಾರಾದರೇ ಗುಣದೋಷಾವಿಷ್ಕಾರವನ್ನು ಮಾಡುವುದಿಲ್ಲವೋ, ಅವರೆಲ್ಲರೂ ಅನಾದಿಕಾಲದಿಂದ ಬಂದಿರುವ ಬಂಧಕಾರಣವಾದ ಸಮಸ್ತ ಕರ್ಮಗಳಿಂದಲೂ ಬಿಡಲ್ಪಡುತ್ತಾರೆ. “ ತೇಽಪಿಕರ್ಮಭಿರ್ಮುಚ್ಯಂತೆ ” ಎಂಬುವ ಸ್ಥಾನದಲ್ಲಿರುವ ಅಪಿಶಬ್ದದಿಂದ ಕೇವಲವಾಗಿ ಶಾಸ್ತ್ರಾರ್ಥಗಳನ್ನನುಷ್ಠಿಸುವವರಿಗೆ ಮಾತ್ರವೆ ಕರ್ಮವಿಮೋಚನ ಬರಾದಿರದು. ಹಾಗೆ ಅನುಷ್ಠಿಸದಿದ್ದರೂ ಈ ಶಾಸ್ತ್ರಾರ್ಥದಲ್ಲಿ ಶ್ರದ್ಧಾಯುಕ್ತರಾಗಿಯೂ ಅಸೂಯಾ ರಹಿತರಾಗಿಯೂ ಇದ್ದರೆ, ಈ ಶ್ರದ್ಧಾನಸೂಯೆಗಳಿಂದ ಇವರ ಪಾಪವು ಕ್ಷೀಣವಾಗಿ ತ್ವರೆಯಲ್ಲಿಯೇ ಈ ಶಾಸ್ತ್ರಾರ್ಥವನ್ನನುಷ್ಠಿಸಿ ಕರ್ಮಬಂಧದಿಂದ ಬಿಡಲ್ಪಡುತ್ತಾರೆಂದರ್ಥವು. ||೩೧||

ಮೂ || ಯೇತ್ವೇತದಭ್ಯಸೂಯಂತೋ ನಾನುತಿಷ್ಠಂತಿ ಮೇಮತಂ | ಸರ್ವಜ್ಞಾನವಿಮೂಢಾಂಸ್ತಾನ್ವಿದ್ಧಿನಷ್ಟಾನಚೇತಸಃ || ... ||೩೨||

ಪ|| ಯೇ–ತು– ಏತತ್ – ಅಭ್ಯಸೂಯಂತಃ– ನ– ಅನುತಿಷ್ಠಂತಿ – ಮೇ – ಮತಂ| ಸರ್ವಜ್ಞಾನವಿಮೂಢಾನ್ – ತಾನ್– ವಿದ್ಧಿ – ನಷ್ಟಾನ್ –ಅಚೇತಸಃ || ||೩೨||

ಅ || ಯೇತು – ಯಾರಾದರೆ, ಮೇ– ನನ್ನ, ಏತನ್ಮತಂ – ಈ ಅಭಿಪ್ರಾಯವನ್ನು, ಅಭ್ಯಸೂಯನ್ತಃ – ದ್ವೇಷಿಸುವಂತವರಾಗಿ, ನಾನುತಿಷ್ಠಂತಿ – ಅನುಷ್ಠಿಸಲಾರರೊ, ಅಚೇತಸಃ – ಅವಿವೇಕಿಗಳಾಗಿಯೂ, ಸರ್ವಜ್ಞಾನವಿಮೂಢಾನ್ – ಸಕಲ ವಿಷಯವಾದ ಜ್ಞಾನವಲ್ಲಿ ವಿಮೂಢರಾಗಿಯೂ ಇರುವ, ತಾನ್ – ಅವರುಗಳನ್ನು, ನಷ್ಟಾನ್ – ಕೆಟ್ಟುಹೋದವರನ್ನಾಗಿ, ವಿದ್ಧಿ – ತಿಳದುಕೊಳ್ಳು. ||೩ ||

(ರಾ|| ಭಾ||) ಭಗವದಭಿಮತವಾಗಿರುವ, ಔಪನಿಷತ್ಪ್ರಸಿದ್ಧವಾದ

ಅರ್ಥವನ್ನನುಷ್ಠಿಸದಿರುವ ಶ್ರದ್ಧೆಯಿಲ್ಲದ ಅಸೂಯಾಳುಗಳಿಗೆ ದೋಷ ವನ್ನು ಹೇಳುತ್ತಾನೆ. ಯೇತ್ವೇತತ್ - ಸಮಸ್ತವಾದ ಆತ್ಮವಸ್ತುವು ನನಗೆ ಶರೀರವಾಗಿಯೂ, ನನ್ನನ್ನೇ ಆಧಾರವಾಗಿ ವುಳ್ಳದ್ದಾಗಿಯೂ, ನನಗೆ ಶೇಷಭೂತವೆಂಬದಾಗಿಯೂ, ನನ್ನಿಂದ ಪ್ರವರ್ತಿಸತಕ್ಕದ್ದಾಗಿಯೂ ಇರುವುದೆಂಬ ನನ್ನ ಸಿದ್ಧಾಂತವನ್ನು ತಿಳಿದು ಯಾರು ಕರ್ಮಗಳಂ ಮಾಡುವುದಿಲ್ಲವೋ, ಯಾರಾದರೆ ಶ್ರದ್ಧೆಯಿಲ್ಲದವರಾಗಿಯೂ ಅಸೂಯೂಳುಗಳಾಗಿಯೂ, ಇರುವರೋ, ಅವರನ್ನು ಸಮಸ್ತವಾದ ಜ್ಞಾನಗಳಲ್ಲಿ ವಿಶೇಷವಾಗಿ ಮೂಢರೆಂಬದಾಗಿಯೂ, ಆದುದರಿಂದಲೇ ವಿನಷ್ಟರೆಂಬ ದಾಗಿಯೂ, ಅಚೇತಸ್ಕರಾಗಿರುವರೆಂಬದಾಗಿಯೂ ತಿಳಿದುಕೊಳ್ಳು. ವಸ್ತುವಿನ ಯಥಾರ್ಥ ನಿಶ್ಚಯವನ್ನರಿಯುವುದಲ್ಲವೆ ಚೇತಃಕಾರ್ಯವು. ಅಂಥಾ ಚೇತಃಕಾರ್ಯವಿಲ್ಲದವರಾದುದರಿಂದ ಇವರನ್ನು ಅಚೇತಸ್ಕರೆಂಬದಾಗಿಯೂ ವಿಪರೀತ ಜ್ಞಾನವುಳ್ಳವರೆಂಬದಾಗಿಯೂ, ಆದುದರಿಂದಲೇ ಸರ್ವವಿಷಯದಲ್ಲಿಯೂ, ಅತ್ಯಂತ ವಿಮೂಢರಾಗಿ ಭ್ರಷ್ಟರಾಗುವರೆಂಬದಾಗಿಯೂ, ಅರಿಯಬೇಕು. ॥೩೨॥

ಮೂ॥ ಸದೃಶಂ ಚೇಷ್ಟತೇಸ್ವಸ್ಯಾಃ ಪ್ರಕೃತೇರ್ಜ್ಞಾ
ನವಾನಪಿ । ಪ್ರಕೃತಿಂ ಯಾಂತಿ ಭೂತಾನಿ ನಿಗ್ರಹಃ
ಕಿಂಕರಿಷ್ಯತಿ ॥ ... ।೩೩॥

ಪ॥ ಸದೃಶಂ - ಚೇಷ್ಟತೆ - ಸ್ವಸ್ಯಾಃ- ಪ್ರಕೃತೇಃ - ಜ್ಞಾನವಾ೯ - ಅಪಿ । ಪ್ರಕೃತಿಂ - ಯಾಂತಿ - ಭೂತಾಸಿ - ನಿಗ್ರಹಃ - ಕಿಂ- ಕರಿಷ್ಯತಿ ॥ ॥೩೩॥

ಅ ॥ ಜ್ಞಾನವಾನಪಿ - ಜ್ಞಾನಿಯಾದವನೂ, ಸ್ವಸ್ಯಾಃ - ತನ್ನದಾದ, ಪ್ರಕೃತೇಃ- (ಶಂ॥ ಗೀ॥ ವಿ=ಪೂರ್ವಕರ್ಮಸಂಸ್ಕಾರಕ್ಕೆ, (ರಾ) ಪೂರ್ವಕರ್ಮವಾಸನೆಗೆ, (ಶ್ರೀ) ಪೂರ್ವಕರ್ಮಸಂಸ್ಕಾರಕ್ಕೆ ವಶಪಟ್ಟ ಸ್ವಭಾವಕ್ಕೆ, ಸದೃಶಂ - ಅನುಗುಣವಾಗಿ, ಚೇಷ್ಟತೆ - ಪ್ರವರ್ತಿಸುತ್ತಾನೆ. ಭೂತಾನಿ - ಪ್ರಾಣಿಗಳು, ಪ್ರಕೃತಿಂ - ಪೂರ್ವಕರ್ಮವಾಸನೆಯನ್ನು, ಯಾಂತಿ - ಹೊಂದುತ್ತಾರೆ, ನಿಗ್ರಹಃ- ಶಾಸ್ತ್ರೀಯವಾದ ನಿರ್ಬಂಧವು, ಅಥವಾ - ಇಂದ್ರಿಯಜಯವು, ಕಿಂಕರಿಷ್ಯತಿ - ಯೇನುಮಾಡುವುದು. ॥೩೩॥

(ಶಂ॥ ಭಾ॥) ಎಲೈ ಶ್ರೀಕೃಷ್ಣನೆ ಲೋಕರು ಯಾವಕಾರಣದಿಂದ ನಿನ್ನ ಮತವನ್ನನುಷ್ಠಿಸದೆ ಅನ್ಯಧರ್ಮಗಳನ್ನಾಶ್ರಯಿಸುವುದಕೂ ಸ್ವಧರ್ಮವನ್ನು ತ್ಯಜಿಸುವದಕ್ಕೂ ಪ್ರಯತ್ನವುಳ್ಳವರಾಗಿ

# ತೃತೀಯಾಧ್ಯಾಯಃ.

ನಿನ್ನ ಆಜ್ಞಾತಿಕ್ರಮದೋಷದಿಂದ ಹೇಗೆತಾನೆಭಯಪಡಲಾರರು?

ಅರ್ಜುನನ ಶಂಕಾಸಮಾಧಾನಾರ್ಥವಾಗಿ ಈ ಶ್ಲೋಕವನ್ನು ಹೇಳುತ್ತಾನೆ. ಸದಸದ್ವಿವೇಕವುಳ್ಳವನಾಗಿದ್ದರೂ ತನ್ನ ಜನ್ಮಾಂತರಸಂಸ್ಕಾರಕ್ಕೆ ಎಂದರೆಪೂರ್ವಜನ್ಮದಲ್ಲಿತಾನುಮಾಡಿದ ಧರ್ಮಾಧರ್ಮಗಳವಶೆಯಿಂ ಹುಟ್ಟಿಯೂ ಈ ಜನ್ಮದಲ್ಲಿ ಫಲಪ್ರದವಾಗಲು ಅಭಿವ್ಯಕ್ತವಾಗಿಯೂ ಇರುವ ಸಂಸ್ಕಾರಕ್ಕೆ ಅನುಗುಣವಾಗಿ ಸಂಚರಿಸುತ್ತಾನೆ. ಆದುದರಿಂದ ಸಕಲವಾದ ಪ್ರಾಣಿಗಳು ತಮ್ಮ ತಮ್ಮಗಳ ಪೂರ್ವಜನ್ಮಕರ್ಮಾನುಸಾರವಾಗಿ ಸಂಚರಿಸುವರು. ಆದುದರಿಂದ ಇಂದ್ರಿಯನಿಗ್ರಹವಾದರೂ ವಿಧಿನಿಷೇಧರೂಪವಾದ ನನ್ನ ಆಜ್ಞೆಯಾದರೂ ಅವರನ್ನೇನುಮಾಡುವುದು?ಯೇನೂಮಾಡಲಾರದೆಂದರ್ಥವು. ... ||೩೩||

(ರಾ|| ಭಾ||) ಈ ಪ್ರಕಾರವಾಗಿ ಪ್ರಕೃತಿ ಸಂಸರ್ಗವುಳ್ಳವನಿಗಿರುವ ಕರ್ತೃತ್ವವು ಪ್ರಕೃತಿಗುಣ ಸಂಬಂಧದಿಂದುಂಟಾಗಿರುವುದೆಂಬದಾಗಿಯೂ, ಅದೂ ಪರಮಪುರುಷನಿಗೆ ಸ್ವಾಧೀನವಾದದ್ದೆಂಬದಾಗಿಯೂ, ಅನುಸಂಧಾನಮಾಡಿ ಕರ್ಮಯೋಗಕ್ಕೆ ತಕ್ಕವನಿಗೂ, ಜ್ಞಾನಯೋಗಕ್ಕೆ ತಕ್ಕವನಿಗೂ, ಕರ್ಮಯೋಗವೇ ಅನುಷ್ಠಿಸತಕ್ಕದ್ದಾಗಿರುವುದು. ಏತಕ್ಕೆಂದರೆ, ಕರ್ಮಯೋಗಾನುಷ್ಠಾನವು ಸುಲಭಸಾಧ್ಯವಾಗಿಯೂ ಪ್ರಮಾದ ರಹಿತವಾಗಿಯೂ, ಆತ್ಮಜ್ಞಾನವನ್ನಡಗಿಸಿಕೊಂಡಿರುವುದರಿಂದ ನಿರಪೇಕ್ಷವಾಗಿಯೂ ಇರುವುದು ಜ್ಞಾನಯೋಗವು ದುಸ್ಸಾಧವಾಗಿಯೂ ಪ್ರಮಾದ ಸಾಧ್ಯವಾಗಿಯೂ ಶರೀರ ಧಾರಣಾದಿಗಳಿಗಾಗಿ ಕರ್ಮಯೋಗಸಾಪೇಕ್ಷವಾಗಿಯೂ ಇರುವುದರಿಂದ ಕರ್ಮಯೋಗವೆ ಅನುಷ್ಠಿಸತಕ್ಕದ್ದಾಗಿರುವುದು. ಇದುವರೆಗೂ ಪ್ರಸಿದ್ಧನಾದವನಿಗೂ ಆ ಕರ್ಮಯೋಗವೇ ಅನುಷ್ಠಿಸತಕ್ಕದ್ದೆಂದು ಹೇಳಿತು. ಇನ್ನು ಮುಂದೆ ಅಧ್ಯಾಯಶೇಷದಿಂದ ಜ್ಞಾನಯೋಗಾನುಷ್ಠಾನವು ದುಷ್ಕರವಾಗಿರುವುದರಿಂದ ಪ್ರಮಾದಯುಕ್ತವಾಗಿರುವುದೆಂದು ಹೇಳಲ್ಪಡುವುದು. ಪ್ರಕೃತಿಗೆ ಹೊರಗಾಗಿರುವ ಇಂಥಾ ಆತ್ಮವಸ್ತುವನ್ನು ಯಾವಾಗಲೂ ಅನುಸಂಧಾನ ಮಾಡಬೇಕೆಂದು ಹೇಳುವ ಶಾಸ್ತ್ರಾರ್ಥಜ್ಞಾನವುಳ್ಳವನಾದರೂ ತನ್ನನ್ನನುಸುಳಿ ಬರುವ ಪ್ರಕೃತಿಯು ಪ್ರಾಚೀನ ವಾಸನಾನುಗುಣವಾಗಿ ಶಬ್ದಾದಿಪ್ರಾಕೃತ ವಿಷಯಗಳಲ್ಲಿಯೇ ಆಸಕ್ತನಾಗಿರುವನು. ಏತಕ್ಕೆಂದರೆ

ಅಜ್ಞಾನದಿಂದ ಕೂಡಿರುವ ಪ್ರಾಣಿಗಳು ಅನಾದಿಕಾಲದಿಂದ ಬಂದಿರುವ ವಾಸನೆಯನ್ನೇ ಹೊಂದುವರು. ವಾಸನಾನುಸಾರಿಗಳಾದ ಪ್ರಾಣಿಗಳನ್ನು ಶಾಸ್ತ್ರಕೃತವಾದ ನಿರ್ಬಂಧವೇನು ಮಾಡುವುದು. ॥೩೩॥

ಮೂ॥ ಇಂದ್ರಿಯಸ್ಯೇಂದ್ರಿಯಸ್ಯಾರ್ಥೇ ರಾಗದ್ವೇಷೌ ವ್ಯವಸ್ಥಿತೌ । ತಯೋರ್ನವಶಮಾಗಚ್ಛೇತ್ತೌ ಹ್ಯಸ್ಯ ಪರಿಪಂಥಿನೌ ॥ ... ॥೩೪॥

ಪ॥ ಇಂದ್ರಿಯಸ್ಯ – ಇಂದ್ರಿಯಸ್ಯ – ಅರ್ಥೇ – ರಾಗದ್ವೇಷೌ – ವ್ಯವಸ್ಥಿತೌ । ತಯೋಃ – ನ – ವಶಂ – ಆಗಚ್ಛೇತ್ – ತೌ – ಹಿ – ಅಸ್ಯ – ಪರಿಪಂಥಿನೌ ॥ ॥೩೪॥

ಅ॥ ಇಂದ್ರಿಯಸ್ಯ – ಜ್ಞಾನೇಂದ್ರಿಯದ, ಇಂದ್ರಿಯಸ್ಯ – ಕರ್ಮೇಂದ್ರಿಯದ, (ಶಂ॥ ಇಂದ್ರಿಯಸ್ಯೇಂದ್ರಿಯಸ್ಯ – ಎಲ್ಲಾ ಇಂದ್ರಿಯದ,) ಅರ್ಥೇ – ಶಬ್ದಾದಿ ವಿಷಯದಲ್ಲಿ, ರಾಗದ್ವೇಷೌ – ಕಾಮದ್ವೇಷಗಳು, ವ್ಯವಸ್ಥಿತೌ – ವ್ಯವಸ್ಥಿತವಾಗಿರುವುದು. ತಯೋಃ – ಅವುಗಳಿಗೆ, ವಶಂ – ಸ್ವಾಧೀನನಾಗುವಿಕೆಯನ್ನು, ನಾಗಚ್ಛೇತ್ – ಹೊಂದಕೂಡದು ಹೀಗೆ ತಕ್ಕಂಥದ್ದೇ, ತೌ – ಅವುಗಳು, ಅಸ್ಯ – ಮುಮುಕ್ಷುವಾದವನಿಗೆ, ಪರಿಪಂಥಿನೌ – ವಿರೋಧಿಗಳಾಗಿರುವುವು. ... ... ॥೩೪॥

(ಶಂ॥ ಭಾ) ಲೋಕದಲ್ಲಿ ತನ್ನ ಪೂರ್ವಜನ್ಮ ಸಂಸ್ಕಾರಕ್ಕೆ ಸ್ವಾಧೀನನಾಗದವನೇ ಇಲ್ಲ. ಸರ್ವಪ್ರಾಣಿಗಳೂ ಪ್ರಕೃತಿವಶ್ಯರಾಗಿರುವ ಪಕ್ಷದಲ್ಲಿ ಪ್ರೇರಿತ ಚೇಷ್ಟೆಗಳಾಗಿರುವ ಪುರುಷ ಪ್ರಯತ್ನಗಳೇ ನಡೆಯುವವಿಲ್ಲವಾದುದರಿಂದ ಶಾಸ್ತ್ರೋಕ್ತವಾದ ವಿಧಿನಿಷೇಧ ವಾಕ್ಯಗಳು ವ್ಯರ್ಥವಾಗುವುವು. ಒಂದುವೇಳೆ ಪೂರ್ವಜನ್ಮ ಸಂಸ್ಕಾರಕ್ಕೆ ಸ್ವಾಧೀನನಾಗದವನಿದ್ದ ಪಕ್ಷದಲ್ಲಿ ಅಂಥಾವನ ವಿಷಯದಲ್ಲಿ ವಿಧಿನಿಷೇಧಗಳು ಸಾರ್ಥಕಗಳಾಗಬಹುದು. ಪ್ರಕೃತಿಗೆ ಒಳಪಡದೇ ಇರುವಂತವನು ಲೋಕದಲ್ಲಿಯೂ, ಕಾಣಲಾರನಾದುದರಿಂದ ವಿಧಿ ನಿಷೇಧವ್ಯರ್ಥ್ಯವು ಪ್ರಾಪ್ತವಾಗಬಹುದೆಂಬ ಶಂಕಾಸಮಾಧಾನಾರ್ಥವಾಗಿ ಈ ಶ್ಲೋಕವನ್ನುಪದೇಶಿಸುತ್ತಾನೆ. ಲೋಕದಲ್ಲಿ ವೇದಾಂತ ಶಾಸ್ತ್ರಜ್ಞಾನವೇನು, ಸದ್ಗುರೂಪದೇಶವೇನು, ಇವುಗಳಿಲ್ಲದವನು ಯಾವನೇ ಆದರೂ ವೇದ ದೇವತಾನಿಂದೆಯನ್ನು ಮಾಡಿದ ಕಾಲದಲ್ಲಿ ಅಂಥಾ ದೂಷಣವು ಶಾಸ್ತ್ರನಿಷಿದ್ಧವಾದರೂ ಆದು ತನಗನುಕೂಲವೆಂದು

# ತೃತೀಯೋಧ್ಯಾಯಃ.

ತೋರಿದರೆ ಅದೇ ಯುಕ್ತವೆಂಬದಾಗಿ ಆ ದೂಷಣ ರೂಪವಾದ ವನ್ನು ಪರಮ ಸಂತೋಷದಿಂದ ಕೇಳುತ್ತಾನೆ. ವೇದಾಂತಾದಿ ಶ್ರವಣವು ತನಗೆ ಶಾಸ್ತ್ರವಿಹಿತವಾಗಿದ್ದರೂ ಅದರಲ್ಲಿ ಪ್ರತಿಕೂಲವೆಂಬ ಬುದ್ಧಿ ತೋರಿದರೆ ಆ ವೇದಾಂತಾರ್ಥ ಶ್ರವಣದಲ್ಲಿ ವಿಶ್ವಾಸವಿಹೀನನಾಗುತ್ತಾನೆ. ಈ ಪ್ರಕಾರವಾಗಿ ಶಾಸ್ತ್ರೀಯನಿಯಮಗಳನ್ನತಿಕ್ರಮಿಸಿ ಪೂರ್ವಸಂಸ್ಕಾರಾನುಸಾರವಾಗಿ ತನಗನುಕೂಲವೆಂದು ತೋರಿದರೆ ಶಾಸ್ತ್ರನಿಷಿದ್ಧಗಳಾಗಿದ್ದರೂ ಶಬ್ದಾದಿವಿಷಯಗಳಲ್ಲಾಸಕ್ತಿಯುಕ್ತನಾಗುವನು. ತನಗೆ ಪ್ರತಿಕೂಲವೆಂಬದಾಗಿ ತೋರಿದರೆ ಶಾಸ್ತ್ರವಿಹಿತಗಳಾಗಿದ್ದರೂ ಅವುಗಳಲ್ಲಿ ದ್ವೇಷ ಯುಕ್ತನಾಗಿಯೂ ಆಗುವನು. ಶಾಸ್ತ್ರಾರ್ಥಪ್ರವೃತ್ತಿಯುಕ್ತನು ಎಂದರೇ ಸದ್ಗುರುಸಾನ್ನಿಧ್ಯದಲ್ಲಿ ವೇದಾಂತ ಶ್ರವಣವಂ ಮಾಡಿ ತತ್ವಾರ್ಥಗಳನ್ನು ಸವಿಸಾಚೇನವಾಗಿ ತಿಳಿದವನು ತಾನು ಪ್ರಕೃತಿಗೆ ಸ್ವಾಧೀನನಾಗಿದ್ದರೂ ಜಾಗರೂಕನಾಗಿ ಪ್ರಥಮದಲ್ಲಿ ರಾಗದ್ವೇಷಗಳಿಗೆ ವಶಪಡಲಾರನಾದುದರಿಂದ ಅಂತವನು ಲೌಕಿಕ ವೈದಿಕಗಳೆಂಬ ಪುರುಷಪ್ರಯತ್ನಗಳನ್ನು ಮಾಡುತ್ತಾನಾದುದರಿಂದ ವಿಧಿನಿಷೇಧ ಬೋಧಕಗಳಾದ ಶಾಸ್ತ್ರಕ್ಕೆ ಅನರ್ಥಕ್ಯವಿಲ್ಲವೆಂಬದಾಗಿ ತಿಳಿದು ಇಷ್ಟಾನುಸಾರವಾಗಿ ಪ್ರವರ್ತಿಸುವುದಕ್ಕೆ ಕಾರಣಗಳಾದ ರಾಗದ್ವೇಷಗಳು ಮೋಕ್ಷಪ್ರತಿಬಂಧಕಗಳಾದ ಶತ್ರುಗಳಾಗಿರುವುದರಿಂದ ಅವುಗಳಿಗೆ ಸ್ವಾಧೀನನಾಗದೇ ಜಿತೇಂದ್ರಿಯನಾಗಿ ಶಾಸ್ತ್ರಾಚಾರ್ಯೋಪದಿಷ್ಟವಾದ ಸನ್ಮಾರ್ಗದಲ್ಲಿರಬೇಕೆಂದು ತಾತ್ಪರ್ಯವು. ಮತ್ತು ಪೂರ್ವಜನ್ಮಸಂಸ್ಕಾರವು ರಾಗದ್ವೇಷಗಳನ್ನು ಹೊಂದಲುಂಟುಮಾಡಿಯೇ ಸ್ವಕಾರ್ಯದಲ್ಲಿ ಆ ಪುರುಷನನ್ನು ಪ್ರವರ್ತಿಸುವಂತೆ ಮಾಡುವುದು. ಆವಾಗ ಆ ಪುರುಷನು ಸ್ವಧರ್ಮತ್ಯಾಗವನ್ನೂ ಅನ್ಯಧರ್ಮಾನುಷ್ಠಾನವನ್ನೂ ಮಾಡುತ್ತಾನೆ. ಎಂದರೇ ಅವನು ಪ್ರಕೃತಿಗೆ ಅಧೀನನಾಗಿರುವುದರಿಂದ ಶಾಸ್ತ್ರಾಚಾರ್ಯೋಪದೇಶಗಳಿಗೆ ವಶಪಡಲಾರನೆಂದರ್ಥವು. ಯಾವಾಗಲಾದರೇ ರಾಗದ್ವೇಷಗಳಿಗೆ ಶತ್ರುಗಳಾದ ವಿವೇಕ ವಿಜ್ಞಾನಗಳಿಂದ ರಾಗದ್ವೇಷಗಳನ್ನಡಗಿಸುತ್ತಾನೋ ಆವಾಗ ಶಾಸ್ತ್ರದೃಷ್ಟಿಯುಕ್ತನಾಗಿಯೇ ಆಗುತ್ತಾನಲ್ಲದೆ ಪ್ರಕೃತ್ಯಧೀನನಾಗುವುದೇ ಇಲ್ಲವು. ಆದುದರಿಂದ ರಾಗದ್ವೇಷಗಳಿಗೆ ಸ್ವಾಧೀನನಾಗಬಾ

ರದು. ಅವುಗಳು ಕಳ್ಳರಂತೆ ಶ್ರೇಯೋಮಾರ್ಗಕ್ಕೆ ವಿಘ್ನಕಾರಿಗಳಾಗುವುವು. ... ... ... ||೩೪||

( ಆ|| ಗಿ|| ) ರಾಗದ್ವೇಷಗಳು ಮಿಥ್ಯಾಜ್ಞಾನ ನಿಬಂಧನಗಳೆಂದರೇ ಮಿಥ್ಯಾಜ್ಞಾನವಿದ್ದರೆ ರಾಗದ್ವೇಷಗಳಿರುವುವೆಂತಲೂ ಅಂಥಾ ಮಿಥ್ಯಾಜ್ಞಾನಕ್ಕೆ ವಿವೇಕ ವಿಜ್ಞಾನವು ವಿರೋಧಿಯೆಂಬದಾಗಿಯೂ ಅಂಥಾರಾಗದ್ವೇಷಗಳಿಗೆ ಮೂಲಕಾರಣವಾದ ಮಿಥ್ಯಾಜ್ಞಾನ ನಿವೃತ್ತಿಯಿಂದಲೆಮೋಕ್ಷಪ್ರತಿಬಂಧಕಗಳಾದ ರಾಗದ್ವೇಷಗಳ ಧ್ವಂಸವು ಆದರಿಂದ ಮೋಕ್ಷರೂಪವಾದ ಕಾರ್ಯಸಿದ್ಧಿಯಾಗುವುದೆಂತಲೂ ತಿಳಿಯಬೇಕು. ||೩೪||

(ರಾ|| ಭಾ||) ಪ್ರಾಣಿಗಳು ಪ್ರಕೃತಿಯನ್ನನುಸರಿಸಿರುವ ಪ್ರಕಾರವನ್ನು ಹೇಳುತ್ತಾನೆ. ಕಿವಿ ಮೊದಲಾದ ಜ್ಞಾನೇಂದ್ರಿಯಕ್ಕೆ ಶಬ್ದಾದಿಗಳಲ್ಲಿಯೂ, ವಾಕ್ಕು ಮೊದಲಾದ ಕರ್ಮೇಂದ್ರಿಯಕ್ಕೆ (ಮಾತನಾಡುವ) ವಚನವೇ ಮೊದಲಾದವುಗಳಲ್ಲಿಯೂ, ಅನುಭವಿಸಬೇಕೆಂಬ ಅಪೇಕ್ಷಾರೂಪವಾದ ರಾಗವು ಪ್ರಾಚೀನ ವಾಸನಾನುಗುಣವಾಗಿ ಅವಶ್ಯಪ್ರಾಪ್ತವಾಗುವುದು. ಅಂಥಾ ಅಪೇಕ್ಷೆಯು ನೆರವೇರಲು ಯಾವದಾದರೊಂದು ವಿರೋಧವುಂಟಾಗುವ ಸಂದರ್ಭದಲ್ಲಿ, ಆ ವಿಷಯದಲ್ಲವಶ್ಯವಾಗಿ ದ್ವೇಷವುಂಟಾಗುವುದು. ಕಾಮಕ್ರೋಧಗಳೆಂಬೀ ಯೆರಡು ಜ್ಞಾನಯೋಗದಲ್ಲಿ ಪ್ರವೇಶಿಸಿ ಸಕಲೇಂದ್ರಿಯಗಳನ್ನಡಗಿಸಿಕೊಂಡಿರುವವನನ್ನು ತಾನುಸ್ವಾಧೀನಪಡಿಸಿಕೊಂಡು ಬಲಾತ್ಕಾರವಾಗಿ ತನ್ನ ವ್ಯಾಪಾರಗಳೊಡನೆ ಸೇರಿಸುವುವು. ಅನಂತರ ಇವನು ಆತ್ಮಸ್ವರೂಪಾನುಭವದಲ್ಲಿ ವಿಮುಖನಾಗಿ ನಶಿಸಿ ಹೋಗುವನು. ||೩೪||

(ರಾ|| ಭಾ||) ಪುರುಷನಿಂದ ಜಯಿಸಕೂಡದ ಶತ್ರುಗಳಾದ ಆ ಕಾಮ ಕ್ರೋಧಗಳು ಇವನ ಜ್ಞಾನಯೋಗಾಭ್ಯಾಸವನ್ನು ನಿವಾರಿಸುವುವಾದುದರಿಂದ ಜ್ಞಾನಯೋಗಾರಂಭವನ್ನು ಮಾಡಿದವನು ರಾಗದ್ವೇಷಗಳಿಗೆ ವಶಪಟ್ಟು ನಶಿಸಿ ಹೋಗಬಾರದು. ||೩೪||

(ಮ|| ಗೀ|| ವಿ||) ಸಮಸ್ತವಾದ ಭೂತಗಳು ತಮ್ಮಗಳ ಸ್ವಭಾವಾನುಗುಣವಾಗಿಯೇ ಪ್ರವರ್ತಿಸುವುವಾದರೆ ಮನೋನಿಗ್ರಹದಿಂದ ಪ್ರಯೋಜನವಿಲ್ಲವು, ಈರೀತಿಯಾಗ ಆದರೆ "ಮಯಿಸರ್ವಾಣಿಕರ್ಮಾಣಿ" (೩||೩೦||) ಎಂಬುವ ಶ್ಲೋಕದಲ್ಲಿ ಹೇಳಿರುವ ಕರ್ಮವಿಧಾನವೂ,

ಮತ್ತು "ಯೇಮೇಮತಮಿದಂನಿತ್ಯಂ" (೩॥೩೧॥) ಎಂಬುವ ಶ್ಲೋಕ ದಲ್ಲಿ ಹೇಳಿರುವ ಆ ಕರ್ಮ ಫಲೋಕ್ತಿಯೂ ವ್ಯರ್ಥವಾಗುವುದಿಲ್ಲವೋ? ಎಂಬ ಶಂಕಾಸಮಾಧಾನಕ್ಕಾಗಿ ಈ ಶ್ಲೋಕವನ್ನುಪದೇಶಿಸುತ್ತಾನೆ ಸರ್ವಜನವೂ ಪೂರ್ವಸಂಸ್ಕಾರಾನುಗುಣವಾಗಿ ಪ್ರವರ್ತಿಸುವುದರಿಂದ ತತ್ಕ್ಷಣದಲ್ಲಿ ಮನೋನಿಗ್ರಹದಿಂದ ಫಲವಿಲ್ಲದಿದ್ದರೂ ಪ್ರಯತ್ನವುಳ್ಳವನಿಗೇ ಫಲವೂ ಅವಶ್ಯವಾಗಿ ಪ್ರಾಪ್ತವಾಗಬಹುದೆಂಬ ಅರ್ಥವು "ಸಂಸ್ಕಾರೋಬಲವಾನೇವಬ್ರಹ್ಮಾದ್ಯಾ ಅಪಿ ತದ್ವಶಾಃ । ತಥಾಽಪಿಸೋನ್ಯಥಾಕರ್ತುಂ ಶಕ್ಯತೇತಿ ಪ್ರಯತ್ನತಃ "ಎಂಬಸ್ಮೃತಿಯಲ್ಲಿ ಪ್ರಸಿದ್ಧವಾಗಿರುವುದು.(ಪದಯೋಜನಾದಿಗಳು ಮೇಲೆ ಬರೆದಿರುವಂತೆಯೇ ತಿಳಿಯಬೇಕು.) ... ... ॥೩೪॥

( ಶ್ರೀ ) ಇಂದ್ರಿಯಗಳು ಲೋಕದಲ್ಲಿರುವ ವಸ್ತುಗಳನ್ನು ನೋಡುವುದು ಕೇಳುವುದೇ ಮೊದಲಾದವುಗಳಿಂದ ರಾಗದ್ವೇಷಾದಿಗಳನ್ನುಂಟುಮಾಡಿಸುವುವು ಸಂತೋಷಜನಕವಾದ ಪ್ರಿಯವಾಗಿರುವ ಒಂದು ಪದಾರ್ಥವನ್ನು ಕಣ್ಣಿಂದ್ರಿಯವು ನೋಡಿದ ತತ್ಕ್ಷಣದಲ್ಲಿ ಆ ಪದಾರ್ಥದಲ್ಲಾಶೆಯುಂಟಾಗುವುದು. ಅಪೇಕ್ಷಿತ ಪದಾರ್ಥವು ತನಗೆ ಪ್ರಾಪ್ತವಾಗದೇ ಹೋದರೆ, ಅದಕ್ಕೆ ವಿರೋಧವು ಯಾರಿಂದ ಪ್ರಾಪ್ತವಾಗುವುದೋ ಅವರಲ್ಲಿ ದ್ವೇಷವುಂಟಾಗುವುದು. ಆದುದರಿಂದಲೇ ರಾಗದ್ವೇಷಗಳು ವಿಷಯಗಳಾದ ವಸ್ತುಗಳಲ್ಲಿರುವುದೆಂದು " ಇಂದ್ರಿಯಸ್ಯೇಂದ್ರಿಯಸ್ಯಾರ್ಥೇ ರಾಗದ್ವೇಷೌವ್ಯವಸ್ಥಿತೌ " ಎಂಬದಾಗಿಹೇಳಿತು. ಜ್ಞಾನಿಯಾದವನಿಗೆ ವಿಷಯಗಳಲ್ಲಾಸಕ್ತಿಯುಂಟಾದರೆ ಅದು ರಾಗದ್ವೇಷಾದಿಗಳನ್ನುಂಟುಮಾಡಿಜ್ಞಾನದಿಂದಿವನನ್ನು ಭ್ರಷ್ಟನನ್ನಾಗಿ ಮಾಡುವುದು. ಆದುದರಿಂದಲೇ ಇಲ್ಲಿ ಇದು ಕಾಮರೂಪವಾಗಿರುವ ದುರಾಸದವಾದ ಶತ್ರುವೆಂದು ಹೇಳಲ್ಪಟ್ಟಿತು. ಶಾಸ್ತ್ರಾರ್ಥವಿಚಾರವು ಪರಮೇಶ್ವರ ಪೂಜನೆಯನ್ನುಂಟುಮಾಡುವುದು. ಅದು ರಾಗದ್ವೇಷಗಳದೆಸೆಯಿಂದಿವನನ್ನು ರಕ್ಷಿಸುವುದು. ॥೩೪॥

ಮೂ ॥ ಶ್ರೇಯಾನ್ ಸ್ವಧರ್ಮೋವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್ । ಸ್ವಧರ್ಮೇನಿಧನಂಶ್ರೇಯಃ ಪರಧರ್ಮೋಭಯಾವಹಃ । ... ॥೩೫॥

ಪ|| ಶ್ರೇಯಾನ್ - ಸ್ವಧರ್ಮಃ - ವಿಗುಣಃ - ಪರಧರ್ಮಾತ್ - ಸ್ವನುಷ್ಠಿತಾತ್ | ಸ್ವಧರ್ಮೇ - ನಿಧನಂ - ಶ್ರೇಯಃ - ಪರಧರ್ಮಃ - ಭಯಾವಹಃ || ||೩೫||

ಅ|| ಸ್ವನುಷ್ಠಿತಾತ್ - ಸಮಾಚೀನವಾಗಿ ಅನುಷ್ಠಿಸಲ್ಪಟ್ಟ, ಪರಧರ್ಮಾತ್ - ಅನ್ಯಧರ್ಮಕ್ಕಿಂತಲೂ, (ರಾ) ಜ್ಞಾನಯೋಗಕ್ಕಿಂತಲೂ, ವಿಗುಣಃ - ಗುಣಶೂನ್ಯವಾದ, ಅಂಗಹೀನತ್ವೇನಅಪೂರ್ಣವಾದ, ಸ್ವಧರ್ಮಃ - ತನ್ನ ವರ್ಣಾಶ್ರಮಧರ್ಮವು, (ರಾ) ಕರ್ಮಯೋಗವು. ಶ್ರೇಯಾನ್ - ಶ್ರೇಷ್ಠವು, (ಶ್ರೀ) ಸ್ವರ್ಗಾದಿ ಫಲಗಳನ್ನು ಕೊಡುವವು. ಸ್ವಧರ್ಮೇ - ತನಗೆ ವಿಹಿತವಾದ ಧರ್ಮದಲ್ಲಿ, ನಿಧನಂ - ಮರಣವು, ಶ್ರೇಯಃ - ಶ್ರೇಯಸ್ಕರವು, ಪರಧರ್ಮಃ - ಅನ್ಯಧರ್ಮವು, (ರಾ) ಅನ್ಯಧರ್ಮವಾದ ಜ್ಞಾನಯೋಗವು, (ಶ್ರೀ|| ವಿ||) ತನ್ನ ವರ್ಣಾಶ್ರಮಗಳಂ ಬಿಟ್ಟು ಅನ್ಯವರ್ಣಾಶ್ರಮಕ್ಕೆ ಯೋಗ್ಯವಾದ ಧರ್ಮವು, ಭಯಾವಹಃ - ನರಕಾದಿಭಯಕ್ಕೆ ಕಾರಣವಾಗುವುದು. (ರಾ||) ಅನ್ಯಧರ್ಮವಾದ ಜ್ಞಾನಯೋಗವು ಪ್ರಮಾದಗರ್ಭವಾಗಿರುವುದರಿಂದ ಭಯಂಕರವಾಗಿರುವುದು. ||೩೫||

(ಶಂ|| ಭಾ|| ) ರಾಗದ್ವೇಷಯುಕ್ತನಾದವನು ಪರಧರ್ಮದಲ್ಲಿಯೂ ಧರ್ಮತ್ವವಿರುವುದರಿಂದ ಅದುಕೂಡ ಅನುಷ್ಠಿಸತಕ್ಕದ್ದೆಂದು ಯೋಚಿಸಿದರೆ ಅದು ಯುಕ್ತವಲ್ಲವೆನ್ನುತ್ತಾನೆ. ಸ್ವಧರ್ಮತ್ಯಾಗಪೂರ್ವಕವಾದ ಅನ್ಯಧರ್ಮಾನುಷ್ಠಾನಕ್ಕೆ ನರಕಮಾತ್ರವೇ ಫಲವೆಂದು ತಾತ್ಪರ್ಯವು. ||೩೫||

(ರಾ|| ಭಾ|| ) ಪ್ರಕೃತಿ ಸಂಸಕ್ತನಾದ ಪುರುಷನು ತನಗಸಾಧ್ಯವಾದ ಜ್ಞಾನಯೋಗವನ್ನು ಕೆಲವು ಕಾಲಪರ್ಯಂತವು ಸಾಂಗವಾಗಿ ಅನುಷ್ಠಿಸುತ್ತಾ ಕಡೆಯಲ್ಲಿ ಬಿಟ್ಟುಬಿಟ್ಟು ಪ್ರಮಾದವನ್ನು ಹೊಂದುವುದಕ್ಕಿಂತಲೂ, ತನಗುಚಿತವಾಗಿಯೂ ಸುಖವಾಗಿ ಮಾಡತಕ್ಕದ್ದಾಗಿಯೂ ಇರುವ ಕರ್ಮಯೋಗವನ್ನು ವಿಗುಣವಾಗಿಯಾದರೂ ಅನುಷ್ಠಿಸಿಕೊಂಡು ಅದರಲ್ಲಿ ಒಂದುವೇಳೆ ಸಿದ್ಧಿಹೊಂದದೇಹೋದರೂ ಶ್ರೇಯಸ್ಕರವಾಗಿಯೇಆಗುವುದು. ಅದು ಹೇಗೆಂದರೆ! ಜ್ಞಾನಯೋಗಕ್ಕೆ ವಿರೋಧಿಯಾದಪಾಪರೂಪವಾದ ವಿಘ್ನ ವ್ಯಾವದೂ ಇಲ್ಲದ್ದರಿಂದ ಇನ್ನೊಂದುಜನ್ಮದಲ್ಲಾದರೂ ಇಂದ್ರಿಯವ್ಯಾಕುಲ ವಿಲ್ಲದವನಾಗಿ ಕರ್ಮ ಯೋಗಾರಂಭವಂ ಮಾಡುವುದು ಸಂಭವಿಸಬಹುದಷ್ಟೆ. ಆದುದರಿಂದ ಸ್ವಧರ್ಮವಾದ ಕರ್ಮವನ್ನು ಬಿಟ್ಟು ಅನ್ಯ ಧರ್ಮವಾದ ಜ್ಞಾನಯೋಗದಲ್ಲಿ ಪ್ರವರ್ತಿಸುವುದು ಪ್ರಮಾದ ಗರ್ಭವಾಗಿರುವುದರಿಂದ ಭಯಾವಹ ವಾಗಿರುವುದು. ... ... ||೩೫||

ಮೂ॥ ಅರ್ಜುನ ಉವಾಚ॥ ಅಥಕೇನ ಪ್ರಯುಕ್ತೋ
ಯಂಪಾಪಂಚರತಿಪೂರುಷಃ| ಅನಿಚ್ಛನ್ನಪಿವಾರ್ಷ್ಣೇ
ಯ ಬಲಾದಿವನಿಯೋಜಿತಃ ॥ ॥೩೬॥

ಪ || ಅರ್ಜುನಃ – ಉವಾಚ ‖ ಅಥ – ಕೇನ- ಪ್ರಯುಕ್ತಃ – ಅಯಂ – ಪಾಪಂ – ಚರತಿ – ಪೂರುಷಃ | ಅನಿಚ್ಛನ್ – ಅಪಿ – ವಾರ್ಷ್ಣೇಯ – ಬಲಾತ್ – ಇವ – ನಿಯೋಜಿತಃ || ... ... ||೩೬||

ಅ|| ಅರ್ಜುನನವಾಕ್ಯವು. ಹೇವಾರ್ಷ್ಣೇಯ – ಎಲೈ ವೃಷ್ಣಿಕುಲತಿಲಕನಾದ ಶ್ರೀಕೃಷ್ಣನೇ ಅಥ – ಆರೀತಿಯಾಗಿರಲು, ಅಯಂಪುರುಷಃ – ಈ ಪುರುಷನು, ಅನಿಚ್ಛನ್ನಪಿ– ಇಚ್ಛಾರಹಿತನಾಗಿದ್ದರೂ, (ರಾ||) ವಿಷಯಾನುಭವದಲ್ಲಪೇಕ್ಷಾಶೂನ್ಯನಾದರೂ, ಬಲಾತ್– ಬಲಾತ್ಕಾರವಾಗಿ, ನಿಯೋಜಿತಃಇವ – ಪ್ರೇರಿಸಲ್ಪಟ್ಟವನಂತೆ, ಕೇನ – ಯಾವದರಿಂದ, ಪ್ರಯುಕ್ತಃ – ಪ್ರೇರಿಸಲ್ಪಟ್ಟವನಾಗಿ, ಪಾಪಂ – ಪಾಪವನ್ನು, (ರಾ||) ವಿಷಯಾನುಭವರೂಪವಾದ ಪಾಪವನ್ನು, ಚರತಿ – ಆಚರಿಸುತ್ತಾನೆ. ||೩೬||

(ರಾ|| ಭಾ||) ಅವರೆ ಜ್ಞಾನಯೋಗದಲ್ಲಿ ಪ್ರವೃತ್ತನಾದ ಪುರುಷನು ತಾನು ವಿಷಯಗಳನ್ನನುಭವಿಸಬೇಕೆಂಬ ಇಚ್ಛಾರಹಿತನಾಗಿದ್ದರೂ ಯಾವದರಿಂದ ಪ್ರೇರಿತನಾಗಿ ವಿಷಯಾನುಭವರೂಪವಾದ ಪಾಪವನ್ನು ಬಲಾತ್ಕಾರವಾಗಿ ಪ್ರೇರಿತನಾದವನಂತೆ ಆಚರಿಸುವನು. ||೩೬||

(ಮ|| ಗೀ|| ವಿ||) "ತಯೋರ್ನವಶಮಾಗಚ್ಛೇತ್ ತೌಹ್ಯಸ್ಯಪರಿಪಂಥಿನೌ" ಎಂಬ ( ೩|| ೩೪|| ) ನೇ ಶ್ಲೋಕದಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ, ಗಳೆಂಬೀ ಅರಿಷಡ್ವರ್ಗಗಳು ಪಾಪಕರ್ಮ ಪ್ರವೃತ್ತಿಗೆ ಕಾರಣವೆಂದು ಹೇಳಿತು. ಅವುಗಳಲ್ಲಿ (ಅರಿಷಡ್ವರ್ಗದಲ್ಲಿ) ಪಾಪಕರ್ಮ ಪ್ರವೃತ್ತಿಗೆ ಪ್ರಬಲಕಾರಣ ಯಾವದೆಂದು ಹೇಳಿದರೇ ಮಹಾಯತ್ನದಿಂದ ಪರಿಹರಿಸಿಕೊಳ್ಳುವೆನೆಂಬದಾಗಿ ಅರ್ಜುನನು ಪ್ರಶ್ನವನ್ನು ಮಾಡುತ್ತಾನೆ. "ಅಥ" ಎಂಬುವದರಿಂದ ಅರ್ಥಾಂತರವು ಪ್ರಸಂಗಸಂಗತಿಯಿಂದ ಪ್ರಶ್ನಮಾಡಲ್ಪಟ್ಟಿತೆಂಬುವುದು ಸೂಚಿತವಾಗುವುದು. ಪಾಪವನ್ನು ಮಾಡಲಿಚ್ಛೆಯಿಲ್ಲದವನಾದರೂ ಈ ಮನುಷ್ಯನು ಬಲಾತ್ಕಾರದಿಂದ ಅನ್ಯರಿಂದ ಪ್ರೇರಿಸಲ್ಪಟ್ಟವನಂತೆ ಪಾಪಕರ್ಮವನ್ನಾಚರಿಸುವನು. ಅವನು ಕಾಮಕ್ರೋಧಾದಿಗಳ ಮಧ್ಯದಲ್ಲಿ ಯಾವದರಿಂದ ಪ್ರೇರಿತನಾಗಿ ಈ ಪ್ರಕಾರವಾಗಿ

ಮಾಡುತ್ತಾನೋ ಅದನ್ನು ಹೇಳೆಂದು ಪ್ರಶ್ನಾಭಿಪ್ರಾಯವು. (ಅಥವಾ) "ಪ್ರಕೃತೇಃ ಕ್ರಿಯಮಾಣಾನಿ" (೩॥ ೨೭॥) ಎಂಬ ಶ್ಲೋಕದಲ್ಲಿ ಪರಮಾತ್ಮನನ್ನು ಉತ್ತಮ ಪ್ರೇರಕನೆಂಬದಾಗಿಯೂ, ದೇವತೆಗಳನ್ನು ಮಧ್ಯಮ ಪ್ರೇರಕರೆಂಬದಾಗಿಯೂ ತಿಳಿದಿರುವೆನು. "ಇಂದ್ರಿಯಸ್ಯೇಂದ್ರಿಯಸ್ಯಾರ್ಥೇ" (೩॥ ೩೪॥) ಎಂಬ ಶ್ಲೋಕದಲ್ಲಿ ಅಧಮ ಪ್ರೇರಕರಾದ ಅಸುರರು ವಿವಕ್ಷಿತರಾಗಿರುವರು. ಉತ್ತಮ ಮಧ್ಯಮ ಪ್ರೇರಕರಿಗಿಂತಲೂ ಅನಂತರದಲ್ಲಿ ಯಾವ ಪ್ರಬಲ ಪ್ರೇರಕನೋ ಅವನನ್ನು ಹೇಳೆಂದು ಪ್ರಶ್ನವು. ಈ ಅರ್ಥವೆಲ್ಲವು "ಅಖಿಲಪ್ರೇರಕೋ ವಿಷ್ಣುರ್ಬ್ರಹ್ಮಾದ್ಯಾಸ್ತದನಂತರಾಃ । ಅಸುರಾ ಅಶುಭಸ್ಯೈವಕಾಮಾದೇರಭಿಮಾನಿನಃ ॥ ತತ್ರ ಕಾಮಃ ಕಾಲನೇಮಿ ಸ್ಸರ್ವಧರ್ಮಲೋಪ್ಯಭವತ್ । ಸುರಮುಖ್ಯಾಧಮಜನಂ ಕ್ರಮದಾವೃತ್ಯ ತಿಷ್ಠತಿ" ಇತ್ಯಾದಿ ಪ್ರಮಾಣಗಳಿಂದ ವ್ಯಕ್ತವಾಗುವುವು. ಆದುದರಿಂದ ಕಾಮಾದಿಗಳ ಅಭಿಮಾನದೇವತೆಗಳು ಅಸುರರು ; ಇವರಲ್ಲಿ ಯಾರಿಂದ ಪ್ರೇರಿತನಾಗಿ ಪಾಪಗಳನ್ನಾಚರಿಸುವನೆಂದಭಿಪ್ರಾಯವು. ॥೩೬॥

ಮೂ॥ ಶ್ರೀಭಗವಾನುವಾಚ॥ ಕಾಮಏಷ ಕ್ರೋಧಏಷ
ರಜೋಗುಣ ಸಮುದ್ಭವಃ । ಮಹಾಶನೋ ಮಹಾಪಾ
ಪ್ಮಾ ವಿದ್ಧ್ಯೇನಮಿಹ ವೈರಿಣಂ ॥ ॥೩೭॥

ಪ॥ ಶ್ರೀಭಗವಾನ್ – ಉವಾಚ ॥ ಕಾಮಃ – ಏಷಃ – ಕ್ರೋಧಃ – ಏಷಃ – ರಜೋಗುಣಸಮುದ್ಭವಃ । ಮಹಾಶನಃ – ಮಹಾಪಾಪ್ಮಾ – ವಿದ್ಧಿ – ಏನಂ – ಇಹ–ವೈರಿಣಂ ॥೩೭॥

ಅ॥ ಶ್ರೀಭಗವದ್ವಾಕ್ಯವು. ಏಷಃ – ನೀನು ಕೇಳಿದ ಈ ಕಾರಣವು, ರಜೋಗುಣಸಮುದ್ಭವಃ – ರಜೋಗುಣದಿಂದುಂಟಾದ, ಕಾಮಃ – ಇಚ್ಛಾವಿಶೇಷವು, ಏಷಃ – ಈ ಇಚ್ಛಾವಿಶೇಷವು, ಕ್ರೋಧಃ – ಕೋಪವಾಗಿ ಪರಿಣಮಿಸುವುದು, ಮಹಾಶನಃ – ಅನುಭವಿಸಬೇಕಾದ ಅನೇಕ ವಸ್ತುಗಳಿಗೆ ಕಾರಣವಾಗುವುದು (ರ॥ಶ್ರೀ॥) ತೃಪ್ತಿಹೊಂದದೇ ಇರುವಂಥಾದ್ದು. (ರಾ॥) ಅಧಿಕವಾದ ಆಹಾರವಂ ಸ್ವೀಕರಿಸುವಂಥಾದ್ದು. ಮಹಾಪಾಪ್ಮಾ – ಮಹಾಪಾತಕಗಳಿಗೆ ಕಾರಣವಾಗುವುದು. (ಆದುದರಿಂದ) ಏನಂ – ಈ ಆಶೆಯನ್ನು, ಇಹ – (ಶಂ) ಜನನಮರಣವೆಂಬ ಸಂಸಾರದಲ್ಲಿ, (ರಾ) ಜ್ಞಾನಯೋಗದಲ್ಲಿ, (ಗೀ॥ ವಿ॥) ಪುರುಷಾರ್ಥವಿಷಯದಲ್ಲಿ ವೈರಿಣಂ–ಶತ್ರುವನ್ನಾಗಿ, ವಿದ್ಧಿ – ತಿಳಿದುಕೊಳ್ಳು. ॥೩೭॥

(ಶಂ॥ ಭಾ॥) ಶ್ರೀಭಗವಾನುವಾಚ=ಭಗವಾನ್ "ಐಶ್ವರ್ಯಸ್ಯಸಮ

ಗ್ರಸ್ಯ ವೀರ್ಯಸ್ಯ ಯಶಸಶ್ಶ್ರಿಯಃ । ಜ್ಞಾನವೈರಾಗ್ಯಯೋಶ್ಚೈವ ಷಣ್ಣಾಂಭಗಇತೀರಣಾ ” ( ಪಾ॥ವೈರಾಗ್ಯಸ್ಯಾಥಮೋಕ್ಷಸ್ಯ - ಸಂಪೂರ್ಣ ವೈರಾಗ್ಯವು, ಸಂಪೂರ್ಣ ಮೋಕ್ಷಸ್ವರೂಪವು,) ಸಮಗ್ರಶಬ್ದವನ್ನು ಪ್ರತಿಪದದಲ್ಲಿಯೂ ಸೇರಿಸಬೇಕು. ಸಂಪೂರ್ಣವಾದ ಐಶ್ವರ್ಯವು ವೀರ್ಯವು ಕೀರ್ತಿಯು ಸಂಪತ್ತು ಜ್ಞಾನ ವೈರಾಗ್ಯವೆಂಬೀ ಆರುಗುಣಗಳು ಭಗ ವೆಂಬದಾಗಿ ಹೇಳಲ್ಪಡುವುದು. ಈ ಆರು ಗುಣಗಳು ಶ್ರೀವಾಸುದೇವನಲ್ಲಿ ನಿರಾತಂಕವಾಗಿರುವುದರಿಂದ ಅವನನ್ನು “ ಭಗವಾನ್ ” ಎಂಬದಾಗಿ ಹೇಳುವರು. ಮತ್ತು “ ಉತ್ಪತ್ತಿಂ ಪ್ರಲಯಂಚೈವ ಭೂತಾನಾಮಾಗತಿಂಗತಿಂ ।ವೇತ್ತಿವಿದ್ಯಾಮವಿದ್ಯಾಂಚಸವಾಚ್ಯೋಭಗವಾನಿತಿ ” ಭೂತಗಳ ಉತ್ಪತ್ತಿಯು, ನಾಶವು, ಹೋಗುವಿಕೆಯು, ಬರುವಿಕೆಯು, ವಿದ್ಯಾ, ಅವಿದ್ಯಾ, ಇವುಗಳ ಸ್ವರೂಪಗಳನ್ನರಿತವನು “ ಭಗವಾನ್” ಎಂಬದಾಗಿ ಹೇಳಲ್ಪಡುವನು ॥೩೭॥

(ರಾ॥ ಭಾ॥) ಶ್ರೀಕೃಷ್ಣನ ಪ್ರತ್ಯುತ್ತರವು. ಎಲೈ ಅರ್ಜುನನೆ! ಉದ್ಭವಿಸುವುದಾಗಿಯೂ ಪರಿಣಮಿಸುವವಾಗಿಯೂ ಇರುವ, ಪ್ರಕೃತಿಯೊಡನೆ ಸೇರಿರುವ ವರೆಗೂ ಪುರುಷನಾದವನು ಜ್ಞಾನಯೋಗವನ್ನಾರಂಭಿಸಿದ್ದರೇ ಆದರೇ ರಜೋಗುಣದ ಕಾರ್ಯವಾಗಿ ಪ್ರಾಚೀನವಾಸನೆಯಿಂದುಂಟಾದ ಕಾಮವೆಂಬುವ ಶತ್ರುವು ಇವನನ್ನು ಶಬ್ದಾದಿ ವಿಷಯಗಳಲ್ಲಿ ಪ್ರೇರಣಮಾಡದೆಬಿಡಲಾರದು. ಆಕಾಲದಲ್ಲವನಿಗೆಆವಿಷಯಾಪೇಕ್ಷೆಯು ಪೂರ್ಣವಾಗದೇಹೋದರೆ ಅದಕ್ಕೆ ವಿರೋಧಿಗಳೆಂಬದಾಗಿ ತೋರಿದ ಪ್ರಾಣಿಗಳಲ್ಲಿ ಆ ಕಾಮವೇ ಕ್ರೋಧವಾಗಿ ಪರಿಣಮಿಸಿ ಹಿಂಸಾದಿ ಕ್ರೂರಕಾರ್ಯಗಳನ್ನು ಮಾಡಿಸುವುದು. ಆದುದರಿಂದ ಜ್ಞಾನಯೋಗಕ್ಕೆ ಈ ಕಾಮವೇ ವಿರೋಧಿಯೆಂದರಿಯಬೇಕು. ॥೩೭॥

(ಶಂ॥ ಆ॥ ತಾ॥ ಚಂ॥ ಸಾರವು) “ ಅಕಾಮಸ್ಯಕ್ರಿಯಾಕಾಚಿದ್ದೃಶ್ಯತೇನೇಹಕರ್ಹಿಚಿತ್ । ಯದ್ಯದ್ಧಿಕುರುತೇಜಂತು ಸ್ತತ್ತತ್ಕಾಮಸ್ಯಚೇಷ್ಟಿತಂ ॥ಅ॥ ಅಪೇಕ್ಷೆಯಿಲ್ಲದವನಿಗೆಲ್ಲಿಯೂ ಮಾಡತಕ್ಕ ಕಾರ್ಯವು ಯಾವದೂ ಇಲ್ಲವು, ಮನುಷ್ಯನು ಯಾವ ಯಾವಕಾರ್ಯಗಳವನ್ನು ಮಾಡುತ್ತಾನೊ, ಅವೆಲ್ಲವು ಕಾಮದಿಂದಲೇ ಮಾಡಿಸಲ್ಪಡುವುದು ” ಎಂಬುವ ಪ್ರಮಾಣಾನುಸಾರವಾಗಿ ಸಕಲ ಕರ್ಮಗಳನ್ನು ಮಾಡುವು

ದಕ್ಕೆ ಕಾರಣವು ಸಮಸ್ತವಾದ ಅನರ್ಥಗಳಿಗೆ ಮೂಲವಾಗಿರುವ ಕಾಮವೇ ಅಲ್ಲವೆ. ಇಂಥಾ ಕಾಮವನ್ನೀ ಶ್ಲೋಕದಲ್ಲಿ "ಮಹಾಶನಃ-ಮಹಾಪಾಪ್ಮಾ" ಎಂಬೀ ಯೆರಡು ವಿಶೇಷಣಗಳಿಂದ ಪ್ರಶಂಸೆ ಮಾಡಿರುತ್ತಾರೆ. ಮಹಾಶನಃ - "ನಜಾತುಕಾಮಃ ಕಾಮನಾಮುಪಭೋಗೇನ ಶಾಮ್ಯತಿ" (ಅ) ಕಾಮಗಳನ್ನನುಭವಿಸುವುದರಿಂದೆಂದಿಗೂ ಕಾಮವು ಶಾಂತಿ ಹೊಂದುವುದಿಲ್ಲವೆಂಬ ಪ್ರಮಾಣಾನುಸಾರವಾಗಿ ಯೆಷ್ಟು ವಿಷಯಗಳನ್ನನುಭವಿಸಿದರೂ ತೃಪ್ತಿಹೊಂದದೇ ಇರುವುದರಿಂದ ಈಕಾಮವನ್ನು ಮಹಾಶನಃ- ತೃಪ್ತಿಹೊಂದದ ತಿಂಡಿಯುಳ್ಳವನೆಂದು ಹೇಳಿತು. ಮಹಾಪಾಪ್ಮಾ- ಕಾಮಾಂಧನಾದವನಿಗೆ ಭಯವಿಲ್ಲವು ಲಜ್ಜೆಯಿಲ್ಲವೆಂಬದಾಗಿ ಹೇಳುವ ಚಾಟೂಕ್ತಿಯಂತೆ ಅಕ್ಕತಂಗಿಯರು ಸುಂದರಿಗಳಾಗಿದ್ದರೆ ಅವರಲ್ಲಿಯೂ ಭೋಗಿಸಬೇಕೆಂಬ ಅಪೇಕ್ಷೆಯು ಮತ್ತು ಚಂಡಾಲಾದಿ ಅಪಾತ್ರಗಳಲ್ಲಿಯೂ ಪರಿಗ್ರಹಿಸಬೇಕೆಂಬ ಅಪೇಕ್ಷೆಯುಂಟಾಗಿ ಅವುಗಳಿಂದ ಜೀವನಿಗೆ ಮಹಾಪಾತಕಗಳು ಪ್ರಾಪ್ತವಾಗುವುದರಿಂದೀಕಾಮವನ್ನು ಮಹಾಪಾಪ್ಮಾವೆಂದು ಹೇಳಿತು. ಮತ್ತು "ಕ್ರುದ್ಧಃಪಾಪಂನಕುರ್ಯಾತ್ಕಃ ಕ್ರುದ್ಧೋಹನ್ಯಾದ್ಗುರೂನಪಿ" ಎಂಬದಾಗಿ ಶ್ರೀ ರಾಮಾಯಣದಲ್ಲಿ ಹೇಳಿರುವಂತೆ ಕೋಪವುಳ್ಳವನು ಗುರುವಧಾದಿಗಳಾದ ಯಾವ ಪಾಪಕ್ಕೂ ಅಂಜುವದಿಲ್ಲವಾದುದರಿಂದಲೂ ಇಲ್ಲಿ ಮಹಾಪಾಪ್ಮಾ ಎಂಬದಾಗಿ ಕ್ರೋಧವನ್ನೂ ಹೇಳಿದನೆಂದು-ಶ್ರೀತಾತ್ಪರ್ಯಚಂದ್ರಿಕಾ-ಶಂಕರಾನಂದೀಯಾದಿ ತಾತ್ಪರ್ಯಸಂಗ್ರಹವು ॥೩೭॥

ಮೂ॥ ಧೂಮೇನಾ ವ್ರಿಯತೇ ವಹ್ನಿರ್ಯಥಾದರ್ಶೋ
ಮಲೇನಚ । ಯಥೋಲ್ಬೇನಾವೃತೋ ಗರ್ಭಸ್ತಥಾತೇನೇ
ದಮಾವೃತಂ ॥ ... ॥೩೮॥

ಪ॥ ಧೂಮೇನ - ಆವ್ರಿಯತೆ - ವಹ್ನಿಃ - ಯಥಾ - ಆದರ್ಶಃ - ಮಲೇನ - ಚ । ಯಥಾ - ಉಲ್ಬೇನ - ಆವೃತಃ - ಗರ್ಭಃ - ತಥಾ - ತೇನ - ಇದಂ - ಆವೃತಂ ॥೩೮॥

ಅ॥ ವಹ್ನಿಃ - ಬೆಂಕಿಯು, ಧೂಮೇನ - ಹೊಗೆಯಿಂದ, ಆದರ್ಶಃ - ಕನ್ನಡಿಯು, ಮಲೇನಚ - ಮಾಲಿನ್ಯದಿಂದಲೂ, ಯಥಾ - ಯಾವರೀತಿಯಾಗಿ, ಆವ್ರಿಯತೆ - ಮುಚ್ಚಲ್ಪಡುವುದೊ, ಗರ್ಭಃ - ಗರ್ಭದಲ್ಲಿರುವ ಶಿಶುವು, ಉಲ್ಬೇನ - ಮಾಸಿಯಿಂದ,

ಯಥಾ – ಯಾವರೀತಿಯಿಂದ, ಆವೃತಃ – ಮುಚ್ಚಲ್ಪಡುವುದೊ, ತಥಾ – ಆರೀತಿಯಾಗಿಯೇ, ಇದಂ – ಈ ಜ್ಞಾನವು, (ರಾ) ಈ ಪ್ರಾಣಿವರ್ಗವು (ಗೀ-ವಿ) ಪರಮಾತ್ಮನು – ಜೀವಾತ್ಮನು, ಅನ್ತಃಕರಣವು, ತೇನ – ಆ ಆಶಾವಿಶೇಷದಿಂದ, ಆವೃತಂ – ಮುಚ್ಚಲ್ಪಟ್ಟಿರುತ್ತದೆ. ... ... ||೩೮||

(ರಾ|| ಭಾ||) ಅಗ್ನಿಯನ್ನು ಧೂಮವು ಕನ್ನಡಿಯನ್ನು ಮಾಲಿನ್ಯವೂ ಗರ್ಭವನ್ನು ಮಾಸಿಯೂ ಮುಚ್ಚಿಕೊಂಡಿರುವಂತೆ ಈ ಪ್ರಾಣಿವರ್ಗವನ್ನು ಕಾಮವೆಂಬುವದು ಮುಚ್ಚಿಕೊಂಡಿರುವುದು. ||೩೮||

(ಗೀ||ವಿ||) ಅಶುಭಪ್ರೇರಕರಾಗಿರುವಕಾಮಾದ್ಯಭಿಮಾನಿಗಳಾದ ಅಸುರರುಗಳಲ್ಲಿ ಕಾಮಾಭಿಮಾನಿಯು ಹೇಗೆ ಪ್ರಬಲನೆಂದರೇ ಹೇಳುತ್ತಾನೆ. ಅಗ್ನಿಯು ಹೇಗಾದರೆ ಹೊಗೆಯಿಂದ ಮುಚ್ಚಲ್ಪಡುವುದೊ ಆ ಪ್ರಕಾರವಾಗಿ ಕಾಮನಿಂದ ಈ ಉತ್ತಮ ಜೀವ ಸಮೂಹವು ಸ್ವಲ್ಪವಾಗಿ ಮುಚ್ಚಲ್ಪಟ್ಟಿರುವುದು. ಹೇಗಾದರೆ ಕನ್ನಡಿಯು ಮಾಲಿನ್ಯದಿಂದ ಆವೃತವಾಗಿರುವುದೊ ಆರೀತಿಯಾಗಿ ಮಧ್ಯಮಜೀವ ಸಮೂಹವು ಆ ಕಾಮನಿಂದ ಅಧಿಕವಾಗಿ ಆವೃತವಾಗಿರುವುದು. ಹೇಗಾದರೆ ಗರ್ಭವು ಅದನ್ನು ಸುತ್ತಿಕೊಂಡಿರುವ ಗರ್ಭ ಚರ್ಮದಿಂದ ಮುಚ್ಚಲ್ಪಟ್ಟಿರುವುದೊ ಆ ಪ್ರಕಾರವಾಗಿ ಅಧಮ ಜೀವಸಮೂಹವು ಆ ಕಾಮನಿಂದ ಅತ್ಯಂತವಾಗಿ ಆವೃತವಾಗಿರುವುದು. ಆದುದರಿಂದ ಈ ತ್ರಿವಿಧ ಜೀವರಿಗೂ ಅವರವರುಗಳಿಗೆ ತಕ್ಕಷ್ಟು ಪರಾವರ ತತ್ವಜ್ಞಾನಕ್ಕೆ ಪ್ರತಿಬಂಧಕನಾಗಿ ಕಾಮನಿರುವನೆಂದರ್ಥವು. (ಅಥವಾ) ಇದಂ ಎಂಬ ಪದದಿಂದ ಈಶ್ವರಾಂತಃಕರಣವು ಜೀವರೆಂಬ ಮೂರು ವಸ್ತುಗಳೂ ಗ್ರಹಿಸತಕ್ಕವುಗಳಾಗಿರುವುವು. ಬೆಂಕಿಯು ಹೊಗೆಯಿಂದ ಹೇಗಾದರೆ ಆವೃತವಾಗಿರುವುದೊ ಆ ಪ್ರಕಾರವಾಗಿ ಪರಮಾತ್ಮನು ಜೀವಗತವಾದ ಕಾಮನಿಂದ ಆವೃತನಾಗಿರುತ್ತಾನೆ. ಅಗ್ನಿಯು (ಬೆಂಕಿಯು) ಪ್ರಕಾಶರೂಪವಾಗಿದ್ದರೂ ಧೂಮ (ಹೊಗೆ) ದಿಂದ ಆವೃತವಾಗಿ ಅನ್ಯರಿಂದ ಹೇಗಾದರೆ ಕಾಣಲ್ಪಡಲಾರದೊ ಆ ಪ್ರಕಾರವೇ ಪರಮಾತ್ಮನು ಸ್ವತಸ್ಸರ್ವಜ್ಞನಾದರೂ ಕಾಮದಿಂದಾವೃತರಾಗಿರುವ ಅನ್ಯರಿಂದ ಕಾಣಲ್ಪಡಲಾರನೆಂದರ್ಥವು. ಮಾಲಿನ್ಯದಿಂದ ಕನ್ನಡಿಯು ಆವೃತವಾಗಿರುವಂತೆ ಅಂತಃಕರಣವು ಕಾಮದಿಂದಾವೃತವಾಗಿರುವುದು. ಕನ್ನಡಿಯು ಮಾಲಿನ್ಯದಿಂದಾವೃತವಾದರೆ ಮುಖಾದಿಗಳು ಹೇಗಾದರೆ ಕಾ

ಣಲಾಗುವುದಿಲ್ಲವೋ ಆ ಪ್ರಕಾರವಾಗಿ ಜೀವಾಂತಃಕರಣವು ಕಾಮಾವೃತವಾಗಿ ಈಶ್ವರನನ್ನಾದರೂ ಜೀವನನ್ನಾದರೂ ಪ್ರಕಾಶಪಡಿಸುವುದಿಲ್ಲವೆಂದರ್ಥವು. ಗರ್ಭವು ಅದನ್ನು ಮುಚ್ಚಿಕೊಂಡಿರುವ ಚರ್ಮದಿಂದಾವೃತವಾಗಿರುವಂತೆ ಕಾಮದಿಂದ ಜೀವನಾವೃತನಾಗಿರುವನು. ಗರ್ಭವನ್ನು ಸುತ್ತಿಕೊಂಡಿರುವ ಚರ್ಮದಿಂದ ಶಿಶುವು ಆವೃತವಾಗಿ ಹೇಗಾದರೆ ಇತರ ವ್ಯಾಪಾರವನ್ನು ಮಾಡಲು ಸಮರ್ಥವಾಗುವುದಿಲ್ಲವೋ ಆ ಪ್ರಕಾರವಾಗಿ ಜೀವನು ಕಾಮದಿಂದಾವೃತವಾಗಿ ಪರಮಾತ್ಮಜ್ಞಾನ ವಿಷಯದಲ್ಲಿ ಯೋಗ್ಯನಾಗಲಾರನೆಂದರ್ಥವು. ||೩೮||

ಮೂ|| ಆವೃತಂ ಜ್ಞಾನಮೇತೇನ ಜ್ಞಾನಿನೋನಿತ್ಯ
ವೈರಿಣಾ | ಕಾಮರೂಪೇಣ ಕೌಂತೇಯ ದುಷ್ಪೂರೇ
ಣಾನಲೇನಚ || ... ||೩೯||

ಪ|| ಆವೃತಂ - ಜ್ಞಾನಂ- ಏತೇನ - ಜ್ಞಾನಿನಃ - ನಿತ್ಯವೈರಿಣಾ| ಕಾಮರೂಪೇಣ- ಕೌಂತೇಯ - ದುಷ್ಪೂರೇಣ - ಅನಲೇನ - ಚ. ...

ಅ|| ಹೇಕೌಂತೇಯ - ಎಲೈ ಕುಂತೀಪುತ್ರನಾದ ಅರ್ಜುನನೆ, ದುಷ್ಪೂರೇಣ - ಪೂರಣಮಾಡಲಶಕ್ಯನಾಗಿಯೂ, ಅನಲೇನಚ - ತೃಪ್ತಿಯಿಲ್ಲದ್ದಾಗಿಯೂ, ಕಾಮರೂಪೇಣ - ಆಶಾರೂಪವಾಗಿಯೂ, (ರಾ) ಮೋಹಜನಕವಾಗಿಯೂ, ಜ್ಞಾನಿನಃ- ಜ್ಞಾನಿಯಾಗಿರುವಂತವನಿಗೆ, ನಿತ್ಯವೈರಿಣಾ - ನಿತ್ಯ ಶತ್ರುವಾಗಿಯೂ ಇರುವ, ಏತೇನ - ಈಆಶೆಯಿಂದ, ಜ್ಞಾನಂ - ಆತ್ಮಜ್ಞಾನವು, ಆವೃತಂ - ಮುಚ್ಚಲ್ಪಟ್ಟಿರುವುದು ||೩೯||

(ರಾ|| ಭಾ||) ಮುಚ್ಚಲ್ಪಡುವ ರೀತಿಯನ್ನು ಹೇಳುತ್ತಾನೆ. ಜ್ಞಾನಸ್ವಭಾವನಾದ ಈ ಪ್ರಾಣಿಯ ಆತ್ಮಜ್ಞಾನವನ್ನು ವಿಷಯ ಮೋಹವನ್ನುಂಟುಮಾಡುವ ನಿತ್ಯಶತ್ರುವಾದ ಕಾಮವು, ತನಗೆ ಹೊಂದಿಕೊಂಡ ವಸ್ತುಗಳಲ್ಲಿ ಆಶೆಯನ್ನುಂಟುಮಾಡಿ ಅವುಗಳು ಪ್ರಾಪ್ತವಾದರೂ, ಸಾಕೆಂಬ ತೃಪ್ತಿಯನ್ನುಂಟುಮಾಡದೇ ಮುಚ್ಚುವುದು. ||೩೯||

(ಗೀ || ವಿ||) ಶಾಸ್ತ್ರಜನ್ಯ ಜ್ಞಾನವುಕೂಡ ಕಾಮಾವೃತವಾದರೆ ಭಗವದಪರೋಕ್ಷಜ್ಞಾನಕ್ಕೆ ಪ್ರತಿಬಂಧಕವಾಗುವುದೆಂದು ಹೇಳಲ್ಪಡುವುದರಿಂದ ಗುರೂಪದೇಶಾದಿಮಾತ್ರದಿಂದುಂಟಾದ ಜ್ಞಾನವು ಕಾಮಾವೃತವಾದರೆ ಅಪರೋಕ್ಷಜ್ಞಾನ ವಿರೋಧಿಯಾಗುವುದೆಂಬ ವಿಷಯ

ದಲ್ಲಿ ಹೇಳಬೇಕಾದ್ದೇನೆಂದರ್ಥವು. ... ... ||೩೯||

ಮೂ|| ಇಂದ್ರಿಯಾಣಿ ಮನೋಬುದ್ಧಿ ರಸ್ಯಾಧಿಷ್ಠಾನ
ಮುಚ್ಯತೇ | ಏತೈರ್ವಿಮೋಹಯತ್ಯೇಷ ಜ್ಞಾನಮಾವೃ
ತ್ಯದೇಹಿನಂ || ... ... ||೪೦||

ಪ|| ಇಂದ್ರಿಯಾಣಿ – ಮನಃ – ಬುದ್ಧಿಃ – ಅಸ್ಯ– ಅಧಿಷ್ಠಾನಂ – ಉಚ್ಯತೆ | ಏತೈಃ– ವಿಮೋಹಯತಿ – ಏಷಃ – ಜ್ಞಾನಂ – ಆವೃತ್ಯ – ದೇಹಿನಃ ||

ಅ|| ಇಂದ್ರಿಯಾಣಿ – ಇಂದ್ರಿಯಗಳು, ಮನಃ – ಮನಸ್ಸು, ಬುದ್ಧಿಃ – ಬುದ್ಧಿಯು, ಅಸ್ಯ – ಈ ಕಾಮವೆಂಬ ಆಶೆಗೆ, ಅಧಿಷ್ಠಾನಂ – ವಾಸಸ್ಥಾನವೆಂದು, ಉಚ್ಯತೆ – ಹೇಳಲ್ಪಡುವುವು, ಏಷಃ – ಈ ಕಾಮವು, ಏತೈಃ – ಈ ಇಂದ್ರಿಯಾದಿಗಳಿಂದ, ಜ್ಞಾನಂ – ಆತ್ಮಜ್ಞಾನವನ್ನು, ಆವೃತ್ಯ – ಮರೆಮಾಡಿ, ದೇಹಿನಂ – ಪ್ರಾಣಿಯನ್ನು, ವಿಮೋಹಯತಿ– ಮೋಹಯುಕ್ತವಾಗಿ ಮಾಡುವುದು. ... ... ||೪೦||

(ರಾ|| ಭಾ||) ಈ ಕಾಮವು ಯಾವ ಸಾಮಗ್ರಿಯಿಂದ ಆತ್ಮಜ್ಞಾನವನ್ನು ಮುಚ್ಚುವುದೆಂದರೆ ! ಹೇಳುತ್ತಾನೆ -ಕಾಮಕ್ಕೆ ಇಂದ್ರಿಯವು, ಮನಸ್ಸು, ಬುದ್ಧಿ, ಇವುಗಳು ಆಶ್ರಯಸ್ಥಾನವೆಂದು ಹೇಳಲ್ಪಡುವುದು. ವಿಷಯಾಸಕ್ತಿಯುಳ್ಳದ್ದಾಗಿಯೂ, ಕಾಮಕ್ಕೆ ಆಶ್ರಯಭೂತಗಳಾಗಿಯೂ, ಇರುವ ಈ ಇಂದ್ರಿಯಮನೋಬುದ್ಧಿಗಳಿಂದ ಪ್ರಕೃತಿ ಸಂಸೃಷ್ಟನಾದ ಜ್ಞಾನಸ್ವರೂಪನಾಗಿರುವ ಈ ಜೀವಾತ್ಮನನ್ನು ಮುಚ್ಚಿ ನಾನಾಪ್ರಕಾರವಾಗಿ ಮೋಹಪಡಿಸುವುದು. ಆದರಿಂದಿವನು ಆತ್ಮಜ್ಞಾನ ವಿಮುಖನಾಗಿಯೂ, ವಿಷಯಾನುಭವದಲ್ಲಾಸಕ್ತನಾಗಿಯೂ, ಆಗುವನೆಂದರ್ಥವು. ... ||೪೦||

( ಶ್ರೀ|| ) ಕಾಮಕ್ಕೆ ಇಂದ್ರಿಯಗಳು, ಮನಸ್ಸು, ಬುದ್ಧಿ, ಇವುಗಳು ವಾಸಸ್ಥಾನ ವೆಂಬದಾಗಿ ಹೇಳಲ್ಪಡುವುದು. ಅದು ಹೇಗೆಂದರೆ | ಶಬ್ದಾದಿವಿಷಯಗಳನ್ನಿಂದ್ರಿಯಗಳು ಗ್ರಹಿಸಿ ಮನಸ್ಸಿನಲ್ಲರ್ಪಿಸುವುದು. ಮನಸ್ಸು, ತಾನು ವಿಷಯಗಳನ್ನು ಗ್ರಹಿಸಿದ ವಡನೇ ಬುದ್ಧಿಯಲ್ಲರ್ಪಿಸುವುದು. ಬುದ್ಧಿಯು ಆತ್ಮನಲ್ಲರ್ಪಿಸುವುದು. ಕಳಂಕರಹಿತನಾದ ಆತ್ಮನಲ್ಲಿ ವಿಷಯಗಳೆಂಬ ಮಾಲಿನ್ಯವನ್ನರ್ಪಿಸಿರುವುದು ಇಂದ್ರಿಯ ಮನೋಬುದ್ಧಿಗಳಾದುದರಿಂದ ಇವು ಕಾಮಕ್ಕೆ ಆಶ್ರಯಸ್ಥಾನವೆಂದು ಹೇಳಲ್ಪಡುವುದು. ಇಂತಹ ಮಾಲಿನ್ಯದಿಂದ ನಿಷ್ಕ

ಲಂಕನಾದ ಆತ್ಮವು ಮಲಿನವಾಗಿರುವುದರಿಂದ ಸ್ವಸ್ವರೂಪವು ಮುಚ್ಚಲ್ಪಟ್ಟು ಮೋಹಯುಕ್ತವಾಗಿರುವುದೆಂದರಿಯಬೇಕು ||೪೦||

ಮೂ || ತಸ್ಮಾತ್ತ್ವಮಿಂದ್ರಿಯಾಣ್ಯಾದೌ ನಿಯಮ್ಯ
ಭರತರ್ಷಭ | ಪಾಪ್ಮಾನಂ ಪ್ರಜಹಿಹ್ಯೇನಂಜ್ಞಾನವಿ
ಜ್ಞಾನನಾಶನಂ || ... ||೪೦||

ಪ|| ತಸ್ಮಾತ್ - ತ್ವಂ - ಇಂದ್ರಿಯಾಣಿ - ಆದೌ - ನಿಯಮ್ಯ - ಭರತರ್ಷಭ | ಪಾಪ್ಮಾನಂ - ಪ್ರಜಹಿ - ಏನಂ - ಜ್ಞಾನವಿಜ್ಞಾನನಾಶನಂ || ||೪೧||

ಅ|| ಹೇಭರತರ್ಷಭ - ಎಲೈ ಭಾರತಶ್ರೇಷ್ಠನಾದ ಅರ್ಜುನನೇ ತಸ್ಮಾತ್ - ಆದುದರಿಂದ, ತ್ವಂ - ನೀನು, ಆದೌ-ಮೊದಲಿನಲ್ಲಿ, (ರಾ) ಮೋಕ್ಷೋಪಾಯವಾದ ಜ್ಞಾನಕ್ಕೆ ಹೇತುಭೂತವಾದ ಕರ್ಮಯೋಗಾರಂಭ ಸಮಯದಲ್ಲಿ ಇಂದ್ರಿಯಾಣಿ - ಇಂದ್ರಿಯಗಳನ್ನು, ನಿಯಮ್ಯ - ನಿಗ್ರಹಿಸಿ, ಜ್ಞಾನವಿಜ್ಞಾನನಾಶನಂ - (ಶಂ) ಶಾಸ್ತ್ರದಿಂದಲೂ ಆಚಾರ್ಯೋಪದೇಶದಿಂದಲೂ ತಿಳಿದುಕೊಳ್ಳುವ (ಪರೋಕ್ಷಜ್ಞಾನವೆಂಬ) ಆತ್ಮಜ್ಞಾನವೇನು, ಅನುಭವಸನ್ಯವಾದ ಅಪರೋಕ್ಷಜ್ಞಾನವೇನು, ಇವುಗಳಿಗೆ ನಾಶಕವಾಗಿಯೂ, (ರಾ) ಆತ್ಮಸ್ವರೂಪಜ್ಞಾನವೇನು, ಆತ್ಮಸ್ವರೂಪ ವಿವೇಕ ವಿಷಯವಾದ ವಿಜ್ಞಾನವೇನು, ಇವುಗಳಿಗೆ ನಾಶಕವಾಗಿಯೂ ಇರುವ, ಪಾಪ್ಮಾನಂ - ಪಾಪಕಾರಣವಾದ, ಏನಂ - ಈ ಕಾಮವನ್ನು, ಪ್ರಜಹಿ - ನಾಶಪಡಿಸುವಂತವನಾಗು. ... ||೪೧||

(ರಾ|| ಭಾ||) ಇಂದ್ರಿಯ ವ್ಯಾಪಾರಗಳೆಲ್ಲವನ್ನು ಬಿಟ್ಟು ಮಾಡತಕ್ಕದ್ದಾಗಿರುವ ಜ್ಞಾನಯೋಗದಲ್ಲಿ ಪ್ರವರ್ತಿಸಿರುವಂತವನಿಗೆ ಈ ಕಾಮವೆಂಬ ಶತ್ರುವು ವಿಷಯದಲ್ಲಿರುವ ಆಸಕ್ತಿಯಿಂದ ಆತ್ಮಜ್ಞಾನವನ್ನು ವಿರೋಧಿಸುವುದು. ಆದುದರಿಂದ ಪ್ರಕೃತಿಯೊಡನೇ ಸೇರಿ ಇಂದ್ರಿಯ ವ್ಯಾಪಾರಗಳಲ್ಲಾಸಕ್ತನಾದ ನೀನು ಮೋಕ್ಷೋಪಾಯವನ್ನು ಹುಡುಕುವ ಸಮಯದಲ್ಲಿಯೇ ಇಂದ್ರಿಯವ್ಯಾಪಾರ ರೂಪವಾದ ಕರ್ಮದಲ್ಲಿ ಪ್ರವೇಶಿಸಿ ಆತ್ಮಸ್ವರೂಪ ಜ್ಞಾನವನ್ನು ಅದರವಿವೇಕವನ್ನು ಹೋಗಲಾಡಿಸುವ ಪಾಪಿಷ್ಠನಾದ ಕಾಮರೂಪನಾಗಿರುವ ಶತ್ರುವನ್ನು ನಾಶಪಡಿಸುವಂತವನಾಗು. ... ... ||೪೧||

ಮೂ|| ಇಂದ್ರಿಯಾಣಿಪರಾಣ್ಯಾಹು ರಿಂದ್ರಿಯೇಭ್ಯಃ
ಪರಂಮನಃ| ಮನಸಸ್ತುಪರಾಬುದ್ಧಿರ್ಯೋಬುದ್ಧೇಃಪರ
ತಸ್ತುಸಃ | ... ||೪೨||

ಪ|| ಇಂದ್ರಿಯಾಣಿ – ಪರಾಣಿ – ಆಹುಃ – ಇಂದ್ರಿಯೇಭ್ಯಃ – ಪರಂ – ಮನಃ | ಮನಸಃ – ತು-ಪರಾ – ಬುದ್ಧಿಃ – ಯಃ – ಬುದ್ಧೇಃ – ಪರತಃ – ತು – ಸಃ ||

ಅ|| ಇಂದ್ರಿಯಾಣಿ – ಇಂದ್ರಿಯಗಳನ್ನು, ಪರಾಣಿ – ಪ್ರಧಾನಗಳನ್ನಾಗಿ, ಆಹುಃ-ಹೇಳುವರು, ಇಂದ್ರಿಯೇಭ್ಯಃ – ಇಂದ್ರಿಯಗಳಿಗಿಂತಲೂ, ಮನಃ – ಮನಸ್ಸನ್ನು, ಪರಂ-ಪ್ರಧಾನವೆನ್ನುವರು, ಮನಸಃ – ಮನಸ್ಸಿಗಿಂತಲೂ, ಬುದ್ಧಿಃ – ಅಧ್ಯವಸಾಯವೆಂಬ ಬುದ್ಧಿಯು, ಪರಾ – ಪ್ರಧಾನವು, ಯಃ – ಯಾವದು, ಬುದ್ಧೇರಪಿ – ಬುದ್ಧಿಗಿಂತಲೂ, ಪರತಸ್ತು – ಪ್ರಧಾನವಾಗಿರುವುದೆಂದರೆ, ಸಃ – (ಶಂ|| ಗೀ|| ವಿ||) ಆ ಪರಮಾತ್ಮನು,(ರಾ) ಆ ಕಾಮವು, (ಶ್ರೀ) ಬುದ್ಧಿಗೆ ಸಾಕ್ಷಿಭೂತನಾಗಿಯೂ, ಸರ್ವಾಂತರ್ಯಾಮಿಯಾಗಿಯೂ, ಇರುವ ದೇಹಿಯಾದ ಆತ್ಮನು. ... ... ||೪೨||

(ಶಂ|| ಭಾ||) ಇಂದ್ರಿಯಗಳನ್ನು ಮೊದಲು ನಿಗ್ರಹಿಸಿ ಶತ್ರುವಾದ ಕಾಮವನ್ನು ಜಯಿಸೆಂದು ಹೇಳಿರುತ್ತಿಯಷ್ಟೆ, ಯಾವದನ್ನಾಶ್ರಯಿಸಿ ಕಾಮವನ್ನು ಜಯಿಸಬೇಕೆಂದರೆ ಅದಕ್ಕುತ್ತರವನ್ನಿ[illegible]ನಿಂದ ಹೇಳುತ್ತಾನೆ. ಐದು ಕರ್ಮೇಂದ್ರಿಯಗಳು ಜ್ಞಾನೇಂದ್ರಿಯ[illegible], ಸೂಕ್ಷ್ಮವಾಗಿಯೂ, ಅನ್ತಸ್ಥವಾಗಿಯೂ( ಒಳಗೇ ಇರತಕ್ಕದ್ದಾಗಿಯೂ ) ವ್ಯಾಪಕವಾಗಿಯೂ ಇರುವುದರಿಂದ ಸ್ಥೂಲವಾಗಿಯೂ ಬಾಹ್ಯವಾಗಿಯೂ (ಹೊರಗೆ ಇರುವುದಾಗಿಯೂ ) ಪರಿಚ್ಛಿನ್ನ ( ಮಿತಿಯುಳ್ಳದ್ದಾಗಿಯೂ) ವಾಗಿಯೂ ಇರುವ ದೇಹಕ್ಕಿಂತಲೂ ಶ್ರೇಷ್ಠಗಳೆಂದು ಪಂಡಿತರು ಹೇಳುವರು. ಇಂದ್ರಿಯಗಳಿಗಿಂತಲೂ ಸೂಕ್ಷ್ಮವಾಗಿಯೂ ವ್ಯಾಪಕವಾಗಿಯೂ ಇರುವುದರಿಂದ ಸಂಕಲ್ಪಾತ್ಮಕವಾದ ಮನಸ್ಸನ್ನು ಶ್ರೇಷ್ಠವೆನ್ನುವರು. ಆರೀತಿಯಾಗಿಯೇ ಸಂಕಲ್ಪಾತ್ಮಕವಾದ ಮನಸ್ಸಿಗಿಂತಲೂ ಸೂಕ್ಷ್ಮವಾಗಿಯೂ ವ್ಯಾಪಕವಾಗಿಯೂ ನಿಶ್ಚಯಾತ್ಮಕವಾಗಿಯೂ ಇರುವ ಬುದ್ಧಿಯು ಶ್ರೇಷ್ಠವೆಂದರಿಯಬೇಕು. ಮತ್ತು ಆಶ್ರಯಗಳಾದ ಇಂದ್ರಿಯಗಳೊಡನೆ ಕೂಡಿರುವ ಕಾಮವು ಜ್ಞಾನವನ್ನು ಮುಚ್ಚಿಕೊಂಡು ದೇಹಾಭಿಮಾನಿಯಾದ ಯಾವ ಪುರುಷನನ್ನು ಮೋಹಪಡಿಸುವುದೊ ಅಂಥಾ ಪುರುಷನು ದೃಶ್ಯಗಳಾದ ( ನೇತ್ರಗೋಚರಗಳಾದ ) ದೇಹೇಂದ್ರಿಯ ಮನೋಬುದ್ಧಿಗಳೆಂಬೀ ಯೆಲ್ಲವುಗಳಿಗೂ ದ್ರಷ್ಟಾ ( ನೋಡುವಂತವನು ) ಆಗಿರುವುದರಿಂದ ಶ್ರೇಷ್ಠನೆಂದು ಹೇಳುವರು. ... ||೪೨||

(ರಾ॥ ಭಾ॥) ಜ್ಞಾನ ವಿರೋಧಿಗಳಲ್ಲಿ ಪ್ರಧಾನವಾದದ್ದನ್ನು ಹೇಳುತ್ತಾನೆ. ಇಂದ್ರಿಯಗಳು ವಿಷಯಗಳನ್ನು ಹುಡುಕಿಕೊಂಡು ಹೋದರೆ ಆತ್ಮ ವಿಷಯವಾದ ಜ್ಞಾನ ವುಂಟಾಗುವುದಿಲ್ಲವಾದುದರಿಂದ ಜ್ಞಾನವಿರೋಧಿಗಳಲ್ಲಿ ಇಂದ್ರಿಯಗಳನ್ನು ಪ್ರಧಾನಗಳೆಂದು ಹೇಳುವರು. ಇಂದ್ರಿಯಗಳಿಗಿಂತಲೂ ಮನಸ್ಸು ಪ್ರಧಾನವು. ಅದು ಹೇಗೆಂದರೆ! ಇಂದ್ರಿಯಗಳಡಗಿದರೂ ಮನಸ್ಸಿಗೆ ವಿಷಯಾಸಕ್ತಿ ಯುಂಟಾದರೆ ಆತ್ಮಜ್ಞಾನ ವುಂಟಾಗುವುದಿಲ್ಲವು. ಆ ಮನಸ್ಸಡಗಿದರೂ ಬುದ್ಧಿಗೆ ವಿಪರೀತವಾದ ಚಿಂತಾಪ್ರವೃತ್ತಿಯುಂಟಾದರೆ ಜ್ಞಾನ ವುಂಟಾಗಲಾರದಾದುದರಿಂದ ಮನಸ್ಸಿಗಿಂತಲೂ ಬುದ್ಧಿಯು ವೈರಿಗಳಲ್ಲಿ ಮುಖ್ಯವೆಂದರಿಯಬೇಕು. ಇವುಗಳೆಲ್ಲವೂ ಅಡಗಿದರೂ ವಾಸನೆಯಿಂದುಂಟಾದ ಇಚ್ಛೆಯೆಂಬುವ ಕಾಮವಿರುವುದಾದರೇ ಅದೇ ಆ ಇಂದ್ರಿಯ ಮೊದಲಾದವುಗಳನ್ನು ತನಗೆ ಸ್ವಾಧೀನಪಡಿಸಿಕೊಂಡು ಜ್ಞಾನ ವುಂಟಾಗದಂತೆ ಮಾಡಿಬಿಡುವುದು. ಆದುದರಿಂದ ಬುದ್ಧಿಗಿಂತಲೂ ಕಾಮವೇ ಜ್ಞಾನ ವಿರೋಧಿಗಳಲ್ಲಿ ಪ್ರಧಾನವೆಂದರ್ಥವು. ... ॥೪೨॥

(ಗೀ॥ ವಿ॥) ಕಾಮರೂಪವಾದ ಶತ್ರುನಿರಾಸದಲ್ಲಿ ಜ್ಞಾನವೇ ಆಯುಧರೂಪವಾಗಿರುವುದೆಂದು ಮುಂದಿನ ಶ್ಲೋಕದಲ್ಲಿ ಹೇಳಲುದ್ದೇಶಿಸಿ ಮೊದಲು ಜ್ಞಾನಕ್ಕೆ ವಿಷಯವಾದ್ದದನ್ನು ಹೇಳುತ್ತಾನೆ. ದೇಹಕ್ಕಿಂತಲೂ ಇಂದ್ರಿಯಗಳು ಶ್ರೇಷ್ಠಗಳು. ( ಇಲ್ಲಿ ದೇಹಕ್ಕಿಂತಲೂ ಎಂಬದಾಗಿ ಸೇರಿಸಿಕೊಳ್ಳಬೇಕು ) ಇಂದ್ರಿಯಗಳಿಗೆ ಅಭಿಮಾನಿದೇವತೆಗಳಾದ ಚಂದ್ರನು, ಕುಬೇರನು, ಸೂರ್ಯನು, ವರುಣನು, ಅಶ್ವಿನೀದೇವತೆಗಳು, ಅಗ್ನಿಯು, ಇಂದ್ರನು, ಜಯಂತನು, ಯಮನು, ದಕ್ಷನು, ಇವರುಗಳಿಗಿಂತಲೂ, ವಿಷಯಾಭಿಮಾನಿದೇವತೆಗಳಾದ, ಸೌಪರ್ಣೀ, ವಾರುಣೀ, ಪಾರ್ವತೀ, ಇವರುಗಳು ಶ್ರೇಷ್ಠರು. ಇವರುಗಳಿಗಿಂತಲೂ ಬುದ್ಧ್ಯಭಿಮಾನಿದೇವತೆಯಾದ ಸರಸ್ವತೀ ಶ್ರೇಷ್ಠಳು. ಇವಳಿಗಿಂತಲೂ ಮಹತ್ತತ್ವಾಭಿಮಾನಿಯಾದ ಬ್ರಹ್ಮದೇವರು ಶ್ರೇಷ್ಠರು. . ಈ ಬ್ರಹ್ಮದೇವರಿಗಿಂತಲೂ, ಪ್ರಕೃತ್ಯಭಿಮಾನಿದೇವತೆಯಾದ ಲಕ್ಷ್ಮೀದೇವಿಯು ಶ್ರೇಷ್ಠಳು. ಈ ಲಕ್ಷ್ಮೀದೇವಿಗಿಂತಲೂ ಸರ್ವಗುಣ ಪೂರ್ಣರಾಗಿರುವ ವಿಷ್ಣುವು ಶ್ರೇಷ್ಠರು. ಇವರಿಗಿಂತ

ಲೂ ಶ್ರೇಷ್ಠರು ಯಾರೂ ಇಲ್ಲವು. ಅವರುತಾನೇ ಜ್ಞಾನದಿಂದರಿಯ ತಕ್ಕರೆಂದರ್ಥವು. ಕಠವಲ್ಲೀ (೧॥ ೧೦॥) ವಾಕ್ಯಕ್ಕೂ ಈ ಶ್ಲೋಕಕ್ಕೂ ಸಮಾನಾರ್ಥಕತ್ವವಿರುವುದು. ಈ ಮೇಲೆ ಹೇಳಿರುವ ಅರ್ಥಕ್ಕೆ ಕಾಠಕ ಭಾಷ್ಯಸಮ್ಮತಿಯನ್ನು "ದೇವೇಭ್ಯ ಇಂದ್ರಿಯಾತ್ಮಭ್ಯೋಜ್ಯಾಯಾಂಸೊ ರ್ಥಾಭಿಮಾನಿನಃ । ಸೋಮವಿತ್ತಪಸೂರ್ಯಾಪ್ಯಾ ಅಶ್ವ್ಯಗ್ನೀದ್ರೇಂದ್ರಸೂನವಃ॥ ಯಮೋದಕ್ಷಕ್ಷ್ಟಂದ್ರಿಯೇಶಾ ಸ್ಸ್ವಪತ್ನೀವಾರುಣೀತಥಾ । ಉಮೇತಿಚಾರ್ಥಮಾನಿನ್ಯ ಸ್ತಸ್ಯೋದ್ಧ್ಯೇಕದೇವತಾಃ ॥ ಮನೊಭಿಮಾನಿನೊ ರುದ್ರವೀಂದ್ರಶೇಷಾಸ್ತ್ರಯೋಪಿತು । ಶ್ರೇಷ್ಠಾಅರ್ಥಾಭಿಮಾನಿಭ್ಯ ಸ್ತೇಭ್ಯೋಬುದ್ಧಿ ಸ್ಸರಸ್ವತೀ ॥ ತಸ್ಯಾ ಬ್ರಹ್ಮಾಮಹಾನಾತ್ಮಾ ತತೋಽವ್ಯಕ್ತಾಭಿಧಾರಮಾ । ತಸ್ಯಾಸ್ತು ಪುರುಷೊ ವಿಷ್ಣುಃ ಪೂರ್ಣತ್ವಾನ್ನೈವತತ್ಸಮಃ" ಎಂಬದಾಗಿ ಅರಿಯಬೇಕು. "ಮತ್ತು ಇಲ್ಲಿ ಸರ್ವೇಭ್ಯಃ ಪ್ರವರಾದೇವಾ" ಇತ್ಯಾದಿ ತಾತ್ಪರ್ಯನಿರ್ಣಯ ಪ್ರದರ್ಶಿತ ಪ್ರಮಾಣಗಳನ್ನೂ ಅರಿಯಬೇಕು॥೪೨॥

ಮೂ॥ ಏವಂಬುದ್ಧೇಃ ಪರಂಬುಧ್ವಾ ಸಂಸ್ತಭ್ಯಾತ್ಮಾ
ನ ಮಾತ್ಮನಾ । ಜಹಿಶತ್ರುಂ ಮಹಾಬಾಹೊ ಕಾಮ
ರೂಪಂ ದುರಾಸದಂ ॥ ... ॥೪೩॥

ಪ॥ ಏವಂ-ಬುದ್ಧೇಃ -ಪರಂ - ಬುಧ್ವಾ - ಸಂಸ್ತಭ್ಯ - ಆತ್ಮಾನಂ - ಆತ್ಮನಾ ! ಜಹಿ-ಶತ್ರುಂ - ಮಹಬಾಹೊ - ಕಾಮರೂಪಂ - ದುರಾಸದಂ॥ ॥೪೩॥

ಅ॥ ಹೇಮಹಾಬಾಹೊ - ಎಲೈ ಮಹಾಬಾಹುವುಳ್ಳ ಅರ್ಜುನನೇ, ಏವಂ - ಈ ಪ್ರಕಾರವಾಗಿ, ಬುದ್ಧೇಃಪರಂ - ಬುದ್ಧಿಗಿಂತಲೂ ಶ್ರೇಷ್ಠನಾದ ಆತ್ಮನನ್ನು, (ರಾ॥) ವಿರೋಧಿಗಳಲ್ಲಿ ಬುದ್ಧಿಗಿಂತಲೂ ಪ್ರಧಾನವಾದ ಕಾಮವನ್ನು, (ಮ॥) ಬುದ್ಧಿಗಿಂತಲೂ ಶ್ರೇಷ್ಠನಾದ ಪರಮಾತ್ಮನನ್ನು, ಬುಧ್ವಾ-ತಿಳಿದು, ಆತ್ಮನಾ - ನಿಶ್ಚಯಬುದ್ಧಿಯಿಂದ, ಆತ್ಮಾನಂ - ಮನಸ್ಸನ್ನು, ಸಂಸ್ತಭ್ಯ - ನಿಲ್ಲಿಸಿ, ದುರಾಸದಂ - ತಡೆಯಲುಅಶಕ್ಯವಾದ, ಕಾಮರೂಪಂಶತ್ರುಂ - ಕಾಮರೂಪವಾದ ಶತ್ರುವನ್ನು, ಜಹಿ - ಜಯಿಸುವಂತವನಾಗು ॥೪೩॥

(ಆ॥ಗಿ॥)ಇಂದ್ರಿಯಾದಿಗಳನ್ನು ಜಯಿಸುವುದರಿಂದುಂಟಾದ ಆತ್ಮಜ್ಞಾನದಿಂದ ಕಾಮಜಯವಾಗುವುದೆಂಬದಾಗಿ ಹೇಳಿ ಈ ಅಧ್ಯಾಯವನ್ನು ಉಪಸಂಹಾರ ಮಾಡುತ್ತಾರೆ.

(ಶಂ॥ ಭಾ॥) ಈ ಪ್ರಕಾರವಾಗಿ ನಿಶ್ಚಯಾತ್ಮಕವಾದ ಬುದ್ಧಿಗಿಂತ ಲೂ ಆತ್ಮನು ಶ್ರೇಷ್ಠನೆಂದು ತಿಳಿದು ಬುದ್ಧಿಯಿಂದ ಮನಸ್ಸನ್ನು ನಿಶ್ಚಲವಾಗಿ ಮಾಡಿಕೊಂಡು ಜಯಿಸಲಸಾಧ್ಯವಾದ ಕಾಮನೆಂಬ ಶತ್ರುವನ್ನು ಜಯಿಸುವಂತವನಾಗು. ॥೪೩॥

(ರಾ॥ ಭಾ॥) ಎಲೈ ದೀರ್ಘವಾದ ಭುಜವುಳ್ಳ ಅರ್ಜುನನೆ ! ಜ್ಞಾನ ವಿರೋಧಿಗಳಲ್ಲಿ ಬುದ್ಧಿಗಿಂತಲೂ ಕಾಮವೆಂಬುವುದು ಶ್ರೇಷ್ಠವೆಂ ದುತಿಳಿದು ಆ ಬುದ್ಧಿಯಿಂದ ಮನಸ್ಸನ್ನು ಕರ್ಮಯೋಗದಿಂದ ನಿ ಶ್ಚಲಪಡಿಸಿ ಕಾಮವೆಂಬೀ ಕಠಿನವಾದ ಶತ್ರುವನ್ನು ಜಯಿಸೆಂದಭಿ ಪ್ರಾಯವು. ... ... ॥೪೩॥

( ಶ್ರೀ॥ ) ವಿಷಯೇಂದ್ರಿಯಗಳಿಂದುಂಟಾಗುವ ಕಾಮಾದಿ ವಿಕಾ ರಗಳು ಬುದ್ಧಿಪರ್ಯಂತವಾದ ತತ್ವಗಳನ್ನು ಸೇರಿರುವುವಲ್ಲದೆ ಆತ್ಮಗ ತವಲ್ಲವೆಂದರ್ಥವು. ... ... ॥೪೩॥

---

( ಅದ್ವೈತ ಸಿದ್ಧಾಂತ ಪ್ರಕಾರವಾಗಿ ) ಈ ಕರ್ಮ ಯೋಗಾಧ್ಯಾಯವನ್ನು ಸಂಗ್ರಹಿಸಿ ಒಂದು ಶ್ಲೋಕದಲ್ಲಿ ಹೇಳುತ್ತಾರೆ.

ಯಜ್ಞಾದ್ಯಂ ವರ್ಣಧರ್ಮೋಚಿತ ಮಪಿನಿಯತಂ ಕರ್ಮಶರ್ಮ
ಪ್ರದಂಸ್ಯಾ ನ್ನತ್ಯಾಜ್ಯಂ ಕಾರ್ಯಮೇತದ್ವಿಗುಣಮಪಿ ಯತೋಽ
ಕರ್ಮಣಃಕರ್ಮಶಸ್ತಂ । ಜೀವನ್ಮರ್ತ್ಯಃ ಕದಾಚಿತ್ಕರ ಚರಣ
ಯುತೋ ನೈವತಿಷ್ಠತ್ಯಕರ್ಮಾ ತಸ್ಮಾಚ್ಛ್ರೇಯಾ ಸ್ವಧ
ರ್ಮೋ ಯದುಪತಿ ಗದಿತಶ್ಚಿತ್ತಶುದ್ಧ್ಯೈ ಪ್ರಸೂತೇಯೆ ॥

ತಾ॥ ಯಾಗಾದಿ ಕರ್ಮಗಳನ್ನು ಮತ್ತು ವರ್ಣಾಶ್ರಮವಿಹಿತಗ ಳಾದ ನಿತ್ಯನೈಮಿತ್ತಿಕ ಕರ್ಮಗಳನ್ನು ಅನುಷ್ಠಿಸುವುದರಿಂದ ಪರಂ ಪರೆಯಾಗಿ ಮೋಕ್ಷವನ್ನು ಹೊಂದಬಹುದು. ವಸ್ತುತಃ ಜ್ಞಾನಿಯಾಗ ಬೇಕಾದ್ದಾನಿಯಾದೆನೆಂದರಿತು ಕರ್ಮ ಭ್ರಷ್ಟನಾಗಬಾರದು. ಇದನ್ನು

ಬಿಡುವುದಕ್ಕಿಂತಲೂ ಮಾಡುವುದು ಶ್ರೇಯಸ್ಕರವಾಗಿರುವುದರಿಂದ ವ ರ್ಣಾಶ್ರಮ ಧರ್ಮಗಳನ್ನು ಬಿಡುವುದಕ್ಕಿಂತಲೂ ಆಚರಿಸುವುದೇ ಪ್ರ ಶಸ್ತವು. ಕರಚರಣಾದ್ಯವಯವಗಳೊಡನೆ ಕೂಡಿರುವ ಮನುಷ್ಯನು ತಾನು ಜೀವಿಸಿರುವ ವರೆಗೂ ಅವಯವ ಚೇಷ್ಟಾದಿರೂಪವಾದ ಕರ್ಮ ಗಳನ್ನು ಮಾಡದೇ ಇರಲಾರನು. ಆದುದರಿಂದ ಚಿತ್ತಶುದ್ಧಿಯು, ತ ದ್ದ್ವಾರಾಜ್ಞಾನವು, ಅದರಿಂದ ಮೋಕ್ಷವನ್ನು ಹೊಂದುವುದಕ್ಕಾಗಿ ಕರ್ಮಾಚರಣವು ಕ್ಷೇಮಕರವೆಂಬದಾಗಿ ಶ್ರೀ ಕೃಷ್ಣನಿಂದ ಹೇಳಲ್ಪ ಟ್ಟಿತೆಂದು ತಾತ್ಪರ್ಯವು.

(ವಿಶಿಷ್ಟಾದ್ವೈತ ಸಿದ್ಧಾಂತ ಪ್ರಕಾರವಾಗಿ) ತೃತೀಯಾಧ್ಯಾ ಯಾರ್ಥಗಳನ್ನೊಂದು ಶ್ಲೋಕದಿಂದ ಸಂಗ್ರಹಿಸುತ್ತಾರೆ.

ಶ್ಲೋ॥ ಅಸಕ್ತ್ಯಾಲೋಕ ರಕ್ಷಾಯೈ ಗುಣೇಷ್ವಾರೋಪ್ಯ ಕರ್ತೃತಾಂ । ಸರ್ವೇಶ್ವರೇವಾನ್ಯಸ್ಯೋಕ್ತಾ ತೃತೀಯೇ ಕರ್ಮ ಕಾರ್ಯತಾ ॥

ತಾ॥ ಈ ಮೂರನೇ ಅಧ್ಯಾಯದಲ್ಲಿ ಕರ್ತೃತ್ವವು ತನಗಿಲ್ಲವೆಂದರಿ ತು ಅದನ್ನು ಪ್ರಕೃತಿಯಲ್ಲಾದರೂ ಸರ್ವೇಶ್ವರನಲ್ಲಾದರೂ ಆರೋ ಪಿಸಿ ಲೋಕ ರಕ್ಷಣಾರ್ಥವಾಗಿ ಕರ್ಮಗಳನ್ನನುಷ್ಠಿಸಬೇಕೆಂದು ಹೇಳಲ್ಪಟ್ಟಿತು. ... ... ॥೩॥

ಶ್ರೀಗೀತಾರ್ಥಸಂಗ್ರಹ ತೃತೀಯಾಧ್ಯಾಯ ಗಾಥಾ.

ಮೂ॥ ಶಜ್ಞಂತಪಿರ್ನ್ಸು ಶಕಂಶಡಿರ್ಪ (ಪ್ಪ) ತ್ತತ
ನಙ್ಞಾಯನೇ, ಪೊಜ್ಙಂ ಕುಣಂಗಳ್ ಪ್ರಣರ್ಪ್ಪನ್ತ್ರಿತ್ತು
ಪ್ರಕೃತ್ತ್ಯೈತ್ತು, ನಙ್ಕಣ್ಣುರೈತ್ತ ಕಿರಿಶೆಯೆಲ್ಲಾಮಿನ
ವುನ್ನವಿನ್ನವರ್, ಎಙ್ಗುಮರಿವಾರ್ ಕಳೇಯೆನ್ನು ನಾತನಿ
ಯಮ್ಬಿನನೆ ॥ ... ... ॥೪॥

“ ಅಸಕ್ತ್ಯಾಲೋಕರಕ್ಷಾಯೈ ’ ಎಂಬುವ ಸಂಗ್ರಹಶ್ಲೋಕ ಪ್ರ ಕಾರವಾಗಿ ತೃತೀಯಾಧ್ಯಾಯಾರ್ಥಗಳನ್ನೊಂದು ಶ್ಲೋಕದಿಂದ ಸಂ ಗ್ರಹಿಸುತ್ತಾರೆ. ಶಕಂ - ಜಗತ್ತಿನಲ್ಲಿ, ಶತಿರ್ - ಚಾತುರ್ಯವನ್ನು,

ಪೆತ್ತ(ಪೆಶ್ಶ) ಹೊಂದಿರುವ, ತನಜ್ಞಾಯನೇ - ಅರ್ಜುನನೆ ! ಸಾರಾಸಾರ ವಿವೇಚನ ಚಾತುರ್ಯವುಳ್ಳವನೆಂದು ಸರ್ವಲೋಕ ಪ್ರಸಿದ್ಧನಾದ ಅರ್ಜುನನೇ ಯೆಂದರ್ಥವು. ಶಜ್ಗಂ - ಸಂಗವನ್ನು, ತವಿರ್ನ್ದು - ತ್ಯಾಗವಮಾಡಿ, ತಾನನುಷ್ಠಿಸುವ ಕರ್ಮಗಳಲ್ಲಿ ಫಲಾಭಿಸಂಧಿಯನ್ನು ಮತ್ತು ಆತ್ಮೀಯಸಾಭಿಮಾನವನ್ನೂ ಬಿಟ್ಟೆಂದರ್ಥವು. ಪೊಜ್ಗಂ-ವೃದ್ಧಿಹೊಂದತಕ್ಕವುಗಳಾಗಿರುವ, ಕುಣಜ್ಗಳ್ - ಗುಣಗಳ, ಪೂರ್ಣಿಮಾ ಚಂದ್ರನ ಕಿರಣ ಸಂಬಂಧದಿಂದ ಅಭಿವೃದ್ಧಿಯನ್ನು ಹೊಂದುವ ಸಮುದ್ರತರಂಗ ನ್ಯಾಯದಿಂದ ನ್ಯೂನಾಧಿಕಭಾವವಾಗಿ ವಿಜೃಂಭಿಸುತಲಿರುವ ಸತ್ವಾದಿ ಗುಣಗಳ, ಎಂದರ್ಥವು. ಪುಣರ್ಪ್ಪು - ಕಾರ್ಯಗಳನ್ನು, ಅನ್ನೈತ್ತುಂ - ಸಮಸ್ತಗಳನ್ನು, ಸತ್ವಾದಿ ಗುಣಮೂಲಕವಾದ ಸರ್ವವಿಧವ್ಯಾಪಾರಗಳನ್ನೆಂದಭಿಪ್ರಾಯವು. ಅವೈತ್ತು - ಆ ಸತ್ವಾದಿಗುಣಗಳಲ್ಲಿ, ಪುಕವಿಟ್ಟು - ಆರೋಪಿಸಿ, ತನ್ನ ಸಾಂಸಾರಿಕ ಸರ್ವವಿಧ ವ್ಯಾಪಾರ ಕರ್ತೃತ್ವವೂ ಪ್ರಾಪ್ತಾಪ್ರಾಪ್ತ ವಿವೇಕದಿಂದ ಗುಣಕೃತವಾಗಿರುವುದಲ್ಲದೆ ಆತ್ಮಸ್ವರೂಪಕೃತ ವಲ್ಲವೆಂದನುಸಂಧಾನ ಮಾಡಿಯೆಂಬದಾಗಿ ಸಂಪಿಂಡಿತಾಭಿಪ್ರಾಯವು. ಉರೈತ್ತ - ಶಾಸ್ತ್ರಚೋದಿತಗಳಾಗಿರುವ, ಕಿರಿಶೈಯೆಲ್ಲಾಂ - ಕ್ರಿಯೆಗಳೆಲ್ಲವೂ, ನಜ್ಕಣ್ - ನನ್ನಲ್ಲಿ, (ಕಣ್ ಎಂಬುವ ಪದವು ಸಪ್ತಮ್ಯರ್ಥವಾಚಕವು.) ಸರ್ವಕರ್ಮಗಳೂ ಸರ್ವಶೇಷಿಯಾಗಿಯೂ, ಸತ್ವಾದಿಗುಣತ್ರಯಮಯವಾದಪ್ರಕೃತಿಯೇ ಮೊದಲಾದ ಸರ್ವಪದಾರ್ಥಗಳಿಗೂ ನಿಯಾಮಕನಾಗಿಯೂ ಇರುವ ನನ್ನಲ್ಲಿ ಅಧೀನಗಳಾಗಿರುವುವೆಂದರ್ಥವು. (ಅಥವಾ) ನಜ್ಕಣ್ - ನಮ್ಮ ಸ್ವಾಮಿಯಾದ ಪರಮಾತ್ಮನಲ್ಲಿ, (ಕಣ್ಣೆಂಬುವುದು ಸ್ವಾಮಿವಾಚಕವಾಗಿ ಲುಪ್ತಸಪ್ತಮೀ ವಿಭಕ್ತಿಕ ಮಾಗಿಯೂ ಆಗಿರುವುದು. ಪೂರ್ವ ಯೋಜನೆಯಲ್ಲಿ "ನಮ್" ಎಂಬುವ ಪದವು ಶಾಸ್ತ್ರೋಪದೇಶವಂ ಮಾಡುವ ಭಗವತ್ಪರವಾಗಿರುವುದು. ಈ ಯೋಜನೆಯಲ್ಲಿ ಆ ಪದವು ಅನುಸಂಧಾನವನ್ನು ಮಾಡುವ ಪುರುಷಪರವಾಗಿ ಅವನಿಗೆ ಸ್ವಾಮಿಯಾದ ಪರಮಾತ್ಮಪರವಾಗುವುದು. ಇಲ್ಲಿ ಯೆರಡು ಪ್ರಕಾರವಾಗಿಯೂ ಚೇತನಗತವಾದ ಸರ್ವವಿಧ ಕರ್ತೃತ್ವವು "ಪರಾತ್ತುತಚ್ಛ್ರುತೇಃ" ಎಂಬುವ ಪ್ರಕಾರವಾಗಿ ಪರಮಾತ್ಮಾಯತ್ತವಾ

ಗಿರುವುದೆಂದು ಫಲಿತಾರ್ಥವು. ಎನ್ನುಮ್ - ಈ ಪ್ರಕಾರವಾಗಿಯೂ, ನವಿನ್ನವರ್ - ಹೇಳಿದವರು, ಶಬ್ದಾಭಿಲಾಪ ಪರ್ಯಂತ ಮಾಗುವಂತೆ ಮನಸ್ಸಿನಿಂ ದನುಸಂಧಾನಮಾಡಿದವರೆಂದರ್ಥವು. ಇಲ್ಲಿ "ನಿನ್ನೈತ್ತವರ್" ಎಂಬದಾಗಿ ಅಭಿಸಂಧಿಮಾತ್ರವನ್ನು ಹೇಳಬೇಕಾಗಿರಲು "ನವಿನ್ನವರ್', ಎಂಬದಾಗಿ ಶಬ್ದಾಭಿಲಾಪ ಪರ್ಯಂತವಾಗಿ ಹೇಳಿರುವುದು ಶಿಷ್ಟರೆಂಬದಾಗಿ ವ್ಯಪದೇಶ್ಯರಾಗಿರುವ ಇವರುಗಳ ಶಬ್ದಾಭಿಲಾಪದಿಂದ ತೋರುವ ಅಭಿಸಂಧಿಯನ್ನು ಮಿತವಾದ ಜ್ಞಾನವುಳ್ಳವರು ಕೂಡ ಅನುಷ್ಠಾನಮಾಡಿ ಉಜ್ಜೀವಿಸುವರೆಂಬ ಅಭಿಪ್ರಾಯದಿಂದ, ಎಙ್ಗಂ - ಸರ್ವವಿಷಯದಲ್ಲಿಯೂ, ಅರಿವಾರ್ಕಳೇ - ಜ್ಞಾನವುಳ್ಳವರೆ, ಸರ್ವಶಾಸ್ತ್ರಾರ್ಥಸಾರಭೂತವಾದ ಪ್ರಾಪಕತಾನುಷ್ಠಾನ ನಿಷ್ಠೆಯಿಂದ ಸರ್ವಶಾಸ್ತ್ರಾರ್ಥಜ್ಞಾನ ಫಲವು ಸಿದ್ಧಿಸಿರುವುದರಿಂದ ಸರ್ವಜ್ಞರೆಂದು ಹೇಳಲ್ಪಡುವರೆಂದರ್ಥವು. ಎನ್ನು - ಈ ಪ್ರಕಾರವಾಗಿ, ಸಾತ್ತನ್ - ಸರ್ವಲೋಕಶರಣ್ಯನಾದ ಶ್ರೀಕೃಷ್ಣನು, ಇಯಮ್ಬಿನನ್ - ಉಪದೇಶಿಸಿದನು. ಇಲ್ಲಿ ಶಬ್ದಸ್ವಭಾವದಿಂದಲೂ ಅರ್ಥಸ್ವಭಾವದಿಂದಲೂ ಯಥಾಯೋಗ್ಯವಾಗಿ ಸಂಗ್ರಹಶ್ಲೋಕಕ್ಕೂ ತದ್ವ್ಯಾಖ್ಯಾನವಾದಶ್ರೀಮದ್ಗೀತಾರ್ಥಸಂಗ್ರಹ ರಕ್ಷೆಗೂ ಶ್ರೀಮದ್ಗೀತಾಭಾಷ್ಯಕ್ಕೂ ಶ್ರೀಮತ್ತಾತ್ಪರ್ಯಚಂದ್ರಿಕೆಯಲ್ಲುಪನ್ಯಸಿಸಲ್ಪಡುವ ಅರ್ಥವಿಶೇಷಗಳಿಗೂ ಶ್ರೀಭಗವದ್ಗೀತೆಯ ಮೂಲ ಶ್ಲೋಕಗಳಿಗೂ ಪ್ರತಿಪಾದ್ಯ ಪ್ರತಿಪಾದಕ ಭಾವರೂಪವಾದ ಸಂಬಂಧ ವಿಶೇಷಗಳನ್ನರಿಯಬೇಕು. ಗ್ರಂಥವಿಸ್ತರಭಯದಿಂದ ಇಲ್ಲಿ ವಿಸ್ತರಿಸಲಿಲ್ಲವು. ... ॥೮॥

ಈ ಪ್ರಕಾರವಾಗಿ ಶ್ರೀಮದ್ಗೀತಾರ್ಥಸಾರದಲ್ಲಿ

ತೃತೀಯಾಧ್ಯಾಯ ಸಮಾಪ್ತವು.

## ಶ್ರೀಮದ್ಗೀತಾರ್ಥಸಾರದಲ್ಲಿ ಚತುರ್ಥಾಧ್ಯಾಯವುಃ.

(ಶಂ॥ ಭಾ॥) ಪ್ರವೃತ್ತಿ ನಿವೃತ್ತಿಗಳನ್ನೇ ಸ್ವರೂಪವಾಗಿವುಳ್ಳ ಸರ್ವವಾದ ವೇದಾರ್ಥವು ಯಾವದರಲ್ಲಿ ಪರಿಸಮಾಪ್ತವಾಗಿರುವುದೊ, ಅಂತಹ ಸನ್ನ್ಯಾಸದೊಡನೆಯು, ಉಪಾಯವಾದ ಕರ್ಮಯೋಗದೊ

ಡನೆಯೂ ಸೇರಿರುವುದಾಗಿಯೂ ಜ್ಞಾನನಿಷ್ಠೆಯನ್ನೇ ಸ್ವರೂಪವಾಗಿ ಉಳ್ಳದ್ದಾಗಿಯೂ, ಇರುವ ಈ ಯಾವ ಯೋಗವು ಈ ದ್ವಿತೀಯತೃತೀಯಾಧ್ಯಾಯಗಳಿಂದ ಹೇಳಲ್ಪಟ್ಟಿತೋ, ಈ ಅರ್ಥವೇ ಸಮಸ್ತವಾದ ಈ ಗೀತೆಗಳಲ್ಲಿಯೂ ಪರಮಾತ್ಮನಿಂದ ಹೇಳಲ್ಪಡುವುದು. ಆದುದರಿಂದ ವೇದಾರ್ಥವೆಲ್ಲವೂ ಪರಿಸಮಾಪ್ತವಾಯಿತೆಂದು ನೆನೆಸಿ ವಂಶಕಥನ ಪೂರ್ವಕವಾಗಿ ಈ ಯೋಗವನ್ನು ಪರಮಾತ್ಮನು ಸ್ತುತಿಸುತ್ತಾನೆ.

(ಅ॥ ಗ॥) ವಂಶಕಥನವೆಂದರೆ ಸಂಪ್ರದಾಯೋಪನ್ಯಾಸವು. ಇದು ಉತ್ತಮವಾದ ಅರ್ಥಗಳು ಕೃತ್ರಿಮಗಳಾಗಿರಬಹುದೆಂಬ ಶಂಕಾನಿವೃತ್ತಿಯಿಂದ ಯೋಗಸ್ತುತಿಯಲ್ಲಿ ಪರ್ಯವಸಾನವಂ ಹೊಂದುವುದು.

(ರಾ॥ ಭಾ॥) ತೃತೀಯಾಧ್ಯಾಯದಲ್ಲಿ ಪ್ರಕೃತಿಯಿಂದ ಕೂಡಿರುವ ಮೋಕ್ಷಾಪೇಕ್ಷೆಯುಳ್ಳವನಿಗೆ ಶೀಘ್ರವಾಗಿ ಜ್ಞಾನಯೋಗದಲ್ಲಧಿಕಾರವಿಲ್ಲವಾದುದರಿಂದ ಕರ್ಮಯೋಗವೇ ಮಾಡತಕ್ಕದ್ದಾಗಿರುವುದೆಂಬದಾಗಿಯೂ, ಜ್ಞಾನಯೋಗಾಧಿಕಾರಿಯಾದವನಿಗೂ ಅಕರ್ತೃತ್ವ (ನಾನು ಮಾಡಲಿಲ್ಲವೆಂಬ) ಅನುಸಂಧಾನ ಪೂರ್ವಕವಾಗಿ ಮಾಡತಕ್ಕ ಕರ್ಮಯೋಗವೇ ಶ್ರೇಯಸ್ಕರವೆಂದು ಸಹೇತುಕವಾಗಿ ( ಜ್ಞಾನಯೋಗವು ಪ್ರಮಾದ ಯುಕ್ತವಾಗಿಯೂ ಕರ್ಮಯೋಗವು ಪ್ರಮಾದರಹಿತವಾಗಿಯೂ ಇರುವ ಕಾರಣ ಪೂರ್ವಕವಾಗಿ) ಹೇಳಲ್ಪಟ್ಟಿತು. ಅದರಲ್ಲಿ ವಿಶೇಷವಾಗಿ ಜ್ಞಾನಾನುಷ್ಠಾನಗಳಿಂದ ಅತ್ಯಂತ ಪ್ರಸಿದ್ಧನಾದವನಿಗೂ ವಿಶೇಷವಾಗಿ ಕರ್ಮಯೋಗವೇ ಮಾಡತಕ್ಕದ್ದಾಗಿರುವುದೆಂಬದಾಗಿಯೂ ಹೇಳಲ್ಪಟ್ಟಿತು. ಈ ನಾಲ್ಕನೇ ಅಧ್ಯಾಯದಲ್ಲಿ ಕರ್ಮಯೋಗವು ಲೋಕರಕ್ಷಣಾರ್ಥವಾಗಿ ಈ ಮನ್ವಂತರಾದಿಯಲ್ಲಿ ತನ್ನಿಂದ ಹೇಳಲ್ಪಟ್ಟಿರುವುದರಿಂದ ಕರ್ಮವನ್ನವಶ್ಯವಾಗಿ ಮಾಡಬೇಕೆಂದು ದೃಢಪಡಿಸಿ ಈ ಕರ್ಮಯೋಗಕ್ಕೇನೇ ಜ್ಞಾನಯೋಗವು ಅಂತರ್ಗತವಾಗಿರುವುದರಿಂದ ಜ್ಞಾನರೂಪತ್ವವನ್ನು ತೋರಿಸಿ ಕರ್ಮಯೋಗಸ್ವರೂಪವು ಅದರ ಭೇದಗಳು, ಮತ್ತು ಕರ್ಮಯೋಗದಲ್ಲಿಯೂ ಜ್ಞಾನಾಂಶಕ್ಕೇನೇ ಪ್ರಾಧಾನ್ಯವೂ ಹೇಳಲ್ಪಡುವುದು. ಪ್ರಸಂಗ ಸಂಗತಿಯಿಂದ ಭಗವದವತಾರ ರಹಸ್ಯ ಚಿಂತನವೂ ಮಾಡಲ್ಪಡುವುದು.

(ಗೀ॥ ವಿ॥) ತೃತೀಯಾಧ್ಯಾಯದಲ್ಲಿ "ನಿಯತಂಕುರುಕರ್ಮತ್ವಂ" (೩॥ ೮॥) ಇದೇಮೊದಲಾದ ಶ್ಲೋಕಗಳಿಂದ ಸ್ವಲ್ಪವಾಗಿ ವಿವರಿಸಲ್ಪಟ್ಟ ನಿವೃತ್ತ ಕರ್ಮಕ್ಕೂ ಅದೇರೀತಿಯಾಗಿ "ಯೋಬುದ್ಧೇಃಪರತಸ್ತು ಸಃ" (೩॥ ೪೨॥) ಇದೇ ಮೊದಲಾದವುಗಳಿಂದ ತಾರತಮ್ಯಾಂತರ್ಗತ್ವೇನ ಹೇಳಲ್ಪಟ್ಟ ಶ್ರೀ ವಿಷ್ಣುವಿಗೂ ಅವನ ವಿಷಯವಾದ ಜ್ಞಾನಕ್ಕೂ ವಿಸ್ತಾರದಿಂದ ನಿರೂಪಣವು ಇದೇ ಮೊದಲಾದ ಮೂರಧ್ಯಾಯಗಳಿಂದ ಮಾಡಲ್ಪಡುವುದು. "ಏವಂಜ್ಞಾತ್ವಾ ಕೃತಂಕರ್ಮ" (೪॥ ೧೫॥) ಎಂಬುವ ಗ್ರಂಥಕ್ಕಿಂತಲೂ ಮುಂದಿನ ಶ್ಲೋಕಗಳಿಂದ ಪರಮಾತ್ಮಭೂತನಾದ ಶ್ರೀಮಹಾವಿಷ್ಣುವಿನ ಮಹಾತ್ಮ್ಯವೂ, "ಶ್ರೇಯಾನ್ದ್ರವ್ಯಮಯಾದ್ಯಜ್ಞಾತ್" (೪॥ ೩೩॥) ಎಂಬುವ ಶ್ಲೋಕಕ್ಕಿಂತಲೂ ಮುಂದಿನ ಶ್ಲೋಕಗಳಿಂದ ನಿವೃತ್ತ ಕರ್ಮಕ್ಕೆ ಪ್ರವೃತ್ತ ಕರ್ಮಕ್ಕಿಂತಲೂ ಉಂಟಾಗಿರುವ ಪರಸ್ಪರ ಭೇದವೂ, ಮತ್ತು ನಿವೃತ್ತಕರ್ಮಗಳಲ್ಲಿಯೇಉಪಾಸನ ಯಜ್ಞಾದಿರೂಪದಿಂದ ಭೇದವೆಂಬುವ ಕರ್ಮವಿಸ್ತಾರೋಕ್ತಿಯೂ ಮಿಕ್ಕಶ್ಲೋಕಗಳಿಂದ ಜ್ಞಾನ ಮಹಾತ್ಮ್ಯವೂ ಹೇಳಲ್ಪಡುವುದೆಂದರಿಯಬೇಕು. "ಮಯಿಸರ್ವಾಣಿ" (೩॥ ೩೦॥) ಎಂಬಶ್ಲೋಕದಲ್ಲಿ ಹೇಳಲ್ಪಟ್ಟ,ನಿವೃತ್ತಿಕರ್ಮಲಕ್ಷಣವಾಗಿಯೂ ಜ್ಞಾನೋಪಾಯವಾಗಿಯೂ ಇರುವ ಕರ್ಮಯೋಗವನ್ನು, ಮಾಡುವುದರಿಂದ ಫಲವು, ಮಾಡದೇ ಇರುವುದರಿಂದ ಅನರ್ಥವೂ "ಯೇಮೇಮತಮಿದಂ ನಿತ್ಯಂ" (೩॥ ೩೧॥) ಎಂಬಿದೇ ಮೊದಲಾದ ಶ್ಲೋಕಗಳಿಂದ ಹೇಳಲ್ಪಟ್ಟಿರುವುದರಿಂದ ಕರ್ಮಯೋಗವು ಅವಶ್ಯವಾಗಿ ಅನುಷ್ಠಿಸತಕ್ಕದ್ದೆಂದು ಹೇಳಿ ಪುನಶ್ಚ ಆ ಕರ್ಮಯೋಗಾನುಷ್ಠಾನದಲ್ಲಿ ರುಚಿಯನ್ನುಂಟುಮಾಡುವುದಕ್ಕಾಗಿ ಇದು ಪೂರ್ವದಿಂದಲೂ ಅನುಷ್ಠಿಸಲ್ಪಟ್ಟಿರುವುದೆಂಬದಾಗಿ ಹೇಳುತ್ತಾನೆ.

ಶ್ರೀಭಗವಾನುವಾಚ॥ ಇಮಂವಿವಸ್ವತೇ ಯೋಗಂಪ್ರೋಕ್ತವಾನಹಮವ್ಯಯಂ । ವಿವಸ್ವಾನ್ ಮನವೇ ಪ್ರಾಹ ಮನುರಿಕ್ಷ್ವಾಕವೇ ಬ್ರವೀತ್ ॥೧॥ ಏವಂ ಪರಂಪರಾಪ್ರಾಪ್ತಮಿಮಂ ರಾಜರ್ಷಯೋವಿದುಃ । ಸಕಾಲೇನೇಹಮಹತಾ

ತಾ ಯೋಗೋನಷ್ಟಃ ಪರಂತಪ ॥೨॥ ಸಏವಾಯಂ ಮಯಾತೇಽದ್ಯಯೋಗಃ ಪ್ರೋಕ್ತಃಪುರಾತನಃ | ಭಕ್ತೋಽಸಿಮೇಸಖಾಚೇತಿ ರಹಸ್ಯಂ ಹ್ಯೇತದುತ್ತಮಂ ॥೩॥

ಪ॥ ಇಮಂ – ವಿವಸ್ವತೇ – ಯೋಗಂ– ಪ್ರೋಕ್ತವಾನ್ – ಅಹಂ – ಅವ್ಯಯಂ | ವಿವಸ್ವಾನ್–ಮನವೇ – ಪ್ರಾಹ – ಮನುಃ – ಇಕ್ಷ್ವಾಕವೇ – ಅಬ್ರವೀತ್ ॥೧॥ ಏವಂ – ಪರಂಪರಾ ಪ್ರಾಪ್ತಂ – ಇಮಂ – ರಾಜರ್ಷಯಃ – ವಿದುಃ | ಸಃ – ಕಾಲೇನ – ಇಹ – ಮಹತಾ – ಯೋಗಃ – ನಷ್ಟಃ – ಪರಂತಪ ॥೨॥ ಸಃಏವ– ಅಯಂ– ಮಯಾ– ತೇ–ಅದ್ಯ–ಯೋಗಃ – ಪ್ರೋಕ್ತಃ – ಪುರಾತನಃ | ಭಕ್ತಃ – ಅಸಿ– ಮೇ–ಸಖಾ– ಚ – ಇತಿ–ರಹಸ್ಯಂ–ಹಿ – ಏತತ್ – ಉತ್ತಮಂ ॥ ... ... ॥೩॥

ಅ॥ ಶ್ರೀಭಗವಾನ್ – ಶ್ರೀಕೃಷ್ಣಪರಮಾತ್ಮನು, ಉವಾಚ – ಹೇಳಿದನು, ಅವ್ಯಯಂ–ನಾಶರಹಿತವಾದ ಫಲವಂ ಕೊಡುವುದಕ್ಕೆ ಕಾರಣವಾದ, ಇಮಂಯೋಗಂ – ಈ ಕರ್ಮಯೋಗವನ್ನು, ಅಹಂ – ನಾನು, ವಿವಸ್ವತೇ – ಸೂರ್ಯನಿಗೋಸ್ಕರ, (ಪುರಾ – ಮನ್ವಂತರಾದಿ ಕಾಲದಲ್ಲಿ,) ಪ್ರೋಕ್ತವಾನ್ – ಹೇಳಿದೆನು, ವಿವಸ್ವಾನ್ – ಸೂರ್ಯನು, ಮನವೇ – ತನ್ನ ಕುಮಾರನಾದ ವೈವಸ್ವತಮನುವಿಗೋಸ್ಕರ, ಪ್ರಾಹ – ಹೇಳಿದನು, ಮನುಃ – ವೈವಸ್ವತಮನುವು, ಇಕ್ಷ್ವಾಕವೇ – ತನ್ನ ಕುಮಾರನಾದ ಇಕ್ಷ್ವಾಕುರಾಜನಿಗೋಸ್ಕರ, ಅಬ್ರವೀತ್ – ಹೇಳಿದನು.॥ ೧॥ ಹೇಪರಂತಪ – ಎಲೈ ಶತ್ರುಸಂಹಾರಕನಾದ ಅರ್ಜುನನೆ ಏವಂ – ಈ ಪ್ರಕಾರವಾಗಿ, ಪರಂಪರಾಪ್ರಾಪ್ತಂ – ಸಂಪ್ರದಾಯಪರಂಪರೆಯಿಂದ ಪ್ರಾಪ್ತವಾದ, ಇಮಂ – ಈ ಕರ್ಮಯೋಗವನ್ನು, ರಾಜರ್ಷಯಃ – ರಾಜರ್ಷಿಗಳು, (ಅ॥ ರಾಜರು,ಋಷಿಗಳು, (ಅಥವಾ) ರಾಜರ್ಷಿಗಳು), ವಿದುಃ – ತಿಳಿಯುವರು, ಮಹತಾಕಾಲೇನ – ಬಹುಕಾಲವಾದುದರಿಂದ, ಸಯೋಗಃ – ಆ ಕರ್ಮಯೋಗವು, ಇಹ – ಈ ಲೋಕದಲ್ಲಿ, ನಷ್ಟಃ–ನಷ್ಟವಾಗಿ ಹೋಯಿತು, (ರಾ॥ ನಷ್ಟಪ್ರಾಯವಾಯಿತು) ॥೨॥ ಮೇ – ನನಗೆ, ಭಕ್ತಃ–ಭಕ್ತನಾಗಿಯೂ, ಸಖಾಚ – ಮಿತ್ರನಾಗಿಯೂ, ಅಸೀತಿ – ಆಗಿರುತ್ತೀಯೆಂಬದಾಗಿ, ಪುರಾತನಃ – ಹಳೇದಾದ, ಸಏವಾಯಂಯೋಗಃ – ಆಯೋಗವೇ, ಮಯಾ– ನನ್ನಿಂದ, ಅದ್ಯ – ಈಗ, ತೇ – ನಿನಗೆ, ಪ್ರೋಕ್ತಃ – ಹೇಳಲ್ಪಟ್ಟಿತು, ಏತತ್ – ಇದು, ರಹಸ್ಯಂ – ರಹಸ್ಯವಾಗಿಯೂ, ಉತ್ತಮಂಚ – ಶ್ರೇಷ್ಠವಾಗಿಯೂ ಇರುವುದು. ॥೩॥

( ರಾ॥ ಭಾ॥ ) ಎಲೈ ಅರ್ಜುನನೆ ! ಈಗ ಹೇಳಲ್ಪಟ್ಟ ಈ ಯೋಗವು ನಿನಗೇ ಯುದ್ಧದಲ್ಲಿ ಪ್ರೋತ್ಸಾಹ ಮಾತ್ರಕ್ಕಾಗಿಯೇ ನನ್ನಿಂದ ಹೇಳಲ್ಪಟ್ಟ ತೆಂದರಿಯಕೂಡದು. ಮನ್ವಂತರಾದಿಯಲ್ಲಿ ಸಮಸ್ತಜಗತ್ತಿನಲ್ಲಿರುವ ಅಧಿಕಾರಿಗಳಿಗೂ ಮೋಕ್ಷಪ್ರದಾನವಂ ಮಾಡಿ

ಅವರುಗಳನ್ನುದ್ಧರಿಸುವದಕ್ಕಾಗಿ ಮೋಕ್ಷಸಾಧನತ್ವೇನ ಈ ಯೋಗ ವನ್ನು ಸೂರ್ಯನಿಗೆ *ನಾನೇ ಹೇಳಿದೆನು. ಸೂರ್ಯನು ಮನುವಿಗೂ, ಮನು ವು ಇಕ್ಷ್ವಾಕುವಿಗೂ ಹೇಳಿದೆನೆಂಬಿದೇ ಮೊದಲಾದ ಸಂಪ್ರದಾಯ ಪ ರಂಪರಾಪ್ರಾಪ್ತವಾದ ಈ ಯೋಗವನ್ನು ವಿಸ್ತೀರ್ಣವಾಗಿಯೂ ಅಗಾ ಧವಾಗಿಯೂ ಇರುವ ಮನಸ್ಸುಳ್ಳವರಾಗಿಯೂ, ಅದರಲ್ಲಿ ಋಷಿಗಳಾಗಿ ರುವುದರಿಂದ ಅತೀಂದ್ರಿಯವಸ್ತುದರ್ಶನದಲ್ಲಿ ಯೋಗ್ಯರಾಗಿಯೂ ಇರುವ ಅಶ್ವಪತಿ, ಜನಕ, ಅಂಬರೀಷಾದಿಗಳಾದ, ರಾಜರ್ಷಿಗಳರಿಯು ವರು. ಇದು ಬಹುಕಾಲದಿಂದಲೂ ಕೇಳತಕ್ಕವರ ಬುದ್ಧಿಮಾಂದ್ಯ ದಿಂದ ನಷ್ಟಪ್ರಾಯವಾಯಿತು. ಸ್ವರೂಪದಿಂದಲೂ ಪ್ರಕಾರದಿಂ ದಲೂ ವ್ಯತ್ಯಾಸವಿಲ್ಲದೇ ಆ ಪುರಾತನವಾದ ಯೋಗವೇ, ಮೈತ್ರೀಭಾ ವದಿಂದಲೂ, ಅತ್ಯಂತ ಭಕ್ತಿಯಿಂದಲೂ, ನನ್ನನ್ನೇ ಶರಣಾಗತನಾಗಿ ರುವ ನಿನಗೆ ನನ್ನಿಂದ ಸವಿಸ್ತಾರವಾಗಿ ಹೇಳಲ್ಪಟ್ಟಿತು. ಯಾವಕಾರಣ ದಿಂದಿದು ವೇದಾಂತವಲ್ಲಿ ಹೇಳಲ್ಪಟ್ಟ ಪರಮ ರಹಸ್ಯವಾಗಿರುವುದೊ ಆ ಕಾರಣದಿಂದಲೇ ನನಗಿಂತಲೂ ಅನ್ಯನಾದ ಯಾವನಿಂದಲೂ ಈ ಯೋಗ ಸ್ವರೂಪವನ್ನರಿತು ಹೇಳುವುದೆಂಬುವುದಸಾಧ್ಯವು ‖೧‖೨‖೩‖

(ತಾ‖ ಚಂ‖) * ನಾನೇಹೇಳಿದನೆಂದು ಹೇಳುವುದರಿಂದ ಇಂಥಾ ಪರಮ ರಹಸ್ಯವಾದ ಅರ್ಥವನ್ನು ಮನ್ವಂತರಾದಿಯಲ್ಲಿಯೊ ಮಹಾಕ ಲ್ಪಾದಿಯಲ್ಲಿಯೊ, ಭಾರತ ಯುದ್ಧಾರಂಭದಲ್ಲಿಯೊ ನನಗಿಂತಲೂ ಇತರ ನಾದ ಯಾವನೂ ಯಥಾರೀತಿಯಾಗಿ ತಿಳಿದು ಹೇಳುವಂತವನು ದು ರ್ಲಭನೆಂಬ ಅರ್ಥವು ಸೂಚಿತವಾಗುವುದು. ಮತ್ತು ಪ್ರಸಂಗಸಂಗತಿ ಯಿಂದ ಅವಶ್ಯವಾಗಿ ತಿಳಿಯಬೇಕಾದ ತನ್ನ ಅವತಾರ ರಹಸ್ಯವನ್ನು ತಿಳಿಸುವುದಕ್ಕೋಸ್ಕರವಾಗಿ ತಾನು ಮನ್ವಾದಿಕಾಲದಲ್ಲಿರಲಿಲ್ಲವೆಂಬ ಶಂ ಕೆಯನ್ನು ಪರಿಹರಿಸುವದಕ್ಕೋಸ್ಕರವಾಗಿಯೂ, ಇಲ್ಲಿ ನಾನೇ ಎಂಬ ದಾಗಿ ಹೇಳಿದನೆಂದರಿಯಬೇಕು. ವೇದಾಂತ ಪ್ರಸಿದ್ಧವಾದ ಪರಮ ರಹಸ್ಯಭೂತವಾಗಿರುವ ಈ ಅರ್ಥವು ವೇದಸ್ವರೂಪನಾದ ಸೂರ್ಯನಿಗೆ ಹೇಳಲ್ಪಟ್ಟಿತಲ್ಲದೇ ಬೌದ್ಧಾದ್ಯಾಗಮ ಪ್ರಸಿದ್ಧಗಳಾಗಿರುವಲೋಕವಂ ಚಕಗಳಾದ ಅರ್ಥಗಳು ಅಸುರಾದಿಗಳಿಗೆ ಹೇಳಲ್ಪಡಲಿಲ್ಲವು. (ಎಂ ಬಿದೇಮೊದಲಾದ ಸಂಪ್ರದಾಯ ಪಾರಿಶುದ್ಧ್ಯವನ್ನು ತೋರಿಸುವ

ಶ್ರೀಮತ್ತಾತ್ಪರ್ಯಚಂದ್ರಿಕಾದರ್ಶಿತ ತಾತ್ಪರ್ಯ ವಿಶೇಷಗಳನ್ನು ಸಹೃಯರರಿಯುವರು. ಗ್ರಂಥವಿಸ್ತರಭಯದಿಂದಿಲ್ಲಿ ವಿಸ್ತಾರವಾಗಿ ಬರೆಯಲಿಲ್ಲವು.) ... ... ||೩||

ಅರ್ಜುನ ಉವಾಚ॥ ಅಪರಂ (ರಾ॥ ಅವರಂ) ಭವತೋ
ಜನ್ಮಪರಂಜನ್ಮವಿವಸ್ವತಃ | ಕಥಮೇತದ್ವಿಜಾನೀಯಾಂ
ತ್ವಮಾದೌಪ್ರೋಕ್ತವಾನಿತಿ ॥ ... ||೪||

ಪ| ಅರ್ಜುನಃ – ಉವಾಚ|| ಅಪರಂ– ಭವತಃ – ಜನ್ಮ – ಪರಂ – ಜನ್ಮ – ವಿವಸ್ವತಃ | ಕಥಂ – ಏತತ್ – ವಿಜಾನೀಯಾಂ – ತ್ವಂ – ಆದೌ – ಪ್ರೋಕ್ತವಾನ್–ಇತಿ ||

ಅ|| ಅರ್ಜುನನು ಹೇಳಿದನು. ಭವತೋಜನ್ಮ – ನಿನ್ನ ಅವತಾರವು, ಅಪರಂ – ಈಗುಂಟಾದದ್ದು, (ಅವರಂ ಎಂಬದಾಗಿ ಶ್ರೀರಾಮಾನುಜ ಪಾಠವು) ವಿವಸ್ವತಃ – ಸೂರ್ಯನ, ಜನ್ಮ –ಉತ್ಪತ್ತಿಯು, ಪರಂ – ಪೂರ್ವದಲ್ಲಾದದ್ದು, ತ್ವಂ – ನೀನು, ಆದೌ – ಆದಿಕಾಲದಲ್ಲಿ, ಪ್ರೋಕ್ತವಾನಿತಿ – ಹೇಳಿದನೆಂಬುವುದನ್ನು, ಕಥಂ- ಹೇಗೆ – ವಿಜಾನೀಯಾಂ– ತಿಳದುಕೊಳ್ಳುವೆನು. ... ... ||೪||

(ರಾ|| ಭಾ||) ಈ ಪ್ರಸ್ತಾಪದಲ್ಲಿ ಶ್ರೀಭಗವದವತಾರ ಮಹಾತ್ಮ್ಯವನ್ನರಿಯಲಪೇಕ್ಷಿಸಿ ಅರ್ಜುನನುಪ್ರಶ್ನೆಮಾಡುತ್ತಾನೆ. ಎಲೈ ಶ್ರೀಕೃಷ್ಣನೇ!ಕಾಲಸಂಖ್ಯೆಯನ್ನು ನೋಡಿದರೆ ನಾನು ಹುಟ್ಟಿರುವಕಾಲದಲ್ಲಿಯೇ ನೀನೂ ಅವತಾರಮಾಡಿರುವಂತೆ ತಿಳಿಯಬರುತ್ತದೆ. ವಿವಸ್ವಾನೆಂದರೆ ಸೂರ್ಯನು, ಅವನು ಉತ್ಪನ್ನನಾಗಿ ಇಪ್ಪತ್ತೆಂಟು ಚತುರ್ಯುಗವಾಗಿರುವಂತೇ ಕಾಣುತ್ತದೆ. ಹೀಗಿರುವಲ್ಲಿ ಆದಿಯಲ್ಲಿ ನೀನು ಸೂರ್ಯನಿಗೆಹೇಳಿದೆನೆಂದು ಹೇಳುವುದುಹೇಗೆ? ಇದು ನಂಬತಕ್ಕದ್ದಾಗಿ ತೋರುವುದಿಲ್ಲವು. ಆದರೇಇಲ್ಲಿ“ಮಹನೀಯರು ಜನ್ಮಾಂತರ ವೃತ್ತಾಂತವನ್ನರಿತು ಹೇಳುವುದು ಸಹಜವಾಗಿರುವುದರಿಂದಲೂಶ್ರೀಕೃಷ್ಣನು ಪರಮಪುರುಷನೆಂಬದಾಗಿಯೂ, ಸರ್ವೇಶ್ವರನೆಂಬದಾಗಿಯೂ, ಅರ್ಜುನನು ತಿಳಿದಿರುವುದರಿಂದಲೂ, ಆದುದರಿಂದಲೇ “ಪರಂಬ್ರಹ್ಮ ಪರಂಧಾಮ ಪವಿತ್ರಂ ಪರಮಂಭವಾನ್” ಇತ್ಯಾದಿ ವಾಕ್ಯಗಳನ್ನು ಮುಂದೆ ಹೇಳುವುದರಿಂದಲೂ, “ಕೃಷ್ಣಏವಹಿಲೋಕಾನಾಂ” (ಶ್ರೀಕೃಷ್ಣನೇ ಸಮಸ್ತಲೋಕಗಳಿಗೂ ಸೃಷ್ಟಿಸ್ಥಿತಿ ರಕ್ಷಣಾದಿಗಳನ್ನು ಮಾಡ

ತಕ್ಕವನು ) ಎಂಬಿದೇ ಮೊದಲಾದ ವಾಕ್ಯಗಳನ್ನು ಭೀಷ್ಮಾಚಾರ್ಯರೇ ಮೊದಲಾದವರು ರಾಜಸೂಯ ಯಾಗಾದಿಗಳಲ್ಲಿ ಹೇಳಿರುವುದಂಕೇಳಿ ರುವನಾಗಿರುವುದರಿಂದಲೂ, ಶ್ರೀಕೃಷ್ಣವಾಕ್ಯದಲ್ಲಿ ಕಾಲಭೇದಪ್ರ ಯುಕ್ತವಾದ ಸಂದೇಹವು ಅರ್ಜುನನಿಗಿಲ್ಲವಾದರೂ ತಿಳಿಯದವನಂತೆ ಯೀತಕ್ಕೆ ಪ್ರಶ್ನೆಮಾಡಿದನೆಂದರೆ ಸಮಸ್ತವಾದ ಹೇಯಗುಣಗಳಿಗೆ ವಿ ರೋಧಿಯಾದ ಸಮಸ್ತಕಲ್ಯಾಣ ಗುಣಗಳಿಗೆ ಮುಖ್ಯಸ್ಥಾನನಾಗಿಯೂ ಸರ್ವೇಶ್ವರನಾಗಿಯೂ, ಸತ್ಯಸಂಕಲ್ಪನಾಗಿಯೂ,ಸಮಸ್ತೇಷ್ಟವನ್ನು ಹೊಂದಿರುವಂತವನಾಗಿಯೂ ಇರುವ ಪರಮಾತ್ಮನಿಗೆ ದೇವ ಮನುಷ್ಯಾ ದಿಜಾತಿಗಳಿಗೆ ಸಮಾನವಾದ ಈ ಜನ್ಮವು ಇಂದ್ರಜಾಲಾದಿ ಮಾಯೆ ಯಂತೆ ಮಿಥ್ಯಾರೂಪವೋ ? ಅಥವಾ ಸತ್ಯವೋ ? ಸತ್ಯವೆಂಬುವ ಪಕ್ಷ ದಲ್ಲಿ ತನ್ನ ಈಶ್ವರ ಸ್ವಭಾವವನ್ನು ಬಿಟ್ಟು ಬೇರೇವಿಧವಾಗಿ ಅವತರಿಸಿ ರುವನೋ?ಪ್ರಾಕೃತಭೂತಗಳಿಂದ ರಚಿತವಾದ ದೇಹದಂತೇ ಕಾಣುವ ಈ ದೇಹವುಸತ್ವಾದಿ ಗುಣತ್ರಯ ಪ್ರಚುರವೋ?ಅಥವಾ ಅಪ್ರಾಕೃತವೋ? ಮತ್ತು ಇಂಥಾ ಅವತಾರಕ್ಕೆ ಕಾರಣವು ತನ್ನ ಸಂಕಲ್ಪಮಾತ್ರವೋ ? ಅಥವಾ ತನ್ನ ಇಚ್ಛೆಯಿಂದ ಪರಿಗ್ರಹಿಸಲ್ಪಟ್ಟ ಪುಣ್ಯಪಾಪವೋ ? ಮತ್ತು ಇಂಥಾ ಅವತಾರೋಚಿತವಾದಕಾಲವು ಪುಣ್ಯಪಾಪ ಪರಿಪಾಕ ಕಾಲವೋ ? ಅಥವಾ ಧರ್ಮಕ್ಕೆ ಕೊರತೆ ಬಂದದ್ದೇ ಮೊದಲಾದ ಕಾ ಲವೋ ? ಮತ್ತು ಇಂತಹ ಅವತಾರಕ್ಕೆ ಪ್ರಯೋಜನವು ಸುಖದುಃಖ ಗಳನ್ನನುಭವಿಸುವುದೋ ? ಅಥವಾ ಸಾಧುಜನಗಳಂ ಸಂರಕ್ಷಿಸುವು ದೊ ? ಎಂಬದಾಗಿ ಪ್ರಶ್ನೆಯಂ ಮಾಡಿ ಶ್ರೀಭಗವದವತಾರ ರಹಸ್ಯ ವನ್ನು ತಿಳಿಯುವುದಕ್ಕೆಂಬದಾಗಿ ತಿಳಿಯಬರುತ್ತದೆ. ॥೪॥

ಮೂ॥ ಶ್ರೀಭಗವಾನುವಾಚ॥ ಬಹೂನಿ ಮೇವ್ಯತೀತಾ
ನಿ ಜನ್ಮಾನಿ ತವಚಾರ್ಜುನ । ತಾನ್ಯಹಂ ವೇದಸರ್ವಾಣಿ
ನತ್ವಂವೇತ್ಥ ಪರಂತಪ ॥ ... ॥೫॥

ಪ॥ ಶ್ರೀಭಗವಾನ್ - ಉವಾಚ ॥ ಬಹೂನಿ - ಮೇ- ವ್ಯತೀತಾನಿ - ಜನ್ಮಾನಿ - ತವ- ಚ ಅರ್ಜುನ। ತಾನಿ-ಅಹಂ-ವೇದ-ಸರ್ವಾಣಿ- ನ - ತ್ವಂ-ವೇತ್ಥ - ಪರಂತಪ॥

ಅ॥ ಶ್ರೀಭಗವಂತನು ಹೇಳಿದನು॥ ಹೇ ಅರ್ಜುನ - ಎಲೈ ಅರ್ಜುನನೆ, ಮೆ - ನನಗೂ,

ತವಚ - ನಿನಗೂ, ಬಹೂನಿಜನ್ಮಾನಿ - ಅನಂತಗಳಾದ ಜನ್ಮಗಳು, ವ್ಯತೀತಾನಿ - ಕಳೆದುಹೋದವು, ತಾನಿಸರ್ವಾಣಿ - ಅವೆಲ್ಲವನ್ನು, ಅಹಂ - ನಾನು, ವೇದ - ತಿಳಿಯುವೆನು, ಹೇಪರಂತಪ - ಎಲೈ ಶತ್ರುಸಂತಾಪಕನಾದ ಅರ್ಜುನನೆ, ತ್ವಂ - ನೀನು, ನವೇತ್ಥ - ತಿಳಿಯಲಾರೆ. ... ... ||೫||

(ಶಂ|| ಭಾ||) ಭಗವಂತನಾದ ಶ್ರೀವಾಸುದೇವನು ಈಶ್ವರನಲ್ಲವೆಂಬದಾಗಿಯೂ, ಸರ್ವಜ್ಞನಲ್ಲವೆಂಬದಾಗಿಯೂ ಮೂರ್ಖರಾದವರಿಗೆ ಯಾವ ಸಂಶಯವುಂಟಾಗುವುದೋ ಅದನ್ನು ಪರಿಹರಿಸುವುದಕ್ಕೋಸ್ಕರವಾಗಿ ಈ ಶ್ಲೋಕವನ್ನು ಹೇಳುತ್ತಾನೆ. ಇದಕ್ಕಾಗಿಯೇ ಈ ಪ್ರಶ್ನೆವು ಉಂಟಾಯಿತೆಂದರಿಯಬೇಕು. ಎಲೈ ಅರ್ಜುನನೆ ! ನನಗನೇಕ ಜನ್ಮಗಳು ಕಳೆದವು. ನಿನಗೂ ಅನೇಕ ಜನ್ಮಗಳು ಕಳೆದವು. ಆದರೇ ಕರ್ಮಬದ್ಧನಾಗಿ ಧರ್ಮಾಧರ್ಮಗಳಿಂದ ಆವೃತವಾದ ಜ್ಞಾನವುಳ್ಳವನಾದುದರಿಂದ ನೀನವುಗಳನ್ನರಿಯಲಾರೆ. ನಿತ್ಯ (ಮೂರುಕಾಲಗಳಲ್ಲಿಯೂ ಏಕರೂಪವಾಗಿರುವುದಾಗಿಯೂ) ಶುದ್ಧ (ತ್ರಿಗುಣಾತೀತವಾಗಿಯೂ) ಬುದ್ಧ (ಕೇವಲಜ್ಞಾನಸ್ವರೂಪವಾಗಿಯೂ) ಮುಕ್ತ (ಸಂಸಾರಕಾರಣವಾದಪ್ರಕೃತಿಸಂಬಂಧರಹಿತವಾಗಿಯೂ) ಸತ್ಯ (ಸಹಜವಾದದ್ದಾಗಿಯೂಇರುವ ) ಸ್ವಭಾವವುಳ್ಳವನಾಗಿರುವದರಿಂದ ಸ್ವೇಚ್ಛೆಯಿಂದ ಪರಿಗ್ರಹಿಸಲ್ಪಟ್ಟ ಜನ್ಮಗಳು (ಅವತಾರಗಳು) ಳ್ಳನಾನು ಆವರಣವಿಲ್ಲದ ಜ್ಞಾನದೀಪದ ದೆಸೆಯಿಂದ ಅವುಗಳೆಲ್ಲವನ್ನು ಯಾವಾಗಲೂ ಚನ್ನಾಗಿ ತಿಳಿಯುವೆನು. ... ||೫||

(ರಾ|| ಭಾ||) ಇಲ್ಲಿ "ಬಹೂನಿಮೇವ್ಯತೀತಾನಿ" ಎಂಬದಾಗಿ ಹೇಳಿರುವುದರಿಂದಲೂ, ಇಲ್ಲಿ ನಿನಗೂ ಎಂಬದಾಗಿ ಅರ್ಜುನನ ಜನ್ಮಗಳನ್ನು ದೃಷ್ಟಾಂತವಾಗಿ ಹೇಳಿರುವುದರಿಂದಲೂ ಜೀವಾತ್ಮನಾದ ನಿನ್ನ ಜನ್ಮಗಳು ಹೇಗಾದರೆ ಸತ್ಯಗಳೋ, ಅದೇ ಪ್ರಕಾರವಾಗಿ ಪರಮಾತ್ಮನಾದ ನನ್ನ ಅವತಾರಗಳೂಸತ್ಯಗಳು. ||೫||

(ಗೀ|| ವಿ||) ಇಲ್ಲಿ ಅರ್ಜುನನ ಪ್ರಶ್ನಾಭಿಪ್ರಾಯವನ್ನರಿತ ಶ್ರೀ ಭಗವಂತನು ತನ್ನ ಜನ್ಮಗಳನ್ನು ಕುರಿತಮಾತ್ರವೇ ಪ್ರತ್ಯುತ್ತರವಂ ಕೊಡಬೇಕಾಗಿದ್ದರೂ ಅರ್ಜುನನ ಜನ್ಮವಂಕೂಡ ಹೇಳಿ ನಾನರಿಯುವೆನು, ನೀನರಿಯಲಾರೆ, ಎಂಬದಾಗಿ ತನಗೆ ಸರ್ವಜ್ಞತ್ವವನ್ನು ಅ

ರ್ಜುನನಿಗೆ ಅಜ್ಞತೆಯನ್ನು ತೋರಿಸಿ ತನ್ಮೂಲವಾಗಿ ಜೀವಪರಮಾತ್ಮರಿಬ್ಬರಿಗೂ ಪರಸ್ಪರ ಭೇದವನ್ನು ಪ್ರದರ್ಶನಮಾಡಲೀವೃತ್ತ ರವನ್ನರ್ಜುನನನ್ನುದ್ದೇಶಿಸಿ ಹೇಳಿದನೆಂದರಿಯಬೇಕು. ||೫||

ಮೂ|| ಅಜೋಽಪಿಸನ್ನವ್ಯಯಾತ್ಮಾ ಭೂತಾನಾಮೀಶ್ವ
ರೋಽಪಿಸರ್ | ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾ
ಮ್ಯಾತ್ಮಮಾಯಯಾ | ... ||೬||

ಪ|| ಅಜಃ - ಅಪಿ - ಸರ್ - ಅವ್ಯಯಾತ್ಮಾ - ಭೂತಾನಾಂ - ಈಶ್ವರಃ- ಅಪಿ- ಸರ್| ಪ್ರಕೃತಿಂ - ಸ್ವಾಂ - ಅಧಿಷ್ಠಾಯ - ಸಂಭವಾಮಿ - ಆತ್ಮಮಾಯಯಾ ||

ಅ|| ಅಜೋಽಪಿಸರ್ - ಉತ್ಪತ್ತಿಯಿಲ್ಲದವನಾದರೂ, ಅವ್ಯಯಾತ್ಮಾಪಿಸರ್ - ನಾಶರಹಿತಸ್ವಭಾವವುಳ್ಳವನಾದರೂ, (ಗೀ|| ವಿ||) ನಾಶರಹಿತವಾದ ಸ್ವಭಾವವನ್ನು ಮತ್ತು ದೇಹವನ್ನುಳ್ಳವನಾಗದರೂ, ಭೂತಾನಾಂ - ಪ್ರಾಣಿಗಳಿಗೆ, ಈಶ್ವರೋಽಪಿಸರ್ - ಈಶ್ವರನಾಗಿದ್ದರೂ, ಸ್ವಾಂ-ತನ್ನದಾದ, ಪ್ರಕೃತಿಂ - (ಶಂ||) ತ್ರಿಗುಣಾತ್ಮಕವಾದ ಮಾಯೆಯನ್ನು, (ರಾ) ಸ್ವಾಂಪ್ರಕೃತಿಮಧಿಷ್ಠಾಯ - ನನ್ನಸ್ವೀಯವಾದ ಸ್ವರೂಪದೊಡನೆ, (ಗೀ|| ವಿ||) ಸ್ವಾಂಪ್ರಕೃತಿಂ - ನನ್ನಿಂದುಂಟಾದ ವಾಸುದೇವಾದಿದೇವತೆಗಳನ್ನು, ಅಧಿಷ್ಠಾಯ - ಪ್ರವೇಶಿಸಿ, (ಅಥವಾ ಹೊಂದಿ) ಆತ್ಮಮಾಯಯಾ - ( ಶಂ ) ನನಗೆ ಸ್ವಾಧೀನವಾಗಿಯೂ, ತ್ರಿಗುಣಗಳೊಡನೆ ಕೂಡಿಯೂ ಇರುವ ಮಾಯೆಯಿಂದ, ( ರಾ ) ಸಂಕಲ್ಪಾತ್ಮಕವಾದ ಜ್ಞಾನವೆಂಬ ಸ್ವೇಚ್ಛೆಯಿಂದ, (ಗೀ|| ವಿ||) ಸ್ವೇಚೆಯಿಂದ, (ಅಥವಾ) ತನ್ನ ಜ್ಞಾನದಿಂದ, ಸಂಭವಾಮಿ (ಶಂ) ದೇಹವುಳ್ಳವನಂತೆ ಆಗುತ್ತೇನೆ, (ರಾ) ದೇವಮನುಷ್ಯಾದಿ ರೂಪವುಳ್ಳ ಅಪ್ರಾಕೃತ ಶರೀರದೊಡನೇ ಅವತರಿಸುವೆನು, (ಗೀ|| ವಿ||) ಉಂಟಾದವನಂತೆ ಕಾಣುತ್ತೇನೆ. ... ... ||೬||

(ರಾ|| ಭಾ||) ತನ್ನ ಅವತಾರಪ್ರಕಾರವನ್ನು ಮತ್ತು ಅವತಾರದೇಹದ ನಿಜ್ಜ್ಯಯಸ್ಥಿತಿಯನ್ನು, ಮತ್ತು ತನ್ನ ಅವತಾರಕ್ಕೆ ಕಾರಣವನ್ನೂ ಹೇಳುತ್ತಾನೆ. ಹುಟ್ಟುವುದಿಲ್ಲದಿರುವಿಕೆಯು, ನಾಶರಹಿತನಾಗಿರುವಿಕೆಯು, ಸರ್ವೇಶ್ವರನಾಗಿರುವಿಕೆಯು, ಎಂಬಿದೇ ಮೊದಲಾದ ಪರಮೇಶ್ವರ ಸ್ವಭಾವಗಳಲ್ಲಿ ಯಾವದೊಂದನ್ನು ಬಿಡದೇ ಸರ್ವ ವೇದಾಂತಗಳಲ್ಲಿಯೂ ಪ್ರಸಿದ್ಧವಾದ ನಿರತಿಯ ಪ್ರಕಾಶರೂಪವಾಗಿರುವ ನನ್ನ ಸ್ವರೂಪದೊಡನೆ ಸ್ವೇಚ್ಛೆಯಿಂದವತಾರವಂ ಮಾಡುವೆನು. ಅಂದರೆ ಸಮಸ್ತ ಕಲ್ಯಾಣ ಗುಣಾತ್ಮಕನಾಗಿರುವಿಕೆಯೆಂಬ ಸರ್ವೇಶ್ವರ ಸ್ವಭಾ

ವವನ್ನು ಬಿಡದೇ ನನ್ನ ಸ್ವರೂಪವನ್ನೇ ನನ್ನ ಸಂಕಲ್ಪದಿಂದ ದೇವಾದಿರೂಪವಾಗಿ ಮಾಡಿಕೊಂಡವತರಿಸುವೆನೆಂದರ್ಥವು. ಈ ಅರ್ಥವನ್ನು "ಉತ್ಪತ್ತಿಯಿಲ್ಲದವನಾದರೂ ಬಹುಪ್ರಕಾರವಾಗಿ ಅವತಾರಗಳಂ ಮಾಡುವನೆಂಬ" ಅರ್ಥವುಳ್ಳ ಶ್ರುತಿಯೂ ಹೇಳುತ್ತದೆ.

(ತಾ॥ ಚಂ॥) ಈ ಶ್ಲೋಕದಲ್ಲಿರುವ ಅಜ- ಅವ್ಯಯ ಶಬ್ದಗಳಿಂದ ಪ್ರಕೃತಿಪುರುಷರಿಗೆ ಸ್ವರೂಪದಿಂದಲೂ ಧರ್ಮದಿಂದಲೂ ಪ್ರಾಪ್ತವಾಗುವ ವಿಕಾರಗಳಿಲ್ಲವೆಂಬುವುದು ಸೂಚಿತವಾಗುವುದು. ಅಥವಾ ಕರ್ಮಕೃತವಾದ ಜನ್ಮ ಮರಣಗಳಿಲ್ಲವೆಂಬವುದನ್ನೂ ಸೂಚಿಸುವುದು. ಆದರಿಂದಪರಮಾತ್ಮನಿಗೆಹೇಯಪ್ರತ್ಯನೀಕತ್ವವು ಹೇಳಲ್ಪಟ್ಟಿತು. ಭೂತಾನಾಮೀಶ್ವರೋಽಪಿಸನ್ ಎಂಬುವುದರಿಂದ ಕಲ್ಯಾಣಗುಣಗಳಿಗಸ್ಥಾನಭೂತನಾಗಿರುವಿಕೆಯಿಂದ ಬಿಡಲ್ಪಡದೇ ಇರುವುದು ತೋರುವುದು. (ಅಥವಾ)ಅಜಶಬ್ದದಿಂದ ಸ್ವರೂಪದಿಂದಲೂ ಶರೀರಮೂಲವಾಗಿಯೂ ಜನ್ಮದಿಂದಕೂಡಿರುವ ಅಚೇತನಗಳೇನು ಕ್ಷೇತ್ರಜ್ಞರೇನು,ಅವುಗಳಿಗಿಂತಲೂವ್ಯಾವೃತ್ತಿ (ಭೇದವು-ಅಥವಾವೈಲಕ್ಷಣ್ಯವು) ತೋರುವುದು. ಅವ್ಯಯಾತ್ಮಾ ಎಂಬುವಸ್ಥಾನದಲ್ಲಿ ಆತ್ಮಶಬ್ದವು ಸ್ವಭಾವಪರವಾಗಿರುವುದರಿಂದ ನಿಷೇಧವಾಚಕವಾದ(ಅ) ಎಂಬುವ ನಞಶಬ್ದಕ್ಕೆ ಅತ್ಯಂತವಾಗಿಲ್ಲವೆಂಬುವ ಅರ್ಥವಿರುವುದರಿಂದ ಕೆಲವು ಕಾಲದಲ್ಲಿ ಜ್ಞಾನಾದಿಸಂಕೋಚವುಳ್ಳ ಮುಕ್ತರಿಗಿಂತಲೂ ವೈಲಕ್ಷಣ್ಯವು ತೋರುವುದು. ಮುಕ್ತರಿಗೆ ಕೆಲವು ಕಾಲದಲ್ಲಿಯಾದರೂ ಜ್ಞಾನಾದಿಸಂಕೋಚ ವುಂಟಾಗುವುದು. ಪರಮಾತ್ಮನಿಗೇ ಯಾವಕಾಲದಲ್ಲಿಯೂ ಜ್ಞಾನಾದಿ ಸಂಕೋಚವಿಲ್ಲದೆಇರುವುದರಿಂದ ಮುಕ್ತರಿಗಿಂತಲೂ ಪರಮಾತ್ಮನು ವಿಲಕ್ಷಣನೆಂದು ತಾತ್ಪರ್ಯವು. ಈಶ್ವರಶಬ್ದದಿಂದ ನಿತ್ಯವು ಸಂಕುಚಿತವಾಗದಜ್ಞಾನವುಳ್ಳ ನಿತ್ಯಸೂರಿಗಳಿಗಿಂತಲೂ ವೈಲಕ್ಷಣ್ಯವೇರ್ಪಡುವುದು. ಅವರುಗಳು ನಿತ್ಯಾಸಂಕುಚಿತಜ್ಞಾನವುಳ್ಳವರಾದರೂ ಈಶ್ವರತ್ವವು ಅವರಿಗಿಲ್ಲವಾದುದರಿಂದ ಅವರಿಗಿಂತಲೂ ವೈಲಕ್ಷಣ್ಯವು ಪರಮಾತ್ಮನಿಗುಂಟಾಯಿತು. ಪರಮೇಶ್ವರ ಸ್ವಭಾವವನ್ನು ಬಿಡದೇನೇ ಅವತರಿಸುವುನೆಂಬದಾಗಿಯೂ, ಅವತಾರದೇಹವು ಅಪ್ರಾಕೃತವಾದದ್ದೆಂತಲೂ, ಇಂತಹ ಅವತಾರಕ್ಕೆ ಕಾರಣವು ಪರಮಾತ್ಮನ ಇಚ್ಛೆಯೇ ಯೆಂತಲೂ,ಅರ್ಜುನನ ಮೂರು

ಪ್ರಶ್ನೆಗಳಿಗೆ ಉತ್ತರವೀ ಶ್ಲೋಕದಿಂದ ಹೇಳಲ್ಪಟ್ಟಿತು. ||೬||

ಮೂ || ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ | ಅಭ್ಯುತ್ಥಾನ ಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ || ... ... ||೭||

ಪ || ಯದಾ- ಯದಾ- ಹಿ- ಧರ್ಮಸ್ಯ- ಗ್ಲಾನಿಃ- ಭವತಿ- ಭಾರತ | ಅಭ್ಯುತ್ಥಾನಂ- ಅಧರ್ಮಸ್ಯ- ತದಾ- ಆತ್ಮಾನಂ-ಸೃಜಾಮಿ- ಅಹಂ || ... ... ||೭||

ಅ|| ಭಾರತ- ಎಲೈ ಅರ್ಜುನನೇ! ಯದಾಯದಾಹಿ- ಯಾವಯಾವ ಕಾಲಗಳಲ್ಲಿ ಯಾದರೆ, ಧರ್ಮಸ್ಯ- ಧರ್ಮಕ್ಕೆ, ಗ್ಲಾನಿಃ- ಕೊರತೆಯು, ಅಧರ್ಮಸ್ಯ- ಅಧರ್ಮಕ್ಕೆ, ಅಭ್ಯುತ್ಥಾನಂ- ಅಭಿವೃದ್ಧಿಯೂ, ಭವತಿ - ಆಗುವದೊ; ತದಾ- ಆವಾಗ, ಆತ್ಮಾನಂ - ನನ್ನನ್ನು, ಅಹಂಸೃಜಾಮಿ- ನಾನವತರಿಸುವಂತೆ ಮಾಡುವೆನು. ... ||೭||

(ರಾ|| ಭಾ||) ಭಗವದವತಾರಕಾಲ ವ್ಯಾವದೆಂಬ ಪ್ರಶ್ನಕ್ಕೆ ಉತ್ತರವಾಗಿ, ಭಗವದವತಾರ ಕಾಲವನ್ನು ಹೇಳುತ್ತಾನೆ.—ನಾನವತಾರವಂ ಮಾಡುವುದಕ್ಕೆ ಕಾಲ ನಿಯಮವಿಲ್ಲವು. ವೇದೋಕ್ತವಾಗಿರುವ (ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರ) ರೆಂಬ ನಾಲ್ಕುವರ್ಣಗಳೇನು(ಬ್ರಹ್ಮಚಾರಿ ಗೃಹಸ್ಥ, ವಾನಪ್ರಸ್ಥ, ಯತ್ಯಾಶ್ರಮಗಳೆಂಬ) ನಾಲ್ಕು ಆಶ್ರಮಗಳೇನು, ಈ ವ್ಯವಸ್ಥೆಯಿಂದ ಮಾಡತಕ್ಕ ಧರ್ಮಕ್ಕೆ ಯಾವಾಗಲಾದರೇ ಕೊರತೆಯುಂಟಾಗುವದೋ ; ಮತ್ತು ಯಾವ ಯಾವ ಕಾಲದಲ್ಲಿ ವಿಪರೀತವಾದ ಅಧರ್ಮವು ಏಳಿಗೆಯನ್ನೈದುವುದೊ, ಆವಾಗ ನಾನೇ ನನ್ನ ಸಂಕಲ್ಪಾತ್ಮಕ ಜ್ಞಾನದಿಂದ ಮುಂದೆ ಹೇಳಿರುವ ಪ್ರಕಾರವಾಗಿ ಅವತಾರವಂ ಮಾಡುವೆನು. ... ... ||೭||

ಮೂ || ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಂ | ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ || ... ||೮||

ಪ|| ಪರಿತ್ರಾಣಾಯ- ಸಾಧೂನಾಂ- ವಿನಾಶಾಯ- ಚ- ದುಷ್ಕೃತಾಂ | ಧರ್ಮಸಂಸ್ಥಾಪನಾರ್ಥಾಯ- ಸಂಭವಾಮಿ ಯುಗೇ- ಯುಗೇ || ... ... ||೮||

ಅ|| ಸಾಧೂನಾಂ- ಸಜ್ಜನರ, ಪರಿತ್ರಾಣಾಯ- ಸಂರಕ್ಷಣೆಗೋಸ್ಕರವಾಗಿಯೂ, ದುಷ್ಕೃತಾಂ- ಪಾಪಕರ್ಮಗಳಂ ಮಾಡುವ ದುಷ್ಟಜನರ, ವಿನಾಶಾಯಚ - ಸಂಹಾರಕ್ಕೋಸ್ಕರವಾಗಿಯೂ, ಧರ್ಮಸಂಸ್ಥಾಪನಾರ್ಥಾಯ - ಧರ್ಮವನ್ನು ಸಂಸ್ಥಾಪನೆ ಮಾಡು

ವುದಕ್ಕೋಸ್ಕರವಾಗಿಯೂ, ಯುಗೆಯುಗೆ- ಪ್ರತಿಯುಗದಲ್ಲಿಯೂ, (ಶ್ರೀ) ಆ ಆಕಾಲದಲ್ಲಿ, ಸಂಭವಾಮಿ- ಅವತಾರವಂ ಮಾಡುವೆನು.|| ... ... ||೮||

(ರಾ || ಭಾ ||) ಈ ಶ್ಲೋಕದಿಂದ ಅವತಾರ ಪ್ರಯೋಜನವಂ ಹೇಳುತ್ತಾನೆ—ಸಾಧುಜನರನ್ನು ಸಂರಕ್ಷಿಸುವುದಕ್ಕಾಗಿಯೂ, ದುಷ್ಕರ್ಮಗಳಂಮಾಡುವ ಪಾಪಿಗಳನ್ನು ಶಿಕ್ಷಿಸುವುದಕ್ಕಾಗಿಯೂ ನನ್ನ ಆರಾಧನರೂಪವಾದ ವೈದಿಕಧರ್ಮವು ಲುಪ್ತವಾದಕಾಲದಲ್ಲಿ ಆರಾಧ್ಯವಾದ ನನ್ನ ಸ್ವರೂಪವನ್ನವರುಗಳಿಗೆ ತೋರಿಸಿ ಕ್ಷೀಣವಾದ ವೈದಿಕ ಧರ್ಮಗಳನ್ನು ಸ್ಥಾಪಿಸುವುದಕ್ಕಾಗಿಯೂ, ಪ್ರತಿಯುಗದಲ್ಲಿಯೂ ದೇವಮನುಷ್ಯಾದಿರೂಪದಿಂದ ಅವತಾರವಂ ಮಾಡುವೆನು. ಅವತಾರಕ್ಕೆಕೃತ ತ್ರೇತಾದಿಯುಗ ವಿಶೇಷನಿಯಮವಿಲ್ಲವೆಂದು ತಾತ್ಪರ್ಯವು. ಮೇಲೆ ಹೇಳಿರುವ ರಕ್ಷಣೀಯರಾದ ಸಾಧುಜನರು ಯಾರೆಂದರೆ! ವೇದೋಕ್ತವಾದ ತಮ್ಮ ತಮ್ಮಗಳ ವರ್ಣಾಶ್ರಮಗಳಿಗುಚಿತವಾಗಿರುವ ಧರ್ಮಗಳನ್ನನುಷ್ಠಿಸುವಂತವರಾದ ವೈಷ್ಣವಾಗ್ರೇಸರರು. ಅವರು ನನ್ನನ್ನಾಶ್ರಯಿಸಲುಜ್ಜಗಿಸಿ ನನ್ನನಾಮರೂಪ ಕರ್ಮಗಳು ವಾಕ್ಕಿಗೂ ಮನಸ್ಸಿಗೂ ಅಗೋಚರವಾಗಿರುವುದರಿಂದ ನನ್ನನ್ನು ನೋಡದಿದ್ದರೆ ತಮ್ಮಗಳ ಆತ್ಮಧಾರಣಪೋಷಣಾದಿಗಳನ್ನು ಹೊಂದದೇ ಇಂತಹ ಒಂದು ಕ್ಷಣಕಾಲವನ್ನು ಕೂಡ ಅನೇಕ ಕಲ್ಪ ಸಹಸ್ರಕಾಲದಂತೆ ನೆನೆಸುತಾ ಅತ್ಯಂತ ಶೈಥಿಲ್ಯವನ್ನು ಹೊಂದಿರುವ ಸಮಸ್ತ ದೇಹವುಳ್ಳವರಾಗುವರೆಂದು ನಾನು ನೆನಸಿ ನನ್ನ ಸ್ವರೂಪವೇನು, ನನ್ನ ದಿವ್ಯಲೀಲೆಗಳೇನು, ಅವುಗಳನ್ನು ನೋಡುವಿಕೆಯು, ನನ್ನೊಡನೆ ಮಾತನಾಡುವಿಕೆಯು, ಅವುಗಳಂ ಕೊಟ್ಟು ಅವರನ್ನು ಸಂರಕ್ಷಿಸುವದಕ್ಕಾಗಿ ನಾನವತಾರವಂ ಮಾಡುವೆನೆಂದು ತಾತ್ಪರ್ಯವು. ... ... ... ||೮||

ಮೂ || ಜನ್ಮಕರ್ಮಚ ಮೇದಿವ್ಯ ಮೇವಂ ಯೋವೇತ್ತಿತತ್ವತಃ | ತ್ಯಕ್ತ್ವಾದೇಹಂ ಪುನರ್ಜನ್ಮನೈತಿ ಮಾಮೇತಿಸೋಽರ್ಜುನ || ... ||೯||

ಪ|| ಜನ್ಮ-ಕರ್ಮ- ಚ-ಮೇ- ದಿವ್ಯಂ- ಏವಂ- ಯಃ- ವೇತ್ತಿ- ತತ್ವತಃ | ತ್ಯಕ್ತ್ವಾ-ದೇಹಂ- ಪುನಃ- ಜನ್ಮ- ನ-ಏತಿ- ಮಾಂ- ಏತಿ- ಸಃ- ಅರ್ಜುನ || ||೯||

ಅ ॥ ಹೇ ಅರ್ಜುನ- ಎಲೈ ಅರ್ಜುನನೆ! ದಿವ್ಯಂ- ಅಪ್ರಾಕೃತವಾಗಿರುವ, (ಶಂ)ಮತ್ತು ಈಶ್ವರ ಸಂಬಂಧವಾಗಿರುವ, ಮೇಜನ್ಮ- ನನ್ನ ಅವತಾರವನ್ನು, ಕರ್ಮಚ- ಸಾಧುರಕ್ಷಣಾದಿ ಕರ್ಮವನ್ನು, ಯಃ- ಯಾವನು, ಏವಂ- ಈಪ್ರಕಾರವಾಗಿ, ತತ್ವತಃ- ಯಥಾರ್ಥವಾಗಿ, ವೇತ್ತಿ- ತಿಳಿಯುತ್ತಾನೋ, ಸಃ-ಅವನು, ದೇಹಂ- ದೇಹವನ್ನು, (ಶ್ರೀ)ದೇಹಾಭಿಮಾನವನ್ನು, ತ್ಯಕ್ತ್ವಾ- ಬಿಟ್ಟು, ಪುನಃ-ಮತ್ತು, ಜನ್ಮ-ಜನ್ಮವನ್ನು, (ಶ್ರೀ) ಸಂಸಾರವನ್ನು, ನೈತಿ- ಹೊಂದುವುದಿಲ್ಲವು, ಮಾಮೇತಿ- ನನ್ನನ್ನು ಹೊಂದುತ್ತಾನೆ. ॥೯॥

(ರಾ॥ ಭಾ॥) ಈ ಪ್ರಕಾರವಾಗಿ ಕರ್ಮಾಧೀನವಾಗಿಯೂ, ಹೇಯವಾದ ತ್ರಿಗುಣಾತ್ಮಕವಾಗಿರುವ ಪ್ರಕೃತಿ ಸಂಸರ್ಗರೂಪವಾಗಿಯೂ, ಇರುವ ಜನ್ಮವಿಲ್ಲದವನಾಗಿಯೂ; ಸರ್ವೇಶ್ವರತ್ವವೇನು, ಸರ್ವಜ್ಞತ್ವವೇನು, ಸತ್ಯಸಂಕಲ್ಪತ್ವವೇನು, ಇವೇ ಮೊದಲಾದ ಸಮಸ್ತಕಲ್ಯಾಣ ಗುಣಾತ್ಮಕನಾಗಿಯೂ, ಇರುವ ನನ್ನಸ್ವರೂಪವೂ, ಲೀಲೆಯೂ, ಅಪ್ರಾಕೃತವಾಗಿ ನನಗೇನೆ ಅಸಾಧಾರಣವಾಗಿರುತ್ತೆಂಬದಾಗಿಯೂ, ಸಾಧುಗಳನ್ನು ರಕ್ಷಿಸುವದು ಪ್ರಾಣಿಗಳು, ನನ್ನನ್ನಾಶ್ರಯಿಸುವದು, ಅವತಾರಕ್ಕೆ ಪ್ರಯೋಜನವೆಂಬದಾಗಿಯೂ; ತತ್ವವಾಗಿ ಯಾವನಾದರೆ ತಿಳಿಯುವನೊ ಅವನು ಈಗಿರುವದೇಹವನ್ನು ಬಿಟ್ಟವಡನೆ ಪುನರ್ಜನ್ಮವಂ ಹೊಂದದೇನನ್ನನ್ನೇ ಹೊಂದುವನು. ದಿವ್ಯವಾದ ನನ್ನ ಜನ್ಮಚೇಷ್ಟಿತಗಳನ್ನು ಯಥಾರ್ಥ ಸ್ಥಿತಿಯಿಂದರಿತವನಾದುದರಿಂದ ನನ್ನನ್ನಾಶ್ರಯಿಸುವುದಕ್ಕೆ ವಿರೋಧಿಯಾದ ಸಮಸ್ತ ಪಾಪಗಳಿಂದ ಬಿಡಲ್ಪಟ್ಟು ಈ ಜನ್ಮದಲ್ಲಿಯೇ ಮುಂದೆ ಹೇಳಿರುವಂತೆ ನನ್ನನ್ನಾಶ್ರಯಿಸಿ ನಾನೊಬ್ಬನೆ ಪ್ರಿಯವಾದ ವಸ್ತುವೆಂದು ನೆನೆಸುತಲಿರುವವನಾಗಿಯೂ, ನನ್ನೊಬ್ಬನಲ್ಲಿಯೇ ಮನಸ್ಸುಳ್ಳವನಾಗಿಯೂ, ಇರುತಾ ನನ್ನನ್ನೇ ಹೊಂದುವನು. ॥೯॥

(ಮ ॥ ಗೀ ॥ ವಿ॥) ಶ್ರೀಭಗವದವತಾರ, ಕರ್ಮಗಳ, ಜ್ಞಾನದಿಂದುಂಟಾಗುವ ಫಲವನ್ನು ಹೇಳುತ್ತಾನೆ. ಎಲೈ ಅರ್ಜುನನೆ! ಈ ಪ್ರಕಾರದಿಂದ ನನ್ನ ಅವತಾರವನ್ನು ಮತ್ತು ಧರ್ಮಪರಿಪಾಲನಾದಿ ಕರ್ಮವನ್ನು ತತ್ವದಿಂದ ಯಾವನು ತಿಳಿಯುವನೊ ಅವನು ಜಡದೇಹವನ್ನು ಬಿಟ್ಟು ನನ್ನನ್ನು ಹೊಂದುತ್ತಾನೆ. ಅವನು ಪುನರ್ಜನ್ಮವನ್ನು ಹೊಂದಲಾರನು. ಇಲ್ಲಿ ಜನ್ಮ ಕರ್ಮಜ್ಞಾನಗಳಿಂದ ಮೋಕ್ಷ ವಾಗುವದೆಂದು ಹೇಳಿದ್ದರೂ ತನಗೆ ಯಾವ ಯಾವ ಗುಣಜ್ಞಾನದಿಂದ ಮೋಕ್ಷವುಂ

ಟಾಗುವದೆಂದು ಹೇಳಿರುವುದೊ ಅವುಗಳ ಪರಿಜ್ಞಾನದಿಂದ ಮೋಕ್ಷ ವುಂಟಾಗುವುದೆಂದು ತಿಳಿಯಬೇಕು. ಈ ಅರ್ಥವು "ಏಷಾಂಗುಣಾನಾಂ ಜ್ಞಾನೇನ ಮುಕ್ತಿರುಕ್ತಾ ಪೃಥಕ್ಪೃಥಕ್ । ವೇದೇಷುಚೇತಿಹಾಸೇಷು ಸಾತುತೇಷಾಂಸಮುಚ್ಚಯಾತ್ ॥ ಏವಮೇವಶಮಾದೀನಾಮನ್ಯಥಾತು ಕಥಂಚನ । ,, ಎಂಬ ಪ್ರಮಾಣದಲ್ಲಿ ಸ್ಪಷ್ಟವಾಗಿರುವುದು. ಯಾವ ಯಾವ ಗುಣಗಳ ಜ್ಞಾನದಿಂದ ಮೋಕ್ಷವುಂಟಾಗುವುದೆಂದು ವೇದೇತಿ ಹಾಸಾದಿಗಳಲ್ಲಿ ಹೇಳಿರುವುದೊ ಅಷ್ಟುಗುಣಗಳಸಮುಚ್ಚಯದಿಂದಲೇ ಮೋಕ್ಷವು. ಈ ಪ್ರಕಾರವಾಗಿ ಮೋಕ್ಷಸಾಧನತ್ವೇನ ಹೇಳಲ್ಪಟ್ಟಶ ಮಾದಿ ಗುಣಗಳ ಸಮುಚ್ಚಯದಿಂದಲೇ ಜ್ಞಾನವುಂಟಾಗುವದೆಂದು ಪ್ರಮಾಣಾರ್ಥವು. ... ... ॥೯॥

ಮೂ ॥ ವೀತರಾಗ ಭಯಕ್ರೋಧಾ ಮನ್ಮಯಾ ಮಾ
ಮುಪಾಶ್ರಿತಾಃ । ಬಹವೋಜ್ಞಾನ ತಪಸಾ ಪೂತಾಮ
ದ್ಭಾವಮಾಗತಾಃ॥ ... ... ॥೧೦॥

ಪ ॥ ವೀತರಾಗಭಯಕ್ರೋಧಾಃ - ಮನ್ಮಯಾಃ - ಮಾಂ - ಉಪಾಶ್ರಿತಾಃ । ಬಹವಃ- ಜ್ಞಾನತಪಸಾ- ಪೂತಾಃ- ಮದ್ಭಾವಂ- ಆಗತಾಃ ॥ ... ॥೧೦॥

ಅ ॥ ವೀತರಾಗಭಯಕ್ರೋಧಾಃ - ಇಚ್ಛಾ ಭಯ ಕ್ರೋಧಗಳಿಂದ ಬಿಡಲ್ಪಟ್ಟವರಾಗಿ ಯೂ, (ಶಂ॥) ತನ್ನನ್ನು ಪರಮಾತ್ಮನೆಂದು ತಿಳಿದಿರುವಂತವರಾಗಿಯೂ, (ಮ॥ ) ನನ್ನ ನ್ನು ಬಿಟ್ಟು ಬೇರೊಂದು ವಸ್ತುಗಳಲ್ಲಿ ದೃಷ್ಟಿ ಇಲ್ಲದವರಾಗಿಯೂ, (ಗೀ ॥ ವಿ ॥) ನಾನೇ ಸರ್ವೋತ್ತಮನು, ಸರ್ವಜಗತ್ಕಾರಣವಸ್ತುವು, ಎಂದರಿತವರಾಗಿಯೂ, ಮಾಂ-ನನ್ನನ್ನು, ಉಪಾಶ್ರಿತಾಃ - ಆಶ್ರಯಿಸಿದವರಾಗಿಯೂ,) (ಶಂ॥) ಜ್ಞಾನನಿಷ್ಠರಾಗಿಯೂ ಇರುವ, (ಗೀ ॥ ವಿ) ನನ್ನನ್ನೇ ಶರಣವಾಗಿ ಹೊಂದಿರುವುವರಾಗಿಯೂ ಇರುವ, ಬಹವಃ - ಅನೇ ಕರು, ಜ್ಞಾನತಪಸಾ- ಜ್ಞಾನವೆಂಬ ತಪಸ್ಸಿನಿಂದ, (ರಾ ॥ ನನ್ನ ಜನ್ಮಕರ್ಮಗಳನ್ನು ತ ತ್ವವಾಗಿ ತಿಳಿಯುವ ಜ್ಞಾನವೆಂಬ ತಪಸ್ಸಿನಿಂದ,) (ಶ್ರೀ ॥ ಜ್ಞಾನದಿಂದಲೂ ತಪಸ್ಸಿನಿಂದ ಲೂ,) (ಗೀ ॥ ವಿ ॥ ಜ್ಞಾನವೆಂಬಂವ ತಪಸ್ಸಿನಿಂದ ಅಥವಾ ಜ್ಞಾನದಿಂದಲೂ ತಪಸ್ಸಿನಿಂ ದಲೂ,) ಪೂತಾಃ- ಪರಿಶುದ್ಧರಾಗಿ, ಮದ್ಭಾವಂ- (ತಾ॥ ಚಂ ॥ ನನ್ನ ಸ್ವಭಾವವಾದ ಅ ಪಹತ ಪಾಪ್ಮತ್ವಾದಿ ಗುಣಾಷ್ಟಕಗಳನ್ನು,) (ಶಂ ॥ ಮೋಕ್ಷವನ್ನು,) (ಗೀ ॥ ವಿ ॥ ಸಾಯು ಜ್ಯವನ್ನು,) ಆಗತಾಃ- ಹೊಂದಿರುವರು. ... ... ॥೧೦॥

(ರಾ॥ ಭಾ॥) ಪೂರ್ವಶ್ಲೋಕೋಕ್ತವಾದ ಅರ್ಥವನ್ನೇ ಇಲ್ಲಿಯು ಹೇ ಳುತ್ತಾನೆ. ರಾಗವು, ಭಯವು, ಕ್ರೋಧವು, ಇವುಗಳಂ ಬಿಟ್ಟವರಾ

ಗಿಯು, ನನಗೆ ಅತ್ಯಂತ ಪ್ರಿಯರಾಗಿಯೂ, ನನ್ನಲ್ಲೇ ಮನಸ್ಸುಳ್ಳವರಾಗಿಯೂ, ಇರುವ ಅನೇಕರು; ನನ್ನ ಜನ್ಮಕರ್ಮಗಳನ್ನು ತತ್ವದಿಂದರಿಯುವುದೆಂಬ ಮಹಾ ತಪಸ್ಸಿನಿಂದ ನನ್ನ ಸ್ವಭಾವವನ್ನು ಹೊಂದಿರುವರು. ಈ ಪ್ರಕಾರವಾಗಿಯೇ ವೇದವೂ " ಬುದ್ಧಿಯುಳ್ಳವರಲ್ಲಿ ಅಗ್ರೇಸರರಾದವರೇ ಈಪರಮಾತ್ಮನ ಜನ್ಮಪ್ರಕಾರವನ್ನರಿಯುವರೆಂದು" ಹೇಳುತ್ತದೆ.

ಮೂ || ಯೇಯಥಾಮಾಂಪ್ರಪದ್ಯಂತೇತಾಂಸ್ತಥೈವ
ಭಜಾಮ್ಯಹಂ | ಮಮವರ್ತ್ಮಾನುವರ್ತಂತೇಮನುಷ್ಯಾಃ
ಪಾರ್ಥಸರ್ವಶಃ || ||೧೧||

ಪ || ಯೇ- ಯಥಾ - ಮಾಂ - ಪ್ರಪದ್ಯಂತೆ - ತಾನ್ - ತಥಾ - ಏವ - ಭಜಾಮಿ- ಅಹಂ | ಮಮ-ವರ್ತ್ಮ - ಅನುವರ್ತಂತೆ - ಮನುಷ್ಯಾಃ - ಪಾರ್ಥ - ಸರ್ವಶಃ ||೧೧||

ಅ|| ಹೇಪಾರ್ಥ - ಎಲೈ ಅರ್ಜುನನೆ, ಯೇ- ಯಾರು, ಯಥಾ - ಯಾವರೀತಿಯಾಗಿ, (ಶಂ) ಫಲವನ್ನಪೇಕ್ಷಿಸಿಯೊ, ಅಥವಾ ಅಪೇಕ್ಷಿಸದೇಯೊ, ಮಾಂ - ನನ್ನನ್ನು - ಪ್ರಪದ್ಯಂತೆ - ಆಶ್ರಯಿಸುತ್ತಾರೊ, ತಾನ್ - ಅವರನ್ನು, ತಥೈವ, ಆ ಪ್ರಕಾರವಾಗಿಯೆ, ಅಹಂ- ನಾನು, ಭಜಾಮಿ - ಅನುಗ್ರಹಿಸುವೆನು. ಮನುಷ್ಯಾಃ - ಮನುಷ್ಯರು, ಮಮ- ನನ್ನ, ವರ್ತ್ಮ - ಮಾರ್ಗವನ್ನು, ( ಶಂ|| ಶ್ರೀ ) ಪೂಜಾಮಾರ್ಗವನ್ನು, (ರಾ) ಸ್ವಭಾವವನ್ನು, ಸರ್ವಶಃ - ಸರ್ವಪ್ರಕಾರದಿಂದಲೂ, ಅನುವರ್ತಂತೆ - ಅನುಸರಿಸುವರು ||೧೧||

(ಶಂ|| ಭಾ) "ಈಶ್ವರನು ಸರ್ವರಿಗೂ ಮೋಕ್ಷವನ್ನು ಕೊಡುವಪಕ್ಷದಲ್ಲಿ ಜ್ಞಾನತಪಸ್ಸಿನಿಂದ ಶುದ್ಧರಾದವರಿಗೆ ಮೋಕ್ಷ ವುಂಟಾಗುವದೆಂಬದಾಗಿ ಮುಂದೇ ಹೇಳಿರುವ ವಿಶೇಷಣವು ವ್ಯರ್ಥವಾಗುವುದು, ಕೆಲವರಿಗೆ ಮಾತ್ರವೇ ಮೋಕ್ಷವನ್ನು ಕೊಡುತ್ತಾನೆಂದರೆ ಈಶ್ವರನು ರಾಗದ್ವೇಷಗಳುಳ್ಳವನೆಂದು ಹೇಳಿದಂತೆ ಆಗುವುದು " ಎಂಬ ಶಂಕೆಗಳನ್ನು " ಈಶ್ವರನಾದ ನಾನು ಮೋಕ್ಷಾಪೇಕ್ಷಿಗಳಿಗೆ ಜ್ಞಾನದ್ವಾರಾ ಮೋಕ್ಷವನ್ನು, ಫಲಾನ್ತರಾಪೇಕ್ಷಿಗಳಿಗೆ ತತ್ತತ್ಫಲಗಳಂ ಹೊಂದಲುಚಿತವಾಗಿರುವ ಉಪಾಯಗಳನ್ನನುಷ್ಠಿಸುವಂತೆ ಮಾಡಿ ಅದರಿಂದ ಅವರಪೇಕ್ಷಿಸಿರುವ, ಫಲಗಳನ್ನು ಕೊಡುತ್ತೇನೆಂಬದಾಗಿ " ಪರಿಹರಿಸುತ್ತಾನೆ. ಯಾವ ಮನುಷ್ಯರು ಯಾವ ಪ್ರಕಾರದಿಂದ ಯಾವ ಫಲವನ್ನಪೇಕ್ಷಿಸಿ ನನ್ನನ್ನಾಶ್ರಯಿಸುತ್ತಾರೊ ಅಂತವರಿಗೆ ಅಪೇಕ್ಷಿತ ಫಲಗಳಂ ಕೊಡುವುದರಿಂದ ಅನುಗ್ರಹವನ್ನು ಮಾಡುತ್ತೇನೆ. ಎಲ್ಲರು

ಏಕರೂಪವಾದ ಫಲವನ್ನಪೇಕ್ಷಿಸುವುದಿಲ್ಲವಾದುದರಿಂದ ಯೆಲ್ಲರಿಗೂ ಒಂದೇ ಫಲವು ಪರಮಾತ್ಮನಾದ ನನ್ನಿಂದ ಅನುಗ್ರಹಿಸಲ್ಪಡಲಾರದು. ಒಬ್ಬನಿಗೆ ಮೋಕ್ಷಾಪೇಕ್ಷೆಯು ಫಲಾರ್ಥಿತ್ವವು ಏಕಕಾಲದಲ್ಲುಂಟಾಗುವುದಿಲ್ಲವಷ್ಟೆ. ಆದುದರಿಂದ ಯಾರು ಯಾವಫಲವನ್ನಪೇಕ್ಷಿಸುತ್ತಾರೊ ಅವರನ್ನು ಫಲಪ್ರದಾನದಿಂದ ಅನುಗ್ರಹಿಸುವೆನು. ಫಲಾಪೇಕ್ಷೆಯಿಲ್ಲದೆ ಮೋಕ್ಷಾಪೇಕ್ಷೆಯುಳ್ಳವರಾಗಿ ನಿತ್ಯನೈಮಿತ್ತಿಕ ಕರ್ಮಗಳನ್ನು ಯಥಾ ಶಾಸ್ತ್ರವಾಗಿ ಅನುಷ್ಠಿಸುವವರನ್ನು ಜ್ಞಾನ ಪ್ರದಾನದಿಂದಲೂ, ಯಾರಾದರೇ ಜ್ಞಾನಿಗಳಾಗಿಯೂ ಸನ್ಯಾಸಿಗಳಾಗಿಯೂ ಮೋಕ್ಷಾಪೇಕ್ಷೆಯುಳ್ಳವರಾಗಿಯೂ ಇರುವರೋ ಅಂತವರನ್ನು ಮೋಕ್ಷ ಪ್ರದಾನದಿಂದಲೂ, ಆರ್ತರಾದವರನ್ನು ಆರ್ತಿ ಪರಿಹಾರವಂ ಮಾಡುವುದರಿಂದಲೂ, ಅನುಗ್ರಹಿಸುವೆನು. (ಆರ್ತಿಯೆಂದರೆ ಪೀಡಾ) ಈಪ್ರಕಾರವಾಗಿ ಯಾರು ಯಾವ ಪ್ರಕಾರವಾಗಿ ನನ್ನನ್ನಾಶ್ರಯಿಸುವರೊ ಅಂಥಾವರಿಗೆ ಇಚ್ಛಾನುಗುಣವಾದ ಫಲಗಳಂ ಕೊಟ್ಟು ಅನುಗ್ರಹಿಸುವೆನೆಂದು ತಾತ್ಪರ್ಯವು. ಅವರವರ ಬಯಿಕೆಗಳನ್ನನುಸರಿಸಿ ಫಲಗಳಂ ಕೊಡುವುದರಿಂದ ಪರಮಾತ್ಮನಿಗೆ ರಾಗದ್ವೇಷಗಳೂ ಅಥವಾ ಮೋಹವೋ ಫಲಪ್ರದಾನದಲ್ಲಿ ಕಾರಣವಾಗಲಾರರು. ಆದರೆ ಮೋಕ್ಷಾಪೇಕ್ಷೆಯುಳ್ಳವರಿಗೆ ಭಗವದನುಗ್ರಹದಿಂದ ಪ್ರಯೋಜನವುಂಟಾದರೂ ಅನ್ಯಫಲಗಳನ್ನಪೇಕ್ಷಿಸಿ ದೇವತಾಂತರಗಳನ್ನಾರಾಧಿಸುವಂತವರಿಗೆ ಭಗವದನುಗ್ರಹದಿಂದಾಗಬೇಕಾದದ್ದೇನು ? ಎಂದಾಕ್ಷೇಪಿಸದೇ ಪರಮಾತ್ಮನೊಬ್ಬನೆ ನಾನಾತ್ಮರೂಪಗಳನ್ನು ಹೊಂದಿ ನಾನಾ ಶರೀರಾದಿಗಳಲ್ಲಿ ಪ್ರವೇಶಿಸಿರುತ್ತಾನಾದುದರಿಂದ ಯಾವಫಲವನ್ನಪೇಕ್ಷಿಸಿ ಯಾವ ಕರ್ಮದಲ್ಲಧಿಕಾರವನ್ನು ಹೊಂದಿ ಯಾವ ದೇವತೆಯನ್ನಾರಾಧಿಸಿದರೂ ಈಶ್ವರನಾದ ನನ್ನ ಮಾರ್ಗವನ್ನೇ ಮನುಷ್ಯರೆಲ್ಲರು ಸರ್ವ ಪ್ರಕಾರದಿಂದಲೂ ಅಶ್ರಯಿಸುತ್ತಾರೆ. ಇಲ್ಲಿ ಯಾವ ಫಲಾಪೇಕ್ಷೆಯಿಂದ ಯಾವಕರ್ಮದಲ್ಲಧಿಕಾರಿಗಳಾಗಿರುವರೊ ಅವರೆಲ್ಲರೂ ಮನುಷ್ಯರೆಂದು ಹೇಳಲ್ಪಡುವುರು. ಇದರಿಂದ ಮನುಷ್ಯರಿಗಿಂತಲೂ ಅನ್ಯರಾದವರುಕೂಡ ಭಗವನ್ಮಾರ್ಗವನ್ನು ವಶ್ಯವಾಗಿ ಅನುಸರಿಸುವುರೆಂಬದಾಗಿ ಹೇಳಿತೆಂದರಿಯಬೇಕು. ॥೧೧॥

(ರಾ। ಭಾ॥) ನನ್ನನ್ನಾಶ್ರಯಿಸಬೇಕೆಂಬ ಅಪೇಕ್ಷೆ ಯುಳ್ಳವರನ್ನು

ನಾನು ಕೇವಲವಾಗಿ ದೇವ ಮನುಷ್ಯಾದಿ ರೂಪದಿಂದ ಮಾತ್ರವೇ ಅವತರಿಸಿ ಪರಿಪಾಲಿಸುವುದಿಲ್ಲವು. ಮತ್ತು ಹೇಗೆಂದರೆ! ನನ್ನನ್ನು ಹೊಂದಲಪೇಕ್ಷಿಸಿ ಯಾರು ಯಾವಪ್ರಕಾರವಾಗಿ ತಮ್ಮಗಳ ಅಪೇಕ್ಷಾನುಗುಣವಾಗಿ ನನ್ನನ್ನರಿತು ಆಶ್ರಯಿಸುವರೋ ಅವರುಗಳಿಗೆ ಅವರುಗಳ ಇಷ್ಟಪ್ರಕಾರವಾಗಿ ನನ್ನ ದರ್ಶನವನ್ನು ಕೊಡುವೆನು. ಈ ವಿಷಯದಲ್ಲಧಿಕವಾಗಿ ಹೇಳಬೇಕಾದದ್ದೇನಿರುವುದು, ಸಕಲವಾದ ಮನುಷ್ಯರು ನನ್ನನ್ನನುಸರಿಸಬೇಕೆಂಬ ಅಪೇಕ್ಷೆಯುಳ್ಳವರಾಗಿ ಯೋಗಿಗಳ ವಾಙ್ಮನಸ್ಸುಗಳಿಗೆ ಅಗೋಚರವಾದ ನನ್ನ ಸ್ವಭಾವವೆಲ್ಲವನ್ನು ತಮ್ಮಗಳ ಕಣ್ಣು ಮೊದಲಾದ ಇಂದ್ರಿಯಗಳಿಂದ ತಮ್ಮಗಳಿಗಪೇಕ್ಷಿತವಾದ ಸರ್ವಪ್ರಕಾರವಾಗಿಯೂ, ಅನುಭವಿಸಿಕೊಂಡನುಸರಿಸುವರು. ॥೧೧॥

(ಗೀ॥ ವಿ॥) ಯಾರಾದರೇ ಸಾಮಾನ್ಯವಾಗಿ ವಿಷ್ಣುವು ಸರ್ವೋತ್ತಮನೆಂಬದಾಗಿ ತಿಳಿದು ದೇವತಾಂತರಗಳನ್ನುದ್ದೇಶಿಸಿ ಆರಾಧನೆಯಂ ಮಾಡಿ ಕಡೆಯಲ್ಲದನ್ನು ವಿಷ್ಣುವಿನಲ್ಲಿ ಸಮರ್ಪಣವಂ ಮಾಡುವರೊ ಅವರು ತ್ರೈವಿದ್ಯರು. ಇಂತವರಿಗೂ ಮೋಕ್ಷವಾದರೆ ನಿನ್ನನ್ನಾಶ್ರಯಿಸಿರುವ ಜ್ಞಾನಿಗಳಿಗೆ ಪ್ರಾಪ್ತವಾದ ವಿಶೇಷವೇನು ? ಆದುದರಿಂದ ಜ್ಞಾನಿಗಳಿಗೂ ತ್ರೈವಿದ್ಯರಿಗೂ ಫಲಸಾಮ್ಯವನ್ನು ಹೇಳಕೂಡದು. ಆದುದರಿಂದ ತ್ರೈವಿದ್ಯರಿಗೆ ಮೋಕ್ಷರೂಪವಾದ ಫಲವುಂಟಾಗಕೂಡದೆಂದರೆ ಅವರು ಮಾಡುವ ಭಗವತ್ಪೂಜೆಯು ವ್ಯರ್ಥವಾಗಬೇಕಾಗುವುದು. ತ್ರೈವಿದ್ಯರು ಮಾಡುವ ಭಗವತ್ಪೂಜೆಯು ವ್ಯರ್ಥವಾಗಕೂಡದೆಂಬುವುದಕ್ಕಾಗಿ ಸ್ವರ್ಗಾದಿ ಪ್ರಾಪ್ತಿರೂಪವಾದ ಫಲವನ್ನು ಹೇಳುವಪಕ್ಷದಲ್ಲಿ ಕೆಲವರಿಗೆ ಮೋಕ್ಷರೂಪವಾದ ಫಲವು ಕೆಲವರಿಗೆ ಸ್ವರ್ಗಾದಿರೂಪವಾದ ಫಲವು ಪರಮಾತ್ಮನಿಂದ ಪ್ರಾಪ್ತವಾಗುವುದರಿಂದ ಪರಮಾತ್ಮನಿಗೆ ವೈಷಮ್ಯಾದಿ ದೋಷಗಳುಂಟೆಂದು ಹೇಳಿದಂತೆ ಆಗುವುದೆಂದರೆ ಯಾರು ಯಾವ ಫಲವನ್ನುದ್ದೇಶಿಸಿ ಯಾವ ಪ್ರಕಾರವಾಗಿ ಭಗವತ್ಸೇವೆಯನ್ನು ಮಾಡುತ್ತಾರೊ ಅಂಥಾ ಸೇವಾನುಸಾರವಾಗಿ ಪರಮಾತ್ಮನು ಸ್ವರ್ಗ ಮೋಕ್ಷಗಳೆಂಬ ಫಲವನ್ನು ಕೊಡುವುದರಿಂದ ವೈಷಮ್ಯಾದಿ ದೋಷವುಂಟಾಗುವುದಿಲ್ಲವೆಂದೀ ಶ್ಲೋಕದಿಂದ ಸಮಾಧಾನವನ್ನು ಹೇಳಿದನು. ... ... ॥೧೧॥

ಮೂ॥ ಕಾಂಕ್ಷಂತಃಕರ್ಮಣಾಂಸಿದ್ಧಿಂ ಯಜಂತಇಹದೇವತಾಃ । ಕ್ಷಿಪ್ರಂಹಿಮಾನುಷೇಲೋಕೇಸಿದ್ಧಿರ್ಭವತಿಕರ್ಮಜಾ ॥ ॥೧೨॥

ಪ॥ ಕಾಂಕ್ಷಂತಃ – ಕರ್ಮಣಾಂ – ಸಿದ್ಧಿಂ – ಯಜಂತೆ – ಇಹ – ದೇವತಾಃ । ಕ್ಷಿಪ್ರಂ-ಹಿ- ಮಾನುಷೇ – ಲೋಕೆ – ಸಿದ್ಧಿಃ – ಭವತಿ – ಕರ್ಮಜಾ ॥ ॥೧೨॥

ಅ॥ ಇಹ- ಈಲೋಕದಲ್ಲಿ, ಕರ್ಮಣಾಂ – ಕರ್ಮಗಳ, ಸಿದ್ಧಿಂ – ಫಲವನ್ನು, ಕಾಂಕ್ಷಂತಃ – ಅಪೇಕ್ಷಿಸುವಂತವರು, ದೇವತಾಃ – ಇಂದ್ರಾದಿದೇವತೆಗಳನ್ನು, ಯಜಂತೆ – ಆರಾಧಿಸುವರು. ಹಿ-ಯೇತಕ್ಕೆಂದರೆ, ಮಾನುಷೇಲೋಕೇ – ಮನುಷ್ಯ ಲೋಕದಲ್ಲಿ, ಕರ್ಮಜಾ – ಕರ್ಮದಿಂದುಂಟಾಗುವ, ಸಿದ್ಧಿಃ-ಫಲವು, ಕ್ಷಿಪ್ರಂ- ಶೀಘ್ರವಾಗಿ, ಭವತಿ- ಉಂಟಾಗುವುದು.

(ರಾ॥ ಭಾ॥) ಈ ಪ್ರಕಾರವಾಗಿ ಪ್ರಾಸಂಗಿಕವಾದ ಭಗವದವತಾರ ರಹಸ್ಯ ಚಿಂತನವನ್ನುಪಸಂಹಾರಮಾಡಿ ಪ್ರಕೃತವಾದ ಕರ್ಮಯೋಗಕ್ಕೆ ಜ್ಞಾನಾಕಾರತಾ ಪ್ರಕಾರವನ್ನು ಹೇಳಲುದ್ದೇಶಿಸಿ ಅಂಥಾ ಕರ್ಮಯೋಗಾಧಿಕಾರಿಗಳು ದುರ್ಲಭರೆನ್ನುತ್ತಾನೆ. ಸಮಸ್ತರಾದ ಪುರುಷರು ಕರ್ಮಫಲಗಳನ್ನಪೇಕ್ಷಿಸುವಂತವರಾಗಿ ಇಂದ್ರಾದಿ ದೇವತಾಮಾತ್ರವನ್ನಾರಾಧಿಸುವರು. ಅಲ್ಲದೆ ಯಾರೂ ಫಲಾಪೇಕ್ಷೆಯಿಲ್ಲದವರಾಗಿ ಇಂದ್ರಾದಿ ದೇವತೆಗಳಿಗೆ ಅನ್ತರಾತ್ಮನಾಗಿಯೂ, ಸಮಸ್ತ ಯಜ್ಞ ಫಲಗಳನ್ನನುಭವಿಸುವಂತವನಾಗಿಯೂ, ಇರುವ ನನ್ನನ್ನಾಶ್ರಯಿಸುವುದಿಲ್ಲವು. ಏತಕ್ಕೆಂದರೆ, ಈ ಮನುಷ್ಯಾದಿ ಲೋಕಗಳಲ್ಲಿ ಕರ್ಮದಿಂದುಂಟಾಗುವ ಪುತ್ರ ಪಶು ಅನ್ನಾದಿಗಳೆಂಬ ಕರ್ಮಫಲಗಳು ಬಹುತ್ವರೆಯಾಗಿ ಸಿದ್ಧಿಯಾಗುವುವು. ಸಮಸ್ತರಾದ ಲೌಕಿಕ ಪುರುಷರೆಲ್ಲರು ತಮ್ಮಗಳಲ್ಲಿ ಅನಾದಿಕಾಲದಿಂದ ಬಂದಿರುವ ಪಾಪಗಳು ಕ್ಷೀಣವಾಗದೇ ಇರುವುದರಿಂದ ಅವಿವೇಕಿಗಳಾಗಿ ಶೀಘ್ರದಿಂದುಂಟಾಗುವ ಫಲಾಪೇಕ್ಷೆಯಿಂದ ಮೋಕ್ಷವಿರೋಧಿಯಾದ ಪುತ್ರ, ಪಶು, ಅನ್ನ, ಇವುಗಳೇನು, ಸ್ವರ್ಗಾದಿಗಳೇನು, ಇವುಗಳಲ್ಲಾಸಕ್ತರಾಗಿ ಸಮಸ್ತ ಕರ್ಮಗಳನ್ನು ಇಂದ್ರಾದಿ ದೇವತಾರಾಧನ ಮಾತ್ರವನ್ನಾಗಿ ಮಾಡುವರಲ್ಲದೆ ಮೋಕ್ಷಾಪೇಕ್ಷೆಯುಳ್ಳವರಾಗಿ ಸಂಸಾರದಿಂದ ಭಯಪಟ್ಟು ನನ್ನ ಆರಾಧನರೂಪವಾಗಿರುವ ಪೂರ್ವೋಕ್ತವಾದ ಕರ್ಮಯೋಗವನ್ನು ಫಲಾಪೇಕ್ಷೆಯಂ ಬಿಟ್ಟು ಯಾರೂ ಮಾಡಲಾರಂಭಿಸಲಾರರೆಂದರ್ಥವು. ... ॥೧೨॥

(ಗೀ॥ ೨॥) ನಾನೇ ಸರ್ವಯಜ್ಞಗಳಿಗೂ ಭೋಕ್ತಾವಾಗಿಯೂ ಪ್ರೇರಕನಾಗಿಯೂ ಇರುವೆನು. ಇದನ್ನು ತಿಳಿದು ಭಾಗವತರು ನಿಷ್ಕಾಮರಾಗಿ ನನ್ನನ್ನೇ ಆರಾಧಿಸುವರು. ಅತ್ತೈವಿದ್ಯರು ತತ್ವವನ್ನು ತಿಳಿಯದೆ ಕರ್ಮಗಳ ಫಲವನ್ನಪೇಕ್ಷಿಸುವಂತವರಾಗಿ ದೇವತಾಂತರಗಳನ್ನಾರಾಧಿಸುವರು; ಇದೇನಿಷ್ಕಾಮಕರ್ಮನಿಷ್ಠರಾದಭಾಗವತರಿಗೂ ತ್ರೈವಿದ್ಯರಿಗೂ ಭೇದವು. ಆದರೇ "ಮಮವರ್ತ್ಮಾನುವರ್ತಂತೇ"(೩॥ ೧೧) ಎಂಬುವ ಶ್ಲೋಕದಲ್ಲಿ ಪರಮಾತ್ಮನಿಗೆ ಸರ್ವಕರ್ಮಕರ್ತೃತ್ವವೂ ಭೋಕ್ತೃತ್ವವೂ ಹೇಳಲ್ಪಟ್ಟಿತು. ಜೀವಾತ್ಮರಿಗೆ ಸ್ವಾತಂತ್ರ್ಯವಿಲ್ಲವಾದುದರಿಂದ ಸರ್ವಕರ್ಮ ಕರ್ತೃತ್ವವು ಪರಮಾತ್ಮನಿಗೆ ಸಿದ್ಧವಾದರೂ ಯಜ್ಞಾದಿ ಭೋಕ್ತೃತ್ವವುಪರಮಾತ್ಮನಿಗೆ ಯಾವಪ್ರಮಾಣದಿಂದಸಿದ್ಧವಾಗುವುದೆಂಧರೇ ಅದಕ್ಕುತ್ತರವನ್ನು ಹೇಳುತ್ತಾನೆ. ಯಾವ ಕಾರಣದಿಂದ ನನ್ನಿಂದಮನುಷ್ಯ ಲೋಕದಲ್ಲಿಕರ್ಮದಿಂದುಂಟಾದ ಫಲವು ಅದಂ ಮಾಡತಕ್ಕವರಿಗೆ ಶೀಘ್ರವಾಗಿ ಉಂಟಾಗುತ್ತದೊ ಆಕಾರಣದಿಂದಲೇ ನಾನು ಸರ್ವಯಜ್ಞ ಭೋಕ್ತಾ ಎಂಬದಾಗಿ ಸರ್ವರು ನನ್ನಮಾರ್ಗವನ್ನನುಸರಿಸುತ್ತಾರೆ. ಪರಮಾತ್ಮನಿಗೆ ಸರ್ವ ಯಜ್ಞ ಭೋಕ್ತೃತ್ವವಿರುವುದರಿಂದಲೇ ಆ ಕರ್ಮ ಫಲವು ಯಜಮಾನನಿಗೆ (ಕರ್ಮವಂ ಮಾಡುವಂತವನಿಗೆ) ಶೀಘ್ರವಾಗಿ ಪ್ರಾಪ್ತವಾಗುವುದು. ಪ್ರಕಾರಾಂತರದಿಂದುಂಟಾಗುವುದಿಲ್ಲವು. ಈ ಅರ್ಥವು "ಫಲಮತಉಪಪತ್ತೇಃ" ಎಂಬುವ ವೇದಾಂತ ಸೂತ್ರದಿಂದಲೂ ಶ್ರುತಿಗಳಿಂದಲೂ ವ್ಯಕ್ತವಾಗಿರುವುದು. ಉಪಪತ್ತೇಃ-ಪರಮಾತ್ಮನಿಗೆ ಸರ್ವಯಜ್ಞ ಭೋಕ್ತೃತ್ವರೂಪವಾದ ಉಪಪತ್ತಿಯಿಂದ, ಅತಃ-ಈಪರಮಾತ್ಮನ ದಶೆಯಿಂದ, ಫಲಂ-ಫಲವು,ಭವತಿ-ಉಂಟಾಗುವುದೆಂದು ಸೂತ್ರಾರ್ಥವು. (ಅಥವಾ) ತ್ರೈವಿದ್ಯರು ಕರ್ಮಫಲಾಪೇಕ್ಷಿಗಳಾಗಿ ಅನ್ಯದೇವತೆಗಳನ್ನಾರಾಧಿಸುವುದರಿಂದ ದೇವತಾಂತರಗಳ ಮಾರ್ಗವನ್ನನುಸರಿಸುವಂತವರಾಗುವರು. ಅವರುಗಳಿಗೆ ಭಗವನ್ಮಾರ್ಗಾನುವರ್ತಿತ್ವವು ಹೇಗೆಂದರೆ, ತ್ರೈವಿದ್ಯರು ಅನ್ಯದೇವತಾರಾಧನವನ್ನು ಮಾಡುವಂತವರಾದರೂ ಕಡೆಯಲ್ಲಿ ಕರ್ಮಗಳನ್ನು ನನ್ನ ಕೃಷ್ಣಾರ್ಪಣೆಮಾಡುವುದರಿಂದ ಅವರೂ (ವೈಷ್ಣವ ಮಾರ್ಗವನ್ನು) ನನ್ನ ಮಾರ್ಗವನ್ನನುಸರಿಸಿದವರಾಗಿಯೇ ಆಗುವರು. ಅವರು ದೇವತಾಂತ

ರಗಳನ್ನಾರಾಧಿಸಿದರೂ ಆಯಾ ದೇವತಾನ್ತರ್ಯಾಮಿಯಾದ ನನ್ನಿಂದಲೇ ಅವರುಗಳಿಗೆ ಫಲವು ಪ್ರಾಪ್ತವಾಗುವುದರಿಂದ ಸರ್ವರೂ ನನ್ನ ಮಾರ್ಗ ವನ್ನೇ ಅನುಸರಿಸುವವರೆಂದು ತಾತ್ಪರ್ಯವು. ||೧೨||

ಮೂ || ಚಾತುರ್ವರ್ಣ್ಯಂಮಯಾಸೃಷ್ಟಂಗುಣಕರ್ಮ
ವಿಭಾಗಶಃ | ತಸ್ಯಕರ್ತಾರ ಮಪಿಮಾಂ ವಿದ್ಧ್ಯಕರ್ತಾರ
ಮವ್ಯಯಂ || ... ||೧೩||

ಪ|| ಚಾತುರ್ವರ್ಣ್ಯಂ- ಮಯಾ- ಸೃಷ್ಟಂ- ಗುಣಕರ್ಮವಿಭಾಗಶಃ | ತಸ್ಯ-ಕರ್ತಾರಂ- ಅಪಿ-ಮಾಂ- ವಿದ್ಧಿ- ಅಕರ್ತಾರಂ- ಅವ್ಯಯಂ|| ||೧೩||

ಅ|| ಚಾತುರ್ವರ್ಣ್ಯಂ- ನಾಲ್ಕುವರ್ಣಗಳು, (ನಾಲ್ಕುಜಾತಿಗಳು) ಗುಣಕರ್ಮವಿಭಾಗಶಃ- ಗುಣಕರ್ಮಗಳ ವಿಭಾಗಯುಕ್ತವಾಗಿ, ಮಯಾಸೃಷ್ಟಂ- ನನ್ನಿಂದ ಸೃಷ್ಟಿಸಲ್ಪಟ್ಟಿತು; ತಸ್ಯ- ಅದಕ್ಕೆ, ಕರ್ತಾರಮಪಿ- ಕರ್ತಾಆದರೂ, ಅಕರ್ತಾರಂ- ಕರ್ತಾ ಅಲ್ಲನೆಂಬದಾಗಿ ಯೂ, ಮಾಂ- ನನ್ನನ್ನು, ವಿದ್ಧಿ-ತಿಳಿದುಕೊಳ್ಳು. ||೧೩||

(ಶಂ || ಭಾ || ) ಮಾನವ ( ಮನುಷ್ಯ ) ಲೋಕದಲ್ಲಿಯೇ ವರ್ಣಾಶ್ರಮಾದಿ ಕರ್ಮಾಧಿಕಾರವು ; ಇದು ಇತರ ಲೋಕಗಳಲ್ಲಿಲ್ಲವೆಂಬ ನಿಯಮಕ್ಕೆ ಕಾರಣವೇನು ? (ಅಥವಾ) ವರ್ಣಾಶ್ರಮಾದಿ ವಿಭಾಗ ಯುಕ್ತರಾದ ಮನುಷ್ಯರು ಸರ್ವ ಪ್ರಕಾರದಿಂದಲೂ ನನ್ನ ಮಾ ರ್ಗವನ್ನನುಸರಿಸುವರೆಂದು ಹೇಳಿರುತ್ತೀಯಲ್ಲವೆ, ಆ ಪ್ರಕಾರವಾ ಗಿ ಇತರ ದೇವತಾಮಾರ್ಗಗಳನ್ನನುಸರಿಸದೇ ಸರ್ವಪ್ರಕಾರದಿಂದಲೂ ಕರ್ಮಜ್ಞಾನರೂಪವಾದ ನಿನ್ನ ಮಾರ್ಗವನ್ನೇ ಅನುಸರಿಸಲು ಕಾರಣವೇ ನು? ಎಂಬ ಅರ್ಜುನನ ಪ್ರಶ್ನೆಯನ್ನು ತಾನೇ ಚಿಂತಿಸಿ ಸಮಾಧಾನವ ನ್ನೀಶ್ಲೋಕದಿಂದ ಹೇಳುತ್ತಾನೆ. ಈಶ್ವರನಾದನನ್ನಿಂದ ಬ್ರಹ್ಮಕ್ಷತ್ರಿ ಯಾದಿ ನಾಲ್ಕುವರ್ಣಗಳು,ಸತ್ವಾದಿ ಗುಣಗಳೇನು, ತಪಶ್ಯಮಾದಿಕರ್ಮ ಗಳೇನು,ಇವುಗಳವಿಭಾಗದಿಂದ ಸೃಷ್ಟಿಸಲ್ಪಟ್ಟಿರುವುವು.( ಇದರಿಂದೀ ಶ್ವರನು ಜಾತ್ಯಾದಿಸೃಷ್ಟಿಗಳಂ ಮಾಡಿ,ಅದಕ್ಕೆ ಗುಣಕರ್ಮಗಳಂವಿಭಾಗಿ ಸಿರುವುವನೆಂದು ಹೇಳಿದಂತೆ ಆಯಿತು.) ಮತ್ತು ಆ ವರ್ಣಾಶ್ರಮಾದಿ ಗಳಲ್ಲಿ ಬ್ರಾಹ್ಮಣನು ಸತ್ವ ಗುಣ ಪ್ರಧಾನನೆಂಬದಾಗಿಯೂ ಇಂತಹ ಬ್ರಾಹ್ಮಣನಿಗೆ ಶಮದಮ ತಪಸ್ಸುಗಳೆಂಬಿವೆ ಮೊದಲಾದವುಗಳು ಕರ್ಮ ಗಳೆಂಬದಾಗಿಯೂ ತಿಳಿಯತಕ್ಕದ್ದಾಗಿರುವುದು. ಸತ್ವಗುಣವು ಸ್ವಲ್ಪ

ವಾಗಿರಜೋಗುಣಪ್ರಧಾನನಾದ ಕ್ಷತ್ರಿಯನಿಗೆ, ಶೌರ್ಯವು, ತೇಜಸ್ಸು, ಮೊದಲಾದವುಗಳೇಕರ್ಮಗಳೆಂಬದಾಗಿಯೂ,ತಮೋಗುಣವುಸ್ವಲ್ಪವಾಗಿ ರಜೋಗುಣ ಪ್ರಧಾನನಾದವೈಶ್ಯನಿಗೆ ಕೃಷ್ಯಾದಿಗಳುಕರ್ಮಗಳೆಂಬದಾಗಿ ಯೂ,ರಜೋಗುಣವು ಸ್ವಲ್ಪವಾಗಿ ತಮೋಗುಣ ಪ್ರಧಾನನಾದ ಶೂದ್ರ ನಿಗೆ ಬ್ರಾಹ್ಮಣ ಕ್ಷತ್ರಿಯ ವೈಶ್ಯರೆಂಬ ತ್ರಿವರ್ಣ ಶಿಶ್ರೂಷೆಯೇ ಮೊದ ಲಾದವುಗಳು ಕರ್ಮಗಳೆಂಬದಾಗಿಯೂ, ಇಂತಹ ಗುಣಕರ್ಮ ವಿಭಾಗಗ ಳಿಂದ ನಾಲ್ಕುವರ್ಣಗಳು ಪರಮೇಶ್ವರನಾದ ನನ್ನಿಂದ ಸೃಷ್ಟಿಸಲ್ಪಟ್ಟಿ ರುವುದೆಂದರ್ಥವು. ಈ ನಾಲ್ಕುವಿಧಗಳಾದ ವರ್ಣಗಳು ಇತರ ಲೋಕ ಗಳಲ್ಲಿ ಇಲ್ಲವಾದುದರಿಂದ ಹಿಂದಿನ ಶ್ಲೋಕದಲ್ಲಿ "ಮಾನುಷೇಲೋಕೆ" ಎಂಬದಾಗಿ ಹೇಳಿತು. ಆದರೆ ಆ ಚಾತುರ್ವರ್ಣ್ಯಾದಿ ಸೃಷ್ಟಿ ಮೊದ ಲಾದ ಕರ್ಮಗಳಿಗೆ ಈಶ್ವರನೇ ಮಾಡತಕ್ಕವನಾಗಿರುವುದರಿಂದಪರಮಾತ್ಮ ನಿಗೂ ಕರ್ತೃತ್ವ ಭೋಕ್ತೃತ್ವಗಳುಂಟೆಂದು ತನ್ಮೂಲವಾಗಿ ಈಶ್ವರ ನು ನಿತ್ಯಮುಕ್ತನು, ನಿತ್ಯೇಶ್ವರನು, ಆಗಲಾರನೆಂದು ಚಿಂತಿಸದೇ ಮಾ ಯಾಸಂವ್ಯವಹಾರದಿಂದ ಈಶ್ವರನು ವರ್ಣಾದಿಗಳಂ ಸೃಷ್ಟಿಸುತ್ತಾನ ಲ್ಲದೇ ಪರಮಾರ್ಥವಾಗಿ ಈಶ್ವರನು ಕರ್ತಾ (ಮಾಡತಕ್ಕವನು) ಆಗಲಿಲ್ಲ ವಾದುದರಿಂದ ನಿತ್ಯ ಮುಕ್ತತ್ವವೇ ಮೊದಲಾದ ಗುಣಗಳಿಗೆ ಕೊರತೆಯಿ ಲ್ಲವೆಂದು ತಿಳಿಯಬೇಕು. ಆದುದರಿಂದಲೇ, ಅವ್ಯಯಂ- ಅಸಂಸಾರಿ ಯು,ಸಂಸಾರಿಯಲ್ಲವೆಂತಲೂ ನನ್ನನ್ನು ತಿಳಿಯುವಂತವನಾಗು.॥೧೩॥

(ರಾ॥ಭಾ॥) ಪೂರ್ವೋಕ್ತವಾದ ಕರ್ಮಯೋಗವನ್ನು ಪ್ರಾರಂಭಿಸಲು ವಿರೋಧಿಯಾಗಿರುವ ಪಾಪಗಳ ಕ್ಷಯಕ್ಕೆ ತಕ್ಕಕಾರಣವನ್ನು ಹೇಳು ತ್ತಾನೆ. ನಾಲ್ಕುವರ್ಣಗಳೊಡನೆ ಕೂಡಿ ಬ್ರಹ್ಮಾದಿ ಸ್ತಂಬಪರ್ಯಂತವಾದ ಸಮಸ್ತವಾದ ಪ್ರಪಂಚವು ಸತ್ವಾದಿ ಗುಣವಿಭಾಗದಿಂದಲೂ, ಅದಕ್ಕನು ಗುಣವಾದ ಶಮದಮಾದಿ ಕರ್ಮವಿಭಾಗದಿಂದಲೂ ವಿಭಕ್ತವಾಗಿ ನನ್ನಿಂದ ಸೃಷ್ಟಿಸಲ್ಪಡುವುದು,ನನ್ನಿಂದಲೇ ರಕ್ಷಿಸಲ್ಪಡುವುದು. ನನ್ನಿಂದಲೇ ಸಂ ಹರಿಸಲ್ಪಡುವುದು. ಅಂಥಾವಿಚಿತ್ರ ಸೃಷ್ಟ್ಯಾದಿಗಳನ್ನು ನಾನುಮಾಡತ ಕ್ಕವನಾದರೂ ಅವುಗಳನ್ನು ನಾನುಮಾಡತಕ್ಕವನಲ್ಲವೆಂಬದಾಗಿ ತಿಳಿದು ಕೊಳ್ಳು. ಈಅಂಶವು ಮುಂದಿನಶ್ಲೋಕದಲ್ಲಿ ವಿವರಿಸಲ್ಪಡುವುದು॥೧೩॥

(ಗೀ॥ ವಿ॥) ಪರಮಾತ್ಮನಾದ ನಿನ್ನ ಭಜನವಿಲ್ಲದೇ ತ್ರೈವಿದ್ಯರಿಗೆ

ವಿತಕ್ಕೆ ಮೋಕ್ಷವಾಗುವುದಿಲ್ಲವು. (ಅಥವಾ) ಜ್ಞಾನಿಗಳಂತೆ ತ್ರೈ ವಿದ್ಯರಿಗೂ ಮೋಕ್ಷರೂಪವಾದ ಮಹಾ ಫಲವೇತಕ್ಕೆ ಪ್ರಾಪ್ತವಾಗುವುದಿಲ್ಲವು ? ಎಂದರೇ ಪರಮಾತ್ಮನಾದ ನಾನು ಸಕಲ ವರ್ಣ್ಣಗಳನ್ನು ಸೃಷ್ಟಿಮಾಡುವುದರಿಂದ ಯೆಲ್ಲರಿಗೂ ತಂದೇಯಾಗಿರುವೆನು, ಅಂಥಾತಂದೆಯಾದ ನನ್ನನ್ನು ಬಿಟ್ಟು ಅನ್ಯದೇವತೆಗಳ ನ್ನಾರಾಧಿಸುವಂತವರಿಗೇ ಫಲಪ್ರಾಪ್ತಿಯೇ ಇಲ್ಲವು, ಮಹಾಫಲವಾದ ಮೋಕ್ಷವು ಪ್ರಾಪ್ತವಾಗುವುದು ಹೇಗೆ? ಎಂಬದಾಗಿ ಸಮಾಧಾನ ಪಡಿಸುತ್ತಾನೆ. ಗುಣ ಕರ್ಮ ವಿಭಾಗಶಃ- ಸತ್ವಾದಿ ಗುಣ ವಿಭಾಗದಿಂದಲೂ, ಕರ್ಮ ವಿಭಾಗದಿಂದಲೂ, ಚತುರ್ವ್ವರ್ಣ್ಣ ಸಮೂಹವು ನನ್ನಿಂದ ಸೃಷ್ಟಿಸಲ್ಪಟ್ಟಿತು. ಜನರು "ಸಾತ್ವಿಕ ಸಾತ್ವಿಕರು, ರಾಜ ಸಸಾತ್ವಿಕರು, ತಾಮಸ ಸಾತ್ವಿಕರು, ಎಂಬದಾಗಿ ಮೂರುವಿಧಗಳಾಗಿರುವರು. ಅವರಲ್ಲಿ ರಾಜಸ ಸಾತ್ವಿಕರಿಲ್ಲಿ ಗ್ರಹಣ ಮಾಡಲ್ಪಟ್ಟಿರುವರು. ಅಂಥಾ ರಾಜ ಸಸಾತ್ವಿಕರಲ್ಲಿ (ಮ) ಸತ್ವಗುಣ ಪ್ರಧಾನನಾದವನು ಬ್ರಾಹ್ಮಣನು. (ಗೀ॥ ವಿ) ಸತ್ವಗುಣಾಧಿಕ್ಯದಿಂದ ರಜೋಗುಣ ಯುಕ್ತನಾದವನು ಬ್ರಾಹ್ಮಣನು, ಶಮಾದಿಗಳು ಕರ್ಮ್ಮಗಳು. ( ಮ ) ಸತ್ವ ರಜೋಗುಣಗಳುಳ್ಳವನು ಕ್ಷತ್ರಿಯನು. ( ಗಿ ॥ ವಿ ) ಸತ್ವಗುಣಕ್ಕಿಂತಲೂ ಅಧಿಕವಾದರಜೋಗುಣವುಳ್ಳವರು ಕ್ಷತ್ರಿಯರು, ಇವರಿಗೆ ಶೌರ್ಯದಾನಾದಿಗಳು ಕರ್ಮ್ಮಗಳು. (ಮ॥) ರಜಸ್ತಮೋಗುಣಗಳುಳ್ಳವನು ವೈಶ್ಯನು. (ಗೀ॥ ವಿ) ತಮೋಗುಣಕ್ಕಿಂತಲೂ ಅಧಿಕವಾದ ಸತ್ವಗುಣಕ್ಕೆ ಸಮವಾಗಿರುವ ರಜೋಗುಣವುಳ್ಳವರು ವೈಶ್ಯರು, ಇವರುಗಳಿಗೆ ಗೋರಕ್ಷಣ ಕೃಷಿವಾಣಿಜ್ಯಾದಿಗಳು ಕರ್ಮ್ಮಗಳು. (ಮ॥) ತಮೋಗುಣವುಳ್ಳವನು ಶೂದ್ರನು. (ಗೀ॥ವಿ॥) ಸ್ವಲ್ಪವಾಗಿ ಸತ್ವಗುಣವೂ, ಅದಕ್ಕಿಂತಲೂ ಅಧಿಕವಾದ ರಜೋಗುಣವೂ, ಇವುಗಳಿಗಿಂತಲೂ ಅತ್ಯಧಿಕವಾದ ತಮೋಗುಣವುಳ್ಳವರು ಶೂದ್ರರು, ಇವರಿಗೆ ತ್ರೈವರ್ಣ್ಣಿಕರ ಶುಶ್ರೂಷಾದಿಗಳೇ ಕರ್ಮ್ಮಗಳೆಂಬದಾಗಿ ಗುಣಕರ್ಮ ವಿಭಾಗಗಳನ್ನರಿಯಬೇಕು. ಆದರೆ ಚಾತುರ್ವ್ವರ್ಣ್ಯಕ್ಕೂ ಪರಮಾತ್ಮನಾದ ನೀನು ಹೇಗಾದರೆ ಕರ್ತ್ತಾ ಆಗಿರುತ್ತೀಯೊ ಅದೇ ಪ್ರಕಾರವಾಗಿ ನಿನಗೂ ಸೃಷ್ಟಿಕರ್ತರುಂಟೋ ? ಎಂದರೇ ನಾಲ್ಕುವರ್ಣ ಸಮುದಾಯಕ್ಕೆ ನಾಶರಹಿತನಾದ ನಾನು ಕರ್ತಾ ಆದರೂ

ನಾನು ಕರ್ತ್ರಂತರ ಶೂನ್ಯನು (ನನಗೆ ಸೃಷ್ಟಿಕರ್ತರು ಯಾರೂ ಇಲ್ಲವು) ಎಂಬದಾಗಿ ತಿಳಿದುಕೊಳ್ಳುವಂತವನಾಗು. (ಅಥವಾ) ಪರಮಾತ್ಮನಾದ ನಿನ್ನಿಂದ ನಾಲ್ಕು ವರ್ಣಗಳು ಸೃಷ್ಟಿಸಲ್ಪಟ್ಟಿರುವವು. ಇಂಥಾ ಸೃಷ್ಟಿಕರ್ತೃತ್ವದಿಂದ ಜೀವನಂತೆ ನಿನಗೂ ಕರ್ಮಲೇಪವುಂಟಾಗುವುದೋ ? ಎಂದರೇ ಪರಮಾತ್ಮನಿಗೆ ಕರ್ಮಲೇಪವಿಲ್ಲವೆಂಬುವುದನ್ನು ಮುಂದಿನ ಶ್ಲೋಕದಿಂದ ಹೇಳಲುದ್ದೇಶಿಸಿ ಕರ್ಮಲೇಪವಿಲ್ಲದೇ ಇರುವುದಕ್ಕೆ ಕಾರಣವನ್ನಿಲ್ಲಿ ಹೇಳುತ್ತಾನೆ. ಜೀವಾತ್ಮನ ಕರ್ತೃತ್ವಕ್ಕಿಂತಲೂ ವಿಲಕ್ಷಣ ಕರ್ತೃತ್ವವಿರುವುದರಿಂದ ನಾನು ನಾಲ್ಕು ವರ್ಣಗಳ ಸಮುದಾಯ ಕರ್ತೃತ್ವವುಳ್ಳವನಾದರೂ ಕರ್ತೃತ್ವವಿಲ್ಲದವನನ್ನಾಗಿಯೇ ನನ್ನನ್ನು ತಿಳಿದುಕೊಳ್ಳುವಂತವನಾಗು. ||೧೩||

ಮೂ || ನಮಾಂ ಕರ್ಮಾಣಿ ಲಿಂಪಂತಿ ನಮೇ ಕರ್ಮ ಫಲೇ
ಸ್ಪೃಹಾ | ಇತಿಮಾಂ ಯೋಽಭಿಜಾನಾತಿ ಕರ್ಮಭಿರ್ನಸ
ಬಧ್ಯತೇ || ... ... ||೧೪||

ಪ|| ನ- ಮಾಂ- ಕರ್ಮಾಣಿ- ಲಿಂಪಂತಿ- ನ- ಮೇ- ಕರ್ಮಫಲೇ- ಸ್ಪೃಹಾ | ಇತಿ- ಮಾಂ- ಯಃ- ಅಭಿಜಾನಾತಿ- ಕರ್ಮಭಿಃ- ನ- ಸಃ- ಬಧ್ಯತೇ || ... ||೧೪||

ಅ|| ಕರ್ಮಾಣಿ- ಕರ್ಮಗಳು, ಮಾಂ- ನನ್ನನ್ನು, ನಲಿಂಪಂತಿ- ಅಂಟುವುದಿಲ್ಲವು, ಕರ್ಮಫಲೇ- ಕರ್ಮಫಲದಲ್ಲಿ, ಮೇ- ನನಗೆ, ಸ್ಪೃಹಾ- ಅಪೇಕ್ಷೆಯು, ನ - ಇಲ್ಲವು, ಇತಿ – ಈ ಪ್ರಕಾರವಾಗಿ, ಮಾಂ- ನನ್ನನ್ನು, ಯಃ – ಯಾವನು, ಅಭಿಜಾನಾತಿ – ತಿಳಿದುಕೊಳ್ಳುತ್ತಾನೆಯೊ, ಸಃ-ಅವನು, ಕರ್ಮಭಿಃ-ಕರ್ಮಗಳಿಂದ, ನಬಧ್ಯತೇ-ಕಟ್ಟಲ್ಪಡಲಾರನು||೧೪||

(ಶಂ|| ಭಾ||) ಯಾವ ಸೃಷ್ಟ್ಯಾದಿ ಕರ್ಮಗಳಿಗೆ ನನ್ನನ್ನು ಕರ್ತಾ ಎಂಬದಾಗಿ ತಿಳಿದುಕೊಳ್ಳುತ್ತೀಯೋ ಅಂಥಾ ಕರ್ಮಗಳಿಗೂ ಕರ್ಮಫಲಗಳಿಗೂ ಸಂಬಂಧವಿಲ್ಲದವನನ್ನಾಗಿ ನನ್ನನ್ನರಿಯುವಂತವನು ಅಂಥಾ ತಿಳುವಳಿಕೆಗೆ ಯೋಗ್ಯವಾದ ಮೋಕ್ಷರೂಪವಾಗಿರುವ ಫಲವನ್ನು ಹೊಂದುತ್ತಾನೆಂದೀ ಶ್ಲೋಕದಿಂದ ಶ್ರೀಕೃಷ್ಣನರ್ಜುನನಿಗೆ ಬೋಧಿಸುತ್ತಾನೆ.—ಎಲೈ ಅರ್ಜುನನೇ! ಪರಮಾತ್ಮನಾದ ನಾನು ಯಾವ ಕರ್ಮಕ್ಕೆ ಕರ್ತಾ ಎಂಬದಾಗಿ ತಿಳಿದಿರುವಿಯೋ ಅಂಥಾ ಕರ್ಮಗಳು ದೇಹೇಂ

ದ್ರಿಯಾದಿಗಳಿಗೆ ಆರಂಭಕವಾಗಿರುವ ಅಹಂಕಾರ ವಿಲ್ಲದವನಾದುದ ರಿಂದ ನನ್ನನ್ನು ಲೇಪಿಸುವುದಿಲ್ಲವು. ಅಂಥಾ ಕರ್ಮಫಲಗಳಲ್ಲಿಯೂ ನನಗೆ ಅಪೇಕ್ಷೆಯಿಲ್ಲವು. ಯಾವ ಸಂಸಾರಿಗಳಿಗಾದರೇ ಕರ್ಮಗಳಲ್ಲಿ "ನಾನು ಮಾಡತಕ್ಕವನು" ಎಂಬ ಅಭಿಮಾನವು, ಆ ಕರ್ಮಫಲಗಳ ಲ್ಲಪೇಕ್ಷೆಯೂ ಇರುವುದೊ ಅವರನ್ನು ಕರ್ಮಗಳು ಲೇಪಿಸುವುವು; ಅವು ಗಳಿಲ್ಲವಾದುದರಿಂದ ನನ್ನನ್ನು ಕರ್ಮಗಳು ಲೇಪಿಸುವುದಿಲ್ಲವು. ಈ ಪ್ರ ಕಾರವಾಗಿ ಯಾವನಾದರೇ ನಾನು ಕರ್ಮಗಳನ್ನು ಮಾಡತಕ್ಕವನಲ್ಲವೆಂ ಬದಾಗಿಯೂ, ನನಗೆ ಕರ್ಮಫಲಗಳಲ್ಲಪೇಕ್ಷೆಯಿಲ್ಲವೆಂಬದಾಗಿಯೂ, ನನ್ನನ್ನು ಆತ್ಮನನ್ನಾಗಿಯೂ ತಿಳಿದುಕೊಳ್ಳುತ್ತಾನೆಯೋ ಅವನು ಕರ್ಮಗಳಿಂದ ಕಟ್ಟಲ್ಪಡಲಾರನು. ಅಂತವನಿಗೂ ದೇಹೇಂದ್ರಿಯಾದ್ಯಾ ರಂಭಕಗಳಾದ ಕರ್ಮಗಳುಂಟಾಗುವುದಿಲ್ಲವೆಂದು ತಾತ್ಪರ್ಯವು. ‖೧೪‖

(ರಾ‖ ಭಾ‖) ಈ ಪ್ರಕಾರವಾದ ವಿಚಿತ್ರ ಸೃಷ್ಟಿ ಮೊದಲಾದವು ಗಳನ್ನು ಪರಮಾತ್ಮನು ಮಾಡತಕ್ಕವನಾದರೂ ಮಾಡತಕ್ಕವನಲ್ಲವೆಂ ಬದಾಗಿ ತಿಳಿದುಕೊಳ್ಳುವದು ಹೇಗೆ ? ಎಂದರೆ ಪ್ರತ್ಯುತ್ತರವನ್ನನು ಗ್ರಹಿಸುತ್ತಾನೆ. ಯಾವ ಕಾರಣದಿಂದ ವಿಚಿತ್ರವಾದ ಈ ಸೃಷ್ಟ್ಯಾದಿ ವ್ಯಾಪಾರಗಳಲ್ಲಿ ನನಗೆ ಯಾವದೊಂದು ಸಂಬಂಧವೂ ಇಲ್ಲವೊ, ದೇವ ನನ್ನಾಗಿಯೂ, ಮನುಷ್ಯನನ್ನಾಗಿಯೂ, ಸೃಷ್ಟಿಸುವುದೂ ತತ್ತ ತ್ಪ್ರಾಣಿಗಳ ಪೂರ್ವಪೂರ್ವ ಪುಣ್ಯಪಾಪಗಳೆಂಬ ಕರ್ಮವಿಶೇಷಾಧೀನವಾ ಗಿರುವುದರಿಂದ ನನ್ನಿಂದುಂಟಾಗತಕ್ಕದ್ದಾಗಿಲ್ಲವೋ ಆ ಕಾರಣದಿಂದ ಪುಣ್ಯಪಾಪಾಧೀನಗಳಾಗಿರುವ ಸುಖದುಃಖತಾರತಮ್ಯಗಳೇನು, ದೇವ ಮನುಷ್ಯಾದಿ ವಿಚಿತ್ರಸೃಷ್ಟಿಯೇನು, ಇವುಗಳ ತಾರತಮ್ಯ ದರ್ಶನ ದಿಂದ ಮಾಡಲ್ಪಟ್ಟ ವಿಶೇಷ ನಿಷ್ಕರ್ಷದಿಂದ ದೇವಮನುಷ್ಯಾದಿ ವಿಚಿ ತ್ರಸೃಷ್ಟಿಯನ್ನು ನಾನು ಮಾಡತಕ್ಕವನಲ್ಲವು. ಭೂಮಿಯಲ್ಲಿ ನಾನಾ ವಿಧವಾದ ಮೊಳಕೆಗಳುಂಟಾಗುವುದಕ್ಕೆ ಭೂಮಿಯು ನೀರು ಹೇಗಾ ದರೇ ಸಾಮಾನ್ಯಕಾರಣವಾಗಿ ಅಂಕುರೋತ್ಪತ್ತಿಯಲ್ಲಿ ಆಯಾ ಬೀಜಗಳು ವಿಶೇಷ ಪ್ರಯೋಜಕಗಳಾಗಿರುವುವೋ ಆ ಪ್ರಕಾರವಾಗಿಯೇ ದೇವ ಮನುಷ್ಯಾದಿ ವಿಚಿತ್ರ ಸೃಷ್ಟಿಗೂ ನಾನು ಸಾಮಾನ್ಯಕಾರಣನಾಗಿದ್ದ ರೂ ಆಯಾ ಪ್ರಾಣಿಗಳ ಪುಣ್ಯಪಾಪ ಕರ್ಮಗಳು ವಿಶೇಷ ಪ್ರಯೋಜಕ

ಗಳಾಗಿರುವುದರಿಂದ ಅವುಗಳಿಗೆ ನಾನು ಅಕರ್ತಾ (ಮಾಡತಕ್ಕವನಲ್ಲ) ವಾಗಿರುವೆನು. ಈ ಪ್ರಕಾರವಾಗಿ ಸೃಷ್ಟಿಕರ್ತೃತ್ವದಲ್ಲಿ ತನಗೆ ವಿಶೇಷ ಪ್ರಯೋಜಕತ್ವ ವಿಲ್ಲವಾದುದರಿಂದ (ನಾನು ಅಕರ್ತಾ) ಎಂಬದಾಗಿ ಹೇಳಿ, ಸೃಷ್ಟಿಫಲದಲ್ಲಪೇಕ್ಷೆಯಿಲ್ಲದವನಾಗಿರುವುದರಿಂದಲೂ ನಾನು ಕರ್ತಾ ಅಲ್ಲವೆಂಬದಾಗಿ ಮುಂದೆ ಹೇಳುತ್ತಾನೆ. ಮತ್ತು ಸೃಷ್ಟಿಸಲ್ಪಡುವ ಪ್ರಾಣಿಗಳು, ಸೃಷ್ಟಿಯಲ್ಲಿ ತಮ್ಮಗಳಿಗೆ ಪ್ರಾಪ್ತವಾದ ಶರೀರೇಂದ್ರಿಯಾದಿಗಳನ್ನು ಹೊಂದಿದವರಾಗಿ ಫಲಾಪೇಕ್ಷೆಗೆ ಕಾರಣವಾದ ತಮ್ಮಗಳ ಕರ್ಮಾನುಸಾರವಾಗಿ ನಮ್ಮ ಸೃಷ್ಟಿಯಲ್ಲಡಗಿದ ಭೋಗ್ಯಪದಾರ್ಥಗಳನ್ನು ಅನುಭವಿಸುವುದರಿಂದ ಸೃಷ್ಟಿ ಮೊದಲಾದ ವ್ಯಾಪಾರಗಳಿಂದುಂಟಾಗುವ ಫಲದಲ್ಲಪೇಕ್ಷೆಯೂ ಅವರುಗಳಿಗಲ್ಲದೆ ನನಗಿಲ್ಲವು, ಈ ಅರ್ಥವನ್ನು ಸೂತ್ರಕಾರರೂ "ವೈಷಮ್ಯ ನೈರ್ಘೃಣ್ಯೇನಸಾಪೇಕ್ಷತ್ವಾತ್" ಎಂಬದಾಗಿ ಹೇಳಿರುತ್ತಾರೆ. ಪರಮಾತ್ಮನು ಒಬ್ಬನನ್ನು ದೇವತೆಯಾಗಿಯೂ ಮತ್ತೊಬ್ಬನನ್ನು ಮನುಷ್ಯನನ್ನಾಗಿಯೂ, ಮನುಷ್ಯರಲ್ಲಿಯೇ ಒಬ್ಬರನ್ನು ಆಢ್ಯರನ್ನಾಗಿಯೂ, ಒಬ್ಬರನ್ನು ದರಿದ್ರರನ್ನಾಗಿಯೂ ಸೃಷ್ಟಿಸುವದರಿಂದ ವೈಷಮ್ಯ ನೈರ್ಘೃಣ್ಯಗಳೆಂಬ ದೋಷಗಳು ಸೃಷ್ಟಿಕರ್ತನಾದ ಪರಮಾತ್ಮನಿಗೆಪ್ರಾಪ್ತವಾಗಲಾರದೋ? ಎಂದರೆ ಪ್ರಾಣಿಗಳ ಪುಣ್ಯಪಾಪಗಳೆಂಬ ತತ್ತತ್ಕರ್ಮಗಳನ್ನಪೇಕ್ಷಿಸಿ ತದನುಸಾರವಾಗಿ ಸೃಷ್ಟಿಸುವುದರಿಂದ ಆ ದೋಷವುಂಟಾಗುವುದಿಲ್ಲವೆಂದು ಸೂತ್ರಾರ್ಥವು. ಇದನ್ನೇ ಶ್ರೀಪರಾಶರ ಮಹಾಮುನಿಗಳೂ "ನಿಮಿತ್ತಮಾತ್ರಮೇವಾಯಂ ಸೃಜ್ಯಾನಾಂಸರ್ಗಕರ್ಮಣಿ । ಪ್ರಧಾನಕಾರಣೀಭೂತಾ ಯತೋವೈಸೃಜ್ಯ ಶಕ್ತಯಃ ॥ ನಿಮಿತ್ತ ಮಾತ್ರಂ ಮುಕ್ತ್ವೈದಂ ನಾನ್ಯತ್ಕಿಂಚಿದಪೇಕ್ಷತೇ । ನೀಯತೇತಪತಾಂಶ್ರೇಷ್ಠಸ್ವಶಕ್ತ್ಯಾವಸ್ತುವಸ್ತುತಾಂ ॥" ಎಂಬದಾಗಿ ಶ್ರೀವಿಷ್ಣುಪುರಾಣ ೧ನೇ ಅಂಶದ ೪ನೇ ಅಧ್ಯಾಯದಲ್ಲಿ (ಶ್ಲೋ॥ ೫೧॥ ೫೨॥) ಹೇಳಿರುತ್ತಾರೆ. ಸೃಷ್ಟಿಸಲ್ಪಡುವ ಜೀವರುಗಳ ಸೃಷ್ಟಿಗೆ ಈ ಪರಮಾತ್ಮನು ನಿಮಿತ್ತಮಾತ್ರನಲ್ಲದೆ ದೇವಾದಿ ವೈಚಿತ್ರ್ಯಗಳಿಗೆಲ್ಲವು ಜೀವರುಗಳ ಪೂರ್ವಪೂರ್ವ ಕರ್ಮಗಳೇ ಪ್ರಧಾನ ಕಾರಣಗಳಾಗಿರುವುವು. ಆದುದರಿಂದ ಈ ಜೀವರಾಶಿಯು ನಿಮಿತ್ತಮಾತ್ರಕಾಗಿ ಪರಮಾತ್ಮನನ್ನಪೇಕ್ಷಿಸಿ ತಮ್ಮ

ಗಳ ಪ್ರಾಚೀನ ಕರ್ಮಾನುಸಾರದಿಂದಲೇ ದೇವಾದಿಭೇದವನ್ನು ಹೊಂದುವುದೆಂದು ಪ್ರಮಾಣಾರ್ಥವು. ||೧೩೫||

(ರಾ|| ಭಾ||) ಈ ಪ್ರಕಾರವಾಗಿ ಸೃಷ್ಟ್ಯಾದಿ ಮೊದಲಾದ ವ್ಯಾಪಾರಗಳಿಗೆ ನಾನು ಕರ್ತಾ ಆಗಿದ್ದರೂ ಕರ್ತಾ ಅಲ್ಲವೆಂಬುವುದನ್ನೂ ಆ ಪ್ರಕಾರವಾಗಿಯೇ ಸೃಷ್ಟಿ ಮೊದಲಾದ ವ್ಯಾಪಾರಗಳಿಂದುಂಟಾಗುವ ಫಲದಲ್ಲಿ ನನಗೆ ಸ್ವಲ್ಪವು ಸಂಬಂಧವಿಲ್ಲವೆಂಬುವುದನ್ನೂ ಯಾವನರಿಯುವನೋ ಅವನು ಕರ್ಮಯೋಗಾರಂಭಕ್ಕೆ ವಿರೋಧಿಗಳಾದ ಫಲಾಪೇಕ್ಷಾದಿಗಳಿಗೆ ಕಾರಣಗಳಾಗಿರುವ ಪ್ರಾಚೀನ ಕರ್ಮಗಳಿಂದ ಬಿಡಲ್ಪಡುವನು. ||೧೪||

(ಮ|| ಭಾ||) ಜಗತ್ಸೃಷ್ಟ್ಯಾದಿ ಕರ್ಮಗಳು ವೈಷಮ್ಯ ನೈರ್ಘೃಣ್ಯಾದಿಗಳಿಲ್ಲವಾದುದರಿಂದ ನನ್ನನ್ನಂಟುವುದಿಲ್ಲವು. ಅಪೇಕ್ಷಾರಾಹಿತ್ಯದಿಂದ ನನಗೆ ಫಲಗಳ ಸಂಬಂಧವಿಲ್ಲವು. .. ||೧೪||

(ಗೀ|| ವಿ||) ಜೀವವಿಲಕ್ಷಣವಾಗಿರುವ ಕ್ರಿಯಾ ಕರ್ತೃತ್ವವುಳ್ಳವನಾಗಿರುವುದರಿಂದ ವಸ್ತುತಃ ನಾನು ಕರ್ತಾ ಅಲ್ಲವು. ಆದುದರಿಂದ ಕರ್ಮಗಳು ನನ್ನನ್ನಂಟುವುದಿಲ್ಲವು. ಮತ್ತು ಜೀವರಿಗೆ ಕರ್ಮಲೇಪದಲ್ಲಿ ಫಲಾಪೇಕ್ಷೆಯು ಹೇತುವಾಗಿರುವುದು. ಅಂಥಾ ಫಲಾಭಿನಿವೇಶವೂ ನನಗಿಲ್ಲವು. ಆದುದರಿಂದ ಕರ್ಮಗಳಾದರೂ ಫಲವಾದರೂ ನನ್ನನ್ನು ಬದ್ಧನಾಗಿ ಮಾಡಿಸಲಾರವು. ನನ್ನನ್ನು ಕರ್ಮಗಳಂಟುವುದಿಲ್ಲವೆಂದು ಯಾರು ತಿಳಿಯುತ್ತಾರೋ ಅಂತವರಿಗೂ ಕೂಡ ಕರ್ಮಬದ್ಧತ್ವವಿಲ್ಲವಾದುದರಿಂದ ನನ್ನ ವಿಷಯದಲ್ಲಿ ಹೇಳಬೇಕಾದದ್ದೇನಿರುವುದು. " ಯಾವನು ನನ್ನನ್ನೀಪ್ರಕಾರವಾಗಿ ತಿಳಿಯುತ್ತಾನೊ " ಎಂಬ ಸ್ಥಾನದಲ್ಲಿ "ಯಾವನು ನನ್ನನ್ನು " ಎಂಬಪದದ್ವಯಪ್ರಯೋಗದಿಂದ ತಾನು ಈಶ್ವರನಾಗಿರುವುದರಿಂದ ತನ್ನನ್ನು ಕುರಿತು ಕರ್ಮಲೇಪ ವುಂಟಾಗುವುದಿಲ್ಲವೆಂತಲೂ, ಈ ರೀತಿಯಾಗಿ ತಿಳಿಯತಕ್ಕವರೂ ಕೂಡ ಬದ್ಧರಾಗುವುದಿಲ್ಲವಾದುದರಿಂದಲೂ ಎಂಬದಾಗಿ ಅರ್ಥವೇರ್ಪಡುವುದರಿಂದ ಜೀವೇಶ್ವರಾಭೇದನಿರಾಕರಣವು ಸಿದ್ಧವಾಯಿತೆಂದರಿಯಬೇಕು. ... ... ||೧೪||

ಮೂ || ಏವಂಜ್ಞಾತ್ವಾಕೃತಂಕರ್ಮ ಪೂರ್ವೈರಪಿಮುಮುಕ್ಷುಭಿಃ | ಕುರುಕರ್ಮೈವತಸ್ಮಾತ್ತ್ವಂ ಪೂರ್ವೈಃ ಪೂರ್ವತರಂಕೃತಂ || ... ||೧೫||

ಪ|| ಏವಂ- ಜ್ಞಾತ್ವಾ- ಕೃತಂ- ಕರ್ಮ- ಪೂರ್ವೈಃ- ಅಪಿ- ಮುಮುಕ್ಷುಭಿಃ | ಕುರು- ಕರ್ಮ- ಏವ- ತಸ್ಮಾತ್- ತ್ವಂ- ಪೂರ್ವೈಃ- ಪೂರ್ವತರಂ- ಕೃತಂ ||೧೫||

ಅ|| ಏವಂ- ಈ ಪ್ರಕಾರವಾಗಿ, ಜ್ಞಾತ್ವಾ- ತಿಳಿದು, ಪೂರ್ವೈಃ- ಪೂರ್ವೀಕರಾದ, ಮುಮುಕ್ಷುಭಿರಪಿ- ಮೋಕ್ಷಾಪೇಕ್ಷೆಯುಳ್ಳವರಿಂದಲೂ, ಕರ್ಮ- ಕರ್ಮವು, ಕೃತಂ- ಮಾಡಲ್ಪಟ್ಟಿತು. ತಸ್ಮಾತ್- ಅದುದರಿಂದ, ಪೂರ್ವೈಃ- ಮುಂದಿನವರಿಂದ, ಕೃತಂ- ಮಾಡಲ್ಪಟ್ಟ, ಪೂರ್ವತರಂ- ಬಹುಕಾಲದಿಂದ ಅನುಷ್ಠಿಸತಕ್ಕದ್ದೆಂಬುದಾಗಿ ಬಂದಿರುವ, ಕರ್ಮೈವ- ಕರ್ಮವನ್ನೇ, ತ್ವಂ- ನೀನು, ಕುರು-ಮಾಡು. ||೧೫||

(ರಾ ಭಾ||) ಈ ಪ್ರಕಾರವಾಗಿ ನನ್ನ ಸ್ವರೂಪ ಸ್ವಭಾವವೇ ಮೊದಲಾದವುಗಳನ್ನು ತಿಳಿದು ಅದರಿಂದ ಸಕಲ ಪಾಪಗಳನ್ನು ಹೋಗಲಾಡಿಸಿಕೊಂಡು ಪೂರ್ವೀಕರಾದ ಮೋಕ್ಷಾರ್ಥಿಗಳನೇಕರು ಕರ್ಮವನ್ನೇ ಅನುಷ್ಠಿಸಿದರು. ಆದುದರಿಂದ ನೀನೂ ಆ ಪ್ರಕಾರವಾಗಿಯೇ ಈಗ ನಾನು ಹೇಳಿರುವಂತೆ ನನ್ನನ್ನು ತಿಳಿದು ಅದರಿಂದ ಪಾಪರಹಿತನಾಗಿ, ವಿವಸ್ವಾನ್, ಮನು, ಮೊದಲಾದ ಪೂರ್ವೀಕರಿಂದ ಮಾಡಲ್ಪಟ್ಟದ್ದಾಗಿಯೂ ಆ ಕಾಲದಲ್ಲಿಯೇ ನನ್ನಿಂದುಪದೇಶಿಸಲ್ಪಟ್ಟಿರುವುದಾಗಿಯೂ ಇರುವ ಪುರಾತನವಾದ ಕರ್ಮಯೋಗವನ್ನು ನಾನು ಹೇಳುವಪ್ರಕಾರವಾಗಿ ಅನುಷ್ಠಿಸಬೇಕು. ... ... ||೧೫||

ಮೂ|| ಕಿಂಕರ್ಮ ಕಿಮಕರ್ಮೇತಿ ಕವಯೋಽಪ್ಯತ್ರ ಮೋಹಿತಾಃ| ತತ್ತೇ ಕರ್ಮ ಪ್ರವಕ್ಷ್ಯಾಮಿ ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್ || ... ||೧೬||

ಪ|| ಕಿಂ- ಕರ್ಮ- ಕಿಂ- ಅಕರ್ಮ- ಇತಿ-ಕವಯಃ- ಅಪಿ- ಅತ್ರ- ಮೋಹಿತಾಃ| ತತ್- ತೇ- ಕರ್ಮ- ಪ್ರವಕ್ಷ್ಯಾಮಿ- ಯತ್- ಜ್ಞಾತ್ವಾ- ಮೋಕ್ಷ್ಯಸೇ- ಅಶುಭಾತ್ ||೧೬||

ಅ|| ಕಿಂಕರ್ಮ- ಯಾವದು ಕರ್ಮವು ? ಅಕರ್ಮಕಿಂ- ಅಕರ್ಮವು ಯಾವದು ? ಇತ್ಯತ್ರ- ಎಂದೀವಿಷಯದಲ್ಲಿ- ಕವಯೋಪಿ- ಪಂಡಿತರುಕೂಡ, ಮೋಹಿತಾಃ- ಮೋಹಿಸುತ್ತಾರೆ. ಯತ್- ಯಾವದನ್ನು, ಜ್ಞಾತ್ವಾ- ತಿಳಿದು, ಅಥವಾ ಅನುಷ್ಠಿಸಿ, ಅಶುಭಾತ್- ಸಂಸಾರದಿಂದ, ಮೋಕ್ಷ್ಯಸೇ- ಬಿಡಲ್ಪಡುವಿಯೊ, ತತ್ಕರ್ಮ- ಅಂಥಾಕರ್ಮವನ್ನು, ತೇ- ನಿನಗೆ, ಪ್ರವಕ್ಷ್ಯಾಮಿ- ಹೇಳುವೆನು. ... ... ||೧೬||

(ಶಂ|| ಭಾ||) ಮನುಷ್ಯ ಲೋಕದಲ್ಲಿ ಕರ್ಮವು ಮಾಡತಕ್ಕದ್ದಾಗಿದ್ದರೆ ಅದನ್ನು ನಿನ್ನವಾಕ್ಯದಿಂದಲೇ ನಾನು ಮಾಡುವೆನು. ಆದರೇ ನೀನು

ಪೂರ್ವರಿಂದಲೂ ಮಾಡಲ್ಪಟ್ಟಿರುವುದೆಂತಲೂ, ಅತ್ಯಂತ ಪ್ರಾಚೀನವಾಗಿರುವುದೆಂತಲೂ ಈ ಕರ್ಮವನ್ನು ವಿಶೇಷವಾಗಿ ಹೇಳುವುದಕ್ಕೆ ಕಾರಣವೇನು ? ಎಂಬದಾಗಿ ಅರ್ಜುನನ ಪ್ರಶ್ನವನ್ನು ತಾನಾಗಿಯೇ ಚಿಂತಿಸಿ ಕರ್ಮಾಕರ್ಮಗಳಲ್ಲಧಿಕವಾದ ವೈಷಮ್ಯವಿರುವುದರಿಂದ ಅದಂ ತಿಳಿದು ಆಚರಿಸುವುದು ಅತ್ಯಂತ ಕಷ್ಟವಾಗಿರುವುದೆಂತಲೂ, ಪೂರ್ವೀಕರಿಂದಆಚರಿಸಲ್ಪಟ್ಟಿರುವುದರಿಂದ ಪ್ರಾಚೀನ ವಾಗಿರುವುದೆಂತಲೂ ಪೇಳಿದ ಪಕ್ಷದಲ್ಲಿ ಅಂಥಾ ಕರ್ಮದಲ್ಲಿ ನಿನಗೆ ಪ್ರವರ್ತಿಯು ಸುಕರವೆಂತಲೂ ಹೇಳುತ್ತಾನೆ. ಎಲೈ ಅರ್ಜುನನೇ ? ಯಾವದು ಕರ್ಮವು ? ಯಾವದು ಅಕರ್ಮವು ? ಇದಂ ತಿಳಿಯದೇ ಅಂಥಾ ಕರ್ಮಾ ಕರ್ಮ ವಿಷಯದಲ್ಲಿ ಮೇಧಾವಿಗಳು ( ಬುದ್ಧಿಯುಳ್ಳವರು) ಕೂಡಾ ಮೋಹವನ್ನು ಹೊಂದುತ್ತಾರೆ. ಆದುದರಿಂದ ಯಾವ ಕರ್ಮಾಕರ್ಮಗಳನ್ನು ನೀನುತಿಳಿದು ಸಂಸಾರದಿಂದ ಬಿಡಲ್ಪಡುವಿಯೊ ಅಂಥಾ ಕರ್ಮಾಕರ್ಮಗಳನ್ನು ನಿನಗುಪದೇಶಿಸುವೆನು. ... ... ||೧೬||

(ರಾ|| ಭಾ||) ಈಗ ನಾನು ಹೇಳಿರುವಂತೆ ಕರ್ಮ ಸ್ವರೂಪವನ್ನು ತಿಳಿಯುವುದು ಅತ್ಯಂತಕಷ್ಟವೆನ್ನುತ್ತಾನೆ. ಮೋಕ್ಷಾಪೇಕ್ಷೆಯುಳ್ಳವನಿಂದ ಮಾಡತಕ್ಕ ಕರ್ಮ ವ್ಯಾವರೀತಿಯಾಗಿರುವುದೊ ? ಆ ಕರ್ಮಾಂತರ್ಗತವಾದ ಆತ್ಮನ ಯಥಾರ್ಥಜ್ಞಾನವು ಯಾವರೀತಿಯಾಗಿರುವುದೊ? ಈ ಕರ್ಮಾಕರ್ಮಗಳನ್ನು ತಿಳಿಯದೇ ಮಹನೀಯರಾದ ವಿದ್ವಾಂಸರುಕೂಡ ಮೋಹಪಡುತ್ತಾರೆ. ಜ್ಞಾನವನ್ನು ಗರ್ಭೀಕರಿಸಿಕೊಂಡಿರುವ ಅಂಥಾ ಕರ್ಮವನ್ನು ಈಗ ನಾನು ನಿನಗುಪದೇಶಿಸುವೆನು. ಅದಂ ಕೇಳಿ ಸವಿಸ್ತಾರವಾಗಿ ತಿಳಿದುಕೊಂಡು ಯಥಾವತ್ತಾಗಿ ನೀನನುಷ್ಠಿಸಿದರೇ ಸಂಸಾರಬಂಧದಿಂದ ಬಿಡಲ್ಪಡುತ್ತೀಯೆ; ಕರ್ಮಸ್ವರೂಪವನ್ನರಿಯುವುದಕ್ಕೆ ಅದರ ಅನುಷ್ಠಾನವೇ ಫಲವಾಗಿರುವುದೆಂದರಿಯಬೇಕು. ||೧೬||

(ಗೀ|| ವಿ) ಇಲ್ಲಿ " ತತ್- ಕರ್ಮ, ಎಂಬದಾಗಿ ಮೊದಲು ಪದಚ್ಛೇದವಂ ಮಾಡಿರುತ್ತಾರೆ. ತತ್ಕರ್ಮ- ಆಕರ್ಮವನ್ನು, ತೇ- ನಿನಗೆ, ಪ್ರವಕ್ಷ್ಯಾಮಿ- ಹೇಳುತ್ತೇನೆ, ಕರ್ಮವನ್ನು ನಿನಗೆ ಹೇಳುತ್ತೇನೆಂಬುವುದರಿಂದ ಅಕರ್ಮವನ್ನು ಹೇಳಲಿಲ್ಲವೆಂದೇರ್ಪಡುವುದು. ಕರ್ಮ ಪ್ರವಕ್ಷ್ಯಾಮಿ ಎಂಬುವ ಸ್ಥಾನದಲ್ಲಿರುವ ಕರ್ಮಶಬ್ದವು ಅಕರ್ಮಕ್ಕೂ ಉಪಲಕ್ಷಣವಾ

ಗಿರುವುದು. ಅಕರ್ಮವನ್ನು ಕೂಡ ಹೇಳುತ್ತೇನೆಂದರ್ಥವು. ಅನುಷ್ಠಾನಪ್ರಾಧಾನ್ಯದಿಂದಿಲ್ಲಿ ಕರ್ಮಶಬ್ದವಾತ್ರಕ್ಕೆ ಗ್ರಹಣವು. ಇಲ್ಲಿ ಅಕರ್ಮವು ಗ್ರಹಿಸಲ್ಪಡುವುದಕ್ಕಾಗಿ ತತ್-ತೇ-ಅಕರ್ಮ-ಎಂಬದಾಗಿ ಪದಚ್ಛೇದವನ್ನು ಮಾಡಿರುತ್ತಾರೆಂದು ತಿಳಿಯಬೇಕು. ॥೧೬॥

ಮೂ॥ ಕರ್ಮಣೋ ಹ್ಯಪಿ ಬೋದ್ಧವ್ಯಂ ಬೋದ್ಧವ್ಯಂ
ಚ ವಿಕರ್ಮಣಃ । ಅಕರ್ಮಣಶ್ಚ ಬೋದ್ಧವ್ಯಂ ಗಹನಾ ಕ
ರ್ಮಣೋ ಗತಿಃ ॥ ... ... ॥೧೭॥

ಪ॥ ಕರ್ಮಣಃ- ಹಿ- ಅಪಿ- ಬೋದ್ಧವ್ಯಂ- ಬೋದ್ಧವ್ಯಂ- ಚ- ವಿಕರ್ಮಣಃ । ಅಕರ್ಮಣಃ- ಚ- ಬೋದ್ಧವ್ಯಂ- ಗಹನಾ- ಕರ್ಮಣಃ- ಗತಿಃ ॥ ... ॥೧೭॥

ಅ॥ ಕರ್ಮಣಃ- ಕರ್ಮದ, (ಶಂ॥ ಶ್ರೀ॥ ಮ॥ ಗೀ॥ ವಿ) ವೇದೋಕ್ತವಾದ ಸತ್ಕರ್ಮದ, (ರಾ) ಮೋಕ್ಷಸಾಧನವಾಗಿರುವ ಸತ್ಕರ್ಮದ, (ಸ್ವರೂಪವು) ಬೋದ್ಧವ್ಯಂ- ತಿಳಿಯಲ್ಪಡತಕ್ಕದ್ದಾಗಿರುವುದು. ವಿಕರ್ಮಣೋಽಪಿ ಚ- ವಿಕರ್ಮದ ಸ್ವರೂಪವೂ ಕೂಡ, (ಶಂ॥ ಶ್ರೀ॥ ಮ॥ ಗೀ॥ ವಿ॥) ಮಾಡತಕ್ಕದ್ದಲ್ಲವೆಂದು ವೇದದಿಂದ ನಿಷೇಧಿಸಲ್ಪಡುವ ನಿಷಿದ್ಧಕರ್ಮವು, (ರಾ) ನಿತ್ಯನೈಮಿತ್ತಿಕ ಕಾಮ್ಯ ಕರ್ಮಗಳ, ಮತ್ತು ಅವುಗಳಿಗೆ ಕಾರಣವಾದ ದ್ರವ್ಯಾರ್ಜನವೇ ಮೊದಲಾದ ವಿವಿಧಕರ್ಮಗಳ, ಸ್ವರೂಪವು; ಬೋದ್ಧವ್ಯಂ-ಅರಿಯತಕ್ಕದ್ದಾಗಿರುವುದು. ಅಕರ್ಮಣಶ್ಚ- ಅಕರ್ಮದ, (ಸ್ವರೂಪವು) (ಶಂ॥ ಶ್ರೀ॥ ಮ॥ ಗೀ॥ ವಿ) ಕರ್ಮವನ್ನು ಮಾಡದೆಯಿರುವಿಕೆಯು, (ಸ್ವರೂಪವು) (ರಾ) ಕರ್ಮದಲ್ಲತಗಿರುವ ಕರ್ತೃತ್ವವಿಲ್ಲದ ಆತ್ಮಸ್ವರೂಪಜ್ಞಾನವೂ, ಬೋದ್ಧವ್ಯಂ- ತಿಳಿಯತಕ್ಕದ್ದಾಗಿರುವುದು. (ಗೀ॥ ವಿ) ಕರ್ಮಣಃ- ನಃ- ನಮ್ಮಗಳಿಗೆ ಕರ್ಮ- ಕರ್ಮವು, (ಶ್ರೇಷ್ಠವಾಗಿರುವುದು.) ವಿಕರ್ಮಣಃ- ನಃ-ನಮ್ಮಗಳಿಗೆ, ವಿಕರ್ಮ- ವಿಕರ್ಮವು, ನಿಷಿದ್ಧವಾಗಿರುವುದು. (ವಿಕರ್ಮವೆಂದರೇ ನಿಷಿದ್ಧಕರ್ಮವು.) ಅಕರ್ಮಣಃ-ನಃ- ನಮ್ಮಗಳಿಗೆ, ಅಕರ್ಮ-ಸಕಲಕರ್ಮವು, ಈಶ್ವರಾಧೀನವಾಗಿರುವುದೆಂದು ವಿವೇಕಿಸಿ ತಿಳಿಯಬೇಕು. ಹಿ- ಏತಕ್ಕೆಂದರೆ, ಕರ್ಮಣಃ- ಕರ್ಮದ, ಗತಿಃ- ನಿಜಸ್ಥಿತಿಯು, ಗಹನಾ-ತಿಳಿಯಲಸಾಧ್ಯವಾಗಿರುವುದು. ॥೧೭॥

(ರಾ॥ ಭಾ॥) ಕರ್ಮಸ್ವರೂಪವನ್ನರಿಯುವಿಕೆಯು ದುರ್ಲಭವೆಂಬುವುದು ಯಾವದರಿಂದೆಂದರೆ ಹೇಳುತ್ತಾನೆ. ಇಲ್ಲಿ ಕರ್ಮವೆಂದರೆ ಮೋಕ್ಷಕ್ಕೆ ಸಾಧನವೆಂಬದಾಗಿ ಮಾಡುವ ವ್ಯಾಪಾರವು. ವಿಕರ್ಮವೆಂದರೆ, ನಿತ್ಯನೈಮಿತ್ತಿಕ ಕಾಮ್ಯಗಳೆಂಬದಾಗಿ ಪ್ರತ್ಯೇಕಿಸಿ ಶಾಸ್ತ್ರದಲ್ಲಿ ಹೇಳಲ್ಪಟ್ಟ ಕರ್ಮಗಳೂ, ಮತ್ತು ಅದಕ್ಕೆ ಸಾಧನವಾದ ದ್ರವ್ಯಾರ್ಜನವೇ ಮೊದಲಾ

ದ ಆಕಾರಗದಿಂದ ನಾನಾಪ್ರಕಾರವನ್ನು ಹೊಂದಿರುವಂತವುಗಳು. ಅಕರ್ಮವೆಂದರೇ ಕರ್ಮಕ್ಕಿಂತಲೂ ಇತರವಾದ ಜ್ಞಾನವು. ಕರ್ಮ- ವಿಕರ್ಮ- ಅಕರ್ಮಗಳೆಂಬ ಇವುಗಳಲ್ಲಿಒಂದೊಂದರಲ್ಲಿಯೂ ತಿಳಿಯತಕ್ಕವಿಷಯುಗಳಿರುವುದರಿಂದ ಮೋಕ್ಷಾಪೇಕ್ಷೆಯುಳ್ಳವನು ಮಾಡತಕ್ಕ ಕರ್ಮಮಾರ್ಗವನ್ನರಿಯುವುದು ದುರ್ಲಭವಾಗಿರುವುದು. ಇವುಗಳಲ್ಲಿ ವಿಕರ್ಮದಲ್ಲರಿಯಬೇಕಾದದ್ದೇನೆಂದರೆ, ನಿತ್ಯ, ನೈಮಿತ್ತಿಕ, ಕಾಮ್ಯ, ದ್ರವ್ಯಾರ್ಜನವೇ ಮೊದಲಾದ ತತ್ತತ್ಕರ್ಮಗಳಿಗನುಸಾರವಾಗಿ ಫಲವು ನಾನಾಪ್ರಕಾರವಾಗಿದ್ದರೂ ಅವುಗಳಲ್ಲಿ ಮನಸ್ಸನ್ನಿಡದೇ ಅವುಗಳಿಗೆಲ್ಲವು ಮೋಕ್ಷರೂಪವಾದ ಒಂದೇಫಲ ವಿರುವುದೆಂದು ಶಾಸ್ತ್ರಾರ್ಥಗಳನ್ನೊಂದಾಗಿಮಾಡಿ ನೆನೆಸುವುದು, ಈ ವಿಷಯುವು "ವ್ಯವಸಾಯಾತ್ಮಿಕಾಬುದ್ಧಿರೇಕಾ" (೨॥ ೪೧) ಎಂಬ ಶ್ಲೋಕದಲ್ಲಿ ವಿವರಿಸಲ್ಪಟ್ಟಿರುವುದರಿಂದ ಇಲ್ಲಿ ವಿವರಿಸಲಾರೆವು.॥ ... ... ॥೧೭॥

ಮೂ॥ ಕರ್ಮಣ್ಯಕರ್ಮಯಃ ಪಶ್ಯೇದಕರ್ಮಣಿಚ ಕರ್ಮ
ಯಃ। ಸಬುದ್ಧಿಮಾನ್ಮನುಷ್ಯೇಷು ಸಯುಕ್ತಃಕೃತ್ಸ್ನ
ಕರ್ಮಕೃತ್॥ ... ... ॥೧೮॥

ಪ॥ಕರ್ಮಣಿ-ಅಕರ್ಮ-ಯಃ-ಪಶ್ಯೇತ್-ಅಕರ್ಮಣಿ-ಚ-ಕರ್ಮ-ಯಃ | ಸಃ- ಬುದ್ಧಿಮಾನ್-ಮನುಷ್ಯೇಷು-ಸಃ-ಯುಕ್ತಃ-ಕೃತ್ಸ್ನಕರ್ಮಕೃತ್ ॥ ... ...

ಅ॥ ಕರ್ಮಣಿ-ಕರ್ಮದಲ್ಲಿ, ಅಕರ್ಮ-(ಶಂ)ಕರ್ಮಾಭಾವವನ್ನು, (ರಾ)ಆತ್ಮಜ್ಞಾನವನ್ನು, ಯಃ-ಯಾವನು,ಪಶ್ಯೇತ್-ನೋಡುತ್ತಾನೆಯೊ,ಅಕರ್ಮಣಿ-(ಶಂ)ಕರ್ಮಾಭಾವದಲ್ಲಿ,(ರಾ)ಆತ್ಮಜ್ಞಾನದಲ್ಲಿ, ಕರ್ಮ-ಕರ್ಮವನ್ನು, ಯಃ-ಯಾವನು, ಪಶ್ಯೇತ್-ನೋಡುತ್ತಾನೆಯೋ, ಸಃ-ಅವನು, ಮನುಷ್ಯೇಷು-ಮನುಷ್ಯರುಗಳಲ್ಲಿ, ಬುದ್ಧಿಮಾನ್- ಬುದ್ಧಿಯುಳ್ಳವನು, ಯುಕ್ತಃ-ಮನಸ್ಸಮಾಧಾನವುಳ್ಳವನಾಗಿಯೂ, ಸಃ-ಅವನು,ಕೃತ್ಸ್ನಕರ್ಮಕೃತ್- ಸಮಸ್ತಕರ್ಮಗಳನ್ನುಮಾಡಿದವನು. ... ... ॥೧೮॥

(ಶಂ॥ಭಾ॥) ಕರ್ಮಾಕರ್ಮಗಳತತ್ವವು ತಿಳಿಯತಕ್ಕದ್ದಾಗಿರುವುದು; ಅದಂ ನಿನಗೆ ತಿಳಿಯಪಡಿಸುವೆನೆಂದು ಪ್ರತಿಜ್ಞಮಾಡಿದ ಪ್ರಕಾರವಾಗಿ ಎಲೈ ಅರ್ಜುನನೇ ಅದು ನನ್ನಿಂದ ಹೇಳಲ್ಪಡುವುದು. ವ್ಯಾಪಾರವಂ ಮಾಡುವುದೆಂಬ ಕರ್ಮದಲ್ಲಿ ಕರ್ಮಾಭಾವವನ್ನು, (ಕರ್ಮವಲ್ಲದೇಇರುವಿಕೆಯನ್ನು) ಕರ್ಮವಲ್ಲದೆ ಇರುವುದರಲ್ಲಿ ಕರ್ಮವನ್ನು,ಯಾವನು ನೋಡು

ತ್ತಾನೆಯೂ ಅವನು ಮನುಷ್ಯರುಗಳಲ್ಲಿ ಬುದ್ಧಿವಂತ ನೆಂಬದಾಗಿಯೂ ಯೋಗಿಯೆಂಬದಾಗಿಯೂ, ಸರ್ವ ಕರ್ಮಗಳಂ ಮಾಡಿದವ ನೆಂಬದಾಗಿ ಯೂ ಹೇಳಲ್ಪಡುವನು.

ಆದರೆ ಪ್ರವೃತ್ತಿಯು, (ವ್ಯಾಪಾರವು) ಕರ್ಮವಾದರೂ ನಿವೃತ್ತಿ ಯು (ವ್ಯಾಪಾರವಿಲ್ಲದೆಇರುವಿಕೆಯು) ಕರ್ಮಾಭಾವವಾಗಿರುವುದರಿಂದ ಅಂಥಾ ಕರ್ಮಾಭಾವದಲ್ಲಿ ಕರ್ಮವನ್ನು ನೋಡುವುದು ವಿರುದ್ಧವಲ್ಲ ವೆ? ಎಂಬದಾಗಿ ಚಿಂತಿಸದೇ ಕರ್ಮಾಭಾವವೂ ಕರ್ಮದಂತೆ ಕರ್ತ್ರಧೀ ನವಾಗಿರುವುದೆಂತಲೂ, ಆದುದರಿಂದ ಪ್ರವೃತ್ತಿಯಂತೆ ನಿವೃತ್ತಿಯಲ್ಲಿ ಯೂ ಕರ್ಮವನ್ನು ನೋಡುವಿಕೆಯು ವಿರುದ್ಧವಾಗಲಾರದು.

ಆದರೂ ನಿವೃತ್ತಿಯೆಂಬುವುದು ಯಾವದಾದರೊಂದು ವಸ್ತುವಿನ ಅಧೀನವಾಗಿರುವುದರಿಂದಲೂ, ಕಾರಕ ನಿಬಂಧನ ವಿಲ್ಲದೆಇರುವುದರಿಂದ ಲೂ ನಿವೃತ್ತಿಯಲ್ಲಿ ಕರ್ಮದರ್ಶನವು ಹೇಗೆ ಸಂಭವಿಸಬಹುದೆಂದು ಯೋಚಿಸದೆ ಯಾವದೊಂದು ವಸ್ತುವನ್ನು ಹೊಂದದೇನೆ ಇದು ಕ್ರಿ ಯಾ-ಅದಕ್ಕಿದು ಸಾಧನವು- ಇವನು ಮಾಡತಕ್ಕವನು - ಇದು ಫಲ ವು, ಎಂಬ ಕ್ರಿಯಾಕಾರಕಫಲ ವ್ಯವಹಾರವೆಲ್ಲವೂ ಅವಿದ್ಯಾವಸ್ಥೆ ಯಲ್ಲಿಯೇ ಉಂಟಾಗಿರುವುದರಿಂದಲೂ,ವಸ್ತುಸಂಬಂಧವಿಲ್ಲದೆ ಇರುವು ದರಿಂದಲೂ, ಈ ವ್ಯವಹಾರವು ಯಾವದಾದರೊಂದು ವಸ್ತುವನ್ನಾಶ್ರ ಯಿಸದೇನೇ ಉಂಟಾಗಬಹುದೆಂದು ತಿಳಿಯಬೇಕು. ಆದುದರಿಂದೀ ಪ್ರಕಾರವಾಗಿ ವಿಚಾರಿಸಿ ಪ್ರವೃತ್ತಿಯಂತೆ ನಿವೃತ್ತಿಯಲ್ಲಿಯೂ ಕರ್ಮ ವನ್ನು ನೋಡುವಂತವನು ಬುದ್ಧಿಯುಳ್ಳವನೆಂತಲೂ, ಸಕಲ ಕರ್ಮಗ ಳನ್ನು ಮಾಡಿದವನೆಂತಲೂ ಯೋಗಿಯೆಂತಲೂ ಸ್ತೋತ್ರಮಾಡಲ್ಪ ಡುವನು.

"ಈ ಶ್ಲೋಕಾರ್ಥತಾತ್ಪರ್ಯವನ್ನು ತಿಳಿದುಕೊಳ್ಳದೇ ಒಂದು ವ ಸ್ತುವು ಮತ್ತೊಂದು ವಸ್ತುವಾಗದಂತೆ ಕರ್ಮಾಕರ್ಮಗಳಿಗೆ ಅಭೇದ ವಿಲ್ಲದ್ದರಿಂದ ಕರ್ಮವಿಷಯಜ್ಞಾನವು ಅಕರ್ಮವಿಷಯವಾದ ಜ್ಞಾನವಾ ಗಿಯೂ, ಅಕರ್ಮವಿಷಯಜ್ಞಾನವು ಕರ್ಮವಿಷಯವಾದ ಜ್ಞಾನವಾಗಿ ಯೂ ಆಗುವುದಿಲ್ಲವೆಂತಲೂ,( ಇದು ಒಂದನೇ ಪೂರ್ವಪಕ್ಷವು)ಕರ್ಮಾ ಕರ್ಮಗಳು ಅನ್ಯೋನ್ಯವಿರುದ್ಧಗಳಾದುದರಿಂದ ಇವುಗಳಿಗಾಧಾರಾಧೇ

ಯಭಾವವು (ಕರ್ಮದಲ್ಲಿ ಅಕರ್ಮವು ಅಕರ್ಮದಲ್ಲಿ ಕರ್ಮವಿರುವಿಕೆ ಯು)ಉಂಟಾಗುವುದಿಲ್ಲವೆಂತಲೂ, (ಇದು ದ್ವಿತೀಯಪೂರ್ವಪಕ್ಷವು) ಆದುದರಿಂದಲೇ ಕರ್ಮದಲ್ಲಿಅಕರ್ಮವನ್ನು ಅಕರ್ಮದಲ್ಲಿ ಕರ್ಮವನ್ನು ಯಾವನು ನೋಡುವನೋ ? ಎಂಬುವ ವಿರುದ್ಧಾಭಿಪ್ರಾಯವನ್ನುಉಪ ದೇಶಿಸುವುದು ಯುಕ್ತವಾಗಿರುವುದೋ" ? ಎಂಬ ಯೆರಡು ಪೂರ್ವಪ ಕ್ಷಗಳಿಗೂ ಇಲ್ಲಿ ಕ್ರಮವಾಗಿ ಪ್ರತ್ಯುತ್ತರವು ಹೇಳಲ್ಪಡುವುದು. ಒಂದು ವಸ್ತುವು ಬೇರೊಂದು ವಸ್ತುವಾಗದಂತೆ ಕರ್ಮಾಕರ್ಮಗಳಿಗೆ ಅಭೇ ದವಿಲ್ಲವಾದುದರಿಂದ ಕರ್ಮವಿಷಯವಾದ ಜ್ಞಾನವು ಅಕರ್ಮವಿಷಯವಾ ದಜ್ಞಾನವಾಗಿಯೂ, ಅಕರ್ಮವಿಷಯವಾದ ಜ್ಞಾನವು ಕರ್ಮವಿಷಯವಾ ದಜ್ಞಾನವಾಗಿಯೂ, ಆಗಕೂಡದೆಂಬ ಮೊದಲಿನ ಆಕ್ಷೇಪಕ್ಕೆ ಸಮಾಧಾ ನವನ್ನು ಹೇಳುತ್ತಾರೆ. ಬ್ರಹ್ಮವು ಪರಮಾರ್ಥವಾಗಿ ಕ್ರಿಯಾರಹಿತ ವಾಗಿಯೇ ಇದ್ದರೂ ವಿವೇಕವಿಲ್ಲದ ಮೂಢದೃಷ್ಟಿಯುಳ್ಳ ಜನರಿಗೆಕ್ರಿ ಯಾಸಹಿತವಾಗಿರುವಂತೆ ಕಾಣಲ್ಪಡುವಪ್ರಕಾರವೇ ಪ್ರಪಂಚವು ಪರ ಮಾರ್ಥವಾಗಿ ಕ್ರಿಯಾಯುಕ್ತವಾಗಿದ್ದರೂ ಕ್ರಿಯಾರಹಿತವಾಗಿರುವಂ ತೆ ವಿವೇಕವಿಲ್ಲದವರಿಗೆ ಕಾಣಲ್ಪಡುತ್ತದೆ. ಈರೀತಿಯಾಗಿಯೆ ಕರ್ಮ ದಲ್ಲಿ ಅಕರ್ಮಭ್ರಾಂತಿಯೂ, ಅಕರ್ಮದಲ್ಲಿಕರ್ಮಭ್ರಾಂತಿಯೂ ಎಂಬ ಪರ ಸ್ಪರಾಧ್ಯಾಸ ವುಂಟಾಗಿರುವುದರಿಂದ ಪರಮಾರ್ಥ ಜ್ಞಾನೋತ್ಪತ್ತಿಗಾಗಿ " ಕರ್ಮದಲ್ಲಕರ್ಮವನ್ನು ಅಕರ್ಮದಲ್ಲಿ ಕರ್ಮವನ್ನು ಯಾವನು ನೋಡುತ್ತಾ ನೆಯೋ" ಎಂಬದಾಗಿ ಪರಮಾತ್ಮನಿಂದ ಹೇಳಲ್ಪಡುವ ವಾಕ್ಯವು ವಿರು ದ್ಧವಾಗದೇ ಉಚಿತವಾಗಿಯೇಇರುವುದು. ಮತ್ತು ಆರೋಪಿತವಾದ ಕ ರ್ಮಾದಿಗಳನ್ನನುವಾದಮಾಡಿ ಅಂಥಾ ಆರೋಪಿತ ಕರ್ಮಾದಿಗಳಿಗೆ ಅಧಿ ಷ್ಠಾನವಾಗಿಯೂ ಕರ್ಮಾದಿಗಳಿಲ್ಲದ್ದಾಗಿಯೂ, ತನಗಿಂತಲೂ ವಿಶೇಷ ವಿಲ್ಲದ್ದಾಗಿಯೂ, ಇರುವ ಬ್ರಹ್ಮವನ್ನು ಪರಮಾತ್ಮನು ಬೋಧಿಸದೇ ಹೋದರೆ ಬುದ್ಧಿಯುಳ್ಳವನಾಗಿಯೂ, ಯೋಗಿಯಾಗಿಯೂ, ಸರ್ವಕ ರ್ಮಗಳನ್ನು ಮಾಡಿದವನಾಗಿಯೂ ಆಗುವುದು ಸಂಭವಿಸುವುದಿಲ್ಲವಾದ ಕಾರಣ ಈ ಶ್ಲೋಕದಿಂದ ಸರ್ವವಿಕಾರ ಶೂನ್ಯವಾದ ಬ್ರಹ್ಮಜ್ಞಾನವೇ ಉಪದೇಶಿಸಲ್ಪಟ್ಟಿರುವುದೆಂದರಿಯಬೇಕು. ಆದುದರಿಂದಲೂ ಭಗವ ದ್ವಾಕ್ಯವು ವಿರುದ್ಧವಾಗಿ ಕಂಡುಬರುವುದಿಲ್ಲವು. ಮತ್ತು ಪೂರ್ವಶ್ಲೋ

ಕದಲ್ಲಿ ಹೇಳಲ್ಪಟ್ಟಿರುವ 'ಬೋದ್ಧವ್ಯಂ, ಎಂಬ ಪದದಲ್ಲಿರುವ ಬೋಧ ಶಬ್ದವು ಬ್ರಹ್ಮಜ್ಞಾನದಲ್ಲಿ ಪ್ರಸಿದ್ಧವಾಗಿರುವುದರಿಂದಲೂ ಕರ್ಮಾಕರ್ಮ ವಿಕರ್ಮಗಳ ಸ್ವರೂಪವು ತಿಳಿಯತಕ್ಕದ್ದೆಂದು ಹೇಳುತಲಿರುವ ಪರಮಾತ್ಮನಿಂದ ಸಮ್ಯಕ್ ಜ್ಞಾನೋಪದೇಶವು (ಬ್ರಹ್ಮಜ್ಞಾನವನ್ನುಪದೇಶಿಸುವುದು) ವಿವಕ್ಷಿತವಾಗಿರುವುದರಿಂದಲೂ, ಈಶ್ಲೋಕದಲ್ಲಿ ಕೂಟಸ್ಥವಾದ ಬ್ರಹ್ಮವು ಹೇಳಲ್ಪಟ್ಟಿರುವುದೆಂದರಿಯಬೇಕು. ಮತ್ತು "ಯಜ್ಜ್ಞಾತ್ವಾಮೋಕ್ಷ್ಯಸೇಽಶುಭಾತ್" (೪॥೧೬॥) ಎಂಬ ಅಶುಭ ಮೋಕ್ಷಣರೂಪವಾದ ಫಲಬೋಧಕವಾಗಿರುವ ವಾಕ್ಯವನ್ನು ಪರ್ಯಾಲೋಚಿಸಿದರೂ ಬ್ರಹ್ಮಜ್ಞಾನಕ್ಕಿಂತಲೂವಾಕ್ಯವಾದ ಜ್ಞಾನದಿಂದ ಅಶುಭಮೋಕ್ಷಣರೂಪವಾದ ಮಹಾಫಲಪ್ರಾಪ್ತಿಯಾಗುವುದಿಲ್ಲವೆಂಬ ಕಾರಣದಿಂದ ಇಲ್ಲಿ ಕೂಟಸ್ಥವಾದ ಬ್ರಹ್ಮಜ್ಞಾನವೇ ಅಭಿಪ್ರೇತವಾಗಿರುವುದು. ಪ್ರಾಣಿಗಳು ಕರ್ಮದಲ್ಲಿ ಅಕರ್ಮಜ್ಞಾನವನ್ನು ಅಕರ್ಮದಲ್ಲಿ ಕರ್ಮಜ್ಞಾನವನ್ನೆಂಬದಾಗಿ ಕರ್ಮಾಕರ್ಮಗಳನ್ನು ವಿಪರ್ಯಯದಿಂದ ಗ್ರಹಿಸಿರುತ್ತಾರಾದುದರಿಂದ ಅಂಥಾ ವ್ಯತ್ಯಾಸವಾಗಿ ಗ್ರಹಿಸಲ್ಪಟ್ಟ ಜ್ಞಾನವನ್ನು ನಿವೃತ್ತಿಮಾಡಲು "ಕರ್ಮಣ್ಯಕರ್ಮಯಃ" ಎಂಬ ಭಗವದ್ವಚನವು ಸಂಗತವಾಗಿರುವುದೆಂದರಿಯಬೇಕು. ॥೧॥

ಕರ್ಮಾಕರ್ಮಗಳು ಪರಸ್ಪರ ವಿರುದ್ಧಗಳಾದುದರಿಂದ ಇವುಗಳಿಗಾಧಾರಾಧೇಯ ಭಾವವುಂಟಾಗುವದಿಲ್ಲವೆಂಬ ದ್ವಿತೀಯಪೂರ್ವಪಕ್ಷವನ್ನು ಪರಿಹರಿಸುತ್ತಾರೆ. (ಇಲ್ಲಿ ಕರ್ಮಣಿ ಎಂಬುವ ಸ್ಥಾನದಲ್ಲಿ ವಿಷಯಸಪ್ತಮೀ ಪರಿಗ್ರಹದಿಂದ ಪ್ರಥಮಪೂರ್ವಪಕ್ಷವು ಅಧಿಕರಣ ಸಪ್ತಮೀಪರಿಗ್ರಹದಿಂದ ದ್ವಿತೀಯ ಪೂರ್ವಪಕ್ಷವೂ ಉಂಟಾಗಿರುವುದೆಂದು ತಿಳಿಯತಕ್ಕದ್ದು) ಘಟದಲ್ಲಿ ಬದರೀಫಲ (ಬೋರೇಹಣ್ಣು) ವಿರುವಂತೆ ಕರ್ಮದಲ್ಲಕರ್ಮವಿಲ್ಲವಾದರೂ ಇಲ್ಲವೇ ಇರುವವಸ್ತುವಿನಲ್ಲಿ ಒಂದು ವಸ್ತುವು ಇರುವುದೆಂದು ಹೇಳುವುದು ಲೋಕವಿರುದ್ಧವಾಗಿರುವುದು, ಕರ್ಮಾಭಾವವೇ ಅಕರ್ಮವಾಗಿರುವುದರಿಂದ ಅಕರ್ಮದಲ್ಲಿ ಕರ್ಮವಿರುವುದೆಂದು ಹೇಳುವಿಕೆಯು ಯುಕ್ತವಲ್ಲವು. ಆದುದರಿಂದ ಲೋಕರು ಕರ್ಮಾಕರ್ಮಗಳನ್ನು ಮೃಗತೃಷ್ಣೆಯಲ್ಲಿ ನೀರಿನಂತೆಯೂ, ಶುಕ್ತಿಯಲ್ಲಿ ಬೆಳ್ಳಿಯಂತೆಯೂ ವಿಪರೀತವಾಗಿತಿಳಿದುಕೊಂಡಿರುತ್ತಾರೆ. ಆದರೇ ಕರ್ಮದಲ್ಲಕರ್ಮವು, ಅಕರ್ಮದ

ಲ್ಲಿಕರ್ಮವು, ಆರೋಪಿತವಾಗಿರುವುದೆಂದೆಣಿಸಬೇಕಲ್ಲದೇ ಕರ್ಮವು ಕರ್ಮವೆ ಆಗುವುದಲ್ಲದೆ ಅಕರ್ಮವಲ್ಲವೆಂಬದಾಗಿಯೂ,ಅಕರ್ಮವುಅಕರ್ಮವೆ ಆಗುವುದಲ್ಲದೇ ಕರ್ಮವಲ್ಲವೆಂತಲೂತಿಳಿಯುಕೊಡದು. ಏತಕ್ಕಂದರೆ ! ಕರ್ಮವು ಕರ್ಮವೇ ಆಗುವುದರಿಂದ, ಹಡಗಿನಲ್ಲಿ ಹೋಗುವಂಥಾವನಿಗೆ ಧಡದಲ್ಲಿರುವ ವೃಕ್ಷಗಳಲ್ಲಿ ಗಮನರೂಪವಾದ ಕರ್ಮವಿರುವಹಾಗೆ ಕಂಡುಬಂದರೂ ಪರಮಾತ್ಥವಾಗಿಲ್ಲವಾದುದರಿಂದ ಅಂಥಾ ವೃಕ್ಷಗಳ ಗಮನರೂಪವಾದ ಕರ್ಮವು ಹೇಗಾದರೇ ವ್ಯಭಿಚರಿಸುವುದೊ, ಮತ್ತು ಕಣ್ಣಿಗೆ ಸಮಿಪಸ್ಥರಾಗದೇ ಬಹುದೂರದಲ್ಲಿ ಹೋಗುವಂಥವರನ್ನು ಕಂಡು ಇವರು ವಾಸ್ತವವಾಗಿ ಗಮನರೂಪಕರ್ಮವುಳ್ಳವರಾದರೂ ನಡಿಯದೇನಿಂತಿರುವಹಾಗೆ ಕಂಡುಬರುವುದರಿಂದ ಇವರು ಗಮನರೂಪಕರ್ಮವಿಲ್ಲದೆ ನಿಂತಿರುತ್ತಾರೆಂಬದಾಗಿ ಹೇಳುವ ಸಂದರ್ಭದಲ್ಲವರುಗಳ ಗಮನ ವಿಲ್ಲವೆಂಬ ಅಕರ್ಮವು ಹೇಗಾದರೆ ವ್ಯಭಿಚರಿಸಿವುದೊ, ಆ ಪ್ರಕಾರವೇ ಇಲ್ಲಿಯೂ ಕ್ರಿಯಾರಹಿತಬ್ರಹ್ಮವು ಕ್ರಿಯಾಯುಕ್ತವಾಗಿರುವಂತೆಯೂ,ಕ್ರಿಯಾಸಹಿತವಾದ ಪ್ರಪಂಚವು ಕ್ರಿಯಾರಹಿತವಾಗಿರುವಂತೆಯೂ ಅವಿವೇಕದಿಂದ ಕಾಣಲ್ಪಡುವುದು. ಮತ್ತು ಪ್ರತಿಯೊಬ್ಬನು ಕ್ರಿಯಾರಹಿತಬ್ರಹ್ಮರೂಪನಾಗಿದ್ದರೂ ಅವಿವೇಕದಿಂದ ಅಕರ್ಮದಲ್ಲಿ ನಾನು ಮಾಡುವೆನೆಂಬದಾಗಿ ಕರ್ಮದರ್ಶನವು ಕರ್ಮದಲ್ಲಕರ್ಮದರ್ಶನವೂ, ಮತ್ತೂ ಇಂಥಾ ವಿಪರೀತದರ್ಶನವೂ ಯಾವ ಅವಿವೇಕದಿಂದುಂಟಾಗಿರುವುದೊ ಅದನ್ನು ನಿರಾಕರಿಸಲು ಶ್ರೀಕೃಷ್ಣನು "ಕರ್ಮಣ್ಯಕರ್ಮಯಃಪಶ್ಯೇತ್" ಇತ್ಯಾದಿವಾಕ್ಯಗಳನ್ನು ಹೇಳಿದನು.

ಮತ್ತು ಸಕ್ರಿಯತ್ವವು ಆತ್ಮನಲ್ಲಾರೋಪಿಸ ಲ್ಪಟ್ಟಿರುವುದೆಂದು ಅನೇಕಾವೃತ್ತಿಯಾಗಿ ಹೇಳಿದ್ದರೂ ನಿರ್ವಿಕಾರಾತ್ಮ ವಸ್ತುವನ್ನು ಕುರಿತಾಲೋಚಿಸಿದರೇ ಅತ್ಯಂತ ವಿಪರೀತ ದರ್ಶನದಿಂದುಂಟಾದ ಸಂಸ್ಕಾರದಿಂದ ವಿಮೋಹಿತರಾಗಿರುವ ಲೋಕರು ತಮಗಳಿಗೆ ವಸ್ತುತತ್ವವುಶ್ರುತವಾಗಿದ್ದರೂ ಅದನ್ನುಮರೆತುಮಿಥ್ಯಾಪ್ರಸಂಗವನ್ನುಂಟುಮಾಡಿಕೊಂಡುಯಾವಹೇತುವಿನಿಂದಲಾದರೂತಮ್ಮಗಳಿಗಿಲ್ಲದಕರ್ತೃತ್ವಭೋಕ್ತೃತ್ವಗಳನ್ನು ಆತ್ಮನಿಷ್ಠವಾದ ಧರ್ಮಗಳೆಂದು ತಿಳಿಯುತ್ತಾರೆಂಬ ಅಭಿಪ್ರಾಯದಿಂದಲೂ ವಸ್ತುಸ್ವಭಾವವು ತಿಳಿಯಲಸಾಧ್ಯವಾಗಿರುವಿಕೆ

ಯಂ ನೋಡಿಯೂ, ಶ್ರೀಕೃಷ್ಣನು ಅನೇಕ ಜನ್ಮಗಳಿಂದ ಬರುತ್ತ ಲಿರುವ ಮಿಥ್ಯಾಜ್ಞಾನಸಂಸ್ಕಾರದಿಂದುಂಟಾದ ಮೋಹ ನಿವೃತ್ತಿಗೋಸ್ಕರವಾಗಿ ಪುನಃಪುನಃಹೇಳುತಲಿರುವ ಅರ್ಥವನ್ನೆ ಇಲ್ಲಿ ಉಪದೇಶಿಸಿದನೆಂದರಿಯಬೇಕು. ಮತ್ತು ಆತ್ಮನಲ್ಲಿ ಕರ್ಮಾಭಾವವನ್ನು "ಅವ್ಯಕ್ತೋಯಮಚಿಂತ್ಯೋಯಂ- ನಜಾಯತೇಮ್ರಿಯತೆ" ಇತ್ಯಾದಿ ಪ್ರಕರಣಗಳಲ್ಲಿ ಶ್ರುತಿಸ್ಮೃತಿನ್ಯಾಯಗಳಿಂದ ಪ್ರಸಿದ್ಧಪಡಿಸಿ, "ಸರ್ವಕರ್ಮಾಣಿ ಮನಸಾ ಸನ್ನ್ಯಸ್ಯಾಸ್ತೇಸುಖಂವಶೀ ॥" (೫॥ ೧೩॥) ಎಂಬದಾಗಿ ಮುಂದೆಯೂ ಹೇಳುತ್ತಾನೆ.

ತ್ರಿವಿಧಗಳಾದ ಕರ್ಮಗಳು ದೇಹಾದಿಗಳಿಂದ ಮಾಡಲ್ಪಡುವುವಾದುದರಿಂದಲೂ, ಕೂಟಸ್ಥಸ್ವಭಾವವುಳ್ಳ ಆತ್ಮನು ಅಸಂಗನಾಗಿರುವುದರಿಂದಲೂ, ಆತ್ಮನ ಅವ್ಯಾಪಾರರೂಪವಾದ ಕರ್ಮವು ಪ್ರಸಿದ್ಧವಲ್ಲದೆ ಇರುವುದರಿಂದಲೂ, ಕ್ರಿಯಾರಹಿತವಾದ ಬ್ರಹ್ಮದಲ್ಲಿ ಕರ್ಮದರ್ಶನವು ಸಿದ್ಧಿಸಲಾರದೆಂದೆಣಿಸದೆ "ಕಿಂಕರ್ಮಕಿಮಕರ್ಮೇತಿ ಕವಯೋಪ್ಯತ್ರ ಮೋಹಿತಾಃ (೪॥ ೧೬॥) ಎಂಬ ವಾಕ್ಯ ತಾತ್ಪರ್ಯವನ್ನು ನೋಡಿದರೇ ನಾನು ಮಾಡತಕ್ಕವನೆಂಬ ಅಹಂಕಾರಾಭಿಮಾನರೂಪವಾದ ಕರ್ಮವು ಕಂಡುಬರುವುದರಿಂದ ಆತ್ಮನಲ್ಲಿ ಕರ್ಮಾರೋಪವು ಭ್ರಾಂತಿಯಿಂದುಂಟಾಗಬಹುದೆಂದು ತಿಳಿಯಬೇಕು. ಲೋಕದಲ್ಲಿ ಪ್ರತಿಮನುಷ್ಯನೂ ದೇಹಾದ್ಯಾಶ್ರಯವಾದ ಕರ್ಮವನ್ನು ಆತ್ಮನಲ್ಲಾರೋಪಿಸಿಕೊಂಡು "ನಾನು ಯಾವಕಾರ್ಯವನ್ನು ಮಾಡದೇ ಇದ್ದರೆ ಆಯಾಸವಿಲ್ಲದೇ ಸುಖವಾಗಿರುವೆನು, ಆದುದರಿಂದ ಯಾವಕಾರ್ಯವನ್ನೂ ಮಾಡಲಾರನೆಂದು ದೇಹೇಂದ್ರಿಯಾದಿಗಳು ಯಾವಕಾರ್ಯವನ್ನು ಮಾಡದೇ ಇರುವಿಕೆ ಎಂಬ ಕರ್ಮವನ್ನೂ, ಅಂಥಾ ಯಾವ ಕಾರ್ಯವನ್ನು ಮಾಡದೇ ಯಿರುವಿಕೆಯಿಂ ದುಂಟಾದ ಸುಖವನ್ನೂ, ಆತ್ಮನಲ್ಲಾರೋಪಿಸಿಕೊಂಡು ನಾನು ಯಾವ ಕಾರ್ಯವನ್ನು ಮಾಡದೇ ತೂಷ್ಣೀಂಭೂತನಾಗಿದ್ದರಿಂದ ಸುಖವಾಗಿರುವೆನೆಂದು ನೆನೆಸುತ್ತಾನೆ. ಆದುದರಿಂದಾತ್ಮನಲ್ಲಿ ಕರ್ಮಭ್ರಾಂತಿಯುಂಟಾಗುವುದು. ಆದರೆ ನಿಷ್ಕ್ರಿಯನಾದ ಆತ್ಮನಲ್ಲಿ ಕರ್ಮಭ್ರಾಂತಿಯುಂಟಾದರೂ ಅಕರ್ಮಭ್ರಮವು ಹೇಗೆಉಂಟಾಗುವುದು ? ಎಂದರೇ। ಮುಕ್ತಾಶುಕ್ತಿಯು (ಮುತ್ತಿನ ಚಿಪ್ಪೆಯು

ಬೆಳ್ಳಿಯಾಗದಿರುವುದುಸ್ವಾಭಾವಿಕವಾಗಿದ್ದರೂ ಅಲ್ಲಿರಜತತ್ವವು ಆರೋಪಿಸಲ್ಪಟ್ಟಿರುವುದರಿಂದರಜತತ್ವಾಭಾವವೂ ಆರೋಪಿತವಾದ ರಜತತ್ವದ ಅಭಾವವೇ ಆಗಿರುವುದರಿಂದ ಅರೂಪ್ಯತ್ವವು ಕೂಡ ಆರೋಪಿತವೇ ಆಗಿರುವಂತೇ ಆತ್ಮನಲ್ಲಿಯೂ ಅವಿಕ್ರಿಯತ್ವವು (ಅಕರ್ಮವು) ಸ್ವಾಭಾವಿಕವೇ ಆಗಿದ್ದರೂ ವಿಕ್ರಿಯತ್ವವು (ಕರ್ಮವು) ಅರೋಪಿಸಲ್ಪಟ್ಟಿರುತ್ತದಾದುದರಿಂದ ಅವಿಕ್ರಿಯತ್ವವು ಕರ್ಮಾಭಾವವೇ ಆಗಿರುವ ಕಾರಣ ಅಕರ್ಮವೂ ಆರೋಪಿತವೇಆಗುವುದು. ಮತ್ತು ಆಲೋಚಿಸಿನೋಡಿದರೇ ಎಲ್ಲರಿಗೂ ಆತ್ಮನಲ್ಲಿ ಕರ್ಮಭ್ರಾಂತಿ ಯುಂಟಾಗುವುದರಿಂದ ಅಂಥಾ ವಿಪರೀತದರ್ಶನವನ್ನು ನಿವೃತ್ತಿ ಮಾಡುವುದಕ್ಕಾಗಿಯೇ ಭಗವಂತನಾದ ಶ್ರೀಕೃಷ್ಣನು "ಕರ್ಮಣ್ಯಕರ್ಮಯಃಪಶ್ಯೇತ್" ಎಂದು ಹೇಳಿರುತ್ತಾನೆ. ಮತ್ತು, ಇಲ್ಲಿ ಪಂಡಿತನಾಗಿರುವವನುಕೂಡ ನಾನುಮಾಡುತ್ತೇನೆಂದು ತಿಳಿಯುತ್ತಾನಾದುದರಿಂದ ಕಾರ್ಯಕರಣಾಶ್ರಯಣವು (ದೇಹಾದಿಗಳನ್ನಾಶ್ರಯಿಸಿರುವುದು) ಆದ ಕರ್ಮವು, ತನ್ನ ರೂಪದಿಂದಲೇ ವ್ಯವಸ್ಥಿತವಾಗಿರುತಾ ಅವಿಕ್ರಿಯನಾದ ಆತ್ಮನಲ್ಲಿ ಕಾರ್ಯಕರಣಾರೋಪದ್ವಾರಾ(ದೇಹೇಂದ್ರಿಯಾದಿಗಳುಆರೋಪಿಸಲ್ಪಡುತಾ) ಸರ್ವರಿಂದಲೂ ( ಪಂಡಿತರಿಂದಲೂ ಅಪಂಡಿತರಿಂದಲೂ ) ಆರೋಪಿಸಲ್ಪಟ್ಟಿತು. ಭಾಷ್ಯದಲ್ಲಿ "ಪಂಡಿತೋಪ್ಯಹಂಕರೋಮಿ" ಎಂಬುವ ಅಪಿ ಶಬ್ದದಿಂದ ಪಂಡಿತರಿಗೂಕೂಡ ಕರ್ತೃತ್ವಾಭಿಮಾನವಿರುವುದರಿಂದ ಅಪಂಡಿತರಲ್ಲಿ ಕರ್ತೃತ್ವಾಭಿಮಾನವು ಸುತರಾಂ ದೃಢಪಟ್ಟಿರುವುದೆಂದು ಹೇಳಿದಂತೆ ಆಯಿತೆಂದರ್ಥವನ್ನರಿಯಬೇಕು. ನದೀತೀರದಲ್ಲಿ ವೃಕ್ಷಗಳು ಸಂಚರಿಸದೆ ಸ್ಥಿರವಾಗಿದ್ದರೂ ಅವುಗಳಲ್ಲಿ ಇಲ್ಲದ ಗಮನ ಕರ್ಮವು ಆರೋಪಿಸಲ್ಪಟ್ಟಿರುವಂತೆ, ಕರ್ಮವೂ ಕೂಡ ಸಮವಾಯ ಸಂಬಂಧದಿಂದ ಆತ್ಮನಲ್ಲಿರುವುದೆಂಬ ಭ್ರಮವು ಸರ್ವ ಪ್ರಸಿದ್ಧವಾಗಿರುವುದರಿಂದ ಇಲ್ಲದ ಕರ್ಮವು ಆತ್ಮನಲ್ಲಾರೋಪಿಸಲ್ಪಟ್ಟಿರುವುದೆಂತಲೂ, ನದೀತೀರದಲ್ಲಿರುವ ವೃಕ್ಷಗಳಲ್ಲಿ ಪರಮಾರ್ಥವಾಗಿ ಗಮನರೂಪವಾದ ಕರ್ಮವಿಲ್ಲದಂತೆ ಆತ್ಮನಲ್ಲಿ ಕರ್ಮವಿಲ್ಲವೆಂತಲೂ ; ಮತ್ತು ಅಕರ್ಮವು ಕರ್ಮದಂತೆ ಆತ್ಮನಲ್ಲಾರೋಪಿಸಲ್ಪಟ್ಟಿರುವುದೆಂತಲೂ, ಅಕರ್ಮವೂ,ನಾನುಯಾವದನ್ನೂ ಮಾಡದೇ ಇದ್ದುದ್ದರಿಂದ ಸುಖವಾಗಿರುವೆನೆಂಬ ಅಹಂ

ಕಾರಾಭಿಸಂಧಿಗೆ ಹೇತುವಾಗಿರುವುದರಿಂದ ಕರ್ಮವೇ ಆಗುವುದೆಂತಲೂ ಯಾವನು ತಿಳಿದುಕೊಳ್ಳುತ್ತಾನೋ ಅಂಥಾಪುರುಷನು ಬುದ್ಧಿವಂತ ನೆಂಬದಾಗಿಯೂ ಯೋಗಿಯೆಂಬದಾಗಿಯೂ, ಸರ್ವಕರ್ಮಗಳನ್ನು ಮಾಡಿ ದವನೆಂಬದಾಗಿಯೂ, ಹೇಳಲ್ಪಡುವನು. ಆದುದರಿಂದ, ಅವನು ಅಶುಭ ವಾದ ಸಂಸಾರದಿಂದ ಮೋಕ್ಷಿತನಾಗಿ (ಬಿಡಲ್ಪಟ್ಟವನಾಗಿ) ಕೃತಕೃತ್ಯ ನಾಗುವನೆಂದರಿಯಬೇಕೆಂದರ್ಥವು.

ಅನ್ಯರಿಂದೀಶ್ಲೋಕವು ಬೇರೇವಿಧವಾಗಿ ವ್ಯಾಖ್ಯಾತವಾಗಿರು ವುದು. ಹೇಗೆಂದರೆ! "ಭಗವತ್ಪ್ರೀತಿಯನ್ನುದ್ದೇಶಿಸಿ ಯಲ್ಲವೇಮಾ ಡಲ್ಪಡುವನಿತ್ಯಕರ್ಮಗಳಿಗೆ ಭಗವತ್ಪ್ರೀತಿಗಿಂತಲೂ ಇತರವಾದ ಫಲ ವಿಲ್ಲವಾದುದರಿಂದ ಅಂಥಾ ನಿತ್ಯಕರ್ಮಗಳು ಫಲರಾಹಿತ್ಯ ಗುಣಯೋಗ ದಿಂದ ಕರ್ಮಗಳೆಂದು ಹೇಳಲ್ಪಡುವುವು. ಅಂಥಾ ನಿತ್ಯಕರ್ಮಗಳನ್ನು ಮಾಡದೇ ಇರುವಿಕೆಯು ಅಕರ್ಮವೆಂಬದಾಗಿ ಹೇಳಲ್ಪಡುವುದು. ಅಂ ಥಾ ಅಕರ್ಮವು ಪ್ರತ್ಯವಾಯವೆಂಬ ಫಲಕ್ಕೆ ಕಾರಣವಾಗಿರುವುದೆಂಬ ಗುಣಯೋಗದಿಂದ ಕರ್ಮವೆಂಬದಾಗಿ ಹೇಳಲ್ಪಡುವುದು. ಗೋವು (ಹಸ) ಧೇನುವಾಗಿದ್ದರೂ ಕ್ಷೀರವೆಂಬ ಫಲವನ್ನು ಕೊಡದೇಹೋ ದರೆ ಗೋವಲ್ಲವೆಂದು ಹೇಳಲ್ಪಡುವಂತೆ ನಿತ್ಯಕರ್ಮಗಳು ಫಲಪ್ರದಗ ಳಲ್ಲದೇ ಇರುವುದರಿಂದ ಅಕರ್ಮಗಳಾಗುವುವೆಂತಲೂ, ನಿತ್ಯಕರ್ಮಗಳಂ ಮಾಡದೆ ಇರುವಿಕೆಯೆಂಬ ಅಕರ್ಮವು ನರಕಾದಿಯಾದ ಪ್ರತ್ಯವಾಯ (ಬಾಧಕ) ಫಲವನ್ನುಂಟುಮಾಡುತ್ತದಾದುದರಿಂದ ಕರ್ಮವೇ ಆಗುವು ದೆಂತಲೂ, ತಿಳಿದುಕೊಂಡವನು ಬುದ್ಧಿವಂತನು, ಯೋಗಿಯು, ಸರ್ವಕರ್ಮಗಳನ್ನು ಮಾಡಿದವನು" ಎಂಬದಾಗಿ ವೃತ್ತಿಕಾರರಿಂದ ವ್ಯಾ ಖ್ಯಾತವಾಗಿರುವುದು. ನಿತ್ಯಕರ್ಮವು ಅಕರ್ಮವೆಂತಲೂ, ನಿತ್ಯಕರ್ಮಗ ಳನ್ನು ಮಾಡದೇ ಇರುವಿಕೆಯೆಂಬ ಅಕರ್ಮವು ಕರ್ಮವಾಗುವುದೆಂತಲೂ, ತಿಳಿದುಕೊಳ್ಳುವುದರಿಂದಲೇ ಅಶುಭ ಮೋಕ್ಷಣರೂಪವಾದ ಫಲವು ಉಂಟಾಗಲಾರದಾದುದರಿಂದ "ಯಜ್ಜ್ಞಾತ್ವಾ ಮೋಕ್ಷ್ಯಸೇಽಶು ಭಾತ್" ಎಂಬ ಭಗವದ್ವಚನವು ವಿರೋಧಿಸುವುದು. ಆದುದರಿಂದೀ ವ್ಯಾಖ್ಯಾನವು ಯುಕ್ತವಲ್ಲವು. ಮತ್ತೂ ಭಗವದ್ವಚನವುಹೇಗೆವಿರೋ ಧಿಸುವುದೆಂದರೆ! ನಿತ್ಯಕರ್ಮಗಳ ಅನುಷ್ಠಾನದಿಂದ ಅಶುಭಮೋಕ್ಷಣ

ವಾಗುವುದೆಂದುಹೇಳಿದರೂ ಅವುಗಳಿಗೆ ಫಲಾಭಾವಜ್ಞಾನದಿಂದಲೇ ಅಶುಭಮೋಕ್ಷಣವಂಹೇಳುವುದು ಅಸಾಧ್ಯವು. ಮತ್ತು ಇಲ್ಲಿ ನಿತ್ಯಕರ್ಮಗಳಿಗೆ ಫಲವಿಲ್ಲವೆಂಬಜ್ಞಾನವಾದರೂ ನಿತ್ಯಕರ್ಮಸ್ವರೂಪವಿಂಥಾದ್ದೆಂಬ ಜ್ಞಾನವಾದರೂ ಅಶುಭ ಮೋಕ್ಷಣವನ್ನುಂಟುಮಾಡುವುದೆಂದು ಭಗವಂತನಿಂದ ಹೇಳಲ್ಪಡಲಿಲ್ಲವು. ಆದುದರಿಂದಲೇ ನಿತ್ಯಕರ್ಮಗಳಿಗೆ ಫಲವಿಲ್ಲವೆಂದು ತಿಳಿದುಕೊಳ್ಳುವುದರಿಂದ ಮೋಕ್ಷಪ್ರಾಪ್ತಿಯಾಗುವುದೆಂದುಹೇಳುವುದು ಯುಕ್ತವಾಗಿತೋರುವುದಿಲ್ಲವು. ಈ ಪ್ರಕಾರವಾಗಿ ಉಪಪಾದಿಸಲ್ಪಟ್ಟ (ಅಶುಭಮೋಕ್ಷಣವುಂಟಾಗುವುದಿಲ್ಲವಾದುದರಿಂದ ಕರ್ಮದಲ್ಲಕರ್ಮದರ್ಶನವುಂಟಾಗಲಾರದೆಂಬ)ನ್ಯಾಯದಿಂದ ಅಕರ್ಮದಲ್ಲಿ ಕರ್ಮದರ್ಶನವೂ ನಿರಾಕರಿಸಲ್ಪಟ್ಟಿತು.

ನಾಮಮಾದ್ಯುಪಾಸನದಲ್ಲಿ ಫಲಕ್ಕಾಗಿ ಬ್ರಹ್ಮದೃಷ್ಟಿಯಂ ಮಾಡುವಂತೆ ಅಕರ್ಮದಲ್ಲಿಯೂ ಫಲಾರ್ಥವಾಗಿ ಕರ್ಮದೃಷ್ಟಿವಿಧಾನವಿರುವುದರಿಂದ ಅಶುಭಮೋಕ್ಷಣಕ್ಕೆ ಅನುಪತ್ತಿತೋರಲಿಲ್ಲವೆಂದರೆ ಈಶ್ಲೋಕದಲ್ಲಿಅಕರ್ಮದಲ್ಲಿ ಕರ್ಮದರ್ಶನವಂ ಮಾಡಬೇಕೆಂಬದಾಗಿ ವಿಧಿಸಲ್ಪಡಲಿಲ್ಲವು. ನಿತ್ಯಕರ್ಮಗಳಂ ಮಾಡಬೇಕೆಂದು ಮಾತ್ರವೇ ವಿಧಿಸಲ್ಪಟ್ಟಿರುವುದರಿಂದ ನಾಮಮಾದ್ಯುಪಾಸನ ದೃಷ್ಟಾಂತದಿಂದ ಅಕರ್ಮದಲ್ಲಿ ಕರ್ಮದೃಷ್ಟಿಯಂ ಮಾಡಲವಕಾಶವಿಲ್ಲವು. ಮತ್ತು ನಿತ್ಯಕರ್ಮಗಳಂ ಮಾಡದೇಹೋಗುವುದರಿಂದ ಪ್ರತ್ಯವಾಯವುಂಟಾಗುವುದೆಂಬ ಜ್ಞಾನದಿಂದ ಸ್ವಲ್ಪವಾದ ಫಲವೂ ವುಂಟಾಗಲಾರದಷ್ಟೆ. ನಿತ್ಯಾನುಷ್ಠಾನದಲ್ಲಿ ಪ್ರವೃತ್ತಿಯುಂಟಾಗುವುದಕ್ಕಾಗಿ ನಿತ್ಯಾಕರಣದಿಂದ (ನಿತ್ಯಕರ್ಮಗಳಂ ಮಾಡದೇ ಇರುವುದರಿಂದ) ಪ್ರತ್ಯವಾಯುವುಂಟಾಗುವುದೆಂಬ ಜ್ಞಾನವೂ ಜ್ಞೇಯತ್ವನ (ತಿಳಿಯತಕ್ಕದ್ದೆಂಬದಾಗಿ) ಬೋಧಿತವಾಗಲಿಲ್ಲವು. ಮತ್ತು ವಿಧಿವಾಕ್ಯದಿಂದಲೆ ನಿತ್ಯಕರ್ಮಗಳನ್ನು ಮಾಡಬೇಕೆಂಬದಾಗಿ ಪ್ರವೃತ್ತಿಯುಂಟಾಗುವುದರಿಂದ, "ನಿತ್ಯಕರ್ಮಗಳಂ ಮಾಡದೇ ಇರುವುದರಿಂದ ಪ್ರತ್ಯವಾಯು ಫಲವುಂಟಾಗುವುದೆಂಬ ಜ್ಞಾನವೂ,, ನಿತ್ಯಕರ್ಮಪ್ರವೃತ್ತಿಗೆ ಕಾರಣವಾಗಲಾರದು.

ಮತ್ತು, ಕರ್ಮವು ಅಕರ್ಮವಾಗುವುದೆಂಬ ಮಿಥ್ಯಾಜ್ಞಾನದಿಂದ ಮೋಕ್ಷವು, ಬುದ್ಧಿಮತ್ತ್ವವು, ಯೋಗಿಯಾಗುವಿಕೆಯು, ಸಕಲ ಕರ್ಮಗ

ಳನ್ನು ಮಾಡಿದವನಾಗುವಿಕೆಯೂ, ಎಂಬ ಫಲವಾದರೂ ಸ್ತೋತ್ರವಾದರೂ ಉಂಟಾಗುವುದಿಲ್ಲವು. ಮಿಥ್ಯಾಜ್ಞಾನವೇ ಸಾಕ್ಷಾತ್ ಅಶುಭರೂಪವಾಗಿರುವುದರಿಂದ ಅಂಧಕಾರವೇ ಅಂಧಕಾರವನ್ನು ಹೋಗಲಾಡಿಸುವುದಿಲ್ಲವೆಂಬಂತೆ ಈ ಮಿಥ್ಯಾಜ್ಞಾನವು ಅನ್ಯವಾದ ಅಶುಭದಿಂದ ಮೋಕ್ಷವನ್ನುಂಟುಮಾಡಲಾರದು.

ಆದರೆ ಅವಿವೇಕಪೂರ್ವಕವಾಗಿ "ಇದಂ ರಜತಂ" ಎಂಬುವ ಸ್ಥಳದಲ್ಲಿ ಸದಸತ್ತುಗಳಿಗೆ ಸಾಮಾನಾಧಿಕರಣ್ಯವಿರುವುದರಿಂದ "ಇದಂ ರಜತಂ" (ಇದು ಬೆಳ್ಳಿಯು) ಎಂಬುವ ಜ್ಞಾನವು ಮಿಥ್ಯಾಜ್ಞಾನವಾದಂತೆ ಕರ್ಮದಲ್ಲಕರ್ಮದರ್ಶನವೂ, ಅಕರ್ಮದಲ್ಲಿ ಕರ್ಮದರ್ಶನವೂ ಮಿಥ್ಯಾಜ್ಞಾನವಾಗಲಾರದೆಂತಲೂ, ವಿವೇಕದಿಂದಭಾಸಮಾನವಾಗಿರುವ ಕರ್ಮಾಕರ್ಮಗಳ ಸಾಮಾನಾಧಿಕರಣ್ಯಾಧೀನವಾದ ಜ್ಞಾನವು "ಸಿಂಹೋದೇವದತ್ತಃ" (ದೇವದತ್ತನುಸಿಂಹವು) ಎಂಬುವ ಸ್ಥಳದಲ್ಲಿ ಹೇಳಲ್ಪಟ್ಟಜ್ಞಾನದಂತೆ ಗುಣನಿಮಿತ್ತಕವಾದ ಜ್ಞಾನವೆಂತಲೂ, ಹೇಳಿದರೂ ಅಂಥಾ ಗೌಣಜ್ಞಾನಕ್ಕೆ ಪ್ರಾಮಾಣಿಕವಾದ ಫಲವಿಲ್ಲವಾದುದರಿಂದ ಕರ್ಮದಲ್ಲಕರ್ಮಜ್ಞಾನಕ್ಕೂ ಅಕರ್ಮದಲ್ಲಿ ಕರ್ಮಜ್ಞಾನಕ್ಕೂ ಗೌಣತಾ ಹೇಳುವುದು ಉಚಿತವಲ್ಲವು. ಮತ್ತು ಕರ್ಮಾಕರ್ಮಜ್ಞಾನವು ಗೌಣಜ್ಞಾನವೆಂದು ಹೇಳುವುದರಲ್ಲಿ ಗುಣವ್ಯಾವದೆಂದರೆ, ಕರ್ಮವು ಅಕರ್ಮವೆಂಬುವಜ್ಞಾನದಲ್ಲಿ ಫಲಾಭಾವವು ಗುಣವೆಂತಲೂ,ಅಕರ್ಮವುಕರ್ಮವೆಂಬುವಜ್ಞಾನದಲ್ಲಿ ಫಲಭಾವವು ಗುಣವೆಂತಲೂ ತಿಳಿಯಬೇಕು. ಮತ್ತು ಗೌಣವಾದ ಕರ್ಮಾಕರ್ಮವಿಜ್ಞಾನವನ್ನು ಉಪನ್ಯಾಸಮಾಡುವ ವ್ಯಾಜದಿಂದ ನಿತ್ಯಕರ್ಮಗಳು ಮಾಡತಕ್ಕವುಗಳೆಂದು ಹೇಳಲ್ಪಡುವುವಾದುದರಿಂದ ಗೌಣಜ್ಞಾನದಿಂದುಂಟಾಗುವಫಲವ್ಯಾವದೂ ಇಲ್ಲವೆಂದು ಹೇಳಿದವಾಕ್ಯವು ಉಚಿತವಲ್ಲವೆಂದು ಹೇಳಕೂಡದು. ಇಲ್ಲಿ ಗೌಣವಾದ ಕರ್ಮಾಕರ್ಮವಿಜ್ಞಾನದಿಂದ ಫಲವು ಉಂಟಾಗುವವೆಂದು ಹೇಳಲಿಲ್ಲವು. ಒಂದುವೇಳೆ ಗೌಣಜ್ಞಾನದಿಂದ ನಿತ್ಯಕರ್ಮಗಳು ಮಾಡತಕ್ಕವುಗಳೆಂಬ ಅರ್ಥವು ಬೋಧಿಸಲ್ಪಡುವುವೆಂದರೂ,ಈ ಪ್ರಕಾರವಾಗಿ ಹೇಳುವುದರಿಂದ"ಕರ್ಮಾಕರ್ಮವಿಜ್ಞಾನದದೆಶೆಯಿಂದ ಅಶುಭಮೋಕ್ಷಣವಾಗುವುದೆಂದು ಹೇಳಿದವಾಕ್ಯಕ್ಕೆಹಾನಿಯೇನು,ಹೇಳಲ್ಪಡದನಿತ್ಯಾನುಷ್ಠಾನವನ್ನು ಹೇಳುವಿಕೆಯೆಂಬ ಅಶ್ರುತಕಲ್ಪನವೇನು, ಇವುಗಳ

ನ್ನುಂಟುಮಾಡುವುದರಿಂದ” ಯಾವ ವಿಶೇಷವೂ ಹೊಂದಲ್ಪಡಲಾರದು. ನಿತ್ಯಕರ್ಮಗಳನ್ನು ಮಾಡದೇ ಹೋದರೆ ನರಕಪಾತವುಂಟಾಗುವುದೆಂದು ವ್ಯಕ್ತವಾಗಿಯೇ ಹೇಳಬಹುದಾಗಿರುವಲ್ಲಿ “ಅಕರ್ಮಣಿಚಕರ್ಮಯಃ” ಎಂಬ ಕ್ಲಿಷ್ಟಕಲ್ಪನದಲ್ಲಿಯೂ ಪ್ರಯೋಜನವು ತೋರಲಿಲ್ಲವು. ಮತ್ತು ನಿತ್ಯಕರ್ಮಗಳು ಮಾಡತಕ್ಕವುಗಳೆಂದು ವ್ಯಕ್ತವಾಗಿ ಹೇಳದೇ ಲೋಕವ್ಯಾಮೋಹಕರವಾದ ವ್ಯಾಜದಿಂದ “ಕರ್ಮಣ್ಯಕರ್ಮಯಃಪಶ್ಯೇತ್” ಎಂಬದಾಗಿ ಭಗವಂತನು ಹೇಳಿದನೆಂದರೆ; ಈ ಪ್ರಕಾರವಾಗಿ ಹೇಳುವುದರಿಂದ ತಾನೇ ಪ್ರಯೋಜನವೇನು? ಮತ್ತು ಈ ರೀತಿಯಾಗಿ ವ್ಯಾಖ್ಯಾನಮಾಡುವುದರಿಂದ ಭಗವದುಕ್ತವಾದ ವಾಕ್ಯಗಳು ಲೋಕವ್ಯಾಮೋಹನಾರ್ಥವಾಗಿರುವುದೆಂದು ಕಲ್ಪಿಸಿದಂತೆ ಆಗುವುದು. ನಿತ್ಯಕರ್ಮಾನುಷ್ಠಾನವು ಸಿದ್ಧಿಸುವುದಕ್ಕಾಗಿ ಛದ್ಮ(ಕಪಟ)ರೂಪವಾದವಾಕ್ಯದಿಂದ ಪರಮಾತ್ಮನೀರೀತಿಯಾಗಿ ಹೇಳಿದನೆಂದರೆ ಇಂಥಾ ಕಪಟದಿಂದ ಹೇಳುವ ವಾಕ್ಯದಿಂದ ನಿತ್ಯಕರ್ಮಾನುಷ್ಠಾನಕ್ಕಿಂತಲೂ ಅನ್ಯವಾದದ್ದು ಯಾವದೂ ಬೋಧಿಸಲ್ಪಡದೇ ಇರುವುದರಿಂದಲೂ, ನಿತ್ಯಕರ್ಮಾನುಷ್ಠಾನವು ಕೆಳಗೆ ಸ್ಪಷ್ಟವಾಗಿಯೇ ಬೋಧಿಸಲ್ಪಟ್ಟಿರುವುದರಿಂದಲೂ, ನಿತ್ಯಕರ್ಮಾನುಷ್ಠಾನಸಿದ್ಧ್ಯರ್ಥವಾಗಿ ಛದ್ಮದಿಂದೀರೀತಿಯಾಗಿ ಹೇಳಿದನೆಂದರಿಯಕೂಡದು. ಸುಬೋಧವಾಗದ ಆತ್ಮಜ್ಞಾನವನ್ನು ಸಮೀಚೀನವಾಗಿ ತಿಳಿಯಪಡಿಸಲು ಅಲ್ಲಲ್ಲಿ ಶಬ್ದಾಂತರಗಳಿಂದ ಹೇಳುವರೀತಿಯಾಗಿ ಈ ಸುಬೋಧವಾದ ನಿತ್ಯಕರ್ಮಾನುಷ್ಠಾನವು ಹೇಳಲ್ಪಡಬೇಕಾಗಿರುವುದಿಲ್ಲವು. ಮತ್ತು “ಕರ್ಮಣ್ಯೇವಾಧಿಕಾರಸ್ತೇ” (೨||೪೭||) ಎಂಬುವ ವಾಕ್ಯಕ್ಕಿಂತಲೂ, “ಕರ್ಮಣ್ಯಕರ್ಮಯಃಪಶ್ಯೇತ್” ಎಂಬ ವಾಕ್ಯವು ನಿತ್ಯಕರ್ಮಾನುಷ್ಠಾನವನ್ನು ಸುಲಭವಾಗಿ ಬೋಧಿಸಲಾರದು. ಆದುದರಿಂದ ಸ್ಫುಟತರವಾಗಿ ತಿಳಿಯುವಂತೆ ಉಪದಿಷ್ಟವಾಗಿರುವ “ಕರ್ಮಣ್ಯೇವಾಧಿಕಾರಸ್ತೇ” (೨||೪೭||) ಎಂಬುವ ನಿತ್ಯಕರ್ಮಾನುಷ್ಠಾನ ವಿಷಯವಾದ ಅರ್ಥವು ಇಲ್ಲಿ ಪುನಶ್ಚ ಹೇಳಬೇಕಾಗಿರುವುದಿಲ್ಲವು. ಮತ್ತು ಲೋಕದಲ್ಲಿಯೂ ವೇದದಲ್ಲಿಯೂ ಪ್ರಶಸ್ತವಾಗಿರುವುದೇ ತಿಳಿಯತಕ್ಕದ್ದೆಂಬದಾಗಿಯೂ ಮಾಡತಕ್ಕದ್ದೆಂಬದಾಗಿಯೂ ಇರುವುದೆಂದು ತಿಳಿಯತಕ್ಕದ್ದಲ್ಲದೇ ನಿಷ್ಪ್ರಯೋಜನವಾದದ್ದು ತಿಳಿಯತಕ್ಕದ್ದಾಗಿಯೂ ಮಾಡ

ತಕ್ಕದ್ದಾಗಿಯೂ ಆಗಲಾರದೆಂದು ತಿಳಿಯಬೇಕು. ಆದುದರಿಂದಲೇ ಕರ್ಮದಲ್ಲಕರ್ಮದರ್ಶನವೂ ಅಕರ್ಮದಲ್ಲಿ ಕರ್ಮದರ್ಶನವೂ ಗೌಣವೆಂದುಹೇಳಿರುವುದರಿಂದ ಅಪ್ರಶಸ್ತವಾಗಿರುವುದೆಂದುತಿಳಿದು ಅಪ್ರಶಸ್ತವಾಗಿರುವುದರಿಂದಲೇ ಅದುತಿಳಿಯತಕ್ಕದ್ದೆಂಬ ವಾಕ್ಯಕ್ಕೆ ಅರ್ಹವಾಗುವುದಿಲ್ಲವೆಂತಲೂ, ತಿಳಿಯಬೇಕು. ಮತ್ತು ಕರ್ಮಾದಿಕವು ಮಾಯಾಮಾತ್ರವಾಗಿರುವುದರಿಂದ ಗೌಣವಾದ ಕರ್ಮಾದಿಜ್ಞಾನವೂ ಮಿಥ್ಯಾಜ್ಞಾನವಾಗುವುದರಿಂದ ಅಂಥಾ ಮಿಥ್ಯಾಜ್ಞಾನಕ್ಕೆ ಬೋದ್ಧವ್ಯತ್ವವು ಸಿದ್ಧಿಯಾಗುವುದಿಲ್ಲವು. ಅಂಥಾ ಮಿಥ್ಯಾಜ್ಞಾನದಿಂದ ಪ್ರತ್ಯುಪಸ್ಥಾಪಿತವಾದ ಪದಾರ್ಥವೂ ವಾಸ್ತವವಾದ ಪದಾರ್ಥವಾಗದೆ,ವಸ್ತ್ವಾಭಾಸವಾಗಿರುವುದರಿಂದ ಮಿಥ್ಯಾಜ್ಞಾನಕ್ಕೆ ವಿಷಯವಾದ ಪದಾರ್ಥಾದಿಕವು ತಿಳಿಯತಕ್ಕದ್ದಲ್ಲವು. ಅಭಾವರೂಪವಾಗಿಯೂ ನಿತ್ಯಕರ್ಮಗಳನ್ನು ಮಾಡದೇ ಇರುವಿಕೆಯೆಂಬದಾಗಿಯೂ ಆಗುವ ಅಕರ್ಮವು ಪ್ರತ್ಯವಾಯಕ್ಕೆ ಕಾರಣವಾಗುವುದರಿಂದ ಕರ್ಮವಾಗುವುದೆಂತಲೂ, ಅಕರ್ಮಶಬ್ದವು ಕರ್ಮವನ್ನು ಗೌಣವೃತ್ತಿಯಿಂದ ಬೋಧಿಸುವುದೆಂತಲೂ ಹೇಳುವುದು ಯುಕ್ತವಲ್ಲವು. "ನಾಸತೋಽವಿದ್ಯತೇಭಾವಃ"ಎಂಬ(೨॥೧೬॥)ನೇ ಶ್ಲೋಕವೇನು"ಅಸತ್ತಿನಿಂದ ಸತ್ತು ಹೇಗೆ ಉಂಟಾಗುವುದೆಂಬ " ಶ್ರುತಿಯೇನು, ಇವುಗಳಿಂದ ಅಸತ್ತಿನಿಂದ ಸತ್ತಿನ ಉತ್ಪತ್ತಿಯು ನಿಷೇಧಿಸಲ್ಪಟ್ಟಿರುವುದರಿಂದ ಅಸತ್ತಿನಿಂದ ಸದುತ್ಪತ್ತಿಯಂ ಹೇಳಿದರೆ ಅಸತ್ತೇ ಸತ್ತಾಗುವುದೆಂತಲೂ, ಸತ್ತೇ ಅಸತ್ತು ಆಗುವುದೆಂತಲೂ ಹೇಳಿದಂತೆ ಆಗುವುದು. ಈ ಪ್ರಕಾರವಾಗಿ ಹೇಳುವುದರಿಂದ ಬಾಧಕವೇನೆಂದರೆ " ಅಸತ್ತಿನಿಂದ ಸತ್ತು ಹೇಗೆ ಉಂಟಾಗುವುದೆಂಬ " ಶ್ರುತಿವಿರೋಧ ವುಂಟಾಗುವುದೇ ಬಾಧಕವೆಂದು ಹಿಂದೆ ತಿಳಿಸಿರುವೆವು. ಆದುದರಿಂದ ಅಭಾವರೂಪವಾದ ನಿತ್ಯಾಕರಣದಿಂದ ಭಾವರೂಪ ಪ್ರತ್ಯವಾಯಕಲ್ಪನವು ಸರ್ವಪ್ರಮಾಣವಿರೋಧದಿಂದ ಯುಕ್ತವಲ್ಲವು. ಮತ್ತು ನಿತ್ಯಕರ್ಮಗಳಿಗೆ ಫಲವಿಲ್ಲವಾದುದರಿಂದ ಅದು ಅಕರ್ಮವಾಗುವುದೆಂದರೆ ಕರ್ಮಕಾಂಡವು ನಿಷ್ಫಲವಾದದ್ದನ್ನು ವಿಧಿಸಿದಂತೆ ಆಗುವುದು. ಫಲವಿಲ್ಲವಾದುದರಿಂದ ನಿತ್ಯಕರ್ಮದ ವಿಧಿಗೆ ಅನುಪಪತ್ತಿಯುಂಟಾಗುವುದು ಮಾತ್ರವಲ್ಲದೆ ನಿತ್ಯಕರ್ಮವಿಧಾಯಕವಾದ ಧಾತ್ವರ್ಥವು ದುಃಖರೂಪವಾಗುವುದರಿಂ

ದಲೂ, ಅಂಥಾ ಕ್ಲೇಶವನ್ನಂಗೀಕರಿಸಿದರೂ ಫಲವಿಲ್ಲವಾದುದರಿಂದಲೂ ದುಃಖವನ್ನು ಬುದ್ಧಿಪೂರ್ವಕವಾಗಿ ಹುಟ್ಟಿಸಿ ಕೊಳ್ಳುವದು ಉಚಿತವಲ್ಲ ವಾದುದರಿಂದಲೂ, ನಿತ್ಯಕರ್ಮಗಳನ್ನು ಬೋಧಿಸುವ ಶಾಸ್ತ್ರಕ್ಕೆ ಅನುಪಪತ್ತಿಯುಂಟಾಗುವುದು. ಆದರೂ ನಿತ್ಯಕರ್ಮಗಳಿಂದ ಸ್ವರ್ಗಾದಿಫಲವಿಲ್ಲ ದಿದ್ದರೂ ನಿತ್ಯಕರ್ಮಗಳಂ ಮಾಡದೇ ಇರುವುದರಿಂದ ನರಕಪಾತಾದಿಗಳುಂಟಾಗುವುದರಿಂದ ಅಂಥಾ ನರಕಪಾತವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ನಿತ್ಯಕರ್ಮಗಳು ದುಃಖರೂಪಗಳಾದರೂ ಮಾಡತಕ್ಕವುಗಳಾಗುವುವೆಂದರೆ ಕರ್ಮಶಾಸ್ತ್ರವು ಅನರ್ಥಕ್ಕಾಗಿಯೇ ಹೇಳಲ್ಪಟ್ಟಿತೆಂದು ಹೇಳಿದಂತೆ ಆಗುವುದು. ಈ ಪ್ರಕಾರವಾಗಿ ಹೇಳುವುದರಿಂದ ಯೆರಡು ಪ್ರಕಾರದಿಂದಲೂ (ಕರ್ಮವನ್ನು ಮಾಡಿದರೂ ಮಾಡದೇ ಇದ್ದರೂ) ಶಾಸ್ತ್ರವು ನಿಷ್ಫಲವೆಂದು ಕಲ್ಪಿಸಿದಂತೆ ಆಗುವುದು. ಮತ್ತೂ ನಿತ್ಯಕರ್ಮಗಳನ್ನು ಮಾಡದೇ ಹೋದರೇ ನರಕಪಾತವುಂಟಾಗುವುದೆಂತಲೂ ನಿತ್ಯಕರ್ಮಗಳಂ ಮಾಡುವುದರಿಂದ ಮೋಕ್ಷಫಲವುಂಟಾಗುವುದೆಂತಲೂ ಹೇಳುವ ಪಕ್ಷದಲ್ಲಿ ನಿತ್ಯಕರ್ಮಗಳಿಗೆ ಫಲವಿಲ್ಲವೆಂಬದಾಗಿ ತಮ್ಮಗಳಿಂದ ಅಂಗೀಕೃತವಾದ ಅರ್ಥಕ್ಕೆ ವಿರೋಧವೂ ಉಂಟಾಗುವುದು. ಆದುದರಿಂದ ಹಿಂದೆ ನಾವು ವಿವರಿಸಿರುವ ಅರ್ಥವೇ ಈ ಶ್ಲೋಕಕ್ಕೆ ಅನುಕೂಲವಾಗಿರುವುದೆಂದರಿಯಬೇಕು. ... ... ‖೧೮‖

(ಶ್ರೀ) ಹಿಂದೆ ಹೇಳಿರುವಂತೆ ಕರ್ಮಾದಿಗಳರಿಯಲಸಾಧ್ಯವೆಂಬುವುದನ್ನೇ ಇಲ್ಲಿಯೂ ಹೇಳುತ್ತಾರೆ. ಪರಮೇಶ್ವರಾರಾಧನ ಲಕ್ಷಣವಾದ ಕರ್ಮವಿಷಯದಲ್ಲಿ ಇದು ಬಂಧಕವಾದ ಕರ್ಮವಾಗುವುದಿಲ್ಲವು, ಇದು ಜ್ಞಾನಹೇತುವಾಗುವುದೆಂಬದಾಗಿ ಅಕರ್ಮವನ್ನು ಯಾವನು ನೋಡುತ್ತಾನೆಯೋ, ಮತ್ತು ವಿಹಿತಕರ್ಮಗಳನ್ನು ಮಾಡದೇ ಇರುವಿಕೆಯೆಂಬ ಅಕರ್ಮದಲ್ಲಿ ಬಂಧಹೇತುವಾಗಿರುವ ಪ್ರತ್ಯವಾಯರೂಪವಾದ ಕರ್ಮವನ್ನು ಯಾವನು ನೋಡುತ್ತಾನೆಯೋ ? ಅವನು ಕರ್ಮವಂಮಾಡುವ ಮನುಷ್ಯರಲ್ಲಿ ಶ್ರೇಷ್ಠನು, ಯೋಗಿಯು, (ಕರ್ಮದಿಂದ ಜ್ಞಾನಯೋಗವಂ ಹೊಂದುವುದರಿಂದ ಯೋಗಿಯೆಂಬದಾಗಿ ಹೇಳಲ್ಪಡುವನು) ಸಮಸ್ತ ಕರ್ಮಗಳಂ ಮಾಡಿದವನು, ಎಂದು ಹೇಳಲ್ಪಡುವನು. ಸಮುದ್ರಸ್ಥಾನೀಯವಾದ ಆ ಕರ್ಮದಲ್ಲಿ ಸರ್ವಕರ್ಮಫಲಗಳು, ಅಡಗಿರುವುದ

ರಿಂದ ಇವನನ್ನು "ಕೃತ್ಸ್ನಕರ್ಮಕೃತ್" ಎಂದು ಹೇಳಿತು. ಈ ಪ್ರಕಾರವಾಗಿ ಆರುರುಕ್ಷುವಾದವನಿಗೆ ಕರ್ಮಯೋಗಾವಸ್ಥೆಯಲ್ಲಿ "ನಕರ್ಮಣಾಮನಾರಂಭಾತ್" (೩ ‖ ೪‖) ಇತ್ಯಾದಿ ಪ್ರಮಾಣಗಳಿಂದ ಪ್ರತಿಪಾದಿಸಲ್ಪಟ್ಟ ಕರ್ಮಯೋಗವು ಇಲ್ಲಿ ಸ್ಫುಟೀಕೃತವಾಯಿತು. ಹಿಂದೆ ವಿವರಿಸಿರುವ ಅರ್ಥವೇ ಈ ಪ್ರಕರಣದಲ್ಲಿ ವಿಸ್ತಾರವಮಾಡಲ್ಪಟ್ಟಿರುವುದರಿಂದ ಪೌನರುಕ್ತ್ಯದೋಷವಿಲ್ಲವು. ಆದರಿಂದಲೆ ಆರೂಢಾವಸ್ಥೆಯಲ್ಲಿ ಕರ್ಮದಿಂದ ಉಪಯೋಗವಿಲ್ಲವೆಂಬುವುದೂ ಆರ್ಥಿಕವಾಗಿ ವಿವರಿಸಲ್ಪಟ್ಟಿತೆಂದರಿಯಬೇಕು. ಆರುರುಕ್ಷುವಾದವನಿಗೇನೇ ಕರ್ಮವು ಬಂಧಕವಾಗುವುದಿಲ್ಲವಾಗಿರಲುಆರೂಢನ ವಿಷಯದಲ್ಲಿಹೇಳಬೇಕಾದದ್ದೇನು? ಎಂಬದಾಗಿ ಇಲ್ಲಿಕೈಮುತಿಕನ್ಯಾಯವಂ ತಿಳಿಯಬೇಕು. (ಅಥವಾ)ದೇಹೇಂದ್ರಿಯಾದಿ ವ್ಯಾಪಾರರೂಪವಾದ ಕರ್ಮವು ವರ್ತಮಾನವಾಗಿದ್ದರೂ ತಾನು ದೇಹೇಂದ್ರಿಯಾದಿಗಳಿಗಿಂತಲೂ ಅನ್ಯನಾದುದರಿಂದ ಯಾವ ಕರ್ಮವೂ ಇಲ್ಲದವನೆಂತಲೂ, ಕಷ್ಟಗಳಿಗೆ ಕಾರಣಗಳಾಗುವುವೆಂಬ ಚಿಂತೆಯಿಂದ ಕರ್ಮತ್ಯಾಗವಂ ಮಾಡುವಿಕೆಯೆಂಬ ಅಕರ್ಮದಲ್ಲಿ ಪ್ರತ್ಯವಾಯರೂಪವಾದ ಕರ್ಮಗಳುಂಟೆಂತಲೂ, ತಿಳಿದುಕೊಂಡಿರುವಂತವನು ಯಾದೃಚ್ಛಿಕವಾಗಿ ಪ್ರಾಪ್ತಗಳಾದ ಕರ್ಮಗಳನ್ನು ಮಾಡುತಲಿದ್ದರೂ ನಾನು ಮಾಡತಕ್ಕವನಲ್ಲವೆಂಬದಾಗಿ ತಿಳಿಯುವಿಕೆಯನ್ನು ಹೊಂದಿರುರುತ್ತಾನಾದುದರಿಂದ ಮನುಷ್ಯರಲ್ಲಿ ಅಂತವನು ಬುದ್ಧಿಯುಳ್ಳವನೆಂತಲೂ, ಯೋಗಿಯೆಂತಲೂ, ಸಕಲ ಕರ್ಮಗಳಂ ಮಾಡಿದವನೆಂತಲೂ, ಸ್ತುತಿಸಲ್ಪಡುವನು. ಮತ್ತು ಜ್ಞಾನವಿಲ್ಲದೆ ದುಃಖಬುದ್ಧಿಯಿಂದ ಕರ್ಮತ್ಯಾಗವಂ ಮಾಡುವಿಕೆಯೆಂಬ ಅಕರ್ಮದಲ್ಲಿ ಪ್ರತಿಬಂಧಕವಾದ ಕರ್ಮಬುದ್ಧಿಯನ್ನು ಯಾವನು ನೋಡುತ್ತಾನೆಯೋ ; ಎಂದರೆ ದುಃಖಗಳಿಗೆ ಕಾರಣವಾಗುವುದೆಂಬ ಬುದ್ಧಿಯಿಂದ ಯಾವನು ಕರ್ಮಗಳಂ ಮಾಡದೇ ತ್ಯಾಗಮಾಡುತ್ತಾನೆಯೋ ಅಂತವನು "ಕರ್ಮೇಂದ್ರಿಯಾಣಿ ಸಂಯಮ್ಯ" (೩‖೬‖) ಎಂಬ ಶ್ಲೋಕದಲ್ಲಿ ಹೇಳಿರುವಂತೆ ಮಿಥ್ಯಾಚಾರವುಳ್ಳವನೆಂದು ಹೇಳಲ್ಪಡುವನು. ಈ ಪ್ರಕಾರವಾಗಿ ಹೇಳುವುದರಿಂದ ಯದೃಚ್ಛೆಯಾಗೆ ಪ್ರಾಪ್ತವಾದ ಕಲಂಜ ಭಕ್ಷಣಾದಿಗಳನ್ನು ಜ್ಞಾನಿಗಳು ಮಾಡಿದರೂ ದೋಷವಿಲ್ಲವೆಂತಲೂ, ರಾಗ ಪ್ರಾಪ್ತವಾದ ನಿಷಿದ್ಧ ಭಕ್ಷ

ಣಾದಿಗಳಿಂದ ಅಜ್ಞಾನಿಗಳಿಗೆದೋಷವೆಂತಲೂ ಹೇಳಿದಂತೆಆಯಿತು||೧೮||

(ರಾ|| ಭಾ||) ಕರ್ಮದಲ್ಲಿಯೂ ಜ್ಞಾನದಲ್ಲಿಯೂ ತಿಳಿಯತಕ್ಕದ್ದನ್ನು ಹೇಳುತ್ತಾನೆ.— ಇಲ್ಲಿ ಅಕರ್ಮಶಬ್ದದಿಂದ ಕರ್ಮಕ್ಕಿಂತಲೂ ಅನ್ಯವಾದ ಆತ್ಮಜ್ಞಾನವು ಹೇಳಲ್ಪಡುವುದು. ಎಲೈ ಅರ್ಜುನನೇ! ಕರ್ಮದಲ್ಲಿ ಜ್ಞಾನ ವನ್ನು ಜ್ಞಾನದಲ್ಲಿ ಕರ್ಮವನ್ನೂ ನೋಡಬೇಕು, ಮಾಡುತಲಿರುವ ಕರ್ಮ ದಲ್ಲಿ ಆತ್ಮಸ್ವರೂಪಜ್ಞಾನವು ಅಪೇಕ್ಷಿತವಾಗಿರುವುದರಿಂದ ಆಕರ್ಮವನ್ನೇ ಜ್ಞಾನವೆಂತಲೂ, ಆ ಜ್ಞಾನವು ಕರ್ಮಕ್ಕೆ ಒಳಪಟ್ಟಿರುವುದರಿಂದಅದನ್ನೇ ಕರ್ಮವೆಂತಲೂ ಯಾವನು ನೋಡುತ್ತಾನೆಯೋ (ಆತ್ಮಸ್ವರೂಪದ ಯಾ ಸ್ತವಜ್ಞಾನದೊಡನೆ ಕರ್ಮವು ಅನುಷ್ಠಿಸಲ್ಪಟ್ಟರೆ ಕರ್ಮಕ್ಕೆ ಜ್ಞಾನವೈಶಿ ಷ್ಟ್ಯವು (ಜ್ಞಾನದಿಂದ ಕೂಡಿರುವಿಕೆಯು) ಜ್ಞಾನಕ್ಕೆ ಕರ್ಮವೈಶಿಷ್ಟ್ಯ ವೂ ಸಂಪನ್ನವಾಗುವುದೆಂದು ತಾತ್ಪರ್ಯವು.) ಅಂತವನು ಸಮಸ್ತ ಶಾ ಸ್ತ್ರಾರ್ಥಗಳನ್ನು ತಿಳಿದವನೆಂತಲೂ, ಮೋಕ್ಷಾರ್ಹನೆಂತಲೂ ಸಮಸ್ತ ಶಾಸ್ತ್ರಾರ್ಥಗಳನ್ನನುಷ್ಠಿಸಿದವನೆಂತಲೂ ಹೇಳಲ್ಪಡುವನು. ||೧೮||

(ಮ|| ಭಾ||) ಕರ್ಮಾದಿ ಸ್ವರೂಪವನ್ನು ಹೇಳುತ್ತಾನೆ.—ಕರ್ಮವು ಮಾಡುತಲಿರುವಲ್ಲಿ ಅಕರ್ಮವನ್ನು ಯಾವನಾದರೆ ನೋಡುತ್ತಾನೆಯೋ, ಎಂದರೆ ತಾನು ಕರ್ಮವಂ ಮಾಡಿದರೂ ಆ ಕರ್ಮವಂ ಮಾಡುವವನು ಮಾಡಿಸುವವನು ಶ್ರೀಮಹಾವಿಷ್ಣುವೇ ಆಗಿರುವುದರಿಂದ ನಾನು ಮಾ ಡತಕ್ಕವನಲ್ಲವೆಂತಲೂ, ಕರ್ಮವು ವಿಷ್ಣುವನ್ನು ಸೇರಿರುವುದೆಂತಲೂ, ಯಾವನು ತಿಳಿಯುತ್ತಾನೆಯೋ ಅಂತವನು ಕರ್ಮದಲ್ಲಕರ್ಮವನ್ನು ನೋಡುತ್ತಾನೆಂದರ್ಥವು. ಜೀವನು ಕರ್ಮವನ್ನು ಮಾಡದೇ ಇರು ವಕಾಲವಾದ ಸ್ವಪ್ನಾವಸ್ಥೆಯಲ್ಲಿ ಅನೇಕ ಕರ್ಮಗಳನ್ನು ತಾನು ಮಾಡಿದವನಂತೆ ನೋಡುತ್ತಾನೆ. ಸ್ವಪ್ನಾವಸ್ಥೆಯಲ್ಲಿ ಕಾಣುವ ಸ ಮಸ್ತ ವ್ಯಾಪಾರವು ಈಶ್ವರ ಸೃಷ್ಟವಾಗಿದ್ದರೂ ತಾನು ಮಾಡಿದವ ನಂತೆ ಕಾಣುತ್ತಾನೆ. ಸ್ವಪ್ನಾವಸ್ಥೆಯಲ್ಲಿ ತಾನು ಯಾವಕರ್ಮವನ್ನು ಮಾಡದ ಅಕರ್ತಾವಾಗಿದ್ದರೂ ಕಾಣಲ್ಪಡುವ ವ್ಯಾಪಾರವೆಲ್ಲವು ಪರಮೇ ಶ್ವರ ಸೃಷ್ಟಿಯೆಂಬದಾಗಿ ಯಾವನು ತಿಳಿಯುತ್ತಾನೋ ಅವನು ಅಕ ರ್ಮದಲ್ಲಿ ಕರ್ಮವನ್ನು ನೋಡುತ್ತಾನೆ. ||೧೮||

(ಗೀ|| ವಿ||) (ಮೇಲೆ ವಿವರಿಸುವ ಅರ್ಥವನ್ನೂ ಹೇಳಿ ಬೇರೇ ಒಂದು

ಅರ್ಥವನ್ನೂ ಹೇಳುತ್ತಾರೆ ) ಅಥವಾ, " ಕರೋತ್ಯಸ್ಮಿನ್ನಿತಿ(ಯತ ಇತಿ ಕರ್ಮ ಜೀವ ಉದಾಹೃತಃ ॥ " ಎಂಬ ನಿರುಕ್ತಿ ಬಲದಿಂದಲೂ, ಕರ್ಮವಿಧಿ, ಕರ್ಮ ಫಲ, ಸಹಿತನಾಗಿರುವುದರಿಂದಲೂ, ಜೀವನೇ "ಕರ್ಮ" ಎಂದು ಹೇಳಲ್ಪಡು ವನು. ಕರಃ ವಿಧಾಯತೇ ಅಸ್ಮಿನ್ನಿತಿ ಕರ್ಮ - ಕರ್ಮವಿಧಿಯು ಈ ಜೀವನಲ್ಲಿ ತಿಳಿಯಲ್ಪಡುವುದರಿಂದ ಜೀವನಲ್ಲಿ ಕರ್ಮಶಬ್ದವು ಪ್ರಯುಕ್ತವಾಯಿತು. ಕರ್ಮ ವಿಧಿಕರ್ಮಫಲವಿಲ್ಲದವನಾದುದರಿಂದ ಪರಮಾತ್ಮನು ಅಕರ್ಮ ಎಂದು ಹೇಳಲ್ಪಡುತ್ತಾನೆ. ಕರ್ಮಣಿ-ಜೀವನಲ್ಲಿ, ಯಃ-ಯಾವನು, ಅಕರ್ಮ-ಸ್ವಾತಂತ್ರ್ಯ ವಿಲ್ಲದವನಾದುದರಿಂದ ಕರ್ಮಾಭಾವವನ್ನು, ಪಶ್ಯೇತ್-ತಿಳಿಯು ತ್ತಾನೋ, ಅಕರ್ಮಣಿಚ-ಪರಮಾತ್ಮನಲ್ಲಿಯೂ, ಯಃ-ಯಾವನು, ಕರ್ಮ-ಸ್ವತಂತ್ರನಾಗಿರುವದರಿಂದ ಸೃಷ್ಟ್ಯಾದಿ ಸಮಸ್ತಕರ್ಮವನ್ನು, (ಇದ ರಿಂದಲೂ ಪರಮಾತ್ಮನಿಗೆ ಸ್ವತಂತ್ರಕರ್ತೃತ್ವವೂ ಜೀವಾತ್ಮನಿಗೆ ಪ ರಮಾತ್ಮಾಧೀನವಾದ ಕರ್ತೃತ್ವವೂ ಫಲಿತವಾಯಿತು.) ಪಶ್ಯೇತ್- ತಿಳಿ ಯುತ್ತಾನೋ, ಸಃ-ಅವನು, ಮನುಷ್ಯರಲ್ಲಿ ಪ್ರಶಸ್ತವಾದ ಜ್ಞಾನವುಳ್ಳವ ನೆಂತಲೂ, ಯೋಗಯುಕ್ತನೆಂತಲೂ, ಸಮಸ್ತ ಕರ್ಮಗಳು ಮಾಡಿದವ ನೆಂತಲೂ, ಹೇಳಲ್ಪಡುವನೆಂದರ್ಥವು. ॥೧೮॥

ಮೂ॥ ಯಸ್ಯಸರ್ವೇ ಸಮಾರಂಭಾಃ ಕಾಮ ಸಂಕಲ್ಪ
ವರ್ಜಿತಾಃ । ಜ್ಞಾನಾಗ್ನಿ ದಗ್ಧಕರ್ಮಾಣಂ ತಮಾಹುಃ
ಪಂಡಿತಂಬುಧಾಃ ॥ ... ॥೧೯॥

ಪ॥ ಯಸ್ಯ- ಸರ್ವೇ - ಸಮಾರಂಭಾಃ - ಕಾಮಸಂಕಲ್ಪವರ್ಜಿತಾಃ । ಜ್ಞಾನಾಗ್ನಿದ ಗ್ಧಕರ್ಮಾಣಂ - ತಂ - ಆಹುಃ - ಪಂಡಿತಂ - ಬುಧಾಃ ॥ ॥೧೯॥

ಅ ॥ ಯಸ್ಯ - ಯಾವನ, ಸರ್ವೇ - ಸಮಸ್ತಗಳಾದ, ಸಮಾರಂಭಾಃ - ಕರ್ಮಗಳು - ಕಾಮಸಂಕಲ್ಪವರ್ಜಿತಾಃ - ಇಚ್ಛಾಸಂಕಲ್ಪಾದಿ ವಿಹೀನಗಳಾಗಿರುವುವೋ? (ಶ್ರೀ) ಫಲೇಚ್ಛಾ ರಹಿತವಾಗಿರುವುವೋ ; (ಗೀ॥ ವಿ॥) ಕಾಮಃ - ಫಲೇಚ್ಛಾ, ಸಂಕಲ್ಪಃ - ಈಕರ್ಮದಿಂದ ನಾನು ಸ್ವರ್ಗವಂಹೊಂದುವೆನು, ಎಂಬ ಉದ್ದೇಶ್ಯವು ಇವುಗಳಿಲ್ಲದೆ ಇರುವುವೋ ; ಜ್ಞಾನಾ ಗ್ನಿದಗ್ಧಕರ್ಮಾಣಂ - ಜ್ಞಾನಾಗ್ನಿಯಿಂದ ದಹಿಸಲ್ಪಟ್ಟ ಕರ್ಮವುಳ್ಳ, (ರಾ) ಕರ್ಮದಲ್ಲ ಡಗಿರುವ ಆತ್ಮಸ್ವರೂಪಜ್ಞಾನವೆಂಬ ಅಗ್ನಿಯಿಂದ ದಹಿಸಲ್ಪಟ್ಟ ಪ್ರಾಚೀನಕರ್ಮವುಳ್ಳ, ( ಗೀ॥ ವಿ ॥ ) ಪರಮಾತ್ಮನಿಗೆ ಸ್ವತಂತ್ರಕರ್ತೃತ್ವವನ್ನು ತಿಳಿದು ಅನಂತರದಲ್ಲಿ ತನಗೆ ಅಸ್ವಾತಂತ್ರ್ಯದಿಂದ ಕರ್ಮವಿಲ್ಲವೆಂಬುವುದಂತಿಳಿದಿರುವ, (ಶ್ರೀ। ಶಂ॥) ಕರ್ಮವು ಅಕರ್ಮ

ವಾಗುವುದಂ ತಿಳಿದಿರುವ, ತಂ - ಅವನನ್ನು, ಪಂಡಿತಂ - ಜ್ಞಾನಿಯನ್ನಾಗಿ, ಬುಧಾಃ- ವಿವೇಕಿಗಳಾದವರು, ಆಹುಃ - ಹೇಳುವರು. ... ... ||೧೯||

(ರಾ|| ಭಾ||) ಪ್ರತ್ಯಕ್ಷದಲ್ಲಿ ಮಾಡುವ ಕರ್ಮಕ್ಕೆ ಜ್ಞಾನಾಕಾರವು ಹೇಗೆ ಸಂಭಾವಿತವಾಗುವುದೆಂದರೆ ಅದಕ್ಕುತ್ತರವನ್ನು ಹೇಳುತ್ತಾನೆ. ಯಾವ ಮೋಕ್ಷಾರ್ಥಿಗಾದರೇ ತಾನು ಮಾಡುವ (ನಿತ್ಯ ನೈಮಿತ್ತಿಕ ಕಾಮ್ಯಗಳೆಂದು ಹೇಳಲ್ಪಟ್ಟ ವೈದಿಕ ಕರ್ಮಗಳೂ, ದ್ರವ್ಯಾರ್ಜನಾದಿ ರೂಪವಾದ ಲೌಕಿಕ ಕರ್ಮಗಳೂ) ಸರ್ವಕರ್ಮಗಳೂ ಫಲಾಪೇಕ್ಷಾ ರಹಿತವಾಗಿಯೂ, ನಾನು ಮಾಡುತ್ತೇನೆಂಬ ಸಂಕಲ್ಪರಹಿತರಾಗಿಯೂ, ಇರುವುದೋ; (ಇಲ್ಲಿ ಸಂಕಲ್ಪವೆಂದರೆ ಪ್ರಕೃತಿಯೊಡನೆಯೂ ಅದರ ಗುಣಗಳೊಡನೆಯೂ ತನ್ನನ್ನೇಕವಾಗಿಮಾಡಿಕೊಂಡು ನೆನೆಸುವುದು. ಅದು ಹೇಗೆಂದರೆ,— ಕರ್ಮವನ್ನು ಮಾಡುತಲಿರುವಲ್ಲಿ ಪ್ರಕೃತಿಯ ಗುಣದಿಂದ ಬಂದ ಕರ್ತೃತ್ವವನ್ನು ತನ್ನಲ್ಲಾರೋಪಿಸಿಕೊಂಡು ನಾನು ಮಾಡಿದೆನೆಂದು ನೆನೆಸುವುದೆ;) ಅವನು ಕರ್ಮವನ್ನು ಮಾಡುವ ಕಾಲದಲ್ಲಿ ಪ್ರಕೃತಿಗಿಂತಲೂ ಪೃಥಗ್ಭೂತನಾದ ಆತ್ಮನ ಯಥಾರ್ಥ ಜ್ಞಾನದೊಡನೆ ಕರ್ಮವಂಮಾಡುವುದರಿಂದ ಅವನನ್ನು ತತ್ವವೇದಿಗಳಾದ ಹಿರಿಯರು ಆತ್ಮಜ್ಞಾನವೆಂಬ ಅಗ್ನಿಯಿಂದ ಸಕಲ ಪಾಪಗಳನ್ನು ದಹಿಸಿರುವ ಮಹಾ ಪಂಡಿತನೆಂಬದಾಗಿ ಹೇಳುವರು. ಆದುದರಿಂದ ಕರ್ಮಕ್ಕೆ ಜ್ಞಾನಾಕಾರತ್ವವುಂಟಾಗಲು ಬಾಧಕವಿಲ್ಲವು. ||೧೯||

ಮೂ|| ತ್ಯಕ್ತ್ವಾಕರ್ಮಫಲಾಸಂಗಂ ನಿತ್ಯತೃಪ್ತೋ
ನಿರಾಶ್ರಯಃ | ಕರ್ಮಣ್ಯಭಿಪ್ರವೃತ್ತೋಽಪಿ ನೈವಕಿಂಚಿ
ತ್ಕರೋತಿಸಃ || ... ... ||೨೦||

ಪ|| ತ್ಯಕ್ತ್ವಾ - ಕರ್ಮಫಲಾಸಂಗಂ - ನಿತ್ಯತೃಪ್ತಃ - ನಿರಾಶ್ರಯಃ | ಕರ್ಮಣಿ- ಅಭಿಪ್ರವೃತ್ತಃ - ಅಪಿ - ನ - ಏವ - ಕಿಂಚಿತ್ - ಕರೋತಿ_ಸಃ|| ... ||೨೦||

ಅ| ಕರ್ಮಫಲಾಸಂಗಂ - ಕರ್ಮಫಲಸಂಬಂಧವನ್ನು, ತ್ಯಕ್ತ್ವಾ - ಬಿಟ್ಟು, ನಿತ್ಯತೃಪ್ತಃ - ನಿತ್ಯವಾದ ಆತ್ಮಾನಂದದಿಂದ ತೃಪ್ತಿಯನ್ನು ಹೊಂದಿದವನಾಗಿಯೂ, (ರಾ) ತನ್ನ ಆತ್ಮಸ್ವರೂಪದಲ್ಲಿಯೇ ತೃಪ್ತಿಹೊಂದಿರುವಂತವನಾಗಿಯೂ, ನಿರಾಶ್ರಯಃ - ಯಾರನ್ನು ಆಶ್ರಯಿಸದೇ ಇರುವಂತವನಾಗಿಯೂ, ಇರುವವನು ; (ರಾ) ಅಸ್ಥಿರವಾದ ಪ್ರಕೃತಿಯಲ್ಲಿ ಆಶ್ರಯಬುದ್ಧಿರಹಿತನಾಗಿಯೂ, ಇರುವವನು ; ಕರ್ಮಣಿ - ಕರ್ಮದಲ್ಲಿ ಅಭಿಪ್ರವೃ

ತ್ತೋಽಪಿ - ಪ್ರವೃತ್ತಿಸಿದವನಾದರೂ, ಸಃ - ಅವನು, ಕಿಂಚಿತ್ - ಯಾವದೊಂದುಕರ್ಮ ವನ್ನು, ನಕರೋತ್ಯೇವ- ಮಾಡುವುದೇ ಇಲ್ಲವು. (ರಾ) ನೈವಕಿಂಚಿತ್ಕರೋತ್ಯೇವ - ಕರ್ಮ ವನ್ನು ಮಾಡಿದರೂ ಕರ್ಮವನ್ನು ಮಾಡಿದವನಾಗುವುದಿಲ್ಲವು. ಜ್ಞಾನಾಭ್ಯಾಸವನ್ನೇ ಮಾ ಡಿವವನಾಗುವನು. ... ... ... ||೨೦||

(ರಾ|| ಭಾ||) ಕರ್ಮಕ್ಕೆ ಜ್ಞಾನಾಕಾರತ್ವವನ್ನೇ ವಿವರಿಸುತ್ತಾನೆ.— ಕರ್ಮಫಲಸಂಗವನ್ನು ಬಿಟ್ಟು ನಿತ್ಯನಾದ ತನ್ನ ಆತ್ಮನಲ್ಲಿಯೇ ತೃಪ್ತಿ ಹೊಂದಿರುವಂತವನಾಗಿಯೂ, ಅಸ್ಥಿರವಾದ ಪ್ರಕೃತಿಯಲ್ಲಾಶ್ರಯ ಬುದ್ಧಿರಹಿತನಾಗಿಯೂ, ಇರುತ ಯಾವನು ಕರ್ಮಗಳಲ್ಲಿ ಅಭಿಮುಖ್ಯ ದಿಂದ ಪ್ರವರ್ತಿಸಿದವನಾದರೂ (ಕರ್ಮಗಳನ್ನು ಮಾಡಿದವನಾದರೂ) ಕರ್ಮಗಳಂ ಮಾಡುವುದೆಂಬ ನೆಪದಿಂದ ಜ್ಞಾನಾಭ್ಯಾಸವನ್ನೇ ಮಾ ಡುತ್ತಾನೆಂದರ್ಥವು. ... ... ||೨೦||

ಮೂ || ನಿರಾಶೀರ್ಯತ ಚಿತ್ತಾತ್ಮಾ ತ್ಯಕ್ತ ಸರ್ವ ಪರಿ
ಗ್ರಹಃ | ಶಾರೀರಂ ಕೇವಲಂಕರ್ಮ ಕುರ್ವನ್ನಾಪ್ನೋತಿ
ಕಿಲ್ಬಿಷಂ || ... ... ||೨೧||

ಪ|| ನಿರಾಶೀಃ- ಯತಚಿತ್ತಾತ್ಮಾ- ತ್ಯಕ್ತಸರ್ವಪರಿಗ್ರಹಃ | ಶಾರೀರಂ- ಕೇವಲಂ- ಕ ರ್ಮ-ಕುರ್ವನ್- ನ- ಆಪ್ನೋತಿ- ಕಿಲ್ಬಿಷಂ || ... ||೨೧||

ಅ|| ನಿರಾಶೀಃ- ಅಪೇಕ್ಷಾರಹಿತನಾಗಿಯೂ, ಯತ ಚಿತ್ತಾತ್ಮಾ- ದೇಹೇಂದ್ರಿಯಾದಿಗ ಳನ್ನು ಸ್ವಾಧೀನಪಡಿಸಿಕೊಂಡಿರುವಂತವನಾಗಿಯೂ, ತ್ಯಕ್ತಸರ್ವಪರಿಗ್ರಹಃ- ಸಮಸ್ತ ವಾದ ಸಂಪಾದನೆಗಳನ್ನು ಬಿಟ್ಟಿರುವಂತವನಾಗಿಯೂ, (ರಾ) ಆತ್ಮವನ್ನೇ ಮುಖ್ಯ ಪ್ರ ಯೋಜನವಾಗಿ ನೆನೆಸಿ, ಪ್ರಕೃತಿಯು, ಪ್ರಕೃತಿಯಿಂದುಂಟಾದ ವಸ್ತುಗಳು, ಇವುಗಳಲ್ಲಾ ಸಕ್ತಿ ರಹಿತನಾಗಿಯೂ, (ಮ|| ಗೀ|| ವಿ||) ದೇಹೇಂದ್ರಿಯಾದ್ಯಭಿಮಾನಶೂನ್ಯನಾಗಿಯೂ, ಶಾರೀರಂ ಕೇವಲಂ ಕರ್ಮ-ಶರೀರ ಧಾರಣಮಾತ್ರಾರ್ಥವಾದ ಕರ್ಮವನ್ನು, ಕುರ್ವನ್- ಮಾಡುವಂತವನು,ಕಿಲ್ಬಿಷಂನಾಪ್ನೋತಿ- ಪಾಪವನ್ನು ಹೊಂದುವುದಿಲ್ಲವು. ||೨೧||

(ಶಂ|| ಭಾ||)ಯಾವನಾದರೇ ಲೋಕ ಸಂಗ್ರಹಾರ್ಥ ವಾಗಿಯಾದ ರೂ ಕರ್ಮಗಳ ನ್ನಾಚರಿಸುವುದಕ್ಕೆ ಪೂರ್ವವೇ ಸರ್ವಾಂತರನಾಗಿಯೂ, ಪ್ರತ್ಯಗಾತ್ಮ ಸ್ವರೂಪನಾಗಿಯೂ, ನಿಷ್ಕ್ರಿಯನಾಗಿಯೂ ಇರುವ ಬ್ರಹ್ಮವೇನಾನೆಂಬ ಬ್ರಹ್ಮಸ್ವರೂಪ ಜ್ಞಾನವುಳ್ಳವನಾಗುವನೋ, ಅಂತ ವನು ಈಲೋಕದಲ್ಲುಂಟಾಗುವ ದೃಷ್ಟಸುಖಕ್ಕೂ ಪರಲೋಕದಲ್ಲುಂ

ಟಾಗುವ ಅದೃಷ್ಟ ಸುಖಕ್ಕೂ ಸಾಧನವಾಗಿರುವ ಕರ್ಮಗಳಲ್ಲಿ ಪ್ರಯೋಜನ ರಾಹಿತ್ಯವನ್ನು ನೋಡುವಂತವನಾಗಿ ಸಾಧನಗಳೊಡನೆ ಕರ್ಮಗಳಂ (ಬಿಟ್ಟು)ಸನ್ಯಾಸವಮಾಡಿ ಶರೀರಯಾತ್ರಾಮಾತ್ರನಿಮಿತ್ತವಾಗಿ ಸಂಚರಿಸುವಂತವನಾಗಿಯೂ, ಯತಿಯಾಗಿಯೂ, ಬ್ರಹ್ಮಜ್ಞಾನ ನಿಷ್ಠಾಗರಿಷ್ಠನಾಗಿಯೂ, ಮುಕ್ತನಾಗುವನೆಂಬೀ ಅರ್ಥವನ್ನು ತೋರಿಸಲೀ ಶ್ಲೋಕವನ್ನು ಹೇಳುತ್ತಾನೆ. ಕಾಮಸಂಕಲ್ಪಗಳೊಡನೆ ಕರ್ಮಗಳಂಬಿಡುವ ಪಕ್ಷದಲ್ಲಿ ಶರೀರಯಾತ್ರೆಯು ಹೇಗೆ ಸಿದ್ಧಿಸುವುದೆಂದರೆ ಅದಕ್ಕಾಗಿ ಶರೀರ ಸ್ಥಿತಿಮಾತ್ರಕ್ಕಾಗಿ ತಕ್ಕ ಕರ್ಮಗಳನ್ನು ಮಾಡುತ್ತಾಇದ್ದರೂ, ಎಂಬದಾಗಿ ಹೇಳಿತು. ಶರೀರಸ್ಥಿತಿಮಾತ್ರಾರ್ಥವಾಗಿಯಾದರು ಚಿತ್ತವು ಕರ್ಮದಲ್ಲಾಸಕ್ತವಾದರೆ ಆತ್ಮಜ್ಞಾನವೈಮುಖ್ಯವುಂಟಾಗಿ ಆದರಿಂದ ಮುಕ್ತಿಫಲಕ್ಕೆ ಅಪಾಯ ವುಂಟಾಗಲಾರದೋ ? ಎಂಬ ಶಂಕಾನಿರಾಕರಣಕ್ಕಾಗಿ ಶರೀರ ಯಾತ್ರಾರ್ಥವಾದ ಕರ್ಮದಲ್ಲಿಯೂ ಆಸಕ್ತಿ ಯುಂಟಾಗಲಾರದೆಂದು ಹೇಳಿತು. ಆದುದರಿಂದಲೆ ಅಂಥಾ ಕರ್ಮದಲ್ಲಾದರವನ್ನು ಬಿಟ್ಟು ಆತ್ಮಜ್ಞಾನದಲ್ಲಿಯೇ ಆಸಕ್ತಿಯುಳ್ಳವನಾಗುವನೆಂದು ತಿಳಿಸಲು ಜ್ಞಾನ ನಿಷ್ಠನೆಂಬದಾಗಿಯೂ ಹೇಳಿತು. ಮತ್ತು ಅಂತಃಕರಣವೂ ದೇಹವೂ ನಿಯಮಿಸಲ್ಪಟ್ಟರೇ ಅಪೇಕ್ಷೆಗಳು ಹೋಗುವುವೆಂತಲೂ ಆದುದರಿಂದಲೇ ಸಮಸ್ತ ಪರಿಗ್ರಹವು ಬಿಡಲ್ಪಡುವುದೆಂತಲೂ, ತಿಳಿಯಬೇಕು. ಸಮಸ್ತವಸ್ತು ಸಂಪಾದನೆಯನ್ನು ಬಿಟ್ಟರೆ ಶರೀರಯಾತ್ರೆಯು ನಡಿಯುವದಿಲ್ಲವೆಂಬುವುದಕ್ಕಾಗಿ "ಶಾರೀರಂ" ಎಂಬದಾಗಿ ಹೇಳಿತು. ಇಲ್ಲಿ "ಕೇವಲಂ" ಯೆಂಬದಾಗಿಹೇಳುವುದರಿಂದ ಶರೀರ ಯಾತ್ರಾಮಾತ್ರಾರ್ಥವಾದ ಕರ್ಮದಲ್ಲಿಯೂ ಅಭಿಮಾನಶೂನ್ಯನಾಗಿರಬೇಕೆಂದೇರ್ಪಡುವುದು. ಇದರಿಂದ "ಸಮಸ್ತವಿಷವುಗಳಲ್ಲಿಯು ಅಪೇಕ್ಷಾರಹಿತನಾಗಿಯೂ, ದೇಹಾಂತಃಕರಣಗಳಿಂದುಂಟಾಗುವ ಕಾರ್ಯಗಳನ್ನು ತತ್ಸಾಧನಗಳೊಡನೆ ಬಿಟ್ಟವನಾಗಿಯೂ, ಬಂಧ ಹೇತುಗಳಾದ ಸಮಸ್ತ ಕರ್ಮಗಳನ್ನು ಸನ್ಯಾಸವಮಾಡಿದವನಾಗಿಯೂ, ಶರೀರಸ್ಥಿತಿಮಾತ್ರ ಪ್ರಯೋಜಕವಾದ ಕರ್ಮಗಳನ್ನು ಕರ್ತೃತ್ವಾದ್ಯಭಿಮಾನ ವರ್ಜಿತನಾಗಿ ಆಚರಿಸುವಂತವನು ಕಿಲ್ಬಿಷಶಬ್ದದಿಂದ ಹೇಳಲ್ಪಟ್ಟ ಪುಣ್ಯಪಾಪಗಳನ್ನು ತ್ಯಾಗಮಾಡುವನೆಂಬು ಹೇಳಿದಂತೆ

ಆಯಿತು. ಬಂಧಕ್ಕೆ ಕಾರಣವಾಗುವುದರಿಂದ ಮುಮುಕ್ಷುವಾದವನಿಗೆ ಧರ್ಮವು ಪಾಪವೆಂಬದಾಗಿಯೇ ತಿಳಿಯಬೇಕು.

ಆದರೇ "ಶಾರೀರಂಕೇವಲಂಕರ್ಮ" ಎಂಬ ಪ್ರಕರಣದಲ್ಲಿ "ಶಾರೀರಂ" ಎಂದರೆ ಶರೀರ ನಿರ್ವರ್ತ್ಯವೆಂಬುವುದು (ಶರೀರದಿಂದ ನೆರವೇರಿಸಲ್ಪಡುವದೆಂದು) ಅರ್ಥವೇ ? ಅಥವಾ ಶರೀರಸ್ಥಿತಿಮಾತ್ರಕ್ಕೆ ಉಪಯೋಗಿಸುವಕರ್ಮವೆಂಬುವುದು ಅರ್ಥವೆ ? ಎಂದು ವಿಚಾರಿಸಬೇಕು. ಅದರಲ್ಲಿಯೂ"ಶಾರೀರಂ" ಎಂದರೆ, ಶರೀರದಿಂದ ನೆರವೇರಿಸಲ್ಪಡುವಕರ್ಮವೆಂಬುವಪಕ್ಷದಲ್ಲಿ ದೋಷವೇನು ? ಶರೀರಸ್ಥಿತಿಮಾತ್ರ ಪ್ರಯೋಜನವಾಗಿರುವಕರ್ಮವೆಂಬುವ ಪಕ್ಷದಲ್ಲಿ ಫಲವೇನು ? ಎಂಬದಾಗಿ ಪೂರ್ವ ವಾದಿಯುಕೇಳಿದರೆ ಅದಕ್ಕುತ್ತರವು ಹೇಳಲ್ಪಡುವುದು. ಶರೀರದಿಂದ ನೆರವೇರಿಸಲ್ಪಡುವ ಕರ್ಮವೆಂದರೆ ಅದು ನಿಷಿದ್ಧ ಕರ್ಮವೊ ? ವಿಹಿತಕರ್ಮವೊ? ಎಂಬ ವಿಕಲ್ಪಕ್ಕೆ ಮೊದಲು ಪ್ರತ್ಯುತ್ತರವಂ ಹೇಳಬೇಕು. ನಿಷಿದ್ಧಕರ್ಮವೆಂಬುವಪಕ್ಷದಲ್ಲಿ ನಿಷಿದ್ಧಕರ್ಮವಂ ಮಾಡಿದರೂಪಾಪವನ್ನುಹೊಂದುವುದಿಲ್ಲವೆಂದು ಹೇಳಿದಂತೆ ಆಗುವುದು. ಇದನ್ನು ಸಮ್ಮತಿಸುವಪಕ್ಷದಲ್ಲಿನಿಷಿದ್ಧ ಕರ್ಮಗಳಂ ಮಾಡಕೂಡದೆಂಬ ಶಾಸ್ತ್ರವು ವ್ಯರ್ಥವಾಗುವುದು. ದೃಷ್ಟಾದೃಷ್ಟ ಪ್ರಯೋಜಕವಾಗಿರುವ ಶಾಸ್ತ್ರೀಯವಾದ ವಿಹಿತಕರ್ಮವೆಂಬುವ ಪಕ್ಷದಲ್ಲಿ ವಿಹಿತಕರ್ಮವನ್ನು ಮಾಡುವಂತವನು ಪಾಪವನ್ನುಹೊಂದುವುದಿಲ್ಲ ವೆಂಬುವುದು ಸ್ವತಸ್ಸಿದ್ಧವಾಗಿರುವುದರಿಂದ ಅಪ್ರಸಕ್ತ ಪ್ರತಿಷೇಧ ರೂಪವಾದ ದೋಷವುಂಟಾಗುವುದು. ಆದುದರಿಂದ ಶರೀರದಿಂದ ನೆರವೇರಿಸಲ್ಪಡುವ ವಿಹಿತ ಪ್ರತಿಷಿದ್ಧಗಳೆಂಬೀ ಯೆರಡು ಕರ್ಮಗಳಲ್ಲಿ ಯಾವದೂ ಆಗಲಾರದು. ಮತ್ತು, ಕರ್ಮಶಬ್ದಕ್ಕೆ ಶಾರೀರಶಬ್ದವನ್ನು ವಿಶೇಷಣವಾಗಿ ಹೇಳುವುದರಿಂದಲೂ, ಕೇವಲ ಶಬ್ದವನ್ನು ಪ್ರಯೋಗಿಸಿರುವುದರಿಂದಲೂ,ಶರೀರದಿಂದ ನಿರ್ವರ್ತ್ಯವು"ಶಾರೀರಂ"ಎಂಬದಾಗಿ ಹೇಳುವುದರಿಂದ ವಾಕ್ಕಿನಿಂದಲೂ ಮನಸ್ಸಿನಿಂದಲೂ ನೆರವೇರಿಸಲ್ಪಡುವುದಾಗಿಯೂ, ವಿಧಿ ಪ್ರತಿಷೇಧಗಳಿಗೆ ವಿಷಯವಾಗಿಯೂ, ಧರ್ಮಾಧರ್ಮಶಬ್ದಗಳಿಂದ ಹೇಳತಕ್ಕದ್ದಾಗಿಯೂ ಇರುವ ಕರ್ಮವನ್ನುಮಾಡುವ ಮುಮುಕ್ಷುವಾದವನು ಪಾಪವನ್ನು ಹೊಂದಲಾರನೆಂದು ಹೇಳಿದಂತೆ ಆಗುವುದೆಂದರೂ ವಾಕ್ಕಿನಿಂದಲೂ ಮನಸ್ಸಿನಿಂದಲೂ ಕರ್ಮವ

ನ್ನು ಮಾಡುವಂತವನಿಗೆ ಕಿಲ್ಬಿಷವು (ಪಾಪವು) ಪ್ರಾಪ್ತವಾಗುವುದೆಂ ಬದಾಗಿ ನೆನೆಯುವಿಕೆ ಯುಂಟಾಗುವುದೊ ಎಂಬದಾಗಿ ನೆನೆಸಿ ಅಂಥಾ ನೆನೆಯುವಿಕೆಯ ನಿವೃತ್ತಿಗೋಸ್ಕರವಾಗಿ ವಾಕ್ಕಿನಿಂದಲೂ ಮನಸ್ಸಿನಿಂ ನಿಂದಲೂಕೂಡ ನೆರವೇರಿಸಲ್ಪಡುವ ಕರ್ಮವನ್ನು ಮಾಡುತಲಿರುವ ಮು ಮುಕ್ಷುವಾದವನು ಕಿಲ್ಬಿಷವನ್ನು ಹೊಂದಲಾರನೆಂದು ಹೇಳಿದಪ್ರಕಾ ರವೋ ? ಆಪ್ರಕಾರ ಹೇಳುವಪಕ್ಷದಲ್ಲಿ ವಾಙ್ಮನಸ್ಸುಗಳಿಂದ ವಿಹಿತಕ ರ್ಮವನ್ನು ಮಾಡುವುದರಿಂದ ಪಾಪ ಪ್ರಾಪ್ತಿಯೊ ? ಅಥವಾ ನಿಷಿದ್ಧಕ ರ್ಮಾಚರಣದಿಂದ ಪಾಪಪ್ರಾಪ್ತಿಯೊ ? ಎಂದು ವಿಚಾರಿಸಬೇಕು. ವಿಹಿ ತಾಚರಣದಿಂದ ಪಾಪ ಪ್ರಾಪ್ತಿಯೆಂದರೇ ಜಪಧ್ಯಾನಾದಿಗಳು ಮಾಡತ ಕ್ಕವುಗಳೆಂದು ಬೋಧಿಸುವ ಶಾಸ್ತ್ರಕ್ಕೆ ಆ ನರ್ಥಕ್ಯವುಂಟಾಗುವುದು. ಪ್ರತಿಷಿದ್ಧ ಕರ್ಮಾಚರಣದಿಂದ ಕಿಲ್ಬಿಷಪ್ರಾಪ್ತಿಯಾಗುವುದೆಂದರೆ ಇ ದೂಮೊದಲಿನಂತೆ ಅಪ್ರಸಕ್ತ ಪ್ರತಿಷೇಧವೇ ಆಗುವುದು. ಆದುದ ರಿಂದ "ಶರೀರನಿರ್ವರ್ತ್ಯಂಶಾರೀರಂ" (ಶರೀರದಿಂದ ನೆರವೇರಿಸಲ್ಪಡತ ಕ್ಕದ್ದು. ಶಾರೀರ) ವೆಂದು ಹೇಳಲಾಗುವುದಿಲ್ಲವು. ಯಾವಾಗಲಾದ ರೇ, ಶರೀರಸ್ಥಿತಿ ಮಾತ್ರವನ್ನೇ ಪ್ರಯೋಜನವಾಗಿ ಉಳ್ಳದ್ದು (ಶಾರೀ ರಂ ಎಂಬುವ ಕರ್ಮವು, ಎಂದು ಹೇಳುವಪಕ್ಷದಲ್ಲಿ ದೃಷ್ಟಾದೃಷ್ಟಸು ಖಗಳಿಗೆ ಕಾರಣವಾದಂಥಾದ್ದಾಗಿಯೂ, ವಿಧಿ ನಿಷೇಧ ಶಾಸ್ತ್ರಗಳಿಂದ ಮಾಡತಕ್ಕದ್ದೆಂದು ತಿಳಿಯಲ್ಪಡುವುದಾಗಿಯೂ, ಶರೀರವೇನು, ವಾಕ್ಕೇ ನು, ಮನಸ್ಸೇನು ಇವುಗಳಿಂದನೆರವೇರಿಸಲ್ಪಡತಕ್ಕದ್ದಾಗಿಯೂ, ಶರೀ ರಸ್ಥಿತಿ ಮಾತ್ರಪ್ರಯೋಜಕವಾಗಿಯೂ ಇರುವ ಕರ್ಮವನ್ನು ಮಾಡು ವುದರಲ್ಲಿಯೂ, ನಾನು ಮಾಡುತ್ತೇನೆಂಬ ಅಭಿಮಾನವರ್ಜಿತನಾಗಿ ಮಾ ಡುತಾ ವಿಧಿನಿಷೇಧ ರೂಪಗಳಾದಶಾಸ್ತ್ರಗಳಿಂದ ಮಾಡತಕ್ಕವುಗಳೆಂ ದು ಹೇಳಲ್ಪಡುವ ಕರ್ಮಗಳಲ್ಲಿಯೂ ಕೂಡ ದೇಹಸ್ಥಿತಿಗೆ ತಕ್ಕ ಧರ್ಮಗ ಳತಗಿಂತಲೂ ಇತರವಾದಕರ್ಮವನ್ನು ಮಾಡದೇಇರುವ ವಿವೇಕಿಯು ಶ ರೀರವಾಙ್ಮನಸ್ಸುಗಳ ಚೇಷ್ಟಾಮಾತ್ರರೂಪವಾದ ಕರ್ಮಗಳನ್ನು ಲೋ ಕದೃಷ್ಟಿಗೆ ಮಾಡುವವನಂತೆ ಕಂಡುಬಂದರೂ ತನ್ನ ದೃಷ್ಟಿಯಿಂ ದ ಯಾವ ಕರ್ಮವನ್ನು ಮಾಡದೇ ಇರುವವನಂತೆ ಕಾಣಲ್ಪಡುತ್ತಾ ನಾದುದರಿಂದ ಕಿಲ್ಬಿಷವನ್ನು ಹೊಂದಲಾರನು. ಮತ್ತು ಇಂಥಾ

ವಿದ್ವಾಂಸನಿಗೆ ಪಾಪಶಬ್ದ ವಾಚ್ಯವಾದ ಕಿಲ್ಬಿಷಪ್ರಾಪ್ತಿ ಇಲ್ಲವಾದು ದರಿಂದಲೂ ಜ್ಞಾನಾಗ್ನಿಯಿಂದ ಸಕಲ ಕರ್ಮಗಳನ್ನು ದಹಿಸಿರುವುದ ರಿಂದಲೂ ಇವನು ಸಂಸಾರವನ್ನು ಹೊಂದಲಾರನು. ಸಂಸಾರರೂಪ ವಾದ ಬಂಧವಿಲ್ಲವಾದುದರಿಂದ ಮುಕ್ತನಾಗುವನೆಂದೀ ರೀತಿಯಾಗಿ ಇದು ಕೂಟಸ್ಥಾತ್ಮಜ್ಞಾನಫಲಕ್ಕೆ ಅಥವಾ ಕರ್ಮಾ ಕರ್ಮಾದಿಗಳ ತತ್ವ ಜ್ಞಾನಫಲಕ್ಕೆ ಅನುವಾದವಾಗಿರುವುದೆಂತಲೂ, ಶರೀರಸ್ಥಿತಿಮಾತ್ರ ನಿರ್ವ ರ್ತ್ಯಂ ಶಾರೀರಂ ಎಂಬುವ ಪಕ್ಷದಲ್ಲಿ ಯಾವದೋಷವೂ ಇಲ್ಲವೆಂತಲೂ ತಿಳಿಯಬೇಕು. ... ... ||೨೧||

(ರಾ|| ಭಾ||) ಇದು ಮೊದಲಾದ ಮುಂದಿನ ಮೂರುಶ್ಲೋಕಗಳಿಂ ದಲೂ ಪುನಃ ಕರ್ಮಕ್ಕೆ ಜ್ಞಾನಾಕಾರತ್ವವೇ ಶೋಧಿಸಲ್ಪಡುವುದು. ಫಲದಲ್ಲಿ ಅಪೇಕ್ಷಾರಹಿತನಾಗಿ ಚಿತ್ತವನ್ನು (ಮನಸ್ಸನ್ನು) ಸ್ವಾಧೀನಪಡಿ ಸಿಕೊಂಡು (ವಿಷಯಾಂತರ ಚಿಂತಾರಹಿತನಾಗಿ) ಆತ್ಮನೊಬ್ಬನನ್ನೇ ನಂಬಿ, ಪ್ರಕೃತಿಯಲ್ಲಿಯೂ ಅದನ್ನು ಸೇರಿರುವ ಸಮಸ್ತವಸ್ತುಗಳಲ್ಲಿಯೂ ಮಮತಾರಹಿತನಾಗಿ ಜೀವಿಸಿರುವ ಪರ್ಯಂತವೂ ಶರೀರ ಧಾರಣಾದ್ಯರ್ಥ ವಾಗಿಯೇ ಕರ್ಮಗಳನ್ನು ಮಾಡುತಲಿರುವಂತವನು ಸಂಸಾರವನ್ನು ಹೊಂ ದಲಾರನು. ಜ್ಞಾನನಿಷ್ಠೆಯಲ್ಲಿ ಪ್ರವರ್ತಿಸದೆ ಇಂಥಾಜ್ಞಾನಗರ್ಭವಾದಕರ್ಮ ದಿಂದಲೇ ಆತ್ಮ ಸಾಕ್ಷಾತ್ಕಾರವನ್ನು ಹೊಂದುತ್ತಾನೆಂದರ್ಥವು. ||೨೧||

ಮೂ || ಯದೃಚ್ಛಾಲಾಭಸಂತುಷ್ಟೋ ದ್ವಂದ್ವಾತೀ
ತೋವಿಮತ್ಸರಃ । ಸಮಸ್ಸಿದ್ಧಾವಸಿದ್ಧೌಚಕೃತ್ವಾಪಿನನಿ
ಬಧ್ಯತೇ || ... ... ||೨೨||

ಪ || ಯದೃಚ್ಛಾಲಾಭಸಂತುಷ್ಟಃ- ದ್ವಂದ್ವಾತೀತಃ- ವಿಮತ್ಸರಃ | ಸಮಃ-ಸಿದ್ಧೌ- ಅಸಿದ್ಧೌ- ಚ-ಕೃತ್ವಾ- ಅಪಿ-ನ-ನಿಬಧ್ಯತೆ || ... ||೨೨||

ಅ|| ಯದೃಚ್ಛಾಲಾಭಸಂತುಷ್ಟಃ- ಅಯಾಚಿತನಾಗಿಬಂದ ಆಹಾರ ಪದಾರ್ಥಗಳಿಂದ ತೃಪ್ತಿಹೊಂದುವಂತವನಾಗಿಯೂ, (ರಾ) ಅಪೇಕ್ಷಿಸದೇ ಶರೀರ ಸಂರಕ್ಷಣಕ್ಕಾಗಿ ಪ್ರಾಪ್ತ ವಾದದ್ದಲ್ಲಿಯೇ ತೃಪ್ತಿಹೊಂದುವಂತವನಾಗಿಯೂ, ದ್ವಂದ್ವಾತೀತಃ-ಶೀತೋಷ್ಣ ಸುಖ ದುಃಖಗಳನ್ನತಿಕ್ರಮಿಸಿದವನಾಗಿಯೂ, ವಿಮತ್ಸರಃ- ಮಾತ್ಸರ್ಯವಿಲ್ಲದವನಾಗಿಯೂ, ಸಿದ್ಧೌ ಅಸಿದ್ಧೌಚ - ಆಹಾರಾದಿಗಳ ಯದೃಚ್ಛಾಪ್ರಾಪ್ತಿಯಲ್ಲಿಯೂ, ಅಪ್ರಾಪ್ತಿಯಲ್ಲಿಯೂ, (ರಾ) ಕರ್ಮವು ಸಿದ್ಧಿಸಿದರೂ ಸಿದ್ಧಿಸದೇಯಿದ್ದರೂ, ಸಮಃ- ಸಂತೋಷ ದುಃಖಗಳಿಲ್ಲದೇ

ಸಮಚಿತ್ತನಾಗಿರುವಂತವನಾಗಿಯೂ ಇರುವವನು; ಕೃತ್ವಾಪಿ- ಕರ್ಮಗಳಂ ಮಾಡಿದರೂ, (ರಾ) ಜ್ಞಾನನಿಷ್ಠೆ ಇಲ್ಲದಂತೆ ಕರ್ಮಗಳನ್ನು ಮಾಡಿದರೂ, ನನಿಬಧ್ಯತೆ-ಕರ್ಮಬಂಧ ವನ್ನು ಹೊಂದುವುದಿಲ್ಲವು. ... ... ... ||೨೨||

(ಶಂ|| ಭಾ||) ಸಮಸ್ತ ಪರಿಗ್ರಹವನ್ನು ಬಿಟ್ಟಿರುವ ಯತಿಯಾದವನಿಗೆ ಶರೀರ ಧಾರಣಾರ್ಥವಾದ ಸಮಸ್ತ ಪರಿಗ್ರಹವೂ ಬಿಡಲ್ಪಡಬೇಕಾಗಿರುವುದರಿಂದ ಸನ್ಯಾಸಿಯ ಶರೀರಧಾರಣಾಪ್ರಕಾರವು ಹೇಳಲ್ಪಡುವಾಗ "ಅಯಾಚಿತಮಸಂಕ್ಲ್ಪ್ತಮುಪಪನ್ನಂ ಯದೃಚ್ಛಯಾ" ಅಯಾಚಿತವಾಗಿಯೂ, ಈ ದಿವಸದಲ್ಲಿವರ ಮನೆಯಲ್ಲಿ ಭಿಕ್ಷೆಯು ನಡಿಯುವುದೆಂಬ ಸಂಕಲ್ಪ ರಹಿತವಾಗಿಯೂ, ಯದೃಚ್ಛೆಯಿಂದ ಪ್ರಾಪ್ತವಾದವಾಗಿಯೂ, ಇರುವ ಭಿಕ್ಷಾನ್ನದಿಂದ ಸನ್ಯಾಸಿಯು ಜೀವಿಸಬೇಕೆಂದು ಹೇಳುವ ಪ್ರಮಾಣಗಳಿಂದ ಅನುಜ್ಞಾತವಾದ ಸನ್ಯಾಸಿಯು ಶರೀರ ಧಾರಣಾಮಾತ್ರ ನಿಮಿತ್ತವಾಗಿರುವ ಅನ್ನಾದಿ ಪ್ರಾಪ್ತಿ ಪ್ರಕಾರವನ್ನು ಹೇಳುತ್ತಾನೆ. ಎಲೈ ಅರ್ಜುನನೇ ! ಅಯಾಚಿತವಾಗಿ ಪ್ರಾಪ್ತವಾದ ಅನ್ನಾದಿಗಳಿಂದ ತೃಪ್ತಿಯನ್ನು ಹೊಂದಿದವನಾಗಿಯೂ, ಶೀತೋಷ್ಣಾದಿದ್ವಂದ್ವಗಳು ಬಾಧಿಸುತಲಿದ್ದರೂ ದುಃಖವನ್ನು ಹೊಂದದೇ ಇರುವಂತವನಾಗಿಯೂ, ವೈರಬುದ್ಧಿ ರಹಿತನಾಗಿಯೂ, ಭಿಕ್ಷಾನ್ನವು ಪ್ರಾಪ್ತವಾದರೆ ಸಂತೋಷವೂ, ಪ್ರಾಪ್ತವಾಗದೆ ಹೋದರೇ ದುಃಖವೂ, ಇವುಗಳಿಲ್ಲದೆ ಸಮಚಿತ್ತನಾಗಿಯೂ, ಕರ್ಮಾಕರ್ಮ ವಿವೇಕವುಂಟಾಗಿರುವ ಬ್ರಹ್ಮ ನಿಷ್ಠಾಪರನು ಶರೀರ ಧಾರಣಮಾತ್ರ ಪ್ರಯೋಜನವಾದ ಭಿಕ್ಷಾಟನವಂ ಮಾಡಿದರೂ ಲೋಕ ವ್ಯವಹಾರಕ್ಕಾಗಿ ಭಿಕ್ಷಾಟನವೆಂಬ ಕರ್ಮಕ್ಕೆ ಕರ್ತಾ ಆಗಿ ಕಾಣುತಾನ್ನಲ್ಲದೇ ಶಾಸ್ತ್ರಪ್ರಮಾಣದಿಂದಲೂ, ಸದ್ಗುರೂಪ ದೇಶದಿಂದಲೂ, ಉಂಟಾಗಿರುವ ಸ್ವಾನುಭವದಿಂದ ಅಂಥಾ ಭಿಕ್ಷಾಟನಾದಿ ಕರ್ಮಗಳಲ್ಲಿಯೂ ತನಗೆ ಕರ್ತೃತ್ವವಿಲ್ಲವೆಂಬುವುದನ್ನೂ "ಗುಣಾಗುಣೇಷುವರ್ತಂತೆ" (೩|| ೧೮||) ಎಂಬ ಅನುಸಂಧಾನದಿಂದ ತಿಳಿದಿರುವಂತವನಾದುದರಿಂದ ಪರಮಾರ್ಥವಾಗಿ ಕರ್ಮಗಳನ್ನಾಚರಿಸಿದವನಲ್ಲವು. (ಆದುದರಿಂದ) ಬಂಧ ಹೇತುವಾದ ಕರ್ಮವು ಜ್ಞಾನಾಗ್ನಿಯಿಂದ ದಹಿಸಲ್ಪಟ್ಟಿರುವುದರಿಂದ ಅವನ ಕರ್ಮವು ಅಕರ್ಮವೇ ಆಗುವುದು. ... ... ||೨೨||

(ರಾ|| ಭಾ||) ಪುರುಷನು ತನ್ನ ಶರೀರವನ್ನು ಧರಿಸಲುಪಯೋಗವಾಗಿರುವಂತೆ ಯಾವದಾದರೊಂದುವಸ್ತುವು ತಾನಾಗಿಯೇ ಪ್ರಾಪ್ತವಾದರೇ ಅವುಗಳನ್ನು ಹೊಂದಿ ತೃಪ್ತಿ ಹೊಂದುವಂತವನಾಗಿಯೂ, ಸಾಧನ ಪೂರ್ತಿಯಾಗುವವರೆಗೂ ಪ್ರಾಪ್ತವಾಗಿರುವ ಶೀತೋಷ್ಣಾದಿಗಳನ್ನು ಸಹಿಸುವಂತವನಾಗಿಯೂ, ಆರೀತಿಯಾಗಿ ಪ್ರಾಪ್ತವಾಗುವ ಅನಿಷ್ಟಗಳಿಗೆಲ್ಲಾ ತನ್ನ ಪ್ರಾಚೀನವಾದ ಪಾಪಕರ್ಮವೇ ಕಾರಣವೆಂದು ತಿಳಿದು ಅದರಿಂದ ಅನ್ಯರಲ್ಲಿ ಮಾತ್ಸರ್ಯವನ್ನುಹೊಂದದೆ, ಯುದ್ಧವೇ ಮೊದಲಾದ ಕರ್ಮಗಳ ಜಯಾಪಜಯರೂಪವಾದ ಸಿದ್ಧ್ಯಸಿದ್ಧಿಗಳಲ್ಲಿ ಹರ್ಷಶೋಕಗಳನ್ನುಬಿಟ್ಟು ಸಮಚಿತ್ತನಾಗಿಯೂ ಇರುವಂತವನು ಜ್ಞಾನನಿಷ್ಠೆಯನ್ನು ಹೊಂದದೆ ಕರ್ಮವನ್ನೇ ಮಾಡಿದರೂ ಸಂಸಾರವನ್ನು ಹೊಂದುವುದಿಲ್ಲವು. ... ... ||೨೨||

ಮೂ || ಗತಸಂಗಸ್ಯ ಮುಕ್ತಸ್ಯ ಜ್ಞಾನಾವಸ್ಥಿತ ಚೇ
ತಸಃ | ಯಜ್ಞಾಯಾಚರತಃಕರ್ಮ ಸಮಗ್ರಂ ಪ್ರವಿ
ಲೀಯತೇ || ... ... |೨೩|

ಪ|| ಗತಸಂಗಸ್ಯ- ಮುಕ್ತಸ್ಯ- ಜ್ಞಾನಾವಸ್ಥಿತಚೇತಸಃ | ಯಜ್ಞಾಯ-ಆಚರತಃ- ಕರ್ಮ- ಸಮಗ್ರಂ- ಪ್ರವಿಲೀಯತೆ|| ... ... ||೨೩||

ಅ|| ಗತಸಂಗಸ್ಯ- ಅಭಿಮಾನಗಳನ್ನು ಬಿಟ್ಟಿರುವಂತವನಾಗಿಯೂ, (ಮ|| ಗೀ|| ವಿ) ಫಲಾಪೇಕ್ಷೆಯಂ ಬಿಟ್ಟಿರುವವನಾಗಿಯೂ, ಮುಕ್ತಸ್ಯ- ಕಾಮಕ್ರೋಧಗಳಂ ಬಿಟ್ಟವನಾಗಿಯೂ, (ಮ|| ಗೀ|| ವಿ) ಶರೀರಾದಿಗಳಲ್ಲಿ ಅಭಿಮಾನವನ್ನು ಬಿಟ್ಟವನಾಗಿಯೂ, ಜ್ಞಾನಾವಸ್ಥಿತಚೇತಸಃ-ಬ್ರಹ್ಮಜ್ಞಾನದಲ್ಲಿ ನಿಂತಿರುವ ಮನಸ್ಸುಳ್ಳವನಾಗಿಯೂ, ಯಜ್ಞಾಯಾಚರತಃ-ಭಗವತ್ಪ್ರೀತ್ಯರ್ಥವಾಗಿ ಆ ಪರಮಾತ್ಮಾರಾಧನ ರೂಪದಿಂದ ಕರ್ಮವನ್ನು ಮಾಡುವಂತವನಾಗಿಯೂ ಇರುವ, (ಶಂ|| ಶ್ರೀ) ಜನಗಳ ಪ್ರಯೋಜನವನ್ನುದ್ದೇಶಿಸಿ ಜ್ಞಾನಿಗಳು ಮಾಡುವ ಯಾಗಗಳೆಂದು ಮತ್ತೊಂದರ್ಥವು.) (ಅಸ್ಯ-ಈ ಬ್ರಹ್ಮಜ್ಞಾನವುಳ್ಳವನ) ಕರ್ಮ- ಕರ್ಮವು, ಸಮಗ್ರಂ- ಪ್ರಾಚೀನಕರ್ಮ ಫಲಗಳೊಡನೆಕೂಡಿ, (ರಾ) ಸಮಗ್ರಂಕರ್ಮ- ಪ್ರಾಚೀನಕರ್ಮವೆಲ್ಲವು, ಪ್ರವಿಲೀಯತೆ- ನಶಿಸಿಹೋಗುವುದು. ... ||೨೩||

(ಶಂ|| ಭಾ||) "ತ್ಯಕ್ತ್ವಾಕರ್ಮಫಲಾಸಂಗಂ,, (೪||೨೦||)ಎಂಬುವ ಶ್ಲೋಕದಿಂದ, ಯಾವನು ಪ್ರಾರಬ್ಧ ಕರ್ಮಮಾತ್ರದಿಂದ ನಿಂತಿರುವಂತವನಾಗಿಯೂ, ನಿಷ್ಕ್ರಿಯ ಬ್ರಹ್ಮಾತ್ಮ ದರ್ಶನವುಳ್ಳವನಾಗಿಯೂ,

ಆಗುವುನೋ, ಕರ್ತೃ ಕರ್ಮ ಪ್ರಯೋಜನಗಳಿಲ್ಲವೆಂದು ತಿಳಿದಿರುವ ಅಂತವನು ಕರ್ಮಾಚರಣವನ್ನು ತ್ಯಜಿಸಬೇಕೆಂ ದೇರ್ಪಟ್ಟರೂ ಕಾರಣಾಂತರದಿಂದ ಆರೀತಿಯಾಗಿ ಕರ್ಮಸನ್ಯಾಸವಂ ಮಾಡದೇ ಪೂರ್ವದಂತೆ ಕರ್ಮದಲ್ಲಿ ಪ್ರವರ್ತಿಸಿರುವಂತವನಾದರೂ ಅಂಥಾವನಿಗೆ ಆಕರ್ಮದಿಂದಲಾದರೂ ಆಕರ್ಮಫಲದಿಂದಲಾದರೂ ಸಂಗವಿಲ್ಲವೆಂಬದಾಗಿ "ನೈವ ಕಿಂಚಿತ್ಕರೋತಿಸಃ,, (೪॥ ೨೦॥) ಎಂಬುವ ವಾಕ್ಯದಿಂದ ದರ್ಶಿತವಾಯಿತು. ಆ ಪ್ರಕಾರವಾಗಿ ಕರ್ಮಸಂಗವೂ ಅಭಿಮಾನವೂ ಇಲ್ಲದವನಾಗಿಯೂ, ಕಾಮಕ್ರೋಧಗಳಿಂದುಂಟಾಗುವ ಅಪೇಕ್ಷೆಯೂ ಇಲ್ಲದವನಾಗಿಯೂ, ಧರ್ಮಾಧರ್ಮಾದಿ ಬಂಧಗಳಿಲ್ಲದವನಾಗಿಯೂ, ಕೇವಲ ಬ್ರಹ್ಮಭಾವನೆಯಲ್ಲಿ ಸ್ಥಿರವಾದ ಬುದ್ಧಿಯುಳ್ಳವನಾಗಿಯೂ, ಭಗವತ್ಪ್ರೀತಿಯನ್ನುದ್ದೇಶಿಸಿ ಕರ್ಮಗಳನ್ನಾಚರಿಸುವಂತವನಾಗಿಯೂ ಇರುವ ಬ್ರಹ್ಮಜ್ಞಾನಿಯ ಕರ್ಮಗಳು ಅವುಗಳ ಫಲಗಳೊಡನೆ ನಾಶಹೊಂದುವುದು. ... ... ... ॥೨೩॥

(ರಾ॥ ಭಾ॥) ಆತ್ಮಜ್ಞಾನದಲ್ಲಿ ಮನಸ್ಸನ್ನು ಸ್ಥಿರಪಡಿಸಿ ಅದರಿಂದ ಇತರ ಸಂಬಂಧಗಳನ್ನು ಬಿಟ್ಟವನಾದುದರಿಂದಲೇ ಪ್ರಕೃತಿ ಪ್ರಾಕೃತಗಳಿಂದ ಬಿಡಲ್ಪಟ್ಟವನಾಗಿ ಪೂರ್ವೋಕ್ತ ಯಜ್ಞಾದಿ ಕರ್ಮಗಳನ್ನಾಚರಿಸುವುದಕ್ಕಾಗಿಯೇ ಇರುತಲಿರುವ ಪುರುಷನಿಗೆ ಬಂಧ ಕಾರಣಗಳಾದ ಪ್ರಾಚೀನಕರ್ಮಗಳು ನಿಶ್ಶೇಷವಾಗಿ ನಶಿಸಿಹೋಗುವುದು. ॥೨೪॥

ಮೂ ॥ ಬ್ರಹ್ಮಾರ್ಪಣಂ ಬ್ರಹ್ಮಹವಿರ್ಬ್ರಹ್ಮಾಗ್ನೌ
ಬ್ರಹ್ಮಣಾಹುತಂ । ಬ್ರಹ್ಮೈವತೇನಗಂತವ್ಯಂ ಬ್ರಹ್ಮ
ಕರ್ಮಸಮಾಧಿನಾ ॥ ... ॥೨೪॥

ಪ॥ ಬ್ರಹ್ಮಾರ್ಪಣಂ- ಬ್ರಹ್ಮ ಹವಿಃ- ಬ್ರಹ್ಮಾಗ್ನೌ- ಬ್ರಹ್ಮಣಾ- ಹುತಂ । ಬ್ರಹ್ಮ- ಏವ- ತೇನ- ಗಂತವ್ಯಂ- ಬ್ರಹ್ಮಕರ್ಮಸಮಾಧಿನಾ ॥ ... ॥೨೪॥

ಅ ॥ ಬ್ರಹ್ಮಾರ್ಪಣಂ - ಬ್ರಹ್ಮಸ್ವರೂಪವಾಗಿರುವ ಸ್ರುಕ್ ಮೊದಲಾದವುಗಳುಳ್ಳ, ಬ್ರಹ್ಮಹವಿಃ- ಬ್ರಹ್ಮಸ್ವರೂಪವಾದ ಹವಿಸ್ಸು, ಬ್ರಹ್ಮಣಾ - ಬ್ರಹ್ಮಸ್ವರೂಪನಾದ ಮಾಡತಕ್ಕವನಿಂದ (ಕರ್ತೃವಿನಿಂದ,) ಬ್ರಹ್ಮಾಗ್ನೌ- ಬ್ರಹ್ಮಸ್ವರೂಪವಾದ ಅಗ್ನಿಯಲ್ಲಿ, ಹುತಂ- ಹೋಮವು ಮಾಡಲ್ಪಟ್ಟಿತು. ಬ್ರಹ್ಮಕರ್ಮಸಮಾಧಿನಾ - ಬ್ರಹ್ಮಸ್ವರೂಪವಾಗಿರು

ವ್ರದು ಕರ್ಮವೆಂಬ ತಿಳುವಳಿಕೆಯುಳ್ಳ, ತೇನ - ಅವನಿಂದ, ಬ್ರಹ್ಮೈವ - ಬ್ರಹ್ಮಸ್ವರೂಪ ನಾದ ಆತ್ಮನೇ, ಗಂತವ್ಯಂ- ಹೊಂದತಕ್ಕದ್ದಾಗಿರುವುದು. ... ||೨೪||

(ಶಂ|| ಭಾ||) ಬ್ರಹ್ಮಸ್ವರೂಪನಾದ ಬ್ರಹ್ಮಜ್ಞಾನಿಯ ಕರ್ಮವು ಫಲದೊಡನೆ ನಾಶಹೊಂದುವುದಕ್ಕೆ ಕಾರಣವೇನೆಂದರೆ ; ಕ್ರಿಯಾಕಾರಕ ಫಲರೂಪವಾದ ಸಮಸ್ತ ದ್ವೈತವು ಬ್ರಹ್ಮಮಾತ್ರವಾಗಿರುವುದರಿಂದ ಮಿಥ್ಯಾಭೂತವಾಗಿರುವುದು. ಆದುದರಿಂದಲೇ ಬ್ರಹ್ಮರೂಪನಾದ ಬ್ರಹ್ಮಜ್ಞಾನಿಯ ಕರ್ಮವು ಫಲಗಳೊಡನೆ ನಾಶಹೊಂದುವುದೆಂತಲೂ, ಬ್ರಹ್ಮಜ್ಞಾನಿಯ ಕ್ರಿಯಾಕಾರಕ ಫಲಾದಿಗಳೆಲ್ಲವೂ ಬ್ರಹ್ಮವೇ ಎಂಬದಾಗಿಯೂ ತಿಳಿಸಲೀ ಶ್ಲೋಕವನ್ನರ್ಜುನನಿಗುಪದೇಶಿಸುತ್ತಾನೆ. ಬ್ರಹ್ಮವೇದಿಯಾದವನು, ಮುತ್ತಿನ ಚಿಪ್ಪಿಯಲ್ಲಿ ರಜತಾಭಾವದಂತೆ ಬ್ರಹ್ಮಕ್ಕಿಂತಲೂ ಬೇರೆ ಯಾವದೂ ಇಲ್ಲವಾದುದರಿಂದ ಹವಿಸ್ಸನ್ನು ಅಗ್ನಿಯಲ್ಲಿ ಹೋಮಮಾಡುವುದಕ್ಕೆ ಸಾಧನಗಳಾದ ಸ್ರುಕ್ ಸ್ರುವಾದಿಗಳು ಬ್ರಹ್ಮವೇ ಎಂಬದಾಗಿ ತಿಳಿದುಕೊಳ್ಳುವನು. ಮತ್ತು ಈ ಪ್ರಕಾರವೇ ಹವಿಸ್ಸನ್ನು ಅಗ್ನಿಯನ್ನು ಹೋಮಕ್ರಿಯೆಯನ್ನು ಕೂಡ ಬ್ರಹ್ಮರೂಪವಾಗಿಯೇ ತಿಳಿದುಕೊಳ್ಳುತ್ತಾನೆ. ಮತ್ತು ಯಜ್ಞವನ್ನು ಮಾಡತಕ್ಕವನೂ ಯಜ್ಞವನ್ನು ಮಾಡತಕ್ಕವನಿಂದ ಹೊಂದಲ್ಪಡುವ ಫಲವೂ ಬ್ರಹ್ಮರೂಪವಾಗಿರುವುದೆಂತಲೇ ತಿಳಿಯುತ್ತಾನೆ, ಆದುದರಿಂದ ಪೂರ್ವೋಕ್ತ ಪ್ರಕಾರವಾಗಿ ಬ್ರಹ್ಮಸ್ವರೂಪವಾದ ಯಾಗಕರ್ಮದಲ್ಲಿ ಸ್ಥಿರಚಿತ್ತನಾದವನು ಬ್ರಹ್ಮಸ್ವರೂಪವನ್ನು ಹೊಂದುವನು. ಈ ರೀತಿಯಿಂದ ಲೋಕಸಂಗ್ರಹಾರ್ಥವಾಗಿ ಬ್ರಹ್ಮಜ್ಞಾನಿಯಿಂದಾಚರಿಸಲ್ಪಡುವ ಯಜ್ಞಕರ್ಮವು "ಸರ್ವಂಬ್ರಹ್ಮ" ಎಂಬುವ ಭಾವನೆಯಿಂದ ಮಾಡಲ್ಪಡುವುದರಿಂದ ಪರಮಾರ್ಥವಾಗಿ ನೋಡಿದರೆ ಇದು ಅಕರ್ಮವೇ ಆಗುವುದು. ಮತ್ತು ಬಾಹ್ಯಯಜ್ಞಾನುಷ್ಠಾನ ಶಕ್ತನಾದ ಅಸಮರ್ಥನಿಗೆ ಸಂಕಲ್ಪಾತ್ಮಕವಾದ ಯಜ್ಞಾನುಷ್ಠಾನವು ವಿಹಿತವಾಗಿರುವಂತೆ ಕರ್ಮಗಳಂ ಬಿಟ್ಟಿರುವ ಸನ್ಯಾಸಿಗೆ ಸರ್ವಂಬ್ರಹ್ಮ ಎಂಬುವ ನಿಶ್ಚಯವು ದೃಢವಾಗಿರುವುದರಿಂದ ಇದು ಜ್ಞಾನಯಜ್ಞವೆಂತಲೂ, ಜ್ಞಾನವನ್ನು ಯಜ್ಞವೆಂದು ಹೇಳುವುದು ಬ್ರಹ್ಮಜ್ಞಾನವನ್ನು ಸ್ತುತಿಸುವುದಕ್ಕೆಂತಲೂ ತಿಳಿದು—ಈ ಪ್ರಕರಣವು ಸನ್ಯಾಸಿಯನ್ನು ಕುರಿತು ಹೇ

ಳುವ ಪ್ರಕರಣವಾಗಿರುವುದರಿಂದೀಮಂತ್ರವು ಸರ್ವಕರ್ಮಗಳನ್ನು ಬಿಟ್ಟಿ ರುವ ಸನ್ನ್ಯಾಸಿ ವಿಷಯದಲ್ಲಿ ಪ್ರವರ್ತಿಸಿರುವುದೆಂದು ತಿಳಿಯಾ ಬೇಕು. ಲೋಕಸಂಗ್ರಹ ಬುದ್ಧಿಯಿಂದ ಯಜ್ಞವನ್ನು ಮಾಡುವಂತ ವನಿಗೆ ಅಧಿಯಜ್ಞದಲ್ಲಿ ಸ್ರುಕ್ಸ್ರುವಾದಿಗಳ್ಯಾವವೋ ಅವೆಲ್ಲವೂ ಬ್ರ ಹ್ಮವೇದಿಯಾದವನಿಗೆ ಆತ್ಮಯಜ್ಞದಲ್ಲಿ ಬ್ರಹ್ಮಸ್ವರೂಪವಾಗಿಯೇ ಆಗುವುದು. ಈ ಪ್ರಕಾರವಾಗದೇ ಹೋದರೆ ಸರ್ವವೂ ಬ್ರಹ್ಮವೇ ಆಗಿರುತಾ ಸ್ರುಕ್ಸ್ರುವಗಳು, ಹವಿಸ್ಸು, ಅಗ್ನಿಯು, ಯಜಮಾನನು, ಹೋಮಕರ್ಮವು, ಎಂಬುವುದು ಮಾತ್ರವು ಬ್ರಹ್ಮಸ್ವರೂಪಗಳೆಂದು ಹೇಳುವಿಕೆಯು ವ್ಯರ್ಥವಾಗುವುದು. ಆದುದರಿಂದ ಬ್ರಹ್ಮಸ್ವರೂಪವಂ ತಿಳಿದವನಿಗೆ ಕ್ರಿಯಾಕಾರಕಾದಿ ಬುದ್ಧಿಯಿಲ್ಲವಾದುದರಿಂದಲೂ, ಆತ್ಮ ಭಿನ್ನವಾದ ಪದಾರ್ಥವ್ಯಾವದೂ ಇಲ್ಲವಾದುದರಿಂದಲೂ, ಸರ್ವ ಕರ್ಮಾ ಭಾವವನ್ನು ತಿಳಿಯಬೇಕು.

ಆದರೆ ಅಗ್ನಿಹೋತ್ರಾದಿ ಕರ್ಮಗಳೆಲ್ಲವೂ, ಕರ್ಮವು, ದೇವತಾ, ಕರ ಣವು, ಕರ್ತಾ, ಫಲವು, ಎಂಬಿವುಗಳಿಂದ ಕೂಡಿಕೊಂಡಿರುವುದಲ್ಲದೇ ಇವುಗಳಿಲ್ಲದೆ ಯಾವ ಕರ್ಮವು ಲೋಕದಲ್ಲಿ ಕಾಣಲ್ಪಡುವದಿಲ್ಲವು; ಹೀಗಿ ರುವ ಸಂದರ್ಭದಲ್ಲಿ ಜ್ಞಾನ ಯಜ್ಞಮಾತ್ರವು ಕ್ರಿಯಾಕಾರಕಾದಿ ಬುದ್ಧಿರಹಿತವಾಗಿ ಹೇಗಾಗುವುದೆಂದು ಚೋದ್ಯವಂ ಮಾಡದೆ ಕ್ರಿಯಾ ಕಾರಕಾದಿ ಬುದ್ಧಿಯು, ಸರ್ವವು ಬ್ರಹ್ಮವೆಂಬೀ ಬುದ್ಧಿಯಿಂದ ನಿರಾಕ ರಿಸಲ್ಪಟ್ಟಿರುವುದರಿಂದ ಜ್ಞಾನಯಜ್ಞವು ಕ್ರಿಯಾಕಾರಕಾದಿ ಬುದ್ಧಿರಹಿ ತವಾಗಿಯೇ ಆಗುವುದು. ಆದುದರಿಂದಲೇ ಜ್ಞಾನಿಯಾದವನ ಜ್ಞಾನಯ ಜ್ಞವು ಅಕರ್ಮವಾಗುವುದೆಂತಲೂ ತಿಳಿಯಬೇಕು. ಮತ್ತು “ ಕರ್ಮ ಣ್ಯಕರ್ಮಯಃಪಶ್ಯೇತ್ ” (೪॥ ೧೮॥) ಕರ್ಮಣ್ಯಭಿಪ್ರವೃತ್ತೋಪಿ ನೈವ ಕಿಂಚಿತ್ಕರೋತಿಸಃ। (೪॥೨೦॥) ಗುಣಾಗುಣೇಷುವರ್ತಂತೇ (೩॥೨೮) ನೈವಕಿಂಚಿತ್ಕರೋಮೀತಿ ಯುಕ್ತೋಮನ್ಯೇತ ತತ್ವವಿತ್। (೫॥೮॥) ಇದೇ ಮೊದಲಾದ ಶ್ಲೋಕಗಳಿಂದ ಬ್ರಹ್ಮವನ್ನರಿತವನ ಕರ್ಮವು ಅಕ ರ್ಮವಾಗುವುದೆಂದು ದರ್ಶಿತವಾಯಿತು. ಇದೇರೀತಿಯಾಗಿಯೇ ಅನೇಕಪ್ರ ಕರಣಗಳಲ್ಲಿ ಈ ಗೀತಾಶಾಸ್ತ್ರದಲ್ಲಿಯೇ ಬ್ರಹ್ಮವೇದಿಯಾದವನಿಗೆ ದೇವ ತೆಗಳನ್ನುದ್ದೇಶಿಸಿ ಹವಿಸ್ಸಮರ್ಪಣವು ಮಾಡಲ್ಪಡುವುದೆಂತಲೂ, ಈ

ಫಲವನ್ನುದ್ದೇಶಿಸಿ ಈ ಯಜ್ಞವು ಆಚರಿಸಲ್ಪಡುವುದೆಂತಲೂ ನಾನು ಇದನ್ನು ಮಾಡುತ್ತೇನೆಂತಲೂ ಪ್ರಾಪ್ತವಾಗುವ ಕ್ರಿಯಾಕಾರಕ ಫಲ ಭೇದ ಬುದ್ಧಿ ಇಲ್ಲವೆಂತಲೂ ಹೇಳಿರುತ್ತಾನೆ. ಕಾಮ್ಯಾಗ್ನಿ ಹೋತ್ರ ವಂ ಮಾಡುವಂತವನಿಗೆ ಒಂದು ಕಾರಣ ವಿಶೇಷದಿಂದ ಕಾಮನಾನಾಶ ವುಂಟಾದರೆ ಆ ಅಗ್ನಿಯು ಕಾಮ್ಯಾಗ್ನಿಯಾಗದೇ ಹೋಗುವಂತೆ ಇಲ್ಲಿ ಯೂ ಬ್ರಹ್ಮವೇದಿಯಾದವನು ಕರ್ಮವಂಮಾಡುತಾ ಇದ್ದರೂ ಕ್ರಿಯಾ ಕಾರಕ ಫಲಭೇದ ಬುದ್ಧಿರಹಿತನಾದುದರಿಂಧ ಅಂತವನ ಕರ್ಮವು ಅಕ ರ್ಮವಾಗುವುದೆಂದು ತಿಳಿಯಬೇಕು. ಮತ್ತು ಬುದ್ಧಿಪೂರ್ವಕವಾಗಿಯೂ ಅಬುದ್ಧಿಪೂರ್ವಕವಾಗಿಯೂ ಇರುವ ಕರ್ಮಗಳೆಲ್ಲವೂ ಕ್ರಿಯಾಕಾರಕ ಫಲಭೇದ ಬುದ್ಧಿಯೊಡನೆ ಅನುಷ್ಠಿಸಲ್ಪಟ್ಟಪಕ್ಷದಲ್ಲಿ ಹೇಗಾದರೇ ಫಲ ವನ್ನುಂಟುಮಾಡಲಾರವೋ ಆ ಪ್ರಕಾರವೇ ಬ್ರಹ್ಮವೇದಿಯಾದವನ ಬಾಹ್ಯಚೇಷ್ಟೆಗಳು ಕರ್ಮದಂತೇ ಕಾಣಲ್ಪಟ್ಟರೂ ಕರ್ಮವಲ್ಲವೆಂಬ ದಾಗಿ ತಿಳಿಯಬೇಕು. ಆದ್ದರಿಂದಲೇ "ಸಮಗ್ರಂಪ್ರವಿಲೀಯತೆ" (೪|| ೨೩||) ಎಂಬದಾಗಿ ಹಿಂದೆ ಹೇಳಿರುತ್ತಾನೆ.

ಇಲ್ಲಿ ಕೆಲವರು ಬೇರೇ ಪ್ರಕಾರವಾಗಿ "ಯಾವದು ಬ್ರಹ್ಮವೋ ಅದೇ ಸ್ರುಕ್ಸ್ರುವಾದಿಗಳು, ಪ್ರಸಿದ್ಧವಾಗಿರುವುದನ್ನುದ್ದೇಶಿಸಿ ಅಪ್ರಸಿದ್ಧವಾ ದದ್ದನ್ನು ವಿಧಿಸುವುದು ನ್ಯಾಯವಾಗಿರುತಾ ಅಪ್ರಸಿದ್ಧವಾದ ಬ್ರ ಹ್ಮೋದ್ದೇಶದಿಂದ ಪ್ರಸಿದ್ಧವಾದ ಸ್ರುಕ್ಸ್ರುವಾದಿಗಳನ್ನು ವಿಧಿಸು ವುದು ಯುಕ್ತವೇ ? ಎಂಬದಾಗಿ ಚಿಂತಿಸದೇ ಬ್ರಹ್ಮವೇ; ಕರ್ಮವು, ಅಗ್ನಿ, ಹವಿಸ್ಸು, ಯಜಮಾನ, ಕರಣ, ಎಂಬೀ ಅರ್ಪಣಾದಿಯಾದ ಪಂಚವಿಧಗಳಾಗಿರುವ ಕರ್ಮಗಳನ್ನು ಮಾಡಿಸುತದೆ. ಪ್ರತಿಮಾದಿಗಳಲ್ಲಿ ವಿಷ್ಣುಬುದ್ಧಿಯೂ, ನಾಮಾದಿಗಳಲ್ಲಿ ಬ್ರಹ್ಮಬುದ್ಧಿಯೂ ಉಂಟಾಗು ವಂತೆ ಸ್ರುಕ್ಸ್ರುವಾದಿಗಳಲ್ಲಿ ಬ್ರಹ್ಮಬುದ್ಧಿಯುಂಟಾಗುವುದಲ್ಲದೇ ಬ್ರ ಹ್ಮದಲ್ಲಿ ಸ್ರುಕ್ಸ್ರುವಾದಿ ಬುದ್ಧಿಯುಂಟಾಗಲಾರದೆಂದು" ವ್ಯಾಖ್ಯಾನ ಮಾಡುತ್ತಾರೆ. ಜ್ಞಾನ ಯಜ್ಞವನ್ನು ಸ್ತೋತ್ರಮಾಡುವ ಪ್ರಕರಣ ವಾಗದೇ ಹೋದರೆ ಪ್ರತಿಮಾದಿಗಳಲ್ಲಿ ವಿಷ್ಣುಬುದ್ಧಿಯೂ, ನಾಮಾದಿ ಗಳಲ್ಲಿ ಬ್ರಹ್ಮಬುದ್ಧಿಯೂ ಉಂಟಾಗುವಂತೆ ಸ್ರುಕ್ಸ್ರುವಾದಿಗಳಲ್ಲಿ ಬ್ರ ಹ್ಮಬುದ್ಧಿಯೆಂಬದಾಗಿ ಹೇಳಬಹುದಲ್ಲದೇ ಜ್ಞಾನಯಜ್ಞವನ್ನು ಸ್ತೋ

ತ್ರವಮಾಡುವುದಕ್ಕಾಗಿ ಈ ಶ್ಲೋಕವು ಪ್ರವೃತ್ತವಾಗಿರುವುದರಿಂದ ಆ ರೀತಿಯಾಗಿ ಹೇಳುವುದು ಯುಕ್ತವಲ್ಲವು. ಇದಕ್ಕೆ ಜ್ಞಾಪಕವಾಗಿ ಈ ಪ್ರಕರಣದಲ್ಲಿ ಅನೇಕ ಯಜ್ಞಗಳನ್ನು ಹೇಳಿ "ಶ್ರೇಯಾನ್ದ್ರವ್ಯಮಯಾದ್ಯಜ್ಞಾ ದ್ಜ್ಞಾನಯಜ್ಞಃಪರಂತಪ| " (೪||೩೩||) ಎಂಬ ದಾಗಿ ಜ್ಞಾನಯಜ್ಞವನ್ನು ಸ್ತುತಿಸುತ್ತಾನೆ. ಮತ್ತೂ ಸಮಸ್ತವು ಬ್ರಹ್ಮವಾಗಿದ್ದರೂ ಸ್ರುಕ್ಸ್ರುವಾದಿಗಳು ಮಾತ್ರವೇ ಬ್ರಹ್ಮವೆಂದು ಹೇಳುವುದರಿಂದೀ ಶ್ಲೋಕವು ಜ್ಞಾನಕ್ಕೆ ಯಜ್ಞತ್ವ ಸಂಪಾದನದಲ್ಲಿ ಸಮರ್ಥವಾಗಿರುವುದು. ಮತ್ತು ಜ್ಞಾನವು ಸ್ರುಕ್ಸ್ರುವಾದಿ ವಿಷಯ ವಾಗಿರುವುದರಿಂದ, ಪ್ರತಿಮಾದಿಗಳಲ್ಲಿ ವಿಷ್ಣುಬುದ್ಧಿಯೂ, ನಾಮಾ ದಿಗಳಲ್ಲಿ ಬ್ರಹ್ಮಬುದ್ಧಿಯೂ ವುಂಟಾಗುವಂತೆ ಸ್ರುಕ್ಸ್ರುವಾದಿಗಳಲ್ಲಿ ಬ್ರಹ್ಮಬುದ್ಧಿಯುಂಟಾಗುವುದೆಂದು ಹೇಳಿದರೆ ಈ ಪ್ರಕರಣವು ಬ್ರ ಹ್ಮವಿದ್ಯಾ ಪ್ರತಿಪಾದಕವಲ್ಲದೇ ಹೋಗುವುದು. ಇಷ್ಟುಮಾತ್ರವಲ್ಲದೆ ಇಲ್ಲಿನ "ಬ್ರಹ್ಮೈವತೇನಗಂತವ್ಯಂ" ಎಂಬುವ ವಾಕ್ಯದಿಂದ ಸ್ರು ಕ್ಸ್ರುವಾದಿಗಳು ಬ್ರಹ್ಮಸ್ವರೂಪಗಳೆಂಬ ಅನುಸಂಧಾನದೊಡನೇ ಯ ಜ್ಞವನ್ನು ಮಾಡುವ ಯಜಮಾನನಿಗೆ ಮೋಕ್ಷರೂಪವಾದ ಫಲವು ಹೇಳಿರುವುದರಿಂದಲೂ ಪ್ರತಿಮಾದಿಗಳಲ್ಲಿ ವಿಷ್ಣುಬುದ್ಧಿಯುಂಟಾಗಿರು ವಂತೆ ಸ್ರುಕ್ಸ್ರುವಾದಿಗಳಲ್ಲಿ ಬ್ರಹ್ಮಬುದ್ಧಿಯುಂಟಾಗುವುದೆಂದು ಹೇ ಳುವುದು ಯುಕ್ತವಲ್ಲವು. ಕಿಂಚ "ಆತ್ಮಜ್ಞಾನದಿಂದಲೇ ಮೋಕ್ಷವುಂ ಟಾಗುವುದು" ಎಂಬ ಶ್ರುತಿಪ್ರಮಾಣಾರ್ಥವನ್ನು ಪರ್ಯಾಲೋಚಿಸಿ ದರೆ ಆತ್ಮಜ್ಞಾನದಿಂದಲೇ ಮೋಕ್ಷವುಂಟಾಗುವುದೆಂದು ಹೇಳಿರುವದಾಗಿ ತಿಳಿಯಬರುವುದರಿಂದ ಸ್ರುಕ್ಸ್ರುವಾದಿಗಳಲ್ಲಿ ಬ್ರಹ್ಮಬುದ್ಧಿಯುಂಟಾ ಗುವುದರಿಂದ ಮೋಕ್ಷವುಂಟಾಗಲಾರದೆಂತಲೂ ಹೇಳಲ್ಪಟ್ಟಿತು. ಈ ಪ್ರಕರಣದ ಪ್ರಥಮದಲ್ಲಿ "ಕರ್ಮಣ್ಯಕರ್ಮಯಃಪಶ್ಯೇತ್" (೪||೧೮||) ಎಂಬ ಶ್ಲೋಕದಿಂದ ಆತ್ಮಜ್ಞಾನೋಕ್ತಿಯನ್ನು ಪಕ್ರಮಿಸಿ (೪||೩೩||) ಕೊನೆಯಲ್ಲಿ "ಶ್ರೇಯಾನ್ದ್ರವ್ಯಮಯಾದ್ಯಜ್ಞಾ ದ್ಜ್ಞಾನ ಯಜ್ಞಃ ಪರಂತಪ" ಎಂಬ ಶ್ಲೋಕದಿಂದ ಅದನ್ನುಪಸಂಹಾರಮಾಡುವುದರಿಂ ದಲೂ ವಿಚಾರಿಸಿ ನೋಡಿದರೆ ಕೂಟಸ್ಥಾತ್ಮಜ್ಞಾನವು ಪ್ರಕೃತವಾಗಿರು ವುದರಿಂದ ಸ್ರುಕ್ಸ್ರುವಾದಿಗಳು ಬ್ರಹ್ಮ ಸ್ವರೂಪಗಳಾಗಿರುವುವೆಂದು

ತಿಳಿಯಲೀ ಶ್ಲೋಕವು ಹೇಳಲ್ಪಡಲಿಲ್ಲವು. "ಜ್ಞಾನಂಲಬ್ಧ್ವಾಪರಾಂ ಶಾಂತಿಂ" (೪||೩೯||) ಎಂಬದಾಗಿ ಜ್ಞಾನಬೋಧನದಿಂದಲೆ ಈ ಅಧ್ಯಾಯವು ಪೂರ್ತಿಯಾಗುವುದರಿಂದ ಪ್ರತಿಮಾದಿಗಳಲ್ಲಿ ವಿಷ್ಣುಬುದ್ಧಿಯು ಅಕಸ್ಮಾತ್ತಾಗಿ ಉಂಟಾಗುವಂತೆ ಸ್ರುಕ್ಸ್ರುವಾದಿಗಳಲ್ಲಿ ಬ್ರಹ್ಮಬುದ್ಧಿಯುಂಟಾಗುವುದೆಂದು ಈ ಜ್ಞಾನಪ್ರಕರಣದಲ್ಲಿ ಹೇಳುವುದು ಯುಕ್ತವಲ್ಲವು, ಆದುದರಿಂದ ಮೊದಲು ನಾವು ವಿವರಿಸಿರುವ ಅರ್ಥವೇ ಯುಕ್ತವಾಗಿರುವುದು. ... ... ... ||೨೪||

(ರಾ|| ಭಾ||) ಪ್ರಕೃತಿ ವಿಯುಕ್ತವಾದ ಆತ್ಮಸ್ವರೂಪಾನುಸಂಧಾನವೊಡನೆ ಕೂಡಿರುವುದರಿಂದ ಕರ್ಮಕ್ಕೆ ಜ್ಞಾನಾಕಾರತ್ವವನ್ನು ಹಿಂದೇ ಹೇಳಿ ಈಗ ಸಪರಿಕರವಾದ ಸಮಸ್ತ ಕರ್ಮಕ್ಕೂ ಪರಬ್ರಹ್ಮಭೂತನಾದ ಪರಮ ಪುರುಷಾತ್ಮಕತ್ವಾನುಸಂಧಾನ ಯುಕ್ತವಾಗಿರುವಿಕೆಯಿಂದ ಜ್ಞಾನಾಕಾರತ್ವವನ್ನು ಹೇಳುತ್ತಾನೆ. ಬ್ರಹ್ಮಮಯವಾದ ಸ್ರುಕ್ ಮೊದಲಾದ ಸಾಧನಗಳೊಡನೇ ಕೂಡಿರುವ ಬ್ರಹ್ಮಮಯವಾದ ಹವಿಸ್ಸು (ದೇವತಾರಾಧನಕ್ಕೆಂಬದಾಗಿ ಅಗ್ನಿಯಲ್ಲಿ ಹೋಮಮಾಡಲ್ಪಡುವ ವಸ್ತು ವಿಶೇಷವು) ಪರಬ್ರಹ್ಮ ಸ್ವರೂಪವಾದ ಅಗ್ನಿಯಲ್ಲಿ ಪರಬ್ರಹ್ಮ ಸ್ವರೂಪನಾದ ಕರ್ತೃವಿನಿಂದ ಹೋಮವು ಮಾಡಲ್ಪಟ್ಟಿತೆಂದು ಸಕಲ ಕರ್ಮವು ಬ್ರಹ್ಮಸ್ವರೂಪವೆಂಬದಾಗಿ ಯಾವನಾದರೆ ತಿಳಿಯುತ್ತಾನೊ ಅವನಿಂದ ಬ್ರಹ್ಮವಾದ ಆತ್ಮನೇ (ಪರಬ್ರಹ್ಮಕ್ಕೆ ಆತ್ಮನು ಶರೀರವಾಗಿರುವುದರಿಂದ ಅದನ್ನು ಪರಬ್ರಹ್ಮವೆನ್ನುತ್ತಾರೆ) ಹೊಂದತಕ್ಕದ್ದಾಗಿರುವುದು. ಎಂದರೆ ಮೋಕ್ಷಾರ್ಥಿಯಾದವನು ಮಾಡತಕ್ಕ ಕರ್ಮವೆಲ್ಲವೂ ಪರಬ್ರಹ್ಮವೇ ಎಂಬ ಅನುಸಂಧಾನದಿಂದ ಕೂಡಿ ಮಾಡಲ್ಪಡುತಾ ಅದು ಜ್ಞಾನರೂಪವಾಗುವುದರಿಂದ ಜ್ಞಾನನಿಷ್ಠೆಯನ್ನು ಎದುರುನೋಡದೆ ಆತ್ಮ ಸಾಕ್ಷಾತ್ಕಾರವನ್ನುಂಟುಮಾಡುವುದೆಂದರ್ಥವು. ಸ್ರುಕ್ ಎಂದರೆ ಹವಿಸ್ಸು ಮೊದಲಾದವುಗಳನ್ನು ಅಗ್ನಿಯಲ್ಲಿ ಹೋಮ ಮಾಡುವುದಕ್ಕೆ ಸಾಧನವಾಗಿರುವ ಪಾತ್ರ ವಿಶೇಷವು. ... ... ||೨೪||

(ಮ|| ಗೀ|| ವಿ.) ಯಜ್ಞಸಾಧನವಾದ ಸಕಲವೂ ಪರಬ್ರಹ್ಮಾಧೀನವಾಗಿರುವುದರಿಂದ ಅವುಗಳೂ ಪರಬ್ರಹ್ಮವೆಂಬದಾಗಿಯೇ ಹೇಳಲ್ಪ

ಡುವುವೆಂದರಿಯಬೇಕು. ( ಗೀ || ೨. ) ( ಅಥವಾ ) ಸಕಲಕ್ಕೂ ಬ್ರಹ್ಮವು ಸ್ವಾಮಿಯಾಗಿರುವುದರಿಂದ ಸಕಲವೂ ಬ್ರಹ್ಮವೆಂದು ಹೇಳಲ್ಪಡುವುದು. ಇದರಿಂದ ಅಭಿಮಾನತ್ಯಾಗವು ಫಲಿತವಾಗುವುದು. ||೨೪

ಮೂ|| ದೈವಮೇವಾಪರೇಯಜ್ಞಂ ಯೋಗಿನಃಪರ್ಯುಪಾಸತೇ | ಬ್ರಹ್ಮಾಗ್ನಾವಪರೇಯಜ್ಞಂ ಯಜ್ಞೇನೈವೋಪಜುಹ್ವತಿ || ... ... ||೨೫||

ಪ || ದೈವಂ- ಏವ- ಅಪರೇ- ಯಜ್ಞಂ- ಯೋಗಿನಃ - ಪರಿ - ಉಪಾಸತೇ| ಬ್ರಹ್ಮಾಗ್ನೌ- ಅಪರೇ- ಯಜ್ಞಂ- ಯಜ್ಞೇನ- ಏವ- ಉಪಜುಹ್ವತಿ|| ||೨೫||

ಅ|| ಅಪರೇ- ಅನ್ಯರಾದ, ಯೋಗಿನಃ- ಕೆಲವು ಕರ್ಮನಿಷ್ಠರಾಗಿರುವ ಯೋಗಿಗಳು, ದೈವಮೇವ- ದೇವತಾರ್ಚನರೂಪವಾಗಿಯೇ ಇರುವ, ಯಜ್ಞಂ- ಯಜ್ಞವನ್ನು, ಪರ್ಯುಪಾಸತೇ- ಅನುಷ್ಠಿಸುತ್ತಾರೆ, ಅಪರೇ- ಕೆಲವರು, ಯಜ್ಞಂ- ಯಜ್ಞಸಾಧನವಾದ, (ಹವಿಸ್ಸನ್ನು) ಯಜ್ಞೇನೈವ - ಯಜ್ಞೋಪಕರಣವಾದ ಸ್ರುಗಾದಿಗಳಿಂದಲೆ, ಬ್ರಹ್ಮಾಗ್ನೌ- ಬ್ರಹ್ಮಸ್ವರೂಪವಾದ ಅಗ್ನಿಯಲ್ಲಿ, ಉಪಜುಹ್ವತಿ- ಹೋಮವಂ ಮಾಡುವರು. ||೨೫||

(ಶಂ|| ಭಾ||) ಇದುವರೆಗೂ ಹೇಳಲ್ಪಟ್ಟ ಶ್ಲೋಕದಿಂದ ಜ್ಞಾನಕ್ಕೆ ಯಜ್ಞತ್ವವನ್ನು ಸಂಪಾದಿಸಿ ಈಗ ಜ್ಞಾನಯಜ್ಞವನ್ನು ಸ್ತೋತ್ರಮಾಡುವುದಕ್ಕಾಗಿ ಇದುಮೊದಲು ಕೆಲವು ಶ್ಲೋಕಗಳಿಂದ ಇತರಗಳಾದ ಕೆಲವು ಯಜ್ಞಗಳನ್ನು ಹೇಳುತ್ತಾನೆ. ಕರ್ಮಯೋಗನಿಷ್ಠರಾದ ಕೆಲವರು ಇಂದ್ರಾದಿ ದೇವತೆಗಳನ್ನುದ್ದೇಶಿಸಿ ದರ್ಶಪೂರ್ಣಮಾಸಾದಿ ಯಜ್ಞಗಳಂ ಮಾಡುತ್ತಾರೆ. " ಬ್ರಹ್ಮವು ಸತ್ಯಜ್ಞಾನಾನಂತರೂಪವಾಗಿರುವುದು - ಯಾವಬ್ರಹ್ಮವು ಜ್ಞಾನಾದಿಗಳಿಗೆ ಅವಿಷಯವಾಗಿರುವುದೋ- ಯಾವ ಆತ್ಮವು ಸರ್ವಾಂತರವಾಗಿರುವುದೊ " ಎಂಬ ಅರ್ಥವಂ ಪ್ರತಿಪಾದಿಸುವ ಶ್ರುತಿಗಳಿಂದ ಪ್ರತಿಪಾದಿಸಲ್ಪಟ್ಟು "ಹಶಿವು ಮೊದಲಾದ ಸಮಸ್ತಸಾಂಸಾರಿಕ ಧರ್ಮಗಳಿಂದ ಬಿಡಲ್ಪಟ್ಟು; " ಇದಲ್ಲವು ಇದಲ್ಲವು " ಎಂಬುವ ವಾಕ್ಯಗಳಿಂದ ಹೊಗಳಲ್ಪಡಿಸಲ್ಪಟ್ಟ ಸಮಸ್ತ ವಿಶೇಷಗಳುಳ್ಳದ್ದಾಗಿಯೂ ಇರುವವಸ್ತುವು ಬ್ರಹ್ಮವೆಂತಲೂ ಆ ಬ್ರಹ್ಮವು, ಸೋಪಾಧಿಕ ಜೀವನನ್ನು ಹೋಮ ಮಾಡುವದಕ್ಕೆ ಆಧಾರವಾಗಿರುವುದರಿಂದ ಅಗ್ನಿಯಾಗಿರುವುದೆಂತಲೂ, ಅಂಥಾ ಬ್ರಹ್ಮ

ವೆಂಬುವ ಅಗ್ನಿಯಲ್ಲಿ ಬ್ರಹ್ಮವೇದಿಗಳು, ವಾಸ್ತವ ವಿಚಾರಿಸಿ ನೋಡಿದ
ರೆ ಪರಮಾತ್ಮನಾಗಿಯೆ ಇರುವಂತವನಾಗಿಯೂ, ಬುದ್ಧಿಯೇ ಮೊದ
ಲಾದ ಉಪಾಧಿಗಳಿಂದ ಕೂಡಿರುವಂತವನಾಗಿಯೂ, ಅಧ್ಯಾಸ ಮಾಡ
ಲ್ಪಟ್ಟ ಸಮಸ್ತವಾದ ಉಪಾಧಿ ಧರ್ಮವುಳ್ಳವನಾಗಿಯೂ ಇರುವ ಜೀ
ವನ ಬ್ರಹ್ಮಜ್ಞಾನೋಪದೇಶ ಕಾಲದಲ್ಲಿಯೇ (ಯಜ್ಞಾದಿಂದಲೇ)
ಆತ್ಮನಿಂದಲೇ ಆಹುತಿಯನ್ನು ಮಾಡುತ್ತಾರೆ; ಎಂದರೆ ಅವಿದ್ಯೆಯೆಂಬ
ಉಪಾಧಿಯಿಂದ ಕೂಡಿರುವ ಆತ್ಮವು ನಿರುಪಾಧಿಕವಾದ ಪರಬ್ರಹ್ಮಸ್ವ
ರೂಪವೆಂಬದಾಗಿ ತಿಳಿದುಕೊಳ್ಳುವಿಕೆ ಎಂಬ ಹೋಮವನ್ನು ಬ್ರಹ್ಮಾ
ತ್ಮೈಕತ್ವಭಾವನಾನಿಷ್ಠರಾದ ಸನ್ಯಾಸಿಗಳು ಮಾಡುವರೆಂದು ಭಾವವು.
ಈ ಶ್ಲೋಕದ ಮೊದಲು ಎಂಟು ಶ್ಲೋಕಗಳಿಂದ ಯಜ್ಞಗಳಧಿಕಾರ
ಭೇದದಿಂದ ಅನೇಕವಿಧಗಳಾಗಿರುವುವೆಂದು ತಿಳಿಸಿ "ಶ್ರೇಯಾನ್ದ್ರ
ವ್ಯಮಯಾದ್ಯಜ್ಞಾದ್ಜ್ಞಾನಯಜ್ಞಃಪರಂತಪ" (೪॥೩೩॥) ಎಂಬು
ವ ಶ್ಲೋಕದಿ ಜ್ಞಾನನಿಷ್ಠನಿಗೆ ಜ್ಞಾನಯಜ್ಞವನ್ನು ಸ್ತುತಿಸುವುದಕ್ಕಾ
ಗಿ ಪ್ರವೃತ್ತಿಸಿರುತ್ತಾನೆ. ... ... ॥೨೪॥

(ಮಧುಸೂ) ಆತ್ಮಜ್ಞಾನವೆಂಬ ಯಜ್ಞವನ್ನು ಸ್ತೋತ್ರಮಾಡುವು
ದಕ್ಕಾಗಿ ಶ್ರೀಕೃಷ್ಣನೀಶ್ಲೋಕದಿಂದ ಎರಡು ಯಜ್ಞಗಳನ್ನು ಹೇ
ಳುತ್ತಾನೆ, ಮತ್ತು ಬ್ರಹ್ಮಾತ್ಮೈಕತ್ವಜ್ಞಾನವನ್ನು ಯಜ್ಞವನ್ನಾಗಿ
ಹೇಳಿ ಅಂಥಾ ಜ್ಞಾನವನ್ನು ಸ್ತುತಿಸುವದಕ್ಕಾಗಿ ಬ್ರಹ್ಮಾತ್ಮೈಕತ್ವ
ಜ್ಞಾನಕ್ಕೆ ಸಾಧನಗಳಾದ ಯಜ್ಞಗಳನ್ನು ಮಧ್ಯದಲ್ಲಿ ಹೇಳಿದನು. ॥೨೪॥

(ಶ್ರೀ॥) ದರ್ಶಪೂರ್ಣಮಾಸಾದಿ ಯಜ್ಞಗಳಿಂದ ಹೊಂದತಕ್ಕ
ಜ್ಞಾನ ಯಜ್ಞವನ್ನು ಸ್ತುತಿಸುವದಕ್ಕಾಗಿ ಅಧಿಕಾರ ಭೇದವನ್ನಾಶ್ರ
ಯಿಸಿ ಅಂಥಾ ಜ್ಞಾನಕ್ಕೆ ಸಾಧನಗಳಾದ ಅನೇಕ ಯಜ್ಞಗಳನ್ನು ಈ
ಶ್ಲೋಕದಿಂದ ಎಂಟು ಶ್ಲೋಕಗಳವರೆಗೂ ಹೇಳುತ್ತಾನೆ. ॥೨೪॥

(ರಾ॥ ಭಾ॥) ಈರೀತಿಯಾಗಿ ಕರ್ಮಕ್ಕೆ ಜ್ಞಾನಾಕಾರತ್ವವನ್ನು ಪ್ರ
ದರ್ಶನಮಾಡಿ ಈಗ ಕರ್ಮಯೋಗ ಭೇದವನ್ನು ಹೇಳುತ್ತಾನೆ. ಕೆಲವು
ಕರ್ಮಯೋಗಿಗಳು ದೇವತಾರ್ಚನರೂಪವಾದ ಯಜ್ಞವನ್ನು ಮಾಡು
ತ್ತಾರೆ, ಕೆಲವರು ಬ್ರಹ್ಮಸ್ವರೂಪವಾದ ಅಗ್ನಿಯಲ್ಲಿ ಯಜ್ಞಸಾಧನ
ವಾದ ಹವಿಸ್ಸು, ಸ್ರುಕ ಮೊದಲಾದವುಗಳಿಂದ ಹೋಮವಂ ಮಾಡು

ತ್ತಾರೆ. ಇಲ್ಲಿ ಯಜ್ಞಶಬ್ದವು, ಹವಿಸ್ಸು, ಸ್ರುಕ ಇವೇ ಮೊದಲಾದ ಯಾಗಸಾಧನದಲ್ಲಿರುವುದು. ಯಾಗವನ್ನು ಅದಕ್ಕೆತಕ್ಕ ಸಾಧನಗಳನ್ನು "ಬ್ರಹ್ಮಾರ್ಪಣಂ" ಎಂಬುವ ನ್ಯಾಯದಿಂದ ಬ್ರಹ್ಮಸ್ವರೂಪವಾಗಿ ತಿಳಿದು ಹೋಮವಂ ಮಾಡುವುದೇ ತನ್ಮಗಳ ಕರ್ತವ್ಯವೆಂದು ತಿಳಿಯುತ್ತಾರೆಂದರ್ಥವು. ... ... ||೨೫||

(ಮ|| ಭಾ|| ) ಕೆಲವು ಜ್ಞಾನಿಗಳು ಪರಮಾತ್ಮನನ್ನೇ ಆರಾಧಿಸಿ ಉಪಾಸನ ಮಾಡುತ್ತಾರೆ, ಕೆಲವು ಜ್ಞಾನಿಗಳು ಯಜ್ಞವೆಂಬ ಪಶುವಿನಿಂದ ವಿಷ್ಣುವನ್ನುದ್ದೇಶಿಸಿ ಬ್ರಹ್ಮವನ್ನು ಅಗ್ನಿಯಾಗಭಾವಿಸಿ ಆ ಅಗ್ನಿಯಲ್ಲಿ ಹೋಮವನ್ನು ಮಾಡುತ್ತಾರೆ, ಇದಕ್ಕೆ ಸಮ್ಮತಿಯಾಗಿ "ವಿಷ್ಣುಂರುದ್ರೇಣಪಶುನಾಬ್ರಹ್ಮಾಜ್ಯೇಷ್ಠೇನಸೂನುನಾ | ಅಯುಜನ್ಮಾನಸೇಯಜ್ಞೇಪಿತರಂಪ್ರಪಿತಾಮಹಃ" ಎಂಬ ಪ್ರಮಾಣವನ್ನರಿಯಬೇಕು. ... ... ||೨೫||

(ಗೀ|| ವಿ||) ಪರಮಾತ್ಮಾಧೀನವಾದ ಕರ್ತೃತ್ವಾನುಸಂಧಾನದೊಡನೆ ಭಗವತ್ಪ್ರೀತಿಯನ್ನುದ್ದೇಶಿಸಿ ವರ್ಣಾಶ್ರಮ ವಿಹಿತವಾದ ಅನುಷ್ಠಾನವೇ ಕರ್ಮವೆಂಬದಾಗ ಸಾಮಾನ್ಯವಾಗಿ ಯಾವ ಕರ್ಮವು ಹೇಳಲ್ಪಟ್ಟಿತೋ ಅದೇ ಯಜ್ಞಾದಿಭೇದ ಭಿನ್ನವಾಗಿರುವುದೆಂದು ಹೇಳುತ್ತಾನೆ. ಇಲ್ಲಿ ಯಜ್ಞರಹಿತರಾದ ಪರಮಹಂಸರಿಗೆ ಉತ್ತಮಲೋಕಪ್ರಾಪ್ತಿ ಇಲ್ಲವೆಂಬ ಶಂಕಾನಿವಾರಣಕ್ಕಾಗಿ ಸರ್ವಾಶ್ರಮಿಗಳಿಗೂ ಯಜ್ಞವಿರುವ ಪ್ರಕಾರವು ಹೇಳಲ್ಪಡುವುದೆಂದರಿಯಬೇಕು. ಅಪರೇ ಯೋಗಿನಃ- ಅನ್ಯರಾದ ಕೆಲವು ಕರ್ಮಯೋಗಿಗಳು ದೈವಂ- ಶ್ರೀವಿಷ್ಣುವನ್ನು, ಯಜ್ಞಂ- ಯಜ್ಞವನ್ನಂತೆ, ಪರ್ಯುಪಾಸತಏವ- ಉಪವಾಸನವನ್ನೇ ಮಾಡುತ್ತಾರೆ. ಅವರಿಗೆ ಪರಮಾತ್ಮೋಪಾಸನವೇಯಜ್ಞವಲ್ಲದೆ ಮತ್ತೊಂದು ಯಜ್ಞವಿಲ್ಲವೆಂದು ತಾತ್ಪರ್ಯವು. ಇದರಿಂದ ಯತ್ಯಾಶ್ರಮಿಗಳಿಗೆ ಯಜ್ಞವಿಲ್ಲವೆಂಬ ಕಾರಣದಿಂದ "ನಾಯಂ ಲೋಕೋಸ್ತಿನಪರಃ" (೪-೪೦) ಎಂಬಂತೆ ಉತ್ತಮ ಲೋಕವಿಲ್ಲವೆಂಬಶಂಕೆಯು ಭಗವದುಪವಾಸನವೆಂಬ ಯಜ್ಞವಿರುವುದರಿಂದ ಯತ್ಯಾಶ್ರಮಿಗಳಿಗೆ ಉತ್ತಮಲೋಕ ಪ್ರಾಪ್ತಿಗೆ ವಿರೋಧವಿಲ್ಲವೆಂಬ ಸಮಾಧಾನದಿಂದ ಪರಿಹರಿಸಲ್ಪಟ್ಟಿತೆಂದರಿಯಬೇಕು. (ಅಥವಾ) ಪರಮಾ

ತ್ಮನು ಸ್ವರೂಪಭೂತವಾದ ಆನಂದಾದಿರೂಪವಾಗಿರುವ ಹವಿಸ್ಸನ್ನು ತಾನೇ ಅನುಭವಿಸುತ್ತಾನಾದುದರಿಂದ ಪರಮಾತ್ಮನೆ ಯಜ್ಞವೆಂದು ಹೇಳಲ್ಪಡುವನು. ಈಪಕ್ಷದಲ್ಲಿ "ಕೆಲವು ಯೋಗಿಗಳು ಪರಮಾತ್ಮನನ್ನು ಯಜ್ಞವೆಂಬದಾಗಿ ಉಪಾಸನೆಮಾಡುತ್ತಾರೆ, ಪರಮಾತ್ಮನೇ ಯಜ್ಞವೆಂಬದಾಗಿ ತಿಳಿದು ಉಪಾಸನ ಮಾಡೋಣವೇ ಅವರಿಗೆ ಯಜ್ಞವೆಂಬದಾಗಿ ತಿಳಿಯಬೇಕು. ಅಪರೇ - ಅನ್ಯರಾದ ಕೆಲವರು, ಬ್ರಹ್ಮಾಗ್ನೌ-ಬ್ರಹ್ಮವೆಂಬ ಅಗ್ನಿಯಲ್ಲಿ, ಯಜ್ಞೇನ- ಪ್ರಸಿದ್ಧವಾದ ಯಜ್ಞದಿಂದ, ಯಜ್ಞಂಪ್ರತಿ- ಪರಮಾತ್ಮನ ಯಜ್ಞವನ್ನು ಕುರಿತು ಉಪಜುಹ್ವತಿ- ಹೋಮಮಾಡುತ್ತಾರೆ. ದದ್ಧ್ಯಾದಿ (ಮೊಸರುಮೊದಲಾದ) ಹೋಮವು ಅವುಗಳ ಸಮರ್ಪಣದಲ್ಲಿ ಹೇಗಾದರೇ ರೂಢವೋ ಆರೀತಿಯಾಗಿ ಯಜ್ಞದಿಂದ ಹೋಮಮಾಡುತ್ತಾರೆಂದರೆ ಯಜ್ಞವನ್ನು ಪರಮಾತ್ಮನಿಗೆ ಸಮರ್ಪಣಮಾಡುತ್ತಾರೆಂದು ತಿಳಿಯಬೇಕು. ಸರ್ವಯಜ್ಞಗಳು ಪರಮಾತ್ಮಾಧೀನವೆಂಬದಾಗಿ ತಿಳಿದು ಪರಮಾತ್ಮನಿಗೆ ಸಮರ್ಪಿಸುತ್ತಾರೆಂದರ್ಥವು ॥ ... ॥೨೫॥

ಶ್ಲೋ ॥ ಶ್ರೋತ್ರಾದೀನೀಂದ್ರಿಯಾಣ್ಯನ್ಯೇ ಸಂಯ
ಮಾಗ್ನಿಷು ಜುಹ್ವತಿ । ಶಬ್ದಾದೀನ್ವಿಷಯಾನನ್ಯ ಇಂದ್ರಿ
ಯಾಗ್ನಿಷು ಜುಹ್ವತಿ ॥ ... ॥೨೬॥

ಪ॥ ಶ್ರೋತ್ರಾದೀನಿ- ಇಂದ್ರಿಯಾಣಿ- ಅನ್ಯೇ- ಸಂಯಮಾಗ್ನಿಷು- ಜುಹ್ವತಿ । ಶಬ್ದಾದೀನ್- ವಿಷಯಾನ್- ಅನ್ಯೇ- ಇಂದ್ರಿಯಾಗ್ನಿಷು- ಜುಹ್ವತಿ ॥ ॥೨೬॥

ಅ॥ ಅನ್ಯೇ- ಕೆಲವರು, ಶ್ರೋತ್ರಾದೀನಿ - ಕಿವಿಮೊದಲಾದ, ಇಂದ್ರಿಯಾಣಿ- ಇಂದ್ರಿಯಗಳನ್ನು, ಸಂಯಮಾಗ್ನಿಷು - ವಿಷಯಗಳಲ್ಲಿ ಪ್ರವರ್ತಿಸದೇ ಇರುವಿಕೆಯೆಂಬ ಅಗ್ನಿಯಲ್ಲಿ, ಜುಹ್ವತಿ- ಹೋಮವಂಮಾಡುತ್ತಾರೆ, ಅನ್ಯೇ - ಮತ್ತೆಕೆಲವರು, (ಕ॥ ಅನ್ಯೇಪಿ- ಮತ್ತೆಕೆಲವರೂ,) ಶಬ್ದಾದೀನ್ - ಶಬ್ದವೇಮೊದಲಾದ, ವಿಷಯಾನ್ - ವಿಷಯಗಳನ್ನು, ಇಂದ್ರಿಯಾಗ್ನಿಷು- ಇಂದ್ರಿಯಗಳೆಂಬ ಅಗ್ನಿಯಲ್ಲಿ, ಜುಹ್ವತಿ-ಹೋಮಮಾಡುತ್ತಾರೆ॥೨೬॥

( ಶಂ॥ ಭಾ॥ ) ಕಿವಿ ಮೊದಲಾದ ಇಂದ್ರಿಯಗಳಿಂದ ಅವಿರುದ್ಧವಾದ ವಿಷಯಗ್ರಹಣವೇ ಹೋಮವೆಂದು ಕೆಲವರು ನೆನೆಸುತ್ತಾರೆಂದರಿಯಬೇಕು. ... ... ॥೨೬॥

(ಶ್ರೀ) ನೈಷ್ಠಿಕಬ್ರಹ್ಮಚಾರಿಯಾದವನಿಗೆ ಇಂದ್ರಿಯಗಳನ್ನಡಗಿಸುವುದೇ ಯಜ್ಞವಾಗುವುದು. ಯಜ್ಞದಲ್ಲಿ ಅನೇಕ ಹೋಮದ್ರವ್ಯಗಳು ಆಹುತಿ ಮಾಡಲ್ಪಡುವವು ; ಹೋಮಮಾಡಲ್ಪಟ್ಟ ಆ ವಸ್ತುಗಳು ನಾಶಹೊಂದಿ ವಸ್ತುಗಳರೂಪವು ತಿಳಿಯದೇ ಹೋಗುವುವು. ಅದರಂತೆ ಇಂದ್ರಿಯವ್ಯಾಪಾರಗಳನ್ನು ಅವುಗಳು ಹೋಗುವ ಮಾರ್ಗದಿಂದ ನಿವರ್ತಿಸುವುದೇ ಅಗ್ನಿಯು; ಅಂಥಾ ಅಗ್ನಿಯಲ್ಲಿ ಇಂದ್ರಿಯಗಳ ವ್ಯಾಪಾರವು ಹೋಮಮಾಡಲ್ಪಟ್ಟರೆ ಆ ಇಂದ್ರಿಯ ವ್ಯಾಪಾರವು ನಾಶಹೊಂದುವುದು. ಗೃಹಸ್ಥಾಶ್ರಮದಲ್ಲಿರುವಂತವನಿಗೆ ವಿಷಯಸಂಬಂಧ ಪರಿತ್ಯಾಗವೇ ಯಜ್ಞವೆಂದು ಹೇಳಲ್ಪಡುವುದು. ಅದು ಹೇಗೆಂದರೆ,— ಅವನು ಶಬ್ದಾದಿವಿಷಯಗಳನ್ನು ಅನುಭವಿಸಿಕೊಂಡಿದ್ದರೂ ಆ ವಿಷಯಗಳಲ್ಲಿರುವ ಸಂಬಂಧಗಳನ್ನು ಹವಿಸ್ಸಾಗಿಯೂ ಇಂದ್ರಿಯಗಳನ್ನಗ್ನಿಯಾಗಿಯೂ ಭಾವಿಸಿಕೊಂಡು ಅಂಥಾ ಇಂದ್ರಿಯ ಸಂಬಂಧಗಳೆಂಬ ಹವಿಸ್ಸನ್ನು ಇಂದ್ರಿಯಗಳೆಂಬ ಅಗ್ನಿಯಲ್ಲಿ ಹೋಮಮಾಡುತ್ತಾನೆ, ಆಯಾ ಇಂದ್ರಿಯಗಳು ಯಾವ ವಸ್ತುವನ್ನು ಗ್ರಹಿಸಿದರೂ ಆ ವಸ್ತುವಿನಲ್ಲುಂಟಾದ ಸಂಬಂಧನಾಶವೇ ಹೋಮಶಬ್ದಾರ್ಥವೆಂದರಿಯಬೇಕು. ... ||೨೬||

(ರಾ|| ಭಾ||) ಕೆಲವರು ಕಿವಿ ಮೊದಲಾದ ಇಂದ್ರಿಯಗಳನ್ನಡಗಿಸುವುದರಲ್ಲಿ ಪ್ರಯತ್ನಿಸುತ್ತಾರೆ ||೨೫|| ಕೆಲವು ಯೋಗಿಗಳು ಇಂದ್ರಿಯಗಳಿಗೆ ಶಬ್ದಾದಿ ವಿಷಯ ಪ್ರಾವಣ್ಯವನ್ನು ನಿವಾರಣಮಾಡುವುದರಲ್ಲಿ ಪ್ರಯತ್ನಿಸುತ್ತಾರೆ. ||೨೬||

( ಗೀ|| ವಿ|| ) ವಿಷಯಭೋಗಗಳನ್ನನುಭವಿಸಿದರೂ ಆರೀತಿಯಾಗಿ ಅನುಭವಿಸುವ ವಿಷಯಗಳನ್ನು ಭಗವದಾರಾಧನವಾಗಿ ನೆನೆಸುವುದೆ ಹೋಮವು. ... ... ||೨೬||

ಮೂ|| ಸರ್ವಾಣೀಂದ್ರಿಯ ಕರ್ಮಾಣಿ ಪ್ರಾಣಕರ್ಮಾಣಿ
ಚಾಪರೆ | ಆತ್ಮಸಂಯಮಯೋಗಾಗ್ನೌ ಜುಹ್ವತಿಜ್ಞಾ
ನದೀಪಿತೇ || ... ||೨೭||

ಪ|| ಸರ್ವಾಣಿ- ಇಂದ್ರಿಯಕರ್ಮಾಣಿ – ಪ್ರಾಣಕರ್ಮಾಣಿ- ಚ- ಅಪರೇ| ಆತ್ಮಸಂಯಮಯೋಗಾಗ್ನೌ - ಜುಹ್ವತಿ- ಜ್ಞಾನದೀಪಿತೆ || ||೨೭||

ಅ॥ ಅಪರೇ- ಕೆಲವುಜ್ಞಾನನಿಷ್ಠರು, ಸರ್ವಾಣೀಂದ್ರಿಯಾಣಿ - ಸಮಸ್ತವಾದಜ್ಞಾನ ಕರ್ಮೇಂದ್ರಿಯ ವ್ಯಾಪಾರಗಳನ್ನು, ಪ್ರಾಣಕರ್ಮಾಣಿಚ-ಪ್ರಾಣಾಪಾನಾದಿಭೇದದಿಂದಿರುವ ಹತ್ತುವಿಧಗಳಾದ ವಾಯುಗಳ ವ್ಯಾಪಾರಗಳನ್ನು, ಜ್ಞಾನದೀಪಿತೇ- ಆತ್ಮಜ್ಞಾನದಿಂದ ಪ್ರಕಾಶಿಸುವ, (ಶಂ) ವಿವೇಕದಿಂದ ಪ್ರಕಾಶಿಸುವ, ಆತ್ಮಸಂಯಮಯೋಗಾಗ್ನೌ- ಆತ್ಮನಿಷ್ಠೆಯಲ್ಲಿ ಮನಸ್ಸನ್ನಿಡುವುದೆಂಬಯೋಗಾಗ್ನಿಯಲ್ಲಿ, ಜುಹ್ವತಿ-ಹೋಮಮಾಡುತ್ತಾರೆ॥೨೭॥

(ರಾ॥ ಭಾ॥) ಜ್ಞಾನದಿಂದ ಜ್ವಲಿಸುವ ಮನಸ್ಸನ್ನಡಗಿಸುವುದೆಂಬ ಅಗ್ನಿಯಲ್ಲಿ ಇಂದ್ರಿಯವ್ಯಾಪಾರಗಳನ್ನೂ ಪ್ರಾಣವ್ಯಾಪಾರಗಳನ್ನೂ ಕೆಲವರು ಹೋಮಮಾಡುತ್ತಾರೆ. ಎಂದರೆ ಮನಸ್ಸನ್ನು ಇಂದ್ರಿಯಗಳೊಡನೆಯೂ, ಪ್ರಾಣವಾಯು ವ್ಯಾಪಾರದೊಡನೆಯೂ, ಸೇರಿಸದೇ ಅದರ ಪ್ರಾವಣ್ಯವನ್ನು ನಿವಾರಣ ಮಾಡುವುದರಲ್ಲಿ ಪ್ರಯತ್ನಿಸುತ್ತಾರೆ. ... ... ... ॥೨೭॥

(ಇಲ್ಲಿ ಜ್ಞಾನೇಂದ್ರಿಯಗಳ್ಯಾವವೆಂದರೆ,- ಕಣ್ಣು, ಕಿವಿ, ಮೂಗು, ನಾಲಿಗೆ, ತ್ವಕ್ಕು. (ದೇಹದ ಮೇಲಿನ ಚರ್ಮಕ್ಕೆ ತ್ವಕ್ಕೆಂದು ಹೆಸರು.) ಇವುಗಳ ಕಾರ್ಯಗಳ್ಯಾವವೆಂದರೆ, ರೂಪಗಳನ್ನು ನೋಡುವುದು, ಕೇಳುವುದು, ಸುಗಂಧಾದಿಯನ್ನು ಮೂಸಿನೋಡುವುದು, ರುಚಿಯನ್ನು ಗ್ರಹಿಸುವುದು, ಸ್ಪರ್ಶವನ್ನರಿಯುವುದೆ. ಕರ್ಮೇಂದ್ರಿಯಗಳ್ಯಾವವೆಂದರೆ,-ಬಾಯಿ, ಕೈ, ಕಾಲು, ಪಾಯು, ಉಪಸ್ಥ, ಇವುಗಳೇ. ಮಾತನಾಡುವುದು, ತೆಗೆದುಕೊಳ್ಳುವುದು, ನಡೆಯುವುದು, ಮಲವಿಸರ್ಜನಮಾಡುವುದು, ಕಾಮಸುಖವನ್ನನುಭವಿಸುವುದೆಂಬಿವುಗಳು ಅವುಗಳವ್ಯಾಪಾರಗಳೆಂದರಿಯಬೇಕು. ಪ್ರಾಣಾದಿದಶವಾಯುಗಳ ಕರ್ಮಗಳ್ಯಾವವೆಂದರೆ (೧) ಪ್ರಾಣನು ದೇಹದ ಒಳಗೇ ಸಂಚರಿಸುತಾ ಜ್ಞಾನೇಂದ್ರಿಯಗಳ ಮೂಲವಾಗಿ ಕೆಲವುಮಟ್ಟಿಗೆ ಹೊರಗೆ ಹೋಗುವದು ಬರುವದಾಗಿರುವನು. ಅಪಾನವು- ಅಪಾನಮಾರ್ಗವಾಗಿ ಕೆಲವು ಭಾಗವು ಹೊರಗೆ ಹೋಗುವುದು ಒಳಗೆ ಪ್ರವೇಶಿಸುವುದು, ಈರೀತಿಯಾಗಿರುವುದು. (೩) ವ್ಯಾನವು- ದೇಹವೆಲ್ಲವನ್ನು ಸಂಚರಿಸುತಾ ಇರುವುದು. ಇದು ಸಂಚರಿಸುವುದರಿಂದಲೇ ದೇಹವೆಲ್ಲವೂ ರಕ್ತಸಂಚಾರಯುಕ್ತವಾಗಿರುವುದು. (೪) ಉದಾನನು- ದೇಹದಲ್ಲಿ ನಾಭಿಯಿಂದ ಶಿರೋಮಧ್ಯದವರೆಗೂ ಸಂಚರಿಸುತಾ ಇರುವುದು. (೫) ಸಮಾನನು- ಆಹಾರಪದಾ

ರ್ಥಂಗಳಂ ಜೀರ್ಣ್ಣಮಾಡಿಸಿ ಅವುಗಳನ್ನು ಆಯಾಸ್ಥಾನದಲ್ಲಿ ಸೇರಿಸಿ ಮಲಜಲ ಪರಿಣಾಮವಂ ಮಾಡಿಸುವುದು. (೬) ನಾಗವಾಯುವು-ವಾಂತಿ ಮಾಡಿಸುವುದು. (೭) ಕೂರ್ಮವಾಯುವು- ಕಣ್ಣುಗಳ ಉನ್ಮೀಲನವಂ ಮಾಡಿಸುವುದು. (೮) ಕೃಕರವಾಯುವು - ಶೀನುಗಳನ್ನುಂಟುಮಾಡಿಸುವುದು. (೯) ದೇವದತ್ತವಾಯುವು- ಆಕಳಿಕೆಯನ್ನುಂಟುಮಾಡಿಸುವುದು. (೧೦) ಧನಂಜಯವಾಯುವು- ದೇಹದಲ್ಲಿ ಪ್ರಾಣವಿದ್ದರೂ ಪ್ರಾಣವಿಲ್ಲದೇ ಹೋದರೂ ದೇಹದಲ್ಲಿರುವುದು. ಎಂಬೀವಿವರವನ್ನರಿಯಬೇಕು.

ಮೂ ॥ ದ್ರವ್ಯಯಜ್ಞಾಸ್ತಪೋಯಜ್ಞಾ ಯೋಗಯಜ್ಞಾಸ್ತಥಾಪರೇ । ಸ್ವಾಧ್ಯಾಯಜ್ಞಾನ ಯಜ್ಞಾಶ್ಚ ಯತಯಸ್ಸಂಶಿತವ್ರತಾಃ ॥ ... ॥೨೮॥

ಪ॥ ದ್ರವ್ಯಯಜ್ಞಾಃ- ತಪೋಯಜ್ಞಾಃ- ಯೋಗಯಜ್ಞಾಃ- ತಥಾ- ಅಪರೇ । ಸ್ವಾಧ್ಯಾಯಜ್ಞಾನಯಜ್ಞಾಃ- ಚ- ಯತಯಃ- ಸಂಶಿತವ್ರತಾಃ ॥ ... ॥೨೮॥

ಅ ॥ ಅಪರೇ- ಕೆಲವರು, ದ್ರವ್ಯಯಜ್ಞಾಃ - ದ್ರವ್ಯದಾನವನ್ನೇ ಯಜ್ಞವನ್ನಾಗಿ ಮಾಡುತ್ತಾರೆ. (ಶಂ) ದ್ರವ್ಯಗಳನ್ನು ಉತ್ತಮವಾದ ಕ್ಷೇತ್ರವು ತೀರ್ಥವು ಇರುವ ಸ್ಥಳಗಳಲ್ಲಿ ಸತ್ಪಾತ್ರದಲ್ಲಿ ದಾನಮಾಡುವುದನ್ನೇ ಯಜ್ಞವನ್ನಾಗಿ ನೆನಸುವರು. (ಮ) ಆತ್ಮಸಂಯಮ ಹೋಮಾಗ್ನಿಯಲ್ಲಿ ಹವಿಸ್ಸೇ ಮೊದಲಾದ ದ್ರವ್ಯಗಳನ್ನು ಹೋಮ ಮಾಡುವುದು. (ಅಥವಾ) ದ್ರವ್ಯವನ್ನು ಸತ್ಪಾತ್ರದಲ್ಲಿ ವಿನಿಯೋಗಿಸುವುದು ದ್ರವ್ಯಯಜ್ಞವೆನ್ನಲ್ಪಡುವುದು. (ಗೀ॥ ವಿ) ಭಗವದರ್ಪಣ ಬುದ್ಧಿಯಿಂದ ದ್ರವ್ಯವನ್ನು ವಿನಿಯೋಗಿಸುವುದು. ಅಪರೇ - ಕೆಲವರು, ತಪೋಯಜ್ಞಾಃ- (ಶಂ) ತಪಸ್ಸನ್ನನುಷ್ಠಿಸುವುದೇ ಯಜ್ಞವೆಂಬವರಾಗಿ ನೆನೆಸುವರು. (ಶ್ರೀ ॥ ರಾ॥ ಗೀ ॥ ವಿ॥) ಕೃಚ್ಛ್ರಚಾಂದ್ರಾಯಣಾದಿ ಉಪವಾಸಾದಿಗಳೇ ತಪೋಯಜ್ಞಗಳು. (ಮ॥ ಗೀ॥ ವಿ॥ ) ತಾನು ಮಾಡುವ ತಪಸ್ಸನ್ನು ಬ್ರಹ್ಮಾರ್ಪಣವಂ ಮಾಡುವುದು. ಅಪರೇ - ಕೆಲವರು, ಯೋಗಯಜ್ಞಾಃ-ಯೋಗವನ್ನೇ ಯಜ್ಞವಾಗಿ ಮಾಡುವರು. (ಶಂ) ಪ್ರಾಣಾಯಾಮ ಪ್ರತ್ಯಾಹಾರಾದಿಗಳೇ ಯೋಗಯಜ್ಞಗಳು. (ಶ್ರೀ) ಮನಸ್ಸನ್ನು ಸಮಾಧಾನದಿಂದ ಒಂದೇಪ್ರದೇಶದಲ್ಲಿ ನಿಲ್ಲಿಸುವುದು. (ರಾ) ಪುಣ್ಯಕ್ಷೇತ್ರ ತೀರ್ಥಾದಿಗಳಲ್ಲಿ ವಾಸಮಾಡುವುದು. (ಗೀ॥ ವಿ) ಭಗವದ್ಧ್ಯಾನವೆಂಬ ಯಜ್ಞವು. ಅಪರೇ- ಕೆಲವರು, ತಥಾ- ಆ ಪ್ರಕಾರವಾಗಿಯೇ, ಸ್ವಾಧ್ಯಾಯಜ್ಞಾನಯಜ್ಞಾಶ್ಚ- (ಶಂ॥ ಶ್ರೀ॥ ರಾ ॥ ಗೀ ॥ ವಿ) ಸ್ವಾಧ್ಯಾಯಯಜ್ಞವು, ವೇದಾದಿ ಪಾರಾಯಣವು, ಜ್ಞಾನಯಜ್ಞವು, ವೇದಾಂತ ವಿಚಾರದಿಂದರಿಂಪು

ಲ್ಪಡುವ ಜ್ಞಾನವು. (ಶ್ರೀ) ಅಥವಾ ವೇದಾರ್ಥ ವಿಚಾರದಿಂದ ಸಂಪಾದಿಸುವ ಜ್ಞಾನವೇ ಯಜ್ಞವು. ಯತಯಃ- ಈ ರೀತಿಗಳಾದ ಯಜ್ಞಗಳನ್ನು ಮಾಡಲೂ ಪ್ರಯತ್ನಿಸುವಂತವರು, ಸಂಶಿತವ್ರತಾಃ- (ರಾ) ದೃಢವಾದ ನಿಶ್ಚಯವುಳ್ಳವರಾಗಿರುತ್ತಾರೆ. (ಶಂ) ತೀಕ್ಷ್ಣವಾದ ಅಥವಾ ಕಠಿನವಾದ ವ್ರತವನ್ನುಳ್ಳವರಾಗಿರುತ್ತಾರೆ. ... ||೨೮||

(ರಾ|| ಭಾ||) (ದೃಢಪ್ರಯತ್ನವುಳ್ಳ) ಕೆಲವು ಕರ್ಮಯೋಗಿಗಳು ದೃಢಸಂಕಲ್ಪವುಳ್ಳವರಾಗಿ ನ್ಯಾಯಾರ್ಜಿತವಾದ ದ್ರವ್ಯದಿಂದ ದೇವತಾರ್ಚನವನ್ನು ಮಾಡುವುದರಲ್ಲಿಯೂ, ಕೆಲವರು ದಾನಮಾಡುವುದರಲ್ಲಿಯೂ, ಕೆಲವರು ಯಾಗಮಾಡುವುದರಲ್ಲಿಯೂ, ಕೆಲವರು ಹೋಮಮಾಡುವುದರಲ್ಲಿಯೂ, ಯತ್ನವನ್ನು ಮಾಡುತ್ತಾರೆ. ಈ ನಾಲ್ಕುವಿಧಗಳಾದವರೆಲ್ಲರು ದ್ರವ್ಯ ಯಜ್ಞವನ್ನು ಮಾಡಿದವರೆನ್ನಲ್ಪಡುವರು. ಕೆಲವರು ಕೃಛ್ರ ಚಾಂದ್ರಾಯಣೋಪವಾಸವೇ ಮೊದಲಾದ ತಪೋಯಜ್ಞವನ್ನಾಚರಿಸುವರು. ಇನ್ನು ಕೆಲವರು ಪುಣ್ಯತೀರ್ಥಸ್ನಾನವೇನು, ಪುಣ್ಯಕ್ಷೇತ್ರವಾಸವೇನು ಇವುಗಳನ್ನು ಮಾಡುವರು. ಕೆಲವರು ವೇದಾಭ್ಯಾಸನಿಷ್ಠರಾಗಿರುವರು. ಕೆಲವರು ಆವೇದಾರ್ಥವಿಚಾರದಲ್ಲಿ ಸಕ್ತರಾಗಿರುವರು. ... ... ... ||೨೮||

ಮೂ|| ಅಪಾನೇ ಜುಹ್ವತಿ ಪ್ರಾಣಂ ಪ್ರಾಣೇಽಪಾನಂ ತಥಾಪರೇ | ಪ್ರಾಣಾಪಾನ ಗತೀ ರುದ್ಧ್ವಾ ಪ್ರಾಣಾಯಾಮಪರಾಯಣಾಃ || ಅಪರೇ ನಿಯತಾಹಾರಾಃ ಪ್ರಾಣಾನ್ಪ್ರಾಣೇಷು ಜುಹ್ವತಿ || ... ... ||೩೯೪||

ಪ|| ಅಪಾನೇ-ಜುಹ್ವತಿ-ಪ್ರಾಣಂ-ಪ್ರಾಣೇ-ಅಪಾನಂ-ತಥಾ-ಅಪರೇ | ಪ್ರಾಣಾಪಾನಗತೀ-ರುದ್ಧ್ವಾ-ಪ್ರಾಣಾಯಾಮಪರಾಯಣಾಃ | ಅಪರೇ-ನಿಯತಾಹಾರಾಃ- ಪ್ರಾಣಾನ್ - ಪ್ರಾಣೇಷು-ಜುಹ್ವತಿ || ... ... ||೨೯||

ಅ|| ಅಪರೇ- ಕೆಲವುಯೋಗಿಗಳು, ಪ್ರಾಣಾಯಾಮಪರಾಯಣಾಃ-ಪ್ರಾಣಾಯಾಮವಮಾಡುವುದರಲ್ಲಾಸಕ್ತರಾಗಿ, ಪ್ರಾಣಾಪಾನಗತೀರುದ್ಧ್ವಾ- ಪ್ರಾಣಾಪಾನವಾಯುಗಳ ಸಂಚಾರವನ್ನು ನಿರೋಧಿಸಿ, (ಇದು ಕುಂಭಕವು) ಅಪಾನೆ- ಅಪಾನವಾಯುವಿನಲ್ಲಿ, ಪ್ರಾಣಂ- ಪ್ರಾಣವಾಯುವನ್ನು, (ಇದು ಪೂರಕವು) ತಥಾ-ಅಪ್ರಕಾರವಾಗಿಯೆ, ಪ್ರಾಣೇ-ಪ್ರಾಣವಾಯುವಿನಲ್ಲಿ, ಅಪಾನಂ- ಅಪಾನವಾಯುವನ್ನು, ಇದು (ರೇಚಕವು,) ಜುಹ್ವತಿ- ಹೋಮಮಾಡುತ್ತಾರೆ. ನಿಯತಾಹಾರಾಃ - ಆಹಾರನಿಯಮ ಯುಕ್ತರಾದ, ಅಪರೇ- ಕೆಲವರು, ಪ್ರಾಣಾನ್- ಇಂದ್ರಿಯ ವ್ಯಾಪಾರಗಳನ್ನು, (ಶಂ) ಪ್ರಾಣನೇ ಮೊದಲಾದವಾ

ಯುಗಳನ್ನು, ಪಾ್ರಣೇಷು- ತನಗೆ ಸ್ವಾಧೀನಪಟ್ಟ ಇಂದಿ್ರಯಗಳಲ್ಲಿ, ಜುಹ್ವತಿ-ಹೋಮ ಮಾಡುತ್ತಾರೆ. ... ... ||೨೯||

(ರಾ|| ಭಾ||) ಪಾ್ರಣಾಯಾಮವಂ ಮಾಡುವುದರಲ್ಲಿ ಕೆಲವರಾಸಕ್ತರಾಗುವರು. ಇವರು ಪೂರಕರು ರೇಚಕರು ಕುಂಭಕರೆಂಬದಾಗಿ ತ್ರಿವಿಧರಾಗಿರುವರು. ಅಪಾನನಲ್ಲಿ ಪಾ್ರಣನನ್ನು ಹೋಮಮಾಡುವಂತವರು ಪೂರಕರು. ಪಾ್ರಣನಲ್ಲಿ ಅಪಾನನನ್ನು ಹೋಮಮಾಡುವಂತವರು ರೇಚಕರು. ಪಾ್ರಣಾಪಾನ ಮಾರ್ಗಗಳನ್ನು ಬಂಧಿಸಿ ಪಾ್ರಣನನ್ನು ಪಾ್ರಣನಲ್ಲಿಯೇ ಅಡಗಿಸುವಂತವರು ಕುಂಭಕರು. ಈ ಮೂರು ಜನಗಳಿಗೆ ಆಹಾರ ನಿಯಮವೆಂಬುವುದು ಸಮವಾಗಿರುವುದು. ||೨೯||

(ಶ್ರೀ) ಪೂರಕವೆಂದರೆ, ಮೂಗಿನಿಂದ ಶ್ವಾಸವನ್ನು ಒಳಗೆ ಯೆಳೆಯುವುದು. ಕುಂಭಕವೆಂದರೆ, ಮೂಗಿನಿಂದ ಒಳಗೆ ಯೆಳೆಯಲ್ಪಟ್ಟ ಶ್ವಾಸವನ್ನು ಒಳಗೇನೆ ನಿಲ್ಲಿಸುವುದು. ರೇಚಕವೆಂದರೆ, ನಿಲ್ಲಿಸಲ್ಪಟ್ಟ ಶ್ವಾಸದಲ್ಲಿ ಸ್ವಲ್ಪಮಟ್ಟಿಗೆ ಹೊರಗೆಬಿಡುವುದು. ಪೂರಕಕಾಲದಲ್ಲಿಒಂದು ಮೂಗಿನಿಂದ ಶ್ವಾಸವೆಳೆಯಲ್ಪಡುವುದು. ರೇಚಕಕಾಲದಲ್ಲಿ ಮತ್ತೊಂದುಮೂಗಿನಿಂದ ಶ್ವಾಸವು ಬಿಡಲ್ಪಡುವುದು. ಈ ರೀತಿಯಾಗಿ ಶ್ವಾಸವನ್ನಾಕರ್ಷಣ ಮಾಡುವುದರಲ್ಲಿಯು ಬಿಡುವುದರಲ್ಲಿಯೂ 'ಹಂಸಃ-ಸೋಹಂ' ಎಂಬದಾಗಿ ಸರಿಯಾಗಿಯು ತಲೆಕೆಳಗಾಗಿಯೂ ಪ್ರಕಾಶಿಸುವ ಅಜಪಾಮಂತ್ರದಿಂದ "ತತ್ತ್ವಮಸಿ" ಎಂಬುವ ಸ್ಥಾನದಲ್ಲಿ ಹೇಳಲ್ಪಡುವ ಜೀವಬ್ರಹ್ಮೈಕ್ಯವನ್ನು ಇವರು ಪುನಃಪುನಃ ಚಿಂತಿಸುವಂತವರಾಗಿರುತ್ತಾರೆ. " ಸಕಾರೇಣಬಹಿರ್ಯಾತಿಹಕಾರೇಣವಿಶೇತ್ಪುನಃ| ಪಾ್ರಣಸ್ತತ್ರಸಏವಾಹಂ ಹಂಸಇತ್ಯನುಚಿಂತಯೇತ್" ಎಂಬಪ್ರಮಾಣವೇ ಅರ್ಥಕ್ಕೆ ಆಧಾರವಾಗಿರುವುದೆಂದರಿಯಬೇಕು. ||೨೯||

(ಗೀ|| ವಿ||) (ಮೇಲೆ ವಿವರಿಸಿರುವ ಅರ್ಥವಲ್ಲದೆ ಇನ್ನೊಂದರ್ಥವನ್ನೂ ಹೇಳಿರುತ್ತಾರೆ.) ಪಾ್ರಣಾರ್-ವಾಗಿಂದಿ್ರಯ ದೇವತೆಗಳನ್ನು, ಪಾ್ರಣೇಷುಜುಹ್ವತಿ- ಮನಸ್ಸೇಮೊದಲಾದ ಉತ್ತಮ ದೇವಾಧೀನರನ್ನಾಗಿ ಧ್ಯಾನಿಸುತ್ತಾರೆ. ಈ ಪಕ್ಷದಲ್ಲಿ ನಿಯತಾಹಾರವೆಂಬುವುದನ್ನು ಭಗವತ್ಪೂಜಾ ಎಂಬದಾಗಿ ಪ್ರತ್ಯೇಕವಾದ ಯಜ್ಞವನ್ನಾಗಿ ಭಾವಿಸಬೇಕು. ... ... ... ||೨೯½||

ಮೂ॥ ಸರ್ವೇಽಪ್ಯೇತೇಽಯಜ್ಞವಿದೋ ಯಜ್ಞಕ್ಷಪಿತ
ಕಲ್ಮಷಾಃ ॥ ಯಜ್ಞಶಿಷ್ಟಾಮೃತಭುಜೋ ಯಾಂತಿಬ್ರ
ಹ್ಮಸನಾತನಂ ॥ ... ... ॥೩೦॥

ಪ॥ ಸರ್ವೇ-ಅಪಿ-ಏತೇ-ಯಜ್ಞವಿದಃ-ಯಜ್ಞಕ್ಷಪಿತಕಲ್ಮಷಾಃ । ಯಜ್ಞಶಿಷ್ಟಾಮೃತ
ಭುಜಃ-ಯಾಂತಿ-ಬ್ರಹ್ಮ-ಸನಾತನಂ ॥ ... ... ॥೩೦॥

ಅ॥ ಏತೇಸರ್ವೇಪಿ- ಇವರೆಲ್ಲರೂ, ಯಜ್ಞವಿದಃ- ಯಜ್ಞವನ್ನರಿತವರು, ಯಜ್ಞಕ್ಷಪಿ
ತಕಲ್ಮಷಾಃ- ಯಜ್ಞದಿಂದ ಪಾಪವನ್ನು ಹೋಗಲಾಡಿಸಿಕೊಂಡವರು, ಯಜ್ಞಶಿಷ್ಟಾ
ಮೃತಭುಜಃ- ಯಜ್ಞಶೇಷವೆಂಬ ಅಮೃತವನ್ನು ಭೋಜನಮಾಡುವಂತವರು,(ಅಮೃತ
ವೆಂದರೆ ಯಜ್ಞಶಿಷ್ಟಾನ್ನವು) ಸನಾತನಂ ಬ್ರಹ್ಮ- ಶಾಶ್ವತವಾದ ಪರಬ್ರಹ್ಮವನ್ನು,
ಯಾಂತಿ-ಹೊಂದುವರು. ... ... ॥೩೦॥

(ರಾ॥ ಭಾ॥) ದ್ರವ್ಯಯಜ್ಞವೇ ಮೊದಲಾದ ಪ್ರಾಣಾಯಾಮ ಪರ್ಯಂತವಾಗಿರುವ ಪೂರ್ವೋಕ್ತವಾದ ಕರ್ಮಯೋಗಗಳ ಒಳಭೇದಗಳಲ್ಲಿ ತಮ್ಮತಮ್ಮಗಳಿಗಿಷ್ಟವಾದ ವುಗಳನ್ನು ಅನುಷ್ಠಿಸುವ ಇವರೆಲ್ಲರೂ "ಸಹಯಜ್ಞಾಃಪ್ರಜಾಸ್ಸೃಷ್ಟ್ವಾ" (೩॥೧೦॥) ಎಂಬದಾಗಿ ಹಿಂದೆ ಹೇಳಲ್ಪಟ್ಟ ಮಹಾಯಜ್ಞವೇ ಮೊದಲಾದ ನಿತ್ಯ ನೈಮಿತ್ತಿಕ ಕರ್ಮರೂಪವಾಗಿರುವ ಯಜ್ಞವನ್ನರಿತವರು. ಎಂದರೇ ಅಂಥಾಯಜ್ಞವನ್ನನುಷ್ಠಿಸಿದಂತವರು. ಆದುದರಿಂದಲೇ ಇವರು ಸಕಲ ಪಾಪಗಳನ್ನು ಬಿಟ್ಟವರಾಗಿ ಯಜ್ಞಶೇಷವೆಂಬ ಅಮೃತದಿಂದ ಶರೀರವನ್ನು ರಕ್ಷಿಸಿಕೊಂಡು ಶಾಶ್ವತವಾದ ಪರಮಪದವನ್ನುಹೊಂದುವರು.॥೩೦॥

ಮೂ॥ ನಾಯಂ ಲೋಕೋಽಸ್ತ್ಯಯಜ್ಞಸ್ಯ ಕು
ತೋಽನ್ಯಃಕುರುಸತ್ತಮ ॥ ... ॥೩೧॥

ಪ॥ ನ-ಅಯಂ-ಲೋಕಃ- ಅಸ್ತಿ- ಅಯಜ್ಞಸ್ಯ- ಕುತಃ- ಅನ್ಯಃ- ಕುರುಸತ್ತಮ॥

ಅ॥ ಅಯಜ್ಞಸ್ಯ-ಯಜ್ಞವನ್ನು ಮಾಡದವನಿಗೆ, ಅಯಂಲೋಕಃ- ಈಲೋಕವು,
ನಾಸ್ತಿ- ಇಲ್ಲವು, ಅನ್ಯಃ- ಇತರವಾದ ಸ್ವರ್ಗಾದಿಲೋಕವು, ಕುತಃ- ಎಲ್ಲಿ. ॥೩೧॥

(ಶಂ॥ ಭಾ॥) ಈ ಪ್ರಕಾರವಾಗಿರುವ ಯಜ್ಞಗಳನ್ನನುಷ್ಠಿಸಿ ಯಜ್ಞಾನುಷ್ಠಾನಕಾಲವಲ್ಲದ ಇತರ ಕಾಲಗಳಲ್ಲಿ ಯಜ್ಞಶೇಷಾನ್ನವೆಂಬ ಅಮೃತವನ್ನನುಭವಿಸುವಂತವರು ಮೋಕ್ಷಾಪೇಕ್ಷೆಯುಳ್ಳವರಾಧರೆ ಚಿತ್ತಶುದ್ಧಿಯನ್ನು ಹೊಂದಿ ಅನಂತರದಲ್ಲಿ ಜ್ಞಾನದ್ವಾರಾಮೋಕ್ಷ

ವನ್ನು ಹೊಂದುವರು. ಈ ಯಜ್ಞಗಳಲ್ಲಿ ಯಾವದೊಂದು ಯಜ್ಞ ವನ್ನೂ ಮಾಡದೇ ಇರುವವರಿಗೆ ಸರ್ವಪ್ರಾಣಿ ಸಾಧಾರಣವಾದ ಈಲೋಕವೇ ಇಲ್ಲವು. ಹೀಗಿರುವಲ್ಲಿ ಅಸಾಧಾರಣವಾದ ಪುಣ್ಯಲೋಕಪ್ರಾಪ್ತಿಯು ಲಭಿಸಲಾರದೆಂಬುವುದು ಕೈಮುತಿಕನ್ಯಾಯ ಸಿದ್ಧವಾಗಿರುವುದೆಂದರಿಯಬೇಕು. ... ... ‖೩೧‖

(ಅ‖ ಗಿ‖) ಈ ಪೂರ್ವೋಕ್ತಗಳಾದ ಯಜ್ಞಗಳನ್ನು ತಿಳಿದು ಅನುಷ್ಠಿಸುವಂತವರಿಗೆ ಸಾಕ್ಷಾತ್ತಾಗಿಯೇ ಮೋಕ್ಷ ವುಂಟಾಗುವುದೆಂದು "ಯಾಂತಿಬ್ರಹ್ಮ" ಎಂಬುವ ವಾಕ್ಯದಿಂದ ಹೇಳುವಪಕ್ಷದಲ್ಲಿ ಕ್ರಮಕ್ರಮವಾಗಿ ಊರ್ಧ್ವಲೋಕಗಳಿಗೆ ಹೋಗಿ ಮೋಕ್ಷವಂಹೊಂದುತ್ತಾರೆಂಬದಾಗಿ ಅರ್ಥವಂ ಪ್ರತಿಪಾದಿಸುವ ಶ್ರುತಿವಾಕ್ಯವು ವಿರೋಧಿಸಲಾರದೊ ಎಂದರೆ ಅಲ್ಲಿನ 'ಯಾಂತಿ' ಎಂಬಪದಕ್ಕೆ ಹೋಗುತ್ತಾರೆಂಬ ಅರ್ಥವನ್ನು ಹೇಳಬೇಕಾಗಿರುವುದರಿಂದ ಕ್ರಮಕ್ರಮವಾಗಿ ಊರ್ಧ್ವಲೋಕಗಳಂ ಹೊಂದಿ ಅಲ್ಲಿಂದ ಮೋಕ್ಷವಂ ಹೊಂದುತ್ತಾರೆಂದು ಕ್ರಮಮುಕ್ತಿಯೇ ಹೇಳಲ್ಪಡುವುದರಿಂದ ಶ್ರುತಿ ವಿರೋಧ ಪ್ರಸಂಗವಿಲ್ಲವೆಂದರಿಯಬೇಕು. ಮತ್ತು ಇಲ್ಲಿ 'ಕುರುಸತ್ತಮ' ಎಂಬ ಪದದಿಂದ ಈಗ ಹೇಳಲ್ಪಟ್ಟ ಯಜ್ಞಗಳಲ್ಲಿ ಕುರುಕುಲ ಪ್ರಧಾನನಾದ ಅರ್ಜುನನಿಗೆ ಚಿತ್ತಸಮಾಧಾನವು ಅನಾಯಾಸದಿಂದ ಲಭ್ಯವಾಗುವುದೆಂದು ಹೇಳಿತೆಂದರಿಯಬೇಕು. ... ... ‖೩೧‖

(ರಾ‖ ಭಾ‖) ಅಯಜ್ಞಸ್ಯ-ಮಹಾಯಜ್ಞ ಪೂರ್ವಕವಾದ ನಿತ್ಯನೈಮಿತ್ತಿಕ ಕರ್ಮರಹಿತನಾದವನಿಗೆ, ನಾಯಂಲೋಕಃ- ಈ ಪ್ರಾಕೃತಲೋಕವಿಲ್ಲವು, ಪ್ರಾಕೃತಲೋಕಕ್ಕೆ ಸೇರಿದ ಧರ್ಮಾರ್ಥ ಕಾಮಗಳೆಂಬ ಪುರುಷಾರ್ಥಗಳೇ ಸಿದ್ಧಿಸಲಾರವು. ಇದಕ್ಕಿಂತಲೂ ಅನ್ಯವಾದ ಮೋಕ್ಷವೆಂಬ ಪುರುಷಾರ್ಥವು ಹೇಗೆ ಲಭಿಸುವುದೆಂದರ್ಥವು. ಇಲ್ಲಿ ಪರಮಪುರುಷಾರ್ಥವೆಂಬದಾಗಿ ಮೋಕ್ಷವು ಪ್ರಸ್ತುತವಾಗಿರುವುದರಿಂದ ಇದಕ್ಕಿಂತಲೂ. ಇತರಗಳಾದ ಧರ್ಮಾರ್ಥಕಾಮಗಳೆಂಬ ಪುರುಷಾರ್ಥಗಳು ಮೋಕ್ಷ ವಿರೋಧಿಗಳು. ಈ ಪ್ರಾಕೃತ ಲೋಕದಲ್ಲಿ ಮೋಕ್ಷವಿರೋಧಿಗಳಾದ ಪುರುಷಾರ್ಥಗಳೇ ಲಭಿಸುವದಿಲ್ಲವು. ಹೀಗಿರುವಲ್ಲಿ ಮೋಕ್ಷವು ಹೇಗೆ ಸಿದ್ಧಿಸುವುದೆಂದರ್ಥವು. ... ‖೩೧‖

ಮೂ|| ಏವಂಬಹುವಿಧಾ ಯಜ್ಞಾ ವಿತತಾಬ್ರಹ್ಮಣೋ
ಮುಖೇ | ಕರ್ಮಜಾನ್ವಿದ್ಧಿತಾನ್ ಸರ್ವಾನೇವಂಜ್ಞಾ
ತ್ವಾ ವಿಮೋಕ್ಷ್ಯಸೇ || ... ||೩೨||

ಪ|| ಏವಂ- ಬಹುವಿಧಾಃ- ಯಜ್ಞಾಃ- ವಿತತಾಃ ಬ್ರಹ್ಮಣಃ- ಮುಖೇ| ಕರ್ಮಜಾನ್- ವಿದ್ಧಿ- ತಾನ್- ಸರ್ವಾನ್- ಏವಂ- ಜ್ಞಾತ್ವಾ- ವಿಮೋಕ್ಷ್ಯಸೇ || ||೩೨||

ಅ|| ಏವಂ- ಈ ಪ್ರಕಾರಗಳಾದ, ಬಹುವಿಧಾಃ- ಬಹುವಿಧಗಳಾಗಿರುವ, ಯಜ್ಞಾಃ- ಯಜ್ಞಗಳು, (ರಾ) ಕರ್ಮಯೋಗಗಳು, ಬ್ರಹ್ಮಣೋಮುಖೇವಿತತಾಃ- ವೇದಗಳ ಮುಖದಲ್ಲಿವಿವರವಾಗಿ ಹೇಳಲ್ಪಟ್ಟಿರುವುವು. (ರಾ) ಆತ್ಮಸ್ವರೂಪನಿಶ್ಚಯವಂ ಹೊಂದುವುದಕ್ಕೆ ಕಾರಣಗಳಾಗಿರುವುವು. ಸರ್ವಾನ್ ತಾನ್- ಆಸಮಸ್ತಯಜ್ಞಗಳನ್ನು, ಕರ್ಮಜಾನ್- ಮನಸ್ಸು- ವಾಕ್- ಕಾಯಗಳೆಂಬ ಕರಣತ್ರಯವ್ಯಾಪಾರಗಳೆಂಬ ಕರ್ಮದಿಂದುಂಟಾದವುಗಳೆಂಬದಾಗಿ, (ರಾ) ಸರ್ವಾನ್ತಾನ್ಕರ್ಮಜಾನ್ - ಪೂರ್ವೋಕ್ತವಾದ ಸಕಲ ಕರ್ಮಯೋಗಗಳು ಪ್ರತಿದಿನದಲ್ಲಿಯೂ ತಾನನುಷ್ಠಿಸುವ ನಿತ್ಯನೈಮಿತ್ತಿಕ ಕರ್ಮಗಳಿಂದುಂಟಾಗುವವೆಂಬದಾಗಿ,ವಿದ್ಧಿ-ತಿಳಿದುಕೊಳ್ಳು, ಏವಂ-ಈಪ್ರಕಾರವಾಗಿ,ಜ್ಞಾತ್ವಾ-ತಿಳಿದು, (ಜ್ಞಾನನಿಷ್ಠನಾಗಿ,) (ರಾ) ಈರೀತಿಯಾಗಿ ತಿಳಿದು ಅನುಷ್ಠಿಸುತಲೂಇದ್ದರೆ, ವಿಮೋಕ್ಷ್ಯಸೇ- ಕರ್ಮಬಂಧದಿಂದ ಬಿಡಲ್ಪಡುತ್ತೀಯೆ, (ರಾ) ಮೋಕ್ಷವಂ ಹೊಂದುತ್ತೀಯೆ || ||೩೨||

(ಶಂ|| ಭಾ||) ಈ ಪ್ರಕಾರವಾಗಿ ವೇದದಲ್ಲಿ "ವಾಕ್ಕಿನಲ್ಲಿ ಪ್ರಾಣವನ್ನು ಹೋಮವಂ ಮಾಡುವೆವು" ಎಂಬಿದೇ ಮೊದಲಾದ ಅನೇಕಯಜ್ಞಗಳು ವಿವರಿಸಲ್ಪಟ್ಟಿರುವುವು. ಆತ್ಮನು ನಿರ್ವ್ಯಾಪಾರನಾಗಿಯೂ ಉದಾಸೀನನಾಗಿಯೂ ಇರುವುದರಿಂದ ಕಾಯಿಕ ವಾಚಕ ಮಾನಸಿಕ ಕರ್ಮಗಳಿಂದನುಷ್ಠಿಸತಕ್ಕ ಆ ಯಜ್ಞಗಳು ಆತ್ಮಸಂಬಂಧಿಗಳಲ್ಲವು. ಈರೀತಿಯಾಗಿ ತಿಳಿದುಕೊಂಡರೆ ನೀನು ಸಂಸಾರದಿಂದ ವಿಮುಕ್ತನಾಗುತ್ತೀಯೆಂದರ್ಥವು. ||೩೨||

(ಗೀ|| ವಿ||) ಸಮಸ್ತಯಜ್ಞಗಳಲ್ಲಿಯೂ ಜ್ಞಾನಯಜ್ಞವೇ ಶ್ರೇಷ್ಠವೆಂಬದಾಗಿ ಸ್ತುತಿಮಾಡುವುದಕ್ಕಾಗಿ ಹಿಂದೆ ಹೇಳಿರುವ ಯಜ್ಞಗಳನ್ನುಪಸಂಹಾರಮಾಡುತ್ತಾನೆ. ಏವಂ - ಈಪ್ರಕಾರವಾಗಿ, ಬಹುವಿಧಾಃ- ಬಹುಪ್ರಕಾರಗಳಾದ, ಯಜ್ಞಾಃ-ಯಜ್ಞಗಳು, ಬ್ರಹ್ಮಣಃ- ಪರಮಾತ್ಮನ, ಮುಖೇ - ಮುಖದಲ್ಲಿ, ವಿತತಾಃ- ವಿಸ್ತರಿಸಲ್ಪಟ್ಟಿರುವುವು. ಆದರಿಂದ ಹಿಂದೆ ಹೇಳಿರುವ ಸರ್ವಯಜ್ಞಗಳಿಂದಲೂ ಪರ

ಮಾತ್ಮನೇ ಆರಾಧ್ಯನೆಂಬದಾಗಿ ಹೇಳಿದಂತೆ ಅರಿಯಬೇಕು. ಇದಕ್ಕೆ "ಅಹಂಹಿಸರ್ವಯಜ್ಞಾನಾಂ ಭೋಕ್ತಾಚ ಪ್ರಭುರೇವಚ" (೯||೨೪) ಎಂಬ ಗೀತಾಪ್ರಮಾಣವೇ ಆಧಾರವಾಗಿರುವುದು. ಆದರೇ ಅನೇಕ ಯಜ್ಞಗಳಿರಲಾಗಿ ಕರ್ಮಾತ್ಮಕವಾದ ಯುದ್ಧದಿಂದೇನು ಪ್ರಯೋಜನವು ? ಉಪಾಸನಾದಿರೂಪವಾದ ಯಜ್ಞದಿಂದಲೇ ನಾನು ಮುಕ್ತನಾಗುವೆನೆಂಬ ಶಂಕೆಯನ್ನು ಈ ಕರ್ಮಜ್ಞಾನ್ ಎಂಬದರಿಂದ ಪರಿಹರಿಸುತ್ತಾನೆ. ತಾನ್ಸರ್ವಾನ್_ ಆ ಸಮಸ್ತಗಳಾದ ಯಜ್ಞಗಳನ್ನು, ಕರ್ಮಜಾನ್- ಕಾಯಿಕವಾಚಿಕಮಾನಸಿಕ ಕರ್ಮಗಳಿಂದ ಹುಟ್ಟಿದಂತವುಗಳನ್ನಾಗಿ, ವಿದ್ಧಿ- ತಿಳಿದುಕೊಳ್ಳು; ಏವಂ - ಈರೀತಿಯಾಗಿ, ಜ್ಞಾತ್ವಾ- ತಿಳಿದು, ಯುದ್ಧವನ್ನನುಷ್ಠಿಸಿದರೆ ; ವಿಮೋಕ್ಷ್ಯಸೇ - ಮುಕ್ತನಾಗುತ್ತೀಯೆ. ಸರ್ವಯಜ್ಞಗಳು ವಾಚಿಕಾದಿ ಕರ್ಮಗಳಿಂದುಂಟಾದದ್ದೆಂಬ ಜ್ಞಾನವು ನಿನಗುಂಟಾದರೆ ಮೋಕ್ಷಾರ್ಥವಾಗಿ ಸ್ವಜಾತ್ಯುಚಿತವಾದ ಯುದ್ಧಾದಿಕರ್ಮವನ್ನು ಮಾಡಬೇಕೆಂದು ನಿನಗೇನೇ ಇಚ್ಛೆಯುಂಟಾಗುವುದು. ಆದರಿಂದ "ಸರ್ವವು ಕರ್ಮಜವಾದ ಯಜ್ಞವಾಗಿರುವುದರಿಂದ ವಿಹಿತವಾದ ಯುದ್ಧಕರ್ಮ ಪರಿತ್ಯಾಗವಂ ಮಾಡಿದರೆ ವಿಹಿತಕರ್ಮಪರಿತ್ಯಾಗದಿಂದುಂಟಾದ ಪಾತಿತ್ಯವಲ್ಲದೇ ಬೇರೆಯಾವದೊಂದು ಫಲವೂ ಲಭಿಸಲಾರದು. ಆದುದರಿಂದವಿವೇಕಿಯಾದ ನೀನುವಿಹಿತಕರ್ಮವಾದ ಯುದ್ಧಾದಿಗಳನ್ನು ಬಿಡದೆ ಅವಶ್ಯವಾಗಿ ಅನುಷ್ಠಿಸುತಾಬಂದರೇ ಮುಕ್ತನಾಗುತ್ತೀಯೆಂದರ್ಥವು. ||೩೨||

ಮೂ|| ಶ್ರೇಯಾನ್ದ್ರವ್ಯಮಯಾದ್ಯಜ್ಞಾದ್ಜ್ಞಾನ
ಯಜ್ಞಃಪರಂತಪ | ಸರ್ವಂಕರ್ಮಾಖಿಲಂಪಾರ್ಥ ಜ್ಞಾ
ನೇಪರಿಸಮಾಪ್ಯತೇ || ||೩೩

ಪ || ಶ್ರೇಯಾನ್- ದ್ರವ್ಯಮಯಾತ್- ಯಜ್ಞಾತ್- ಜ್ಞಾನಯಜ್ಞಃ- ಪರಂತಪ | ಸರ್ವಂ- ಕರ್ಮ- ಅಖಿಲಂ- ಪಾರ್ಥ- ಜ್ಞಾನೇ- ಪರಿಸಮಾಪ್ಯತೆ || ||೩೩||

ಅ|| ಹೇಪರಂತಪ- ಎಲೈಶತ್ರುಸಂತಾಪಕನಾದ ಅರ್ಜುನನೇ, ದ್ರವ್ಯಮಯಾತ್-ದ್ರವ್ಯದಿಂದಮಾಡತಕ್ಕ, ಅಥವಾ ದ್ರವ್ಯಮಯವಾದ, ಯಜ್ಞಾತ್ - ಯಜ್ಞಕ್ಕಿಂತಲೂ, ಜ್ಞಾನಯಜ್ಞಃ - ಜ್ಞಾನಯಜ್ಞವು, ಶ್ರೇಯಾನ್- ಶ್ರೇಷ್ಠವು, ಹೇಪಾರ್ಥ- ಎಲೈಕುಂ

ತೀಪುತ್ರನಾದ ಅರ್ಜುನನೇ ಸರ್ವಂ - ಸರ್ವಪ್ರಕಾರವಾದ, ಅಖಿಲಂಕರ್ಮ- ಸಮಸ್ತ ಕರ್ಮವು, ಜ್ಞಾನೇ- ಬ್ರಹ್ಮಜ್ಞಾನದಲ್ಲಿ, ಪರಿಸಮಾಪ್ಯತೇ- ಅಡಗಿರುವುದು. (ಅಥವಾ) ಪೂರ್ತಿಯನ್ನು ಹೊಂದುವುದು. ||೩೩||

(ರಾ|| ಭಾ||)ಕರ್ಮಕ್ಕೆ ಜ್ಞಾನಗರ್ಭತ್ವವಿರುವುದರಿಂದ ಜ್ಞಾನಾಕಾರತ್ವವು ಹೇಳಲ್ಪಟ್ಟಿತು. ಅದರಲ್ಲಿಯೂ ಜ್ಞಾನವನ್ನಡಗಿಸಿಕೊಂಡಿರುವ ಕರ್ಮದಲ್ಲಿ ಜ್ಞಾನಾಂಶಕ್ಕೇನೇ ಪ್ರಾಧಾನ್ಯವಂ ಹೇಳುತ್ತಾನೆ. ಎಲೈ ಶತ್ರುಸಂತಾಪಕನಾದ ಅರ್ಜುನನೇ ಕರ್ಮವು ದ್ರವ್ಯದಿಂದಲೂ ಜ್ಞಾನದಿಂದಲೂ, ಸಾಧಿಸಬೇಕಾಗಿರುವುದರಿಂದ ಯೆರಡು ಅಂಶವಾಗಿರುವುದು. ಅವುಗಳಲ್ಲಿ ದ್ರವ್ಯಮಯವಾದ ಅಂಶಕ್ಕಿಂತಲೂ ಜ್ಞಾನಮಯವಾದಅಂಶವು ಶ್ರೇಷ್ಠವಾದದ್ದು. ಹೇಗೆಂದರೆ ಸಕಲ ಕರ್ಮಗಳೂ, ಮತ್ತು ಈ ಕರ್ಮಕ್ಕಿಂತಲೂ ಅನ್ಯವಾದ ಸಮಸ್ತವೂ ಕೊನೆಯಲ್ಲಿ ಜ್ಞಾನದಿಂದಲ್ಲವೇ ಪೂರ್ಣವಾಗುವುದು. ಯಾವ ಸಾಧನವನ್ನನುಷ್ಠಿಸಿದರೂ ಹೊಂದಬೇಕಾದದ್ದೇನೂ ಆತ್ಮಸಾಕ್ಷಾತ್ಕಾರವಾಗಿರುವುದು. ಅದು ಕರ್ಮಾನುಷ್ಠಾನವಂ ಮಾಡಲಾರಂಭಿಸಿದ ದಿನದಮೊದಲು ಅಭ್ಯಾಸಮಾಡಲ್ಪಟ್ಟು ಕೊನೆಯಲ್ಲಿ ಅದೇಪ್ರಾಪ್ಯವಾದಸಾಕ್ಷಾತ್ಕಾರಜ್ಞಾನದಶೆಯನ್ನು ಹೊಂದುವುದು. ಹೇಗಾದಮೇಲೆ ಕರ್ಮಾಂಶಕ್ಕಿಂತಲೂ ಜ್ಞಾನಾಂಶವೂ ಶ್ರೇಷ್ಠವೆನ್ನಲು ಸಂಶಯವಿಲ್ಲವು. ||೩೩||

(ಗೀ|| ವಿ||) ಹಿಂದೆ ವಿವರಿಸಿರುವ ಯಜ್ಞಗಳಲ್ಲಿ ಯಾವದು ಶ್ರೇಷ್ಠವಾದದ್ದೆಂದರೇ ಸರ್ವಯಜ್ಞಗಳಿಗಿಂತಲೂ ಜ್ಞಾನಯಜ್ಞವೇ ಶ್ರೇಷ್ಠವೆನ್ನುತ್ತಾನೆ. ಎಲೈ ಶತ್ರುಸಂತಾಪಕನಾದ ಅರ್ಜುನನೇ ದೇವತೆಗಳನ್ನುದ್ದೇಶಿಸಿ ದ್ರವ್ಯಗಳಿಂದ ಮಾಡಲ್ಪಡುವ ಯಜ್ಞಗಳಿಗಿಂತಲೂ ಎಂದರೇ ಜ್ಞಾನಯಜ್ಞ ವ್ಯತಿರಿಕ್ತವಾದ ಸರ್ವಯಜ್ಞಗಳಿಗಿಂತಲೂ ಭಗವದ್ಜ್ಞಾನ ಸಂಪಾದಕವಾದ ಜ್ಞಾನಯಜ್ಞವು ಶ್ರೇಷ್ಠವಾದದ್ದು. ಜ್ಞಾನಯಜ್ಞವು ಶ್ರೇಷ್ಠವೆನ್ನುವುದಕ್ಕೆ ಕಾರಣವನ್ನು ಹೇಳುತ್ತಾನೆ. ಅಖಿಲಂ-ಸಶೇಷವಾಗದ "ಸಮುದ್ರಂಮನಸಾಧ್ಯಾಯೀತ"ಎಂಬದಾಗಿ ಕರ್ಮಾಂಗವೆಂಬ ಆಕಾರದಿಂದ ವಿಹಿತವಾಗಿರುವಕರ್ಮಸಮೃದ್ಧ್ಯರ್ಥವಾದ ಸಮುದ್ರಧ್ಯಾನಾದಿಕರ್ಮವು ಜ್ಞಾನವುಂಟಾದರೆ ಸಾರ್ಥಕವಾಗುವಂತೆ ಸಮಸ್ತವಾದ ಕರ್ಮಾನುಷ್ಠಾನಕ್ಕೂ ಜ್ಞಾನವೇ ಫ

ಲವಾಗಿರುವುದೆಂದರ್ಥವು. (ಅಥವಾ)ಅ-ಖಿಲಂ-ವೆಂಬದಾಗಿ ಪದವಿಭಾಗವು ಅ-ಸುತ್ತುಮುತ್ತಲು, ಖಿಲಂ- ಖಿಲವಾದಕರ್ಮವು. ಅಲ್ಪಾಲ್ಪತರವಾಗಿದ್ದರೂ ಕರ್ಮವು ಜ್ಞಾನೋತ್ಪತ್ತಿಯಾದರೇ ಪೂರ್ಣವಾಗುತ್ತದೆಂದರಿಯಬೇಕು. ಜ್ಞಾನವೆಂಬ ಫಲದಿಂದಲೆ ಕರ್ಮವು ಪೂರ್ಣವಾಗುವುದು. ... ... ||೩೩||

ಮೂ|| ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ | ಉಪದೇಕ್ಷ್ಯಂತಿತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ | ... ||೩೪||

ಪ|| ತತ್- ವಿದ್ಧಿ - ಪ್ರಣಿಪಾತೇನ- ಪರಿಪ್ರಶ್ನೇನ- ಸೇವಯಾ | ಉಪದೇಕ್ಷ್ಯಂತಿ- ತೇ-ಜ್ಞಾನಂ- ಜ್ಞಾನಿನಃ- ತತ್ತ್ವದರ್ಶಿನಃ || ||೩೪||

ಅ|| ಹೇಪಾಂಡವ- ಎಲೈ ಅರ್ಜುನನೇ, ತತ್ತ್ವದರ್ಶಿನಃ- ಆತ್ಮತತ್ತ್ವವಂ ತಿಳಿದಿರುವ, ಜ್ಞಾನಿನಃ-ಜ್ಞಾನಿಗಳು, ತತ್ - ಆ ಆತ್ಮವಿಷಯವಾದ, ಜ್ಞಾನಂ - ಜ್ಞಾನವನ್ನು, ಪ್ರಣಿಪಾತೇನ- ಸಾಷ್ಟಾಂಗವಾಗಿ ನಮಸ್ಕಾರಮಾಡುವುದರಿಂದಲೂ, ಪರಿಪ್ರಶ್ನೇನ- ಚನ್ನಾಗಿಪ್ರಶ್ನೆಮಾಡುವುದರಿಂದಲೂ, ಸೇವಯಾ - ಶುಶ್ರೂಷೆಮಾಡುವುದರಿಂದಲೂ, ಉಪದೇಕ್ಷ್ಯಂತೀತಿ- ಉಪದೇಶಿಸುತ್ತಾರೆಂಬದಾಗಿ, ವಿದ್ಧಿ - ತಿಳಿದುಕೊಳ್ಳುವಂತವನಾಗು.

(ರಾ||ಭಾ)ಎಲೈ ಅರ್ಜುನನೇ ಕರ್ಮಯೋಗಾನುಷ್ಠಾನದಲ್ಲಿ ಪ್ರಯತ್ನಿಸಿ, ಪುನಃಪುನಃಆತ್ಮಸಾಕ್ಷಾತ್ಕಾರ ಸಿದ್ಧಿಯಂಪೊಂದಿರುವಜ್ಞಾನಿಗಳಸನ್ನಿಧಿಗೆಹೋಗಿ ಅವರಿಗೆಸಾಷ್ಟಾಂಗದಂಡವತ್ಪ್ರಣಾಮಗಳಂ ಮಾಡಿ ಅವರಿಗುಚಿತವಾದ ಶುಶ್ರೂಷೆಯನ್ನಾಚರಿಸ್ಯನಿನ್ನ ಆಂತರ ಪರಿಪಾಕಾನುಗುಣವಾದ "ಅವಿನಾಶಿತು ತದ್ವಿದ್ಧಿ" (೨||೧೭||) ಎಂಬುವುದಂ ಮೊದಲುಮಾಡಿ "ಏಷಾತೇಽಭಿಹಿತಾಸಾಂಖ್ಯೇ" (೨||೩೯||) ಎಂಬ ಶ್ಲೋಕಪರ್ಯಂತವಾಗಿ ನಾವು ಉಪದೇಶಮಾಡಿರುವ ಆತ್ಮಜ್ಞಾನವನ್ನು ಕುರಿತು ಚನ್ನಾಗಿ ಪ್ರಶ್ನೆಮಾಡಿದರೆ ಅವರುಗಳು ಜ್ಞಾನವನ್ನರಿಯಲಪೇಕ್ಷೆಯಿಂದ ಪ್ರಶ್ನೆವಂ ಗೆಯ್ಯುವ ನಿನ್ನ ಆಶಯವಂ ಕಂಡು ಜ್ಞಾನೋಪದೇಶವಂ ಮಾಡುವರು. ... ||೩೪||

(ಗೀ|| ವಿ||) ಕರ್ಮಕ್ಕಿಂತಲೂ ಜ್ಞಾನವು ಅಧಿಕವಾಗಿರುವುದರಿಂದ ಅದನ್ನು ಸಂಪಾದಿಸೆಂದು ಶ್ರೀಕೃಷ್ಣನರ್ಜುನನಿಗುಪದೇಶಿಸುತ್ತಾನೆ. ಕರ್ಮಕ್ಕಿಂತಲೂ ಜ್ಞಾನವಧಿಕವಾದುದರಿಂದ (ಅಥವಾ) ಕರ್ಮವುಜ್ಞಾ

ನದಿಂದಲೇ ಫಲವತ್ತಾಗಿರುವುದರಿಂದ ಜ್ಞಾನಿಗಳು ನೀನುಮಾಡುವ ಪ್ರಾ
ಣಿಪಾತಾದಿ ಪೂರ್ವಕವಾದ ಪ್ರಶ್ನೆಯಿಂದ ಜ್ಞಾನಜನಕವಾದ ಶಾಸ್ತ್ರಗಳ
ನ್ನುಪದೇಶಿಸುತ್ತಾರೆ. ಅವರುಗಳಿಂದ ತಿಳಿಯಬೇಕಾದದ್ದನ್ನು ತಿಳಿದು
ಕೊಳ್ಳುವಂತವನಾಗು. ಅರ್ಜುನನು ಜ್ಞಾನಿಯಾಗಿದ್ದರೂ, ಜ್ಞಾನವು ತಿರೋ
ಹಿತವಾಗದೆ ಇರುವುದಕ್ಕಾಗಿ ಇಲ್ಲಿ ವಿದ್ಧಿ-ತಿಳಿದುಕೊಳ್ಳೆಂದು ಹೇಳಿತು.
"ನತ್ವೇವಾಹಂಜಾತು" (೨॥೧೨) ಎಂಬಿದೇ ಮೊದಲಾದ ಶ್ಲೋಕಗ
ಳಿಂದ ಆತ್ಮಜ್ಞಾನವು ಸಂಗ್ರಹವಾಗಿ ಉಪದೇಶಿಸಲ್ಪಟ್ಟಿರುವುದರಿಂದಲೂ
"ಜ್ಞಾನಂತೇಽಹಂಸವಿಜ್ಞಾನಂ" (೭॥೨) ಎಂಬದಾಗಿ ಮುಂದೆಯೂ ಆತ್ಮ
ಜ್ಞಾನವು ಉಪದೇಶಿಸಲ್ಪಡುವುದರಿಂದಲೂ, ಅರ್ಜುನನಿಗೆ ಜ್ಞಾನೋಪ
ದೇಶಕ್ಕಾಗಿಯೇ ಈ ಗೀತಾಶಾಸ್ತ್ರವು ಪ್ರವೃತ್ತವಾಗಿರುವುದರಿಂದ
ಲೂ ಇಲ್ಲಿ ಉಪದೇಕ್ಷ್ಯಂತಿ, ಎಂಬ ಪದಕ್ಕೆ ನಾವೇ ಉಪದೇಶಿಸುವೆ
ವೆಂಬ ಅರ್ಥವನ್ನರಿಯಬೇಕು. ... ... ॥೩೪॥

ಮೂ॥ ಯಜ್ಜ್ಞಾತ್ವಾನಪುನರ್ಮೋಹ ಮೇವಂಯಾಸ್ಯ
ಸಿಪಾಂಡವ। ಯೇನಭೂತಾನ್ಯಶೇಷೇಣದ್ರಕ್ಷ್ಯಸ್ಯಾತ್ಮ
ನ್ಯಥೋಮಯಿ ... ... ॥೩೫॥

ಪ॥ ಯತ್- ಜ್ಞಾತ್ವಾ- ನ- ಪುನಃ - ಮೋಹಂ - ಏವಂ- ಯಾಸ್ಯಸಿ - ಪಾಂಡವ।
ಯೇನ- ಭೂತಾನಿ- ಅಶೇಷೇಣ- ದ್ರಕ್ಷ್ಯಸಿ- ಆತ್ಮನಿ- ಅಥೋ- ಮಯಿ. ॥೩೫॥

ಅ॥ ಹೇ ಪಾಂಡವ- ಎಲೈ ಅರ್ಜುನನೆ, ಯತ್- ಯಾವಜ್ಞಾನವನ್ನು, ಜ್ಞಾತ್ವಾ-
ತಿಳಿದುಕೊಂಡು, ಪುನಃ- ಮರಳಿ, ಏವಂ- ಈಪ್ರಕಾರವಾಗಿ, ಮೋಹಂ- ಮೋಹವನ್ನು
ನಯಾಸ್ಯಸಿ- ಹೊಂದಲಾರೆಯೊ, ಯೇನ- ಯಾವಜ್ಞಾನದಿಂದ, ಅಶೇಷೇಣ-ನಿಶ್ಶೇಷವಾಗಿ,
ಭೂತಾನಿ- ಪ್ರಾಣಿಗಳನ್ನು, ಆತ್ಮನಿ-ನಿನ್ನಲ್ಲಿ, ದ್ರಕ್ಷ್ಯಸಿ - ನೋಡುವಿಯೊ, ಅಥೋ-
ಅನಂತರವಲ್ಲ, ಮಯಿ-ಪರಮಾತ್ಮನಾದ ನನ್ನಲ್ಲಿ, ದ್ರಕ್ಷ್ಯಸಿ- ನೋಡುವಿಯೊ. ॥೩೫॥

(ಶಂ॥ಭಾ॥) ಎಲೈ ಅರ್ಜುನನೆ! ಗುರುವಿನಿಂದ ಉಪದೇಶಿಸಲ್ಪಡುವ
ಅಂತಹ ಜ್ಞಾನಪ್ರಕಾರವನ್ನು ಕೇಳಿದಮೇಲೆ ಈಗ ನೀನು ಯಾವಪ್ರಕಾ
ರವಾಗಿ ಇವರುನನ್ನವರು, ಇವಳು ನನ್ನಭಾರ್ಯೆ, ಇವರು ನನ್ನಮಕ್ಕ
ಳೆಂಬಿದೇ ಮೊದಲಾದ ಅಹಂಕಾರ ಮಮಕಾರರೂಪವಾಗಿರುವ ಮೋ
ಹವಂ ಈಗ ಹೊಂದಿರುತ್ತೀಯೊ ಅಂಥಾ ಅಜ್ಞಾನವಂ ಹೊಂದಲಾರೆ.

ಅಂತಹ ಜ್ಞಾನದಿಂದ ಬ್ರಹ್ಮಾದಿ ಸ್ತಂಬಪರ್ಯಂತಗಳಾದ ಸಮಸ್ತಭೂತಗಳನ್ನು ನಿನ್ನಲ್ಲಿನೋಡುವಿ, ಅನಂತರದಲ್ಲಿ ಅವೆಲ್ಲವನ್ನು ಪರಮೇಶ್ವರನಾದ ನನ್ನಲ್ಲಿನೋಡುವಿ, ಎಂದರೇ ವಾಸುದೇವನಾದ ನನಿಗೂ ಕ್ಷೇತ್ರಜ್ಞರೆಂಬ ಜೀವರಿಗೂ ಸಮಸ್ತವಾದ ವೇದಾಂತಗಳಲ್ಲಿ ಪ್ರತಿಪಾದಿಸಲ್ಪಡುವ ಐಕ್ಯವನ್ನು ತಿಳಿದುಕೊಳ್ಳುತ್ತೀ ಎಂದರ್ಥವು. ಸರ್ವಂ ಬ್ರಹ್ಮ ಎಂಬ ನಿಶ್ಚಯಜ್ಞಾನ ವುಂಟಾಗುವುದೆಂದು ತಾತ್ಪರ್ಯವು.॥೩೫॥

(ರಾ॥ಭಾ॥) ಆತ್ಮಸ್ವರೂಪವನ್ನು ಯಥಾವತ್ತಾಗಿ ನೋಡುವುದೆಂಬ ಸಾಕ್ಷಾತ್ಕಾರಜ್ಞಾನ ಲಕ್ಷಣವನ್ನು ಹೇಳುತಾನೆ. ಯಾವ ಜ್ಞಾನವನ್ನು ಹೊಂದಿದರೇ ದೇಹಾದಿಗಳಲ್ಲಿ ಆತ್ಮಾಭಿಮಾನವನ್ನೂ, ಅದರಿಂದುಂಟಾದ ಮಮತಾಮೊದಲಾದ ಮೋಹವನ್ನು ಹೊಂದಲಾರೆಯೊ, ಯಾವಜ್ಞಾನವನ್ನು ಹೊಂದಿದರೇ ದೇವಮನುಷ್ಯಾದ್ಯಾಕಾರದಿಂದಿರುವ ಸರ್ವಪ್ರಾಣಿಗಳನ್ನು ನಿನ್ನಲ್ಲಿ ನೋಡುವಿಯೊ, ಎಂದರೇ ಪ್ರಕೃತಿಯಿಂದ ಬಿಡಲ್ಪಟ್ಟ ಜೀವಾತ್ಮಸ್ವರೂಪವೆಲ್ಲವೂ ನಿನ್ನಆತ್ಮಸ್ವರೂಪದಂತೆ ಜ್ಞಾನೈಕಾಕಾರವಾಗಿ ನೋಡುವಿಯೊ, ಎಂದುತಾತ್ಪರ್ಯವು. ಈಅರ್ಥವು "ನಿರ್ದೋಷಂಹಿಸಮಂಬ್ರಹ್ಮ ತಸ್ಮಾದ್ಬ್ರಹ್ಮಣಿತೇಸ್ಥಿತಾಃ" (೫॥೧೯)ಎಂಬದಾಗಿ ಹೇಳಲ್ಪಟ್ಟಿರುವುದು. ಆಪ್ರಕಾರವೇ ನನ್ನಲ್ಲಿ ಸಕಲಪ್ರಾಣಿಗಳನ್ನು ನೋಡುವಿಯೊ ಎಂದರೇ ಪ್ರಕೃತಿ ವಿಯುಕ್ತವಾದ ಸಕಲವಾದ ಜೀವಸ್ವರೂಪವನ್ನು ಪರಿಶುದ್ಧವಾದ ನನ್ನ ಸ್ವರೂಪಕ್ಕೆ ಸಮವಾಗಿ ನೋಡುವಿಯೊ, ಎಂದು ಭಾವವು. ಈ ಅರ್ಥವು "ಇದಂ ಜ್ಞಾನ ಮುಪಾಶ್ರಿತ್ಯ ಮಮಸಾಧರ್ಮ್ಯಮಾಗತಾಃ" (೧೪॥೨॥)ಎಂಬುವ ಶ್ಲೋಕದಲ್ಲಿಯೂ ಮುಕ್ತನು ಪುಣ್ಯಪಾಪಗಳಂಬಿಟ್ಟು ಪರಮಸಾಮ್ಯವಂಹೊಂದುವನೆಂಬ ಅರ್ಥವಂ ಪ್ರತಿಪಾದಿಸುವಶ್ರುತಿಯಲ್ಲಿಯೂವ್ಯಕ್ತವಾಗಿರುವುದು. ಇಂಥಾ ವಾಕ್ಯಗಳಿಂದ ಪ್ರಕೃತಿ ವಿಯುಕ್ತವಾಗಿರುವ ಸಮಸ್ತವಾದ ಆತ್ಮವಸ್ತುವು ಪರಸ್ಪರವಾಗಿ ಸರ್ವೇಶ್ವರನೊಡನೆ ಸಮವಾಗಿರುವುದೆಂದರಿಯಬೇಕು. ... ... ॥೩೫॥

(ಗೀ॥ವಿ.)ನೀನು ಯಾವಜ್ಞಾನವಂ ಹೊಂದಿದರೇ,ಆತ್ಮನಿ-ಅನ್ತರ್ಯಾಮಿಯಾಗಿರುವ, ಮಯಿ- ನನ್ನಲ್ಲಿ, (ಅಥವಾ) ಆತ್ಮನಿ- ಸರ್ವವ್ಯಾಪಕ

ನಾದ, ಮಯಿ- ನನ್ನಲ್ಲಿ, ಭೂತಾನಿ- ಸಕಲ ಪ್ರಪಂಚವಿರುವುದಾಗಿ ನೋಡುವಿ ಯೆಂದರ್ಥವು. ... ... ||೩೫||

ಮೂ|| ಅಪಿಚೇದಸಿಪಾಪೇಭ್ಯಃ ಸ್ಸರ್ವೇಭ್ಯಃಪಾಪಕೃತ್ತ
ಮಃ | ಸರ್ವಂಜ್ಞಾನ ಪ್ಲವೇನೈವ ವೃಜಿನಂ ಸಂತರಿ
ಷ್ಯಸಿ || ... ... ||೩೬||

ಪ|| ಅಪಿ- ಚೇತ್- ಅಸಿ- ಪಾಪೇಭ್ಯಃ-ಸರ್ವೇಭ್ಯಃ- ಪಾಪಕೃತ್ತಮಃ| ಸರ್ವಂ- ಜ್ಞಾನ ಪ್ಲವೇನ- ಏವ- ವೃಜಿನಂ- ಸಂತರಿಷ್ಯಸಿ. ... ... ||೩೬||

ಅ|| ಸರ್ವೇಭ್ಯಃಪಾಪೇಭ್ಯಃ- ಸಮಸ್ತಗಳಾದ ಪಾಪಗಳಿಗಿಂತಲೂ,(ತ್ವಂ- ನೀನು) ಪಾಪ ಕೃತ್ತಮಃ- ಅಧಿಕ ಪಾಪಗಳಂ ಮಾಡಿದವನಾಗಿ, ಅಪಿಚೇದಸಿ- ಆದರೂನೂ, ಸರ್ವಂ- ಸಮಸ್ತವಾದ, ವೃಜಿನಂ-ಪಾಪವನ್ನು, ಜ್ಞಾನಪ್ಲವೇನೈವ- ಆತ್ಮಜ್ಞಾನವೆಂಬ ಹಡಗಿ ನಿಂದಲೇ, ಸಂತರಿಷ್ಯಸಿ- ದಾಟುವಂತವನಾಗುತ್ತೀಯೇ. ||೩೬||

ತಾ|| ನೀನು ಸಮಸ್ತಪಾಪಗಳಿಗಿಂತಲೂ ಅಧಿಕವಾದ ಪಾಪಗಳನ್ನು ಮಾಡಿದವನಾಗಿದ್ದರೂ ಪೂರ್ವಾರ್ಜಿತವಾದ ಸಮಸ್ತ ಪಾಪರೂಪವಾಗಿ ರುವ ಸಮುದ್ರವನ್ನು ಆತ್ಮವಿಷಯವಾದ ಜ್ಞಾನರೂಪವಾಗಿರುವ ಹಡಗಿ ನಿಂದಲೇ ದಾಟುವಂತವನಾಗುತ್ತೀಯೆಂದು ತಾತ್ಪರ್ಯವು. ||೩೬||

ಮೂ|| ಯಥೈಧಾಂಸಿಸಮಿದ್ಧೋಽಗ್ನಿರ್ಭಸ್ಮಸಾತ್ಕುರು
ತೇಽರ್ಜುನ | ಜ್ಞಾನಾಗ್ನಿಸ್ಸರ್ವಕರ್ಮಾಣಿ ಭಸ್ಮಸಾತ್ಕು
ರುತೇತಥಾ|| .. ... ||೩೭||

ಪ|| ಯಥಾ- ಏಧಾಂಸಿ- ಸಮಿದ್ಧಃ- ಅಗ್ನಿಃ- ಭಸ್ಮಸಾತ್- ಕುರುತೇ- ಅರ್ಜುನ | ಜ್ಞಾನಾಗ್ನಿಃ- ಸರ್ವಕರ್ಮಾಣಿ- ಭಸ್ಮಸಾತ್- ಕುರುತೇ- ತಥಾ|| ||೩೭||

ಅ|| ಹೇ ಅರ್ಜುನ- ಎಲೈ ಅರ್ಜುನನೆ, ಸಮಿದ್ಧಃ- ಸಮೀಚೀನವಾಗಿ ಜ್ವಲಿಸುತಲಿ ರುವ, ಅಗ್ನಿಃ- ಬೆಂಕಿಯು, ಏಧಾಂಸಿ- ಕಟ್ಟಿಗೆಗಳನ್ನು, ಯಥಾ- ಯಾವರೀತಿಯಾಗಿ, ಭಸ್ಮಸಾತ್ಕುರುತೇ- ಭಸ್ಮವನ್ನಾಗಿ ಮಾಡುವುದೋ, ತಥಾ- ಆ ಪ್ರಕಾರವಾಗಿ, ಜ್ಞಾ ನಾಗ್ನಿಃ- ಆತ್ಮಜ್ಞಾನವೆಂಬ ಬೆಂಕಿಯು, ಸರ್ವಕರ್ಮಾಣಿ- ಸಕಲ ಕರ್ಮಗಳನ್ನು, (ಶಂ|| ಶ್ರೀ ಗೀ|| ವಿ) ಪ್ರಾರಬ್ಧ ಕರ್ಮಮಾತ್ರವಲ್ಲದ ಸಮಸ್ತ ಕರ್ಮಗಳನ್ನೂ, (ರಾ) ಅನಾದಿಕಾಲದಿಂದ ಬರುತಲಿರುವ ಕರ್ಮ ಸಮೂಹವನ್ನು, ಭಸ್ಮಸಾತ್ಕುರುತೆ- ಬೂದಿಯ ನ್ನಾಗಿಮಾಡುವುದು. ... ... ... ||೩೭||

ತಾ|| ಸಮೀಚೀನವಾಗಿ ಪ್ರಜ್ವಲಿಸುತಲಿರುವ ಅಗ್ನಿಯು (ಬೆಂಕಿ

ಯು) ಕಟ್ಟಿಗೆಗಳ ಸಮೂಹವನ್ನು ಹೇಗಾದರೆ ದಹಿಸುವುದೊ ಆಪ್ರ
ಕಾರವೇ ಆತ್ಮ ತತ್ವವಿಷಯಕವಾದ ಜ್ಞಾನವೆಂಬ ಅಗ್ನಿಯು ಜೀವಾತ್ಮ
ನಲ್ಲಿ ಸಂಬಂಧಿಸಿ ಅನಾದಿಕಾಲದಿಂದ ಬಂದಿರುವ ಅನಂತ ಕರ್ಮಸಮೂ
ಹವನ್ನು ಭಸ್ಮವನ್ನಾಗಿ ಮಾಡುವುದು. ॥೩೭॥

(ಶಂ॥ ಭಾ॥) ಜ್ಞಾನವು ಪಾಪವನ್ನು ಹೇಗೆ ನಾಶಪಡಿಸುವುದೆಂದರೆ ಅದನ್ನು ಸದೃಷ್ಟಾಂತವಾಗಿ ಹೇಳುತ್ತಾನೆ. (ಶ್ಲೋಕಾರ್ಥವನ್ನು ಮೇಲಿನಂತೆಯೇ ನೋಡಿಕೊಳ್ಳಬೇಕು.) ಇಲ್ಲಿ ಜ್ಞಾನವೆಂಬ ಅಗ್ನಿಯು ಸಕಲ ಕರ್ಮಗಳನ್ನು ಭಸ್ಮವನ್ನಾಗಿ ಮಾಡುವುದೆಂದರೇ ಬೀಜರಹಿತವಾಗಿಮಾಡುತ್ತದೆಂದರ್ಥವಂ ತಿಳಿಯಬೇಕು. ಜ್ಞಾನಾಗ್ನಿಯು ಸಾಕ್ಷಾತ್ತಾಗಿಯೇ ಸಮಸ್ತ ಕರ್ಮಗಳನ್ನು ಪ್ರಸಿದ್ಧವಾದ ಅಗ್ನಿಯು ಕಟ್ಟಿಗೆಗಳನ್ನಂತೇ ದಹಿಸಲಾರದು. ಆದುದರಿಂದ ಆತ್ಮತತ್ವಜ್ಞಾನವು ಸರ್ವಕರ್ಮಗಳನ್ನು ನಿರ್ಬೀಜವನ್ನಾಗಿ ಮಾಡುವುದಕ್ಕೆ ಕಾರಣವಾಗುವುದೆಂದರಿಯಬೇಕು. ಯಾವ ಕರ್ಮ ಸಾಮರ್ಥ್ಯದಿಂದ ಈ ಶರೀರವು ಪ್ರಾಪ್ತವಾಗಿರುವುದೋ ಅಂಥಾ ಪ್ರಾರಬ್ಧ ಕರ್ಮವು ಅನುಭವಮಾತ್ರದಿಂದಲೇ ನಾಶಹೊಂದಬೇಕಾಗಿರುವುದರಿಂದ ವಿನಾಶವಂ ಹೊಂದಲಾರದು. ಅನೇಕಜನ್ಮಗಳಿಂದ ಸೂಚಿತಗಳಾದ ಕರ್ಮಗಳು ಮತ್ತು ಆಗಾಮಿಕಕರ್ಮಗಳು ಜ್ಞಾನಾಗ್ನಿಯಿಂದ ನಶಿಸಿಹೋಗುವುದೆಂದು ತಿಳಿಯಬೇಕು. (ಈಅರ್ಥವನ್ನು (ಶ್ರೀ॥ ಗೀ॥ ವಿ) ಇವರು ಆದರಿಸಿರುತ್ತಾರೆ.) ॥೩೭॥

ಮೂ ॥ ನಹಿಜ್ಞಾನೇನ ಸದೃಶಂ ಪವಿತ್ರಮಿಹವಿದ್ಯ
ತೇ । ತತ್ಸ್ವಯಂ ಯೋಗ ಸಂಸಿದ್ಧಃ ಕಾಲೇನಾತ್ಮನಿ
ವಿಂದತಿ ॥ ... ... ॥೩೮॥

ಪ ॥ ನ- ಹಿ- ಜ್ಞಾನೇನ - ಸದೃಶಂ- ಪವಿತ್ರಂ- ಇಹ- ವಿದ್ಯತೇ । ತತ್- ಸ್ವಯಂ- ಯೋಗಸಂಸಿದ್ಧಃ- ಕಾಲೇನ- ಆತ್ಮನಿ- ವಿಂದತಿ ॥ ... ॥೩೮॥

ಅ॥ ಇಹ- ಈ ಲೋಕದಲ್ಲಿ, ಜ್ಞಾನೇನ- ಜ್ಞಾನದೊಡನೆ, ಸದೃಶಂ- ಸಮಾನವಾಗಿರುವ, ಪವಿತ್ರಂ- ಪರಿಶುದ್ಧವಾದದ್ದು, ನವಿದ್ಯತೇಹಿ - ಇಲ್ಲವಷ್ಟೆ, ಯೋಗಸಂಸಿದ್ಧಃ- ಯೋಗಸಿದ್ಧಿಯನ್ನು ಹೊಂದಿರುವಂತವನು, (ಶಂ॥ ಕರ್ಮಯೋಗದಿಂದಲೂ ಸಮಾಧಿಯೋಗದಿಂದಲೂ ಸಿದ್ಧಿಯನ್ನು ಹೊಂದಿರುವಂತವನು.) ಕಾಲೇನ - ಬಹುಕಾಲವಾದಮೇಲೆ,

ತತ್- ಆ ಜ್ಞಾನವನ್ನು, (ಶ್ರೀ||) ಆತ್ಮನಿತತ್ - ಆತ್ಮಸ್ವರೂಪ ಜ್ಞಾನವನ್ನು, ಸ್ವಯಂ- ತಾನೆ, ವಿಂದತಿ- ಹೊಂದುತ್ತಾನೆ. ... ... ||೩೮||

(ರಾ|| ಭಾ)ಯಾವಕಾರಣದಿಂದ ಆತ್ಮಜ್ಞಾನಕ್ಕೆ ಸಮಾನವಾದ ಪರಿಶುದ್ಧವಾಗಿರುವ ಬೇರೆವಸ್ತುವಿಲ್ಲವೋ ಆದುದರಿಂದಲೇ ಆತ್ಮಜ್ಞಾನವು ಸಮಸ್ತ ಪಾಪಗಳನ್ನು ನಾಶಪಡಿಸುತ್ತದೆ. ಇಂಥಾ ಆತ್ಮಜ್ಞಾನವನ್ನು, ಉಪದೇಶಾನುಗುಣವಾಗಿ ಪ್ರತಿದಿನದಲ್ಲಿಯೂ ಅನುಷ್ಠಿಸಲ್ಪಡುವ ಜ್ಞಾನಾಕಾರವಾದ ಕರ್ಮಯೋಗದಿಂದ ಸಂಸಿದ್ಧಿಯನ್ನು ಹೊಂದಿರುವಂತವನು ಕಾಲಕ್ರಮವಾಗಿ ಸ್ವಾತ್ಮನಲ್ಲಿ ತಾನೇ ಹೊಂದುತ್ತಾನೆ. ||೩೮||

(ಮಧುಸೂ||) ಒಂದುವೇಳೆ ತಪೋಯಾಗ ದಾನಾದಿಗಳು ಪಾಪಗಳನ್ನು ಹೋಗಲಾಡಿಸಿದರೂ ಪಾಪಕ್ಕೆ ಕಾರಣವಾದ ಅಜ್ಞಾನವನ್ನು ಹೋಗಲಾಡಿಸಲಾರದು. ಅಂತಹ ಅಜ್ಞಾನವು ನಾಶವಾಗದೇ ಹೋದರೆ ಪುನಃಪುನಃ ಪಾಪಪ್ರಾಪ್ತಿಯೇ ಆಗುವುದು. ಜ್ಞಾನವು ಪಾಪಕ್ಕೆ ಮೂಲಭೂತವಾದ ಅಜ್ಞಾನವನ್ನು ಕೂಡಾ ಹೋಗಲಾಡಿಸುವುದು. ಈ ಅತಿಶಯವಂ ನೋಡಿ ತಪೋಯಾಗಾದಿಗಳ್ಯಾವವು ಈ ಜ್ಞಾನಕ್ಕೆ ಸಮವಾಗಲಾರದೆಂಬ ಅಭಿಪ್ರಾಯದಿಂದ ಇಲ್ಲಿ " ನಹಿಜ್ಞಾನೇನಸದೃಶಂ ಪವಿತ್ರಮಿಹವಿದ್ಯತೇ " ಎಂಬದಾಗಿ ಶ್ರೀಕೃಷ್ಣನು ಹೇಳಿರುತ್ತಾನೆ. ||೩೮||

ಮೂ|| ಶ್ರದ್ಧಾವಾಁಲ್ಲಭತೇಜ್ಞಾನಂ ತತ್ಪರಸ್ಸಂಯ
ತೇಂದ್ರಿಯಃ| ಜ್ಞಾನಂಲಬ್ಧ್ವಾಪರಾಂಶಾಂತಿಮಚಿರೇ
ಣಾಧಿಗಚ್ಛತಿ || ... ... ||೩೯||

ಪ|| ಶ್ರದ್ಧಾವಾಁ- ಲಭತೇ- ಜ್ಞಾನಂ- ತತ್ಪರಃ- ಸಂಯತೇಂದ್ರಿಯಃ| ಜ್ಞಾನಂ-ಲಬ್ಧ್ವಾ- ಪರಾಂ- ಶಾಂತಿಂ- ಅಚಿರೇಣ- ಅಧಿಗಚ್ಛತಿ || ... ||೩೮||

ಅ|| ಶ್ರದ್ಧಾವಾಁ- ಗುರೂಪದಿಷ್ಟಗಳಾದ ಅರ್ಥಗಳಲ್ಲಿ ದೃಢವಿಶ್ವಾಸವುಳ್ಳವನಾಗಿಯೂ, (ಗೀ|| ವಿ|| ಆಸ್ತಿಕ ಬುದ್ಧಿಯುಳ್ಳವನಾಗಿಯೂ,) ತತ್ಪರಃ- ಜ್ಞಾನಸಂಪಾದನದಲ್ಲಿಯೇ ಆಸಕ್ತನಾಗಿಯೂ, (ಗೀ|| ವಿ|| ಪರಮಾತ್ಮನಾದ ನನ್ನಲ್ಲಿ ನಿಷ್ಠೆಯುಳ್ಳವನಾಗಿಯೂ) ಸಂಯತೇಂದ್ರಿಯಃ- ಇಂದ್ರಿಯಗಳನ್ನು ನಿಗ್ರಹಿಸುವಂತನಾಗಿಯೂ ಇರುವ ಪುರುಷನು, ಜ್ಞಾನಂ- ಆತ್ಮಜ್ಞಾನವನ್ನು, ಲಭತೇ- ಹೊಂದುತ್ತಾನೆ. ಜ್ಞಾನಂ - ಜ್ಞಾನವನ್ನು, ಲಬ್ಧ್ವಾ- ಹೊಂದಿ, ಪರಾಂ- ಶ್ರೇಷ್ಠವಾದ, ಶಾಂತಿಂ - ಮೋಕ್ಷವನ್ನು, ಅಧಿಗಚ್ಛತಿ- ಹೊಂದುತ್ತಾನೆ. ... ... ... ||೩೯||

(ಶಂ॥ ಭಾ॥) ಯಾವ ಉಪಾಯದಿಂದ ತಪ್ಪದೇ ಜ್ಞಾನವು ಸಂಪ್ರಾಪ್ತವಾಗುವುದೋ ಅದನ್ನು ಉಪದೇಶಮಾಡುವೆನು.—ಜ್ಞಾನವನ್ನು ಹೊಂದಬೇಕೆಂಬ ಶ್ರದ್ಧೆಯುಳ್ಳವನಾಗಿಯೂ, ಶ್ರದ್ಧೆಯುಳ್ಳವನಾದರೂ ಗುರೂಪದಿಷ್ಟವಾದ ಅರ್ಥಶ್ರವಣದಲ್ಲಿ ಆಸಕ್ತಿಯಿಲ್ಲದವನಾದರೆ ಉಪದೇಶಿಸಲ್ಪಡುವ ಅರ್ಥವು ವ್ಯರ್ಥವಾಗಿ ಹೋಗುವುದಾದುದರಿಂದ ಉಪದೇಶ ಸಮಯದಲ್ಲಿ ಉಪದೇಶಿಸಲ್ಪಡುವ ಅಂಶವನ್ನು ಗುರೂಪಾಸನಾದಿಪೂರ್ವಕವಾಗಿ ಗ್ರಹಿಸುವುದರಲ್ಲಿ ಜಾಗರೂಕನಾಗಿಯೂ, ಆ ಪ್ರಕಾರವಾಗಿ ಅನುಷ್ಠಿಸುವಂತವನಾಗಿಯೂ; ಶ್ರದ್ಧೆಯೂ ಅವಧಾನವೂ ಇದ್ದರೂ ಜಿತೇಂದ್ರಿಯನಾಗದೆ ಹೋದರೇ ಜ್ಞಾನವು ಸಿದ್ಧಿಸುವುದಿಲ್ಲವಾದುದರಿಂದ ಅದಕ್ಕಾಗಿ (ಇಂಥಾ ಲೋಪಗಳಿಲ್ಲದಂತೆ ಮಾಡಿಕೊಳ್ಳುವುದಕ್ಕಾಗಿ) ಜಿತೇಂದ್ರಿಯನಾಗಿಯೂಇರುವ ಯೋಗಿಯು ಜ್ಞಾನವನ್ನು ಹೊಂದಿ ಮೋಕ್ಷವೆಂಬ ಹೆಸರುಳ್ಳ ನಿಷ್ಕ್ರಿಯತ್ವವನ್ನು ಶೀಘ್ರವಾಗಿ ಹೊಂದುವನು. ಲೋಕದಲ್ಲಿ ಯಾವ ಮುಮುಕ್ಷುವಿಗೆ ಶ್ರದ್ಧಾ, ತತ್ಪರತ್ವವು, ಜಿತೇಂದ್ರಿಯತ್ವ, ವೆಂಬೀಮೂರು ಸಿದ್ಧಿಸಿರುವುದೋ ಅಂತವನಿಗೆ ಅವಶ್ಯವಾಗಿ ಜ್ಞಾನೋತ್ಪತ್ತಿಯಾಗುವುದು. "ತದ್ವಿದ್ಧಿಪ್ರಣಿಪಾತೇನ" ಎಂಬ (೪॥ ೩೪॥) ಶ್ಲೋಕದಲ್ಲಿ ಹೇಳಿರುವ ಗುರುಪ್ರಣಿಪಾತಾದಿಗಳು ಜ್ಞಾನೋತ್ಪತ್ತಿಗೆ ಕಾರಣವಾಗಿರುವುದೆಂಬದಾಗಿ ಹೇಳಿದ್ದರೂ ಅವು ಬಾಹ್ಯವಾದ ಅಮುಖ್ಯಸಾಧನವಾಗಿಯೂ ಇರುವುದರಿಂದ ಶ್ರದ್ಧಾದಿಕವು ಅಂತರಂಗವಾದ ಮುಖ್ಯಸಾಧನವಾಗಿರುವುದೆಂದು ತಿಳಿಯಬೇಕು. ಕಿಂಚ ನಮಸ್ಕಾರಾದಿಗಳೂ ಮನಃಕಾಪಟ್ಯವುಳ್ಳ ಮಾಯಾವಿಯಲ್ಲಿಯೂ ಕೂಡ ಸಂಭವಿಸಬಹುದಾದುದರಿಂದ ಅಮುಖ್ಯಸಾಧನವಾಗುವುವು. ಮತ್ತು ಇಂತಹ ಜ್ಞಾನವು ಪ್ರಾಪ್ತವಾದ ತತ್ಕ್ಷಣವೇಸರ್ವೋತ್ತಮವಾಗಿರುವ ಮೋಕ್ಷವೆಂಬ ಹೆಸರುಳ್ಳ ಶಾಂತಿಯನ್ನು ಶೀಘ್ರವಾಗಿ ಹೊಂದುವನು. ಅಭ್ಯಾಸಾದಿ ಸಾಧನಗಳಿಲ್ಲದೆ ಕೇವಲವಾಗಿರುವ ಆತ್ಮತತ್ವಜ್ಞಾನದಿಂದಲೇ ಶೀಘ್ರವಾಗಿ ಮೋಕ್ಷವಂ ಹೊಂದುತ್ತಾನೆಂಬೀ ಅರ್ಥವು ಸರ್ವಶಾಸ್ತ್ರ ನ್ಯಾಯಪ್ರಸಿದ್ಧವಾಗಿರುವುದೆಂದು ನಿಶ್ಚಿತವಾಗಿರುವುದು. ... ... ॥೩೯॥

(ರಾ॥ ಭಾ॥) ಅದನ್ನೇ ವಿಶದವಾಗಿ ಹೇಳುತ್ತಾನೆ.— ಈ ಪ್ರಕಾರವಾಗಿ ಉಪದೇಶದಿಂದ ಜ್ಞಾನವನ್ನು ಹೊಂದಿ ಆ ಜ್ಞಾನವು ವೃದ್ಧಿಯಾಗುವ ವಿಷಯದಲ್ಲಿ ಅತ್ಯಂತ ಶ್ರದ್ಧಾಯುಕ್ತನಾಗಿಯೂ ಆರುತ ಏಕಮನಸ್ಕನಾಗಿ ಇಂದ್ರಿಗಳನ್ನು ವಿಷಯಗಳಲ್ಲಿ ಪ್ರವರ್ತಿಸದಂತೆ ಅಡಗಿಸಿದರೆ ಅತಿ ಕ್ಷಿಪ್ರವಾಗಿ ಪೂರ್ವೋಕ್ತವಾದ ಪರಿಪಕ್ವವಾಗಿರುವ ಜ್ಞಾನವನ್ನು ಹೊಂದಿ ಅದರಿಂದ ನಿರತಿಶಯ ಸುಖರೂಪವಾದ ಮೋಕ್ಷವನ್ನು ಹೊಂದುತ್ತಾನೆ. ... ... ॥೩೯॥

ಮೂ॥ ಅಜ್ಞಶ್ಚಾಶ್ರದ್ದಧಾನಶ್ಚ ಸಂಶಯಾತ್ಮಾ ವಿನ
ಶ್ಯತಿ। ನಾಯಂ ಲೋಕೋಽಸ್ತಿನಪರೋ ನಸುಖಂ ಸಂಶ
ಯಾತ್ಮನಃ॥ ... ... ॥೪೦॥

ಪ॥ ಅಜ್ಞಃ- ಚ- ಅಶ್ರದ್ದಧಾನಃ- ಚ- ಸಂಶಯಾತ್ಮಾ- ವಿನಶ್ಯತಿ। ನ- ಅಯಂ-ಲೋಕಃ- ಅಸ್ತಿ- ನ-ಪರಃ- ನ- ಸುಖಂ- ಸಂಶಯಾತ್ಮನಃ॥ ... ॥೪೦॥

ಅ॥ ಅಜ್ಞಃ-ಗುರೂಪದೇಶದಿಂದ ಹೊಂದಲ್ಪಡುವ ಜ್ಞಾನವಿಲ್ಲದವನಾಗಿಯೂ,ಅಶ್ರದ್ದಧಾನಃ- ಗುರುವಿನಿಂದ ಉಪದೇಶಿಸಲ್ಪಟ್ಟ ಜ್ಞಾನವೃದ್ಧಿಗೆ ಸಾಧನವಾಗಿರುವ ಅರ್ಥದಲ್ಲಿ ಶ್ರದ್ಧೆಯಿಲ್ಲದವನಾಗಿಯೂ, ಸಂಶಯಾತ್ಮಾ- ಜ್ಞಾನೋಪದೇಶ ಮಾಡಲ್ಪಟ್ಟರೂ ಸಂಶಯಯುಕ್ತವನಾಗಿಯೂ ಇರುವಂತವನು, (ಗುರುಗಳಿಂದ ಉಪದೇಶಿಸಲ್ಪಡುವ ಅರ್ಥವು ಪುರುಷಾರ್ಥಸಾಧನವಾಗುವುದೋ ಇಲ್ಲವೋ ? ಎಂಬದಾಗಿ ಪ್ರಾಪ್ತವಾಗುವ ಸಂಶಯವುಳ್ಳವನಾಗಿಯೂ ಇರುವಂತವನು,) ವಿನಶ್ಯತಿ- ನಷ್ಟನಾಗುವನು. (ಗೀ॥ ವಿ॥ ನರಕವನ್ನು ಹೊಂದುವನು. ಸಂಶಯಾತ್ಮನಃ- ಸಂಶಯಚಿತ್ತವುಳ್ಳವನಿಗೆ, ಅಯಂಲೋಕಃ - ಈ ಪ್ರಾಕೃತ ಲೋಕವು, ನ- ಇಲ್ಲವು, ಪರಃ- ಪರಲೋಕವು, ನಾಸ್ತಿ- ಇಲ್ಲವು, ಸುಖಂ- ಸುಖವೂ, ನ- ಇಲ್ಲವು. ... ... ... ॥೪೦॥

ತಾ॥ ಈ ಪ್ರಕಾರವಾಗಿ ಉಪದೇಶದಿಂದ ಹೊಂದಲ್ಪಡುವ ಜ್ಞಾನವಿಲ್ಲದವನಾಗಿಯೂ, ಒಂದುವೇಳೆ ಗುರುಗಳಿಂದ ಜ್ಞಾನವು ಉಪದೇಶಿಸಲ್ಪಟ್ಟರೆ ಅದಂ ವೃದ್ಧಿಪಡಿಸಿಕೊಳ್ಳುವ ಉಪಾಯದಲ್ಲಿ ತ್ವರೆಯಿಲ್ಲದವನಾಗಿಯೂ, ಉಪದೇಶಿಸಲ್ಪಡುವ ಅರ್ಥದಲ್ಲಿ ಸಂಶಯಪಡುವಂತವನಾಗಿರುವಂತವನು ಕೆಟ್ಟು ಹೋಗುವನು. ಆತ್ಮ ತತ್ವವಿಷಯವಾದ ಗುರೂಪದಿಷ್ಟವಾದ ಅರ್ಥದಲ್ಲಿ ಸಂಶಯ ಪಡುವಂತವನಿಗೆ ಈ ಪ್ರಾಕೃತ ಲೋಕವೂ ಇಲ್ಲವು; ಧರ್ಮಾರ್ಥ ಕಾಮಗಳೆಂಬ ಪುರುಷಾರ್ಥಗಳೂ

ಸಿದ್ಧಿಸಲಾರವು. ಹೀಗಿರುವಲ್ಲಿ ಮೋಕ್ಷಸಿದ್ಧಿಯಿಲ್ಲವೆಂಬುವುದರಲ್ಲಿ ಹೇಳಬೇಕಾದದ್ದೇನು. ಪುರುಷಾರ್ಥಗಳೆಲ್ಲವೂ ಶಾಸ್ತ್ರೋಕ್ತವಾದ ಕರ್ಮದಿಂದ ಸಿದ್ಧಿಸಬೇಕಾಗಿರುವುದರಿಂದಲೂ ಅಂಥಾ ಕರ್ಮವು ಸಿದ್ಧಿಯಾಗಬೇಕಾದರೆ ದೇಹಕ್ಕಿಂತಲೂ ಅನ್ಯವಾದ ಆತ್ಮಸ್ವರೂಪ ನಿಶ್ಚಯವು ಅದಕ್ಕಪೇಕ್ಷಿತವಾಗಿರುವುದರಿಂದಲೂಅಂತಹದೇಹಾತ್ಮ ವಿವೇಕವಿಲ್ಲದವನಿಗೆ ಯಾವ ಪುರುಷಾರ್ಥವೂ ಸಿದ್ಧಿಸಲಾರದೆಂದಭಿಪ್ರಾಯವು||೪೦||

ಮೂ|| ಯೋಗಸನ್ಯಸ್ತಕರ್ಮಾಣಂ ಜ್ಞಾನಸಂಛಿನ್ನಸಂ
ಶಯಂ | ಆತ್ಮವಂತಂ ನಕರ್ಮಾಣಿ ನಿಬಧ್ನಂತಿ ಧನಂ
ಜಯ || ... ... ||೪೧||

ಪ|| ಯೋಗಸನ್ನ್ಯಸ್ತಕರ್ಮಾಣಂ- ಜ್ಞಾನಸಂಛಿನ್ನಸಂಶಯಂ | ಆತ್ಮವಂತಂ- ನ- ಕರ್ಮಾಣಿ- ನಿಬಧ್ನಂತಿ- ಧನಂಜಯ || ... ... ||೪೧||

ಅ|| ಹೇ ಧನಂಜಯ- ಎಲೈ ಅರ್ಜುನನೇ, ಯೋಗಸನ್ನ್ಯಸ್ತಕರ್ಮಾಣಂ- ಸಕಲ ಕರ್ಮವೂ ಬ್ರಹ್ಮಸ್ವರೂಪವೆಂದು ನೆನೆಸುವುದರಿಂದ ಬಿಡಲ್ಪಟ್ಟ ಕರ್ಮವುಳ್ಳವನಾಗಿಯೂ, (ಶಂ|| ಜ್ಞಾನಯೋಗದಿಂದ ಬಿಡಲ್ಪಟ್ಟ ಕರ್ಮವುಳ್ಳವನಾಗಿಯೂ,) (ರಾ|| ಜ್ಞಾನಾಕಾರವಾಗಿರುವ ಕರ್ಮವುಳ್ಳವನಾಗಿಯೂ,) ಜ್ಞಾನಸಂಛಿನ್ನಸಂಶಯಂ-ಗುರುವಿನಿಂದುಪದೇಶಿಸಲ್ಪಡುವ ಜ್ಞಾನದಿಂದ ಹೋಗಿರುವ ಸಂಶಯವುಳ್ಳವನಾಗಿಯೂ,(ಶಂ|| ಜೀವೇಶ್ವರೈಕ್ಯ ಜ್ಞಾನದಿಂದ ಪರಿಹೃತವಾಗಿರುವಸಂಶಯವುಳ್ಳವನಾಗಿಯೂ) ಆತ್ಮವಂತಂ-ಬ್ರಹ್ಮನಲ್ಲಿಗೃಢನಿಷ್ಠೆಯುಳ್ಳವನಾಗಿಯೂ,(ರಾ||ಉಪದೇಶಿಸಲ್ಪಟ್ಟ ಅರ್ಥದಲ್ಲಿದೃಢವಿಶ್ವಾಸವುಳ್ಳವನಾಗಿಯೂ,) (ಗ||ವಿ ಶ್ರೀ)ಹರಿಭಕ್ತನಾಗಿಯೂ,) (ಶಂ|| ಶ್ರೀ|| ಜಾಗರೂಕನಾಗಿಯೂ ಇರುವಂತವನನ್ನು, ಕರ್ಮಾಣಿ- ಕರ್ಮಗಳು, ನನಿಬಧ್ನಂತಿ- ಕಟ್ಟಲಾರವು. ... ... ||೪೧||

(ಶಂ|| ಭಾ||) ಸರ್ವಾನರ್ಥಗಳಿಗೂ ಕಾರಣವಾದ ಸಂಶಯಜ್ಞಾನವನ್ನಾಶ್ರಯಿಸುವದು ಉಚಿತವಲ್ಲವು, ಅಂತಹ ಸಂಶಯ ಜ್ಞಾನವಂ ಪರಿಹಾರಮಾಡಲು ತಕ್ಕ ಕಾರಣವಿಲ್ಲದಿದ್ದರೆ ಅದರ ಪರಿಹಾರವು ಹೇಗಾಗುವುದು, ಆದುದರಿಂದ ಅದು ನಿವೃತ್ತಿಯಾಗುವ ರೀತಿಯಂ ಹೇಳಬೇಕೆಂಬ ಅರ್ಜುನನ ಪ್ರಶ್ನೆವನ್ನು ತಾನಾಗಿಯೇ ಚಿಂತಿಸಿಕೊಂಡು ಶ್ರುತಿಯುಕ್ತಿಗಳಿಂದ ಸಂಪಾದಿಸಲ್ಪಡುವ ಜ್ಞಾನವು ಸಂಶಯ ನಿವೃತ್ತಿಯುಂಟಾಗುವದಕ್ಕೆ ತಕ್ಕ ಕಾರಣವೆಂಬದಾಗಿ ಈ ಶ್ಲೋಕದಿಂದ

ಶ್ರೀಕೃಷ್ಣನು ಹೇಳುತ್ತಾನೆ. ಪರಮಾರ್ಥ ದರ್ಶನವೆಂಬ ಯೋಗ ದಿಂದ ಬಿಡಲ್ಪಟ್ಟ ಧರ್ಮಾಧರ್ಮ ರೂಪವಾದ ಕರ್ಮವುಳ್ಳವನಾಗಿಯೂ, ಆತ್ಮೇಶ್ವರೈಕ್ಯ ಜ್ಞಾನದಿಂದ ಹೋಗಲಾಡಿಸಲ್ಪಡುವ ಸಂಶಯವುಳ್ಳವ ನಾಗಿಯೂ, ಪುನಃ ಅವಿದ್ಯಾವಶನಾಗದೇ ಅತಿಜಾಗರೂಕನಾಗಿಯೂ ಇರುವವನಿಗೆ ಗುಣಚೇಷ್ಟಾರೂಪವಾಗಿರುವ ಕರ್ಮಗಳು ಇಷ್ಟಾನಿಷ್ಟ ಫಲಗಳನ್ನು ಕೊಡಲಾರವು. ಅಂತವನಿಗೆ ಆ ಕರ್ಮಗಳು ಬಂಧಕವಾ ಗಲಾರವೆಂದರ್ಥವು. ... ... ||೪೧||

(ರಾ|| ಭಾ||) ಈ ಪ್ರಕಾರವಾಗಿ ಉಪದೇಶಿಸಲ್ಪಟ್ಟ ಯೋಗದಿಂದ ಕರ್ಮಸನ್ಯಾಸವಂ ಮಾಡಿ, (ಎಂದರೇ ತಾನು ಮಾಡುವ ಕರ್ಮವನ್ನು ಜ್ಞಾನಾಕಾರವನ್ನಾಗಿ ಭಾವಿಸಿ) ಮತ್ತು ಆ ರೀತಿಯಾದ ಉಪದೇಶದಿಂದ ಆತ್ಮಜ್ಞಾನವಂ ಹೊಂದಿ ಸಮಸ್ತವಾದ ಸಂಶಯಗಳನ್ನು ತ್ಯಾಗಮಾಡಿ ಗುರುವಿನಲ್ಲಿ ಕೇಳಿರುವ ಅರ್ಥದಲ್ಲಿ ದೃಢವಾದ ಮನಸ್ಸಿನೊಡನೆ ಕೂಡಿರುವಂತವನನ್ನು ಸಂಸಾರಕ್ಕೆ ಮೂಲಭೂತವಾದ ಪ್ರಾಚೀನ ಕರ್ಮಗಳ್ಯಾವವು ಬಂಧಿಸಲಾರವು. ... ||೪೧||

ಮೂ|| ತಸ್ಮಾದಜ್ಞಾನ ಸಂಭೂತಂ ಹೃತ್ಸ್ಥಂ ಜ್ಞಾನಾ
ಸಿನಾಽತ್ಮನಃ | ಛಿತ್ವೈನಂಸಂಶಯಂ ಯೋಗ ಮಾತಿ
ಷ್ಠೋತ್ತಿಷ್ಠ ಭಾರತ || ... ||೪೨||

ಇತಿ ಶ್ರೀಭಗವದ್ಗೀತಾಸೂಪನಿಷತ್ಸು ಬ್ರಹ್ಮ ವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನ ಸಂವಾದೇ ಜ್ಞಾನ
ಯೋಗೋನಾಮ ಚತುರ್ಥೋಽಧ್ಯಾಯಃ.

---

ಪ|| ತಸ್ಮಾತ್- ಅಜ್ಞಾನಸಂಭೂತಂ- ಹೃತ್ಸ್ಥಂ-ಜ್ಞಾನಾಸಿನಾ-ಆತ್ಮನಃ| ಛಿತ್ವಾ- ಏನಂ- ಸಂಶಯಂ- ಯೋಗಂ- ಆತಿಷ್ಠ - ಉತ್ತಿಷ್ಠ- ಭಾರತ|| ... ||೪೨||

ಅ|| ಹೇ ಭಾರತ- ಎಲೈ ಭರತವಂಶದಲ್ಲಿ ಹುಟ್ಟಿರುವ ಅರ್ಜುನನೇ! ತಸ್ಮಾತ್- ಅದು ದರಿಂದ, ಆತ್ಮನಃ - ನಿನ್ನ, ಹೃತ್ಸ್ಥಂ- ಆತ್ಮವಿಷಯವಾಗಿಯೂ, ಅಥವಾ ಹೃದಯ ಗತವಾಗಿಯೂ; ಅಜ್ಞಾನಸಂಭೂತಂ- ಅಜ್ಞಾನದಿಂದುಂಟಾದದ್ದಾಗಿಯೂ ಇರುವ,ಏನಂ ಸಂಶಯಂ- ಈ ಸಂಶಯವನ್ನು, ಜ್ಞಾನಾಸಿನಾ - ಜ್ಞಾನವೆಂಬ ಖಡ್ಗದಿಂದ, ಛಿತ್ವಾ -

ಛೇದಿಸಿ, ಯೋಗಂ- ಜ್ಞಾನಸಾಧನವಾದ ಕರ್ಮಯೋಗವನ್ನು, (ರಾ॥ ನನ್ನಿಂದುಪದೇಶಿಸ ಲ್ಪಟ್ಟ ಕರ್ಮಯೋಗವನ್ನು,) ಆತಿಷ್ಠ-ಅನುಷ್ಠಿಸುವಂತವನಾಗು, ಉತ್ತಿಷ್ಠ- ಯುದ್ಧ ವಂ ಮಾಡುವುದಕ್ಕಾಗಿ ಏಳುವಂತವನಾಗಿಯೂ ಆಗು. ... ॥೪೨॥

(ಶಂ॥ ಭಾ॥) ಕರ್ಮಯೋಗಾನುಷ್ಠಾನದಿಂದ ಚಿತ್ತಶುದ್ಧಿಯನ್ನು ಹೊಂದಿ ಅದರಿಂದುಂಟಾದ ಜ್ಞಾನದಿಂದ ಸಂದೇಹಗಳನ್ನು ಹೋಗಲಾ ಡಿಸಿಕೊಂಡವನು ಜ್ಞಾನಾಗ್ನಿಯಿಂದ ದಹಿಸಲ್ಪಟ್ಟಕರ್ಮವುಳ್ಳವನಾದುದ ರಿಂದ ಕರ್ಮಬದ್ಧನಾಗಲಾರನು. ಕರ್ಮಜ್ಞಾನಾನುಷ್ಠಾನ ವಿಷಯಗಳಲ್ಲಿ ಸಂಶಯ ವುಳ್ಳವನು ಕೆಟ್ಟುಹೋಗುವುನಾದುದರಿಂದ, ಪಾಪಿಷ್ಠ ವಾಗಿಯೂ ಅಜ್ಞಾನದಿಂದುಂಟಾದದ್ದಾಗಿಯೂ ಆತ್ಮಜ್ಞಾನ ಪ್ರತಿ ಬಂಧಕವಾಗಿಯೂ ಇರುವ ನಿನ್ನ ಬುದ್ಧಿಸ್ಥವಾದ ಸಂಶಯವನ್ನು ಶೋಕ ಮೋಹಾದಿ ದೋಷಹರವಾದ ಪರಮಾರ್ಥಜ್ಞಾನ ವೆಂಬ ಖಡ್ಗದಿಂದ ಛೇದಿಸಿ ಬ್ರಹ್ಮಸ್ವರೂಪವಾಗಿ ಜ್ಞಾನ ಸಾಧನವಾದ ಫಲಾ ಪೇಕ್ಷಾರಹಿತವಾಗಿರುವ ಕರ್ಮಾನುಷ್ಠಾನವನ್ನು ಮಾಡು.ಭೀಷ್ಮಾದಿ ಗಳು ನನ್ನವರು, ಅವರನ್ನು ಹೇಗೆ ಸಂಹರಿಸುವುದೆಂಬ ಶೋಕ ವನ್ನು ಬಿಟ್ಟು ಕರ್ತೃತ್ವವನ್ನು ನಿನ್ನಲ್ಲಾರೋಪಿಸಿಕೊಳ್ಳದೆ "ಸ ರ್ವಂಬ್ರಹ್ಮ" ಎಂಬುವ ಜ್ಞಾನದಿಂದ ನಾನು ಉಪದೇಶಿಸುವ ದಲ್ಲಿ ದೃಢವಿಶ್ವಾಸವುಳ್ಳವನಾಗಿ ಕ್ಷತ್ರಧರ್ಮವಾದ ಯುದ್ಧವನ್ನು ಮಾ ಡುವುದಕ್ಕಾಗಿ ಯೇಳು. ಈ ಶ್ಲೋಕದಲ್ಲಿ "ಜ್ಞಾನಾಸಿನಾಽತ್ಮನಃ" ಎಂಬುವ ಸ್ಥಾನದಲ್ಲಿ ಆತ್ಮನಃ ಎಂಬದಾಗಿ ಹೇಳಿರುವುದರಿಂದ ಒಬ್ಬ ನಸಂಶಯವು ಮತ್ತೊಬ್ಬನಿಂದ ಹೋಗಲಾಡಿಸ ಕೂಡದಾದುದರಿಂದ ಲೂ,ಆತ್ಮನಿಷ್ಠವಾದ ಸಂಶಯವು ಆತ್ಮನಿಷ್ಠವಾದ ಜ್ಞಾನದಿಂದಲೇ ಹೋಗಲಾಡಿಸಲ್ಪಡುವುದೆಂತಲೂ ಹೇಳಿರುತ್ತದೆ.ಆತ್ಮನಿಷ್ಠವಾದ ಸಂಶ ಯವು ಆತ್ಮನಿಷ್ಠವಾದ ಜ್ಞಾನದಿಂದಲೇ ಹೋಗುವಿಕೆಯೂ, ಒಬ್ಬನ ಸಂಶಯವು ಮತ್ತೊಬ್ಬನಿಂದ ಹೋಗಲಾಡಿಸದೇ ಇರುವಿಕೆಯೂ ಲೋಕಪ್ರಸಿದ್ಧವಾಗಿರುತ "ಆತ್ಮನಃ" ಎಂಬದಾಗಿ ಹೇಳುವುದರಿಂದ ಪ್ರಯೋಜನವೇನಂದರೆ ಲೋಕದಲ್ಲಿ ಸ್ಥಾಣ್ವಾದಿ ವಿಷಯವಾಗಿಯೂ ದೇವದತ್ತನಿಷ್ಠವಾಗಿಯೂ, ಇರುವ ಸಂಶಯವು ಸ್ಥಾಣ್ವಾದಿ ವಿಷ ಯವಾಗಿಯೂ, ದೇವದತ್ತ ನಿಷ್ಠವಾಗಿಯೂ ಇರುವ ಜ್ಞಾನದಿಂದ

ಹೋಗಲಾಡಿಸಲ್ಪಡುವಂತೆ ಪ್ರಕೃತದಲ್ಲಿಯೂ ಆತ್ಮವಿಷಯವೂ ಆತ್ಮನಿಷ್ಠವೂ ಆಗಿರುವ ಜ್ಞಾನವು ಆತ್ಮವಿಷಯವೂ ಆತ್ಮನಿಷ್ಠವೂ ಆಗಿರುವ ಜ್ಞಾನದಿಂದ ಹೋಗಲಾಡಿಸಲ್ಪಡುವುದು. ಆದುದರಿಂದ "ಆತ್ಮನಃ" ಎಂಬುವ ಪದವು ಸಾರ್ಥಕವಾಗಿರುವುದೆಂದರಿಯಬೇಕು. ॥೪೨॥

(ರಾ॥ ಭಾ॥) ಎಲೈ ಅರ್ಜುನನೇ! ಆದುದರಿಂದ ಅಜ್ಞಾನದಿಂದ ನಿನ್ನ ಮನಸ್ಸಿನಲ್ಲುಂಟಾಗಿರುವ ಆತ್ಮವಿಷಯವಾದ ಸಂದೇಹವನ್ನು ನಾನು ಉಪದೇಶಿಸಿರುವ ಆತ್ಮಜ್ಞಾನವೆಂಬ ಕತ್ತಿಯಿಂದಛೇದಿಸಿ ನನ್ನಿಂದುಪದೇಶಿಸಲ್ಪಟ್ಟಿರುವ ಕರ್ಮಯೋಗವನ್ನನುಷ್ಠಿಸಲು (ಏಳು.)ಸನ್ನದ್ಧನಾಗು.॥

---

ಪ್ರಮಾವ್ಯಾಖ್ಯಾನದಲ್ಲಿ ಸಂಗ್ರಹಿಸಿರುವ ಚತುರ್ಥಾಧ್ಯಾಯ

ಸಂಗ್ರಹ ಶ್ಲೋಕವು.

ಶ್ಲೋ॥ ಬಾಹ್ಯಂಕರ್ಮಾಗಮೋಕ್ತಂ ದ್ವಿವಿಧಮಪಿವಿನಶ್ಯತ್ಫಲಂತದ್ವಿಕರ್ಮ ಸ್ಯಾಚ್ಚಾಕರ್ಮಾಪಿಯತ್ಸ್ಯಾದಮೃತ ಫಲಮತಃ ಕರ್ಮನೈಷ್ಕರ್ಮ್ಯಯೋಸ್ತು । ಅನ್ಯೋನ್ಯಂ ಸಾಹಚರ್ಯಂ ಭವತಿತದಖಿಲಂ ಮಾಮಿಹೋದ್ದಿಶ್ಯಕಾರ್ಯಂ ತದ್ವೈಬ್ರಹ್ಮಾರ್ಪಣಂಸ್ಯಾದ್ದ್ವಿವಿಧಯಜನತಃ ಪ್ರಾಹಮಾರ್ಥಂಚತುರ್ಥೇ ॥೪॥

ತಾ॥ ಇಂದ್ರಿಯವ್ಯಾಪಾರ ರೂಪವಾಗಿರುವ ವೇದೋಕ್ತಕರ್ಮವು ವಿಕರ್ಮವೆಂಬದಾಗಿಯೂ ಅಕರ್ಮವೆಂಬದಾಗಿಯೂ ದ್ವಿವಿಧವಾಗಿರುವುದು. ಅನಿತ್ಯವಾದ ಸ್ವರ್ಗಾದಿ ಫಲಗಳಂ ಕೊಡುವುದು ವಿಕರ್ಮವೆಂತಲೂ, ಮೋಕ್ಷಫಲವಂ ಕೊಡುವುದು ಅಕರ್ಮವೆಂತಲೂ ಹೇಳಲ್ಪಡುವುದು. ಆದುದರಿಂದ ಫಲಾಪೇಕ್ಷೆಯಿಂದ ಮಾಡಲ್ಪಡುವ ಕರ್ಮವು ಬಂಧಹೇತುವಾಗುವುದೆಂತಲೂ, ಅಂಥಾ ಕರ್ಮವನ್ನೇ ಫಲಸಂಗವಿಲ್ಲದೇ ಮಾಡಿದರೆ ಅದೇ ಮೋಕ್ಷಸಾಧನವಾಗುವುದೆಂತಲೂ, ಕರ್ಮವನ್ನು ಮಾಡಲಾರನೆಂಬದಾಗಿರುವ ಕರ್ಮಾಭಾವವು ಅಭಿಮಾನವೆಂಬ ಚಿತ್ತವ್ಯಾಪಾರವೇ ಆಗಿರುವುದರಿಂದ ಕರ್ಮವೇ ಆಗುವುದೆಂತಲೂ, ಈ ರೀತಿಯಾಗಿ ಕರ್ಮಾಕರ್ಮವಿವೇಕವನ್ನು ತಿಳಿದು ಸಕಲ ಕರ್ಮಗಳನ್ನು ಪರಬ್ರಹ್ಮೋದ್ದೇಶದಿಂದ ಮಾಡಿದರೇ ಬ್ರಹ್ಮಾರ್ಪಣವಾಗಿ ಬ್ರಹ್ಮಸಾಯುಜ್ಯವನ್ನುಂಟುಮಾಡಿ

ಸುವುದೆಂಬದಾಗಿ ಈ ನಾಲ್ಕನೇ ಅಧ್ಯಾಯದಲ್ಲರ್ಜುನನನ್ನು ಕುರಿತು ಶ್ರೀಕೃಷ್ಣನುಪದೇಶಿಸಿದನೆಂದರಿಯಬೇಕು. ||೪||

ಶ್ರೀ ವಿಶಿಷ್ಟಾದ್ವೈತ ಸಿದ್ಧಾಂತಾನುಸಾರಿಯಾದ
ಸಂಗ್ರಹ ಶ್ಲೋಕವು.

ಶ್ಲೋ || ಪ್ರಸಂಗಾತ್ಸ್ವಸ್ವಭಾವೋಕ್ತಿಃ ಕರ್ಮಣೋಽಕ
ರ್ಮತಾಸ್ಯಚ | ಭೇದಾಜ್ಞಾನಸ್ಯ ಮಾಹಾತ್ಮ್ಯಂ ಚತುರ್ಥಾ
ಧ್ಯಾಯಉಚ್ಯತೇ || ... ||೮||

ತಾ || ಈ ನಾಲ್ಕನೇ ಅಧ್ಯಾಯದಲ್ಲಿ ಪ್ರಾಸಂಗಿಕವಾದ ಶ್ರೀಭಗವದವತಾರೋಕ್ತಿಯು, ಮತ್ತು ಮಾಡತಕ್ಕ ಕರ್ಮಕ್ಕೆ ಜ್ಞಾನಾಕಾರತ್ವವೂ, ಈ ಕರ್ಮಭೇದಗಳೂ ಜ್ಞಾನದ ಮಾಹಾತ್ಮ್ಯವೂ ಪ್ರಪಂಚಿತವಾಗಿರುವುದು. "ಬಹೂನಿಮೇವ್ಯತೀತಾನಿ" (೪|| ೫||) ಇತ್ಯಾದಿಗಳಿಂದ ಶ್ರೀಭಗವದವತಾರೋಕ್ತಿಯೂ "ಕರ್ಮಣ್ಯಕರ್ಮಯಃಪಶ್ಯೇತ್" (೪||೧೮||) ಇತ್ಯಾದಿಗಳಿಂದ ಕರ್ಮಕ್ಕೆ ಅಕರ್ಮತ್ವವೂ, (ಇಲ್ಲಿ ಅಕರ್ಮಶಬ್ದವು ಕರ್ಮಯೋಗಕ್ಕೆ ಸಮೀಪಸ್ಥವಾದ ಆತ್ಮಜ್ಞಾನ ವಿಷಯವಾಗಿರುವುದು.) "ದೈವಮೇವಾಪರೇ" (೪|| ೨೫||) ಇತ್ಯಾದಿಗಳಿಂದ ದೇವಾರ್ಚನೇಂದ್ರಿಯ ನಿರೋಧ ಪ್ರಾಣಾಯಾಮ ಯಾಗದಾನ ಹೋಮತಪಸ್ತೀರ್ಥ ಸೇವಾ ಸ್ವಾಧ್ಯಾಯ ತದರ್ಥಾಭ್ಯಾಸಾದಿ ರೂಪಗಳಾಗಿರುವ ವರ್ಣಾಶ್ರಮ ಧರ್ಮಾಂಗಕಗಳಾದ ತನ್ನ ಜ್ಞಾನಶಕ್ತಿ ರುಚಿಗಳಿಗೆ ತಕ್ಕಂತೆ ಪರಿಗೃಹೀತವಾದ ಕರ್ಮಭೇದಾವಾಂತರ ವಿಶೇಷಗಳೂ, "ಶ್ರೇಯಾನ್ದ್ರವ್ಯಮಯಾದ್ಯಜ್ಞಾತ್" (೪||೩೩||) ಎಂಬುವುದರಿಂದ ಜ್ಞಾನಮಾಹಾತ್ಮ್ಯವೂ ಪ್ರಪಂಚಿತವಾಯಿತೆಂದು ತಿಳಿಯಬೇಕು. ... ... ... ||೮||

"ಪ್ರಸಂಗಾತ್ಸ್ವಸ್ವಭಾವೋಕ್ತಿಃ + ಚತುರ್ಥಾಧ್ಯಾಯ ಉಚ್ಯತೇ" ಎಂಬುವ ಸಂಗ್ರಹ ಶ್ಲೋಕದಂತೆ ಈ ಚತುರ್ಥಾಧ್ಯಾಯಾರ್ಥಗಳನ್ನೊಂದು ಗಾಥೆಯಿಂದ ಸಂಗ್ರಹಿಸುತ್ತಾರೆ.

ಶ್ಲೋ|| ಪಿರವಾವೈತನ್ದಿಡತಾನ್ನೇ ಪಿರಕ್ಕುಮ್ವೈಪ್ಪುರುವೈಕ್ಕ
ಳುಮ್, ತುರುವಾಕ್ಕುರಿಶೈಕಳ್ ತೂಯ್ಮದಿ ತನ್ನಾತ್ತುಲ
ಜ್ಜುಕ್ಕೈಯುಮ್, ಇರವಾಪ್ಪುಯಿರ್ ನಿಲೈಯುಜ್ಜಣ್ಣಿಡುಮು

ಲಕಿನಿಲ್ಕೈಯುಮ್, ಮರ್ಕ್ಕವಾಕ್ಕು ಮಾಯುವನೇ ಯೆನಕ್ಕು
ನ್ನರುಳಿತ್ತನನೇ. ॥೫॥

ಮರ್ಕ್ಕ- ವೇದಗಳಲ್ಲಿ. ವಾಕ್ಕು- ಪ್ರಸಿದ್ಧನಾದ, "ಕರ್ಮಕೃತವಾದ ಉತ್ಪತ್ತಿ ಇಲ್ಲದವನಾದರೂ ಸಂಕಲ್ಪಮಾತ್ರದಿಂದ ಅನೇಕಾವತಾರಗಳಂಮಾಡುವನು,ಎಂಬದಾಗಿ ಶ್ರುತಿಯಲ್ಲಿ ವಿಚಿತ್ರವಾಗಿರುವ ದಿವ್ಯಾವತಾರಪ್ರಯುಕ್ತವಾದ ನಿರಙ್ಕುಶೈಶ್ವರ್ಯಶಾಲಿತ್ವೇನ ಪ್ರಸಿದ್ಧನಾದವನೆಂದರ್ಥವು. ಇದರಿಂದ ಮುಂದೆ ಹೇಳಲ್ಪಡುವ ಅವತಾರಸ್ವರೂಪ ಸ್ವಭಾವಾದಿಗಳಲ್ಲಿ ಶ್ರುತಿಯೇ ಪ್ರಮಾಣವೆಂಬದಾಗಿ ದರ್ಶಿತವಾಯಿತು. ಮಾಯುವನ್-ಮಾಯೆಯುಳ್ಳವನು,ಇಲ್ಲಿ ಮಾಯಾಶಬ್ದದಿಂದ "ಮಾಯಾ ತುವಯುನಂಜ್ಞಾನಂ" ಎಂಬ ಪ್ರಮಾಣಾನುಗುಣವಾಗಿ ಸಂಕಲ್ಪರೂಪ ಜ್ಞಾನವು ವಿವಕ್ಷಿತವು. ಇದರಿಂದ ಭಗವದವತಾರವು ಪುಣ್ಯಪಾಪ ಹೇತುಕವಲ್ಲವು. ಕಿಂತು"ಸಂಭವಾಮ್ಯಾತ್ಮಮಾಯಯಾ" (೪॥೬॥)ಎಂಬಂತೆ ತನ್ನ ಸಂಕಲ್ಪ ಹೇತುಕವೆಂಬದಾಗಿ ದರ್ಶಿತವಾಯಿತು. ಪಿರವಾಮ್ಮೈ-ಪುನಶ್ಚ ಹುಟ್ಟದೇ ಇರುವಿಕೆಯನ್ನು, ತನ್ದಿಡ - ಕೊಡುವುದಕ್ಕೆ, "ಜನ್ಮಕರ್ಮಚಮೇದಿವ್ಯ ಮೇವಂಯೋವೇತ್ತಿತತ್ವತಃ । ತ್ಯಕ್ತ್ವಾದೇಹಂಪುನರ್ಜನ್ಮನೈತಿಮಾಮೇತಿಸೋಽರ್ಜುನ" (೪॥೯॥) ಎಂಬಂತೆ ತನ್ನನ್ನಾಶ್ರಯಿಸಿದವರಿಗೆ ತನ್ನ ಅವತಾರ ರಹಸ್ಯವಂ ತಿಳಿಯುವಿಕೆಯಿಂದ ಪುನರ್ಜನ್ಮಪ್ರಾಪ್ತಿರಹಿತವಾದ ಮೋಕ್ಷವಂ ಕೊಡುವುದಕ್ಕೆಂದರ್ಥವು. ಇದರಿಂದ ಭಗವದವತಾರವು ಸಾಧುಪರಿತ್ರಾಣಕ್ಕಲ್ಲದೇ ಸುಖದುಃಖಾನುಭವಫಲಕವಲ್ಲವೆಂದು ಸೂಚಿತವಾಯಿತು. ಇದು ದುಷ್ಕೃದ್ವಿನಾಶನ ಧರ್ಮಸಂಸ್ಥಾಪನಗಳಿಗೂ ಉಪಲಕ್ಷಣವಾಗಿರುವುದು. ತಾನೇ- ಅಜತ್ವಾವ್ಯಯತ್ವ ಸ್ವಾಭಾವಿಕ ಜ್ಞಾನ ಬಲೈಶ್ವರ್ಯಾದಿ ವಿಶಿಷ್ಟನಾದ ತಾನೆ, ಪಿರಕ್ಕುಮ್ಪರುಮ್ಮೈಕಳುಮ್-ಅವತರಿಸುವ ಮಹಾತ್ಮ್ಯಗಳನ್ನು, ತಾನೇ ಎಂಬುವದರಿಂದ ಸ್ವಭಾವಾಪರಿತ್ಯಾಗವೂ, ಪಿರಕ್ಕುಮ್ ಎಂಬುವುದರಿಂದ ಆ ಅವತಾರ ದಿವ್ಯದೇಹವು ಶುದ್ಧಸತ್ವಮಯವೆಂತಲೂ, ಧರ್ಮಕ್ಕೆ ಕೊರತೆಯುಂಟಾದ ಕಾಲವೇ ಅವತಾರೋಚಿತವಾದಕಾಲವೆಂತಲೂ, ಮತ್ತು ಈ ಅವತಾರವು ಐಚ್ಛಿಕವೆಂತಲೂ ದರ್ಶಿತವಾಗುವುದು. ಇದರಿಂದ ಭಗವದವತಾರಕ್ಕೆ ಸ್ವರೂಪದಿಂದಲೂ, ಪ್ರಕಾರ

ದಿಂದಲೂ, ದ್ರವ್ಯದಿಂದಲೂ, ಕಾರಣದಿಂದಲೂ, ಕಾಲದಿಂದಲೂ, ಪ್ರಯೋಜನದಿಂದಲೂ, ವೈಲಕ್ಷಣ್ಯವು ತೋರಿಸಲ್ಪಟ್ಟಿತು. ತುರವಾ- ಬಿಡಲಶಕ್ಯವಾದ, ಕರಿಶೈಕಳ್- ಕ್ರಿಯೆಗಳು, ಭಗವಂತನಿಂದ ಉಪದೇಶಿಸಲ್ಪಟ್ಟು ವಿವಸ್ವಾನ್ ಮೊದಲಾದ ಸಂಪ್ರದಾಯದಿಂದ ಬಂದವುಗಳಾಗಿಯೂ ಇರುವುದರಿಂದ ಬಿಡಲಶಕ್ಯಗಳಾದ ಕರ್ಮಗಳೆಂದರ್ಥವು. ಇಲ್ಲಿ ಕರಿಶೈ ಎಂಬ ಶಬ್ದದಿಂದ ಕ್ರಿಯಾಸ್ವರೂಪವೂ; ಬಹುವಚನದಿಂದ "ದೈವಮೇವಾಪರೇಯಜ್ಞಂ" ಇದೇ ಮೊದಲಾದ ಶ್ಲೋಕಗಳಿಂದ ಪ್ರತಿಪಾದಿಸಲ್ಪಡುವ ದೇವಾರ್ಚನ, ಇಂದ್ರಿಯ, ಪ್ರಾಣಾಯಾಮ, ಯೋಗ, ದಾನ, ಹೋಮ, ತಪ, ತೀರ್ಥಸೇವಾ, ಸ್ವಾಧ್ಯಾಯ, ತದರ್ಥಾಭ್ಯಾಸಾದಿ ರೂಪತತ್ವಾನ್ತರ ಭೇದಗಳೂ; ತುರವಾ ಎಂಬುವುದರಿಂದ ಅವುಗಳಿಗೆ ಪ್ರಾಮಾಣಿಕತ್ವವೂ ಪ್ರದರ್ಶಿತವಾಯಿತು. ತೂಯ್- ಪರಿಶುದ್ಧವಾದ, ಮತಿತನ್ನಾಲ್- ಜ್ಞಾನದಿಂದ, ಆತ್ಮಸ್ವರೂಪ ಸ್ವಭಾವ ಜ್ಞಾನದಿಂದ ಎಂದರ್ಥವು. ತುಲಙ್ಗ ಕೈಯುಮ್- ನಿರ್ಮಲಗಳಾಗುವಪ್ರಕಾರವನ್ನು, "ಕರ್ಮಣ್ಯಕರ್ಮಯಃಪಶ್ಯೇತ್" ಇತ್ಯಾದಿಗಳಂತೆ ಮಾಡಲ್ಪಡುವ ಕರ್ಮಗಳೇ ಅಡಗಿರುವ ಜ್ಞಾನವುಳ್ಳವುಗಳಾದುದರಿಂದ ಜ್ಞಾನಾಕಾರವಾಗಿರುವ ಪ್ರಕಾರವನ್ನೆಂದರ್ಥವು. ಇರವಾ- ನಶಿಸದೇ ಇರುವಂತವನಾದ, ಉಯಿರ್, ಆತ್ಮನ, ನಿಲೈಯುಮ್-ನಿಷ್ಠಾಮಾರ್ಗವನ್ನು, ಕಂಡಿಡುಮ್- ಕಾಣಲ್ಪಡುವುದಾದ, ನಿತ್ಯಾತ್ಮ ಗೋಚರಜ್ಞಾನನಿಷ್ಠೋಪಾಯವಂ ತಿಳಿದ ಎಂದರ್ಥವು. ಉಲಕಿನ್- ಲೋಕದ, ನಿಲೈಯುಮ್- ಸ್ಥಿತಿಯನ್ನು, "ಶ್ರೇಯಾನ್ ದ್ರವ್ಯಮಯಾದ್ಯಜ್ಞಾಜ್ಜ್ಞಾನಯಜ್ಞಃ ಪರಂತಪಃ- ಜ್ಞಾನಂಲಬ್ಧ್ವಾಪರಾಂಶಾನ್ತಿಮಚಿರೇಣಾಧಿಗಚ್ಛತಿ- ಯೋಗಸನ್ನ್ಯಸ್ತಕರ್ಮಾಣಂ ಜ್ಞಾನಸಂಛಿನ್ನಸಂಶಯಂ- ಆತ್ಮವನ್ತಂನಕರ್ಮಾಣಿನಿಬಧ್ನಂತಿಧನಂಜಯ, (೪॥೩೩॥೩೯॥೪೧॥) ಎಂಬುದಾಗಿ ಪ್ರದರ್ಶಿತವಾಗಿರುವ ಜ್ಞಾನನಿಷ್ಠಾಧಿಕಾರಿವರ್ಗದ ಉತ್ಕರ್ಷಾವಸ್ಥೆಯನ್ನು ಕೂಡ ಎಂದರ್ಥವು. ಇದರಿಂದ ಶ್ರೀಮತ್ತಾತ್ಪರ್ಯ ಚಂದ್ರಿಕೆಯಲ್ಲಿ ಚತುರ್ಥಾಧ್ಯಾಯಸಂಗ್ರಹ ಶ್ಲೋಕ ರೂಪತ್ವೇನ ಪ್ರದರ್ಶಿತವಾದ ಕರ್ಮಸ್ವರೂಪವೇನು, ಅವುಗಳ ಭೇದವೇನು, ಅವುಗಳು ಪ್ರಾಮಾಣಿಕವೆಂಬುವುದೇನು, ಜ್ಞಾನಪ್ರಾಧಾನ್ಯವೇನು, ಇವು ಮತ್ತು ಭಗ

ವದವೆತಾರ, ಯಾಥಾತ್ಮ್ಯಾತ್ಮಕವಾದ ಆರ್ಥಗಳು ಸಂಗ್ರಹಿಸಲ್ಪಟ್ಟಿತು. ಏನಕ್ಕೆ- ಅಜ್ಞಾನಾಂಧಕಾರ ಪ್ರಚುರವಾದ ಈ ಲೋಕದಲ್ಲಿ ಹುಟ್ಟಿರುವಜಾತ್ಯಂಧನಾದ ನನಿಗೆ, ಇನು-ಆತ್ಮಕಟಾಕ್ಷವಂ ಹೊಂದಿರುವ ಈದಿನದಲ್ಲಿ, ಅರಿವಿತ್ತನೆ- ತಿಳಿಯುಪಡಿಸಿದನು. ಆಚಾರ್ಯರೂಪಿಯಾಗಿ ಉಪದೇಶಿಸಿದನೆಂದರ್ಥವು. ಅರ್ಜುನನಿಗೆ ಆದಿನದಲ್ಲುಪದೇಶಿಸಿದ ಅರ್ಥವನ್ನು ತನಿಗೀದಿನದಲ್ಲುಪದೇಶಮಾಡಿರುವುದಾಗಿ ಹೇಳಿರುವುದಂ ನೋಡಿದರೆ ತನ್ನಿಂದಲೇ ಪ್ರವರ್ತಿತವಾದ ಕರ್ಮಯೋಗವನ್ನು ಭಾರತಯುದ್ಧೋದ್ಯೋಗಕಾಲದಲ್ಲಿ ಶ್ರೀಕೃಷ್ಣರೂಪಿಯಾಗಿ ಅರ್ಜುನನಿಗೆ ಉಪದೇಶಿಸಿರುವುದಕ್ಕೂ ಸಂಪ್ರದಾಯಾಚಾರ್ಯರೂಪಿಯಾಗಿ ತನಿಗುಪದೇಶಿಸಿರುವುದಕ್ಕೂ ತಾರತಮ್ಯವಿಲ್ಲವೆಂದು ಸೂಚಿತವಾಗುವುದು. ॥೫॥

ಇತಿ ಶ್ರೀಮದ್ಗೀತಾರ್ಥಸಾರಾಖ್ಯ ಕರ್ಣಾಟಕ ಟೀಕಾಯಾಂ
ಜ್ಞಾನಯೋಗೋನಾಮ ಚತುರ್ಥೋಽಧ್ಯಾಯಃ.

---

## ಅಥ ಕರ್ಮಸನ್ನ್ಯಾಸಯೋಗಾಖ್ಯಃ
## ಪಂಚಮೋಽಧ್ಯಾಯಃ.

---

(ಶಂ॥ ಭಾ॥) "ಕರ್ಮಣ್ಯಕರ್ಮಯಃಪಶ್ಯೇತ್" (೪॥ ೧೮॥) ಎಂಬ ಶ್ಲೋಕದ ಮೊದಲು "ಸಯುಕ್ತಃಕೃತ್ಸ್ನಕರ್ಮಕೃತ್ (೪॥ ೧೮) ಜ್ಞಾನಾಗ್ನಿದಗ್ಧಕರ್ಮಾಣಂ (೪॥೧೯॥) ಶಾರೀರಂಕೇವಲಂಕರ್ಮಕುರ್ವನ್ (೪॥ ೨೧॥) ಯದೃಚ್ಛಾಲಾಭಸಂತುಷ್ಟಃ (೪॥ ೨೨॥) ಬ್ರಹ್ಮಾರ್ಪಣಂಬ್ರಹ್ಮಹವಿಃ (೪॥೨೪॥) ಕರ್ಮಜಾನ್ವಿದ್ಧಿತಾನ್ಸರ್ವಾನ್ (೪॥೩೨॥) ಸರ್ವಂಕರ್ಮಾಖಿಲಂಪಾರ್ಥ (೪॥ ೩೩॥) ಜ್ಞಾನಾಗ್ನಿಸ್ಸರ್ವಕರ್ಮಾಣಿ (೪॥ ೩೭॥) ಯೋಗಸನ್ನ್ಯಸ್ತಕರ್ಮಾಣಂ" (೪॥ ೪೧॥) ಎಂಬೀ ಶ್ಲೋಕಗಳಿಂದ ಶ್ರೀಕೃಷ್ಣನು ಸರ್ವಕರ್ಮ ಸನ್ನ್ಯಾಸವನ್ನುಪದೇಶಿಸಿದನು. "ಛಿತ್ವೈನಂ ಸಂಶಯಂ ಯೋಗಮಾತಿಷ್ಠ" (೪॥ ೪೨॥) ಎಂಬ ಶ್ಲೋಕದಿಂದ ಕರ್ಮಾನುಷ್ಠಾನವನ್ನೇ ಸ್ವರೂಪವಾಗಿವುಳ್ಳ ಯೋಗವನ್ನು ಮಾಡೆಂದು ಹೇಳಿದನು. ಈ ಪ್ರಕಾರವಾಗಿ ಶ್ರೀಕೃಷ್ಣನು

ಕರ್ಮಸನ್ನ್ಯಾಸ ಕರ್ಮಯೋಗಗಳೆಂಬೀ ಎರಡನ್ನು ಹೇಳುವುದರಿಂದ ಈ ಎರಡೂ ಒಬ್ಬನಿಂದಲೇ ಆಚರಿಸತಕ್ಕದ್ದೆಂಬದಾಗಿ ತೋರುತ್ತದೆ. ಈಎರಡೂ ಸ್ಥಿತಿಗತಿಗಳಂತೆ (ನಿಂತಿರುವಿಕೆ ನಡಿಯುವಿಕೆ ಇವುಗಳಂತೆ) ಪರಸ್ಪರ ವಿರುದ್ಧಗಳಾದುದರಿಂದ ಒಬ್ಬನಿಂದಲೇ ಏಕಕಾಲದಲ್ಲಿ ನಿಂತಿರುವಿಕೆ ನಡಿಯುವಿಕೆ, ಎಂಬೀ ಎರಡುಕಾರ್ಯಗಳು ಹೇಗಾದರೆ ಮಾಡಲಶಕ್ಯವೊ ಆ ರೀತಿಯಾಗಿ ಮಾಡಲಶಕ್ಯವಾಗಿರುವುದು. ಕಾಲಭೇದದಿಂದ ಈ ಎರಡೂ ಅನುಷ್ಠಿಸಲ್ಪಡಬಹುದೆಂದರೆ ಕೆಲವು ಕಾಲದಲ್ಲಿ ಕರ್ಮಸನ್ಯಾಸವನ್ನು, ಕೆಲವುಕಾಲದಲ್ಲಿ ಕರ್ಮಯೋಗವನ್ನು ಆಚರಿಸಬಹುದೆಂದು ಹೇಳಲ್ಪಡಲಿಲ್ಲವು, ಆದುದರಿಂದ ಈ ಎರಡರಲ್ಲಿ ಯಾವದಾದರೊಂದನ್ನಾಚರಿಸಬೇಕೆಂಬದಾಗಿಯೇ ಭಗವದಭಿಪ್ರಾಯ ವಿರುವದಾಗಿ ಕಂಡು ಬರುತದೆ; ಮತ್ತು ಕರ್ಮಸನ್ನ್ಯಾಸ ಕರ್ಮಾನುಷ್ಠಾನಗಳಿಗೆ ಸಮುಚ್ಚಯವನ್ನು ಪರಮಾತ್ಮನು ಅಂಗೀಕರಿಸಲಿಲ್ಲವಾದುದರಿಂದಲೂ ಇವುಗಳಲ್ಲಿ ಯಾವದಾದರೊಂದನ್ನೇ ಅನುಷ್ಠಿಸಬೇಕೆಂದು ಹೇಳಿದಂತೆ ತೋರುವುದು. ಆದುದರಿಂದ ಇವುಗಳಲ್ಲಿ ಯಾವದಾದರೊಂದನ್ನಾಚರಿಸಬೇಕೆಂಬದಾಗಿ ಪ್ರಾಪ್ತವಾದರೆ ಇವುಗಳಲ್ಲಿ ಯಾವದು ಪ್ರಶಸ್ತತರವೋ ಅದನ್ನನುಷ್ಠಿಸುವೆನು, ಪ್ರಶಸ್ತ ತರವಲ್ಲದೇ ಇರುವದನ್ನಾಚರಿಸದೇ ಬಿಟ್ಟುಬಿಡುವೆನೆಂಬದಾಗಿ ಯೋಚಿಸಿ ಅರ್ಜುನನೀಶ್ಲೋಕದಿಂದ ಯಾವದು ಶ್ರೇಷ್ಠವಾಗಿರುವುದೋ ಅದಂ ಹೇಳೆಂದು ಶ್ರೀಕೃಷ್ಣನಂ ಕುರಿತು (ಸನ್ನ್ಯಾಸಂ ಕರ್ಮಣಾಂ ಕೃಷ್ಣ) ಇತ್ಯಾದಿ ವಾಕ್ಯದಿಂದ ಪ್ರಶ್ನೆಮಾಡುತ್ತಾನೆ.

ಇಲ್ಲಿ “ ಆತ್ಮಸ್ವರೂಪವಂ ತಿಳಿದವನಿಗೆ, ಜ್ಞಾನಯೋಗನಿಷ್ಠೆಯನ್ನುಪದೇಶಿಸಬೇಕೆಂಬ ಅಭಿಪ್ರಾಯದಿಂದ ಮೊದಲು ಉಪಹರಿಸಲ್ಪಡುವ ಶ್ಲೋಕಗಳಿಂದ ಶ್ರೀಕೃಷ್ಣನು ಸರ್ವಕರ್ಮಸನ್ನ್ಯಾಸವನ್ನು ಹೇಳಿದನಲ್ಲದೆ ಅನಾತ್ಮಜ್ಞನಿಗಲ್ಲವು. ಆದುದರಿಂದ ಕರ್ಮಾನುಷ್ಠಾನ ಕರ್ಮಸನ್ನ್ಯಾಸಗಳು ಭಿನ್ನಾಧಿಕಾರಿ ವಿಷಯವಾಗಿರುತಾ ಆ ಎರಡರಲ್ಲಿ ಯಾವದು ಶ್ರೇಷ್ಠತರವೋ ಅದನ್ನು ತಿಳಿದುಕೊಳ್ಳಬೇಕೆಂಬ ಅಭಿಪ್ರಾಯದಿಂದ ಅರ್ಜುನನು ಪ್ರಶ್ನೆಮಾಡಿರುವುನೆಂದು ಹೇಳುವುದು ಅಸಂಗತವು” ಎಂಬದಾಗಿ ಕೆಲವರು ಪೂರ್ವ ಪಕ್ಷವನ್ನು ಮಾಡು

ತ್ತಾರೆ. ಆದರೆ ಆ ಪ್ರಶ್ನೆಯು ಅರ್ಜುನನ ಅಭಿಪ್ರಾಯದಿಂದ ಸಂಗತವಾಗುವುದಲ್ಲದೆ ನಿಮ್ಮ (ಆಕ್ಷೇಪಕರ) ಅಭಿಪ್ರಾಯದಿಂದ ಸಂಗತವಾಗುವುದಿಲ್ಲವೆಂದು ಹೇಳುವೆವು. ಅದು ಹೇಗೆಂದರೆ,—ಪ್ರಥಮದಲ್ಲುದಹರಿಸಲ್ಪಡುವ ಶ್ಲೋಕಗಳಿಂದ ಕರ್ಮಸನ್ಯಾಸವು ಮಾಡತಕ್ಕದ್ದೆಂಬದಾಗಿ ಶ್ರೀಕೃಷ್ಣನು ವಿವರಿಸಿರುವುದರಿಂದ ಅದಕ್ಕೆ ಪ್ರಾಧಾನ್ಯವು ಸಂಭವಿಸುವುದು. ಆದರೆ ಕರ್ತಾ (ಮಾಡತಕ್ಕವನು) ಇಲ್ಲದಿದ್ದರೆ ಅದು ಮಾಡತಕ್ಕದ್ದೆಂಬ ಅಂಶವು ಸಂದರ್ಭಿಸಲಾರದಾದುದರಿಂದ ಆತ್ಮಜ್ಞಾನಂತೆ ಅನಾತ್ಮಜ್ಞನೂ ಆ ಕರ್ಮಸನ್ನ್ಯಾಸಕ್ಕೆ ಕರ್ತಾ (ಮಾಡತಕ್ಕವನು) ಎಂಬದಾಗಿ ಹೇಳಬೇಕಾಗಿಬರುವುದು. ಆ ಸಂದರ್ಭವನ್ನಿಲ್ಲಿ ಪ್ರಶ್ನೋತ್ತರರೂಪವಾಗಿ ಸ್ಪಷ್ಟೀಕರಿಸುತ್ತಾನೆ. ಆದುದರಿಂದ ಆತ್ಮವೇದಿಯಾದವನು ಮಾತ್ರವೇ ಸನ್ನ್ಯಾಸವಂ ಮಾಡತಕ್ಕವನೆಂಬದಾಗಿ ಹೇಳಲ್ಪಡಲಿಲ್ಲವೆಂತಲೂ ಅನಾತ್ಮಜ್ಞನುಕೂಡಕರ್ಮಾನುಷ್ಠಾನ ಕರ್ಮಸನ್ನ್ಯಾಸಗಳನ್ನು ಮಾಡಬಹುದೆಂತಲೂ ನೆನಸುತಲಿರುವ ಅರ್ಜುನನು ಪೂರ್ವೋಕ್ತಪ್ರಕಾರವಾಗಿ ಪರಸ್ಪರ ವಿರುದ್ಧಗಳಾದ ಕರ್ಮಾನುಷ್ಠಾನ ಕರ್ಮ ಸನ್ನ್ಯಾಸಗಳಲ್ಲಿ ಯಾವದು ಶ್ರೇಷ್ಠತರವೋ ಅದಂ ಹೇಳೆಂದು ಕೇಳುವುದು ಅಸಂಗತವಲ್ಲವು. ಪ್ರಶ್ನೆಕ್ಕೆ ಅನುಗುಣವಾದ ಪ್ರತ್ಯುತ್ತರದ ಅರ್ಥವನ್ನು ವಿಚಾರಿಸಿದರೂ ಪೃಚ್ಛಕನಾದ ಅರ್ಜುನನ ಪ್ರಶ್ನಾಭಿಪ್ರಾಯವು ಹೀಗಿರುವುದೆಂತಲೇ (ಅನಾತ್ಮಜ್ಞನಿಗೂಕೂಡ ಸನ್ನ್ಯಾಸದಲ್ಲಧಿಕಾರವುಂಟೆಂತಲೇ) ಸ್ಪಷ್ಟವಾಗುವುದು. ಆದುದರಿಂದ ಅನಾತ್ಮಜ್ಞನಿಂದ ಮಾಡಲ್ಪಡುವ ಕರ್ಮ ಸನ್ನ್ಯಾಸ ಕರ್ಮ ಯೋಗಗಳಲ್ಲಿ ಯಾವದು ಪ್ರಶಸ್ಯತರವೋ ಅದಂ ವಿವರಿಸೆಂಬದಾಗಿ ಅರ್ಜುನನ ಪ್ರಶ್ನೆಯು ಯುಕ್ತವಾಗಿಯೇ ಇರುವುದು. ಆದರೇ ಅರ್ಜುನನ ಪ್ರಶ್ನಕ್ಕೆ ಪರಮಾತ್ಮನು ಪ್ರತ್ಯುತ್ತರವಾಗಿ ಹೇಳಿದ ವಾಕ್ಯವೇನು ? ಅದಂ ನಿರೂಪಿಸೆಂದರೆ ವಿವರಿಸುವೆವು. "ಸನ್ಯಾಸಃ ಕರ್ಮಯೋಗಶ್ಚ ನಿಶ್ರ್ಯೇಯಸಕರಾವುಭೌ। ತಯೋಸ್ತು ಕರ್ಮಸನ್ನ್ಯಾಸಾತ್ಕರ್ಮಯೋಗೋವಿಶಿಷ್ಯತೇ" (೫॥೨॥) ಎಂಬ ಶ್ಲೋಕವನ್ನು ಪ್ರತ್ಯುತ್ತರವಾಗಿ ಹೇಳಿದನು.

ಆದರೆ ಈ ವಾಕ್ಯವನ್ನು ಪ್ರತ್ಯುತ್ತರವಾಗಿ ಹೇಳಿರುವಪಕ್ಷದಲ್ಲಿ ಆತ್ಮಜ್ಞನಿಂದ ಮಾಡತಕ್ಕ ಕರ್ಮ ಸನ್ನ್ಯಾಸ ಕರ್ಮಯೋಗಗಳೆಂಬೀ

ಎರಡೂ ನಿಶ್ಶ್ರೇಯಸಕರಗಳೆಂಬದಾಗಿ ಹೇಳಿ ಯಾವದೋ ಒಂದು ವಿಶೇಷವನ್ನಾಶ್ರಯಿಸಿ ಈ ಎರಡರಲ್ಲಿ ಕರ್ಮಸನ್ನ್ಯಾಸಕ್ಕಿಂತಲೂ ಕರ್ಮಯೋಗವು ಶ್ರೇಷ್ಠವೆಂಬದಾಗಿ ಹೇಳಿದನೋ ? (ಅಥವಾ) ಕರ್ಮಸನ್ನ್ಯಾಸ ಕರ್ಮಯೋಗಗಳೆರಡೂ ಅನಾತ್ಮಜ್ಞನಿಂದ ಮಾಡತಕ್ಕದ್ದೇ ಎಂಬದಾಗಿ ಹೇಳಿ ಅಂಥಾ ಅನಾತ್ಮಜ್ಞನಿಂದ ಆಚರಿಸತಕ್ಕ ಕರ್ಮಸನ್ನ್ಯಾಸ ಕರ್ಮಯೋಗಗಳೆಂಬೀ ಎರಡೂ ನಿಶ್ಶ್ರೇಯಸಕರಗಳಾಗಿಯೂ ಪ್ರಶಸ್ತತರಗಳಾಗಿಯೂ ಇರುವುವೆಂಬದಾಗಿ ಹೇಳಿದನೋ ? ಎಂಬ ಎರಡು ಪ್ರಶ್ನೆಗಳಲ್ಲಿ ಮೊದಲನೇ ಪ್ರಶ್ನೆಕ್ಕೆ ಸಮಾಧಾನವು; ಕರ್ಮಸನ್ನ್ಯಾಸ ಕರ್ಮಯೋಗಗಳೆರಡೂ ಆತ್ಮವೇದಿಗೆ ಸಂಭವಿಸುವುದಿಲ್ಲವಾದುದರಿಂದ ಅವು ನಿಶ್ಶ್ರೇಯಸಕರಗಳೆಂತಲೂ, ಆತ್ಮವೇದಿಯಿಂದ ಮಾಡತಕ್ಕ ಕರ್ಮಸನ್ನ್ಯಾಸಕ್ಕಿಂತಲೂ ಕರ್ಮಯೋಗವು ಶ್ರೇಷ್ಠವೆಂತಲೂ ಹೇಳುವದು ಯುಕ್ತವಾಗಿರಲಿಲ್ಲವು. ಏತಕ್ಕೆಂದರೆ, ಆತ್ಮಜ್ಞನಿಗೆ ಕರ್ಮಸನ್ನ್ಯಾಸವೂ, ಮತ್ತು ಅದಕ್ಕೆ ವಿರುದ್ಧವಾದ ಕರ್ಮಾನುಷ್ಠಾನಲಕ್ಷಣವಾಗಿರುವ ಕರ್ಮಯೋಗವೆಂಬೀ ಎರಡೂ ಸಂಭವಿಸುವ ಪಕ್ಷದಲ್ಲಿ ಅಂಥಾ ಕರ್ಮಸನ್ನ್ಯಾಸ ಕರ್ಮಯೋಗಗಳೆಂಬೀ ಎರಡೂ ನಿಶ್ಶ್ರೇಯಸಕರಗಳಾಗಿರುವುವೆಂತಲೂ, ಅಸಾಮಾನ್ಯವಾದ ಕರ್ಮಸನ್ನ್ಯಾಸಕ್ಕಿಂತಲೂ ಚಿತ್ತಶುದ್ಧಿದ್ವಾರಾ ಮೋಕ್ಷಹೇತುವಾಗುವುದರಿಂದ ಕರ್ಮಯೋಗವು ಶ್ರೇಷ್ಠವಾಗಿರುವುದೆಂತಲೂ, ಹೇಳಬಹುದಲ್ಲವೆ ಆತ್ಮಜ್ಞನಿಗೆ ಕರ್ಮಸನ್ನ್ಯಾಸ ಕರ್ಮಯೋಗಗಳೆರಡೂ ಸಂಭವಿಸದೇನೆ ಇರುತಾ ಎರಡೂ ನಿಶ್ಶ್ರೇಯಸಕರಗಳೆಂತಲೂ, ಅವುಗಳಲ್ಲಿಯೂ ಕರ್ಮಯೋಗವು ಶ್ರೇಷ್ಠವೆಂತಲೂ, ಹೇಳುವುದು ಯುಕ್ತವಲ್ಲವು.

ಆದರೇ ಇಲ್ಲಿ “ ಆತ್ಮವೇದಿಯಾದವನಿಗೆ ಕರ್ಮಸನ್ನ್ಯಾಸ ಕರ್ಮಯೋಗಗಳೆಂಬೀ ಎರಡೂ ಸಂಭವಿಸುವದಿಲ್ಲವೆ ? ಅಥವಾ ಈ ಎರಡರಲ್ಲಿ ಯಾವದಾದರೊಂದುಮಾತ್ರವಿಲ್ಲವೆ? ಎರಡರಲ್ಲೊಂದುಮಾತ್ರವಿಲ್ಲವೆಂಬುವ ಪಕ್ಷದಲ್ಲಿ ಕರ್ಮಸನ್ನ್ಯಾಸವಿಲ್ಲವೆ ? (ಅಥವಾ) ಕರ್ಮಯೋಗವಿಲ್ಲವೆ ? ಆ ರೀತಿಯಾಗಿ ಸಂಭವಿಸದೇ ಇರುವುದಕ್ಕೆ ತಕ್ಕ ಕಾರಣವನ್ನು ಕೂಡ ಹೇಳಬೇಕೆಂದರೆ ಅದಕ್ಕುತ್ತರವು ಹೇಳಲ್ಪಡುವುದು. ಆತ್ಮವೇದಿಯಾದವನು ವಿನಷ್ಟವಾದ ಮಿಥ್ಯಾಜ್ಞಾನವುಳ್ಳವನಾದು

ದರಿಂದ ಅವನಿಗೆ ವಿಪರ್ಯಯ ಜ್ಞಾನಮೂಲವಾದ ಕರ್ಮಯೋಗವು ಸಂಭವಿಸಲಾರದು. ಜನ್ಮಾದಿ ವಿಕಾರಗಳ್ಯಾವವೂ ಇಲ್ಲವಾದ-ದರಿಂದ ನಿಷ್ಕ್ರಿಯನಾದ ತನ್ನನ್ನು ಬ್ರಹ್ಮವನ್ನಾಗಿ ತಿಳಿದುಕೊಂಡವನಾಗಿಯೂ, ಬ್ರಹ್ಮಸ್ವರೂಪ ಜ್ಞಾನದಿಂದ ಹೋಗಿರುವ ಮಿಥ್ಯಾ (ಭೇದ) ಜ್ಞಾನವುಳ್ಳವನಾಗಿಯೂ ಇರುವ ಆತ್ಮವೇದಿಗೆ, ನಿಷ್ಕ್ರಿಯವಾದ ಆತ್ಮಸ್ವರೂಪದಿಂದಿದಿರುವಿಕೆ ಯೆಂಬ ಕರ್ಮ ಸನ್ನ್ಯಾಸವನ್ನು ತಿಳಿಯಪಡಿಸಿ ಅದಕ್ಕೆ ವ್ಯತಿರಿಕ್ತವಾಗಿಯೂ, ಮಿಥ್ಯಾಜ್ಞಾನಕ್ಕೆ ಮೂಲಭೂತವಾದ ಕರ್ತೃತ್ವಾಭಿಮಾನದೊಡನೆ ಕೂಡಿಕೊಂಡಿರುವುದಾಗಿಯೂ ಇರುವ ಕರ್ಮಯೋಗದಿಂದ ಈ ಗೀತಾಶಾಸ್ತ್ರದಲ್ಲಿ ಎಲ್ಲಲ್ಲಾತ್ಮಸ್ವರೂಪವನ್ನು ನಿರೂಪಿಸುವ ಪ್ರದೇಶದೊಳು ಅದು ಸತ್ಯಜ್ಞಾನಕ್ಕೂ ಮಿಥ್ಯಾಜ್ಞಾನಕ್ಕೂ ಮತ್ತು ಅವುಗಳ ಕಾರ್ಯಗಳಿಗೂ ವಿರೋಧವಾಗಿರುವುದರಿಂದ ಅವಶ್ಯಕತೆಯಿಲ್ಲವೆಂಬದಾಗಿ ಹೇಳಿರುವುದು. ಆದುದರಿಂದ ಹೋಗಿರುವ ಮಿಥ್ಯಾಜ್ಞಾನವುಳ್ಳ ಆತ್ಮವೇದಿಯಾದವನಿಗೆ ಭೇದಜ್ಞಾನಕ್ಕೆ ಮೂಲವಾದ ಕರ್ಮಯೋಗವು ಸಂಭವಿಸಲಾರದೆಂದು ಮೇಲೆ ವಿವರಿಸಿರುವುದು ಯುಕ್ತವಾಗಿಯೇ ಇರುವುದು. ಆತ್ಮವೇದಿಗೆ ಕರ್ಮಾಭಾವವನ್ನು ಯಾವ ಯಾವ ಆತ್ಮಸ್ವರೂಪ ನಿರೂಪಣ ಪ್ರದೇಶಗಳಲ್ಲಿ ಪ್ರತಿಪಾದಿಸಿರುವುದೆಂದರೆ "ಅವಿನಾಶಿತುತದ್ವಿದ್ಧಿ" (೨॥೧೭) ಎಂಬದಾಗಿ ಉಪಕ್ರಮಿಸಿ "ಯಏನಂವೇತ್ತಿಹಂತಾರಂ" (೨॥೧೯॥) "ವೇದಾವಿನಾಶಿನಂನಿತ್ಯಂ" (೨॥೨೧॥) ಇದೇ ಮೊದಲಾದ ಶ್ಲೋಕಗಳಲ್ಲಾತ್ಮವೇದಿಗೇ ಕರ್ಮಾಭಾವವು ಹೇಳಿರುವುದೆಂದಿಲ್ಲಿ ಹೇಳುವೆವು.

ಆದರೇ " ಇಂಥಾ ಆತ್ಮಸ್ವರೂಪ ನಿರೂಪಣ ಪ್ರದೇಶಗಳಲ್ಲಿ ಕರ್ಮಯೋಗವು ಅಲ್ಲಲ್ಲಿ ಪ್ರತಿಪಾದಿಸಲ್ಪಡುತಲೇ ಇರುವುದು. ಅದು ಹೇಗೆಂದರೆ! " ತಸ್ಮಾದ್ಯುಧ್ಯಸ್ವಭಾರತ" (೨॥೧೮॥) "ಸ್ವಧರ್ಮಮಪಿಚಾವೇಕ್ಷ್ಯ' (೨॥೩೧॥) "ಕರ್ಮಣ್ಯೇವಾಧಿಕಾರಸ್ತೇ" (೨॥೪೭॥) ಎಂಬದಾಗಿ ಹೇಳಿರುವುದರಿಂದ ಆತ್ಮವೇದಿಯಾದವನಿಗೆ ಕರ್ಮಯೋಗವಿಲ್ಲವೆಂಬದಾಗಿ ಹೇಗೆ ಹೇಳಬಹುದು ?" ಎಂದರೇ ಅದಕ್ಕುತ್ತರವಂ ಹೇಳುವೆವು; ಆತ್ಮವಿದ್ಯೆಯಂ ಪ್ರತಿಪಾದಿಸುವ ಪ್ರಕರಣದಲ್ಲಿಯೇ ಕರ್ಮಯೋಗವು ಆತ್ಮಜ್ಞಾನಕ್ಕೆ ಸಾಧನವಾಗಿ ಹೇಳಲ್ಪಟ್ಟಿರುವುದು. ಆತ್ಮ

ವಿದ್ಯಾ ಪ್ರತಿಪಾದಕ ಪ್ರಕರಣಗಳಲ್ಲಿ ಆತ್ಮಜ್ಞಾನ ಸಾಧನವಾದ ಕರ್ಮ ಯೋಗವನ್ನು ಪ್ರತಿಪಾದಿಸಿರುವ ಮಾತ್ರದಿಂದಲೇ ಜ್ಞಾನೋತ್ಪತ್ತ್ಯ ನಂತರದಲ್ಲಿಯೂ ನ್ಯಾಯ ವಿರುದ್ಧವಾದ ಕರ್ಮಕಲ್ಪನವು ಯುಕ್ತವಲ್ಲ ವು. ಎಂದರೇ ಸಮ್ಯಗ್ಜ್ಞಾನ ಮಿಥ್ಯಾಜ್ಞಾನಗಳಿಗೂ ಯಥಾರ್ಥಜ್ಞಾನಅ ಯಥಾರ್ಥಜ್ಞಾನಗಳಿಗೂ ಸಮ್ಯಗ್ಜ್ಞಾನ ಕಾರ್ಯವಾದ ಭ್ರಮನಿವೃತ್ತಿ ಗೂ, ಮಿಥ್ಯಾಜ್ಞಾನಕಾರ್ಯವಾದ ಭ್ರಾಂತಿಗೂ, ಪರಸ್ಪರವಿರೋಧವಿರುವು ದರಿಂದಕರ್ತೃತ್ವಾದಿ ಭ್ರಮವನ್ನೇ ಕಾರಣವಾಗಿವುಳ್ಳ ಕರ್ಮವು, ಕರ್ತೃ ತ್ವಾದಿಭ್ರಮನಿವೃತ್ತಿಗೆ ಕಾರಣವಾದ ಸಮ್ಯಗ್ಜ್ಞಾನೋತ್ಪತ್ತಿಯಾದ ನಂತರವೂಕೂಡಾ ಉಂಟೆಂದು ಹೇಳುವುದು ಯುಕ್ತವಲ್ಲವೆಂದರ್ಥವು. ಮತ್ತು "ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನಯೋ ಗಿನಾಂ" (೩||೩||) ಎಂಬ ಶ್ಲೋಕದಿಂದ ಆತ್ಮ ತತ್ವವನ್ನು ಸವಿಾಚೀ ನವಾಗಿ ತಿಳಿದುಕೊಂಡಿರುವ ಸಾಂಖ್ಯರ, ನಿಷ್ಕ್ರಿಯಾತ್ಮ ಸ್ವರೂಪ ದೊಡನೆ ಇರುವಿಕೆಯನ್ನೇ ಸ್ವರೂಪವಾಗಿವುಳ್ಳ ಜ್ಞಾನ ನಿಷ್ಠೆಗಿಂತಲೂ ಅನಾತ್ಮಜ್ಞರಿಂದ ಮಾಡತಕ್ಕ ಕರ್ತೃತ್ವಾದಿ ಭ್ರಮ ಮೂಲವಾದ ಕರ್ಮಯೋಗ ನಿಷ್ಠೆಯು ಬೇರೆಯಾಗಿರುವುದೆಂದು ಹೇಳಿರುವುದರಿಂ ದಲೂ ಆತ್ಮವಂ ತಿಳಿದವನಿಗೆ ಕರ್ಮನಿಷ್ಠೆ ಯುಂಟೆಂದು ಹೇಳುವುದು ಯುಕ್ತವಲ್ಲವು. ಮತ್ತು, ಆತ್ಮಜ್ಞನು ಕೃತಕೃತ್ಯ (ಮಾಡತಕ್ಕ ಕಾರ್ಯಗಳನ್ನು ಮಾಡಿದ ಧನ್ಯ) ನಾದುದರಿಂದ ಅಂತವನಿಗೆನುತ್ತೊಂ ದು ಪ್ರಯೋಜನವ್ಯಾವದೂ ಇಲ್ಲವಾದುದರಿಂದಲೂ "ತಸ್ಯಕಾರ್ಯಂನ ವಿದ್ಯತೇ" (೩||೧೭||) ಎಂಬುವ ಶ್ಲೋಕದಲ್ಲಿ ಆತ್ಮವೇದಿಯಾದವನಿಗೆ ಕರ್ಮಯೋಗನಿಷೇಧವಿರುವುದರಿಂದಲೂ, ಆತ್ಮಜ್ಞನಿಗೆ ಕರ್ಮನಿಷ್ಠೆ ಯು ಸಂಭವಿಸುವುದೆಂದು ಹೇಳುವುದು ಯುಕ್ತವಲ್ಲವು.

"ನಕರ್ಮಣಾಮನಾರಂಭಾತ್" (೩||೪||) "ಸನ್ಯಾಸಸ್ತು ಮಹಾ ಬಾಹೋದುಃಖಮಾಪ್ತು ಮಯೋಗತಃ" (೫||೬|| ಎಂಬಿವೇ ಮೊದ ಲಾದ ಶ್ಲೋಕಗಳಿಂದ ಕರ್ಮಯೋಗವು ಆತ್ಮಜ್ಞಾನಕ್ಕೆ ಅಂಗವಾಗಿ ವಿಧಿ ಸಲ್ಪಡುವುದರಿಂದ ಜಿಜ್ಞಾಸುವಿಗೆ ಕರ್ಮಾಪೇಕ್ಷೆಯೂ ಇಲ್ಲವೆಂದು ಹೇಳ ಕೂಡದು. ಚಿತ್ತಶುದ್ಧಿದ್ವಾರಾ ಆತ್ಮಜ್ಞಾನ ಸಾಧನವಾದ ಕರ್ಮಯೋ ಗವನ್ನಾಚರಿಸದೆಹೋದರೇ ಆತ್ಮಜ್ಞಾನ ಉಂಟಾಗುವು ದಿಲ್ಲವಾದುದ

ರಿಂದ ಜ್ಞಾನಾಪೇಕ್ಷೆಯುಳ್ಳವನು ಚಿತ್ತಶುದ್ಧಿದ್ವಾರಾ ಜ್ಞಾನಸಾಧನವಾದ ಕರ್ಮಯೋಗವನ್ನಾಚರಿಸಬೇಕೆಂಬದಾಗಿ ತಿಳಿಯಬೇಕು. ಆದರೂ "ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ" (೬॥೩॥) ಎಂಬಿದೇ ಮೊದಲಾದ ಶ್ಲೋಕಗಳಿಂದ ಆತ್ಮಜ್ಞಾನವುಳ್ಳವನಿಗೆ ಕರ್ಮಯೋಗವಿಂದ ಪ್ರಯೋಜನವಿಲ್ಲ ವಾದುದರಿಂದ ಜಿಜ್ಞಾಸುವಾದವನು ಕರ್ಮವನ್ನವಲಂಬಿಸುವಂತೆ ಜ್ಞಾನಿಯೂ ಕರ್ಮವನ್ನಾಚರಿಸಬೇಕೆಂದು ಹೇಳುವುದೂ ಯುಕ್ತವಲ್ಲವು.

ಆದರೇ ಆತ್ಮಜ್ಞಾನಿಯಾದವನಿಗೆ ಕರ್ಮಗಳಿಲ್ಲದೇಹೋದರೇ ಶರೀರಸ್ಥಿತಿಗೆ ಕಾರಣವಾದ ಕರ್ಮವೂ ಇಲ್ಲದೇ ಹೋಗಬೇಕಾಗಿರುವುದರಿಂದ ಶರೀರವೇ ನಿಲ್ಲಲಾರದು, ಶರೀರವು ಇಲ್ಲದೇಹೋದರೆ ಅನ್ಯರಿಗೆ ಜ್ಞಾನೋಪದೇಶವಂ ಮಾಡುವಿಕೆಯು ಸಂಭವಿಸಲಾರದು, ಅದಿಲ್ಲದೇಹೋದರೇ ಉಪದೇಶಾಧೀನವಾದ ಜ್ಞಾನೋತ್ಪತ್ತಿಯೇ ಆಗುವುದಿಲ್ಲವೆಂದು ಶಂಕಿಸದೆ "ಶಾರೀರಂ ಕೇವಲಂಕರ್ಮ ಕುರ್ವನ್ನಾಪ್ನೋತಿಕಿಲ್ಬಿಷಂ।" (೪॥೨೧॥) ಎಂಬುವ ಶ್ಲೋಕದಿಂದ ಶರೀರಸ್ಥಿತಿಗೆ ಕಾರಣವಾದ ಕರ್ಮಕ್ಕಿಂತಲೂ ಇತರವಾದ ಕರ್ಮವು ನಿಷೇಧಿಸಲ್ಪಟ್ಟಿರುವುದಲ್ಲದೆ ಶರೀರಸ್ಥಿತಿ ಕಾರಣವಾದ ಕರ್ಮವು ನಿಷೇಧಿಸಲ್ಪಡಲಿಲ್ಲವೆಂತಲೂ, ಶರೀರಸ್ಥಿತಿಗೆ ತಕ್ಕ ಕರ್ಮಮಾತ್ರವನ್ನಾಚರಿಸಬೇಕೆಂತಲೂ, ಹೇಳಿರುವುದರಿಂದ ಮೇಲೆ ವಿವರಿಸಿರುವ ಶಂಕಾವಕಾಶವಿಲ್ಲವು. "ನೈವಕಿಂಚಿತ್ಕರೋಮೀತಿ ಯುಕ್ತೋಮನ್ಯೇತತತ್ವವಿತ್" (೫॥೮॥) ಎಂಬುವ ಶ್ಲೋಕದಿಂದ ಶರೀರಸ್ಥಿತಿ ಮಾತ್ರ ಪ್ರಯೋಜಕಗಳಾದ ದರ್ಶನ ಶ್ರವಣಾದಿ ಕರ್ಮಗಳಲ್ಲಿ ಆತ್ಮವಂ ತಿಳಿದವನು ಸಮಾಹಿತಚಿತ್ತವುಳ್ಳವನಾದುದರಿಂದ ನಾನು ಯಾವಕಾರ್ಯಗಳಂ ಮಾಡುವದಿಲ್ಲವೆಂಬದಾಗಿ ಕರ್ತೃತ್ವಾಭಿಮಾನ ಶೂನ್ಯನಾಗಿಯೇ ಇರುವನು, ಮತ್ತು ಆತ್ಮಸ್ವರೂಪ ಜ್ಞಾನಕ್ಕೆ ವಿರುದ್ಧವಾಗಿಯೂ ಮಿಥ್ಯಾ (ಭೇದ) ಜ್ಞಾನಕ್ಕೆ ಹೇತುವಾಗಿಯೂ ಇರುವ ಕರ್ಮ ಯೋಗವು ಆತ್ಮವಂ ತಿಳಿದವನಿಗೆ ಉಂಟೆಂಬದಾಗಿ ಸ್ವಪ್ನದಲ್ಲಿಯೂ ಊಹಿಸಲವಕಾಶವಿಲ್ಲವು.

ಮತ್ತು ಇದುವರೆಗೂ ಹೇಳಲ್ಪಡುವ ಯುಕ್ತಿಗಳಿಂದ ಸನ್ಯಾಸಕ

ರ್ಮಯೋಗಗಳು ಆತ್ಮತತ್ತ್ವವನ್ನು ತಿಳಿದಿರುವವನಿಂದ ಮಾಡತಕ್ಕವು
ಗಳೆಂಬದಾಗಿಯೂ ಸನ್ಯಾಸಕರ್ಮಯೋಗಗಳೆರಡೂ ನಿಶ್ಶ್ರೇಯಸ ಕರ
ಗಳೆಂಬದಾಗಿಯೂ, ಅವುಗಳಲ್ಲೊಂದಾದ ಕರ್ಮಯೋಗವು ಯಾವದೊ
ಒಂದು ಕಾರಣದಿಂದ ಶ್ರೇಷ್ಠವಾಗಿರುವುದೆಂತಲೂ, ಹೇಳುವುದು
ಯುಕ್ತವಲ್ಲವೆಂದು ಸಿದ್ಧಪಡಿಸಲ್ಪಟ್ಟಿರುವುದರಿಂದ ಆ ಪಕ್ಷವಂ ಬಿಟ್ಟು
ಎರಡನೇ ಪಕ್ಷವನ್ನು ಅಂಗೀಕರಿಸುತ್ತಾರೆ. ಹೇಗೆಂದರೇ ! ಕರ್ಮ
ಸನ್ಯಾಸ ಕರ್ಮಯೋಗಗಳು ಅನಾತ್ಮಜ್ಞನಿಂದ ಮಾಡತಕ್ಕದ್ದಾಗಿರು
ವುದೆಂತಲೂ, ಅಂಥಾ ಅನಾತ್ಮಜ್ಞ ಕರ್ತೃಕವಾದ ಸನ್ಯಾಸಕರ್ಮ
ಯೋಗಗಳಲ್ಲಿ ವಿಲಕ್ಷಣವಾದ ಕರ್ಮಸನ್ಯಾಸಕ್ಕಿಂತಲೂ ಕರ್ಮಯೋ
ಗವು ಸುಲಭವಾಗಿರುವುದರಿಂದ ಶ್ರೇಷ್ಠವೆಂತಲೂ ಅಂಗೀಕೃತವಾಗಿ
ರುವುದೆಂದರಿಯಬೇಕು.

ಆದರೇ ಕರ್ಮಯೋಗದಿಂದ ಶುದ್ಧಬುದ್ಧಿಯಾದವನಿಗಲ್ಲವೇ ಸನ್ಯಾ
ಸ ವುಂಟಾಗುವದು, ಈ ಪ್ರಕಾರವಾಗಿ ಅಧಿಕ ಪ್ರಯಾಸಸಾಧ್ಯವಾದ
ಸನ್ಯಾಸವು, ಕರ್ಮಯೋಗಕ್ಕಿಂತಲೂ ಶ್ರೇಷ್ಠವಾಗಿರುವುದರಿಂದ
ಸನ್ಯಾಸಕ್ಕಿಂತಲೂ ಕರ್ಮಯೋಗವು ಶ್ರೇಷ್ಠವೆಂಬದಾಗಿ ಹೇಳುವದು
ಯುಕ್ತವಲ್ಲವೆಂದರೆ ಅನಾತ್ಮಜ್ಞನ ಕರ್ಮಸನ್ಯಾಸವೂ ಕರ್ಮಯೋ
ಗದಂತೆಯುಂಟಾದರೂಆತ್ಮವಿತ್ಕರ್ತೃಕವಾದ ಸರ್ವಕರ್ಮ ಸನ್ಯಾಸಕ್ಕಿಂ
ತಲೂ ವಿಲಕ್ಷಣವಾಗಿರುವುದರಿಂದ ಸನ್ಯಾಸಕ್ಕಿಂತಲೂ ಕರ್ಮಯೋಗ
ವು ಶ್ರೇಷ್ಠವಾಗಿರುವುದೆಂದು ಹೇಳಿತು. ಆದರೆ ಆತ್ಮವಿತ್ಕರ್ತೃಕ
ವಾದ ಸರ್ವಕರ್ಮ ಸನ್ಯಾಸಕ್ಕಿಂತಲೂ ಅನಾತ್ಮಜ್ಞನ ಕರ್ಮಸನ್ಯಾ
ಸವು ವಿಲಕ್ಷಣವಾಗಿರುವುದು ಹೇಗೆಂದರೆ ಅದಂ ವಿವರಿಸುವೆವು;
ಆತ್ಮವೇದಿಯಾದವನಿಗೆ ನಾನು ಮಾಡತಕ್ಕವನೆಂಬ ಕರ್ತೃತ್ವಾಭಿ
ಮಾನವಿಲ್ಲವು; ಅನಾತ್ಮಜ್ಞನಿಗೆತನ್ನಿಂದ ಅವಲಂಬಿಸಲ್ಪಡುವ ಸನ್ಯಾ
ಸಾಶ್ರಮ ವಿಹಿತವಾದ ಶ್ರವಣಾದಿಗಳಲ್ಲಿಯೂಕರ್ತೃತ್ವಾಭಿಮಾನವಿರು
ವುದು.ಇದನ್ನಾಲೋಚಿಸಿನೋಡಿದರೆ ಅನಾತ್ಮಜ್ಞನಕರ್ಮಸನ್ಯಾಸವು ಆ
ದುವರೆಗೂ ಅವಲಂಬಿಸಲ್ಪಟ್ಟ ಕರ್ಮಗಳಲ್ಲಿ ಕೆಲವುಭಾಗವೇ ಆಗಿರುವು
ದಲ್ಲದೆ ಸಮಸ್ತವು ಆಗಲಿಲ್ಲವು ಆದುದರಿಂದಲೂ, ಆತ್ಮವಿತ್ಕರ್ತೃಕ
ಸರ್ವಕರ್ಮಸನ್ಯಾಸಕ್ಕಿಂತಲೂ ವಿಲಕ್ಷಣವಾದದ್ದೆಂತಲೂ, ಆದುದರಿಂದ

ಕರ್ಮಯೋಗಕ್ಕಿಂತಲೂ ಸನ್ಯಾಸವು ನಿಹೀನವಾಯಿತೆಂತಲೂ ತಿಳಿಯಬೇಕು.

ಆದರೆ ಬ್ರಾಹ್ಮಣನಿಗೆ ಸನ್ಯಾಸಕ್ಕಿಂತಲೂ ಅಧಿಕವಾದ ದ್ರವ್ಯವಿಲ್ಲವೆಂಬುವ ಅರ್ಥವಂ ಪ್ರತಿಪಾದಿಸುವ "ನೈತಾದೃಶಂ ಬ್ರಾಹ್ಮಣಸ್ಯಾವಿತ್ತಂ" ಎಂಬ ಸ್ಮೃತಿಪ್ರಮಾಣವಿರುವುದರಿಂದ ಸನ್ಯಾಸಕ್ಕಿಂತಲೂ ಕರ್ಮಯೋಗವು ಶ್ರೇಷ್ಠವಾದದ್ದು ಹೇಗಾಗುವುದೆಂದರೆ ಈ ಪ್ರಮಾಣದಲ್ಲಿ ಸನ್ಯಾಸವೇ ಶ್ರೇಷ್ಠವೆಂದು ಪ್ರತಿಪಾದಿಸಲ್ಪಟ್ಟಿದ್ದರೂ "ಆನೃಶಂಸ್ಯಂ ಕ್ಷಮಾಸತ್ಯ ಮಹಿಂಸಾದಮಆರ್ಜವಂ | ಪ್ರೀತಿಃ ಪ್ರಸಾದೋಮಾಧುರ್ಯಮಕ್ರೋಧಶ್ಚಯಮಾದಶ | ದಾನಮಿಜ್ಯಾ ತಪೋಧ್ಯಾನಂಸ್ವಾಧ್ಯಾಯೋಪಸ್ಥನಿಗ್ರಹೌ | ವ್ರತೋಪವಾಸೌ ಮೌನಂಚ ಸ್ನಾನಂಚ ನಿಯಮಾದಶ ||" ಎಂಬ ಸ್ಮೃತಿವಾಕ್ಯಗಳಲ್ಲಿ ಹೇಳಲ್ಪಡುವ ಯಮನಿಯಮಗಳಿಂದಲೂ, ಮತ್ತು ಅದಕ್ಕಿಂತಲೂ ಅನ್ಯಗಳಾದ ಸ್ವಾಶ್ರಮ ವಿಹಿತಧರ್ಮಗಳಿಂದಲೂ ಅನುಷ್ಠಾನ ದೌಷ್ಕರ್ಯವಿರು (ಮಾಡಲು ಕಷ್ಟವಾಗಿರು) ವುದರಿಂದಲೂ, ಕರ್ಮಯೋಗದಲ್ಲಷ್ಟು ಪ್ರಯಾಸವಿಲ್ಲವಾದುದರಿಂದಲೂ "ನಹಿಕಶ್ಚಿತ್ಕ್ಷಣಮಪಿ" (೩||೫||) ಎಂಬ ನ್ಯಾಯದಿಂದ ಕರ್ಮಸನ್ಯಾಸಕ್ಕಿಂತಲೂ, ಕರ್ಮಯೋಗವು ಸುಕರವಾದುದರಿಂದಲೂ, ಇಲ್ಲಿ ಕರ್ಮಯೋಗವು ಶ್ರೇಷ್ಠವೆಂದರಿಯಬೇಕು. ಆದುದರಿಂದ ಪರಸ್ಪರ ವಿರುದ್ಧಗಳಾದ ಸನ್ಯಾಸ ಕರ್ಮಯೋಗಗಳು ಏಕ ಕಾಲದಲ್ಲಿ ಆಚರಿಸತಕ್ಕದ್ದಾಗಿರಲಾಗಿ ಇವುಗಳಲ್ಲಿದು ಪ್ರಶಸ್ತವಾದ್ದೆಂಬುದಾಗಿಯಾದರೂ ಇದರಲ್ಲಿ ಪ್ರಾಶಸ್ತ್ಯವಿರುವುದು ಇದರಲ್ಲಿ ಪ್ರಾಶಸ್ತ್ಯವಿಲ್ಲವೆಂತಲಾದರೂ ನಿರ್ಧಾರಣವಿಲ್ಲದೇ ಇರುವುದರಿಂದ, ಅಂತಹ ನಿರ್ಧಾರಣಕ್ಕಾಗಿ ಪ್ರಶ್ನವು ಯುಕ್ತವಾಗಿರುವುದೆಂದು ಯೋಚಿಸಿ ಅದಕ್ಕೆ ಪ್ರತ್ಯುತ್ತರವಾಗಿ ಹೇಳಲ್ಪಟ್ಟ ವಾಕ್ಯಾರ್ಥದಿಂದಲೂ ಸಿದ್ಧಾಂತ ಮಾಡಲ್ಪಟ್ಟ ಮೊದಲು ಹೇಳಲ್ಪಟ್ಟ ಅರ್ಜುನನ ಪ್ರಶ್ನಾಭಿಪ್ರಾಯವು ಪ್ರತ್ಯುತ್ತರ ವಾಕ್ಯದಿಂದ ನಿರ್ಣಯಿಸಲ್ಪಟ್ಟಿರುವುದರಿಂದ ಮೊದಲು ವಿವರಿಸಲ್ಪಟ್ಟಿರುವುದೇ ಪ್ರಶ್ನಮಾಡತಕ್ಕ ಅರ್ಜುನನನ ಅಭಿಪ್ರಾಯವೆಂಬುದಾಗಿ ನಿಶ್ಚಿತವಾಗಿರುವುದು.

ಜ್ಞಾನಕರ್ಮಗಳನ್ನೇಕ ಕಾಲದಲ್ಲನುಷ್ಠಿಸಲಶಕ್ಯವಿಲ್ಲವಾದುದರಿಂದ ಇವುಗಳಲ್ಲಿ ಯಾವದು ಪ್ರಶಸ್ತತರವೋ ಅದಂಹೇಳೆಂದರ್ಜುನನಿಂದ ಪ್ರಶ್ನೆಮಾಡಲ್ಪಟ್ಟ ಶ್ರೀಪರಮಾತ್ಮನು ಸಾಂಖ್ಯರಿಗೆ ಜ್ಞಾನಯೋಗನಿಷ್ಠೆಯೂ, ಯೋಗಿಗಳಿಗೆ ಕರ್ಮಯೋಗನಿಷ್ಠೆಯೂ, ವೇದಾಂತಗಳಲ್ಲಿ ಹೇಳಿರುವುದೆಂದು ನಿರ್ಣಯವಂ ಮಾಡಿದನು. "ನಚಸನ್ಯಾಸನಾದೇವ (ಕೇವಲಾತ್)ಸಿದ್ಧಿಂಸಮಧಿಗಚ್ಛತಿ॥(೩॥೪॥)ಎಂಬುವ ವಚನ ಪ್ರಕಾರವಾಗಿ ಜ್ಞಾನಸಹಿತವಾದ ಸನ್ಯಾಸವುಮೋಕ್ಷರೂಪವಾದ ಸಿದ್ಧಿಗೆ ಸಾಧನವಾಗುವುದೆಂಬುವುದು ಇಷ್ಟವೇ; ಇದಲ್ಲದೇ "ಭಿಕ್ತ್ಯೈನಂ ಸಂಶಯಂಯೋಗಮಾತಿಷ್ಠ" ಎಂಬುವುದರಿಂದ ಜ್ಞಾನರಹಿತನಿಗೆ ಕರ್ಮವನ್ನು ವಿಧಿಸುವುದರಿಂದ ಕರ್ಮಯೋಗವು ಮೋಕ್ಷಪ್ರಾಪ್ತಿಗೆ ಸಾಧನವಾಗಿರುವುದೆಂತಲೂ ಭಗವಂತನಾದ ಕೃಷ್ಣನು ನಿರ್ಣಯಿಸಿರುವುದರಿಂದ ಕರ್ಮಸನ್ಯಾಸ ಕರ್ಮಯೋಗಗಳೆಂಬೀ ಯೆರಡರಲ್ಲಿ ಜ್ಞಾನರಹಿತನಿಗೆ ಕರ್ಮಯೋಗಕ್ಕಿಂತಲೂ ಸನ್ಯಾಸವು ಶ್ರೇಷ್ಠವಾದದ್ದೆ ? ಅಥವಾ ಸನ್ಯಾಸಕ್ಕಿಂತಲೂ ಕರ್ಮಯೋಗವುಶ್ರೇಷ್ಠವಾದದ್ದೆ ? ಎಂಬೀಎರಡರಲ್ಲಿ ಯಾವದು ಶ್ರೇಷ್ಠತರವಾದದ್ದೋ ಅದಂ ತಿಳಿಯಲಿಚ್ಛೆಯಿಂದರ್ಜುನನು ಪ್ರಶ್ನೆಮಾಡುತ್ತಾನೆ.

(ರಾ ॥ ಭಾ ॥) ಅವತಾರಿಕಾ ॥ ನಾಲ್ಕನೇ ಅಧ್ಯಾಯದಲ್ಲಿ ಕರ್ಮಯೋಗದ ಜ್ಞಾನಾಕಾರತಾ ಪೂರ್ವಕವಾದ ಸ್ವರೂಪ ಭೇದವೂ, ಅದರಲ್ಲಿ ಜ್ಞಾನಾಂಶಕ್ಕೆ ಪ್ರಾಧಾನ್ಯವೂ ಹೇಳಲ್ಪಟ್ಟಿತು. ಕರ್ಮಯೋಗವು ಜ್ಞಾನಗರ್ಭವಾಗಿರುವದರಿಂದಲೂ, ಸುಕರವಾಗಿರುವುದರಿಂದಲೂ, ಪ್ರಮಾದವನ್ನುಂಟುಮಾಡದೇ ಇರುವುದರಿಂದಲೂ, ಫಲಸಿದ್ಧಿಯಂ ಕುರಿತುಮತ್ತೊಂದನ್ನಪೇಕ್ಷಿಸದೇಇರುವುದರಿಂದಲೂ, ಜ್ಞಾನಯೋಗಾಧಿಕಾರಿಗೂ ಕೂಡ ಕರ್ಮಯೋಗವೇ ಮಾಡತಕ್ಕದ್ದೆಂದು ಹೇಳಲ್ಪಟ್ಟಿತು ಈಗ ಕರ್ಮವು ಉಪಾಯವೆಂತಲೂ, ಅದಂಮಾಡಬೇಕಾದರೆ ಅದರಲ್ಲಿತನಗೆ ಕರ್ತೃತ್ವ ವಿಲ್ಲವೆಂಬುವ ಅನುಸಂಧಾನ ಪ್ರಕಾರವನ್ನು ಪ್ರತಿಪಾದಿಸಿ ಅದಕ್ಕೆ ಕಾರಣವಾದ ಜ್ಞಾನವೂ ಶೋಧಿಸಲ್ಪಡುವುದು.

(ಮ ॥ ಭಾ ॥) ಮೂರನೇ ಅಧ್ಯಾಯದಲ್ಲಿ ಹೇಳಲ್ಪಟ್ಟ ಕರ್ಮಯೋಗವನ್ನೇ ಈ ಅಧ್ಯಾಯದಲ್ಲಿ ವಿಸ್ತರಿಸುತ್ತಾನೆ.

(ಗೀವಿ॥ ಮೂರನೇ ಅಧ್ಯಾಯದಲ್ಲಿ ಕರ್ಮಯೋಗವನ್ನು ಹೇಳಿದನು. ಫಲಾಪೇಕ್ಷಾದಿಗಳನ್ನು ಬಿಟ್ಟು ಶ್ರೀಕೃಷ್ಣಾರ್ಪಣ ಬುದ್ಧಿಯಿಂದ ಮಾಡಲ್ಪಡುವ ವಿಹಿತಕರ್ಮಗಳು ಕರ್ಮಯೋಗವೆನ್ನಲ್ಪಡುವುದು; ಈ ಕರ್ಮಯೋಗವು ಭಾಗದ್ವಯಾತ್ಮಕವಾಗಿರುವುದು ; ಕಾಮಾದಿವರ್ಜನವು ಒಂದುಭಾಗವಾಗಿಯೂ ಕರ್ಮಾನುಷ್ಠಾನವು ಒಂದುಭಾಗವಾಗಿಯೂ ಇರುವುದೆಂದರಿಯಬೇಕು. ಆದರಲ್ಲಿ ಕಾಮಾದಿವರ್ಜನವನ್ನು ಸನ್ಯಾಸವೆಂತಲೂ, ಕರ್ಮಾನುಷ್ಠಾನವನ್ನು ಕರ್ಮಯೋಗವೆಂತಲೂ ಹೇಳುವರು. "ಯೋಗಸ್ಥಃಕುರುಕರ್ಮಾಣಿ ಸಂಗಂತ್ಯಕ್ತ್ವಾ" (೨॥ ೪೮) ಎಂಬಿವೇ ಮೊದಲಾದ ವಾಕ್ಯಗಳಿಂದ ಕರ್ಮಗಳು ಮಾಡತಕ್ಕವುಗಳೆಂದು ದ್ವಿತೀಯಾಧ್ಯಾಯದಲ್ಲಿ ಸಂಗ್ರಹವಾಗಿ ಹೇಳಲ್ಪಟ್ಟಿತು. ಅಂಥಾ ವರ್ಣಾಶ್ರಮವಿಹಿತವಾದ ಕರ್ಮಗಳನ್ನೇ ಫಲಾಪೇಕ್ಷೆಯಿಲ್ಲದೆ ಭಗವದರ್ಪಣ ಬುದ್ಧಿಯಿಂದ ಮಾಡಬೇಕೆಂಬದಾಗಿ ತೃತೀಯಾಧ್ಯಾಯದಲ್ಲಿ ಹೇಳಿ ಆಯಿತು. ಮೇಲೆ ವಿವರಿಸಿರುವಂತೆ ಭಾಗದ್ವಯಾತ್ಮಕವಾದ ಕರ್ಮಯೋಗವನ್ನು ವಿಸ್ತರಿಸಿ ಹೇಳಲು ಈ ಅಧ್ಯಾಯವು ಪ್ರವೃತ್ತವಾಯಿತೆಂದರಿಯಬೇಕು.

(ಶ್ರೀ॥)ನಿವಾರ್ಯಸಂಶಯಂ ಜಿಷ್ಣೋಃಕರ್ಮಸನ್ಯಾಸಯೋಗಯೋಃ। ಜಿತೇಂದ್ರಿಯಸ್ಯಚಯತೇಃ ಪಂಚಮೋಮುಕ್ತಿಮಬ್ರವೀತ್॥ ಕರ್ಮ, ಸನ್ಯಾಸ,ಯೋಗಗಳಲ್ಲಿ ಅರ್ಜುನನಿಗುಂಟಾದ ಸಂಶಯವನ್ನು ನಿವಾರಿಸಿ ಜಿತೇಂದ್ರಿಯನಾದ ಯತಿಯಾದವನಿಗೆ ಈ ಐದನೇ ಅಧ್ಯಾಯದಲ್ಲಿ ಮುಕ್ತಿಯುಂಟಾಗುವಪ್ರಕಾರವನ್ನು ಶ್ರೀಕೃಷ್ಣನರ್ಜುನನಿಗುಪದೇಶಿಸುತ್ತಾನೆ.

(ಮಧುಸೂ॥) ಅಧ್ಯಾಯಾಭ್ಯಾಂ ಕೃತೋದ್ವಾಭ್ಯಾಂ ನಿರ್ಣಯಃ ಕರ್ಮಬೋಧಯೋಃ। ಕರ್ಮತತ್ತ್ಯಾಗಯೋರ್ದ್ವಾಭ್ಯಾಂನಿರ್ಣಯಃ ಕಥ್ಯತೇಽಧುನಾ ॥ ಇದುವರೆಗೂ ಹೇಳಲ್ಪಟ್ಟ ತೃತೀಯ ಚತುರ್ಥಾಧ್ಯಾಯಗಳಿಂದ ಕರ್ಮಜ್ಞಾನಗಳ ನಿರ್ಣಯವು ಮಾಡಲ್ಪಟ್ಟಿತು. ಈ ಐದು ಆರನೇ ಅಧ್ಯಾಯಗಳಿಂದ ಕರ್ಮಾನುಷ್ಠಾನವೇನು, ಕರ್ಮತ್ಯಾಗವೇನು, ಇವುಗಳ ನಿರ್ಣಯಗಳು ಹೇಳಲ್ಪಡುವುದು.

ಮೂ॥ ಅರ್ಜುನಉವಾಚ॥ ಸನ್ನ್ಯಾಸಂಕರ್ಮಣಾಂಕೃಷ್ಣಪುನರ್ಯೋಗಂಚ ಶಂಸಸಿ । ಯಚ್ಛ್ರೇಯಏತಯೋರೇಕಂ ತನ್ಮೇಬ್ರೂಹಿ ಸುನಿಶ್ಚಿತಂ । ॥೧॥

ಪ॥ ಅರ್ಜುನಃ - ಉವಾಚ॥ ಸನ್ನ್ಯಾಸಂ-ಕರ್ಮಣಾಂ-ಕೃಷ್ಣ - ಪುನಃ- ಯೋಗಂ-ಚ- ಶಂಸಸಿ । ಯತ್-ಶ್ರೇಯಃ- ಏತಯೋಃ-ಏಕಂ- ತತ್- ಮೇ- ಬ್ರೂಹಿ-ಸುನಿಶ್ಚಿತಂ॥

ಅ॥ ಅರ್ಜುನನು ಹೇಳಿದನು. ಹೇಕೃಷ್ಣ - ಎಲೈ ಶ್ರೀಕೃಷ್ಣನೇ, ಕರ್ಮಣಾಂ-ಕರ್ಮಗಳ, ಸನ್ನ್ಯಾಸಂ- ತ್ಯಾಗವನ್ನು, ಪುನಃ- ಮರಳಿ, ಯೋಗಂಚ- ಕರ್ಮಯೋಗವನ್ನು, ಶಂಸಸಿ- ಹೇಳುತ್ತೀ, ಏತಯೋಃ- ಇವುಗಳಲ್ಲಿ, ಯತ್- ಯಾವದು, ಶ್ರೇಯಃ-ಶ್ರೇಯಸ್ಕರವೋ, ಸುನಿಶ್ಚಿತಂತದೇಕಂ-ನಿಶ್ಚಯವಾಗಿ ನಿಶ್ಚಯಿಸಲ್ಪಟ್ಟ ಆ ಒಂದನ್ನು, ಮೇ- ನನಗೆ, ಬ್ರೂಹಿ- ಹೇಳು. ... ... ॥೧॥

(ಶಂ॥ ಭಾ॥) ಅನುಷ್ಠಿಸಬೇಕಾದ ಶಾಸ್ತ್ರೀಯಕರ್ಮಗಳ ಸನ್ನ್ಯಾಸವನ್ನು ವಿಶೇಷವಾಗಿ ಹೇಳುತ್ತೀ, ಪುನಶ್ಚ ಅವಶ್ಯಕವಾದ ಕರ್ಮಗಳನ್ನಾಚರಿಸುವುದೆಂಬ ಕರ್ಮಯೋಗವನ್ನು ಹೇಳುತ್ತೀ, ಆದುದರಿಂದಿವುಗಳಲ್ಲಿ ಯಾವದು ಪ್ರಶಸ್ತತರವೋ (ಕರ್ಮಾನುಷ್ಠಾನವು ಶ್ರೇಯಸ್ಕರವೋ ? ಅಥವಾ ಕರ್ಮಸನ್ನ್ಯಾಸವು ಶ್ರೇಯಸ್ಕರವೋ ? ) ಎಂಬದಾಗಿ ಸಂಶಯ ವುಂಟಾಗಿರುವುದು. ಪ್ರಶಸ್ತತರವ್ಯಾವದೋ ಅದು ತಿಳಿದರೇ ಅದನ್ನನುಷ್ಠಿಸಬಹುದು. ಏಕಾಧಿಕಾರಿಯಿಂದ ಏಕಕಾಲದಲ್ಲಿ ಈ ಕರ್ಮಾನುಷ್ಠಾನ ಕರ್ಮಸನ್ನ್ಯಾಸಗಳಾಚರಿಸಲಸಾಧ್ಯಗಳಾಗಿರುವುವು. ಆದುದರಿಂದಿವುಗಳಲ್ಲಿ ಯಾವದನ್ನಾಚರಿಸಿದರೇ ಶ್ರೇಯಸ್ಕರವೋ ಅದನ್ನು ನಿಶ್ಚಯಿಸಿ ನೀನು ನನಿಗುಪದೇಶಿಸೆಂದರ್ಜುನನು ಶ್ರೀಕೃಷ್ಣನಂ ಕುರಿತು ಪ್ರಶ್ನೆಮಾಡಿದನು. ॥೧॥

(ರಾ॥ಭಾ॥) ಎಲೈ ಶ್ರೀಕೃಷ್ಣನೇ! ಕರ್ಮಯೋಗವನ್ನು ಬಿಟ್ಟು ಆಶ್ರಯಿಸಬೇಕಾದ ಜ್ಞಾನಯೋಗವನ್ನಾಚರಿಸೆಂದು ಮೊದಲು ಹೇಳಿ ಪುನಶ್ಚ ಕರ್ಮವನ್ನೇ ಮಾಡೆಂದು ಹೇಳುತ್ತೀ. (ಮೋಕ್ಷಾಪೇಕ್ಷೆಯುಳ್ಳವನು ಕರ್ಮವನ್ನು ಮಾಡಿ ಅದರಿಂದ ಮನಃಕಲ್ಮಷಗಳೆಲ್ಲವನ್ನು ಹೋಗಲಾಡಿಸಿಕೊಂಡು ಅನಂತರದಲ್ಲಿ ಜ್ಞಾನಯೋಗದಿಂದ ಆತ್ಮಸಾಕ್ಷಾತ್ಕಾರವಂ ಹೊಂದಬೇಕೆಂದು ಮೊದಲು ಹೇಳಿ ಅನಂತರದಲ್ಲಿ ಮೂರುನಾಲ್ಕನೇ ಅಧ್ಯಾಯಗಳಲ್ಲಿ ಜ್ಞಾನಯೋಗಾಧಿಕಾರಿಗೂಕೂಡ ಕರ್ಮನಿಷ್ಠೆಯೇ ಶ್ರೇ

ಷ್ಠವೆಂಬದಾಗಿಯೂ, ಅದು ಜ್ಞಾನನಿಷ್ಠೆಯನ್ನೆದರುನೋಡದೇನೆ ಆತ್ಮಪ್ರಾಪ್ತಿಯನ್ನು ಸಾಧಿಸುವುದೆಂಬದಾಗಿಯೂ, ಕರ್ಮಯೋಗವನ್ನೇ ಅಧಿಕವಾಗಿ ಪ್ರಶಂಸಮಾಡಿರುತ್ತೀ.) ಆದುದರಿಂದ ಅಜ್ಞಾನಕರ್ಮಯೋಗಗಳಲ್ಲಿ ಯಾವದು ಶೀಘ್ರವಾಗಿಯೂ ಸುಕರವಾಗಿಯೂ, ಆತ್ಮಪ್ರಾಪ್ತಿಗೆ ಸಾಧನವಾಗುವುದೆಂಬದಾಗಿ ನೀನು ನಿಶ್ಚಯಮಾಡಿರುತ್ತೀಯೋ ಅದಂ ಹೇಳಬೇಕೆಂದರ್ಜುನನು ಕೇಳಿದನು. ॥೧॥

(ಗೀ॥ ವಿ॥) ಎಲೈ ಕೃಷ್ಣನೇ ನಾಲ್ಕನೇ ಅಧ್ಯಾಯದಲ್ಲಿ "ಯದೃಚ್ಛಾಲಾಭಸಂತುಷ್ಟಃ, (೪॥ ೨೨॥) ಇತ್ಯಾದಿ ವಾಕ್ಯಗಳಿಂದ ಕಾಮ್ಯಾದಿ ವರ್ಜನರೂಪವಾದ ಸನ್ಯಾಸವನ್ನೂ, "ಕುರುಕರ್ಮೈವತಸ್ಮಾತ್ತ್ವಂ" (೪॥ ೧೫॥) ಇತ್ಯಾದಿಗಳಿಂದ ವರ್ಣಾಶ್ರಮವಿಹಿತವಾದ ಕರ್ಮಗಳಂ ಭಗವದರ್ಪಣಬುದ್ಧಿಯಿಂದ ಅನುಷ್ಠಿಸುವುದೆಂಬ ಕರ್ಮಯೋಗವನ್ನೂ ಹೇಳುತ್ತೀ, ಇವುಗಳಲ್ಲಿ ಯಾವದು ಅಧಿಕವ್ರೋ ಅದಂ ಸವಿಶಾಚೀನವಾಗಿ ನಿಶ್ಚಯಿಸಿ ಹೇಳು. ಸನ್ಯಾಸವು ಅಧಿಕವಾಗಿದ್ದರೇ ಅದನ್ನೇ ಗ್ರಹಿಸುವೆನಲ್ಲದೆ ಅದಕ್ಕೆ ವಿರೋಧಿಯಾದ ಕಾಮದ್ವೇಷಾದಿಗಳೊಡನೇ ಕೂಡಿರುವ ಯುದ್ಧವೆಂಬ ಹೆಸರುಳ್ಳ ಕರ್ಮಯೋಗದಿಂದೇನುಪ್ರಯೋಜನವು. (ಅಥವಾ) " ಯೋಗಸನ್ನ್ಯಸ್ತಕರ್ಮಾಣಂ " (೪॥ ೪೧॥) ಎಂಬ ಶ್ಲೋಕದಿಂದ ಯತ್ಯಾಶ್ರಮರೂಪವಾದ ಸನ್ಯಾಸವನ್ನು ಹೇಳಿದನೆಂತಲೂ " ಯೋಗಮಾತಿಷ್ಠ" (೪॥೪೨॥) ಎಂಬ ಶ್ಲೋಕದಿಂದ ಗೃಹಸ್ಥಾಶ್ರಮರೂಪವಾದ ಯೋಗವನ್ನು ಹೇಳಿದನೆಂತಲೂ ತಿಳಿದು ಅರ್ಜುನನು ಪ್ರಶ್ನೆಮಾಡುತ್ತಾನೆ. ಎಲೈ ಶ್ರೀಕೃಷ್ಣನೇ, ಕರ್ಮಗಳ ಸನ್ಯಾಸರೂಪವಾದ ಯತ್ಯಾಶ್ರಮವನ್ನು "ಯೋಗಸನ್ನ್ಯಸ್ತಕರ್ಮಾಣಂ" (೪॥ ೪೧॥) ಎಂಬ ಶ್ಲೋಕದಿಂದ ಹೇಳುತ್ತೀ, ಮತ್ತು "ಯೋಗಮಾತಿಷ್ಠ" (೪॥೪೨॥) ಎಂಬ ಶ್ಲೋಕದಿಂದ ಗೃಹಸ್ಥಾಶ್ರಮವನ್ನು ಹೇಳುತ್ತೀ, ಜ್ಞಾನಮಾತ್ರದಲ್ಲಧಿಕಾರಿಗಳಾದ ಯತಿಗಳಿಗೆ ಗೃಹಸ್ಥಕರ್ಮಗಳಲ್ಲಿ ಅಧಿಕಾರವಿಲ್ಲವು, ಕರ್ಮಾಧಿಕಾರಿಗಳಾದ ಗೃಹಸ್ಥರಿಗೆ ಯತಿಧರ್ಮಗಳಲ್ಲಧಿಕಾರವಿಲ್ಲವು. ಏಕಾಧಿಕಾರಿಗೆ ಒಂದೇಕಾಲದಲ್ಲಿ ಗೃಹಸ್ಥಯತಿಧರ್ಮಗಳೆಂಬೀ ಯರಡೂ ಆಚರಿಸಲು ಆಗಲಾರದು. ಆದುದರಿಂದಲೇ ಒಂದನ್ನು ಬಿಟ್ಟು ಮ

ತೊಂದನ್ನಾಚರಿಸಬೇಕಾಗಿರುವುದು ; ಅವುಗಳಲ್ಲಿ ಯಾವದು ಅಧಿಕವೋ ಯಾವದು ಮಾಡತಕ್ಕದ್ದೋ ಅದಂ ಹೇಳೆಂದು ಪ್ರಶ್ನೆ ಮಾಡಿದನು.

ಮೂ॥ ಶ್ರೀಭಗವಾನುವಾಚ॥ ಸನ್ನ್ಯಾಸಃ ಕರ್ಮಯೋ
ಗಶ್ಚ ನಿಶ್ಶ್ರೇಯಸಕರಾವುಭೌ। ತಯೋಸ್ತು ಕರ್ಮ ಸ
ನ್ನ್ಯಾಸಾತ್ಕರ್ಮಯೋಗೋ ವಿಶಿಷ್ಯತೇ ॥ ॥೨॥

ಪ॥ ಶ್ರೀಭಗವಾನ್- ಉವಾಚ॥ ಸನ್ನ್ಯಾಸಃ- ಕರ್ಮಯೋಗಃ- ಚ- ನಿಶ್ಶ್ರೇಯಸಕರೌ- ಉಭೌ। ತಯೋಃ - ತು - ಕರ್ಮಸನ್ನ್ಯಾಸಾತ್- ಕರ್ಮಯೋಗಃ - ವಿಶಿಷ್ಯತೇ ॥೨॥

ಠ॥ ಶ್ರೀಭಗವಾನುವಾಚ- ಶ್ರೀಕೃಷ್ಣನು ಹೇಳಿದನು, ಸನ್ನ್ಯಾಸಃ-ಕರ್ಮಸಂನ್ಯಾಸವು, (ಶಂ॥ ಶ್ರೀ॥) ಜ್ಞಾನಿಯಾದವನು ಕರ್ಮತ್ಯಾಗವಂ ಮಾಡುವುದೂ, (ರಾ) ಜ್ಞಾನಯೋಗವೂ, (ಗೀ॥ ವಿ॥) ಕಾಮಕ್ರೋಧಾದಿ ದ್ವಂದ್ವಗಳನ್ನು ಬಿಡುವದೂ, ಕರ್ಮಯೋಗಶ್ಚ- ಭಗವದರ್ಪಣಬುದ್ಧಿಯಿಂದ ಕರ್ಮ ಮಾಡುವುದೂ, ಆದರುವ, ಉಭೌ- ಈ ಯೆರಡೂ, ನಿಶ್ಶ್ರೇಯಸಕರೌ - ಮೋಕ್ಷವನ್ನು ಕೊಡತಕ್ಕವುಗಳು, ತಯೋಸ್ತು ಅವುಗಳಲ್ಲಿ, ಕರ್ಮಸನ್ನ್ಯಾಸಾತ್ - ಕರ್ಮತ್ಯಾಗಕ್ಕಿಂತಲೂ, (ರಾ) ಜ್ಞಾನನಿಷ್ಠೆಗಿಂತಲೂ, (ಗೀ॥ ವಿ॥) ಕರ್ಮಾನುಷ್ಠಾನಮಾಡುವುದರಲ್ಲಿ ಕಾಮಕ್ರೋಧದ್ವೇಷಾದಿ ವರ್ಜನರೂಪವಾದ ಸನ್ನ್ಯಾಸಕ್ಕಿಂತಲೂ, ಕರ್ಮಯೋಗಃ - ಫಲಾಪೇಕ್ಷಾರಹಿತವಾಗಿ, ಈಶ್ವರಾರ್ಪಣಬುದ್ಧಿಯಿಂದ ಮಾಡಲ್ಪಡುವ ಕರ್ಮಯೋಗವು, ವಿಶಿಷ್ಯತೇ-ಶ್ರೇಷ್ಠವಾಗಿರುವುದು.॥೨॥

(ಶಂ॥ ಭಾ॥) ಅರ್ಜುನನ ಪ್ರಶ್ನೆಕ್ಕೆ ತನ್ನ ಅಭಿಪ್ರಾಯವಂ ಹೇಳಲುದ್ದೇಶಿಸಿ ಅನ್ಯನಾದ ಅರ್ಜುನನ ಸಂಶಯವಂ ನಿವೃತ್ತಿಮಾಡಲೀ ಶ್ಲೋಕವನ್ನು ಶ್ರೀಕೃಷ್ಣನು ಹೇಳುತ್ತಾನೆ. ಕರ್ಮಗಳ ಪರಿತ್ಯಾಗವೂ, ಕರ್ಮಾನುಷ್ಠಾನವೂ, ಎಂಬೀ ಯೆರಡೂ ಜ್ಞಾನೋತ್ಪತ್ತಿಗೆ ಕಾರಣವಾಗುವುದರಿಂದ ಮೋಕ್ಷಸಾಧನಗಳಾದರೂ ನಿಶ್ಶ್ರೇಯಸಹೇತುಗಳಾದ ಅವುಗಳಲ್ಲಿ ಕೇವಲವಾದ (ಆತ್ಮಜ್ಞಾನರಹಿತವಾದ) ಕರ್ಮಸನ್ನ್ಯಾಸಕ್ಕಿಂತಲೂ ಕರ್ಮಯೋಗವು ಶ್ರೇಷ್ಠವೆಂಬದಾಗಿ ಕರ್ಮಯೋಗವನ್ನು ಸ್ತುತಿಸಿದನು. ॥೨॥

(ರಾ॥ ಭಾ॥) ಎಲೈ ಅರ್ಜುನನೇ ! ಸನ್ನ್ಯಾಸವೆಂಬದಾಗಿ ಹೇಳಲ್ಪಡುವ ಜ್ಞಾನಯೋಗ, ಕರ್ಮಯೋಗಗಳೆಂಬೀ ಯೆರಡೂ ಮೋಕ್ಷಸಾಧನಗಳಾದರೂ ಅವುಗಳಲ್ಲಿ ಜ್ಞಾನಯೋಗಕ್ಕಿಂತಲೂ ಕರ್ಮಯೋಗವು ಶ್ರೇಷ್ಠವೆಂದರಿಯಬೇಕು. ... ... ॥೨॥

(ಗೀ|| ವಿ||) ಕಾಮಾದಿವರ್ಜನವೆಂಬ ಸನ್ನ್ಯಾಸವು, ವಿಹಿತಕರ್ಮಾನುಷ್ಠಾನವನ್ನಾಚರಿಸುವುದೆಂಬ ಕರ್ಮಯೋಗವೆಂಬೀ ಯೆರಡೂ ಕೂಡಿ ಮೋಕ್ಷಸಾಧನವಾಗುವುವು. ಅವುಗಳಲ್ಲಿ ಕಾಮಾದಿವರ್ಜನವೆಂಬ ಸನ್ನ್ಯಾಸಕ್ಕಿಂತಲೂ ವಿಹಿತ ಕರ್ಮಾನುಷ್ಠಾನವೆಂಬ ಕರ್ಮಯೋಗವು ಶ್ರೇಷ್ಠವು. "ದ್ವಂದ್ವತ್ಯಾಗಾತ್ತು ಸನ್ನ್ಯಾಸಾ ನ್ಮತ್ತೋಪ್ಯೇವಗರೀಯಸೀ" ಎಂಬ ಪ್ರಮಾಣವೇ ಇದಕ್ಕಾಧಾರವಾಗಿರುವುದು. (ಅಥವಾ) ಸನ್ನ್ಯಾಸಃ - ಸನ್ನ್ಯಾಸವು, ಕರ್ಮಯೋಗಃ - ಕರ್ಮಯೋಗವು, ಈ ಯೆರಡೂ ಒಬ್ಬನಿಂದಲೇ ಆಚರಿಸುವುದಕ್ಕೆ ಯೋಗ್ಯವಾದದ್ದು. ಅವುಗಳಲ್ಲಿ ಸನ್ನ್ಯಾಸಕ್ಕಿಂತಲೂ, ಕರ್ಮಯೋಗವು ಸ್ವರೂಪದಿಂದ ಶ್ರೇಷ್ಠವೆಂದು ಗೂಢಾಭಿಪ್ರಾಯದಿಂದ ಪರಿಹಾರವು. ಇದು ತಾತ್ಪರ್ಯದಲ್ಲಿ ಹೇಳಿದ ಅಭಿಪ್ರಾಯವು. ||೨||

ಮೂ|| ಜ್ಞೇಯಸ್ಸನಿತ್ಯಸನ್ನ್ಯಾಸೀ ಯೋನದ್ವೇಷ್ಟಿ
ನಕಾಂಕ್ಷತಿ | ನಿರ್ದ್ವಂದ್ವೋಹಿಮಹಾಬಾಹೋ ಸುಖಂ
ಬಂಧಾತ್ಪ್ರಮುಚ್ಯತೇ || ... ||೩||

ಪ| ಜ್ಞೇಯಃ- ಸಃ- ನಿತ್ಯಸನ್ನ್ಯಾಸೀ- ಯಃ- ನ - ದ್ವೇಷ್ಟಿ- ನ- ಕಾಂಕ್ಷತಿ | ನಿರ್ದ್ವಂದ್ವಃ- ಹಿ- ಮಹಾಬಾಹೋ- ಸುಖಂ- ಬಂಧಾತ್- ಪ್ರಮುಚ್ಯತೇ || ||೩||

ಅ| ಹೇಮಹಾಬಾಹೋ- ದೀರ್ಘವಾದ ಬಾಹುಗಳುಳ್ಳ ಎತ್ತಿ ಅರ್ಜುನನೇ ! ಯಃ- ಯಾವನು [illegible], ನದ್ವೇಷ್ಟಿ - ದ್ವೇಷವನ್ನು ಪಡುವುದಿಲ್ಲವೋ, ನಕಾಂಕ್ಷತಿ- ಅಪೇಕ್ಷಿಸುವುದಿಲ್ಲವೋ, (ರಾ) ಕರ್ಮದೊಳಗಿರುವ ಆತ್ಮಾನುಭವದಲ್ಲಿ ತೃಪ್ತಿಹೊಂದಿರುವಂತವನಾದುದರಿಂದ ಅದಕ್ಕಿಂತ ಅನ್ಯಪದಾರ್ಥಗಳಲ್ಲಾಸಕ್ತಿಶೂನ್ಯನಾಗಿರುವನೋ, ನಿರ್ದ್ವಂದ್ವೋಹಿ- ಸುಖದುಃಖಾದಿದ್ವಂದ್ವವಿಲ್ಲದೆ ಇರುವನೋ ! ಸಃ - ಅವನು, ನಿತ್ಯಸನ್ನ್ಯಾಸೀತಿಜ್ಞೇಯಃ - ನಿತ್ಯಸನ್ನ್ಯಾಸಿಯೆಂಬದಾಗಿ ತಿಳಿಯತಕ್ಕವನು. (ರಾ) ಯಾವಾಗಲೂ ಜ್ಞಾನನಿಷ್ಠೆಯುಳ್ಳವರತಕ್ಕವನೆಂಬದಾಗಿ ತಿಳಿಯುತಕ್ಕವನು. (ಗೀ || ವಿ||) ಇದು ಯತಿಯೇ ಮೊದಲಾದ ಸನ್ನ್ಯಾಸಿ ವಿಷಯವಲ್ಲವು, ಕಾಮ್ಯ ಕರ್ಮಗಳಂ ಬಿಟ್ಟವನ ವಿಷಯವು, ಸಃ- ಅವನು, ಸುಖಂ- ಪ್ರಯಾಸವಿಲ್ಲದೆ, ಬಂಧಾತ್- ಕರ್ಮಬಂಧದಿಂದ, ಪ್ರಮುಚ್ಯತೇ- ಬಿಡಲ್ಪಡುವನು. ||೩||

(ರಾ|| ಭಾ||) ಕರ್ಮಯೋಗವು ಯಾವಕಾರಣದಿಂದ ಅತಿಶಯಿಸಲ್ಪಡುವುದೆಂದರೆ ಹೇಳುತ್ತಾನೆ,- ಯಾವಕರ್ಮಯೋಗಿಯು ಕರ್ಮದೊಳಗಿರುವ ಆತ್ಮಾನುಭವದಲ್ಲಿ ತೃಪ್ತಿಹೊಂದಿರುವವನಾದುದರಿಂದ

ಅಂತಹ ಅನುಭವವನ್ನಲ್ಲದೇ ಅನ್ಯಪದಾರ್ಥಗಳಲ್ಲ್ಯಾವದನ್ನೂ ಅಪೇಕ್ಷಿಸುವುದಿಲ್ಲವೋ; ಅಂತಹ ಅಪೇಕ್ಷಾಶೂನ್ಯನಾಗಿರುವುದರಿಂದಲೇ ಯಾವದನ್ನೂ ದ್ವೇಷಿಸುವುದಿಲ್ಲವೋ; ಆದುದರಿಂದಲೇ ಸುಖದುಃಖಗಳೆಂಬ ದ್ವಂದ್ವವನ್ನು ಸಹಿಸುವಂತವನಾಗಿಯೂ ಆಗುತ್ತಾನೇ. ಅಂಥಾವನನ್ನು ನಿತ್ಯವಾಗಿ ಜ್ಞಾನನಿಷ್ಠೆಯಲ್ಲಿರತಕ್ಕವನೆಂದು ತಿಳಿಯಬೇಕು. ಅವನು ಸುಕರವಾದ ಕರ್ಮಯೋಗನಿಷ್ಠನಾಗಿರುವುದರಿಂದ ಸುಖವಾಗಿಬಂಧದಿಂದ ಬಿಡಲ್ಪಡುವನು. ॥೩॥

ಮೂ॥ ಸಾಂಖ್ಯಯೋಗೌ ಪೃಥಗ್ಬಾಲಾಃ ಪ್ರವದಂತಿ
ನಪಂಡಿತಾಃ । ಏಕಮಪ್ಯಾಸ್ಥಿತಸ್ಸಮ್ಯ ಗುಭಯೋರ್ವಿಂ
ದತೇಫಲಂ ॥ ... ... ॥೪॥

ಪ॥ ಸಾಂಖ್ಯಯೋಗೌ- ಪೃಥಕ್- ಬಾಲಾಃ- ಪ್ರವದಂತಿ- ನ- ಪಂಡಿತಾಃ । ಏಕಂ- ಅಪಿ- ಆಸ್ಥಿತಃ- ಸಮ್ಯಕ್- ಉಭಯೋಃ- ವಿಂದತೇ- ಫಲಂ ॥ ॥೪॥

ಅ॥ ಸಾಂಖ್ಯಯೋಗೌ- ಜ್ಞಾನಕರ್ಮಯೋಗಗಳನ್ನು, ಪೃಥಕ್-ಫಲಭೇದದಿಂದ ಪ್ರತ್ಯೇಕವೆಂಬದಾಗಿ, ಬಾಲಾಃ - ಅವಿವೇಕಿಗಳು, ಪ್ರವದಂತಿ - ಹೇಳುತ್ತಾರೆ, ಪಂಡಿತಾಃ- ವಿವೇಕಿಗಳು, ನ- ಆರೀತಿಯಾಗಿ ಹೇಳುವುದಿಲ್ಲವು. (ಯತಃ- ಯಾವಕಾರಣದಿಂದ,) ಉಭಯೋಃ - ಯೆರಡರಲ್ಲಿ, ಏಕಮಪಿ - ಒಂದನ್ನಾದರೂ, ಸಮ್ಯಕ್ - ಸಮೀಚೀನವಾಗಿ, ಆಸ್ಥಿತಃ - ಅನುಷ್ಠಿಸಿದವನು, ಉಭಯೋಃ - ಯೆರಡರ- ಫಲಂ- ಫಲವನ್ನು, ವಿಂದತಿ- ಹೊಂದುತ್ತಾನೆ. ... ... ... ॥೪॥

(ಶಂ॥ ಭಾ॥) ಭಿನ್ನಭಿನ್ನಪುರುಷರಿಂದ ಅನುಷ್ಠಿಸಲ್ಪಡುವುದಾದುದರಿಂದ ಪರಸ್ಪರ ವಿರುದ್ಧಗಳಾದ ಸನ್ನ್ಯಾಸ ಕರ್ಮಯೋಗಗಳ ಫಲದಲ್ಲಿಯೂಕೂಡ ಭೇದವಿರಬೇಕಾಗಿರುವುದರಿಂದ ಯೆರಡಕ್ಕೂ ಮೋಕ್ಷವೇ ಫಲವೆಂಬದಾಗಿ ಹೇಳಕೂಡದೆಂಬ ಆಕ್ಷೇಪಕ್ಕೆ ಸಮಾಧಾನವು ಹೇಳಲ್ಪಡುವುದು. ಸನ್ನ್ಯಾಸ, ಯೋಗಗಳು, ವಿರುದ್ಧಗಳಾದ (ಬೇರೆಬೇರೆಯಾಗಿರುವ) ಫಲಗಳುಳ್ಳವುಗಳೆಂದು ಶಾಸ್ತ್ರಾರ್ಥ ವಿವೇಕವಿಲ್ಲದವರು ಹೇಳುವರಲ್ಲದೇ ಪಂಡಿತರು ಹೇಳಲಾರರು ; ಜ್ಞಾನಿಗಳು ಅವಿರುದ್ಧವಾದ ಒಂದೇಫಲವನ್ನಿಚ್ಛೈಸುವರು ; ಹೇಗಂದರೆ ! ಸನ್ನ್ಯಾಸಕರ್ಮಯೋಗಗಳಲ್ಲಿ ಒಂದನ್ನಾದರೂ ಸಮೀಚೀನವಾಗಿ ಅನುಷ್ಠಿಸಿದವನು ಯೆರಡಕ್ಕೂ (ಸನ್ನ್ಯಾಸಕರ್ಮಯೋಗಗಳಿಗೂ) ಮೋಕ್ಷಫಲವಾದು

ದರಿಂದ ಅಂತಹ ಮೋಕ್ಷರೂಪ ಪರಮಪುರುಷಾರ್ಥವನ್ನು ಹೊಂದುವನು. ಪ್ರಕೃತದಲ್ಲಿ ಸನ್ನ್ಯಾಸ ಕರ್ಮಯೋಗಶಬ್ದಗಳನ್ನು ಹೇಳಿ ಉದ್ದೇಶಿಸಿ ಅಪ್ರಕೃತಗಳಾದ ಸಾಂಖ್ಯಯೋಗಗಳ ಫಲಗಳಿಗೆ ಭೇದವಿಲ್ಲವೆಂಬದಾಗಿ ಹೇಗೆ ಹೇಳಬಹುದೆಂದರೆ ಅದು ದೋಷವಲ್ಲವು. ಅರ್ಜುನನು ಕೇವಲ ಸನ್ನ್ಯಾಸ ಕರ್ಮಯೋಗಗಳನ್ನುದ್ದೇಶಿಸಿ ಪ್ರಶ್ನೆಮಾಡಿದವನಾಗಿದ್ದರೂ ಶ್ರೀಕೃಷ್ಣನು ಆ ಶಬ್ದಗಳನ್ನು ಬಿಡದೇನೆ ಸಾಂಖ್ಯವೆಂದರೂ ಸನ್ನ್ಯಾಸವೆಂದರೂ ಒಂದೇ ಯೆಂಬ ತನ್ನ ಅಭಿಪ್ರಾಯವಂ ತಿಳಿಸಬೇಕೆಂಬ ತಾತ್ಪರ್ಯದಿಂದ ಭಿನ್ನವಾದ ಶಬ್ದಗಳಿಂದ ಪ್ರತ್ಯುತ್ತರವಂ ಹೇಳಿರುತ್ತಾನೆ. ಸಾಂಖ್ಯಯೋಗಶಬ್ದಗಳಿಗೆ ಜ್ಞಾನದಲ್ಲಿಯೂ, ಜ್ಞಾನೋಪಾಯಗಳಾದ ಸಮಬುದ್ಧಿತ್ವವೇ ಮೊದಲಾದವುಗಳಿಂದ ಕೂಡಿದ ಸನ್ನ್ಯಾಸಕರ್ಮಯೋಗಗಳಲ್ಲಿಯೂ ಅರ್ಥವಿರುವುದೆಂದು ಶ್ರೀಕೃಷ್ಣನ ಅಭಿಪ್ರಾಯವು. ಆದುದರಿಂದ ಸಾಂಖ್ಯಯೋಗಗಳು ಅಪ್ರಕೃತಗಳೆಂದು ಹೇಳಲಾಗುವುದಿಲ್ಲವು. ಸನ್ನ್ಯಾಸದಿಂದ ಜ್ಞಾನನಿಷ್ಠೆಯುಂಟಾಗಿ ಅದರಿಂದ ಮೋಕ್ಷಪ್ರಾಪ್ತಿಯಾಗುವುದು. ಕರ್ಮವೂ ಫಲಾಪೇಕ್ಷೆಯಿಲ್ಲದೇ ಆಚರಿಸಲ್ಪಟ್ಟರೆ ಚಿತ್ತಶುದ್ಧಿಯುಂಟಾಗಿ, ಅದರಿಂದ ಜ್ಞಾನವೂ, ಅದರಿಂದ ಮೋಕ್ಷವೂ ಪ್ರಾಪ್ತವಾಗುವುದೆಂಬದಾಗಿ ಇದುವರೆಗೂ ಅನೇಕ ಪ್ರಕರಣಗಳಲ್ಲಿ ತಿಳಿಸಿರುವೆವು. ಮುಂದೆಯೂ ತಿಳಿಸುವೆವು. ॥೪॥

(ರಾ॥ ಭಾ) ಜ್ಞಾನಯೋಗ ಕರ್ಮಯೋಗಗಳೆಂಬೀ ಯೆರಡೂ ಆತ್ಮಸಾಕ್ಷಾತ್ಕಾರವನ್ನು ಸಾಧಿಸುವ ವಿಷಯದಲ್ಲಿ ಒಂದನ್ನೊಂದು ಎದುರುನೋಡಲಾರದೆನ್ನುವುದಂ ಹೇಳುತ್ತಾರೆ,- ಜ್ಞಾನಯೋಗ ಕರ್ಮಯೋಗಗಳೆರಡೂ ಫಲಭೇದದಿಂದ ಪ್ರತ್ಯೇಕಪ್ರತ್ಯೇಕವೆಂದು ಯಾರು ಹೇಳುತ್ತಾರೋ ಅವರು ಜ್ಞಾನನಿಷ್ಪತ್ತಿ ಇಲ್ಲದವರು, ಅಪಂಡಿತರು, ಸಮಸ್ತವನ್ನು ತಿಳಿದವರಲ್ಲವು. "ಕರ್ಮಯೋಗವು ಜ್ಞಾನಯೋಗವಮಾತ್ರವನ್ನೇ ಸಾಧಿಸುತ್ತದೆ; ಆತ್ಮಸಾಕ್ಷಾತ್ಕಾರವನ್ನು ಸಾಧಿಸಲಾರದು; ಜ್ಞಾನಯೋಗವೆಂಬೀ ಒಂದೇ ಆತ್ಮಸಾಕ್ಷಾತ್ಕಾರವನ್ನು ಸಂಪಾದಿಸುತ್ತದೆ ; ಆದುದರಿಂದ ಈ ಯೆರಡಕ್ಕೂ ಫಲಭೇದವಿರುವುದರಿಂದ ಎರಡೂ ಬೇರೆ ಬೇರೆಯಾಗಿರುವುದು " ಎಂಬದಾಗಿ ಹೇಳತಕ್ಕವರು [illegible]

ಚೇನವಾಗಿ ತಿಳಿದವರಲ್ಲವೆಂದರ್ಥವು. ಏತಕ್ಕೆಂದರೆ ! ಯೆರಡಕ್ಕೂ ಆತ್ಮಸಾಕ್ಷಾತ್ಕಾರ ರೂಪವಾದ ಒಂದೇ ಫಲವಿರುವುದರಿಂದ ಈ ಯೆರಡರಲ್ಲಿ ಯಾವದನ್ನನುಷ್ಠಿಸಿದರೂ ಆ ಒಂದೇ ಫಲವನ್ನು ಹೊಂದುತ್ತಾನೆ. ... ... ||೪||

(ಗೀ|| ೫||) "ನತಸ್ಯತತ್ವಗ್ರಹಣಾಯಪುಂಸಾಂ" ಎಂಬ ಶ್ರೀಭಾಗವತ ಪಂಚಮಸ್ಕಂಧಸ್ಥವಾದ ಶ್ಲೋಕದಲ್ಲಿ ವಿಷಯವೈರಾಗ್ಯವಿಲ್ಲದಿದ್ದರೇ ಜ್ಞಾನೋತ್ಪತ್ತಿ ಯಾಗುವುದಿಲ್ಲವೆಂಬದಾಗಿ ಹೇಳಿರುವುದರಿಂದ ವಿಷಯವೈರಾಗ್ಯದಿಂದಲೇ ಜ್ಞಾನೋತ್ಪತ್ತಿಯಾಗುವುದೆಂದು ಅರ್ಥವೇರ್ಪಡುವುದು. ಆದುದರಿಂದ ವೈರಾಗ್ಯಶಬ್ದದಿಂದ ಹೇಳಲ್ಪಡುವ ಕಾಮಾದಿಗಳೆಂಬ ಸಮಸ್ತವನ್ನು ಬಿಡುವುದೆಂಬ ಸನ್ನ್ಯಾಸವು ಜ್ಞಾನೋತ್ಪತ್ತಿಗೆ ಸಾಧನವಾಗುವುದೆಂದು ತೋರುತ್ತದೆ. ಕರ್ಮಯೋಗವು ಜ್ಞಾನವಿರೋಧಿಯೆಂಬದಾಗಿ ಏಕಾದಶಸ್ಕಂಧದಲ್ಲಿ "ಅಗ್ನಿಮುಗ್ಧೋ ಧೂಮತಾನ್ತಃ" ಎಂಬ ಶ್ಲೋಕದಲ್ಲಿ ಹೇಳಿರುತ್ತದೆ. ಅಗ್ನಿಸಾಧ್ಯವಾದ ಕರ್ಮವೇ ನನಗೆ ಶ್ರೇಯಸ್ಕರವೆಂಬ ಭ್ರಾಂತಿಯುಳ್ಳವನಾಗಿಯೂ ಹೋಮಮಾಡುವಕಾಲದಲ್ಲುಂಟಾದ ಧೂಮ (ಹೊಗೆಯಿಂದ) ದಿಂದ ಆಯಾಸವನ್ನು ಹೊಂದಿದವನಾಗಿಯೂ ಇರುವ ಕರ್ಮಯೋಗಿಯೂ ತನಗಾಶ್ರಯಭೂತನಾದ ಪರಮಾತ್ಮನನ್ನರಿಯಲಾರನೆಂಬದಾಗಿ ಪ್ರಮಾಣಾರ್ಥವು. ಹೀಗಾದಮೇಲೆ ಕರ್ಮಯೋಗಕ್ಕಿಂತಲೂ, ಸನ್ನ್ಯಾಸವೂ ಶ್ರೇಷ್ಠವೆಂದು ಹೇಗೆ ಹೇಳಲಾಗುವುದು; ಎಂಬ ಶಂಕಾಸಮಾಧಾನ ಪೂರ್ವಕವಾಗಿ ಸನ್ನ್ಯಾಸದಂತೆ ಕರ್ಮಯೋಗವೂ ಜ್ಞಾನೋತ್ಪತ್ತಿಗೆ ಸಾಧನವಾಗುವುದೆಂದೀ ಶ್ಲೋಕದಿಂದ ಶ್ರೀಕೃಷ್ಣನು ಹೇಳುತ್ತಾನೆ. ಸಾಂಖ್ಯವೆಂದರೆ ಜ್ಞಾನವು ; ಯೋಗವೆಂದರೆ ಭಗವದರ್ಪಣ ಬುದ್ಧಿಯಿಂದ ಮಾಡುವ ಕರ್ಮಾನುಷ್ಠಾನವು ; ಇವುಗಳನ್ನು ವಿವೇಕಶೂನ್ಯರು ಒಂದಕ್ಕೊಂದು ಸಾಧ್ಯ ಸಾಧನ ಭಾವವಿಲ್ಲವೆನ್ನುವರಲ್ಲದೇ ಪಂಡಿತರು ಹೇಳಲಾರರು. ನಿಷ್ಕಾಮವಾಗಿ ಪರಮಾತ್ಮಾರಾಧನರೂಪವಾಗಿ ಮಾಡುವ ಕರ್ಮಾನುಷ್ಠಾನವು ಜ್ಞಾನೋತ್ಪತ್ತಿಗೆ ಸಾಧನವಲ್ಲವೆಂದು ಅವಿವೇಕಿಗಳು ಹೇಳುವರೆಂದು ತಾತ್ಪರ್ಯವು. ಕರ್ಮಯೋಗಕ್ಕೆ ಜ್ಞಾನೋಪಾಯತ್ವವು ಹೇಗೆಂದರೆ ಈ ಯೆರಡರಲ್ಲಿ

ಜ್ಞಾನಮಾರ್ಗವನ್ನಾದರೂ ಕರ್ಮಮಾರ್ಗವನ್ನಾದರೂ ಒಂದನ್ನನುಷ್ಠಿಸಿದರೇ ಜ್ಞಾನಕರ್ಮಗಳೆಂಬೀ ಯೆರಡು ಫಲವನ್ನು ಹೊಂದುತ್ತಾನೆ. (ಕರ್ಮವನ್ನನುಷ್ಠಿಸಿ ಜ್ಞಾನಫಲವಂ ಹೊಂದಿದರೆ ಕರ್ಮವು ಜ್ಞಾನದ್ವಾರಾ ಮೋಕ್ಷಸಾಧನವಾಗುವುದರಲ್ಲಿ ಸಂಶಯವಿಲ್ಲವೆಂದು ತಾತ್ಪರ್ಯವು.) ॥೪॥

ಮೂ॥ ಯತ್ಸಾಂಖ್ಯೈಃ ಪ್ರಾಪ್ಯತೇಸ್ಥಾನಂ ತದ್ಯೋ
ಗೈರಪಿಗಮ್ಯತೇ । ಏಕಂಸಾಂಖ್ಯಂಚಯೋಗಂಚಯಃ
ಪಶ್ಯತಿಸಪಶ್ಯತಿ ॥ ... ॥೫॥

ಪ॥ ಯತ್- ಸಾಂಖ್ಯೈಃ- ಪ್ರಾಪ್ಯತೇ- ಸ್ಥಾನಂ- ತತ್- ಯೋಗೈಃ- ಅಪಿ- ಗಮ್ಯತೇ। ಏಕಂ- ಸಾಂಖ್ಯಂ- ಚ- ಯೋಗಂ-ಚ- ಯಃ- ಪಶ್ಯತಿ- ಸಃ-ಪಶ್ಯತಿ॥ ॥೫॥

ಅ॥ ಸಾಂಖ್ಯೈಃ - ಜ್ಞಾನನಿಷ್ಠರಾದ ಸನ್ಯಾಸಿಗಳಿಂದ, ಯತ್ಸ್ಥಾನಂ - ಯಾವ (ಮೋಕ್ಷರೂಪವಾದ) ಸ್ಥಾನವು, (ರಾ) ಯಾವತತ್ವದರ್ಶನ ರೂಪವಾದಫಲವು, ಪ್ರಾಪ್ಯತೇ- ಹೊಂದಲ್ಪಡುವುದೊ, ತತ್- ಆಸ್ಥಾನವು, (ರಾ॥ ಆ ಫಲವು) ಯೋಗೈರಪಿ - ಕರ್ಮಯೋಗನಿಷ್ಠರಿಂದಲೂ, ಗಮ್ಯತೇ-ಹೊಂದಲ್ಪಡುವುದು, ಸಾಂಖ್ಯಂಚ- ಸಾಂಖ್ಯಯೋಗವನ್ನು, ಯೋಗಂಚ- ಕರ್ಮಯೋಗವನ್ನೂ, ಏಕಂ - ಒಂದೇಫಲವುಳ್ಳದ್ದೆಂಬ ಆಕಾರದಿಂದ ಒಂದೇಎಂಬದಾಗಿ, ಯಃ- ಯಾವನು, ಪಶ್ಯತಿ - ನೋಡುತ್ತಾನೊ, ಸಃ-ಅವನು, ಪಶ್ಯತಿ - ತಿಳಿಯುತ್ತಾನೆ. (ಪಂಡಿತನಾಗುತ್ತಾನೆ.) ... ॥೫॥

(ಶಂ॥ ಭಾ) ಸಾಂಖ್ಯಯೋಗಗಳಲ್ಲಿ ಒಂದನ್ನಾದರೂ ಸಮ್ಯಾಚೀನವಾಗಿ ಅನುಷ್ಠಿಸುವುದರಿಂದ ಯೆರಡನ್ನನುಷ್ಠಿಸಿದ ಫಲವು ಹೊಂದಲ್ಪಡುವುದು ಹೇಗೆಂದರೆ ಅದಂ ವಿವರಿಸುವೆವು,- ಜ್ಞಾನನಿಷ್ಠರಾದ ಸನ್ಯಾಸಿಗಳು ಯಾವ ಮೋಕ್ಷಸ್ಥಾನವಂ ಹೊಂದುವರೊ ಅಂಥಾ ಮೋಕ್ಷಸ್ಥಾನವನ್ನು ಫಲಾಪೇಕ್ಷೆಯಿಲ್ಲದೆ ಭಗವದರ್ಪಣಬುದ್ಧಿಯಿಂದ ಕರ್ಮಾಚರಣೆಯಂ ಮಾಡುವ ಕರ್ಮಯೋಗಿಗಳೂ ಪರಮಾರ್ಥಜ್ಞಾನವೆಂಬ ಸನ್ಯಾಸವಂ ಹೊಂದಿ ತದ್ದ್ವಾರಾ ಅಂತಹ ಮೋಕ್ಷಫಲವನ್ನು ಹೊಂದುತ್ತಾರೆ. ಆದ್ದರಿಂದ ಸನ್ಯಾಸಕರ್ಮಯೋಗಗಳಿಗೆ ಫಲವು ಒಂದೇಎಂಬದಾಗಿ ತಿಳಿದವನೇ ಪರಮಾರ್ಥವಂ ತಿಳಿದವನೆಂದ ಭಿಪ್ರಾಯವು ॥ ... ... ॥೫॥

(ಗೀ॥ ವಿ॥) ಸಾಂಖ್ಯವೆಂಬುವ ಜ್ಞಾನಕ್ಕೆ ಫಲವು ಮೋಕ್ಷವು, ಯೊಗವೆಂಬುವ ನಿಷ್ಕಾಮಕರ್ಮಕ್ಕೆ ಫಲವು ಜ್ಞಾನವು, ಹೀಗಿರುವಲ್ಲಿ ಈ

ಯೆರಡೂ ಒಂದೇಫಲವುಳ್ಳದ್ದಾಗಿ ಹೇಗಾಗುವುದೆಂದರೆ ಜ್ಞಾನವು ಶೀಘ್ರವಾಗಿ ಮೋಕ್ಷಫಲವಂ ಕೊಡುವುದರಿಂದಲೂ, ನಿಷ್ಕಾಮಕರ್ಮವು ಕಾಲವಿಳಂಬದಿಂದಲಾದರೂ ಮೋಕ್ಷಫಲವನ್ನೇ ಕೊಡುವುದರಿಂದಲೂ ಫಲವು ಒಂದೆಂಬದಾಗಿ ಹೇಳಲ್ಪಟ್ಟಿರುವುದು. ಜ್ಞಾನಕರ್ಮಗಳು ಸಾಧ್ಯಸಾಧನರೂಪದಿಂದ ಒಂದಾಗಿಯೇ ಇರುವುದು. “ಅಗ್ನಿಮುಗ್ಧೋಧೂಮತಾಂತಃ” ಎಂಬದಾಗಿ ಏಕಾದಶಸ್ಕಂಧದಲ್ಲಿ ಹೇಳಿರುವ ಕರ್ಮನಿಂದೆಯೂ ಕಾಮ್ಯಕರ್ಮವಿಷಯವಾಗಿರುವುದು. (ಅಥವಾ) ಸನ್ನ್ಯಾಸಶಬ್ದಕ್ಕೆ ಕಾಮ್ಯಾದಿವರ್ಜನವು ಅರ್ಥವು, ಕರ್ಮಯೋಗಶಬ್ದಕ್ಕೆ ವಿಹಿತಕರ್ಮಾನುಷ್ಠಾನವು ಅರ್ಥವು, ಎಂಬೀಪ್ರಕಾರವಾಗಿ ಅರ್ಥವಂ ಹೇಳಿ ಸನ್ನ್ಯಾಸಕರ್ಮಯೋಗಗಳು ಏಕಾಧಿಕಾರಿಯಿಂದ ಆಚರಿಸುವುದಕ್ಕೆ ಯೋಗ್ಯವಾಗುವುದೆಂದು ಹಿಂದೆ ಹೇಳಿದನು. ಈಗ ಸನ್ನ್ಯಾಸಪದವು ಯತಿವಿಹಿತವಾದ ಧರ್ಮಗಳಂ ಹೇಳಿದರೂ ಕರ್ಮಯೋಗಶಬ್ದವು ಗೃಹಸ್ಥರಿಗೆ ವಿಹಿತವಾದ ಧರ್ಮಗಳಂಹೇಳಿದರೂ ಸನ್ನ್ಯಾಸಕರ್ಮಯೋಗಳು ಏಕಾಧಿಕಾರಿಯಿಂದ ಮಾಡುವುದಕ್ಕೆ ಶಕ್ಯವಾಗುವುದೆಂದು “ಸಾಂಖ್ಯಯೋಗೌ” ಎಂಬ ಶ್ಲೋಕದಿಂದ ಹೇಳುತ್ತಾನೆ. ಬಾಲಾಃ- ಅವಿವೇಕಿಗಳು, ಸಾಂಖ್ಯಯೋಗೌ - ಸನ್ನ್ಯಾಸಿಗೆ ವಿಹಿತವಾದ ಜ್ಞಾನಯೋಗವೇನು, ಗೃಹಸ್ಥರಿಗೆ ವಿಹಿತವಾದ ಕರ್ಮಯೋಗವೇನು, ಇವುಗಳನ್ನು ಏಕಾಧಿಕಾರಿಯಿಂದ ಮಾಡಲು ಯೋಗ್ಯವಲ್ಲವೆಂಬದಾಗಿ ಹೇಳುತ್ತಾರೆ. ಅವಿವೇಕಿಗಳು, ಸನ್ನ್ಯಾಸಿಗಳಿಗೆ ಸಾಂಖ್ಯಪದದಿಂದ ಹೇಳಲ್ಪಡುವ ಜ್ಞಾನದಲ್ಲಿಯೇ ಅಧಿಕಾರವು, ಕರ್ಮದಲ್ಲಧಿಕಾರವಿಲ್ಲವೆಂತಲೂ, ಗೃಹಸ್ಥರಿಗೆ ಕರ್ಮದಲ್ಲಿಮಾತ್ರವೇ ಅಧಿಕಾರವಲ್ಲದೇ ಜ್ಞಾನದಲ್ಲಧಿಕಾರವಿಲ್ಲವೆಂತಲೂ ಹೇಳುವರು. ಪಂಡಿತರು ಆರೀತಿಯಾಗಿ ಹೇಳಲಾರರು. ಪಂಡಿತರು ಜ್ಞಾನಯೋಗ ಕರ್ಮಯೋಗಗಳು ಏಕಾಧಿಕಾರಿಯಾದವನಿಗೆ ವಿಹಿತವಾದವುಗಳೆಂತಲೇ ಹೇಳುತ್ತಾರೆಂದರ್ಥವು. ಇದಕ್ಕೆ ಕಾರಣವನ್ನು ಹೇಳುತ್ತಾನೆ. ಜ್ಞಾನಕರ್ಮ ಯೋಗಗಳಲ್ಲಿ ಒಂದನ್ನು ಸಮೀಚೀನವಾಗಿ ಆಶ್ರಯಿಸಿದವನು ಜ್ಞಾನಕರ್ಮಯೋಗಗಳೆಂಬೀ ಯೆರಡುಫಲವನ್ನು ಹೊಂದುತ್ತಾನೆ. ಜ್ಞಾನಪೂರ್ವಕವಾಗಿ ಕರ್ಮಗಳಂಮಾಡುವುದೆಂಬುವುದೇ ಸಮೀಚೀನವಾಗಿ ಕರ್ಮವನ್ನನುಷ್ಠಿಸುವುದು.

ಕರ್ಮಯೋಗಿಯು ಈ ಪ್ರಕಾರವಾಗಿ ಕರ್ಮವನ್ನನುಷ್ಠಿಸಿದರೆ ಅದ ರಫಲವಾದ ಜ್ಞಾನವನ್ನು ಹೊಂದುತ್ತಾನೆ. ಆದುದರಿಂದ ಕರ್ಮಯೋಗಿ ಯಾದ ಗೃಹಸ್ಥನಿಗೂ ಯತಿವಿಹಿತವಾದ ಜ್ಞಾನಯೋಗದಲ್ಲಧಿಕಾರವಿರು ತ್ತದೆ. ಕರ್ಮಸಹಿತವಾಗಿ ಜ್ಞಾನವನ್ನನುಷ್ಠಿಸದೇ ಹೋದರೆ ಜ್ಞಾನಫಲ ವಾದ ಮೋಕ್ಷದಲ್ಲಿ ಸಂಪೂರ್ಣನಂದ ಸಿದ್ಧಿಯಾಗುವುದಿಲ್ಲವಾದುದರಿಂದ ಸನ್ಯಾಸಿಯೂ ಸಂಪೂರ್ಣಫಲಕ್ಕಾಗಿ ಕರ್ಮಸಹಿತವಾಗಿಯೇ ಜ್ಞಾನ ಯೋಗವನ್ನನುಷ್ಠಿಸಬೇಕೆಂದು ಸೂಚಿತವಾಯಿತು. ಜ್ಞಾನಮಾತ್ರ ದಿಂದ ಸಾಧಿಸತಕ್ಕದ್ದಾಗಿಯೂ ಯತಿಗಳಿಂದ ಹೊಂದಲ್ಪಡುವುದಾಗಿ ಯೂ ಇರುವ ಸ್ಥಾನಪ್ರಾಪ್ತಿಯು ಗೃಹಸ್ಥರಿಗೂ ಉಂಟೆಂಬಕಾರಣ ದಿಂದ ಜ್ಞಾನಾಧಿಕಾರವು ಗೃಹಸ್ಥರಿಗೂ ವುಂಟೆಂದೀ ಶ್ಲೋಕದಿಂದ ಹೇಳಲುದ್ದೇಶಿಸಿ ಉಕ್ತವಾದ ಅರ್ಥವನ್ನುಪಸಂಹಾರಮಾಡುತ್ತಾನೆ. ಜ್ಞಾನಿಗಳಾದ ಯತಿಗಳಿಗೆ ಯಾವ ಸ್ಥಾನವು ಪ್ರಾಪ್ಯವಾಗಿರುವುದೊ ಆ ಸ್ಥಾನವು ಕರ್ಮಯೋಗಿಗಳಾದ ಗೃಹಸ್ಥರಿಂದಲೂ ಹೊಂದಲ್ಪ ಡುವುದರಿಂದ ಸಾಂಖ್ಯಯೋಗಗಳು ಏಕಾಧಿಕಾರಿಯಿಂದಲೇ ಆಚರಿಸ ತಕ್ಕವುಗಳು. ಗೃಹಸ್ಥರಲ್ಲಿ ಜ್ಞಾನವನ್ನೂ, ಯತಿಗಳಲ್ಲಿ ಕರ್ಮವನ್ನೂ ಯಾವನು ನೋಡುತ್ತಾನೊ ಅವನು ಜ್ಞಾನಿಯೆಂಬದಾಗಿ ಹೇಳಲ್ಪಡು ವನೆಂದೀಶ್ಲೋಕಾರ್ಥವು. ॥೫॥

ಮೂ॥ ಸನ್ಯಾಸಸ್ತು ಮಹಾಬಾಹೊ ದುಃಖಮಾಪ್ತು
ಮಯೋಗತಃ । ಯೋಗಯುಕ್ತೋಮುನಿರ್ಬ್ರಹ್ಮನಚಿ
ರೇಣಾಧಿಗಚ್ಛತಿ ॥ ... ॥೬॥

ಪ॥ ಸನ್ಯಾಸಃ- ತು- ಮಹಾಬಾಹೊ- ದುಃಖಂ- ಆಪ್ತುಂ- ಅಯೋಗತಃ । ಯೋಗ ಯುಕ್ತಃ- ಮುನಿಃ- ಬ್ರಹ್ಮ- ನ- ಚಿರೇಣ- ಅಧಿಗಚ್ಛತಿ ॥ ॥೬॥

ಅ॥ ಹೇಮಹಾಬಾಹೋ- ಎಲೈದೀರ್ಘವಾದ ಭುಜವುಳ್ಳ ಅರ್ಜುನನೇ, ಸನ್ಯಾಸಸ್ತು- (ಶಂ॥ ಶ್ರೀ.) ಜ್ಞಾನನಿಷ್ಠೆಯನ್ನು ಸ್ಥಿರವಾಗಿ ಹೊಂದಿರುವಂತವನಿಗೆ ಕರ್ಮವು ತಾನಾಗಿ ಯೇ ಬಿಟ್ಟುಹೋಗುವುದೆಂಬ ಪರಮಾರ್ಥದರ್ಶನವು, (ರಾ) ಜ್ಞಾನಯೋಗವು, ಅಯೋ ಗತಃ- ಕರ್ಮಯೋಗವಿಲ್ಲವೆಂಬುದರಿಂದ, ಆಪ್ತುಂ-ಹೊಂದುವುದಕ್ಕೆ, ದುಃಖಂ-ಕಷ್ಟವಾಗಿರು ವುದು, ಯೋಗಯುಕ್ತಃ - ಕರ್ಮಯೋಗದೊಡನೆಕೂಡಿರುವಂಥಾ, ಮುನಿಃ - ಮನನಶೀ ಲನು, (ಧ್ಯಾನಮಾಡತಕ್ಕವನು) ಬ್ರಹ್ಮ- ಬ್ರಹ್ಮವನ್ನು, (ರಾ) ಆತ್ಮವನ್ನು, (ಶಂ) ಪರ

ಪರಮಾರ್ಥದರ್ಶನವೆಂಬ ಸನ್ಯಾಸವನ್ನು, ನಚಿರೇಣ - ಶೀಘ್ರವಾಗಿ, ಅಧಿಗಚ್ಛತಿ - ಹೊಂದುತ್ತಾನೆ. ... ... ... ॥೬॥

(ಶಂ॥ ಭಾ॥) ಆದರೆ ಮೋಕ್ಷಕ್ಕೆ ಪರಂಪರೆಯಾಗಿ ಸಾಧನವಾಗುವ ಕರ್ಮಯೋಗಕ್ಕಿಂತಲೂ ಸಾಕ್ಷಾತ್ಸಾಧನವಾದ ಸನ್ಯಾಸವು ಶ್ರೇಷ್ಠವಲ್ಲವೇ ; ಶ್ರೇಷ್ಠವಾಗಿರುವ ಪಕ್ಷದಲ್ಲಿ "ತಯೋಸ್ತು ಕರ್ಮಸನ್ಯಾಸಾತ್ಕರ್ಮಯೋಗೋವಿಶಿಷ್ಯತೇ" (ಶ॥ ೨॥) ಎಂಬ ಶ್ಲೋಕದಲ್ಲಿ ಸನ್ಯಾಸಕ್ಕಿಂತಲೂ ಕರ್ಮಯೋಗಕ್ಕೆ ಶ್ರೇಷ್ಠ್ಯವರ್ಣನವು ಹೇಗೆ ಸಂಗತವಾಗುವುದು ? ಎಂದರೇ ಅದಕ್ಕೆ ತಕ್ಕ ಕಾರಣವಂ ಕೇಳು ? ಜ್ಞಾನರಹಿತವಾದಸನ್ಯಾಸವನ್ನೂ ಕರ್ಮಯೋಗವನ್ನೂ ಕುರಿತು ಇವುಗಳಲ್ಲಿ ಯಾವದು ಶ್ರೇಷ್ಠವೆಂದು ನಿನ್ನಿಂದಪ್ರಶ್ನೆಮಾಡಲ್ಪಟ್ಟಿತು. ನಿನ್ನ ಪ್ರಶ್ನೆಕ್ಕನುರೂಪವಾಗಿಯೇ ಜ್ಞಾನವಿಹೀನವಾದ ಸನ್ಯಾಸಕ್ಕಿಂತಲೂ ಕರ್ಮಯೋಗವು ಶ್ರೇಷ್ಠವೆಂಬದಾಗಿ ನಾನು ಪ್ರತ್ಯುತ್ತರವಂ ಹೇಳಿರುವೆನು. ನಾನು ಸಾಂಖ್ಯಶಬ್ದದಿಂದ ಹೇಳುವ ಸನ್ಯಾಸವು ಜ್ಞಾನಸಹಿತವಾದದ್ದು ; ಅದೇ ಪರಮಾರ್ಥಯೋಗವೆನ್ನಿಸುವುದು. ವೇದವಿಹಿತವಾದ ಕರ್ಮಾಚರಣವು ಜ್ಞಾನನಿಷ್ಠೆಯನ್ನು ಹೊಂದುವುದೆಂಬ ಸನ್ಯಾಸಕ್ಕೋಸ್ಕರವಾಗಿಯೇ ಆಗಿರುವುದರಿಂದ ಕರ್ಮಯೋಗವನ್ನು ಯೋಗವೆಂತಲೂ, ಸನ್ಯಾಸವೆಂತಲೂ, ಉಪಚಾರದಿಂದ ಹೇಳುವುದುಂಟು. ಕರ್ಮಯೋಗಾಚರಣವಿಲ್ಲದೇನೇ ಜ್ಞಾನಸಹಿತವಾದ ಕರ್ಮಸನ್ಯಾಸವು ಸಂಭವಿಸುವುದಿಲ್ಲವು. ಕರ್ಮಾಚರಣವಿಲ್ಲದೇನೇ ಕೆಲವರಿಗೆ ಪರಮಾರ್ಥಸನ್ಯಾಸವು ಪ್ರಾಪ್ತವಾಗುವುದೆಂದರೇ - ಅವರು ಕರ್ಮಾಚರಣವನ್ನು ಪೂರ್ವಜನ್ಮದಲ್ಲಿ ತಪ್ಪದೇ ಅನುಷ್ಠಿಸಿರುತ್ತಾರೆಂದು ಹೇಳಬೇಕು. ವೇದವಿಹಿತವಾಗಿಯೂ ಫಲಾಪೇಕ್ಷಾಶೂನ್ಯವಾಗಿಯೂ ಇರುವ ಈಶ್ವರಾರ್ಪಣರೂಪವಾದ ಕರ್ಮವನ್ನಾಚರಿಸುವಂತವನಾಗಿಯೂ, ಈಶ್ವರಸ್ವರೂಪವನ್ನು ಮನನಮಾಡುವಂತವನಾಗಿಯೂ ಇರುವ ಕರ್ಮಯೋಗಿಯು ಪರಮಾರ್ಥ ಜ್ಞಾನನಿಷ್ಠಾರೂಪವಾದ ಬ್ರಹ್ಮಶಬ್ದದಿಂದ ಹೇಳಲ್ಪಡುವ ಸನ್ಯಾಸವನ್ನು, ಶೀಘ್ರವಾಗಿ ಹೊಂದುತ್ತಾನೆ. "ಸನ್ಯಾಸವು ಬ್ರಹ್ಮವೆಂಬದಾಗಿ ಹೇಳಲ್ಪಡುವುದು, ಬ್ರಹ್ಮವೇ ಸರ್ವೋತ್ಕೃಷ್ಟವಾಗಿರುವುದು" ಎಂಬ ಅರ್ಥವಂ ಪ್ರತಿ

ಪಾದಿಸುವ ಶ್ರುತಿಯಲ್ಲಿ ಸನ್ನ್ಯಾಸಕ್ಕೆ ಬ್ರಹ್ಮಶಬ್ದವಾಚ್ಯತ್ವವು ಸ್ಪಷ್ಟವಾಗಿರುವುದು. ಆದುದರಿಂದ ನೀನು ಕೇಳಿರುವ ಜ್ಞಾನರಹಿತವಾದ ಸನ್ನ್ಯಾಸಕ್ಕಿಂತಲೂ ಕರ್ಮಯೋಗವೇ ಶ್ರೇಷ್ಠವಾಗಿರುವುದು. ನೀನು ಕರ್ಮಾಧಿಕಾರಿಯಾಗಿರುವುದರಿಂದ ನಿನಗೆ ಕರ್ಮಯೋಗವೇ ಶ್ರೇಷ್ಠವೆಂದು ಹೇಳಿರುವೆವು. ಪರಮಾರ್ಥದಿಂದ ಜ್ಞಾನಯೋಗವೇ ಶ್ರೇಷ್ಠವಾದದ್ದು. ॥೬॥

(ರಾ॥ ಭಾ॥) ಇವುಗಳಲ್ಲಿಷ್ಟೇ ವಿಶೇಷವೆನ್ನುತ್ತಾನೆ.— ಜ್ಞಾನಯೋಗವು ಕರ್ಮಯೋಗ ಸಂಬಂಧವಿಲ್ಲದೇ ಸಿದ್ಧಿಸುವುದಿಲ್ಲವು. ಕರ್ಮಯೋಗಿಯು ಯಾವಾಗಲೂ ತನಗೆ ತಾನೇ ಆತ್ಮನನ್ನು ಚಿಂತಿಸಿಕೊಳ್ಳುತ್ತಿರುವಂತವನಾದುದರಿಂದ ಸುಖವಾಗಿ ಕರ್ಮಯೋಗವನ್ನು ಸಾಧಿಸಿ, ಅಲ್ಪಕಾಲದಲ್ಲಾತ್ಮನನ್ನು ಹೊಂದುತ್ತಾನೆ. ಜ್ಞಾನಯೋಗ ಯುಕ್ತನಾಗಿರುವಂತವನೋ ಮಹಾ ಪ್ರಯಾಸದಿಂದ ಜ್ಞಾನಯೋಗವನ್ನು ಸಾಧಿಸುತ್ತಾನೆ. ಕಷ್ಟಸಾಧ್ಯವಾಗಿರುವುದರಿಂದ ಆತ್ಮನನ್ನು ಕಾಲವಿಳಂಬದಿಂದ ಹೊಂದುತ್ತಾನೆಂಬುವುದೆ ಈ ಇಬ್ಬರಿಗೂ ಭೇದವು॥೬॥

(ಮ॥ ಭಾ॥) ಕಾಮಕ್ರೋಧಾದಿಗಳನ್ನು ಬಿಡುವುದೇ ಸನ್ನ್ಯಾಸವೆನ್ನಲ್ಪಡುವುದು. ಫಲಾಭಿಸಂಧಿ ರಹಿತವಾಗಿ ಈಶ್ವರಾರ್ಪಣ ಬುದ್ಧಿಯಿಂದ ಮಾಡಲ್ಪಡುವ ನಿಷ್ಕಾಮಕರ್ಮವೇ ಯೋಗವೆನ್ನಲ್ಪಡುವುದು. ಒಬ್ಬನು ಕಾಮಕ್ರೋಧಾದಿಗಳನ್ನು ತ್ಯಾಗಮಾಡುವುದರಿಂದಲೇ ಬ್ರಹ್ಮವನ್ನು ಹೊಂದಲಾರನು. ಕಾಮಕ್ರೋಧಾದಿಗಳಂ ಬಿಟ್ಟು ನಿಷ್ಕಾಮಕರ್ಮಯೋಗವನ್ನಾಚರಿಸುತಾ ಬಂದರೇ ಶೀಘ್ರವಾಗಿ ಬ್ರಹ್ಮವನ್ನು ಹೊಂದುವನು. ಆದುದರಿಂದ ಕಾಮಕ್ರೋಧಾದಿಗಳಂ ಬಿಟ್ಟುಬಿಡುವುದೆಂಬ ಸನ್ನ್ಯಾಸಕ್ಕಿಂತಲೂ ಕರ್ಮಯೋಗವು ಶ್ರೇಷ್ಠವೆಂಬದಾಗಿ ಹೇಳಲ್ಪಡುವುದು. ಕಾಮ ಕ್ರೋಧಾದಿ ತ್ಯಾಗದಿಂದ ಚಿತ್ತಶುದ್ಧಿಯೇ ಮೊದಲಾದ ಫಲವುಂಟಾಗುವದಿಲ್ಲವೇ ? ಎಂದರೇ ಅದು ಸ್ವಲ್ಪಫಲವಾದುದರಿಂದ ಅದಿಲ್ಲಿ ವಿವಕ್ಷಿತವಲ್ಲವೆಂದು ತಾತ್ಪರ್ಯವು. ॥೬॥

(ಗೀ॥ ವಿ॥) ಸನ್ನ್ಯಾಸಕ್ಕಿಂತಲೂ ಯೋಗವು ಉತ್ತಮವೆಂಬುವುದರಲ್ಲಿ ಬಾಧಕವನ್ನು "ಸಾಂಖ್ಯಯೋಗೌ" (೫॥ ೪॥) ಎಂಬ ಶ್ಲೋಕದಲ್ಲಿ ಪರಿಹರಿಸಿ ಈ ಶ್ಲೋಕದಲ್ಲಿ ಈ ಅರ್ಥಕ್ಕೆ ಅನ್ವಯವ್ಯತಿ

ರೇಕವೆಂಬ ಪ್ರಮಾಣದ್ವಯದಿಂದಲೂ, ಸಾಧಕವನ್ನು ಪ್ರದರ್ಶನ ಮಾಡುತ್ತಾನೆ. ಎಲೈ ಅರ್ಜುನನೇ! ಕರ್ಮಯೋಗವನ್ನು ಬಿಟ್ಟು ಕಾಮಾದಿವರ್ಜನ ರೂಪವಾದ ಕೇವಲ ಸನ್ಯಾಸವು ಪರಮ ಪುರುಷಾರ್ಥವೆಂಬ ಮೋಕ್ಷಪ್ರಾಪ್ತಿಗೆ ಸಾಧನವಾಗದೇ ಇರುವುದರಿಂದ ದುಃಖವನ್ನು ಹೊಂದುವುದಕ್ಕಾಗಿ ಆಗುವುದು. ಮತ್ತೂ ತನಗೆ ವಿಹಿತವಾದ ಕರ್ಮಾನುಷ್ಠಾನ ವಿಲ್ಲವಾದುದರಿಂದ ನರಕಪ್ರಾಪ್ತಿಯಾಗುವುದು. ಅದರಿಂದಲೂ ದುಃಖಪ್ರಾಪ್ತಿಯಲ್ಲದೇ ಬೇರೆ ಯಾವ ಫಲವೂ ಇಲ್ಲವು. ಇದರಿಂದ (ಯೋಗವಿಲ್ಲದಿದ್ದರೇ ಮೋಕ್ಷವಿಲ್ಲವೆಂಬ ಕಾರಣದಿಂದ) ವ್ಯತಿರೇಕವು ಹೇಳಲ್ಪಟ್ಟಿತು. ಕರ್ಮಯೋಗಯುಕ್ತನಾದ ಕಾಮಾದಿ ವರ್ಜನರೂಪ ಸನ್ಯಾಸವುಳ್ಳವನು ಶೀಘ್ರದಿಂದ ಬ್ರಹ್ಮವನ್ನು ಹೊಂದುತ್ತಾನೆ. ಇದರಿಂದ “ಯಾವನು ಯೋಗಯುಕ್ತನೋ ಅವನಿಗೆ ಬ್ರಹ್ಮಪ್ರಾಪ್ತಿ” ಎಂಬದಾಗಿ ಅನ್ವಯವು ಹೇಳಲ್ಪಟ್ಟಿತು. ಇದು ಭಾಷ್ಯೋಕ್ತವಾದ ಅರ್ಥವು. (ಅಥವಾ) ಪರಸ್ಪರ ಸಹಿತವಾದ ಸನ್ಯಾಸ ಕರ್ಮಯೋಗಗಳಿಗೆ ಮೋಕ್ಷಸಾಧನತ್ವವನ್ನು ಹೇಳುತ್ತಾನೆ,— ಅಯೋಗತಃ - ಮೋಕ್ಷೋಪಾಯತ್ವವನ್ನು ಬಿಟ್ಟು, ಎಂದರೆ, ಶ್ರೀಕೃಷ್ಣಾರ್ಪಣ ಬುದ್ಧಿಯಿಂದ ಮಾಡಲ್ಪಡುವ ಕಾಮಾದಿವರ್ಜನ ರೂಪವಾದ ಸನ್ಯಾಸವು ಮೋಕ್ಷಸಾಧನವಾಗುವುದರಿಂದ ಅಂತಹ ಸನ್ಯಾಸಕ್ಕೆ ಯೋಗತ್ವವಿರುವುದು. ಅಂಥಾಯೋಗರೂಪವಾದ ಸನ್ಯಾಸಕ್ಕೆ ಮೋಕ್ಷಸಾಧನತ್ವವಿರುವುದು. ಯೋಗರೂಪತ್ವವಿಲ್ಲದೇ ಸನ್ಯಾಸಕ್ಕೆ ಮೋಕ್ಷಸಾಧನತ್ವವಿಲ್ಲವು. ಕಾಮಕ್ರೋಧಾದಿ ತ್ಯಾಗವಿಲ್ಲದ ಕರ್ಮಯೋಗಮಾತ್ರವಾದರೂ, ಕರ್ಮಯೋಗವಿಲ್ಲದ ಕಾಮಾದಿತ್ಯಾಗವಾದರೂ ಮೋಕ್ಷಹೇತುವಾಗಲಾರದು. ಕಾಮಾದಿ ತ್ಯಾಗವೂ ಕರ್ಮಯೋಗವೂ ಸೇರಿಯೇ ಮೋಕ್ಷಸಾಧನವಾಗುವುದೆಂದು ಗೀತಾ ತಾತ್ಪರ್ಯದರ್ಶಿತವಾದ ತಾತ್ಪರ್ಯವು. ॥೬॥

ಮೂ॥ ಯೋಗಯುಕ್ತೋ ವಿಶುದ್ಧಾತ್ಮಾ ವಿಜಿತಾತ್ಮಾ
ಜಿತೇಂದ್ರಿಯಃ । ಸರ್ವಭೂತಾತ್ಮಭೂತಾತ್ಮಾ ಕುರ್ವನ್ನ
ಪಿನಲಿಪ್ಯತೇ ॥ ... ... ॥೭॥

ಪ|| ಯೋಗಯುಕ್ತಃ- ವಿಶುದ್ಧಾತ್ಮಾ- ವಿಜಿತಾತ್ಮಾ- ಜಿತೇಂದ್ರಿಯಃ | ಸರ್ವಭೂತಾತ್ಮಭೂತಾತ್ಮಾ- ಕುರ್ವನ್- ಅಪಿ- ನ- ಲಿಪ್ಯತೇ || ... ||೭||

ಅ || ಯೋಗಯುಕ್ತಃ - ಕರ್ಮಯೋಗದಿಂದ ಕೂಡಿರುವಂತವನಾಗಿಯೂ, ವಿಶುದ್ಧಾತ್ಮಾ - ಪರಿಶುದ್ಧವಾದ ಮನಸ್ಸುಳ್ಳವನಾಗಿಯೂ, ವಿಜಿತಾತ್ಮಾ - ದೇಹಸ್ವಾಧೀನವುಳ್ಳವನಾಗಿಯೂ, ಜಿತೇಂದ್ರಿಯಃ- ಇಂದ್ರಿಯಗಳನ್ನು ಜಯಿಸಿದವನಾಗಿಯೂ, ಸರ್ವಭೂತಾತ್ಮಭೂತಾತ್ಮಾ- (ಶ್ರೀ|| ಸಕಲ ಭೂತಗಳಲ್ಲಿರುವ ಆತ್ಮನನ್ನೂ ತನ್ನ ಆತ್ಮನನ್ನೂ ಒಂದೇ ಎಂಬದಾಗಿ ಸಮಬುದ್ಧಿಯಿಂದ ತಿಳಿದವನಾಗಿಯೂ ಇರುವವನು,) (ರಾ || ದೇವಾದಿ ಸಕಲ ಭೂತಗಳಿಗೂ ಆತ್ಮನಾಗಿರುವ ಸ್ವರೂಪವನ್ನೇ ತನಗೂ ಆತ್ಮನೆಂಬದಾಗಿ ತಿಳಿಯತಕ್ಕವನು,ಎಂದರೆ ಜ್ಞಾನಾಕಾರದಿಂದ ಸಕಲರಾದ ಆತ್ಮರು ಸಮರೆಂಬದಾಗಿ ನೆನೆಸುವಂತವನು, (ಶಂ|| ಸಕಲ ಭೂತಗಳಿಗೂ ಆತ್ಮನಾಗಿರುವ ಪ್ರತ್ಯಕ್ಚೇತನವುಳ್ಳವನು, ಎಂದರೆ ಸಕಲ ಭೂತಾಂತರ್ಯಾಮಿಯಾದ ಆತ್ಮನೇ ತಾನೆಂಬ ಸಮ್ಯಗ್ಜ್ಞಾನವುಳ್ಳವನು.) (ಮ|| ಗೀ||ವಿ|| ಬ್ರಹ್ಮನೇ ಮೊದಲಾದ ಸಕಲರಿಗೂ ಈಶ್ವರನು ಯಾವನೋ ಅವನೇ ನನಿಗೂ ಈಶ್ವರನೆಂಬದಾಗಿ ತಿಳಿಯತಕ್ಕವನು.) ಕುರ್ವನ್ನಪಿ - ಕರ್ಮಗಳನ್ನು ಮಾಡಿದರು, ನಲಿಪ್ಯತೇ- ಕರ್ಮಬಂಧದಿಂದ ಅಂಟುವುದಿಲ್ಲವು. (ರಾ|| ದೇಹಾತ್ಮಭ್ರಮದಿಂದ ಸಂಬಂಧಿಸುವದಿಲ್ಲವು). ೭||

(ರಾ|| ಭಾ||) ಕರ್ಮಯೋಗಿಯು ಪರಮಪುರುಷನ ಆರಾಧನರೂಪವಾಗಿ ಶಾಸ್ತ್ರೋಕ್ತವಾದ ಕರ್ಮಗಳನ್ನು ಮಾಡುತ್ತಾ ಅದರಿಂದ ವಿಶುದ್ಧವಾದ ಮನಸ್ಸುಳ್ಳವನಾಗಿ ತನ್ನಿಂದ ಅಭ್ಯಾಸಮಾಡಲ್ಪಟ್ಟ ಕರ್ಮದಲ್ಲಿ ಆಸಕ್ತವಾದ ಮನಸ್ಸುಳ್ಳವನಾಗಿರುವವನಾದುದರಿಂದ ಮನಸ್ಸನ್ನು ಇಂದ್ರಿಯಗಳನ್ನು ಪ್ರಯಾಸವಿಲ್ಲದೇ ಜಯಿಸಿ “ ದೇವ ಮನುಷ್ಯಾದಿ ಭೇದಗಳೆಲ್ಲವೂ ಪ್ರಕೃತಿಗತವಾದ ವಿಕಾರಗಳಾಗಿರುವುವು, ಆತ್ಮಗಳು ಸರ್ವಶರೀರಗಳಲ್ಲಿಯೂ ಒಂದೇ ವಿಧವಾಗಿ ಜ್ಞಾನಸ್ವರೂಪದಿಂದ ಸಮವಾಗಿರುವುವು ” ಎಂಬದಾಗಿ ಆತ್ಮ ಸ್ವರೂಪದ ಯಥಾರ್ಥಸ್ಥಿತಿಯನ್ನು ಸರ್ವಕಾಲದಲ್ಲಿಯೂ ಚಿಂತಿಸಿರುತ್ತಾನಾದುದರಿಂದ ಅವನು ಕರ್ಮವನ್ನು ಮಾಡುತಾ ಬಂದರೂ, ದೇಹವೇ ಆತ್ಮವೆಂಬ ಭ್ರಮದಿಂದ ಬದ್ಧನಾಗಲಾರನು, ಆದುದರಿಂದ ಬಹು ಶೀಘ್ರದಲ್ಲಿ ಅಂತವನು ಆತ್ಮನನ್ನು ಹೊಂದುವುನೆಂದು ತಾತ್ಪರ್ಯವು. ಪ್ರಕೃತಿ ವಿಯುಕ್ತವಾದ ಆತ್ಮಸ್ವರೂಪವನ್ನು “ ನಿರ್ದೋಷಂ ಹಿಸಮಂಬ್ರಹ್ಮ ” (ಶ್ಲೋ|| ೧೯||) ಎಂಬುವ ಸ್ಥಾನದಲ್ಲಿ ಮುಂದೆ ಹೇಳುತ್ತಾನೆ. ||೭||

ಮೂ|| ನೈವಕಿಂಚಿತ್ಕರೋಮೀತಿ ಯುಕ್ತೋಮ

**ನ್ಯೇತ ತತ್ತ್ವವಿತ್| ಪಶ್ಯಞ್ಛೃಣ್ವನ್ಸ್ಪೃಶಞ್ಜಿಘ್ರನ್ನ**
**ಶ್ನನ್ಗಚ್ಛನ್ಸ್ವಪಞ್ಛ್ವಸನ್ ||೮|| ಪ್ರಲಪನ್ ವಿಸೃಜನ್**
**ಗೃಹ್ಣನ್ನುನ್ಮಿಷನ್ನಿಮಿಷನ್ನಪಿ | ಇಂದ್ರಿಯಾಣೀಂದ್ರಿ**
**ಯಾರ್ಥೇಷು ವರ್ತಂತ ಇತಿಧಾರಯನ್ | ||೯||**

ಪ || ನ- ಏವ- ಕಿಂಚಿತ್- ಕರೋಮಿ- ಇತಿ- ಯುಕ್ತಃ- ಮನ್ಯೇತ- ತತ್ತ್ವವಿತ್ | ಪಶ್ಯನ್- ಶೃಣ್ವನ್- ಸ್ಪೃಶನ್- ಜಿಘ್ರನ್ - ಅಶ್ನನ್- ಗಚ್ಛನ್- ಸ್ವಪನ್ - ಶ್ವಸನ್ || ಪ್ರಲಪನ್- ವಿಸೃಜನ್- ಗೃಹ್ಣನ್- ಉನ್ಮಿಷನ್- ನಿಮಿಷನ್- ಅಪಿ | ಇಂದ್ರಿಯಾಣಿ - ಇಂದ್ರಿಯಾರ್ಥೇಷು- ವರ್ತಂತೇ- ಇತಿ- ಧಾರಯನ್ || ... ... ||೮||೯||

ಅ || ಯುಕ್ತಃ - ಯೋಗಯುಕ್ತನಾಗಿ, ತತ್ತ್ವವಿತ್ - ಆತ್ಮ ತತ್ತ್ವವನ್ನು ತಿಳಿದವನಾದ, ಪಶ್ಯನ್ - ನೋಡಿದವನು, (ಇದು ಕಣ್ಣಿನ ಕಾರ್ಯವು.) ಶೃಣ್ವನ್ - ಕೇಳಿದವನು, (ಕಿವಿಯ ವ್ಯಾಪಾರವು.) ಸ್ಪೃಶನ್- ಸ್ಪರ್ಶಿಸುವಂತವನು, (ತ್ವಗಿಂದ್ರಿಯ ವ್ಯಾಪಾರವು.) ಜಿಘ್ರನ್- ಮೂಸಿನೋಡಿದವನು, (ಘ್ರಾಣೇಂದ್ರಿಯ ವ್ಯಾಪಾರವು.) ಅಶ್ನನ್- ತಿನ್ನುವಂತವನು, (ರಸನೇಂದ್ರಿಯ ವ್ಯಾಪಾರವು.) ಗಚ್ಛನ್- ನಡಿಯುವಂತವನು, (ಇದು ಕಾಲಿನ ವ್ಯಾಪಾರವು.) ಸ್ವಪನ್- ನಿದ್ರೆಯನ್ನನುಭವಿಸುವಂತವನು, (ಬುದ್ಧಿವ್ಯಾಪಾರವು.) ಶ್ವಸನ್- ಶ್ವಾಸಬಿಡುವಂತವನು, (ಪ್ರಾಣವಾಯು ವ್ಯಾಪಾರವು.) ಪ್ರಲಪನ್ - ಮಾತನಾಡುವಂತವನು, (ಬಾಯಿಯ ವ್ಯಾಪಾರವು.) ವಿಸೃಜನ್- ಮಲಜಲಗಳನ್ನು ಬಿಡುವಂತವನು, (ಇದು ಪಾಯೂಪಸ್ಥಗಳ ಕಾರ್ಯವು) ಗೃಹ್ಣನ್ - ತೆಗದುಕೊಳ್ಳುವಂತವನು, (ಕೈಗಳ ಕಾರ್ಯವು.) ಉನ್ಮಿಷನ್ನಿಮಿಷನ್ - ಕಣ್ಣುಗಳನ್ನು ತೆರೆದವನು, ಮುಚ್ಚಿದವನು, (ಕೂರ್ಮವೆಂಬುವ ವಾಯು ವ್ಯಾಪಾರವಿದು,) ಅಪಿ- ಈ ಪ್ರಕಾರವಾಗಿರುವಂತವನಾದರೂ, ಇಂದ್ರಿಯಾಣಿ- ಇಂದ್ರಿಯಗಳು, ಇಂದ್ರಿಯಾರ್ಥೇಷು- ಶಬ್ದಾದಿ ವಿಷಯಗಳಲ್ಲಿ, ವರ್ತಂತ ಇತಿ- ಪ್ರವರ್ತಿಸಿರುವವೆಂಬದಾಗಿ, ಧಾರಯನ್- ನಿಶ್ಚಯಿಸಿಕೊಂಡಿರುವಂತವನಾಗಿ, ಕಿಂಚಿತ್- ಸ್ವಲ್ಪವಾದ ಕಾರ್ಯವನ್ನೂ, ನೈವಕರೋಮೀತಿ- ನಾನು ಮಾಡಲಿಲ್ಲವೆಂಬದಾಗಿ, ಮನ್ಯೇತ- ತಿಳಿಯುತ್ತಾನೆ. ... ... ... ||೮||೯||

(ರಾ|| ಭಾ||) ಕರ್ಮಯೋಗವು ಯಾವ ಕಾರಣದಿಂದ ಮಾಡುವುದಕ್ಕೆ ಸುಕರವಾಗಿಯೂ ಶೀಘ್ರವಾಗಿ ಫಲವನ್ನು ಕೊಡುವುದಾಗಿಯೂ ಇರುವುದೋ ಆ ಕಾರಣದಿಂದ ಅದಕ್ಕಪೇಕ್ಷಿತವಾದದ್ದನ್ನು ವಿವರಿಸುವೆನು, ಕೇಳು. ಈ ಪ್ರಕಾರವಾಗಿ ಆತ್ಮಸ್ವರೂಪದ ಯಥಾರ್ಥಸ್ಥಿತಿಯನ್ನು ತಿಳಿದಿರುವಂತವನು ಕಿವಿ ಮೊದಲಾದ ಜ್ಞಾನೇಂದ್ರಿಯಗಳೂ ಮತ್ತು ವಾಕ್ಕು ಮೊದಲಾದ ಕರ್ಮೇಂದ್ರಿಯಗಳೂ ಪ್ರಾಣವಾಯು

ಗಳು ತಮ್ಮಗಳ ವಿಷಯಗಳಲ್ಲಿರುವುವಲ್ಲದೆ ನಾನು ಯಾವದನ್ನು ಮಾಡಲಿಲ್ಲವೆಂಬದಾಗಿ ನೆನೆಸುತಲಿರುವನು. (ಎಂದರೆ ಜ್ಞಾನಸ್ವಭಾವನಾದ ನನಗೆ ನಾನು ಮಾಡಿದೆನೆಂದು ನೆನೆಯುವಿಕೆಯು, ಕರ್ಮಮೂಲವಾದ ಇಂದ್ರಿಯಪ್ರಾಣ ಸಂಬಂಧದಿಂದ ಬಂದಿರುವುದಲ್ಲದೆ ನನ್ನ ಸ್ವರೂಪದಿಂದ ಬಂದಿದ್ದಲ್ಲವೆಂಬದಾಗಿ ನೆನೆಸುತಲಿರುವನೆಂದು ತಾತ್ಪರ್ಯವು. ॥೮॥ ೯॥

ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ
ಕರೋತಿ ಯಃ । ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿ
ವಾಂಭಸಾ । ... ... ॥೧೦॥

ಪ॥ ಬ್ರಹ್ಮಣಿ- ಆಧಾಯ- ಕರ್ಮಾಣಿ- ಸಂಗಂ- ತ್ಯಕ್ತ್ವಾ- ಕರೋತಿ- ಯಃ । ಲಿಪ್ಯತೇ ನ- ಸಃ- ಪಾಪೇನ- ಪದ್ಮಪತ್ರಂ- ಇವ- ಅಂಭಸಾ ॥ ... ॥೧೦॥

ಅ॥ ಯಃ- ಯಾವನು, ಕರ್ಮಾಣಿ- ಕರ್ಮಗಳನ್ನು, ಬ್ರಹ್ಮಣಿ- ಪರಮಾತ್ಮನಲ್ಲಿ, (ರಾ) ಪ್ರಕೃತಿಯಲ್ಲಿ, ಆಧಾಯ- ಅರ್ಪಣಮಾಡಿ, ಸಂಗಂ- ಫಲಸಂಗವನ್ನು, (ಶಂ) ಮೋಕ್ಷವಿಷಯದಲ್ಲಿಯೂ ಕೂಡ ಅಪೇಕ್ಷೆಯನ್ನು, ತ್ಯಕ್ತ್ವಾ- ಬಿಟ್ಟು, ಕರೋತಿ- ಮಾಡುತ್ತಾನೆಯೋ ; ಸಃ - ಅವನು, ಅಂಭಸಾ - ನೀರಿನಿಂದ, ಪದ್ಮಪತ್ರಮಿವ- ತಾವರೆಯೆಲೆಯಂತೆ, ಪಾಪೇನ- ಪಾಪದಿಂದ, ನಲಿಪ್ಯತೇ- ಲೇಪಿಸಲ್ಪಡಲಾರನು. ಪಾಪಗಳಿಂದ ಅಂಟಲ್ಪಡಲಾರನೆಂದರ್ಥವು. ... ... ॥೧೦॥

(ರಾ॥ ಭಾ॥) ಬ್ರಹ್ಮಶಬ್ದದಿಂದ ಪ್ರಕೃತಿಯು ಹೇಳಲ್ಪಡುವುದು; "ಮಮಯೋನಿರ್ಮಹದ್ಬ್ರಹ್ಮ" (೧೪॥ ೩) ಎಂಬುವ ಶ್ಲೋಕದಲ್ಲೀ ಅರ್ಥವು ಹೇಳಲ್ಪಡುವುದು. ಯಾವನಾದರೆ ಕರ್ತೃತ್ವವನ್ನು ದೇಹೇಂದ್ರಿಯಾದಿ ರೂಪದಿಂದ ಪರಿಣತವಾದ ಪ್ರಕೃತಿಯಲ್ಲಿ "ಪಶ್ಯಞ್ಛೃಣ್ವನ್" (೫॥೮॥೯॥) ಎಂಬ ಶ್ಲೋಕಗಳಿಂದ ಹೇಳಲ್ಪಟ್ಟಿರುವಂತೆ ಆರೋಪಿಸಿ ನಾನು ಯಾವದನ್ನೂ ಮಾಡುವುದಿಲ್ಲವೆಂಬದಾಗಿ ಫಲಸಂಗವಂಬಿಟ್ಟು ಕರ್ಮಗಳನ್ನು ಮಾಡುತ್ತಾನೋ, ಅಂತವನು ಪ್ರಕೃತಿಯೊಡನೆ ಕೂಡಿದವನಾಗಿದ್ದರೂ ಪ್ರಕೃತಿಯೇ ಆತ್ಮಾ ಎಂಬ ಅಭಿಮಾನಕ್ಕೆ ಕಾರಣಭೂತವಾದ ಪಾಪಗಳಿಂದ ಲೇಪಿಸಲ್ಪಡಲಾರನು. ಯಾವರೀತಿಯಾಗಿ ತಾವರೆಯೆಲೆಯು ನೀರಿನಿಂದ ಸಂಬಂಧಿಸಲ್ಪಟ್ಟಿದ್ದರೂ ಅದಂ

ನೀರಂಟುವುದಿಲ್ಲವೋ ಆರೀತಿಯಾಗಿ ಅವನನ್ನು ಪಾಪಗಳು ಲೇಪಿಸುವುದಿಲ್ಲವೆಂದು ತಾತ್ಪರ್ಯವು. ... ... ॥೧೦॥

ಮೂ॥ ಕಾಯೇನ ಮನಸಾ ಬುದ್ಧ್ಯಾ ಕೇವಲೈರಿಂದ್ರಿಯೈರಪಿ। ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾತ್ಮಶುದ್ಧಯೇ ॥ ... ... ॥೧೧॥

ಪ॥ ಕಾಯೇನ- ಮನಸಾ- ಬುದ್ಧ್ಯಾ- ಕೇವಲೈಃ- ಇಂದ್ರಿಯೈಃ- ಅಪಿ । ಯೋಗಿನಃ- ಕರ್ಮ- ಕುರ್ವಂತಿ- ಸಂಗಂ- ತ್ಯಕ್ತ್ವಾ- ಆತ್ಮಶುದ್ಧಯೇ ॥ ... ॥೧೧॥

ಅ॥ ಯೋಗಿನಃ - ಕರ್ಮಯೋಗಿಗಳು, ಸಂಗಂ - ಫಲಾಪೇಕ್ಷೆಯನ್ನು, ತ್ಯಕ್ತ್ವಾ- ಬಿಟ್ಟು, ಆತ್ಮಶುದ್ಧಯೇ- (ಶಂ) ಸತ್ವಶುದ್ಧಿಗೋಸ್ಕರ, (ರಾ) ತನಗೆ ಪ್ರಾಪ್ತವಾಗಿರುವ ಪ್ರಾಚೀನ ಕರ್ಮಬಂಧದ ನಾಶಕ್ಕೋಸ್ಕರ, ಕಾಯೇನ- ದೇಹದಿಂದಲೂ, ಮನಸಾ- ಮನಸ್ಸಿನಿಂದಲೂ, ಬುದ್ಧ್ಯಾ- ಬುದ್ಧಿಯಿಂದಲೂ, ಕೇವಲೈರಿಂದ್ರಿಯೈರಪಿ- ಅಭಿಮಾನಶೂನ್ಯವಾದ ಇಂದ್ರಿಯಗಳಿಂದಲೂ, ಕರ್ಮ- ಕರ್ಮವನ್ನು, ಕುರ್ವಂತಿ- ಮಾಡುತ್ತಾರೆ॥೧೧॥

(ಶಂ॥ ಭಾ॥) ಕರ್ಮಗಳನ್ನಾಚರಿಸುವುದರಿಂದ ಅವಿದ್ವಾಂಸನಿಗೆ ಫಲವೇನು? ಎಂಬ ಪ್ರಶ್ನೆಕ್ಕೆ ಅವನ ಕರ್ಮವು ಕೇವಲ ಚಿತ್ತಶುದ್ಧಿಮಾತ್ರವನ್ನೇ ಫಲವುಳ್ಳದ್ದಾಗಿರುವುದೆಂದೀಶ್ಲೋಕದಿಂದ ಉತ್ತರನ್ನು ಹೇಳುತ್ತಾನೆ.

(ರಾ॥ ಭಾ॥) ದೇಹವು, ಮನಸ್ಸು, ಬುದ್ಧಿ, ಇಂದ್ರಿಯ, ಇವುಗಳಿಂದ ಮಾಡತಕ್ಕ ಕರ್ಮವನ್ನು, ಸ್ವರ್ಗಾದಿ ಫಲಸಂಗವಂ ಬಿಟ್ಟು ಯೋಗಿಗಳು ತಮುಗಳಿಗೆ ಪ್ರಾಪ್ತವಾಗಿರುವ ಪ್ರಾಚೀನ ಕರ್ಮಬಂಧ ವಿನಾಶಕ್ಕೋಸ್ಕರವಾಗಿ ಮಾಡುತ್ತಾರೆ. ... ॥೧೧॥

(ಶ್ರೀ) ಇದುವರೆಗೂ ಹೇಳಲ್ಪಟ್ಟ ಶ್ಲೋಕಗಳಿಂದ ಈಶ್ವರಾರ್ಪಣಬುದ್ಧಿಯಿಂದ ಮಾಡಲ್ಪಟ್ಟ ಕರ್ಮವು ಬಂಧಕವಾಗಲಾರದೆಂದು ಹೇಳಲ್ಪಟ್ಟಿತು. ಈ ಶ್ಲೋಕದಿಂದ ಸದಾಚಾರವನ್ನನುಸರಿಸಿ, ಫಲಸಂಗವಿಲ್ಲದೇ ಮಾಡಲ್ಪಡುವ ಕರ್ಮವು ಮೋಕ್ಷಕಾರಣವಾಗುವುದೆಂದು ಹೇಳಲ್ಪಡುವುದು. ದೇಹದಿಂದ ಮಾಡಲ್ಪಡುವ ಕರ್ಮಗಳು ಸ್ನಾನಾದಿಗಳು, ಮನಸ್ಸಿನಿಂದ ಧ್ಯಾನಾದಿಗಳು, ಬುದ್ಧಿಯಿಂದ ತತ್ವನಿಶ್ಚಯಾದಿಗಳು, ಇಂದ್ರಿಯಗಳಿಂದ ಶ್ರವಣಕೀರ್ತನಾದಿಗಳು ಮಾಡಲ್ಪಡುವುವು.

ಅವುಗಳನ್ನು ಫಲಾಭಿಸಂಧಿಯಿಲ್ಲದೇ ಮಾಡಿದರೇ ಚಿತ್ತಶುದ್ಧಿರೂಪವಾದ ಫಲವುಂಟಾಗುವುದು. ... ... ||೧೧||

(ಮಧುಸೂ) ಈಶ್ವರಾರ್ಪಣ ಬುದ್ಧಿಯಿಂದ ಮಾಡಲ್ಪಡುವ ಕರ್ಮವು ಚಿತ್ತಶುದ್ಧಿಗೋಸ್ಕರ ವಾಗುವುದೆಂಬ ವಿಷಯವನ್ನೇ ಈ ಶ್ಲೋಕದಿಂದಲೂ ಹೇಳುತಾನೆ. ... ... ||೧೧||

ಮೂ || ಯುಕ್ತಃಕರ್ಮಫಲಂತ್ಯಕ್ತ್ವಾ ಶಾಂತಿಮಾಪ್ನೋತಿನೈಷ್ಠಿಕೀಂ | ಅಯುಕ್ತಃಕಾಮಕಾರೇಣ ಫಲೇ ಸಕ್ತೋನಿಬಧ್ಯತೇ | ... ... ||೧೨||

ಪ|| ಯುಕ್ತಃ- ಕರ್ಮಫಲಂ-ತ್ಯಕ್ತ್ವಾ- ಶಾಂತಿಂ- ಆಪ್ನೋತಿ- ನೈಷ್ಠಿಕೀಂ| ಅಯುಕ್ತಃ-ಕಾಮಕಾರೇಣ- ಫಲೇ- ಸಕ್ತಃ- ನಿಬಧ್ಯತೇ || ... ||೧೨||

ಅ|| ಯುಕ್ತಃ-(ಶಂ) ಈಶ್ವರಪ್ರೀತಿಗಾಗಿ ಮಾಡುತ್ತೇನೆಂಬ ಮನಸ್ಸಮಾಧಾನವನ್ನು ಹೊಂದಿರುವಂತವನು, (ಶ್ರೀ) ಪರಮೇಶ್ವರ ನಿಷ್ಠೆಯಲ್ಲಿ ಸ್ಥಿರನಾಗಿರುವಂತವನು, (ರಾ) ಆತ್ಮಕ್ಕಿಂತಲೂ, ಇತರವಾದ ಫಲಗಳಲ್ಲಿ ಚಪಲನಾಗದೇ ಆತ್ಮಮಾತ್ರ ಪ್ರಯೋಜನದಲ್ಲಿ ದೃಷ್ಟಿಯುಳ್ಳವನು, ಕರ್ಮಫಲಂತ್ಯಕ್ತ್ವಾ - ಕರ್ಮದಲ್ಲಿ ಫಲಸಂಗವಂಬಿಟ್ಟು, ನೈಷ್ಠಿಕೀಂ-ಆತ್ಮನಿಷ್ಠೆಯಿಂದುಂಟಾಗುವ, ಶಾಂತಿಂ- (ಶಂ) ಮೋಕ್ಷವನ್ನು, (ರಾ) ಆತ್ಮಾನುಭವ ಸುಖವನ್ನು, ಆಪ್ನೋತಿ- ಹೊಂದುತ್ತಾನೆ. ಕಾಮಕಾರೇಣ- ಆಶೆಯಿಂದ ಪ್ರೇರಿತನಾಗಿ, ಫಲೇ- ಫಲದಲ್ಲಿ, ಸಕ್ತಃ-ಆಶೆಯುಳ್ಳ, ಅಯುಕ್ತಃ- ಫಲಾಪೇಕ್ಷೆಯಿಂದ ಕರ್ಮವಂ ಮಾಡುವಂತವನು. (ರಾ) ಆತ್ಮನಿಗಿಂತಲೂ ಅನ್ಯವಾದ ಫಲಗಳಲ್ಲಿ ಚಪಲನಾಗಿ ಆತ್ಮಾವಲೋಕನದಲ್ಲಿ ವಿಮುಖನಾದವನು, ನಿಬಧ್ಯತೇ- ಸಂಸಾರಿಯಾಗುವನು. ||೧೨||

(ಶಂ|| ಭಾ||) ಯಾವ ಕಾರಣದಿಂದ ನಿಷ್ಕಾಮಕರ್ಮಗಳು ಚಿತ್ತಶುದ್ಧಿಯನ್ನೇ ಫಲವಾಗಿ ವುಳ್ಳವುಗಳಾಗಿರುವುವೊ ಅದುದರಿಂದಲೇ ನಿನಗಿದುವರೆಗೂ ಚಿತ್ತಶುದ್ಧಿಯುಂಟಾಗಲಿಲ್ಲವಾದುದರಿಂದ ಕರ್ಮದಲ್ಲಿಯೇ ಅಧಿಕಾರವು, ಎಂಬದಾಗಿ ಈ ಶ್ಲೋಕದಿಂದ ಅರ್ಜುನನಿಗುಪದೇಶಿಸುತ್ತಾನೆ. ಯಾವನಾದರೇ ಈಶ್ವರಾರ್ಪಣ ಬುದ್ಧಿಯಿಂದಲೇ ಕರ್ಮಗಳಂ ನಾನು ಮಾಡುತ್ತೇನಲ್ಲದೇ ನನಿಗೆ ಫಲಾಪೇಕ್ಷೆ ಯುಂಟಾಗಿ ಮಾಡುವುದಿಲ್ಲವೆಂಬ ನಿಶ್ಚಯ ವುಳ್ಳವನಾಗಿ ಫಲಾಸಕ್ತಿಯನ್ನು ಅತ್ಯಂತವಾಗಿ ಬಿಟ್ಟು ಕರ್ಮಗಳನಾಚರಿಸುತ್ತಾನೋ ಅಂತವನು ಕರ್ಮಾಚರಣೆಯಿಂದ ಹೊಂದಲ್ಪಟ್ಟ ಸತ್ವಶುದ್ಧಿಯನ್ನು, ತದ್ದ್ವಾರಾ ಜ್ಞಾನವನ್ನೂ ಅದರಿಂದ ಸರ್ವಕರ್ಮ ಸನ್ನ್ಯಾಸವನ್ನೂ, ಅದರಿಂದ ಬ್ರಹ್ಮಾತ್ಮೈಕ್ಯ

ಕ್ಕಾನುಸಂಧಾನವೆಂಬ ಜ್ಞಾನನಿಷ್ಠಾಕ್ರಮದಿಂದ ಮೋಕ್ಷವನ್ನು ಹೊಂದುವನು. ಅಂತಹ ನಿಶ್ಚಯವಿಲ್ಲದವನು ಆಶೆಯಿಂದ ಪ್ರೇರಿತನಾಗಿ ನನ್ನ ಫಲಕ್ಕೋಸ್ಕರವಾಗಿ ಈ ಕರ್ಮವಂ ಮಾಡುವೆನೆಂಬ ಫಲಾಪೇಕ್ಷೆಯೊಡನೆ ಕರ್ಮಗಳನ್ನಾಚರಿಸುತ್ತಾ ನಾದ-ದರಿಂದ ಕರ್ಮಬದ್ಧನಾಗುತ್ತಾನೆ. ಆದುದರಿಂದ ಕರ್ಮಾಧಿಕಾರಿಯಾದ ನೀನು ಫಲಸಂಗವಿಲ್ಲದೇ ಈಶ್ವರಾರ್ಪಣ ಬುದ್ಧಿಯಿಂದ ಕರ್ಮಗಳಂ ಮಾಡುವಂತವನಾಗು. ||೧೨|

(ರಾ||ಭಾ||) ಆತ್ಮವ್ಯತಿರಿಕ್ತವಾದ ಫಲಗಳಲ್ಲಿ ಚಪಲನಾಗದೆ ಆತ್ಮಮಾತ್ರದಲ್ಲಾಸಕ್ತನಾಗಿ ಆತ್ಮಶುದ್ಧಿಮಾತ್ರಕ್ಕಾಗಿ ಕರ್ಮವಂ ಮಾಡುವಂತವನು ಆತ್ಮಾನುಭವವೆಂಬ ಸ್ಥಿರವಾದ ಸುಖವನ್ನು ಹೊಂದುವನು. ಈ ಪ್ರಕಾರವಾಗಿ ಆತ್ಮದರ್ಶನದಲ್ಲಾಸಕ್ತನಾಗದೆ ಆತ್ಮವ್ಯತಿರಿಕ್ತವಾದ ಫಲಗಳಲ್ಲಿ ಚಪಲನಾಗಿ ಕರ್ಮಗಳಂ ಮಾಡುವಂತವನು ಅಂತಹ ಕರ್ಮಗಳಿಂದ ಬದ್ಧನಾಗಿ ನಿತ್ಯಸಂಸಾರಿಯಾಗುವನು. ಆದರಿಂದ ಫಲಸಂಗ ರಹಿತನಾಗ ಇಂದ್ರಿಯಾಕಾರದಿಂದ ಪರಿಣಾಮವಂ ಹೊಂದಿರುವ ಪ್ರಕೃತಿಯಲ್ಲಿ ಕರ್ಮಗಳಂ ಮಾಡುವಿಕೆಯನ್ನಾರೋಪಿಸಿ ತನ್ನ ಬಂಧ ವಿಮೋಚನಕ್ಕಾಗಿಯೇ ಕರ್ಮಗಳನ್ನು ಮಾಡಬೇಕೆಂದು ಹೇಳಿದಂತೆ ಆಯಿತು. ... ... ||೧೨||

(ಗೀ|| ವಿ||) "ಸನ್ನ್ಯಾಸಸ್ತು" (೫|| ೬||) ಎಂಬಿದೇ ಮೊದಲಾದ ಶ್ಲೋಕದಿಂದ "ಸನ್ನ್ಯಾಸ, ಕರ್ಮಯೋಗ" ಗಳೆರಡೂ ಸೇರಿಯೇ ಫಲವನ್ನು ಸಾಧಿಸುವುವು. ಇವುಗಳಲ್ಲೊಂದನ್ನು ಬಿಟ್ಟು ಒಂದುಂಟಾಗುವುದಿಲ್ಲವೆಂಬ ನಿಯಮವನ್ನು ತಿಳಿಸುವುದಕ್ಕೋಸ್ಕರವಾಗಿ ಅವುಗಳಿಗೆ ಫಲವು " ಬ್ರಹ್ಮಾಧಿಗಚ್ಛತಿ - (೫ || ೬ ||) ಕುರ್ವನ್ನಪಿನಲಿಪ್ಯತೆ" (೫|| ೭||) ಎಂಬ ಶ್ಲೋಕಗಳಿಂದ ಹೇಳಲ್ಪಟ್ಟಿತು. ಈ ಶ್ಲೋಕದಿಂದ ಸನ್ನ್ಯಾಸ ಕರ್ಮಯೋಗಗಳೇ ಮೋಕ್ಷ ಸಾಧನಗಳು, ಇವೆರಡನ್ನೂ ಬಿಟ್ಟರೆ ಅನ್ಯವಾದದ್ದು ಯಾವುದೂ ಮೋಕ್ಷಸಾಧನವಲ್ಲವೆಂಬ ನಿಯಮವನ್ನು ತಿಳಿಸುವುದಕ್ಕಾಗಿ ಸನ್ನ್ಯಾಸ ಕರ್ಮಯೋಗಗಳುಳ್ಳವನಿಗೆ ಮೋಕ್ಷವೂ, ಅವಿಲ್ಲದವನಿಗೂ ಸಂಸಾರಪ್ರಾಪ್ತಿಯೂ ಫಲವೆಂದು ಹೇಳುತ್ತಾನೆ. ... ... ||೧೨||

(ಮಧುಸೂ) ಯುಕ್ತನಿಗೂ ಅಯುಕ್ತನಿಗೂ ಕರ್ತೃತ್ವವೂ ಸಮಾ

ನವಾಗಿರುತ್ತಾ ಅಂಥಾ ಕರ್ಮದಿಂದ ಒಬ್ಬನು ಮುಕ್ತನಾಗುವುದಕ್ಕೂ ಮತ್ತೊಬ್ಬನು ಬದ್ಧನಾಗುವುದಕ್ಕೂ ಕಾರಣವನ್ನರ್ಜುನನು ಕೇಳುವನೊ ಎಂಬದಾಗಿ ತಾನಾಗಿಯೆ ಚಿಂತಿಸಿಕೊಂಡು ಅಂತಹ ಬಂಧಮೋಕ್ಷಗಳಿಗೆ ಕಾಮವು (ಫಲದಲ್ಲಾಶೆಯು) ಅಕಾಮವು (ಫಲದಲ್ಲಪೇಕ್ಷೆಇಲ್ಲದೆಇರುವಿಕೆಯು) ಕಾರಣವೆಂದೀ ಶ್ಲೋಕದಿಂದ ಶ್ರೀಕೃಷ್ಣನುಪದೇಶಿಸುತ್ತಾನೆ. ... ... ॥೧೨॥

ಮೂ॥ ಸರ್ವಕರ್ಮಾಣಿ ಮನಸಾ ಸನ್ನ್ಯಸ್ಯಾಸ್ತೇ ಸು
ಖಂ ವಶೀ । ನವದ್ವಾರೇಪುರೇದೇಹೀ (ಶಂ॥ ಪುರೇದೇಹೇ॥
ಪಾಠಃ) ನೈವಕುರ್ವನ್ನಕಾರಯನ್ ॥ ॥೧೩॥

ಪ॥ ಸರ್ವ-ಕರ್ಮಾಣಿ - ಮನಸಾ- ಸನ್ನ್ಯಸ್ಯ- ಆಸ್ತೇ- ಸುಖಂ - ವಶೀ । ನವದ್ವಾರೇ- ಪುರೇ- ದೇಹೀ- ನ- ಏವ- ಕುರ್ವನ್- ನ- ಕಾರಯನ್ ॥

ಅ॥ ವಶೀ - ಇಂದ್ರಿಯಾದಿಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವಂತವನು, ಸರ್ವಕರ್ಮಾಣಿ- ಸಕಲ ಕರ್ಮಗಳನ್ನು, ಮನಸಾ - ವಿವೇಕಯುಕ್ತವಾದ ಮನಸ್ಸಿನಿಂದ, ಸನ್ನ್ಯಸ್ಯ - ಬಿಟ್ಟುಬಿಟ್ಟು, ನವದ್ವಾರೇ - ಒಂಭತ್ತುದ್ವಾರಗಳಿಂದ ಕೂಡಿರುವ, ಪುರೇ ಏವ- ಪಟ್ಟಣದಲ್ಲಿರುವಂತೆ, ದೇಹೇ- ದೇಹದಲ್ಲಿ, ನೈವಕುರ್ವನ್ - ತಾನು ಯಾವದನ್ನು ಮಾಡದೆ, ನಕಾರಯನ್ - ಮಾಡಿಸದೇ, ಸುಖಂ - ಸುಖವಾಗಿ, ಆಸ್ತೆ - ಇರುತ್ತಾನೆ. (ಶ್ರೀ-ರಾ-ಗೀ-ವಿ) ದೇಹೀಎಂಬದಾಗಿ ಪಾಠವು. ವಶೀ - ಜಿತೇಂದ್ರಿಯನಾದ, ದೇಹೀ- ದೇಹಕ್ಕಿಂತಲೂ ಅನ್ಯನಾಗಿರುವ ಆತ್ಮನನ್ನು ನೋಡುವಂತವನು, (ಅಥವಾ) ದೇಹದಲ್ಲಿರುವಂತವನು, ಎಂಬದಾಗಿ ಅರ್ಥವು. ॥೧೩॥

(ಶಂ॥ ಭಾ) ಆದರೆ ಫಲಾಪೇಕ್ಷೆಯಂ ಬಿಟ್ಟು ಸರ್ವರೂ (ಜ್ಞಾನನನಿಷ್ಠರೂ ಕರ್ಮನಿಷ್ಠರೂ)ಕರ್ಮಗಳಂ ಮಾಡಬೇಕೆಂದು ಹೇಳಿರುತ್ತೀಯಲ್ಲವೆ ; ಈ ವಾಕ್ಯದಿಂದ ಸನ್ನ್ಯಾಸವು ನಿರವಕಾಶವಾದದ್ದು (ಆಚರಿಸುವಂತದನಿಲ್ಲವು) ಆಗಲಿಲ್ಲವೇ ; ಎಂಬ ಶಂಕೆಯನ್ನು ತಾನಾಗಿಯೆ ಶಂಕಿಸಿ ಕರ್ಮಾಧಿಕಾರಿಯಾದ ಅವಿವೇಕಿಗಿಂತಲೂ ಸರ್ವಾತ್ಮದರ್ಶಿಯಾದ ಬ್ರಹ್ಮವೇದಿಗೆ ಕರ್ಮವು ಸ್ವಲ್ಪವೂ ಸಂಭವಿಸುವುದಿಲ್ಲವಾದುದರಿಂದ ಸನ್ನ್ಯಾಸವೂ ನಿರವಕಾಶವಾದದ್ದಲ್ಲವೆಂಬದಾಗಿ ಆದರಿಂದ ಅರ್ಜುನನಿಗೆ ಉಪದೇಶಿಸುತ್ತಾನೆ.

ಪರಬ್ರಹ್ಮಸ್ವರೂಪ ಜ್ಞಾನವುಳ್ಳವನಾಗಿಯೂ, ಜಿತೇಂದ್ರಿಯನಾಗಿ

ಯೂ, ನಿತ್ಯನೈಮಿತ್ತಿಕ ಕಾಮ್ಯಪ್ರತಿಷಿದ್ಧಗಳೆಂಬ ಕರ್ಮಗಳನ್ನು ಕರ್ಮಗಳಲ್ಲಕರ್ತೃತ್ವಜ್ಞಾನವೆಂಬ ವಿವೇಕದಿಂದ (ಬಿಟ್ಟು) ತ್ಯಾಗಮಾಡಿ ವಾಙ್ಮನಃಕಾಯ ವ್ಯಾಪಾರಗಳಿಲ್ಲದವನಾಗಿಯೂ, ಪರಮಾರ್ಥ ಯತಿಯಾಗಿಯೂ, ಆಯಾಸವಿಲ್ಲದವನಾಗಿಯೂ ಪ್ರಸನ್ನವಾದ ಚಿತ್ತವೃತ್ತಿವನಾಗಿಯೂ, ತನ್ನ ಅನುಭವಕ್ಕಿಂತಲೂ ಇತರವಾದ ಬಾಹ್ಯಪ್ರಯೋಜನಗಳಿಲ್ಲದವನಾಗಿಯೂ ಒಂಭತ್ತುದ್ವಾರಗಳೊಡನೆ ಕೂಡಿರುವ ಪಟ್ಟಣವಲ್ಲಿ ತನ್ನ ಪರಿವಾರ ಸಹಿತವಾಗಿರುವ ಪ್ರಭುವಿನಂತೆ ಮೂಗಿನ ದ್ವಾರಗಳೆರಡೂ ಕಿವಿಯ ದ್ವಾರಗಳೆರಡೂ, ಕಣ್ಣಿನ ದ್ವಾರಗಳೆರಡೂ, ಬಾಯಿ, ಗುದ, ಉಪಸ್ಥ, ಗಳೆಂಬ ಒಂಭತ್ತು ರಂಧ್ರಗಳನ್ನು ಒಂಭತ್ತು ದ್ವಾರಗಳಾಗಿವುಳ್ಳ ಶರೀರವೆಂಬ ಪಟ್ಟಣದಲ್ಲಿ ಆತ್ಮನೆಂಬ ಪ್ರಭುವು ಆತ್ಮನಿಮಿತ್ತವಾಗಿ ಸಕಲ ಕಾರ್ಯಗಳನ್ನು ಮಾಡುವ ಇಂದ್ರಿಯಮನೋಬುದ್ಧಿಗಳೆಂಬ ಪರಿಜನಗಳೊಡನೆ ಕೂಡಿಕೊಂಡು ಕರ್ತೃತ್ವಮೂಲವಾದ ಅಹಂಕಾರವೂ, ಮತ್ತು ಪ್ರವರ್ತಕತ್ವ ಮೂಲವಾದ ಮಮಕಾರವೂ, ಇಲ್ಲದವನಾಗಿ ಸುಖವಾಗಿರುವನು. ಇದಂ ವಿಚಾರಿಸಿ ನೋಡಿದರೆ ದೇಹದಲ್ಲಿ ಜೀವಿಸಿರುವುದರಿಂದ ದೇಹಸಂಬಂಧ ಪ್ರಯುಕ್ತವಾದ ಅಭಿಮಾನವುಳ್ಳವನಂತೆ ಕಾಣಲ್ಪಟ್ಟರೂ ಪ್ರವಾಸಿಯಾದ ಪುರುಷನು ಇತರರ ಗೃಹದಲ್ಲಿರುವಂತೆ ಆ ಅನ್ಯಜನಗಳ ಪೂಜಾಪರಿಭವಾದಿಗಳಿಂದ ಸಂತೋಷ ವ್ಯಸನಗಳಿಲ್ಲದವನಾಗಿಯೂ, ವ್ಯಾಮೋಹವಿಲ್ಲದವನಾಗಿಯೂ, ಆ ನವದ್ವಾರಗಳುಳ್ಳ ಪಟ್ಟಣದಂತಿರುವ ದೇಹದಲ್ಲಿ ಸಕಲ ಕರ್ಮಗಳನ್ನು ಸನ್ಯಾಸಮಾಡಿ ಇರುತ್ತಾನೆಂದು ತಿಳಿಯಬರುತ್ತದೆ. ಆದರೆ ಸನ್ಯಾಸಿಯಾದವನು ಯಾವರೀತಿಯಾಗಿ ದೇಹದಲ್ಲಿರುತ್ತಾನೂ ಆರೀತಿಯಾಗಿಯೇ ಸಮಸ್ತ ಪ್ರಾಣಿಗಳೂ ದೇಹದಲ್ಲಿಯೇ ಇರುತ್ತಾರಲ್ಲವೆ ? ಅಂಥಾ ಸಂದರ್ಭದಲ್ಲಿ ಸನ್ಯಾಸಿಯು ದೇಹದಲ್ಲಿರುತ್ತಾನೆಂಬದಾಗಿ ಹೇಳುವುದರಿಂದ ವಿಶೇಷವೇನು ? ಎಂದರೇ ಕೇಳು. ಇಂದ್ರಿಯಾದಿಗಳೊಡನೆ ಕೂಡಿರುವ ದೇಹವನ್ನು ಆತ್ಮ ಯೆಂಬದಾಗಿ ತಿಳಿಯುತಲಿರುವ ಅಜ್ಞರಾದ ದೇಹಿಗಳೆಲ್ಲರೂ ಗೃಹದಲ್ಲಿಯಾದರೂ, ಭೂಮಿಯಲ್ಲಾದರೂ ಆಸನದಲ್ಲಾದರೂ, ಇರುತ್ತೇವೆಂಬದಾಗಿ ನೆನೆಸುತ್ತಾರಲ್ಲದೆ ಅಂಥಾವರಿಗೆ ನಾವು ಗೃಹದಲ್ಲಿರುವಂತೆ ದೇಹದಲ್ಲಿರುವೆ

ವೆಂಬ ಜ್ಞಾನವುಂಟಾಗಲಾರದು. ದೇಹೇಂದ್ರಿಯಾದಿ ಸಮುದಾಯಕ್ಕಿಂತಲೂ ಆತ್ಮನು ಭಿನ್ನನಾಗಿರುವನೆಂಬ ಜ್ಞಾನವುಳ್ಳವನಿಗೆ ದೇಹಕ್ಕಿಂತಲೂ ಅನ್ಯನಾದ ನಾನು ದೇಹದಲ್ಲಿರುವೆನೆಂಬ ಜ್ಞಾನವುಂಟಾಗುವುದು. ಪರಮಾತ್ಮನಲ್ಲಿ ಅವಿದ್ಯಾಸಂಬಂಧದಿಂ ದಾರೋಪಿಸಲ್ಪಡುವ ಕರ್ಮಗಳ ತ್ಯಾಗವು ವಿವೇಕಜ್ಞಾನದಿಂದ ಸಂದರ್ಭಿಸುವುದು. ಆದುದರಿಂದ ಅಂತಹ ವಿವೇಕಿಯಾದವನು ಸರ್ವಕರ್ಮ ಸನ್ನ್ಯಾಸವಂ ಮಾಡಿದ್ದರೂ, ಪ್ರಾರಬ್ಧಫಲ ಕರ್ಮ ಸಂಸ್ಕಾರಶೇಷವು ಅನುಸರಿಸಿ ಬರುವುದರಿಂದುಂಟಾದ ಈ ದೇಹದಲ್ಲಿಯೇ ವಿಶೇಷ ವಿಜ್ಞಾನವು ಹುಟ್ಟುವುದರಿಂದ ಒಂಭತ್ತು ದ್ವಾರಗಳುಳ್ಳ ದೇಹವೆಂಬ ಪಟ್ಟಣದಲ್ಲಿ, ಗೃಹದಲ್ಲಿರುವಂತೆ ದೇಹಪಾತಪರ್ಯನ್ತವೂ ಜೀವನ್ಮುಕ್ತನಾಗಿರುವನೆಂದು ಹೇಳುವುದರಲ್ಲಿ ವಿಶೇಷ ವುಂಟೆಂಬದಾಗಿ ತಿಳಿಯಬೇಕು. ಈ ಪ್ರಕಾರವಾಗಿರುವಿಕೆಯಲ್ಲಿ ವಿವೇಕಿಗೂ ಮತ್ತು ಅವಿವೇಕಿಗೂ ಇರುವ ಅಭಿಪ್ರಾಯಭೇದವನ್ನವಲಂಬಿಸಿ ಭೇದವನ್ನರಿಯಬೇಕು. ಆದರೆ ದೇಹೇಂದ್ರಿಯ ಕರ್ಮಗಳು ಅವಿದ್ಯೆಯಿಂದ ಆತ್ಮನಲ್ಲಾರೋಪಿಸಲ್ಪಟ್ಟಿರುವು ವಾದುದರಿಂದ ಅವುಗಳಂ ಬಿಟ್ಟಿರುವನೆಂಬದಾಗಿ ಹೇಳಬಹುದು; ಆತ್ಮನಲ್ಲಿ ಸಮವಾಯಸಂಬಂಧದಿಂದ (ಅವಿನಾಭಾವಸಂಬಂಧದಿಂದ) ಉಂಟಾಗಿರುವ ಕರ್ತೃತ್ವವೂ ಕಾರಯಿತೃತ್ವವೂ ಸನ್ನ್ಯಾಸದಿಂದ ಹೇಗೆ ಹೋಗುವುವೆಂದಾಕ್ಷೇಪಿಸಿಕೊಳ್ಳದೆ ಆತ್ಮವಂ ತಿಳಿದವನು ಯಾವಕಾರ್ಯವನ್ನು ತಾನಾಗಿಯೇ ಮಾಡಲಾರನೆಂಬದಾಗಿಯೂ, ದೇಹೇಂದ್ರಿಯಾದಿಗಳನ್ನು ಯಾವ ಕಾರ್ಯದಲ್ಲಿಯೂ ಪ್ರವರ್ತಿಸುವಂತೆ ಮಾಡಲಾರನೆಂಬದಾಗಿಯೂ, ( ಎಂದರೆ ಕರ್ತೃತ್ವಕಾರಯಿತೃತ್ವಗಳಿಲ್ಲದವನೆಂತಲೂ) ತಿಳಿಯಲರ್ಹನಾಗಿರುವನು. ಆದರೂದೇಹಿಯಾದವನಿಗೆ ತನ್ನಲ್ಲಿ ಕರ್ತೃತ್ವ ಕಾರಯಿತೃತ್ವಗಳು ಸಮವಾಯ ಸಂಬಂಧದಿಂದಿರುತಾ ನಡೆಯುತಲಿರುವವನ ಗಮನವು ನಡಿಯುವಿಕೆಇಲ್ಲದೇ ಹೋದತಕ್ಷಣದಲ್ಲಿ ಇಲ್ಲದೇ ಇರುವಂತೆ ಸನ್ನ್ಯಾಸದಿಂದಇಲ್ಲದೇ ಹೋಗುವುದೊ ; ಅಥವಾ ಸಹಜವಾಗಿಯೇ ಕರ್ತೃತ್ವಕಾರ ಯಿತೃಗಳಿಲ್ಲವಾದುದರಿಂದ ಇಲ್ಲದೇ ಹೋಗುವುದೊ ; ನಡಿಯುವಂತವನ ಗಮನಕ್ರಿಯೆಯಂತೆ ಕರ್ತೃತ್ವ ಕಾರಯಿತೃತ್ವಗಳಿಲ್ಲವೆಂದರೆ ಆತ್ಮನಿಗೆ ಸಕ್ರಿಯತ್ವವು

ಪ್ರಾಪ್ತವಾಗುವುದು ; ಸಹಜವಾಗಿಲ್ಲವೆಂದರೆ ಆತ್ಮನಿಗೆ ನಿರ್ವಿಕಾರಿತ್ವವೂ ಬರುವುದು ; ಎಂದರೆ ಹೇಳುವೆವು ; ಆತ್ಮನಲ್ಲಿ ಸ್ವತಃ ಕರ್ತೃತ್ವಕಾರಯಿತೃತ್ವಗಳಿಲ್ಲವು. "ಅವಿಕಾರ್ಯೋಯಮುಚ್ಯತೇ" (೨॥ ೨೫) "ಶರೀರಸ್ಥೋಪಿಕೌಂತೇಯ ನಕರೋತಿನಲಿಪ್ಯತೇ" (೧೩ ॥ ೩೧॥) ಎಂಬದಾಗಿ ಹೇಳಲ್ಪಡುವುದರಿಂದಲೂ, "ಧ್ಯಾನ ಮಾಡುವವನಂತೆಯೂ ಚಲಿಸುತಲಿರುವವನಂತೆಯೂ ಇರುವನು" ಎಂಬ ಅರ್ಥವಂ ಪ್ರತಿಪಾದಿಸುವ ಶ್ರುತಿಪ್ರಮಾಣದಿಂದಲೂ ನಿರ್ವಿಕಾರಿಯಾದ ಕೂಟಸ್ಥನಾಗಿರುವ ಆತ್ಮನಿಗೆ ಕರ್ತೃತ್ವಕಾರಯಿತೃಗಳು ಸಹಜವಾಗಿಯೇ ಇಲ್ಲದೇ ಹೋಗುವುವಲ್ಲದೇ ಆತ್ಮನಲ್ಲಿ ಸಮವಾಯ ಸಂಬಂಧದಿಂದ ಕರ್ತೃತ್ವ ಕಾರಯಿತೃತ್ವಗಳುಂಟೆಂದು ಹೇಳುವುದು ಯುಕ್ತವಾಗಿರುವುದಿಲ್ಲವೆಂದರಿಯಬೇಕು. ಈ ಶ್ಲೋಕದಲ್ಲಿ ಹೇಳಲ್ಪಟ್ಟವನು ಈ ಅಧ್ಯಾಯದ (೮॥೯॥) ನೇ ಶ್ಲೋಕಗಳಲ್ಲಿ ಹೇಳಲ್ಪಟ್ಟ ಜ್ಞಾನಾಧಿಕಾರಿಯೆಂಬದಾಗಿ ತಿಳಿಯಬೇಕು. ॥೧೩॥

(ರಾ॥ಭಾ॥) ಅನಂತರದಲ್ಲಿ ದೇಹಾಕಾರದಿಂದ ಪರಿಣಾಮವಂ ಹೊಂದಿರುವ ಪ್ರಕೃತಿಯಲ್ಲಿ ಮಾಡಲ್ಪಡುವ ಕರ್ತೃತ್ವ ಸನ್ಯಾಸವು ಹೇಳಲ್ಪಡುವುದು. "ಆತ್ಮನಿಗೆ ನಾನು ಮಾಡುತ್ತೇನೆಂಬ ಕರ್ತೃತ್ವವು ಸ್ವಭಾವದಿಂದುಂಟಾದದ್ದಲ್ಲವು, ಪ್ರಾಚೀನಕರ್ಮ ಮೂಲವಾದ ದೇಹಸಂಬಂಧದಿಂದುಂಟಾದದ್ದು" ಎಂಬ ಅನುಸಂಧಾನದಿಂದ ಪುರುಷನು ತಾನು ಮಾಡುವ ಕರ್ಮಗಳೆಲ್ಲವನ್ನು ನವದ್ವಾರ ಪಟ್ಟಣವಾದ ಶರೀರದಲ್ಲಿಟ್ಟು ದೇಹದಲ್ಲಿ ತಾನಿರುವುದಕ್ಕೆ ಬೇಕಾದ ಪ್ರಯತ್ನಗಳನ್ನು ಮಾಡದೆ, ಮತ್ತು ಆ ದೇಹದಿಂದ ಮಾಡಿಸದೆ ಸ್ವತಂತ್ರನಾಗಿ ಸುಖವಾಗಿರುವನು. ॥೧೩॥

(ಗೀ॥ ವಿ॥) "ನೈವಕಿಂಚಿತ್ಕರೋಮಿ" (೫॥ ೮॥) ಎಂಬಿದೇ ಮೊದಲಾದ ವಾಕ್ಯಗಳಿಂದ ಕರ್ತೃತ್ವಾಭಿಮಾನವಂ ಬಿಡಬೇಕೆಂಬುವುದರಿಂದ ಸನ್ಯಾಸವು ವಿವರಿಸಲ್ಪಟ್ಟಿತು. (ಕರ್ತೃತ್ವಾಭಿಮಾನವೆಂದರೆ ನಾನು ಮಾಡುತ್ತೇನೆಂಬ ಅಭಿಮಾನವು) ಈ ಶ್ಲೋಕದಲ್ಲಿ ಕಾರಯಿತೃತ್ವವೆಂಬ (ನಾನು ಮಾಡಿಸುತ್ತೇನೆಂಬ) ಅಭಿಮಾನತ್ಯಾಗದಿಂದ ಸನ್ಯಾಸ ಶಬ್ದಾರ್ಥವನ್ನೂ ವ್ಯಕ್ತಪಡಿಸುತ್ತಾನೆ. (ಅಥವಾ) "ಬ್ರ

ಹ್ಯಾಣ್ಯಧ್ಯಾತ್ಮಚೇತಸಾ" (೫॥೧೦॥) ಎಂಬುವ ಶ್ಲೋಕದಲ್ಲಿ ಹೇಳಿರುವಂತೆ ಕರ್ಮಗಳನ್ನು ಪರಮಾತ್ಮನಲ್ಲಿಡುವುದೆಂಬುವುದು ಕರ್ಮಗಳ ಸ್ವರೂಪತ್ಯಾಗವಲ್ಲವು; ಮತ್ತು ಯಾವದೆಂದರೆ "ಪರಮಾತ್ಮನೇ ತನ್ನ ಪೂಜಾತ್ಮಕಗಳಾದ ಕರ್ಮಗಳನ್ನು ನನ್ನ ಶ್ರೇಯಸ್ಸಿಗಾಗಿ ನನ್ನಿಂದ ಮಾಡಿಸುತ್ತಾನಾದುದರಿಂದ ನನ್ನಲ್ಲಿರುವ ಕರ್ತೃತ್ವರೂಪವಾದ ಶಕ್ತಿಯು ಈಶ್ವರಾಧೀನವಾಗಿಯೇ ಇರುವುದೆಂಬದಾಗಿ" ಮನಸ್ಸಿನಿಂದ ಅನುಸಂಧಾನಮಾಡುವುದೇ ಸರ್ವಕರ್ಮಗಳನ್ನು ಬ್ರಹ್ಮನಲ್ಲಿಡುವುದೆಂದರ್ಥವು. ಈ ಶ್ಲೋಕಕ್ಕೆ ಕರ್ಮಗಳ ಸ್ವರೂಪತ್ಯಾಗವೇ ಅರ್ಥವೆಂಬುವ ಪಕ್ಷದಲ್ಲಿ "ಮನಸಾ" ಎಂಬ ಪದಕ್ಕೆ ವೈಯರ್ಥ್ಯವು. (ವ್ಯರ್ಥವಾಗುವಿಕೆಯು) ಪ್ರಾಪ್ತವಾಗುವುದು. (ಶ್ಲೋಕಾರ್ಥವು ಮೇಲೆ ವಿವರಿಸಿರುವಂತೆಯೇ ನೋಡಿಕೊಳ್ಳಬೇಕು.) ॥೧೩॥

ಮೂ॥ ನಕರ್ತೃತ್ವಂ ನಕರ್ಮಾಣಿ ಲೋಕಸ್ಯ ಸೃಜತಿ
ಪ್ರಭುಃ । ನಕರ್ಮ ಫಲಸಂಯೋಗಂ ಸ್ವಭಾವಸ್ತುಪ್ರ
ವರ್ತತೇ । ... ... ॥೧೪॥

ಪ॥ ನ- ಕರ್ತೃತ್ವಂ- ನ- ಕರ್ಮಾಣಿ- ಲೋಕಸ್ಯ- ಸೃಜತಿ-ಪ್ರಭುಃ । ನ- ಕರ್ಮಫಲ ಸಂಯೋಗಂ- ಸ್ವಭಾವಃ- ತು- ಪ್ರವರ್ತತೇ ॥ ॥೧೪॥

ಅ॥ ಪ್ರಭುಃ- ಕರ್ಮವಶ್ಯನಾಗದೆ ತನ್ನ ಸ್ವಸ್ವರೂಪದಿಂದಿರುವ ಆತ್ಮವು, (ಶಂ) ಆತ್ಮನು, ಅಥವಾ ದೇಹಯುಕ್ತನಾದವನು. (ಗೀ॥ ವಿ) ಜಡವಸ್ತುಗಳಿಗಿಂತಲೂ ಸಮರ್ಥನಾದಜೀವನು, ಲೋಕಸ್ಯ- ದೇವಮನುಷ್ಯ ಪಶುಪಕ್ಷಿ ಸ್ಥಾವರಾದಿ ರೂಪಗಳಾಗಿಯೂ, ಪ್ರಕೃತಿ ಸಂಬಂಧದಿಂದ ಕೂಡಿರುವುದಾಗಿಯೂ, ಇರುವ ಈ ಲೋಕಕ್ಕೆ, (ಗೀ॥ ವಿ) ಜನಗಳಿಗೆ, ಕರ್ತೃತ್ವಂ- (ರಾ) ದೇವ ಮನುಷ್ಯಾದಿಗಳಲ್ಲಿ ಅವರವರುಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿರುವ ಕರ್ತೃತ್ವವನ್ನು, (ಗೀ॥ ವಿ) ಕರ್ತೃತ್ವವನ್ನಾದರೂ, ಕರ್ಮಾಣಿ - (ರಾ) ಅವರವರುಗಳಿಗೆ ಸಂಭಾವಿತಗಳಾದ ಕರ್ಮಗಳನ್ನು, (ಗೀ॥ ವಿ) ಕರ್ಮಗಳನ್ನಾದರೂ, ಕರ್ಮಫಲಸಂಯೋಗಂ- (ರಾ) ಆ ಆ ಕರ್ಮಗಳಿಂದುಂಟಾದ ಫಲಗಳಲ್ಲಿ ಅವರವರುಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿರುವ ಸಂಬಂಧವನ್ನು, (ಗೀ॥ ವಿ) ಕರ್ಮಫಲವನ್ನಾದರೂ, ನಸೃಜತಿ- (ರಾ॥) ಉಂಟುಮಾಡಲಾರನು, (ಗೀ॥ ವಿ॥) ಸ್ವತಂತ್ರನಾಗಿ ಉಂಟುಮಾಡುವುದಕ್ಕಾದರೂ, ತಾನು ಹೊಂದುವುದಕ್ಕಾದರೂ, ಶಕ್ತನಲ್ಲವು. ಸ್ವಭಾವಸ್ತು- (ರಾ॥) ಪ್ರಕೃತಿವಾಸನೆಯೆಂಬ ಅನಾದಿಕಾಲದಿಂದ ಬಂದಿರುವ ಪೂರ್ವಕರ್ಮಗಳಿಂದುಂಟಾದ ದೇವ ಮನುಷ್ಯಾದ್ಯಾಕಾರಗಳೆಂಬ ಪ್ರಕೃತಿ ಸಂಬಂಧದಿಂದುಂಟಾದ ದೇಹಾಭಿಮಾನವಾಸನೆಯು, (ಗೀ॥ ವಿ॥) ಸ್ವತಂತ್ರನಾಗಿ ಸಮಸ್ತವನ್ನುಂಟುಮಾಡತಕ್ಕವನಾದ ಈಶ್ವರ

ನು, ಪ್ರವರ್ತ್ತತೆ- (ರಾ||) ಉಂಟುಮಾಡುತ್ತದೆ. ಕರ್ತೃತ್ವಾದಿಗಳು ದೇಹಸಂಬಂಧದಿಂದುಂಟಾದವಲ್ಲದೆ ಆತ್ಮನಿಗೆ ಸ್ವತಃ ಕರ್ತೃತ್ವವಿಲ್ಲವು. (ಗೀ || ವಿ) ಸ್ವತಂತ್ರನಾಗಿ ಉಂಟುಮಾಡುತ್ತಾನೆ. (ಅಥವಾ) ಪ್ರಭುಃ- ಈಶ್ವರನು, ಲೋಕಸ್ಯ- ಜನರಿಗೆ, ಕರ್ತೃತ್ವಂ- ಕರ್ತೃತ್ವವು, ಕರ್ಮಾಣಿ- ಕರ್ಮಗಳು, ಕರ್ಮಫಲಸಂಯೋಗಂಚ- ಕರ್ಮಫಲಸಂಬಂಧವೇದಿವುಗಳಲ್ಲಿ, ನಸೃಜತಿ- ಸ್ವಾತಂತ್ರ್ಯವಂ ಕೊಡುತ್ತದಿಲ್ಲವು. || ||೧೪||

(ಶಂ || ಭಾ||) ಆತ್ಮನಿಗೆ ಕಾರಯಿತೃತ್ವವಿಲ್ಲವೆಂಬದಾಗಿ ಇದುವರೆಗೂ ಹೇಳಲ್ಪಟ್ಟ ವಿಷಯನ್ನೇ ಈ ಶ್ಲೋಕದಲ್ಲಿಯೂ ವಿವರಿಸುತ್ತಾನೆ. ಜೀವಲೋಕಕ್ಕೆ ಕರ್ತೃತ್ವವನ್ನಾದರೂ, ರಥ ಘಟಪ್ರಾಸಾದವೇ ಮೊದಲಾದ ಇಷ್ಟವಾದ ಪದಾರ್ಥಗಳನ್ನು ಮಾಡುವ ಶಕ್ತಿಯನ್ನಾದರೂ ರಥಾದಿಗಳಂ ಮಾಡಿದವನಿಗೆ ಅವುಗಳಂ ಮಾಡಿಕೊಳ್ಳುವುದರಿಂದುಂಟಾದ ಫಲದೊಡನೆ ಸಂಬಂಧವನ್ನಾದರೂ ಆತ್ಮನುಂಟುಮಾಡಲಾರನು. ಆತ್ಮನು, ತಾನು ಯಾವದನ್ನು ಮಾಡದೆ, ಅನ್ಯರಿಂದ ಮಾಡಿಸದೇಹೋದರೆ ಇವುಗಳನ್ನು ಯಾರು ಸೃಷ್ಟಿಸಿದರು? ಯಾರು ಪ್ರವರ್ತ್ತಿಸುವರು? ಎಂದರೆ “ದೈವೀಹ್ಯೇಷಾಗುಣಮಯೀ” (೭ ||೧೪||) ಎಂಬದಾಗಿ ಹೇಳಲ್ಪಡುವ ಅವಿದ್ಯೆಯೆಂಬ ಮಾಯೆಯೇ ಈಸಮಸ್ತವನ್ನು ಮಾಡುವುದಕ್ಕೂ ಪ್ರವರ್ತ್ತಿಸುವುದಕ್ಕೂ ಮೂಲವಾಗಿರುವುದರಿಂದ ಆತ್ಮನನ್ನು ನಿರ್ವಿಕಾರಿಯೆಂತಲೇ ತಿಳಿಯಬೇಕು. || ||೧೪||

ಮೂ || ನಾದತ್ತೇಕಸ್ಯಚಿತ್ಪಾಪಂ ನಚೈವ ಸುಕೃತಂವಿಭುಃ | ಅಜ್ಞಾನೇ ನಾವೃತಂಜ್ಞಾನಂ ತೇನಮುಹ್ಯಂತಿಜಂತವಃ || ... ... ||೧೫||

ಪ || ನ- ಆದತ್ತೆ- ಕಸ್ಯಚಿತ್- ಪಾಪಂ- ನ- ಚ- ಏವ- ಸುಕೃತಂ- ವಿಭುಃ | ಅಜ್ಞಾನೇನ- ಆವೃತಂ- ಜ್ಞಾನಂ- ತೇನ- ಮುಹ್ಯಂತಿ- ಜಂತವಃ || ||೧೫||

ಅ || ವಿಭುಃ- ಆತ್ಮನು, ಕಸ್ಯಚಿತ್ಪಾಪಂ- ಯಾವನಪಾಪವನ್ನು, ನಾದತ್ತೆ- ಗ್ರಹಿಸುವುದಿಲ್ಲವು; ಸುಕೃತಂಚ- ಪುಣ್ಯವನ್ನೂ, ನೈವ- ಗ್ರಹಿಸುವುದೇಇಲ್ಲವು, ಅಜ್ಞಾನೇನ- ಅಜ್ಞಾನದಿಂದ,ಜ್ಞಾನಂ- ವಿವೇಕಜ್ಞಾನವು, ಆವೃತಂ- ಮುಚ್ಚಲ್ಪಟ್ಟಿರುವುದು, ತೇನ- ಅದರಿಂದ, ಜಂತವಃ- ಮನುಷ್ಯರು, ಮುಹ್ಯಂತಿ- ಮೋಹವಂ ಹೊಂದುತ್ತಾರೆ. ||೧೫||

(ಶಂ || ಭಾ||) ಪರಮೇಶ್ವರನು ಅವಿಕ್ರಿಯನಾದುದರಿಂದ ಪರಮಾರ್ಥವಾಗಿ ಜೀವರ ಪುಣ್ಯ ಪಾಪಂಗಳಂ ಗ್ರಹಿಸುವುದಿಲ್ಲವೆಂಬ ಅರ್ಥ

ವನ್ನೀಶ್ಲೋಕದಿಂದುಪದೇಶಿಸುತ್ತಾನೆ. ಭಕ್ತನಾದವನ ಪಾಪವನ್ನಾದ
ರೂ ಪುಣ್ಯವನ್ನಾದರೂ ಭಗವಂತನು ಸ್ವೀಕರಿಸಲಾರನು. ಆದರೆ ಭ
ಕ್ತಜನರು ಪೂಜಾದಿ ಲಕ್ಷಣವುಳ್ಳ ಯಾಗದಾನ ಹೋಮುವೆಮೊದಲಾದ
ದ್ದನ್ನು ಪರಮೇಶ್ವರನಲ್ಲಿ ಯೇತಕ್ಕಾಗಿಸಮರ್ಪಿಸುತ್ತಾರೆ? ಭಕ್ತರನ್ನು
ಗ್ರಹಯಿಸ್ಯರು, ಪರಮೇಶ್ವರನು ಅನುಗ್ರಹಿಸುವಂತವನು, ಎಂಬ
ಪ್ರಸಿದ್ಧವಾದ ಸಂದರ್ಭವು ತಾನೆ ಹೇಗೆ ಸಂಭವಿಸಬಹುದು? ಎಂದ
ರೆ! ಪರಮೇಶ್ವರನು ಜಂತುಗಳ ಸುಕೃತ ದುಷ್ಕೃತಗಳನ್ನು ಗ್ರಹಿ
ಸುತ್ತಾನೆಂದು ನೆನೆಯುವಿಕೆಯೆಂಬ ಅಜ್ಞಾನದಿಂದ, ಪರಮೇಶ್ವರನು ಕ್ರಿ
ಯಾರಹಿತನಾದುದರಿಂದ ಜಂತುಗಳ ಸುಕೃತದುಷ್ಕೃತಗಳನ್ನು ಗ್ರ
ಹಿಸಲಾರನೆಂಬಜ್ಞಾನವು ಮುಚ್ಚಲ್ಪಟ್ಟಿರುವುದರಿಂದ ಅಂತಹಅವಿವೇಕ
ವುಳ್ಳ ಪ್ರಾಣಿಗಳು ನಮ್ಮ ಸುಕೃತ ದುಷ್ಕೃತಗಳನ್ನು ಈಶ್ವರನು
ಗ್ರಹಿಸುತ್ತಾನೆಂದು ಮೋಹವಂ ಹೊಂದಿರುತ್ತಾರೆ. ಇಂತಹ ಅಜ್ಞಾನ
ದಿಂದ ಮೇಲವಿವರಿಸಲ್ಪಟ್ಟಜ್ಞಾನವು ಮುಚ್ಚಲ್ಪಟ್ಟಿರುವುದರಿಂದ ಅವಿ
ವೇಕವುಳ್ಳ ಸಂಸಾರಿಜನಗಳು ಮಾಡುತ್ತಾರೆ, ಮಾಡಿಸುತ್ತಾರೆ, ಭೋ
ಜನಮಾಡುತ್ತೇವೆ, ಭೋಜನಮಾಡಿಸುತ್ತೇವೆ ಎಂಬದಾಗಿ ಮೋಹವಂ
ಹೊಂದಿ ಜನನಮರಣಾದಿಗಳಿಗೆ ವಿಷಯರಾಗುತ್ತಾರಲ್ಲದೆ ಪರಮೇಶ್ವರ
ನುಅವಿಕ್ರಿಯುನಾದುದರಿಂದ ಪರಮಾರ್ಥವಾಗಿ ಜೀವರ ಪುಣ್ಯಪಾಪಗ
ಳಂಗ್ರಹಿಸುವುದಿಲ್ಲವೆಂತಲೇ ತಿಳಿಯಬೇಕು. ॥ ॥೧೫॥

(ರಾ ॥ ಭಾ॥) ಆತ್ಮನು ತನಗೆ ಸಂಬಂಧಿಗಳಾದುದರಿಂದ ಅಭಿಮ
ತರಾದ ಪುತ್ರಾದಿಗಳ ಪಾಪವನ್ನು ಹೋಗಲಾಡಿಸುವುದಿಲ್ಲವು; ತನಗೆ
ವಿರೋಧಿಗಳಿಂದು ನೆನೆಸಲ್ಪಟ್ಟ ಒಬ್ಬರ ಸುಕೃತವನ್ನೂ ಹೋಗಲಾ
ಡಿಸುವುದಿಲ್ಲವು; ಏತಕ್ಕೆಂದರೆ! ಈ ಆತ್ಮನು ಒಂದುಸ್ಥಳದಲ್ಲಿ ಇರು
ನನ್ನದೆಂದು ಸ್ಥಿರವಾಗಿರುವಂತವನಾದರೆ ಅವನಿಗೆ ಬಂಧುಗಳು, ವಿ
ರೋಧಿಗಳು, ಉಂಟಾಗುವರು. ಇವನೋ ಯೆಲ್ಲಿಯೂ ಇರತಕ್ಕವನಾ
ದುದರಿಂದ ದೇವಮನುಷ್ಯಾದಿಗಳೆಂಬ ಯಾವ ಶರೀರದಲ್ಲಿಯೂ ಸ್ಥಿರ
ವಾಗಿರುವಂತವನಲ್ಲವು. ಆದರೆ ಈವಿಪರೀತ ವಾಸನಾಮಾತ್ರ ಯೇತ
ಕ್ಕುಂಟಾಯಿತೆಂದರೆ? ಜ್ಞಾನವಿರೋಧಿಯಾದ ಪ್ರಾಚೀನಕರ್ಮವು ತನ್ನ
ಫಲವನ್ನನುಭವಿಸುವಂತೆ ಮಾಡಬೇಕೆಂಬದಾಗಿ ಇವನ ಜ್ಞಾನವನ್ನು

ಮುಚ್ಚಲು, ಅದರಿಂದ ದೇವಾದಿಶರೀರಗಳಲ್ಲಿ ಸಂಬಂಧವೂ, ಆ ಸಂಬಂಧದಿಂದ“ ನಾನು ದೇವನು, ನಾನು ಮನುಷ್ಯನು” ಎಂಬಭ್ರಮಾತ್ಮಕವಾದ ಜ್ಞಾನವು, ಅದರಿಂದ ಅಂಥಾ ಭ್ರಮಕ್ಕೆ ಕಾರಣವಾದ ವಾಸನೆಯೂ, ಅದಕ್ಕುಚಿತವಾದ ಕರ್ಮವಾಸನೆಯೂ, ಅದರಿಂದ ದೇಹವೇ ಆತ್ಮವೆಂಬ ಭ್ರಮವು ಕರ್ಮಾರಂಭವೂ ಉಂಟಾಗುವುದೆಂದರಿಯಬೇಕು. ॥ ॥೧೫॥

(ಗೀ ॥ ವಿ॥) ಜೀವಾತ್ಮನಿಗೆ ಫಲಸಂಬಂಧದಲ್ಲಿ ಸ್ವಾತಂತ್ರ್ಯವಿಲ್ಲವೆಂಬುವುದನ್ನು ಸ್ಪಷ್ಟವಾಗಿ ಹೇಳುತ್ತಾನೆ. ಜೀವನು ಒಂದು ದುಷ್ಕರ್ಮದ ಫಲವಾದ ಪಾಪವನ್ನು ಒಂದು ಸುಕೃತದ ಫಲವಾದ ಪುಣ್ಯವನ್ನೂ ಸ್ವಾತಂತ್ರ್ಯದಿಂದ ಹೊಂದಲು ಶಕ್ತನಲ್ಲವು; ಈಶ್ವರನೇ ಆ ಕರ್ಮಫಲಗಳಂ ಕೊಡುವುದಕ್ಕೆ ಶಕ್ತನಾಗಿರುವನು. (ಅಥವಾ) ಪರಮಾತ್ಮನಿಗೆ ಕರ್ತೃತ್ವವಂ ಹೇಳಿದರೆ ಕರ್ಮಲೇಪ ಪ್ರಸಂಗವುಂಟಾಗುವದಿಲ್ಲವೊ? ಎಂಬ ಶಂಕೆಗೆ ಸಮಾಧಾನವಂ ಹೇಳುತ್ತಾನೆ. ಸ್ವತಂತ್ರನಾದ ಈಶ್ವರನಿಗೆ ತಾನು ಪಾಪ ಪುಣ್ಯ ಕರ್ಮಗಳಿಲ್ಲದವನಾದುದರಿಂದ ಕರ್ಮಫಲವೂ ಅವನಿಗಿಲ್ಲವು. ಪಾಪ ಪುಣ್ಯ ಫಲರಹಿತನಾದ ಈಶ್ವರನಿರುವ ಪಕ್ಷದಲ್ಲಿ ಏತಕ್ಕೆ ಯೆಲ್ಲರಿಗೂ ಕಾಣಲ್ಪಡುವುದಿಲ್ಲವೆಂದರೆ ಪರಮಾತ್ಮನಂ ಕಾಣುವುದಕ್ಕೆ ಯೋಗ್ಯವಾದ ಜೀವನ ಜ್ಞಾನವು ಅಜ್ಞಾನದಿಂದ ಮುಚ್ಚಲ್ಪಟ್ಟಿರುವುದರಿಂದ ಈಶ್ವರನು ಕಾಣಲ್ಪಡಲಾರನು. ॥ ॥೧೫॥

ಮೂ॥ ಜ್ಞಾನೇನತುತದಜ್ಞಾನಂಯೇಷಾಂನಾಶಿತ (ಶಂ॥ಮಾ
ತ್ಮನಃ॥ ಪಾಠಃ) ಮಾತ್ಮನಾಂ। ತೇಷಾಮಾದಿತ್ಯವದ್ಜ್ಞಾ
ನಂಪ್ರಕಾಶಯತಿತತ್ಪರಂ ॥ ॥೧೬॥

ಪ॥ ಜ್ಞಾನೇನ- ತು- ತತ್- ಅಜ್ಞಾನಂ- ಯೆಷಾಂ- ನಾಶಿತಂ-ಆತ್ಮನಾಂ । ತೇಷಾಂ- ಆದಿತ್ಯವತ್- ಜ್ಞಾನಂ- ಪ್ರಕಾಶಯತಿ- ತತ್- ಪರಂ ॥ ॥೧೬॥

ಅ ॥ ಯೆಷಾಮಾತ್ಮನಾಂ- ಯಾವಾತ್ಮಗಳ, ಜ್ಞಾನೇನ- ಆತ್ಮಜ್ಞಾನದಿಂದ, ತತ್ ಅಜ್ಞಾನಂ- ಆಅಜ್ಞಾನವು, ನಾಶಿತಂ- ನಾಶಹೊಂದಲ್ಪಟ್ಟಿರುವುದೋ; ತೇಷಾಂ- ಅವರುಗಳಿಗೆ, ಜ್ಞಾನಂ- ಜ್ಞಾನವು, ಆದಿತ್ಯವತ್- ಸೂರ್ಯನಂತೆ, ತತ್ಪರಂ- ಪರಬ್ರಹ್ಮಸ್ವರೂಪವನ್ನು, ಪ್ರಕಾಶಯತಿ- ಪ್ರಕಾಶಪಡಿಸುತದೆ ॥ ॥೧೬॥

(ರಾ ॥ ಭಾ॥) ಸಮಸ್ತವಾದ ಅಜ್ಞಾನವನ್ನೂ ಜ್ಞಾನವೆಂಬ ಕಡ್ಗ

ನಿಂದ ದಾಟಬಹುದೆಂಬುದಾಗಿಯೂ, ಜ್ಞಾನಾಗ್ನಿಯು ಸಕಲ ಕರ್ಮಗಳನ್ನು ಭಸ್ಮವನ್ನಾಗಿ ಮಾಡುವುದೆಂತಲೂ, ಜ್ಞಾನದಂತೆ ಪರಿಶುದ್ಧವಾದದ್ದು ಲೋಕದಲ್ಲಿ ಬೇರೊಂದಿಲ್ಲವೆಂತಲೂ, ಪೂರ್ವದಲ್ಲಿ (೪ನೇ ಅ ॥ ೩೬ ೩೭ ॥ ೩೮ ॥ ನೇ ಶ್ಲೋಕಗಳಲ್ಲಿ) ಹೇಳಿರುತ್ತಾನಲ್ಲವೇ ; ಅದಕ್ಕಿಲ್ಲಿ ಸಂಗತಿ ಇರುವುದರಿಂದ ಅದನ್ನಿಲ್ಲಿ ಸೇರಿಸಿ ಹೇಳುತ್ತಾನೆ. ಮುಂದೆ ತಿಳಿಸಿರುವ ಲಕ್ಷಣವುಳ್ಳ ಆತ್ಮಕೋಟಿಗಳಲ್ಲಿ ಯಾರಾದರೆ ಆತ್ಮಸ್ವರೂಪವನ್ನು ಉಪದೇಶದಿಂದ ತಿಳಿದು ಅದನ್ನು ಅನು ದಿನದಲ್ಲಿಯೂ ಅಭ್ಯಾಸಮಾಡುವುದರಿಂದುಂಟಾದ ಅತ್ಯಂತ ಪರಿಶುದ್ಧವಾದ ಜ್ಞಾನದಿಂದ, ಆಜ್ಞಾನಕ್ಕೆ ವಿರೋಧಿಯಾಗಿ ಅನಾದಿ ಕಾಲದಿಂದ ಬಂದಿರುವ ಅಪಾರವಾದ ಕರ್ಮಸಮೂಹದ ಫಲರೂಪವಾದ ಅಜ್ಞಾನವನ್ನು ನಾಶಪಡಿಸಿಕೊಂಡಿರುತ್ತಾರೋ; ಅವರುಗಳಿಗೆ ತಮ್ಮಗಳ ಸ್ವಾಭಾವಿಕ ಜ್ಞಾನವು ಅತ್ಯಂತವಾಗಿ ವೃದ್ಧಿಹೊಂದಿ ಸೂರ್ಯನಂತೆ ಸಮಸ್ತವನ್ನು ಯಥಾವಸ್ಥಿತವಾಗಿ ಪ್ರಕಾಶಪಡಿಸುವುದು. ಅವರು ಸರ್ವಜ್ಞರಾಗುವರೆಂದರ್ಥವು. ಇಲ್ಲಿ "ತೇಷಾಂ- ಅವರುಗಳಿಗೆ" ಎಂಬದಾಗಿ ಅಜ್ಞಾನವನ್ನತಿಕ್ರಮಿಸಿದವರನೇಕರಿರುತ್ತಾರೆಂದು ಹೇಳಿರುವುದರಿಂದ "ನತ್ವೇವಾಹಂಜಾತುನಾಸಂ" (೨ ॥ ೧೨ ॥) ಎಂಬ ಶ್ಲೋಕದಲ್ಲಿ ಹೇಳಲ್ಪಟ್ಟ ಆತ್ಮ ಬಹುತ್ವವು ಇಲ್ಲಿ ಅತ್ಯಂತ ಸ್ಪಷ್ಟವಾಗಿ ಹೇಳಲ್ಪಟ್ಟಿತು. ಈ ಆತ್ಮಬಹುತ್ವವು (ಆತ್ಮರನೇಕರೆಂದು ಹೇಳುವುದು) ಉಪಾಧಿಯಿಂದುಂಟಾದದ್ದೆಂದು ಹೇಳಲಸಾಧ್ಯವು. ಅಜ್ಞಾನವು ಯಾರಿಗೆ ನಾಶಹೊಂದಿರುವುದೋ ಅವರಿಗೆ ಉಪಾಧಿಸಂಬಂಧವೇ ಇಲ್ಲವಾದುದರಿಂದ ಆತ್ಮಬಹುತ್ವವು ಉಪಾಧಿಕೃತವೆಂದು ಹೇಳುವುದು ಯುಕ್ತವಲ್ಲವು. ಇಲ್ಲಿ ಮತ್ತೊಂದು ವಿಶೇಷವೂ ಉಂಟು. ಅದು ಯಾವದೆಂದರೆ ಅವರ ಜ್ಞಾನವು ಆದಿತ್ಯನಂತೆ ಇರುವುದೆಂದು ಇಲ್ಲಿ ಸೂರ್ಯನ ದೃಷ್ಟಾಂತಪಡಿಸಿರುವುದರಿಂದ ಜ್ಞಾನವು ಆತ್ಮಸ್ವರೂಪಗತವಾದ ಧರ್ಮವೆಂತಲೂ, ಪ್ರಭೆಯೂ ಪ್ರಭೆಗೆ ಆಸ್ಪದನಾದ ಸೂರ್ಯನಂತೆ ಜ್ಞಾನವೂ ಜ್ಞಾನಾಸ್ಪದವಾದ ಆತ್ಮವೂ ಧರ್ಮಧರ್ಮಿಗಳೆಂದು ಹೇಳಿರುವಂತೆ ಆಯಿತು. ಆದುದರಿಂದಲೆ ಸಂಸಾರದಶೆಯಲ್ಲಿ ಜ್ಞಾನ ಸಂಕೋಚವೂ ಮೋಕ್ಷದಶೆಯಲ್ಲಿ ಜ್ಞಾನವಿಕಾಸವೂ ಯುಕ್ತವಾಗಿರುವುದು. ... ... ॥೧೬॥

ಮೂ॥ ತದ್ಬುದ್ಧಯಸ್ತದಾತ್ಮಾನ ಸ್ತನ್ನಿಷ್ಠಾಸ್ತತ್ಪ
ರಾಯಣಾಃ । ಗಚ್ಛಂತ್ಯಪುನರಾವೃತ್ತಿಂ ಜ್ಞಾನನಿರ್ಧೂತ
ಕಲ್ಮಷಾಃ ॥ ... ... ॥೧೭॥

ಪ॥ ತದ್ಬುದ್ಧಯಃ- ತದಾತ್ಮಾನಃ- ತನ್ನಿಷ್ಠಾಃ- ತತ್ಪರಾಯಣಾಃ। ಗಚ್ಛಂತಿ- ಅಪುನರಾವೃತ್ತಿಂ - ಜ್ಞಾನನಿರ್ಧೂತಕಲ್ಮಷಾಃ ॥ ... ॥೧೭॥

ಅ॥ ತದ್ಬುದ್ಧಯಃ- ನಿಶ್ಚಯವಾದ ಬ್ರಹ್ಮಜ್ಞಾನವಂ ಹೊಂದಿರುವಂತವರಾಗಿಯೂ, ತದಾತ್ಮಾನಃ-(ಶಂ) ಬ್ರಹ್ಮವೇ ತನ್ನಾತ್ಮಸ್ವರೂಪವೆಂಬದಾಗಿ ತಿಳಿಯುವಂತವರು, (ನಾನೇ ಬ್ರಹ್ಮವೆಂಬುವ ನಿಶ್ಚಯವುಳ್ಳವರೆಂದರ್ಥವು) (ರಾ) ಆತ್ಮಸ್ವರೂಪ ದರ್ಶನದಲ್ಲಿ ಮನಸ್ಸನ್ನು ಪ್ರವರ್ತಿಸುವಂತವರು, (ಗೀ॥ ವಿ॥) ತನಗೆ ಪರಮಾತ್ಮನೇ ಉಪಮಾನನೆಂಬದಾಗಿ ತಿಳಿಯುವಂತವರು, ತನ್ನಿಷ್ಠಾಃ - (ಶಂ) ಸಮಸ್ತವಾದ ಕರ್ಮಗಳಂ ಸನ್ಯಾಸಮಾಡಿ ಆ ಬ್ರಹ್ಮನಲ್ಲಿಯೆ ನಿಷ್ಠೆಯುಳ್ಳವರಾಗಿಯೂ, (ನಿಷ್ಠಾ - ಸ್ಥಿತಿಯು,) (ರಾ) ಆತ್ಮಸ್ವರೂಪದರ್ಶನದಲ್ಲಿ ಯಾವಾಗಲೂ ಅಭ್ಯಾಸವುಳ್ಳವರಾಗಿಯೂ, (ಗೀ॥ ವಿ॥) ಅಚಂಚಲವಾಗಿ ಬ್ರಹ್ಮನಿಷ್ಠೆಯುಳ್ಳವರಾಗಿಯೂ, ತತ್ಪರಾಯಣಾಃ-(ಶಂ) ಆ ಪರಬ್ರಹ್ಮವನ್ನೇ ಸರ್ವೋತ್ತಮವಾದ ಗತಿಯಾಗಿಯುಳ್ಳವರಾಗಿಯೂ, (ರಾ) ತನ್ನಾತ್ಮಸ್ವರೂಪವನ್ನು ತಿಳಿಯುವುದೇ ಪರಮಪ್ರಯೋಜನವಾಗಿ ತಿಳಿಯುವಂತವರಾಗಿಯೂ, ಜ್ಞಾನನಿರ್ಧೂತ ಕಲ್ಮಷಾಃ ಜ್ಞಾನದಿಂದ ಸಕಲ ಪಾಪಗಳನ್ನು ಪರಿಹರಿಸಿಕೊಂಡವರಾಗಿಯೂ ಇರುವಂತವರು (ಶ್ರೀ) ಭಗವತ್ಪ್ರಸಾದ ಲಬ್ಧವಾದ ಜ್ಞಾನದಿಂದ ಸಕಲವಾದ ಪಾಪಗಳಂ ಬಿಟ್ಟವರು, ಅಪುನರಾವೃತ್ತಿಂ - (ರಾ) ಪುನರ್ಜನ್ಮವಿಲ್ಲದ ತನ್ನ ಮುಕ್ತಸ್ವರೂಪವನ್ನು, (ಶಂ) ಪುನರಾವೃತ್ತಿರಹಿತನಾದ ಮೋಕ್ಷವನ್ನು, ಗಚ್ಛಂತಿ- ಹೊಂದುತ್ತಾರೆ. ॥೧೭॥

(ರಾ॥ ಭಾ॥) ಅಂಥಾ ಆತ್ಮದರ್ಶನದಲ್ಲಿ ಧೃಢಾಧ್ಯವಸಾಯವುಳ್ಳವರಾಗಿಯೂ, ಮನಸ್ಸಿನಲ್ಲಿ ಯಾವಾಗಲೂ ಅದನ್ನೇ ನೆನೆಸುತಾ ಆ ಆತ್ಮಾಭ್ಯಾಸದಲ್ಲಿಯೇ ನಿರತರಾಗಿ ಇದಕ್ಕಿಂತಲೂ ಬೇರೇ ಪ್ರಯೋಜನವಿಲ್ಲವೆಂದು ತಿಳಿದವರಾಗಿಯೂ, ತಾವುಗಳಭ್ಯಾಸಮಾಡುವ ಆಜ್ಞಾನದಿಂದಲೇ ಸಕಲ ಪಾಪಗಳನ್ನು ನಿವರ್ತಿಸಿಕೊಂಡು ಪುನರಾವೃತ್ತಿಯಿಲ್ಲದಿರುವ ಆತ್ಮಸ್ವರೂಪಮಾತ್ರದಲ್ಲಿರುವರು. ॥೧೭॥

ಮೂ॥ ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹ
ಸ್ತಿನಿ । ಶುನಿಚೈವ ಶ್ವಪಾಕೇಚ ಪಂಡಿತಾಃ ಸ್ಸಮ
ದರ್ಶಿನಃ ॥ ... ... ॥೧೮॥

ಶ್ಲೋ|| ವಿದ್ಯಾವಿನಯಸಂಪನ್ನೇ- ಬ್ರಾಹ್ಮಣೇ- ಗವಿ- ಹಸ್ತಿನಿ | ಶುನಿ- ಚ- ಏವ-ಶ್ವಪಾಕೇ - ಚ- ಪಂಡಿತಾಃ- ಸಮದರ್ಶಿನಃ || ... ... ||೧೮||

ಅ|| ವಿದ್ಯಾವಿನಯಸಂಪನ್ನೇ - ವಿದ್ಯಾವಿನಯಗಳಿಂದೊಪ್ಪಿದ, ಬ್ರಾಹ್ಮಣೇ - ಬ್ರಾಹ್ಮಣನಲ್ಲಿಯೂ, ಗವಿ- ಪಶುವಿನಲ್ಲಿಯೂ, ಹಸ್ತಿನಿ- ಆನೆಯಲ್ಲಿಯೂ, ಶುನಿಚ- ನಾಯಿಯಲ್ಲಿಯೂ, ಶ್ವಪಾಕೇಚೈವ - ಆ ನಾಯಿಮಾಂಸವನ್ನು ಪಕ್ವಮಾಡಿ ತಿನ್ನುವವನಲ್ಲಿಯೂ, ಪಂಡಿತಾಃ - ಆತ್ಮಸ್ವರೂಪವಂ ತಿಳಿದಿರುವ ವಿವೇಕಿಗಳು, ಸಮದರ್ಶಿನಃ- ಸಮದೃಷ್ಟಿಯುಳ್ಳವರಾಗಿರುವರು. ... ... ||೧೮||

(ಶಂ || ಭಾ||) ಮೋಕ್ಷಸಾಧನವಾಗಿರುವ ಜ್ಞಾನದಿಂದ ಆತ್ಮವಿಷಯವಾದ ಅಜ್ಞಾನವನ್ನು ನಾಶಪಡಿಸಿರುವ ಪಂಡಿತರು ಆ ಬ್ರಹ್ಮರೂಪವಾದ ಪದಾರ್ಥವನ್ನು ಯಾವರೀತಿಯಿಂದ ನೋಡುತ್ತಾರೆಂದರೆ ಹೇಳುವೆವು. ವೇದಾರ್ಥ ಪರಿಜ್ಞಾನವು (ಅಥವಾ) ಬ್ರಹ್ಮವಿದ್ಯೆಯೂ, ವಿನಯವು (ಉಪಶಮವು) ದಿಂದ ಕೂಡಿರುವ ಸತ್ತ್ವಗುಣ ಪ್ರಧಾನನಾದ ಉತ್ತಮ ಸಂಸ್ಕಾರವುಳ್ಳ ಬ್ರಾಹ್ಮಣನಲ್ಲಿಯೂ; ರಜೋಗುಣ ಪ್ರಧಾನವಾದ ಮಧ್ಯಮ ಸಂಸ್ಕಾರವುಳ್ಳ ಗೋವಿನಲ್ಲಿಯೂ, ಅತ್ಯಧಿಕ ತಮೋಗುಣ ಪ್ರಧಾನವಾದ ಸಂಸ್ಕಾರ ವಿಹೀನವಾಗಿರುವ ಆನೇ ನಾಯಿ ಚಂಡಾಲನೇ ಮೊದಲಾದವರಲ್ಲಿಯೂ, ಸತ್ತ್ವಾದಿಗುಣಗಳಿಂದಲೂ ಅದರಿಂದುಂಟಾದ ಸಂಸ್ಕಾರಗಳಿಂದಲೂ, ಅಪ್ರಕಾರವೇ ರಜೋಗುಣದಿಂದಲೂ, ಅದರಿಂದುಂಟಾದ ಸಂಸ್ಕಾರಗಳಿಂದಲೂ; ತಮೋಗುಣದಿಂದಲೂ, ಅದರಿಂದುಂಟಾದ ಸಂಸ್ಕಾರಗಳಿಂದಲೂ, ಸ್ವಲ್ಪವೂ ಸಂಬಂಧಿಸದ ನಿರ್ವಿಕಾರವಾದ ಬ್ರಹ್ಮವನ್ನು ನೋಡುವ ವಿದ್ವಾಂಸರು ಸಮದರ್ಶಿಗಳೆನ್ನಲ್ಪಡುವರು. ಸಮದರ್ಶಿತ್ವವೇ ಪಾಂಡಿತ್ಯವೆನ್ನಲ್ಪಡುವುದು.

(ರಾ|| ಭಾ||) ಅಂತಹ ಜ್ಞಾನಿಗಳು, ; "ಇವನು ವಿದ್ಯಾವಿನಯಗಳಿಂದೊಪ್ಪಿದವನು, ಇವನು ಕೇವಲ ಬ್ರಾಹ್ಮಣನು, ಇದು ಪಶು, ಇದು ಆನೆ, ಇದು ನಾಯಿ, ಇವನು ನಾಯಿ ಮಾಂಸವನ್ನು ಪಕ್ವಮಾಡಿ ತಿನ್ನುವ ಚಂಡಾಲನು,, ಎಂಬ ವಿಷಮವಾದ ಆಕಾರದಿಂದ ಕಾಣಲ್ಪಡುವಆತ್ಮಗಳಲ್ಲಿಒಂದನ್ನು ಉತ್ತಮವಾಗಿಯೂ ಒಂದನ್ನು ಅಧಮವಾಗಿಯೂ, ನೋಡದೆ ಆತ್ಮವಸ್ತುಗಳೆಲ್ಲವೂ ಜ್ಞಾನೈಕಾಕಾರದಿಂದ ಸಮವಾಗಿರುವವೆಂದು ಸಮದೃಷ್ಟಿಯನ್ನೇ ಮಾಡುವರು. ಪಶ್ವಾದಿವಿಷಮಾ

ಕಾರಗಳು ಪ್ರಕೃತಿಯಿಂದುಂಟಾದದ್ದಲ್ಲದೆ ಆತ್ಮಗಳಿಂದುಂಟಾದದ್ದಲ್ಲವು. ಆತ್ಮನೋ ಜ್ಞಾನೈಕಾಕಾರದಿಂದ ಸರ್ವತ್ರಸಮನಾಗಿರುವನೆಂದು ನೋಡುತ್ತಾರೆಂದು ತಾತ್ಪರ್ಯವು. ॥ ... ॥೧೮॥

(ಗೀ ॥ ವಿ॥) ಕರ್ಮದಿಂದ ವಿಷಮರಾದವರಲ್ಲಿಯೂ ಜಾತಿಯಿಂದ ವಿಷಮರಾದವರಲ್ಲಿಯೂ ಬ್ರಹ್ಮಸ್ವರೂಪಕ್ಕೆ ಸಾಮ್ಯದರ್ಶನವು ಅಪರೋಕ್ಷಜ್ಞಾನ ಸಾಧನ ವಾಗಿರುವುದೆಂಬುದಾಗಿ ಹೇಳುತ್ತಾನೆ. ಪಂಡಿತಾಃ-ಪರೋಕ್ಷ ಜ್ಞಾನಿಗಳು(ಆಗಮೋತ್ಥವಾದ ಜ್ಞಾನವುಳ್ಳವರೆಂದರ್ಥವು) ವಿದ್ಯಾವಿನಯಗಳಿಂದ ಕೂಡಿದ ಬ್ರಾಹ್ಮಣನಲ್ಲಿಯೂ ಶ್ವಾನಮಾಂಸವನ್ನು ಪಕ್ವಮಾಡಿ ತಿನ್ನುವ ಚಂಡಾಲನಲ್ಲಿಯೂ, (ಇದರಿಂದ ಕರ್ಮದಿಂದ ವಿಷಮರಾದವರು ಹೇಳಲ್ಪಟ್ಟರು) ಆಕಳು, ಆನೆ, ನಾಯಿಗಳೆಂಬೀ ಜಾತಿವೈಷಮ್ಯವುಳ್ಳ ಪ್ರಾಣಿಗಳಲ್ಲಿಯೂ ಬ್ರಹ್ಮಸ್ವರೂಪವು ತಾರತಮ್ಯವಿಲ್ಲದೇ ಪೂರ್ಣವಾಗಿರುವುದೆಂದು ಹೇಳುವರು. ಈ ಶ್ಲೋಕಕ್ಕೆ "ನಿರ್ದೋಷಂಹಿಸಮಂಬ್ರಹ್ಮ" ಎಂಬುವ ಮುಂದಿನ ಶ್ಲೋಕದಿಂದ ಹೇಳಲ್ಪಟ್ಟಪರಮಾತ್ಮ ವಿಷಯತ್ವವೂ ಅಪರೋಕ್ಷ ಜ್ಞಾನಸಾಧನತ್ವವೂ ಪ್ರಕರಣದಿಂದರಿಯತಕ್ಕದ್ದಾಗಿರುವುದು. ॥ ॥೧೮॥

ಮೂ ॥ ಇಹೈವತೈರ್ಜಿತಸ್ಸರ್ಗೋ ಯೇಷಾಂಸಾಂ
ಮ್ಯೇ ಸ್ಥಿತಂಮನಃ । ನಿರ್ದೋಷಂ ಹಿಸಮಂಬ್ರಹ್ಮ ತ
ಸ್ಮಾದ್ಬ್ರಹ್ಮಣಿತೇಸ್ಥಿತಾಃ॥ ॥೧೯॥

ಪ ॥ ಇಹ- ಏವ- ತೈಃ- ಜಿತಃ- ಸರ್ಗಃ- ಯೇಷಾಂ-ಸಾಮ್ಯೇ-ಸ್ಥಿತಂ-ಮನಃ। ನಿರ್ದೋಷಂ-ಹಿ-ಸಮಂ- ಬ್ರಹ್ಮ- ತಸ್ಮಾತ್- ಬ್ರಹ್ಮಣಿ- ತೇ- ಸ್ಥಿತಾಃ ॥ ॥೧೯॥

ಅ ॥ ಯೇಷಾಂ- ಯಾವಪುರುಷರ, ಮನಃ- ಮನಸ್ಸು, ಸಾಮ್ಯೇ- ಆತ್ಮಗಳು ಸಮರೆಂಬ ಭಾವದಲ್ಲಿ, ಸ್ಥಿತಂ- ಇರುವುದೋ, ತೈಃ- ಅವರುಗಳಿಂದ, ಇಹೈವ- ಈ ಲೋಕದಲ್ಲಿಯೇ, ಸರ್ಗಃ- ಸಂಸಾರವು, ಜಿತಃ- ಜಯಿಸಲ್ಪಟ್ಟಿತು. (ಯಸ್ಮಾತ್ - ಯಾವಕಾರಣದಿಂದ,) ನಿರ್ದೋಷಂ- ಪ್ರಕೃತಿ ಸಂಬಂಧವಿಲ್ಲದ್ದಾಗಿಯೂ, ಸಮಂ-ಸಮಾನಾಕಾರವೂ ಆಗಿರುವ, (ಆತ್ಮವು) ಬ್ರಹ್ಮ- ಬ್ರಹ್ಮವೋ, ತಸ್ಮಾತ್- ಆದುದರಿಂದ, ತೇ-ಅವರು, ಬ್ರಹ್ಮಣಿ ಸ್ಥಿತಾಃಏವ- ಬ್ರಹ್ಮದಲ್ಲಿರುವಂತವರೇ. ॥ ॥೧೯॥

(ಶಂ ॥ ಭಾ॥) ಎಲೈ ಶ್ರೀಕೃಷ್ಣನೇ "ಸಮಾಸಮಾಭ್ಯಾಂ ವಿಷಮೇ ಸಮೇಪೂಜಾತಃ" ಅರ್ಥವು. ಅಧ್ಯಯನಾದಿಗಳಿಂದ ಸಮಾನಧರ್ಮಗ

ಳ್ಳವರಿಗೆ ವಸ್ತ್ರಾಲಂಕಾರಾದಿ ಪೂಜೆಯಿಂದ ವಿಷಮವಾಗಿ ಗೌರವವಂ ಮಾಡುವಂತವನು ಅಧ್ಯಯನಾದಿಗಳಿಂದ ಸಮಾನ ಧರ್ಮಗಳಿಲ್ಲದವರಿಗೆ ವಸ್ತ್ರಾಲಂಕಾರಾದಿ ಪೂಜೆಯಿಂದ ಸಮಾನವಾಗಿ ಸನ್ಮಾನವಂ ಮಾಡುವಂತವನು ಧನಧರ್ಮಗಳುಳ್ಳವನಾದರೂ ಹೀನನಾಗಿರುವನು, ಅಂತವನ ಅನ್ನವಂ ತಿನ್ನಬಾರದೆಂಬ ಗೌತಮಸೂತ್ರಾರ್ಥವಂ ನೋಡಿದರೆ ಹಿಂದಿನಶ್ಲೋಕದಲ್ಲಿ ಹೇಳಿರುವ ಸಮದರ್ಶಿತ್ವವು ವಿರೋಧಿಸುವುದು; ಆದರೂ ಸಾತ್ವಿಕರಾಜಸ ತಾಮಸರಲ್ಲಿ ಸಮಬುದ್ಧಿಯಂ ಮಾಡುವಂತವನು ದೋಷಯುಕ್ತನಲ್ಲವೆಂದೀಶ್ಲೋಕದಿಂದರ್ಜುನನಿಗೆ ಶ್ರೀ ಕೃಷ್ಣನುಪದೇಶಿಸುತ್ತಾನೆ. ಯಾವ ಪುರುಷರ ಮನಸ್ಸು ಸಕಲ ಭೂತಗಳಲ್ಲಿಯೂ ಬ್ರಹ್ಮ ಸಮಭಾವದಲ್ಲಿ ನಿಶ್ಚಲವಾಗಿರುವುದೋ "ಎಂದರೇ ಯಾರಾದರೆ ಸಕಲ ಭೂತಗಳಲ್ಲಿಯೂ ಬ್ರಹ್ಮಸಾಮ್ಯವನ್ನು ನೋಡುತ್ತಾರೋ" ಅಂತವರು ಸಕಲ ಪ್ರಾಣಿಗಳ ಸಾಮ್ಯದಲ್ಲಿ ನಿಶ್ಚಯಬುದ್ಧಿಯುಳ್ಳ ಪಂಡಿತರಾಗಿರುವುದರಿಂದ ಈ ಶರೀರದಲ್ಲಿಯೇ ಜೀವಿಸಿರುತಲೇ ಬ್ರಹ್ಮಲೋಕಗಮನಶಕ್ತಿವಂತರೂ ಅನ್ಯವಾದ ಜನ್ಮವನ್ನು ಜಯಿಸಿದವರಾಗಿರುವುದರಿಂದ ಯಾವದೋಷವನ್ನು ಹೊಂದಿದವರಲ್ಲವು. ಆದರೆ ಮೂರ್ಖರಾದವರಿಗೆ ಚಂಡಾಲಾದಿಗಳು ದೋಷಯುಕ್ತರಾಗಿ ಕಾಣಲ್ಪಡುವುದರಿಂದ ಅವರದೋಷಗಳಿಂದಲೇ ಬ್ರಹ್ಮವೂ ದೋಷಯುಕ್ತವಾಗಿರುವಂತೆ ಕಾಣಲ್ಪಡುವುದು, ಆದರೂ ಪರಮಾರ್ಥವಾಗಿ ನೋಡಿದರೆ ಬ್ರಹ್ಮವು ಚಂಡಾಲಾದಿಗಳಲ್ಲಿರುವ ದೋಷಗಳಿಂದ ಸ್ಪರ್ಶಿಸಲ್ಪಡಲಿಲ್ಲವಾದುದರಿಂದ ನಿರ್ದೋಷವಾಗಿಯೇ ಇರುವುದು. ಮತ್ತು ಚೈತನ್ಯವು (ಬ್ರಹ್ಮವು) ನಿರ್ಗುಣವಾಗಿರುವುದರಿಂದ ತನ್ನಲ್ಲಿ ಗುಣಭೇದದಿಂದ ಭೇದವುಳ್ಳದ್ದಲ್ಲವು. "ಅನಾದಿತ್ವಾನ್ನಿರ್ಗುಣತ್ವಾತ್" (೧೩॥ ೩೧॥) ಎಂಬುವ ಶ್ಲೋಕದಲ್ಲಿ ಇಚ್ಛಾದ್ವೇಷಾದಿಗಳೆಲ್ಲವು ಕ್ಷೇತ್ರ ಧರ್ಮಗಳೆಂಬದಾಗಿ ಪರಮಾತ್ಮನಿಂದ ಹೇಳಲ್ಪಡುವುದರಿಂದ ಅವು ಆತ್ಮಧರ್ಮಗಳಾಗುವುದಿಲ್ಲವು. ಆದರೆ ಗುಣದೋಷವಶದಿಂದ ಆತ್ಮ ಭೇದವಿಲ್ಲದಿದ್ದರೂ ಇವನು ಚಂಡಾಲನು, ಇದು ಗೋವು, ಇವನು ಬ್ರಾಹ್ಮಣನು, ಎಂಬಇಂತ್ಯಾದಿವಿಶೇಷದಿಂದ ಭೇದವು ಉಂಟಾಗಬಹುದೆಂದರೆ ಪ್ರತಿ ಶರೀರದಲ್ಲಿಯೂ ಆತ್ಮಭೇದವಿರುವ ಪಕ್ಷದಲ್ಲಿ ಇಂತಹ ಆತ್ಮಭೇದವನ್ನೇ ಕಾರಣವಾಗಿ

ಯುಳ್ಳ ಅಂತ್ಯಾದಿ ವಿಶೇಷಗಳು (ಚಂಡಾಲ ಬ್ರಾಹ್ಮಣಾದಿಭೇದಗಳು)
ವುಂಟಾಗುವುವು. ಅಂಥಾ ಭೇದ ವಿರುವುದಾದರೆ ಆತ್ಮ ಭೇದವು ಪ್ರ
ತಿಶರೀರದಲ್ಲಿಯೂ ಸಿದ್ಧಿಸುವುದು, ಇದರಿಂದ ಅನ್ಯೋನ್ಯಾಶ್ರಯ
ದೋಷವು ಪ್ರಾಪ್ತವಾಗುವುದು. ಆದುದರಿಂದ ಅಂತ್ಯಾದಿ ವಿಶೇಷಗ
ಳಾತ್ಮಭೇದಕಗಳಲ್ಲವು, ಎಂದರೇ ಪ್ರತಿಶರೀರದಲ್ಲಿಯೂ ಆತ್ಮಭೇದವಿ
ರುವುದೆಂಬುವುದಕ್ಕೂ ಆದರಿಂದ ಅಂತ್ಯಾದಿ ವಿಶೇಷಗಳುಂಟೆಂಬುವು
ದಕ್ಕೂ ಪ್ರಮಾಣಾನುಪಪತ್ತಿ ಇರುವುದರಿಂದ ( ಪ್ರಮಾಣವಿಲ್ಲವಾ
ದುದರಿಂದ ) ಬ್ರಹ್ಮವು ಒಂದೇ ಎಂಬದಾಗಿ ತಿಳಿಯಬೇಕು. ಸಮ
ಸ್ತವೂ ಬ್ರಹ್ಮಒಂದೇ ಆಗಿರುವುದರಿಂದ ಆ ಸಮದರ್ಶಿಗಳು ಬ್ರಹ್ಮದಲ್ಲಿ
ರುತ್ತಾರೆಂತಲೂ ಅಂಥಾ ಬ್ರಹ್ಮಭಾವವಂ ಹೊಂದಿರುವುದರಿಂದ ಆ ಸ
ಮದರ್ಶಿಗಳಿಗೆ ದೇಹೇಂದ್ರಿಯಾದಿಸಮುದಾಯುವೇ ಆತ್ಮವೆಂಬಅಭಿಮಾ
ನವಿಲ್ಲವಾದುದರಿಂದ ಅಂತವರನ್ನು ಸ್ವಲ್ಪವಾದದೋಷವೂ ಅಂಟಲಾರ
ವು. ಬ್ರಹ್ಮವುನಿರ್ವಿಶೇಷವಾದುದರಿಂದಲೂ,ಎಂದರೇ ತನಗಿಂತಲೂಭಿ
ನ್ನವಾದ ವಸ್ತು ವಿಲ್ಲದೆ ಇರುವುದರಿಂದಲೂ, ಜೀವರಿಗೂ ಕೂಡ ಪರ
ಸ್ಪರ ಭೇದವಿಲ್ಲದ್ದರಿಂದ ಏಕತ್ವವಿರುವುದರಿಂದಲೂ, ಜೀವಬ್ರಹ್ಮಗಳು
ಏಕಲಕ್ಷಣ ಯುಕ್ತರಾದುದರಿಂದ ಅಭೇದವನ್ನಂಗೀಕರಿಸಬೇಕೆಂತಲೂ
ಇವರಿಗೆ ಭೇದವಿಲ್ಲವಾದಕಾರಣದಿಂದಲೇ ಬ್ರಹ್ಮದಂತೆ ಜೀವರೂನಿರ್ದೋ
ಷರೆಂತಲೂ ತಿಳಿಯಬೇಕು.

ಆದರೂ ಸಮಸ್ತಗಳಾದ ಭೂತಳಗಳಲ್ಲಿಯೂ ಸಮದರ್ಶನವಂ ಮಾಡಿ
ದರೇ ಅದರಿಂದ ದೋಷ ವುಂಟಾಗುವುದಿಲ್ಲವೆಂದರೆ ಮೊದಲು ದರ್ಶಿತ
ವಾಗಿರುವ "ಸಮಾಸಮಾಭ್ಯಾಂ" ಎಂಬುವ ಗೌತಮ ಸೂತ್ರವು ನಿರ
ರ್ಥಕವಾಗಲಾರದೋ? ಎಂದರೇ ಆ ಸೂತ್ರದಲ್ಲಿ ಪೂಜಾವಿಷಯತ್ವ ವಿಶೇ
ಷಣವಿರುವುದರಿಂದ ಆಸೂತ್ರವುದೇಹಾದಿ ಸಂಘಾತಗಳನ್ನೇ ಆತ್ಮನೆಂಬ
ದಾಗಿತಿಳಯುತಲಿರುವ ದೇಹಾತ್ಮಾಭಿಮಾನಿಗಳ ವಿಷಯವಾಗಿರುವುದು.
ಪೂಜಾದಾನಾದಿಗಳಲ್ಲಿ ಇವನುಬ್ರಹ್ಮವನ್ನರಿತವನು,ಇವನುಶೀಕ್ಷಾದಿ ಆ
ರುವೇದಾಂಗಗಳಂ ತಿಳಿದವನು, ಇವನು ನಾಲ್ಕುವೇದಗಳಂ ತಿಳದವನೆಂ
ಬದಾಗಿ ಗುಣವಿಶೇಷ ಸಂಬಂಧವೇ ಕಾರಣವೆಂಬದಾಗಿ ಕಾಣುತ್ತದೆಯ
ಲ್ಲವೆ; ಬ್ರಹ್ಮವು ಸರ್ವಗುಣದೋಷಗಳ ಸಂಬಂಧವಿಲ್ಲದ್ದಾದುದರಿಂದ

ಅಂಥಾ ಸಮದರ್ಶಿಗಳು ದೋಷರಹಿತರಾಗಿ ಬ್ರಹ್ಮನಲ್ಲಿರುವರೆಂಬುವುದು (ಬ್ರಹ್ಮಭಾವನೆಯಲ್ಲಿರುತ್ತಾರೆಂಬುವುದು) ಉಚಿತವಾಗಿಯೇ ಇರುವುದು. ಇಲ್ಲಿ "ಸಮಾಸಮಾಭ್ಯಾಂ" ಎಂಬ ಗೌತಮಸೂತ್ರವು ಕರ್ಮ ವಿಷಯವಾಗಿರುವುದೆಂತಲೂ, "ಸರ್ವಕರ್ಮಾಣಿ ಮನಸಾ" (೫॥ ೧೩॥) ಎಂಬ ಶ್ಲೋಕದ ಮೊದಲು ಅಧ್ಯಾಯಸಮಾಪ್ತಿ ಪರ್ಯಂತವಾದ ಈ ಪ್ರಕರಣವೂ ಸರ್ವಕರ್ಮ ಸನ್ನ್ಯಾಸ ವಿಷಯವೆಂತಲೂ ತಿಳಿಯಬೇಕು. ... ... ॥೧೯॥

(ರಾ॥ ಭಾ॥) ಈ ಪ್ರಕಾರವಾಗಿ ಸಮಸ್ತವಸ್ತುಗಳಲ್ಲಿಯೂ, ಆತ್ಮನು ಜ್ಞಾನಸ್ವರೂಪನಾಗಿ ಒಂದೇ ರೀತಿಯಿಂದಿರುತ್ತಾನೆಂದು ನೋಡುವಂತವರು ಆತ್ಮಪ್ರಾಪ್ತಿಗೋಸ್ಕರ ಸಾಧನವಂ ಮಾಡುವಕಾಲದಲ್ಲಿಯೇ ಸಂಸಾರವನ್ನು ಜಯಿಸಿದವರಾಗುವರು. ಅದು ಹೇಗೆಂದರೆ! ಬ್ರಹ್ಮವೆಂಬುವ ಆತ್ಮನಲ್ಲಿ ಸ್ಥಿರವಾಗಿರುವುದಲ್ಲವೇ ಸಂಸಾರಜಯವು; ಎಂದರೆ ಪ್ರಕೃತಿ ಸಂಸರ್ಗದಿಂದುಂಟಾದ ದೋಷಗಳಿಂದ ವಿಯುಕ್ತವಾಗಿ ಎಲ್ಲಿಯೂ ಒಂದೇ ರೂಪವಾಗಿರುವ ಆತ್ಮನಲ್ಲಿ ಮನಸ್ಸನ್ನಿಡುವುದೇ ಸಂಸಾರ ಜಯವೆನ್ನಲ್ಪಡುವುದು. ಅದು ಇವರಿಗುಂಟಾಗಿರುತ್ತದೆಯಲ್ಲವೆ? ಆದುದರಿಂದಿವರು ಸಂಸಾರವನ್ನು ಜಯಿಸಿದವರೆಂದು ಹೇಳಲು ಸಂಶಯವಿಲ್ಲವು. ಆತ್ಮಗಳಲ್ಲಿ ಜ್ಞಾನೈಕಾಕಾರದಿಂದ ಸಾಮ್ಯವನ್ನನುಸಂಧಾನಮಾಡುವಂತವರು ಮುಕ್ತರೆಂದರ್ಥವು. ॥೧೯॥

ಮೂ॥ ನಪ್ರಹೃಷ್ಯೇತ್ಪ್ರಿಯಂಪ್ರಾಪ್ಯ ನೋದ್ವಿ
ಜೇತ್ಪ್ರಾಪ್ಯಚಾಪ್ರಿಯಂ । ಸ್ಥಿರಬುದ್ಧಿರಸಂಮೂಢೋ
ಬ್ರಹ್ಮವಿದ್ಬ್ರಹ್ಮಣಿಸ್ಥಿತಃ ॥ ... ॥೨೦॥

ಪ॥ ನ- ಪ್ರಹೃಷ್ಯೇತ್- ಪ್ರಿಯಂ- ಪ್ರಾಪ್ಯ- ನ- ಉದ್ವಿಜೇತ್- ಪ್ರಾಪ್ಯ- ಚ- ಅಪ್ರಿಯಂ । ಸ್ಥಿರಬುದ್ಧಿಃ- ಅಸಮ್ಮೂಢಃ- ಬ್ರಹ್ಮವಿತ್- ಬ್ರಹ್ಮಣಿ- ಸ್ಥಿತಃ ॥

ಅ॥ ಸ್ಥಿರಬುದ್ಧಿಃ -(ಶಂ- ಬ್ರಹ್ಮನಲ್ಲಿ,) ಅಥವಾ (ರಾ) ಆತ್ಮನಲ್ಲಿ ಸ್ಥಿರಬುದ್ಧಿಯುಳ್ಳವನಾಗಿಯೂ, ಅಸಮ್ಮೂಢಃ - ದೇಹವೇ ಆತ್ಮವೆಂಬ ಅಜ್ಞಾನ ವಿಲ್ಲದವನಾಗಿಯೂ, (ಗೀ॥ ವಿ॥) ತಾನು ಸ್ವತಂತ್ರನೆಂಬ ಮೋಹ ವಿಲ್ಲದವನಾಗಿಯೂ, ಇರುವ; (ಶಂ॥) ಬ್ರಹ್ಮಣಿಸ್ಥಿತಃ - ಆತ್ಮಾಭ್ಯಾಸನಿರತನಾದ, ಬ್ರಹ್ಮವಿತ್ - (ಶಂ॥) ಬ್ರಹ್ಮವನ್ನು ತಿಳಿದವನು, (ರಾ॥) ಆತ್ಮಸ್ವರೂಪಜ್ಞಾನಿಯಾದವನು, ಪ್ರಿಯಂಪ್ರಾಪ್ಯನಪ್ರಹೃಷ್ಯೇತ್-

ಪ್ರಿಯುವಾದದ್ದನ್ನು ಹೊಂದಿ ಸಂತೋಷಿಸಬಾರದು, ಅಪ್ರಿಯಂಪ್ರಾಪ್ಯಚನೋದ್ವಿಜೇತ್-ಇಷ್ಟವಲ್ಲದ ದುಃಖಾದಿಗಳಂ ಹೊಂದಿದರೂ ವ್ಯಸನ ಪಡಬಾರದು ||೧೯||

(ರಾ|| ಭಾ||) ಕರ್ಮಯೋಗಿಯು ಯಾವರೀತಿಯಲ್ಲಿದ್ದರೆ ಅಂಥಾ ಸಮಬುದ್ಧಿಯನ್ನು ಹೊಂದುವನೋ ಅದನ್ನುಪದೇಶಿಸುತ್ತಾನೆ. ಪುರುಷನು ಯಾವ ಶರೀರದಲ್ಲಿರುವ ದಶೆಯಲ್ಲಿ ಪ್ರಾಚೀನ ಕರ್ಮವಾಸನೆಯಿಂದ ಯಾವದು ತನಗಿಷ್ಟವಾಗಿಯೂ, ಯಾವದು ತನಗೆ ಅನಿಷ್ಟವಾಗಿಯೂ, ಇರುವುದೋ ಅವುಗಳಂ ಹೊಂದಿದತಾನು ಹರ್ಷಶೋಕಗಳಂ ಹೊಂದಬಾರದು. ಅದು ಹೇಗೆ ಪ್ರಾಪ್ತವಾಗುವುದೆಂದರೆ ಆತ್ಮನು ಸ್ಥಿರನೆಂತಲೂ, ಶರೀರವು ಅಸ್ಥಿರವೆಂತಲೂ, ತಿಳಿದು ಆದರಿಂದ ದೇಹಾತ್ಮಭ್ರಾಂತಿಯನ್ನು ನಿವರ್ತಿಪಡಿಸಿಕೊಂಡರೆ ಮೇಲೆ ವಿವರಿಸಿರುವಂತೆ ಪ್ರಿಯುಪ್ರಾಪ್ತಿಯಲ್ಲಿ ಹರ್ಷವನ್ನು ಅಪ್ರಿಯುಪ್ರಾಪ್ತಿಯಲ್ಲಿ ದುಃಖವನ್ನು ತಾನು ಹೊಂದದೇ ಇರಬಹುದು. ಶರೀರವೇ ಅತ್ಮಾ ಎಂಬ ದೇಹಾತ್ಮಭ್ರಾಂತಿಯು ನಿವರ್ತಿಯಾಗುವುದುತಾನೆ ಹೇಗೆ ? ಎಂದರೇ! ಆತ್ಮಸ್ವರೂಪವನ್ನು ಯಥಾರ್ಥವಾದ ಉಪದೇಶದಿಂದ ಹೊಂದಿ ಅದನ್ನೇ ಅಭ್ಯಾಸಮಾಡುತ್ತಾಬಂದರೆ ಆ ದೇಹಾತ್ಮಭ್ರಾಂತಿಯು ನಿವೃತ್ತವಾಗುವುದು. ತತ್ವವಂ ತಿಳಿದವರು ಮಾಡುವ ಉಪದೇಶದಿಂದ ಆತ್ಮಸ್ವರೂಪವನ್ನು ಯಥಾವತ್ತಾಗಿ ತಿಳಿದು ಅದನ್ನೇ ಅಭ್ಯಾಸಮಾಡುತಾ ಅದರಿಂದ ದೇಹವೇ ಆತ್ಮನೆಂಬ ಅಭಿಮಾನವಂ ಬಿಟ್ಟು ಸ್ಥಿರವಾದ ಆತ್ಮ ದರ್ಶನದಿಂದುಂಟಾದ ಪ್ರೀತಿಯಿಂದ ಅಸ್ಥಿರವಾದ ಪ್ರಕೃತಿಯಿಂದುಂಟಾಗುವ ಇಷ್ಟಾನಿಷ್ಟಗಳಲ್ಲಿ ಸಂತೋಷ ದುಃಖಗಳನ್ನು ಹೊಂದದೇ ಇರಬೇಕೆಂದು ಇದರಿಂದ ಹೇಳಿದಂತೆ ಆಗುವುದು. ||೨೦||

ಮೂ|| ಬಾಹ್ಯಸ್ಪರ್ಶೇಷ್ವಸಕ್ತಾತ್ಮಾ ವಿಂದತ್ಯಾತ್ಮನಿ
ಯ (ರಾ|| ಯಸ್ಸುಖಂ||)ತ್ಸುಖಂ| ಸಬ್ರಹ್ಮಯೋಗಯು
ಕ್ತಾತ್ಮಾ ಸುಖಮಕ್ಷಯಮಶ್ನುತೇ || ||೨೧||

ಪ|| ಬಾಹ್ಯಸ್ಪರ್ಶೇಷು- ಅಸಕ್ತಾತ್ಮಾ- ವಿಂದತಿ- ಆತ್ಮನಿ- ಯಃ-(ಶಂ-ಮ||ಯತ್) ಸುಖಂ- ಸಃ- ಬ್ರಹ್ಮಯೋಗಯುಕ್ತಾತ್ಮಾ- ಸುಖಂ- ಅಕ್ಷಯಂ- ಅಶ್ನುತೇ || ||೨೧||

ಅ|| ಯಃ - ಯಾವಪುರುಷನು, ಬಾಹ್ಯಸ್ಪರ್ಶೇಷು - ಅತ್ಮ ವ್ಯತಿರಿಕ್ತವಾದ ವಿಷಯಗಳಲ್ಲಿ, ಅಸಕ್ತಾತ್ಮಾ - ಅಪೇಕ್ಷಾಯುಕ್ತವಾದ ಮನಸ್ಸಿಲ್ಲದವನಾಗಿ, ಆತ್ಮನ್ಯೇವ - (ರಾ)

ಆತ್ಮನಲ್ಲಿಯೇ, (ಶಂ॥) ತನ್ನ ಅಂತಃಕರಣದಲ್ಲಿಯೇ, ಸುಖಂವಿಂದತಿ- ಸುಖವಂಹೊಂದು ತ್ತಾನೆಊ, ಸಃ- ಆವನು, ಬ್ರಹ್ಮಯೋಗಯುಕ್ತಾತ್ಮಾ- ಬ್ರಹ್ಮಾಭ್ಯಾಸದಿಂದ ಕೂಡಿರುವ ಮನಸುಳ್ಳವನಾಗಿ, ಅಕ್ಷಯಂಸುಖಂ - ನಾಶರಹಿತವಾದ ಬ್ರಹ್ಮಾನುಭವರೂಪವಾಗಿರುವ, ಸುಖವನ್ನು, (ಮೋಕ್ಷವನ್ನು) ಅಶ್ನುತೇ- ಹೊಂದುತ್ತಾನೆ. ॥೨೧॥

(ಶಂ॥ ಭಾ॥) ಮತ್ತೂ ಬ್ರಹ್ಮನಲ್ಲಿರುವಂತವನು ಪ್ರಾಪಂಚಿಕವಾದ ಶಬ್ದಾದಿ ವಿಷಯಗಳಲ್ಲಿ ಪ್ರೀತಿಯಿಲ್ಲದವನಾಗಿ ತನ್ನ ಅಂತಃಕರಣದಲ್ಲಿ ಶಾನ್ತಿಯೆಂಬ ಯಾವ ಸುಖವನ್ನು ಹೊಂದುತ್ತಾನೊ ಅಂತಹ ಬ್ರಹ್ಮನಿಷ್ಠವಾದ ಸಮಾಧಿಯಿಂದ ಕೂಡಿರುವ ಅಂತಃಕರಣವುಳ್ಳವನು ನಾಶರಹಿತವಾದ ಸುಖವಂ ಹೊಂದುವನು. ಆದುದರಿಂದ (ಶಬ್ದಾದಿವಿಷಯಗಳಲ್ಲಿ ಆಸಕ್ತಿಯಿಲ್ಲದವನಿಗೆ ನಾಶರಹಿತವಾದ ಸುಖವುಂಟಾಗುವುದರಿಂದ) ಅಕ್ಷಯವಾದ ಸುಖವನ್ನಪೇಕ್ಷಿಸುವಂತವನು ಕ್ಷಣಮಾತ್ರದಲ್ಲಿ ನಾಶಹೊಂದತಕ್ಕವುಗಳಾಗಿಯೂ, ನರಕಪಾತಾದಿ ವಿಪರೀತ ಫಲಗಳಂ ಕೊಡುವಂತವುಗಳಾಗಿಯೂ ಇರುವ ಶಬ್ದಾದಿ ವಿಷಯಾನುರಾಗಗಳಿಂದ ಮನಸ್ಸನ್ನು ನಿವರ್ತಿಸಬೇಕೆಂದು ತಾತ್ಪರ್ಯವು. ॥೨೧॥

(ರಾ॥ಭಾ॥) ಈ ಪ್ರಕಾರವಾಗಿ ಆತ್ಮವ್ಯತಿರಿಕ್ತವಾದ ವಿಷಯಾನುಭವಗಳಲ್ಲಿ ಆದರರಹಿತನಾಗಿಯೂ, ಆತ್ಮನಲ್ಲಿಮಾತ್ರವೇ ಸುಖವನ್ನು ಯಾವನಾದರೆ ಹೊಂದಿರುತ್ತಾನೋ ಅವನು ಪ್ರಕೃತ್ಯಭ್ಯಾಸವನ್ನು ಬಿಟ್ಟು ಬ್ರಹ್ಮದಲ್ಲಿ ಅಭ್ಯಾಸವಂಮಾಡುವಂತವನಾಗಿ ಬ್ರಹ್ಮಾನುಭವವೆಂಬ ಶಾಶ್ವತ ಸುಖವನ್ನು ಹೊಂದುವನು.॥ ... ... ... ॥೨೧॥

ಮೂ॥ ಯೇಹಿ ಸಂಸ್ಪರ್ಶಜಾ ಭೋಗಾ ದುಃಖಯೋನಯ
ಏವತೇ | ಆದ್ಯಂತವಂತಃ ಕೌಂತೇಯ ನತೇಷು ರಮ
ತೇಬುಧಃ॥ ... ... ... ॥೨೨॥

ಪ ॥ ಯೇ- ಹಿ- ಸಂಸ್ಪರ್ಶಜಾಃ- ಭೋಗಾಃ- ದುಃಖಯೋನಯಃ- ಏವ- ತೇ | ಆದ್ಯಂತವಂತಃ- ಕೌನ್ತೇಯ- ನ- ತೇಷು- ರಮತೇ- ಬುಧಃ॥ ॥೨೨॥

ಅ ॥ ಹೇ ಕೌನ್ತೇಯ- ಎಲೈ ಕುನ್ತೀಪುತ್ರನಾದ ಅರ್ಜುನನೇ! ಸಂಸ್ಪರ್ಶಜಾಃ- ವಿಷಯೇಂದ್ರಿಯ ಸಂಬಂಧಗಳಿಂದುಂಟಾದ, ಭೋಗಾಃ - ಸುಖಗಳು, ಯೇ - ಯಾವವು, ತೇ- ಅವುಗಳು, ದುಃಖಯೋನಯಏವ - ದುಃಖಕಾರಣಗಳಾಗಿಯೇ ಇರುವವು, ಆದ್ಯಂತವಂತೋಹಿ- ಅಸ್ಥಿರಗಳಾಗಿಯೂ ಇರುವವು; ಬುಧಃ - ಆತ್ಮವೇದಿಯಾದವನು, ತೇಷು- ಅವುಗಳಲ್ಲಿ, ನರಮತೇ- ಆಸಕ್ತನಾಗುವುದಿಲ್ಲವು.॥ ॥೨೨॥

(ರಾ॥ಭಾ) ಪ್ರಾಕೃತಭೋಗವನ್ನು ಸುಖವಾಗಿ ತ್ಯಾಗಮಾಡಬಹು ದೆಂಬುವುದಂ ಹೇಳುತ್ತಾನೆ. ವಿಷಯೇಂದ್ರಿಯ ಸಂಬಂಧದಿಂದುಂಟಾದ ಯಾವ ಭೋಗ (ಸುಖ) ಗಳುಂಟೋ ಅವು ದುಃಖರೂಪವಾದ ಫಲವನ್ನುಂಟುಮಾಡತಕ್ಕದ್ದಾಗಿಯೂ, ಅಲ್ಪಕಾಲದಲ್ಲಿ ಮಾತ್ರವೇ ಇರತಕ್ಕದ್ದಾಗಿಯೂ, ಇರುವುವಾದುದರಿಂದ ಆತ್ಮವೇದಿಯಾದವನು ಅವುಗಳಲ್ಲಿ ಆಸಕ್ತನಾಗುವುದಿಲ್ಲವು. ... ... ... ॥೨೨॥

ಮೂ ॥ ಶಕ್ನೋತೀಹೈವ ಯಸ್ಸೋಢುಂ ಪ್ರಾಕ್ಶರೀರ
ವಿಮೋಕ್ಷಣಾತ್ । ಕಾಮಕ್ರೋಧೋದ್ಭವಂ ವೇಗಂ ಸ
ಯುಕ್ತಸ್ಸಸುಖೀನರಃ ॥ ... ... ೨೩॥

ಪ ॥ ಶಕ್ನೋತಿ- ಇಹ- ಏವ-ಯಃ-ಸೋಢುಂ- ಪ್ರಾಕ್-ಶರೀರವಿಮೋಕ್ಷಣಾತ್।ಕಾಮಕ್ರೋಧೋದ್ಭವಂ- ವೇಗಂ- ಸಃ- ಯುಕ್ತಃ- ಸಃ- ಸುಖೀ- ನರಃ॥ ॥೨೩॥

ಅ ॥ ಯೋನರಃ- ಯಾವ ಮನುಷ್ಯನು, ಶರೀರವಿಮೋಕ್ಷಣಾತ್ಪ್ರಾಕ್ - ಶರೀರವಂ ಬಿಡುವುದಕ್ಕೆ ಪೂರ್ವವೇ, ಇಹೈವ - ಇಲ್ಲಿಯೇ, ಕಾಮಕ್ರೋಧೋದ್ಭವಂ - ಕಾಮದಿಂದಲೂ ಕೋಪದಿಂದಲೂ ಉಂಟಾದ, ವೇಗಂ- ವೇಗವನ್ನು (ಮನೋವಿಕಾರರೂಪವಾದ ವೇಗವನ್ನು,) ಸೋಢುಂ- ಸಹಿಸುವುದಕ್ಕೆ, ಶಕ್ನೋತಿ- ಸಮರ್ಥನಾಗುತ್ತಾನೆಯೋ, ಸಃ - ಅವನು, ಯುಕ್ತಃ- ಯೋಗಿಯು, ಸಏವ- ಅವನೇ,ಸುಖೀ-ಸುಖವನ್ನು ಹೊಂದಿದವನು॥೨೩॥

(ಶಂ॥ಭಾ॥) ಶ್ರೇಯೋಮಾರ್ಗವಿರೋಧಿಯಾಗಿಯೂ, ಅತಿಪ್ರಯಾಸದಿಂದಲೂ ನಿವಾರಿಸಲಶಕ್ಯವಾಗಿಯೂ, ಇರುವ ಈ ದೋಷವು (ಕಾಮಕ್ರೋಧಗಳಿಂದುಂಟಾಗುವ ದೋಷವು)ಸಮಸ್ತವಾದ ಅನರ್ಥಕ್ಕೂ ಕಾರಣವಾಗಿರುವುದರಿಂದ ಈ ದೋಷವನ್ನು ಪರಿಹರಿಸಿಕೊಳ್ಳುವುದಕ್ಕೆ ಅಧಿಕವಾದ ಪ್ರಯತ್ನವಂಮಾಡಬೇಕೆಂಬುದಾಗಿ ಶ್ರೀಕೃಷ್ಣನೀ ಶ್ಲೋಕದಿಂದರ್ಜುನನಿಗುಪದೇಶಿಸುತ್ತಾನೆ. ಯಾವನಾದರೇ ಈಗಿರುತಲಿರುವ ದೇಹದಲ್ಲಿಯೇ ದೇಹಪಾತಪರ್ಯನ್ತವೂ ಕಾಮಕ್ರೋಧಗಳಿಂದುಂಟಾಗುವ ಮನಃಕ್ಷೋಭಗಳನ್ನು ಸಹಿಸಿಕೊಳ್ಳುವನೋ ಅವನೇ ಯೋಗಿಯೆಂತಲೂ ನಿತ್ಯಸುಖೀಎಂತಲೂ ಹೇಳಲ್ಪಡುವನು. ವ್ಯಾಧಿ, ಜರಾ(ರೋಗ-ಮುದಿತನ ) ದಿಗಳಿಂದ ಪೀಡಿತನಾದವನಿಗೆ ಕಾಮಕ್ರೋಧಗಳಿಂದುಂಟಾಗುವ ವೇಗವು ಹೇಗೆ ಉಂಟಾಗುವುದು ? ಎಂದರೇ ಅದು ಮರಣಪರ್ಯಂತವಾಗಿ ಅನೇಕಕಾರಣಗಳಿಂ ದುಂಟಾಗುವುದಾದುದರಿಂದ ಕೆಲವು ಕಾರಣಗಳಿಂದುಂಟಾಗತಕ್ಕದ್ದಲ್ಲವೆಂದು ನಂಬತಕ್ಕದ್ದಾಗಿರು

ವುವಿಲ್ಲವು. ಆದರೆ ಕಾಮಕ್ರೋಧಗಳು ಮನೋವಿಕಾರ ಭೇದಗಳಾಗಿ ಹೇಗಾಗುವುದು ? ಎಂದರೇ ಅದಂ ವಿವರಿಸುವೆವು. ಕಾಣಲ್ಪಡುವುದಾಗಿಯೂ, ಕೇಳಲ್ಪವುದಾಗಿಯೂ, ಸ್ಮರಿಸಲ್ಪಡುವುದಾಗಿಯೂ, ಅನುಭವಿಸಲ್ಪಡುವುದಾಗಿಯೂ, ಇರುವ ಸುಖಕ್ಕೆ ಕಾರಣವಾದ ಪ್ರಿಯ ವಸ್ತುಗಳಲ್ಲಿ ತನಗಿರುವ ಅಪೇಕ್ಷೆ ಎಂಬಮನೋವಿಕಾರವನ್ನೇ ಕಾಮವೆಂತಲೂ ತನಗೆ ಪ್ರತಿಕೂಲಗಳಾಗಿಯೂ, ದುಃಖಕಾರಣಗಳಾಗಿಯೂ ಕಾಣಲ್ಪಡುವುದಾಗಿಯೂ, ಕೇಳಲ್ಪಡುವುದಾಗಿಯೂ, ಸ್ಮರಿಸಲ್ಪಡುವುದಾಗಿಯಾದರೂ ಇರುವ ಪದಾರ್ಥಗಳಲ್ಲಿ ದ್ವೇಷವೆಂಬ ಮನೋವಿಕಾರವನ್ನು ಕ್ರೋಧವೆಂತಲೂ ತಿಳಿಯಬೇಕು. ಆದರೂ ಕಾಮಕ್ರೋಧಗಳಿಂದುಂಟಾಗುವ ವೇಗವನ್ನು ಹೇಗೆ ತಿಳಿಯ ಬೇಕೆಂದರೇ ಕೇಳು; ಅಂತಃಕರಣ ಪ್ರಕ್ಷೋಭರೂಪವಾದ ಕಾಮದಿಂದುಂಟಾದ ವೇಗವು, ರೋಮಾಂಚವು, ಕಣ್ಣಿನ ವಿಕಾರವು,ಮುಖವಿಕಾರವು, ಮತ್ತು ಇದೇ ಮೊದಲಾದ ಚಿಹ್ನಗಳಿಂದ ತಿಳಿಯತಕ್ಕದ್ದಾಗಿಯೂ; ಗಾತ್ರಪ್ರಕಂಪ, (ಶರೀರವನ್ನಲ್ಲಾಡಿಸುವುದು,) ಬೆವರುಂಟಾಗುವುದು, ತುಟಿಗಳನ್ನು ಕಡಿಯುವುದೇ ಮೊದಲಾದ ಗುರುತುಗಳಿಂದ ಕ್ರೋಧೋದ್ಭವವಾದವೇಗವು ತಿಳಿಯತಕ್ಕದ್ದಾಗಿಯೂ ಇರುವುದು. ಆದುದರಿಂದ ಈ ಕಾಮಕ್ರೋಧಗಳಿಂದುಂಟಾಗುವ ವೇಗವನ್ನು ಯಾವನಾದರೇ ಜೀವಿಸಿರುವ ಕಾಲದಲ್ಲಿಯೇ ಸಹಿಸುತ್ತಾನೊ ಅವನು ಈ ಲೋಕದಲ್ಲಿ ಯೋಗಿಯೆಂತಲೂ, ಸುಖಿ ಯೆಂತಲೂ, ಪುರುಷ ಧೌರೇಯ ನೆಂತಲೂ, ಹೇಳಲ್ಪಡುವನು.॥ ... ... ... ... ॥೨೩॥

(ಆ॥ ಗಿ॥) ಕಾಮೋದ್ರಿಕ್ತನು ತನ್ನ ಮಾತೃ ಗಮನಕ್ಕೂ, ಕ್ರೋಧೋದ್ರಿಕ್ತನು ತನ್ನ ತಂದೆಯನ್ನು ಸಂಹಾರ ಮಾಡುವುದಕ್ಕೂ ಅಂಜುವುದಿಲ್ಲವೆಂದು ಲೋಕಪ್ರಸಿದ್ಧವಾಗಿರುವುದರಿಂದ ಕಾಮಕ್ರೋಧಗಳ ವೇಗವು ಅತಿಪ್ರಯಾಸದಿಂದ ನಿವಾರಿಸಲ್ಪಡಬೇಕಾಗಿರುವುದು. ಆದುದರಿಂದಲೇ ಅದಕ್ಕಾಗಿ ಅಧಿಕ ಪ್ರಯತ್ನವನ್ನು ಮಾಡಬೇಕೆಂದರಿಯಬೇಕು ॥ ... ... ... ... ... ॥೨೩॥

(ಶ್ರೀ॥) ವಿಷಯ ಸುಖಾನುಭವಗಳು ದುಃಖಕಾರಣ ಗಳಾಗಿಯೂ, ಅಸ್ಥಿರಗಳಾಗಿಯೂ ಇರುವುವಾದುದರಿಂದ ಪರಮ ಪುರುಷಾರ್ಥಗಳಾಗಲಾರವೆಂತಲೂ, ಮೋಕ್ಷಕ್ಕೆ ಕಾಮ ಕ್ರೋಧ ವೇಗಗಳು ಮಹಾ ಶ

ತ್ರುಗಳೆಂತಲೂ, ಆದುದರಿಂದಲೇ ಕಾಮ ಕ್ರೋಧವೇಗವನ್ನು ಸಹಿಸು ವಂತವನು ಮಾತ್ರವೇ ಮೋಕ್ಷರೂಪ ಪುರುಷಾರ್ಥವನ್ನು ಹೊಂದುವ ನೆಂತಲೂ ಈ ಶ್ಲೋಕದಲ್ಲಿ ಹೇಳುತ್ತಾನೆ. ಪ್ರಾಣೋತ್ಕ್ರಮಣವಾ ದ ಮೇಲೆ ಸ್ತ್ರೀಯರು ಆಲಿಂಗನವಂ ಮಾಡುವುದರಿಂದಲೂ, ಮಕ್ಕಳು ದಹನವಂಮಾಡುವುದರಿಂದಲೂ ಹೇಗಾದರೇ ಮನೋವಿಕಾರಗಳುಂಟಾ ಗುವುದಿಲ್ಲವೋ ಅದರಂತೇ ಜೀವಿತಕಾಲದಲ್ಲಿಯೇ ತನ್ನ ದೇಹವಿಷಯ ವಾದ ಸುಖದುಃಖಗಳಲ್ಲಿ ವಿಕಾರ ಶೂನ್ಯನಾಗಿರಬೇಕು. ಇದಕ್ಕೆ ಜ್ಞಾನ ವಾಸಿಷ್ಠದಲ್ಲಿರುವ "ಮೃಶೋಗತೇಯಥಾದೇಹಸ್ಸುಖದುಃಖೇನವಿಂದತಿ। ತಥಾಚೇತ್ಪ್ರಾಣಯುಕ್ತೋಪಿ ನಕ್ಶೈವಲ್ಯಾಶ್ರಯೋಭವೇತ್" ಎಂಬೀ ವಚನವು ಆಧಾರವಾಗಿರುವುದು.॥ ... ... ॥೨೩॥

(ರಾ॥ಭಾ॥) ಯಾವನಾದರೇ ಶರೀರವನ್ನು ತ್ಯಾಗಮಾಡುವುದಕ್ಕೆ ಪೂರ್ವದಲ್ಲಿಯೇ ಸಾಧನಾನುಷ್ಠಾನ ಸಮಯದಲ್ಲಿ ಆತ್ಮಾನುಭವದಿಂ ದುಂಟಾದ ಪ್ರೀತಿಯಿಂದ ಕಾಮಕ್ರೋಧಗಳವೇಗವನ್ನು ಸಹಿಸುತ್ತಾ ನೋ, ಅವನೇ ಆತ್ಮಾನುಭವಕ್ಕೆ ಯೋಗ್ಯನಾಗಿ ಶರೀರವಂ ಬಿಟ್ಟಮೇ ಲೆ ಆ ಅನುಭವವಂ ಹೊಂದಿ ಸುಖಿಯಾಗುವನು.॥ ॥೨೩

(ಮ॥ ಗೀ॥ ವಿ॥) ಪಶುಪಕ್ಷ್ಯಾದಿ ದೇಹದಿಂದ ಹುಟ್ಟಿದರೇ ಕಾಮ ಕ್ರೋಧಾದಿಗಳಿಂದುಂಟಾಗುವ ವೇಗವಂ ಸಹಿಸಲು ಸಾಧ್ಯವಿಲ್ಲವಾದುದ ರಿಂದ ಈ ಮನುಷ್ಯದೇಹದಿಂದ ಹುಟ್ಟಿರುವ ಕಾಲದಲ್ಲಿಯೇ ಅದನ್ನಡ ಗಿಸಬೇಕೆಂದು ತಾತ್ಪರ್ಯವು.॥ ... ... ॥೨೩॥

ಮೂ॥ ಯೋಽನ್ತಸ್ಸುಖೋಽನ್ತರಾರಾಮ ಸ್ತಥಾನ್ತ
ಜ್ಯೋತಿರೇವಯಃ। ಸಯೋಗೀ ಬ್ರಹ್ಮನಿರ್ವಾಣಂಬ್ರ
ಹ್ಮಭೂತೋಽಧಿಗಚ್ಛತಿ॥ ... ... ।೨೪।

ಪ॥ ಯಃ- ಅಂತಸ್ಸುಖಃ- ಅಂತರಾರಾಮಃ- ತಥಾ- ಅನ್ತರ್ಜ್ಯೋತಿಃ- ಏವ ಯಃ ಸಃ- ಯೋಗೀ- ಬ್ರಹ್ಮನಿರ್ವಾಣಂ- ಬ್ರಹ್ಮಭೂತಃ- ಅಧಿಗಚ್ಛತಿ॥ ॥೨೪॥

ಅ॥ ಅನ್ತಸ್ಸುಖಃ- ತನ್ನಾತ್ಮನಲ್ಲಿಯೇ ಸುಖವಂಹೊಂದುವಂತನಾಗಿಯೂ, ಅಂತರಾ ರಾಮಃ- ತನ್ನಾತ್ಮನಲ್ಲಿಯೇ ಕ್ರೀಡಿಸುವಂತವನಾಗಿಯೂ, (ಪ್ರೀ) ತನ್ನಕ್ರೀಡೆಯು ಪರಮಾ ತ್ಮನಲ್ಲಿ ಯಲ್ಲದೇ ಇತರವಸ್ತುಗಳಲ್ಲಿ ಇಲ್ಲದೇ ಇರುವಂತವನಾಗಿಯೂ, (ಮ) ಅಂತರ- ಪ ರಮಾತ್ಮದರ್ಶನಸ್ಪರ್ಶ ಸಲ್ಲಾಪಾದಿ ರೂಪದಿಂದ ನಾನಾವಿಧಗಳಾಗಿ ಉಂಟಾಗುವ, ಆರಾ ಮಃ-ಸುಖವುಳ್ಳವನಾಗಿಯೂ,(ಗೀ॥ವಿ॥)ಭಗವತ್ಸ್ಪರ್ಶನದಿಂದುಂಟಾದಸುಖವುಳ್ಳವನಾಗಿಯೂ,

ಯಃ - ಯಾವ ನಿರುತ್ತಾನೋ, ತಥಾ - ಆ ಪ್ರಕಾರವೇ, ಅಂತರ್ಜ್ಯೋತಿರೇವ - ತನ್ನಾತ್ಮನಲ್ಲಿಯೇ ಪ್ರಕಾಶಪ್ರವೃತ್ತನಾಗಿಯೂ, (ಗೀ॥ ವಿ॥) ತನ್ನಲ್ಲಿ ಪ್ರಕಾಶಿಸುತ್ತಲಿರುವ ಪರಮಾತ್ಮನೆಂಬ ಜ್ಯೋತಿಸ್ಸ್ವರೂಪನಾಗಿಯೂ, ಯಃ - ಯಾವನಿರುತ್ತಾನೋ, ಸಯೋಗೀ - ಆ ಯೋಗಿಯು, ಬ್ರಹ್ಮಭೂತಃ - ಬ್ರಹ್ಮನಿಷ್ಠನಾಗಿ, (ಶಂ॥) ಜೀವನ್ಮುಕ್ತನಾಗಿ, ಅಥವಾ ಬ್ರಹ್ಮಸ್ವರೂಪನಾಗಿ, ಬ್ರಹ್ಮನಿರ್ವಾಣಂ - (ರಾ॥) ತನ್ನಾತ್ಮಾನುಭವನನ್ನು, (ಶಂ॥) ಬ್ರಹ್ಮನಲ್ಲಿ ಲಯವನ್ನು ಅಥವಾ ಬ್ರಹ್ಮಾನಂದವನ್ನು, ಅಧಿಗಚ್ಛತಿ - ಹೊಂದುತ್ತಾನೆ. ॥೨೪॥

ತಾ॥ ಯಾವನಾದರೇ ಬಾಹ್ಯವಿಷಯಾನುಭವಗಳಂಬಿಟ್ಟು ಆತ್ಮಾನುಭವಮಾತ್ರ ಸುಖಿಯಾಗಿಯೂ, ಅಂತರಾತ್ಮನಲ್ಲಿಯೇ ಕ್ರೀಡಿಸುವಂತವನಾಗಿಯೂ, ಆತ್ಮಜ್ಞಾನಪ್ರವೃತ್ತನಾಗಿಯೂ ಇರುವನೋ ಅಂಥಾ ಬ್ರಹ್ಮಸ್ವರೂಪನಾದ ಯೋಗಿಯು ಆತ್ಮಾನುಭವ ಸುಖವನ್ನು ಹೊಂದುವನು.॥ ... ... ... ॥೨೪॥

ಮೂ॥ ಲಭನ್ತೇ ಬ್ರಹ್ಮನಿರ್ವಾಣಮೃಷಯಃ ಕ್ಷೀಣಕಲ್ಮಷಾಃ । ಛಿನ್ನದ್ವೈಧಾ ಯತಾತ್ಮಾನಸ್ಸರ್ವಭೂತಹಿತೇರತಾಃ ॥ ... ... ॥೨೫॥

ಪ॥ ಲಭನ್ತೇ - ಬ್ರಹ್ಮನಿರ್ವಾಣಂ - ಋಷಯಃ - ಕ್ಷೀಣಕಲ್ಮಷಾಃ । ಛಿನ್ನದ್ವೈಧಾಃ - ಯತಾತ್ಮಾನಃ - ಸರ್ವಭೂತಹಿತೇ - ರತಾಃ ॥ ॥೨೫॥

ಅ॥ ಕ್ಷೀಣಕಲ್ಮಷಾಃ - ಪಾಪಗಳನ್ನು ಪರಿಹರಿಸಿಕೊಂಡಿರುವಂತವರಾಗಿಯೂ, ಛಿನ್ನದ್ವೈಧಾಃ - ಅಜ್ಞಾನ ಸಂಶಯಗಳನ್ನು ಹೋಗಲಾಡಿಸಿಕೊಂಡಿರುವಂತರಾಗಿಯೂ, (ರಾ) ಶೀತೋಷ್ಣಾದಿ ದ್ವಂದ್ವಗಳಂ ಬಿಟ್ಟವರಾಗಿಯೂ, (ಮ॥ ಗೀ॥ ವಿ॥) ಛಿನ್ನದ್ವೈಧಾಯತಾತ್ಮಾನಃ - ಛಿನ್ನದ್ವೈಧಾಃ - ಸಂಶಯ ವಿಪರೀತಜ್ಞಾನಗಳಂ ಬಿಟ್ಟವರಾಗಿಯೂ, ಯತಾತ್ಮಾನಃ - ಏಕಾಗ್ರವಾದ ಮನಸ್ಸುಳ್ಳವರಾಗಿಯೂ, (ಗೀ॥ ವಿ॥) ಯತಾತ್ಮಾನಃ - ಸ್ವಾಧೀನವಾದ ಮನಸ್ಸುಳ್ಳವರಾಗಿಯೂ, ಸರ್ವಭೂತ ಹಿತೇರತಾಃ - ಸರ್ವಪ್ರಾಣಿಗಳಿಗೂ ಹಿತವನ್ನೇ ಅಪೇಕ್ಷಿಸಿಕೊಂಡಿರುವಂತವರಾಗಿಯೂ ಇರುವ; ಋಷಯಃ - ಜ್ಞಾನಿಗಳು, (ರಾ) ಆತ್ಮದರ್ಶನಪ್ರವೃತ್ತರು, ಬ್ರಹ್ಮನಿರ್ವಾಣಂ - (ಶಂ॥) ಬ್ರಹ್ಮನಲ್ಲಿ ಲಯವನ್ನು, ಅಥವಾ ಬ್ರಹ್ಮಾನಂದವನ್ನು, (ರಾ) ಆತ್ಮಾನುಭವಸುಖವನ್ನು, (ಮ) ಬ್ರಹ್ಮನಿಂದ ಕೊಡಲ್ಪಡುವ ಸುಖವನ್ನು, (ಗೀ॥ ವಿ॥) ಪ್ರಾಕೃತ ಶರೀರವಿಲ್ಲದ ಬ್ರಹ್ಮವನ್ನು, ಲಭಂತೆ - ಹೊಂದುತ್ತಾರೆ.॥ ॥೨೫॥

(ರಾ॥ ಭಾ॥) ಶೀತೋಷ್ಣಾದಿ ದ್ವಂದ್ವಗಳಿಂದ ಬಿಡಲ್ಪಟ್ಟವರಾಗಿಯೂ, ಆತ್ಮನಲ್ಲಿ ತಾನೆ ಮನಸ್ಸನ್ನಿಟ್ಟು ತನ್ನಂತೆಯೇ ಸರ್ವ

ಪ್ರಾಣಿಗಳಿಗೂ ಹಿತಾ ಚರಣದಲ್ಲಾಸಕ್ತರಾಗಿಯೂ ಆತ್ಮದರ್ಶಿಗಳಾಗಿಯೂ ಯಾರಾದರೇ ಆಗುವರೋ ಅವರು ಆತ್ಮಪ್ರಾಪ್ತಿಗೆ ವಿರೋಧಿಯಾದ ಸಮಸ್ತ ಪಾಪಗಳಿಂದ ಮುಕ್ತರಾಗಿ ಬ್ರಹ್ಮಾನಂದವನ್ನು ಹೊಂದುವರು ॥ ... ... ॥೨೫॥

ಮೂ॥ ಕಾಮಕ್ರೋಧ ವಿಯುಕ್ತಾನಾಂ ಯತೀನಾಂ ಯತಚೇತಸಾಂ । ಅಭಿತೋಬ್ರಹ್ಮನಿರ್ವಾಣಂ ವರ್ತತೇವಿಜಿತಾತ್ಮನಾಂ ॥ (ಶಂ॥ಮ॥ಗೀ॥ವಿ॥) ವಿದಿತಾತ್ಮನಾಂ॥ ಇತಿ ಪಾಠಃ॥ ... ... ... ॥೨೬॥

ಪ ॥ ಕಾಮಕ್ರೋಧ ವಿಯುಕ್ತಾನಾಂ - ಯತೀನಾಂ - ಯತಚೇತಸಾಂ । ಅಭಿತಃ - ಬ್ರಹ್ಮನಿರ್ವಾಣಂ - ವರ್ತತೇ - ವಿಜಿ(ವಿದಿ)ತಾತ್ಮನಾಂ॥ ॥೨೬॥

ಅ ॥ ಕಾಮಕ್ರೋಧ ವಿಯುಕ್ತಾನಾಂ - ಕಾಮಕ್ರೋಧಗಳಿಂದ ಬಿಡಲ್ಪಟ್ಟವರಾಗಿ) ಯೂ, ಯತಚೇತಸಾಂ - ಮನಸ್ಸನ್ನು ಬಿಗಿದವಂತವರಾಗಿಯೂ, ವಿಜಿತಾತ್ಮನಾಂ - ಮನಸ್ಸನ್ನು ಜಯಿಸಿದವರಾಗಿಯೂ, (ಶಂ॥ಮ॥ಗೀ॥ವಿ॥) ವಿದಿತಾತ್ಮನಾಂ-ಯತೀನಾಂ-ಶಂ॥)ಆತ್ಮತತ್ತ್ವವಂ ತಿಳಿದವನಾಗಿರುವ ಯತಿ(ಸರ್ವಕರ್ಮ ಸನ್ಯಾಸಪಂದ ಬ್ರಹ್ಮ ನಿಷ್ಠ) ರಾದವರು) ಗಳಿಗೆ, (ಮ॥ ಗೀ॥ ವಿ ) ವಿದಿತಾತ್ಮನಾಂ-ಬ್ರಹ್ಮಜ್ಞಾನಿಗಳಾಗಿಯೂ ಇರುವ, ಯತೀನಾಂ- ಪ್ರಯತ್ನಶೀಲರಾದವರುಗಳಿಗೆ, ಬ್ರಹ್ಮನಿರ್ವಾಣಂ- ಬ್ರಹ್ಮಸುಖವು, (ರಾ॥ ಆತ್ಮಾನುಭವಸುಖವು, (ಶಂ) ಬ್ರಹ್ಮನಲ್ಲಿ ಲಯವು ಅಥವಾ ಬ್ರಹ್ಮಾನಂದವು, ಅಭಿತಃ- (ಶಂ॥ ರಾ॥) ಕೈಯಲ್ಲಿಯೆ, (ಮ) ಸರ್ವಪ್ರದೇಶದಲ್ಲಿಯೂ, ( ಗೀ॥ ವಿ॥ ) ಸರ್ವದೇಶ ಸರ್ವಕಾಲಗಳಲ್ಲಿಯೂ, ವರ್ತತೇ- ಇರುವುದು. ॥೨೬॥

(ರಾ॥ ಭಾ॥) ಕಾಮ ಕ್ರೋಧಗಳನ್ನು ಬಿಟ್ಟು ಯತ್ನಶೀಲರಾಗಿ ಮನೋನಿಗ್ರಹವಂ ಮಾಡುವಂತವರಿಗೆ ಬ್ರಹ್ಮಾನಂದವು ಯೆಲ್ಲಿಅಪೇಕ್ಷಿಸಿದರೂ ಕೈಮೇಲೇನೇ ಇರುವುದು. ॥೨೬॥

ಮೂ॥ಸ್ಪರ್ಶಾನ್ಕೃತ್ವಾ ಬಹಿರ್ಬಾಹ್ಯಾಂಶ್ಚಕ್ಷುಶ್ಚೈವಾನ್ತರೇಭ್ರುವೋಃ । ಪ್ರಾಣಾಪಾನೌಸಮೌಕೃತ್ವಾ ನಾಸಾಭ್ಯಂತರ ಚಾರಿಣೌ ॥ ೨೭ ॥ ಯತೇಂದ್ರಿಯ ಮನೋಬುದ್ಧಿರ್ಮುನಿರ್ಮೋಕ್ಷ ಪರಾಯಣಃ । ವಿಗತೇಚ್ಛಾ ಭಯಕ್ರೋಧೋಯಸ್ಸದಾ ಮುಕ್ತಏವಸಃ॥ ... ॥೨೮॥

ಪ|| ಸ್ಪರ್ಶಾನ್- ಕೃತ್ವಾ- ಬಹಿಃ- ಬಾಹ್ಯಾನ್- ಚಕ್ಷುಃ_ಚ-ಏವ- ಅನ್ತರೇ- ಭ್ರುವೋಃ| ಪ್ರಾಣಾಪಾನೌ- ಸಮೌ-ಕೃತ್ವಾ- ನಾಸಾಭ್ಯಂತರಚಾರಿಣೌ || ೨೭ || ಯತೇಂದ್ರಿಯಮನೋಬುದ್ಧಿಃ- ಮುನಿಃ- ಮೋಕ್ಷಪರಾಯಣಃ | ವಿಗತೇಚ್ಛಾಭಯಕ್ರೋಧಃ- ಯಃ- ಸದಾ- ಮುಕ್ತಃ- ಏವ- ಸಃ. ... ... ... ||೨೮||

ಅ|| ಬಾಹ್ಯಾನ್ ಸ್ಪರ್ಶಾನ್- (ಶಬ್ದಾದಿ) ಹೊರಗಿರುವ ವಿಷಯಗಳನ್ನು, ಬಹಿಃಕೃತ್ವಾ- ಹೊರಗೆಮಾಡಿ, ಚಕ್ಷುಃ- ಕಣ್ಣುಗಳನ್ನು, ಭ್ರುವೋರನ್ತರೇಏವ - ಭ್ರೂಮಧ್ಯಸ್ಥಾನದಲ್ಲಿಯೇ, (ರಾ||) ಮೂಗಿನ ತುದಿಭಾಗದಲ್ಲಿಯೇ, ಕೃತ್ವಾ - ಇಟ್ಟು, ಪ್ರಾಣಾಪಾನೌ - ಪ್ರಾಣಾಪಾನವಾಯುಗಳನ್ನು, ನಾಸಾಭ್ಯಂತರಚಾರಿಣೌ ಮೂಗಿನೊಳಗೆ ಸಂಚಾರಮಾಡುವವುಗಳಾಗಿಯೂ, ಸಮೌಕೃತ್ವಾ- ಸಮನಾಗಿಯೂಮಾಡಿ, ಯತೇಂದ್ರಿಯಮನೋಬುದ್ಧಿಃ- (ರಾ|| ಆತ್ಮದರ್ಶನಕ್ಕಾಗಿ) ಇಂದ್ರಿಯಮನೋಬುದ್ಧಿಗಳನ್ನು ಸ್ವಾಧೀನಪಡಿಸಿಕೊಂಡವನಾಗಿಯೂ, ವಿಗತೇಚ್ಛಾಭಯಕ್ರೋಧಃ - ಆಶಾಭಯ ಕ್ರೋಧಗಳಂ ಬಿಟ್ಟವನಾಗಿಯೂ, ಮೋಕ್ಷಪರಾಯಣಃ- ಮೋಕ್ಷಾಸಕ್ತನಾಗಿಯೂ, ಇರುವ; ಮುನಿಃ- ಮನನಶೀಲನಾದ, ಯಃ- ಯಾವನಿರುವನೊ, ಸಃ- ಆವನು, ಸದಾ - ಯಾವಾಗಲೂ, (ರಾ||) ಸಾಧನಾನುಷ್ಠಾನ ಸಮಯದಲ್ಲಿಯೂ, ಮುಕ್ತಏವ - ಮುಕ್ತನೇ, (ಗಿ|| ವಿ) ಮುಕ್ತನಂತೆಯೇ ಇರುವನು. ಎಂದರೇ ಕಾಮಕ್ರೋಧಾದಿಗಳಿಂದ ಬಿಡಲ್ಪಟ್ಟವನಾದುದರಿಂದ ಮುಕ್ತನಿಗೆ ಸಮನಾದವನು.||೨೮||

(ಶಂ||ಭಾ||) ಬ್ರಹ್ಮಜ್ಞಾನನಿಷ್ಠರಾದ ಸನ್ನ್ಯಾಸಿಗಳಿಗೆ ಸದ್ಯೋಮುಕ್ತಿಯು ಹೇಳಲ್ಪಟ್ಟಿತು. ಈಶ್ವರನಲ್ಲಿಡಲ್ಪಡುವ ಕರ್ತೃತ್ವಾದಿಗಳುಳ್ಳವರಿಂದ ಈಶ್ವರಾರ್ಪಣವಾಗಿ ಆಚರಿಸಲ್ಪಟ್ಟ ಕರ್ಮಯೋಗವು,ಸತ್ವಶುದ್ಧಿ, ಜ್ಞಾನಪ್ರಾಪ್ತಿ, ಸರ್ವಕರ್ಮಸನ್ನ್ಯಾಸವೆಂಬ ಕ್ರಮದಿಂದಮೋಕ್ಷಫಲವಂ ಕೊಡುವುದೆಂಬದಾಗಿ ಪದೇಪದೇ ಶ್ರೀಕೃಷ್ಣನುಪದೇಶಿಸಿರುವನು; ಮುಂದೆಯೂ ಉಪದೇಶಿಸುವನು. ಇನ್ನು ಮುಂದೆ ಬ್ರಹ್ಮಜ್ಞಾನನಿಷ್ಠೆಗೆ ಮುಖ್ಯಸಾಧನವಾಗಿರುವ ಧ್ಯಾನಯೋಗಪ್ರಕಾರವನ್ನು ವಿವರಿಸಿ ಉಪದೇಶಿಸುತ್ತೇನೆಂಬದಾಗಿ ಅಂಥಾವಿಸ್ತಾರವಾದ ಉಪದೇಶಕ್ಕೆ ಸೂತ್ರಸ್ಥಾನಾಪನ್ನಗಳಾದ ಶ್ಲೋಕಗಳನ್ನುಪದೇಶಿಸುತ್ತಾನೆ. ಕಿವಿ ಮೊದಲಾದ ಇಂದ್ರಿಯಗಳ ಮಾರ್ಗವಾಗಿ ಬುದ್ಧಿಯಲ್ಲಿ ಪ್ರವೇಶಿಸುವ ಶಬ್ದಾದಿ ವಿಷಯಗಳನ್ನು ದೂರದಲ್ಲಿ ಬಿಟ್ಟು ತನ್ನ ದೃಷ್ಟಿಯನ್ನು ಭ್ರೂಮಧ್ಯಪ್ರದೇಶದಲ್ಲಿ ನಿಲ್ಲಿಸಿ ಪ್ರಾಣಾಪಾನವಾಯುಗಳನ್ನು ಸಮಾನಗತಿಯುಳ್ಳದ್ದಾಗಿಯೂ, ನಾಸಾ ಮಧ್ಯಪ್ರದೇಶದಲ್ಲಿಯೇ ಸಂಚರಿಸುವಂತವುಗಳಾಗಿಯೂ ಮಾಡಿ ( ಪಾಪರಾಹಿತ್ಯಕ್ಕೋಸ್ಕರವಾಗಿಯೂ,

ಮನಸ್ಸ್ಥೈರ್ಯಕ್ಕಾಗಿಯೂ, ಕುಂಭಕ ಪ್ರಾಣಾಯಾಮದಿಂದ, ಉಚ್ಛ್ವಾಸ ನಿಶ್ವಾಸ ರೂಪಗಳಾದ ಪ್ರಾಣಾಪಾನಗಳನ್ನು ನಿರೋಧಿಸಿ) ಇಂದ್ರಿಯಮನೋಬುದ್ಧಿಗಳನ್ನು ಜಯಿಸಿದವನಾಗಿಯೂ, ಮೋಕ್ಷಾಪೇಕ್ಷೆಯುಳ್ಳವನಾಗಿಯೂ, ಮನನಶೀಲನಾಗಿಯೂ, ವಿಷಯಾಪೇಕ್ಷೆಯು, ಭಯವು, ಕ್ರೋಧವು, ಎಂಬಿವುಗಳಿಲ್ಲದವನಾಗಿಯೂ, ಯಾವನಾದರೆ ಇರುತ್ತಾನೋ ಅಂತವನು ಸರ್ವಕಾಲಗಳಲ್ಲಿಯೂ (ಜೀವಿಸಿ ಇದ್ದರೂ) ಮೋಕ್ಷವನ್ನು ಹೊಂದಿದವನೇ ಆಗುತ್ತಾನೆ. ಇಂತವನಿಗೆ ಮೋಕ್ಷಕ್ಕಾಗೆ ಯಾವ ಕರ್ತವ್ಯವೂ ಇಲ್ಲವು.॥ ... ॥೨೭॥೨೮॥

(ಮ॥ ಸೂ॥) ಈಶ್ವರನಲ್ಲಿ ಸಮರ್ಪಿಸಲ್ಪಟ್ಟ ಸರ್ವಭಾವವುಳ್ಳವನಿಗೆ ಕರ್ಮಯೋಗದಿಂದ ಚಿತ್ತಶುದ್ಧಿಯೂ, ಅನಂತರದಲ್ಲಿ ಸರ್ವಕರ್ಮಸನ್ನ್ಯಾಸವೂ, ತದನಂತರದಲ್ಲಿ ಶ್ರವಣ ಮನನಾದಿಗಳಲ್ಲಿ ಅತ್ಯಂತಾಪೇಕ್ಷೆಯೊಡನೆ ಪ್ರವರ್ತಿಸುವಂತವನಿಗೆ ಮೋಕ್ಷಸಾಧನವಾದ ತತ್ವಜ್ಞಾನವು ಇದುವರೆಗೂ ಹೇಳಲ್ಪಟ್ಟಿತು. ಈಗ "ಸುಯೋಗೀ ಬ್ರಹ್ಮನಿರ್ವಾಣಂ" (೫॥೨೪॥) ಎಂಬುವ ಶ್ಲೋಕದಲ್ಲಿ ಸೂಚಿತವಾಗಿಯೂ ಆತ್ಮಜ್ಞಾನಕ್ಕೆ ಅಂತರಂಗಸಾಧನವೂ ಆಗಿರುವ ಧ್ಯಾನಯೋಗವನ್ನು ಮುಂದಿನಅಧ್ಯಾಯದಲ್ಲಿ ವಿಸ್ತಾರವಾಗಿ ಹೇಳಲುದ್ದೇಶಿಸಿ ಸೂತ್ರದಂತಿರುವ ಮೂರು ಶ್ಲೋಕಗಳನ್ನಿಲ್ಲಿ ಉಪದೇಸುತ್ತಾನೆ. ಅವುಗಳಲ್ಲಿಯೂ, ಮೊದಲೆರಡು ಶ್ಲೋಕಗಳಿಂದ ಧ್ಯಾನಯೋಗ ಸಂಗ್ರಹವೂ ಮೂರನೇಶ್ಲೋಕದಿಂದ ಅಂತಹ ಧ್ಯಾನಯೋಗಕ್ಕೆ ಫಲವಾದ ಪರಮಾತ್ಮಜ್ಞಾನವು ಉಪದೇಶಿಸಲ್ಪಡುವುದು. ಈ ಶಬ್ದಾದಿ ವಿಷಯಗಳು ಸ್ವಭಾವದಿಂದ ಒಳಗೆ ಇರುವಂತಾದ್ದೇ ಆದರೇ "ನಹಿಸ್ವಭಾವೋ ಭಾವಾನಾಂ ವ್ಯಾವರ್ತೇತೌಷ್ಣ್ಯವದ್ರವೇಃ ॥ ಅರ್ಥವು - ಸೂರ್ಯನ ಸ್ವಭಾವವಾದ ಉಷ್ಣಗುಣವು ವ್ಯತ್ಯಸ್ತವಾಗದೇ ಇರುವಂತೇ ವಸ್ತುಗಳ ಸ್ವಭಾವಗುಣಗಳು ವ್ಯತ್ಯಸ್ತವಾಗಲಾರದು" ಎಂಬ ವಚನಾನುಸಾರವಾಗಿ ಅನಂತವಾದ ಪ್ರಯತ್ನಗಳಿಂದಲೂ ಹೊರಗೆ ಇರುವಂತೆ ಮಾಡುವುದಕ್ಕೆ ಆಗುವುದಿಲ್ಲವೆಂತಲೂ, ಅನುರಾಗವಶದಿಂದ ಇಂದ್ರಿಯಗಳ ಮಾರ್ಗವಾಗಿ ಬುದ್ಧಿಯಲ್ಲಿ ಪ್ರವೇಶಿಸುವುದಾಗಿದ್ದರೂ ಸಹಜವಾಗಿಯೇ ಬಾಹ್ಯವಾದವಿಷಯಗಳಿಗೆ ವೈರಾಗ್ಯದಿಂದ ಹೊರಗೆ ಹೋಗುವಿಕೆಯು ಸಂಭವಿಸಲ್ಪಡು

ವುದೆಂತಲೂ,ವಿಷಯಗಳು ಹೊರಗೆ ಇರುವಂತವುಗಳಲ್ಲದೇ ಒಳಗಿರುವಂತವುಗಳಲ್ಲವೆಂತಲೂ ತಿಳಿಸುವುದಕ್ಕಾಗಿ ಇಲ್ಲಿ "ಬಾಹ್ಯಾನ್" ಎಂಬದಾಗಿ ಹೇಳಿರುವನು. "ಸ್ಪರ್ಶಾನ್ ಕೃತ್ವಾ ಬಹಿರ್ಬಾಹ್ಯಾನ್ ॥ ಅ ॥ ಬಾಹ್ಯವಿಷಯಗಳನ್ನು ಹೊರಗೆ ಮಾಡಿ, ಎಂದರೇ ತೀವ್ರವೈರಾಗ್ಯಬಲದಿಂದ ನಾನಾವಿಷಯಾಕಾರವಾದ ವೃತ್ತಿಯನ್ನುಂಟುಮಾಡದೇ" ಎಂಬುವುದರಿಂದ ವೈರಾಗ್ಯವು ಹೇಳಲ್ಪಟ್ಟಿತೆಂತಲೂ, "ಚಕ್ಷುಶ್ಚೈವಾಂತರೇ ಭ್ರುವೋಃ" ಎಂಬುವುದರಿಂದ ಯೋಗಾಭ್ಯಾಸವು ಹೇಳಲ್ಪಟ್ಟಿತೆಂತಲೂ, ಮತ್ತು ಕಣ್ಣುಗಳನ್ನು ಅತ್ಯಂತವಾಗಿ ಮುಚ್ಚಿಕೊಂಡರೆ ನಿದ್ರೆಯೆಂಬ ಲಯಾತ್ಮಿಕವಾದ ವೃತ್ತಿಯುಂಟಾಗುವುದೆಂತಲೂ,(ಈ ನಿದ್ರೆಯು ಯೋಗವಿರೋಧಿಯಾಗುವುದು.) ಕಣ್ಣುಗಳನ್ನು ಅತ್ಯಂತವಾಗಿ ತೆರದು ನೋಡಿದರೆ ಪ್ರಮಾಣವು, ವಿಪರ್ಯಯವು, ವಿಕಲ್ಪವು, ಸ್ಮೃತಿಯು, ಎಂಬ ವಿಕ್ಷೇಪಾತ್ಮಕಗಳಾದನಾಲ್ಕು ವೃತ್ತಿಗಳುಂಟಾಗುವುದೆಂತಲೂ, (ಇದೂ ಯೋಗವಿರೋಧಿಯೇ) ಆದುದರಿಂದಲೇ ಈ ಐದು ವೃತ್ತಿಗಳಂ ನಿರೋಧಿಸುವುದಕ್ಕಾಗಿ ಅರ್ಧನಿಮೀಲನದಿಂದದೃಷ್ಟಿಯನ್ನು ಭ್ರೂಮಧ್ಯಸ್ಥಾನದಲ್ಲಿ ನಿಲ್ಲಿಸಬೇಕೆಂಬುವುದಕ್ಕಾಗಿ "ಚಕ್ಷುಶ್ಚೈವಾಂತರೇಭ್ರುವೋಃ" ಎಂಬದಾಗಿ ಪರಮಾತ್ಮನುಪದೇಶಿಸಿದನು. ಪೂರಕರಾಹಿತ್ಯಕೊಸ್ಕರವಾಗಿಯೂ ಕುಂಭಕ ಪ್ರಾಣಾಯಾಮ ಕ್ರಮವು "ಪ್ರಾಣಾಪಾನೌ ಸಮೌ" ಇತ್ಯಾದಿಯಿಂದ ಹೇಳಲ್ಪಟ್ಟಿತು. ಈ ಯೆರಡು ಶ್ಲೋಕಗಳಲ್ಲಿ ಮೊದಲನೇಶ್ಲೋಕದಲ್ಲಿ ಹೇಳಲ್ಪಟ್ಟ ಮೂರುವಿಧಗಳಾದ ಉಪಾಯಗಳಿಂದ ಇಂದ್ರಿಯ ಮನೋಬುದ್ಧಿಗಳನ್ನು ಜಯಿಸಿ ಸರ್ವವಿಷಯಗಳಲ್ಲಿಯೂ ವಿರಕ್ತನಾಗಿಯೂ ಮನನಶೀಲನಾಗಿಯೂ, ಇಚ್ಛಾಭಯಕ್ರೋಧರಹಿತನಾಗಿಯೂ, ಇರುವಸನ್ಯಾಸಿಯು ಸರ್ವಕಾಲಗಳಲ್ಲಿಯು ಮುಕ್ತನೇ ಆಗಿರುವುದರಿಂದ ಅಂತವನಿಗೆ ಮೋಕ್ಷಾರ್ಥವಾದ ಕರ್ತವ್ಯವಿಲ್ಲವು; ಅಥವಾ ಅಂತವನು ಜೀವಿಸಿದ್ದರೂಮುಕ್ತನೇ ಎಂಬದಾಗಿಯೂ ತಿಳಿದುಕೊಳ್ಳಬೇಕು. ॥೭೩॥ ೨೮॥

(ಶ್ರೀ॥) ಇಂದ್ರಿಯಗಳಿಗೆ ಗೋಚರಗಳಾದ ಶಬ್ದ ಸ್ಪರ್ಶರೂಪ ರಸಗಂಧಗಳೂ ಅವುಗಳನ್ನೇ ಆಧಾರವಾಗಿಯುಳ್ಳ ವಸ್ತುಗಳೂ ವಿಷಯಗಳೆಂಬದಾಗಿ ಹೇಳಲ್ಪಡುವುದು. ಇಂತಹ ವಿಷಯಗಳನ್ನು ಇಂದ್ರಿಯ

ಗಳು ಗ್ರಹಿಸಿ ಮನಸ್ಸಿನಲ್ಲಿ ಶೇರಿಸುವುದು, ಮನಸ್ಸವುಗಳನ್ನು ಬುದ್ಧಿ ಯಲ್ಲಿ ಶೇರಿಸುವುದು, ಆ ಬುದ್ಧಿಯು ತನ್ನಲ್ಲಿ ಸೇರಿರುವ ವಿಷಯಗಳ ನ್ನು ತನ್ನ ಸಮೀಪದಲ್ಲಿರುವ ದೇಹಾಭಿಮಾನಿಯಾದ ಜೀವನಲ್ಲಿ ಸೇರಿ ಸುವುದು. ಆ ಜೀವನು ಆ ವಿಷಯಗಳನ್ನು ಗ್ರಹಿಸುವುದರಿಂದ ವಿಷ ಯಗಳಿಂದುಂಟಾಗುವ ಸುಖದುಃಖಾದಿ ದ್ವಂದ್ವಗಳಂ ಹೊಂದುವನು. ಜೀವನು ಸುಖದುಃಖಾದಿಗಳನ್ನು ಗ್ರಹಿಸಿರುವವರೆಗೂ ಜ್ಞಾನನಿಷ್ಠೆಗೆ ಯೋಗ್ಯನಾಗಲಾರನು. ಆದುದರಿಂದ ಬಾಹ್ಯವಾದ ವಿಷಯಗಳನ್ನು ಬಾಹ್ಯಸ್ಥಾನದಿಂದ ತನ್ನ ಒಳಗೆ ಸೇರಿಸಲು ಅವಕಾಶವನ್ನುಂಟು ಮಾಡದೆ ಹೊರಗೆ ಅತ್ಯಂತ ದೂರದಲ್ಲಿಯೇ ವಿಷಯಗಳನ್ನು ಬಿಟ್ಟಿರ ಬೇಕೆಂಬದಾಗಿ "ಸ್ಪರ್ಶಾನ್ಕೃತ್ವಾ ಬಹಿರ್ಬಾಹ್ಯಾನ್" ಎಂಬ ಪದಗ ಳಿಂದ ಹೇಳಲ್ಪಟ್ಟಿತು. ಜ್ಞಾನಿಯಾದವನು ವಿಷಯ ಸಾಮೀಪ್ಯ ದಿಂದ ಮನಶ್ಚಾಂಚಲ್ಯವನ್ನು ಹೊಂದಲಾರನು. ಯೋಗಾಭ್ಯಾಸಿ ಯಾದವನಿಗೆ ವಿಷಯ ಸಾಮೀಪ್ಯವೂ ಅತ್ಯಂತ ಬಾಧಕವಾದುದರಿಂದ ವಿಷಯಗಳನ್ನು ಸಾಧನಪರನಾಗಿರುವವನು ದೂರಸ್ಥವಾಗಿ ಮಾಡ ಬೇಕು. ಯೋಗಾಭ್ಯಾಸಿಯಾದವನು ವಿಷಯಾನುಭವಗಳನ್ನು ನಿವೃ ತ್ತಿಸಿಕೊಳ್ಳುವ ಉಪಾಯವಿಶೇಷವು ಶ್ಲೋಕದಲ್ಲಿ ಹೇಳಲ್ಪಟ್ಟಿರುವುದು. ಯಾವವು ವಿಷಯಗಳನ್ನು ತನ್ನ ಸಮೀಪಕ್ಕೆ ಸೇರಿಸುವುವೋ ಅಂಥಾ ಬುದ್ಧಿ, ಮನ, ಇಂದ್ರಿಯಗಳನ್ನು ಮೊದಲು ಸ್ವಾಧೀನಪಡಿಸಿಕೊಳ್ಳ ಬೇಕು. ಇವುಗಳಲ್ಲಿ ಮೊದಲು ಸ್ವಾಧೀನಪಡಿಸಿಕೊಳ್ಳತಕ್ಕದು ಯಾವ ವದೆಂದರೆ ಪ್ರಥಮದಲ್ಲಿ ಇಂದ್ರಿಯಗಳು ವಿಷಯಗಳನ್ನು ಗ್ರಹಿಸುವು ದರಿಂದ ಇಂದ್ರಿಯಗಳನ್ನು ಮೊದಲು ಅಭ್ಯಾಸದಿಂದ ಸ್ವಾಧೀನ ಪಡಿ ಸಿಕೊಂಡು ಅನಂತರದಲ್ಲಿ ಮನಸ್ಸನ್ನು, ತದನಂತರದಲ್ಲಿ ಬುದ್ಧಿಯ ನ್ನೂ, ಸ್ವಾಧೀನಪಡಿಸಿಕೊಳ್ಳಬೇಕು. ಇವುಗಳಂ ಸ್ವಾಧೀನ ಪಡಿಸಿ ಕೊಂಡರೆ ಜೀವನಿಗೆ ಸುಖದುಃಖಾದಿ ವಿಕಾರಗಳುಂಟಾಗುವುದಕ್ಕೆ ಕಾ ರಣವೇ ಇಲ್ಲವು. ಇಂದ್ರಿಯಗಳಲ್ಲಿ ಪ್ರಧಾನಗಳಾದ ಕಣ್ಣುಗಳು, ಮೂಗು, ಬಾಯಿ, ಎಂಬಿವುಗಳನ್ನು ಸ್ವಾಧೀನಪಡಿಸಿಕೊಳ್ಳುವ ಮಾ ರ್ಗವಿಶೇಷವು ಶ್ಲೋಕದಲ್ಲಿ ಹೇಳಲ್ಪಟ್ಟಿರುವುದು. ("ಚಕ್ಷುಶ್ಚೈವಾಂತರೇ ಭ್ರುವೋಃ" ಈ ಪದಗಳ ಅರ್ಥವಂ (ಮ॥ ಸೂ॥) ವ್ಯಾಖ್ಯಾನದಲ್ಲಿ

ನೋಡಬಹುದು ) "ನಾಸಾಭ್ಯಂತರಚಾರಿಣೌ" ಪ್ರಾಣ ವಾಯುವು ಯಾವ ಪ್ರಕಾರವಾಗಿ ಹೊರಗೆ ಬರುವುದಿಲ್ಲವೊ ಅಪಾನವಾಯುವು ಯಾವ ಪ್ರಕಾರವಾಗಿ ಒಳಗೆ ಹೋಗಲಾರದೋ ಆ ಪ್ರಕಾರವಾಗಿ ಮಾಡಿ ಎಂದರೆ ಪ್ರಾಣಾಪಾನಗಳನ್ನು ಮಂದಗಳಾದ ಉಚ್ಛ್ವಾಸ ನಿಶ್ವಾಸಗತಿಗಳಿಂದ ನಾಸಾಮಧ್ಯದಲ್ಲಿಯೇ ಸಂಚರಿಸುವಂತೆ ಮಾಡಿ,ಎಂದರೆಪ್ರಾಣಾಪಾನ ವಾಯುವುಗಳ ಮಾರ್ಗವಾಗಿ ಮೂಗು ವಾಸನೆಯನ್ನು ಗ್ರಹಿಸುವುದರಿಂದ ಅಂತಹ ವಾಯುಗಳನ್ನು ಅತ್ಯಂತವಾಗಿ ಬಂಧಿಸಿದರೇ ಪ್ರಾಣಕ್ಕೆನೇ ಅಪಾಯ ವುಂಟಾಗುವುದರಿಂದಲೂ, ಸ್ವೇಚ್ಛೆಯಾಗಿ ಬಿಟ್ಟರೇ ಗಂಧರೂಪವಾದ ವಿಷಯಾನುಭವವು ಪ್ರಾಪ್ತವಾಗಿ ಅದರಿಂದ ಅನರ್ಥಕ್ಕೆ ಇವನು ಗುರಿಯಾಗಬೇಕಾಗಿರುವುದರಿಂದಲೂ ಅವುಗಳನ್ನು ಒಳಗೂ ಹೊರಗೂ ಸ್ವೇಚ್ಛೆಯಾಗಿ ಸಂಚಾರಮಾಡಿಸದಂತೆ ಮೂಗಿನಲ್ಲಿಯೇ ನಿರೋಧಿಸುವಂತೆಯೂಮಾಡಿ, ಮೌನವು ವಾಕ್ಕು ನಾಲಿಗೆ ಇವುಗಳ ಪ್ರವೃತ್ತಿಯನ್ನಾಟಂಕಪಡಿಸುವ ಕಾರಣಮೌನದಿಂದ ವಾಗ್ವ್ಯಾಪಾರ ನಿರೋಧವೂ, ಹೇಳಲ್ಪಟ್ಟಿತೆಂದರಿಯಬೇಕು.(ಮತ್ತು ದೃಷ್ಟಿಯನ್ನು ಭ್ರೂಮಧ್ಯಸ್ಥಾನದಲ್ಲಿ ನಿಲ್ಲಿಸುವ ವಿಷಯವಾಗಿ ಯೋಗಮಾರ್ತಾಂಡವೆಂಬ ಗ್ರಂಥದಲ್ಲಿ "ಭ್ರುವೋರನ್ತರ್ಗತಾದೃಷ್ಟಿರ್ಮುದ್ರಾಭವತಿಖೇಚರೀ | ನರೋಗೋ ಮರಣಂ ತಸ್ಯ ನನಿದ್ರಾ ಕ್ಷುತ್ತೃಷಾದಯಃ" (ಅ) ಭ್ರೂಮಧ್ಯಗತವಾದ ದೃಷ್ಟಿಯು ಖೇಚರೀಮುದ್ರೆಯನ್ನಲ್ಪಡುವುದು, ಅಂಥಾ ಮುದ್ರೆಯಲ್ಲಿ ರೋಗವು, ಮರಣವು, ನಿದ್ರೆಯು, ಹಸಿವು, ದಾಹವೇ ಮೊದಲಾದವುಗಳುಂಟಾಗುವುದಿಲ್ಲವೆಂಬದಾಗಿಹೇಳಲ್ಪಟ್ಟಿರುವುದು. ಮತ್ತು ಧ್ಯಾನಶೀಲನ ಪ್ರಕಾರವು "ಪರಾವೃತ್ತಂಚಿತ್ತಂ ಯದಿಭವತಿಬಾಹ್ಯ ವ್ಯವಹೃತೇ ರಸತ್ಯಾಯಾಸ್ಸತ್ಯಂ ಕಲಯತಿತದಾಭ್ಯಾಸವಶತಃ | ಕ್ಷುಧಾರ್ತಸ್ಸಂನಿಷ್ಠಃ ಕ್ಷಣಮನುಭವನ್ ಸ್ವಾಪ್ನಮಶನಂ ಮೃಷಾಮತ್ವಾಬೋಧೆ ಪುನರಪಿಚ ಭೋಕ್ತುಂಪ್ರಯತತೇ" (ಅ) ಮಿಥ್ಯಾಪ್ರಪಂಚ ವ್ಯವಹಾರದಿಂದ ಚಿತ್ತವು ತಿರುಗಿದ ಕಾಲದಲ್ಲಿ ಬ್ರಹ್ಮನಿಷ್ಠನು ಅಭ್ಯಾಸ ವಿಶೇಷದಿಂದ ಸತ್ಯವಾದ ಬ್ರಹ್ಮವಿಚಾರವಂ ಮಾಡುವನು. ಹಸಿವಿನಿಂದ ಪೀಡಿತನಾದವನು ತಾನು ಕೂತುಕೊಂಡಿರುವ ಸ್ಥಾನದಲ್ಲಿ ಕ್ಷಣಕಾಲವು ನಿದ್ರೆಯನ್ನನುಭವಿಸಿ

ಸ್ವಪ್ನದಲ್ಲಿ ತಾನು ಆಹಾರವಂ ತೆಗೆದುಕೊಂಡಂತೆ ಕಂಡರೂ ಪುನಃ ಜಾಗ್ರದವಸ್ಥೆಯು ಪ್ರಾಪ್ತವಾದಮೇಲೆ ಯಥಾರ್ಥವಾದ ಆಹಾರವಂ ಹೇಗೆ ಸ್ವೀಕರಿಸುವನೋ ಆರೀತಿಯಾಗಿ ಬ್ರಹ್ಮಜ್ಞಾನಿಯು ಪ್ರಪಂಚ ಮಿಥ್ಯಾತ್ವವನ್ನು ತಿಳಿದು ಸತ್ಯವಾದ ಸ್ವಸ್ವರೂಪಾನುಭವವಂ ಮಾಡುವನು. ಈ ಪ್ರಕರಣಕ್ಕೆ "ವ್ಯಾಪನ ಶೀಲನಾದ ಆತ್ಮನ ಅಭಿವ್ಯಕ್ತಿಸ್ಥಾನವು ಭ್ರೂಮಧ್ಯದಲ್ಲಿರುವುದು. ಮಹಾನುಭಾವರಾದ ಧ್ಯಾನಶೀಲರು ನೇತ್ರ (ಕಣ್ಣು) ಗಳನ್ನು ಆ ಭ್ರೂಮಧ್ಯಸ್ಥಾನದಲ್ಲಿ ನಿಲ್ಲಿಸಿ ಸರ್ವಕಾಲದಲ್ಲಿಯೂ ಪರಮಾತ್ಮನನ್ನು ಸಾಕ್ಷಾತ್ಕರಿಸುವರು. ಮತ್ತು ವಿವೇಕ ವಿಶೇಷದಿಂದ ಶ್ರೇಷ್ಠರಾದ ಬ್ರಹ್ಮನಿಷ್ಠರು ಪ್ರಪಂಚವೆಂಬ, ದೀರ್ಘಸ್ವಪ್ನವಂ ಬಿಟ್ಟು ಜಾಗ್ರದ್ದೆಶೆಯನ್ನು ಹೊಂದಿ ಸತ್ಯವಾದ ಪರಮಾತ್ಮೈಕ್ಯವನ್ನು ತಿಳಿದುಕೊಳ್ಳುವರು" ಎಂಬ ಅರ್ಥವಂ ಪ್ರತಿಪಾದಿಸುವ ಶ್ರುತಿವಾಕ್ಯವು ಆಧಾರವಾಗಿರುವುದು. ಧ್ಯಾನಾಭ್ಯಾಸದ ಕಾಲದಲ್ಲಿ ಸುಷುಮ್ನಾನಾಡೀಮಾರ್ಗವಾಗಿ ಭ್ರೂಮಧ್ಯಸ್ಥಾನಕ್ಕೆ ಸೇರಿಸಲ್ಪಟ್ಟ ದೃಷ್ಟಿಯಿಂದ ಸತ್ಯಬ್ರಹ್ಮ ಸ್ವರೂಪಾನುಭವವನ್ನು ಹೊಂದುವರು. ಲೋಕವ್ಯವಹಾರದಲ್ಲಿಯೂ ಬ್ರಹ್ಮವನ್ನು ಸಕಲ ಪದಾರ್ಥಗಳನ್ನಾಗಿ ನೋಡುವರೆಂದು ಮುಖ್ಯ ತಾತ್ಪರ್ಯವು. ಇಲ್ಲಿ ಸಂಗ್ರಹವಾಗಿ ವಿವರಿಸಲ್ಪಟ್ಟಿರುವುದು. ವಿಸ್ತಾರಾಂಶವನ್ನು ಗುರೂಪದೇಶಾದಿಗಳಿಂದ ತತ್ತದಧಿಕಾರಿಗಳು ತಿಳಿದುಕೊಳ್ಳಬಹುದು. ॥೨೮॥೨೮॥

(ರಾ॥ ಭಾ॥) ಈ ಪ್ರಕಾರವಾಗಿ ಉಪದೇಶಿಸಲ್ಪಟ್ಟ ಕರ್ಮಯೋಗವನ್ನು ಅದಕ್ಕೆ ಲಕ್ಷ್ಯವಾಗಿರುವ ಯೋಗದೊಡನೆ ಸೇರಿಸಿ ಉಪಸಂಹಾರಮಾಡುತ್ತಾನೆ. ಬಾಹ್ಯವಾದ ವಿಷಯಗಳೆಲ್ಲವನ್ನು ಪರಿತ್ಯಜಿಸಿ ಯೋಗಯೋಗ್ಯವಾದ ಆಸನದಲ್ಲಿರುತಾ ಯೆರಡುಕಣ್ಣುಗಳನ್ನು ಭ್ರೂಮಧ್ಯವಾದ ನಾಸಾಗ್ರಸ್ಥಾನದಲ್ಲಿಟ್ಟು ಮೂಗಿನ ಒಳಗೆ ಸಂಚರಿಸುತಲಿರುವ ಪ್ರಾಣಾಪಾನವಾಯುಗಳನ್ನು ಸಮವಾಗಿ ಮಾಡಿ ಎಂದರೇ ಒಳಗಿನಿಂದಲೂ ಹೊರಗಿನಿಂದಲೂ ಬರುವ ಉಚ್ಛ್ವಾಸ ನಿಶ್ವಾಸಗಳನ್ನು ಸಮಗತಿಯನ್ನಾಗಿ ಮಾಡಿ ಇಂದ್ರಿಯ ಮನೋಬುದ್ಧಿಗಳನ್ನು ಆತ್ಮಾವಲೋಕನದಲ್ಲಿ ಯಲ್ಲವೆ ಮತ್ತೊಂದುಕಡೆ ಹೋಗದಂತೆ ನಿರೋಧಿಸಿ ಕಾಮ ಕ್ರೋಧ ಭಯಗಳಂ ಪರಿತ್ಯಾಗವಮಾಡಿ ಮೋಕ್ಷವೇ ಗತಿ

ಎಂಬದಾಗಿ ನೆನೆಸಿಕೊಂಡು ಆತ್ಮ ದರ್ಶನವೇ ಮಾಡತಕ್ಕದ್ದೆಂಬದಾಗಿಯಾವನಿರುತ್ತಾನೋ ಅವನು ಸಿದ್ಧಿಯುಂಟಾಗುವುದಕ್ಕೆ ಪೂರ್ವದಲ್ಲಿಯೇ ಮುಕ್ತನೆನ್ನಲ್ಪಡುವನು. ‖೭೨‖೨೮‖

ಮೂ‖ ಭೋಕ್ತಾರಂ ಯಜ್ಞತಪಸಾಂ ಸರ್ವಲೋಕ
ಮಹೇಶ್ವರಂ | ಸುಹೃದಂ ಸರ್ವಭೂತಾನಾಂ ಜ್ಞಾತ್ವಾ
ಮಾಂ ಶಾಂತಿ ಮೃಚ್ಛತಿ ‖ ‖೨೯‖

ಇತಿ ಶ್ರೀ ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀ ಕೃಷ್ಣಾರ್ಜುನ ಸಂವಾದೇ ಕರ್ಮಸ
ನ್ನ್ಯಾಸೇ ಯೋಗೋ ನಾಮ ಪಂಚಮೋಽಧ್ಯಾಯಃ.

ಪ‖ ಭೋಕ್ತಾರಂ - ಯಜ್ಞತಪಸಾಂ - ಸರ್ವಲೋಕಮಹೇಶ್ವರಂ | ಸುಹೃದಂ- ಸರ್ವಭೂತಾನಾಂ- ಜ್ಞಾತ್ವಾ- ಮಾಂ-ಶಾಂತಿಂ- ಋಚ್ಛತಿ ‖

ಅ‖ ಯಜ್ಞತಪಸಾಂ- ಯಜ್ಞತಪಸ್ಸುಗಳ ಗಳನ್ನು, ಭೋಕ್ತಾರಂ- ಅನುಭವಿಸುವ, (ಅಥವಾ) ರಕ್ಷಿಸುವಂಥವನಾಗಿಯೂ, (ಸಂ) ಕರ್ತೃನಾಗಿಯೂ ದೇವತಾರೂಪಿಯಾಗಿಯೂ ಇದ್ದು ರಕ್ಷಿಸುತಲಿರುವಂಥವನಾಗಿಯೂ, ಸರ್ವಲೋಕಮಹೇಶ್ವರಂ - ಸಮಸ್ತಲೋಕಗಳಿಗೂ ಮಹೇಶ್ವರನಾಗಿಯೂ, ಸರ್ವಭೂತಾನಾಂಸುಹೃದಂ- ಸರ್ವಪ್ರಾಣಿಗಳಿಗೂ ಉಪಕಾರಿಯಾಗಿಯೂ ಇರುವ, ಮಾಂ- ನನ್ನನ್ನು, ಜ್ಞಾತ್ವಾ- ತಿಳಿದು, ಶಾಂತಿಂ- ಸುಖವನ್ನು, (ಸ್ವ ಮೋಕ್ಷವನ್ನು) ಋಚ್ಛತಿ- ಹೊಂದುತ್ತಾನೆ. ‖೨೯‖

(ಶಂ‖ ಭಾ‖) ಈ ಪ್ರಕಾರವಾಗಿ ನಿಶ್ಚಲ ಚಿತ್ತನಾದವನು ತಿಳಿದುಕೊಳ್ಳಬೇಕಾದದ್ದೇನಂದರೆ ಅದನ್ನು ಹೇಳುತ್ತಾನೆ. ಶಾಸ್ತ್ರಸಿದ್ಧಗಳಾದ ಯಜ್ಞಗಳಿಗೂ, ಸತ್ಯವ್ರತವೇ ಮೊದಲಾದ ತಪಸ್ಸುಗಳಿಗೂ, ಕರ್ತೃರೂಪದಿಂದಲೂ ದೇವತಾರೂಪದಿಂದಲೂ, ಭೋಕ್ತನಾಗಿಯೂ, ಸಕಲ ಲೋಕಗಳಿಗೂ ಸರ್ವೋತ್ತಮನಾದ ಪ್ರಭುವಾಗಿಯೂ ಸಕಲ ಪ್ರಾಣಿಗಳಿಗೂ ಪ್ರತ್ಯುಪಕಾರವನ್ನೆದುರುನೋಡದೆ ಉಪಕಾರ ಮಾಡುವಂತವನಾಗಿಯೂ, ಮತ್ತು ಸರ್ವಭೂತಗಳ ಹೃದಯದಲ್ಲಿರುವಂತವನಾಗಿಯೂ, ಸರ್ವ ಕರ್ಮಗಳಿಗೂ ಅಧಿಪತಿಯು ಸಕಲ ಬುದ್ಧಿವೃತ್ತಿಗಳಿಗೂ ಸಾಕ್ಷೀಭೂತನು ಆಗಿರುವ ನಾರಾಯಣನಾದ ನನ್ನನ್ನು

ತಿಳಿದವನು ಸಕಲ ಸಂಸಾರೋಪರತಿಯನ್ನು (ಮೋಕ್ಷವನ್ನು) ಹೊಂದುವನು. ... ... ||೨೯||

(ಆ|| ಗ||) "ಸರ್ವಲೋಕ ಮಹೇಶ್ವರಂ" ಎಂಬುವ ಪದದಿಂದ ಯಜ್ಞಗಳಿಗೂ ತಪಸ್ಸುಗಳಿಗೂ, ಭೋಕ್ತನಾದ ನಾರಾಯಣನು ಪ್ರಸಿದ್ಧಭೋಕ್ತನಿಗಿಂತಲೂ ಭಿನ್ನನೆಂದುಪದೇಶಿಸಿದನು. "ಸುಹೃದಂ,, ಎಂಬ ಪದದಿಂದ "ತತೋಽಹ್ಯಸ್ಯಬಂಧವಿಪರ್ಯಯೌ" (ಬ್ರಹ್ಮಸೂ ೩ನೇ ಅ|| ೨ನೇ ಪಾ|| ೫ನೇ ಸೂ) ಎಂಬ ನ್ಯಾಯದಿಂದ ನಾರಾಯಣನಿಗೆ ಸರ್ವಕರ್ಮಫಲ ದಾತೃತ್ವವು ತಿಳಿಸಲ್ಪಟ್ಟಿತು. ಮತ್ತು ಸರ್ವಲೋಕ ಮಹೇಶ್ವರನೆಂಬುವುದರಿಂದ ನಾರಾಯಣನು ಹಿರಣ್ಯಗರ್ಭಾದಿಗಳಿಗಿಂತಲೂ ಭಿನ್ನನೆಂದರಿಯಬೇಕು. ಪ್ರತ್ಯುಪಕಾರಾ ನಪೇಕ್ಷನಾಗಿ ಉಪಕಾರವಂ ಮಾಡುವಂತವನು ನಾರಾಯಣನೆಂಬುವುದರಿಂದ ಪ್ರತ್ಯುಪಕಾರಸಾಪೇಕ್ಷರಾಗಿ ಉಪಕಾರವಂ ಮಾಡುವ ಲೌಕಿಕ ಪ್ರಭುಗಳಗಿಂತಲೂ ನಾರಾಯಣನಿಗೆ ವೈಲಕ್ಷಣ್ಯವೇರ್ಪಡುವುದು. ಸರ್ವಭೂತಗಳಹೃದಯಗಳಲ್ಲಿ ರುವಂತವನೆಂಬುವುದರಿಂದ ಶ್ರೀಮನ್ನಾರಾಯಣನು ತಾಟಸ್ಥ್ಯವಂ ವಹಿಸಿದನಲ್ಲವೆಂಬ ಅರ್ಥವು ಸೂಚಿತವಾಯಿತು. ತಟಸ್ಥನಾಗಿದ್ದರೆ ಕರ್ಮಫಲಾನುಭವಪ್ರಸಕ್ತಿಯುಂಟಾಗುವುದಿಲ್ಲವೋ? ಎಂದರೆ ನಾರಾಯಣನು ಕರ್ಮಾಧ್ಯಕ್ಷನಾಗಿರುವುದರಿಂದ ಕರ್ಮಗಳೇನು, ಕರ್ಮಫಲಗಳೇನು, ಇವುಗಳ ಸಂಬಂಧ ಇವನಿಗಿರುವುದಿಲ್ಲವು, ಆದುದರಿಂದಲೇ ಇವನಿಗೆ ಬುದ್ಧಿಯೇನು, ಬುದ್ಧಿವೃತ್ತಿಗಳೇನು, ಇವುಗಳಸಂಬಂಧವು ವಾಸ್ತವವಾಗಿರುವುದಿಲ್ಲವೆಂದು ತೋರಿಸುವುದಕ್ಕಾಗಿ ಬುದ್ಧಿವೃತ್ತಿಗಳಿಗೆ ಸಾಕ್ಷಿಯಾಗಿರುವನೆಂದು ಹೇಳಿತು. ಈ ಪ್ರಕಾರವಾಗಿ ಪೂರ್ವೋಕ್ತವಿಶೇಷಣಗಳಿಂದೊಪ್ಪಿದ ನಾರಾಯಣನನ್ನು ಸ್ವಾತ್ಮನಾಗಿ ತಿಳಿದುಕೊಳ್ಳುವವನಿಗೆ ಮೋಕ್ಷರೂಪವಾದ ಫಲವು " ಜ್ಞಾತ್ವಾ ಮಾಂ ಶಾಂತಿಮೃಚ್ಛತಿ " ಎಂಬುವುದರಿಂದ ಹೇಳಲ್ಪಟ್ಟಿತು. ಇದರಿಂದ ಫಲಿತವಾದ ಅರ್ಥವ್ಯಾವದೆಂದರೆ! ಅಮುಖ್ಯಸನ್ಯಾಸಕ್ಕಿಂತಲೂ ಮುಖ್ಯಸನ್ಯಾಸವು ಶ್ರೇಷ್ಠವಾದದ್ದಾದುದರಿಂದ ಅಂತಹ ಮುಖ್ಯಸನ್ಯಾಸವುಳ್ಳವನಾಗಿಯೂ, ಚಿತ್ತಶುದ್ಧಿಯೇ ಮೊದಲಾದವುಗಳಿಂದ ಕೂಡಿದವನಾಗಿಯೂ, ಕಾಮಕ್ರೋಧೋದ್ಭವಗಳಾದ ವೇಗವನ್ನು ಇಲ್ಲಿಯೇ

ಸಹಿಸಲು ಶಕ್ತಿಯುಳ್ಳವನಾಗಿಯೂ, ಶಮದಮಾದಿಗಳುಳ್ಳವನಾಗಿಯೂ, ಯೋಗದಲ್ಲಧಿಕಾರವುಳ್ಳವನಾಗಿಯೂ, ತ್ವಂಪದಾರ್ಥಾಭಿಜ್ಞನಾಗಿಯೂ, ಪರಮಾತ್ಮನನ್ನು ಪ್ರತ್ಯಗಾತ್ಮನನ್ನಾಗಿ ತಿಳಿದುಕೊಳ್ಳುವಂತವನಾಗಿಯೂ ಇರುವಂತವನಿಗೆ ಮುಕ್ತಿ ಯುಂಟಾಗುವುದೆಂದು ಸಿದ್ಧವಾಯಿತು.॥ ... ... ... ॥೨೯॥

(ಮ॥ ಸೂ॥) " ಅನೇಕ ಸಾಧನಾಭ್ಯಾಸಾಪ್ಯಸ್ನಾಂ ಪರಿಣೇರಿತಂ। ಸ್ವಸ್ವರೂಪ ಪರಿಜ್ಞಾನಂ ಸರ್ವೇಷಾಂಮುಕ್ತಿಸಾಧನಂ"(ಅರ್ಥವು)ಅನೇಕಗಳಾದ ಸಾಧನಗಳ ಅಭ್ಯಾಸದಿಂದ ಪುಟ್ಟಿಯೂ ಶ್ರೀಕೃಷ್ಣನಿಂದು ಪದೇಶಿಸಲ್ಪಟ್ಟು ಇರುವ ಸ್ವಸ್ವರೂಪವನ್ನು ಸವಿಸ್ತಾರವಾಗಿ ತಿಳಿದುಕೊಳ್ಳುವುದೇ ಸರ್ವರಿಗೂ ಮೋಕ್ಷ ಸಾಧನ ವಾಗುವುದೆಂಬ ಪ್ರಮಾಣಾನುಸಾರವಾಗಿ; ಅರ್ಜುನನು ಪರಮಾತ್ಮನಾದ ಶ್ರೀಕೃಷ್ಣನಂ ಸದಾ ನೋಡುತಿದ್ದರೂ ಮುಕ್ತನಾಗದೇಹೋಗಲು ಕಾರಣವೇನೆಂದರೆ ಈ ಶ್ಲೋಕದ ನಾಲ್ಕನೇಪಾದದಲ್ಲಿ ಹೇಳಲ್ಪಟ್ಟಂತೆ ಪರಮಾತ್ಮರೂಪನಾದ ಕೃಷ್ಣನೇ ಸ್ವಾತ್ಮ ಎಂಬಜ್ಞಾನವಿಲ್ಲದಿರುವಿಕೆಯೇ ಕಾರಣವೆಂತಲೂ, ಆದುದರಿಂದ ಆತ್ಮಜ್ಞಾನವೇ ಮೋಕ್ಷಸಾಧನವೆಂತಲೂ ತಿಳಿದುಕೊಳ್ಳಬೇಕು.॥ ... ... ... ॥೨೯॥

(ರಾ॥ಭಾ॥) ನಿತ್ಯನೈಮಿತ್ತಿಕಕರ್ಮಗಳನ್ನೇ ಅಂಗವಾಗಿ ಉಳ್ಳದ್ದಾಗಿಯೂ, ಯೋಗವನ್ನೇ ಕೊನೆಯುಳ್ಳುಳ್ಳದ್ದಾಗಿಯೂ ಇರುವ ಕರ್ಮಯೋಗವನ್ನು ಸುಲಭವಾಗಿಪೊಂದುವಪ್ರಕಾರವು ಉಪದೇಶಿಸಲ್ಪಡುವುದು. ಯಜ್ಞತಪಸ್ಸುಗಳಿಗೆ ಭೋಕ್ತಾ ಆಗಿಯೂ " ಸಕಲರಾದ ಈಶ್ವರರುಗಳಿಗೂ ಶ್ರೇಷ್ಠನಾದ ಮಹೇಶ್ವರ" ನೆಂಬದಾಗಿ ಶ್ರುತಿಯಲ್ಲಿ ಹೇಳುವ ಪ್ರಕಾರವಿಂದ ಸರ್ವಲೋಕೇಶ್ವರರುಗಳಿಗೂ ಮಹೇಶ್ವರನಾಗಿಯೂ, ಸರ್ವ ಪ್ರಾಣಿಗಳಿಗೂ ಪ್ರಿಯಮಿತ್ರನಾಗಿಯೂ, ಇರುವ ; ನನ್ನನ್ನರಿತವನು ಕರ್ಮಯೋಗವನ್ನು ನನ್ನ ಆರಾಧನವೆಂಬದಾಗಿ ತಿಳಿದು ಅದರಲ್ಲಿಸುಖದಿಂದಪ್ರವರ್ತಿಸುವನು. ಸುಹೃತ್ತುಗಳ ಆರಾಧನದಲ್ಲಿ ಸರ್ವರೂಪ್ರವರ್ತಿಸುವುದು ಪ್ರಸಿದ್ಧವಾಗಿಯೇ ಇರುವುದು.॥ ॥೨೯॥

## ಶ್ರೀ ಅದ್ವೈತ ಸಿದ್ಧಾನು ಸಾರವಾದ
### ೫ನೇ ಅಧ್ಯಾಯದ ಸಂಗ್ರಹ ಶ್ಲೋಕವು.

---

ಶ್ಲೋ॥ ಜ್ಞಾನಂ ಸಂಪಾದ್ಯಸಮ್ಯಕ್ಕ್ರಮುಪರಮವತಃ
ಕರ್ಮಣೋಯಃ ಸಮಾಪ್ತಿಸ್ಸನ್ಯಾಸಃ ಕರ್ಮಯೋಗಸ್ಸ
ಯದನುಲಧಿಯುಃ ಕರ್ಮಕೌಶಲ್ಯಮಾಭ್ಯಾಂ । ಬ್ರಹ್ಮಣ್ಯಾ
ಧೀಯತೇ ಯತ್ಸುಕೃತತತಜುಷಃ ಕರ್ಮ ಸರ್ವೇಂದ್ರಿ
ಯೋತ್ಥಂ ಪ್ರಾಣಾಯಾಮೇನ ಚಿತ್ತಂ ವ್ರಜತಿ ಪರಪ
ದಂ ಪಂಚಮೇ ಪ್ರೋಕ್ತಮೇತತ್॥ ॥೫॥

ತಾ॥ ಸಂಪೂರ್ಣವಾದ ಜ್ಞಾನವು ಸಂಪ್ರಾಪ್ತವಾದಮೇಲೆ ಕ್ರಮಕ್ರಮವಾಗಿ ಸಕಲಕರ್ಮಗಳಂಬಿಡುವುದೇ ಸನ್ಯಾಸ ವೆನ್ನಲ್ಪಡುವುದು. ಫಲಾಪೇಕ್ಷೆಯಿಲ್ಲದೇ ಚಿತ್ತಶುದ್ಧ್ಯರ್ಥವಾಗಿ ಕರ್ಮಗಳನ್ನಾಚರಿಸುವುದು ಕರ್ಮಯೋಗವೆನ್ನಲ್ಪಡುವುದು. ಇಂತಹ ಸನ್ಯಾಸ ಕರ್ಮಯೋಗಗಳಿಂದಲೇ ಬ್ರಹ್ಮಜ್ಞಾನಿಯು ಸಮಸ್ತೇಂದ್ರಿಯವ್ಯಾಪಾರ ರೂಪಗಳಾದ ಕರ್ಮಗಳನ್ನು, ಪ್ರಾಣಾಯಾಮದಿಂದ ಚಿತ್ತವನ್ನು ಬ್ರಹ್ಮನಲ್ಲಿ ಲಯಿಸುವಂತೆ ಮಾಡುವನೋ ಅಂತವನು ಬ್ರಹ್ಮಸಾಯುಜ್ಯವನ್ನು ಹೊಂದುವನೆಂಬ ಅರ್ಥವು ಈ ಅಯಿದನೇ ಅಧ್ಯಾಯದಲ್ಲಿಹೇಳಲ್ಪಟ್ಟಿತು.॥೫॥

---

## ಶ್ರೀವಿಶಿಷ್ಟಾದ್ವೈತ ಸಿದ್ಧಾಂತಾನು ಸಾರಿಯಾದ
### ೫ನೇ ಅಧ್ಯಾಯದ ಸಂಗ್ರಹ ಶ್ಲೋಕವು.

---

ಶ್ಲೋ॥ ಕರ್ಮಯೋಗಸ್ಯ ಸೌಕರ್ಯಂ ಶೈಘ್ರ್ಯಂ ಕಾಶ್ಚನ
ತದ್ವಿಧಾಃ । ಬ್ರಹ್ಮಜ್ಞಾನಪ್ರಕಾರಶ್ಚ ಪಞ್ಚಮಾಧ್ಯಾ
ಯ ಉಚ್ಯತೇ॥ ... ... ... ॥೫॥

ತಾ॥ ಕರ್ಮಯೋಗವು ಸುಕರವಾಗಿ ಅನುಷ್ಠಿಸಲ್ಪಗತಕ್ಕದ್ದೆಂತಲೂ,

ಶೀಘ್ರದಲ್ಲಿಯೇ ಅದು ಸಿದ್ಧಿಸುವುದೆಂತಲೂ, ಮತ್ತು ಅದಕ್ಕೆ ಕೆಲವು ಭೇದಗಳೂ, ಬ್ರಹ್ಮಜ್ಞಾನಪ್ರಕಾರವೂ ಈ ಅಯಿದನೇ ಅಧ್ಯಾಯದಲ್ಲಿ ನಿರೂಪಿತವಾಯಿತು.॥ ... ... ...

ಇತಿ ಪಂಚಮಾಧ್ಯಾಯ ಸಂಗ್ರಹಶ್ಲೋಕಃ.

## ಶ್ರೀಮನ್ನಿಗಮಾನ್ತ ಮಹಾದೇಶಿಕರನುಗ್ರಹಿಸಿರುವ ಶ್ರೀಮದ್ಗೀತಾರ್ಥ ಸಂಗ್ರಹದಲ್ಲಿ ಪಂಚಮಾಧ್ಯಾಯ ಸಂಗ್ರಹ ಗಾಥೆಯು.

ಕಣ್ಡೊಳತಞ್ಗರುಮಮುಯಿರ್ಕಾಟ್ಟಿಡುಕುತಲುಮ್,
ಮಣ್ಡಿಯತರ್ಪಡಿಯಿರ್ಮನಜ್ಕೊಳ್ಳುಂವಿಶೇಷಕಳುಮ್,
ಕಣ್ಡಿರಿಯಾಉಯಿರ್ಕ್ಕಾಣಲುತ್ತನಿನ್ನ್ರವುಕಳುಮ್,
ವಣ್ಡುವರೈತ್ತುವರೈಯುಮ್ಪನ್ನಾಪರ್ವೈನ್ದನುಕ್ಕೇ.॥೭॥

ಟೀ॥ "ಕರ್ಮಯೋಗಸ್ಯ ಸೌಕರ್ಯಂ" ಎಂಬ ಸಂಗ್ರಹಶ್ಲೋಕಪ್ರಕಾರವಾಗಿ ಪಂಚಮಾಧ್ಯಾಯಾರ್ಥಗಳನ್ನೊಂದುಶ್ಲೋಕದಿಂದ ಸಂಗ್ರಹಿಸಿ ಹೇಳುತ್ತಾರೆ. ವಣ್- ಸುಂದರವಾದ, ತುವರ್ - ದ್ವಾರಕಾನಗರಕ್ಕೆ, ಈರ್ರ್- ಪ್ರಭುವಾದ ಶ್ರೀಕೃಷ್ಣನು, ಕಣ್ಡು - ತಿಳಿದು, ಎಳಿದಾಂ- ಸುಖವಾಗುವುದು, ಶಾಸ್ತ್ರಮುಖದಿಂದ ಕರ್ಮಯೋಗಾನುಷ್ಠಾನಪ್ರಕಾರವನ್ನು ತಿಳಿದುಕೊಂಡರೆ ಅನುಷ್ಠಿಸಲು ಸುಕರವಾಗುವುದೆಂದಭಿಪ್ರಾಯವು; ಆದರಿಂದ "ಕರ್ಮಯೋಗಸ್ಯ ಸೌಕರ್ಯಂ" ಎಂಬ ಸಂಗ್ರಹಶ್ಲೋಕಾರ್ಥವು ವಿವೃತವಾಯಿತು. ಕರುಮಂ -ಕರ್ಮಯೋಗವು,ಉಯಿರ್- ಆತ್ಮಸ್ವರೂಪವನ್ನು, ಕಾಟ್ಟಿಡುಕುತಲುಂ - ಅವಲೋಕನವಂಪಾದಿಸುವತ್ವರೆಯನ್ನು, "ಯೋಗಯುಕ್ತೋಮುನಿರ್ಬ್ರಹ್ಮ ನಚಿರೇಣಾಧಿಗಚ್ಛತಿ"ಎಂಬದಾಗಿ ದರ್ಶಿತವಾದ ಕರ್ಮಯೋಗಕ್ಕೆ ಆತ್ಮಾವಲೋಕನ ನಿಷ್ಪಾದಕತ್ವವೆಂಬಶೈಘ್ರ್ಯವನ್ನೆಂದು ತಾತ್ಪರ್ಯವು;ಆದರಿಂದ "ಶೈಘ್ರ್ಯಂ"ಎಂಬ ಸಂಗ್ರಹಶ್ಲೋಕಪದವುವ್ಯಾಖ್ಯಾತವಾಯಿತು. ಅದರ್ಪಡಿಯಿರ್-ಆ ಯೋಗಪ್ರಕಾರಗಳಲ್ಲಿ,ಮಂಡಿ- ಅತ್ಯಂತಾಸಕ್ತನಾಗಿ,

ಮನಮ್- ಮನಸ್ಸನ್ನು, ಕ್ಷೆತ್ತಿರಾಂವರಿಕ್ಕೈಕಳುಮ್ - ಇರುವ ಕ್ರಿಯೆಗಳನ್ನು; ಇದರಿಂದ "ಕಾಕ್ಷ್ಯನ ತತ್ವವಿಧಾಃ" ಎಂಬ ಸಂಗ್ರಹಶ್ಲೋಕಘಟಿತವಾದ ಪದದ ತಾತ್ಪರ್ಯವು ಪ್ರಕಾಶಿತವಾಯಿತು; ಕಣ್ಡುರಿಯಾ-ಯಾವಾಗಲೂ ದರ್ಶನವಿಷಯವಾಗದೇ ಇರುವ, ಉಯಿರ್ಯೆ - ಆತ್ಮವನ್ನು, ಸಾಕ್ಷಾತ್ಕರಿಸಲಶಕ್ಯವಾದ ಪರಿಶುದ್ಧಾತ್ಮಸ್ವರೂಪವನ್ನೆಂದರ್ಥವು. "ಉಣ್ಡುರಿಯಾ" ಎಂಬದಾಗಿ ಪಾಠವಾದರೆ "ಯಂಲಬ್ಧ್ವಾ ಚಾಪರಂ ಲಾಭಂ ಮನ್ಯತೇನಾಧಿಕಂ ತತಃ" ಎಂಬುವ ಪ್ರಕಾರವಾಗಿ ನಿರತಿಶಯ ಸುಖರೂಪವಾಗಿದ್ದರೂ ಯಾವಾಗಲೂ ಆ ರೀತಿಯಾಗಿ ಭಗವದ್ವಿಷಯವಲ್ಲದೇ ಇರುವ, ಇದರಿಂದ ಸಂಗ್ರಹಶ್ಲೋಕದಲ್ಲಿರುವ ಬ್ರಹ್ಮಶಬ್ದವು ಬ್ರಹ್ಮಸಮಾನಾಕಾರನಾದ ಪರಿಶುದ್ಧಾತ್ಮಸ್ವರೂಪಪರವೆಂದು ದರ್ಶಿತವಾಯಿತು. ಕಾಣಲ್_ ನೋಡುವಿಕೆಯನ್ನು, ಉ(ಱ್ಱ)ತ್ತ- ಹೊಂದಿರುವ, ನಿನೈವುಕಳುಂ- ಜ್ಞಾನಗಳನ್ನು; ಇಲ್ಲಿ "ಕಾಣಲ್" ಎಂಬ ಪದವು "ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ" (೫॥ ೧೮॥) ಇತ್ಯಾದಿಗಳಲ್ಲಿ ಹೇಳಿರುವ ಸಮದರ್ಶನಪರ್ಯಂತವಾದ ಪರಿಪಾಕವಂ ಹೊಂದಿರುವ ಜ್ಞಾನಪರವಾಗಿರುವುದು. "ನ ಪ್ರಹೃಷ್ಯೇತ್ಪ್ರಿಯಂ ಪ್ರಾಪ್ಯ," (೫॥೨೦॥) ಇತ್ಯಾದಿಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವ ಸಮದರ್ಶನ ವಿಪಾಕಕ್ಕೆ ಸಾಧನಗಳಾದ ಅನುಸಂಧಾನವನ್ನೂ ಎಂದು ಫಲಿತಾರ್ಥವು; ಇದರಿಂದ "ಬ್ರಹ್ಮಜ್ಞಾನಪ್ರಕಾರಶ್ಚ" ಎಂಬ ಪದವು ಪ್ರಪಂಚಿತವಾಯಿತು. ಪಾರ್ತನ್- ಇಂದ್ರನ, ಮೈಂದನುಕ್ಕು, ಕುಮಾರನಾದ ಅರ್ಜುನನಿಗೆ, ಇಯಂಬಿನನ್ - ಈ ಐದನೇ ಅಧ್ಯಾಯದಲ್ಲಿ ಉಪದೇಶಿಸಿದನು, .. ... ... *

ಈ ಪ್ರಕಾರವಾಗಿ ಶ್ರೀಮದ್ಗೀತಾರ್ಥಸಾರವೆಂಬ ಕರ್ನಾಟಕ ಟೀಕಾಯಾಂ ಪಂಚಮೋಧ್ಯಾಯಃ.

## ಶ್ರೀಭಗವದ್ಗೀತೆಯೊಳು ಆತ್ಮಸಂಯಮ ಯೋಗವೆಂಬ ಷಷ್ಠಾಧ್ಯಾಯವು.

(ಶಂ॥ ಭಾ॥) ಅತೀತಗಳಾದ ಅಧ್ಯಾಯಗಳಲ್ಲಿ ಕಡೇ ಅಧ್ಯಾಯದ (೫ನೇ ಅಧ್ಯಾಯದ) ಕೊನೆಯಲ್ಲಿ ಆತ್ಮಜ್ಞಾನಕ್ಕೆ ಅಂತರಂಗ (ಮುಖ್ಯ

ಸಾಧನ) ವೆಂಬದಾಗಿ ಹೇಳಲ್ಪಡುವ ಧ್ಯಾನಯೋಗಕ್ಕೆ ಸೂತ್ರಭೂತಗಳಾಗಿರುವ (ಅನೇಕಾರ್ಥಗರ್ಭಿತವಾದ ಒಂದಂಶವನ್ನು ಸಾಧ್ಯವಾದ ಮಟ್ಟಿಗೂ ಸಂಗ್ರಹಿಸಿ ನಿರ್ದ್ದೋಷವಾಗಿ ಹೇಳುವ ವಾಕ್ಯಗಳನ್ನು ಸೂತ್ರಗಳೆನ್ನುವರು) “ಸ್ಪರ್ಶಾನ್ ಕೃತ್ವಾ ಬಹಿಃ” (೫॥ ೨೭॥) ಇತ್ಯಾದಿಗಳಾದ ಮೂರುಶ್ಲೋಕಗಳು ಉಪದೇಶಿಸಲ್ಪಟ್ಟವು ಸನ್ನ್ಯಾಸಕ್ಕೆ ಕಾರಣವಾದ ಕರ್ಮಯೋಗವು ಯೆಷ್ಟುವರೆಗೂ ಅನುಷ್ಠಿಸಲ್ಪಡತಕ್ಕದ್ದೋ ಅದಂ ತಿಳಿಯು ಪಡಿಸುವುದಕ್ಕೂ, ಧ್ಯಾನಯೋಗವನ್ನು ಸಾಂಗವಾಗಿ ತಿಳಿಯಪಡಿಸುವುದಕ್ಕೂ, ಈ ಆರನೇ ಅಧ್ಯಾಯವು ಪ್ರವೃತ್ತವಾಯಿತು- ಧ್ಯಾನಯೋಗಕ್ಕೆ ಬಹಿರಂಗ ಸಾಧನವು ಕರ್ಮವೆಂಬದಾಗಿ ನೆನೆಸಿ ಧ್ಯಾನಯೋಗವೆಂಬ ಸೋಪಾನವನ್ನು ಹತ್ತಿಕೊಳ್ಳುವುದಕ್ಕಾಗಿ ತಕ್ಕಸಾಮರ್ಥ್ಯ ವುಂಟಾಗುವವರೆಗೂ ಕರ್ಮಾಧಿಕಾರಿಯಾದ ಗೃಹಸ್ಥನು ಶ್ರೌತಾದಿ ಕರ್ಮಗಳನ್ನು ಮಾಡಬೇಕೆಂಬ ಅಭಿಪ್ರಾಯದಿಂದ ಅಂಥಾ ಕರ್ಮಗಳನ್ನು ಮೊದಲು ಸ್ತೋತ್ರಮಾಡುತ್ತಾನೆ.

(ಪೂರ್ವಪಕ್ಷಿಯ ಪ್ರಶ್ನವು) ಜೀವಿಸಿರುವ ವರೆಗೂ ಅಗ್ನಿಹೋತ್ರವಂ ಮಾಡಬೇಕೆಂಬ ಶ್ರುತಿ ಪ್ರಕಾರವಾಗಿ ಗೃಹಸ್ಥನು ಜೀವಿಸಿರುವ ವರೆಗೂ ಕರ್ಮಗಳನ್ನಾಚರಿಸಬೇಕಲ್ಲದೆ ಧ್ಯಾನ ಯೋಗಾಭ್ಯಾಸಾರಂಭದ ವರೆಗೂ ಕರ್ಮಗಳನ್ನಾಚರಿಸಬೇಕೆಂಬ ಅವಧಿಯನ್ನೇರ್ಪಡಿಸಲು ಕಾರಣವೇನು ?

ಸಿದ್ಧಾಂತಿಗಳ ವುತ್ತರ—ಅಂತಹ ಅವಧಿಯಿಂದ ಪ್ರಯೋಜನವಿಲ್ಲವೆಂಬದಾಗಿ ಹೇಳಕೂಡದು. ಏತಕ್ಕೆಂದರೆ “ಆರುರುಕ್ಷೋರ್ಮ್ಮುನೇರ್ಯ್ಯೋಗಂ ಕರ್ಮಕಾರಣಮುಚ್ಯತೇ । ಯೋಗಾರೂಢಸ್ಯತಸ್ಯೈವ ಶಮಃ ಕಾರಣಮುಚ್ಯತೆ” (೬॥ ೩॥) ಎಂಬದಾಗಿ ಆರುರುಕ್ಷುವಾದವನಿಗೆ ಕರ್ಮವೂ ಆರೂಢನಿಗೆ ಶಮವೂ (ಸರ್ವಕರ್ಮನಿವೃತ್ತಿಯೂ) ವಿಭಾಗಿಸಿ ಹೇಳಿರುತ್ತದೆ. ನಿಮ್ಮ ಅಭಿಪ್ರಾಯಾನುಸಾರವಾಗಿ ಅವಧಿಯನ್ನು ಅಂಗೀಕರಿಸದೇ ಹೋದರೆ ಆರುರುಕ್ಷುವಿಗೂ ಕರ್ಮಶಮಗಳೂ, ಆರೂಢನಿಗೂ ಕರ್ಮಶಮಗಳೂ ಅಪೇಕ್ಷಿತವಾದೀತು. ಆಪ್ರಕಾರವಾಗಿ ಇಲ್ಲಿ ಹೇಳಲಿಲ್ಲವಾದುದರಿಂದ ಆರುರುಕ್ಷುವಾದವನು ಧ್ಯಾನಯೋಗಾರಂಭದ ವರೆಗೂ ಕರ್ಮಗಳನ್ನಾಚರಿಸುತಲಿರಬೇಕೆಂಬ ಯೆ

ಟ್ಟಿಯನ್ನು ಸ್ವೀಕರಿಸಬೇಕು, ಆ ರುರುಕ್ಷು, ಆರೂಢ, ನೆಂಬೀ ಇಬ್ಬ ರಿಗೂಕರ್ಮಶಮಗಳಪೇಕ್ಷಿತಗಳೆಂಬದಾಗಿ ಭಗವದಭಿಪ್ರಾಯವಿರುವಪ ಕ್ಷದಲ್ಲಿಆರುರುಕ್ಷುವಿಗೂಆರೂಢನಿಗೂ ಎಂಬದಾಗಿ ಶಮಕರ್ಮವಿಷಯ ಕವಾದ ಭೇದದಿಂದ (ಆರುರುಕ್ಷುವಿನಲ್ಲಿ ಆರೋಹಣೇಚ್ಛಾರೂಪವಾದ ವಿಶೇಷಣವೂ ಆರೂಢನಲ್ಲಿ ಆರೋಹಣೇಚ್ಛೆಗೆ ವಿಷಯವಾದ ಆರೋಹ ಣವೆಂಬ ವಿಶೇಷಣವೂ ಇರುವುದು) ವಿಶೇಷಣವೂ ; ಆ ರುರುಕ್ಷುವಿಗೆ ಕರ್ಮವು ಕಾರಣವೆಂತಲೂ, ಆರೂಢನಿಗೆ ಶಮವು ಕಾರಣವೆಂತಲೂ, ಹೇಳಿದ ವಿಭಾಗ ಕರಣವೂ; ವ್ಯರ್ಥವಾಗುವುದು.

ಪೂ॥ ಪ್ರ॥ ಬ್ರಹ್ಮಚರ್ಯಗಾರ್ಹಸ್ಥ್ಯವಾನಪ್ರಸ್ಥ ಸನ್ಯಾಸಗಳೆಂಬ ನಾಲ್ಕು ಆಶ್ರಮಗಳುಳ್ಳವರಲ್ಲಿ ಕೆಲವರು ಧ್ಯಾನಯೋಗಾಭ್ಯಾಸಾವಸ್ಥೆ ಯನ್ನು ಹೊಂದಬೇಕೆಂಬ ಅಪೇಕ್ಷೆಯುಳ್ಳವರಾಗಿಯೂ, (ಆ ರುರುಕ್ಷು ಗಳಾಗಿಯೂ) ಕೆಲವರಂತಹಅವಸ್ಥೆಯನ್ನು ಹೊಂದಿದವರಾಗಿಯೂ, (ಆರೂಢರಾಗಿಯೂ) ಮತ್ತು ಕೆಲವರು ಈ ಯೆರಡವಸ್ಥೆಗಳನ್ನು ಹೊಂದದವರಾಗಿಯೂಇರುವರು. ಈ ಪ್ರಕಾರದಿಂದ ತ್ರಿವಿಧರಾದ ಗೃ ಹಸ್ಥರಲ್ಲಿ ಆರುರುಕ್ಷುವನ್ನೂ, ಆರೂಢನನ್ನು ಕುರಿತು ಈ ವಿಭಾಗಕರ ಣವಲ್ಲದೆ ಕೆಲವುಕಾಲಪರ್ಯಂತವು ಆ ರುರುಕ್ಷುವಾಗಿದ್ದು ಕರ್ಮಗಳ ನ್ನಾಚರಿಸಬೇಕೆಂತಲೂ, ಅಂತವನೇ ಆರೂಢನಾದಮೇಲೆ ಕರ್ಮಗಳಂ ಬಿಡಬೇಕೆಂತಲೂ, ಅಭಿಪ್ರಾಯವಲ್ಲವು ?

(ಸಿ॥ ಉ॥) ಆ ರೀತಿಯಾಗಿ ಹೇಳಕೂಡದು. ಏತಕ್ಕೆಂದರೆ ? "ತಸ್ಯೈವ" (೬॥೩॥) ಅವನಿಗೇನೆ ಎಂಬದಾಗಿ ಹೇಳುವುದರಿಂ ದಲೂ, "ಯೋಗಾರೂಢಸ್ಯ" (೬॥೩॥) ಎಂಬದಾಗಿ ಯೋಗ ಶಬ್ದ ವನ್ನು ಪುನಃ ಹೇಳಿರುವುದರಿಂದಲೂ, ಯೋಗಾಭ್ಯಾಸವು ಮಾಡ ಬೇಕಾಗಿರುವುದೆಂಬದಾಗಿ ಮೊದಲಪೇಕ್ಷಿಸುವ ಆ ರುರುಕ್ಷುವು ಯಾವ ವನೋ ಅಂಥಾ ಯೋಗಾಭ್ಯಾಸಿಯಾದ ಆರೂಢನಿಗೆ ಶಮವು, (ಸರ್ವ ಕರ್ಮನಿವೃತ್ತಿಯೂ, ) ಯೋಗಫಲವಾಗಿ ಹೇಳಲ್ಪಟ್ಟಿರುವುದರಿಂದ ಅಂತಹ ಯೋಗಾಭ್ಯಾಸ ಪರ್ಯಂತವಲ್ಲದೆ ಜೀವಿಸಿರುವವರೆಗೂ ಕರ್ಮ ವನ್ನು ಮಾಡಬೇಕೆಂಬುವುದು ಇಂತಹ ಸನ್ಯಾಸಿ ವಿಷಯವಲ್ಲವೆಂಬ ದಾಗಿ ತಿಳಿದುಕೊಳ್ಳಬೇಕು. ಮತ್ತು "ಶುಚೇನಾಂಶ್ರೀಮತಾಂಗೇಹೇ

ಯೋಗಭ್ರಷ್ಟೋಽಭಿಜಾಯತೇ" ( ೬॥ ೪೧ ) ಎಂಬುವ ಶ್ಲೋಕದಲ್ಲಿ ಯೋಗಾಭ್ಯಾಸಿಯಾದ ಸನ್ಯಾಸಿಯು ಯೋಗಸಿದ್ಧಿಯನ್ನು ಹೊಂದುವುದಕ್ಕೆ ಪೂರ್ವವೇ ಮರಣವಂ ಹೊಂದಿದರೆ ಅಂತಹ ಯೋಗಭ್ರಷ್ಟನು ವೇದೋಕ್ತಪ್ರಕಾರವಾಗಿ ಸದಾಚಾರ ಸಂಪನ್ನರಾದ ಧನಿಕರಾದವರ ಗೃಹದಲ್ಲಿ ಪುನಃ ಹುಟ್ಟಿ ಯೋಗಾಭ್ಯಾಸವನ್ನು ಪೂರಣ ಮಾಡಿಕೊಂಡು ಸಿದ್ಧಿ ಹೊಂದುವ ನೆಂಬುದಾಗಿ ಹೇಳಿರುವುದರಿಂದ ಆ ರೂಪನು ಗೃಹಸ್ಥನೆಂಬದಾಗಿ ಹೇಳಲು ಸಾಧ್ಯವಿಲ್ಲವು.

(ಪೂ॥ ಪ್ರ॥ ) ಆದರೆ ಯೋಗಭ್ರಷ್ಟಶಬ್ದದಿಂದ ಹೇಳಲ್ಪಟ್ಟವನು ಗೃಹಸ್ಥನೇ ಆಗಿರುವುದರಿಂದಲೂ, ಈ ಆರನೇ ಅಧ್ಯಾಯದಲ್ಲಿ ಆಗೃಹಸ್ಥನಿಗೇನೆ ಯೋಗವು ವಿಧಿಸಲ್ಪಟ್ಟಿರುವುದರಿಂದಲೂ, ಯೋಗಾರೋಹಣಯೋಗ್ಯತೆಯುಂಟಾಗಿದ್ದರೂ ಜೀವಿಸಿರುವವರೆಗೂ ಕರ್ಮಗಳನ್ನು ಮಾಡಿಯೇ ತೀರಬೇಕಾಗಿರುವುದುಃ.

(ಸಿ॥ಉ॥) ಆಪ್ರಕಾರ ಹೇಳುವುದು ಯುಕ್ತವಲ್ಲವು; ಎತಕ್ಕೆಂದರೆ! ಯೋಗಭ್ರಷ್ಟಶಬ್ದದಿಂದ ಗೃಹಸ್ಥನೇ ಹೇಳಲ್ಪಟ್ಟಿರುವನೆಂತಲೂ, ಈ ಆರನೇ ಅಧ್ಯಾಯದಲ್ಲಿ ಗೃಹಸ್ಥನಿಗೇನೆ ಯೋಗವು ವಿಧಿಸಲ್ಪಟ್ಟಿರುವುದೆಂತಲೂ, ಅಂಗೀಕರಿಸುವ ಪಕ್ಷದಲ್ಲಿ ಆ ಗೃಹಸ್ಥನು ಯೋಗಭ್ರಷ್ಟನಾದರೂ ಕರ್ಮಫಲವನ್ನು ಹೊಂದುತ್ತಾನಾದುದರಿಂದ ಆ ಗೃಹಸ್ಥನಿಗೆ ನಾಶವುಂಟಾಗುವುದೋ ಯೇನೋ ಯೆಂಬದಾಗಿ ನೆನೆಸಿ ಅರ್ಜುನನು ಪ್ರಶ್ನವಂ ಗೈಯುವುದು ಯೆಷ್ಟುಮಟ್ಟಿಗೂ ಸಂಗತವಾಗುವುದಿಲ್ಲವಾದುದರಿಂದ ಯೋಗಭ್ರಷ್ಟಶಬ್ದದಿಂದ ಗೃಹಸ್ಥನು ಹೇಳಲ್ಪಟ್ಟಿರುವನೆಂತಲೂ ಗೃಹಸ್ಥನಿಗೇನೇ ಯೋಗವು ವಿಧಿಸಲ್ಪಟ್ಟಿರುವುದೆಂತಲೂ, ಜೀವಿಸಿರುವವರೆಗೂ ಕರ್ಮವನ್ನು ಮಾಡಲೇಬೇಕೆಂಬದಾಗಿಯೂ ಹೇಳುವುದು ಯುಕ್ತವಲ್ಲವು. ಮತ್ತು ಮೋಕ್ಷವು ನಿತ್ಯವಾದುದರಿಂದ ಕಾಮ್ಯಕರ್ಮವು ನಿತ್ಯಕರ್ಮವೂ, ಮೋಕ್ಷಪ್ರದವಾಗದಿದ್ದರೂ ಆಚರಿಸಲ್ಪಟ್ಟ ಕಾಮ್ಯಕರ್ಮವು ನಿಷ್ಕಾಮವಾಗಿ ಆಚರಿಸಲ್ಪಟ್ಟರೂ, ನಿತ್ಯನೈಮಿತ್ತಿಕ ಕರ್ಮಗಳಾಚರಿಸಲ್ಪಟ್ಟರೂ, ಅವು ತಮ್ಮ ತಮ್ಮ ಫಲಗಳಂ ಕೊಡದೆ ಭ್ರಂಶವಾಪಲಾರವು. ಮತ್ತು ನಿತ್ಯಕರ್ಮಗಳಿಗೆ ಫಲವಿಲ್ಲವೆಂಬದಾಗಿ ಕೆಲವರು ಹೇಳುವರು, ಅದು ಕೂಡಯುಕ್ತ

ವಲ್ಲವು, ನಿತ್ಯಕರ್ಮಗಳು ವೇದಪ್ರಮಾಣದಿಂದ ತಿಳಿಸಲ್ಪಟ್ಟಿರುವುದರಿಂದ ಅವುಗಳಿಗೆ ಫಲವು ಅವಶ್ಯಕವಾಗಿ ಇದ್ದೇತೀರಬೇಕು. ಹಾಗಿಲ್ಲದಪಕ್ಷದಲ್ಲಿ ವೇದವು ನಿಷ್ಫಲವಾದ ಒಂದು ಕಾರ್ಯವನ್ನು ಮಾಡೆಂದು ವಿಧಿಸಿದಂತೆ ಆಗುವುದು. ಆದುದರಿಂದಲೆ ಕರ್ಮಗಳನ್ನಾಚರಿಸಿದರೆಅದಕ್ಕೆ ಯಾವದಾದರೊಂದು ಫಲವಿರುವುದರಿಂದ ಅಂತಹ ಫಲವನ್ನೇ ಹೊಂದುವನಲ್ಲದೇ ಕರ್ಮಯೋಗಿಯು ಭ್ರಷ್ಟನಾಗಲಾರನು. ಮತ್ತು ಕರ್ಮಗಳನ್ನಾಚರಿಸುತಲಿದ್ದರೆ ಕರ್ಮಭ್ರಂಶವುಂಟಾಗುವುದಿಲ್ಲ ವಾದುದರಿಂದ ಕರ್ಮಭ್ರಷ್ಟನು, ಯೋಗಭ್ರಷ್ಟನೆಂಬದಾಗಿ (೬ ॥ ೩೮) ನೇ ಶ್ಲೋಕದಲ್ಲಿಹೇಳಿರುವಂತೆ ಅವನಿಗೆಉಭಯಭ್ರಷ್ಟತೆಯನ್ನು ಹೇಳುವುದೂ ಯುಕ್ತವಲ್ಲವು.

(ಪೂ॥ ಪ್ರ॥) ಆಚರಿಸಲ್ಪಟ್ಟ ಕರ್ಮವು ಈಶ್ವರಾರ್ಪಣವಂ ಮಾಡುವುದರಿಂದ ಕರ್ಮಫಲವುಂಟಾಗಲಾರದು; ಅದರಿಂದ ಭ್ರಷ್ಟತೆಯನ್ನು ಎತಕ್ಕೆ ಹೇಳಕೂಡದು?.

(ಸಿ॥ಉ॥) ಆ ರೀತಿಯಾಗಿ ಹೇಳಕೂಡದು. ಈಶ್ವರಾರ್ಪಿತವಾದ ಕರ್ಮಗಳಧಿಕಫಲಗಳಂ ಕೊಡುವುದಲ್ಲದೆ ಭ್ರಷ್ಟತೆಯನ್ನುಂಟುಮಾಡಲಾರವು. ಲೋಕದಲ್ಲಿ ರಾಜಾದಿಗಳನ್ನು ಸತ್ಕರಿಸಬೇಕೆಂಬ ಬುದ್ಧಿಯಿಂದ ಸಮರ್ಪಿಸಲ್ಪಟ್ಟ ಧನಾದಿಗಳು ಅಧಿಕ ಫಲಗಳಂ ಕೊಡುವಂತೆ, ಈಶ್ವರಾರ್ಪಿತವಾದ ಕರ್ಮವೂ ಸಹಜವಾದ ಫಲಕ್ಕಿಂತಲೂ ಅಧಿಕವಾದಫಲವನ್ನುಂಟುಮಾಡುತ್ತದಾದುದರಿಂದ ಈಶ್ವರಾರ್ಪಿತ ಕರ್ಮದ ದೆಸೆಯಿಂದ ಫಲವಿಲ್ಲದ್ದರಿಂದ ಮುಮುಕ್ಷುವಾದ ಗೃಹಸ್ಥನಕರ್ಮವು ಫಲವನ್ನುಂಟುಮಾಡದೇನೆ ನಶಿಸಿಹೋಗುವುದಕ್ಕೆ ತಕ್ಕ ಕಾರಣ ವಿರುವುದೆಂದು ಹೇಳುವಿಕೆಯು ಯೆಷ್ಟು ಮಟ್ಟಿಗೂ ಯುಕ್ತವಾಗಲಾರದು. ಮತ್ತು ಈಶ್ವರಾರ್ಪಿತ ಕರ್ಮವು ಮೋಕ್ಷಾರ್ಥಮಾತ್ರವಲ್ಲದೆ ಅನ್ಯಗಳಾದಧಿಕಫಲಗಳಿಗಾಗಿ ಆಗುವುದಿಲ್ಲವೆಂದರೆ ? ಆದರೂ ವರ್ಣಾಶ್ರಮ ವಿಹಿತ ಕರ್ಮಗಳನ್ನು ಈಶ್ವರಾರ್ಪಣವಂಮಾಡುವಿಕೆಯುಮೋಕ್ಷಕ್ಕಲ್ಲದೇಇತರ ಫಲಗಳಿಗಲ್ಲವು,ಆದುದರಿಂದ ಸರ್ವದಾಕರ್ಮಭ್ರಷ್ಟನಾಗಲವಕಾಶವಿಲ್ಲವು.

(ಪೂ॥ ಪ್ರ॥) ಆದರೂಕರ್ಮಯೋಗ ಸಹಿತನಾದ ಗೃಹಸ್ಥನು ಯೋಗಭ್ರಷ್ಟನಾದರೆ ನಾಶಹೊಂದುತ್ತಾನೆಯೋ?ಎಂಬದಾಗಿ ಅರ್ಜುನನು

ಪ್ರಶ್ನೆಮಾಡಿರುವುದರಿಂದ ಅಂತಹ ಪ್ರಶ್ನೆವು ಸಾರ್ಥಕವಾಗುವುದಕ್ಕಾಗಿ ಯೋಗ ಭ್ರಷ್ಟಶಬ್ದದಿಂದ ಗೃಹಸ್ಥನೇ ಹೇಳಲ್ಪಟ್ಟಿರುತ್ತಾನೆ.

(ಸಿ॥ಉ॥) ಇದೂ ಯುಕ್ತವಲ್ಲವು, ಏತಕ್ಕೆಂದರೇ? ಧ್ಯಾನಯೋಗ ಸಹಿತವಾದ ಕರ್ಮವನ್ನು ಈಶ್ವರನಲ್ಲಿ ಸಮರ್ಪಣಮಾಡುವುದು ಮೋಕ್ಷಾರ್ಥವಾಗುವುದೆಂಬುವುದರಲ್ಲಿ ಪ್ರಮಾಣವಚನವಿಲ್ಲವಾದುದರಿಂದ ಗೃಹಸ್ಥನು ಯೋಗಭ್ರಷ್ಟಶಬ್ದದಿಂದ ಹೇಳಲ್ಪಡುವ ನೆಂಬುವುದು ಯುಕ್ತವಾಗಿಲ್ಲವು; "ಏಕಾಕೀಯತಚಿತ್ತಾತ್ಮಾ ನಿರಾಶೀರಪರಿಗ್ರಹಃ॥(೬॥೧೦) ಬ್ರಹ್ಮಚಾರಿವ್ರತೇಸ್ಥಿತಃ" (೬॥೧೪) ಎಂಬುವ ಶ್ಲೋಕಗಳಲ್ಲಿ ಹೇಳಿರುವ ವಿಶೇಷಣಗಳು ಗೃಹಸ್ಥಾಶ್ರಮದಲ್ಲಿ ಸಂಭವಿಸುವುದಿಲ್ಲವಾದುದರಿಂದ ಆ ಗೃಹಸ್ಥನಿಗೆ ಧ್ಯಾನಯೋಗವಿಧಿ ಇಲ್ಲವಾದುದರಿಂದಲೂ, ಈ ಶ್ಲೋಕಗಳಲ್ಲಿ ಸನ್ನ್ಯಾಸವು ವಿಧಿಸಲ್ಪಟ್ಟಿರುವುದರಿಂದಲೂ, ಯೋಗಭ್ರಷ್ಟಶಬ್ದದಿಂದ ಹೇಳಲ್ಪಟ್ಟವನು ಗೃಹಸ್ಥನೆಂಬುವುದಕ್ಕೆ ಎಷ್ಟುಮಾತ್ರಕ್ಕೂ ಔಚಿತ್ಯವಿಲ್ಲವು. ಮತ್ತು ಧ್ಯಾನಕಾಲದಲ್ಲಿ ಸ್ತ್ರೀಸಹಾಯವು ಅನಾವಶ್ಯಕವಾದುದರಿಂದ ಏಕಾಕಿತ್ವವು ಹೇಳಲ್ಪಟ್ಟಿತು. ಏಕಾಕಿತ್ವ ವಿಶೇಷಣವು ಗೃಹಸ್ಥನಿಗೂ ಸಂದರ್ಭಿಸುವುದೆನ್ನಲಾಗುವುದಿಲ್ಲವು. ಇದಲ್ಲದೆ ಗೃಹಸ್ಥನಿಗೆ "ನಿರಾಶೀರಪರಿಗ್ರಹಃ"(೬॥೧೪॥)ಎಂಬುವುದು ಸಂದರ್ಭಿಸಲಾರದು. ಒಂದುವೇಳೆ ಏಕಾಕಿತ್ವಾದಿವಿಶೇಷಣಗಳನ್ನು ಗೃಹಸ್ಥನಲ್ಲಿ ಸಂಘಟನೆಮಾಡಿ ಧ್ಯಾನಯೋಗವು ಗೃಹಸ್ಥನಿಗೇನೆ ವಿಧಿಸಲ್ಪಟ್ಟಿರುವುದೆಂಬದಾಗಿ ಅಂಗೀಕರಿಸಿದರೂ ಉಭಯ ವಿಭ್ರಷ್ಟತ್ವ ಪ್ರಶ್ನೆವು ಗೃಹಸ್ಥನನ್ನು ಕುರಿತು ಮಾಡಲ್ಪಟ್ಟಿತೆಂದು ಹೇಳುವುದು ಯುಕ್ತವಲ್ಲವಾದುದರಿಂದ ಗೃಹಸ್ಥನು ಯೋಗಭ್ರಷ್ಟಶಬ್ದದಿಂದ ಹೇಳಲ್ಪಟ್ಟಿರುವನೆನ್ನಲು ಅವಕಾಶವಿಲ್ಲವು. (ಇಲ್ಲಿ ಯೋಗಶಬ್ದದಿಂದ ಧ್ಯಾನಯೋಗವು ಹೇಳಲ್ಪಟ್ಟಿರುವುದಲ್ಲದೆ ಕರ್ಮಯೋಗವು ಹೇಳಲ್ಪಡಲಿಲ್ಲವು.)

(ಪೂ॥ಪ॥) "ಅನಾಶ್ರಿತಃ" (೬॥೧॥) ಎಂಬ ಈ ಅಧ್ಯಾಯದ ಮೊದಲನೇ ಶ್ಲೋಕದಲ್ಲಿ ಗೃಹಸ್ಥನಿಗೇನೇ ಸನ್ನ್ಯಾಸಿತ್ವವನ್ನು ಯೋಗಿತ್ವವನ್ನು ಹೇಳುವುದರಿಂದಲೂ, ನಿರಗ್ನಿಯೂ ಅಕ್ರಿಯನೂ ಆದವನಿಗೆ ಸನ್ನ್ಯಾಸಿತ್ವಯೋಗಿತ್ವಗಳನ್ನು ನಿಷೇಧಮಾಡುವುದರಿಂದಲೂ, ಇದಂ

ವಿಚಾರಿಸಿದರೆ ಗೃಹಸ್ಥನಿಗೇನೆ ಯೋಗವಿಧಿಇರುವಂತೆ ಕಾಣಲ್ಪಡುವುದರಿಂದ ಯೋಗಭ್ರಷ್ಟಶಬ್ದವು ಗೃಹಸ್ಥನನ್ನೇ ಬೋಧಿಸುವುದು?

(ಸಿ॥ಉ॥) ಇದು ಕೂಡ ಯುಕ್ತವಲ್ಲವು. "ಅನಾಶ್ರಿತಃ"(೬॥೧॥) ಎಂಬುವ ಶ್ಲೋಕವು ಧ್ಯಾನಯೋಗಕ್ಕೆ ಬಹಿರಂಗಸಾಧನವಾದ ಕರ್ಮಫಲಗಳಲ್ಲಿ ಅಪೇಕ್ಷೆಯನ್ನು ಬಿಡುವಿಕೆಯು ಅತ್ಯಂತ ಶ್ರೇಷ್ಠವಾದದ್ದೆಂಬದಾಗಿ ಫಲಾಕಾಂಕ್ಷಾಸನ್ನ್ಯಾಸವನ್ನು ಸ್ತೋತ್ರಮಾಡುವುದಕ್ಕಾಗಿ ಪ್ರವರ್ತಿಸಿರುವುದರಿಂದ (ಎಂದರೇ ಮುಖ್ಯವಾಗಿ ನಿರಗ್ನಿಯೂ ಅಕ್ರಿಯನೂ ಆದವನೇ ಸನ್ನ್ಯಾಸಿಯೂ ಯೋಗಿಯೂ ಆಗಲಾರನು, ಕರ್ಮವುಳ್ಳವನಾದರೂ ಫಲಾಪೇಕ್ಷೆಯಂಬಿಟ್ಟು ಚಿತ್ತಶುದ್ಧಿಯನ್ನು ಕುರಿತು ಕರ್ಮಯೋಗವನ್ನು ಅನುಷ್ಠಿಸುತಾ ಬರುವಂತವನು ಸನ್ನ್ಯಾಸಿಯೂ ಯೋಗಿಯೂ ಎಂಬದಾಗಿ ಸ್ತೋತ್ರಮಾಡಲ್ಪಡುವನಾದುದರಿಂದ) ಈ ಮೊದಲನೇ ಶ್ಲೋಕದಲ್ಲಿ ಗೃಹಸ್ಥನಿಗೇನೆ ಯೋಗವುವಿಧಿಸಲ್ಪಟ್ಟಿರುವುದೆಂತಲೂ, ಆದುದರಿಂದಲೇ ಯೋಗಭ್ರಷ್ಟಶಬ್ದದಿಂದಹೇಳಲ್ಪಟ್ಟವನು ಗೃಹಸ್ಥನೇಯೆಂತಲೂ ಹೇಳುವುದು ಯುಕ್ತವಲ್ಲವು.

(ಪೂ॥ಪ್ರ॥ ಆದರೆ "ಅನಾಶ್ರಿತಃ ಕರ್ಮಫಲಂ" (೬॥೧॥) ಎಂಬುವುದರಿಂದ ಫಲಾಪೇಕ್ಷಾಸನ್ನ್ಯಾಸದ ಸ್ತೋತ್ರವು ಸನ್ನ್ಯಾಸಾಶ್ರಮನಿಷೇಧವೆಂಬೀ ಎರಡು ಹೇಳಲ್ಪಟ್ಟಿರಕೂಡದೋ?

(ಸಿ॥ ಉ॥) ಒಂದು ವಾಕ್ಯವು ಯೆರಡು ವಿಷಯಗಳನ್ನು ಬೋಧಿಸಲಾರದು, ಆದುದರಿಂದ ಒಂದು ವಾಕ್ಯದಿಂದ ಕರ್ಮಫಲಾಸಂಗಸನ್ನ್ಯಾಸಸ್ತುತಿಯೇನು, ಚತುರ್ಥಾಶ್ರಮವಾದ ಸನ್ನ್ಯಾಸ ಪ್ರತಿಷೇಧವೇನು, ಇವು ಮಾಡಲ್ಪಟ್ಟಿತೆಂದು ಹೇಳುವುದು ಯುಕ್ತವಲ್ಲವು. ಮತ್ತು ನಿರಗ್ನಿಯೂ, ಅಕ್ರಿಯನೂ ಆದ ಪರಮಾರ್ಥಸನ್ನ್ಯಾಸಿಗೆ ಪ್ರಸಿದ್ಧವಾದದ್ದಾಗಿಯೂ ಶ್ರುತಿಸ್ಮೃತಿ ಪುರಾಣೇತಿಹಾಸ ಯೋಗಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟೂ ಇರುವ ಸನ್ನ್ಯಾಸಿತ್ವ ಯೋಗಿತ್ವಗಳನ್ನು ಶ್ರೀಕೃಷ್ಣನು ನಿಷೇಧಿಸಲಾರನು, ಮತ್ತು ಈ ಶ್ಲೋಕದಿಂದ ಸನ್ನ್ಯಾಸವಂ ನಿಷೇಧಿಸಿರುವನೆಂಬ ಅರ್ಥವಂ ಸ್ವೀಕರಿಸಿದರೆ ಶ್ರೀಕೃಷ್ಣನಿಗೆ ಸ್ವವಚನವಿರೋಧವೂ ವುಂಟಾಗುವುದು. "ಸರ್ವಕರ್ಮಾಣಿ ಮನಸಾ ಸನ್ನ್ಯಸ್ಯ" (೫॥ ೧೩॥) "ನೈವಕುರ್ವನ್ನ ಕಾರಯನ್ನಾಸ್ತೇ" (೫॥ ೧೩) "ಮೌನೀಸಂತುಷ್ಟೋಯೇನಕೇನಚಿತ್ । ಅನಿಕೇತಸ್ಸ್ಥಿರ

ಮತಿಃ" (೧೨॥ ೧೯) "ವಿಹಾಯಕಾಮಾನ್ಯಸ್ಸರ್ವಾನ್ಪುಮಾಂ ಶ್ಚರ ತಿನಿಸ್ಪೃಹಃ" (೨॥ ೭೧॥) "ಸರ್ವಾರಂಭ ಪರಿತ್ಯಾಗೀ" (೧೨॥ ೧೬) ಎಂಬೀ ಪ್ರಕಾರವಾಗಿ ಪರಮಾತ್ಮನಿಂದ ಅಲ್ಲಲ್ಲಿ ತನ್ನ ವಾಕ್ಯಗಳು ಸ ರ್ವಕರ್ಮ ಸನ್ನ್ಯಾಸಪರವಾಗಿ ತೋರಿಸಲ್ಪಟ್ಟಿರುವವು. ಇಲ್ಲಿ ನಾಲ್ಕ ನೇದಾದ ಸನ್ನ್ಯಾಸಾಶ್ರಮ ಪ್ರತಿಷೇಧವೇ ಈ ಮೊದಲನೇ ಶ್ಲೋಕಾ ರ್ಥವೆನ್ನುವ ಪಕ್ಷದಲ್ಲಿ ಮೇಲೆ ಉದಹರಿಸಿರುವ ಭಗವದ್ವಾಕ್ಯಗಳಿಗೆ ವಿರೋಧವುಂಟಾಗುವುದು. ಆದುದರಿಂದೀಶ್ಲೋಕದಲ್ಲಿ ಕರ್ಮಯೋ ಗಿಯು ಶ್ಲಾಘಿಸಲ್ಪಟ್ಟಿರುತ್ತಾನಲ್ಲದೆ ಸನ್ನ್ಯಾಸವು ನಿಷೇಧಿಸಲ್ಪಟ್ಟಿ ತೆಂದು ಹೇಳಲು ಸಾಧ್ಯವಿಲ್ಲವು. ಮತ್ತು ಗೃಹಸ್ಥಾಶ್ರಮವಂ ಸ್ವೀಕರಿಸಿದವನಾಗಿಯೂ ಯೋಗಾಭ್ಯಾಸದಶೆಯನ್ನು ಹೊಂದಬೇಕೆಂ ಬ ಅಪೇಕ್ಷೆಯುಳ್ಳವನಾಗಿಯೂ ಇರುವ ಮೌನಿಯಾದವನಿಗೆ ಫಲಾಪೇ ಕ್ಷೆಯಂ ಬಿಟ್ಟು ಆಚರಿಸಲ್ಪಡುವ ಅಗ್ನಿಹೋತ್ರಾದಿ ಕರ್ಮವು ಸತ್ವ ಶುದ್ಧಿಯಿಂದ ಧ್ಯಾನಯೋಗಾಭ್ಯಾಸದಶೆಗೆ ಬಂದು ಸೇರಲು ಸಾಧನ ವಾಗುವುದೆಂದು ನೆನಸಿ ಅಂಥಾ ಕರ್ಮಿತನು ಸನ್ನ್ಯಾಸಿಯೆಂತಲೂ, ಯೋಗಿಯೆಂತಲೂ, ಈ ಶ್ಲೋಕದಲ್ಲಿ ಶ್ಲಾಘಿಸಲ್ಪಟ್ಟಿರುವನೆಂಬದಾಗಿ ಯೂ ತಿಳಿಯಬೇಕು.

(ಮ॥ ಸೂ॥) ಯೋಗಸೂತ್ರಂ ತ್ರಿಭಿಶ್ಲೋಕೈಃ ಪಂಚಮಾಂತ ಯದೀರಿತಮ್ । ಷಷ್ಠಸ್ತ್ವಾರಭ್ಯತೇಽಧ್ಯಾಯಸ್ತದ್ವ್ಯಾಖ್ಯಾನಾಯ ವಿಸ್ತರಾತ್ ॥ ಅಯಿದನೇ ಅಧ್ಯಾಯದ ಕಡೆಯಲ್ಲಿ ಸೂತ್ರಗಳಂತಿರುವ ಮೂರು ಶ್ಲೋಕಗಳಿಂದ ಹೇಳಲ್ಪಟ್ಟ ಯೋಗವಿಷಯವನ್ನು ವಿವರಿಸಿ ಹೇಳಲೂ ಈ ಆರನೇ ಅಧ್ಯಾಯವು ಪ್ರಾರಂಭಿಸಲ್ಪಡುವುದು. ಸಕ ಲ ಕರ್ಮಗಳನ್ನು ಪರಿತ್ಯಜಿಸಿ ಯೋಗವನ್ನಾಶ್ರಯಿಸಬೇಕೆಂಬದಾ ಗಿ ಮುಂದೆ ಹೇಳಲ್ಪಡುವುದರಿಂದ ಕರ್ಮಯೋಗಕ್ಕೆ ಕೊರತೆಯುಂ ಟಾಗುವುದಿಲ್ಲವೇ ? ಎಂಬ ಶಂಕಾಸಮಾಧಾನಾರ್ಥವಾಗಿ ಈ ಮೊದಲ ನೇ ಶ್ಲೋಕದಲ್ಲಿ ಕರ್ಮಯೋಗವನ್ನು ಸ್ತುತಿಸುತ್ತಾನೆ. ॥೧॥

(ಶ್ರೀ॥) ಚಿತ್ತಶುದ್ಧೇಽಪಿನಧ್ಯಾನಂ ವಿನಾ ಸನ್ನ್ಯಾಸಮಾತ್ರತಃ। ಮುಕ್ತಿಸ್ಸ್ಯಾದಿತಿಷಷ್ಠೇಽಸ್ಮಿನ್ ಧ್ಯಾನಯೋಗೋವಿತನ್ಯತೇ ॥ ಚಿತ್ತ ಶುದ್ಧಿಯುಂಟಾದರೂ ಧ್ಯಾನರಹಿತವಾದ ಸನ್ನ್ಯಾಸಮಾತ್ರದಿಂದಮೋ

ಕ್ಷವುಂಟಾಗುವುದಿಲ್ಲವಾದುದರಿಂದ ಈ೬ನೇ ಅಧ್ಯಾಯದಲ್ಲಿಧ್ಯಾನಯೋಗವು ವಿಸ್ತಾರವಾಗಿ ಹೇಳಲ್ಪಡುವುದು. ಅತೀತವಾದ ೫ನೇ ಅಧ್ಯಾಯದಲ್ಲಿ ೧೩ನೇ ಶ್ಲೋಕದಮೊದಲು ಅಧ್ಯಾಯದ ಪೂರ್ತಿವರೆಗೂ ಸನ್ಯಾಸದಿಂದ ಕೂಡಿದ ಜ್ಞಾನನಿಷ್ಠೆಯು ಶ್ರೇಷ್ಠವೆಂಬದಾಗಿ ಹೇಳಲ್ಪಟ್ಟಿರುವುದರಿಂದ ದುಃಖರೂಪವಾದ ಕರ್ಮಗಳಂ ಬಿಡುವುದು ಉಚಿತವಾಗಿರುವುದೆಂಬ ಅರ್ಜುನನ ಶಂಕಾಸಮಾಧಾನಾರ್ಥವಾಗಿ ಸನ್ಯಾಸಕ್ಕಿಂತಲೂ ಕರ್ಮವು ಶ್ರೇಷ್ಠವೆಂಬದಾಗಿ ಮೊದಲನೇ ಶ್ಲೋಕದಿಂದ ಶ್ರೀ ಕೃಷ್ಣನುಪದೇಶಿಸುತ್ತಾನೆ.

( ಶಂ॥ ಅ॥ ) ೫ನೇ ಅಧ್ಯಾಯದ ಕಡೆಯಲ್ಲಿ "ಸ್ಪರ್ಶಾನ್ಕೃತ್ವಾ ಬಹಿರ್ಬಾಹ್ಯಾನ್" (೫॥ ೨೭॥) ಎಂಬಿದೇ ಮೊದಲಾದ ಮೂರುಶ್ಲೋಕಗಳಿಂದ ಆತ್ಮವೇದಿಯಾದ ಯತಿಗೆ ಶ್ರವಣಾದಿಗಳಿಂದುಂಟಾಗುವ ಜ್ಞಾನವು ನಿರಾತಂಕವಾಗಿ ಸಿದ್ಧಿಸುವುದಕ್ಕೋಸ್ಕರ ಮುಖ್ಯವಾಗಿ ಅನುಷ್ಠಿಸತಕ್ಕ ಧ್ಯಾನ ಯೋಗವು ಹೇಳಲ್ಪಟ್ಟಿತು. ಈ ಆರನೇ ಅಧ್ಯಾಯದಲ್ಲಿ ಆ ಧ್ಯಾನಯೋಗಕ್ಕೇನೇ ಬಹಿರಂಗಾಂತರಂಗ ಸಾಧನಗಳೂ, ಧ್ಯಾನ ಯೋಗಾಧಿಕಾರಿಯೂ, ಧ್ಯಾನ ಯೋಗಲಕ್ಷಣವೂ, ಧ್ಯಾನಯೋಗಫಲವೂ ಹೇಳಲ್ಪಡುವುದು. ಮತ್ತು ಶ್ರವಣಾದಿಗಳಿಂ ದುಂಟಾಗುವ ಜ್ಞಾನಕ್ಕೆ ಮುಖ್ಯಕಾರಣವು ಚಿತ್ತಶುದ್ಧಿಯೇ ಆಗಿರುವುದರಿಂದ ಆಚಿತ್ತಶುದ್ಧಿಯಿಂದಲೇ ಶ್ರವಣ ಮನನ ನಿದಿಧ್ಯಾಸಗಳೂ, ಮತ್ತು ಆ ಶ್ರವಣಾದಿಗಳಿಂದುಂಟಾಗುವ ಜ್ಞಾನವೂ ಉಂಟಾಗುವುದರಿಂದಲೂ, ಚಿತ್ತಶುದ್ಧಿಗೆ ಕರ್ಮಯೋಗವೆ ಪರಮ ಕಾರಣವಾಗಿರುವುದರಿಂದ ಶ್ರವಣಾದಿಗಳಿಗೂ ಶ್ರವಣಾದಿಗಳಿಂದುಂಟಾಗುವ ಜ್ಞಾನಕ್ಕೂ ಕರ್ಮಯೋಗವು ಯಮನಿಯಮಾದಿಗಳಂತೆ ಅತ್ಯಂತ ಬಲಿಷ್ಠವಾದ ಬಹಿರಂಗ ಸಾಧನವಾಗಿರುವುದೆಂತಲೂ, ಆದುದರಿಂದ ಅಂತಹ ಕರ್ಮಯೋಗವು ಪ್ರಾಪ್ತವಾದಕಾಲದಲ್ಲಿಯೇ ಚಿತ್ತಶುದ್ಧಿ ಯುಂಟಾಗುವುದರಿಂದಲೂ, ಚಿತ್ತಶುದ್ಧಿಯಿಂದಲೇ ಶ್ರವಣಮನನಾದಿಗಳೂ, ಅದರಿಂದುಂಟಾದ ಜ್ಞಾನವೂ ಪ್ರಾಪ್ತವಾಗುವುದರಿಂದಲೂ, ಮುಮುಕ್ಷುವಾದವನು ಶ್ರೌತಸ್ಮಾರ್ತ ಕರ್ಮಗಳನ್ನು ಶ್ರದ್ಧೆಯಿಂದಲೂ ಭಗವದ್ಭಕ್ತಿಯಿಂದಲೂ, ಅವಶ್ಯವಾಗಿ ಅನುಷ್ಠಿಸಬೇಕೆಂಬ ಅಭಿಪ್ರಾಯಮಂ ತೋರಿಸ

ಲು ಶ್ರೀಕೃಷ್ಣನು ಮೊದಲನೇ ಶ್ಲೋಕದಿಂದ ಕರ್ಮಯೋಗಿಯನ್ನು ಮತ್ತು ಕರ್ಮ ಯೋಗವನ್ನೂ ಸ್ತುತಿಸುತ್ತಾನೆಂದರಿಯಬೇಕು||೧||

(ರಾ|| ಭಾ||) ಇದುವರೆಗೂ ಕರ್ಮಯೋಗವು ಸಾಂಗವಾಗಿ ಹೇಳಲ್ಪಟ್ಟಿತು. ಈ ಅಧ್ಯಾಯದಲ್ಲಿ ಜ್ಞಾನಯೋಗ ಕರ್ಮಯೋಗಗಳಿಂದ ಸಾಧಿಸತಕ್ಕದ್ದಾಗಿರುವ (ಆತ್ಮಸಾಕ್ಷಾತ್ಕಾರರೂಪ) ಯೋಗಾಭ್ಯಾಸದ ಅನುಷ್ಠಾನಪ್ರಕಾರವು ಹೇಳಲ್ಪಡುವುದು. ಇದರಲ್ಲಿ ಕರ್ಮಯೋಗವು ಮತ್ತೊಂದನ್ನು ಎದರು ನೋಡದೇ ತಾನೇ ಆತ್ಮ ಪ್ರಾಪ್ತಿಯನ್ನು ಸಾಧಿಸುವುದೆಂಬುವುದಂ ದೃಢಪಡಿಸುವುದಕ್ಕಾಗಿ ಅದಂ ಜ್ಞಾನಾಕಾರವನ್ನಾಗಿಯೂ, ಅದು ಯೋಗವಂ ಸ್ವೀಕರಿಸಿ ಪೂರ್ತಿಯನ್ನೈದುವುದೆಂಬದಾಗಿಯೂ ಅನುವಾದ ಮಾಡುತ್ತಾನೆ.

(ಗೀ|| ವಿ||) ದ್ವಿತೀಯಾಧ್ಯಾಯದ "ಬುದ್ಧಿರ್ಯೋಗೇತ್ವಿಮಾಂ ಶೃಣು" (೨|| ೩೯|) ಎಂಬ ಶ್ಲೋಕದಲ್ಲಿ ಮುಂದಿನ ಷಟ್ಕದಲ್ಲಿ(ಮುಂದಿನ ಆರಧ್ಯಾಯಗಳಲ್ಲಿ) ಹೇಳಲ್ಪಡುವ ಭಗವದ್ಜ್ಞಾನಕ್ಕೆ ಉಪಾಯರೂಪವಾದ ಯೋಗವಂ ಹೇಳುವೆನೆಂಬದಾಗಿ ಪ್ರತಿಜ್ಞೆಯಂ ಮಾಡಿದನು. ಆಯೋಗವು ಕರ್ಮಯೋಗ ಧ್ಯಾನಯೋಗ ವೆಂಬಭೇದದಿಂದ ಯೆರಡು ಬಗೆಯಾಗಿರುವುದು. ಅವುಗಳಲ್ಲಿ ಕರ್ಮಯೋಗವು ಜ್ಞಾನಕ್ಕೆ ಬಹಿರಂಗ ಸಾಧನವಾಗಿಯೂ, ಧ್ಯಾನಯೋಗವು ಅಂತರಂಗಸಾಧನವಾಗಿಯೂ ಇರುವುದು. ಮೊದಲೈದಧ್ಯಾಯಗಳಿಂದ ಜ್ಞಾನಕ್ಕೆ ಬಹಿರಂಗಸಾಧನವಾದ ಕರ್ಮಯೋಗವನ್ನು ಹೇಳಿ ಅಯಿದನೇ ಅಧ್ಯಾಯಾಂತ್ಯದಲ್ಲಿ ಜ್ಞಾನಕ್ಕೆ ಅಂತರಂಗ ಸಾಧನವಾದ ಧ್ಯಾನಯೋಗವನ್ನು ಸಂಗ್ರಹವಾಗಿ ಹೇಳಿದನು. ಅದನ್ನೇ ವಿಸ್ತಾರವಾಗಿ ಈ ಅಧ್ಯಾಯದಲ್ಲಿ ಹೇಳುತ್ತಾನೆ.

ಮೂ|| ಶ್ರೀಭಗವಾನುವಾಚ|| ಅನಾಶ್ರಿತಃಕರ್ಮಫಲಂ
ಕಾರ್ಯಂಕರ್ಮ ಕರೋತಿಯಃ | ಸಸನ್ಯಾಸೀಚ ಯೋಗೀ
ಚ ನನಿರಗ್ನಿರ್ನಚಾಕ್ರಿಯಃ || ||೧||

ಪ|| ಶ್ರೀಭಗವಾನ್-ಉವಾಚ || ಅನಾಶ್ರಿತಃ - ಕರ್ಮಫಲಂ - ಕಾರ್ಯಂ - ಕರ್ಮ- ಕರೋತಿ - ಯಃ | ಸಃ - ಸನ್ಯಾಸೀ- ಚ- ಯೋಗೀ- ಚ - ನ- ನಿರಗ್ನಿಃ - ನ- ಚ- ಅಕ್ರಿಯಃ || ... ... ||೧||

ಶ್ರೀಭಗವಾನುವಾಚ- (ಶ್ರೀಭಗವದ್ವಾಕ್ಯವು) ಶ್ರೀಪರಮಾತ್ಮನು ಹೇಳಿದನು. ಕರ್ಮ ಫಲಮನಾಶ್ರಿತಃ- ಕರ್ಮಫಲವನ್ನಾಶ್ರಯಿಸದವನಾಗಿ, ಕಾರ್ಯಂ- ಮಾಡತಕ್ಕ, ಕರ್ಮ- ಕರ್ಮವನ್ನು, ಯಃ- ಯಾವನು, ಕರೋತಿ- ಮಾಡುತ್ತಾನೋ, ಸಃ- ಅವನೇ, ಸನ್ನ್ಯಾಸೀಚ- ಸನ್ನ್ಯಾಸಿಯು, ಯೋಗೀಚ - ಯೋಗಿಯೂ, (ಆಗುತ್ತಾನೆ) ನಿರಗ್ನಿಃ- ಅಗ್ನಿಯಿಂಬಿಟ್ಟವನೂ, ನ - ಆಗಲಾರನು, ಅಕ್ರಿಯಶ್ಚ - ಕ್ರಿಯಾತ್ಯಾಗಿಯೂ, ನಚ- ಆಗಲಾರನು. ... ... ||೧||

(ಶಂ|| ಭಾ||) ಕರ್ಮಫಲಗಳಲ್ಲಪೇಕ್ಷೆಯುಳ್ಳವನು ಕರ್ಮ ಫಲಾಶ್ರಿತನೆಂದು ಹೇಳಲ್ಪಡುವನು. ಕರ್ಮಫಲಗಳಲ್ಲಿ ಅಪೇಕ್ಷಾರಹಿತನು ಕರ್ಮ ಫಲಾನಾಶ್ರಿತ ನೆನ್ನಲ್ಪಡುವನು. ಕರ್ಮ ಫಲಗಳನ್ನ ಅಪೇಕ್ಷಿಸದವನಾಗಿ ತನ್ನಿಂದ ಮಾಡಲ್ಪಡತಕ್ಕದ್ದಾಗಿಯೂ ಕಾಮ್ಯಗಳಲ್ಲಿಸೇರದೇ ಇರತಕ್ಕದ್ದಾಗಿಯೂ, ಇರುವ ಅಗ್ನಿಹೋತ್ರಾದಿ ನಿತ್ಯಕರ್ಮಗಳನ್ನು ಕ್ರಮವಾಗಿ ಆಚರಿಸುವ ಕರ್ಮಿಷ್ಠನು ಕರ್ಮಫಲಾಪೇಕ್ಷೆಯಿಂದ ಕರ್ಮಗಳಂ ಮಾಡತಕ್ಕ ಅನ್ಯರಾದ ಕರ್ಮಿಗಳಿಗಿಂತಲೂ ಜ್ಞಾನೋತ್ಪತ್ತಿಯಾಗುವುದಕ್ಕೆ ಪೂರ್ವವೇ ಕರ್ಮತ್ಯಾಗಿಯಾದ ಅಪರಮಾರ್ಥ ಸನ್ನ್ಯಾಸಿಗಿಂತಲೂ ಶ್ರೇಷ್ಠನು. ಈಸಂಗತಿಯೇ "ಸನ್ನ್ಯಾಸೀ-ಯೋಗೀ, ಎಂಬ ಪದಗಳಿಂದ ಹೇಳಲ್ಪಡುವುದು." ಸನ್ನ್ಯಾಸಿ ಎಂದರೇ ಪರಿತ್ಯಾಗ (ಕರ್ಮಫಲಪರಿತ್ಯಾಗ) ವುಳ್ಳವನು. ಯೋಗೀ ಎಂದರೇ ಚಿತ್ತಸಮಾಧಾನವುಳ್ಳವನು, ಇಂಥಾಗುಣವುಳ್ಳ ಕರ್ಮಿಯಾದವನು ಇಲ್ಲಿ ಹೇಳಲ್ಪಟ್ಟಿರುವ ನಲ್ಲದೇ ಅಗ್ನಿಯೂ ಕರ್ಮಗಳೂ ಇಲ್ಲದವನೇ ಸನ್ನ್ಯಾಸಿ ಎಂತಲೂ ಯೋಗೀ ಎಂತಲೂ ಹೇಳಲ್ಪಡಲಿಲ್ಲವು. ನಿರಗ್ನಿ ಎಂದರೇ "ಗಾರ್ಹಪತ್ಯ, ಆಹವನೀಯ, ಅನ್ವಾಹಾರ್ಯ, ಪಚನವು, ಎಂಬಿದೇ ಮೊದಲಾದ ಅಗ್ನಿಯಿಲ್ಲದವನೆಂತಲೂ; ಅಕ್ರಿಯನೆಂದರೆ ಅಗ್ನಿಸಾಧನಗಳಿಲ್ಲದ ತಪೋದಾನಾದಿ ಕ್ರಿಯೆಗಳಿಲ್ಲದವನೆಂತಲೂ; ತಿಳಿಯಬೇಕು. ನಿರಗ್ನಿಯೂ, ಅಕ್ರಿಯನೂ ಆದವನಿಗೇನೇ ಶ್ರುತಿ ಸ್ಮೃತಿ ಯೋಗಶಾಸ್ತ್ರಗಳಲ್ಲಿ ಸನ್ನ್ಯಾಸಿತ್ವ ಯೋಗಿತ್ವಗಳು ಪ್ರಸಿದ್ಧವಾಗಿರುತಾ ಸಾಗ್ನಿಯೂ, ಸಕ್ರಿಯನೂ, ಆಗಿರುವನನ್ನು ಸನ್ನ್ಯಾಸಿಯೆಂತಲೂ ಯೋಗಿಯೆಂತಲೂ ಅಪ್ರಸಿದ್ಧವಾಗಿಹೇಳುವುದುಉಚಿತವೆ? ಎಂದರೇ ಈ ದೋಷವು ಬರಲಾರದು. ಯಾವದೋ ಒಂದು ಗುಣವೃತ್ತಿಯಿಂದ (ಗೌಣಸಂಬಂಧದಿಂದ) ಸಾಗ್ನಿಯೂ ಸಕ್ರಿಯನೂ

ಆದವನಿಗೂ ಸನ್ಯಾಸಿತ್ವ ಯೋಗಿತ್ವಗಳಂ ಹೇಳುವಿಕೆಯು ಉಚಿತವಾಗಿಯೇ ಇರುವುದು. ಗೌಣಸಂಬಂಧವು ಹೇಗೆಂದರೆ ಕರ್ಮಫಲಾಪೇಕ್ಷಾ ಸನ್ಯಾಸವೆಂಬ ಗೌಣಸಂಬಂಧದಿಂದ ಸನ್ಯಾಸಿತ್ವವೂ ಯೋಗಾಂಗವಾಗಿ ಕರ್ಮವನ್ನನುಷ್ಠಿಸಿ ಚಿತ್ತವಿಕ್ಷೇಪ ಹೇತುವಾದ ಕರ್ಮಫಲತ್ಯಾಗದಿಂದ ಯೋಗಿತ್ವವೂ ಇಲ್ಲಿ ಹೇಳಲ್ಪಟ್ಟಿರುವುದಲ್ಲದೆ ಮುಖ್ಯ ಸನ್ಯಾಸಿತ್ವವು ಯೋಗಿತ್ವವು ಅಭಿಪ್ರೇತವಾಗಿಲ್ಲವು.॥೧॥

(ಅ॥ ಗಿ॥) "ಅನಗ್ನಿಃ" ಎಂಬ ಪದದಿಂದಲೇ ಕ್ರಿಯಾರಹಿತನೆಂಬ ಅರ್ಥವು ಪ್ರಾಪ್ತವಾಗುವುದರಿಂದ "ಅಕ್ರಿಯಃ" ಎಂಬ ಪದಪ್ರಯೋಗವು ಪುನರುಕ್ತದೋಷವನ್ನುಂಟುಮಾಡಲಾರದೋ ? ಎಂದರೆ ಅಗ್ನಿಸಾಧ್ಯವಾದ ಯಾಗಾದಿ ಕ್ರಿಯಾಶೂನ್ಯನನ್ನು "ನಿರಗ್ನಿಃ" ಎಂಬದಾಗಿಯೂ; ಅಗ್ನಿಸಾಧನಗಳಿಲ್ಲದ ದೆಪ್ರೋಯಾಗಾದಿಶೂನ್ಯನನ್ನು "ಅಕ್ರಿಯಃ" ಎಂಬದಾಗಿಯೂ; ಹೇಳಿರುವುದರಿಂದ ಪುನರುಕ್ತಿದೋಷ ಶಂಕಾವಕಾಶಾಂಕುರವಿಲ್ಲವು. ॥೧॥

(ರಾ॥ಭಾ॥) ಕರ್ಮಕ್ಕೆ ಫಲಭೂತವಾದ ಸ್ವರ್ಗಾದಿಲೋಕಗಳನ್ನಪೇಕ್ಷಿಸದೆ ಅವಶ್ಯವಾಗಿ ಅನುಷ್ಠಿಸಬೇಕಾದ ಕರ್ಮಗಳನ್ನು "ನಮ್ಮಗಳಿಗೆ ಸರ್ವವಿಧ ಸುಹೃತ್ತಾದ ಪರಮಪುರುಷನಿಗೆ ಈ ಕರ್ಮವು ಆರಾಧನರೂಪವಾಗಿರುವುದಲ್ಲದೆ ಇದರಿಂದ ಹೊಂದತಕ್ಕ ಫಲ ವ್ಯಾವದೂ ನನಗಿರಲಾರದು ಎಂಬದಾಗಿ" ಯಾವನು ಮಾಡುತ್ತಾನೊ ಅವನೇ ಸನ್ಯಾಸಿಯೂ ಯೋಗಿಯೂ ಆಗಿರುವನು. ಅವನು ಆತ್ಮದರ್ಶನಕ್ಕೆ ಸಾಧನಗಳಾದ ಜ್ಞಾನ ಕರ್ಮಗಳೆಂಬೀ ಯೆರಡನ್ನನುಷ್ಠಿಸಿದವನೆಂದು ತಾತ್ಪರ್ಯವು. ಅಷ್ಟುಮಾತ್ರವಲ್ಲದೆ ಅಗ್ನಿಕಾರ್ಯಗಳನ್ನು ಮತ್ತು ಇತರ ಕರ್ಮಗಳನ್ನು ಮಾಡದೆ ಕೇವಲ ಜ್ಞಾನದಲ್ಲಿ ಮಾತ್ರವೇ ಇರುವಂತವನಲ್ಲವು. ಆರೀತಿಯಾಗಿ ಇರುವಂತವನಿಗೆ ಜ್ಞಾನನಿಷ್ಠೆ ಎಂಬುವುದುಒಂದುಮಾತ್ರವೇ ಉಂಟಾಗುವುದು. ಕರ್ಮನಿಷ್ಠನಿಗಾದರೋ ಕರ್ಮಜ್ಞಾನಯೋಗಗಳೆಂಬೀ ಯೆರಡೂ ಉಂಟಾಗುವುದು. ॥೧॥

(ಗೀ॥ ವಿ॥) ಕಾಮಾದಿವರ್ಜನರೂಪ ಸನ್ಯಾಸವುಳ್ಳವನೂ, ಭಗವದಾರಾಧನರೂಪ ಕರ್ಮಾನುಷ್ಠಾನ ವುಳ್ಳವನೂ ಧ್ಯಾನಯೋಗದಲ್ಲಧಿಕಾರಿಯಾಗಿರುವನೆಂದು ತಿಳಿಸಲು ಕಾಮಾದಿ ವರ್ಜನರೂಪ ಸನ್ಯಾ

ಸವು, ಮತ್ತು ಭಗವದಾರಾಧನರೂಪವಾದ ಕರ್ಮಾನುಷ್ಠಾನವೂ ಈ ಮೊದಲನೇ ಶ್ಲೋಕದಲ್ಲಿ ಹೇಳಲ್ಪಡುವುದು. ಈ ಅಧ್ಯಾಯದಲ್ಲಿ ಆಸನವೇಮೊದಲಾದ ಯೋಗಾಂಗಗಳು ಹೇಳಲ್ಪಟ್ಟರೂ ಅವೆಲ್ಲವು ಅಂಗಿಯಾದ ಧ್ಯಾನಕ್ಕಾಗಿಯೇ ಹೇಳಲ್ಪಟ್ಟಿರುವುದರಿಂದ ಈ ಅಧ್ಯಾಯದಲ್ಲಿ ಧ್ಯಾನಕ್ಕೇನೇ ಪ್ರಾಧಾನ್ಯವಂ ಸ್ವೀಕರಿಸಬೇಕು. ಕರ್ಮಫಲವನ್ನಪೇಕ್ಷಿಸದೆ ಅವಶ್ಯವಾಗಿ ಮಾಡತಕ್ಕ ತನ್ನ ವರ್ಣಾಶ್ರಮೋಚಿತವಾದ ಕರ್ಮಗಳಂ ಯಾವನಾದರೆ ಮಾಡುತ್ತಾನೊ ಅವನೇ ಸನ್ಯಾಸಿಯು, ಯೋಗಿಯು. ಅವನೇ ಧ್ಯಾನ ಯೋಗಾಧಿಕಾರಿಯಾಗಿರುವನು. ಆಹವನೀಯಮೇ ಮೊದಲಾದ ಅಗ್ನಿತ್ಯಾಗದಿಂದಲೂ, ಅಗ್ನಿಹೋತ್ರಾದಿ ಕ್ರಿಯಾತ್ಯಾಗದಿಂದಲೂ ನಿಸ್ಸಂಗನಾಗಿರುವಂತಹನೇ ಧ್ಯಾನಾದಿಕಾರಿಯಾಗುವನೆಂಬ ಸಾಂಖ್ಯಮತವಂ ದೂಷಿಸುವುದಕ್ಕಾಗಿ ನಿರಗ್ನಿಯಾದ ಅಕ್ರಿಯನು, ಸನ್ಯಾಸಿಯು ಯೋಗಿಯೂ ಆಗಲಾರನೆಂದು ಹೇಳಿದನು. ಯತಿಯಾದವನಿಗೂ "ದೈವಮೇವಾಪರೇಯಜ್ಞಂ" (೪॥ ೨೫॥) ಇತ್ಯಾದಿ ಪ್ರಕರಣದಲ್ಲಿ ಅಗ್ನಿಕ್ರಿಯೆಗಳು ಹೇಳಲ್ಪಟ್ಟಿರುವುದರಿಂದಲೂ "ಸಬ್ರಹ್ಮನಿಷ್ಠಸ್ತುಯತಿರ್ಮಹಾತ್ಮಾ ಶರೀರ ಮಗ್ನಿಂಚಮುಖೇಜುಹೋತಿ" ಎಂಬ ಪ್ರಮಾಣದಂತೆ ಸನ್ಯಾಸಾಶ್ರಮ ಸ್ವೀಕಾರಕಾಲದಲ್ಲಿ ಪೂರ್ವಾಶ್ರಮ ಸ್ವೀಕೃತವಾದ ಅಗ್ನಿಯನ್ನಾತ್ಮ ಸಮರೋಪಣ ಮಾಡಿಕೊಳ್ಳುವುದರಿಂದಲೂ, ಯತಿಗಳಿಗೆ ಅಗ್ನಿಕ್ರಿಯೆಗಳುಂಟೆಂದರಿಯಬೇಕು. ... ... ... ... ॥೧॥

ಮೂ॥ ಯಂಸನ್ಯಾಸ(ಶಂ॥ಮ॥ಗೀ॥ವಿ॥ರಾಃ॥ಸನ್ಯಾ
ಸಮಿತಿ)ಇತಿಪ್ರಾಹುರ್ಯೋಗಂತಂವಿದ್ಧಿಪಾಂಡವ। ನಹ್ಯ
ಸನ್ಯಸ್ತಸಙ್ಕಲ್ಪೋಯೋಗೀಭವತಿಕಶ್ಚನ॥ ॥೨॥

ಪ॥ ಯಂ- ಸನ್ಯಾಸಃ- ಇತಿ- ಪ್ರಾಹುಃ- ಯೋಗಂ- ತಂ- ವಿದ್ಧಿ-ಪಾಂಡವ ! ನ-ಹಿ- ಅಸನ್ಯಸ್ತಸಂಕಲ್ಪಃ- ಯೋಗೀ- ಭವತಿ- ಕಃ-ಚ-ನ ॥ ॥೨॥

ಅ॥ ಹೇಪಾಂಡವ- ಎಲೈ ಅರ್ಜುನನೇ, ಯಂ- ಯಾವದನ್ನು,(ಶಂ॥ ಮ॥ ಗೀ॥ ವಿ॥)ಸನ್ಯಾಸಮಿತಿ-ಸನ್ಯಾಸವನ್ನೆಂಬದಾಗಿ,(ಗೀ॥ವಿ)ಕಾಮಕ್ರೋಧಾದಿವರ್ಜನವನ್ನೆಂಬದಾಗಿ, (ರಾ) ಸನ್ಯಾಸಇತಿ- ಜ್ಞಾನಯೋಗವೆಂಬದಾಗಿ, ಪ್ರಾಹುಃ- ಹೇಳುವರೋ, ತಂ - ಅದ

ನ್ನು, ಯೋಗಮಿತಿ- ಯೋಗವೆಂಬದಾಗಿ, (ಗೀ॥ ವ್ಯಾ॥) ಧ್ಯಾನಯೋಗಕ್ಕೆ ಕಾರಣವಾಗಿಯೂ ಕಾಮಾದಿಗಳಂ ಬಿಟ್ಟು ಮಾಡಲ್ಪಡುವುದಾಗಿಯೂ ಇರುವ ಕರ್ಮಯೋಗದಲ್ಲಡಗಿರುವುದಾಗಿ, ವಿದ್ಧಿ- ತಿಳಿದುಕೊಳ್ಳು. ಹಿ- ಏತಕ್ಕೆಂದರೆ, ಅಸನ್ನ್ಯಸ್ತಸಂಕಲ್ಪಃ- ಸನ್ನ್ಯಾಸ ಮಾಡಲ್ಪಡದೆ ಫಲವಿಷಯ ಸಂಕಲ್ಪವುಳ್ಳ, (ರಾ) ದೇಹಾತ್ಮಭ್ರಾಂತಿಯನ್ನು ಬಿಡದೇ ಇರುವ, ಕಶ್ಚನ- ಒಬ್ಬನೂ, ಯೋಗೀ- ಕರ್ಮಯೋಗಿಯಾಗಿ, ನಭವತಿ- ಆಗುವುದಿಲ್ಲವು. ॥೨॥

(ಶಂ॥ ಭಾ॥) ಎಲೈ ಅರ್ಜುನನೇ ಸಕಲಕರ್ಮಗಳನ್ನು ಮತ್ತು ಆಕರ್ಮ ಫಲಗಳನ್ನು ಬಿಡುವಿಕೆಯೆಂಬ ಯಾವಸನ್ನ್ಯಾಸವನ್ನು ಶಾಸ್ತ್ರಪ್ರಮಾಣ ಸಿದ್ಧವಾದ ಪರಮಾರ್ಥ ಸನ್ನ್ಯಾಸವೆಂಬದಾಗಿ ಶ್ರುತಿಸ್ಮೃತಿ ವೇದಿಗಳಾದವರು ಹೇಳುವರೊ ಅಂತಹಸನ್ನ್ಯಾಸವನ್ನು, ಶಾಸ್ತ್ರಪ್ರಮಾಣಸಿದ್ಧವಾದ ( ಫಲಾಪೇಕ್ಷಾರಹಿತವಾದ ) ಕರ್ಮಾನುಷ್ಠಾನವೆಂಬಯೋಗವೆಂದು ತಿಳಿಯಬೇಕು. ಆದರೆ ಪ್ರವೃತ್ತಿಲಕ್ಷಣವಾದ ಕರ್ಮಯೋಗಕ್ಕೆ ತದ್ವಿರುದ್ಧವಾಗಿರುವು ( ಆ ಕರ್ಮ ಯೋಗಕ್ಕೆ ವಿರುದ್ಧವಾಗಿರುವು)ದಾಗಿಯೂ,ನಿವೃತ್ತಿಯನ್ನೇ ಸ್ವರೂಪವಾಗಿಉಳ್ಳದ್ದಾಗಿಯೂ,ಇರುವ; ಪರಮಾರ್ಥಸನ್ನ್ಯಾಸದಿಂದಸಾಮ್ಯವು ಹೇಗೆ ಉಂಟಾಗುವುದು ? ಎಂದರೆ ಕರ್ಮಯೋಗಕ್ಕೆ ಪರಮಾರ್ಥ ಸನ್ನ್ಯಾಸದೊಡನೆ ಸಾದೃಶ್ಯವು ಕರ್ತೃದ್ವಾರಕವಾಗಿರುವುದು. ಹೇಗೆಂದರೆ ಪರಮಾರ್ಥಸನ್ನ್ಯಾಸವನ್ನಾಶ್ರಯಿಸಿದವನು ಸಕಲ ಕರ್ಮಗಳನ್ನೂ ಆ ಕರ್ಮಗಳ ಸಾಧನಗಳನ್ನೂ ಬಿಟ್ಟಿರುವಂತವನಾಗಿರುವುದರಿಂದ ಪ್ರವೃತ್ತಿಕಾರಣವಾದ ಕಾಮಕ್ಕೆ ಕಾರಣವಾದದ್ದಾಗಿಯೂ, ಸಮಸ್ತ ಕರ್ಮಗಳನ್ನು ಮತ್ತು ಆ ಕರ್ಮಫಲಗಳನ್ನು ವಿಷಯವಾಗಿ ಉಳ್ಳದ್ದಾಗಿಯೂ, ಇರುವ ಸಂಕಲ್ಪವನ್ನು ಬಿಟ್ಟಿರುತ್ತಾನೆ. ಈ ಕರ್ಮ ಯೋಗಿಯೊ, ತಾನು ಕರ್ಮಗಳಂ ಮಾಡುತಿದ್ದರೂ ಫಲವಿಷಯ ಸಂಕಲ್ಪವನ್ನು ಬಿಟ್ಟಿರುತ್ತಾನೆ. ಕರ್ಮಯೋಗಿಗೂ ಕರ್ಮಸನ್ನ್ಯಾಸಿಗೂ ಸಂಕಲ್ಪತ್ಯಾಗವಿಷಯದಲ್ಲಿ ಸಾದೃಶ್ಯ ವಿರುವುದರಿಂದ ಕರ್ಮಯೋಗಕ್ಕೆ ಪರಮಾರ್ಥ ಸನ್ನ್ಯಾಸದೊಡನೆ ಸಾಮ್ಯವು ಹೇಳಲ್ಪಟ್ಟಿತು. ಸಂಕಲ್ಪತ್ಯಾಗದಿಂದ ಕಾಮತ್ಯಾಗವೂ ಆ ಕಾಮತ್ಯಾಗದಿಂದ ಅದರಿಂದುಂಟಾಗುವ ಪ್ರವೃತ್ತಿಯೂ ಬಿಟ್ಟುಹೋಗುವುದು. ಸಂಕಲ್ಪವಂತ್ಯಾಗಮಾಡದಿದ್ದರೆ ಫಲವು ಲಭಿಸುವುದೋ? ಇಲ್ಲವೋ? ಎಂಬ ಚಿತ್ತಚಾಂಚಲ್ಯವುಂಟಾಗುವು

ದು. ಅಂಥಾಸಂದರ್ಭದಲ್ಲಿಕರ್ಮಾನುಷ್ಠಾನವೇ ಲಭಿಸುವುದಿಲ್ಲವು ಆದುದರಿಂದ ಕರ್ಮಯೋಗಿಗೂ ಕರ್ಮಾನುಷ್ಠಾನಸಿದ್ಧಿಗೋಸ್ಕರ ಸಂಕಲ್ಪತ್ಯಾಗವು ಅವಶ್ಯಕವಾಗಿರುವುದು. ಯಾವ ಕರ್ಮಯೋಗಿಯಾದವನು ಚಿತ್ತವಿಕ್ಷೇಪಕ್ಕೆ ಕಾರಣವಾದ ಫಲಸಂಕಲ್ಪವಂ ತ್ಯಾಗಮಾಡಿರುತ್ತಾನೋ ಅಂತವನು ಚಿತ್ತವಿಕ್ಷೇಪಶೂನ್ಯನಾಗಿರುವುದರಿಂದ ಮನಸ್ಸಮಾಧಾನವುಳ್ಳವನಾಗುತ್ತಾನೆ. ಚಿತ್ತವಿಕ್ಷೇಪಹೇತುವಾಗಿರುವಫಲಸಂಕಲ್ಪವು ತ್ಯಾಗಮಾಡಲ್ಪಟ್ಟಿರುವುದರಿಂದ ಸಮಾಧಾನವುಳ್ಳವನಾಗುತ್ತಾನೆಂದಭಿಪ್ರಾಯವು. ಈ ಪ್ರಕಾರದಿಂದ ಪರಮಾರ್ಥಸನ್ನ್ಯಾಸಕರ್ಮಯೋಗಗಳಿಗೆ ಕರ್ತೃಮೂಲವಾಗಿಪ್ರಾಪ್ತವಾಗಿರುವಸನ್ನ್ಯಾಸಸಾಮ್ಯವನ್ನಾಶ್ರಯಿಸಿ ಈ ಶ್ಲೋಕದಿಂದಕರ್ಮಯೋಗವನ್ನು ಸ್ತೋತ್ರಮಾಡುವುದಕ್ಕಾಗಿ ಕರ್ಮಯೋಗವುಸನ್ನ್ಯಾಸವೆಂದುಹೇಳಲ್ಪಟ್ಟಿತು. ||೨||

(ರಾ||ಭಾ||) ಈ ಕರ್ಮಯೋಗದಲ್ಲಿ ಜ್ಞಾನವೂ ಅಡಗಿರುವುದೆಂದು ಉಪದೇಶಿಸುತ್ತಾನೆ. ಎಲೈ ಅರ್ಜುನನೇ! ಹಿರಿಯರು ಯಾವದನ್ನಾದರೆ ಸನ್ನ್ಯಾಸವೆಂಬದಾಗಿಹೇಳುತ್ತಾರೊ (ಎಂದರೇ ಆತ್ಮಸ್ವರೂಪವನ್ನು ಯಥಾವತ್ತಾಗಿತಿಳಿಯುವುದೆಂಬ ಜ್ಞಾನವೆನ್ನುತ್ತಾರೊ) ಅದನ್ನು ತಾನೇ ಕರ್ಮಯೋಗವೆಂಬದಾಗಿ ತಿಳಿದುಕೊಳ್ಳು. ಅದು ಹೇಗೆಂದರೇ! ಆತ್ಮಸ್ವರೂಪವನ್ನು ತತ್ವವಾಗಿತಿಳಿದು ಅದರಿಂದ ಮೊದಲು ಪ್ರಕೃತಿಯಲ್ಲಿ ತನಗಿರುವ ಆತ್ಮಾಭಿಮಾನವನ್ನು ಬಿಡದೇ ಇರುವಂತವನು ಪೂರ್ವೋಕ್ತ ಕರ್ಮಯೋಗಿಗಳಲ್ಲಿ ಯಾವನಾದರೊಬ್ಬನುಂಟೋ? (ಇಂತವನು ಕರ್ಮಯೋಗಿಯಾಗುವುದಿಲ್ಲವೆಂದು ತಾತ್ಪರ್ಯವು) "ಯಸ್ಯಸರ್ವೇ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ" (೪||೧೯||) ಎಂಬದಾಗಿ ಸಂಕಲ್ಪವನ್ನು ಬಿಟ್ಟವನೇ ಕರ್ಮಯೋಗಿಯಾಗುವನೆಂಬದಾಗಿ ಹಿಂದೇ ಹೇಳಿತು. ... ... ... ... ||೨||

ಮೂ|| ಆರುರುಕ್ಷೋರ್ಮುನೇರ್ಯೋಗಂ ಕರ್ಮಕಾರಣ ಮುಚ್ಯತೇ | ಯೋಗಾರೂಢಸ್ಯ ತಸ್ಯೈವ ಶಮಃ ಕಾರಣ ಮುಚ್ಯತೇ|| ... ... ... ||೩||

ಪ|| ಆರುರುಕ್ಷೋಃ- ಮುನೇಃ- ಯೋಗಂ- ಕರ್ಮ- ಕಾರಣಂ- ಉಚ್ಯತೇ | ಯೋಗಾರೂಢಸ್ಯ- ತಸ್ಯ- ಏವ- ಶಮಃ- ಕಾರಣಂ- ಉಚ್ಯತೇ|| ... ... ||೩||

ಅ|| ಯೋಗಂ- (ರಾ) ಆತ್ಮದರ್ಶನವನ್ನು, (ಶಂ) ಧ್ಯಾನಯೋಗವನ್ನು, ಆರುರುಕ್ಷೋಃ- ಹೊಂದಲಪೇಕ್ಷಿಸುವ, ಮುನೇಃ- ಯೋಗಿಯಾದವನಿಗೆ, ಕರ್ಮ- ಕರ್ಮಯೋಗವು, ಕಾರಣಂ- ಸಾಧನವೆಂಬದಾಗಿ, ಉಚ್ಯತೇ- ಹೇಳಲ್ಪಡುವುದು; ಯೋಗಾರೂಢಸ್ಯ - ಯೋಗ ವಂಹೊಂದಿದವನ, ತಸ್ಯೈವ- ಆವನಿಗೇನೆ, ಶಮಃ- ನಿವೃತ್ತಿಯು, (ಶಂ) ಸರ್ವಕರ್ಮನಿವೃತ್ತಿಯು, ಕಾರಣಂ- ಸಾಧನವೆಂಬದಾಗಿ, ಉಚ್ಯತೇ- ಹೇಳಲ್ಪಡುವುದು.|| ||೩||

(ಶಂ||ಭಾ||)ಧ್ಯಾನಯೋಗಕ್ಕೆ ಕರ್ಮಯೋಗವು ಬಹಿರಂಗಸಾಧನವಾಗಿರುವುದರಿಂದ ಕರ್ಮಯೋಗವೇ ಧ್ಯಾನಯೋಗಕ್ಕೆ ಸಾಧನವೆಂಬಸಂದರ್ಭವನ್ನು ವ್ಯಕ್ತಪಡಿಸುತ್ತಾನೆ. ಎಲೈ ಅರ್ಜುನನೇ ! ಕರ್ಮಫಲಗಳಲ್ಲಪೇಕ್ಷೆಯಂಬಿಟ್ಟವನಾಗಿಯೂ, ಧ್ಯಾನಯೋಗಾಭ್ಯಾಸಾವಸ್ಥೆಯನ್ನು ಹೊಂದಬೇಕೆಂದಪೇಕ್ಷಿಸುವಂತವನಾಗಿಯೂ, ಇರುವವನಿಗೆ; ಧ್ಯಾನಯೋಗಾಭ್ಯಾಸದಶೆಯನ್ನು ಹೊಂದುವುದಕ್ಕೆ ಕರ್ಮವೇಕಾರಣವಾಗಿರುವುದು. ಅವನು ಧ್ಯಾನಯೊಗಾಭ್ಯಾಸದಶೆಯನ್ನು ಹೊಂದಿದಮೇಲೆ ಅವನಿಗೇನೆ ಯೋಗಫಲಪ್ರಾಪ್ತಿಯಲ್ಲಿ ಸರ್ವಕರ್ಮಗಳ ಪರಿತ್ಯಾಗವೇ ಸಾಧನವಾಗಿರುವುದು; ಸರ್ವವ್ಯಾಪಾರನಿವೃತ್ತಿಯನ್ನೇ ಸ್ವರೂಪವಾಗಿವುಳ್ಳ ಉಪಶಮವು ಯೋಗಾರೂಢತ್ವದಲ್ಲಿ ಹೇಗೆ ಕಾರಣವಾಗುವುದೆಂದು ಸಂದೇಹಿಸಕೂಡದು. ಏತಕ್ಕೆಂದರೇ! ಕರ್ಮಗಳಿಂದ ಎಷ್ಟೆಷ್ಟು ನಿವೃತ್ತನಾಗುವನೊ ಅಷ್ಟಷ್ಟು ನಿರಾಯಾಸನಾಗುವನು. ಆಯಾಸವಿಲ್ಲದವನಾಗಿರುವುದರಿಂದ ಇಂದ್ರಿಯ ಜಯ ವುಳ್ಳವನಾಗುತ್ತಾನೆ. ಇಂದ್ರಿಯಜಯವುಳ್ಳವನಾಗಿರುವುದರಿಂದ ಚಿತ್ತಸಮಾಧಾನವುಳ್ಳವನಾಗುತ್ತಾನೆ, ಚಿತ್ತಸಮಾಧಾನವುಳ್ಳವನಾಗಿರುವುದರಿಂದ ಅವನು ಶೀಘ್ರವಾಗಿ ಯೋಗಾರೂಢನಾಗುವನು. "ನೈತಾದೃಶಂ ಬ್ರಹ್ಮಣ ಸ್ಯಾಸ್ತಿವಿತ್ತಂ ಯಥೈಕತಾ ಸಮತಾ ಸತ್ಯತಾಚ | ಶೀಲಂಸ್ಥಿತಿ ರ್ದಂಡನಿಧಾನಮಾರ್ಜವಂ ತತಸ್ತತಶ್ಚೋಪರಮಃಕ್ರಿಯಾಭ್ಯಃ ||" ಎಂಬವ್ಯಾಸವಾಕ್ಯವು ಈ ಪ್ರಕರಣಕ್ಕೆ ಪ್ರಮಾಣಭೂತವಾಗಿರುವುದು. ||೩||

(ರಾ||ಭಾ||) ಕರ್ಮಯೋಗವೇ ಪ್ರಮಾದವಿಲ್ಲದೆಯೋಗವನ್ನು ಸಾಧಿಸಿಕೊಡುವುದೆನ್ನುತ್ತಾನೆ. ಪುರುಷನು ಆತ್ಮದರ್ಶನವೆಂಬಯೋಗವನ್ನು ಹೊಂದಲಪೇಕ್ಷಿಸಿದರೆ ಅಂತವನಿಗೆ ಕರ್ಮವುಸಾಧನ ವೆಂತಲೂ,ಯೋಗವು ಸಿದ್ಧವಾದಮೇಲೆ (ಅವನಿಗೇನೆ ಕರ್ಮನಿವೃತ್ತಿಯಾದ) ಜ್ಞಾನವು ಸಾಧನ

ವೆಂತಲೂ ಹೇಳಲ್ಪಡುವುದು. ಆದರಿಂದ ಆತ್ಮದರ್ಶನವೆಂಬ ಮೋಕ್ಷ ಪ್ರಾಪ್ತಿಪರ್ಯಂತವಾಗಿ ಕರ್ಮಯೋಗವೇ ಮಾಡತಕ್ಕದ್ದೆಂಬ ಅಂಶವು ನಿರ್ಣಯಿಸಲ್ಪಟ್ಟಿತೆಂದರಿಯಬೇಕು ‖ ... ... ‖೩‖

(ಮ‖ಗೀ‖ವಿ‖) "ಅನಾಶ್ರಿತಃಕರ್ಮಫಲಂ" (೬‖೧‖) ಎಂಬಶ್ಲೋಕದಲ್ಲಿ ವಿಹಿತಕರ್ಮವನ್ನಾಚರಿಸುವಂತವನು ಧ್ಯಾನಾಧಿಕಾರಿ ಯಾಗುವನೆಂದುಹೇಳಿದನು. ಆ ಧ್ಯಾನಾಧಿಕಾರಿಮಾಡುವ ಕರ್ಮವು ಸಕೃದನುಷ್ಠೇಯವೋ? ಅಥವಾ ಫಲಪ್ರಾಪ್ತಿಪರ್ಯಂತವಾಗಿ ಅನುಷ್ಠೇಯವೋ? ಎಂದರೆ ಅದನ್ನೀಶ್ಲೋಕದಲ್ಲಿ ವಿವರಿಸಿ ಹೇಳುತ್ತಾನೆ. ಯೋಗಮಾರುರುಕ್ಷೋಃ- ಉಪಾಯಸಂಪೂರ್ತಿಯನ್ನಿಚ್ಛಿಸುತಲಿರುವ, ಮುನೇಃ- ಪರೋಕ್ಷಜ್ಞಾನವುಳ್ಳವನಿಗೆ. ಕರ್ಮ- ಸತ್ಕರ್ಮಾನುಷ್ಠಾನವು, ಕಾರಣಮುಚ್ಯತೆ- ಯೋಗಾರೋಹರೂಪವಾದ ಸಾಕ್ಷಾತ್ಕಾರಕ್ಕೆ ಕಾರಣವಾಗಿರುವುದೆಂದು ಹೇಳಲ್ಪಡುವುದು. ಅಪರೋಕ್ಷರೂಪವಾದ ಫಲ ವುಂಟಾಗುವವರೆಗೂ ಸತ್ಕರ್ಮಾನುಷ್ಠಾನವಂ ಮಾಡಬೇಕೆಂದಭಿಪ್ರಾಯವು; ಯೋಗಾರೂಢಸ್ಯ- ಸಂಪೂರ್ಣೋಪಾಯವುಳ್ಳ, ತಸ್ಯೈವ- ಅಪರೋಕ್ಷ ಜ್ಞಾನಿಯಾದ ಆಯೋಗಿಗೇನೆ,ಶಮಃ ಬಾಹ್ಯವಿಷಯಾನುಭವ ಶಾಂತಿರೂಪವಾದ ಸಮಾಧಿಯು, ಕಾರಣಂ- ಮೋಕ್ಷಸುಖಕ್ಕೆ ಕಾರಣವೆಂಬದಾಗಿ, ಉಚ್ಯತೇ - ಹೇಳಲ್ಪಡುವುದು. ಅಪರೋಕ್ಷಜ್ಞಾನಿಗೆ ಸಮಾಧಿಯು ಮೋಕ್ಷಕ್ಕೆ ಕಾರಣವಾಗಿದ್ದರೂ ಸಮಾಧಿ ಪ್ರತಿಬಂಧಕವಾದ ಪ್ರಾರಬ್ಧಕರ್ಮವಿರುವುದಾದರೆ ಶಮಶಬ್ದದಿಂದ ಅಂತವರಿಗೆ ವ್ಯಾಖ್ಯಾಸ್ತುತಿ ನಮಸ್ಕಾರಾದಿಗಳನ್ನು ಹೇಳುತ್ತಾರೆ. ಸಮಾಧಿಪ್ರತಿಬಂಧಕವಾದ ಪ್ರಾರಬ್ಧಕರ್ಮಗಳನಾಶವಂಹೊಂದಿದವರುಮೋಕ್ಷಾರ್ಥವಾಗಿ ಸಮಾಧಿಯನ್ನೇ ಮಾಡುತ್ತಾರೆ. "ಯೇತ್ವಾಂಪಶ್ಯಂತಿಭಗವಂಸ್ತ ಏವಸುಖಿನಃಪರಮ್|ತೇಷಾಮೇವಚ ಸಮ್ಯಕ್ತು ಸಮಾಧಿರ್ಜಾಯತೇನ್ಯಥಾ‖ ಭೋಕ್ತವ್ಯಕರ್ಮಕ್ಷ್ಯಾಕ್ಷೇಪೇಜಪೇನಕಥಯಾಽಪಿವಾ | ವರ್ತಯಿಂತಿಮಹಾತ್ಮಾನ ಸ್ತ್ವದ್ಭಕ್ತಾಸ್ತ್ವತ್ಪರಾಯಣಾಃ‖ " ಎಂಬ ಪ್ರಮಾಣವೀಅರ್ಥಕ್ಕೆ ಆಧಾರವಾಗಿರುವುದು. (ಅಥವಾ) ಜ್ಞಾನಯೋಗ ಕರ್ಮಯೋಗಗಳಲ್ಲಿ ಯಾವದನ್ನವಶ್ಯಕವಾಗಿ ಮಾಡಬೇಕೆಂದರೆ ಅದಕ್ಕುತ್ತರವನ್ನು ಈಶ್ಲೋಕದಿಂದ ಹೇಳುತ್ತಾನೆ. ಯೋಗಂ- ಜ್ಞಾನಯೋಗವನ್ನು, ಆರುರುಕ್ಷೋಃ-

ಹೊಂದಬೇಕೆಂಬ ಇಚ್ಛೆ ಉಳ್ಳವನಿಗೆ, ಕರ್ಮ - ಜನೋಪಕಾರ ರೂಪ ವಾದಕರ್ಮವು, ಕಾರಣಂ-ಜ್ಞಾನಕಾರಣವಾಗಿ, ಉಚ್ಯತೆ- ಹೇಳಲ್ಪಡು ವುದು. ಯೋಗಾರೂಢಸ್ಯ - ಪೂರ್ಣೋಪಾಯವುಳ್ಳವನಿಗೆ, ಶಮಃ- ಸರ್ವಜನೋಪಕಾರಾಭಾವವು, ಎಂದರೆ ತನಗಿಂತಲೂ ಉತ್ತಮರಾದ ವರಿಗೆಮಾತ್ರವೇ ಉಪಕಾರ ಮಾಡಬೇಕಲ್ಲದೆ ಸರ್ವಜನರಿಗೂ ಉಪಕಾರ ಮಾಡುವುದೆಂಬ ಕರ್ಮವನ್ನು ಯೋಗಾರೂಢನು ಆರುರುಕ್ಷುವಿನಂತೆ ಮಾಡಬೇಕಾದ್ದಿಲ್ಲವೆಂದು ತಾತ್ಪರ್ಯವು. ಇಲ್ಲಿ ಶಮಶಬ್ದಕ್ಕೆ ಧ್ಯಾನವ್ಯಾ ಖ್ಯಾನಸ್ತುತಿ ನಮಸ್ಕಾರಾದಿಕರ್ಮವು ಆನಂದಾಭಿವೃದ್ಧಿಯಲ್ಲಿ ಕಾರಣ ವಾಗುವುದೆಂದು ಹೇಳಲ್ಪಡುವುದೆಂಬ ಅರ್ಥವನ್ನು ತಿಳಿಯಬೇಕು. ॥೩॥

ಮೂ॥ ಯದಾ ಹಿ ನೇಂದ್ರಿಯಾರ್ಥೇಷು ನಕರ್ಮಸ್ವ
ನುಷಜ್ಜತೇ । ಸರ್ವಸಂಕಲ್ಪಸನ್ಯಾಸೀ ಯೋಗಾರೂಢ
ಸ್ತದೋಚ್ಯತೇ॥ (ಶಂ ॥ ಪಾಠಃ ॥ ಯದಾ ಹಿ ಚೇಂದ್ರಿ
ಯಾರ್ಥೇಷು ) ... ... ॥೪॥

ಪ॥ ಯದಾ- ಹಿ- ನ- ಇಂದ್ರಿಯಾರ್ಥೇಷು- ನ - ಕರ್ಮಸು- ಅನುಷಜ್ಜತೇ । ಸರ್ವಸಂ ಕಲ್ಪ ಸನ್ಯಾಸೀ- ಯೋಗಾರೂಢಃ- ತದಾ- ಉಚ್ಯತೇ ॥ (ಶಂ ॥ ಪಾಠಃ ಯದಾ-ಹಿ -ಚ- ಇಂದ್ರಿಯಾರ್ಥೇಷು.) ... ... ... ... ॥೪॥

ಅ॥ ಯದಾಹಿ- ಯಾವಾಗಲಾದರೇ, ಇಂದ್ರಿಯಾರ್ಥೇಷು - ವಿಷಯಗಳಲ್ಲಿ, ನಾನುಷ ಜ್ಜತೇ- ಇಚ್ಛೆಯನ್ನಿಡುವುದಿಲ್ಲವೋ, ಕರ್ಮಸು- ಅದಕ್ಕೆಸಾಧನವಾದಕರ್ಮಗಳಲ್ಲಿ, ನ-ಅಪೇ ಕ್ಷೆಯಿಲ್ಲವೋ, ತದಾ- ಆವಾಗ, ಸರ್ವಸಂಕಲ್ಪ ಸನ್ಯಾಸೀ - ಸಮಸ್ತವಾದ ಅಪೇಕ್ಷೆಯ ನ್ನು ಬಿಟ್ಟ ಅವನು, (ಗೀ॥ವಿ॥) ಸರ್ವಕರ್ಮಗಳನ್ನು ಬಿಟ್ಟವನು, ತನ್ನ ಪ್ರಯತ್ನವಿಲ್ಲ ದೇ ಪ್ರಾಪ್ತವಾದ ವಸ್ತುಗಳಲ್ಲಿ ಅಭಿಮಾನವಂ ಬಿಟ್ಟವನೆಂದರ್ಥವು. ಸರ್ವಕರ್ಮಗಳ ಸಂಕಲ್ಪವನ್ನು ಪರಮಾತ್ಮಾಧೀನವೆಂಬದಾಗಿತಿಳಿದವನು ಸರ್ವಸಂಕಲ್ಪಸನ್ಯಾಸಿ ಯೆನ್ನ ಲ್ಪಡುವನು. ಯೋಗಾರೂಢಃ- ಯೋಗಾರೂಢನೆಂಬದಾಗಿ, (ಯೋಗವನ್ನು ಹೊಂದಿದವನೆಂ ಬದಾಗಿ,) ಉಚ್ಯತೆ- ಹೇಳಲ್ಪಡುವನು. (ಶಂ) ಯದಾಹಿ ಇಂದ್ರಿಯಾರ್ಥೇಷು ಕರ್ಮಸುಚ ನಾನುಷಜ್ಜತೆ- ಯಾವಾಗಲಾದರೇ ಶಬ್ದಾದಿ ವಿಷಯಗಳಲ್ಲಿಯೂ ಮತ್ತು ಕರ್ಮಗಳಲ್ಲಿಯೂ ಆಸಕ್ತಿಯುಳ್ಳವನಾಗುವುದಿಲ್ಲವೋ;॥ ... ... ... ॥೪॥

(ಶಂ॥ ಭಾ॥) ಯೋಗಾರೂಢನೆಂಬದಾಗಿ ಯಾವಾಗ ಯೆಂತವನು ಹೇಳಲ್ಪಡುವನೆಂದರೆ ಅದನ್ನುಪದೇಶಿಸುವೆನು. ಯಾವಾಗಲಾದರೆಶಬ್ದಾ

ದಿವಿಷಯಗಳಲ್ಲಿಯೂ ನಿತ್ಯನೈಮಿತ್ತಿಕ ಕಾಮ್ಯಪ್ರತಿಷಿದ್ಧಗಳೆಂಬ ಕ ರ್ಮಗಳಲ್ಲಿಯೂ, ಪ್ರಯೋಜನವಿಲ್ಲವೆಂಬ ಬುದ್ಧಿಯಿಂದ ಆಸಕ್ತಿಯನ್ನಿ ಡದೆ ಈ ಲೋಕದಲ್ಲುಂಟಾಗುವ ಸುಖಗಳಿಗೂ, ಸ್ವರ್ಗಾದಿಲೋಕಗ ಳಲ್ಲುಂಟಾಗುವ ಸುಖಗಳಿಗೂ, ಮೂಲವಾದ ಮನಸ್ಸಂಕಲ್ಪವನ್ನು ತ್ಯಾಗಮಾಡುವನೋ ಆವಾಗ ಯೋಗಾರೂಢನೆನ್ನಲ್ಪಡುವನು. ಸರ್ವ ಸಂಕಲ್ಪಸನ್ನ್ಯಾಸೀ ಎಂಬುವುದರಿಂದ ಸಮಸ್ತಗಳಾದ ಅಪೇಕ್ಷೆಗಳ ನ್ನು ಮತ್ತು ಸಮಸ್ತ ಕರ್ಮಗಳನ್ನು ಬಿಡಬೇಕೆಂಬ ಅರ್ಥವು ಸೂಚಿತ ವಾಗಿರುವುದು. ಸಮಸ್ತಗಳಾದ ಅಪೇಕ್ಷೆಗಳು ಸಂಕಲ್ಪಮೂಲಗಳಾಗಿ ಯಲ್ಲವೇ ಇರುವುವು. ಇದಕ್ಕೆ "ಸಂಕಲ್ಪಮೂಲಃಕಾಮೋವೈ ಯ ಜ್ಞಾಸ್ಸಂಕಲ್ಪಸಂಭವಾಃ । ಕಾಮಜಾನಾಮಿತೇ ಮೂಲಂ ಸಂಕಲ್ಪಾ ತ್ತ್ವಂಹಿಜಾಯಸೇ ॥ ನತ್ವಾಂಸಂಕಲ್ಪಯಿಷ್ಯಾಮಿ ತೇನಮೇನಭವಿ ಷ್ಯಸಿ" ಇತ್ಯಾದಿ ಸ್ಮೃತಿವಾಕ್ಯವು ಪ್ರಮಾಣವಾಗಿರುವುದು. (ಅರ್ಥವು) ಅಪೇಕ್ಷೆಯು ಸಂಕಲ್ಪಮೂಲವಾಗಿರುವುದು. ಯಜ್ಞಗಳು ಸಂಕಲ್ಪ ಗಳಿಂದಲೇ ಉಂಟಾಗುವುವು. ಓ ಅಪೇಕ್ಷೆಯೇ ! ನಿನ್ನ ಮೂಲವನ್ನು ನಾನರಿಯುವೆನು, ನೀನು ಸಂಕಲ್ಪದಿಂದುಂಟಾಗುತ್ತೀಯೆ. ಯಾದರಿಂದ ನಿನ್ನನ್ನು ಸಂಕಲ್ಪಿಸಲಾರೆನು. ಆದರಿಂದ ನೀನು ನನಿಗುಂಟಾಗಲಾರೆ. ಎಂದೀ ಪ್ರಮಾಣಾರ್ಥವಂ ತಿಳಿಯಬೇಕು. ಮತ್ತು ಸರ್ವಾಪೇಕ್ಷೆಗಳಂ ಬಿಟ್ಟರೆ ಸರ್ವಕರ್ಮ ಸನ್ನ್ಯಾಸಸಿದ್ಧಿಯಾಗುವುದೆನ್ನುವುದಕ್ಕೆ "ಪು ರುಷನು ಯಾವಫಲವನ್ನಪೇಕ್ಷಿಸುವನೋ ಅಂಥಾಫಲಕ್ಕೆಸಾಧನವನ್ನು ಮಾಡಬೇಕೆಂಬದಾಗಿ ಅವನು ಅಪೇಕ್ಷಿಸುತ್ತಾನೆ ಇದೇಕ್ರತುವೆನ್ನಲ್ಪ ಡುವುದು. ಅದಂಮಾಡಲು ಪ್ರಯತ್ನಿಸಿದರೆ ಅವಾಗ ಅದು ಕರ್ಮವೆನ್ನ ಲ್ಪಡುವುದು"ಎಂಬಅರ್ಥವಂ ಪ್ರತಿಪಾದಿಸುವಶ್ರುತಿಯು ಪ್ರಮಾಣವಾಗಿ ರುವುದು. ಆದುದರಿಂದ ಸಮಸ್ತವೂ ಅಪೇಕ್ಷೆಯಿಂದಲೇ ಉಂಟಾಗು ವುದೆಂದರಿಯಬೇಕು. ಮತ್ತು ಸರ್ವಸಂಕಲ್ಪವನ್ನು ತ್ಯಾಗಮಾಡಿದ ಮೇಲೆ ನಿದ್ರಾದಿ ಕಾಲದಲ್ಲಂತೇ ಚಲಿಸುವುದಕ್ಕೂ ಶಕ್ತನಾಗಲಾರನೆಂಬ ನ್ಯಾಯದಿಂದಲೂ ಕರ್ಮವು ಕಾಮದಿಂದುಂಟಾಗುವು ದೆನ್ನಲ್ಪಡುವುದು. "ಯದ್ಯದ್ಧಿಕುರುತೇಜಂತು ಸ್ತತ್ತತ್ಕಾಮಸ್ಯಚೇಷ್ಟಿತಂ" ಎಂಬುವ ವಚನದಲ್ಲಿಯೂ ಪ್ರಾಣಿಯಾದವನು ಯಾವ ಯಾವ ಕರ್ಮಗಳನ್ನು

ಮಾಡುತ್ತಾನೋ ಅವೆಲ್ಲವೂ ಕಾಮನಚೇಷ್ಟಿತವಾಗಿರುವುದೆಂದು ಹೇಳಲ್ಪಟ್ಟಿತು. ಆದುದರಿಂದ ಕಾಮವೆಂಬ ಸಂಕಲ್ಪವು ಬಿಡಲ್ಪಟ್ಟ ಮೇಲೆ ನಿತ್ಯನೈಮಿತ್ತಿಕ ಕರ್ಮಾನುಷ್ಠಾನವು ಅತ್ಯಂತವಾಗಿ ನಿವೃತ್ತವಾಗುವುದು. ಮತ್ತು ಶ್ರುತಿಸ್ಮೃತಿನ್ಯಾಯ ಪ್ರಮಾಣಾದಿಗಳಿಂದ, ಸಂಕಲ್ಪದಿಂದ ಕಾಮವು ಕಾಮದಿಂದ ಕರ್ಮವೂ ಉಂಟಾಗುವುದೆಂದು ನಿರ್ಧರಿಸಲ್ಪಟ್ಟಿರುವುದರಿಂದ, ಪರಮಾತ್ಮನು "ಸರ್ವ ಸಂಕಲ್ಪಸನ್ನ್ಯಾಸೀ" ಎಂಬದಾಗಿ ಹೇಳಿದನು. ಸಮಸ್ತಗಳಾದ ಕಾಮಕರ್ಮಗಳನ್ನು ಯೋಗಾರೂಢನು ಬಿಟ್ಟಿರಬೇಕೆಂದಭಿಪ್ರಾಯವು ॥೪॥

(ರಾ॥ ಭಾ॥) ಈ ಯೋಗಿಯಾದವನು ಯಾವಾಗಲಾದರೆ ಆತ್ಮಾನುಭವವಂ ಮಾಡುವುದೇ ಸ್ವಭಾವವುಳ್ಳವನಾದುದರಿಂದ ವಿಷಯಗಳಲ್ಲಿಯೂ ವಿಷಯಾಧೀನವಾಗಿ ಬರುತಲಿರುವ ವ್ಯಾಪಾರಗಳಲ್ಲಿಯೂ ಸಂಬಂಧವನ್ನು ತ್ಯಾಗವಮಾಡಿಕೊಳ್ಳುತ್ತಾನೋ ಆವಾಗಲೆ ಸರ್ವಸಂಕಲ್ಪಗಳಂ ಬಿಟ್ಟಿರುವ ಇವನಿಗೆ ಯೋಗವು ಸುಸ್ಥಿರವಾಯಿತೆಂದು ಹೇಳಬಹುದು. ಯೋಗವಂ ಮಾಡಲಾರಂಭಿಸಿದವನಿಗೆ ಪ್ರಾರಂಭದಲ್ಲಿಯೇ ವಿಷಯ ವೈರಾಗ್ಯ ವುಂಟಾಗುವುದಿಲ್ಲವಾದುದರಿಂದ ಅದುಂಟಾಗುವುದಕ್ಕೆ ಮಾಡಬೇಕಾದ ಅಭ್ಯಾಸರೂಪವಾದ ಕರ್ಮಯೋಗವೇ ಯೋಗಸಾಧನವಾಗಿರುವುದರಿಂದ ಯೋಗಸಿದ್ಧಿಯನ್ನಪೇಕ್ಷಿಸಿದವನು ಆ ಕರ್ಮಯೋಗವನ್ನೇ ಮಾಡಬೇಕು. ॥ ॥೪॥

ಮೂ॥ ಉದ್ಧರೇದಾತ್ಮನಾಽಽತ್ಮಾನಂ ನಾತ್ಮಾನ ಮವಸಾದಯೇತ್ । ಆತ್ಮೈವಹ್ಯಾತ್ಮನೋಬಂಧುರಾತ್ಮೈವ ರಿಪುರಾತ್ಮನಃ ॥ ... ... ॥೫॥

ಪ॥ ಉದ್ಧರೇತ್ - ಆತ್ಮನಾ - ಆತ್ಮಾನಂ - ನ - ಆತ್ಮಾನಂ - ಅವಸಾದಯೇತ್। ಆತ್ಮಾ - ಏವ - ಹಿ - ಆತ್ಮನಃ- ಬಂಧುಃ -ಆತ್ಮಾ - ಏವ - ರಿಪುಃ- ಆತ್ಮನಃ ॥೫॥

ಪ॥ ಆತ್ಮನಾ - ತನ್ನಿಂದ, ಅಥವಾ ವಿವೇಕಯುಕ್ತವಾದ ಮನಸ್ಸಿನಿಂದ, (ಗೀ॥ವಿ॥) ಮನಸ್ಸಿನಿಂದ, ಅಥವಾ ಪರಮಾತ್ಮನಿಂದ, ಆತ್ಮಾನಂ- ತನ್ನನ್ನು, ಉದ್ಧರೇತ್- ರಕ್ಷಿಸಿಕೊಳ್ಳಬೇಕು, ಆತ್ಮಾನಂ- ತನ್ನನ್ನು, ನಾವಸಾದಯೇತ್-ಕ್ಲೇಶಪಡಿಸಿಕೊಳ್ಳಬಾರದು, ಆತ್ಮೈವಹಿ- ತಾನೇಯಲ್ಲವೇ, (ರಾ) ತನ್ನ ಮನಸ್ಸೇ ಅಲ್ಲವೇ, ಆತ್ಮನಃ- ತನಗೆ, ಬಂಧುಃ-

ಬಂಧುಜನವು, ಆತ್ಮನಃ - ತನಗೆ, ಆತ್ಮೈವ - ತಾನೇಅಥವಾ ತನ್ನ ಮನಸ್ಸೇ, ರಿಪುಃ- ಶತ್ರುಜನವು. ... ... ॥೫॥

(ಶಂ॥ ಭಾ॥) ಯಾವಾಗಲಾದರೆ ಯೋಗಾರೂಢ ನಾಗುವನೋ ಆವಾಗ ವಿವೇಕ ಯುಕ್ತವಾದ ಮನಸ್ಸಿನಿಂದ ಅಥವಾ ತನ್ನಿಂದ ಆತ್ಮನು ಸಂಸಾರವೆಂಬ ಅನರ್ಥ ಸಮೂಹದಿಂದಉದ್ಧರಿಸಲ್ಪಡುವನು.ಆದುದರಿಂ ದಯೋಗಾರೂಢನಾಗಿಆತ್ಮನನ್ನು ಉದ್ಧರಿಸಬೇಕೆಂದರ್ಜುನನಿಗೀಶ್ಲೋ ಕದಿಂದ ಶ್ರೀಕೃಷ್ಣನು ಬೋಧಿಸುತ್ತಾನೆ. ಎಲೈ ಅರ್ಜುನನೇ ಸಂ ಗಾದಿಗಳಿಂದ ಕೂಡಿರುವ ಮನಸ್ಸು ಅಥವಾ ತಾನೇ ತನಗೆ ವಿರೋಧಿ ಯಾಗಿಯೂ, ಸಂಗಾದಿಗಳಿಲ್ಲದ ಮನಸ್ಸು ಅಥವಾ ತಾನೇ ತನಗೆ ಬಂ ಧುವಾಗಿಯೂ, ಆರುವುದರಿಂದ ಸಂಗಾದಿ ಶೂನ್ಯವಾಗಿಯೂ, ವಿವೇಕ ಯುಕ್ತವಾಗಿಯೂ, ಇರುವ ಮನಸ್ಸಿನಿಂದ ಅಥವಾ ತನ್ನಿಂದ ಸಂಸಾ ರಸಾಗರದಲ್ಲಿ ನಿಮಗ್ನನಾದ ತನ್ನನ್ನು ಉದ್ಧರಿಸಬೇಕು. ಆದರಲ್ಲಿ ಮುಳಗಿರುವಂತೆ ಮಾಡಕೂಡದು. ಅಂದರೆ ಯೋಗಾಭ್ಯಾಸಾವಸ್ಥ ಯನ್ನು ಹೊಂದಬೇಕೆಂದು ತಾತ್ಪರ್ಯವು. ಲೋಕದಲ್ಲಿ ಪುತ್ರಮಿತ್ರಕಳ ತ್ರಾದಿಗಳಾದ ಸಮಸ್ತ ಬಂಧುಗಳು ಸ್ನೇಹಾದಿಗಳಿಂದ ಬಂಧಕ್ಕೆ ಕಾರ ಣರಾಗಿರುವರಲ್ಲದೆ ಮೋಕ್ಷಕ್ಕೆ ಅವರೆಲ್ಲರೂ ವಿರೋಧಿಗಳೆ. ಪ್ರಸಿದ್ಧ ವಾಗಿ ಹೊರಗೆ ಕಾಣಲ್ಪಡುವ ಶತ್ರುವು ಮನಸ್ಸಿನಿಂದ ಅಥವಾ ತನ್ನಿಂದ ಉಂಟಾದವನೇ ಆಗಿರುವುದರಿಂದ ಮನಸ್ಸಿಗಿಂತಲೂ ಅಥವಾ ತನಗಿಂ ತಲೂ ಇತರನಾದ ಶತ್ರುವು ಇಲ್ಲವೆಂತಲೂ, ತಿಳಿಯಬೇಕು. ॥೫॥

(ರಾ॥ ಭಾ॥) ಹಿಂದೆ ಹೇಳಿರುವ ಶ್ಲೋಕದ್ವಯಾರ್ಥವನ್ನೇ ವಿವರಿಸಿ ಹೇಳುತ್ತಾನೆ "ವಿಷಯ ಸಂಬಂಧಶೂನ್ಯವಾದ ಮನಸ್ಸಿನಿಂದ ತನ್ನ ನ್ನುದ್ಧರಿಸಬೇಕು. ಆದಕ್ಕೆ ವಿಪರೀತವಾದಮನಸ್ಸಿನಿಂದ ( ಎಂದರೇ, ವಿಷಯ ಸಂಬಂಧವುಳ್ಳ ಮನಸ್ಸಿನಿಂದ )ತನ್ನನ್ನು ಕ್ಲೇಶಪಡಿಸಿಕೊ್ಳ್ಳ ಬಾರದು. ಏತಕ್ಕೆಂದರೆ ಆತ್ಮನಿಗೆ ಬಂಧುವೂ ಮನಸ್ಸು, ಶತ್ರುವೂ ಮನಸ್ಸೇ ಆಗಿರುವುದು. ॥೫॥

(ಗೀ॥ ವಿ॥) ಮೇಲೆ ವಿವರಿಸಿರುವಂತೆ ಅರ್ಥವಂ ಹೇಳಿ ಮತ್ತೊಂ ದುಯೋಜನೆಯು ತೋರಿಸಲ್ಪಟ್ಟಿರುವುದು. ಯೋಗಾರೋಹವೆಂಬ ಹೆಸರುಳ್ಳ ಯೋಗಸಂಪೂರ್ತಿಗೆ ಭಗವತ್ಪ್ರಸಾದವೇ ಮುಖ್ಯಸಾಧನ

ವೆನ್ನುತ್ತಾನೆ. ಆತ್ಮನಾ - ಪರಮಾತ್ಮನಿಂದ, ಪರಮಾತ್ಮ ಪ್ರಸಾದದಿಂದ ಎಂದರ್ಥವು. ಆತ್ಮಾನಂ - ಜೀವನನ್ನು, ಉದ್ಧರೇತ್-ಉದ್ಧರಿಸಬೇಕು. ಆತ್ಮನಃ - ಆತ್ಮನಿಗೆ, ಆತ್ಮೈವ- ಪರಮಾತ್ಮನೇ, ಬಂಧುವಾಗಿಯೂ ಶತ್ರುವಾಗಿಯೂ ಇರುವನು. ||೫||

ಮೂ|| ಬಂಧುರಾತ್ಮಾಽತ್ಮನಸ್ತಸ್ಯ ಯೇನಾತ್ಮೈವಾ
ತ್ಮನಾಜಿತಃ| ಅನಾತ್ಮನಸ್ತು ಶತ್ರುತ್ವೇ ವರ್ತೇತಾತ್ಮೈವ
ಶತ್ರುವತ್ || ... ... ||೬||

ಪ|| ಬಂಧುಃ- ಆತ್ಮಾ - ಆತ್ಮನಃ- ತಸ್ಯ - ಯೇನ- ಆತ್ಮಾ - ಏವ- ಆತ್ಮನಾ- ಜಿತಃ| ಅನಾತ್ಮನಃ- ತು- ಶತ್ರುತ್ವೇ- ವರ್ತೇತ- ಆತ್ಮಾ - ಏವ - ಶತ್ರುವತ್ || ||೬||

ಅ|| ಯೇನೈವಾತ್ಮನಾ - ಯಾವಆತ್ಮನಿಂದಲೇ, ಆತ್ಮಾ- ಮನಸ್ಸು, ಜಿತಃ - ಜಯಿಸಲ್ಪಟ್ಟಿತೋ, ತಸ್ಯಾತ್ಮನಃ-ಆ ಆತ್ಮನಿಗೆ, ಆತ್ಮಾ-ಮನಸ್ಸು, ಬಂಧುಃ- ಬಂಧುವು, ಅನಾತ್ಮನಸ್ತು- ಮನೋಜಯವಿಲ್ಲದವನಿಗೆ, ಆತ್ಮಾ - ಮನಸ್ಸು, ಶತ್ರುವತ್- ಶತ್ರುವಿನಂತೆ ಶತ್ರುತ್ವಏವ- ಅಪಕಾರದಲ್ಲಿಯು, ವರ್ತೇತ- ಪ್ರವರ್ತಿಸಿರುವುದು. ||೬||

(ರಾ|| ಭಾ||) ಯಾವ ಪುರುಷನು ಮನಸ್ಸನ್ನು ವಿಷಯಗಳಲ್ಲಿ ಪ್ರವರ್ತಿಸದಂತೆ ತನಗೆ ತಾನೆ ಜಯಿಸುತ್ತಾನೋ ಅವನಿಗೆ ಆ ಮನಸ್ಸೇ ಬಂಧುವಾಗುವುದು. ಆ ಪ್ರಕಾರವಾಗಿ ಜಯಿಸದೇ ಹೋದರೆ ಅದೇ ಇವನಿಗೆ ಶತ್ರುವಾಗಿ ಸದ್ಗತಿಯನ್ನು ನಿರೋಧಿಸಿ ಕೆಡಿಸುವುದು. ಈ ಅರ್ಥವನ್ನು "ಮನಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ | ಬಂಧಾಯವಿಷಯಾಸಂಗಿ ಮುಕ್ತ್ಯೈ ನಿರ್ವಿಷಯಂಮನಃ" ಎಂಬದಾಗಿ ಶ್ರೀ ಪರಾಶರ ಬ್ರಹ್ಮರ್ಷಿಗಳು ಹೇಳಿರುತ್ತಾರೆ. ಮನುಷ್ಯರ ಬಂಧಮೋಕ್ಷಗಳಿಗೆ ಮನಸ್ಸೇ ಕಾರಣವಾಗಿರುವುದು. ವಿಷಯಾಸಕ್ತವಾದ ಮನಸ್ಸು ಬಂಧಕ್ಕೂ ವಿಷಯಸಂಬಂಧ ಶೂನ್ಯವಾದ ಮನಸ್ಸು ಮೋಕ್ಷಕ್ಕೂ ಕಾರಣವಾಗುವುದೆಂದು ಪ್ರಮಾಣಾರ್ಥವು||೬||

ಮೂ|| ಜಿತಾತ್ಮನಃ ಪ್ರಶಾಂತಸ್ಯ ಪರಮಾತ್ಮಾ ಸಮಾ
ಹಿತಃ | ಶೀತೋಷ್ಣಸುಖದುಃಖೇಷು ತಥಾಮಾನಾಪ
ಮಾನಯೋಃ || ... ... ||೭||

ಪ॥ ಜಿತಾತ್ಮನಃ - ಪ್ರಶಾಂತಸ್ಯ- ಪರಮಾತ್ಮಾ - ಸಮಾಹಿತಃ- | ಶೀತೋಷ್ಣಸುಖ ದುಃಖೇಷು - ತಥಾ- ಮಾನಾಪಮಾನಯೋಃ ॥ ... ... ॥೭॥

ಅ॥ ಶೀತೋಷ್ಣಸುಖದುಃಖೇಷು - ಶೀತೋಷ್ಣಸುಖದುಃಖಗಳಲ್ಲಿ, ತಥಾ- ಆ ಪ್ರಕಾರವೇ, ಮಾನಾಪಮಾನಯೋಃ- ಮಾನಾಪಮಾನಗಳಲ್ಲಿಯೂ, ಜಿತಾತ್ಮನಃ- ಮನಸ್ಸನ್ನು ಜಯಿಸಿದವನಾಗಿಯೂ, ಪ್ರಶಾಂತಸ್ಯ- ಕಾಮಕ್ರೋಧಾದಿಗಳನ್ನಡಗಿಸಿರುವವನಾಗಿಯೂ, ಇರುವಂತವನ, (ಮನಸ್ಸಿನಲ್ಲಿ) ಆತ್ಮಾ- ಆತ್ಮಸ್ವರೂಪವೇ, ಪರಂ- ಅತ್ಯಂತವಾಗಿ, ಸಮಾಹಿತಃ - ಸ್ಥಿರಪ್ರತಿಷ್ಠಿತವಾಗಿರುವುದು. ... ॥೭॥

(ಶಂ॥ ಭಾ॥) ಜಯಿಸಲ್ಪಟ್ಟ ಕಾರ್ಯಕರಣ ಸಂಘಾತವುಳ್ಳವನಾಗಿಯೂ, ರಾಗದ್ವೇಷಗಳಿಲ್ಲದವನಾಗಿಯೂ, ಇರುವವನಿಗೆ ಪರಮಾತ್ಮನು ಪ್ರತ್ಯಕ್ಷವಾಗಿ ಆತ್ಮಭಾವದಿಂದ ಪ್ರವರ್ತಿಸುವನು. ಇಷ್ಟುಮಾತ್ರವಲ್ಲದೆ ಶೀತೋಷ್ಣಗಳಲ್ಲಿಯೂ ಸುಖದುಃಖಗಳಲ್ಲಿಯೂ ಆ ಪ್ರಕಾರವೇ ಮಾನಾಪಮಾನಗಳಲ್ಲಿಯೂ ಸಮಬುದ್ಧಿಯುಳ್ಳವನಾಗಿಯೂ ಆಗುವನೆಂದು ತಿಳಿಯಬೇಕು. ... ... ॥೭॥

(ರಾ॥ ಭಾ॥) ಯೋಗಾರಂಭವಂ ಮಾಡತಕ್ಕ ಸ್ಥಿತಿಯು ಹೇಳಲ್ಪಡುವುದು. ಶೀತ, ಉಷ್ಣ, ಸುಖ, ದುಃಖ, ಇವುಗಳಲ್ಲಿ ಮನಸ್ಸು ಚಲಿಸದೇ ಇದ್ದರೆ ಅಂತವನ ಮನಸ್ಸಿನಲ್ಲಿ ಆತ್ಮಸ್ವರೂಪವು ಸ್ಥಿರಪ್ರತಿಷ್ಠಿತವಾಗಿರುವುದು. ... ... ॥೭॥

ಮೂ॥ ಜ್ಞಾನ ವಿಜ್ಞಾನ ತೃಪ್ತಾತ್ಮಾ ಕೂಟಸ್ಥೋ ವಿಜಿತೇಂದ್ರಿಯಃ । ಯುಕ್ತ ಇತ್ಯುಚ್ಯತೆಯೋಗೀ ಸಮಲೋಷ್ಟಾಶ್ಮಕಾಂಚನಃ ॥ ... ... ॥೮॥

ಪ॥ ಜ್ಞಾನ ವಿಜ್ಞಾನ ತೃಪ್ತಾತ್ಮಾ-ಕೂಟಸ್ಥಃ-ವಿಜಿತೇಂದ್ರಿಯಃ | ಯುಕ್ತಃ-ಇತಿ-ಉಚ್ಯತೆ- ಯೋಗೀ- ಸಮಲೋಷ್ಟಾಶ್ಮಕಾಂಚನಃ ॥

ಅ॥ ಜ್ಞಾನ ವಿಜ್ಞಾನ ತೃಪ್ತಾತ್ಮಾ-(ಶಂ) ಶಾಸ್ತ್ರಜನ್ಯಜ್ಞಾನ ದಿಂದಲೂ ಅನುಭವ ಜನ್ಯ ಜ್ಞಾನದಿಂದಲೂ ಸಂತುಷ್ಟಿಯನ್ನು ಹೊಂದಿರುವ ಅಂತಃಕರಣವುಳ್ಳವ ನಾಗಿಯೂ, (ರಾ) ಆತ್ಮಸ್ವರೂಪ ವಿಷಯವಾದಜ್ಞಾನದಿಂದಲೂ ಅದನ್ನು ಪ್ರಕೃತಿಗಿಂತಲೂ ಭಿನ್ನನಾಗಿರುವುದೆಂದು ವಿಶೇಷವಾಗಿ ತಿಳಿದುಕೊಳ್ಳುವ ಜ್ಞಾನದಿಂದಲೂ ತೃಪ್ತನಾಗಿಯೂ,(ಮ)ಭಗವತ್ಸ್ವರೂಪವನ್ನರಿಯುವುದೆಂಬ ವಿಜ್ಞಾನದಿಂದಲೂ, ಅಥವಾ ಭಗವದ್ವಿಷಯವಾದ ಶ್ರವಣ ಮನನಾದಿಗಳಿಂದುಂಟಾದ ಜ್ಞಾನದಿಂದಲೂ, ಭಗವನ್ಮಾಹಾತ್ಮ್ಯವೆ

ನ್ನು ವಿಶೇಷವಾಗಿ ತಿಳಿಯುವುದೆಂಬವಿಜ್ಞಾನದಿಂದಲೂ, ಅಥವಾ ಶ್ರವಣಕೀರ್ತನಾದಿಗಳಿಂ ದುಂಟಾದ ಜ್ಞಾನದಿಂದ ಭಗವನ್ಮಹಿಮೆಗಳನ್ನು ವಿಶೇಷವಾಗಿ ತಿಳಿಯುವಿಕೆಯೆಂಬ ವಿಜ್ಞಾನ ದಿಂದಲೂ ತೃಪ್ತನಾಗಿಯೂ, (ಗೀ||ವಿ) ಹರಿ ಸರ್ವೋತ್ತಮನೆಂಬುವುದನ್ನು ವೇದದಿಂದತಿಳಿ ದುಕೊಳ್ಳುವುದಂ ಜ್ಞಾನವೆಂತಲೂ, ಶ್ರೀಹರಿಯ ಮಹಿಮೆಗಳನ್ನು ವೇದಗಳಿಂದ ವಿಶೇಷ ವಾಗಿ ತಿಳಿದುಕೊಳ್ಳುವುದಂ ವಿಜ್ಞಾನವೆಂತಲೂ ತಿಳಿದು ಇವುಗಳಿಂದ ಸಂತೃಪ್ತನಾಗಿಯೂ, ಕೂಟಸ್ಥಃ- (ಶಂ) ಚಲಿಸದವನಾಗಿಯೂ, (ರಾ) ದೇವಮನುಷ್ಯಾದಿ ದೇಹಗಳಲ್ಲಿದ್ದರೂ, ಜ್ಞಾನಾಕಾರವಾದ ಆತ್ಮಸ್ವರೂಪದಿಂದಿರುವಂತನಾಗಿಯೂ, (ಮ||ಗೀ||ವಿ) ಕೂಟವೆಂದರೆ ಆಕಾಶವು, ಅದರಂತೆ ಶೀತೋಷ್ಣಾದಿಗಳಿಂದ ವಿಕಾರವಂಹೊಂದದವನಾಗಿಯೂ, ವಿಜಿತೇಂದ್ರಿಯಃ- ಜಯಿಸಲ್ಪಟ್ಟ ಇಂದ್ರಿಯಗಳುಳ್ಳವನಾಗಿಯೂ, ಸಮಲೋಷ್ಟಾಶ್ಮಕಾಂಚನಃ- ಮಣ್ಣು, ಕಲ್ಲು, ಚಿನ್ನವು, ಇವುಗಳಲ್ಲಿ ಸಮದೃಷ್ಟಿಯುಳ್ಳವನಾಗಿಯೂ ಇರುವ; ಯೋಗೀ- ಜ್ಞಾನಯೋಗಿಯಾದವನು, (ರಾ) ಕರ್ಮಯೋಗಿಯು, ಯುಕ್ತ ಇತ್ಯುಚ್ಯತೇ - ಯೋಗಾರೂಢನೆಂಬದಾಗಿ ಹೇಳಲ್ಪಡುತ್ತಾನೆ. (ರಾ) ಆತ್ಮಸ್ವರೂಪವಂ ಸಾಕ್ಷಾತ್ಕರಿಸುವುದೆಂಬಯೋಗಾಭ್ಯಾಸಕ್ಕೆ ಅರ್ಹನೆಂದು ಹೇಳಲ್ಪಡುತ್ತಾನೆ. (ಗೀ||ವಿ) ಸಂಪೂರ್ಣವಾಗಿ ಯೋಗವಂಹೊಂದಿದವನೆಂದು ಹೇಳಲ್ಪಡುತ್ತಾನೆ || ... ... ||೮||

(ರಾ||ಭಾ||) ಆತ್ಮಸ್ವರೂಪವನ್ನು ಸಾಧಾರಣವಾಗಿ ತಿಳಿಯುವುದರಿಂದಲೂ ಅದನ್ನೇ ಪ್ರಕೃತಿಗಿಂತಲೂ ಭಿನ್ನವೆಂಬದಾಗಿ ವಿಶೇಷಾಕಾರದಿಂದ ತಿಳಿಯುವುದರಿಂದಲೂ ತೃಪ್ತನಾಗಿ ದೇವ ಮನುಷ್ಯಾದಿ ಶರೀರಗಳು ಪ್ರಾಪ್ತವಾದರೂ ಜ್ಞಾನವೆಂಬ ಒಂದೇ ಆಕಾರವುಳ್ಳ ಆತ್ಮನಲ್ಲಿರುವಂತವನಾಗಿಯೂ, ಜಿತೇಂದ್ರಿಯನಾಗಿಯೂ, 'ಮಣ್ಣು, ಕಲ್ಲು, ಚಿನ್ನ, ಇವುಗಳಲ್ಲಿ ಸಮದೃಷ್ಟಿಯುಳ್ಳವನಾಗಿಯೂ ಇರುವ ಕರ್ಮಯೋಗಿಯು ಆತ್ಮದರ್ಶನವೆಂಬ ಜ್ಞಾನಯೋಗಕ್ಕೆ ಅರ್ಹನಾಗುವನು.|| ||೮||

ಮೂ || ಸುಹೃನ್ಮಿತ್ರಾರ್ಯುದಾಸೀನ ಮಧ್ಯಸ್ಥ ದ್ವೇಷ್ಯ
ಬಂಧುಷು | ಸಾಧುಷ್ವಪಿಚ ಪಾಪೇಷು ಸಮಬುದ್ಧಿ ರ್ವಿ
ಶಿಷ್ಯತೇ || ... ... ||೯||

ಪ|| ಸುಹೃನ್ಮಿತ್ರಾರ್ಯುದಾಸೀನಮಧ್ಯಸ್ಥ ದ್ವೇಷ್ಯಬಂಧುಷು | ಸಾಧುಷು- ಅಪಿ- ಚ- ಪಾಪೇಷು- ಸಮಬುದ್ಧಿಃ- ವಿಶಿಷ್ಯತೇ.|| ... ... ... ||೯||

ಅ|| ಸುಹೃತ್- (ಶಂ) ಪ್ರತ್ಯುಪಕಾರವನ್ನಿದುರುನೋಡದೆ ಉಪಕಾರ ಮಾಡುವಂತವನು, (ರಾ) ವಯೋವಿಶೇಷವನ್ನಂಗೀಕರಿಸದೆ ತನಗೆ ಯಾವನು ಉಪಕಾರಮಾಡುತ್ತಾನೊ ಅವನು ಸುಹೃತ್, ಮಿತ್ರ- (ಶಂ) ಪ್ರತ್ಯುಪಕಾರಾಪೇಕ್ಷೆಯಿಂದ ಸ್ನೇಹವುಳ್ಳವನು,

(ರಾ) ತನಗೆ ಸಮಾನ ವಯಸ್ಸುಳ್ಳವನಾಗಿಯೂ ಉಪಕಾರವಮಾಡುವಂತವನಾಗಿಯೂ ಇರುವಂತವನು ಮಿತ್ರನು ಅರಿ- (ಶಂ) ಶತ್ರುವು, (ರಾ) ಒಂದುಕಾರಣದಿಂದ ತನಗೆ ಅಪಕಾರ ಮಾಡುವಂತವನು ಅರಿಯೆನ್ನಲ್ಪಡುವನು. ಉದಾಸೀನ- (ಶಂ) ಶತ್ರು ಮಿತ್ರಪಕ್ಷಗಳೆಂಬೀ ಎರಡು ಕಕ್ಷಿಗಳಲ್ಲಿಯೂ ಸೇರದೇ ಇರುವಂತವನು. (ರಾ) ಉಪಕಾರಾಪಕಾರಗಳಿಗೆ ನಿಮಿತ್ತವಿಲ್ಲದಕಾರಣದಿಂದ ಉಪಕಾರಾಪಕಾರಗಳಂ ಬಿಟ್ಟಿರುವಂತವನು. ಮಧ್ಯಸ್ಥ- (ಶಂ) ಪರಸ್ಪರ ವಿರುದ್ಧರಾದವರಂ ಸಮಾಧಾನಪಡಿಸಿ ಅವರಿಗೆ ಹಿತವನ್ನಪೇಕ್ಷಿಸುವಂತವನು (ರಾ) ಅನ್ಯಕಿಂದ ಉಪಕಾರಾಪಕಾರಗಳಂ ಮಾಡದವರು ಮಧ್ಯಸ್ಥರು. ದ್ವೇಷ್ಯ- (ಶಂ) ತನಗೆ ಅಪ್ರಿಯನಾದವನು. (ರಾ) ಜನ್ಮದಿಂದಲೇ ಅನಿಷ್ಟವನ್ನಪೇಕ್ಷಿಸುವಂತವನು ದ್ವೇಷ್ಯನು, ಬಂಧು- ನೆಂಟರು, (ರಾ) ಜನ್ಮದಿಂದಲೇಹಿತಾಪೇಕ್ಷಿಗಳು ಬಂಧುಗಳು. ಇವರಲ್ಲಿಯೂ; ಸಾಧುಷ್ವಪಿ- ಸತ್ವಗುಣ ಪ್ರಧಾನರಾದ ಸಾಧುಜನಗಳಲ್ಲಿಯೂ, (ರಾ) ಧರ್ಮಶೀಲರಲ್ಲಿಯೂ, ಪಾಪೇಷುಚ- ಪಾಪಶೀಲರಲ್ಲಿಯೂ, ಸಮಬುದ್ಧಿಃ – ಸಮಾನವಾದ ಬುದ್ಧಿಯುಳ್ಳವನು, ವಿಶಿಷ್ಯತೇ- ಶ್ರೇಷ್ಠನಾಗಿರುತ್ತಾನೆ, (ರಾ) ಆತ್ಮೈಕಪ್ರಯೋಜನವುಳ್ಳವನಾಗಿ ಸುಹೃನ್ಮಿತ್ರಾದಿಗಳಿಂದ ಪ್ರಯೋಜನವಿಲ್ಲದವನಾಗಿರುವುದರಿಂದಲೂ ದ್ವೇಷ್ಯರಲ್ಲಿ ವಿರೋಧವಿಲ್ಲದವನಾಗಿರುವುದರಿಂದಲೂ ಅವರಲ್ಲಿ ಸಮಬುದ್ಧಿಯುಳ್ಳವನು ಯೋಗಾಭ್ಯಾಸಕ್ಕೆ ಅರ್ಹನಾಗುತ್ತಾನೆ||೯||

(ಮ||ಗೀ||ವಿ||) ಸಮಬುದ್ಧಿಯುಳ್ಳ ಯೋಗಾರೂಢನು ಸರ್ವರಿಗಿಂತಲೂ ಶ್ರೇಷ್ಠನೆಂದುಪದೇಶಿಸುತ್ತಾನೆ. ಪ್ರತ್ಯುಪಕಾರಾಪೇಕ್ಷೆಯಿಲ್ಲದೇ ಉಪಕಾರವನ್ನಾಡುವಂಥಾ ಸುಹೃತ್ತುಗಳಲ್ಲಿಯೂ, ಈ ಕಾರ್ಯವಂ ಮಾಡಿದರೆ ಕಷ್ಟವುಂಟಾಗುವುದೆಂದು ತಿಳಿಸಿ ಅಪಾಯದಿಂದ ರಕ್ಷಿಸುವಂಥಾ ಮಿತ್ರನಲ್ಲಿಯೂ, ತನ್ನನ್ನು ಸಂಹಾರವಮಾಡುವಂಥಾ ಶತ್ರುಗಳಲ್ಲಿಯೂ, ಉಪಕಾರಾಪಕಾರವೆಂಬೀ ಯೆರಡೂ ಇಲ್ಲದ ಉದಾಸೀನನಲ್ಲಿಯೂ, ಉಪಕಾರಾಪಕಾರಗಳೆಂಬೀಯೆರಡನ್ನೂ ಮಾಡುವಂಥಾಮಧ್ಯಸ್ಥನಲ್ಲಿಯೂ, ಅಹಿತವನ್ನು ಮಾಡುವಂಥಾ ದ್ವೇಷ್ಯನಲ್ಲಿಯೂ, ದೇಹಸಂಬಂಧಿಯಾದ ಬಂಧುಗಳಲ್ಲಿಯೂ, ಪುಣ್ಯವುಳ್ಳ ಸಾಧುಗಳಲ್ಲಿಯೂ ಪಾಪಿಗಳಲ್ಲಿಯೂ ಸಮಬುದ್ಧಿಯುಳ್ಳ ಯೋಗಾರೂಢನು ಸಮಸ್ತ ಯೋಗಿವರ್ಗಕ್ಕಿಂತಲೂ ಶ್ರೇಷ್ಠನಾಗುತ್ತಾನೆ. ಸಮಬುದ್ಧಿಯುಳ್ಳವನು ಯಾವನೆಂದರೆ| ಈ ಸುಹೃತ್ತಾದಿಗಳು ಜೀವಸ್ವರೂಪಗತವಲ್ಲವು. ಚಿದ್ರೂಪತ್ವವೇ ಜೀವಸ್ವರೂಪವು. ಆದುದರಿಂದ ದೇಹೇಂದ್ರಿಯಾಂತಃಕರಣಾದಿಗಳಿಂದ ಬಂದ ಈ ಸುಹೃತ್ತಾದಿಗಳು ವೈಷಮ್ಯಾವಹವಲ್ಲವೆಂಬದಾಗಿ ತಿಳಿದವನು ಸಮಬುದ್ಧಿಯುಳ್ಳವನು. (ಅಥವಾ) ಸುಹೃದಾದಿಗಳಲ್ಲಿರುವ ಪರಮಾತ್ಮ

ಸಡೂಪಕ್ಕೆ ಸಾಮ್ಯವಂನೋಡುವಂತವನು ಸಮಬುದ್ಧಿಯುಳ್ಳವನು. (ಯದ್ವಾ) ಸುಹೃದಾದಿಗಳಲ್ಲಿರುವ ಯಾವ ಸುಹೃತ್ತ್ವಾದಿ ಧರ್ಮಗಳುಂಟೋ ಅವೆಲ್ಲವೂ ಈಶ್ವರನಿಂದ ಮಾಡಲ್ಪಟ್ಟಿರುವುವಲ್ಲದೆ ಅವುಗಳಲ್ಲಿ ನನಗೆ ಸ್ವಾತಂತ್ರ್ಯವಿಲ್ಲ ವೆಂಬದಾಗಿ ಭಗವದ್ವಿಷಯದಲ್ಲಿ ಸಮಬುದ್ಧಿಯುಳ್ಳವನು. (ಅಥವಾ) ಸುಹೃನ್ಮಿತ್ರಾದಿಗಳ ವಿಷಯದಲ್ಲಿಯಾವಯಾವ ರೀತಿಯಾಗಿರಬೇಕೆಂದು ಶಾಸ್ತ್ರವುಹೇಳುತ್ತದೊ ಅದಂ ತಿಳಿದು ಸುಹೃದಾದಿ ಜೀವ ವಿಷಯದಲ್ಲಾರೀತಿಯಾಗಿರುವವನು ಸಮಬುದ್ಧಿಯುಳ್ಳವನು. ಇಂತಹ ಸಮಬುದ್ಧಿಯುಳ್ಳವನು ಸಮಸ್ತ ಯೋಗಿ ವರ್ಗಕ್ಕಿಂತಲೂ ಅಧಿಕನಾಗಿರುವನೆಂದು ತಾತ್ಪರ್ಯವು. ||೯||

ಮೂ|| ಯೋಗೀಯುಂಜೀತಸತತ ಮಾತ್ಮಾನಂ ರಹಸಿ ಸ್ಥಿತಃ | ಏಕಾಕೀ ಯತ ಚಿತ್ತಾತ್ಮಾ ನಿರಾಶೀ ರಪರಿಗ್ರಹಃ|| ... ... ... ||೧೦||

ಪ|| ಯೋಗೀ- ಯುಂಜೀತ- ಸತತಂ- ಆತ್ಮಾನಂ- ರಹಸಿ - ಸ್ಥಿತಃ | ಏಕಾಕೀ- ಯತಚಿತ್ತಾತ್ಮಾ- ನಿರಾಶೀಃ- ಅಪರಿಗ್ರಹಃ|| ... ... ||೧೦||

ಅ|| ಯತಚಿತ್ತಾತ್ಮಾ- ಮನಸ್ಸು, ದೇಹವು, ಇಂದ್ರಿಯಗಳು, ಇವುಗಳಂ ಸ್ವಾಧೀನಪಡಿಸಿಕೊಂಡವನಾಗಿಯೂ, ನಿರಾಶೀಃ-ಆಶಾರಹಿತನಾಗಿಯೂ, (ರಾ) ಆತ್ಮನಲ್ಲಲ್ಲದೇ ಇತರವಸ್ತುಗಳಲ್ಲಿ ಇಚ್ಛೆಯಿಲ್ಲದವನಾಗಿಯೂ, ಅಪರಿಗ್ರಹಃ- ತನಗೆ ಅಪೇಕ್ಷಿತವೆಂಬದಾಗಿ ಯಾವ ವಸ್ತುವನ್ನೂ ಸ್ವೀಕರಿಸದೇ ಇರುವಂತವನಾಗಿಯೂ, (ರಾ) ಆತ್ಮನಲ್ಲಲ್ಲದೇ ಇತರವಸ್ತುಗಳಲ್ಲಿ ಅಭಿಮಾನ ಶೂನ್ಯನಾಗಿಯೂ, ಇರುವ; ಯೋಗೀ- ಯೋಗಿಯು, (ರಾ) ಕರ್ಮಯೋಗನಿಷ್ಠನು, (ಗೀ||ವಿ) ಧ್ಯಾನೋಪಾಯವನ್ನನುಷ್ಠಿಸುವಂಥಾ ಯೋಗಿಯು, ರಹಸಿ- ಏಕಾಂತಸ್ಥಲದಲ್ಲಿ, ಏಕಾಕೀ- ಒಬ್ಬನಾಗಿಯೇ, ಸ್ಥಿತಃ- ಸ್ಥಿರವಾಗಿದ್ದುಕೊಂಡು, ಆತ್ಮಾನಂ- (ರಾ) ತನ್ನನ್ನು, (ಶಂ) ಅನ್ತಃಕರಣವನ್ನು, ಸತತಂ - ಸರ್ವಕಾಲದಲ್ಲಿಯೂ,(ರಾ) ಪ್ರತಿದಿನಗಳಲ್ಲನುಷ್ಠಿಸುವ ಯೋಗಾಭ್ಯಾಸಕಾಲದಲ್ಲಿ, ಯುಂಜೀತ- ನಿಲ್ಲಿಸಬೇಕು. (ಗೀ||ವಿ) ಅಖಂಡಧ್ಯಾನದಲ್ಲಿ ನಿಲ್ಲಿಸಬೇಕು.|| ... ... ... ||೧೦||

(ಶಂ|ಭಾ||) ಸುಹೃನ್ಮಿತ್ರಾದಿಗಳಲ್ಲಿ ಸಮಬುದ್ಧಿಯುಳ್ಳವನು ಯೋಗಾರೂಢರಲ್ಲಿ ಶ್ರೇಷ್ಠನಾಗಿರುವುದರಿಂದಲೇ ಅಂತವನು ಯೋಗಾನುಷ್ಠಾನದಲ್ಲಿ ಪ್ರಯತ್ನವಂ ಮಾಡಬೇಕೆಂದು ಹೇಳುತ್ತಾ ಯೋಗಾಂಗಗಳಂ ಹೇಳಿದ ಅನಂತರದಲ್ಲಿ ಚಿತ್ತ ಸಮಾಧಾನವೆಂಬ ಪ್ರಧಾನವಾದ

ಯೋಗಾಂಗವನ್ನೀ ಶ್ಲೋಕದಿಂದುಪದೇಶಿಸುತ್ತಾನೆ. ಧ್ಯಾನಯೋಗವುಳ್ಳವನು ಸನ್ಯಾಸವಂ ಸ್ವೀಕರಿಸಿದವನಾಗಿಯೂ, ಅಂತಃಕರಣದೇಹಗಳನ್ನು ಸ್ವಾಧೀನವಮಾಡಿಕೊಂಡವನಾಗಿಯೂ ಯಾವುದರಲ್ಲಿಯೂ ಆಶಾರಹಿತನಾಗಿಯೂ, ತನಗೆ ಉಪಯೋಗಿಸುವುದೆಂಬದಾಗಿ ಕೌಪೀನಾದಿಗಳನ್ನು ಕೂಡ ಸ್ವೀಕರಿಸದವನಾಗಿಯೂ, ದುಷ್ಟಜನಗಳಿಲ್ಲದ ಏಕಾಂತಸ್ಥಲವಾದ ಪರ್ವತಗುಹಾದಿಗಳಲ್ಲಿ ವಾಸವಮಾಡುವಂತವನಾಗಿಯೂ ಇರುತಾ ಅಂತಃಕರಣವನ್ನು ಪರಮಾತ್ಮನಲ್ಲಿ ಸ್ಥಿರವಾಗಿ ಇಡಬೇಕು.॥ ॥೧೦॥

ಮೂ ॥ ಶುಚೌ ದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ । ನಾತ್ಯುಚ್ಛ್ರಿತಂ ನಾತಿ ನೀಚಂ ಚೇಲಾಜಿನ ಕುಶೋತ್ತರಂ ॥ ೧೧ ॥ ತತ್ರೈಕಾಗ್ರಂ ಮನಃ ಕೃತ್ವಾ ಯತಚಿತ್ತೇಂದ್ರಿಯಕ್ರಿಯಃ । ಉಪವಿಶ್ಯಾಸನೇ ಯುಂಜ್ಯಾದ್ಯೋಗಮಾತ್ಮವಿಶುದ್ಧಯೆ॥ ॥೧೨॥

ಅ॥ ಶುಚೌ- ದೇಶೇ- ಪ್ರತಿಷ್ಠಾಪ್ಯ- ಸ್ಥಿರಂ - ಆಸನಂ - ಆತ್ಮನಃ । ನಾತ್ಯುಚ್ಛ್ರಿತಂ- ನಾತಿನೀಚಂ- ಚೇಲಾಜಿನಕುಶೋತ್ತರಂ ॥ ೧೧ ॥ ತತ್ರ- ಏಕಾಗ್ರಂ- ಮನಃ - ಕೃತ್ವಾ- ಯತಚಿತ್ತೇಂದ್ರಿಯಕ್ರಿಯಃ । ಉಪವಿಶ್ಯ - ಆಸನೇ - ಯುಂಜ್ಯಾತ್ - ಯೋಗಂ- ಆತ್ಮವಿಶುದ್ಧಯೇ॥ ... ... ... ॥೧೨॥

ಅ॥ ಶುಚೌ- ಪರಿಶುದ್ಧವಾದ, ದೇಶೇ- ಪ್ರದೇಶದಲ್ಲಿ, ನಾತ್ಯುಚ್ಛ್ರಿತಂ- ಬಹಳಯುತ್ತರವಾಗದೆಯೂ, ನಾತಿನೀಚಂ- ಅತ್ಯಂತ ಆಳವಾಗಿಲ್ಲದೆಯೂ, ಚೇಲಾಜಿನಕುಶೋತ್ತರಂ- ವಸ್ತ್ರವು, ಜಿಂಕೇಚರ್ಮ, ದರ್ಭೆಗಳು, ಇವುಗಳನ್ನೊಂದೊಂದಾಗಿ ಮೇಲೆ ಮೇಲೆ ಹಾಕಲ್ಪಟ್ಟಿರುವುದಾಗಿಯೂ ಇರುವ, ಸ್ಥಿರಮಾಸನಂ- ಸ್ಥಿರವಾದ ಆಸನವನ್ನು, (ರಾ) ಮರದಿಂದ ಮಾಡಲ್ಪಟ್ಟ ಆಸನವನ್ನು, ಆತ್ಮನಃ-ತನಗಾಗಿ, ಪ್ರತಿಷ್ಠಾಪ್ಯ- ಹಾಕಿಕೊಂಡು, ತತ್ರಾಸನ ಉಪವಿಶ್ಯ- ಆ ಆಸನದಮೇಲೆ ಕೂತುಕೊಂಡು, ಮನಃ-ಮನಸ್ಸನ್ನು, ಏಕಾಗ್ರಂಕೃತ್ವಾ - ನಿಶ್ಚಲವಾಗಿಮಾಡಿ, ಯತಚಿತ್ತೇಂದ್ರಿಯಕ್ರಿಯಃ - ಮನೋವ್ಯಾಪಾರೇಂದ್ರಿಯವ್ಯಾಪಾರಗಳನ್ನು ಅಡಗಿಸಿದವನಾಗಿ, ಆತ್ಮವಿಶುದ್ಧಯೇ- (ಶಂ) ಅಂತಃಕರಣಶುದ್ಧಿಗಾಗಿ, ಬಂಧನಿವೃತ್ತಿಗಾಗಿ, ಯೋಗಂ-(ರಾ) ಆತ್ಮದರ್ಶನವನ್ನು,(ಶಂ)ಬ್ರಹ್ಮಧ್ಯಾನವನ್ನು, ಯುಂಜ್ಯಾತ್- ಮಾಡಬೇಕು.॥ ... ... ... ೧೧॥೧೨॥

(ರಾ॥ಭಾ॥) ಅಶುದ್ಧ ಪುರುಷರಿಂದಲೂ, ಅಶುದ್ಧ ವಸ್ತುಗಳಿಂದಲೂ ಸ್ಪರ್ಶಿಸಲ್ಪಡದ ಪರಿಶುದ್ಧವಾದ ಸ್ಥಾನದಲ್ಲಿ ಮರ ಮೊದಲಾದವುಗಳಿಂದ ಮಾಡಲ್ಪಟ್ಟು, ಅತ್ಯುನ್ನತವು ಅತಿಆಳವು ಇಲ್ಲದೆ ಸಮವಾಗಿರುವ

ಒಂದಾಸನದಲ್ಲಿ ದರ್ಭೆಗಳು, ಜಿಂಕೆಯಚರ್ಮ, ವಸ್ತ್ರ, ಇವುಗಳನ್ನೊಂದರಮೇಲೊಂದಾಗಿ ಹಾಕಿ ಅದರಲ್ಲಿ ಒರಗಿ ಕೂತುಕೊಂಡವನಾಗಿ ಮನಸ್ಸನ್ನು ಸ್ಥಿರಪಡಿಸಿಕೊಂಡು, ಇಂದ್ರಿಯ ಮನೋವ್ಯಾಪಾರಗಳನ್ನು ಅತ್ಯಂತವಾಗಿ ನಿರೋಧಿಸಿ ಬಂಧನಿವೃತ್ತಿಗಾಗಿ ಆತ್ಮಸಾಕ್ಷಾತ್ಕಾರವಂ ಮಾಡಬೇಕು. ... ... ॥೧೧॥೧೨॥

ಮೂ॥ ಸಮಂಕಾಯ ಶಿರೋಗ್ರೀವಂ ಧಾರಯನ್ನಚಲಂಸ್ಥಿರಃ । ಸಂಪ್ರೇಕ್ಷ್ಯನಾಸಿಕಾಗ್ರಂಸ್ವಂ ದಿಶಶ್ಚಾನವಲೋಕಯನ್ ॥೧೩॥ ಪ್ರಶಾನ್ತಾತ್ಮಾ ವಿಗತಭೀರ್ಬ್ರಹ್ಮಚಾರಿವ್ರತೇಸ್ಥಿತಃ । ಮನಸ್ಸಂಯಮ್ಯಮಚ್ಚಿತ್ತೋಯುಕ್ತಆಸೀತಮತ್ಪರಃ ॥ ... ॥೧೪॥

ಪ॥ ಸಮಂ- ಕಾಯಶಿರೋಗ್ರೀವಂ- ಧಾರಯನ್-ಅಚಲಂ-ಸ್ಥಿರಃ । ಸಂಪ್ರೇಕ್ಷ್ಯ-ನಾಸಿಕಾಗ್ರಂ- ಸ್ವಂ- ದಿಶಃ-ಚ-ಅನವಲೋಕಯನ್॥ ಪ್ರಶಾಂತಾತ್ಮಾ- ವಿಗತಭೀಃ- ಬ್ರಹ್ಮಚಾರಿವ್ರತೇ-ಸ್ಥಿತಃ॥ ಮನಃ- ಸಂಯಮ್ಯ - ಮಚ್ಚಿತ್ತಃ- ಯುಕ್ತಃ- ಆಸೀತ-ಮತ್ಪರಃ॥೧೩॥

ಅ॥ ಕಾಯಶಿರೋಗ್ರೀವಂ- ದೇಹ, ತಲೆ, ಕಂಠ, ಇವುಗಳನ್ನು, ಅಚಲಂ- ಚಲಿಸದಂತೆ, ಸಮಂಧಾರಯನ್ - ಸಮವಾಗಿಟ್ಟುಕೊಂಡವನಾಗಿಯೂ, ಸ್ಥಿರಃ- ಸ್ಥಿರವಾಗಿರುವಂತವನಾಗಿಯೂ, ಸ್ವಂನಾಸಿಕಾಗ್ರಂ - ತನ್ನ ಮೂಗಿನ ಅಗ್ರಭಾಗವನ್ನು, ಸಂಪ್ರೇಕ್ಷ್ಯಚ- ನೋಡಿಕೊಂಡೂ, ದಿಶಃ-ದಿಕ್ಕುಗಳನ್ನು, ಅನವಲೋಕಯನ್- ನೋಡದೇ ಇರುವಂತವನಾಗಿಯೂ, ಪ್ರಶಾಂತಾತ್ಮಾ- ಮನಸ್ಸಮಾಧಾನವುಳ್ಳವನಾಗಿಯೂ, ವಿಗತಭೀಃ- ಭಯಗಳನ್ನು ಬಿಟ್ಟವನಾಗಿಯೂ, ಬ್ರಹ್ಮಚಾರಿವ್ರತೇಸ್ಥಿತಃ - ಬ್ರಹ್ಮಚಾರಿಯ ವ್ರತದಲ್ಲಿರುವಂತವನಾಗಿಯೂ, ಇರುವ (ರಾ) ಬ್ರಹ್ಮಚರ್ಯವ್ರತವೆಂದರೆ ಬ್ರಹ್ಮವೆಂಬುವ ಆತ್ಮನನ್ನೇ ಚಿಂತಿಸುತಿರುವ ಸ್ಥಿತಿಯು. (ಶಂ) ಗುರು ಶುಶ್ರೂಷಾ ಭಿಕ್ಷಾಭುಕ್ತಿಯೇ ಮೊದಲಾದದ್ದು ಬ್ರಹ್ಮಚಾರಿವ್ರತವು. ಯುಕ್ತಃ-ಯೋಗಿಯು, ಮನಸ್ಸಂಯಮ್ಯ-ಮನಸ್ಸನ್ನು ವಿಷಯಗಳಲ್ಲಿ ಹೋಗದಂತೆ ನಿರೋಧಿಸಿ, ಮಚ್ಚಿತ್ತಃ- ನನ್ನಲ್ಲಿಡಲ್ಪಟ್ಟಮನಸ್ಸುಳ್ಳವನಾಗಿಯೂ, ಮತ್ಪರಃ-ನನ್ನನ್ನೇ ಚಿಂತಿಸುತಲಿರುವಂತವನಾಗಿಯೂ, ಆಸೀತ-ಇರಬೇಕು. ॥೧೩॥೧೪॥

(ಶಂ॥ ಭಾ॥) ಬಾಹ್ಯಸಾಧನವಾದ ಆಸನವು ಹೇಳಲ್ಪಟ್ಟಿತು. ಈಗ ಶರೀರಧಾರಣವು ಹೇಗೆಂದರೆ ಅದು ಹೇಳಲ್ಪಡುವುದು. ಶರೀರ ಶಿರಃ ಕಂಠಗಳನ್ನು ಚಲಿಸದಂತೆ ಸಮವಾಗಿಟ್ಟುಕೊಳ್ಳುತ್ತಾ ಚಿರಕಾಲವಾರೀತಿಯಾಗಿ ಚಲಿಸದೆ ತನ್ನನಾಸಾಗ್ರ (ಮೂಗಿನ ಕೊನೆಯಂ) ನ್ನವ

ನೋಡುವವನಂತೆಯೂ ಇರುತ್ತಾ ಹೊರಗೆ ದಿಕ್ಕುಗಳನ್ನು ನೋಡದೆ ಜಾಗ ರೂಕನಾಗಿ ತನಗೆ ಯೋಗಾಭ್ಯಾಸವನ್ನು ಪದೇಶಿಸಿದ ಗುರುವನ್ನು ಶು ಶ್ರೂಷಾದಿಗಳಿಂದ ಸತ್ಕರಿಸುವಂತವನಾಗಿಯೂ, ಶರೀರ ಧಾರಣಾರ್ಥ ವಾಗಿ ಭಿಕ್ಷಾಚರಣೆಯಂ ಮಾಡುವಂತವನಾಗಿಯೂ, ಸ್ತ್ರೀ ಚಿಂತೆಯಂ ಬಿಟ್ಟವನಾಗಿಯೂ, ಸಂಸಾರಾಬ್ಧಿಯನ್ನು ಹೇಗೆದಾಟುವೆನು ? ಎಂಬ ಭಯವನ್ನು ಬಿಟ್ಟವನಾಗಿಯೂ, ಮನಸ್ಸನ್ನು ವಿಷಯಗಳಲ್ಲಿ ಪ್ರವ ರ್ತಿಸದಂತೆ ನಿವೃತ್ತಿಸಿಕೊಂಡು ನಿಶ್ಚಲವಾದ ಮನಸ್ಸುಳ್ಳವನಾಗಿಯೂ ಗುರೂಪದೇಶದಿಂದ ಸ್ವಸ್ವರೂಪದಲ್ಲಿ ಮನಸ್ಸನ್ನು ನಿಲ್ಲಿಸುವಂತವನಾ ಗಿಯೂ, ಸ್ವಸ್ವರೂಪ ಪ್ರಾಪ್ತಿಯನ್ನೇ ಅಪೇಕ್ಷಿಸಿಕೊಂಡು ಆ ಪರಮಾತ್ಮನನ್ನು ಧ್ಯಾನಿಸುವಂತವನಾಗಿಯೂ, ಯೋಗಿಯಾದವನಿ ರಬೇಕು. ... ... ... ||೧೩|| ೧೪||

ಮೂ || ಯುಂಜನ್ನೇವಂ ಸದಾತ್ಮಾನಂ ಯೋಗೀನಿ
ಯತಮಾನಸಃ | ಶಾಂತಿಂ ನಿರ್ವಾಣಪರಮಾಂ ಮತ್ಸಂ
ಸ್ಥಾಮಧಿಗಚ್ಛತಿ || ... ... ||೧೫||

ಪ|| ಯುಂಜನ್- ಏವಂ- ಸದಾ- ಆತ್ಮಾನಂ- ಯೋಗೀ - ನಿಯತಮಾನಸಃ | ಶಾಂತಿಂ- ನಿರ್ವಾಣಪರಮಾಂ- ಮತ್ಸಂಸ್ಥಾಂ- ಅಧಿಗಚ್ಛತಿ || ... ||೧೫||

ಅ|| ನಿಯತಮಾನಸಃ- ವಿಷಯಗಳಿಂದ ನಿವರ್ತಿಸಲ್ಪಟ್ಟ ಮನಸ್ಸುಳ್ಳ, ಯೋಗೀ- ಯೋ ಗಿಯು, ಸದಾ - ಯಾವಾಗಲೂ, ಏವಂ- ಈ ಪೂರ್ವೋಕ್ತ ಪ್ರಕಾರವಾಗಿ, ಆತ್ಮಾನಂ- (ಶಂ|| ರಾ||) ಮನಸ್ಸನ್ನು, (ಗೀ|| ವಿ|| ) ಪರಮಾತ್ಮನನ್ನು, ಯುಂಜನ್ - ನಿಲ್ಲಿಸುವಂತವ ನಾಗಿ, (ಗೀ|| ವಿ||) ಧ್ಯಾನಿಸುವಂತವನಾಗಿ, ನಿರ್ವಾಣಪರಮಾಂ- (ಶಂ) ಮೋಕ್ಷವನ್ನೇ ನಿ ಷ್ಠೆಯಾಗಿ ಉಳ್ಳ, (ರಾ) ಸುಖವನ್ನೇ ಅವಧಿಯಾಗಿಯುಳ್ಳ, ಮ|| ಗೀ|| ವಿ ) ಶರೀರಪತನ ವಾದಮೇಲೆ, ಮತ್ಸಂಸ್ಥಾಂ- (ಶಂ) ನನ್ನ ಅಧೀನವಾಗಿರುವ, (ಮ|| ರಾ||) ನನ್ನಲ್ಲಿರುವಿ ಕೆ ಎಂಬ, ಶಾನ್ತಿಂ-ಸುಖವನ್ನು, ಅಧಿಗಚ್ಛತಿ-ಹೊಂದುತ್ತಾನೆ. ||೧೫||

( ರಾ|| ಭಾ || ) ಈ ಪ್ರಕಾರವಾಗಿ ಮನಸ್ಸಿಗೆ ಕ್ಷೇಮಸ್ಥಾನ ವಾದ ನಮ್ಮಲ್ಲಿ ಸರ್ವಕಾಲದಲ್ಲಿಯೂ ಮನಸ್ಸನ್ನು ನಿಲ್ಲಿಸುವಂತವನು, ನಮ್ಮ ಸಂಬಂಧದಿಂದ ಪರಿಶುದ್ಧವಾಗಿ ಚಲಿಸದೇ ಇರುವ ಆ ಮನಸ್ಸಿ ನಿಂದ ನಮ್ಮಲ್ಲಿರುವಿಕೆಯೆಂಬ ಸರ್ವೋತ್ಕೃಷ್ಟವಾದ ಆನಂದವನ್ನು ಹೊಂದುವನು. ... ... ||೧೫||

ನಾತ್ಯಶ್ನತಸ್ತು ಯೋಗೋಽಸ್ತಿ ನಚೈಕಾನ್ತಮನಶ್ನತಃ । ನಚಾತಿಸ್ವಪ್ನಶೀಲಸ್ಯ ಜಾಗ್ರತೋನೈವ ಚಾರ್ಜುನ ॥೧೬॥ ಯುಕ್ತಾಹಾರ ವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು । ಯುಕ್ತಸ್ವಪ್ನಾವಬೋಧಸ್ಯ ಯೋಗೋಭವತಿದುಃಖಹಾ ॥ ... ॥೧೭॥

ಪ॥ ನ-ಅತ್ಯಶ್ನತಃ ತು- ಯೋಗಃ- ಅಸ್ತಿ-ನ-ಚ-ಏಕಾಂತಂ-ಅನಶ್ನತಃ। ನ-ಚ-ಅತಿಸ್ವಪ್ನಶೀಲಸ್ಯ- ಜಾಗ್ರತಃ-ನ- ಏವ- ಚ- ಅರ್ಜುನ ॥೧೬॥ ಯುಕ್ತಾಹಾರವಿಹಾರಸ್ಯ-ಯುಕ್ತಚೇಷ್ಟಸ್ಯ-ಕರ್ಮಸು। ಯುಕ್ತಸ್ವಪ್ನಾವಬೋಧಸ್ಯ-ಯೋಗಃ-ಭವತಿ-ದುಃಖಹಾ॥೧೭॥

ಅ॥ ಹೇ‌ಅರ್ಜುನ-ಎಲೈ ಅರ್ಜುನನೇ, ಯೋಗಃ- ಧ್ಯಾನಯೋಗವು,ಅತ್ಯಶ್ನತಃ- ಅಧಿಕವಾದ ಆಹಾರವಂ ಸ್ವೀಕರಿಸುವಂತವನಿಗೆ,ನತ್ವಸ್ತಿ- ಇಲ್ಲವು,ಏಕಾಂತಮನಶ್ನತಶ್ಚ-ಅತ್ಯಂತವಾಗಿ ಆಹಾರವಂತೆಗದುಕೊಳ್ಳದವನಿಗೆ, ನ- ಇಲ್ಲವು, ಅತಿಸ್ವಪ್ನಶೀಲಸ್ಯ- ಅಧಿಕನಿದ್ರೆಯುಳ್ಳವನಿಗೆ, ನಚ-ಇಲ್ಲವು, ಜಾಗ್ರತಶ್ಚ- ಯಾವಾಗಲೂನಿದ್ರೆ ತನಾಗದೇಇರುವವನಿಗೂ, ನೈವ-ಇಲ್ಲವು, ಯುಕ್ತಾಹಾರವಿಹಾರಸ್ಯ- ಮಿತವಾದ ಆಹಾರವಿಹಾರಗಳುಳ್ಳವನಾಗಿಯೂ, ಕರ್ಮಸುಯುಕ್ತಚೇಷ್ಟಸ್ಯ- ಕರ್ಮಗಳನ್ನು ಅವಶ್ಯಕವಾದಮಟ್ಟಿಗೂ ಮಾಡುವಂತವನಾಗಿಯೂ, ಯುಕ್ತಸ್ವಪ್ನಾವಬೋಧಸ್ಯ-ಮಿತವಾದ ನಿದ್ರಾಜಾಗ್ರತೆಗಳನ್ನು ಹೊಂದಿರುವಂತವನಾಗಿಯೂ ಇರುವವನಿಗೆ, ದುಃಖಹಾ- (ಮ) ಜನನ ಮರಣಾತ್ಮಕಗಳಾದ ಸಂಸಾರದುಃಖವನ್ನು ಹೋಗಲಾಡಿಸುವ, ಯೋಗಃ - ಧ್ಯಾನಯೋಗವು, ಭವತಿ - ಉಂಟಾಗುವುದು. ... ... ... ... ॥೧೬॥೧೭॥

(ಶಂ॥ಭಾ॥) ಈ ಶ್ಲೋಕದಿಂದ ಯೋಗಸಿದ್ಧಿಗೋಸ್ಕರ ಯೋಗಿಯಾದವನು ಆಹಾರವಿಹಾರ ನಿದ್ರಾದಿಗಳಲ್ಲಾಚರಿಸಬೇಕಾದ ನಿಯಮಗಳನ್ನುಪದೇಶಿಸುತ್ತಾನೆ. "- ಅಷ್ಟಗ್ರಾಸಾದಿ ಪರಿಮಾಣವುಳ್ಳದ್ದಾಗಿಯೂ, ಅಥವಾ ತನ್ನ ಹೊಟ್ಟೆಗೆ ಪರಿಮಿತ ವಾದದ್ದಾಗಿಯೂ, ಶ್ರುತಿಸ್ಮೃತಿಗಳಲ್ಲಿ ಹೇಳಲ್ಪಟ್ಟಿರುವುದಾಗಿಯೂ, ಪ್ರಸಿದ್ಧವಾಗಿಯೂಇರುವ ಅನ್ನವನ್ನು ಭೋಜನಮಾಡಿದರೆ ಅನುಷ್ಠಾನ ಯೋಗ್ಯತೆಯನ್ನುಂಟುಮಾಡಿ ಅಂತವನನ್ನು ಅನರ್ಥಗಳಿಂದ ಅದು ಕಾಪಾಡುವುದು. ಅಷ್ಟಗ್ರಾಸಾದಿ ಪರಿಮಾಣಕ್ಕಿಂತಲೂ ಅಧಿಕವಾದ ಅನ್ನವುಅನರ್ಥವನ್ನುಂಟುಮಾಡುವುದು. ಯಾವ ಅನ್ನವು ಶಾಸ್ತ್ರೋಕ್ತವಾದ ಪ್ರಮಾಣಕ್ಕಿಂತಲೂ ಅತ್ಯಂತಸ್ವಲ್ಪವಾದದ್ದೊ ಅಂಥಾಅನ್ನವಂ ತಿನ್ನುವಂತವನಿಗೆ ಅನುಷ್ಠಾನಯೋಗ್ಯತೆಯನ್ನುಂಟುಮಾಡಿ ರಕ್ಷಿಸುವುದಕ್ಕೆ ಶಕ್ತಿಇಲ್ಲದೆ

ಇರುವುದು ” ಎಂಬ ಶ್ರುತಿಪ್ರಮಾಣಾನುಸಾರವಾಗಿ ಯೋಗಿಯು ಶಾಸ್ತ್ರೋಕ್ತಪ್ರಮಾಣಕ್ಕಿಂತಲೂ ಅಧಿಕವಾಗಿಯೂ ಸ್ವಲ್ಪವಾಗಿಯೂ ಭುಜಿಸಕೂಡದು. ಈ ರೀತಿಯಾಗಿಲ್ಲದೆ “ ಅರ್ಧಂಸವ್ಯಂಜನಾನ್ನಸ್ಯ ತೃತೀಯಮುದಕಸ್ಯತು । ವಾಯೋಸ್ಸಂಚರಣಾರ್ಥಂತು ಚತುರ್ಥ ಮವಶೇಷಯೇತ್॥ ಪೂರಯೇದಶನೇನಾರ್ಧಂತೃತೀಯ ಮುದಕೇನತು। ವಾಯೋಸ್ಸಂಚರಣಾರ್ಥಾಯಚತುರ್ಥಮವಶೇಷಯೇತ್।” ಎಂಬಯೋಗಶಾಸ್ತ್ರಪ್ರಸಿದ್ಧವಾದ ಆಹಾರಕ್ಕಿಂತಲೂ ನ್ಯೂನಾಧಿಕವಾಗಿ ಅನ್ನವಂ ಭುಜಿಸುವಂತವನಿಗೆ ಯೋಗಸಿದ್ಧಿಯಾಗುವುದಿಲ್ಲವು. ಮತ್ತು ಯೋಗಶಾಸ್ತ್ರೋಕ್ತಪ್ರಮಾಣವನ್ನತಿಕ್ರಮಿಸಿ ನಿದ್ರಾಜಾಗರಾದಿಗಳನ್ನಾಶ್ರಯಿಸುವಂತವನಿಗೂ ಯೋಗಸಿದ್ಧಿಯಾಗುವುದಿಲ್ಲವು. ಆದರೆ ಯೋಗಸಿದ್ಧಿ ಯಾಗುವುದುತಾನೆ ಹೇಗೆ? ಎಂದರೆ ಅದನ್ನು ಹೇಳುತ್ತಾನೆ. ನಿಯತ ಪರಿಮಾಣವಾದ ಆಹಾರವಿಹಾರಗಳುಳ್ಳವನಾಗಿಯೂ, ಮಿತವಾದ ನಿದ್ರಾಜಾಗರವುಳ್ಳವನಾಗಿಯೂ ಪ್ರಣವಜಪವು ವೇದಾನ್ತವಾಕ್ಯಪಠನವೇ ಮೊದಲಾದ ಸಕಲ ವ್ಯಾಪಾರಗಳಲ್ಲಿಯೂ ವಾಗಾದೀಂದ್ರಿಯಚೇಷ್ಟೆಗಳನ್ನು ಮಿತವಾಗಿ ಮಾಡುವಂತವನಾಗಿಯೂ ಇರುವ ಯೋಗಿಯಾದವನಿಗೆ ಯೋಗವು ಸಮಸ್ತಸಂಸಾರದುಃಖಕ್ಷಯವನ್ನು ಮಾಡುವುದೆಂದುತಾತ್ಪರ್ಯವು ॥ .. ... ॥೧೬॥೧೭॥

(ಆ ॥ ಗಿ ॥ ) “ ನಿದ್ರಾಪ್ರಮಾಣವು- ಜಾಗ್ರಯಾದ್ದಶ ನಾಡ್ಯಸ್ತು ನಿದ್ರಾತು ದಶನಾಡಿಕಾಃ । ಪಶ್ಚಾ ಜ್ಜಾಗರಣಂ ತದ್ವ ದ್ದಶನಾಡ್ಯಸ್ತು ಯೋಗಿನಃ ॥ ” ಅರ್ಥವು- ರಾತ್ರಿಕಾಲದಲ್ಲಿ ಮೊದಲು ಹತ್ತು ಘಟಿಕಾ ಪರ್ಯಂತವಾಗಿ ಜಾಗರವೂ, ಅದಕ್ಕೆಮೇಲೆ ಹತ್ತುಘಟಿಕಾಪರ್ಯನ್ತವು ನಿದ್ರೆಯೂ, ತದನನ್ತರ ಹತ್ತು ಘಟಿಕಾ ಪರ್ಯನ್ತವಾಗಿ ಪುನಶ್ಚ ಜಾಗರವೂ, ಎಂಬಿವೆ ಸ್ವಪ್ನಾವಬೋಧಗಳ ಪ್ರಮಾಣವೆಂದುಅರಿಯಬೇಕು. ಮತ್ತು “ ಯೋಗೋ ಭವತಿ ದುಃಖಹಾ ” ಎಂದರೆ ಯೋಗವು ಆಧ್ಯಾತ್ಮಿಕ ಆಧಿದೈವಿಕ, ಆಧಿಭೌತಿಕ ಗಳೆಂಬ ದುಃಖಗಳನ್ನು ಹೋಗಲಾಡಿಸುವುದೆಂದು ಅರಿಯಬೇಕು. ನಿದ್ರಾಕಾಲದಲ್ಲಿಯೂ, ಈ ದುಃಖಗಳಿರುವುದರಿಂದ ನಿದ್ರೆಯು ದುಃಖ ನಿವರ್ತ್ತಕವಲ್ಲವೆಂತಲೂ, ಯೋಗವೇ ದುಃಖನಿವರ್ತ್ತಕವೆಂತಲೂ ತಿಳಿಯಬೇಕು. ಮತ್ತು ಈ

ಯೋಗವು ಪರಿಶುದ್ಧವಾದ ವಿಜ್ಞಾನವನ್ನುಂಟುಮಾಡಿ ಅಂಥಾ ವಿಜ್ಞಾನ ದ್ವಾರಾದುಃಖಗಳಂ ಹೋಗಲಾಡಿಸುವುದೆಂದರಿಯಬೇಕು. ॥೧೬॥೧೩॥

(ಮ॥ ಸೂ॥) ಈ ೧೬-೧೭ನೇ ಶ್ಲೋಕಗಳಿಂದ ಯೋಗಾಭ್ಯಾಸಿಯಾದವನಿಗೆ ಆಹಾರಾದಿ ನಿಯಮವನ್ನು ಹೇಳುತ್ತಾನೆ. ಯಾವ ಅನ್ನವನ್ನು ಭೋಜನಮಾಡಿದರೆ ಜೀರ್ಣವಾಗಿ ಕಾರ್ಯಕರಣದಲ್ಲಿ ಸಮರ್ಥವಾಗಿರುವುದೋ ಅಂಥಾ ಅನ್ನವನ್ನು ಶ್ರುತಿಯಲ್ಲಿ ಆತ್ಮಸಮ್ಮಿತಂ ಎಂಬದಾಗಿ ಹೇಳಿರುವುದು. " ನಾಧ್ಮಾತಃ ಕ್ಷುಧಿತಃ ಶ್ರಾಂತೋ ನಚವ್ಯಾಕುಲಚೇತನಃ । ಯುಂಜೀತಯೋಗಂ ರಾಜೇಂದ್ರ ಯೋಗೀ ಸಿದ್ಧ್ಯರ್ಥಮಾತ್ಮನಃ ॥ ನಾತಿಶೀತೇ ನಚೈವೋಷ್ಣೇ ನದ್ವಂದ್ವೇ ನಾನಿಲಾನ್ವಿತೇ । ಕಾಲೇಷ್ವೇತೇಷು ಯುಂಜೀತ ನಯೋಗಂ ಧ್ಯಾನತತ್ಪರಃ ॥ " ಎಂಬ ಪ್ರಮಾಣಾನುಸಾರವಾಗಿ ಯೋಗ್ಯವಾದ ಕಾಲಗಳಲ್ಲಿ ಯೋಗಾಭ್ಯಾಸವನ್ನು ಮಾಡಬೇಕು. ... ... ॥೧೬॥೧೩॥

(ಶಂ॥ ಆ॥) ಯೋಗೀ ಯುಂಜೀತ ಸತತಂ (೬-೧೦) ಎಂಬ ಶ್ಲೋಕದಮೊದಲು ಈ ಶ್ಲೋಕದವರೆಗೂ ಯೋಗವು, ಯೋಗಾಂಗಗಳು, ಯೋಗಾಸನವು, ಯೋಗಫಲವು, ಎಂಬೀ ವಿಷಯಗಳು ಹೇಳಲ್ಪಟ್ಟು ಈ ಶ್ಲೋಕದಿಂದ ಯೋಗಾಭ್ಯಾಸಿಯಾದವನಿಗೆ ಬಹಿರಂಗಸಾಧನವಾದ ಆಹಾರಾದಿ ನಿಯಮಗಳೂ, ಅಂತರಂಗಸಾಧನವಾದ ಯೋಗಾನಂದವೆಂಬುವುದೂ ಹೇಳಲ್ಪಡುವುವು. ... ॥೧೬॥೧೩॥

(ರಾ॥ ಭಾ॥) ಈ ಪ್ರಕಾರವಾಗಿ ಆತ್ಮಯೋಗವಂ ಮಾಡಲುಪಕ್ರಮಿಸಿದವನು ಮನೋನೈರ್ಮಲ್ಯಕ್ಕಾಗಿ ಶುಭಸ್ಥಾನವಾದ ಪರಮಾತ್ಮನಲ್ಲಿ ಮನಸ್ಸನ್ನಿಡುವ ಪ್ರಕಾರವಂ ಹೇಳಿ ಅನ್ಯಗಳಾದ ಯೋಗೋಪಕಾರಕಗಳನ್ನು ಹೇಳುತ್ತಾನೆ. ಹೆಚ್ಚಾಗಿ ತಿನ್ನುವುದು ಅತ್ಯಂತವಾಗಿ ತಿನ್ನದೇ ಇರುವುದು, ಅಧಿಕವಾದ ಕಾರ್ಯಗಳಂ ಮಾಡುವುದು ಕಾರ್ಯಗಳನ್ನೇ ಮಾಡದೇ ಬಿಡುವುದೂ, ಅಧಿಕವಾಗಿ ನಿದ್ರಿಸುವುದು ಸ್ವಲ್ಪವೂ ನಿದ್ರಿಸದೇ ಇರುವುದೂ, ಅಧಿಕವಾಗಿ ಆಯಾಸಪಡುವುದು ಸ್ವಲ್ಪವೂ ಆಯಾಸಪಡದೇ ಇರುವುದೂ ಯೋಗವಿರೋಧಿಗಳೆಂಬದಾಗಿ ತಿಳಿಯಬೇಕು. ಆದುದರಿಂದ ಮಿತವಾದ ಆಹಾರ ವಿಹಾರವುಳ್ಳವನಿಗೂ ಮಿತವಾದ ಆಯಾಸವು

ಟ್ಟವನಿಗೂ ಮಿತವಾದ ನಿದ್ರಾಪ್ರಬೋಧವುಳ್ಳವನಿಗೂ ಸಮಸ್ತ ಬಂಧಗ
ಳನ್ನೂ ನಿವರ್ತಿಸುವ ಯೋಗವು ಸಂಪನ್ನವಾಗುವುದು. ||೧೬||೧೭||

(ಮ|| ಭಾ||) "ನಿದ್ರಾಶನಭಯಶ್ವಾಸಚೇಷ್ಟಾ ತಂದ್ರಾದಿವರ್ಜನಂ|
ಕೃತ್ವಾನಿಮೀಲಿತಾಕ್ಷಸ್ತು ಶಕ್ತ್ಯೋಧ್ಯಾಯನ್ ಪ್ರಸಿದ್ಧ್ಯತಿ||" ಎಂಬ
ನಾರದೀಯ ವಚನದಿಂದ ನಿದ್ರಾಹಾರಾದಿಗಳಂ ಬಿಟ್ಟವನಿಗೆ ಯೋಗಸಿ
ದ್ಧಿಯಾಗುವುದೆಂದು ಹೇಳಿರುವುದು. ಈಗೀತಾಶ್ಲೋಕಗಳಲ್ಲಿಮಿತವಾದ
ಆಹಾರಾದಿಗಳಂ ಸ್ವೀಕರಿಸಬೇಕೆಂಬುದಾಗಿ ಹೇಳಿರುವುದು. ಇದು ಪರ
ಸ್ಪರವಿರುದ್ಧವಲ್ಲವೇ? ಎಂದರೆ ಈ ಗೀತಾ ಶ್ಲೋಕವು ಆಹಾರಾದಿಗಳ
ನ್ನು ಸಂಪೂರ್ಣವಾಗಿ ಬಿಡಲು ಶಕ್ತಿ ಇಲ್ಲದವನ ವಿಷಯವಾಗಿರುವುದು.
ಶಕ್ತನಾಗಿದ್ದರೆ ಆಹಾರಾದಿಗಳಂ ಬಿಟ್ಟು ಯೋಗವಂ ಮಾಡಬೇಕೆಂದು
ತಾತ್ಪರ್ಯವು.| ... ... ... ||೧೬||೧೭||

ಮೂ || ಯದಾವಿನಿಯತಂಚಿತ್ತ ಮಾತ್ಮನ್ಯೇವಾಽವತಿ
ಷ್ಠತೇ | ನಿಸ್ಪೃಹಸ್ಸರ್ವಕಾಮೇಭ್ಯೋ ಯುಕ್ತಇತ್ಯು
ಚ್ಯತೇತದಾ || ... ... ||೧೮||

ಪ|| ಯದಾ-ವಿನಿಯತಂ- ಚಿತ್ತಂ- ಆತ್ಮನಿ-ಏವ- ಅವತಿಷ್ಠತೇ | ನಿಸ್ಪೃಹಃ-ಸರ್ವಕಾ
ಮೇಭ್ಯಃ-ಯುಕ್ತಃ- ಇತಿ- ಉಚ್ಯತೇ- ತದಾ|| ... ||೧೮||

ಅ|| ಯದಾ-ಯಾವಾಗಲಾದರೇ, ಚಿತ್ತಂ- ಮನಸ್ಸು, ವಿನಿಯತಂ - ಸ್ವಾಧೀನವಾಗಿ,
ಆತ್ಮನ್ಯೇವ-ಆತ್ಮನಲ್ಲಿಯೇ, (ಶಂ) ತನ್ನ ಆತ್ಮಸ್ವರೂಪದಲ್ಲಿಯೇ, ಅವತಿಷ್ಠತೇ-ನಿಲ್ಲುವು
ದೋ, ತದಾ - ಆವಾಗ, ಸರ್ವಕಾಮೇಭ್ಯೋನಿಸ್ಪೃಹಃ - ಸರ್ವವಿಷಯಗಳಿಂದುಂಟಾದ
ಅಪೇಕ್ಷೆಗಳನ್ನು ಬಿಟ್ಟವನು, ಯುಕ್ತಇತಿ - ಯೋಗಿ ಎಂಬದಾಗಿ, ಉಚ್ಯತೇ ಹೇಳ
ಲ್ಪಡುವನು. ... ... ... ... ||೧೮||

(ರಾ|| ಭಾ||) ಮನಸ್ಸು ಆತ್ಮನಲ್ಲಿ ತಾನೆ ವಿಶೇಷವಾಗಿನಿಂತು ಯಾ
ವಾಗಲೂ ಚಲಿಸದೇ ಇರುವುದೋ ಆವಾಗ ತಾನೆ ಸಕಲ ಕಾಮಗಳ
ಲ್ಲಿಯೂ, ಅಪೇಕ್ಷೆಯು ವಿನಷ್ಟವಾಗಿ ಯೋಗ ಮಾಡುವುದಕ್ಕೆ ಅರ್ಹ
ನಾಗುವನು. ... ... ||೧೮||

ಮೂ||ಯಥಾದೀಪೋನಿವಾತಸ್ಥೋ ನೇಂಗತೇಸೋಪ
ಮಾಸ್ಮೃತಾ | ಯೋಗಿನೋಯತ ಚಿತ್ತಸ್ಯ ಯುಂಜ
ತೋಯೋಗಮಾತ್ಮನಃ || ... ||೧೯||

ಪ॥ ಯಥಾ- ದೀಪಃ-ನಿವಾತಸ್ಥಃ - ನ- ಇಂಗತೇ-ಸಾ - ಉಪಮಾ- ಸ್ಮೃತಾ । ಯೋಗಿನಃ- ಯತಚಿತ್ತಸ್ಯ- ಯುಂಜತಃ- ಯೋಗಂ- ಆತ್ಮನಃ ॥ ... ॥೧೯॥

ಅ॥ ಆತ್ಮನೋಯೋಗಂ- ಆತ್ಮಧ್ಯಾನವನ್ನು, ಯುಂಜತಃ - ಅಭ್ಯಾಸಮಾಡುವ, ಯತಚಿತ್ತಸ್ಯಯೋಗಿನಃ- ಮನಸ್ಸ್ವಾಧೀನವುಳ್ಳ ಯೋಗಿಯಾದವನಿಗೆ, ನಿವಾತಸ್ಥಃ- ವಾಯುಸಂಚಾರವಿಲ್ಲದಪ್ರದೇಶದಲ್ಲಿರುವ, ದೀಪಃ-ದೀಪವು, ಯಥಾ-ಯಾವರೀತಿಯಾಗಿ, ನೇಂಗತೇ-ಚಲಿಸುವುದಿಲ್ಲವೋ, ಸಾ-ಅದು, ಉಪಮಾ- ದೃಷ್ಟಾನ್ತವಾಗಿ, ಸ್ಮೃತಾ- ಹೇಳಲ್ಪಡುವುದು. (ರಾ) ಯತಚಿತ್ತಸ್ಯ- ಮನಸ್ಸ್ವಾಧೀನವುಳ್ಳ, ಯೋಗಿನಃ- ಯೋಗಿಯಾದವನ, ಯೋಗಂ ಯುಂಜತಃ- ಯೋಗವನ್ನುಮಾಡುವ, ಆತ್ಮನಃ- ಆತ್ಮಸ್ವರೂಪಕ್ಕೆ, ಉಳಿದವುಗಳೆಲ್ಲವು ಮೇಲಿನಂತೆಯೇನೋಡಬೇಕು ) ... ... ... ॥೧೯॥

ತಾ॥ ಮನೋವ್ಯಾಪಾರಗಳಂಬಿಟ್ಟು ಆತ್ಮಯೋಗವಂ ಮಾಡುವಂತವನ ಆತ್ಮಕ್ಕೆ ವಾಯುಸಂಚಾರವಿಲ್ಲದ ಪ್ರದೇಶದಲ್ಲಿ ಚಲಿಸದೇ ಪ್ರಕಾಶಿಸುವ ದೀಪವು ದೃಷ್ಟಾಂತವಾಗಿ ಹೇಳಲ್ಪಡುವುದು. (ವಾಯುಸಂಚಾರವಿಲ್ಲದ್ದರಿಂದ ಚಲಿಸದೆ ಕಾಂತಿಯೊಡನೇ ಪ್ರಕಾಶಿಸುವ ದೀಪದಂತೆ ಆತ್ಮವು ಸಕಲವ್ಯಾಪಾರಗಳನ್ನು ಬಿಟ್ಟಿರುವ ಮನಸ್ಸಿನೊಡನೆ ಕೂಡಿರುವುದರಿಂದ ಚಲಿಸದೇ ಜ್ಞಾನವೆಂಬ ಕಾನ್ತಿಯೊಡನೆ ಕೂಡಿ ಪ್ರಕಾಶಿಸುವುದೆಂದು ತಾತ್ಪರ್ಯವು.) ... ... ॥೧೯॥

ಮೂ॥ ಯತ್ರೋಪರಮತೇಚಿತ್ತಂ ನಿರುದ್ಧಂಯೋ
ಗಸೇವಯಾ । ಯತ್ರ ಚೈವಾತ್ಮನಾತ್ಮಾನಂ ಪಶ್ಯನ್ನಾ
ತ್ಮನಿತುಷ್ಯತಿ ॥ ೨೦ ॥ ಸುಖಮಾತ್ಯಂತಿಕಂಯತ್ತ
ದ್ಬುದ್ಧಿಗ್ರಾಹ್ಯ ಮತೀನ್ದ್ರಿಯಂ । ವೇತ್ತಿಯತ್ರನ
ಚೈವಾಯಂ ಸ್ಥಿತಶ್ಚಲತಿತತ್ತ್ವತಃ ॥ ೨೧ ॥ ಯಂಲ
ಬ್ಧ್ವಾಚಾಪರಂಲಾಭಂ ಮನ್ಯತೇನಾಧಿಕಂತತಃ । ಯ
ಸ್ಮಿನ್ಸ್ಥಿತೋನದುಃಖೇನಗುರುಣಾಪಿವಿಚಾಲ್ಯತೇ ॥೨೨॥
ತಂವಿದ್ಯಾದ್ದುಃಖಸಂಯೋಗವಿಯೋಗಂ ಯೋಗಸಂ
ಜ್ಞಿತಂ। ಸನಿಶ್ಚಯೇನಯೋಕ್ತವ್ಯೋ ಯೋಗೋಽನಿರ್ವಿ
ಣ್ಣಚೇತಸಾ ॥ ... ... ॥೨೩॥

ಪ॥ ಯತ್ರ- ಉಪರಮತೇ- ಚಿತ್ತಂ- ನಿರುದ್ಧಂ- ಯೋಗಸೇವಯಾ । ಯತ್ರ - ಚ-

ಏವ- ಆತ್ಮನಾ- ಆತ್ಮಾನಂ- ಪಶ್ಯನ್- ಆತ್ಮನಿ- ತುಷ್ಯತಿ || ಸುಖಂ- ಆತ್ಯಂತಿಕಂ-ಯತ್- ತತ್- ಬುದ್ಧಿಗ್ರಾಹ್ಯಂ- ಅತೀಂದ್ರಿಯಂ | ವೇತ್ತಿ - ಯತ್ರ - ನ- ಚ- ಏವ - ಅಯಂ- ಸ್ಥಿತಃ- ಚಲತಿ- ತತ್ತ್ವತಃ || ಯಂ- ಲಬ್ಧ್ವಾ- ಚ- ಅಪರಂ- ಲಾಭಂ- ಮನ್ಯತೇ- ನ-ಅಧಿಕಂ-ತತಃ | ಯಸ್ಮಿನ್- ಸ್ಥಿತಃ- ನ-ದುಃಖೇನ - ಗುರುಣಾ- ಅಪಿ- ವಿಚಾಲ್ಯತೇ || ತಂ- ವಿದ್ಯಾತ್- ದುಃಖಸಂಯೋಗವಿಯೋಗಂ- ಯೋಗಸಂಜ್ಞಿತಂ| ಸಃ- ನಿಶ್ಚಯೇನ - ಯೋಕ್ತವ್ಯಃ- ಯೋಗಃ- ಅನಿರ್ವಿಣ್ಣಚೇತಸಾ|| (ಗೀ| ವಿ||) ನಿರ್ವಿಣ್ಣಚೇತಸಾ|| ||೨೦||೨೧||೨೨||೨೩||

ಅ||ಯೋಗಸೇವಯಾ-ಯೋಗಾನುಷ್ಠಾನವೆಂಬಕಾರಣದಿಂದ,ನಿರುದ್ಧಂ- ನಿರೋಧಿಸಲ್ಪಟ್ಟ, ಚಿತ್ತಂ-ಮನಸ್ಸು,ಯತ್ರ-ಯಾವಯೋಗದಲ್ಲಿ, (ಶ್ರೀ) ಯಾವಅವಸ್ಥೆಯಲ್ಲಿ, ಉಪರಮತೇ- ಅತಿಶಯಿತವಾದಸುಖವಂ ಕೊಡುವುದೆಂಬುವುದಾಗಿನಿಂತಿರುವುದೋ,ಯತ್ರ-(ವರ್ತಮಾನಃ) ಯಾವಯೋಗದಲ್ಲಿರುವಂತವನು,(ಶ್ರೀ)ಯಾವಅವಸ್ಥೆಯಲ್ಲಿರುವಂತವನು, ಆತ್ಮನಾ-ಮನಸ್ಸಿನಿಂದ, ಆತ್ಮಾನಂ- ತನ್ನನ್ನು, ಪಶ್ಯನ್- ನೋಡುವಂತವನಾಗಿ, ಆತ್ಮನ್ಯೇವ- ತನ್ನಲ್ಲಿಯೇ, ತುಷ್ಯತಿ-ಸಂತೋಷಿಸುವನೋ, (ಮ| ಗೀ|| ವಿ|| ಆತ್ಮನ್ಯೇವ- ತನ್ನ ದೇಹದಲ್ಲಿಯೇ ಇರುವ, ಆತ್ಮಾನಂ - ಪರಮಾತ್ಮನನ್ನು, ಆತ್ಮನಾ - ಮನಸ್ಸಿನಿಂದ, ಪಶ್ಯನ್- ನೋಡುವಂತವನಾಗಿ, ತುಷ್ಯತಿ- ಸಂತೋಷಿಸುತ್ತಾನೋ,) ಯತ್ರಚ-ಯಾವ ಯೋಗದಲ್ಲಿ, ಸ್ಥಿತಃ- ಇರುತಲಿರುವ, ಅಯಂ- ಈ ಯೋಗಿಯು, ಅತೀಂದ್ರಿಯಂ- ಇಂದ್ರಿಯಗಳಿಗೆ ಗೋಚರವಾಗದೇಯೂ, ಬುದ್ಧಿಗ್ರಾಹ್ಯಂಚ- ಬುದ್ಧಿಯಿಂದಲೇ ತಿಳಿಯತಕ್ಕದಾಗಿಯೂ ಇರುವ, ಯತ್ತದಾತ್ಯಂತಿಕಂಸುಖಂ- ಅವಧಿರಹಿತವಾದ ಯಾವನಿತ್ಯ ಸುಖವುಂಟೋ ಅದನ್ನು, ವೇತ್ತಿ- ತಿಳಿಯುತ್ತಾನೋ, ಅಥವಾ ಅನುಭವಿಸುತ್ತಾನೋ, ತತ್ತ್ವತಃ - ಯಾವ ಸುಖಾನುಭವದ ದಶೆಯಿಂದ, (ಶಂ|| ಶ್ರೀ||) ಆತ್ಮಸ್ವರೂಪದ ದಶೆಯಿಂದ, (ಮ|| ಗೀ|| ವಿ||) ಪರಮಾತ್ಮಸ್ವರೂಪದ ದಶೆಯಿಂದ, ನೈವಚಲತಿ - ಚಲಿಸುವುದೇ ಇಲ್ಲವೋ, ಯಂ-(ರಾ) ಯಾವಯೋಗವನ್ನು, ( ಶಂ|| ಶ್ರೀ|| ) ಯಾವ ಆತ್ಮಲಾಭವನ್ನು, ಲಬ್ಧ್ವಾ - ಹೊಂದಿ, ತತಃ-ಅದಕ್ಕಿಂತಲೂ, ಅಪರಂ- ಮತ್ತೊಂದನ್ನು, ಅಧಿಕಂಲಾಭಂ- ಅಧಿಕ ಪ್ರಯೋಜನವನ್ನಾಗಿ, ನಮನ್ಯತೇ-ನೆನೆಸುವುದಿಲ್ಲವೋ, ಯಸ್ಮಿನ್‌ಸ್ಥಿತಃ - ಯಾವಯೋಗದಲ್ಲಿರುವಂತವನು, ಗುರುಣಾದುಃಖೇನಾಪಿ - ಅಧಿಕವಾದ ದುಃಖದಿಂದಲೂ, ನವಿಚಾಲ್ಯತೇ- ಚಲಿಸಲ್ಪಡುವದಿಲ್ಲವೋ; ದುಃಖಸಂಯೋಗವಿಯೋಗಂ-ಸಕಲದುಃಖ ಸಂಬಂಧಗಳನ್ನು ಹೋಗಲಾಡಿಸುವ, ತಂ-ಅದನ್ನು, ಯೋಗಸಂಜ್ಞಿತಂ - ಯೋಗವೆಂಬ ಹೆಸರುಳ್ಳದ್ದಾಗಿ, ವಿದ್ಯಾತ್- (ಗೀ|| ವಿ||) ವಿಂದ್ಯಾತ್- ತಿಳಿಯಬೇಕು. ನಿಶ್ಚಯೇನ-ಇಂಥಾದ್ದೆಂಬನಿಶ್ಚಯದಿಂದ, ಅಥವಾ ಇಂಥಾದ್ದೆಂಬ ಮನೋದಾರ್ಢ್ಯದಿಂದ, ನಿರ್ವಿಣ್ಣಚೇತಸಾ-ಸಂತೋಷಯುಕ್ತವಾದ ಮನಸ್ಸುಳ್ಳವನಿಂದ, (ಗೀ|| ವಿ.) ನಿರ್ವಿಣ್ಣಚೇತಸಾ- ವಿಷಯವೈರಾಗ್ಯಯುಕ್ತವಾದ ಮನಸ್ಸುಳ್ಳವನಿಂದ, ಸಯೋಗಃ-ಆಯೋಗವು, ಯೋಕ್ತವ್ಯಃ-ಹೊಂದತಕ್ಕದ್ದಾಗಿರುವುದು. (ಗೀ|ವಿ) ಅನುಷ್ಠಿಸತಕ್ಕದ್ದಾಗಿರುವುದು. ... ... ||೨೦||೨೧||೨೨||೨೩||

(ರಾ॥ ಭಾ॥) ಯೋಗಸೇವಾ ಎಂಬ ಕಾರಣದಿಂದ ನಿರೋಧಿಸಲ್ಪಟ್ಟ ಮನಸ್ಸು ಯಾವ ಯೋಗದಲ್ಲಿ ಸುಖಪಡುವುದೋ; ಯಾವ ಯೋಗದಲ್ಲಿ ಮನಸ್ಸಿನಿಂದ ಆತ್ಮವನ್ನು ನೋಡುವಂತವನು ಅದರಲ್ಲಿ ತಾನೇ ಅಧಿಕವಾಗಿ ಸಂತೋಷಿಸುವನೋ; ಇಂದ್ರಿಯಗಳಿಂದ ಅರಿಯಲಸಾಧ್ಯವಾಗಿ ತನ್ನ ಬುದ್ಧಿಯಿಂದ ತಿಳಿಯತಕ್ಕ ಸುಖವನ್ನು ಯಾವ ಯೋಗದಶೆಯಲ್ಲಿ ಹೊಂದಿ ಅದರಿಂದ ಇತರ ವಿಷಯಗಳಲ್ಲಿ ಚಲಿಸಲಸಾಗದೇ ಇರುವನೋ; ಮತ್ತು ಯೋಗವನ್ನು ಮಾಡುತಲಿರುವ ಯಾವನಾದರೆ ಯೋಗವಂ ಬಿಟ್ಟು ಇತರವಾದವುಗಳನ್ನಪೇಕ್ಷಿಸದೆ ಈ ಯೋಗವನ್ನು ಅಪೇಕ್ಷಿಸಿಕೊಂಡು ಅನ್ಯಗಳಾದ ಪ್ರಯೋಜನಗಳನ್ನು ಮುಖ್ಯವಾಗಿ ಭಾವಿಸದೆ ಇರುವನೋ; ಯಾವ ಯೋಗದಲ್ಲಿರುವಂತವನು ಆ ಯೋಗವನ್ನು ಬಿಟ್ಟು ವಿರತನಾಗಿದ್ದರೂ, ಗುಣವತ್ಪುತ್ರಮರಣಾದಿ ರೂಪವಾದ ಮಹಾದುಃಖಗಳು ಪ್ರಾಪ್ತವಾದರೂ ಅವುಗಳಿಂದ ಮನೋವಿಕಾರವಂ ಹೊಂದದೇ ಇರುವನೋ; ಅಂಥಾ ಯೋಗವು ಸಂತೋಷಯುಕ್ತವಾದ ಮನಸ್ಸುಳ್ಳವನಿಂದ ಅಂಥಾದ್ದೆಂಬದಾಗಿ ನಿಶ್ಚಯಿಸಲ್ಪಟ್ಟು ಮಾಡಲ್ಪಡತಕ್ಕದ್ದಾಗಿರುವುದೆಂದು ತಾತ್ಪರ್ಯವು. ॥೨೦॥೨೧॥ ೨೨॥ ೨೩॥

ಮೂ॥ ಸಂಕಲ್ಪಪ್ರಭವಾನ್ಕಾಮಾಂಸ್ತ್ಯಕ್ತ್ವಾ ಸರ್ವಾನಶೇಷತಃ । ಮನಸೈವೇಂದ್ರಿಯಗ್ರಾಮಂ ವಿನಿಯಮ್ಯ ಸಮಂತತಃ ॥೨೪॥ ಶನೈಶ್ಶನೈರುಪರಮೇದ್ಬುದ್ಧ್ಯಾ ಧೃತಿಗೃಹೀತಯಾ । ಆತ್ಮಸಂಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿಂತಯೇತ್॥ ... ... ... ॥೨೫॥

ಪ॥ ಸಂಕಲ್ಪಪ್ರಭವಾನ್- ಕಾಮಾನ್- ತ್ಯಕ್ತ್ವಾ- ಸರ್ವಾನ್ - ಅಶೇಷತಃ । ಮನಸಾ-ಏವ- ಇಂದ್ರಿಯಗ್ರಾಮಂ- ವಿನಿಯಮ್ಯ- ಸಮಂತತಃ ॥ ಶನೈಃ- ಶನೈಃ - ಉಪರಮೇತ್ - ಬುದ್ಧ್ಯಾ-ಧೃತಿಗೃಹೀತಯಾ । ಆತ್ಮಸಂಸ್ಥಂ- ಮನಃ-ಕೃತ್ವಾ- ನ - ಕಿಂಚಿತ್- ಅಪಿ- ಚಿಂತಯೇತ್॥ ... ... ... ॥೨೪॥೨೫॥

ಅ॥ ಸಂಕಲ್ಪಪ್ರಭವಾನ್ - ಸಂಕಲ್ಪದಿಂದುಂಟಾಗುವ, ಸರ್ವಾನ್ಕಾಮಾನ್ - ಸಮಸ್ತಕಾಮಗಳನ್ನು, (ವಿಷಯಾಪೇಕ್ಷೆಗಳನ್ನು,) ಅಶೇಷತಃ - ಸಂಪೂರ್ಣವಾಗಿ, ತ್ಯಕ್ತ್ವಾ - ಬಿಟ್ಟು, ಮನಸೈವ- ಮನಸ್ಸಿನಿಂದಲೇ, ಇಂದ್ರಿಯಗ್ರಾಮಂ - ಇಂದ್ರಿಯಸಮೂಹವನ್ನು,

ಸಮಂತತಃ- ಸಮಸ್ತಗಳಾದ ವಿಷಯವರ್ಗಗಳಿಂದಲೂ, ವಿನಿಯಮ್ಯ- ನಿವರ್ತಿಸಿ, ಧೃತಿಗೃಹೀತಯಾ - ಧೈರ್ಯದಿಂದ ಸ್ವಾಧೀನಮಾಡಿಕೊಳ್ಳಲ್ಪಟ್ಟ, (ರಾ) ವಿವೇಕಯುಕ್ತವಾದ, ಬುದ್ಧ್ಯಾ- ಬುದ್ಧಿಯಿಂದ, ಮನಃ - ಮನಸ್ಸನ್ನು, ಆತ್ಮಸಂಸ್ಥಂ - ಆತ್ಮದಲ್ಲಿರುವಂತೆ, (ಮ॥ಗೀ॥ವಿ॥) ಪರಮಾತ್ಮನಲ್ಲಿರುವಂತೆ, ಕೃತ್ವಾ-ಮಾಡಿ, ಶನೈಶ್ಶನೈರುಪರಮೇತ್-ಮೆಲ್ಲಮೆಲ್ಲನೆ ಸರ್ವವಸ್ತುಗಳಿಂದಲೂ ನಿವರ್ತಿಸಬೇಕು. ಕಿಂಚಿದಪಿನಚಿನ್ತಯೇತ್ - ಯಾವದೊಂದನ್ನೂ ಚಿಂತಿಸದೆ ಇರಬೇಕು. ... ... ... ||೨೪||೨೫||

(ರಾ॥ಭಾ॥) ಸ್ಪರ್ಶಜಗಳೆಂತಲೂ ಸಂಕಲ್ಪಜಗಳೆಂತಲೂ ಕಾಮಗಳು ಎರಡು ವಿಧಗಳಾಗಿರುವವು. ಸ್ಪರ್ಶದಿಂ ದುಂಟಾಗುವ ಕಾಮಗಳು ಶೀತೋಷ್ಣಾದಿಗಳು. ಸಂಕಲ್ಪದಿಂದುಂಟಾಗುವವು ಪುತ್ರಾದಿಗಳು; ಪುತ್ರಾದಿಗಳಲ್ಲಿಯೂ, ಗೃಹಕ್ಷೇತ್ರಾದಿಗಳಲ್ಲಿಯೂ, ತನಗಿರುವಅಪೇಕ್ಷೆಗಳನ್ನು ಬಿಟ್ಟು, (ಎಂದರೆ ಅವರಿಗೂ ನನಗೂ ಸಂಬಂಧವಿಲ್ಲವೆಂಬುವುದನ್ನು ತಿಳಿದು) ಶೀತೋಷ್ಣಾದಿಗಳಿಂದುಂಟಾಗುವ ಸುಖದುಃಖಗಳಂತ್ಯಜಿಸಿದಂತೆಮಾಡಿ ಮೆಲ್ಲಮೆಲ್ಲನೆ ವಿವೇಕವುಂ ಸ್ವೀಕರಿಸಿ ಮನಸ್ಸನ್ನು ಆತ್ಮನಲ್ಲಿರಿಸುತ್ತಾ ಮತ್ತೆ ಯಾವದೊಂದನ್ನೂ ನೆನಸದೇ ಇರಬೇಕು॥೨೪॥೨೫॥

ಮೂ॥ ಯತೋಯತೋ ನಿಶ್ಚರತಿ ಮನಶ್ಚಂಚಲ ಮಸ್ಥಿರಂ । ತತ ಸ್ತತೋ ನಿಯಮ್ಯೈತ ದಾತ್ಮನ್ಯೇವ ವಶಂನಯೇತ್॥ ... ... ||೨೬||

ಅ॥ ಯತಃ- ಯತಃ- ನಿಶ್ಚರತಿ- ಮನಃ- ಚಂಚಲಂ- ಅಸ್ಥಿರಂ। ತತಃ - ತತಃ- ನಿಯಮ್ಯ- ಏತತ್- ಆತ್ಮನಿ- ಏವ- ವಶಂ- ನಯೇತ್॥

ಅ॥ ಅಸ್ಥಿರಂಚಂಚಲಂಮನಃ- ಅಸ್ಥಿರವೂ ಚಂಚಲವೂ ಆಗಿರುವಮನಸ್ಸು, ಯತೋಯತಃ- ಯಾವಯಾವ ವಿಷಯಗಳಲ್ಲಿ, ನಿಶ್ಚರತಿ- ಪ್ರವೇಶಿಸುವದೋ, ತತಸ್ತತಃ-ಅಂಥಾ ವಿಷಯಗಳಿಂದ, ಏತತ್- ಈ ಮನಸ್ಸನ್ನು, ನಿಯಮ್ಯ- ನಿವರ್ತಿಸಿ, ಆತ್ಮನ್ಯೇವ- ಪರಮಾತ್ಮನಲ್ಲಿಯೇ, (ಅಥವಾ) ತನ್ನ ಆತ್ಮ ಸ್ವರೂಪದಲ್ಲಿಯೇ, (ಅತ್ಯಂತವಾದಸುಖಭಾವನೆಯಿಂದ) ವಶಂನಯೇತ್- ಸ್ವಾಧೀನಪಡುವಂತೆ ಮಾಡಬೇಕು.|| ... ||೨೬||

(ಶಂ॥ ಭಾ॥) ಶಬ್ದಾದಿ ವಿಷಯಗಳ ನಿಮಿತ್ತಗಳನ್ನನುಸರಿಸಿ ರಾಗದ್ವೇಷಗಳಂ ಹೊಂದಿ ಅತ್ಯಂತ ಚಪಲವಾಗಿರುವುದರಿಂದಲೇ ಸ್ಥಿರವಿಲ್ಲದ ಮನಸ್ಸು, ನಾನಾವಿಷಯಗಳಗಳಲ್ಲಿ ಸ್ವಭಾವದಿಂದಲೇ ಪ್ರವರ್ತಿಸುವವು. ಅಂತಾಮನಸ್ಸು ನಿಶ್ಚಲವಾಗಿಯೂ, ವಿಚಾರಶೂನ್ಯವಾಗಿಯೂ

ಆಗುವುದು ಹೇಗೆ? ಎಂದರೇ ಅದಕ್ಕುತ್ತರವನ್ನು ಹೇಳುತ್ತಾನೆ. ಸ್ವಭಾವದಿಂದಲೆ ಅಧಿಕ ಚಪಲವಾಗಿರುವುದರಿಂದ ಸ್ಥಿರವಾಗಿಲ್ಲದ ಮನಸ್ಸು ವಿಷಯಗಳಲ್ಲಿ ಪ್ರವರ್ತಿಸುವುದಕ್ಕಾಗಿ ಒಳಗಿನಿಂದಹೊರಗೆಬರುತ್ತಲಿರುವುದರಿಂದ ಆ ರೀತಿಯಾಗಿ ವಿಷಯಗಳಲ್ಲಿ ಪ್ರವರ್ತಿಸದಂತೆಮನಸ್ಸನ್ನು ಸ್ವಾಧೀನವಮಾಡಿಕೊಂಡು ವೈರಾಗ್ಯಪ್ರಬಲನಾಗಿ ಸ್ವಸ್ವರೂಪಾನುಭವದಲ್ಲಿ ಸ್ಥಿರವಾಗಿರುವಂತೇ ಮಾಡಬೇಕು. ॥೨೬॥

(ಮಾ॥ಸೂ॥) "ಉಪಾಯೇನನಿಗೃಹ್ಣೀಯಾದ್ವಿಕ್ಷಿಪ್ತಂಕಾಮಭೋಗಯೋಃ। ಸುಪ್ರಸನ್ನಂಲಯೇಚೈವಯಥಾಕಾಮೋಲಯಸ್ತಥಾ॥ದುಃಖಂಸರ್ವಮನುಸ್ಮೃತ್ಯ ಕಾಮಭೋಗಾನ್ನಿವರ್ತಯೇತ್। ಅಜಂಸರ್ವಮನುಸ್ಮೃತ್ಯಜಾತಂನೈವತುಪಶ್ಯತಿ॥ ಲಯೇಸಂಬೋಧಯೇಚ್ಚಿತ್ತಂ ವಿಕ್ಷಿಪ್ತಂಶಮಯೇತ್ಪುನಃ। ಸಕಷಾಯಂವಿಜಾನೀಯಾತ್ಸಮಪ್ರಾಪ್ತಂ ನ ಚಾಲಯೇತ್॥ ನಾಸ್ವಾದಯೇತ್ಸುಖಂತತ್ರ ನಿಸ್ಸಂಗಃ ಪ್ರಜ್ಞಯಾಭವೇತ್। ನಿಶ್ಚಲಂನಿಶ್ಚರಚ್ಚಿತ್ತಮೇಕೀಕುರ್ಯಾತ್ಪ್ರಯತ್ನತಃ॥ಯದಾನಲೀಯತೇಚಿತ್ತಂನಚವಿಕ್ಷಿಪ್ಯತೇಪುನಃ।ಅನಿಂಗನಮನಾಭಾಸಂನಿಷ್ಪನ್ನಂಬ್ರಹ್ಮತತ್ತದಾ॥"ಇತ್ಯಾದಿ॥ಮುಂದೆಹೇಳಲ್ಪಡುವ"ವೈರಾಗ್ಯವು ಅಭ್ಯಾಸವು"ಎಂಬೀಉಪಾಯಗಳಿಂದ ಕಾಮಭೋಗಗಳಲ್ಲಿ,ಪ್ರಮಾಣವಿಪರ್ಯಯವಿಕಲ್ಪನಿದ್ರಾಸ್ಮೃತಿಗಳೆಂಬಿವುಗಳಲ್ಲಿ ಯಾವದರಿಂದಲಾದರೂ ವ್ಯಾಪಿಸಲ್ಪಟ್ಟ ಮನಸ್ಸನ್ನು ನಿಗ್ರಹಿಸಬೇಕು. ನಿದ್ರೆಯಲ್ಲಿ ಮನಸ್ಸು ಆಯಾಸರಹಿತವಾಗಿದ್ದರೂ ನಿಗ್ರಹಿಸಲ್ಪಡತಕ್ಕದೇ ಆಗಿರುವುದು. ಸುಷುಪ್ತಿಯಲ್ಲಿ ಮನಸ್ಸು ಸುಪ್ರಸನ್ನವಾಗಿರುವಲ್ಲಿ ಅದನ್ನೇತಕ್ಕೆ ನಿಗ್ರಹಿಸಬೇಕೆಂದು ಸಂಶಯಪಡದೆ ಕಾಮವು ಯಾವ ವಿಧದಿಂದಲಾದರೂ ವಿಷಯ ಗೋಚರಗಳಾದ ಪ್ರಮಾಣಾದಿ ವೃತ್ತಿಗಳನ್ನು ಉಂಟುಮಾಡುವುದರಿಂದ ಯಾವ ಪ್ರಕಾರವಾಗಿ ಸಮಾಧಿಗೆ ವಿರೋಧಿಯೋ ಆ ಪ್ರಕಾರವೇ ಲಯವೆಂಬ ಸುಷುಪ್ತಿಯೂ, ನಿದ್ರೆ ಎಂಬ ವೃತ್ತಿಯನ್ನು ಉಂಟುಮಾಡಿ ಸಮಾಧಿಗೆ ವಿರೋಧಿಯಾಗುವುದರಿಂದ ಕಾಮಾದಿಗಳಿಂದ ಉಂಟಾದ ಲಯದಿಂದಲೂ ಕೂಡ ಮನಸ್ಸು ನಿಗ್ರಹಿಸತಕ್ಕದ್ದಾಗಿರುವುದು. "ಯಾವದು ಅಧಿಕವಾದದ್ದೋ ಅದು ಸುಖರೂಪವಾದದ್ದು, ಪರಿಚ್ಛಿನ್ನವಾದದ್ವೈತ ಪ್ರಪಂಚದಲ್ಲಿ ಸುಖವಿಲ್ಲವು"

ಎಂಬ ಶ್ರುತ್ಯರ್ಥವನ್ನು ಗುರೂಪದೇಶಾದಿಗಳಿಂದ ಸಮೀಚೀನವಾಗಿ ತಿಳಿದುಕೊಂಡು ಅವಿದ್ಯೆಯಿಂದ ಪ್ರಾಪ್ತವಾದ ದ್ವೈತಪ್ರಪಂಚವೆಲ್ಲವೂ ದುಃಖರೂಪವೆಂಬುದಾಗಿಯೇ ತಿಳಿದು ಕಾಮಭೋಗಗಳಲ್ಲಿ ಮನಸ್ಸನ್ನಾಸಕ್ತವಾಗಿ ಮಾಡದೇ ತಿರುಗಿಸಬೇಕು. ಎಂದರೆ ದ್ವೈತಪ್ರಪಂಚಸ್ಮರಣಕಾಲದಲ್ಲಿ ಅದರ ನಿವೃತ್ತಿಗೆ ವೈರಾಗ್ಯ ಭಾವನವೇ ಉಪಾಯವೆಂದರಿಯಬೇಕೆಂದರ್ಥವು. ಮತ್ತು ಸರ್ವವೂ ಬ್ರಹ್ಮರೂಪವೆಂತಲೂ ಬ್ರಹ್ಮಕ್ಕಿಂತಲೂ ಇತರವಾದದ್ದು ಯಾವದೂ ಇಲ್ಲವೆಂತಲೂ ಶಾಸ್ತ್ರಾಚಾರ್ಯೋಪದೇಶಾದಿಗಳಿಂದ ತಿಳಿದುಕೊಂಡ ಮೇಲೆ ಬ್ರಹ್ಮವ್ಯತಿರಿಕ್ತವಾದ ದ್ವೈತಪ್ರಪಂಚವನ್ನು ನೋಡದೇನೇ ಹೋಗುವನು; ಎಂದರೇ ಶುಕ್ತಿಜ್ಞಾನ ಉಂಟಾದ ಮೇಲೆ ರಜತಜ್ಞಾನವು ನಿವರ್ತಿಸುವಂತೆ ಅಧಿಷ್ಠಾನಬ್ರಹ್ಮಜ್ಞಾನ ಉಂಟಾದಮೇಲೆ ಕಲ್ಪಿತವಾದ ಜಗದ್ಜ್ಞಾನವು ನಾಶವಾಗುವದರಿಂದ ದ್ವೈತವಿಸ್ಮರಣವು, ಸರ್ವೋತ್ತಮವಾದ ಉಪಾಯವೆಂದರಿಯಬೇಕು. ಮತ್ತು ಈ ಪ್ರಕಾರವಾಗಿ ವೈರಾಗ್ಯ ಭಾವನೆಯಿಂದಲೂ ತತ್ವಜ್ಞಾನದಿಂದಲೂ ವಿಷಯಗಳಿಂದ ನಿವೃತ್ತವಾದ ಮನಸ್ಸು ಪ್ರತಿದಿನಗಳಲ್ಲಿಯೂ ರೂಢಿಯಾಗಿರುವ ಲಯಾಭ್ಯಾಸದ ದೆಸೆಯಿಂದ ಲಯಾಭಿಮುಖವಾದರೆ ಅಂಥಾ ಸಮಯದಲ್ಲಿ ಲಯಕಾರಣಗಳಾದ ನಿದ್ರೆಯು, ಶೋಷೆಯು, ಅಜೀರ್ಣವು, ಅತ್ಯಶನವು, ಶ್ರಮವು, ಎಂಬಿವುಗಳನ್ನು ಹೋಗಲಾಡಿಸಿಕೊಂಡು ಚಿತ್ತವನ್ನು ಸಮೀಚೀನವಾದ ಪ್ರಬೋಧಯುಕ್ತವನ್ನಾಗಿ ಮಾಡಿಕೊಳ್ಳಬೇಕು. ಈರೀತಿಯಾಗಿ ಚಿತ್ತವು ನಿತ್ಯಪ್ರಬೋಧಯುಕ್ತವಾಗಿ ಮಾಡುವಾಗ ಪ್ರತಿದಿನದಲ್ಲಿಯೂ ನಿದ್ರಾರಹಿತವಾದ ದೆಸೆಯೇ ಅಭ್ಯಾಸಮಾಡಲ್ಪಟ್ಟಿರುವದರಿಂದ ಆ ಅಭ್ಯಾಸಪ್ರಕಾರವಾಗಿ ಅದು ಕಾಮಭೋಗಾದಿಗಳಲ್ಲಾಸಕ್ತವಾದರೆ ಆವಾಗ ವೈರಾಗ್ಯಭಾವನೆಯಿಂದಲೂ, ತತ್ತ್ವಸಾಕ್ಷಾತ್ಕಾರದಿಂದಲೂ, ಪುನಶ್ಶಾಂತಿಯಂ ಹೊಂದಿಸಬೇಕು. ಈರೀತಿಯಾಗಿ ಪದೇಪದೇ ಅಭ್ಯಾಸವಂ ಮಾಡುತಲಿರುವವನ, (ಲಯವಿಲ್ಲದಂತೇ ಮಾಡಲ್ಪಟ್ಟಿದ್ದಾಗಿಯೂ, ವಿಷಯಗಳಿಂದ ನಿವರ್ತಿಸಲ್ಪಟ್ಟಿದ್ದಾಗಿಯೂ, ಅದುವರೆಗೂ ಬ್ರಹ್ಮಪ್ರಾಪ್ತಿ ಇಲ್ಲವಾದುದರಿಂದ ಅಂತರಾಲಾವಸ್ಥೆಯುಳ್ಳದ್ದಾಗಿಯೂ, ಸ್ತಬ್ಧೀಭೂತವಾದ ಯಾವವೃತ್ತಿಯೂ ಇಲ್ಲದ) ಚಿತ್ತವು ಪ್ರಬಲವಾಸನಾವಶದಿಂದ ಸ್ತಬ್ಧೀಭಾವವೆಂಬ ಹೆಸರುಳ್ಳ ದೋಷದಿಂದ

ಯುಕ್ತವಾಗಿರುವುದು. ಆದುದರಿಂದ ಅಂಥಾ ದೋಷಗಳನ್ನು ಪರಿಹರಿಸಿಕೊಂಡರೆ ತದನಂತರದಲ್ಲಿ (ಲಯವಿಕ್ಷೇಪ ಕಷಾಯಗಳನ್ನು ಪರಿಹರಿಸಿಕೊಂಡಮೇಲೆ) ಬ್ರಹ್ಮವನ್ನು ಹೊಂದುತ್ತಾನಾದುದರಿಂದ ಕಷಾಯ ಲಯಭ್ರಾಂತಿಗಳಿಂದ ಚಿತ್ತವನ್ನು ಪುನಃ ವಿಷಯಾಭಿಮುಖವನ್ನಾಗಿ ಮಾಡದೆ ಧೈರ್ಯಯುಕ್ತವಾದ ಬುದ್ಧಿಯಿಂದ ಬ್ರಹ್ಮಪ್ರಾಪ್ತಿ ಎಂಬತಾಯವಸ್ಥೆಯಲ್ಲಿಯೇ ಅಧಿಕಪ್ರಯತ್ನದೊಡನೆ ಸ್ಥಾಪಿಸಬೇಕು. ಪರಮಸುಖಾಭಿವ್ಯಂಜಕವಾದ ಸಮಾಧಿಯಲ್ಲಿಯೂ ಕೂಡ ಸಮಾಧಿಭಂಗವು ಪ್ರಾಪ್ತವಾಗದೇ ಇರುವುದಕ್ಕಾಗಿ ನಾನಿದುವರೆಗೂ ಸುಖಿಯಾಗಿದ್ದೆನೆಂಬ ಸುಖಾಸ್ವಾದ ರೂಪವಾದ ವೃತ್ತಿಯನ್ನು ಕೂಡ ಮಾಡಕೂಡದು. ಪ್ರಜ್ಞೆಯಿಂದ ಹೊಂದಲ್ಪಡುವ ಸುಖವು ಕೂಡ ಅವಿದ್ಯಾಪರಿಕಲ್ಪಿತವಾಗಿರುವುದರಿಂದ ಮಿಥ್ಯಾಎಂಬದಾಗಿ ತಿಳಿದು ಅಂಥಾ ಸುಖದಲ್ಲಿಯೂ ಅಪೇಕ್ಷಾಶೂನ್ಯನಾಗಿರಬೇಕು. ಈ ಉಪಾಯದಿಂದ ನಿಗ್ರಹಿಸಲ್ಪಟ್ಟ ಮನಸ್ಸು ಯಾವಾಗ ಸುಷುಪ್ತಿಯಲ್ಲಿ ಲಯವಂ ಹೊಂದುವುದಿಲ್ಲವೋ, ವಿಷಯಗಳಲ್ಲಿಯೂ ಪ್ರವರ್ತಿಸುವುದಿಲ್ಲವೋ, ವಾಯುಸಂಚಾರವಿಲ್ಲದ ಪ್ರದೇಶದಲ್ಲಿಡಲ್ಪಟ್ಟ ದೀಪದಂತೆ ಚಲಿಸದೇ ಇರುವುದೋ, ಆ ದಶೆಯಲ್ಲಿ ಬ್ರಹ್ಮಸ್ವರೂಪಸಾಕ್ಷಾತ್ಕಾರ ವುಂಟಾಗುವುದು. ಎಂಬದಾಗಿ ಗೌಡಪಾದ ಕಾರಿಕೆಗಳಲ್ಲಿ ಹೇಳಿರುವಂತೆ ನಿರೋಧಸಮಾಧಿಯನ್ನು ಮಾಡುತಲಿರುವ ಯೋಗಿಯು, ಚಿತ್ತವಿಕ್ಷೇಪಕ್ಕೆ ಕಾರಣಗಳಾದ ಶಬ್ದಾದಿವಿಷಯಗಳ ಮಧ್ಯದಲ್ಲಿ ಯಾವದಾದರೊಂದರ ಸಂಬಂಧದಿಂದ ಚಿತ್ತವು ವಿಕ್ಷೇಪಕ್ಕೆ ಅಭಿಮುಖವಾಗುತ್ತಾ ಬಾಹ್ಯವಿಷಯಗಳಮೇಲೆ ಹೋಗುವುದು, ಆದುದರಿಂದ ಆ ರೀತಿಯಾಗಿ ಹೋಗದಂತೆ ಮಾಡಬೇಕೆಂತಲೂ, ಮತ್ತು ಈ ಪ್ರಕಾರವೇ ಲಯಕಾರಣಗಳಾದ ನಿದ್ರಾ, ಶೋಷೆ, ಬಹ್ವಶನಶ್ರಮಾದಿಗಳಲ್ಲಿ ಯಾವದಾದರೊಂದರ ಸಂಬಂಧದಿಂದ ಚಿತ್ತವು ಲಯಾಭಿಮುಖವಾಗುತಾ ನಿದ್ರೆಯೆಂಬ ವೃತ್ತಿಯುಳ್ಳದ್ದಾಗುವುದಾದುದರಿಂದ ಚಿತ್ತವಂ ಅದರಮೇಲೆ ಹೋಗದಂತೆಮಾಡಿ ಆತ್ಮನಲ್ಲಿಯೇ ಇಡಬೇಕು. "ಯದಾ ಪಂಚಾವತಿಷ್ಠಂತೇ ಜ್ಞಾನಾನಿ ಮನಸಾಸಹ । ಬುದ್ಧಿಶ್ಚನವಿಚೇಷ್ಟೇತ ತಮಾಹುಃಪರಮಾಂಗತಿಂ ॥ ತಾಂ ಯೋಗಮಿತಿ ಮನ್ಯಂತೆಸ್ಥಿರಾಮಿಂದ್ರಿಯನಿಗ್ರಹಾಂ । ಅಪ್ರಮತ್ತಸ್ತಥಾಭವತಿಯೋಗೋಹಿಪ್ರಭವಾ

ಪ್ಯಯೋ॥ " ಸೂ ॥ ಯೋಗಶ್ಚಿತ್ತವೃತ್ತಿ ನಿರೋಧಃ " ಎಂಬಶ್ರು ತಿ ಸೂತ್ರಗಳಲ್ಲಿಯೂ, ಯೋಗವು ಸರ್ವೋತ್ತಮಗತಿ ಎಂಬದಾಗಿ ಹೇಳಲ್ಪಟ್ಟಿರುವುದರಿಂದ ಯಾವಯಾವ ವಸ್ತುಗಳಮೇಲೆ ಮನಸ್ಸು ಸಂಚರಿಸುವುದೋ ಅವವುಗಳಿಂದ ಚಿತ್ತವಂ ನಿವರ್ತಿಸಿ ಆತ್ಮಾಧೀನವಾ ಗಿ ಮಾಡಬೇಕು ॥ ... ... ॥೨೬॥

ಮೂ॥ ಪ್ರಶಾಂತಮನಸಂಹ್ಯೇನಂಯೋಗಿನಂ ಸುಖಮು
ತ್ತಮಂ । ಉಪೈತಿ ಶಾಂತರಜಸಂ ಬ್ರಹ್ಮಭೂತಮಕ
ಲ್ಮಷಂ ॥ ... ... ॥೨೭॥

ಪ॥ ಪ್ರಶಾಂತಮನಸಂ- ಹಿ- ಏನಂ- ಯೋಗಿನಂ- ಸುಖಂ- ಉತ್ತಮಂ। ಉಪೈತಿ- ಶಾಂ ತರಜಸಂ- ಬ್ರಹ್ಮಭೂತಂ- ಅಕಲ್ಮಷಂ ॥ ... ... ॥೨೭॥

ಅ॥ ಪ್ರಶಾಂತಮನಸಂ- ಶಾಂತವಾದ ಮನಸುಳ್ಳ, ಶಾಂತರಜಸಂ- ರಜೋಗುಣವಿಹೀನ ನಾದ, ಬ್ರಹ್ಮಭೂತಂ-(ಶಂ) ಜೀವನ್ಮುಕ್ತನಾಗಿರುವ, ( ರಾ ) ಪ್ರಕೃತಿ ವಿಯುಕ್ತನಾದ ಸ್ವಸ್ವರೂಪ ದಲ್ಲಿರುವ ( ಗೀ॥ ವಿ॥ ) ಪರಮಾತ್ಮ ಧ್ಯಾನದಲ್ಲಿ ಸ್ಥಿರನಾಗಿರುತಲಿರುವ, ಅಕಲ್ಮಷಂ - ಪಾಪರಹಿತನಾದ, ಏನಂಯೋಗಿನಂ - ಈ ಯೋಗಿಯನ್ನು, ಉತ್ತಮಂ ಸುಖಂ- ಶ್ರೇಷ್ಠವಾದ ಸುಖವು, ಉಪೈತಿ-ಹೊಂದುವುದಲ್ಲವೆ. ... ॥೨೭॥

(ರಾ॥ ಭಾ॥) ಮನಸ್ಸನ್ನಾತ್ಮನಲ್ಲಿ ಚಲಿಸದಂತೆ ನಿಲ್ಲಿಸಿ ಆದರಿಂದ ಸಕಲ ಪಾಪಗಳನ್ನೂ ತ್ಯಜಿಸಿ ರಜೋಗುಣವನ್ನು ಬಿಟ್ಟು ಸ್ವಸ್ವರೂ ಪದಲ್ಲಿರುವ ಈ ಯೋಗಿಗೆ ಆತ್ಮಾನುಭವವೆಂಬ ಉತ್ತಮವಾದ ಸುಖ ಉಂಟಾಗುವುದು. ... ... ॥೨೭॥

ಮೂ॥ ಯುಂಜನ್ನೇವಂಸದಾತ್ಮಾನಂ ಯೋಗೀವಿಗತಕ
ಲ್ಮಷಃ । ಸುಖೇನಬ್ರಹ್ಮಸಂಸ್ಪರ್ಶ ಮತ್ಯಂತಂ ಸುಖ
ಮಶ್ನುತೇ ॥ ... ... ॥೨೮॥

ಪ ॥ ಏವಂ- ಯುಂಜನ್- ಸದಾ- ಆತ್ಮಾನಂ- ಯೋಗೀ- ವಿಗತಕಲ್ಮಷಃ । ಸುಖೇನ- ಬ್ರಹ್ಮಸಂಸ್ಪರ್ಶಂ- ಅತ್ಯಂತಂ- ಸುಖಂ- ಅಶ್ನುತೇ॥ ... ... ॥೨೮॥

ಅ ॥ ಏವಂ - ಈ ರೀತಿಯಾಗಿ, ಸದಾ - ಯಾವಾಗಲೂ, ಆತ್ಮಾನಂ - ಮನಸ್ಸನ್ನು, (ಗೀ। ವಿ॥) ಪರಮಾತ್ಮನನ್ನು, ಯುಂಜನ್-ಸ್ವಾಧೀನ ಪಡಿಸಿಕೊಂಡಿರುವ, (ಗೀ॥ ವಿ॥) ಧ್ಯಾನಿಸುತಲಿರುವ, ವಿಗತಕಲ್ಮಷಃ-ಪಾಪರಹಿತನಾದ, (ರಾ) ಸಕಲವಾದ ಪ್ರಾಚೀನಕರ್ಮ

ಗಳನ್ನು ಪರಿಹರಿಸಿಕೊಂಡಿರುವ, (ಗೀ॥ ವಿ॥) ಕಾಮಕ್ರೋಧಗಳನ್ನು ಹೋಗಲಾಡಿಸಿ ಕೊಂಡಿರುವ, ಯೋಗೀ- ಯೋಗಿಯು, ಸುಖೇನ-ಪ್ರಯಾಸವಿಲ್ಲದೇ, ಬ್ರಹ್ಮಸಂಸ್ಪರ್ಶಂ- ಬ್ರಹ್ಮದರ್ಶನವೆಂಬ, (ಶಂ) ಬ್ರಹ್ಮೈಕ್ಯವೆಂಬ, (ರಾ) ಬ್ರಹ್ಮಾನುಭವರೂಪವಾದ, (ಗೀ॥ವಿ) ಪರಮಾತ್ಮನಲ್ಲಿ ಸೇರಿದಮೇಲೆ ತನಗುಂಟಾಗುವ, ಅತ್ಯಂತಂಸುಖಂ- ಶ್ರೇಷ್ಠವಾದ ಸುಖವನ್ನು, ಅಶ್ನುತೇ- ಅನುಭವಿಸುತ್ತಾನೆ ... ... ॥೨೮॥

(ರಾ॥ ಭಾ॥) ಈ ಪ್ರಕಾರವಾಗಿ ಆತ್ಮಯೋಗದಲ್ಲಿ ಇರುವಂತವನು ಪ್ರಾಚೀನಕರ್ಮ ವಿಶೇಷಗಳಂ ತೊಲಗಿಸಿ ಅದರಿಂದ ಬ್ರಹ್ಮಾನುಭವರೂಪವಾದ ಅಪರಿಮಿತ ಸುಖವನ್ನು ಹೊಂದುವನು ॥ ... ॥೨೮॥

ಮೂ ॥ ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿಚಾ
ತ್ಮನಿ । ಈಕ್ಷತೇಯೋಗಯುಕ್ತಾತ್ಮಾ ಸರ್ವತ್ರಸಮ
ದರ್ಶನಃ ॥ ... ... ... ॥೨೯॥

ಪ॥ ಸರ್ವಭೂತಸ್ಥಂ- ಆತ್ಮಾನಂ- ಸರ್ವಭೂತಾನಿ- ಚ- ಆತ್ಮನಿ । ಈಕ್ಷತೇ- ಯೋಗಯುಕ್ತಾತ್ಮಾ-ಸರ್ವತ್ರ- ಸಮದರ್ಶನಃ॥

ಅ॥ ಸರ್ವತ್ರ- ಸರ್ವವಸ್ತುಗಳಲ್ಲಿಯೂ, ಸಮದರ್ಶನಃ- ಸಮವಾಗಿ ಬ್ರಹ್ಮವನ್ನು ನೋಡುತಲಿರುವ, ಯೋಗಯುಕ್ತಾತ್ಮಾ- ಧ್ಯಾನಯೋಗಿಯು, ಆತ್ಮಾನಂ- ತನ್ನನ್ನು, ಸರ್ವಭೂತಸ್ಥಂ- ಸಕಲವಸ್ತುಗಳಲ್ಲಿರುವಂತವನನ್ನಾಗಿಯೂ, ಆತ್ಮನಿ- ತನ್ನಲ್ಲಿ, ಸರ್ವಭೂತಾನಿಚ- ಸಕಲವಸ್ತುಗಳೂ ಇರುವುದಾಗಿಯೂ, ಈಕ್ಷತೇ- ನೋಡುತ್ತಾನೆ. ॥೨೯॥

(ಶಂ॥ ಭಾ॥) ಸಮಸ್ತವಾದ ಸಂಸಾರದ ವಿಚ್ಛೇದಕ್ಕೆ ಕಾರಣವಾಗಿರುವ ಧ್ಯಾನಯೋಗಫಲವಾದ ಸರ್ವಂಬ್ರಹ್ಮ ಎಂಬ ಅನುಭವಕ್ರಮವು ಈಗ ತೋರಿಸಲ್ಪಡುವುದು. ಬ್ರಹ್ಮಾದಿ ಸ್ತಂಬಪರ್ಯಂತಗಳಾಗಿರುವ ಸಕಲ ಭೂತಗಳಲ್ಲಿಯೂ ಇರುವ ಆತ್ಮಗಳಿಗೂ ಬ್ರಹ್ಮಕ್ಕೂಭೇದವಿಲ್ಲವೆಂಬ ಜ್ಞಾನವುಳ್ಳವನು (ಎಂದರೇ ಸಮಸ್ತವನ್ನು ಬ್ರಹ್ಮವನ್ನಾಗಿ ನೋಡುವಂತವನು) ಸ್ಥಿರವಾಗಿ ಮಾಡಲ್ಪಡುವ ಅಂತಃಕರಣವುಳ್ಳವನಾಗುತಾ ತನ್ನನ್ನು ಬ್ರಹ್ಮಾದಿ ಸ್ತಂಬಪರ್ಯಂತಗಳಾದ ಸಕಲಭೂತಗಳಲ್ಲಿರುವಂತವನನ್ನಾಗಿಯೂ,ತನ್ನಲ್ಲಿ ಬ್ರಹ್ಮಾದಿ ಸ್ತಂಬಪರ್ಯಂತಗಳಾದಸಕಲಭೂತಗಳಿರುವುವೆಂಬದಾಗಿಯೂ, ನೋಡುತ್ತಾನೆ. ಎಂದರೆ ತನ್ನನ್ನೇ ಬ್ರಹ್ಮವನ್ನಾಗಿ ನೋಡುತ್ತಾನೆಂಬ ತಾತ್ಪರ್ಯವನ್ನರಿಯಬೇಕು. ॥೨೯॥

(ರಾ॥ಭಾ॥) ನಾಲ್ಕು ವಿಧಗಳಾದ ಯೋಗಪರಿಪಾಕದಶೆಗಳೂ ಮುಂ

ದೇ ಹೇಳಲ್ಪಡುವುವು. ಯೋಗದಿಂದ ರಜೋಗುಣವು ನಾಶಹೊಂದಿ ಶುದ್ಧವಾದ ಮನಸ್ಸಿನೊಡನೆ ಸರ್ವಭೂತಗಳಲ್ಲಿಯೂ ಸಮದೃಷ್ಟಿಯುಳ್ಳವನು ತನ್ನ ಆತ್ಮವನ್ನು ಸರ್ವ ಭೂತಗಳಲ್ಲಿರುವಂಥಾದ್ದನ್ನಾಗಿಯೂ, ಸರ್ವಭೂತಗಳನ್ನು (ಆತ್ಮಗಳು ಜ್ಞಾನೈಕಾಕಾರವುಳ್ಳದ್ದೆಂಬುದಾಗಿ) ತನ್ನಲ್ಲಿರುವಂತವುಗಳನ್ನಾಗಿಯೂ ನೋಡುತ್ತಾನೆ. ತಾರತಮ್ಯವೆಲ್ಲವೂ ಪ್ರಕೃತಿಗತವಾಗಿರುವುದರಿಂದ, ಪ್ರಕೃತಿವಿಯುಕ್ತವಾದ ಆತ್ಮಸ್ವರೂಪವೆಲ್ಲವೂ ಜ್ಞಾನಸ್ವರೂಪವಾದ ಏಕಾಕಾರಯುಕ್ತವಾದಮೇಲೆ ತನ್ನಾತ್ಮಕ್ಕೂ ಇತರ ಆತ್ಮಗಳಿಗೂ ಭೇದವಿಲ್ಲವಾದುದರಿಂದ ತನ್ನ ಆತ್ಮದಲ್ಲಿ ಇತರಾತ್ಮಸ್ವರೂಪಗಳೂ, ಇತರಾತ್ಮಗಳಲ್ಲಿ ತನ್ನ ಆತ್ಮಸ್ವರೂಪವೂ, ಯೋಗದಿಂದ ಸಮದೃಷ್ಟಿಯುಳ್ಳವನಿಗೆ ಗೋಚರವಾಗುವುದೆಂದು ತಾತ್ಪರ್ಯವು. “ಸರ್ವತ್ರ ಸಮದರ್ಶನಃ” (೬॥೨೯) ಎಂತಲೂ, “ನಿರ್ದೋಷಂಹಿಸಮಂ ಬ್ರಹ್ಮ” (೫॥೧೯॥) ಎಂತಲೂ ಹೇಳಿರುವುದರಿಂದಲೂ “ಯೋಽಯಂ ಯೋಗಸ್ತ್ವಯಾ ಪ್ರೋಕ್ತಸ್ಸಾಮ್ಯೇನಮಧುಸೂದನ” (೬॥ ೩೩) ಎಂದನುವಾದ ಮಾಡುವುದರಿಂದಲೂ ಪ್ರಕೃತಿ ವಿಯುಕ್ತವಾಗಿ ಜ್ಞಾನೈಕಾಕಾರದಿಂದಿರುವ ಆತ್ಮಗಳಸಾಮ್ಯವೇ ಇಲ್ಲಿಹೇಳಲ್ಪಟ್ಟಿರುವುದು॥೨೯॥

(ಮ॥ಗೀ॥ವಿ॥) ಪ್ರಪಂಚದಲ್ಲಿರುವ ಸಕಲವಸ್ತುಗಳಲ್ಲಿಯೂ ಬ್ರಹ್ಮವು ಒಂದೇವಿಧವಾಗಿರುವುದೆಂತಲೂ ಸಕಲವಸ್ತುಗಳೂ ಬ್ರಹ್ಮನಲ್ಲಿರುವುವೆಂತಲೂ ತಿಳಿದವನು ಯೋಗಿಎನ್ನಲ್ಪಡುವನು. ॥೨೯॥

ಮೂ॥ ಯೋಮಾಂ ಪಶ್ಯತಿ ಸರ್ವತ್ರ ಸರ್ವಂಚ ಮಯಿ
ಪಶ್ಯತಿ। ತಸ್ಯಾಹಂ ನ ಪ್ರಣಶ್ಯಾಮಿ ಸಚಮೇನ ಪ್ರ
ಣಶ್ಯತಿ॥ ... ... ... ॥೩೦॥

ಪ॥ ಯಃ- ಮಾಂ- ಪಶ್ಯತಿ- ಸರ್ವತ್ರ- ಸರ್ವಂ- ಚ- ಮಯಿ- ಪಶ್ಯತಿ। ತಸ್ಯ- ಅಹಂ- ನ - ಪ್ರಣಶ್ಯಾಮಿ- ಸಃ- ಚ- ಮೇ- ನ- ಪ್ರಣಶ್ಯತಿ॥

ಅ॥ ಯಃ- ಯಾವನು, ಸರ್ವತ್ರ- ಸರ್ವವಸ್ತುಗಳಲ್ಲಿಯೂ, ಮಾಂ - ನನ್ನನ್ನು, ಪಶ್ಯತಿ- ನೋಡುತ್ತಾನೊ, ಸರ್ವಂಚ- ಸರ್ವವಸ್ತುಗಳನ್ನೂ, ಮಯಿ - ನನ್ನಲ್ಲಿ, ಪಶ್ಯತಿ- ನೋಡುತ್ತಾನೊ, ತಸ್ಯ- ಅವನಿಗೆ, ಅಹಂ- ನಾನು, ನಪ್ರಣಶ್ಯಾಮಿ- ಕಾಣದೆಹೋಗಲಾರೆನು, ಸಚ- ಅವನೂ, ಮೇ- ನನಗೆ, ನ ಪ್ರಣಶ್ಯತಿ-ಕಾಣಲ್ಪಡದೆ ಹೋಗುವುದಿಲ್ಲವು. ॥೩೦॥

(ಶಂ॥ಭಾ॥) ಇದುವರೆಗೂ ಹೇಳಲ್ಪಟ್ಟ ಆತ್ಮೈಕತ್ವ ದರ್ಶನಕ್ಕೆ (ಜೀವೇಶ್ವರರಿಗೆಭೇದವಿಲ್ಲವೆಂಬಜ್ಞಾನಕ್ಕೆ) ಉಂಟಾಗುವ ಫಲವುಹೇಳಲ್ಪಡುವುದು. ಯಾವಪುರುಷನಾದರೆ ವಾಸುದೇವನಾದನನ್ನನ್ನು ಸಕಲಭೂತಗಳಲ್ಲಿಯೂ ನೋಡುತ್ತಾನೋ,ಬ್ರಹ್ಮಾದಿಭೂತಗಳನ್ನು ನನ್ನಲ್ಲಿಯೂ ನೋಡುತ್ತಾನೋ,ಸಮಸ್ತವೂ ಆತ್ಮಸ್ವರೂಪವೇ ಎಂಬಜ್ಞಾನವುಳ್ಳ ಅಂತವನಿಗೆ ನಾನು ಪರೋಕ್ಷನಾಗುವುದಿಲ್ಲವು. ಎಂದರೆ ಅವನೇ ನಾನು, ನಾನೇಅವನು ಎಂದರಿಯಬೇಕು. ಈ ರೀತಿಯಾಗಿ ಬ್ರಹ್ಮವನ್ನರಿತವನಿಗೂ ಈಶ್ವರನಿಗೂ ಭೇದವಿಲ್ಲವಾದುದರಿಂದ ತನಗೆ ತಾನು ಕಾಣಲ್ಪಡುವಂತೆಒಬ್ಬರಿಗೊಬ್ಬರುಕಾಣಲ್ಪಡುತ್ತಾಇರುವರೆಂದುಭಾವವು.॥೩೦॥

(ರಾ॥ಭಾ॥)ಮೇಲಿನ ಶ್ಲೋಕದಲ್ಲಿ ಹೇಳಿರುವ ಸ್ಥಿತಿಗಿಂತಲೂ ಪರಿಪಕ್ವವಾದ ಸ್ಥಿತಿಯನ್ನು (ಎಂದರೆ ನನ್ನೊಡನೆ ಸಾಮ್ಯವನ್ನು) ಯಾವನು ಹೊಂದಿರುವನೋ ಅವನು ಆತ್ಮಗಳೆಲ್ಲವನ್ನು ನನ್ನಲ್ಲಿಯೂ; ನನ್ನನ್ನು ಸಕಲಾತ್ಮಗಳಲ್ಲಿಯೂ ನೋಡುತ್ತಾನೆ. ಎಂದರೆ ಪುಣ್ಯಪಾಪಗಳಂತ್ಯಜಿಸಿ ಸ್ವಸ್ವರೂಪದಿಂದಿರುವ ಆತ್ಮಗಳೆಲ್ಲವೂ ಮುಕ್ತನಿಗೆ ಪರಮಸಾಮ್ಯವಂಪ್ರತಿಪಾದಿಸುವ ಶ್ರುತ್ಯುಕ್ತಪ್ರಕಾರವಾಗಿ ಪರಮಪುರುಷನಾದ ನನ್ನಂತೆ ಇರುವವೆಂಬದಾಗಿ ನೋಡುತ್ತಾನೆ (ಸ್ವಸ್ವರೂಪಮಾತ್ರದಲ್ಲಿರುವ ಅನ್ಯನೂಪರಮಪುರುಷನಿಗೆ ಸಮನಾಗಿರುವುದರಿಂದ ತನ್ನಂತೆಅನ್ಯಗಳಾದ ಆತ್ಮಗಳೂ ಜ್ಞಾನೈಕಾಕಾರವಾಗಿಯೇ ಇರುವವೆಂಬದಾಗಿ ನೋಡುತ್ತಾನೆಂದು ತಾತ್ಪರ್ಯವು.) ಆ ರೀತಿಯಾಗಿ ತನ್ನನ್ನು ನನ್ನಂತೆನೋಡುವವನಿಗೆ ಅಂತಹ ಸಾಮ್ಯವಂ ಬಿಟ್ಟು ನಾನು ಕಾಣಲ್ಪಡದೇ ಹೋಗುವುದಿಲ್ಲವು. ಅವನು ಆ ಪ್ರಕಾರವೇ ನನಗೆ ಸಮವಾಗಿ ಕಾಣಲ್ಪಡದೆ ಹೋಗುವುದಿಲ್ಲವು.॥ ... ... ॥೩೦॥

(ಮ॥ಭಾ॥) ನನ್ನಲ್ಲಿ ಸಕಲಭೂತಗಳನ್ನು,ಸಕಲಭೂತಗಳಲ್ಲಿ ನನ್ನನ್ನೂ, ನೋಡುವಂತವನ; ನಪ್ರಣಶ್ಯಾಮಿ- ಯೋಗಕ್ಷೇಮಗಳಿಗೆ ನಾನು ಬಾಧ್ಯಪಡದೆ ಹೋಗಲಾರೆನು. ಸಚಮೇನಪ್ರಣಶ್ಯತಿ- ಅವನೂ ನನ್ನ ಭಕ್ತನಾಗದೇ ಹೋಗುವುದಿಲ್ಲವು. (ಗೀ॥ವಿ॥) ಸರ್ವಂಚ ಮಯಿಪಶ್ಯತಿ - ಸಕಲವಾದ ಭೂತಗಳೂ ನನ್ನ ಅಧೀನವಾಗಿರುವವು, ಎಂಬ

ದಾಗಿ ನೋಡುತ್ತಾನೆ; ಉಳದವುಗಳೆಲ್ಲವೂ ಮ || ಭಾ || ಪ್ರಕಾರವೇ ನೋಡಿಕೊಳ್ಳಬೇಕು. ... ... ||೩೦||

ಮೂ || ಸರ್ವಭೂತಸ್ಥಿತಂಯೋಮಾಂ ಭಜತ್ಯೇಕತ್ವಮಾಸ್ಥಿತಃ | ಸರ್ವಥಾವರ್ತಮಾನೋಪಿ ಸಯೋಗೀಮಯಿ ವರ್ತತೇ || ... ... ||೩೧||

ಪ|| ಸರ್ವಭೂತಸ್ಥಿತಂ- ಯಃ- ಮಾಂ- ಭಜತಿ- ಏಕತ್ವಂ- ಆಸ್ಥಿತಃ | ಸರ್ವಥಾ- ವರ್ತಮಾನಃ- ಅಪಿ- ಸಃ- ಯೋಗೀ- ಮಯಿ- ವರ್ತತೆ||

ಅ|| ಸರ್ವಭೂತಸ್ಥಿತಂ- ಸರ್ವಭೂತಗಳಲ್ಲಿಯೂ ಇರುವ, ಮಾಂ - ನನ್ನನ್ನು, ಏಕತ್ವಮಾಸ್ಥಿತಃ- ಅಭೇದವನ್ನಾಶ್ರಯಿಸಿ, (ರಾ) ಪೂರ್ಣವಾದ ಜ್ಞಾನಾಕಾರದಿಂದ ಏಕರೂಪನಾಗಿರುವ, ಯಃ- ಯಾವನು, ಭಜತಿ- ಭಜನೆಯಂಮಾಡುತ್ತಾನೊ, ಸಯೋಗೀ- ಆ ಯೋಗಿಯು, ಸರ್ವಥಾವರ್ತಮಾನೋಪಿ- ಯಾವಮಾರ್ಗದಲ್ಲಿ ಪ್ರವರ್ತಿಸಿರುವವನಾದರೂ, (ರಾ) ಯಾವ ಕಾಲದಲ್ಲಿಯೂ, (ಧ್ಯಾನಕಾಲದಲ್ಲಿಯೂ ಅದಿಲ್ಲದ ಕಾಲದಲ್ಲಿಯೂ,) (ಗೀ||ವಿ)ಒಳ್ಳೇ ಕಾರ್ಯಗಳನ್ನು, ಮತ್ತು ಕೆಟ್ಟಕಾರ್ಯಗಳನ್ನು ಮಾಡುವಂತವನೇ ಆದರೂ, ಮಯಿವರ್ತತೇ-ನನ್ನಲ್ಲಿಯೇ ಇರುವನು. (ಶಂ) ವಿಷ್ಣುಸಂಬಂಧಿಯಾದ ಪರಮಪದದಲ್ಲಿರುವನು, ನಿತ್ಯಮುಕ್ತನಾಗಿರುವನೆಂದರ್ಥವು. (ಶ್ರೀ) ಮೋಕ್ಷವಹೊಂದುತ್ತಾನೆ. (ರಾ) ತನ್ನನ್ನು ಮತ್ತು ಇತರ ಭೂತಗಳನ್ನೂ ನನ್ನ ರೂಪಕ್ಕೆ ಸಮವಾದರೂಪವುಳ್ಳವುಗಳನ್ನಾಗಿ ನೋಡುತ್ತಾನೆ. (ಮ||ಗೀ||ವಿ) ಮೋಕ್ಷ!' ಸ್ಥಾನ' ದಲ್ಲಿರುವನು. ||೩೧||

(ರಾ|| ಭಾ||) ಮೇಲಿನ ಶ್ಲೋಕದಲ್ಲಿ ಹೇಳಿರುವ ದಶೆಗಿಂತಲೂ ಪರಿಪಕ್ವವಾದ ದಶೆಯನ್ನು ಹೇಳುತ್ತಾನೆ- ದೇವತೆಗಳು ಮನುಷ್ಯರು ಎಂಬದಾಗಿ ಪ್ರಕೃತಿಯಿಂದುಂಟಾಗುವ ಭೇದವನ್ನು ಬಿಟ್ಟು ಸಂಕುಚಿತವಾಗದೇ ಇರುವ ಜ್ಞಾನವೆಂಬ ಒಂದೇ ಆಕಾರದಿಂದ ಏಕತ್ವವನ್ನು ಹೊಂದಿರುವಯಾವನಾದರೇ ಸರ್ವಭೂತಗಳಲ್ಲಿರುವ ನಮ್ಮನ್ನು ಯೋಗದಶೆಯಲ್ಲಿ ಸುದೃಢವಾಗಿ ಭಜಿಸುವನೂ; ಯೋಗವಿಲ್ಲದಸ್ಥಿತಿಯಲ್ಲಿಯೂ ಅವನು ತನ್ನಾತ್ಮನನ್ನೂ ಇತರ ಭೂತಗಳನ್ನೂ ನೋಡಿಕೊಂಡಿದ್ದರೂ ನಮ್ಮಲ್ಲಿಯೇ ಇರುತ್ತಾನೆ. ತನ್ನಲ್ಲಿಯೂ ಅನ್ಯರಲ್ಲಿಯೂ ನಮ್ಮ ಸಾಮ್ಯವನ್ನೇ ನೋಡುತ್ತಾನೆಂದುತಾತ್ಪರ್ಯವು. ||೩೧||

ಮೂ॥ ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋ
ರ್ಜುನ । ಸುಖಂ ವಾ ಯದಿ ವಾ ದುಃಖಂ ಸ ಯೋಗೀ
ಪರಮೋಮತಃ॥ ... ... ॥೩೨॥

ಪ॥ ಆತ್ಮೌಪಮ್ಯೇನ- ಸರ್ವತ್ರ- ಸಮಂ- ಪಶ್ಯತಿ- ಯಃ- ಅರ್ಜುನ । ಸುಖಂ-ವಾ- ಯದಿ- ವಾ- ದುಃಖಂ - ಸಃ- ಯೋಗೀ-ಪರಮಃ- ಮತಃ॥

ಅ॥ ಹೇ ಅರ್ಜುನ- ಎಲೈ ಅರ್ಜುನನೆ! ಸರ್ವತ್ರ- ಸರ್ವಪ್ರಾಣಿಗಳಲ್ಲಿಯೂ,ಸುಖಂವಾ- ಸುಖವನ್ನಾದರೂ, ಯದಿವಾ ದುಃಖಂ- ದುಃಖವನ್ನಾದರೂ, ಆತ್ಮೌಪಮ್ಯೇನ - ಆತ್ಮಸಾಮ್ಯದಿಂದ, ಸಮಂ- ಸಮವಾಗಿ, ಯಃಪಶ್ಯತಿ- ಯಾವನು ನೋಡುತ್ತಾನೊ, ಸಯೋಗೀ- ಆ ಯೋಗಿಯು, ಪರಮಃ-ಶ್ರೇಷ್ಠನೆಂಬದಾಗಿ,ಮತಃ- ನಿಶ್ಚಯಿಸಲ್ಪಡುವನು.॥೩೨॥

(ಶಂ॥ಭಾ॥) ಹಿಂದಿನ ಶ್ಲೋಕದಲ್ಲಿ “ ಸರ್ವಥಾ ವರ್ತಮಾನೋಽಪಿ” ಎಂಬುವುದರಿಂದ ಯಥೇಷ್ಟಾಚರಣವು (ಯೋಗಿಯು) ಯೋಗಫಲಕ್ಕೆ ಪ್ರತಿಬಂಧಕವಲ್ಲವೆಂಬದಾಗಿ ಹೇಳಲ್ಪಟ್ಟಿತು. ಆದರೆ ಪರಹಿಂಸಾದಿಗಳು ಆತ್ಮಜ್ಞಾನಕ್ಕೆ ಪ್ರತಿಬಂಧಕವಾಗುವವ್ರೋ? ಇಲ್ಲವ್ರೋ? ಎಂಬ ಅರ್ಜುನ ಶಂಕಾನಿವಾರಣಾರ್ಥವಾಗಿ ಯಥೇಷ್ಟಾಚರಣದಲ್ಲಿಯೂ ಅನ್ಯರಿಗೆ ಬಾಧೆಯುಂಟಾಗುವಂತೆ ಸಂಚರಿಸಕೂಡದೆಂತಲೂ,ಪರರ ಸುಖದುಃಖಗಳನ್ನು ತನ್ನ ಸುಖದುಃಖಗಳಂತೆಯೇ ನೋಡಬೇಕೆಂಬದಾಗಿಯೂ ಹೇಳುತಾ ಪರಮಯೋಗಿಯಾದವನಿಂತವನೆಂಬದಾಗಿ ತಿಳಿಯಪಡಿಸುವ ವ್ಯಾಜದಿಂದ ಯೋಗ ಮಾಹಾತ್ಮ್ಯವನ್ನು ಅರ್ಜುನನಿಗುಪದೇಶಿಸುತ್ತಾನೆ,- ತನಗೆ ಸುಖವು ಯಾವ ಪ್ರಕಾರವಾಗಿಅನುಕೂಲವಾಗಿರುವುದೊ; ಆಪ್ರಕಾರವೇ ಸಕಲ ಭೂತಗಳಿಗೂ ಸುಖವುಅನುಕೂಲವಾಗಿರುವುದೆಂತಲೂ, ದುಃಖವು ತನಗೆ ಪ್ರತಿಕೂಲವಾಗಿರುವಂತೆ ಸಕಲ ಭೂತಗಳಿಗೂ ಪ್ರತಿಕೂಲವಾಗಿಯೇ ಇರುವುದೆಂತಲೂ ಯಾವ ಯೋಗಿಯುತಿಳಿಯುತ್ತಾನೊ ಅವನು ಸರ್ವಯೋಗಿಗಳ ಮಧ್ಯದಲ್ಲಿ ಶ್ರೇಷ್ಠನೆಂದರಿಯಬೇಕು. (ಈ ಅರ್ಥವನ್ನೇ (ಶ್ರೀ॥ಗೀ॥ವಿ) ಆದರಿಸುತ್ತಾರೆ. ॥೩೨॥

(ರಾ॥ಭಾ॥) ಪೂರ್ವಶ್ಲೋಕದಲ್ಲಿ ಹೇಳಿರುವ ದಶೆಗಿಂತಲೂ ಪರಿಪಕ್ವವಾದ ದಶೆಯು ಹೇಳಲ್ಪಡುವುದು. ಆತ್ಮಗಳೆಲ್ಲವೂ ಅಸಂಕುಚಿತ ವಾಗಿರುವ ಜ್ಞಾನೈಕಾಕಾರದಿಂದ ಸಮವಾಗಿರುವರು. ಆದುದರಿಂದ ಪುತ್ರಜ

ನ್ಮಮರಣಾದಿಗಳಿಂದುಂಟಾಗುವ ಸುಖದುಃಖಗಳೊಡನೆ ಯಾವ ಆತ್ಮ ಗಳಿಗೂ ಸಂಬಂಧ ವಿಲ್ಲ ವೆಂಬದಾಗಿ ನೋಡಿ, ಆದರಿಂದ ತನ್ನಲ್ಲಿಯೂ, ಅನ್ಯರಲ್ಲಿಯೂ ಸುಖದುಃಖಗಳನ್ನು ಸಮವಾಗಿ ನೋಡುವಂತವನು, ಎಂದರೆ ಅನ್ಯರ ಪುತ್ರ ಜನ್ಮಮರಣಾದಿಗಳಿಗೆ ಸಮವಾಗಿ ತನ್ನ ಪುತ್ರ ಜನನ ಮರಣಾದಿಗಳನ್ನು ನೋಡುವಂತವನು ಯೋಗದ ಪರಾಕಾಷ್ಠೆ ಯಲ್ಲಿರುವಂತವನಾಗುವನು. ... ... ॥೩೨॥

ಅರ್ಜುನ ಉವಾಚ.

ಮೂ॥ ಯೋಽಯಂಯೋಗ ಸ್ತ್ವಯಾಪ್ರೋಕ್ತಃ ಸಾಮ್ಯೇನಮಧುಸೂದನ । ಏತಸ್ಯಾಹಂನಪಶ್ಯಾಮಿ ಚಂಚಲತ್ವಾತ್ಸ್ಥಿತಿಂಸ್ಥಿರಾಂ ॥ ... ॥೩೩॥

ಪ॥ ಅರ್ಜುನಃ- ಉವಾಚ॥ ಯಃ- ಅಯಂ- ಯೋಗಃ- ತ್ವಯಾ- ಪ್ರೋಕ್ತಃ - ಸಾಮ್ಯೇನ-ಮಧುಸೂದನ।ಏತಸ್ಯ-ಅಹಂ-ನ- ಪಶ್ಯಾಮಿ- ಚಂಚಲತ್ವಾತ್-ಸ್ಥಿತಿಂ-ಸ್ಥಿರಾಂ ॥೩೩॥

ಅ॥ ಅರ್ಜುನ ಉವಾಚ- ಅರ್ಜುನನು ಹೇಳಿದನು. ಹೇ ಮಧುಸೂದನ- ಮಧುವೆಂಬ ದೈತ್ಯನನ್ನು ಸಂಹರಿಸಿದ ಎಲೈ ಶ್ರೀ ಕೃಷ್ಣನೇ, ಸಾಮ್ಯೇನ- ಸಮತ್ವದಿಂದ, ಯಃ ಅಯಂ ಯೋಗಃ- ಯಾವ ಈ ಯೋಗವು, ತ್ವಯಾ ಪ್ರೋಕ್ತಃ- ಹೇಳಲ್ಪಟ್ಟಿತೋ, ಏತಸ್ಯ- ಈ ಯೋಗದ, ಸ್ಥಿರಾಂ-ಸ್ಥಿರವಾದ, ಸ್ಥಿತಿಂ- ಸ್ಥಿತಿಯನ್ನು, ಚಂಚಲತ್ವಾತ್- ಮನಸ್ಸು ಚಂಚಲವಾಗಿರುವ ಕಾರಣ, ಅಹಂ-ನಾನು, ನಪಶ್ಯಾಮಿ-ನೋಡಲಾರೆನು ॥೩೩॥

( ಶಂ॥ ಭಾ॥ ) ಹೀಗೆ ಹೇಳಲ್ಪಟ್ಟಿರುವುದಾಗಿಯೂ, ಆತ್ಮದರ್ಶನವೇ ಸ್ವರೂಪವಾಗಿ ಉತ್ಕೃಷ್ಟವಾಗಿಯೂ, ಇರುವ ಯೋಗವು ಸಂಪಾದಿಸಲಶಕ್ಯವಾಗಿರುವುದು. ಅಂತಹ ಯೋಗವನ್ನು ಹೊಂದುವುದಕ್ಕೆ ತಕ್ಕ ಉಪಾಯವನ್ನು ಅರ್ಜುನನೀಶ್ಲೋಕದ ಮೊದಲು ಎರಡು ಶ್ಲೋಕಗಳಿಂದ ಪ್ರಶ್ನೆಮಾಡುತ್ತಾನೆ. ಎಲೈ ಶ್ರೀ ಕೃಷ್ಣನೇ ಮನಸ್ಸು ಲಯವಿಕ್ಷೇಪಗಳಿಲ್ಲದೇ ಕೇವಲಾತ್ಮಾಕಾರದಲ್ಲಿರುವುದನ್ನೆ ಯೋಗವೆಂತಲೂ, ಅಂಥಾ ಯೋಗವನ್ನಭ್ಯಾಸ ಮಾಡಬೇಕೆಂತಲೂ, ನೀನು ಹೇಳಿರುತ್ತಿ; ಮನಸ್ಸು ಅತ್ಯಂತ ಚಂಚಲವಾಗಿರುವುದರಿಂದ ಲಯವಿಕ್ಷೇಪಗಳಿಲ್ಲದೆ ಕೇವಲಾತ್ಮಾಕಾರದೊಡನೆ ಇರುವಿಕೆಯೆಂಬ ಯೋಗವು ಸ್ಥಿರವಾಗಿರುವುದೆಂದು ನಾನು ನೋಡಲಾರೆನು. ... ॥೩೩॥

(ಶ್ರೀ) ಬ್ರಹ್ಮಧ್ಯಾನದಲ್ಲಿ ಚಲಿಸದೇ ಸ್ಥಿರವಾಗಿ ಮನಸ್ಸನ್ನಿಡಬೇಕೆಂದು ನೀವು ಹೇಳಿರುವುದು ಮನಸ್ಸು ಚಂಚಲವಾಗಿ ಇರುವುದರಿಂದ ಅಸಾಧ್ಯವೆಂಬದಾಗಿ ತೋರುತದೆ. ... ॥೩೩॥

ಮೂಲ ॥ಚಂಚಲಂಹಿಮನಃಕೃಷ್ಣ ಪ್ರಮಾಥಿ ಬಲವದ್ದೃಢಂ । ತಸ್ಯಾಹಂನಿಗ್ರಹಂಮನ್ಯೇ ವಾಯೋರಿವಸುದುಷ್ಕರಂ ॥ ... ... ... ॥೩೪॥

ಪ॥ ಚಂಚಲಂ-ಹಿ- ಮನಃ-ಕೃಷ್ಣ - ಪ್ರಮಾಥಿ-ಬಲವತ್-ದೃಢಂ । ತಸ್ಯ-ಅಹಂ-ನಿಗ್ರಹಂ- ಮನ್ಯೇ-ವಾಯೋಃ- ಇವ-ಸುದುಷ್ಕರಂ ॥ ... ॥೩೪॥

ಅ॥ ಹೇಕೃಷ್ಣ-ಎಲೈ ಶ್ರೀಕೃಷ್ಣನೇ, ಚಂಚಲಂ-ಚಂಚಲ ಸ್ವಭಾವವಾದ, ಮನಃ-ಮನಸ್ಸು, ಪ್ರಮಾಥಿ - ದೇಹೇಂದ್ರಿಯಾದಿಗಳನ್ನು ಕ್ಷೋಭೆಮಾಡಿ ಪರವಶ ಪಡಿಸುವುದಾಗಿಯೂ, ಬಲವತ್ - ನಿಗ್ರಹಿಸಲಶಕ್ಯವಾಗಿಯೂ, ದೃಢಂ- ದೃಢವಾದ ವಿಷಯ ಸಂಬಂಧವುಳ್ಳದ್ದಾಗಿಯೂ ಇರುವುದು. ತಸ್ಯ-ಆ ಮನಸ್ಸಿನ, ನಿಗ್ರಹಂ - ಅಡಗಿಸುವಿಕೆಯನ್ನು, ವಾಯೋಃ ಇವ-ಗಾಳಿಯಂತೆ, ಸುದುಷ್ಕರಂ- ಅತ್ಯಂತ ಅಸಾಧ್ಯವೆಂಬದಾಗಿ, ಅಹಂ-ನಾನು, ಮನ್ಯೇ -ನೆನೆಸುವೆನು. ... .. ... ॥೩೪॥

(ರಾ॥ ಭಾ॥) ಎಲೈ ಶ್ರೀ ಕೃಷ್ಣನೇ ದೇವಮನುಷ್ಯಾದಿ ಭೇದದಿಂದಲೂ, ಜೀವೇಶ್ವರ ಭೇದದಿಂದಲೂ, ಇದುವರೆಗೂ ಪರಸ್ಪರವಾಗಿ ಆತ್ಮಭೇದವನ್ನು ನೋಡುವುದೆಂಬ (ಆತ್ಮಗಳು ಜ್ಞಾನಸ್ವರೂಪವೆಂಬ) ಸಮದರ್ಶನರೂಪವಾದ ಯಾವ ಯೋಗವು ಈಗ ನಿನ್ನಿಂದಹೇಳಲ್ಪಟ್ಟಿತೋ ಇಂಥಾ ಯೋಗಕ್ಕೆ ಸ್ಥಿರವಾದ ಸ್ಥಿತಿಯನ್ನು ಮನಸ್ಸು ಚಂಚಲವಾಗಿರುವುದರಿಂದ ನಾನು ನೋಡಲಾರೆನು. ಚಲಿಸುವುದೇ ಸ್ವಭಾವವಾಗಿವುಳ್ಳ ಮನಸ್ಸನ್ನು ಚಿರಕಾಲಾಭ್ಯಸ್ತವಾದ ವಿಷಯಗಳಲ್ಲಿ ನಿಲ್ಲುಸುವ ಕಾಲದಲ್ಲಿಯೇ ಅದು ಒಂದನ್ನು ನೆನೆಸಿದರೆ ಮತ್ತೊಂದು ವಿಷಯದಲ್ಲಿ ಓಡುವುದು. ಹೀಗಿರುವಲ್ಲಿ ಅನಭ್ಯಸ್ತವಾದ ಆತ್ಮದಲ್ಲಿ ಈ ಮನಸ್ಸನ್ನು ಸ್ಥಾಪಿಸುವುದೆಂದರೆ ಎದುರಾಗಿ ಬರುವ ಚಂಡಮಾರುತವನ್ನು (ಪ್ರತಿಕೂಲ ಗತಿಯಿಂದ ಬರುತಲಿರುವ ಮಹಾಘಾಳಿಯನ್ನು) ಬೀಸಣಿಗೆಯಿಂದ ತಡೆಮಾಡುವ ರೀತಿಯಿಂದ ಅತ್ಯಂತ ಪ್ರಯಾ

ಸವಾಗಿರುವುದೆಂದು ನಾನು ನೆನೆಸುವೆನು. ಆದುದರಿಂದ ಮನೋನಿಗ್ರಹೋಪಾಯವನ್ನು ಉಪದೇಶಿಸಬೇಕು. ... ||೩೩||೩೪||

(ಶಂ|| ಆ||) "ಅಪ್ಯಬ್ಧಿಪಾನಾನ್ಮಹತಸ್ಸುಮೇರೂನ್ಮೂಲನಾದಪಿ! ಅಪಿವಹ್ನ್ಯಶನಾತ್ಸಾಧೋ ವಿಷಮಶ್ಚಿತ್ತನಿಗ್ರಹಃ" ಅರ್ಥವು || ಸಮುದ್ರಜಲವನ್ನು ಸಂಪೂರ್ಣವಾಗಿ ಪಾನವನ್ನಾದರೂ ಮಾಡಬಹುದು, ಮಹಾಮೇರು ಪರ್ವತವನ್ನಾದರೂ ಅಲ್ಲಾಡಿಸಿ ಸಮೂಲವಾಗಿ ಕೀಳಬಹುದು, ಅಗ್ನಿಯನ್ನಾದರೂ ಪಾನಮಾಡಬಹುದು, ಇವುಗಳಿಗಿಂತಲೂ ಮನೋನಿಗ್ರಹವು ಅತ್ಯಂತ ಕಷ್ಟವಾಗಿರುವುದು. ಈ ಸ್ಮೃತಿ ಪ್ರಸಿದ್ಧವಾದ ಅರ್ಥವು "ಹಿ" ಎಂಬ ಪದದಿಂದ ದ್ಯೋತಿತವಾಗುವುದು. ||೩೪||

## ಶ್ರೀ ಭಗವಾನುವಾಚ.

ಮೂ || ಅಸಂಶಯಂ ಮಹಾಬಾಹೋ ಮನೋದುರ್ನಿ
ಗ್ರಹಂಚಲಂ | ಅಭ್ಯಾಸೇನತುಕೌಂತೇಯ ವೈರಾಗ್ಯೇ
ಣಚಗೃಹ್ಯತೇ || ... ... ||೩೫||

ಪ|| ಶ್ರೀಭಗವಾನ್ - ಉವಾಚ|| ಅಸಂಶಯಂ- ಮಹಾಬಾಹೋ- ಮನಃ- ದುರ್ನಿಗ್ರಹಂ- ಚಲಂ | ಅಭ್ಯಾಸೇನ- ತು- ಕೌಂತೇಯ- ವೈರಾಗ್ಯೇಣ- ಚ- ಗೃಹ್ಯತೆ || ||೩೫||

ಅ|| ಶ್ರೀ ಭಗವಾನುವಾಚ- ಶ್ರೀಕೃಷ್ಣಪರಮಾತ್ಮನು ಹೇಳಿದನು. ಮಹಾಬಾಹೋ- ಅಧಿಕವಾದ ಭುಜಬಲವುಳ್ಳ, ಹೇ ಕೌಂತೇಯ-- ಎಲೈ ಕುಂತೀಕುಮಾರನಾದ ಅರ್ಜುನನೇ, ಮನಃ- ಮನಸ್ಸು, ದುರ್ನಿಗ್ರಹಂ-ಅಡಗಿಸುವುದಕ್ಕೆ ಅಧಿಕ ಕಷ್ಟವಾಗಿರುವದು, ಚಲಂ- ಚಂಚಲನಾಗಿರುವುದು, ( ಎಂಬೀವಿಷಯವು ) ಅಸಂಶಯಂ- ನಿಸ್ಸಂಶಯವಾಗಿರುವುದು, (ತಥಾಪಿ-ಆದರೂ) ಅಭ್ಯಾಸೇನ-ಅಭ್ಯಾಸದಿಂದಲೂ, ವೈರಾಗ್ಯೇಣಚ- ವೈರಾಗ್ಯದಿಂದಲೂ, ಗೃಹ್ಯತೇ-ಅಡಗಿಸಲ್ಪಡುವುದು. ... ... ||೪೫||

(ಶಂ|| ಭಾ||) ಅಧಿಕವಾದ ಭುಜಬಲವುಳ್ಳ ಎಲೈ ಅರ್ಜುನನೇ ಮನಸ್ಸು ನಿಗ್ರಹಿಸಲಶಕ್ಯವು, ಅತ್ಯಂತ ಚಂಚಲವಾಗಿರುವುದು, ಎಂಬೀ ವಿಷಯದಲ್ಲಿ ಸಂದೇಹವೇನೂ ಇಲ್ಲವು, ಆದರೂ ಕುಂತೀಪುತ್ರನಾದ ಎಲೈ ಅರ್ಜುನನೇ ಯಾವದಾದರೊಂದು ವಿಷಯದಲ್ಲಿ ಮನಸ್ಸನ್ನಿಟ್ಟು ಆವಿಷಯಕ್ಕಿಂತಲೂ, ಇತರಗಳಾದ ವಿಷಯಗಳಮೇಲೆ ಚಿತ್ತವೃತ್ತಿಯನ್ನು ಹೋಗದಂತೆ ಮೊದಲಿನ ವಿಷಯದಲ್ಲಿ ಅತ್ಯಂತವಾಗಿ ಮನಸ್ಸನ್ನಿ

ಡುವಿಕೆ ಎಂಬ ಅಭ್ಯಾಸದಿಂದಲೂ, ವಿಷಯಾಪೇಕ್ಷೆಯನ್ನು ಬಿಟ್ಟುಬಿಡುವಿಕೆಯೆಂಬ ವೈರಾಗ್ಯದಿಂದಲೂ, ಆ ಮನಸ್ಸು ನಿಗ್ರಹಿಸಲ್ಪಡುವುದೆಂದು ತಾತ್ಪರ್ಯವು. ... ... .. ||೩೫||

ಮೂ|| ಅಸಂಯತಾತ್ಮನಾಯೋಗೋ ದುಷ್ಪ್ರಾಪಇತಿ
ಮೇಮತಿಃ | ವಶ್ಯಾತ್ಮನಾತುಯತತಾ ಶಕ್ಯೋಽವಾಪ್ತು
ಮುಪಾಯತಃ || ... ||೩೬||

ಪ|| ಅಸಂಯತಾತ್ಮನಾ- ಯೋಗಃ- ದುಷ್ಪ್ರಾಪಃ- ಇತಿ- ಮೇ- ಮತಿಃ | ವಶ್ಯಾತ್ಮನಾ-ತು- ಯತತಾ- ಶಕ್ಯಃ- ಅವಾಪ್ತುಂ- ಉಪಾಯತಃ||

ಅ|| ಅಸಂಯತಾತ್ಮನಾ- ನಿರೋಧಿಸಲ್ಪಡದಮನಸ್ಸುಳ್ಳವನಿಂದ, ಯೋಗಃ- ಯೋಗವು, (ರಾ) ಸಮದರ್ಶನರೂಪವಾದಯೋಗವು, ದುಷ್ಪ್ರಾಪಇತಿ- ಹೊಂದತಕ್ಕದ್ದಲ್ಲವೆಂಬದಾಗಿ, ಮೇ- ನನ್ನ, ಮತಿಃ- ನಿಶ್ಚಯವು. ವಶ್ಯಾತ್ಮನಾ – ನಿರೋಧಿಸಲ್ಪಟ್ಟ ಮನಸ್ಸುಳ್ಳವನಾದ, ಯತತಾತು- ಪ್ರಯತ್ನಶೀಲನಾದವನಿಂದಲೂ, ಉಪಾಯತಃ – ಅಭ್ಯಾಸವೈರಾಗ್ಯಗಳೆಂಬ ಉಪಾಯದದೆಸೆಯಿಂದ, (ರಾ)ಕರ್ಮಯೋಗವೆಂಬ ಉಪಾಯದ ದೆಸೆಯಿಂದ,ಅವಾಪ್ತುಂ- ಹೊಂದುವುದಕ್ಕೆ, ಶಕ್ಯಃ- ಸಾಧ್ಯವಾಗಿರುವುದು. ... ||೩೬||

(ರಾ||ಭಾ||) ೩೩-೩೪- ನೇ ಶ್ಲೋಕಗಳಲ್ಲಿ ಅರ್ಜುನನು ಮಾಡಿರುವಪ್ರಶ್ನೆಕ್ಕೆ ಉತ್ತರವನ್ನು ಶ್ರೀಕೃಷ್ಣನು ಹೇಳುತ್ತಾನೆ. ಮಹತ್ತಾದ ಭುಜವುಳ್ಳ ಎಲೈ ಅರ್ಜುನನೇ ! ಚಂಚಲ ಸ್ವಭಾವವಾದ ಮನಸ್ಸನ್ನು ಅಡಗಿಸುವುದೆಂಬುವುದು ಅಸಾಧ್ಯವಾದರೂ ಆತ್ಮವುಗುಣಸ್ವರೂಪವಾಗಿರುವುದೆಂದುತಿಳಿದುಅದನ್ನು ಅಭ್ಯಾಸಮಾಡುವುದರಿಂದ ಅದರಲ್ಲಿ ಪ್ರೀತಿಯೂ, ಇತರ ವಿಷಯಗಳು ದೋಷರೂಪವಾಗಿರುವುದೆಂದು ತಿಳಿಯುವುಗರಿಂದ ಅವುಗಳಲ್ಲಿ ಅಪ್ರೀತಿಯೂ ಉಂಟಾಗಿ ಕ್ರಮಕ್ರಮವಾಗಿ ಮಹಾಪ್ರಯಾಸದಿಂದ ಮನಸ್ಸು ನಿಲ್ಲಿಸಲ್ಪಡಬೇಕಾಗಿರುವುದು. ಮನಸ್ಸನ್ನು ಜಯಿಸದೆ ಹೋದರೆ ಯೋಗಸಿದ್ಧಿಯಾಗುವುದು ಅತ್ಯಂತ ದುರ್ಲಭವು. ಉಪಾಯದಿಂದ ಮನಸ್ಸನ್ನು ಸ್ವಾಧೀನಪಡಿಸಿಕೊಂಡವನಿಗಾದರೋ (ನಾನು ಪೂರ್ವದಲ್ಲಿ ಹೇಳಿರುವಂತೆ ನಮ್ಮ ಆರಾಧನರೂಪವಾದ ಕರ್ಮಯೋಗದಿಂದ ಮನಸ್ಸನ್ನು ಜಯಿಸಿದ ವನಿಗಾದರೊ, ) ಸಮ

ದರ್ಶನ ರೂಪವಾದ ಯೋಗವು ಸಿದ್ಧಿ ಯಾಗುವುದು ಅತ್ಯಂತ ಸುಲಭವು. ... ... ... ||೩೫|| ೩೬||

## ಅರ್ಜುನ ಉವಾಚ.

ಮೂ|| ಅಯತಿಶ್ಶ್ರದ್ಧಯೋಪೇತೋ ಯೋಗಾಚ್ಚಲಿತ
ಮಾನಸಃ | ಅಪ್ರಾಪ್ಯಯೋಗಸಂಸಿದ್ಧಿಂ ಕಾಂಗತಿಂಕೃ
ಷ್ಣಗಚ್ಛತಿ || ... ... ||೩೭||

ಪ|| ಅರ್ಜುನಃ- ಉವಾಚ|| ಅಯತಿಃ- ಶ್ರದ್ಧಯಾ- ಉಪೇತಃ-ಯೋಗಾತ್-ಚಲಿತಮಾನಸಃ | ಅಪ್ರಾಪ್ಯ-ಯೋಗಸಂಸಿದ್ಧಿಂ- ಕಾಂ-ಗತಿಂ-ಕೃಷ್ಣ-ಗಚ್ಛತಿ|| ||೩೭||

ಅ|| ಅರ್ಜುನಉವಾಚ- ಅರ್ಜುನನು ಹೇಳಿದನು. ಹೇ- ಕೃಷ್ಣ - ಎಲೈಶ್ರೀಕೃಷ್ಣನೇ| ಶ್ರದ್ಧಯೋಪೇತಃ- ನಂಬಿಕೆಯೊಡನೆ ಯೋಗದಲ್ಲಿ ಪ್ರವೇಶಿಸಿರುವಂತವನಾದ, ಅಯತಿಃ- ಯೋಗವನ್ನು ಪೂರ್ತಿಮಾಡಲು ಪ್ರಯತ್ನ ವಿಲ್ಲದವನು, ಯೋಗಾತ್ - ಯೋಗದ ದಸೆಯಿಂದ, ಚಲಿತಮಾನಸಃ- ಜಾರಿವಿಷಯಗಳಲ್ಲಿ ಪ್ರವೇಶಿಸಿರುವ ಮನಸ್ಸುಳ್ಳವನಾಗಿ, ಯೋಗಸಂಸಿದ್ಧಿಮಪ್ರಾಪ್ಯ- ಯೋಗಸಿದ್ಧಿಯನ್ನು ಹೊಂದದೆ, ಕಾಂಗತಿಂಗಚ್ಛತಿ - ಯಾವಗತಿಯನ್ನು ಹೊಂದುವನು ? ... ... ... ||೩೭||

## ಅರ್ಜುನನ ಪ್ರಶ್ನೆಯು.

(ಶಂ|| ಭಾ||)ಮನೋನಿಗ್ರಹವು ದುಃಖಸಾಧ್ಯ ವೆಂಬುವ ಪ್ರಶ್ನೆಕ್ಕೆ ಹೇಳಿದ ಸಮಾಧಾನವು ತೃಪ್ತಿಕರವಾಗಿರುವುದು. ಆದುದರಿಂದ ಮತ್ತೊಂದು ಪ್ರಶ್ನವಂಮಾಡುವೆನು. ಎಲೈ ಶ್ರೀಕೃಷ್ಣನೇ! ಯೋಗಾಭ್ಯಾಸವ ನ್ನಂಗೀಕರಿಸುವುದರಿಂದ ಇಹಪರಲೋಕ ಸುಖ ಪ್ರಾಪ್ತಿಗೆ ಕಾರಣಗಳಾದ ಕರ್ಮಗಳು ಬಿಡಲ್ಪಟ್ಟಿರುವುವು. ಅಂತವನು ಯೋಗಸಿದ್ಧಿಗೆ ಫಲವೂ ಮೋಕ್ಷಸಾಧನವೂ ಅದ ಜ್ಞಾನವನ್ನು ಹೊಂದುವುದಕ್ಕೆ ಪೂರ್ವದಲ್ಲಿಯೇ ಮರಣವಂ ಹೊಂದಿದರೆ ಮರಣ ಕಾಲಿಕವಾದ ವ್ಯಾಧ್ಯಾದಿಗಳಿಂದ ಯೋಗದಿಂದ ಚಲಿಸಲ್ಪಟ್ಟ ಮನಸ್ಸುಳ್ಳವನಾಗುವನಲ್ಲವೆ, ಆ ರೀತಿಯಾಗಿದ್ದರೆ ಇಹಪರಲೋಕಸುಖ ಕಾರಣಗಳಾದ ಕರ್ಮಗಳನ್ನು ಬಿಟ್ಟವನಾಗಿಯೂ, ಆತ್ಮಜ್ಞಾನವಿಲ್ಲದವನಾಗಿರುವುದರಿಂದ ಮೋಕ್ಷವಂ ಹೊಂದದವನಾಗಿಯೂ ಇರುವ ಯೋಗಿಯು ಯಾವ ಗತಿಯನ್ನು ಹೊಂದುವನು?. ... ... ||೩೭||

ಮೂ॥ ಕಚ್ಚಿನ್ನೋಭಯವಿಭ್ರಷ್ಟಶ್ಛಿನ್ನಾಭ್ರಮಿವನಶ್ಯ
ತಿ । ಅಪ್ರತಿಷ್ಠೋ ಮಹಾಬಾಹೋ ವಿಮೂಢೋಬ್ರ
ಹ್ಮಣಃಪಥಿ॥ ... ... ॥೩೮॥

ಪ॥ ಕಚ್ಚಿತ್- ನ- ಉಭಯವಿಭ್ರಷ್ಟಃ- ಛಿನ್ನಾಭ್ರಂ - ಇವ- ನಶ್ಯತಿ । ಅಪ್ರತಿಷ್ಠಃ- ಮಹಾಬಾಹೋ - ವಿಮೂಢಃ- ಬ್ರಹ್ಮಣಃ- ಪಥಿ ॥

ಅ॥ ಹೇಮಹಾಬಾಹೋ - ಎಲೈ ಭುಜಬಲಪ್ರೌಢ ಶ್ರೀಕೃಷ್ಣನೇ, ಉಭಯವಿಭ್ರಷ್ಟಃ- ಕರ್ಮ, ಯೋಗ, ಮಾರ್ಗಗಳೆಂಬೀ ಉಭಯ ಮಾರ್ಗಗಳಿಂದ ಭ್ರಷ್ಟನಾಗಿ, ಅಪ್ರತಿಷ್ಠಃ- ಆಶ್ರಯಹೀನನಾಗಿರುವ, ಬ್ರಹ್ಮಣಃ ಪಥಿವಿಮೂಢಃ- ಬ್ರಹ್ಮವನ್ನು ಹೊಂದುವ ಉಪಾಯ ದಲ್ಲಿ ಜ್ಞಾನವಿಲ್ಲದವನು, ಛಿನ್ನಾಭ್ರಮಿವ - ವಿಶೀರ್ಣವಾದ ಮೇಘದಂತೆ, ನಶ್ಯತಿಕ ಚ್ಚಿತ್- ಕೆಟ್ಟುಹೋಗುವುದಿಲ್ಲವೇನು ? ... ... ॥೩೮॥

(ಶಂ॥ ಭಾ॥) ಅಧಿಕವಾದ ಭುಜಬಲವುಳ್ಳ ಎಲೈ ಶ್ರೀಕೃಷ್ಣನೇ? ಬ್ರಹ್ಮಪ್ರಾಪ್ತಿ ಯೋಗ್ಯವಾದ ಮಾರ್ಗವಂ ತಿಳಿಯದ ಯೋಗಿಯು ನಿರಾಶ್ರಯನಾಗಿಯೂ, ಕರ್ಮಜ್ಞಾನ ಮಾರ್ಗಗಳೆಂಬೀ ಉಭಯದಿಂ ದಲೂ ಭ್ರಷ್ಟನಾಗಿಯೂ, ಭಿನ್ನವಾಗಿರುವಮೇಘವು ವಿಷೋರ್ಣದ ಕವಂ ಕೊಡದೆ ಕೆಟ್ಟುಹೋಗುವ ರೀತಿಯಿಂದ ಕೆಟ್ಟುಹೋಗುತ್ತಾನೆ ಯೋ? (ಅಥವಾ) ಇಲ್ಲವೋ?ಹೇಳಬೇಕು. ॥೩೮॥

(ಶ್ರೀ॥) ಪ್ರಶ್ನಾಭಿಪ್ರಾಯವನ್ನು ವಿವರಿಸಿ ಹೇಳುತ್ತಾನೆ. ಇವನು ಉಭಯ ವಿಭ್ರಷ್ಟನಾಗುವುದು ಹೇಗೆ ? ಎಂದರೆ—ಪೂರ್ವದಲ್ಲಿ ತಾ ನನುಷ್ಠಿಸಿದ ಕರ್ಮಗಳ ಫಲಗಳನ್ನು ಈಶ್ವರಾರ್ಪಿತವಾಗಿ ಮಾಡಿರುವು ದರಿಂದ ಕರ್ಮಫಲವಾದ ಸ್ವರ್ಗಾದಿಯನ್ನು ಹೊಂದುವುದಿಲ್ಲವು;ಯೋಗ ದಲ್ಲಿ ಪ್ರವೇಶಿಸಿರುವುದರಿಂದ ಈಗ ಕರ್ಮಾನುಷ್ಠಾನವೂ ಇಲ್ಲವು; ಯೋಗನಿಷ್ಪತ್ತಿ ಇಲ್ಲದೆ ಇರುವುದರಿಂದ ಮೋಕ್ಷವೂ ಇಲ್ಲವು; (ಎಂದ ರೆ ಅಭ್ಯಾಸ ವೈರಾಗ್ಯಾದಿ ರೂಪವಾದ ಸಾಧನಗಳಲ್ಲಿ ಪ್ರಯತ್ನವಿಲ್ಲದೇ ಇರುವುದರಿಂದ ಜ್ಞಾನಯೋಗಸಿದ್ಧಿಯನ್ನು ಹೊಂದಿ ಮೋಕ್ಷವನ್ನು ಹೊಂ ದುವುದಕ್ಕೆ ತಕ್ಕ ಕಾರಣವೂ ಇಲ್ಲವೆಂದರ್ಥವು. ಅಪ್ರತಿಷ್ಠಃ- ನಿರಾ ಶ್ರಯಃ, ಜ್ಞಾನಸಾಧನವಾದ ಕರ್ಮಾವಲಂಬನವೆಂಬ ಆಶ್ರಯವೂ ಇಲ್ಲ

ವು. ಆದುದರಿಂದಲೇ ಮನೋನಿಗ್ರಹವೇನು, ವಿಷಯವೈರಾಗ್ಯವೇನು ಮತ್ತು ಇವೇ ಮೊದಲಾದ ಬ್ರಹ್ಮವನ್ನು ಹೊಂದುವುದಕ್ಕೆ ಯೋಗ್ಯವಾದ ಮಾರ್ಗದಲ್ಲಿ ವಿಮೂಢನಾಗಿ ಇಂತವನು ನಾಶಹೊಂದುವುದಿಲ್ಲವೆ ಏನು ? ವಿಶ್ಲಿಷ್ಟವಾದ ಮೇಘವನ್ನು ದೃಷ್ಟಾಂತಪಡಿಸಿರುವುದು ಹೇಗೆಂದರೆ:ಸಮೂಹವಾಗಿ ಸೇರಿರುವ ಮೇಘಗಗಳು ವಾಯುವಿನಿಂದ ಭಿನ್ನಿಸಿ ನಾನಾಪ್ರಕಾರವಾಗಿ ಪ್ರತ್ಯೇಕಿಸುವುವು. ಈರೀತಿಯಿಂದ ಭಿನ್ನಿಸಿರುವ ಮೇಘವು ತಾನು ಯಾವ ಮೇಘದಿಂದ ಭಿನ್ನಿಸಿರುವುದೊ ಅದರಲ್ಲಿ ಅಥವಾ ಇತರವಾದ ಮೇಘದಲ್ಲಿಯಾದರೂ ಸೇರದೇ ಇರುವುದರಿಂದ ಅದರ ಸ್ವರೂಪವು ಕಾಣಲ್ಪಡದೇ ನಾಶಹೊಂದುವುದು. ಆದುದರಿಂದಲೇ ಧ್ಯಾನಯೋಗದಿಂದ ಜಾರಲ್ಪಟ್ಟ ಯೋಗಭ್ರಷ್ಟನಿಗೆ ದೃಷ್ಟಾಂತವಾಗಿ ಇಲ್ಲಿ ಮೇಘವು ಹೇಳಲ್ಪಟ್ಟಿತೆಂದರಿಯಬೇಕು. ॥೩೮॥

(ಗೀ॥ ವಿ॥) "ಇಲ್ಲಿ ಕಚ್ಚಿತ್" ಎಂಬ ಪದವು ಕಿಂ ಎಂಬ ಪದಸ್ಥಾನೀಯವಾಗಿ ಪ್ರಶ್ನಾರ್ಥಕವಾಗಿರುವುದು. ಉಭಯವಿಭ್ರಷ್ಟಃ-ಸ್ವರ್ಗದಿಂದಲೂ ಮೋಕ್ಷದಿಂದಲೂ ವಿಭ್ರಷ್ಟನಾದವನು, (ಅಥವಾ) ಐಹಿಕಾಮುಷ್ಮಿಕ ಪುರುಷಾರ್ಥಗಳ ದೆಶೆಯಿಂದ ಭ್ರಷ್ಟನಾದವನು, (ಅಥವಾ) ಸ್ವರ್ಗಾದಿಸಾಧನಗಳಾದ ಕಾಮ್ಯಕರ್ಮಾನುಷ್ಠಾನದಿಂದಲೂ, ಮೋಕ್ಷೋಪಾಯವಾದ ಧ್ಯಾನದಿಂದಲೂ ಭ್ರಷ್ಟನಾದವನು, ಇಂಥಾ ಯೋಗಿಯು ನಿರಾಶ್ರಯನಾಗಿ ಬ್ರಹ್ಮಪ್ರಾಪ್ತ್ಯುಪಾಯದಲ್ಲಿ ವಿಮೂಢನಾಗಿಯೂ, ವಾಯುವಿನಿಂದ ಛಿದ್ರವಾಗಿಭಿನ್ನಿಸಲ್ಪಟ್ಟ ಮೇಘದಂತೆ ನಾಶಹೊಂದುತ್ತಾನೆಯೋ ? (ನರಕಾದ್ಯನರ್ಥಗಳನ್ನು ಹೊಂದುತ್ತಾನೆಯೋ ? (ಅಥವಾ) ನಾಶಹೊಂದುವುದಿಲ್ಲವೇ ? ಇದಂ ಬೋಧಿಸಬೇಕು. ... ... ... ॥೩೮॥

ಮೂ॥ ಏತಂಮೇಸಂಶಯಂಕೃಷ್ಣಛೇತ್ತುಮರ್ಹಸ್ಯಶೇಷತಃ । ತ್ವದನ್ಯಸ್ಸಂಶಯಸ್ಯಾಸ್ಯ ಛೇತ್ತಾನಹ್ಯುಪಪದ್ಯತೇ॥ ... ... ॥೩೯॥

ಪ॥ ಏತಂ- ಮೇ - ಸಂಶಯಂ- ಕೃಷ್ಣ - ಛೇತ್ತುಂ- ಅರ್ಹಸಿ- ಅಶೇಷತಃ । ತ್ವದನ್ಯಃ- ಸಂಶಯಸ್ಯ- ಅಸ್ಯ - ಛೇತ್ತಾ- ನ- ಹಿ- ಉಪಪದ್ಯತೇ ॥ ॥೩೯॥

ಅ|| ಹೇಕೃಷ್ಣ - ಎಲೈ ಶ್ರೀಕೃಷ್ಣನೆ ? ಮೇ - ನನ್ನ, ಏತಂಸಂಶಯಂ- ಈ ಸಂಶಯವನ್ನು, ಅಶೇಷತಃ- ಸಂಪೂರ್ಣವಾಗಿ, ಛೇತ್ತುಂ- ನಿವಾರಣಮಾಡುವುದಕ್ಕೆ, ಅರ್ಹಸಿ- ಅರ್ಹನಾಗಿರುತ್ತೀ, ಅಸ್ಯಸಂಶಯಸ್ಯ- ಈ ಸಂಶಯಕ್ಕೆ, ತ್ವದನ್ಯಃ- ನಿನಗಿಂತಲೂ ಅನ್ಯನಾದ, ಛೇತ್ತಾ- ನಿವಾರಕನು, ನಹ್ಯುಪಪದ್ಯತೇ- ಸುತರಾಂ ಇಲ್ಲವಷ್ಟೆ. ||೩೯||

(ರಾ|| ಭಾ||) ಅರ್ಜುನನ ಪ್ರಶ್ನವು. ಅತ್ಯಂತಾಸಕ್ತಿಯಿಂದ ಯೋಗದಲ್ಲಿ ಪ್ರವರ್ತಿಸಿರುವ ಒಬ್ಬನು, ತಾನು ದೃಢವಾದ ಅಭ್ಯಾಸವನ್ನು ಮಾಡದೆ ಇರುವುದರಿಂದ ಯೋಗಸಿದ್ಧಿಯನ್ನು ಹೊಂದದೆ ಯೋಗವಿಭ್ರಷ್ಟನಾದರೆ ಅವನೆಂತಹ ಗತಿಯನ್ನು ಹೊಂದುವನು? ದೊಡ್ಡದಾದ ಒಂದು ಮೋಘದಿಂದ ತುಂಡಾಗಿ ಪ್ರತ್ಯೇಕಿಸಿರುವ ಒಂದು ಚಿಕ್ಕಮೋಘವು ಮತ್ತೊಂದು ದೊಡ್ಡದಾದ ಮೋಘವನ್ನು ಹೊಂದದೆ ಮಧ್ಯದಲ್ಲಿ ನಾಶವಾಗುವಂತೆ ಕರ್ಮಮಾರ್ಗದಿಂದಲೂ, ಬ್ರಹ್ಮಮಾರ್ಗದಿಂದಲೂ, ಭ್ರಷ್ಟನಾಗಿ ನಾಶಹೊಂದುತ್ತಾನೆಯೋ? (ಕರ್ಮವನ್ನು ಫಲಾಪೇಕ್ಷೆಯಿಂದ ಮಾಡದೆ ಇರುವುದರಿಂದ ಅದು ಸ್ವರ್ಗಾದಿ ಫಲಗಳನ್ನು ಸಾಧಿಸುವುದಿಲ್ಲವು. ಅದರ ಆಧಾರವಂಬಿಟ್ಟು, ತಾನು ಆರಂಭಿಸಿರುವ ಬ್ರಹ್ಮಮಾರ್ಗವಾದ ಯೋಗವು ಪೂರ್ಣವಾಗಲಿಲ್ಲವಾದುದರಿಂದ ಇವೆರಡರಲ್ಲಿಯೂ ಆಧಾರಶೂನ್ಯನಾಗಿರುವನು. ಆದುದರಿಂದ ಉಭಯವಿಭ್ರಷ್ಟನೆಂದು ಹೇಳಲ್ಪಡುವನು)(ಅಥವಾ)ಯಾವದಾದರೂ ಅವನಿಗೆ ಕ್ಷೇಮವುಮಾರ್ಗವುಂಟೆ? ಈಸಂಶಯವನ್ನು ಸವಿಸ್ತಾರವಾಗಿ ನಿವಾರಿಸಬೇಕು. ತಾನಾಗಿಯೇ ಪ್ರತ್ಯಕ್ಷವಾಗಿ ಸಕಲಕಾಲದಲ್ಲಿಸಮಸ್ತವನ್ನು ತಿಳಿಯುವಿಕೆಯೆಂಬ ಸ್ವತಸ್ಸರ್ವಜ್ಞತೆಯುಳ್ಳ ತಮ್ಮನ್ನು ವಿನಾಹುತ್ತ ಯಾರಿಂದಲೂ ಈ ಸಂಶಯವು ನಿವರ್ತಿಸಲ್ಪಡಲಾರದು||೩೭||೩೮||೩೯||

ಶ್ರೀ ಭಗವಾನುವಾಚ||

ಮೂ|| ಪಾರ್ಥನೈವೇಹನಾಮುತ್ರ ವಿನಾಶಸ್ತಸ್ಯವಿದ್ಯ
ತೇ| ನಹಿಕಲ್ಯಾಣಕೃತ್ಕಶ್ಚಿದ್ದುರ್ಗತಿಂ ತಾತಗಚ್ಛತಿ||೪೦||

ಪ|| ಶ್ರೀಭಗವಾನ್- ಉವಾಚ|| ಪಾರ್ಥ- ನ- ಏವ- ಇಹ- ನ- ಅಮುತ್ರ- ವಿನಾಶಃ- ತಸ್ಯ- ವಿದ್ಯತೇ | ನ- ಹಿ- ಕಲ್ಯಾಣಕೃತ್- ಕಶ್ಚಿತ್- ದುರ್ಗತಿಂ- ತಾತ- ಗಚ್ಛತಿ|

ಅ॥ ಶ್ರೀಭಗವಾನುವಾಚ- ಶ್ರೀಕೃಷ್ಣನು ಹೇಳಿದನು. ತಾತ- ಹೇ ಪಾರ್ಥ- ಎಲೈಪ್ರಿಯ ಮಗುವಾದ ಅರ್ಜುನನೆ ! ತಸ್ಯ - ಆಯೋಗಭ್ರಷ್ಟನಿಗೆ, ಇಹ- ಈ ಲೋಕದಲ್ಲಿ, ವಿನಾಶಃ- ನಾಶವು, (ಶಂ) ಪೂರ್ವ ಜನ್ಮಕ್ಕಿಂತಲೂ ಹೀನವಾದ ಜನ್ಮವು, (ಶ್ರೀ) ದೋಷವಾದರೂ ನರಕಪ್ರಾಪ್ತಿಯಾದರೂ, (ರಾ) ಸ್ವರ್ಗಾದ್ಯನುಭವವು ಬ್ರಹ್ಮಪ್ರಾಪ್ತಿಯೆಂಬಿವುಗಳಲ್ಲಿ ತಾನಪೇಕ್ಷಿಸಿರುವುದು ಪ್ರಾಪ್ತವಾಗದೆ ಹೋಗುವುದೆಂಬ ವಿನಾಶವು, (ಗೀ॥ ವಿ॥) ಈ ಲೋಕದಲ್ಲಿ ತಿರ್ಯಗ್ಜಂತು ಮೊದಲಾದವುಗಳಲ್ಲಿ ಹುಟ್ಟುವಿಕೆಯೆಂಬ ನಾಶವಾದರೂ, ಪರಲೋಕದಲ್ಲಿ ನರಕಪ್ರಾಪ್ತಿರೂಪವಾದ ನಾಶವಾದರೂ, ನೈವವಿದ್ಯತೇ- ಉಂಟಾಗುವುದೇ ಇಲ್ಲವು. ಅಮುತ್ರ- ಪರಲೋಕದಲ್ಲಿಯೂ, ನ - ಇಲ್ಲವು, ಕಶ್ಚಿತ್ ಕಲ್ಯಾಣಕೃತ್ - ಸತ್ಕಾರ್ಯವನ್ನು ಮಾಡುವ ಒಬ್ಬನು, (ಗೀ॥ ವಿ) ಆಸ್ತಿಕ್ಯದಿಂದ ಸ್ವಲ್ಪಕಾಲವಾದರೂ ಈಶ್ವರಧ್ಯಾನಾದಿಗಳಂ ಮಾಡಿದವನು ದುರ್ಗತಿಂ-ದುಷ್ಟವಾದಗತಿಯನ್ನು, ನಗಚ್ಛತಿ, ಹೊಂದುವುದಿಲ್ಲವಷ್ಟೆ॥೪೦॥

(ತಾ॥) ಶ್ರೀಕೃಷ್ಣನುತ್ತರವನ್ನು ಹೇಳುತ್ತಾನೆ. ಆಸಕ್ತಿಯಿಂದ ಯೋಗದಲ್ಲಿ ಪ್ರವರ್ತಿಸಿದವನು ಅದರಿಂದ ಜಾರಿದವನಾದರೆ ಅವನಿಗೆ ಇಹಪರಗಳಲ್ಲಿ ನಾಶವಿಲ್ಲವು. ಪ್ರಕೃತಿಗೆ ಸೇರಿದ ಸ್ವರ್ಗಾದಿಭೋಗಗಳಲ್ಲಿಯೂ ಪರಮಾತ್ಮಾನುಭವದಲ್ಲಿಯೂ ಅಪೇಕ್ಷಿತವಾದದ್ದನ್ನು ಹೊಂದದೇ ಅನಿಷ್ಟವನ್ನು ಹೊಂದುವುದಾದನಾಶ ವುಂಟಾಗುವುದಿಲ್ಲವೆಂಬರ್ಥವು. (ಈ ವಿನಾಶ ಶಬ್ದಕ್ಕೆ (ಶಂ॥ ಗೀ॥ ವಿ॥) ಇವರು ಅನುಗ್ರಹಿಸಿರುವ ಅರ್ಥವನ್ನು ಪ್ರತಿಪದ ಟೀಕೆಯಲ್ಲಿ ನೋಡಿ) ಅತ್ಯಂತ ಮಂಗಳವಾದ ಯೋಗವನ್ನನುಷ್ಠಾನ ಮಾಡುವಂತವನಿಗೆ ಯಾವಕಾಲದಲ್ಲಿಯೂ ಕೇಡು ಸಂಭವಿಸಲಾರದಷ್ಟೆ.॥ ॥೪೦॥

ಮೂ ॥ ಪ್ರಾಪ್ಯ ಪುಣ್ಯಕೃತಾಂಲೋಕಾ ನುಷಿತ್ವಾ
ಶಾಶ್ವತೀಸ್ಸಮಾಃ । ಶುಚೀನಾಂಶ್ರೀಮತಾಂಗೇಹೇಯೋ
ಗಭ್ರಷ್ಟೋಽಭಿಜಾಯತೇ॥ ... ... ॥೪೧॥

ಪ॥ ಪ್ರಾಪ್ಯ- ಪುಣ್ಯಕೃತಾಂ- ಲೋಕಾನ್- ಉಷಿತ್ವಾ- ಶಾಶ್ವತೀಃ- ಸಮಾಃ । ಶುಚೀನಾಂ- ಶ್ರೀಮತಾಂ- ಗೇಹೇ- ಯೋಗಭ್ರಷ್ಟಃ- ಅಭಿಜಾಯತೇ॥

ಅ॥ ಯೋಗಭ್ರಷ್ಟಃ- ಯೋಗಾಭ್ಯಾಸದಲ್ಲಿ ಪ್ರವೃತ್ತನಾದರೂ,ಸಂಪೂರ್ಣವಾಗಿ ಅದಂ ಮಾಡದೆ ಬಿಟ್ಟಿರುವಂತವನಾದ ಯೋಗಭ್ರಷ್ಟನು, ಪುಣ್ಯಕೃತಾಂ - ಪುಣ್ಯಶಾಲಿಗಳ, ಲೋಕಾನ್- ಲೋಕಗಳನ್ನು, ಪ್ರಾಪ್ಯ- ಹೊಂದಿ, ಶಾಶ್ವತೀಸ್ಸಮಾಃ -ಬಹುವರ್ಷಗಳವರೆಗೂ, ಉಷಿತ್ವಾ- ಸುಖವಾಗಿದ್ದುಕೊಂಡು, ಶುಚೀನಾಂ- ಪರಿಶುದ್ಧರಾದ,ಶ್ರೀಮತಾಂ- ಐಶ್ವರ್ಯಶಾಲಿಗಳ, ಗೇಹೇ- ಗೃಹದಲ್ಲಿ, ಅಭಿಜಾಯತೇ- ಹುಟ್ಟುವನು." ॥೪೧॥

(ರಾ|| ಭಾ||) ಯೋಗದಿಂದ ಜಾರಿಬೀಳುವಕಾಲದಲ್ಲಿ ಯಾವಭೋಗವನ್ನಪೇಕ್ಷಿಸಿಕೊಂಡು, ಆವನು ಯೋಗವಂ ಬಿಟ್ಟಿರುವನೊ, ಅಂಥಾ ಯೋಗಭ್ರಷ್ಟನಾದವನು ಶರೀರಾಂತ್ಯದಲ್ಲಿ ಮಹಾ ಸುಕೃತಿಗಳು ಹೊಂದುವ ಪುಣ್ಯಲೋಕಗಳಂಹೊಂದಿ ಅಂತಹ ಭೋಗಗಳನ್ನು ಯೋಗಪ್ರಭಾವದಿಂದ ಅಲ್ಲನುಭವಿಸಿದವನಾಗಿ, ಅಂಥಾ ಭೋಗದಲ್ಲಪೇಕ್ಷೆಯು ತೀರುವವರೆಗೂ ಬಹುಕಾಲಪರ್ಯಂತವಾಗಿ ಅಲ್ಲಿಯೇ ಇದ್ದುಕೊಂಡು ಅನಂತರದಲ್ಲಿ ಪರಿಶುದ್ಧರಾಗಿಯೂ, ಶ್ರೀಮಂತರಾಗಿಯೂ, ಯೋಗಾನುಷ್ಠಾತೃಗಳಾಗಿಯೂ, ಇರುವ ಮಹಾತ್ಮರಮನೆಯಲ್ಲಿ ಆ ಯೋಗ ಮಹಿಮೆ ಯಿಂದಲೇ ಬಂದು ಹುಟ್ಟುವನು.|| ... ||೪೧||

ಮೂ || ಅಥವಾ ಯೋಗಿನಾಮೇವ ಕುಲೇಭವತಿ ಧೀಮತಾಂ | ಏತದ್ಧಿದುರ್ಲಭತರಂ ಲೋಕೇಜನ್ಮ ಯದೀದೃಶಂ|| ... ... ... ||೪೨||

ಪ|| ಅಥವಾ- ಯೋಗಿನಾಂ- ಏವ- ಕುಲೆ- ಭವತಿ- ಧೀಮತಾಂ | ಏತತ್ - ಹಿ- ದುರ್ಲಭತರಂ- ಲೋಕೇ- ಜನ್ಮ- ಯತ್- ಈದೃಶಂ||

ಅ|| ಅಥವಾ- ಹಾಗಿಲ್ಲವಾದರೆ, ಧೀಮತಾಂ - ಜ್ಞಾನಿಗಳಾದ, ಯೋಗಿನಾಂ - ಯೋಗಾಭ್ಯಾಸಶೀಲರುಗಳ, ಕುಲಏವ -ಗೃಹದಲ್ಲಿಯೇ, (ಶಂ) ಯೋಗಿನಾಂಕುಲಏವ - ಯೋಗಿಗಳಾದ ದರಿದ್ರರ ಕುಲದಲ್ಲಿಯೇ, ಭವತಿ- ಜನಿಸುವನು, ಲೋಕೇ- ಈ ಲೋಕದಲ್ಲಿ, ಈದೃಶಂಜನ್ಮೇತಿಯತ್- ಇಂಥಾಜನ್ಮವೆಂಬುವುದು ಯಾವದೊ, ಏತದ್ಧಿ- ಇಂಥಾದ್ದು, ದುರ್ಲಭತರಂ- ಅತ್ಯಂತದುರ್ಲಭವಾದದ್ದು.|| ... ... ||೪೨||

(ರಾ||ಭಾ||) ಯೋಗಸಿದ್ಧಿ ಯುಂಟಾಗುವಕಾಲದಲ್ಲಿ ಇವನು ಯೋಗಭ್ರಷ್ಟನಾದರೆ ಅಂಥಾವನು ಯೋಗಾನುಷ್ಠಾನ ಪರರಾಗಿಯೂ, ಅನ್ಯರಿಗೆ ಯೋಗೋಪದೇಶವಂಮಾಡತಕ್ಕವರಾಗಿಯೂಇರುವಮಹಾತ್ಮರಕುಲದಲ್ಲಿ ಜನಿಸುವನು. ಈ ರೀತಿಯಾಗಿ ಯೋಗಾನುಷ್ಠಾನಶೀಲರಾಗಿಯೂ, ಅನ್ಯರಿಗೆ ಯೋಗೋಪದೇಶವನ್ನು ಮಾಡುವಂತವರಾಗಿಯೂ ಇರುವ ಮಹಾತ್ಮರ ಕುಲದಲ್ಲಿ ಹುಟ್ಟುವಿಕೆಯೆಂಬುವುದು ಲೋಕದಲ್ಲಿ ಸಾಧಾರಣವಾಗಿ ಸರ್ವರಿಗೂ ಲಭಿಸುವುದಿಲ್ಲವು. ಇದು ಯೋಗಮಹಿಮೆ ಯಿಂದಲೆವುಂಟಾಗತಕ್ಕದ್ದೆಂದರಿಯಬೇಕು.|| ||೪೨||

(ಶಂ|| ಆ|| ) ಮನೋಹರಾಣಾಂ ಭೋಜ್ಯಾನಾಂ ಯುವತೀನಾಂಚ ವಾಸಸಾಂ । ವಿತ್ತಸ್ಯಾಪಿಚಸಾನ್ನಿಧ್ಯಾಚ್ಚಲೇಚ್ಚಿತ್ತಂಸತಾಮಪಿ ॥ ತತ್ಸಾನ್ನಿಧ್ಯಂ ತತಸ್ತ್ಯಕ್ತ್ವಾಮುಮುಕ್ಷು ರ್ದೂರತೋವಸೇತ್ ॥ ಅರ್ಥವು. ಮನೋಹರಗಳಾದ ಭೋಜ್ಯ ಪದಾರ್ಥಗಳು, ಸುಂದರಿಗಳಾದ ಸ್ತ್ರೀಜನರು, ವಸ್ತ್ರಗಳು, ಧನಗಳು, ಎಂಬಿವುಗಳ ಸಾನ್ನಿಧ್ಯವುಂಟಾದರೆ ವಿಷಯವಾಸನ್ನೆಯಿಲ್ಲದ ಮಹಾತ್ಮರ ಮನವೂ ಚಲಿಸಿ ಹೋಗುವುದು. ಆದುದರಿಂದ ಮುಮುಕ್ಷುವಾದವನು ವಿಷಯಗಳ ಸಾನ್ನಿಧ್ಯವಂ ಹೊಂದದೆ ವಿಷಯಗಳಂ ಕಂಡರೆ ಸರ್ಪಾದಿಗಳಂ ಕಂಡಂತೆ ದೂರದಲ್ಲಿ ಭಯಪಟ್ಟಿರಬೇಕು. ಎಂಬ ಅರ್ಥವುಳ್ಳ ಪ್ರಮಾಣವು ವಿಷಯ ಭೋಗಸಂಬಂಧವಂ ಬಿಡಬೇಕೆಂದು ಹೇಳುವುದು. ಇದಂ ಬಿಡದೆ ಯಾವ ಭೋಗದಲ್ಲಾದರೂ ಅಪೇಕ್ಷೆಯುಂಟಾದರೆ ಆ ಅಪೇಕ್ಷೆಯು ಯೋಗವಿರೋಧಿಯಾಗಿ ಇವನನ್ನು ಯೋಗವಿಭ್ರಷ್ಟನ್ನನಾಗ ಮಾಡುವುದು॥ ... ... ... ||೪೨||

ಮೂ ॥ ತತ್ರ ತಂ ಬುದ್ಧಿಸಂಯೋಗಂ ಲಭತೇ ಪೌರ್ವ
ದೈಹಿಕಂ । ಯತತೇ ಚ ತತೋ ಭೂಯಸ್ಸಂಸಿದ್ಧೌ ಕು
ರುನಂದನ॥ ... ... ||೪೩||

ಪ|| ತತ್ರ- ತಂ- ಬುದ್ಧಿಸಂಯೋಗಂ- ಲಭತೇ- ಪೌರ್ವದೈಹಿಕಂ| ಯತತೇ-ಚ-ತತಃ- ಭೂಯಃ- ಸಂಸಿದ್ಧೌ- ಕುರುನಂದನ|

ಅ|| ಹೇಕುರುನಂದನ- ಎಲೈ ಅರ್ಜುನನೆ, ತತ್ರ- ಆ ಯೋಗಿಕುಲದಲ್ಲಿ, (ರಾ) ಜನ್ಮದಲ್ಲಿ, ಪೌರ್ವದೇಹಿಕಂ- ಮುಂದಿನದೇಹದಲ್ಲಿ ಹುಟ್ಟಿರುವ, ತಂ- ಆ ಆತ್ಮ ವಿಷಯವಾದ, ಬುದ್ಧಿಸಂಯೋಗಂ- ಬುದ್ಧಿಸಂಬಂಧವನ್ನು, ಲಭತೆ- ಹೊಂದುತ್ತಾನೆ. ಭೂಯಃ-ಪುನಃ-(ಶಂ||ಗೀ||ವಿ) ಅಧಿಕವಾಗಿ, ಸಂಸಿದ್ಧೌ- ಬ್ರಹ್ಮಸಿದ್ಧಿವಿಷಯದಲ್ಲಿ, ಯತತೇಚ- ಪ್ರಯತ್ನವನ್ನು ಮಾಡುತ್ತಾನೆ.|| ... .. ... ||೪೩||

(ಶಂ||ಭಾ||) ಎಲೈ ಅರ್ಜುನನೆ! ಅಂಥಾ ದರಿದ್ರರಾದ ಯೋಗಿಗಳ ಕುಲದಲ್ಲಿ ಹುಟ್ಟಿ ಪೂರ್ವಜನ್ಮದಲ್ಲಿ ತನಗುಂಟಾಗಿ ಈ ಜನ್ಮದಲ್ಲಿ ತನ್ನನ್ನನುಸರಿಸಿ ಬರುವ ಸಂಸ್ಕಾರ ವಿಶೇಷದಿಂ ದುಂಟಾದದ್ದಾಗಿಯೂ, ಆತ್ಮತತ್ವ ವಿಷಯವಾದದ್ದಾಗಿಯೂ ಇರುವ ನಿಶ್ಚಯಾತ್ಮಕವಾದ ಬುದ್ಧಿಯನ್ನು ಹೊಂದಿದರಿಂದ ಮೋಕ್ಷ ಸಾಧನವಾದ ಬ್ರಹ್ಮಜ್ಞಾ

ನನಂ ಹುಟ್ಟಿಸುವ ಧ್ಯಾನಯೋಗಸಿದ್ಧಿಯಂಹೊಂದುವುದಕ್ಕೆ ಅತ್ಯಂತವಾಗಿ ಪ್ರಯತ್ನವಂ ಮಾಡುತ್ತಾನೆ. ಎಂದರೆ ಪುನಶ್ಚ ಯೋಗಾಭ್ಯಾಸವಂಮಾಡಿ ಧ್ಯಾನಸಿದ್ಧಿಯಂಹೊಂದುತ್ತಾನೆಂದರ್ಥವು. ॥೪೩॥

ಮೂ ॥ ಪೂರ್ವಾಭ್ಯಾಸೇನ ತೇನೈವ ಹ್ರಿಯತೇ ಹ್ಯವ
ಶೋಽಪಿಸಃ । ಜಿಜ್ಞಾಸು ರಪಿ ಯೋಗಸ್ಯ ಶಬ್ದಬ್ರಹ್ಮಾತಿ
ವರ್ತತೇ॥ ... ... ॥೪೪॥

ಪ॥ ಪೂರ್ವಾಭ್ಯಾಸೇನ- ತೇನ- ಏವ- ಹ್ರಿಯತೇ- ಹಿ - ಅವಶಃ - ಅಪಿ- ಸಃ। ಜಿಜ್ಞಾಸುಃ- ಅಪಿ- ಯೋಗಸ್ಯ- ಶಬ್ದಬ್ರಹ್ಮ- ಅತಿವರ್ತತೇ॥

ಅ॥ ತೇನೈವ ಪೂರ್ವಾಭ್ಯಾಸೇನ - ಆ ಪೂರ್ವಜನ್ಮಾಭ್ಯಾಸದಿಂದಲೆ, ಸಃ- ಅವನು, ಅವಶೋಽಪಿ- ಅಸ್ವಾಧೀನನಾದರೂ, ಹ್ರಿಯತೇ- ವಿಷಯಗಳದೆಸೆಯಿಂದ ಯೋಗಕ್ಕೆ ಎಳೆಯಲ್ಪಡುತ್ತಾನೆ. ॥ ೪೩ ॥ ॥ ಯೋಗಸ್ಯಜಿಜ್ಞಾಸುರಪಿ- ಯೋಗಸ್ವರೂಪವಂ ತಿಳಿಯಲಪೇಕ್ಷಿಸಿಯೋಗಾಭ್ಯಾಸವಂ ಮಾಡಬೇಕೆಂಬಇಚ್ಛೆಯುಳ್ಳವನಾದರೂ ಕೂಡ,ಶಬ್ದಬ್ರಹ್ಮ-ವೇದೋಕ್ತಕರ್ಮಫಲವನ್ನು,(ರಾ)ಪ್ರಕೃತಿಯನ್ನು,ಅತಿವರ್ತತೇ-ಅತಿಕ್ರಮಿಸುತ್ತಾನೆ.॥೪೪॥

(ಶಂ॥ಭಾ॥)ಪೂರ್ವಜನ್ಮಬುದ್ಧಿಯ ಸಂಯೋಗವೆಂಬುವುದುಹೇಗೆ? ಎಂದರೆ ಅದಂವಿವರಿಸುವೆವು. ಎಲೈ ಅರ್ಜುನನೆ! ಪೂರ್ವಜನ್ಮದಲ್ಲಿಯೋಗಭ್ರಷ್ಟನಾದವನು ಈ ಜನ್ಮದಲ್ಲಿ ವಿಷಯಾಸಕ್ತನಾಗಿದ್ದರೂ, ಪೂರ್ವಜನ್ಮದಲ್ಲಿ ತಾನು ಮಾಡಿರುವ ಯೋಗಾಭ್ಯಾಸ ವಿಶೇಷದಿಂದ ಪುನಶ್ಚ ಸಂಸಿದ್ಧಿಯನ್ನುಂಟುಮಾಡುವಯೋಗಾಭ್ಯಾಸದಿಂದ ಸೆಳೆಯಲ್ಪಡುವನು;ಎಂದರೆ ಅಧರ್ಮಗಳೇ ಮೊದಲಾದ ಕರ್ಮಗಳು ಪೂರ್ವಜನ್ಮಕೃತವಾದಯೋಗಾಭ್ಯಾಸದ ದಶೆಯಿಂದುಂಟಾಗುವ ಸಂಸ್ಕಾರಕ್ಕಿಂತಲೂ ಬಲವತ್ತರವಾಗದೆ ಹೋದರೆ ಅಂಥಾ ಬಲವತ್ತರವಾದ ಯೋಗಾಭ್ಯಾಸ ಸಂಸ್ಕಾರದಿಂದ ಪುನಶ್ಚ ಯೋಗಾಭ್ಯಾಸವಂಮಾಡಬೇಕೆಂಬ ಬುದ್ಧಿಯುಂಟಾಗುವುದು. ಅಧರ್ಮವೇ ಬಲವತ್ತರವಾಗಿದ್ದರೆಅಂಥಾ ಅಧರ್ಮಗಳಿಂದ ಯೋಗಾಭ್ಯಾಸ ಸಂಸ್ಕಾರವುಂಟಾಗುವುದಿಲ್ಲವು; ಅಂಥಾಅಧರ್ಮವು ಸತ್ಸಂಗಾದಿಗಳಿಂದ ಕ್ಷೀಣವಾದಮೇಲೆ ಯೋಗದಿಂದುಂಟಾಗಿರುವ ಸಂಸ್ಕಾರವು ಇವನಿಗೆ ಪುನಶ್ಚ ಧ್ಯಾನಾಭ್ಯಾಸವನ್ನುಂಟುಮಾಡುವ ಬುದ್ಧಿಯನ್ನು ಹುಟ್ಟಿಸುವುದು. ಅಧರ್ಮದಲ್ಲಿ ಚಿರಕಾಲದಿಂದ

ಪ್ರವೃತ್ತನಾಗಿದ್ದರೂ ಇವನು ಕೆಡಲಾರನು. ಪೂರ್ವಜನ್ಮಸಂಸ್ಕಾರವು ಎಷ್ಟರ ಮಟ್ಟಿಗೂ ವ್ಯರ್ಥವಾಗುವುದಿಲ್ಲ ವಷ್ಟೆ; ಆ ಪ್ರಕಾರವಾಗಿ ಯೋಗಸ್ವರೂಪವನ್ನು ತಿಳಿಯಲಪೇಕ್ಷೆಯಿಂದ ಯೋಗಾಭ್ಯಾಸವಂ ಮಾಡುವ ಜಿಜ್ಞಾಸು ಎಂಬ ಸನ್ಯಾಸಿಯು ಯೋಗಭ್ರಷ್ಟನಾದರೂ ವೇದೋಕ್ತ ಕರ್ಮಾನುಷ್ಠಾನದಿಂದುಂಟಾಗುವಫಲಕ್ಕಿಂತಲೂಅಧಿಕ ವಾದ ಫಲವನ್ನು ಹೊಂದುವನು. ಹೀಗಿರುವ ಸಂದರ್ಭದಲ್ಲಿ ಯೋಗಸ್ವರೂಪವನ್ನುಸಂಪೂರ್ಣವಾಗಿ ತಿಳಿದುಕೊಂಡು ಯೋಗಾಭ್ಯಾಸವನ್ನು ಮಾಡಿದರೆ ಕರ್ಮಾನುಷ್ಠಾನದಿಂದುಂಟಾಗುವಸ್ವರ್ಗಾದಿಫಲಕ್ಕಿಂತಲೂ ಅಧಿಕವಾದ ಫಲಪ್ರಾಪ್ತಿಯಾಗುವುದೆಂಬ ವಿಷಯದಲ್ಲಿ ಹೇಳತಕ್ಕದ್ದೇನಿರುವುದೆಂದು ಕೈಮುತಿಕನ್ಯಾಯವನ್ನಿಲ್ಲಿ ತಿಳಿಯಬೇಕು. ॥೪೪॥

(ರಾ॥ಭಾ॥) ಇವನು ಆ ಪುನರ್ಜನ್ಮದಲ್ಲಿಯೂ ಅಭ್ಯಸ್ತವಾದಯೋಗಬುದ್ಧಿಯನ್ನೇ ಹೊಂದಿ ನಿದ್ರೆಯನ್ನು ಬಿಟ್ಟು ಎದ್ದಿರುವವನಂತೆಪುನಶ್ಚ ಆ ಯೋಗಸಿದ್ಧಿಯನ್ನುದ್ದೇಶಿಸಿಯೇ ಹೇಗಾದರೆ ವಿಘ್ನಗಳುಪ್ರಾಪ್ತಗಳಾಗಲಾರವೋ ಆ ರೀತಿಯಾಗಿ ಯತ್ನವಂ ಮಾಡುತ್ತಾನೆ. ಇವನು ಪೂರ್ವಜನ್ಮದಲ್ಲಿ ಮಾಡಿರುವ ಅಭ್ಯಾಸವು ಇವನನ್ನು ಪುನಶ್ಚ ಆ ಯೋಗ ಮಾರ್ಗದಲ್ಲಿಯೇ ಎಳೆಯುವುದು. ಈ ಪ್ರಕಾರವಾದ ಯೋಗದ ಮಹಿಮೆಯು ಎಲ್ಲಿಯೂ ಪ್ರಸಿದ್ಧವಾಗಿಯೇ ಇರುವುದಲ್ಲವೆ?॥೪೩.೫॥

(ರಾ॥ಭಾ॥) ಯೋಗವನ್ನುಮಾಡಲುಪಕ್ರಮಿಸದೆ ಯೋಗಮಾರ್ಗವನ್ನು ತಿಳಿಯ ಲಪೇಕ್ಷಿಸಿದವನು ಅದರಿಂದ ಮನಸ್ಸನ್ನು ಚಂಚಲಪಡಿಸಿದರೆ ಅವನು ಆ ಪ್ರಕಾರವೇ ಪುನಶ್ಚ ಆ ಯೋಗ ವಿಚಾರವನ್ನೇಮಾಡಲುಪಕ್ರಮಿಸಿಕರ್ಮಯೋಗವೆ ಮೊದಲಾದಯೋಗವನ್ನನುಷ್ಠಿಸುತಾ ಅದರಿಂದ ಶಬ್ದ ಬ್ರಹ್ಮವನ್ನು,(ಶಬ್ದ- ದೇವ, ಮನುಷ್ಯ, ಭೂಮಿ, ಅಂತರಿಕ್ಷ, ಸ್ವರ್ಗ, ಇದೇ ಮೊದಲಾದ ಶಬ್ದಗಳಿಂದ ಹೇಳುವುದಕ್ಕೆ ಯೋಗ್ಯವಾದ, ಬ್ರಹ್ಮ- ಪ್ರಕೃತಿಯನ್ನು, ) ಅತಿಕ್ರಮಿಸುತ್ತಾನೆ. ಎಂದರೆ ಪ್ರಕೃತಿಯಿಂದ ಬಿಡಲ್ಪಟ್ಟಿರುವ ದೇವನು, ಮನುಷ್ಯನು, ಎಂಬಿದೇ ಮೊದಲಾದ ಶಬ್ದಗಳಿಂದ ಹೇಳಲ್ಪಡ ಲನರ್ಹವಾದಜ್ಞಾನಾನಂದ ಸ್ವರೂಪವಾಗಿರುವ ಆತ್ಮವನ್ನು ಹೊಂದುತ್ತಾನೆಂದರ್ಥವು. ... ... ... ॥೪೪॥

(ಮ॥ ಭಾ॥) ಶಬ್ದಬ್ರಹ್ಮ - ಪರಮಾತ್ಮನನ್ನು, ಅತಿವರ್ತತೇ- ಕ್ರಮಕ್ರಮವಾಗಿ ಹೊಂದುವನು, ಕ್ರಮಕ್ರಮವಾಗಿ ಹೊಂದುವುದು ಹೇಗೆ? ಎಂದರೆ ಅದು ಮುಂದಿನ ಶ್ಲೋಕದಲ್ಲಿ ಹೇಳಲ್ಪಡುವುದು.

(ಗೀ॥ ವಿ॥) ಶಬ್ದಬ್ರಹ್ಮ - ವೇದದಲ್ಲಿರುವ ವಿಧಿ ನಿಷೇಧಗಳನ್ನು, ಅತಿವರ್ತತೇ- ಅತಿಕ್ರಮಿಸುವನು, ಎಂದರೇ ಮುಕ್ತನಾಗುತ್ತಾನೆಂದು ತಾತ್ಪರ್ಯವು. ಯೋಗವನ್ನು ತಿಳಿಯಲಪೇಕ್ಷೆಯುಳ್ಳವನೇ ವಿಧಿನಿಷೇಧವನ್ನತಿಕ್ರಮಿಸಿ ಮುಕ್ತನಾಗುವ ಸಂದರ್ಭದಲ್ಲಿ ಯೋಗವನ್ನು ಮಾಡುವಂತವನು ಮುಕ್ತನಾಗುವ ವಿಷಯದಲ್ಲಿ ಹೇಳಬೇಕಾದದ್ದೇನಿರುವುದೆಂದು ಇಲ್ಲಿಯೂ ಕೈಮುತಿಕನ್ಯಾಯವನ್ನರಿಯಬೇಕು. ॥೪೪॥

ಮೂ॥ ಪ್ರಯತ್ನಾದ್ಯತಮಾನಸ್ತು ಯೋಗೀಸಂಶು
ದ್ಧಕಿಲ್ಬಿಷಃ । ಅನೇಕಜನ್ಮಸಂಸಿದ್ಧಸ್ತತೋಯಾತಿಪ
ರಾಂಗತಿಂ॥ ... ... ॥೪೫॥

ಪ॥ ಪ್ರಯತ್ನಾತ್ - ಯತಮಾನಃ- ತು- ಯೋಗೀ- ಸಂಶುದ್ಧಕಿಲ್ಬಿಷಃ । ಅನೇಕಜನ್ಮಸಂಸಿದ್ಧಃ- ತತಃ-ಯಾತಿ- ಪರಾಂ-ಗತಿಂ.

ಅ॥ ಪ್ರಯತ್ನಾತ್-ಪ್ರಯತ್ನದ ದೆಸೆಯಿಂದ, ಯತಮಾನಸ್ತು- ಯೋಗಾಭ್ಯಾಸಯತ್ನವನ್ನು ಮಾಡುವ, ಯೋಗೀ - ಯೋಗಿಯು, ಅನೇಕ ಜನ್ಮಸಂಸಿದ್ಧಃ-ಅನೇಕ ಜನ್ಮಗಳಿಂದ ಪಾಪಗಳನ್ನು ಹೋಗಲಾಡಿಸಿದವನಾಗಿ, ಪರಾಂಗತಿಂಯಾತಿ - ಉತ್ತಮವಾದ ಗತಿಯನ್ನು (ಮೋಕ್ಷವನ್ನು,) ಹೊಂದುತ್ತಾನೆ. ... ... ॥೪೫॥

(ರಾ॥ ಭಾ॥) ಯಾವ ಕಾರಣದಿಂದ ಯೋಗ ಪ್ರಭಾವವೀರೀತಿಯಾಗಿರುವುದೋ ಆ ಕಾರಣದಿಂದ ಅನೇಕಜನ್ಮಗಳಲ್ಲಿ ಸಂಪಾದಿಸಲ್ಪಟ್ಟ ಪುಣ್ಯಸಂಚಯಗಳಿಂದ ಪಾಪಗಳನ್ನು ತೊಲಗಿಸಿ ಯೋಗವನ್ನು ಮಾಡಲು ಪ್ರಕ್ರಮಿಸಿದವನು ಆ ಯೋಗದಿಂದ ಚಲಿಸಲ್ಪಟ್ಟವನಾದರೋ ಪುನಃ ಸದ್ಗತಿಯನ್ನೇ ಹೊಂದುವನು. ... ॥೪೫॥

(ಮ॥ಗೀ॥ವಿ) ಯೋಗವಂತಿಳಿಯುವೆನೆಂಬ ಇಚ್ಛಾಮಾತ್ರದಿಂದಲೇ ಮೋಕ್ಷವಾಗುವ ಪಕ್ಷದಲ್ಲಿ ಯೋಗಾನುಷ್ಠಾನವು ವ್ಯರ್ಥವಲ್ಲವೇ? ಎಂಬ ಶಂಕಾ ಸಮಾಧಾನಾರ್ಥವಾಗಿ ಈ ಶ್ಲೋಕವು ಪ್ರವೃತ್ತವಾಯಿತು. (ಯೋಗ- ಯೋಗವನ್ನು, ಜಿಜ್ಞಾಸುಃ- ತಿಳಿಯಲಪೇಕ್ಷೆಯುಳ್ಳವನು,) ಪ್ರಯತ್ನಾದ್ಯತಮಾನಃ - ಪ್ರತಿದಿನದಲ್ಲಿಯೂ ಅಧಿಕವಾದ ಪ್ರಯತ್ನವನ್ನು

ಮಾಡುವಂತವನಾಗಿಯೂ, ಯೋಗಸಂಶುದ್ಧಕಿಲ್ಬಿಷಃ-ಆ ಯೋಗದಿಂದ ಲೇಹೋಗಿರುವ ಪಾಪಗಳುಳ್ಳವನಾಗಿಯೂ, ಅನೇಕಜನ್ಮಸಂಸಿದ್ಧಸ್ಸನ್-ಅನೇಕ ಜನ್ಮಗಳಿಂದ ಅಪರೋಕ್ಷಜ್ಞಾನವುಳ್ಳವನಾಗಿಯೂ, ತತಃ-ಅನಂತರವಲ್ಲಿ, ಪರಾಂಗತಿಂಯಾತಿ-ಉತ್ತಮವಾದಗತಿಯನ್ನು ಹೊಂದುತ್ತಾನೆ. ಯೋಗವನ್ನು ತಿಳಿಯುವೆನೆಂಬ ಇಚ್ಛೆಗೆ ಪ್ರಯತ್ನಯೋಗಾನುಷ್ಠಾನ ದ್ವಾರಾ ಮೋಕ್ಷಸಾಧನತ್ವವಿರುವುದರಿಂದ ಯೋಗಾನುಷ್ಠಾನವು ಸಾರ್ಥಕವೆಂದಭಿಪ್ರಾಯವು. ಇದಕ್ಕೆ “ಅತೀವಶ್ರದ್ಧಯಾಯುಕ್ತೋ ಜ್ಞಾನವಿರ್ನಿಷ್ಣುತತ್ಪರಃ । ಜ್ಞಾತ್ವಾಧ್ಯಾತ್ವಾತಥಾದೃಷ್ಟ್ವಾ ಜನ್ಮಭಿರ್ಬಹುಭಿಃಪುರಾಣ ॥ ವಿಶೇನ್ನಾರಾಯಣಂದೇವಂ ನಾನ್ಯಥಾತು ಕಥಂಚನ” ಎಂಬ ನಾರದೀಯ ವಚನವು ಆಧಾರವಾಗಿರುವುದು. (ಹಿಂದಿನ ಶ್ಲೋಕದಲ್ಲಿ ಹೇಳಲ್ಪಟ್ಟಿರುವ ಜಿಜ್ಞಾಸು ವಿಷಯವಾಗಿ ಈ ಶ್ಲೋಕವು ಪ್ರವೃತ್ತವಾಗಿರುವುದು. ... ... ... ॥೪೫॥

ಮೂ॥ ತಪಸ್ವಿಭ್ಯೋಽಧಿಕೋಯೋಗೀಜ್ಞಾನಿಭ್ಯೋಽಪಿ
ಮತೋಽಧಿಕಃ । ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾ
ದ್ಯೋಗೀಭವಾರ್ಜುನ॥ ... ... ॥೪೬॥

ಪ॥ ತಪಸ್ವಿಭ್ಯಃ- ಅಧಿಕಃ- ಯೋಗೀ- ಜ್ಞಾನಿಭ್ಯಃ- ಅಪಿ- ಮತಃ - ಅಧಿಕಃ। ಕರ್ಮಿಭ್ಯಃ- ಚ- ಅಧಿಕಃ- ಯೋಗೀ- ತಸ್ಮಾತ್- ಯೋಗೀ- ಭವ- ಅರ್ಜುನ. ॥೪೬॥

ಅ॥ ತಪಸ್ವಿಭ್ಯಃ - ತಪಸ್ವಿಗಳಿಗಿಂತಲೂ, (ಶ್ರೀ॥ ಗೀ॥ ವಿ॥) ಕೃಛ್ರ ಚಾಂದ್ರಾಯಣಾದಿ ವ್ರತನಿಷ್ಠರಾದ ತಪಸ್ವಿಗಳಿಗಿಂತಲೂ, ಯೋಗೀಅಧಿಕಃ- ಯೋಗಿಯಾದವನು ಶ್ರೇಷ್ಠನು, ಜ್ಞಾನಿಭ್ಯೋಽಪಿ- ಜ್ಞಾನಿಗಳಿಗಿಂತಲೂ, ಅಧಿಕೋಮತಃ-ಅಧಿಕನೆಂಬದಾಗಿ ನನ್ನಿಂದರಿಯಲ್ಪಡುವನು. ಯೋಗೀ-ಯೋಗಿಯು, (ಧ್ಯಾನಯೋಗನಿಷ್ಠನು) ಕರ್ಮಿಭ್ಯಶ್ಚ- ಕರ್ಮಯೋಗಗಳಿಗಿಂತಲೂ, ಅಧಿಕಃ -ಶ್ರೇಷ್ಠನಾಗಿರುವನು, ತಸ್ಮಾತ್ - ಆದುದರಿಂದ, ಅರ್ಜುನ - ಎಲೈ ಅರ್ಜುನನೇ, ಯೋಗೀಭವ-(ನೀನು) ಯೋಗಿಯಾಗು. ... ... ॥೪೬॥

(ಶಂ॥ ಭಾ॥) ಎಲೈ ಅರ್ಜುನನೆ! ಯೋಗಾಭ್ಯಾಸವನ್ನು ಮಾಡುತ್ತಲಿರುವ ಸನ್ಯಾಸಿಯು ಕೃಚ್ಛ್ರ ಚಾಂದ್ರಾಯಣಾದಿ ತಪೋನಿಷ್ಠರಿಗಿಂತಲೂ, ಶಾಸ್ತ್ರಾರ್ಥ ಪಾಂಡಿತ್ಯವುಳ್ಳವರಿಗಿಂತಲೂ ಅಗ್ನಿಹೋತ್ರಾದಿ ಕರ್ಮಗಳನ್ನಾಚರಿಸುವವರಿಗಿಂತಲೂ, ಶ್ರೇಷ್ಠನೆಂದು ನನ್ನ ಅಭಿಪ್ರಾಯವು. ಆದುದರಿಂದ ನೀನುಯೋಗಿಯಾಗೆಂದು ತಾತ್ಪರ್ಯವು. ॥೪೬॥

(ರಾ॥ಭಾ॥)ಸರ್ವೋತ್ತಮವಾದಪುರುಷಾರ್ಥವನ್ನಪೇಕ್ಷಿಸಿದವನಾದುದರಿಂದ ಯೋಗಿಯಾದವನೆಲ್ಲರಿಗಿಂತಲೂ ಶ್ರೇಷ್ಠನೆಂದುಶ್ರೀಕೃಷ್ಣನು ಹೇಳುತ್ತಾನೆ. ತಪಸ್ಸುಗಳಿಂದ ಯಾವಪುರುಷಾರ್ಥವು ಹೊಂದಲ್ಪಡುವುದೋ ಆತ್ಮಜ್ಞಾನವ್ಯತಿರಿಕ್ತಗಳಾದ ಜ್ಞಾನಗಳಿಂದಯಾವದುಹೊಂದಲ್ಪಡುವುದೋ, ಅಶ್ವಮೇಧವೇ ಮೊದಲಾದ ಕರ್ಮಗಳಿಂದ ಯಾವುದು ಹೊಂದಲ್ಪಡುವುದೋ, ಅಂಥಾ ಸಮಸ್ತ ಪುರುಷಾರ್ಥಗಳಿಗಿಂತಲೂ ಶ್ರೇಷ್ಠವಾದ ಪುರುಷಾರ್ಥವನ್ನು ಯೋಗವು ಸಾಧಿಸುವುದರಿಂದ ಈ ಯೋಗಿಯು ಅವರೆಲ್ಲರಿಗಿಂತಲೂ ಅಧಿಕನಾಗಿರುವನು. ಆದುದರಿಂದ ಎಲೈ ಅರ್ಜುನನೇ! ನೀನು ಯೋಗಿಯಾಗುವ ಮಾರ್ಗವನ್ನು ನೋಡು ॥೪೬॥

ಮೂ॥ ಯೋಗಿನಾಮಪಿ ಸರ್ವೇಷಾಂ ಮದ್ಗತೇನಾನ್ತ
ರಾತ್ಮನಾ । ಶ್ರದ್ಧಾವಾನ್ಭಜತೇ ಯೋ ಮಾಂ ಸ ಮೇ ಯು
ಕ್ತತಮೋ ಮತಃ॥ ... ... ॥೪೭॥

ಇತಿ ಶ್ರೀ ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನ ಸಂವಾದೇ ಆತ್ಮಸಂ
ಯಮಯೋಗೋನಾಮ ಷಷ್ಠೋಽಧ್ಯಾಯಃ.

ಪ॥ ಯೋಗಿನಾಂ- ಅಪಿ- ಸರ್ವೇಷಾಂ-ಮದ್ಗತೇನ- ಅಂತರಾತ್ಮನಾ । ಶ್ರದ್ಧಾವಾನ್-ಭಜತೇ- ಯಃ- ಮಾಂ-ಸಃ- ಮೇ-ಯುಕ್ತತಮಃ- ಮತಃ- ... ॥೪೭॥

ಅ॥ ಸರ್ವೇಷಾಂ ಯೋಗಿನಾಂಮಧ್ಯೇ - ಸಕಲವಿಧರಾದ ಯೋಗಿಗಳ ಮಧ್ಯದಲ್ಲಿ, ಯಃ- ಯಾವನು, ಮದ್ಗತೇನಅಂತರಾತ್ಮನಾ - ನನ್ನಲ್ಲಿಡಲ್ಪಟ್ಟ ಮನಸ್ಸಿನಿಂದ, ಶ್ರದ್ಧಾವಾನ್- ಶ್ರದ್ಧೆಯೊಡನೆ ಕೂಡಿದವನಾಗಿ, ಮಾಂ- ನನ್ನನ್ನು, ಭಜತೇ- ಭಜನೆಮಾಡುತ್ತಾನೋ, ಸಃ- ಅವನು, ಯುಕ್ತತಮಃಇತಿ-ಅತ್ಯಂತ ಶ್ರೇಷ್ಠನೆಂಬದಾಗಿ, ಮೇ-ನನಗೆ, ಮತಃ - ಅಭಿಮತನಾಗಿರುವನು. ... ... ... ॥೪೭॥

(ಶಂ॥ಭಾ॥)ರುದ್ರಾದಿತ್ಯಾದಿದೇವತೆಗಳನ್ನುದ್ದೇಶಿಸಿ ಧ್ಯಾನವನ್ನುಮಾಡುವ ಯೋಗಿಗಳಿಗಿಂತಲೂ ಯೋಗಾಭ್ಯಾಸಾರಂಭದಮೊದಲು ವಾಸುದೇವನಾದನನ್ನನ್ನು ಸಮಾಹಿತವಾದ(ವಿಷಯಗಳಿಂದನಿವರ್ತಿಸಲ್ಪಟ್ಟ) ಮನಸ್ಸಿನಿಂದ ಭಕ್ತಿಶ್ರದ್ಧಾದಿಗಳೊಡನೆ ಧ್ಯಾನಮಾಡುವ ಯೋಗಿಯು ಸರ್ವೋತ್ತಮನೆಂದು ನನ್ನ ಅಭಿಪ್ರಾಯವು ॥೪೭॥

(ಆ॥ಗಿ॥) ಯಾವನಾದರೆ ಭಗವಂತನನ್ನು ಸಗುಣನೆಂಬ ಆಕಾರದಿಂದಲಾದರೂ ನಿರ್ಗುಣನೆಂಬ ಆಕಾರದಿಂದಲಾದರೂ ಸಮಾಹಿತವಾದ ಮನಸ್ಸಿನಿಂದ ಶ್ರದ್ಧಾಯುಕ್ತನಾಗಿ ಸರ್ವಕಾಲದಲ್ಲಿಯೂ ಧ್ಯಾನಿಸುತ್ತಾನೊ ಅಂತವನು ಮನಸ್ಸನ್ನು ವಶಪಡಿಸಿ ಜಿತೇಂದ್ರಿಯರಾದ ಸಮಸ್ತ ಯೋಗಿಗಳಿಗಿಂತಲೂ ಶ್ರೇಷ್ಠನೆಂಬದಾಗಿ ಶ್ರೀ ಭಗವದ್ವಾಸುದೇವನಾಗಿರುವ ಪರಮಾತ್ಮನಾದನನ್ನ ಅಭಿಪ್ರಾಯವು. ಭಗವದಭಿಪ್ರಾಯವು ಎಂದಿಗೂ (ಅನ್ಯರಅಭಿಪ್ರಾಯದಂತೆಬೇರೆವಿಧವಾಗಿ) ಅನಂಗತವಾಗುವದಿಲ್ಲವೆಂದು ತಾತ್ಪರ್ಯವು. ಈ ಆರನೇ ಅಧ್ಯಾಯದಿಂದ ಪರಮಾತ್ಮನು ಸರ್ವಕರ್ಮಸನ್ಯಾಸಕ್ಕೆ ಕಾರಣವಾಗಿರುವ ಕರ್ಮಯೋಗದ ಮಾಹಾತ್ಮ್ಯವಂ ತೋರಿಸಿದ ನೆಂತಲೂ, ಸಾಂಗವಾದ ಯೋಗವಂ ವಿವರಿಸಿದ ನೆಂತಲೂ, ಮತ್ತು ಮನೋನಿಗ್ರಹೋಪಾಯ ದೇಶದಿಂದ ಯೋಗಭ್ರಷ್ಟನಾದವನಿಗೆ ಆತ್ಯಂತಿಕವಾದ ನಾಶವುಂಟಾಗುವದೆಂಬ ಶಂಕಾಪದನಾಶವಂ ಶಿಥಿಲಪಡಿಸಿದನೆಂತಲೂ ತಿಳಿಯಬೇಕು. ಮತ್ತು ಈ ಮೇಲೆ ವಿವರಿಸಿರುವ ಅರ್ಥಗಳನ್ನುಪದೇಶಿಸುವ ಪರಮಾತ್ಮನಿಂದ ತ್ವಂಪದಾರ್ಥಾಭಿಜ್ಞನಾದವನಿಗೆಜ್ಞಾನನಿಷ್ಠತ್ವವುಹೇಳಲ್ಪಟ್ಟಿತು. ಆದರಿಂದ ವಾಕ್ಯಾರ್ಥಜ್ಞಾನದಿಂದಮೋಕ್ಷವುಂಟಾಗುವುದೆಂದೀ ಅರ್ಥವೂಸಾಧಿತವಾಯಿತೆಂದರಿಯಬೇಕು. ॥೪೭॥

(ರಾ॥ಭಾ॥) ಇದುವರೆಗೂ ಪರವಿದ್ಯೆಗೆ ಅಂಗವಾದ ಪ್ರಜಾಪತಿ ವಾಕ್ಯದಲ್ಲಿ ಹೇಳಿರುವ ಜೀವಾತ್ಮದರ್ಶನವು ಹೇಳಲ್ಪಟ್ಟಿತು. ಇನ್ನು ಮುಂದೆ ಪರವಿದ್ಯೆಯನ್ನು ಹೇಳುತ್ತಾನೆ. ಪರವಿದ್ಯೆ ಎಂದರೆ ಭಗವದುಪಾಸನವು. ಬಾಹ್ಯಾಂತರಗಳಾದ ಸಕಲವೃತ್ತಿವಿಶೇಷಗಳಿಗೂ ಆಶ್ರಯಭೂತವಾದ ಮನಸ್ಸು ಅಂತರಾತ್ಮಶಬ್ದದಿಂದ ಹೇಳಲ್ಪಡುವುದು. ಇಂಥಾಮನಸ್ಸು ನನ್ನಲ್ಲಿಯೆ ಇರುವುದರಿಂದ ನನ್ನನ್ನು ಬಿಟ್ಟರೆಬಂದುಕ್ಷಣವೂ ಆತ್ಮವನ್ನು ಧರಿಸಲಶಕ್ಯವಾದ ಸ್ವಭಾವನಾಗಿ ನನ್ನನ್ನು ಹೊಂದಬೇಕೆಂಬಿಚ್ಛೆಯಿಂದ ಯಾವನು ನನ್ನನ್ನು ಉಪಾಸನಮಾಡುತ್ತಾನೋ ಅವನು ಹಿಂದೇ ವಿವರಿಸಲ್ಪಟ್ಟಿರುವ ತಪಸ್ವಿಗಳೇ ಮೊದಲಾದ ಸಮಸ್ತ ಯೋಗಿವರ್ಗಕ್ಕಿಂತಲೂ ಅತ್ಯಂತ ಶ್ರೇಷ್ಠನೆಂಬದಾಗಿ ನಾನು ಅಭಿಪ್ರಾಯಪಡುತ್ತೇನೆ. ಮಹಾಮೇರುವಿಗೂ, ಸಾಸುವೆಗೂ ಇರುವ ವ್ಯತ್ಯಾಸದಂತೆ ಈ ಬ್ರಹ್ಮೋಪಾಸಕನಿಗೂ ಇತರರಾದ ತಪಸ್ವಿಗಳೇ ಮೊ

ದೆಲಾದವರಿಗೂ ಇರುವ ವ್ಯತ್ಯಾಸವನ್ನರಿಯಬೇಕು. ಆದರೆ ಸಾಸುವೆ ಕಾಳುಗಳಲ್ಲಿ ಚಿಕ್ಕದು ದೊಡ್ಡದು ಎಂಬ ಪರಸ್ಪರ ತಾರತಮ್ಯವಿರುವ ರೀತಿಯಂತಾಗ "ತಪಸ್ವಿಭ್ಯೋಽಧಿಕೋಯೋಗೀ"(೬।೪೬) ಎಂಬ ಶ್ಲೋಕದಲ್ಲಿ ಹೇಳಲ್ಪಟ್ಟಿರುವ ಜೀವಸಾಕ್ಷಾತ್ಕಾರವಂ ಮಾಡುವ ಯೋಗಿಗಳಿಗೂ ತಪಸ್ವಿಗಳಿಗೂ ಇರುವ ಪರಸ್ಪರ ಭೇದವನ್ನು ತಿಳಿಯಬೇಕು. ಆದರೆ ಜೀವಸಾಕ್ಷಾತ್ಕಾರವಂಮಾಡುವ ಯೋಗಿಗೂ ಬ್ರಹ್ಮೋಪಾಸಕನಿಗೂ ಅತ್ಯಂತಾಂತರವಂ ಪೇಳಲು ಕಾರಣವೇನು? ಎಂದರೆ ಅದಂ ವಿವರಿಸುತ್ತೇನು. ವಿಚಿತ್ರವಾಗಿಯೂ, ಸಂಖ್ಯಾತೀತವಾಗಿಯೂ, ಇರುವ ಭೋಗ್ಯಪದಾರ್ಥಗಳಿಂದಲೂ, ಭೋಕ್ತೃವರ್ಗದಿಂದಲೂ, ಭೋಗೋಪಕರಣಗಳಿಂದಲೂ, ಅವಸ್ಥೋಚಿತವಾದ ಭೋಗಸ್ಥಾನಗಳಿಂದಲೂ, ಪರಿಪೂರ್ಣವಾದ ಸಮಸ್ತಪ್ರಪಂಚಗಳ ಸೃಷ್ಟಿಸ್ಥಿತಿಲಯಗಳನ್ನೇ ಲೀಲೆಯಾಗವುಳ್ಳವನಾಗಿಯೂ, ಯಾವ ದೋಷಗಳಿಂದಲೂ ಸ್ಪರ್ಶಿಸಲ್ಪಡದೆ ಅವಧಿಯೂ ಸಾಮ್ಯವೂ ಇಲ್ಲದ ಜ್ಞಾನ, ಬಲ, ಐಶ್ವರ್ಯ, ವೀರ್ಯ, ಶಕ್ತಿ, ತೇಜಸ್ಸೇ ಮೊದಲಾದ ಸಂಖ್ಯಾತೀತವಾದ ಗುಣಗಳ ಸಮೂಹಕ್ಕೆ ನಿಧಿಯಾಗಿಯೂ, ತನಗೆ ಸಮ್ಮತವಾಗಿಯೂ ಅನುರೂಪವಾಗಿಯೂ ಏಕರೂಪವಾಗಿಯೂ ಚಿಂತಿಸಲಸಾಧ್ಯವಾಗಿಯೂ, ದಿವ್ಯವಾಗಿಯೂ, ಅದ್ಭುತವಾಗಿಯೂ, ನಿತ್ಯವಾಗಿಯೂ ನಿರ್ದೋಷವಾಗಿಯೂ, ಇರುವ ನಿರತಿಶಯವಾದ (ತನಗಿಂತಲೂ ಅತಿಶಯಿತವಾದ ಪದಾರ್ಥವಿಲ್ಲದ್ದು ಯಾವುದೋ ಅದು ನಿರತಿಶಯವು) ಪ್ರಕಾಶ ಸೌಂದರ್ಯ ಪರಿಮಳ ಸೌಕುಮಾರ್ಯ ಲಾವಣ್ಯ ಯೌವನವೇ ಮೊದಲಾದ ಅನಂತಕಲ್ಯಾಣಗುಣಗಳಿಗೆ ಸ್ಥಾನವಾದ ದಿವ್ಯಮಂಗಳವಿಗ್ರಹಯುಕ್ತನಾಗಿಯೂ, ವಾಙ್ಮನಸ್ಸುಗಳಿಗೆ ಗೋಚರವಾಗದ ಸ್ವರೂಪಸ್ವಭಾವಗಳುಳ್ಳವನಾಗಿದ್ದರೂ ಅಪಾರವಾದ ಕಾರುಣ್ಯ ಸೌಶೀಲ್ಯ ವಾತ್ಸಲ್ಯ ಔದಾರ್ಯ ಗಳೆಂಬೀಗುಣಗಳಿಗೆ ಸಮುದ್ರನಾಗಿಯೂ ಕಾರಣವಿಲ್ಲದೇ ಸರ್ವಪ್ರಾಣಿಗಳಿಗೂ ಶರಣ್ಯನಾಗಿಯೂ, ತನ್ನ ಚರಣಾರವಿಂದಗಳಲ್ಲಿ ಭಕ್ತಿಪರತಂತ್ರರಾದ ಪ್ರಣತಜನರುಗಳ ಸಮಸ್ತವಾದ ದುಃಖಗಳನ್ನು ಪರಿಹಾರ ಮಾಡುವಂತವನಾಗಿಯೂ, ಆಶ್ರಿತ ಜನರಲ್ಲಿ ವಾತ್ಸಲ್ಯನಿಧಿಯಾಗಿಯೂ ಸಕಲ ಮನುಷ್ಯರ ನೇತ್ರೇಂದ್ರಿಯಗಳಿಗೆ ವಿಷಯನಾಗಿ ತನ್ನ ಸ್ವಭಾವವನ್ನು ಬಿಡದೇನೇ ವಸುದೇವರ ಗೃಹದಲ್ಲವತರಿಸಿ ಅಪಾರವಾದ ಅತಿಶಯಿತ

ವಾಗಿರುವ ತನ್ನ ತೇಜಸ್ಸಿನಿಂದ ಸಮಸ್ತವಾದ ಜಗತ್ತನ್ನು ಪ್ರಕಾಶಪ ಡಿಸುವವನಾಗಿಯೂ, ನಿಸ್ಸಮವಾಗಿರುವ ಚಂದ್ರಿಕಾತುಲ್ಯವಾದ ತನ್ನ ಪ್ರ ಭೆಯಿಂದ ಸಮಸ್ತ ಪ್ರಪಂಚವನ್ನು ಸುಖ ಪಡಿಸುವಂತವನಾಗಿಯೂ, ಇರುವ ನನ್ನನ್ನು ಉಪಾಸನೆ ಮಾಡುವ ಈ ಬ್ರಹ್ಮನಿಷ್ಠನಿಗೂ ಕೇವ ಲ ಪ್ರಕೃತಿ ವಿಯುಕ್ತವಾಗಿ ಜ್ಞಾನಾಕಾರವಾಗಿರುವ ಜೀವಸ್ವರೂಪವನ್ನು ಉಪಾಸಿಸುವಯೋಗಿಗೂ ಸ್ವಲ್ಪವಾದರೂ ಸಾಮ್ಯವೆಂಬೋಳು ಪ್ರಸಕ್ತಿಗವ ಕಾಶವುಂಟೋ? ಆದುದರಿಂದ ಅವನು ಸರ್ವರಿಗಿಂತಲೂ ಅತ್ಯಂತ ಶ್ರೇ ಷ್ಠನೆಂಬದಾಗಿ ನನ್ನ ಸಿದ್ಧಾಂತವು.॥ ... ... ॥೬೦॥

ಗೀ॥ ವಿ॥ ಧ್ಯಾನ ವೃತ್ತಿಗಳಲ್ಲಿಯೂ ತಾರತಮ್ಯವನ್ನು ಹೇಳುತ್ತಾನೆ. ಸಮಸ್ತರಾದ ಯೋಗಿಗಳ ಮಧ್ಯದಲ್ಲಿ (ಶ್ರದ್ಧಾವಾನ್) ಎಂಬ ಶಬ್ದದಿಂ ದ ಹೇಳಲ್ಪಟ್ಟ ಭಕ್ತಿಯುಳ್ಳವನು ಶ್ರೇಷ್ಠನು. ಭಕ್ತಿಯುಳ್ಳವರಲ್ಲಿ ಯೂ ನನ್ನನ್ನು ಪೂಜಿಸುವ ಮಾಡುವಂತವನು ಶ್ರೇಷ್ಠತರನು. ಅವರ ಲ್ಲಿಯೂ ನನ್ನಲ್ಲಿಡಲ್ಪಟ್ಟ ಮನಸ್ಸಿನಿಂದ ಫಲಾಪೇಕ್ಷಾದಿಗಳಂ ಬಿಟ್ಟು ಯಾವನಾದರೆ ನನ್ನನ್ನು ಭಜಿಸುತ್ತಾನೋ ಅವನು ಸಮಸ್ತರಾದ ಯೋಗಿಗಳಮಧ್ಯದಲ್ಲಿ ಅತ್ಯಂತಶ್ರೇಷ್ಠನೆಂಬದಾಗಿ ನನ್ನ ಮತವು ॥೪೭॥

## ಅದ್ವೈತ ಸಿದ್ಧಾಂತಾನುಸಾರವಾದ

### ೬ನೇ ಅಧ್ಯಾಯದ ಸಂಗ್ರಹ ಶ್ಲೋಕವು.

ಶ್ಲೋ॥ ಪ್ರೋಕ್ತೋತ್ರವಿಜ್ಞಾನಯೋಗಸ್ಸ್ಥಿರಮನಸಿ
ಸಮಾತ್ಮಾನುಸಂಧಾನರೂಪೋ ನೋಚೇದಭ್ಯಾಸಯೋ
ಗೋ ಬಹಿರುಪವಿಶತೇಚಾಸನಾದಿಕ್ರಮೇಣ। ಅಂತರ್ಯೋ
ಗಾನುಕೃತ್ಯಾ ಸ್ವಯಮುಪರಮತೇ ದೃಶ್ಯತೇಪ್ರಾಪ್ಯ
ತೋಪಂ ವೈರಾಗ್ಯಾಭ್ಯಾಸಯೋಗಃ ಪರಿಹರತಿಶನೈಶ್ವೈ
ಗಮಿತ್ಯಾಹಷಷ್ಠೇ। ... ... ॥೬॥

ತಾ। ಮನಸ್ಸನ್ನು ನಿಶ್ಚಲಪಡಿಸಿಕೊಂಡು ಸ್ವಸ್ವರೂಪಾನುಭವರೂಪ ವಾದಜ್ಞಾನಯೋಗವನ್ನು ಮಾಡಬೇಕು. ಇಲ್ಲವಾದರೆ ಆಸನಾಹಾರ ವಿಹಾ ರಾದಿ ನಿಯಮಗಳನ್ನು ಗುರೂಪದಿಷ್ಟವಾದ ಶಾಸ್ತ್ರಪ್ರಕಾರವಾಗಿಮಾಡಿ ನಿರ್ಜನ ಪ್ರದೇಶದಲ್ಲಿ ಸುಖವಾಗಿದ್ದುಕೊಂಡು ಅಭ್ಯಾಸ ಯೋಗವನ್ನು

ಮಾಡಬೇಕು. ಅಂಥಾ ಅಭ್ಯಾಸದಿಂದ ಪ್ರಪಂಚವೆಲ್ಲವನ್ನು ಮಿಥ್ಯೆ ಎಂಬದಾಗಿ ತಿಳಿದು ಅದರಲ್ಲಿರುವ ಅಪೇಕ್ಷೆಯು ನಾಶಹೊಂದಿದಮೇಲೆ ಅಭ್ಯಾಸ ಬಲದಿಂದ ಸ್ವಸ್ವರೂಪಾನುಭವವೆಂಬ ಆನಂದವನ್ನು ಹೊಂದಿ ಕ್ರಮವಾಗಿ (ಪುಣ್ಯಪಾಪ ಪ್ರಯುಕ್ತವಾದ ಸಂಸಾರವನ್ನು ಬಿಟ್ಟಿರುವ) ಯೋಗಿಯು ಬ್ರಹ್ಮತ್ವವನ್ನು ಹೊಂದುವನು. ಆದುದರಿಂದ ಯೋಗಾಭ್ಯಾಸಿಯಾದವನು ಸರ್ವೋತ್ತಮನೆಂಬದಾಗಿ ಈ ಆರನೇ ಅಧ್ಯಾಯದಲ್ಲಿ ಈ ಅರ್ಥಗಳನ್ನು ಶ್ರೀಕೃಷ್ಣನರ್ಜುನನಿಗುಪದೇಶಿಸಿದನು. ||೬||

ಶ್ರೀಮದ್ವಿಶಿಷ್ಟಾದ್ವೈತ ಸಿದ್ಧಾಂತಾನುಸಾರವಾದ

ಸಂಗ್ರಹ ಶ್ಲೋಕವು.

ಶ್ಲೋ || ಯೋಗಾಭ್ಯಾಸ ವಿಧಿ ರ್ಯೋಗೀಚತುರ್ಧಾ
ಯೋಗಸಾಧನಂ | ಯೋಗಸಿದ್ಧಿಸ್ಸ್ವಯೋಗಸ್ಯ ಪಾರ
ಮ್ಯಂ ಷಷ್ಠ ಉಚ್ಯತೇ || ... ... ||೧೦||

ತಾ || ಯೋಗಾಭ್ಯಾಸ ಪ್ರಕಾರವೂ "ಸರ್ವಭೂತಸ್ಥಮಾತ್ಮಾನಂ"(೬||೨೯) ಇತ್ಯಾದಿಶ್ಲೋಕಗಳಿಂದ ಹೇಳಲ್ಪಟ್ಟ ನಾಲ್ಕು ವಿಧಗಳಾಗಿರುವ ಯೋಗಿಸ್ವರೂಪವೂ, ಅಭ್ಯಾಸವೈರಾಗ್ಯಾದಿ ಯೋಗಸಾಧನವೂ, ಯೋಗಭ್ರಷ್ಟನಿಗೆ ಪುನಃ ಯೋಗಸಿದ್ಧಿಯಾಗುವ ಪ್ರಕಾರವೂ, ಜೀವಾತ್ಮ ವಿಷಯವಾದ ಯೋಗವನ್ನು ಅನುಷ್ಠಿಸುವವನಿಗಿಂತಲೂ ಶ್ರೀಗೀತಾಚಾರ್ಯನಾಗಿರುವ ವಾಸುದೇವ ವಿಷಯಕವಾದ ಯೋಗವನ್ನನುಷ್ಠಿಸುವಂತವನಿಗೆ ಸರ್ವೋತ್ತಮತ್ವವೂ, ಈ ಆರನೇ ಅಧ್ಯಾಯದಲ್ಲಿ ಹೇಳಲ್ಪಟ್ಟತೆಂದು ತಾತ್ಪರ್ಯವು. ... ... ||೧೦||

ಶ್ರೀಮನ್ನಿಗಮಾನ್ತ ಮಹಾದೇಶಿಕರನುಗ್ರಹಿಸಿರುವ
ಶ್ರೀಮದ್ಗೀತಾರ್ಥಸಂಗ್ರಹದಲ್ಲಿ ಷಷ್ಠಾ
ಧ್ಯಾಯಸಂಗ್ರಹ ಗಾಥೆಯು.

ಯೋಕ ಮುಯರ್ಚ್ಚಿಯುಮ್ ಯೋಗಿ (ನ್)ರ್ ಚಮನಿಲೈ
ನಾಲ್ವಕೈಯುಮ್,
ಯೋಕಿನುಪಾಂಗುಮುಮ್ ಯೋಕುತನ್ನಾಲ್ವರುಮ್ಪೊರುಳುಮ್,

ಯೋಗಕುತನಿತ್ತ್ವನ್ವಿತಮುದ್ಯೈಯೋಗಾರ್ತಮುಕ್ಯೆಯಮುಷ್,
ನಾಕನ್ಯೈಯೋಗಿನವಿನ್ವನರ್ಕಮುಡಿವೀರನುಕ್ಸ್ಕೇ.॥೭॥

ಟೀ॥ "ಯೋಗಾಭ್ಯಾಸವಿಧಿರ್ಯೋಗೀ ಕ್ರಿ" ಎಂಬ ಸಂಗ್ರ[illegible] ಲಂಬಿಸಿ ಆರನೇಅಧ್ಯಾಯಾರ್ಥಗಳನ್ನೊಂದು ಗಾಥೆಯಿಂದ [illegible] ನ್ಯ್ಯ ನೊಗಪರ್ಯಂಕದಲ್ಲಿರುವ, ಯೋಗಿ- ಯೋಗಿಯು, " [illegible] ರ್ಣವನಿಕೇತನಃ । ನಾಗಪರ್ಯಂಕಮುತ್ಸ್ರ್ಯ ಹ್ಯಾಗತೋ [illegible] " ಎಂಬ ಶ್ಲೋಕದಂತೆ ನಾಗಪರ್ಯಂಕದಲ್ಲಿ ಯೋಗನಿದ್ರಾಸಕ್ತನಾದ [illegible] ವಾಕ್ಯಾಂತದಲ್ಲಿರುವ ಕ್ರಿಯಾಪದದೊಡನೆ ಅನ್ವಯವು. [illegible] – ಯೋಗಾಭ್ಯಾಸವನ್ನು, ಇಲ್ಲಿ ಯೋಗಪದವು ಆತ್ಮಾವಲೋಕನಪರನಾಗಿರುವುದು. ಜ್ಞಾನಕರ್ಮ ಯೋಗಗಳೆಂಬೀ ಯೆರಡರಿಂದಲೂ ಸಾಧಿಸತಕ್ಕ ಆತ್ಮಾವಲೋಕನ ರೂಪವಾದ ಯೋಗಾಭ್ಯಾಸವಿಧಿಯನ್ನು ಕೂಡ ಎಂದರ್ಥವು. ಯೋಗಿಲ್- ಯೋಗದಲ್ಲಿ, ನಾಲ್ವ[illegible] – ನಾಲ್ಕು ವಿಧಗಳಾದ, ಶಮನಿಷ್ಠೈ- ಸಮನಿಷ್ಠೆಗಳನ್ನು, "ಸರ್ವಭೂತಸ್ಥಮಾತ್ಮಾನಂ" (೬ । ೨೯) ಇತ್ಯಾದಿರೂಪದ ನಾಲ್ಕು ಶ್ಲೋಕಗಳಿಂದ ಪ್ರತಿಪಾದಿಸಲ್ಪಟ್ಟ ನಾಲ್ಕು [illegible] ರ್ಶನ ವಿಪಾಕ ನಿಷ್ಠೆಗಳನ್ನು, ಎಂದರ್ಥವು. ಯೋಗಿರ್- [illegible] ಧನಗಳನ್ನೂ, ಯೋಕುತನ್ನಾಲ್-ಯೋಗದಿಂದ, ವರುಂ-[illegible] ರುಷಾರ್ಥಗಳನ್ನೂ, ಯೋಕುತನಿಲ್-ಯೋಗಗಳಲ್ಲಿ, ಪೂರ್ವೋಕ್ತನಾದ [illegible] ನನಿಷ್ಠೆಯಲ್ಲಿಯೂ, ಎಂದರ್ಥವು. ತರ್ ತಿರಮುದ್ಯೈ-ತನ್ನನ್ನು ವಿಷಯ[illegible], ಯೋಗ ತ್ತರ್-ಯೋಗದ, ಮುಕ್ಕಿಯುಮುಂ-ಮುಖ್ಯತೆಯನ್ನು, ಭಾವಪ್ರಧಾನನಿ[illegible] ಶ್ರೀಭಗವದ್ವಾಸುದೇವವಿಷಯವಾಗಿರುವ ಪರಮಭಕ್ತಿಯುಳ್ಳ ನಿರತಿಶಯೋತ್ಕರ್ಷ[illegible]. [illegible] ಮುಡಿವೀರನುಕ್ಕು-ಶ್ರೇಷ್ಠವಾದ ಕಿರೀಟಧಾರಿಯಾದ ಮುಮುಕ್ಷುವಾಗಿದ[illegible] ನಿಗ್ಗನವಿನ್ವನರ್-ಉಪದೇಶಿಸಿದನು. ಈ ಆರನೇ ಅಧ್ಯಾಯದಲ್ಲಿ ಪ್ರತಿಪಾದ[illegible] ಸಂಬಂಧಿಸಿರುವ ಅರ್ಥಗಳೆಲ್ಲವನ್ನು ಮಹಾಪರಾಕ್ರಮಶಾಲಿಯಾದ ಅರ್ಜುನನಿಗೆ ಶ್ರೀಭಗವದ್ವಾಸುದೇವನುಪದೇಶಿಸಿದನು.॥ ... ... [illegible]

ಈ ಪ್ರಕಾರವಾಗಿ ಶ್ರೀಗೀತಾರ್ಥಸಾರವೆಂಬ [illegible]
ಟೀಕೆಯಲ್ಲಿ ಪ್ರಥಮ ಷಟ್ಕವು ಪೂರ್ಣವಾಯಿತು.
ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ.